ನವಯುಗ

NAVAYUGA 1—1—1970

ಸಂಪುಟ 49
ಸಂಚಿಕೆ 18

ರಂಗಾಂತರದ ಡೋಂಗಿಬಜಾರ್

ಎಸ್ಸೆನ್ ಗುಂಪಿನ ಎಐಸಿಸಿ ಯು ಅದ್ದೂರಿಂದಲೇ ನಡೆಯಿತು, ಮುಕ್ತಾಯವಾಯ್ತು. ಅಹಮ್ಮದಾಬಾದಿನ ಬಳಿಯ ಗಾಂಧಿನಗರದಲ್ಲಿ ಸಜ್ಜಿತ ಮಂಟಪದ ನೆರಳಲ್ಲಿ ನಿರೀಕ್ಷೆಗೆ ಮೀರಿಲಾಗಿಯೇ ಪ್ರತಿನಿಧಿಗಳು ಸೇರಿದ್ದರು. ೪೬೫೦ ಜನ ಪ್ರತಿನಿಧಿಗಳಲ್ಲಿ ಅಹಮ್ಮದಾಬಾದ ಅಧಿವೇಶನದಲ್ಲಿ ಹಾಜರಿದ್ದವರು ೨೪೬೯. ಇನ್ನು ೨೧೮೧ ಸದಸ್ಯರು ಪ್ರತ್ಯಕ್ಷವಾಗಿ ಭಾಗವಹಿಸುವುದು ನಿಮಿತ್ತಾಂತರಗಳಿಂದ ಅಸಾಧ್ಯವಾದುದರಿಂದ ಅಧಿವೇಶನಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಪತ್ರ-ತಂತಿಗಳ ಮೂಲಕ ಸೂಚಿಸಿದ್ದಾರೆ. ಕಾಂಗ್ರೆಸ್ಸಿನ ಹಿರಿಯ ನಾಯಕರನ್ನು ಕಿರಿಯರು ಅಪಮಾನಕರವಾಗಿ ನಡೆದುಕೊಂಡಿದ್ದರೂ ಹಿರಿಯರ ಪ್ರಭಾವವಿನ್ನೂ ಕುಂದಿಲ್ಲವೆಂಬುದಕ್ಕೆ ಈ ೨೭೦೩ ಸದಸ್ಯರ ಅಭಾರ್ಯ ಬೆಂಬಲ ಗಳಿಸಿರುವುದೇ ಜ್ವಲಂತ ನಿದರ್ಶನ.

ಸಿಂಡಿಕೇಟ್ ಮಹಾಧಿವೇಶನಕ್ಕೆ ಹಾಜರಾದವರ ಸರಿ ತಿಗೆದುಕೊಂಡಿರುವುದು ನಡೆಸು ಬಂದಷ್ಟೇ; ಆದರೆ, ಅವರೆಲ್ಲರ ಫೋಟೋ ತೆಗೆದರೂ ಈ ದಿಸೆಯ ಪ್ರಗತಿಯೆಂದೇ ಹೇಳಬೇಕು. ತಮ್ಮ ಜನಬಲವನ್ನು ಪ್ರದರ್ಶಿಸಿ ಇಂಡಿಕೇಟಿನ ವಿರುದ್ಧ ಹೋರಾಡಲು ಹೂಡಿದ ಸಮುಂಜಸ ಉಪಾಯವಿದು. ರಾಜ್ಯ ವಿಭಜನಾವಾದಿ ಶ್ರೀ ಎಂ. ವಿ. ಕೃಷ್ಣಪ್ಪನವರು ಈ ಅಧಿವೇಶನದ ಹಾಜರಾತಿಯ ವೀಕ್ಷಣೆಗಾಗಿ ತೆರಳುವೆನೆಂದಿದ್ದರು ಅವರು ಇದನ್ನು ಕಣ್ಣಾರೆ ಕಂಡಾರೋ ಕಾಣರೋ ಇದುವರೆಗೆ ವರದಿ ಬಂದಿಲ್ಲ. ಆದರೆ, ಅವರ ಬಂಟ ಮಂತ್ರಿತ್ವ ಬಾಲ ಕಳಚಿದ ರಾಜ್ಯಕಾರಣಿ ಎಂಜಿ ಉಪಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರು ಹಾಜರಾತಿಯ ಅಂಕೆ ಸಂಖ್ಯೆಗಳನ್ನು ಅಲ್ಲಗಳೆದಿದ್ದಾರೆ. ಶ್ರೀ ಎಂ. ವಿ. ಕೃ. ಅವರ ಕೂಲಂಕಷ ಪರಿಶೀಲನೆಯ ವರದಿ ಸದ್ಯದಲ್ಲೇ ಬಂದೀತು.

ಮುಂಬಯಿಯ ಅಧಿವೇಶನವಲ್ಲೂ ಹೀಗೆಯೇ ಹಾಜರಾತಿಯೂಗಿರಬಹುದು. ಅಂದರೆ ಕೆಲವರಾದರೂ ಎರಡೂ ಕಡೆ ಳವುಗಳಲ್ಲಿ ಭಾಗವಹಿಸಿದರೆ ಆಶ್ಚರ್ಯವಿಲ್ಲ. ಅಂದಿಗೆ ಅದೇ ಸರಿ; ಇಂದಿಗೆ ಇದೇ ಸರಿ ಎನ್ನುವ ಆತ್ಮಸಾಕ್ಷಿವಾದಿಗಳ ಸಂಖ್ಯೆಯನ್ನು ಯಾರೂ ಗಣನೆಗೂ ತೆಗೆದುಕೊಳ್ಳುವಂತಿಲ್ಲ. ಈ ತಲೆ ಲೆಕ್ಕ ಹಾಕ ಹೊರಟರೆ, ಕಪ್ಪೆಗಳನ್ನು ತೂಗಿದಂತೆ. ಪಂಜಾಬು—ಬಿಹಾರ ಮೊದಲಾದ ಕಡೆ ೧೯೬೭ ರಲ್ಲಿ ಪಕ್ಷಾಂತರದ ಪಿಡುಗು ಬಡಿದಂತೆ ಈಗ "ರಂಗಾಂತರದ ಡೋಂಗಿ ಬಜಾರು" ನಡೆದರೆ ಆಶ್ಚರ್ಯವಲ್ಲ.

ಅಹಮ್ಮದಾಬಾದ ಕಾಂಗ್ರೆಸ್ಸ ಸೇರಿದ್ದ ಮುಖ್ಯ ಉದ್ದೇಶವೆಂದರೆ, ೭-೮ ಜುಲೈ ೧೯೬೯ ರ ನಂತರ ಪಕ್ಷದಲ್ಲಿ ಎದ್ದ ನಿಶ್ಯಮತನ ಪ್ರಶ್ನೆಗಳ ಬಗ್ಗೆ ಪ್ರಜ್ಞಾಶೀಲರಾಗಲು ಅದು ಸಂತ್ರವ ಹೊಸ ನೀತಿಯನ್ನಾಗಲಿ, ಘೋಷಣೆಯನ್ನಾಗಲೀ ಮಾಡಲಿಲ್ಲ ಬಹುಷ್ಯ ಹಿಂದೆಯೇ ಕಾಂಗ್ರೆಸ್ಸು ಸ್ವೀಕರಿಸಿದ್ದ ದಶಂಶ ಆರ್ಥಿಕ ಪ್ರಣಾಳಿಕೆಯನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರಬೇಕೆಂದಷ್ಟೇ ಹೇಳಿ, ೬೦ ದಿನದದನ್ನೇ ಮತ್ತೆ ಅನುಮೋದಿಸಿತು. ವಿದೇಶ ನೀತಿಯಲ್ಲಾದರೂ ಅಲಿಪ್ತತೆಗುನ್ನೇ ಅದು ನೆಚ್ಚಿತು.

ಪಕ್ಷದ ಒಡಕಗಳಿಗೆ ಪ್ರಧಾನಿ ಇಂದಿರಾ ಗಾಂಧಿಯವರೇ ಮೂಲಕಾರಣರು ಎಂಬುದನ್ನು ಅಧಿವೇಶನ ಬಹಿರಂಗವಾಗಿಯೇ ಒಪ್ಪಿಕೊಂಡಿತು. ರಾಜಕೀಯ ಪಕ್ಷ ಸಂಘಟನೆಯಲ್ಲಿ ಶಿಸ್ತು ಅತ್ಯಗತ್ಯವೆಂದದು ಅನುಮೋದಿಸಿತು. ಕಾಂಗ್ರೆಸ್ಸು ಎಂದೋ ಸ್ವೀಕರಿಸಿದ್ದ ಆರ್ಥಿಕ ನೀತಿಯನ್ನು ಅನುಷ್ಠಾನಕ್ಕೆ ತರಲು ವಿಫಲರಾದ ಶ್ರೀಮತಿ ಗಾಂಧಿ ಈ ವೈಫಲ್ಯದ ಹೊಣೆಯನ್ನು ತಮ್ಮ ಹೆಗಲಿಂದ ಜಾರಿಸಿ ಹಿರಿಯ ಹಳೆಯ ನಾಯಕರ ಮೇಲೆ ಹೊರಿಸುವ ದುಸ್ಸಾಹಸ ಮಾಡಿದ್ದಾರೆಂದು ಸಾರಿತು. ಪ್ರಧಾನಿ ಇಂದಿರಾ ಗಾಂಧಿಯವರ ಅಧಿಕಾರ ಲಾಲಸೆ, ಅಶಕ್ತತೆಗಳ ಬಗ್ಗೆ ಬಿರುಸಿನ ಟೀಕೆಗಳು ಅಧಿವೇಶನದಲ್ಲಿ ಬೇಕೆಂಬಷ್ಟು ನಡೆದುವು.

ಪ್ರಧಾನಿ ಮತ್ತವರ ಬೆಂಬಲಿಗರು ಈ ದಿನಗಳಲ್ಲಿ ಹಿಂದಿನಷ್ಟು ಬೊಂಬಡಿ ಬಾರಿಸುತ್ತಿರುವುದು ಆಶ್ಚರ್ಯವಾಯ್ತು. ಪತ್ರಿಯ ಕೆಲವರು ಮುಂಬಯಿ ಅಧಿವೇಶನವನ್ನು ಗಾಂಧಿನಗರಾಧಿವೇಶನಕ್ಕಿಂತಲೂ ಮಿಗಿಲಾಗಿ ಎತ್ತಿ ನಿಮಗ್ನರಾಗಿದ್ದರು. ಆಳುವ ಮಂತ್ರಿ ಮಹೋದರಲ್ಲಿ ಕೆಲವರು ಬಿಡಿಸಿದ ಸಂಚಾರಗಳನ್ನು ಕೈಕೊಂಡು ಮುಂಬಯಿ ಕ್ರಾಂತಿ ಕಹಳೆಯಂತೆ ಹೇಳುತ್ತಬಂದರು. ಮತ್ತೆ ಕೆಲವರು ಆತ್ಮಸಾಕ್ಷಿಗಳನ್ನು ಕೂಗಿಯೋ ಕಳಕಳಿಯಿಂದೋ ಕಾರ್ಯಸಾಧನೆಗೆ ತೊಡಗಿದರು; ಪಾಪ, ಬಾಯಿ ಬಿಡಲು ಅವಕಾಶ ಕೊಡದೆ ಯಾಕೆ. ಅದು ತಮ್ಮ ಬಗ್ಗೆ ಹೊರಟ ತೀವ್ರ ಅನ್ವೇಷಣ ಪ್ರದರ್ಶನ ಹೀರೋ ಕನಿಷ್ಠನಾದರೂ ಸಿಂಡಿಕೇಟ ಬೇಡವೆ? 'ಕಾಂಗ್ರೆಸ್ ಒಡಕೆಗೆ ನಾನ ಕಾರಣಳೆನ್ನುವುದು ಸವ ಸಂಗತಿಗಳು' ಎಂಬುದು ಇಂಡಿಕೇಟ್ ಜೊತೆಗೂಡಿದ ರಾಣಿ ಇಂದಿರಾ ಗಾಂಧಿ 'ಹಾದಾಡು, ಅದು ಕಾರಣವಲ್ಲ' ಎಂದರು. ಕೋಲೇ ಬಸವನು, ಇಂಡಿಕೇಟ್ ಕಾಂಗ್ರೆಸ್ ಅಧ್ಯಕ್ಷ (ಹಂಗಾಮಿ) ಸಿ. ಸುಬ್ರಹ್ಮಣ್ಯಂ ದಿಗ್ಭ್ರಾಂತ, ಅಹಮ್ಮದಾಬಾದನ ರೈಲುಗಳನ್ನೂ ಅವುಗಳಿಗೆ ಜೋಡಿಸಿದ ತುಂಬಿದ ಭೋಗಿಗಳನ್ನೂ ನೋಡಿ. ಅಲ್ಲಿಂದ 'ಕಾದು ನೋಡಿ' ಎಂಬ ಮಂಕರಲಾಂಛನ.

ಮುಂಬಯಿಗೆ ರೈಲುಗಳೆಷ್ಟು ಬಂದುವು? ಅವುಗಳ ಸಂಖ್ಯೆ ಹಾಗೂ ಜೋಡಿಸಿದ ಬೋಗಿಗಳ ಸಂಖ್ಯೆಯೂ ಹೆಚ್ಚಿದ್ದಿರಬಹುದು. ಆದರೆ, ಅವು ತುಂಬಿವೆಯೋ ಇಲ್ಲವೋ ಎಂದು ನೋಡಲು ಎಸ್ಸೆನ್ ವೀಕ್ಷಕರನ್ನು ಕಳಿಸಲಿಲ್ಲ. ಮುಂಬಯಿ ಭಾರತದ ಮಹಾನಗರ. ಎಐಸಿ ಗೆ ಪ್ರತಿನಿಧಿಗಳು ಬಾರದಿದ್ದರೂ ಬಹಿರಂಗಾಧಿವೇಶನದಲ್ಲಿ ಚಪ್ಪರ ತುಂಬಿ ತುಳುಕಾಡುವುದು ಸಹಜ. ಎರಡು ಟವರುಗಳು ತಾವು ಹಾದೇ ಹೋದೆವಾಡಿಕೊಂಡರೆ, ಅದು ನೋಡುವವರಿಗೆ ಮನರಂಜನೆಯಂತು ತಂದು ನೀಡುತ್ತದೆ.

ಮುಂಬಯಿಯಲ್ಲಿ ಏನಾಯ್ತು? ಇದನ್ನು ಬರೆಯುವ ಹೊತ್ತಿಗೆ ಮುಂಬಯಿಯ ವರದಿಗಳು ಬಂದಿಲ್ಲ ಅವರೂ ಬೊಂಬಾಯಿ ಮಲಾರಿಗೆ ಗಾಂಧೀ ಮಲಾರಿಗೆ ಉತ್ತರ ನೀಡಲು ಒಂದು ವಾರ ಬಿಡುವು ದೊರಕಿದೆ. ಈ ಬಿಡುವಿನ ಸದುಪಯೋಗವನ್ನು ಅವರು ಅವಶ್ಯಮಾಡಿಕೊಳ್ಳುತ್ತಾರೆ. ಎಲ್ಲ ಆರೋಪಗಳೂ ಎಸ್ಸೆನ್ ಮತ್ತವರ ಅಭಯೂಯಿ ನಿವೃತ್ತಿ ವಯಸ್ಸು ಮೀರಿದ ಹಿರಿಯ ನಾಯಕರ ಹಣೆ ಮೇಲೆ ಹಚ್ಚಲ್ಪಡುವುದು ಸಾಧಾರಣ. ತನ್ನ ಅಲಿಪ್ತ ನೀತಿ ವೈಖರಿ—ರಾಬರ್ ಅಪಮಾನ – ಎಲ್ಲವನ್ನೂ ಸಮರ್ಥಿಸುವುದು ಅಗತ್ಯ. ಅಗ್ನಿಯ ಪಿಶಾಚದ ಬಗ್ಗೆಂದು ಗೊತ್ತುವಳಿ ಸ್ವೀಕರಿಸಿ ದರಿದ್ರ ನಾರಾಯಣನಿಗೆ ತೊಲಗೆಂದು ಆಜ್ಞಾಪಿಸುವುದೂ ಸಹಜ. ಒಂದು ವೇಳೆ, ದರಿದ್ರ ನಾರಾಯಣನು ತಾನಾಗಿ ತೊಲಗದೆ ಹೋದರೆ? ಅವನನ್ನು ಗಸ್ಟೆಂಶನ್ ಮಾಡುವ ಮತ್ತು ಅವನ ಬದಲಿಗೆ ಸಂಪನ್ನಾರಾಯಣನ ಅಧ್ಯಕ್ಷತನದಲ್ಲಿ ತಕ್ಷ ಯಾಕ್ ನವಿತಿ ನೇಮಿಸುವ ಸರ್ವಾಧಿಕಾರ ಪ್ರಧಾನಿ ಇಂದಿರಾ ಗಾಂಧಿಗೆ ನೀಡುವುದರಲ್ಲಿ ನೂರಕ್ಕೆ ನೂರರಷ್ಟು ನ್ಯಾಯವಿದೆ.

ಎಸ್ಸೆನ್ ಕಾಂಗ್ರೆಸ್ ಅಧಿವೇಶನಕ್ಕಿಂತ ಇಂದಿರಾ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಗಳ ಹಾಜರಾತಿ ಅಧಿಕವೆಂದು ಶ್ರೀ ಎಂ. ವಿ. ಕೃಷ್ಣಪ್ಪ ಆ ವೇಳೆ ಸಾರಬಹುದು. "ನೀವು ಫೋಟೋ ಮಾತ್ರ ತೆಗೆಸಿಕೊಂಡಿದ್ದೀರಿ, ನಾವು ಅವರ ಉಪಸ್ಥಿತಿಯನ್ನು ಟೇಪ್ ರೆಕಾರ್ಡ್ ಮಾಡಿಕೊಂಡಿದ್ದೇವೆ ಎಂದು ಹೆದರಿಸಬಹುದು, 'ಬನ್ನಿ ಅಪಾದಕ್ಕೆ, ಯಾರ ಸಂಖ್ಯೆ ಬಲ ಹೆಚ್ಚೋ ನೋಡೋಣ'ವೆಂದು ಕರೆ ನೀಡಲೂ ಬಹುದು ಅಂತೂ ಗಾಂಧಿನಗರದಲ್ಲೂ ಅಧಿವೇಶನ, ಆಜಾದ ಮೈದಾನದಲ್ಲೂ ಅಧಿವೇಶನ! ಗಾಂಧಿ—ಆಜಾದರು ಸ್ವರ್ಗ ಲೋಕದಲ್ಲಿ ಸಂತೋಷ ಪಡುತ್ತಿದ್ದಾರೆ.

ಎರಡೂ ಬಣಗಳು ತಂತಮ್ಮಲ್ಲೇ ಹೊಡೆದಾಡುತ್ತಿರುವಾಗ ಕೆಲವರು ಐಕ್ಯದ ಮಾತುಗಳನ್ನೂ ಹೇಳುತ್ತಾರೆ. ಏಕೆಂದರೆ, ಕಾಂಗ್ರೆಸ್ ಉಭಯ ಬಣಗಳ ಧ್ಯೇಯದಲ್ಲಿ, ನೀತಿಯಲ್ಲಿ, ಕಾರ್ಯಪ್ರಣಾಳಿಯಲ್ಲಿ ಯಾವ ಅಂತರವೂ ಇಲ್ಲ. ಶ್ರೀಮತಿ ಗಾಂಧಿಯವರು "ಪ್ರಗತಿ"ಯ ಮಾತೆತ್ತಿ ಜನರನ್ನು ಒಮ್ಮೆ ದಂಗುಗೊಳಿಸಿದರೂ ಮತ್ತವರು ಈ "ಪ್ರಗತಿ—ಸಮಾಜವಾದ ರಾತ್ರಿ ಹಗಲಾಗುವಷ್ಟರಲ್ಲಿ ಬರುವುದಿಲ್ಲ" ಎಂದಿದ್ದು ಉತ್ತೇಜಿತರಾದವರಿಗೆ ನೇರ ನಿ

(ಕಡೇ ಪುಟ ನೋಡಿರಿ)

ತಪ್ಪು ಯಾರದು?

ಲೇಖಕರು: ಶ್ರೀ ಎನ್. ರಾಧಾಕೃಷ್ಣ

ಹಗ್ಗಲು ಬಿಟ್ಟು ಮನೆಗೆ ಬಂದಾಗ ಮೊದಲಿಗೆ ಶಂಕರನನ್ನು ಆಕರ್ಷಿಸಿದ್ದು ಮೇಜಿನ ಮೇಲಿನ ಹಸಿರು ಲಕೋಟೆ. ಸಮೀಪ ಹೋಗಿ ಕಣ್ಣಾಡಿಸಿ ಓದಿದಾಗ ಟ್ರೇನಿಂಗಿಗೆ ಕರೆ ಬಂದಿತ್ತು. ವಿಷಯ ಅನೇಕ ಗೊಂದಲಕ್ಕೆಡೆ ಮಾಡಿತು. ಪತ್ನಿ ಮೀರಾಳನ್ನು ಕರೆದು ಸಂಗತಿ ತಿಳಿಸಿದಾಗ ಗಾಬರಿಯಾದಳು. ಆದರೇನು? ಆಫೀಸಿನಿಂದ ಬಂದ ಅರ್ಡರ್ರು ಪಾಲಿಸಲೇ ಬೇಕು! ಮಾರನೆಯ ದಿನದ ಪಯಣಕ್ಕೆ ಸಿದ್ಧತೆ ನಡೆಯಿತು. ಹೊಸ ಊರು ತನಗೊಬ್ಬನಿಗೆ ಸರಿಯೆಂದು ಶಂಕರ ಮಡದಿ ಮಕ್ಕಳನ್ನು ತೊರೆದು ಹೊರಟ.

ಮರುಂಜಾನೆಯ ಏಳು ಘಂಟೆಯ ಗಾಡಿಗೆ ಶಂಕರನನ್ನು ಮಡದಿ-ಮಕ್ಕಳು ಬೀಳ್ಕೊಟ್ಟರು. ಅವರು ಕಾಣುವ ವರೆಗೂ ಕಣ್ಣು ಕದಲಿಸದೇ ದೂರ ದೂರ ಸಾಗಿದ.

ಬಸ್ಸಿನಲ್ಲಿ ಜನವೇನೂ ಅಷ್ಟಿರಲಿಲ್ಲ. ಹೊರಗಿನಿಂದ ಮಂದಗಾಳಿ ಬೀಸುತ್ತಿತ್ತು. ಮರಗಳ ಹಸಿರು ವೃಕ್ಷ ಕಣ್ಣಿಗೆ ಹಬ್ಬ ತಂದಿತ್ತು. ಆದರೂ ನಡು-ನಡುವೆ ಮನೆಯ ಮಡದಿ- ಮಕ್ಕಳ ಚಿಂತೆ. ಈಗೇನು ಮಾಡುತ್ತಿದ್ದಾರೋ, ಏನೋ... ಏನೇನೋ ನೆನಪು....ಅನಿಸಿಕೆಗಳು.

ಅನಂತರ ತನ್ನ ಮುಗಿಸಬೇಕಾದ ಟ್ರೇನಿಂಗಿನತ್ತ ಗಮನ ಎಂಥ ಹವೆಯೋ.... ಏನು ಕತೆಯೋ....

ಹಾಗೂ ಹೀಗೂ ಎಂಟು ತಾಸಿನ ಬಳಿಕ ಬೆಳಗಾಂವ ಬಂತು. ದೃಶ್ಯ ಬೆರಗುಗೊಳಿಸುವಂತಿದೆ. ರಾಜಬೀದಿ, ಭವ್ಯ ಕಟ್ಟಡಗಳು, ವಿದ್ಯುದ್ದೀಪದ ವಿವಿಧ [illegible], ಎಲ್ಲ ಶಂಕರನನ್ನು ಚಕಿತಗೊಳಿಸಿತು. ತನ್ನನ್ನೇ ತಾನು ಮರೆಯುವಷ್ಟು ನೋಡಿದ. ಇದು ದೇವತೆಗಳ ಸನ್ನಿಧಿಯೆಂದು ಬಗೆದ.

ಟ್ರೇನಿಂಗ ಕಾಲೇಜಿಗಾಗಿ ಒಂದಿಬ್ಬರನ್ನು ವಿಚಾರಿಸಿದ. ಆದರೆ ಅವನ ಪುಣ್ಯ! ಗೆಳೆಯ ರಾಮೂ ಮಾಸ್ತರರೂ ಅಲ್ಲೇ ಸಿಕ್ಕರು. ಅಲ್ಲಿಯೇ ಅವರಿಗೆ ಕೆಲಸವೆಂದು ಕೇಳಿಯಂತೂ ತನಗೊಬ್ಬ ದೇವರು ಸಿಕ್ಕರು ಎಂದು ಬಗೆದ. ಆಗಲೇ ಏಳು ಘಂಟೆಯ ಸಂಜೆ. ವಿದ್ಯುದ್ದೀಪಗಳ ಸಾಲೇ ಸಾಲುಗಳು ಶಂಕರನ ಕಣ್ಣುಗಳನ್ನು ಕುಕ್ಕಿದವು.

ಶಂಕರ, ರಾಮೂ ಮಾಸ್ತರರ ಮನೆಯಲ್ಲೇ ಇಳಿದುಕೊಂಡ. ತನ್ನ ಶಿಕ್ಷಕನಾದಾಗಿನ ಮೇಲಿನ ಜೀವನ, ತನ್ನ ಮಡದಿ—ಮಕ್ಕಳ ವಿಚಾರ ಎಲ್ಲ ಗೆಳೆಯನಿಗೆ—ಮನೆಯವರಿಗೆಲ್ಲ ಭಿನ್ನವಿಸಿ ಖುಷಿಪಡುತ್ತಿದ್ದ. ಮೊದಲು ಮೊದಲು ಬೆಳಗಾಂವದ ಬಿಸಿ ವಾತಾವರಣ ಶಂಕರನಿಗೆ ಒಗ್ಗಲಿಲ್ಲ. ಕಿರ್....ಕಿರ್...ಕಿರ್...ಗಲಾಟೆ! ರಾತ್ರಿಯಿಡೀ ರಿಕ್ಷಾ, ಮೋಟಾರು ಕಾರುಗಳಿಂದ. ಹದಿನೈದು ದಿನಗಳ ಮೇಲೆ ಅಂತೂ ಸಮಾಧಾನಿಸಿಕೊಂಡ. ನಿತ್ಯ ಕರ್ಮ ಕೈಕೊಂಡ, ಹೊಸ ಜೀವನ ಹೊಸ ವಾತಾವರಣಕ್ಕೆ ಹೊಂದಿಕೊಂಡ.

ಕಾಲೇಜಿನಲ್ಲಿ ನಾಲ್ಕಾರು ಹೊಸ ಗೆಳೆಯರ ಪರಿಚಯ—ಸ್ನೇಹ ಶಂಕರನಿಗೆ ಆಯಿತು. ಅವನ ಹೊಸ ಬದುಕಿನಲ್ಲಿ ಆನಂದಕ್ಕೆ ವಿಪುಲ ಅವಕಾಶ ದೊರೆಯಿತು. ಮನೆಗೂ ಆಗಾಗ ಪತ್ರ ಬರೆಯುತ್ತಿದ್ದ. ಮನೆಯಿಂದಲೂ ವಾರಕ್ಕೊಂದು ಪತ್ರ ಸಿಗುತ್ತಿತ್ತು ಶಂಕರನಿಗೆ. ಪ್ರತಿ ತಿಂಗಳ ೧೫೦ ರೂಪಾಯಿಯ ಆದಾಯ ಅವನ ಚಿಕ್ಕ ಸಂಸಾರಕ್ಕೇನೂ ತೊಂದರೆಯಾಗುತ್ತಿರಲಿಲ್ಲ. ಅವನ-ಅವರ ಜೀವನ ನಂದನವಾಗಿತ್ತು.

— ೨ —

ಮೀರಾ ಶಂಕರನ ಸ್ಮರಣೆಯಲ್ಲೇ ಕಾಲ ನೂಕುತ್ತಾಳೆ. ಒಮ್ಮೆಯಾದರೂ ಶಂಕರ ಬಂದು ಹೋಗಿದ್ದರೆ.... ಎಂದೆನಿಸುತ್ತದೆ. ಅವಳ ಮನವೆಲ್ಲ ಶಂಕರನ ಒಲವಿಗಾಗಿ ಕಾತರಿಸುತ್ತದೆ. ಯೌವನದ ಬಿಸಿ ರಕ್ತ ಕುದಿಯುತ್ತದೆ. ರಾತ್ರಿ ಅದೆಷ್ಟೋ ವೇಳೆಯ ನಂತರ ಅವಳಿಗೆ ನಿದ್ರೆ! ಮೈಮನದಲ್ಲೇನೋ ಒಂದು ಬಗೆಯ ಆಲಸ್ಯ! ಏನೋ ಬಯಕೆ.... ತೀರದ ದಾಹ!

ಒಂದು ದಿನ ಜ್ಯೋತಿಷಿಯೊಬ್ಬ ಬಂದು "ಅಮ್ಮಾ, ನಿಮ್ಮ ಮನೆಗೆ ವಿಧಿಯ ಕ್ರೂರ ದೃಷ್ಟಿ ತಾಗಲಿದೆ. ಎಚ್ಚರ ವಹಿಸಿ" ಎಂದು ನುಡಿದು ಹೊರಟು ಹೋಗುತ್ತಾನೆ. ಮೀರಾಳಿಗೆ ಆಶ್ಚರ್ಯ, ಏನಿರಬಹುದೆಂದು ಭಯ. ದಿನ ಕಳೆಯಿತು. ಭೀತಿ ಬಯಲಾಯಿತು. ಯಾವ ಅನಾಹುತವು ಕಾಣದ್ದು ಜ್ಯೋತಿಷಿಯ ನುಡಿ ತೀರ ಸುಳ್ಳೆಂದು ಬಗೆದಳು. ಆ ದಿನ ದೇವಸ್ಥಾನಕ್ಕೆ ಹೋದಾಗ ಎಡಕ್ಕೆ ಪ್ರಸಾದವಾದಾಗಲೂ ಅದು ತನಗಲ್ಲವೆಂದು ತಿಳಿದಳು.

ಕೆಲ ದಿನಗಳಲ್ಲೇ ಮೀರಾಳ ಮನಸ್ಸು ಆಮಿಷಕ್ಕೆ ಅಂಟಿಕೊಂಡಿತು. ಬಯಕೆ ಬಲಿಯಿತು. ಒಂದು ದಿನ ದೇವಸ್ಥಾನಕ್ಕೆ ನಡೆದಾಗ ಒಬ್ಬ ವ್ಯಕ್ತಿಯ ಅಪರೀಕ್ಷಿತ ಭೇಟಿ ನಡೆಯಿತು. ಮರುದಿನವೂ ಕೂಡಾ! ದೃಷ್ಟಿಯಲ್ಲಿಯೇ ವಿಶ್ವಾಸ—ಸ್ನೇಹ ಬೆಳೆಯಿತು. ಆತ ಮೀರಾಳ ಮನೆಗೆ ಬಂದೂ ಸಲುಗೆ ಬೆಳೆಸಿಕೊಂಡ. ತನ್ನ ದೇಹ ಸೌಂದರ್ಯ ಪ್ರದರ್ಶಿಸಿಕೊಂಡ. ಇಬ್ಬರೂ ಗಾಢವಾಗಿ ಪ್ರೇಮಿಸಿಕೊಂಡರು. ಮೈಮನವೆಲ್ಲ ತಣಿಯುವ ವರೆಗೆ....

ಮೀರಾಳ ಮನಸ್ಸೆಲ್ಲ ಒಂದೊಂದೆಳೆಯಾಗಿ ಮಾಯೆಯ ಮುಸುಕಿನಲ್ಲಿ ಮಿನುಗಿತು. ಪತಿಯ ಸ್ಮರಣೆ ಸತ್ತಿತು. ದೇವರು ಎಂದೋ ಮರೆತು ಹೋದ. ಯಾರ ಮೇಲೆಯೂ ವಿಶ್ವಾಸ ಕಾಣದಾದಳು. ನೆರೆಹೊರೆಯವರ ನುಡಿಗಳೂ ಕಿವಿಗೆ ಸೇರದಾಯಿತು.

ಇಬ್ಬರೂ ಪ್ರೇಮದ ಅಮಲಿನಲ್ಲಿ ಮುಳುಗಿ—ಮಿಂದೆದ್ದರು. ಶಂಕರನ ಪ್ರತಿ ತಿಂಗಳ ಹಣ ಜೀವನಕ್ಕೆ ಧಕ್ಕೆ ತರಲಿಲ್ಲ. ಆದರೆ ಅವನೊಡನೆಯ ಪವಿತ್ರ ಸಂಬಂಧ ಎಣ್ಣೆ ಶೀಗೆಯ ತೆರವಾಯ್ತು. ಸಿಗರೇಟು ಆಸಾಮಿಯೊಬ್ಬನೊಡನೆ ಆಲಿಂಗನವೇ ಸುಖವೆಂದು ತಿಳಿದಳು, ಕುಲ ಕಲಂಕಿನಿ ಮನಸಿಗೆಟ್ಟ ವನಿತೆಯಾದಳು.

ಮಕ್ಕಳಿಬ್ಬರಿಗೆ ತಂದೆ ಶಂಕರನ ನೆನಪು ಆಗಾಗ ಬರುತ್ತಿತು. ತಾಯಿಯಲ್ಲಿ ಪ್ರಶ್ನಿಸಿದಾಗ ನಿರುತ್ತರ ಸಿಗುತ್ತಿತ್ತು. ಅವರ ಮುಗ್ಧ ಮನಸ್ಸು ತಂದೆಗಾಗಿ ಹಂಬಲಿಸುತ್ತಿತ್ತು.

ಕೆಲ ದಿನಗಳಲ್ಲಿ ಮೀರಾ ಶಂಕರನಿಗೆ ಪತ್ರ ಬರೆಯುವದನ್ನೇ ನಿಲ್ಲಿಸಿದಳು. ಶಂಕರ ಗಾಬರಿಯಾದ. ಅವನ ಟ್ರೇನಿಂಗ್ ಇನ್ನೂ ಕೆಲವು ದಿನಗಳಿತ್ತು. ತಾನು ಬರುವ ಸುದ್ದಿಯನ್ನೂ, ತರುವ ವಿಶೇಷ ವಸ್ತುವಿನ ಹೆಸರನ್ನೂ ವಿವರವಾಗಿ ಬರೆದ.

— ೩ —

ಶಂಕರ ಬರೆದ ವಿಷಯ ಹೊತ್ತು ಬಂದ ಪತ್ರ ಮೀರಾಳ ತಲೆಯಲ್ಲಿ ಸಿಡಿಲೆರಗಿಸಿತು. ಮೈಯೆಲ್ಲ ಬೆವರಿತು. ತನ್ನ ಹಿಂದಿನ ಜೀವನದ ಸಿಹಿ ನೆನಪು ಕಹಿಯಾಗಿ ಕಂಡಿತು. ತನ್ನ ಬದುಕು ಬಯಲಾಗುವದನ್ನು ನೆನೆಸಿ ದಿಗ್ಭ್ರಾಂತಳಾದಳು. ನೆರೆಹೊರೆಯವರು ತನ್ನ ಪ್ರೇಮದ ಕಥೆ ಹೇಳದೇ ಬಿಡಲಾರರೆಂದು ತಿಳಿದು ಕಂಗಾಲುಗೊಂಡಳು. ತನ್ನ ಜೀವನಕ್ಕೆ ಕೊನೆಯ ಕಾಲವೆಂದು ನಂಬಿದಳು. ಗೌರವ—ಮರ್ಯಾದೆಯಿಂದ ಬದುಕಬಯಸುವ ಪ್ರಶ್ನೆ ತೀರಾ ದೂರವೆಂದು ಮನಗೊಂಡಳು. ಜ್ಯೋತಿಷಿ ಹೇಳಿಹೋದ ಮಾತು ಕಿವಿಯಲ್ಲಿ ಮಾರ್ದನಿಗೊಳ್ಳುತ್ತಿತ್ತು. ತನ್ನವರಿಗೆ ಎಸೆದ ದ್ರೋಹಕ್ಕಾಗಿ ಹೃದಯ ಕರಗಿ ಕುದಿಯಿತು. ಮನ ಪಶ್ಚಾತ್ತಾಪದಲ್ಲಿ ಬೆಂದಿತು. ತನ್ನ—ಮಕ್ಕಳಿಬ್ಬರ ಆತ್ಮಹತ್ಯೆಯೇ ಕೊನೆಯ ದಾರಿಯೆಂದು ನಿಶ್ಚಯಿಸಿದಳು.

ಶಂಕರ ಬರುವ ದಿನದ ಮುನ್ನಾ ದಿನ ರಾತ್ರಿಯೇ ಈ ಕೆಲಸ ಕೈಕೊಂಡಳು. ಮಕ್ಕಳಿಬ್ಬರಿಗೂ ಅನ್ನದೊಡನೆ ವಿಷ ಸೇರಿಸಿದಳು, ಅವಳೂ ಹಾಲಿನೊಡನೆ ವಿಷ ಬೆರೆಸಿ ಕುಡಿದಳು, ಮೂವರೂ ವಿಲಿವಿಲನೆ ಒದ್ದಾಡಿ ಜೀವಾರ್ಪಣೆಗೈದರು.

ಮುಂಜಾನೆಯ 9ಕ್ಕೆ ಶಂಕರ ಮನೆಗೆ ಬಂದಾಗ ಎಲ್ಲೆಲ್ಲೂ ನಿಸ್ತೇಜ, ನಿಶ್ಶಬ್ದ. ಯಾರನ್ನಾದರೂ ಕೇಳುವದೆಂದರೂ ಯಾರೂ ಇಲ್ಲಲ್ಲ. ಪಕ್ಕದ ಕಿಟಕಿಯೊಂದನ್ನು ಸರಿಸಿ ಒಳಗೆ ಕಂಡಾಗ ಬಾಯಿಬಿಟ್ಟು ಪ್ರಾಣ ಬಿಟ್ಟ ದೃಶ್ಯ.... ಶಂಕರ ಮೂರ್ಛಿತನಾದ. ಎಚ್ಚರಗೊಂಡಾಗ ಊರವರು ಸಂತೈಸುತ್ತಿದ್ದರು. ಎಲ್ಲ ವಿಚಾರಿತಲಾಗಿ ಮಡದಿ ಬರೆದ ಪತ್ರ ಬೇರೆ ಸಿಕ್ಕಿತು. ಅದರಲ್ಲಿ ಹೀಗಿತ್ತು :

"ಪ್ರಿಯ ಪತಿ ದೇವರಿಗೆ,

ನಿಮ್ಮ ಮಡದಿಯ ಅನಂತ ವಂದನೆಗಳು.

ಈ ಪತ್ರ ನಿಮ್ಮ ಕೈಗೆ ಸಿಗುವ ವೇಳೆಗೆ ನಾವು ಮೂವರು ಈ ಲೋಕದಲ್ಲಿ ಇರಲಾರೆವು. ನನ್ನ ತಪ್ಪಿಗೆ ನಾನೇ ಪ್ರಾಯಶ್ಚಿತ್ತ ಮಾಡಿಕೊಂಡೆ. ನೀವು ನನ್ನೊಡನೆ ಜೀವಿಸಿದ ಕೆಲವೇ ಕಾಲ ನನಗೆ ಸ್ವರ್ಗದ ಅನುಭವ ತಂದಿದೆ. ಏಳೇಳು ಜನ್ಮದಲ್ಲೂ ನೀವೇ ನನ್ನ ದೇವರಾಗಿ ದೊರೆಯಬೇಕೆಂದು ದೇವರಲ್ಲಿ ಪ್ರಾರ್ಥನೆ. ನನ್ನ ಕುಡಿಗಳನ್ನು ನಾನೇ ಕರೆದು ಹೊರಟಿರುವೆ. ಅವರೆಂದಿಗೂ ನನ್ನವರೇ ಆಗಿರಲಿ. ನೀವು ನನಗಾಗಿ ದುಃಖಿಸಿ, ವ್ಯಥಿಸಿ ಜೀವನ್ನ ಹಾಳುಮಾಡಿಕೊಳ್ಳಬೇಡಿ. ಇದ್ದಷ್ಟು ದಿನ ಸುಖವಾಗಿ ಬದುಕಿ ಬನ್ನಿ.

ಇತಿ ನಿಮ್ಮವಳು,

— ಮೀರಾ.

ಪತ್ರ ಓದುತ್ತಿದ್ದಂತೆ ಶಂಕರ ಮತ್ತೊಮ್ಮೆ ಮೂರ್ಛೆ ತಪ್ಪಿದ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526 · 1921 ಸ್ಥಾಪನೆ

ಸಂಪುಟ ೪೯ ಸಂಚಿಕೆ ೧೮

VOL. 49 No. 18

ನವಯುಗ

ಸ್ಥಾಪಕರು: ಡಾ| ಎ. ಬಿ. ಶೆಟ್ಟರು

ಸಂಪಾದಕರು: ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧—೧—೧೯೭೦

ಮರಿ ರಾಜ್ಯೋದಯ

ಅಸ್ಸಾಮ್ ರಾಜ್ಯದ ಗುಡ್ಡಗಾಡು ಪ್ರದೇಶದ ಜನತೆಗೆ ಸ್ವಯಂ ನಿರ್ಣಯಾಧಿಕಾರದ ಸ್ವತಂತ್ರರಾಜ್ಯವೊಂದು ಬೇಕೆಂದಿದ್ದಿತು; ಅಂದರೆ, ಅಸ್ಸಾಮ್ ವಿಭಜನೆಯನ್ನು ಕೇಂದ್ರ ಮಾಡಬೇಕಾಗಿ ಬಂತು. ಇದಕ್ಕೆ ಅಸ್ಸಾಮ್ ರಾಜ್ಯದ ವಿರೋಧವಿತ್ತು. ವಿಭಜನೆಗೆ ಬದಲು ರಾಜ್ಯದೊಳಗನ್ನೊಂದು ಮರಿ ರಾಜ್ಯವನ್ನು ಸಾಕಷ್ಟು ಸ್ವಾತಂತ್ರ್ಯದೊಡನೆ ರಚಿಸಬಹುದೆಂಬ ಅಭಿಪ್ರಾಯ ಬುದ್ಧಿಜೀವಿಗಳದ್ದಾಗಿತ್ತು. ಅಸ್ಸಾಮ್ ರಾಜ್ಯವು ಆಯಕಟ್ಟಿನ ಪ್ರದೇಶದಲ್ಲಿದ್ದು, ಇಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳಿಗೆ ಭಂಗತಂದುಕೊಳ್ಳುವುದು ಯೋಗ್ಯವಾದುದಲ್ಲ. ಪ್ರತ್ಯೇಕ ರಾಜ್ಯ ಬೇಡುತ್ತಿರುವ ಈ ಗಿರಿಜನರನ್ನು ಹೊಸ ವ್ಯವಸ್ಥೆಯ ಸಹಾಯದಿಂದ ಒಲಿಸಿಕೊಳ್ಳುವುದು ಕಷ್ಟವಾಗಲಾರದು ಎಂದು ಆಶಿಸಿ ಈಗ ಗುಡ್ಡಗಾಡು ಪ್ರದೇಶದ ಎರಡು ಜಿಲ್ಲೆಗಳನ್ನು ಪ್ರತ್ಯೇಕಿಸಿ ಅವನ್ನು "ಮೇಘಾಲಯ"ವೆಂದು ಕರೆಯಲಾಯಿತು. ಇದು ತನ್ನದೇ ವಿಧಾನ ಸಭೆಯನ್ನು ಹೊಂದಿರುತ್ತದೆ; ತನ್ನದೇ ಆದ ಸಚಿವ ಸಂಪುಟವೂ ಇರುತ್ತದೆ. ಈ "ರಾಜ್ಯ ಸರಕಾರ"ದ ಅಂಕೆಯೊಳಗೆ ಕೆಲವೊಂದು ಆಡಳಿತ ಶಾಖೆಗಳು ಬರುತ್ತವೆ. ಆದರೆ, ಕೆಲವು ಮಹತ್ವಪೂರ್ಣವಾದ ಶಾಖೆಗಳು, ಮುಖ್ಯವಾಗಿ ಹೆದ್ದಾರಿಗಳು, ಬೃಹತ್ ಕೈಗಾರಿಕೆ, ಮತ್ತು ನೀರಾವರಿಗಳು; ಈ ಸರಕಾರದಿಂದ ಹೊರಗುಳಿದು ಅಸ್ಸಾಮ್ ರಾಜ್ಯ ಸರಕಾರದ ಕೈ ಕೆಳಗಿರುತ್ತವೆ. ಇನ್ನು ಕೆಲವು ವಿಚಾರಗಳನ್ನು ಈ ಹೊಸ ರಾಜ್ಯ ಮತ್ತು ಅಸ್ಸಾಮ್ ರಾಜ್ಯಗಳು ಒಂದಾಗಿ ನಿರ್ಧರಿಸಬೇಕಾಗುತ್ತದೆ. ಅಸ್ಸಾಮ್ ರಾಜ್ಯದ ವಿಧಾನ ಸಭೆಯಲ್ಲಿ ಈ 'ರಾಜ್ಯ'ದ ಪ್ರತಿನಿಧಿಗಳೂ ತಮ್ಮ ಧ್ವನಿ ಸೇರಿಸುತ್ತಾರೆ. ಹೀಗೆ 'ಮೇಘಾಲಯ'ವು ಸ್ವಾಯತ್ತ ರಾಜ್ಯವೂ ಹೌದು, ಉಪರಾಜ್ಯವೂ ಹೌದು. ಫೆಡರಲ್ ಮಾದರಿಯ ರಾಷ್ಟ್ರ ರಚನೆಯಲ್ಲಿ ಇದು ಇನ್ನೂ ಮುಂದಿನ ಮತ್ತೊಂದು ಹೆಜ್ಜೆ.

ರಾಜ್ಯದೊಳಗೊಂದು ರಾಜ್ಯ ನಿರ್ಮಿಸುವುದು ಹೊಸ ರಾಜ್ಯ ನಿರ್ಮಾಣಕ್ಕಿಂತ ಪೂರಾ ಬೇರೆಯೆಂದು ಹೇಳುವಂತಿಲ್ಲ. ಇನ್ನು ಮುಂದೆ ಹೊಸ ರಾಜ್ಯಗಳ ರಚನೆಯಿಲ್ಲವೆಂದು ಕೇಂದ್ರ ಸರಕಾರ ಘೋಷಿಸಿತ್ತು. ಈ ನಿರ್ಧಾರ ಸಿಂಡಿಕೇಟ್ ನಾಯಕರ ಒತ್ತಾಯದಿಂದ ಬಂದದ್ದಾದರೆ, ಇಂಡಿಕೇಟು ಅದನ್ನು ಮೀರಿ ರಾಜ್ಯ ರಚನೆಗೆ ಉತ್ತೇಜನ ನೀಡಬಹುದು. ಮಣಿಪುರ, ತ್ರಿಪುರಾ, ಹಿಮಾಚಲ ಪ್ರದೇಶ ಮತ್ತು ದೆಹಲಿಗಳಿಗೂ ಪೂರ್ಣ ರಾಜ್ಯದ ಸ್ಥಾನ ಮಾನ ಕೊಡಬೇಕೆಂಬ ಬೇಡಿಕೆ ಇತ್ತೀಚೆಗೆ ಬಲವತ್ತರವಾಗಿದೆ. ತಮಗೆ ಬೆಂಬಲ ನೀಡುತ್ತಿರುವ ಈ ಪುಟ್ಟಹಕ್ಕಿಗಳ ಗೋಣು ಮುರಿದರೆ, ಇಂಡಿಕೇಟಿಗೆ ಹಾನಿ ತಟ್ಟುತ್ತದೆ. ಆದ್ದರಿಂದ ಮೇಘಾಲಯದ ರಚನೆಯಾದಮೇಲೆ ಕೇಂದ್ರಾಧೀನ ಪ್ರದೇಶಗಳಲ್ಲಿ ಒಂದೆರಡಕ್ಕಾದರೂ ಪೂರ್ಣರಾಜ್ಯದ ಸ್ಥಾನಮಾನ ದೊರೆಯಬಹುದು. ಇದೇ ರೀತಿ ವಿದರ್ಭ ಮತ್ತು ತೆಲಂಗಾಣಗಳ ಪ್ರಶ್ನೆಯೊಂದಿದೆ. ಕೇಂದ್ರ ಗೃಹಮಂತ್ರಿ ಚವಾಣರು ನಾಗಪುರದಲ್ಲಿ ಆಡಿದ ಮಾತು ವಿದರ್ಭವಾದಿಗಳಿಗೆ ಒತ್ತಾಸೆ ನೀಡುತ್ತದೆ. "ನೀವು ಪ್ರಯತ್ನಪೂರ್ವಕವಾಗಿ ಪ್ರತ್ಯೇಕ ರಾಜ್ಯವನ್ನು ಪಡೆದೇ ತೀರುವವರಾದರೆ, ನನ್ನ ಅಭ್ಯಂತರವೇನೂ ಇಲ್ಲ" ಎಂದಿದ್ದರು ಚವಾಣರು. ಹೀಗೆ ರಾಜ್ಯದೊಳಗೊಂದು ರಾಜ್ಯ ಸ್ಥಾಪಿಸುತ್ತ ಹೋಗುವುದು ಜನರಿಗೆ ಒಪ್ಪಿತವಾಗುವುದಿಲ್ಲ. ಆದರೆ, ದೇಶದಲ್ಲಿ ಶಾಂತಿ—ಸುವ್ಯವಸ್ಥೆ-ಭಕ್ತಿಗಳಿಗೆ ಮಾರಕ ಪ್ರಾಯವೆನಿಸುವ ಉಲ್ಲೋಲಕಲ್ಲೋಲಗಳನ್ನು ನೀಗಿಸಲು ಇಂತಹ ವ್ಯವಸ್ಥೆ ಅನಿವಾರ್ಯವೆಂದಾದರೆ ಏಕೆ ಮಾಡಬಾರದು ಎನ್ನುವವರೂ ಕೆಲವರಿದ್ದಾರೆ.

ಭೂತಕಾಲ ಗತಕಾಲವಾಗಿದೆ. ಭವಿಷ್ಯವನ್ನು ಬಲ್ಲವರಿಲ್ಲ. ನಾಳೆ ಏನಾದೀತು ಎಂದು ಬಹಳ ದೂರದ ವರೆಗೆ ಆಲೋಚನೆ ಮಾಡುತ್ತ ಕುಳಿತರೆ ವರ್ತಮಾನ ಕಾಲವನ್ನು ಕ್ರಿಯಾಹೀನವಾಗಿ ಕಳೆಯಬೇಕಾಗುತ್ತದೆ. ಹಾಗಾಗದಂತೆ ವರ್ತಮಾನ ಪರಿಸ್ಥಿತಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ತಕ್ಕ ಏರ್ಪಾಟುಗಳನ್ನು ಮಾಡುವುದು ಅನ್ಯಾಯವೆಂದು ಹೇಳುವಂತಿಲ್ಲ. ಇಂದಾದ ಮೇಲೆ ತಾನೇ ನಾಳೆಯ ಪ್ರಶ್ನೆ ನಮ್ಮ ಮುಂದೆ ಬಂದು ನಿಲ್ಲುವುದು! 'ಮೇಘಾಲಯ' ಹೊಸ ಮರಿ ರಾಜ್ಯವು ಕೆಲವನ್ನು ತಾನೇ ನಿರ್ವಹಿಸುತ್ತದೆ. ಕೆಲವನ್ನು ಅಸ್ಸಾಮ್ ರಾಜ್ಯ ಸರಕಾರದ ಮೂಲಕ ನಿಭಾಯಿಸುತ್ತದೆ. ಮತ್ತೆ ಕೆಲವನ್ನು ಕೇಂದ್ರ ಮತ್ತು ಅಸ್ಸಾಮ್ ರಾಜ್ಯ ಸರಕಾರಗಳಿಂದ ಕಾರ್ಯರೂಪಕ್ಕಿಳಿಸುತ್ತದೆ. ಅಂತೂ, ಮುಬ್ಬಗೆಯ ಕಾರ್ಯಪ್ರಣಾಳಿ ಅದಕ್ಕೆ ಅವಶ್ಯವಿರುತ್ತದೆ. ಈ ಕ್ರಮ ಆಡಳಿತೆಯ ಚುರುಕುತನಕ್ಕೆ ಕೊಡಲಿಯೇಟು ಹಾಕುವ ಸಂಭವವಿದೆ. ಹೀಗಾಗದೆ ಆಡಳಿತ ಸುಸೂತ್ರವಾಗಿ ನಡೆಯುವುದೆಂದೂ ಹಾರೈಸೋಣ. 'ಮೇಘಾಲಯ' ನಿರ್ಮಾಣವು ರಾಜ್ಯ ವಿಭಜನೆಗೆ ಒತ್ತಾಸೆ ನೀಡಿದೆ. ವ್ಯಾವಹಾರಿಕ ಸೌಲಭ್ಯಗಳ ಸಂಪಾದನೆಗೆ ಬಲನೀಡಲು ಪ್ರೇರಕವಾಗುವುದೆಂದು ನಂಬೋಣ.

ಮುಂಬಯಿ ಅಧಿವೇಶನ

ಇಂಡಿಕೇಟ್ ಕಾಂಗ್ರೆಸ್ಸು ಮುಂಬಯಿಯಲ್ಲಿ ಅಧಿವೇಶನ ನೆರೆಸಿತು, ಮೆರವಣಿಗೆ ಮಾಡಿಸಿಕೊಂಡಿತು. "ಆಜಾದ ನಗರ"ದಲ್ಲಿ ಆಜಾದಿಯಿಂದಲೇ ತನ್ನ ಕೆಲಸಗಳನ್ನು ಪೂರಯಿಸಿಕೊಂಡಿತು. ದೆಹಲಿಯಲ್ಲಿ ತನ್ನ ಕೋರಿಕೆಯ ಅಧಿವೇಶನದಲ್ಲಿ ಕೈಕೊಂಡ ಸಂಗತ—ಅಸಂಗತ ನಿರ್ಣಯಗಳೆಲ್ಲವನ್ನೂ ಅನುಮೋದಿಸಿತು. ಹಂಗಾಮಿ ಅಧ್ಯಕ್ಷ ಸುಬ್ರಹ್ಮಣ್ಯಂರಿಂದ ಹೊಸ ಅಧ್ಯಕ್ಷ ಜಗಜ್ಜೀವನ ರಾಮರು ಅಧಿಕಾರ ಸ್ವೀಕರಿಸಿದರು. ಸಾಮಾನ್ಯವಿಮೆ, ಈಗ ರಾಷ್ಟ್ರೀಕರಣಗೊಳಗಾಗದ ಬ್ಯಾಂಕುಗಳನ್ನು ರಾಷ್ಟ್ರೀಕರಿಸುವುದು, ದಾರಿದ್ರ್ಯವನ್ನು ದೂರಮಾಡುವುದು, ರಾಜಧನವನ್ನು ರದ್ದುಮಾಡುವುದು, ಭೂಸುಧಾರಣೆಯನ್ನು ಕ್ಷಿಪ್ರದಲ್ಲೇ ಜಾರಿಗೆ ತರುವುದು ಇತ್ಯಾದಿ ಇತ್ಯಾದಿಯಾಗಿ ಆರ್ಥಿಕ ರಂಗಕ್ಕೆ ತೀವ್ರ ಚಲಾವಣೆ ನೀಡುವ ಹಲವು ನೀತಿಗಳನ್ನು ಅದು ಅಂಗೀಕರಿಸಿತು. ಆದರೆ, ಈ ನೀತಿಗಳೆಲ್ಲವೂ ಕಾಂಗ್ರೆಸ್ಸಿನ ದಶಾಂಶ ಪ್ರಣಾಳಿಯಲ್ಲೇ ಅಡಕವಾಗಿವೆಯೆಂಬುದನ್ನು ಮರೆಯುವಂತಿಲ್ಲ. ಹಳೆಯ ನೀರನ್ನೇ ಹೊಸ ಬಾಟಲಿಯಲ್ಲಿ ತುಂಬಿ ಬಣ್ಣ ಬೆರಸಿ ಪ್ರಧಾನಿ ಗುಂಪು ಇಟ್ಟಿದೆಯೆಂದರೆ ಆಶ್ಚರ್ಯಪಡಬೇಕಾಗಿಲ್ಲ.

ಪಕ್ಷವು ನೀತಿಯನ್ನು ರೂಪಿಸುವ ಕೆಲಸವನ್ನು ಮಾಡುತ್ತದೆ. ಆ ನೀತಿಗಳನ್ನು ಕಾರ್ಯರೂಪಕ್ಕೆ ತರಬೇಕಾದುದು ಪಕ್ಷೀಯ ಸರಕಾರದ ಕರ್ತವ್ಯ. ಕಾಂಗ್ರೆಸ್ಸು ಬಹಳ ಹಿಂದಿನ ಕಾಲದಲ್ಲೇ ಅಂಗೀಕರಿಸಿದ್ದ ಭೂಸುಧಾರಣೆಯನ್ನು, ತಮ್ಮನ್ನು ಪ್ರಗತಿಗಾಮಿಗಳೆಂದು ಕರೆದುಕೊಳ್ಳುವ ಯಾವ ಮುಖ್ಯಮಂತ್ರಿಯೂ ಸಂಪೂರ್ಣ ಜಾರಿಗೆ ತಂದಿಲ್ಲ. ಪಕ್ಷವು ಸರಕಾರಕ್ಕೆ ಕರೆ ನೀಡಬಹುದು. ಅದಕ್ಕೆ ಸರಕಾರದ ನೇತಾರರು ಓಗೊಡದೆ ತಾವು ಶಾಸನಾಂಗದ ಬಗೆಗೂ ಜಾಗ್ರತರಿರಬೇಕಾಗುತ್ತದೆ. ಪಕ್ಷವೊಂದಕ್ಕೆ ಮಾತ್ರ ಜವಾಬ್ದಾರನಲ್ಲವೆಂದು ಹೇಳ ಹೊರಟರೆ, ನೀತಿ ಕಾರ್ಯರೂಪಕ್ಕೆ ಇಳಿಯಲಾರದು. ಆದರೆ, ಇಂದು ಕೇಂದ್ರದಲ್ಲೂ ಕೆಲವು ರಾಜ್ಯಗಳಲ್ಲೂ ಪ್ರಧಾನಿ ಕಾಂಗ್ರೆಸ್ಸು ಅಧಿಕಾರದಲ್ಲಿದೆ, ಇನ್ನೂ ಕೆಲವೆಡೆ ಅದಕ್ಕೆ ಪ್ರತ್ಯಕ್ಷ ಯಾ ಪರೋಕ್ಷವಾಗಿ ಬೆಂಬಲ ನೀಡುವವರ ಸರಕಾರವಿದೆ. ಪ್ರಧಾನಿ ಇಂದಿರಾ ಗಾಂಧಿಯೆಂಬ ಆಕರ್ಷಣೆಯಿತ್ತು ನೆರೆದಿರುವ ಸಂತೆಯ ಮಂದಿ ಮುಂಬಯಿಯಲ್ಲಿ ಸೇರಿದ್ದರಿಂದ, ಮುಂಬಯಿ ನಿರ್ಣಯಗಳನ್ನು ಪೂರ್ಣ ಕಸದ ಬುಟ್ಟಿಗೆ ಹಾಕುವಂತಿಲ್ಲ; ಪ್ರಧಾನಿ ಗಾಂಧಿಯೇ ಪಕ್ಷದ ಸೂತ್ರಧಾರಿಣಿಯೂ ಆಗಿರುವುದರಿಂದ ಕೆಲಕಾಲ ಆಸೆಯ ಮಾತು ನಡೆಯುತ್ತದೆ. ಆಗ ಶ್ರೀ ಜಗಜ್ಜೀವನ ರಾಮ್ ನೇತ್ಯಾದಿಗಳಿಗೆ ತಮ್ಮ ತಪ್ಪು ಮನವರಿಕೆಯಾಗುತ್ತದೆ.

ಅಭಿನಂದನೆ

ಬಹು ದೀರ್ಘಕಾಲದಿಂದ ಪನೆಗುದಿಗೆ ಬಿದ್ದಿದ್ದ ಶಕೋಳ ಆಯೋಗದ ವರದಿಯ ಬಗ್ಗೆ ಕರ್ನಾಟಕ ಸರಕಾರ ತನ್ನ ನಿರ್ಧಾರವನ್ನು ಕೈಕೊಂಡಿತು. ರಾಜ್ಯ ಸರಕಾರದ ನೌಕರರು ನಿಟ್ಟುಸಿರು ಬಿಟ್ಟರು. ಈ ನಿರ್ಧಾರಕ್ಕೆ ಬರಬೇಕಾದರೆ, ಸರಕಾರ ಬಹುಕಾಲ ವಿಳಂಬ ಮಾಡಿತು. ನಾನಾ ವೇಷಗಳನ್ನು ಹಾಕಿತು. ಅನಿವಾರ್ಯವೆಂದು ಪರಿಸ್ಥಿತಿ ವಿಷಮವಾಗುವುದೆಂದು ಮನವರಿಕೆಯಾದ ಮೇಲೆ ನಿರ್ಧಾರಕ್ಕೆ ಬಂತು. ಇದೂ ಆಡಳಿತೆಯ ಒಂದು ತಂತ್ರ. ಪರಿಷ್ಕೃತವೇತನವು ಇದೇ ಜನವರಿಯಿಂದ ಜಾರಿಗೂ ಬರುವುದು.

ವೇತನ ಮಟ್ಟದ ಸಂಪೂರ್ಣ ವಿವರಗಳು ಲಭ್ಯವಾಗಬೇಕಷ್ಟೇ. ಈ ವೇತನ ಮಟ್ಟವು ಬಹಳಷ್ಟು ತೃಪ್ತಿಕರವಾಗಿದೆಯೆಂದು ಅವಶ್ಯ ಹೇಳಬೇಕು.

ಇದುವರೆಗೆ ರಾಜ್ಯ ನೌಕರರಲ್ಲಿ ೧೦೮ ಬಗೆಯ ವೇತನ ಮಟ್ಟಗಳಿದ್ದು ಅವನ್ನು

(ಆರನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 171/1969.

ಅಂಜಲಿನ್ ಡ್ಯಾ —ವಾದಿಳು.

ಮತ್ತು

ಗಿರಿಜ ಪೂಜಾರ್ತಿ —ಪ್ರತಿವಾದಿಳು,

ಇವರೊಳಗೆ

ನೋಟೀಸು.

ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದಲ್ಲಿರುವ ಕುಂಜಂಟ ಪೂಜಾರಿಯ ವಿಧವೆ ಮೇಲಿನ ದಾವೆಯ ಪ್ರತಿವಾದಿಳು ಗಿರಿಜ ಪೂಜಾರ್ತಿಗೆ ಈ ಮೂಲಕ ತಿಳಿಸಪಡಿಸುವುದೇನೆಂದರೆ:—

ಮೇಲಿನ ವಾದಿಳು ನಿಮ್ಮ ಮೇಲೆ ಪ್ರೋನೋಟು ನಿವೃತ್ತಿ ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜ್ಯವು ವಿಚಾರಣೆ ಬಗ್ಗೆ ತಾರೀಕು 19-1-1970ಕ್ಕೆ ಇಟ್ಟಿದ್ದು, ನಿಮ್ಮ ದೇನಾದಾರ ಉಪಸ್ಥಿತರಿರಬೇಕಾದಲ್ಲಿ ಈ ಕೋರ್ಟಿನ ಮುಂದೆ ಆ ದಿನ ಬೆಳಗ್ಗೆ 11-00 ಗಂಟೆಗೆ ಸ್ವತಾ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು.

ಕೋರ್ಟು ಹುಕ್ಕುಂ ಪ್ರಕಾರ,

ಶಿರ್ವಾಡಿ ವಿಲಿಯಂ ಪಿಂಟೊ
M. A. L. L. B.,
ವಾದಿಯ ಪರ ಎಡ್ವೋಕೇಟ್

ಉಡುಪಿ, ದ. ಕ.
ತಾ. 22.12.69

ಇಂದಿರಾಯಣದಲ್ಲಿ ಶ್ರೀರಾಮ ಪಟ್ಟಾಭಿಷೇಕ

ಶ್ರೀರಾಮ ಪಟ್ಟಾಭಿಷೇಕ

ಇಂಡಿಕೇಟ್ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಜಗಜ್ಜೀವನ ರಾಮರು ತಮ್ಮ ಹೊಸ ಪದವಿಯನ್ನು ಸ್ವೀಕರಿಸುವುದಕ್ಕೆ ಮೊದಲು ಒಳ್ಳೆಯ ಕೆಲಸವೊಂದನ್ನು ಮಾಡಿದ್ದಾರೆ. ಹತ್ತು ವರ್ಷಗಳಿಂದಲೂ ಪರ ವಾಹ ತೆರಿಗೆಯನ್ನು ತಪ್ಪಿಸಿಕೊಂಡ ಈ ನಾಯಕ ಮಣಿ ಕೊನೆಗೂ ತನ್ನ ತಪ್ಪನ್ನು ಒಪ್ಪಿಕೊಂಡರು, ಲೋಕ ಸಭೆಯಲ್ಲಿ. "ತೆರಿಗೆ ಇಲಾಖೆಯ ಕ್ಷಮೆಗಾಗಿ ನಾನು ಪ್ರಯತ್ನಿಸುವುದಿಲ್ಲ. ಅಲ್ಲವೇ ತೆರಿಗೆ ಇಲಾಖೆ ನನಗೆ ನೋಟೀಸನ್ನೇ ಕೊಡಲಿಲ್ಲವೆಂದ ವಾದಿಸುವುದಿಲ್ಲ. ಕಾನೂನಿನ ಪ್ರಕಾರ ಒಬ್ಬ ಶ್ರೀ ಸಾಮಾನ್ಯನಿಗೆ ನೀಡುವ ವಿನಾಯತಿಗೂ ನಾನು ಅನರ್ಹನೇ" ಎಂದು ಅವರು ಕುತ್ತಿಗೆ ಅಡ್ಡಹಾಕಿದರು. ಪ್ರಾಯಃ ೪೦ ವರ್ಷಗಳ ಅವರ ರಾಜ್ಯಕೀಯ ಜೀವನದಲ್ಲಿ ಶ್ರೀ ಜಗಜ್ಜೀವನ ರಾಮರು ಎರಡೇ ಸಲ ಇಷ್ಟು ದೈನ್ಯ ತೋರಿಸಿದರು. ಕಾಮರಾಜೀಕರಣದಿಂದ ಅಧಿಕಾರ ತಪ್ಪಿಹೋದ ಮೇಲೆ ಶಾಸ್ತ್ರಿ ಸಂಪುಟದಲ್ಲಿ ಮತ್ತೆ ಸೇರುವುದಕ್ಕೆ ಮೊದಲೊಮ್ಮೆ, ಈಗೊಂದು ಬಾರಿ.

ತನ್ನ ಮಾಡಿದ ತಪ್ಪನ್ನು ಶ್ರೀರಾಂ ಒಪ್ಪಿಕೊಳ್ಳದಿದ್ದರೆ, ಅದು ಕಾನೂನಿಗೆ ವಿರೋಧವಾಗುತ್ತಿತ್ತು. ಹಾಗಾಗಿ ಅವರು ಹಾಗೆ ಮಾಡಲೇ ಬೇಕಾಯಿತು. "೭೩" ಮೆರವಣಿಗೆಯ ರಥಾರೋಹಣ ಮಾಡಿದ ಪೂರ್ವಸಂಜೆಯಲ್ಲಿ ಅವರು ಒಂದು ತಪ್ಪನ್ನು ಒಪ್ಪಿಕೊಂಡರು. ಮುಂಬಯಿ ರೀಲು ಹತ್ತಿದ ಅವರ ತಪ್ಪನ್ನು ಅವರೀಗ ಸಮರ್ಥಿಸಿಕೊಂಡಾರು. ಆದರೆ, ಸಕ್ರಿಯ ರಾಜ್ಯಕಾರಣದಿಂದ ನಿವೃತ್ತರಾಗುವ ಅವಕಾಶ ಅವರ ಬೆನ್ನಹಿಂದೇ ಅಂಡಾಡುತ್ತಿದೆ. ಅವರು ಬಹುಕಾಲ ಕೇಂದ್ರಮಂತ್ರಿಯಾಗಿಯೂ ಇಂಡಿಕೇಟ್ ಕಾಂಗ್ರೆಸ್ಸಧ್ಯಕ್ಷರಾಗಿಯೂ ಉಳಿಯುವುದು ಅಸಾಧ್ಯ. ಹೆಚ್ಚೆಂದರೆ, ಪಾರ್ಲಿಮೆಂಟಿನ ವಿಸರ್ಜನೆಗೆ ಪ್ರಧಾನಿ ಸಲಹೆ ಅಂಗೀಕಾರವಾಗುವ ತನಕ ಇದು ಸಾಧ್ಯವಾದೀತು.

ಎಂ. ವಿ. ಕೃಷ್ಣಪ್ಪ

ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಬಲಗೈ ಬಂಟ ಶ್ರೀ ಜಗಜ್ಜೀವನ ರಾಮರನ್ನು ಭಾರತದ ಪ್ರಥಮ ಪ್ರಜೆಯನ್ನಾಗಿಸುವ ಹವಣಿಕೆಯಲ್ಲಿದ್ದರು. ಶ್ರೀ ರಾಮರಿಗೆ ಆ ಗೌರವದ ಕಿರೀಟ ಹೊರುವ ಸಕಲ ಯೋಗ್ಯತೆಗಳೂ ಇವೆ. ಆದರೆ, ಕಾಂಗೆಸ್ಸ್ ಯೋಗ್ಯತೆಯನ್ನು ತನ್ನ ಅಳತೆಗೋಲಿನಿಂದಲೇ ಅಳೆಯಿತು. ಅನಂತರ ಅವರು ಕೋರಿಕೆಯ ಎಬ್ಬಿಸಿ ಕರೆದು ನಿಜಲಿಂಗಪ್ಪನವರನ್ನು ಪದಚ್ಯುತಗೊಳಿಸಿ ಶ್ರೀ ರಾಮ ಪಟ್ಟಾಭಿಷೇಕ ಮಾಡಲು ಹವಣಿಸಿದರು. ಅದು ಇಂಡಿಕೇಟ್ ಕಾಂಗ್ರೆಸ್ಸಾಯಿತು. ಮದುವೆ ಮುಗಿದರೇನು, ಹೋಳಿಗೆ ತಪ್ಪಲಿಲ್ಲ. ಶ್ರೀಮತಿ ಗಾಂಧಿಯವರು ೭೩ರ ಮೆರವಣಿಗೆಯಲ್ಲಿ ಶ್ರೀ ರಾಮರನ್ನು ರಥಾರೋಹಣ ಮಾಡಿಸಿ ಮುಂಬಾದೇವಿಯ ಅಜಾದ ಮೈದಾನದಲ್ಲಿ ಪಟ್ಟಾಭಿಷೇಕ ಏರ್ಪಡಿಸಿದರು.

ರಾಮಾಯಣದ ರಾಮನಿಗೆ ಪಟ್ಟಾಭಿಷೇಕದ ತಯಾರಿ ಮಾತ್ರ ನಡೆಯಿತು. ತಕ್ಷಣ ಆತನಿಗೆ ವನಗಮನವಾಯಿತು. ಇಂದಿರಾಯಣದ ಈ ರಾಮನಿಗೆ ಪಟ್ಟಾಭಿಷೇಕವಾಯ್ತು; ವಾನಪ್ರಸ್ಥ ದೀಕ್ಷೆಯನ್ನು ಶ್ರೀ ಎಂ. ವಿ. ಕೃಷ್ಣಪ್ಪನವರು ಕೊಡಬೇಕು.

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ

ಎಲ್ಲಾ ಯೂನಿಟ್‌ದಾರರಿಗೂ ಮತ್ತು ಕೊಳ್ಳುವವರಿಗೂ

ಒಂದು ವರ್ಷಪೂರ್ತಿ ಶಾಂತಿ ಮತ್ತು ಶುಭವನ್ನು ತರುತ್ತದೆ

[illegible] ರೂ. 1000 ದ ಮೇಲೆ ತೆರಿಗೆ ಕೊಡಬೇಕಾಗಿಲ್ಲ.
[illegible] ಯೂನಿಟುಗಳನ್ನು ಕೊಳ್ಳಿರಿ. ಅವು ಸುಲಭವಾಗಿ ಸಿಗುತ್ತವೆ. ಅಲ್ಲದೆ ನಿಮ್ಮ [illegible] ಸಮಯದಲ್ಲಿ ಯೂನಿಟುಗಳನ್ನು ಹಿಂದಿರುಗಿಸಿ ಹಣ ಪಡೆಯಬಹುದು.

ಯೂನಿಟುಗಳು—ಎಲ್ಲರೂ ಮೆಚ್ಚಬಹುದಾದ ವಿನಿಯೋಗ

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ
ಮುಂಬಾಯಿ • ಕಲ್ಕತ್ತಾ • ಮದ್ರಾಸು • ದಿಲ್ಲಿ

ಇಂದಿರಾಗಾಂಧಿ

ಅಧಿಕಾರ ಲಾಲಸಿಗರೆಂದು ಬೇರೆಯವರನ್ನು ಹೆಸರಿಸುವವರು ಅಧಿಕಾರವನ್ನು ಬಿಡಲಾರರು ಎಂಬುದು ನಮ್ಮ ದೇಶದಲ್ಲಿ ನೂರು ಪೈಸೆಯಷ್ಟು ಸತ್ಯ. ರಾಷ್ಟ್ರಪತಿ ಚುನಾವಣೆಯ ವೇಳೆ "ಆತ್ಮ ಸಾಕ್ಷಿ ಸಂಘ"ವನ್ನು ಸ್ಥಾಪಿಸಿ ಹೊಸ ದಾಖಲೆ ನಿರ್ಮಿಸಿದ ಪ್ರಧಾನಿ ಇಂದಿರಾಗಾಂಧಿ ತನ್ನ ಈ ಕೃತ್ಯದ ಹಿನ್ನೆಲೆಯನ್ನು ಈಗ ಬಾಯಿಬಿಟ್ಟಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಾದ ಬಿಕ್ಕಟ್ಟಿಗೆ ತಾನೇ ಕಾರಣವೆಂಬುದನ್ನು ಅವರು ಸ್ವೀಕರಿಸಿ ತಮ್ಮ ಅಪರಾಧವನ್ನು ಸಿಂಡಿಕೇಟಿನ ತಲೆಯ ಮೇಲೆ ಹೊರಿಸುವ ಇನ್ನೊಂದು ಪ್ರಯತ್ನ ಮಾಡಿದ್ದಾರೆ.

ಶ್ರೀ ಸಂಜೀವರೆಡ್ಡಿಯವರಿಗೂ ಶ್ರೀಮತಿ ಗಾಂಧಿಯವರ ಯಾವ ಸನ್ಮಾನವೂ ಇರಲಿಲ್ಲ. ಅವರನ್ನು ವಿರೋಧಿಸಲೂ ಗಾಂಧಿ ಇಚ್ಛಿಸಿರಲಿಲ್ಲ. ಆದರೆ, ಶ್ರೀ ರೆಡ್ಡಿಯವರು ರಾಷ್ಟ್ರಪತಿಗಳಾದ ಮೇಲೆ ಶ್ರೀಮತಿ ಗಾಂಧಿಯವರನ್ನು ಪದಚ್ಯುತಗೊಳಿಸುವ ಬಗ್ಗೆ ಕೆಲವರು ಸಂಚು ಹೂಡಿದರು— ಇದಕ್ಕೆ ವರಿಷ್ಠರ ಅನುಮೋದನೆ ದೊರೆಯುಲಿಲ್ಲವಾದರೂ ತನಗೆ ಅಧಿಕಾರಚ್ಯುತಳಾಗುವ ಅಂಜಿಕೆ ಅಂಟಿಕೊಂಡಿತು. ಶ್ರೀ ರೆಡ್ಡಿಯವರನ್ನು ವಿರೋಧಿಸಿದರು.

ಈ ಪಕ್ಷ ದ್ರೋಹ ಶ್ರೀ ಸಾಮಾನ್ಯನ ಹೆಸರಿನಲ್ಲಿ ಆತ್ಮಸಾಕ್ಷಿಯ ಬಲ[illegible]ಗಿತು. ಅಧಿಕಾರ ಲಾಲಸೆಯ ಪರಾಕಾಷ್ಠೆಯಿದಲ್ಲದೆ, ಪಕ್ಷ ಕಟ್ಟುವ ದಾರಿಯಲ್ಲ. ಕಾಂಗ್ರೆಸ್ ಪಕ್ಷಕ್ಕೆ ಶ್ರೀಮತಿ ಗಾಂಧಿಯವರ ನಾಯಕತ್ವ ಬೇಡವೆಂದಿದ್ದಾರೆ. ತಾನೇ ನಾಯಿಕೆಯಾಗಿ ಉಳಿಯಬೇಕೆನ್ನುವ ಅವರ ಕೃತಿ ಪ್ರಜಾಸತ್ತೆಗೆ ಮಾರಕವೇ ಸರಿ.

ವೈ. ಬಿ. ಚವನ

ರಾಜಧನವನ್ನು ರದ್ದು ಮಾಡಬೇಕೆಂದು ಕರೆ ನೀಡುವ ಅನಧಿಕೃತ ಗೊತ್ತುವಳಿ ರಾಜ್ಯಸಭೆಯಲ್ಲಿ ಪ್ರಚಂಡ ಬಹುಮತದಿಂದ ಮಂಜೂರಾದದ್ದು ಕೇಂದ್ರ ಸರಕಾರಕ್ಕೆ ಭಾರೀ ಕಾಲೆತ್ತಿದರು. ಪ್ರಧಾನಿ ಗಾಂಧಿಯವರೂ ಗೃಹಮಂತ್ರಿ ಚವನರೂ ರಾಜ-ಮಹಾರಾಜರ ಪ್ರತಿನಿಧಿಗಳೊಂದಿಗೆ ಬೇರೆ ಬೇರೆಯಾಗಿ ಮಾತಾಡಿದರು. ಏಕೆಂದರೆ, ಈ ನಿರ್ಣಯವನ್ನು ಕಾರ್ಯಗತಗೆ ಳಿಸದೆ ಹೋದರೆ, ಶ್ರೀಮತಿ ಗಾಂಧಿ ಸರಕಾರ ಬಹುದಿನ ಅಧಿಕಾರದಲ್ಲಿ ಉಳಿಯುವುದಿಲ್ಲ.

ರಾಜಧನವನ್ನು ಹಂತ ಹಂತವಾಗಿ ಇಳಿಸುವುದ; ರಾಜರಿಗಿರುವ ವಿಶೇಷ ಸೌಲಭ್ಯಗಳನ್ನು ರದ್ದುಗೊಳಿಸುವುದು, ಇಲ್ಲವೇ ರಾಜಧನಕ್ಕೂ ಆದಾಯ ತೆರಿಗೆಯನ್ನು ವಿಧಿಸುವುದು— ಹೀಗೆ ಬಹುಮಾನೀಯ ಮಾತುಕತೆ ನಡೆಯಿತು. ಆದರೆ, ರಾಜ ಮಹಾರಾಜರು ಇದಾವುದಕ್ಕೂ ಸಗ್ಗುವುದಿಲ್ಲ. ತಮ್ಮ ರಾಜ್ಯ ಭಾರತೀಯ ಒಕ್ಕೂಟದಲ್ಲಿ ವಿಲೀನಗೊಂಡ ವೇಳೆ ಭಾರತೀಯ ಸರಕಾರದೊಡನಾದ ಒಡಂಬಡಿಕೆಗೀ

ಬದ್ಧರಾಗಿರಲಿ ಅವರ ಸೂಚನೆ. ರಾಜಧಾನಿ ಗದ್ದುಗೆಯನು ಮರಳಿಕೇಳಿಕೊಂಡು ಇಂಡಿಕೇಟ್ ಸರಕಾರ ಮೊದಲೇ ನಿರ್ಧರಿಸಿ ಮತ್ತೆ ಸೂಚಕತೆಗೆ ಕಳಿಸಿದರೂ ಏಕಪಕ್ಷೀಯ ನಿರ್ಧಾರವನ್ನು ತಮ್ಮ ತಲೆಯ ಮೇಲೆ ಹೇರುವ ಪ್ರಯತ್ನವೆಂದೂ ಅವರ ವಾದ.

ಶ್ರೀಮತಿ ಗಾಂಧಿಗೆ ಕ್ರಾಂತಿಕಾರಿ ಅರ್ಥನೀತಿಯನ್ನು ಮುಂಬಯಿಯಲ್ಲಿ ಘೋಷಿಸಬೇಕಾಗಿದ್ದು ಶ್ರೀ ಚವನರ ಮಹತ್ವಕತೆ ಮುರಿದು ಹೋದದ್ದು ಬಲವಾದ ಏಟು.

ವೀರೇಂದ್ರ ಪಾಟೀಲ್

ಇಂದಿರಾ ಗಾಂಧಿಗೆ ಪ್ರಧಾನಿ ಪದವಿಯ ಮೇಲೆ ಆಸೆ ಹೋದರೆ, ಪರಿವಾರಿಗಳಿಗೆ ಬೇಗ ವಿಧಾನಸಭಾ ಚುನಾವಣೆಗಳ ಮೇಲೆ ಕಣ್ಣು. ಶ್ರೀಮತಿ ಗಾಂಧಿಯವರ ಇಂದಿರಾಯಣ ನಡೆಸಲು ಮುಂಬಯಿ ಕಾಂಗ್ರೆಸ್ಸಿನ ಹಠಾತ್ ತೀರ್ಮಾನದಿಂದಲೂ ಮಹಾರಾಷ್ಟ್ರ ಕಾಂಗ್ರೆಸ್ಸ್ ಆಸಕ್ತಿ ವಹಿಸಲು ಇದ್ದ ಮುಖ್ಯ ಕಾರಣವೇ ಇದು. ಕರ್ನಾಟಕವೂ ಇಲ್ಲಿನ ಕಾಂಗ್ರೆಸ್ಸ್ ಶ್ರೀ ಎಸ್ಸೆಂಗೆ ಬೆಂಬಲ ನೀಡುತ್ತಿರುವುದು ಸ್ವಾಭಾವಿಕ. ಇದರ ಲಾಭವನ್ನು ಪಡೆದಾದರೂ ಕನ್ನಡದ ನೆಲವನ್ನು ಕಬಳಿಸಿ ಬಿಡುವ ಹೆಬ್ಬಯಕೆ ಈ ಮರಾಠಿ ಬಳಗದವರಿಗೆ.

ಆದರೆ, ಕರ್ನಾಟಕದ ವಿವಿಧ ರಾಜ್ಯಕೀಯ ಪಕ್ಷಗಳೂ ಸರಕಾರವೂ ಈ ಬಗ್ಗೆ ದೃಢ ನಿಲುವು ತಳೆದಿವೆ. ಮಹಾರಾಷ್ಟ್ರದ ಬೇಡಿಕೆ ಮೇರೆಗೆ ನೇಮಿಸಿಕೊಂಡ ಮಹಾಜನ ಆಯೋಗದ ವರದಿಯನ್ನು ಅವರೀಗ ತಿರಸ್ಕರಿಸುತ್ತಿದ್ದಾರೆ. ಸದ್ಯ ವರದಿಯು ಕೇಂದ್ರ ಗೃಹ ಶಾಖೆಯ ಪರಿಶೀಲನೆಯಲ್ಲಿದ್ದು ಬಜೆಟ್ ಅಧಿವೇಶನದೊಳಗೆ ಅದರ ಬಗ್ಗೆ ನಿರ್ಣಯವನ್ನು ಘೋಷಿಸಬೇಕಾಗುತ್ತದೆ. ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ರಾಜ್ಯಕೀಯ ದುರುದ್ದೇಶಗಳಿಗಾಗಿ ರಾಜ್ಯ ಅನ್ಯಾಯ ಮಾಡುವುದನ್ನು ಬಲವಾಗಿ ವಿರೋಧಿಸುತ್ತಾರೆ. "ಅವರ ಒತ್ತಾಯದಿಂದ ನೇಮಿಸಿದ ಆಯೋಗದ ವರದಿಯನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳಿ" ಎನ್ನುತ್ತಾರೆ. ಆದರೆ, ಅಧಿಕಾರ ಲಾಲಸಿಗಳಿಗೆ ನ್ಯಾಯ-ಅನ್ಯಾಯಗಳ ನಡುವೆ ಏನೂ ಅಂತರ ಕಾಣಿಸುವುದಿಲ್ಲ.

ಸುಬ್ರಹ್ಮಣ್ಯಂ

ಮದ್ರಾಸಿನ ಹೊಸ ತಮಿಳುನಾಡಿನ ಮಾಜಿ ನಾಯಕ ಶ್ರೀ ಸಿ. ಸುಬ್ರಹ್ಮಣ್ಯಂ ಇಂಡಿಕೇಟ್ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಆದರು. ಯಾರೂ ತನಗೆ ನೀಡದೆ ತಾನಾಗಿಯೇ ಬಂದ ಅಧಿಕಾರವನ್ನು ಅವರು ಶ್ರೀ ಜಗಜ್ಜೀವನರಾಮರ ಹಸ್ತಗಳಿಗೆ ಒಪ್ಪಿಸಿದರು. ಇನ್ನೇನ? ಮಂತ್ರಿಮಂಡಲದ ಕಾರು ರಸ್ತೆಯಲ್ಲಿ ಬರಲಿದೆಯೆನ್ನುವುದಕ್ಕೆ ಮೊದಲು ಜಾಡಮಾಲಿ ಬಂದು ಕಸಗುಡಿಸಿ ಹೋಗುತ್ತಾನೆ. ಮತ್ತೆ ಅವನನ್ನು ಯಾರು ಕೇಳುತ್ತಾರೆ? ಶ್ರೀ ಸುಬ್ರಹ್ಮಣ್ಯಂ ತಮಿಳ ನಾಡಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ಬಗ್ಗೆ ತುರ್ತು ಶ್ರಮ ವಹಿಸುತ್ತಾರೆಂದು ವರದಿ. ಮುಂಬಯಿಯಲ್ಲಿ ದಾರಿದ್ರ್ಯವನ್ನು ತೊಲಗೆಂದು ಆಜ್ಞಾಪಿಸಿದ ಶ್ರೀ ಸಿ. ಸು. ಮದ್ರಾಸಿನಲ್ಲಿ ಇನ್ನೂ ಹಲವಾರು ಘೋಷಣೆಗಳನ್ನು ಮಾಡಿ ಅಲ್ಲಿ ಇಂಡಿಕೇಟನ್ನು ಬಲಪಡಿಸಬಹುದು.

ಶ್ರೀ ಸಿ. ಸು. ಯಾವ ಹೊಸ ಘೋಷಣೆಗಳನ್ನು ಮಾಡಬಹುದು? "ಕಾಮರಾಜ ಮುರ್ದಾಬಾದ್"—ಹಾಗೆ, ಖಾಲಿಯಾದರೂ ಅವರು ಮುಂಬಯಿ ರೀತಿ ಹಣ ತಾರೆಂದು ನಂಬಿರುವಾಗ ಇದು ಸಾಧ್ಯವಿಲ್ಲ. "ಡಿಎಂಕೆ ಸರಕಾರ ತೊಲಗು." ಎರಡು ವರ್ಷ ಕಾಯಬೇಕು ತಾನೆ? ನಾರದ ಮಹರ್ಷಿಗಳು ನಾರಾಯಣ ಜಪ ಮಾಡುತ್ತ ಲೋಕ ಸಂಚಾರ ಮಾಡುತ್ತಾರೆ. ಶ್ರೀ ಸಿ. ಸು. ಇಂದಿರಾಯಣ ಜಪಿಸುತ್ತ ತಮಿಳ ನಾಡು ಸಂಚಾರಕ್ಕೆ ತೊಡಗುತ್ತಾರೆ.

ವಿದ್ಯಾಚರಣ ಶುಕ್ಲ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸರಳ ಮಂಚಾಸೀನ ಶ್ರೀ ಅಜಯ ಮುಖರ್ಜಿ ನಿರಶನವ್ರತ ಮಾಡಿದರು. ರಾಜ್ಯದಲ್ಲಿ ನ್ಯಾಯ ವ್ಯವಸ್ಥೆ ಸ್ಥಾಪಿಸಬೇಕೆಂದು, ಉಪಮುಖ್ಯಮಂತ್ರಿ ಎಡ ಕಮ್ಯುನಿಸ್ಟ್ ಜ್ಯೋತಿಬಸು ತಮ್ಮ ಗೃಹಖಾತೆಯನ್ನು ಬಿಟ್ಟುಕೊಡಬೇಕೆಂದು. ಆದರೆ, ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ. ಶ್ರೀ ಮುಖರ್ಜಿಯವರಿಗೆ ಗಂಟಲ ಬಿಸಿ ನುಂಗಲಾರದ ತುತ್ತು. ಜ್ಯೋತಿಬಸು ತಮ್ಮ ಬಲಪ್ರದರ್ಶನಕ್ಕೇ ನಿಂತಿದ್ದಾರೆ.

ಕೇಂದ್ರದ ಗೃಹಖಾತೆಯ ಮಂತ್ರಿ ಶ್ರೀ ವಿದ್ಯಾಚರಣ ಶುಕ್ಲರು ಹೇಳಿದ್ದಾರೆ—ಮುಖ್ಯಮಂತ್ರಿ ನಿರಶನಾನಂತರವೂ ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆಗಳು ಸುಧಾರಿಸಿಲ್ಲ. ಅಂದರೆ, ಅರ್ಥವೇನು? ಪಶ್ಚಿಮ ಬಂಗಾಳದಲ್ಲಿ ಕಾನೂನು-ವ್ಯವಸ್ಥೆ ಕೆಟ್ಟುಹೋಗಿದೆಯೆಂದೇ ಅರ್ಥ. ಹಾಗಿದ್ದರೂ ಕೇಂದ್ರ ಸರಕಾರ ಈ ಬಗ್ಗೆ ಯಾವ ಕ್ರಮ ಕೈಕೊಳ್ಳಲು ನಿರ್ಧರಿಸಿದೆ? ಕಾನೂನು ಮತ್ತು ಶಾಂತಿ ವ್ಯವಸ್ಥೆಗಳ ಹೊಣೆಗಾರಿಕೆ ರಾಜ್ಯ ಸರಕಾರಗಳಿಗೆ ಸೇರಿದ್ದಾದರೂ ಒಂದು ರಾಜ್ಯದ ಆಡಳಿತ ಅನ್ಯಾಯ ಅವ್ಯವಸ್ಥೆಗಳ ತವರು ಮನೆಯಾಗುವುದನ್ನು ಮೂಕ ಪ್ರೇಕ್ಷಕನಂತೆ ಕೇಂದ್ರ, ನೋಡುತ್ತ ಸುಮ್ಮನಿರುವುದು ಸಾಧ್ಯವೆ?

ಇದಕ್ಕೆ ಶ್ರೀ ವಿದ್ಯಾಚರಣ ಶುಕ್ಲರಾಗಲೀ ಚವನರಾಗಲೀ ಉತ್ತರಿಸುತ್ತಿಲ್ಲ. ಶ್ರೀಮತಿ ಗಾಂಧಿಯ ಆಸ್ಥಾನ ಸಾಕ್ಷಿ, ಅಧಿಕಾರಲಾಲಸೆಯು ಜೊಗಿಸುತ್ತ ಕಣ್ಣು ಮುಚ್ಚಿಕೊಂಡಿರುವ ವರೆಗೆ ನ್ಯಾಯ—ಶಾಂತಿಯೆಂಬ ಪದಗಳಿಗೆ ಅರ್ಥವಿಲ್ಲ.

ಸುಂದರ ದ್ವೀಪ: ಮಾರಿಶಸ್

ಮಾರಿಶಸ್ ಹಿಂದೂ ಮಹಾಸಾಗರದ ದಕ್ಷಿಣದ ಒಂದು ಸುಂದರವಾದ ದ್ವೀಪ. ಇದು ಭಾರತದಿಂದ 2,000 ಮೈಲು ಹಾಗೂ ಆಫ್ರಿಕದ ಕರಾವಳಿಯಿಂದ 1,250 ಮೈಲುಗಳ ದೂರದಲ್ಲಿದೆ. ಈ ದ್ವೀಪದ ಉದ್ದಳತೆ 40 ಮೈಲುಗಳು. ಅಗಲ 30 ಮೈಲುಗಳು. 1967ರಲ್ಲಿ ಈ ದ್ವೀಪದ ಜನಸಂಖ್ಯೆ 7,71,000ರಷ್ಟಿತ್ತು. ಜನಸಾಂದ್ರತೆ ಪ್ರತಿ ಚದರ ಮೈಲಿಗೆ 1,075. ಜನಸಂಖ್ಯೆಯಲ್ಲಿ ಬಹುತೇಕ ಜನ ಅಂದರೆ ನೂರಕ್ಕೆ 70ರಷ್ಟು ಜನ ಭಾರತೀಯರು. ಅಲ್ಪ ಸಂಖ್ಯಾತರ, ಚೀಣೀಯರು. ಇನ್ನುಳಿದವರಲ್ಲಿ, ಯುರೋಪಿಯನ್ ಹಾಗೂ ಆಫ್ರಿಕನ್ ಮೂಲದ ಜನರು ಹಾಗೂ ಇತರ ಮಿಶ್ರ ಜನಾಂಗದವರು. ಮಾರಿಶಸ್ ದ್ವೀಪದ ಹವಾಮಾನ ಹಿತಕರವಾಗಿದೆ. ಇಡೀ ವರ್ಷದುದ್ದಕ್ಕೂ ಈ ದ್ವೀಪ ಹಚ್ಚ-ಹಸಿರಿನಿಂದ ನಯನ-ಮನೋಹರವಾಗಿ ಕಂಗೊಳಿಸುತ್ತದೆ.

ಈ ದ್ವೀಪದಲ್ಲಿ ಕಾಲಿಟ್ಟೊಡನೆಯೇ ನಮಗೆ ಕಂಡು ಬರುವ ಒಂದು ವೈಶಿಷ್ಟ್ಯವೆಂದರೆ—ಈ ಪುಟ್ಟ ದ್ವೀಪದಲ್ಲಿ ವಾಸವಾಗಿರುವ ಜನಸಮೂಹದ ವೈವಿಧ್ಯತೆ. ಮಾರಿಶಸ್‌ನ ಅಧಿಕೃತ ಭಾಷೆ ಇಂಗ್ಲೀಷ್. ಆದರೂ ಫ್ರೆಂಚ್ ಮತ್ತು ಕ್ರಿಯೋಲ್ ಪೆಟೊಯಿಸ್ ಭಾಷೆಗಳು ಜನಪ್ರಿಯವಾಗಿವೆ. ಭಾಷೆ, ಹಾಗೂ ಜೀವನ ವಿಧಾನಗಳಲ್ಲಿ ವೈವಿಧ್ಯತೆಯಿದ್ದಾಗ್ಯೂ ಇಲ್ಲಿಯ ಜನರು ಅತ್ಯಂತ ಸೌಹಾರ್ದದಿಂದ ಬಾಳುತ್ತಿದ್ದಾರೆ.

ಕಬ್ಬು ಮಾರಿಶಸ್ ಆರ್ಥಿಕ ವ್ಯವಸ್ಥೆಯ ಮೂಲಾಧಾರ. ಈ ದ್ವೀಪದ ಜನತೆಗೆ ಬೇಕಾಗುವ ಆಹಾರದಲ್ಲಿ ಅರ್ಧದಷ್ಟನ್ನು ಹೊರದೇಶಗಳಿಂದಲೇ ತರಿಸಿಕೊಳ್ಳಲಾಗುತ್ತಿದೆ.

ಜನವಸತಿಯ ಆರಂಭ

ಕ್ರಿ. ಶ. ಹದಿನಾರನೆಯ ಶತಮಾನದ ಕೊನೆಯ ವರೆಗೂ ಮಾರಿಶಸ್ ನಿರ್ಜನವಾದ ಪ್ರದೇಶವಾಗಿತ್ತು. ಇದಕ್ಕೆ ಮುಂಚೆ ಈ ಪ್ರದೇಶಕ್ಕೆ ಭೇಟಿ ಕೊಟ್ಟವರೆಂದರೆ, ಬಹುಶಃ ಮಲಯದವರು. ಕ್ರಿ. ಶ. ಹತ್ತನೆಯ ಶತಮಾನದಲ್ಲೇ ಅರಬರಿಗೆ ಮಾರಿಶಸ್‌ದ ಬಗ್ಗೆ ಪರಿಚಯವಿದ್ದಿತು. ಹದಿನಾರನೆಯ ಶತಮಾನದ ಆದಿಭಾಗದಲ್ಲಿ ಪೋರ್ಚುಗೀಸರು ನಿರ್ಜನವಾದ ಈ ಪ್ರದೇಶವನ್ನು ಪತ್ತೆ ಹಚ್ಚಿದರು. ಕ್ರಿ. ಶ. 1598ರ ಸುಮಾರಿಗೆ ಡಚ್ಚರು ಈ ದ್ವೀಪದಲ್ಲಿ ನೆಲೆಸಲು ಯತ್ನಿಸಿದರು. ಈ ದ್ವೀಪಕ್ಕೆ ತಮ್ಮ ದೊರೆ ಪ್ರಿನ್ಸ್ ಮಾರಿಸ್ ಆಫ್ ನಸಾವು ಅವರ ಗೌರವಾರ್ಥ ಮಾರಿಶಸ್ ಎಂದ ನಾಮಕರಣ ಮಾಡಿದರು. ಮುಂದೆ ಕ್ರಿ. ಶ. 16 ಹಾಗೂ 17ನೇಯ ಶತಮಾನದಲ್ಲಿ ಡಚ್ಚ, ಫ್ರೆಂಚ್ ಹಾಗೂ ಇಂಗ್ಲೀಷರಲ್ಲಿ ಈ ದ್ವೀಪದ ಬಳಕೆಯ ಬಗ್ಗೆ ಸ್ಪರ್ಧೆ ಆರಂಭವಾಯಿತು. ಆದರೆ ಇವರೆಲ್ಲರ ಗುರಿಯು ಮಾರಿಶಸ್ ದ್ವೀಪದ ಸಂಪನ್ಮೂಲಗಳಿಂದ ಸಾಧ್ಯವಾದಷ್ಟು ಲಾಭಪಡೆಯುವುದೇ ಆಗಿತ್ತು.

ಮಾರಿಶಸ್ ದ್ವೀಪದಲ್ಲಿ ತಮ್ಮ ವಸಾಹತುವನ್ನು ಸ್ಥಾಪಿಸಲು ಡಚ್ಚರು ನಡೆಸಿದ ಯತ್ನ ವಿಫಲಗೊಂಡಿತು. ಕ್ರಿ. ಶ. 1710ರಲ್ಲಿ ಅವರು ಈ ದ್ವೀಪವನ್ನು ತ್ಯಜಿಸಿದರು. ಈ ಹೊತ್ತಿಗಾಗಲೇ ದ್ವೀಪದ ವನ್ಯಸಂಪತ್ತಿನಲ್ಲೇ ಶ್ರೇಷ್ಠವಾದ ಪಕ್ಷಿ ಡೋಡೋವೂ ಸೇರಿದಂತೆ ಬಹುತೇಕ ಪಶು—ಪಕ್ಷಿಗಳು ಕಣ್ಮರೆಯಾದವು. ಡಚ್ಚರ ನಿರ್ಗಮನದ ನಂತರ ಈ ದ್ವೀಪ ಮೊದಲಿನ ಸ್ಥಿತಿಗೆ ಬಂದಿತು.

ಫ್ರೆಂಚರು ಈ ದ್ವೀಪಕ್ಕೆ ಬರುವವರೆಗೂ ಅದು ಭಾರತದಿಂದ ಬರುವ ಹಾಗೂ ಭಾರತಕ್ಕೆ ಹೋಗುವ ವ್ಯಾಪಾರಿ ಹಡಗುಗಳು ನಿಲ್ಲುವ ಸ್ಥಳವಾಗಿದ್ದಿತು. ಮುಂದೆ ಕ್ರಿ. ಶ. 1715ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯವರು ಈ ದ್ವೀಪವನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಅದಕ್ಕೆ ಇಲೆ-ಡಿ-ಫ್ರಾನ್ಸ್ ಎಂಬ ಹೊಸ ಹೆಸರನ್ನು ಇಟ್ಟರು. ಈ ದ್ವೀಪದಲ್ಲಿ ಖಾಯಂ ಆಗಿ ವಸಾಹತು ಆರಂಭವಾದದ್ದು ಕ್ರಿ. ಶ. 1721ರಲ್ಲಿ. ಕ್ರಿ. ಶ. 1735ರಲ್ಲಿ ಮಾಹೆ ಲೇಬರ್ ಡೊನೆಸ್ ಮಾರಿಶಸ್‌ನ ಗವರ್ನರ್ ಆಗಿ ನೇಮಕಗೊಂಡನು. ಅವರ ದಕ್ಷ ಆಡಳಿತದಲ್ಲಿ ಈ ದ್ವೀಪ ತ್ವರಿತಗತಿಯಲ್ಲಿ ಅಭಿವೃದ್ಧಿ ಸಾಧಿಸಿ, ಒಂದು ಮಹತ್ವದ ನೌಕಾನೆಲೆಯಾಗಿ ಮಾರ್ಪಟ್ಟಿತು. ಮದರಾಸನ್ನು ವಶಪಡಿಸಿಕೊಳ್ಳಲು ಲೇಬರ್ ಡೊನೆಸ್ ತನ್ನ ನೌಕಾಬಲದೊಂದಿಗೆ ಈ ದ್ವೀಪದಿಂದಲೇ ಪ್ರಯಾಣ ಮಾಡಿದರು. ಕ್ರಿ. ಶ 1767ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯವರು ಈ ದ್ವೀಪದ ಆಡಳಿತವನ್ನು ಫ್ರೆಂಚ್ ಸರಕಾರಕ್ಕೆ ವಹಿಸಿಕೊಟ್ಟರು.

ಬ್ರಿಟಿಷ್- ಫ್ರೆಂಚ್ ಸ್ಪರ್ಧೆ

ಮುಂದೆ ಕ್ರಿ. ಶ. ಹದಿನೆಂಟನೆಯ ಶತಮಾನದುದ್ದಕ್ಕೂ ಹಿಂದೂ—ಮಹಾಸಾಗರದಲ್ಲಿ ಫ್ರೆಂಚರು ಹಾಗೂ ಬ್ರಿಟಿಷರ ನಡುವೆ ಸ್ಪರ್ಧೆ ನಡೆಯಿತು. ಕ್ರಿ. ಶ. 1810ರಲ್ಲಿ ಬ್ರಿಟಿಷರು ಮಾರಿಶಸ್ ದ್ವೀಪದ ಉತ್ತರಕ್ಕೆ ಬಂದು ಬಲವಾದ ಸೇನಾಪಡೆಯನ್ನಿಟ್ಟು ಈ ದ್ವೀಪದ ಫ್ರೆಂಚ್ ಸೇನಾ ನೆಲೆಗಳ ಮೇಲೆ ದಾಳಿ ಮಾ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರಹ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ತಿದರು: ಕ್ರಿ. ಶ. 1815ರಲ್ಲಿ ಪ್ಯಾರಿಸ್‌ನಲ್ಲಿ ಏರ್ಪಟ್ಟ ಒಪ್ಪಂದದ ಪ್ರಕಾರ ಫ್ರೆಂಚರು ಬ್ರಿಟಿಷರಿಗೆ ಈ ದ್ವೀಪದ ಅಧಿಪತ್ಯವನ್ನು ವಹಿಸಿಕೊಟ್ಟರು. ಬಳಿಕ ಬ್ರಿಟಿಷರು ಈ ದ್ವೀಪಕ್ಕೆ ಮಾರಿಶಸ್ ಎಂದು ಪುನರ್ ನಾಮಕರಣ ಮಾಡಿದರು. ಪ್ಯಾರಿಸ್ ಒಪ್ಪಂದದ ಶರತ್ತಿನ ಪ್ರಕಾರ, ಬ್ರಿಟಿಷರು ಮಾರಿಶಸ್ ದ್ವೀಪದ ಸಂಸ್ಕೃತಿ, ಸಂಪ್ರದಾಯ, ಕಾನೂನು ವ್ಯವಸ್ಥೆ, ಆಚಾರ—ವ್ಯವಹಾರಗಳನ್ನು ರಕ್ಷಿಸಿಕೊಂಡು ಬಂದರು. ಕ್ರಿ. ಶ. 1833ರಲ್ಲಿ ಗುಲಾಮಗಿರಿ ಕೊನೆಗೊಂಡಿದ್ದರಿಂದ, ಮಾರಿಶಸ್ ಕಬ್ಬಿನ ಹೊಲಗಳಲ್ಲಿ ಕಾರ್ಮಿಕರ ಕೊರತೆಯಾಯಿತು. ಭಾರತದಿಂದ ಕಾರ್ಮಿಕರು ಮಾರಿಶಸ್‌ಗೆ ವಲಸೆ ಬಂದರು. ಭಾರತದ ಈ ಕಾರ್ಮಿಕರ ಆಗಮನದಿಂದ ಹಾಗೂ ಸುಧಾರಿಸಿದ ಕೃಷಿ ಪದ್ಧತಿಗಳಿಂದಾಗಿ ಮಾರಿಶಸ್‌ನ ಸಕ್ಕರೆಯ ಉತ್ಪಾದನೆ ಅಭಿವೃದ್ಧಿಗೊಂಡಿತು.

ಮಾರಿಶಸ್ 1968 ರ ಮಾರ್ಚ್ ತಿಂಗಳಲ್ಲಿ ಸ್ವತಂತ್ರವಾಯಿತು.

ಈ ದ್ವೀಪದಲ್ಲಿ ಹಿಂದುಗಳ ಹಬ್ಬಗಳಾದ, ಮಹಾಶಿವರಾತ್ರಿ, ದೀಪಾವಳಿ, ಇತ್ಯಾದಿ ಹಬ್ಬಗಳನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಮುಸ್ಲಿಮರು ಮೊಹರಂ ಹಬ್ಬ ಆಚರಿಸುತ್ತಾರೆ. ಇವೆಲ್ಲವೂ ಭಾರತದ ಸಾಂಸ್ಕೃತಿಕ ಪರಂಪರೆಯ ದ್ಯೋತಕಗಳಾಗಿವೆ.

(ಮೂರನೇ ಪುಟದಿಂದ)

ತ.ಕೋಲ ಆಯೋಗವು ತಿಳಿಸಿತ್ತು. ಸರಕಾರವು ಇವನ್ನು ತಾಳ್ಮೆ ಇಳಿಸಿದ್ದು ನಿಜವಾಗಿಯೂ ಕ್ರಾಂತಿಕಾರಕವೇ. ವೇತನ ಪುನರ್ವಿಮರ್ಶೆಯಿಂದ ಪ್ರತಿ ನೌಕರನಿಗೂ ಸಾಮಾನ್ಯವಾಗಿ ೧೦ರಿಂದ ೪೦ ರೂಪಾಯಿಯ ಲಾಭ ದೊರೆಯುತ್ತದೆಂದು ಹೇಳಲಾಗಿದೆ. ಕನಿಷ್ಠ ವೇತನವನ್ನು ೫೦ರಿಂದ ೬೫ ರೂಪಾಯಿ ಗಳಿಗೇರಿಸಿದ್ದು ಶ್ರೀ ಕೌಶರನ ಬಗ್ಗೆ ಸರಕಾರಕ್ಕಿರುವ ಅನುಕಂಪಕ್ಕೆ ಉದಾಹರಣೆ. ಕನಿಷ್ಠ ಮತ್ತು ಗರಿಷ್ಠ ವೇತನಗಳ ದಾಮಾಶಯು ೧ಕ್ಕೆ ೧೦ ಇರಬೇಕೆಂಬ ಬಹು ಜನರ ಅಭಿಲಾಷೆ ಮಾತ್ರ ಈಡೇರಿಲ್ಲ. ಈಡೇರುವ ಲಕ್ಷಣಗಳೂ ನಿಕಟ ಭವಿಷ್ಯದಲ್ಲಿಲ್ಲ. ಆದರೂ ಅಂತರವು ಕಡಿಮೆಯಾಗುತ್ತ ಬರುತ್ತಿರುವುದಕ್ಕೆ ಸಂತೋಷ ಪಡಬೇಕು. ಪೆನ್ಶನ್‌ದಾರರ ನಿವೃತ್ತಿ ವೇತನದಲ್ಲೂ ಸರಕಾರ ಸಾಕಷ್ಟು ಹೆಚ್ಚಳವನ್ನು ಘೋಷಿಸಿದ್ದು ಸ್ವಾಗತಾರ್ಹ. ಸರಕಾರದ ನಿರ್ಧಾರದಿಂದ ರಾಜ್ಯ ಬೊಕ್ಕಸಕ್ಕೆ ಪ್ರಚಲಿತ ವರ್ಷ ಎಂಟು ಕೋಟಿ ರೂಪಾಯಿ ಅಧಿಕ ವೆಚ್ಚ ಬರುತ್ತದೆ. ಈ ಎಂಟು ಕೋಟಿಯಲ್ಲಿ ಆರು ಕೋಟಿ ರೂಪಾಯಿಗಳು ಮಾಸಿಕ ರೂ. ೩೦೦ ಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವವರಿಗೇ ಸದಾ ಉಪಯೋಗವಾಗುವುದು.

ಸರಕಾರವು ಶಿಕ್ಷಕರ ವೇತನವನ್ನು ನಿರ್ಧರಿಸುವಾಗ ಕೊಠಾರಿ ಆಯೋಗದ ವರದಿಯನ್ನೂ ಗಮನದಲ್ಲಿಟ್ಟುಕೊಂಡಿದೆಯೆಂದು ನಂಬುತ್ತೇವೆ. ಜನಾಂಗ ನಿರ್ಮಾಪಕರ ಬಗ್ಗೆ ಮಾತಿನ ಅನುಕಂಪವನ್ನು ಕಡಿಮೆ ಮಾಡಿ ಕೃತಿಯ ಸಹಾನುಭೂತಿ ತೋರಿಸಿರ ಬೇಕೆಂದು ಆಶಿಸುತ್ತೇವೆ. ನೌಕರರ ಹಿಂದಿನ ಸೇವಾವಧಿಗೆ ಭಡ್ತಿ ನೀಡುವಾಗ ೫ರಿಂದ ೧೦ ವರ್ಷಗಳ ಮಧ್ಯೆ ಇನ್ನೊಂದು ಹಂತವನ್ನು ಸ್ವೀಕರಿಸದೆ ಹೋದರೆ, ಈ ನಡುವಣ ನೌಕರರಿಗೆ ತೀವ್ರ ಅನ್ಯಾಯವಾಗುತ್ತದೆಯೆಂದು ಸೂಚಿಸ ಬಯಸುತ್ತೇವೆ. ಯಾವ ಯಾವ ಹುದ್ದೆಗಳಿಗೆ ಯಾವಯಾವ ವೇತನ ಶ್ರೇಣಿಯೆಂಬುದನ್ನು ಕೂಡಲೇ ಪ್ರಕಟಿಸಿ ನೌಕರರ ಕುತೂಹಲವನ್ನು ತಣಿಸಿ, ಹೆಚ್ಚಳದ ಲಾಭವನ್ನು ಶೀಘ್ರವಾಗಿ ಸರಕಾರ ಸಂದಾಯ ಮಾಡಲಿ. ●

ಬಂಟರ ಯಾನೆ ನಾಡವರ ಸಂಘ ಮುಂಬಾಯಿ.

ಈ ಸಂಘದ 1970ರ ಕೆಲೆಂಡರ್ ಪ್ರೆಸ್ಸಿನಿಂದ ಬಂದಿರುತ್ತದೆ. ಆಜೀವ ಮತ್ತು ಸಾಮಾನ್ಯ ಸದಸ್ಯರಾದವರೆಲ್ಲರೂ, ರಜಾ ದಿನ ಮತ್ತು ರವಿವಾರವನ್ನು ಬಿಟ್ಟು ಇನ್ನಿತರ ದಿನಗಳಲ್ಲಿ ಸಾಯಂಕಾಲ 4 ಗಂಟೆಯಿಂದ 8 ಗಂಟೆಯ ತನಕ ಸಂಘದ ಆಫೀಸಿನಿಂದ ಪಡೆದುಕೊಳ್ಳಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಮಣಿಪಾಲದಲ್ಲಿ ವೈದ್ಯಕೀಯ ಸಮ್ಮೇಳನ

೪೫ನೆಯ ಅಖಿಲ ಭಾರತ ವೈದ್ಯಕೀಯ ಸಮ್ಮೇಳನವು ಮಣಿಪಾಲದಲ್ಲಿ ನಡೆಯಿತು. ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಡಾ| ಟಿ. ಮಾಧವ ಪೈಯವರು ಸ್ವಾಗತ ಭಾಷಣ ಮಾಡುತ್ತ ಮಣಿಪಾಲದ ವೈದ್ಯಕೀಯ ಚಟುವಟಿಕೆಗಳನ್ನು ವಿವರಿಸಿದರು. ಜನತೆಗೆ ವೈದ್ಯಕೀಯ ಸೇವೆ ಸಲ್ಲಿಸಲು ಮಣಿಪಾಲದ ವೈದ್ಯಕೀಯ ಸಂಸ್ಥೆಗಳು ಸದಾ ಸಿದ್ಧವಾಗಿವೆಯೆಂದು ಆಶ್ವಾಸನೆ ನೀಡಿದರು.

ಡಾ| ಯು. ಕೆ. ಗೋಪಾಲ ರಾಯರು ಸಂದೇಶಗಳನ್ನು ಓದಿ ಹೇಳಿದರು. ನಿವೃತ್ತಿಗೊಳ್ಳುತ್ತಿರುವ ವೈದ್ಯಕೀಯ ಮಂಡಲಿಯ ಅಧ್ಯಕ್ಷ ಡಾ| ಜಿ. ಎಸ್. ವಾಗ್ಲೆ ಅವರು ಪ್ರಶಸ್ತಿಗಳ ವಿತರಣೆ ಮಾಡಿದರು. ಶಿವಳ್ಳಿ ಪಂಚಾಯತಿನ ಪರವಾಗಿ ಅಧ್ಯಕ್ಷ ಶ್ರೀ ಟಿ. ರಮೇಶ ಯು. ಪೈ ಅವರು ಸ್ವಾಗತಿಸಿ ಉದ್ಘಾಟಕರಾಗಿ ಬಂದಿರುವ ಫೋರ್ಡ್ ಫೌಂಡೇಶನ್ನಿನ ಭಾರತದಲ್ಲಿನ ಮುಖ್ಯಸ್ಥ ಶ್ರೀ ಡಗ್ಲಾಸ್ ಇನ್‌ಸ್ಮಿಂಗರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಡಾ| ವಾಗ್ಲೆಯವರು ನೂತನ ಅಧ್ಯಕ್ಷ ಪೀಠದಲ್ಲಿ ಕುಳ್ಳಿರಿಸಿದರು.

ಶ್ರೀ ಇನ್‌ಸ್ಮಿಂಗರು ಅಧಿವೇಶನವನ್ನು ಉದ್ಘಾಟಿಸುತ್ತ "ಜನಸಂಖ್ಯಾ ನಿಯಂತ್ರಣ ದೇಶದ ಬೃಹತ್ ಸಮಸ್ಯೆ. ಇದನ್ನು ಎದುರಿಸುವಲ್ಲಿ ಸರಕಾರವು ಖಾಸಗಿ ವೈದ್ಯರ ಸಹಕಾರ ಪಡೆಯ ಬೇಕು" ಎಂದರು.

ಡಾ| ಜಿ. ವಿ. ಜೋಶಿಯವರು ತಮ್ಮ ಅಧ್ಯಕ್ಷ ಭಾಷಣ ಮಾಡುತ್ತ ಹಲವಾರು ಮಹತ್ವದ ಉಲ್ಲೇಖಗಳನ್ನು ಮಾಡಿದರು. "ಆಧುನಿಕ ವೈದ್ಯಕೀಯ ಪದವೀಧರರಿಗೆ ಸ್ನಾತಕೋತ್ತರ ಮಟ್ಟದಲ್ಲಿ ಆಯುರ್ವೇದದ ಸಂಶೋಧನೆ ನಡೆಸುವ ವ್ಯವಸ್ಥೆಯಿಂದ ಆಯುರ್ವೇದದ ಹಿರಿಮೆಯು ಹೆಚ್ಚುತ್ತದೆ. ಸಾಮಾನ್ಯ ವೈದ್ಯರಿಗೆ ರಿಫ್ರೆಶರ್ ಕೋರ್ಸ್ ನೀಡಲು ಸರಕಾರದ ಧನ ಸಹಾಯ ನೀಡಬೇಕು. ಸ್ನಾತಕೋತ್ತರ ಶಿಕ್ಷಣದ ನಂತರ ಆಸಕ್ತ ಕ್ಷೇತ್ರಗಳಲ್ಲಿ ಪರಿಣತಿ ಹೊಂದಲು ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಬೇಕು. ಹಳ್ಳಿಗಳ ಪರಿಸ್ಥಿತಿಯನ್ನು ಸುಧಾರಿಸದೆ ವೈದ್ಯರನ್ನು ಹಳ್ಳಿಗೆ ಹೋಗಿರೆನ್ನುವುದು ಸಲ್ಲದು" ಎಂದವರು ಹೇಳಿದರು.

ಡಾ| ಕೆ. ಮೋಹನದಾಸ ಪೈಯವರು ಆಭಾರ ಮನ್ನಿಸಿದರು. ಈ ಸಮ್ಮೇಳನಕ್ಕೆ ದೇಶದ ಮೂಲೆ ಮೂಲೆಯಿಂದ ಸುಮಾರು ೮೦೦ ಪ್ರತಿನಿಧಿಗಳು ಬಂದಿದ್ದರು.

ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ ವೈಜ್ಞಾನಿಕ ವಸ್ತು ಪ್ರದರ್ಶನವನ್ನು ರಾಜ್ಯದ ಆರೋಗ್ಯ ಸಚಿವ ಶ್ರೀ ವೈ. ರಾಮಕೃಷ್ಣ ಅವರು ಉದ್ಘಾಟಿಸಿದ್ದರು.

ಭಾರತೀಯ ವೈದ್ಯಕೀಯ ಸಂಸ್ಥೆಯ ಜನರಲ್ ಪ್ರಾಕ್ಟೀಶನರ್ಸ್ ಕಾಲೇಜಿನ ದ್ವಿತೀಯ ವಾರ್ಷಿಕೋತ್ಸವವು ಇದೇ ವೇಳೆ ನಡೆಯಿತು. ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ಮುಖ್ಯ ಅತಿಥಿಗಳಾಗಿದ್ದರು.

ವೈಜ್ಞಾನಿಕ ಅಧಿವೇಶನವನ್ನು ಅಮೆರಿಕೆಯ ಮಿಚಿಗನ್ ವಿಶ್ವವಿದ್ಯಾಲಯದ ಡಾ| ಇರ್ವಿಂಗ್ ಫೆಲ್ಲರ್ ಉದ್ಘಾಟಿಸಿದ್ದರು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

2A V in O. S. 579/1967

ರಾಜೀವಿ ಕೂಡಾ — ವಾದಿರು.
ವಿಮಲ ಕೂಡಾ — ಪ್ರತಿವಾದಿರು.
1ನೇ ಎದ್ರಿ ವಿಮಲ, ಹಿರಿಯರ ಹೆಸ್ರು ಗೊತ್ತಿಲ್ಲ.
12ನೇ ಎದ್ರಿ ಬಾಬಿರಾಜ್ ಹೆಗ್ಡೆ, — ಚೆನ್ನಂಮನ ಮಗ

ಇಬ್ಬರೂ ಬೆಳ್ತಂಗಡಿ ತಾಲ್ಲೂಕು ಓಡಿಲ್ನಾಳ ಗ್ರಾಮದ ಕೊಂಡೆಮಾರು ಎಂಬಲ್ಲಿರುವವರು.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ:—

ವಾದಿರು ದಾಖಲು ಮಾಡಿದ ಪಿತ್ರಾರ್ಜಿತದಲ್ಲಿ ಆದ ಪ್ರಿಲಿಮಿನರಿ ಡಿಕ್ರಿಗೆ ಅನುಸರಿಸಿ, ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿರು ದಾಖಲು ಮಾಡಿದ ಅರ್ಜಿಯು ತಾ. 9-1-'70 ಕ್ಕೆ ಇಟ್ಟಿರುವುದರಿಂದ, ಸದ್ರಿ ದಿವಸ ಹಗಲು ಘಂಟೆ 10ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸಿಕೊಳ್ಳಬೇಕು. ತಪ್ಪಿದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

P. A. Ariga
Advocate for Plaintiffs.

ಮೊಕ್ಕಾಂ: ಪುತ್ತೂರು,
ತಾ. 30-12-1969.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ ದ. ಕನ್ನಡ

H. R. C. No. 28/1969

ಶ್ರೀನಿವಾಸ ರಾವ್ — ಅರ್ಜಿದಾರ.
ಮತ್ತು
ಕೊರಗ ಸೆಟ್ಟಿ — ಎದ್ರಿ.
ಇವರೊಳಗೆ

ನೋಟೀಸು

ಉಡುಪಿ ಟೌನ್ ಶಿರಿಬೀಡಿನ ಡೋರ್ ನಂಬ್ರ 11-1-64A ಯಲ್ಲಿರುವ ಬಿಲ್ಡಿಂಗಿನ ಮಗ ಮೇಲಿನ ಅರ್ಜಿಯ ಎದ್ರಿ ಕೊರಗ ಸೆಟ್ರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ:-

ಮೇಲಿನ ಅರ್ಜಿದಾರನು ನಿಮ್ಮ ಮೇಲೆ ಅರ್ಜಿಯಲ್ಲಿ ವಿವರ ಕಾಣಿಸಿದ ಕಟ್ಟಡದ ಸ್ವಾಧೀನತೆ ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾರೀಕು 24-1-1970ಕ್ಕೆ ಇಟ್ಟದ್ದು, ನಿಮ್ಮದೇನಾದ್ರೂ ಉದಾಹರಣೆಯಿದ್ದಲ್ಲಿ ಈ ಕೋರ್ಟಿನ ಮುಂದೆ ಆದಿನ ಬೆಳಿಗ್ಗೆ 1100 ಗಂಟೆಗೆ ಖುದ್ದಾ ಯಾ—ವಕೀಲರ ಮುಖಾಂತರ ಹಾಜರಾಗ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

ಕೋರ್ಟು ಹುಕ್ಕುಂ ಪ್ರಕಾರ

P. N. Krishnamurthi Rao,
B. A., LL. B.
Advocate for Petitioner

ಉಡುಪಿ, ದ. ಕನ್ನಡ.
ತಾರೀಕು: 26-12-1969

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರರು ಬೇಕಾಗಿದ್ದಾರೆ. ಕಂಪೋಸಿಂಗ್ ವಿಭಾಗದಲ್ಲಿ ತರಬೇತಿಗಾಗಿಯೂ ಕೆಲವು ಹುಡುಗರನ್ನು ಸೇರಿಸಿಕೊಳ್ಳಲಾಗುವುದು. ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ.

ಪ್ರಜಾರಾಜ್ಯ ವಿಶೇಷಾಂಕ

ಇದೇ ಜನವರಿ 26ಕ್ಕೆ ಎಂದಿನಂತೆ "ನವಯುಗ"ದ ಪ್ರಜಾರಾಜ್ಯ ವಿಶೇಷಾಂಕವು ಪ್ರಸಿದ್ಧ ಬರಹಗಾರರ ಲೇಖನ, ಕವನ, ಕಥೆ, ಲಘು ಬರಹಗಳಿಂದೊಡಗೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಹೊರನಾಡಿನಲ್ಲೂ ವಿಶಾಲ ಪ್ರಚಾರವಾಗಲಿರುವ ಈ ವಿಶೇಷ ಸಂಚಿಕೆಯು ಜಾಹಿರಾತಿಗೆ ಉತ್ತಮ ಮಾಧ್ಯಮವಾಗಿದೆ.

ದೇಶದ ಭವಿಷ್ಯ ರೂಪಿಸಿದ ಸೇವಾಗ್ರಾಮ

ಲೇಖಕರು : ಶ್ರೀ ಎನ್. ಗೋವಿಂದ್

ರೈಲು ಬಂಡಿ ವಾರ್ಧಾ ರೈಲ್ವೆ ನಿಲ್ದಾಣಕ್ಕೆ ಸಮೀಪಿಸುತ್ತಿರುವಂತೆ ಪ್ರಕೃತಿ ಮಾತೆಯ ಮಡಿಲಲ್ಲಿರುವ ಗುಡಿಸಲುಗಳ ಗುಂಪು ಪ್ರಯಾಣಿಕರಿಗೆ ಸೇವಾಗ್ರಾಮದ ಪ್ರಥಮ ದರ್ಶನ ನೀಡುತ್ತದೆ. ನಿಲ್ದಾಣದಾಚೆಯಿರುವ ಸೂಚನಾ ಹಲಗೆ ಈ ಪವಿತ್ರ ಗ್ರಾಮ ಒಂಭತ್ತು ಕಿಲೋಮೀಟರ್ ದೂರದಲ್ಲಿದೆಯೆಂದು ಹೇಳುತ್ತದೆ.

ವಾರ್ಧಾದಿಂದ ಸೇವಾಗ್ರಾಮದ ಕಡೆಗೆ ಸಾಗಿದಂತೆ ನಿಸರ್ಗ ಸೌಂದರ್ಯ ತೆರೆತೆರೆಯಾಗಿ ವಿಸ್ತರಿಸುತ್ತದೆ. ಸೇವಾಗ್ರಾಮದಲ್ಲಿ ಎಲ್ಲಿ ಹೋದರೂ ಹಾರ್ದಿಕ ಸ್ನೇಹದ ನಗೆ ಪ್ರಪ್ರಥಮ ಸ್ವಾಗತ ನೀಡುತ್ತದೆ. ಇದೇ ಸೇವಾಗ್ರಾಮದ ಮಾಂತ್ರಿಕ ಆಕರ್ಷಣಶಕ್ತಿ.

ಸೇವಾಗ್ರಾಮದಲ್ಲಿ "ಆದಿನಿವಾಸ", ಬಾಪು ಕುಟಿ, ಬಾ ಕುಟಿ, "ಆಖಿರಿನಿವಾಸ" ಮತ್ತು ಪ್ರಾರ್ಥನಾ ಬಯಲಿನಂತಹ ಪ್ರಮುಖ ನೆಲೆಗಟ್ಟುಗಳನ್ನು ಗುರುತಿಸಬಹುದು. ಈ ವಾತಾವರಣದಲ್ಲಿ ಬಹಳ ಐತಿಹಾಸಿಕ, ರಾಜಕೀಯ ನಿರ್ಣಯಗಳನ್ನು ಮಾಡಲಾಯಿತು. ಇಲ್ಲಿ ಗಾಂಧೀಜಿ ಮತ್ತು ಅವರ ನೆಚ್ಚಿನ ಅನುಯಾಯಿಗಳು ದೇಶದ ಭವಿಷ್ಯವನ್ನು ರೂಪಿಸಿದರು. ಅವರ ದಿವ್ಯಚೇತನ ಇಂದಿಗೂ ಆಶ್ರಮದಾದ್ಯಂತ ಹರಡಿದೆ.

ಬಾಪೂ ಕುಟಿ

ಬಾಪೂ ಕುಟಿಯ ಸರಳತೆ ಸಂದರ್ಶಕರ ಹೃದಯವನ್ನು ಸೂರೆಗೊಳ್ಳುತ್ತದೆ. ಕೆಂಪು ಕಡಿಯ ಗೋಡೆಗೆ ಬೆಂಬಲವಾಗಿ ನಿಲ್ಲಿಸಿರುವ ಮರದ ಕಂಬಗಳು ಮಂದ ನೈಜ ಕೊಂಬೆಗಳ ಸ್ವರೂಪಿನಲ್ಲೇ ನಿಂತಿವೆ. ಈ ಮರದ ಕಂಬಗಳನ್ನು ಚೌಕಾಕಾರವಾಗಿ ಕತ್ತರಿಸಿ, ಬಣ್ಣದ ಮೆರುಗು ಕೊಡುವುದು ಕಾಲ, ಶ್ರಮ ಹಾಗೂ ವಸ್ತುವಿನ ದುರ್ವ್ಯಯವೆಂದು ಗಾಂಧೀಜಿ ಭಾವಿಸಿದ್ದರು. ಈ ಗುಡಿಸಲಿನಲ್ಲಿ ಗಾಂಧೀಜಿಯ ವೈಯಕ್ತಿಕ ವಸ್ತುಗಳಾದ "ಧನುಷ್ ಟಕಳಿ" ಮೂರು ಮಂಗಗಳು, ರಾಮಾಯಣ—ಗೀತೆ—ಬೈಬಲ್ ಗ್ರಂಥದ ಪ್ರತಿಗಳು ಹಾಗೂ ಒಂದು ದೀಪದ ಲಾಟೀನು ಇವೆ. ಈ ಕುಟಿಯಲ್ಲೇ ದೇಶದ ಮೇಲೆ ಪ್ರಭಾವ ಬೀರುವಂತಹ ಐತಿಹಾಸಿಕ ನಿರ್ಣಯಗಳನ್ನು ಕೈಕೊಂಡದ್ದು. ಒಂದು ಕಾಲದಲ್ಲಿ ಸೇವಾಗ್ರಾಮವನ್ನು ಭಾರತದ ಅನಧಿಕೃತ ರಾಜಧಾನಿಯೆಂದು ಕರೆಯಲಾಗಿತ್ತು.

ಸರಳತೆಯೇ ಆಶ್ರಮ ಜೀವನದ ಶೈಲಿ. ಇಲ್ಲಿ ಮಾನವನಿರ್ಮಿತ ಅಥವಾ ಲೈಂಗಿಕ ಭೇದಗಳಿಲ್ಲ. ಎಲ್ಲರಿಗೂ ಒಂದೇ ಭೋಜನಶಾಲೆ. ಅಂದು ಬಾಪೂ ಹಾಗೂ ಕಸ್ತೂರಿ ಬಾ ಆಶ್ರಮದ ವಾಸಿಗಳೊಂದಿಗೆ ಆಹಾರ ಸ್ವೀಕರಿಸುತ್ತಿದ್ದಂತೆ ಇಂದೂ ಆಶ್ರಮವಾಸಿಗಳು ಅತಿಥಿಗಳು ಅಥವಾ ಪ್ರವಾಸಿಗರೊಂದಿಗೆ ಭೋಜನ ಮಾಡುತ್ತಾರೆ.

ಋಣಾಡಂಬರವಿಲ್ಲ

ಗಾಂಧೀಜಿ ಪ್ರತಿಪಾದಿಸಿದ್ದ ದುಡಿಮೆಯ ಗೌರವವನ್ನು ಎಲ್ಲ ಆಶ್ರಮವಾಸಿಗಳೂ ಅನುಸರಿಸುತ್ತಿದ್ದಾರೆ. ಅವರೇ ನಿರ್ಮಲೀಕರಣ ಕಾರ್ಯ ಕೈಗೊಳ್ಳುತ್ತಾರೆ. ಕೊಳೆಯು ಸೋಂಕಿರದ ಶುಭ್ರ ಸೇವಾಗ್ರಾಮದಲ್ಲಿ ಋಣಾಡಂಬರ ಕಾಣಿಸುವುದಿಲ್ಲ.

ಆಶ್ರಮದ ದೈನಂದಿನ ಕಾರ್ಯಕ್ರಮ ಬೆಳಗಿನ ನಾಲ್ಕು ಗಂಟೆಗೆ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ಗಾಂಧೀಜಿ ಪ್ರಾರ್ಥನೆ ನಡೆಸುತ್ತಿದ್ದ ಬಯಲಿನಲ್ಲೇ ಈಗಲೂ ಪ್ರಾರ್ಥನೆ ನಡೆಯುತ್ತದೆ. ಪ್ರಾರಂಭಿಕ ಹಂತದಲ್ಲಿ, ಸಂಪತ್ತುಗಳನ್ನು ತ್ಯಾಗ ಮಾಡಿರುವವರು ಪ್ರಾರ್ಥನಾ ಗೃಹನಿರ್ಮಾಣಕ್ಕಾಗಿ ಇಟ್ಟಿಗೆ, ಗಾರೆಗಳನ್ನು ಬಳಸಬಾರದೆಂದು ಬಾಪೂಜಿ ಖಾಲಿ ನಿವೇಶನ ಆಯ್ಕೆ ಮಾಡಿದ್ದರು. ನೀಲವಿತಾನವೇ ಮೇಲು ಛಾವಣಿ ಆಗಿರುವಂತಹ ದೈವ ನಿರ್ಮಿತ ಭೂಮಿಯೇ ಪ್ರಾರ್ಥನಾಗೃಹಕ್ಕೆ ಅತ್ಯಂತ ಅನುರೂಪವಾದ ಕ್ಷೇತ್ರವೆಂದು ಗಾಂಧೀಜಿ ಭಾವಿಸಿದ್ದರು.

ಪ್ರಾರ್ಥನಾ ಕ್ಷೇತ್ರದ ಅಂಚಿನಲ್ಲಿರುವ ಏಕೈಕ ಅಶ್ವತ್ಥವೃಕ್ಷದ ಸಸಿಯನ್ನು ಗಾಂಧೀಜಿ 1936ನೇ ಇಸವಿಯಲ್ಲಿ ನೆಟ್ಟರು. ಮತ್ತೊಂದು ಬಕುಲವೃಕ್ಷದ ಸಸಿಯನ್ನು ಕಸ್ತೂರಿ ಬಾ 1942ನೇ ಇಸವಿ ಆಗಸ್ಟ್ 2ರಂದು ನೆಟ್ಟರು.

ಆಶ್ರಮದ ಪ್ರಾರ್ಥನೆಯಲ್ಲಿ ಸರ್ವಧರ್ಮಗಳ ಭಕ್ತಿಗೀತೆಗಳು ಹಾಗೂ ರಾಮಾಯಣ, ಭಗವದ್ಗೀತೆ, ಕುರಾನ್, ಬೈಬಲ್ ಮತ್ತಿತರ ಧಾರ್ಮಿಕ ಗ್ರಂಥದ ನುಡಿಗಳನ್ನು ಸೇರಿಸಿಕೊಳ್ಳಲಾಗಿದೆ.

ಪರ್ಚುರೆ ಕುಟಿ

ಈ ಆಶ್ರಮದಲ್ಲಿ ಗಾಂಧೀಜಿ ಶ್ರೀಸಾಮಾನ್ಯನ ಬಗ್ಗೆ ಹೊಂದಿದ್ದ ಪ್ರೇಮ, ಸಹಾನುಭೂತಿಗಳ ಕುರುಹಾಗಿ "ಪರ್ಚುರೆ ಕುಟಿ"ಯಿದೆ. ಕುಷ್ಠ ರೋಗಿಯಾದ ಪರ್ಚುರೇ ಶಾಸ್ತ್ರಿಗಾಗಿ ರಚಿಸಿದ ಗುಡಿಸಲೇ ಈ ಕುಟಿ. ಈ ಗುಡಿಸಲಿಗೆ ಬಾಪೂ ಪ್ರತಿದಿನವೂ ಬಂದು ರೋಗಿಯ ಗಾಯಗಳನ್ನು ತೊಳೆಯುತ್ತಿದ್ದರು.

ಸೇವಾಗ್ರಾಮದಲ್ಲಿ ಕಸ್ತೂರಿಬಾ ವಾಸಿಸುತ್ತಿದ್ದ "ಬಾ ಕುಟಿ" ಹಾಗೂ ಗಾಂಧೀಜಿ ಆಶ್ರಮದಲ್ಲಿ ಕೊನೆಯದಾಗಿ ವಾಸಿಸುತ್ತಿದ್ದ "ಆಖಿರಿನಿವಾಸ"ಗಳಿವೆ. ಸೇವಾಗ್ರಾಮದ ಇತರ ಕಟ್ಟಡಗಳಲ್ಲಿ ವಿದ್ಯುದ್ದೀಪ ಸಜ್ಜಾಗಿದೆ. ಆದರೆ ಈ ಆರು ಸ್ಮಾರಕಗಳು, ಐತಿಹಾಸಿಕ ಕುಟಿಗಳ ವ್ಯಕ್ತಿತ್ವ ಕಾಪಾಡಲು ವಿದ್ಯುದ್ದೀಪ ಸಜ್ಜುಗೊಳಿಸಿಲ್ಲ.

ಗಾಂಧೀಜಿ 1936ನೇ ಇಸವಿಯಲ್ಲಿ ಸೇವಾಗ್ರಾಮಕ್ಕೆ ಬಂದರು. ಸೇವಾಗ್ರಾಮದ ಮೂಲ ಹೆಸರು 'ಸೆಗಾವ್'. ಇದೇ ಹೆಸರಿನ ಮತ್ತೊಂದು ಸ್ಥಳವಿದ್ದುದರಿಂದ ಸೇವಾ ಕ್ಷೇತ್ರದ ನೆನಪಿಗಾಗಿ "ಸೇವಾಗ್ರಾಮ" ಎಂದು ಹೆಸರಿಸಲಾಯಿತು. ಹಿಂದಿನ ಆಶ್ರಮಗಳಂತೆ ಸೇವಾಗ್ರಾಮದಲ್ಲೂ ಪ್ರತ್ಯೇಕ ಸಂಸ್ಥೆ ರಚಿಸುವುದು ಬಾಪೂವಿನ ಉದ್ದೇಶವಾಗಿರಲಿಲ್ಲ. ಸೇವಾಗ್ರಾಮದ ಸುತ್ತಲಿನ ಪ್ರದೇಶವೆಲ್ಲವೂ ತಮ್ಮ ಆಶ್ರಮವಾಗಬೇಕೆಂದು ಗಾಂಧಿ ಬಯಸಿದರು. ಆ ಉದ್ದೇಶ ಸಾಧನೆಯಾಯಿತು.

ಬಾಪೂವಿನ ಕೆಲವು ನಿಕಟವರ್ತಿಗಳು ಸೇವಾಗ್ರಾಮದಲ್ಲಿ ಗಾಂಧಿಗೆ ಪ್ರಿಯವಾಗಿದ್ದ ವಿವಿಧ ರಚನಾತ್ಮಕ ಚಟುವಟಿಕೆಗಳನ್ನು ಸಮರ್ಪಣಾ ಭಾವದಿಂದ ಪ್ರಚಾರಕ ಉತ್ಸಾಹ ಭಾವದಿಂದ ಮಾಡಲು ಕಾರ್ಯೋನ್ಮುಖರಾಗಿದ್ದಾರೆ. ದೇಶದ ಇತರ ಭಾಗಗಳ ಜನತೆ ಮುನ್ನುಗ್ಗಿ ಬಂದು ಸೇವಾಗ್ರಾಮ ತೋರಿರುವ ಆದರ್ಶವನ್ನು ಅನುಸರಿಸುವಂತೆ ಕರೆಕೊಡುತ್ತಿದ್ದಾರೆ.

ತಲೀಮೀ ಸಂಘ

ಆಶ್ರಮದ ಉತ್ತರ ದಿಸೆಯಲ್ಲಿ ಹಿಂದೂಸ್ತಾನಿ ತಲೀಮೀ ಸಂಘದ ಕಟ್ಟಡವಿದೆ. ಈ ಕಟ್ಟಡಗಳನ್ನು ಸ್ಥಳೀಯ ವಸ್ತುಗಳಿಂದ ಹಾಗೂ ಸ್ಥಳೀಯ ಕಾರ್ಮಿಕರ ನೆರವಿನಿಂದ ರಚಿಸಲಾಗಿದೆ. ಈ ಸಂಘದ ಆಶ್ರಯದಲ್ಲಿ ಪ್ರಾಯೋಗಿಕ ಮೂಲ ಶಿಕ್ಷಣ ಶಾಲೆ ನಡೆಯುತ್ತಿದೆ. ಇಲ್ಲಿ ನೂಲುವಿಕೆಯೇ ಮೂಲ ಕುಶಲ ಕಲೆ. ಗಾಂಧೀಜಿ ಯೂ ವಾಗಲೂ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಬಗ್ಗೆ ಪ್ರಾಮುಖ್ಯತೆ ನೀಡಿದ್ದರು. ಹಿಂದೂಸ್ತಾನಿ ತಲೀಮೀ ಸಂಘವು ದಿನಂಪ್ರತಿ ನೆಯ್ಗೆಯ ತರಗತಿ ನಡೆಸುತ್ತಿದೆ.

ಆಹಾರ ಸ್ವಯಂಪೂರ್ಣತೆ ದೇಶದ ಜ್ವಲಂತ ಸಮಸ್ಯೆ. ಸೇವಾಗ್ರಾಮದ ತಲೀಮೀ ಸಂಘ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಆಹಾರ ಸ್ವಯಂಪೂರ್ಣತೆಗೆ ಪ್ರಥಮ ಸ್ಥಾನ ನೀಡಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಕಾರ್ಯಕರ್ತರಿಗೆ ಕೃಷಿ, ಪಶು ಸಂಗೋಪನೆ ಮತ್ತು ಗೃಹ ಕೈಗಾರಿಕೆಗಳ ತರಬೇತಿ ಕೇಂದ್ರವಾಗಿ ಹೊಲ, ತೋಟ, ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸುವುದೇ ಅವರ ಗುರಿ.

ಗ್ರಾಮಾಂತರ ವೈದ್ಯಕೀಯ ಕಾಲೇಜ್

ಸೇವಾಗ್ರಾಮ ಆಶ್ರಮದ ಪಕ್ಕದಲ್ಲೇ ಗ್ರಾಮಾಂತರ ಮಹಾತ್ಮ ಗಾಂಧಿ ವೈದ್ಯ ವಿಜ್ಞಾನ ಕಾಲೇಜ್ ಹಾಗೂ ಕಸ್ತೂರಿ ಬಾ ಆಸ್ಪತ್ರೆ ಅಭಿವೃದ್ಧಿಗೊಳ್ಳುತ್ತಿದೆ. ಈ ಕಾಲೇಜು ಈ ವರ್ಷ ಸೆಪ್ಟೆಂಬರ್ ೧ರಂದು ಉದ್ಘಾಟನೆಯಾಯಿತು. ಗ್ರಾಮಾಂತರ ಪ್ರದೇಶದಲ್ಲಿ ತರಬೇತಿ ಪಡೆದ ವೈದ್ಯ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಒಪ್ಪುವರೆಂಬ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯ ದೃಷ್ಟಿಕೋನದ ಬುನಾದಿಯ ಮೇಲೆ ಈ ಕಾಲೇಜ್ ಆರಂಭವಾಗಿದೆ.

ಬದಲಾವಣೆಗಳಾಗುತ್ತಿದ್ದರೂ ಬದಲಾಗದ ಈ ಆಶ್ರಮ ಗಾಂಧೀಜಿಯ ಸೊಸೆ ನಿರ್ಮಲ ಬೆಹನ್ ನೇತೃತ್ವದಲ್ಲಿ ಕಾರ್ಯಶೀಲವಾಗಿದೆ. ಗಾಂಧಿ ಮಾರ್ಗದಲ್ಲಿ ಮುನ್ನಡೆದಿರುವ ಈ ಸಂಸ್ಥೆ ಸಕಾಲದ ಬಗ್ಗೆ ಹೆಮ್ಮೆ ಹೊಂದಿದೆ. ಭವಿಷ್ಯದ ಬಗ್ಗೆ ಶ್ರದ್ಧೆ, ನಂಬಿಕೆ ಹೊಂದಿದೆ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮನೆ-ಮದ್ದು

ಗೃಹವೈದ್ಯ — ರೂ.2 - 00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 - 50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1–50

ಟಪ್ಪಾಲು ಖರ್ಚು ಪ್ರತ್ಯೇಕ

ರಖಂ ಪ್ರತಿಗಳಿಗೆ ರಿಯಾಯತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

NAVAYUGA 1—1—1970
Registered with the Registrar
of News Papers for India
under No. R. N. 3546/'57

REGD: No: B. G. 176
LICENCE No. 33
Licensed to Post without Prepayment

ಮಾನವ ಕುಲದ ಮಾರ್ಗದರ್ಶಿ—

ಗುರುನಾನಕ್

ಲೇಖಕರು: ಖುಶವಂತ ಸಿಂಘ್

ಕೆಲವು ವಾರಗಳ ಹಿಂದೆ, ಪಾಟಿಯಾಲಾದಲ್ಲಿ ಪಂಜಾಬ್ ವಿಶ್ವ ವಿದ್ಯಾಲಯದವರು, ಗುರುನಾನಕರ "ಜೀವನ ಹಾಗೂ ಬೋಧನೆ" ಎಂಬ ವಿಷಯವಾಗಿ ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದರು. ಅಮೇರಿಕ, ಕೆನಡಾ, ಬ್ರಿಟನ್ ಹಾಗು ಆಸ್ಟ್ರೇಲಿಯಾ ದೇಶಗಳೂ ಸೇರಿದಂತೆ ಅರವತ್ತಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳ ವಿದ್ವಾಂಸರು ಈ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಪ್ರತಿನಿಧಿಗಳಲ್ಲಿ, ಗುರುನಾನಕರ ಜೀವನ ಹಾಗೂ ಸಾಧನೆ ಸಂಬಂಧಿಸಿದಂತೆ ಎರಡು ವಿಧವಾದ ಅಭಿಪ್ರಾಯಗಳು ಸ್ಪಷ್ಟವಾಗಿಯೇ ತೋರುತ್ತಿದ್ದವು. ಒಂದು ಅಭಿಪ್ರಾಯದ ಪ್ರಕಾರ ಗುರುನಾನಕರು ಭಕ್ತಿ ಪಂಥದ ಓರ್ವ ಮಹಾ ಸಂತರು. ಇನ್ನೊಂದು ಅಭಿಪ್ರಾಯದ ಪ್ರಕಾರ ನಾನಕರು ಹಿಂದು–ಮುಸ್ಲಿಂ ಧರ್ಮಗಳ ಸಾಮರಸ್ಯಕ್ಕಾಗಿ ಶ್ರಮಿಸಿದರು. ಅವರು ಭಕ್ತಿಪಂಥ ಹಾಗು ಮಹಮ್ಮದೀಯ ಸೂಫಿ ಪಂಥ ತತ್ವಗಳಿಂದ ಸಮಾನ ರೀತಿಯಲ್ಲಿ ಸಾರವನ್ನು ಪಡೆದು "ಸಿಕ್" ಎಂಬ ಹೊಸ ಧರ್ಮದ ಉದಯಕ್ಕೆ ಕಾರಣ ಪುರುಷರಾದರು. ಈ ಎರಡೂ ಅಭಿಪ್ರಾಯಗಳ ಪ್ರತಿನಿಧಿಗಳು ತಮ್ಮ ವಾದವನ್ನು ಸಮರ್ಥಿಸಲು ಅದಕ್ಕೆ ಪೂರಕವಾಗಬಹುದಾದ ನಾನಕರ ಸೂಕ್ತಿಗಳನ್ನು ಉಲ್ಲೇಖಿಸಿದರು.

ಜೀವನದ ಆರಂಭ

ನಾನು ಇಲ್ಲಿ ಮುಖ್ಯವಾದ ಐದು ವಿಷಯಗಳ ಬಗ್ಗೆ ಅಂದರೆ, ಜೀವನದ ಆರಂಭ, ಹಾಗು ಅಂತ್ಯ, ದೇವರ ಕುರಿತಾದ ಕಲ್ಪನೆ, ಧಾರ್ಮಿಕ ನಾಯಕರಾದ ಗುರುಗಳು ನಿರ್ವಹಿಸಬೇಕಾದ ಪಾತ್ರ; ತನ್ನ ಸಹಜೀವಿಗಳ ವಿಷಯದಲ್ಲಿ ಮಾನವನ ಕರ್ತವ್ಯ, ಹಾಗು ಮುಕ್ತಿಮಾರ್ಗ ಈ ಐದು ವಿಷಯಗಳ ಬಗ್ಗೆ ಗುರುನಾನಕರ ಅಭಿಪ್ರಾಯಗಳನ್ನು ಇಲ್ಲಿ ನಾನು ಉಲ್ಲೇಖಿಸುತ್ತೇನೆ.

ಜೀವನದ ಆರಂಭ ಹಾಗು ಅಂತ್ಯದ ವಿಷಯದಲ್ಲಿ ನಾನಕರ ದೃಷ್ಟಿಕೋನ ಹಿಂದು ಧರ್ಮದ ಸಂಸಾರ ಸಂಬಂಧವಾದ ಸಿದ್ಧಾಂತವನ್ನೇ ಅಂದರೆ ಜನನ—ಮರಣ—ಪುನರ್ಜನ್ಮ ಕುರಿತಾದ ಸಿದ್ಧಾಂತ ಹೋಲುತ್ತಿದೆ. ಗುರುನಾನಕರು ಒಂದು ಕಡೆ ಈ ರೀತಿ ಹೇಳಿದ್ದಾರೆ–ದೇವರ ಅನುಗ್ರಹಕ್ಕೆ ಪಾತ್ರರಾದ ಭಕ್ತರು ಈ ಭವಸಾಗರಕ್ಕೆ ಅಂಜಬೇಕಿಲ್ಲ. ಏಕೆಂದರೆ ದೇವರ ಅನುಗ್ರಹದಿಂದ ಅವರು ಈ ಭವಸಾಗರವನ್ನು ದಾಟಿ ಮುಕ್ತಿಯನ್ನು ಪಡೆಯುತ್ತಾರೆ. ದೇವರ ನಾಮವನ್ನು ಜಪಿಸುವವರು, ಹಾಗು ನಿಸ್ಪೃಹತಾಭಾವದಿಂದ ದೇವರನ್ನು ಪ್ರಾರ್ಥಿಸುವವರು ಜನನ—ಮರಣಗಳಿಂದ ಭೀತರಾಗುವುದಿಲ್ಲ. ಇವೆಲ್ಲವನ್ನು ಅವರು ಶಾಂತವಾಗಿಯೇ ಎದುರಿಸುತ್ತಾರೆ.

ದೇವರ ವಿಚಾರದಲ್ಲಿ ನಾನಕರು ಈ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಬ್ಬನೇ ದೇವರು

ದೇವರು ಒಬ್ಬನೇ. ಅವನೇ ಪರಮ ಸತ್ಯ. ಅವನು ಸೃಷ್ಟಿಕರ್ತ. ಅವನಿಗೆ ಯಾವ ಅಂಜಿಕೆಯೂ ಇಲ್ಲ. ಯಾವ ಮತ್ಸರವೂ ಇಲ್ಲ. ಅವನು ಸರ್ವವ್ಯಾಪಿ. ಜನನಮರಣಗಳಿಂದ ಮುಕ್ತನಾದವ. ಸತ್ಯ, ಕಾಲ ಆರಂಭವಾಗುವುದಕ್ಕಿಂತ ಮೊದಲೂ ಅನಂತರವೂ ಇದೆ. ದೇವರೇ ಸತ್ಯ. ಈಗಲೂ ಅವನೇ ಸತ್ಯ. ಎಲ್ಲ ಕಾಲದಲ್ಲೂ ಸತ್ಯವೇ ಶಾಶ್ವತ ಎಂದು ಹೇಳಿದ್ದಾರೆ.

ನಾನಕರ ದೇವರು ನಿರಾಕಾರನಾಗಿದ್ದ ಕಾರಣ, ವರ್ಣನೆಗೆ ನಿಲುಕದವ. ಧರ್ಮಮಾರ್ಗದಲ್ಲಿ ನಡೆದರೆ ಅವನ ಸಾಕ್ಷಾತ್ಕಾರ ಸಾಧ್ಯವೆಂದು ಅವರು ನಂಬಿದ್ದರು.

ಗುರುನಾನಕರ ಅಭಿಪ್ರಾಯದಲ್ಲಿ ದೇವರೇ ತಂದೆ, ವಾತ್ಸಲ್ಯಮಯಿ ; ಪ್ರಭು, ದಾನಿಗಳಲ್ಲಿ ಶ್ರೇಷ್ಠವಾದ ದಾನಿ. ದೇವರು ಒಳಿತಿನ ಪ್ರತೀಕ. ಆದರೆ ಕೆಡುಕನ್ನು ಅವನೇ ಸೃಷ್ಟಿಸಿದ, ಭಕ್ತರ ನಿಷ್ಠೆಯ ಪರೀಕ್ಷೆಗಾಗಿ.

ಧರ್ಮಗುರುಗಳ ಪಾತ್ರ

ಈಗ ನಾವು ಮೂರನೆಯ ಅಂಶವನ್ನು ಅಂದರೆ ಧರ್ಮಗುರುಗಳ ಪಾತ್ರ ಏನು? ಎಂಬುದನ್ನು ಇಲ್ಲಿ ವಿಮರ್ಶಿಸೋಣ.

ನಾನಕರು ಗುರು ಪೀಠವನ್ನು ಧರ್ಮದ ಕೇಂದ್ರ ಸ್ಥಾನವನ್ನಾಗಿ ಮಾಡಿದರು. ಗುರುವಿನ ಮಾರ್ಗದರ್ಶನವಿಲ್ಲದೇ ಭಕ್ತ ಮೋಕ್ಷ ಪಡೆಯಲಾರ ಎಂದು ಹೇಳಿದ್ದಾರೆ. ಸಮಾಜದ ಬಗ್ಗೆ ಮಾನವನ ಕರ್ತವ್ಯ ಹಾಗೂ ಮಾನವರ ಸಮಾನತೆ ವಿಷಯದಲ್ಲಿ ನಾನಕರಿಗೆ ದೃಢವಾದ ನಂಬಿಕೆಯಿದ್ದಿತು. ನಾನಕರು ನಾಸ್ತಿಕವಾದವನ್ನು ನಿಚ್ಚಳವಾದ ರೀತಿಯಲ್ಲಿ ವಿರೋಧಿಸಿದರು. ಜ್ಞಾನೋದಯ ಪಡೆಯಲು ಬಹು–ತಪವನ್ನು ಆಚರಿಸುವುದನ್ನು ಹಾಗು ಅದಕ್ಕಾಗಿ ದೇಹಕ್ಕೆ ಕಷ್ಟಕೊಡುವುದನ್ನು ಖಂಡಿಸಿದರು.

ಧರ್ಮ, ಯೋಗಿಯ ಉಡುಪಿನಲ್ಲಾಗಲಿ, ಅವನ ಕೈಯಲ್ಲಿನ ದಂಡದಲ್ಲಾಗಲಿ ಅಥವಾ ಅವನು ನಿಧನ ಹೊಂದಿದ ಬಳಿಕ ಉಳಿಯುವ ಬೂದಿಯಲ್ಲಾಗಲಿ ಇಲ್ಲ. ಧರ್ಮವಂತರಾಗಿರಲು, ಲೋಕದ ದೋಷಗಳಿಂದ ಮುಕ್ತನಾಗಿರಬೇಕು. ಆತ್ಮಶುದ್ಧಿ ಹೊಂದಿರಬೇಕು ; ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಕ್ತಿ ಮಾರ್ಗದ ರಹಸ್ಯ

ಗುರುನಾನಕರು, ಮಾನವ ಜನಾಂಗದಲ್ಲಿ ಶ್ರೇಷ್ಠ ಕುಲ ಹಾಗೂ ನೀಚ ಕುಲ ಎಂಬ ಕಲ್ಪನೆಯಿಂದ ಉದ್ಭವಿಸಿದ ಮೇಲು–ಕೀಳು ಭಾವನೆಗಳನ್ನು ಖಂಡಿಸಿದರು.

ಕೊನೆಯದಾಗಿ ನಾನಕರ ಗುರಿ ಏನಿದ್ದಿತು? ಅವರು ಈ ಗುರಿಸಾಧನೆಗೆ ಅನುಸರಿಸಿದ ಮಾರ್ಗ ಯಾವುದು? ಎಂಬುದನ್ನು ಇಲ್ಲಿ ವಿಮರ್ಶಿಸೋಣ.

ಮಾನವ ಜನ್ಮ ಶ್ರೇಷ್ಠವಾದದ್ದು, ದೇವರು ನಮಗೆ ಜನನ–ಮರಣ ಹಾಗು ಪುನರ್ಜನ್ಮದ ಚಕ್ರದಿಂದ ಪಾರಾಗಲು ನೀಡಿರುವ ಅಮೂಲ್ಯ ಅವಕಾಶವೇ ಮಾನವ ಜನ್ಮ. ಯೋಗ ಅಥವಾ ದೇವರೊಂದಿಗೆ ಐಕ್ಯವೇ ನಮ್ಮ ಜೀವನದ ಗುರಿಯಾಗಬೇಕು. ದೇವರ ಹೆಸರೊಂದನ್ನು ಬಿಟ್ಟರೆ ಅಂತಹ ಪವಾಡವೇನೂ ನನ್ನ ಬಳಿಯಿಲ್ಲ ಎಂದು ಗುರು ನಾನಕರು ಹೇಳಿದ್ದಾರೆ.

ಡಂಗಾಂತರದ ಡೋಂಗಿಬಜಾರ್

(ಒಂದನೇ ಪುಟದಿಂದ)

ರು ಇಳಿದಂತಾಯಿತು. ಈಗ "ದುರಭಿಮಾನ"ದ ಪ್ರಶ್ನೆ ಮಾತ್ರ ಮುಂದಿದೆ ಶ್ರೀಮತಿ ಗಾಂಧಿಯವರು ಜವಾಹರಲಾಲರ ಪುತ್ರಿಯೆಂದು ಮಾತ್ರ ಗೊತ್ತು. ತನ್ನ ಉತ್ತರಪ್ರದೇಶದಲ್ಲೇ ಅವರಿಗೆ ಸಮರ್ಪಕ ಬೆಂಬಲವಿಲ್ಲವೆಂದ ಮೇಲೆ ದೇಶದ ಬೆಂಬಲವೇನು ಲಭ್ಯವಾದೀತು?

ಇಂದು ಇಂದಿರಾಗಾಂಧಿಯ ಬೆಂಬಲಕ್ಕೆ ನಿಂತವರಾದರೂ ಯುವಜನರು ಮಾತ್ರವಲ್ಲ, ಹಣ್ಣು ಮುದುಕರೂ ಇದ್ದಾರೆ. ಮಂದುಕರ ಮುಂದೆ ಮುದುಕರನ್ನೇ ಛೂ ಬಿಟ್ಟು ಈ ಐದು ತಿಂಗಳು ನಾಟಕವಾಡಿದ ಶ್ರೀಮತಿ ಗಾಂಧಿಗೆ ಹೀಗೆಯೇ ಬಹುಕಾಲ ಅಭಿನಯಿಸುವುದು ಸಾಧ್ಯವಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಅಧಿಕಾರ ಗದ್ದುಗೆಯನ್ನು ತೆರವು ಮಾಡುವುದಾದರೆ, ಆಗ ಸಿಂಡಿಕೇಟ್ ರಾಜಿಗೆ ಸಿದ್ಧವಾಗುತ್ತದೆ. ಏಕೆಂದರೆ, ತನ್ನ "ಆತ್ಮಸಾಕ್ಷಿ" ಬಲವನ್ನು ತೋರಿಸಿ ಸಿಂಡಿಕೇಟ್ ನಾಯಕರ ಮುಖಭಂಗ ಒಂದಕ್ಕಿಂತ ಹೆಚ್ಚು ಸಾರಿ ಆಕೆ ಮಾಡಿದ್ದಾರೆ. ಇದು "ಶಿಸ್ತು" ಉಲ್ಲಂಘನೆಯೂ ಹೌದು.

ಶ್ರೀಮತಿ ಗಾಂಧಿ ದೇಶದ ಹಿತ ದೃಷ್ಟಿಯಿಂದ ಅಧಿಕಾರ ಪೀಠದಿಂದ ಇಳಿಯಲೊಪ್ಪಿಯಾರೆ? ಇದು ಮಹತ್ವಾಕಾಂಕ್ಷಿ ಮಹಿಳೆಯಿಂದ ಆಗದ ಕೆಲಸ. ಪರಿಸ್ಥಿತಿಯು ತೀವ್ರ ಒತ್ತಡ ಬಿದ್ದಾಗ ಏನಾದರೂ ಆದೀತು. ಆಗ, ಇಂಡಿಕೇಟ್ ಹೇಳಬಹುದು–ನಿಜಲಿಂಗಪ್ಪ, ಕಾಮರಾಜ, ಪಾಟೀಲ್, ಘೋಷ, ದೇಸಾಯಿಯರೂ ನಿವೃತ್ತರಾಗಲಿ. ಒಬ್ಬ ಮಹಿಳೆಯು ತಾನ ಇವರು ಗಂಡಸರಾಗೂ ಏಗಲಾರದರೆ ಏನೂ ಇಲ್ಲ. ಆದ ಮತ್ತೆ ಹೊಡೆದಾಟ ಬೇರೊಂದು ರೀತಿಯಲ್ಲಿ ಆರಂಭವಾಗುತ್ತದೆ. ಅಂತೂ ಕಾಂಗ್ರೆಸ್ ವಿಭಜನೆಯಿಂದ ದೇಶ ಪ್ರಗತಿಗಾವ ಖಂಡಿತವೂ ಆಗುತ್ತಿಲ್ಲ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್–ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 8—1—1970 ಸಂಪುಟ 49 ಸಂಚಿಕೆ 19

ಅಧಿವೇಶನಗಳು ಸಾಧಿಸಿದ್ದೇನು?

ಅಹಮ್ಮದಾಬಾದಿನ ಗಾಂಧೀನಗರದಲ್ಲಿ ಸಿಂಡಿಕೇಟ್ ಕಾಂಗ್ರೆಸ್ ಪೂರ್ಣಾಧಿವೇಶನವನ್ನು ಕರೆದ ಒಂದು ವಾರದಲ್ಲೇ ಮುಂಬಯಿಯ ಆಜಾದ್ ಮೈದಾನದಲ್ಲಿ ಇಂಡಿಕೇಟ್ ಕಾಂಗ್ರೆಸ್ ಪೂರ್ಣಾಧಿವೇಶನವನ್ನು ಕರೆಯಿತು. ಇದೀಗ ಎರಡೂ ಸಮಾವೇಶಗಳು ಮುಕ್ತಾಯಗೊಂಡಿದ್ದು ಅಲ್ಲಿ ನಡೆದ ಭಾಷಣಗಳು ಮಾಡಿದ ಘೋಷಣೆಗಳು ಸ್ವೀಕರಿಸಿದ ಗೊತ್ತುವಳಿಗಳ ಕೂಲಂಕಷ ವಿಮರ್ಶೆಗೆ ಅವಕಾಶ ಲಭ್ಯವಾಗಿದೆ. ಎರಡೂ ಸಮ್ಮೇಳನಗಳಲ್ಲಿ ಕೆಲವೊಂದು ಸಮಾನತೆಯಿದ್ದರೂ ಭಿನ್ನತೆಯೂ ಇಲ್ಲದಿಲ್ಲ.

ಗಾಂಧಿನಗರ ಮತ್ತು ಆಜಾದ ಮೈದಾನಗಳ ಅಧ್ಯಕ್ಷರ ಭಾಷಣದಲ್ಲಿ ಬಹಳಷ್ಟು ಅಂತರ ಕಾಣುತ್ತದೆ. ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದ ಅರ್ಧದಷ್ಟು ಭಾಗವನ್ನು ಇಂಡಿಕೇಟಿನ ಮೇಲೆ ಆಪಾದನೆ ಹೊರಿಸಲು ಮತ್ತು ಸಿಂಡಿಕೇಟನ್ನು ಸಮರ್ಥಿಸಲು ಉಪಯೋಗಿಸಿಕೊಂಡರು. ಇದು ಅವರಿಗೆ ಅಗತ್ಯವೂ ಆಗಿತ್ತೆನ್ನಬಹುದು. ಬೆಂಗಳೂರು ಎಐಸಿಸಿಯ ನಂತರ ಪಕ್ಷಕ್ಕೂ ಪ್ರಧಾನಿಗೂ ಉಂಟಾದ ಭಿನ್ನ ಮತ್ತು ದುರಭಿಪ್ರಾಯ ಮತ್ತು ವಿರಸಗಳ ಸಂಪೂರ್ಣ ವಿವರಣೆಯನ್ನು ಆಗ ತಾವು ನಡೆದುಕೊಂಡ ದಾರಿಯನ್ನು ವಿವರಿಸಿ ಸದಸ್ಯರಿಗೆ ಮನದಟ್ಟು ಮಾಡುವುದು ಶ್ರೀ ಎಸ್ಸೆನ್‌ರಿಗೆ ಅತ್ಯಗತ್ಯವಾಗಿತ್ತು. ವಾಸ್ತವಿಕ ಪರಿಸ್ಥಿತಿಯ ಅರಿವು ಮೂಡಿಸುವುದು ಅವರ ಕರ್ತವ್ಯವೂ ಆಗಿತ್ತು. ಶ್ರೀ ಜಗಜ್ಜೀವನ ರಾಮರಿಗೆ ಇಂತಹ ಅನಿವಾರ್ಯತೆ ಕಂಡು ಬರಲಿಲ್ಲ. ಮುಂಬಯಿ ರೇಲು ಹತ್ತಿದವರಲ್ಲಿ ಹೆಚ್ಚಿನವರು ಇಂಡಿಕೇಟ್ ಗುಂಪನ್ನು ಬೆಂಬಲಿಸುವ ಇರಾದೆಯುಳ್ಳವರು. ಮಾತೃ ಸಂಸ್ಥೆಯೊಡನೆ ಹೊಡೆದಾಡಿ ದೂರ ನಿಂತ ಇಂಡಿಕೇಟ್ ತನ್ನ ಪರಿಚಯಪತ್ರ ಪ್ರತ್ಯೇಕ ಮಾಡಿಕೊಡಬೇಕಾದ ಅಗತ್ಯವಿರಲಿಲ್ಲ.

ಭಾರತವು ಅಲಿಪ್ತ ನೀತಿಯನ್ನೇ ಅನುಸರಿಸಬೇಕು, ರಾಜಧನವನ್ನೂ ಮಾಜಿ ರಾಜರ ವಿಶೇಷ ಸೌಲಭ್ಯಗಳನ್ನೂ ರದ್ದು ಮಾಡಬೇಕು — ಎಂಬ ನಿರ್ಣಯಗಳು ಎರಡೂ ಅಧಿವೇಶನಗಳಲ್ಲಿ ಸಾಮ್ಯವಾದುವು. ಸಿಂಡಿಕೇಟ್ ಅಧಿವೇಶನವು ದಶಾಂಶ ಆರ್ಥಿಕ ಪ್ರಣಾಳಿಯನ್ನು ಬಿಗಿ ಹಿಡಿದು ಅದರ ಅನುಷ್ಠಾನಕ್ಕೆ ಕರೆನೀಡಿತು. ಮುಂಬಯಿಯಲ್ಲೂ ಇದಕ್ಕಿಂತ ಹೆಚ್ಚೇನೂ ನಡೆಯಲಿಲ್ಲ. ಆರ್ಥಿಕ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಯುವಜನರು ಒಂದು ವಿಧಿ ಹೇರಲು ಬಯಸಿದ್ದರೆ, ಪ್ರಧಾನಿ ಗಾಂಧಿ ಅದನ್ನು ವಿರೋಧಿಸಿದರು. ಅಂದರೆ, ಈ ಹಿಂದಿನಂತೆಯೇ ನಿರ್ಣಯವಾಯಿತು; ಅನುಷ್ಠಾನವಿಲ್ಲವೆಂದರ್ಥ.

ಇಂಡಿಕೇಟ್ ಅಧ್ಯಕ್ಷ ಶ್ರೀ ಜಗಜ್ಜೀವನರಾಮರು ತಮ್ಮ ಮುಂದಿನ ಲಕ್ಷ್ಯಗಳತ್ತ ವಿಶೇಷವಾಗಿ ಗಮನ ಹರಿಸಿದರು; ಸಮಾಜವಾದದ ಘೋಷಣೆಯಿಂದ ಸಮಾಜವಾದ ಸ್ಥಾಪನೆಯಾಗುವುದಿಲ್ಲ, ಗ್ರಾಮಾಂತರ ಪ್ರದೇಶಗಳ ಜನತೆಗೂ ಸಮಾಜವಾದದ ಸಂದೇಶ ತಿಳಿಸಲು ಕಾಂಗ್ರೆಸ್ ಕಾರ್ಯಕರ್ತರು ದುಡಿಯಬೇಕು ಎಂದು ಕರೆ ನೀಡಿದರು. ತ್ವರಿತಗತಿಯಲ್ಲಿ ನಾವು ಆರ್ಥಿಕ ಪ್ರಗತಿ ಮತ್ತು ಸಮಾಜವಾದ ಸ್ಥಾಪಿಸದೆ ಹೋದರೆ ಸರ್ವನಾಶ ಸುನಿಶ್ಚಿತವೆಂದರು. ಶ್ರೀ ರಾಮರ ಭಾಷಣದಲ್ಲಿ ವಿಶೇಷವೇನೂ ಕಾಣುವುದಿಲ್ಲ. ಈ ಹಿಂದೆಯೇ ಅನೇಕಾನೇಕ ಕಾಂಗ್ರೆಸ್ ಅಧ್ಯಕ್ಷರುಗಳು ಇದೇ ಕರೆ ನೀಡಿದ್ದರು. ಆದರೆ, ಕಾಂಗ್ರೆಸ್ ಕಾರ್ಯಕರ್ತರಿಗೆ ತಮ್ಮ ಸೀಟು—ಉಳಿಸಿಕೊಳ್ಳುವುದರಲ್ಲೇ ಲಕ್ಷ್ಯ ಕೇಂದ್ರೀಕೃತವಾಗಿರುವಾಗ, ಹಳ್ಳಿಗಳಿಗೆ ತೆರಳುವ ಅವಕಾಶ ಬರಲಿಲ್ಲ. ಹಿರಿಯ ನಾಯಕರು ಕಿರಿಯರಿಗೆ ಕರೆ ನೀಡುವುದು, ಕಿರಿಯರು ಕರೆ ಮನ್ನಿಸಿದಂತೆ ಮಾಡುವುದು ಅನೂಚಾನವಾಗಿ ನಡೆದು ಬಂದ ಪದ್ಧತಿ. ಶ್ರೀ ಜಗಜ್ಜೀವನ ರಾಮರ ಕರೆ ಮೊಳಗಿದ ಸನ್ನಿವೇಶ ತುಸು ಬಿರುಸಿನದು; ಅದ್ದರಿಂದ ಒಮ್ಮೆಗೆ ಇದು ಕೇಳಿಸಿದರೂ ಕೇಳಬಹುದು.

ಮುಂದಿನ ವರ್ಷದೊಳಗೆ ಭೂಸುಧಾರಣೆಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಕಾಲಮಿತಿಹೇರುವ ನಿರ್ಣಯವೊಂದನ್ನು ಆಜಾದ್ ನಗರದಲ್ಲಿ ಸ್ವೀಕರಿಸಲಾಯಿತು. ಭೂಸುಧಾರಣೆ ರಾಜ್ಯ ಸರಕಾರಗಳಿಗೆ ಸಂಬಂಧಿಸಿದ ಸಂಗತಿ. ಕೇಂದ್ರ ಸರಕಾರಕ್ಕೆ ಇದರಲ್ಲಿ ಕೈಹಾಕುವಂತಿಲ್ಲ. ರಾಜ್ಯ ರಾಜ್ಯಗಳಲ್ಲಿ ಬೇರೆ ಬೇರೆ ಸರಕಾರಗಳಿರುವುದರಿಂದ ಈ ಕಾಲಮಿತಿ ಹೇರಿಕೆಯಿಂದ ಆರೋಪವನ್ನು ರಾಜ್ಯ ಮುಖ್ಯ ಮಂತ್ರಿಗಳ ಮೇಲೆ ಹೇರಲು ಪ್ರಧಾನಿಗೆ ಉತ್ತಮ ಅವಕಾಶ ದೊರೆತಂತಾಯಿತು.

ಉತ್ತರ ಪ್ರದೇಶದ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣ, ಮಾಡುವ ಮತ್ತೊಂದು ನಿರ್ಣಯವು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಿದ್ದು, ಇದು ರಾಷ್ಟ್ರೀಯ ನೀತಿಯಾಗಲಿಲ್ಲ. ಇಂತಹ ಆಂಶಿಕ ನೀತಿಯು ರಾಜಕೀಯ ದುರುದ್ದೇಶಗಳಿಂದಲೇ ಪ್ರೇರಿತವಾದುದೆಂದು ಯಾರಾದರೂ ಹೇಳಬಹುದು. ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಚಂದ್ರಭಾನ್ ಗುಪ್ತರು ಸಿಂಡಿಕೇಟಿಗೆ ಬೆಂಬಲ ನೀಡಿದ್ದೇ ಇದರ ಹಿನ್ನೆಲೆ.

ಅಧ್ಯಕ್ಷ ಶ್ರೀ ಜಗಜ್ಜೀವನರಾಮರು ಹಳೆಯ (ಸಿಂಡಿಕೇಟ್) ಕಾಂಗ್ರೆಸ್ ಹೊಸತನ (ಇಂಡಿಕೇಟ್) ಕಾಂಗ್ರೆಸ್ಸಿನ ನೀತಿಧೋರಣೆಗಳನ್ನು ಒಪ್ಪಿದರೆ ಮಾತ್ರ ಇಬ್ಬಣಗಳು ಮತ್ತೆ ಒಂದಾಗಬಹುದು ಎಂದು ಹೇಳಿದ್ದಾರೆ. ಇದೇ ಮಾತನ್ನು ಸಿಂಡಿಕೇಟೂ ಹೇಳಬಹುದು. ಆದರೆ, ಶ್ರೀಸಾಮಾನ್ಯನಿಗೆ ಎರಡೂ ಕಾಂಗ್ರೆಸ್‌ನ ನೀತಿ ಮತ್ತು ಧೋರಣೆಗಳಲ್ಲಿ ಯಾವ ಮುಖ್ಯ ವ್ಯತ್ಯಾಸವೂ ಕಾಣುವುದಿಲ್ಲ. ಇಬ್ಬರಿಗೂ ಸಮಾಜವಾದವೇ ಬೆಂಗೋಲು; ದಶಾಂಶ ಕಾರ್ಯಪ್ರಣಾಳಿಯೇ ಊರುಗೋಲು. ನಂಪ ನಡಿಗೆ, ಮಿಶ್ರ ಆರ್ಥಿಕ ಪದ್ಧತಿಯೇ ಅಧಿಕ ಪ್ರಿಯ. ಮತ್ತೆ ಭಿನ್ನಾಭಿಪ್ರಾಯ ಯಾವ ನೀತಿಯಲ್ಲಿ? ಅನುಷ್ಠಾನದ ತೀವ್ರತೆಯಾದರೂ ಇಂಡಿಕೇಟಿನ ಇಚ್ಛೆಯಿದ್ದರೆ, ಆರ್ಥಿಕ ನಿರ್ಣಯವನ್ನು ಕಾರ್ಯಗತ ಮಾಡಲೆಂದು ಕಾಲಮಿತಿ ಹೇರಲು ಸಿದ್ಧವಾಗಬೇಕಿತ್ತು. ಇದಿಲ್ಲವೆಂದಾದ ಮೇಲೆ, ಸರಕಾರಕ್ಕೆ ಅನಿಸಿದ್ದನ್ನು ಮಾಡುವ ಅಧಿಕಾರ ಪ್ರಧಾನಿಯ ಕೈಗಳಿಗೆ ನೀಡಿದ್ದನ್ನು ಗಮನಿಸಿದರೆ, ಪಕ್ಷದ ನೀತಿಗಳಲ್ಲಿ ತನಗೆ ಬೇಕಾದ್ದನ್ನು ಮಾತ್ರ ತನಗೆ ಬೇಕೆಂದಾಗ ಅನುಷ್ಠಾನಕ್ಕೆ ತರಲು ಪ್ರಧಾನಿಗೆ ಸ್ವಾತಂತ್ರ್ಯ ದೊರೆತಿದೆಯೆನ್ನಬಹುದು. ಇದನ್ನೇ ಕೆಲವರು ಸರ್ವಾಧಿಕಾರ ಪ್ರವೃತ್ತಿಯೆನ್ನುತ್ತಾರೆ; ಮತ್ತೆ ಕೆಲವರು ಫ್ಯಾಸಿಸಂ ಎನ್ನುತ್ತಾರೆ.

ಇಂಡಿಕೇಟ್—ಸಿಂಡಿಕೇಟ್‌ಗಳ ನಡುವಣ ವ್ಯತ್ಯಾಸವಿಷ್ಟೆ. ಪ್ರಧಾನಿ ಪಕ್ಷವು ಹೇಳಿದಂತೆ ನಡೆಯಬೇಕು, ಇದರಲ್ಲಿ ಸ್ವಾತಂತ್ರ್ಯ ಸಲ್ಲದು ಎನ್ನುತ್ತದೆ ಸಿಂಡಿಕೇಟ್—"ನಾವು ಚೌಕಟ್ಟು ಹಾಕಿಕೊಟ್ಟಿದ್ದೇವೆ. ಇದರೊಳಗೆ ಬೇಕಾದಂತೆ ಸ್ವಚ್ಛಂದವಾಡಿರಿ" ಎನ್ನುತ್ತದೆ ಇಂಡಿಕೇಟ್. ಒಮ್ಮೊಮ್ಮೆ ಚೌಕಟ್ಟನ್ನೂ ಮೀರಿ ಹೊರ ಹೋದರೂ ಪರವಾಗಿಲ್ಲವೆಂಬ ಆಶಯ ಅದರದ್ದು.

ಹೊಸ ಕಾಂಗ್ರೆಸ್ಸು ಹಳೆಯ ಕಾಂಗ್ರೆಸ್ಸಿನಷ್ಟೇ ಸದಸ್ಯರ ಬೆಂಬಲ ಗಳಿಸಿದಂತೆ ಅಂಕೆ ಸಂಖ್ಯೆಗಳು ಹೇಳುತ್ತವೆ. ಈ ಅಂಕೆ ಸಂಖ್ಯೆಗಳ ಆಧಾರದಿಂದ ಕೆಲವರು ಎರಡೂ ಅಧಿವೇಶನಗಳಲ್ಲಿ ಭಾಗವಹಿಸಿದ್ದರೆಂಬುದು ಖಚಿತವಾಗುತ್ತದೆ. ಯುವಕಾಂಗ್ರೆಸ್ಸಿಗರು ಪ್ರಧಾನಿ ಇಂದಿರಾ ಗಾಂಧಿಯವರಲ್ಲಿ ಭಾರಿ ಭರವಸೆ ಇಟ್ಟಿದ್ದರೂ ಅವು ನಿರಸನಹೊಂದತೊಡಗಿರುವುದು ಅಧಿವೇಶನದಲ್ಲಿ ಕಂಡು ಬಂದಿತು. ಆರ್ಥಿಕ ನಿರ್ಣಯ ಕಾರ್ಯಾನುಷ್ಠಾನಕ್ಕೆ ಕಾಲಮಿತಿ ಹೇರುವುದು ಇವರ ಇಂಗಿತವಿದ್ದರೂ ಅದು ಅಸಾಧ್ಯವಾಯಿತು. ಕಾರ್ಯಕಾರಿಸಮಿತಿಯಲ್ಲಿ ಹೊಸ ರಕ್ತಕ್ಕೆ ಅವಕಾಶ ಕಡಿಮೆಯೆಂಬುದೂ ತಪ್ಪಲ್ಲ. ಅವಿರೋಧ ಆಯ್ಕೆಯ ಜೋರಿನಲ್ಲಿ ಸ್ಪರ್ಧಿಸುವ ಸದಸ್ಯರ ಅಧಿಕಾರಗಳನ್ನು ಅದುಮುವ ಪ್ರಯತ್ನವನ್ನು ಇಂಡಿಕೇಟ್ ಜನನಿ ಗಾಂಧಿಯೇ ಮಾಡಿದಳು. ಶ್ರೀಮತಿ ಗಾಂಧಿಯವರು ಆಜಾದ ನಗರದಲ್ಲಿ ತಮ್ಮ ತೀಟೆಯನ್ನಷ್ಟೇ ತೀರಿಸಿಕೊಂಡರು.

ಹೊಸ ಕಾಂಗ್ರೆಸ್ಸು ತನ್ನ ಗುರಿಸಾಧನೆಯಲ್ಲಿ ಎಷ್ಟು ಸಫಲವಾಗುತ್ತದೆಂದು ಕಾದು ನೋಡಬೇಕಾಗಿದೆ. ಅಧಿಕಾರಾರೂಢ ಪಕ್ಷವಾದ್ದರಿಂದ ಸಾಧಿಸಿದರೆ ಎಲ್ಲವನ್ನೂ ಕಾರ್ಯರೂಪಕ್ಕೆ ತರುವುದು ಸಾಧ್ಯ. 'ಹಾವು ಸಾಯಬಾರದು, ಕೋಲು ಮುರಿಯಬಾರದು' ನೀತಿ ಶ್ರೀಮತಿ

(ಎಂಟನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಭಾರತೀಕರಣ ಯಾವುದಕ್ಕೆ?

"ಅಲ್ರಿ ಏನಿದು ಮೂಗು ಹಿಡಿದು ಕೂತಿದ್ದೀರಲ್ಲ ?

'ಆ್ಞಾಂ....'

'ಹೊಸ ವರ್ಷ ಬಂದು ನಾಲ್ಕು ದಿನ ಕಳೆದು ಹೋಯ್ತು. ಇನ್ನೂ ಗುಮ್ಮನಂತೆ...'

'ನಾಕು ಬಿಡೀ, ಹೊಸವರ್ಷವಂತೆ, ಗುಮ್ಮನಂತೆ! ಯಾರಿಗೋ ಹೊಸವರ್ಷ?"

'ಯಾರಿಗೇಂದ್ರೆ ? ೧೯೬೪ ಕಳೆದು ಹೋಗಿ ೧೯೬೫ ಬಂದದ್ದು ಸುಳ್ಳೇನು?"

"ಸುಳ್ಳಂತ ಯಾರಂತಾರೆ ? ಆದ್ರೆ ಅದು ಯಾರಿಗೇಂತ ?'

"ಲೋಕಕ್ಕೆ....'

"ಲೋಕಕ್ಕೆ ಅಲ್ಲ ಕಣೀ ಬರೀ ಅಂಗ್ರೇಜಿಗಳಿಗೆ...."

"ಅಂದ್ರೆ ನಾವಿನ್ನೂ ೧೯೬೪ರಲ್ಲೇ ಇದ್ದೇವೇನೂ! "

'ಏನು ಮಾತಾಡ್ತಾ ಇದ್ದೀಯ ನೀನು? ನೋಡು, ನಮ್ಮ ಭಾರತೀಕರಣವಿನ್ನೂ ಆಗಿಲ್ಲ...'

'ಅಲ್ರಿ, ಪಾರ್ಟಿದಲ್ಲಿ ಭಾರತೀಯ ಜನಸಂಘದಲ್ಲಿ ಮುಸ್ಲಿಮರ ಭಾರತೀಕರಣವಾಗಬೇಕೆಂಬ ಗೊತ್ತುವಳಿ ಬಂತಂತೆ...

"ಸರಿಯಮ್ಮ, ಭಾರತೀಕರಣದ ಹೆಸರಲ್ಲಿ ಮತ್ತಷ್ಟು ರಾಡಿಯೆಬ್ಬಿಸಬೇಡವೆ?

'ಅಂದ್ರೆ?'

"ಮತ್ತೇಂಥದು? ಭಾರತವಾಸಿಗಳೆಲ್ಲರ ಮನಸ್ಸಿನಲ್ಲಿ ಭಾರತವೇ ತನ್ನ ಮಾತೃಭೂಮಿ, ಅದೇ ತನ್ನ ಸರ್ವಸ್ವವೆನ್ನುವ ಪರಿಶುದ್ಧ ಭಾವನೆ ಮೂಡುವುದು ಸಾಧ್ಯವೆ?"

"ಯಾಕೆ ಸಾಧ್ಯವಿಲ್ಲ?"

"ಅಲ್ವೆ, ಬಿಳಿಯ ರಾಜರ ಗುಲಾಮಿಯಲ್ಲೇ ಸುಖವುಣ್ಣುತಿದ್ದೆವೆನ್ನುವ ಹಿಂದುಗಳ ಬುದ್ಧಿ ದಾಸ್ಯವಿನ್ನೂ ದೂರವಾಗಿಲ್ಲವೆಂದ ಮೇಲೆ...."

'ಅದೂ ಹೌದು....'

"ಮತ್ತೆ ನೋಡು,"

"ನಿಜ?"

"ಸಾಮಾಜಿಕ ಕ್ರಾಂತಿಗೆ ನಾಂಟಕ ಟ್ಟುವ ಬದಲಿಗೆ ಪ್ರಧಾನಿ ಗಾಂಧಿ ಜಾತೀಯ ವ್ಯವಸ್ಥೆಯಲ್ಲಿ ಕ್ರಾಂತಿಗೆ ತೊಡಗಬೇಕಿತ್ತು!"

'ಏಕೆ ?'

"ನೋಡು, ಜೇಳ ಕೇಳ ಭಾರತವು ಮತೀಯ; ಭಾಷೀಯ ವೈವಿಧ್ಯಗಳಿಂದ ತುಂಬಿ ತುಳುಕಾಡುವ ದೇಶ."

"ಈ ವೈವಿಧ್ಯದಲ್ಲೇ ಏಕತೆಯಿದೆ ತಾನೆ?"

"ಇದೆಯೆಂದು ಹೇಳುತ್ತಾರೆ. ಆದರೆ, ಅದನ್ನು ಕಂಡವರು ಯಾರೂ ಇಲ್ಲ "

"ಏಕೆ ಹಾಗಂತೀರಿ?'

"ಮತ್ತಿಲ್ಲಿಷೆಯೇ ಏಕತೆ? ಭಾಷೆ—ಮತ—ಜಾತಿಗಳ ಹೆಸರಲ್ಲಿ ಹಿಂಸಾಕಾಂಡಗಳು ನಡೆಯುತ್ತಿರುವುದನ್ನು ಕಾಣುತ್ತಿಲ್ಲವೇನು?"

"ಹೂಂ__'

"ಏಕತೆಯ ಭಾವನೆ ಸೂದರೂ ಇರುತ್ತಿದ್ದರೆ, ಇಷ್ಟೊಂದು ಅನಾಹುತಗಳು ನಡೆಯುತಿದ್ದವೇನು?"

"ಅಂದರೆ, ಇಲ್ಲವೆನ್ನುತೀರಾ?'

"ಇತ್ತು, ಹಿಂದೆ ಇತ್ತು ಅಂತಾರೆ, ಆದರೆ, ಇಂದದು ಅಲಭ್ಯ."

'ಆದ ದರಿಂದ....'

'ಈಗ ಬ್ರಿಟಿಷರ ಕುತಂತ್ರದಲ್ಲಾದರೂ ಬಲಾತ್ಕಾರ ಪ್ರಯೋಗದಿಂದಲಾದರೂ ಏಕತೆ ತರುವುದು ಅಗತ್ಯವೆನಿಸುತ್ತದೆ.'

'ಅಂದರೆ? ಜಾತೀಯ, ರಾಜ್ಯೀಯ, ಭಾಷೀಯ ಸಮಸ್ಯೆಗಳು ಇನ್ನು ಮುಂದೆ ಇಲ್ಲವೆಂದಾಗುವಂತೆ ಭಾರತದಲ್ಲಿರುವವರೆಲ್ಲರದೂ ಒಂದೇ ಜಾತಿ, ಒಂದೇ ರಾಜ್ಯ, ಒಂದೇ ಭಾಷೆಯೆಂದು ಮಾಡಬೇಕು. ಇದಕ್ಕೆ ತಡ ಮಾಡಿದರೆ, ನೂರಾಗಿರುವ ಈ ಸಮಸ್ಯೆಗಳು ಸಾವಿರಗಳಾಗುತ್ತ ಹೋಗುತ್ತವೆ..."

"ಅದು ಸರೀನ್ರಿ, ಜಾತಿ ಭಾರತೀಯ, ರಾಜ್ಯ ಭಾರತೀಯ ನಿಜ. ಆದರೆ, ಭಾಷೆ?"

"ಅದೂ ಭಾರತೀಯವಾಗಬೇಕು,'

'ಅಂದರೆ?'

"ಎಲ್ಲರೂ ಭಾರತೀಯ ಭಾಷೆಯಲ್ಲೇ ಆಡಬೇಕು....'

"ಮಾತ್ನಾರು ವಿದೇಶೀ ಭಾಷೆಗಳಲ್ಲಿ ಮಾತಾಡುತ್ತಾರೆ?'

"ನೋಡು, ನಮ್ಮ ಸರಕಾರಗಳು ಮಾತನಾಡುವುದೇ ವಿದೇಶೀ ಭಾಷೆ. ನಮ್ಮ ರಾಜಕೀಯ ಪಕ್ಷಗಳ ಕಾರ್ಯಕ್ರಮಾವಳಿಗಳೂ ಹೆಚ್ಚಿನವು ವಿದೇಶೀ ಭಾಷೆಯಲ್ಲಿ...."

"ಅಂದ್ರೆ, ನಮ್ಮ ಯೋಚನೆ—ಯೋಜನೆ ಮತ್ತಿದರ ಕಾರ್ಯರೂಪವೆಲ್ಲವೂ ಭಾರತೀಯ ವಿಧಾನವಿರಬೇಕೆಂದು ಅನ್ನುತ್ತೀರಿ ನೀವು....'

'ಮತ್ತೆ ಭಾಷೆ ಅಂದರೆ ಬರಿಯ ಮಾತು ಎಂದು ತಿಳಿದೆಯೋನು, ಮಾತು ಹೇಗೆ ಆಡಿದರೇನು? ಆದರೆ, ಆಚರಿಂತ ಮಾತ್ರ ಸರಿಯಬೇಕು....'

'ಹೇಗೆ ಸುರಿದೀತು? ಲವನೊಬ್ಬನು ರಾಮಸೇನೆಯೊಂದಿಗೆ ಹೋರಾಡಿ ಜಯಗಳಿಸಿದನೆಂದರೆ ಅಭಿಮನ್ಯು ವ್ಯತ್ಯಸ್ತನಾಗಲಿಲ್ಲವೆ?'

"ಅದು ಹೌದು....'

"ನೋಡು ನಮ್ಮದೆಲ್ಲಾ ಒಳಗೊಂದು ಹೊರಗೊಂದು. ಹೊರಗೆ ಅಪ್ಪಟ್ಟ ಭಾರತೀಯರು, ಒಳಗೆ ವಿಶುದ್ಧ ಪರಕೀಯರು..'

"ಯಾಕೆ ಹಾಗಂತೀರಿ?'

"ನೋಡು, ರಾಷ್ಟ್ರೀಯ ಪಂಚಾಂಗದೊಡನೆ ಗ್ರೆಗೋರಿ ಪಂಚಾಂಗ ನಮಗೆ ಬೇಕು...."

"ಅಲ್ರಿ, ಅದಿಲ್ಲದೆ ಹೋದರೆ ದಿನವೇ ತಿಳಿಯದು....'

"ಭಾರತೀಯ ಭಾಷೆಗಳ ಜತೆಗೆ ಅಂಗ್ರೇಜಿ ಬೇಕು."

"ವಿಶ್ವದ ಭಾಷೆ ತಾನೆ?'

"ಬಡವರ ಮಕ್ಕಳಿಗೆಂದು ಕನ್ನಡಶಾಲೆ ತೆರೆದು ನಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಹಾಕಿ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಕೂಗುತ್ತೇವೆ....'

"ಹ್ಞಾಂ...."

'ಎರಡು ಬೇಳು ಮೂರು ಸಾಕು ಎಂದು ವೇದಿಕೆನಲ್ಲಿ ಬೊಗಳುತ್ತಾರೆ ಎಂಟು ಹೆತ್ತವರ ತಂದೆತಾಯಿಗಳು...."

"ಹ್ಞಾಂ...'

'ಕೆಲವನ್ನು ರಷ್ಯದಿಂದ, ಕೆಲವನ್ನು ಬ್ರಿಟನ್ನಿನಿಂದ, ಕೆಲವನ್ನು ಅಮೆರಿಕೆಯಿಂದಲೂ, ಉಳಿದುದನ್ನು ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಂಡು ನಮ್ಮ ನೀತಿಗಳನ್ನು ರೂಪಿಸುತ್ತೇವೆ, ಮತ್ತೆ ಭಾರತೀಯ ವಸ್ತುಗಳಿಗೆ ತಲೆಯೆತ್ತುವ ಅವಕಾಶವೆಲ್ಲಿ?"

"ನೀವನ್ನುವುದರಲ್ಲಿ ಸತ್ಯಾಂಶವಿದೆಯೆನಿಸುತ್ತದೆ...."

"ಭಾರತೀಕರಣ ನಮ್ಮೆಲ್ಲರ ಬುದ್ಧಿಗೆ ಮೊದಲಾಗಬೇಕು ಆಗ ಮಾತ್ರ ವಿಚಾರ—ಯೋಜನೆಗಳು ಭಾರತೀಯವಾದಾವು.'

"ಅಂದರೆ, ಕಾಲವನ್ನು ಮರೆತು ಬಿಡುವುದು ಸಾಧ್ಯವೆ?'

"ಕಾಲವನ್ನೇಕೆ ತಿರಸ್ಕರಿಸಬೇಕು? ಭಾರತೀಯತೆ ಪರಿವರ್ತನೆಯನ್ನೆಂದೂ ವಿರೋಧಿಸಿಲ್ಲ. ಆದರೆ, ನಾವಿಂದು ಬೌದ್ಧಿಕ ದಾಸ್ಯದಿಂದ ನರಳುತಿದ್ದೇವೆ. ದೂರವಾಗದೆ ಹೋವುದರಲ್ಲ ನಾವು ಭಾರತೀಕರಣ ಸಾಧಿಸುವುದು ಅಸಾಧ್ಯ. ಶ್ರೀಮತಿ ಗಾಂಧಿಯವರು ಈ ಬಗ್ಗೆ ದೃಢ ಪ್ರತಿಜ್ಞೆ ಮಾಡಬೇಕಿತ್ತು. ರಷ್ಯ—ಅಮೆರಿಕೆಗಳಲ್ಲಿ ಒಂದೊಂದು ಕಾಲಿಟ್ಟು ಆಕೆ ಮುಳುಗಿದರೆ ಆಶ್ಚರ್ಯವಿಲ್ಲ...'

"ಹೋಗಲಿ ಬಿಡಿ. ನಮಗೇನು ಲೋಕದ ಡೊಂಕ ತಿದ್ದುವುದು ಅಸಾಧ್ಯ...'

"ಯಾಕೆ ತಿದ್ದ ಹೋಗಬೇಕು? ಎಲ್ಲರೂ ತಂತಮ್ಮ ಡೊಂಕು ತಿದ್ದಿಕೊಂಡರೆ ಲೋಕದಲ್ಲಿ ಡೊಂಕಾದರೂ ಹೇಗುಳಿದೀತು?"

'ಹ್ಞಾಂ.... ಸಾಕು....'

'ಏನು, ಸಾಕಾಯ್ತು?'

'ನಿಮ್ಮ ಪುರಾಣ ಕೇಳಿ ಸಾಕಾಯ್ತು'

'ಮತ್ತೆ ಗಿರಾಣ....'

'.... ....'

—ಗೋರಾ.

ಗುರುನಾನಕರ ಅಮರವಾಣಿ

ಸತ್ಯದ ಸಾಕ್ಷಾತ್ಕಾರವಾದಾಗಲೇ, ಸತ್ಯದ ಅರಿವಾಗುತ್ತದೆ. ಆಗಲೇ ಸತ್ಯದೊಂದಿಗೆ ಸಾಮರಸ್ಯ.

00 00 00

ಪರಲೋಕದ ವರೆಗೂ ನಮ್ಮನ್ನು ಹಿಂಬಾಲಿಸುವವರೇ ನಮ್ಮ ನಿಜವಾದ ಮಿತ್ರರು. ಲೆಕ್ಕ ಒಪ್ಪಿಸಲು ನಮಗೆ ದೇವರಿಂದ ಕರೆಬಂದಾಗಲೆಲ್ಲ ಅವರು ಅಲ್ಲಿ ಇರುತ್ತಾರೆ

00 00 00

ಹೊಟ್ಟೆ ತುಂಬಿಸಿಕೊಳ್ಳಲೋಸುಗ ಬದುಕುವುದು, ಎಂತಹ ಬದುಕು ?

00 00 00

ನಾನು ಹಿಂದುವನ್ನೂ ಕಾಣೆ — ಮುಸ್ಲಿಮನನ್ನೂ ಕಾಣೆ. ಆದರೆ ಮನುಷ್ಯನನ್ನು ಮಾತ್ರ ಕಾಣುತ್ತೇನೆ.

00 00 00

ಸತ್ಯ ಎಲ್ಲಾ ವಸ್ತುಗಳಿಗಿಂತ ಶ್ರೇಷ್ಠವಾದದ್ದು. ಸತ್ಯಮಯವಾದ ಬದುಕು ಇನ್ನೂ ಶ್ರೇಷ್ಠವಾದದ್ದು.

00 00 00

ದೇವರನಾಮವೇ ನನ್ನ ಈ ಮಣ್ಣಿನ ದೀಪ. ಅದರಲ್ಲಿ ಹೊತ್ತಿ ಉರಿಯುವ ಎಣ್ಣೆಯೇ ದುಃಖ. ನಾನು ದೀಪವನ್ನು ಎಷ್ಟೆಷ್ಟು ಹೆಚ್ಚು ಹೊತ್ತಿಸುವೆನೋ, ಅಷ್ಟಷ್ಟು ನನ್ನ ದುಃಖ ಕಡಿಮೆಯಾಗುತ್ತದೆ. ಅನಂತರ ನನಗೆ ಮರಣದ ಬಾಧೆಯಿಲ್ಲ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ—ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಫೋನ್ : 526 | 1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೧೯
VOL. 49
No. 19

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೮—೧—೧೯೭೦

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಇದು ಮುನ್ನಡೆಯೆ?

ಆಹಾರಾಭಾವದಿಂದ ಪರರ ಮುಂದೆ ಕೈಯೊಡ್ಡುವ ಪರಿಸ್ಥಿತಿ ನಮಗೆ ತಪ್ಪಲಿಲ್ಲವಾದರೂ ಆಂಶಿಕ ಉತ್ಪನ್ನ ಪ್ರಮಾಣವು ಕಳೆದ ವರ್ಷದಲ್ಲಿ ಗಣನೀಯವಾಗಿ ಏರಿರುವುದನ್ನು ಅಲ್ಲಗಳೆಯುವಂತಿಲ್ಲ? ಹಸಿರು ಕ್ರಾಂತಿಯ ಕಿಡಿ ದೇಶವ್ಯಾಪಿಯಾಗಿ ತನ್ನ ಕಾರ್ಯಭಾರ ಮಾಡಿತು, ಕೃಷಿಯನ್ನೂ ಒಂದು ಉದ್ಯಮವೆಂದು ಬಗೆಯುವ ಪ್ರವೃತ್ತಿ ಮೂಡತೊಡಗಿತು. ಸಾಮಾಜಿಕ ಹತೋಟಿ ಮತ್ತು ಮುಂದೆ ರಾಷ್ಟ್ರೀಕರಣಗಳಿಂದಾಗಿ ಈ ರಂಗಕ್ಕೆ ಬ್ಯಾಂಕುಗಳು ಸಾಲ ಸೌಕರ್ಯಗಳನ್ನು ಒದಗಿಸಿದುವು. ಹವಾಮಾನ ಹದಗೆಡುವುದೇ ಬರಗಾಲಕ್ಕೆ ಮುಖ್ಯ ಕಾರಣ. ಆದರೆ, ಕಳೆದ ಎರಡು ಮೂರು ವರ್ಷಗಳ ಹವಾಮಾನ ಅನನುಕೂಲಗಳನ್ನುಂಟು ಮಾಡಲಿಲ್ಲ. ಹಾಗಾಗಿ ನಾವು ಆಹಾರ ರಂಗದಲ್ಲಿ ಸ್ವಾವಲಂಬನೆಯ ಗುರಿಯಿಂದ ಬಹಳಷ್ಟು ದೂರವಿದ್ದರೂ ಮುನ್ನಡೆಯ ಮಾರ್ಗದಲ್ಲಿ ಅಗ್ರೇಸರರಾಗಿದ್ದೇವೆ. ಈ ಸಂಗತಿ ಆಹಾರ ಮಂತ್ರಿಗಳಿಗೂ ದೇಶಕ್ಕೂ ಹೆಮ್ಮೆ ತರುತ್ತದೆ; ಈ ಮುನ್ನಡೆ ಇನ್ನೂ ತೀವ್ರವಾಗಬೇಕು; ಆಹಾರಕ್ಕಾಗಿ ಪರರೊಡ್ಡವಕ್ಕೆ ಕೈಚಾಚುವ ಪ್ರಮೇಯ ಸ್ವತಂತ್ರ ಭಾರತಕ್ಕೆ ತಪ್ಪಬೇಕು.

ದೇಶದ ಹತ್ತರಲ್ಲಿ ಏಳು ಜನರು ಕೃಷೀವಲರಾದರೆ, ಇವರ ದುಡಿಮೆ— ಬೆವರಿನ ಫಲವನ್ನೇ ಉಳಿದವರೂ ತಿನ್ನುತ್ತಾರೆ. ಬ್ಯಾಂಕ್ ರಾಷ್ಟ್ರೀಕರಣದ ಹಿಂದಿದ್ದ ಮುಖ್ಯ ಉದ್ದೇಶವಾದರೂ ಈ ರೈತರಿಗೆ ಅಧಿಕ ಸೌಲಭ್ಯಗಳನ್ನು ಒದಗಿಸುವುದು. ಅಂದರೆ, ನಮ್ಮ ಸರಕಾರ ಬಹು ಕಾಲದಿಂದಲೂ ಕಡೆಗಣಿಸುತ್ತ ಬಂದಿದ್ದ ಕೃಷಿಕ ರಂಗವನ್ನು ಉನ್ನತೀಕರಿಸಲು ಬದ್ಧಕಂಕಣವಾಯಿತು. ಹಸಿರು ಕ್ರಾಂತಿಯು ಆವಶ್ಯಕ, ಅನಿವಾರ್ಯ, ಪ್ರಾಥಮಿಕ ಕರ್ತವ್ಯ. ಅದರೆ ಅದರಿಂದಲೇ, ದೇಶ ನಂದನವನವಾಗದು. ಇಂದಿನ ಯುಗದಲ್ಲಿ ಕೈಗಾರಿಕೆಗಳೂ ಅದೇ ರೀತಿಯಲ್ಲಿ ಬೆಳೆದುಬರಬೇಕು. ದೇಶದ ಬೆನ್ನೆಲುಬು ಕೃಷಿರಂಗವಾದರೆ ಪಾದಗಳು ಕೈಗಾರಿಕೆ. ಕೈಗಾರಿಕಾ ರಂಗದಲ್ಲಿಯೂ ನಾವು ಕ್ರಾಂತಿಕಾರಕ ಸಾಧನೆಗಳನ್ನು ಮಾಡದೆ ಹೋದರೆ, ದೇಶದ ಆರ್ಥಿಕ ಸ್ಥಿತಿಗಳು ಎಂದೂ ಸುಧಾರಿಸಲಾರವು. ೧೯೬೯ನೆಯ ಕ್ರಿಸ್ತ ವರ್ಷದಲ್ಲಿ ಕೈಗಾರಿಕೆ ಉತ್ಪನ್ನಗಳ ಹೆಚ್ಚಳ ಬಹಳ ಕಡಿಮೆಯೆಂದು— ಸು. ೩.೩ ಸೇಕಡಾದಷ್ಟು ಎಂದು ತಿಳಿಯುತ್ತದೆ. ಇದು ಇರುವೆ ನಡಿಗೆಯಲ್ಲದೆ ಬೇರೆಯಲ್ಲ. ಇತ್ತೀಚಿನ ದಿನಗಳು ಕೈಗಾರಿಕೋದ್ಯಮಿಗಳಿಗೆ ಪಸಂದಾದುದಲ್ಲವೆಂಬ ಭಾವನೆ ಬಲವಾಗಿ ಬೇರೂರಿದೆ. ಪ್ರತಿ ಕಾರಖಾನೆಯಲ್ಲಿಯೂ ಕಾರ್ಮಿಕರ ಗೊಂದಲಗಳು ಮಾಮೂಲಾಗಿವೆ. ಬಂದು–ಮುಷ್ಕರ–ಲಾಕ್ ಔಟ್ ಇವೆಲ್ಲವೂ ಕಾರ್ಮಿಕರ ಅಶಾಂತಿಯಿಂದ ಜನಿಸಿದ ದುಷ್ಟ ಪ್ರವೃತ್ತಿಗಳು. ಬಂಗಾಳದ ಹಲವಾರು ಕಾರಖಾನೆಗಳು ತಿಂಗಳುಗಟ್ಟಲೆ ಮುಚ್ಚಿದ ಉದಾಹರಣೆಗಳುಂಟು. ಉತ್ಪಾದನೆಯ ಕುಂಠಿತತೆಗೆ ಇದು ಒಂದು ಕಾರಣವಾದರೆ, ಸರಕಾರಿ ನೀತಿಯ ಡೋಲಾಯಮಾನ ಪ್ರವೃತ್ತಿ ಇನ್ನೊಂದು ಪ್ರಬಲ ಕಾರಣ. ಈಗೀಗ ಕೈಗಾರಿಕೆಗಳಲ್ಲಿ ಬಂಡವಲ ಹೂಡಲು ಮುಂದೆ ಬರುವವರು ತೀರ ವಿರಳರಾಗಿದ್ದಾರೆ. ಕೇಂದ್ರ ಸರಕಾರಕ್ಕೆ ಕಮ್ಯೂನಿಸಂ ಗಾಳಿ ಬಡಿದದ್ದೀಗ ಸ್ಪಷ್ಟವಾಗಿ ವ್ಯಕ್ತವಾಗಿದೆ. ಹಾಗಾಗಿ, ಸರಕಾರಿ ಸ್ವಾಮ್ಯಕ್ಕೆ ಪ್ರಾಧಾನ್ಯ ಹೆಚ್ಚುತ್ತ ಬರುತ್ತಿದೆ. ಮಾತಿನಲ್ಲಿ ಮಿಶ್ರ ಅರ್ಥ ವ್ಯವಸ್ಥೆಯನ್ನು ಉಲ್ಲೇಖಿಸುತ್ತ ಬಂದರೂ ಸರಕಾರದ ಒಲವು ಎಡ ಪಂಥದತ್ತವೆಂದು ಎಲ್ಲರಿಗೂ ಮನವರಿಕೆಯಾಗಿದೆ. ಆದುದರಿಂದ ಖಾಸಗಿ ಬಂಡವಾಳವನ್ನೇ ಕೈಗಾರಿಕೆಗಳಿಗೆ ಇನ್ನೂ ಇನ್ನೂ ನಿರೀಕ್ಷಿಸುತ್ತಿರುವುದು ಬರಿಯ ನಿರೀಕ್ಷೆ ಮಾತ್ರವಾದೀತು.

ದೇಶ ಎರಡೂ ರಂಗಗಳಲ್ಲಿ ಪ್ರಗತಿಗಾಮಿಯಾಗದೆ ಹೋದರೆ, ಕೈಗೆ ಬಂದ ತುತ್ತು ಬಾಯಿಗಿಲ್ಲವೆಂದಾದೀತು. ದೇಶದ ಅರ್ಥ ವ್ಯವಸ್ಥೆ ತಲೆ ಕೆಳಗಾದೀತು. ನಮ್ಮ ಕೈಗಾರಿಕೋತ್ಪಾದನೆಗಳಲ್ಲಿ ಕೆಲವಕ್ಕಾದರೂ ವಿಶೇಷ ಮಾರುಕಟ್ಟೆ ಲಭ್ಯವಾಗುತ್ತಿರುವ ಈ ಕಾಲದಲ್ಲಿ ಉತ್ಪನ್ನ ಹೆಚ್ಚಿಸಲು ಆದ್ಯಗಮನ ನೀಡಬೇಕಾದುದು ಅನಿವಾರ್ಯ. ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಪದಾರ್ಥಗಳ ಕೊರತೆಯೂ ಕೆಲವೆಡೆ ಕಾಣಿಸಿಕೊಂಡಿದೆ. ಉಕ್ಕು, ಅಲ್ಯುಮಿನಿಯಂ ಮೊದಲಾದ ಲೋಹಗಳ ಪೂರೈಕೆ ಈಗ ಕಡಿಮೆಯಾಗುತ್ತ ಬರುತ್ತಿದೆ. ಮಕ್ಕಳು ಬರೆಯುವ ಕಾಗದಕ್ಕೂ ಬರಗಾಲ ಬಡಿದಿದೆ. ಈ ಪ್ರಾಥಮಿಕ ಪೂರೈಕೆಯಲ್ಲೇ ನಾವು ಹಿನ್ನಡೆದಿರುವುದಕ್ಕೆ ಮಾರುಕಟ್ಟೆಯೇ ಸಾಕ್ಷಿ ಹೇಳುವಾಗ, ನಾವು ಮುನ್ನಡೆದಿದ್ದೇವೆನ್ನುವ ಮಾತಿನಲ್ಲಿ ಅರ್ಥವುಳಿಯುತ್ತದೆಯೆ? ಇಂತಹ ಸ್ಥಿತಿಯನ್ನು ದೂರಮಾಡಲು ಸರಕಾರ ತೀವ್ರ ಗಮನ ಹರಿಸದೆ ಹೋದರೆ, ದೇಶವು ದುರಂತಕ್ಕೀಡಾಗುವುದು ಖಂಡಿತ.

ವ್ಯಾಪಾರವಲ್ಲ, ಸಹಕಾರ

ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಶ್ರೀ ಟಿ. ಕೆ. ತುಕೋಳರು ತಮ್ಮ ಉಪಜೀವನವನ್ನು ಶಿಕ್ಷಕರಾಗಿಯೇ ಆರಂಭಿಸಿದವರು. ಕಾರಣಾಂತರದಿಂದ ಅವರು ನ್ಯಾಯರಂಗಕ್ಕೆ ಪಾದಾರ್ಪಣ ಮಾಡಿದರೂ ಈಗ ಮತ್ತೆ ಶಿಕ್ಷಣ ರಂಗಕ್ಕೆ ಮರಳಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ "ವ್ಯಾಪಾರಿ ಮನೋವೃತ್ತಿ" ಇದೆಯೆಂದು ನೋಯುವ ಶ್ರೀ ತುಕೋಳರು ಈ ಪ್ರವೃತ್ತಿ ದೂರವಾಗಬೇಕು ಎನ್ನುತ್ತಾರೆ. ಶುಲ್ಕ ವಸೂಲಿ ಮಾಡುತ್ತಿದ್ದ ಕಾಲಕ್ಕಿಂತಲೂ ಈಗಿನ ಮಾತಾಪಿತರು ಅಧಿಕ 'ಶುಲ್ಕ' ನೀಡಬೇಕಾಗುತ್ತದೆ ಎಂದರು. ಶ್ರೀಮಂತ ತಾಯ್ತಂದೆಗಳು ದೇಣಿಗೆ ತೆತ್ತು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿರುವುದೇ ಈ ಪ್ರವೃತ್ತಿಯ ಬಲ ಸಂವರ್ಧನೆಗೆ ಕಾರಣವೆಂದರು.

ಶ್ರೀಮಂತರಿರಲಿ, ಬಡವರಿರಲಿ, ತಮಗೆ ಲಾಭವಿಲ್ಲದೆ ಚಿಕ್ಕಾಸನ್ನಾದರೂ ಖರ್ಚು ಮಾಡುವವರಲ್ಲ. ಆ ಲಾಭ ಕೀರ್ತಿಯ ಹೆಸರಲ್ಲಿರಬಹುದು, ಫ್ಯಾಷನ್ನಿನ ಹೆಸರಲ್ಲಿರಬಹುದು, ಅಥವಾ ಇನ್ನಾವುದಾದರೂ ರೂಪದಲ್ಲಿರಬಹುದು. ಖಾಸಗಿ ಶಿಕ್ಷಣ ಸಂಸ್ಥೆಗಳು ಉತ್ತಮ ಮಟ್ಟದ ಶಿಕ್ಷಣ ನೀಡುತ್ತಿರುವುದಕ್ಕೆ ಸರಕಾರಿ ಮತ್ತು ವಿಶ್ವವಿದ್ಯಾಲಯಗಳ ಫಲಿತಾಂಶಗಳೇ ಸಾಕ್ಷಿ ಹೇಳುತ್ತವೆ. ಖಾಸಗೀ ಸಂಸ್ಥೆಗಳಿಗೆ ಅನುದಾನ ರೂಪದಲ್ಲಿ ಸರಕಾರದಿಂದ ಬರುವ ಹಣ ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ. ಹಾಗಿರುವಾಗ, ವೆಚ್ಚವನ್ನು ಬಾಯಿಗೂಡಿಸಲು ಹೆತ್ತವರಿಂದ ಕ್ರಮವತ್ತಾದ ರಸೀದಿ ಕೊಟ್ಟೇ ಸಹಾಯಧನ ಪಡೆದರೆ, ಅದು ತಪ್ಪೆಂದು ಹೇಳುವಂತಿಲ್ಲ. ಕೊರತೆಯ ಹಣವನ್ನು ಊರವರಿಂದಲೇ ಸಂಗ್ರಹಿಸಬೇಕು ತಾನೆ? ಹಾಗಿರುವಾಗ, ಇದನ್ನು ವ್ಯಾಪಾರಿ ಮನೋವೃತ್ತಿ ಎಂದು ಹೇಳುವುದು ಸರಿಯಾಗಲಾರದು. ಸರಕಾರವೇ ಉಚಿತ ಶಿಕ್ಷಣ ನೀಡದೆ 'ಅಭಿವೃದ್ಧಿ ಶುಲ್ಕ'ವನ್ನು ವಸೂಲು ಮಾಡುತ್ತಿದೆ. ಇದೂ ವ್ಯಾಪಾರವೇ? ವಿಚಾರವೆಂದರೆ, ಈ ದೇಣಿಗೆಯು ಕುತ್ತರೂಪವಾಗಿ ಯಾರನ್ನಾದರೂ ಬಾಧಿಸಬಾರದು. ಇದಕ್ಕೆ ತಕ್ಕ ವ್ಯವಸ್ಥೆಯನ್ನು ಆಡಳಿತ ವರ್ಗ ಮಾಡಿಕೊಳ್ಳಬಹುದು.

ಅಧಿಕಾರಲಾಲಸೆ

ಇತ್ತೀಚೆಗೆ ಸಿಂಡಿಕೇಟ್ ಕಾಂಗ್ರೆಸ್‌ನ ಕೋಶಾಧಿಕಾರಿ ಶ್ರೀ ಎಸ್. ಕೆ. ಪಾಟೀಲರು ಒಂದೆಡೆ ಹೇಳಿದರು. "ಮಧ್ಯಾವಧಿ ಚುನಾವಣೆಗಳನ್ನು ಯಾವ ಎಂ. ಪಿ. ಯೂ ಬಯಸುವುದಿಲ್ಲ." ಶ್ರೀ ಪಾಟೀಲರೂ ಒಬ್ಬ ಎಂ. ಪಿ., [illegible] ಲೋಕಸಭಾ ಸದಸ್ಯರು. ಮುಂಬಯಿಯಲ್ಲಿ ಒಮ್ಮೆ ಸೋತ ಶ್ರೀಯುತರು ಕರ್ನಾಟಕದತ್ತ ಸಿಂಹಾವಲೋಕನ ಮಾಡಿ ಗುಜರಾತದಿಂದ ಕೊನೆಗೆ ಆಯ್ಕೆಯಾದರೆಂಬುದನ್ನು ಹೆಚ್ಚಿನವರು ಮರೆತಿಲ್ಲ. ಚುನಾವಣೆಯನ್ನು ಎದುರಿಸುವ ದೈಹಿಕ ಧೈರ್ಯವಾಗಲೀ ಮಾನಸಿಕ ಧೈರ್ಯವಾಗಲೀ ಯಾವ ಸಂಸತ್ಸದಸ್ಯನಿಗೂ ಇಲ್ಲವೆಂದೇ ಹೇಳಬೇಕು. ಪ್ರಧಾನಿ ಶ್ರೀಮತಿ ಗಾಂಧಿಯವರೂ ಇದಕ್ಕೆ ದೂರವಲ್ಲ. ಆದುದರಿಂದಲೇ ಅವರು ಒಂದೊಂದು ಬಾರಿ ಒಂದೊಂದು ಪಕ್ಷದ ಬೆಂಬಲದಿಂದ ಅಧಿಕಾರ ಪೀಠದಲ್ಲಿ ಮುಂದುವರಿಯುವ ಇರಾದೆಯಿಂದಿದ್ದಾರೆ. ಕಾಂಗ್ರೆಸಿನಲ್ಲಿ ಉಂಟಾದ ಬಿರುಕು ಯಾವ ತತ್ತ್ವ-ನೀತಿಗಳಿಗಾಗಿಯೂ ಅಲ್ಲ, ಬರಿಯ ಅಧಿಕಾರಕ್ಕಾಗಿ ಎಂಬುದನ್ನು ಶ್ರೀಮತಿ ಗಾಂಧಿ ಎರಡು ಬಾರಿ ಮೊದಲು ಬಹಿರಂಗಗೊಳಿಸಿದ್ದರೆ, ಶ್ರೀ ಪಾಟೀಲರೀಗ ಅದನ್ನು ಪುಷ್ಟೀಕರಿಸಿದ್ದಾರೆ.

ಬದನಿಕೆಗಳು

ಆಸರೆ ಬೇಡಿ ಬಂದು, ಬಳಸಿ ನಿಂತಲ್ಲಿ-
ಪ್ರಾರಬ್ಧ: ಹಂಚಿ ತಿನ್ನುವ ಬದುಕಿನಲ್ಲಿ
ಕನಸು, ರೋಮಾಂಚನಗಳ ಬೆರಕೆ-
ಮೊಳೆವಂಥ ಆಸೆ ಹೂಗಳು
ಸತ್ತಂತೆ, ಬದುಕಿ ಬಂದಂತೆ
ಸಂಭ್ರಮದಲ್ಲೆ ಕಾಲ ತೇಲಿ ಬಂತು.
ಹೆಪ್ಪುಗಟ್ಟಿದ - ಕೊಗಟೆ
ಉದುರುವ ಬದುಕಿನಲ್ಲೆನ್ನ ನೋಡಿದರೆ,
ಮುಕುಗಳುರುಳುಗಳಲ್ಲಿ ಜಳ್ಳಿ
ಕಮರಿದರೂನೂ
ಭದ್ರ: ಎದೆಕನಸ; ಮಾಂಸ,ಮೂಳೆಯ
ಕನಸ
ಬೇರು: ಗೋಜಲ ಜಾಲ
ಅಪ್ಪಿದವುಗಳ ಸೋಗು ಕಳಚಿ ಬಿದ್ದಲ್ಲಿ;
-ನೂರೆಂದ ನಿರಾಶೆ, ನೋವು, ಭಗ್ನ-
ಸ್ಥಾನ ಪಲ್ಲಟ ನೆತ್ತರು ಸಂದ.-
ಒಡೆದು. ಹೊರಬಿದ್ದು, ಬಟ್ಟ ಬಯಲಲ್ಲಿ
ಚಳಿಗೊಳ್ಳುಂಟೆ ನಿಂತವನು
ನಾನು.

– ಸುಬ್ರಾಯ ಚೊಕ್ಕಾಡಿ.

ವಿನಂತಿ

ಪ್ರಜಾರಾಜ್ಯ ವಿಶೇಷ ಸಂಚಿಕೆಯ ಕಾರ್ಯಬಾಹುಳ್ಯದಿಂದಾಗಿ 'ನವಯುಗ'ದ ಮುಂದಿನ ಸಂಚಿಕೆ ಪ್ರಕಟವಾಗುವುದಿಲ್ಲ. ವಾಚಕರು ಇದನ್ನು ಗಮನಿಸಬೇಕಾಗಿ ವಿನಂತಿ.

—ಮೆನೇಜರ್

ವಿತ್ತಮಂತ್ರಿಯವರ ಸುದ್ದಾಲಕಾಖ್ಯಂ

ಜವಾಹರಲಾಲರೂ ಒಮ್ಮೆ ಅರ್ಥ ಮಂತ್ರಿಯೂ ಆಗಿದ್ದರು. ವಿತ್ತಮಂತ್ರಿ ಶ್ರೀ ಸಿ. ಡಿ. ದೇಶಮುಖರು ರಾಜಿನಾಮೆ ಕೊಟ್ಟದ್ದರಿಂದ ವಿತ್ತವಿಭಾಗವನ್ನು ಅಂದು ಪ್ರಧಾನಮಂತ್ರಿಯೇ ಇಟ್ಟುಕೊಳ್ಳಬೇಕಾಗಿತ್ತು. ಈಗ, ತನ್ನ ಕೈಕೆಳಗಿದ್ದ ಉಪಪ್ರಧಾನಿಯೂ ವಿತ್ತಸಚಿವರೂ ಆಗಿದ್ದ ಶ್ರೀ ಮುರಾರ್ಜಿ ದೇಸಾಯಿಯವರನ್ನು ಹೊಡೆದೋಡಿಸಿ, ವಿತ್ತಾಧಿಕಾರವನ್ನು ತನ್ನ ಮುಷ್ಟಿಗಳಿಗೆಳೆದುಕೊಂಡರು ಪ್ರಧಾನಿ ಇಂದಿರಾ ಗಾಂಧಿ. ಇದು ನಡೆದದ್ದು ಸಮಾಜವಾದದ ಹೆಸರಿನಲ್ಲಿ.

ಮುಂದಿನ ಮುಂಗಡ ಪತ್ರ ಪ್ರಧಾನಿಯೇ ಮಂಡಿಸುವ ಸೂಚನೆಗಳಿವೆ. ಸಮಾಜವಾದ ಪೋಷಕವಾದ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಅಳವಡಿಸುವುದು ಅವರ ಗುರಿ. ಮುಂಬಯಿಯ ಇತಿಹಾಸ ಪ್ರಸಿದ್ಧವೆನ್ನಲಾದ ಅಧಿವೇಶನದಲ್ಲಿ ಅಂಗೀಕಾರವಾದ ಆರ್ಥಿಕ ನಿರ್ಣಯಗಳನ್ನು ಬಜೆಟ್ಟಿನಲ್ಲಿ ಕಾರ್ಯರೂಪಕ್ಕೆ ತರದೇ ಹೋದರೆ ಸಮಾಜವಾದ ಸಮಾಚಾರ ಪತ್ರಿಕೆಗಳಲ್ಲಿ ಮಾತ್ರ ಅಚ್ಚಾಗಬಹುದೇನು. ಆದುದರಿಂದ ಕಡಿಮೆಯಲ್ಲಿ ಕಡಿಮೆಯಾಗಿ ಕೆಲವಾದರೂ ಕ್ರಮಗಳನ್ನು ಸೂಚಿಸಲಾಗದೆ ಹೋದರೆ, ಯುವಜನ ಇಂಡಿಕೇಟಿಗರಿಗೆ ತೀವ್ರ ಅಸಮಾಧಾನವಾಗಿ 'ಚಂಡಿಕೇಟ್' ಜನ್ಮತಳೆಯಬಹುದು. ಜಮೀನುದಾರರ ರಾಜಧನ ಪದ್ಧತಿ, ಸಾಮಾನ್ಯ ವಿಮೆಯ ರಾಷ್ಟ್ರೀಕರಣ, ವಿದೇಶ ವ್ಯಾಪಾರದ ಸರಕಾರೀಕರಣ ಮೊದಲಾದ ಜನಜನಿತವಾದ ಹತ್ತಾರು ಘೋಷಣೆಗಳಲ್ಲಿ ಬೆರಳೆಣಿಕೆಯಷ್ಟನ್ನಾದರೂ ನಮೂದಿಸಲೇಬೇಕಾಗುತ್ತದೆ. ಮುಂಗಡ ಪತ್ರ ಮತ್ತೆ ೧೦೦ ಕೋಟಿ ರೂಪಾಯಿಗಳ ಹೊಸ ತೆರಿಗೆಯನ್ನೂ ಹೊರಿಸುತ್ತದೆಂಬ ಕಿಂವದಂತಿ ಹರಡಿದೆ. ಇದೆಲ್ಲವೂ ಸಮಾಜವಾದವನ್ನು ಜಾರಿಗೆ ತರಲು ಅನಿವಾರ್ಯ. ಶ್ರೀಸಾಮಾನ್ಯನೂ ಸಮಾಜವಾದಕ್ಕೆ ಸಹಾಯ ನೀಡಬೇಡವೆ? ಯಾರು ಗದ್ದುಗೆಯೇರಿದರೂ ಬಡ್ಡಿಗಯ್ಯನಿಗೆ ದುಡಿಮೆ ತಪ್ಪುವುದಿಲ್ಲ. ಸಮಾಜವಾದದ ಥಿಯರಿಯೇ ಇದು. ಅರಾಮವಾಗಿ ಯಾರೂ ಒಂದು ಪೈಸೆಯನ್ನೂ ಕೊಲ್ಲಬಾರದು; ಕೊಂದರೆ ಅದು ಬ್ರಹ್ಮಹತ್ಯೆಗೂ ಮಿಗಿಲಾದ ಅಪರಾಧ. ಶ್ರೀಮತಿ ಗಾಂಧಿ ಭಾರೀ ಜಾಗ್ರತರಿದ್ದಾರೆ.

೦೦ ೦೦ ೦೦

ಬ್ಯಾಂಕ್ ರಾಷ್ಟ್ರೀಕರಣಾನಂತರ ಸಮಾಜವಾದದ ಗಾಳಿ ಭಾರತ ತುಂಬ ಹರಡಿದೆ. ಹೊಸ ಬಗೆಯಲ್ಲಿ ಯಾವುದರ ರಾಷ್ಟ್ರೀಕರಣ ನಡೆದೀತು ಎಂದು ಯಾರೊಬ್ಬರೂ ಸ್ಪಷ್ಟವಾಗಿ ಊಹಿಸಲಾರರು. ಶ್ರೀಮತಿ ಗಾಂಧಿಯವರ ಎಂಪೆದೆ ಮಾಜಿ ಮಹಾರಾಜರನ್ನು ರಾಷ್ಟ್ರೀಕರಣ ಮಾಡುತ್ತದೆ. ಇನ್ನೂ ಕೆಲವು ವಿಧಾನಗಳ ಜತೆಗೆ ಔಷಧಿ ಉತ್ಪಾದನೆಯನ್ನೂ ರಾಷ್ಟ್ರೀಕರಣಗೊಳಿಸಬೇಕಾಗಿದೆಯೆಂದು ಕೇಂದ್ರ ಆರೋಗ್ಯ ಸಚಿವ ಡಾ| ಚಂದ್ರಶೇಖರ್ ಹೇಳಿದ್ದಾರೆ. ಇದು ಮುನ್-ಸೂಚನೆಯೆಂದು ಇಟ್ಟುಕೊಳ್ಳುವುದಾದರೆ, ಉತ್ಪಾದಕರು ತಮ್ಮ ಬಗ್ಗೆ ಈಗಿಂದೀಗಲೇ ಗಂಭೀರ ಎಚ್ಚರಿಕೆ ತಳೆಯತೊಡಗುತ್ತಾರೆ.

ಇದೀಗ ದೇಶದಲ್ಲಿ ಬೇಕಾದ ಎಲ್ಲ ಬಗೆಯ ಔಷಧಿಗಳು ಲಭ್ಯವಿವೆ; ಜನತೆಯ ಆರೋಗ್ಯ ಮಟ್ಟ ಸುಧಾರಿಸಿದೆ. ಆದುದರಿಂದಲೇ ಆಯುರ್ಮಾನದ ಸರಾಸರಿಯಲ್ಲಿ ಏರಿಕೆ ಕಂಡಿದೆ. ಆದರೆ, ಔಷಧಿಗಳ ಬೆಲೆ ಮಾತ್ರ ಶ್ರೀಸಾಮಾನ್ಯನ ಕೈಗೆಟಕುತ್ತಿಲ್ಲ. ಅಲ್ಲೋಪಥಿ ಔಷಧಿ ಆಕಾಶಕ್ಕೇರಿದೆ. ಆದನ್ನೇ ಆಯುರ್ವೇದೀಯ, ಹೋಮಿಯೋಪಥಿ ಯುನಾನಿಗಳೂ ಹಿಂಬಾಲಿಸಿವೆ. ದುಡ್ಡು ಮಾಡಿದವರು ಮಾಡಿಯೇ ಬಿಟ್ಟರು; ಸಾಲ ಮಾಡಿದವರು ಮಾತ್ರ ಸತ್ತುಹೋದರು.

ಇದೇಕೆ ಹೀಗೆ? ಸುಟಗಟ್ಟಲೆಯ ಜಾಹೀರಾತುಗಳ ವೆಚ್ಚ ಔಷಧಿ ಉತ್ಪಾದಕರಿಗೆ ಇದು ಅನಿವಾರ್ಯವೆಂದು ಹೇಳದಿದ್ದರೂ ಅವಶ್ಯವೆಂದು ಹೇಳೋಣ. ಡಾಕ್ಟರರುಗಳು ಸನ್ಮಾನಿಸಿ ಪುಕ್ಕಟೆಯಾಗಿ ಬರುವ ಸ್ಯಾಂಪಲ್ಲುಗಳಿಂದಲೇ ವರ್ಷಂಪ್ರತಿ ಸಾವಿರಾರು ರೂಪಾಯಿ ಸಂಪಾದಿಸಿದ ಉದಾಹರಣೆಗಳೂ ಇಲ್ಲದಿಲ್ಲ. ಈ ಸ್ಯಾಂಪಲ್ಲುಗಳಿಗೂ ಬಳಕೆದಾರನೇ ಹಣ ತೆರಬೇಕಾಗುತ್ತದೆ. ಸಾವು-ಬದುಕುಗಳನ್ನು ನಿರ್ಧರಿಸುವ ಈ ಕೈಗಾರಿಕೆಯು ನಿಷ್ಠೆಯಿಂದ ನಡೆಯಬೇಕಾದ್ದು ಮತ್ತು ಶ್ರೀಸಾಮಾನ್ಯನಿಗೂ ಸುಲಭದಲ್ಲಿ ಲಭ್ಯವಾಗಬೇಕಾದ್ದು ಅನಿವಾರ್ಯ. ಉತ್ಪಾದಕರು ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಂಡು ಹೋಗದಿದ್ದರೆ, ಅವುಗಳ ರಾಷ್ಟ್ರೀಕರಣವೂ ಆದೀತು ಎಂದ ಡಾ| ಚಂದ್ರಶೇಖರರ ಮಾತು ಮುಂದಿನ ಬಜೆಟ್ಟಿನಲ್ಲಿ ಕಾರ್ಯಗತವಾಗದೆ ಹೋದರೂ ಅದಕ್ಕಾಗಿ ಬಹು ಕಾಲ ಕಳೆಯದು.

೦ ೦ ೦

ಇಂಡಿಕೇಟ್ ಕಾಂಗ್ರೆಸ್ಸು ೧೯೭೦-೭೧ರೊಳಗೆ ಭೂಸುಧಾರಣೆ ಶಾಸನ ಅವಶ್ಯ ಜಾರಿಗೆ ತರಬೇಕೆಂದು ರಾಜ್ಯಗಳಿಗೆ ಕರೆ ನೀಡಿ ಕೊನೆಗೊಂಡಿತು. ಕೇರಳದಲ್ಲಿ ಶ್ರೀ ಇ. ಎಂ. ಎಸ್. ನಂಬೂದರಿಪಾದರು ಬಹಳಷ್ಟು ಶ್ರಮಿಸಿ ತಯಾರಾದ ಕೇರಳದ ಭೂಸುಧಾರಣಾ ಶಾಸನವು ರಾಷ್ಟ್ರಪತಿಗಳ ಸಮ್ಮತಿಪಡೆದು ಜಾರಿಗೆ ಬರುವಷ್ಟರಲ್ಲಿ ಒಂದು ಸರಕಾರ ಉರುಳಿ ಮತ್ತೊಂದು ಸರಕಾರ ಅಧಿಕಾರಕ್ಕೆ ಬಂತು. ಶ್ರೀ ನಂಬೂದರಿ ಬಿತ್ತಿದ್ದನ್ನು ಶ್ರೀ ಅಚ್ಯುತಮೆನನ್ನರು ಕೊಯ್ಯುವಂತಾಯ್ತು.

ಇದೇ ತಿಂಗಳ ಮೊದಲನೆಯ ದಿನದಿಂದ ಕೇರಳದಲ್ಲಿ ಭೂಮಾಲಕತ್ವವು ಕೊನೆಗೊಂಡಿತು. ಉಳುವವನೇ ಹೊಲದೊಡೆಯನಾದ. ಮಿತಿಗಿಂತ ಹೆಚ್ಚಿರುವ ಭೂಮಿಯನ್ನು ಭೂರಹಿತರಿಗೆ ಹಂಚಿಕೊಡಲಾಗುವುದು. ಅಂದರೆ, ಭೂಮಿಯ ಸ್ವಾಮ್ಯ ಸರಕಾರಕ್ಕೇ ಬಂದಂತಾಯಿತು. ಒಕ್ಕಲಿಗರು ಬೇಸಾಯ ಮಾಡುವಷ್ಟು ಸಮಯ ಅದು ಅವರಿಗೆ ಸೇರುತ್ತದೆ. ಕೇರಳದ ಭೂರಹಿತ ರೈತರಿಗೆ ಗುಡಿಸಲ ವಾಸಿಗಳಿಗೆ ಮತ್ತು ಗೇಣಿದಾರರಿಗೆ ಇದು ಅತ್ಯಂತ ಶುಭೋದಯ. ಜಮೀನುದಾರರು ಮಾತ್ರ ಪಾತಾಳಕ್ಕೆ ಕುಸಿದರು.

೦೦ ೦೦ ೦೦

ಮುನ್ನೆಚ್ಚರಿಕೆಯ ಸ್ಥಾನ ಬದ್ಧತೆಯು ಶಾಸನಕ್ಕೆ ಗೃಹಮಂತ್ರಿ ಚವನರು ಜೀವದಾನ ಮಾಡಲು ಇಚ್ಛಿಸಿದ್ದರು; ಪ್ರಧಾನಿಯೂ ಅದನ್ನು ಬಯಸಿದ್ದರು. ಆದರೆ, ಇಂಡಿಕೇಟ್ ಈ ಕಾರ್ಯಕ್ಕೆ ತೊಡಗಿದರೆ, ಅದಕ್ಕೆ ಬೆಂಬಲ ನೀಡುವವರು ಯಾರೂ ಇಲ್ಲದ್ದರಿಂದ ನೂರು ವರ್ಷಗಳ ನಂತರ ಈ ಸೈತಾನನನ್ನು ದೇಶದಿಂದ ದೂರ ಹೋದಂತಾಯಿತು. ಸ್ವಾತಂತ್ರ್ಯಪ್ರಿಯ ಜನತೆ ಸುಖ ನೆಮ್ಮದಿಯ ಉಸಿರು ಬಿಡುವಂತಾಯ್ತು. ಆದರೆ, ಇದರ ಹಿಂದೆಯೇ ಈ ಸೈತಾನನಿಗೆ ಪುನರ್ಜನ್ಮ ನೀಡುವ ಯೋಚನೆ ಬೇರೆ ಬೇರೆ ರಾಜ್ಯ ಸರಕಾರಗಳಿಗಿದ್ದಂತಿದೆ. ಇಂಡಿಕೇಟ್ ಬಹುಮತವಿರುವ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳು ತಮ್ಮದೇ ಆದ ಶಾಸನವನ್ನು ಹೊರಡಿಸಿವೆ. ಇವನ್ನು ಉಳಿದ ರಾಜ್ಯಗಳೂ ಅನುಸರಿಸಿದರೆ ಆಶ್ಚರ್ಯವಿಲ್ಲ.

ಸ್ಥಾನ ಬದ್ಧತೆಯ ಶಾಸನ ಪ್ರಮುಖ ಉದ್ದೇಶ ರಾಷ್ಟ್ರಘಾತಕ ಪ್ರವೃತ್ತಿಗಳ ದಮನ. ರಾಜ್ಯಗಳಲ್ಲೂ ದೇಶದಲ್ಲೂ ವ್ಯವಸ್ಥಿತವಿರುವ ವಿವಿಧ ಶಾಸನಗಳ ಬಲದಿಂದಲೇ ಸಾಮಾನ್ಯವಾಗಿ ದೇಶದ್ರೋಹ ಪ್ರವೃತ್ತಿಗಳನ್ನು ತಡೆಗಟ್ಟುವುದು ಸಾಧ್ಯ. ಆದರೆ, ಅದಕ್ಕಾಗಿ ಅತ್ಯಂತ ಸರಳ ವಿಧಾನವೆಂದು ಈ ಸೈತಾನನನ್ನು ಮತ್ತೆ ಕರೆತರುವುದೆಂದರೆ, ನಮ್ಮ ಜನತೆ ಸ್ವಾತಂತ್ರ್ಯಕ್ಕೆ ಅನರ್ಹರು ಎಂಬುದೇ ಶಾಸಕ ವರ್ಗದ ದೃಢ ವಿಶ್ವಾಸವಿದ್ದಂತೆ ಭಾಸವಾಗುತ್ತದೆ. ಒಂದು ಹೋಗಿ ಒಂಬತ್ತು ಬಂದ ಪ್ರಸಂಗ ಈ ಬಗ್ಗೆ ಸರಿಯಾಗಿ ಹೊಂದಿಕೊಳ್ಳುತ್ತದೆ.

೦ ೦ ೦

ಯಂತ್ರಗಳ ಯುಗವಿದು. ಹೊಲಗಳಲ್ಲಿ ಯಂತ್ರಗಳು ಕಾರ್ಯವೆಸಗುತ್ತಿರುವಾಗ ಕೈಮಗ್ಗಗಳಿಗೆ ಉತ್ತೇಜನ ನೀಡಬೇಕು ಎನ್ನುತ್ತಾರೆ ಕೆಲವರು. ಆದರೆ, ಕೈಮಗ್ಗಗಳು ಯಂತ್ರೋಪಕರಣಗಳೊಂದಿಗೆ ಸ್ಪರ್ಧೆಯಲ್ಲಿ ಗೆದ್ದು ನಿಲ್ಲಲಾರವು. ಟೆರಲಿನ್, ನೈಲಾನ್, ಟೆರಿಕಾಟ್, ಡೆಕೊರಾನ್, ರೇಯೊನ್ ಇತ್ಯಾದಿ ಇತ್ಯಾದಿ ಹೊಚ್ಚ ಹೊಸ ಬಗೆಯ ಸಂಶೋಧನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗಿ, ಅವುಗಳಿಂದ ತಯಾರಾಗುವ ಬಟ್ಟೆಗಳೇ ಅತ್ಯಂತ ಜನಪ್ರಿಯವೆನಿಸುತ್ತ ಬರುತ್ತಿರುವಾಗ ಕೈಮಗ್ಗಗಳನ್ನು ಯಾರು ಕೇಳುತ್ತಾರೆ?

ಟೋಪಿ ಧರಿಸುವವರ ಉದ್ದೇಶ ಬಿಸಿಲಿನಿಂದ ರಕ್ಷಣೆ ಮಾತ್ರವೆಂದಾದರೆ, ಗಾಂಧಿ ಟೋಪಿಯೇ ಏಕಾಗಬೇಕು? ಬೇರೆ ಬಟ್ಟೆಯೂ ಆಗಬಹುದು. ಕೈಮಗ್ಗಗಳು ವಿನಾಶಾವಸ್ಥೆಗೆ ತಲುಪುತ್ತಿವೆ; ಹಣದ ಮೌಲ್ಯ ಇಳಿಯುತ್ತ ಬಂದಂತೆ ಶ್ರೀಸಾಮಾನ್ಯನೂ ಕೈಮಗ್ಗಗಳತ್ತ ತಿರಸ್ಕಾರ ವಹಿಸುತ್ತಾನೆ. ಮಗ್ಗಗಳ ಬಗೆಗೂ ಸಂಶೋಧನೆಗಳು ನಡೆಯಬೇಕು; ಅವುಗಳಲ್ಲೂ ಆಧುನಿಕತೆ ಅವತಾರ ತಾಳಬೇಕು. ಯಂತ್ರಗಳೊಡನೆ ಸ್ಪರ್ಧಿಸುವ ಶಕ್ತಿ ಅವಕ್ಕೆ ಬಂದರೆ ಮಾತ್ರ ಕೈಮಗ್ಗದ ಬಟ್ಟೆಗಳು ಬದುಕಿಯಾವು. ನಗಲು ವ್ಯಾಪಾರಿಗಳ ಫೆಡರೇಶನ್‌ನ ಅಧ್ಯಕ್ಷ ಶ್ರೀ ಟಿ. ಎನ್. ಕೆ. ಗೋವಿಂದರಾಜುಲು ಚೆಟ್ಟಿ ಈ ಅಭಿಪ್ರಾಯ ವ್ಯಕ್ತಪಡಿಸಿದರು.

೦ ೦ ೦ ೦

"ಇದು ಗಾಂಧೀದೇಶವೆ? ಬೀದಿ ಬೀದಿಗಳಲ್ಲಿ ಹೆಂಡದಂಗಡಿಗಳು, ಊರ ಊರ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಟಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಲ್ಲಿ ಮತೀಯ ಕಲಹಗಳು, ಯಾರಿಗೂ ರಾಷ್ಟ್ರದ ಬಗ್ಗೆ ನಿಷ್ಠೆಯಿಲ್ಲ; ಗಾಂಧೀಜಿ ಇದನ್ನು ಬಯಸಿದ್ದರೆ? ಗಾಂಧಿ ಮರಣದ ಬಳಿಕ ಅವರ ತತ್ತ್ವಗಳು ಈ ದೇಶದಿಂದ ತೂರಿ ಹೋದುವೆ? ಗಾಂಧೀಜಿ ಬಗ್ಗೆ ಉದ್ದುದ್ದ ಮಾತಾಡುತ್ತಾ ಅವರ ಪ್ರತಿಮೆಗಳನ್ನು ಸ್ಥಾಪಿಸುತ್ತ, ಅವರ ಜೀವನ ಚರಿತ್ರೆಯನ್ನು ಬರೆಯುತ್ತ ಕಾಲ ಕಳೆಯುತ್ತಿರುವ ಭಾರತೀಯರು ಅವರ ಮೂಲ ತತ್ತ್ವವನ್ನೂ ಅನುಷ್ಠಾನಕ್ಕೆ ತರುವ ಗೊಡವೆಗೇ ಹೋಗಿಲ್ಲ'— ಇದು ಗಡಿನಾಡು ಗಾಂಧಿಯವರ ವಿವಂಚನೆ.

"ಗಾಂಧೀ ಮರಣದ ನಂತರ ಜಗತ್ತಿನ ವಾತಾವರಣವೇ ಬದಲಾಗಿದೆ. ಗಾಂಧೀ ತತ್ತ್ವಗಳು ಅಧ್ಯಯನ ಮಾತ್ರ ಯೋಗ್ಯವಾಗಿವೆ. ಗಾಂಧೀ ನಾಮದ ಬಲ ಪೊಂದಿದ್ದರೆ, ದೇಶದಲ್ಲೂ ವಿದೇಶಗಳಲ್ಲೂ ನನ್ನ ಬೇಳೆ ಬೇಯಿಸಲು ಇಂಧನ ದೊರೆಯುತ್ತದೆ. ಗಾಂಧಿ ಹೆಂಡ ಬಯಸಲಿಲ್ಲ. ಆದರೆ, ಇಂದಿನ ಜೀವನದಲ್ಲಿ ಹೆಂಡವಿಲ್ಲದೆ ಹಿಂಡಿ ಇಳಿಸುವುದಿಲ್ಲ. ಜನತೆಗಾಗಿ ಜನತೆಯಿಂದಲೇ ರಚಿತವಾದ ಸರಕಾರ ಜನತೆಯ ಆಶೋತ್ತರಗಳನ್ನು ಸ್ವಲ್ಪವಾದರೂ ಪೂರೈಸಬೇಡವೆ? ಜಾತಿ ಜಾತಿಗಳಲ್ಲಿ ತಿಕ್ಕಾಟ ಹುಟ್ಟುವುದು ಗಾಂಧೀ ಕಾಲದಲ್ಲೂ ಇತ್ತು. ಇಂದಿಗೂ ಇದೆ. ತಿಕ್ಕಾಟ ತೀರಿಸಲಿ, ಮತ್ತೆ ನಾವು ಶಾಂತಿ ಸಮಿತಿ ಏರ್ಪಡಿಸಿ ಸೌಹಾರ್ದ ಏರ್ಪಡಿಸುತ್ತೇವೆ."
—ಶ್ರೀ ಭಾರತೀಯನ ಸಮಾಧಾನ.

o o o o

ಭಾರತ ಚೀನಾ- ಗಡಿಯಲ್ಲಿ ಚೀನಿಯರು ತಮ್ಮ ಸೈನ್ಯ ವ್ಯೂಹವನ್ನು ಬಲಪಡಿಸುತ್ತಿರುವ ಬಗ್ಗೆ ದೃಢವಾದ ಸೂಚನೆಗಳು ಬಂದಿವೆ. ಇದರಿಂದ ಪಶ್ಚಿಮ ಬಂಗಾಳಕ್ಕೆ ಮೊತ್ತಮೊದಲು ಅಭದ್ರತೆ ಬರುವುದೆಂದು ಗೊತ್ತಾಗಿದೆ. ಪಶ್ಚಿಮ ಬಂಗಾಳದಲ್ಲಿ ಶ್ರೀ ಅಜಯ ಮುಖರ್ಜಿಯವರ ನೇತೃತ್ವದಲ್ಲಿರುವ ಸಂಯುಕ್ತರಂಗ ಸರಕಾರದ ಸೂತ್ರಧಾರರು ಜ್ಯೋತಿ ಬಾಸು. ಎಡಕಮ್ಯೂನಿಸ್ಟ ಬಾಸು ಗೃಹಖಾತೆಯ ಮೂಲಕ ಅಶಾಂತಿ-ಅವ್ಯವಸ್ಥೆಗಳನ್ನು ಪೋಷಿಸಿ ಅವಕ್ಕೇ ಶಾಂತಿ-ವ್ಯವಸ್ಥೆಯೆಂದು ಹೆಸರಿಸುತ್ತಿದ್ದಾರೆ. ಶ್ರೀ ಮುಖರ್ಜೀ ಇದು ಅನ್ಯಾಯವೆಂದು ಸತ್ಯಾಗ್ರಹ ಹೂಡುತ್ತಾರೆಯೇ ಹೊರತು ಗೃಹಖಾತೆಯ ಮೇಲೆ ತಮ್ಮ ಪ್ರಭಾವವನ್ನು ಬೀರಲು ಅಶಕ್ತರಿದ್ದಾರೆ.

ಶ್ರೀ ಮುಖರ್ಜೀ ಆಶ್ರಮದಲ್ಲಿ ಬ್ರಹ್ಮಚಾರಿಗಳು. ರಾಜ್ಯಕೀಯದಲ್ಲಿ ಪ್ರಾಯಃ ಅವರು ಎಡಕಮ್ಯೂನಿಸ್ಟ ಕನ್ನೆಯ ಕೈ ಹಿಡಿದಿದ್ದಾರೆ—ಅದೂ ಅಗ್ನಿಸಾಕ್ಷಿಯಾಗಿ. ಈಗ ಅವರು ಪಡುತ್ತಿರುವ ಸಂಕಟವನ್ನು ನೆನೆದಾಗ ಉದ್ದಾಲಕ—ಚಂಡಿಯರ ಕತೆ ನೆನಪಿಗೆ ಬರುತ್ತದೆ. ಮುಳ್ಳಿಡದ ಮರವೇರಿದ ಮುಖರ್ಜಿ ಬಾಸುವನ್ನು ಬಿಟ್ಟುಬಿಡಲಾರರು. ಬಾಸು ಮುಖರ್ಜಿಯವರ ದುರ್ಬಲತೆಯನ್ನು ಅರಿತುಕೊಂಡಿದ್ದಾರೆ. ತಾವು ಸ್ವಚ್ಛಂದಚಾರಿಯಾಗಿದ್ದಾರೆ. ದೇಶದ ಭದ್ರತೆಗೆ ಗಂಡಾಂತರ ಒದಗುವಾಗ ರಾಜ್ಯ ಸರಕಾರ ಚೆನ್ನಾಟವಾಡುತ್ತ ಕುಳಿತಾಗ, ಕೇಂದ್ರ ಸರಕಾರವೂ ನಿಷ್ಪ್ರಯೋಜಕವಾಗುತ್ತದೆಯೋ?

ಹಿಂದಿ ಸಾಹಿತ್ಯದಲ್ಲಿ ಗುರುನಾನಕ್

ಲೇಖಕರು: ಶ್ರೀ ಆರ್. ಎಸ್. ಜಗ್ಗಿ

ಗುರುನಾನಕರು ಹದಿನೈದನೇ ಶತಮಾನದ ಕೊನೆಯ ಭಾಗದಲ್ಲಿ ಹೆಚ್ಚು ಬೆಳಕಿಗೆ ಬಂದರು. ಈ ನಂತರ ಉದಯದಿಂದಾಗಿ ದೇಶದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಚ್ಚು ಕೃತಿಗಳು ಹೊರಬಂದು ಸಾಹಿತ್ಯ ಪ್ರಪಂಚದ ಮಡಿಲನ್ನು ಸೇರಿದವು. ಬಹಳಷ್ಟು ಮಂದಿ ಸಾಹಿತಿಗಳು ಮತ್ತು ಪಂಡಿತರು ತಮ್ಮದೇ ಆದ ಶೈಲಿಯಲ್ಲಿ ಕೃತಿಗಳನ್ನು ರಚಿಸಿ ಈ ಮಹಾನ್ ವ್ಯಕ್ತಿಗೆ ತಮ್ಮ ಕಾಣಿಕೆಯನ್ನು ನೀಡಿದರು. ಗುಜರಾತಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕೃತಿಗಳು ಇವೆ, ಆದರೂ ಹಿಂದಿಯಲ್ಲಿ ಸಾಕಷ್ಟು ರಚನೆಯಾಗಿವೆ. ನಾನಕರನ್ನು ಕುರಿತು ರಚನೆಯಾಗಿರುವ ಕೃತಿಗಳನ್ನು "ಪುರಾತನ ಸಾಹಿತ್ಯ" ಮತ್ತು 'ಆಧುನಿಕ ಸಾಹಿತ್ಯ' ಎಂಬುದಾಗಿ ಎರಡು ಗುಂಪುಗಳಾಗಿ ವಿಗಂಡಿಸಿದ್ದಾರೆ. ಗುರು ನಾನಕರ ಕಾಲದಿಂದ 20ನೆಯ ಶತಮಾನದವರೆಗೆ ಪ್ರಕಟವಾಗಿರುವ ಕೃತಿಗಳನ್ನು ಪುರಾತನ ಸಾಹಿತ್ಯವೆಂದೂ 20ನೆ ಶತಮಾನದಿಂದೀಚೆಗೆ ರಚಿಸಿರುವ ಸಾಹಿತ್ಯವನ್ನು 'ಆಧುನಿಕ ಸಾಹಿತ್ಯ'ವೆಂದೂ ಕರೆಯುವುದುಂಟು.

"ಜನಂಸಖಿ" "ಪುರಾತನ ಸಾಹಿತ್ಯ"ದಲ್ಲಿ ಮೇರು ಕೃತಿಗಳು. ಇವುಗಳಲ್ಲಿ ಗುರು ನಾನಕರ ಒಡನಾಡಿಯಾಗಿದ್ದ ಬಾಯಿ ಬಾಲಾ ಅವರಿಂದ ಸಂಗ್ರಹಿಸಲ್ಪಟ್ಟ ವಿಷಯವನ್ನು ತಿಳಿಸಲಾಗಿದೆ. ಈ ಜನಂಸಖಿಗಳನ್ನು ಗುರು ಅಂಗದ್ ಅವರ ಮಾರ್ಗದರ್ಶನದ ಮೇರೆಗೆ ರಚಿಸಲಾಗಿದೆ. ಗುರುನಾನಕರ ಜೀವನ ಚರಿತ್ರೆ, ಉಪದೇಶಗಳು, ಅವರು ಭೇಟಿ ಇತ್ತ ಸ್ಥಳಗಳು ಇವೇ ಮೊದಲಾದವುಗಳನ್ನು "ಜನಂಸಖಿ"ಗಳು ತಿಳಿಸುತ್ತವೆ. "ಜನಂಸಖಿ"ಗಳ ಮೂಲಪ್ರತಿಗಳು ಈಗಿಲ್ಲವಾದರೂ, ಅದು ಮೂರು ಭಾಗಗಳಲ್ಲಿ ದೊರೆತಿವೆ. ಈ ಕೃತಿಯ ಹಸ್ತಪ್ರತಿಗಳು "ಗುರುಮುಖಿ" ಲಿಪಿಯಲ್ಲಿದೆ ಗದ್ಯರೂಪದಲ್ಲಿರುವ ಈ ಜನಂಸಖಿಗಳು "ನಾನಕರ ವಾಣಿಯನ್ನು ಪ್ರತಿಬಿಂಬಿಸುತ್ತದೆ. ಸೋಹರ್‌ಬಾನ್ ಜನಂಸಖಿ ಎಂಬುದ ಅಷ್ಟೇ ಪ್ರಮುಖ ಕೃತಿ.

ಜನಂಸಖಿಯಷ್ಟೇ ಅಲ್ಲದೆ ಹಿಂದಿ ಸಾಹಿತ್ಯದಲ್ಲಿ ನಾನಕರನ್ನು ಕುರಿತ ಇತಿಹಾಸ ಲೇಖನಗಳಿವೆ 1776ರಲ್ಲಿ ಪ್ರಕಟವಾದ "ಮಹಿಮಾಪ್ರಕಾಶ" ಮತ್ತು "ನಾನಕ ವಿಜಯ" ಇವು ಮುಖ್ಯವಾದವು. "ನಾನಕ ವಿಜಯ"ವನ್ನು ಸಂತರೇಣು ಅವರು ಬರೆದಿದ್ದಾರೆ. ಇದರಲ್ಲಿ 3720 ಪುಟಗಳಿವೆ. ಬಾಯಿ ಸಂತೋಷ್‌ಸಿಂಗರು 1823ರಲ್ಲಿ ಬರೆದಿರುವ "ಗುರುನಾನಕ ಪ್ರಕಾಶ್" ಈಗ ದೇವನಾಗರೀ ಲಿಪಿಯಲ್ಲಿ ದೊರೆಯುತ್ತದೆ. ಇಷ್ಟೇ ಅಲ್ಲದೆ ಸೋಧಿ ಮೆಹರ್‌ಬಾನ್, ಸ್ವಾಮಿ ಆನಂದ್ ಘನ್ ಮತ್ತು ಕೆಲವು ನಿರ್ಮಲ ಸಂತರು ರಚಿಸಿರುವ ಕೃತಿಗಳು ಗುರುಮುಖಿ ಲಿಪಿಯಲ್ಲಿ ಅಂದರೆ ಪ್ರಾಚೀನ ಹಿಂದಿ ಭಾಷೆಯಲ್ಲಿವೆ.

ಆಧುನಿಕ ಬರಹಗಾರರು

ಡಾ| ಜಯರಾಮ ಮಿಶ್ರ ಆಧುನಿಕ ಬರಹಗಾರರಲ್ಲಿ ಅಗ್ರಗಣ್ಯರು. ಇವರ "ನಾನಕವಾಣಿ"ಯಲ್ಲಿ ಎಪ್ಪತ್ತಾರು ಪುಟಗಳ ಮುನ್ನುಡಿ ಇದೆ. ಮುನ್ನುಡಿಯಲ್ಲಿ ನಾನಕರ ಉಪದೇಶಗಳು, ಪದ್ಯಗಳ ಮಹಾತ್ಮ್ಯ ಮತ್ತು ನಾನಕರನ್ನು ಕುರಿತು ಇರುವ ಕೃತಿಗಳ ಬಗ್ಗೆ ಸವಿಸ್ತಾರವಾಗಿ ಲೇಖಕರು ಬರೆದಿದ್ದಾರೆ. ಡಾ| ಮನಮೋಹನ್ ಸೆಹಗಲ್ ಅವರು "ಜೀವ ಮತ್ತು ಮಾಯ" ಇವುಗಳ ಬಗ್ಗೆ ನಾನಕರ ಅಭಿಪ್ರಾಯ ಹಾಗು "ಭಾರತದಲ್ಲಿ ಭಕ್ತಿ ಮಾರ್ಗ ಚಳುವಳಿ" ಇವುಗಳ ಬಗ್ಗೆ ಪ್ರೌಢ ಪ್ರಬಂಧವನ್ನು 'ಸಂತಕಾಲದಿಂದ ದಾರ್ಶನಿಕ ವಿಶ್ಲೇಷಣೆ' ಎಂಬ ಶೀರ್ಷಿಕೆಯಲ್ಲಿ ಬರೆದಿದ್ದಾರೆ. ಈ ಪ್ರಬಂಧ ರಚನೆಯಿಂದಾಗಿ 1955ರಲ್ಲಿ ಲೇಖಕರು ಡಾಕ್ಟರೇಟ್ ಪ್ರಶಸ್ತಿ ಗಳಿಸಿದರು. ಇದೇ ರೀತಿ ಹಿಂದಿ ನಿರ್ಗುಣ ಸಹಿತ ಸ್ರೇಣಿ ಸ್ರೋತ ಎಂಬ ಪ್ರಬಂಧ ಗುರುನಾನಕ್ ಮತ್ತು ಕಬೀರರನ್ನು ಕುರಿತದ್ದಾಗಿದೆ. ಇದನ್ನು ಬರೆದವರು ಡಾ| ಕೆರ್ಬನ್‌ಲಾಲ್ ಶರ್ಮ. ಇವರಿಗೂ ಸಹಾ ಈ ಕೃತಿಯಿಂದಾಗಿ 1962ರಲ್ಲಿ ಡಾಕ್ಟರೇಟ್ ಗೌರವ ಪ್ರಶಸ್ತಿ ನೀಡಲಾಗಿದೆ. ಈ ಪ್ರಬಂಧ ಇನ್ನೂ ಪುಸ್ತಕರೂಪದಲ್ಲಿ ಬಂದಿಲ್ಲ. ಇಷ್ಟೇ ಅಲ್ಲದೆ ನಾನಕರ ಬಗ್ಗೆ ಹಿಂದಿ ಭಾಷೆಯಲ್ಲಿ ಅಸಂಖ್ಯಾತ ಕೈಪಿಡಿಗಳು ಪ್ರಕಟವಾಗಿದೆ. ಪರಶುರಾಂ ಚತುರ್ವೇದಿಯವರ 'ಉತ್ತರ ಭಾರತದ ಸಂತ ಪರಂಪರೆ' ಗುರುದರ್ಶನ ಸಿಂಗ್ ದಜೀತಿಯ ಅವರ "ಸಂತ ಸಾಹಿತ್ಯ' ಮತ್ತು "ಪಂಜಾಬ್ ಪ್ರಾಂತೀಯ ಹಿಂದಿ ಸಾಹಿತ್ಯ ಕಾ ಇತಿಹಾಸ', "ಪ್ರಾಣ ಸಂಗ್ಲಿ" ಇವು ಪ್ರಧಾನವಾದವು. ಅನೇಕ ಮಂದಿ ಲೇಖಕರು ಪಂಜಾಬಿ ಭಾಷೆಯಿಂದ ಅನುವಾದ ಮಾಡಿರುವ ಕೃತಿಗಳೂ ಹಿಂದಿ ಸಾಹಿತ್ಯದಲ್ಲಿವೆ. ಬಾಯಿ ವೀರಸಿಂಗರು ಬರೆದು ಪ್ರೊ| ಹರ್ಮಾಪ್ ಸಿಂಗ್ ಅವರು ಅನುವಾದ ಮಾಡಿರುವ "ಗುರುನಾನಕ ಚಮತ್ಕಾರ್", ಡಾ| ಗೋಪಾಲ ಸಿಂಗರ "ಗುರುನಾನಕ ದೇವ್"— ಇವೇ ಮೊದಲಾದುವು ಅನುವಾದ ಕೃತಿಗಳಲ್ಲಿ ಮುಖ್ಯವಾದುವು.

ಸಂಗ್ರಾಹ್ಯ ಸಂಕಲನಗಳು			
ಶಿಲ್ಪಿ	1—50	ನುಡಿಮುತ್ತುಗಳು	1—50
ಪ್ರತಿಜ್ಞಾ ಪೂರ್ತಿ	1—00	ರಂಜಗದ್ಯಾಯ	2—00
ನೀತಿ ವಿನೋದ ಕತೆಗಳು	1—00	ಪುಷ್ಪಗಾನ	2—00
ಕಥಾವಳಿ	2—00	ಮುತ್ತಿನ ಮಾಲೆ	1—80
ಪರಿಚಯ ಪ್ರಬಂಧಗಳು	1—00	ಹೂ ಗೊಂಚಲು	1—70
ನಾಟಕ ಪ್ರಪಂಚ	1—50	ಏಕಾಂಕ ನಾಟಕಗಳು	1—00
ಜೀವನಕಲೆ	1—00	ಭಾರತದ ನಾಲ್ಕುಮುಖಗಳು	1—00
ಅನುವಾದಿತ ಕತೆಗಳು	1—20	ದೇಶವಿದೇಶದ ಮಹಾ ಜೀವಿಗಳು	1—80
ಕಂಚ ಸುಮನ	1—20		
ಹೆಂಗುಸರ ಕತೆಗಳು	2—00		

ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಕ್ಷಗಾನ "ಭಕ್ತ ಸುಧನ್ವ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ 'ಭಕ್ತ ಸುಧನ್ವ' ಎಂಬ ಕಥಾಭಾಗದ ಯಕ್ಷಗಾನ ಕೂಟವು ಕಳೆದ ತಾ. 27ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಬಂಡ್ಯಡ್ಕ ಲಕ್ಷ್ಮಣಗೌಡರ ಮತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಸರ್ವಶ್ರೀ ಕೀ. ವ. ಕೇಶವ, ಡಿ. ಗೋಪಾಲಕೃಷ್ಣ ಭಟ್, ಡಾ| ವಿಶ್ವವಿನೋದ ಭಟ್, ಅಣ್ಣಯ ಗೌಡ (ಹಿಮ್ಮೇಳನ) ಟಿ. ಕೆ. ಪರಮೇಶ್ವರ ಕಳೆಯೂರು, ನಾರಾಯಣ ನಾಯಕ್ ಮಾಸ್ತರ್, ವೆಂಕಪ್ಪ ಬಾಂಗೇಮಾರ್, ಕೆ.ಎ. ಭಂಡಾರಿ, ಎಂ. ಶೀನಪ್ಪಗೌಡ ಎಂ. ರಾಂ ಕಪ್ಪರ್ಕೈ, ಸಾಂತಪ್ಪಗೌಡ ಮಾಸ್ತರ್, ಲಕ್ಷ್ಮಣಗೌಡ ಮೊದಲಾದವರು ಭಾಗವಹಿಸಿದ್ದರು.

ವಿಜ್ಞಾನ ಸಂಘದ ಸಭೆ

ಉಡುಪಿಯ ಕಡಿಯಾಳಿ ಜೂನಿಯರ್ ಎಲಿಮೆಂಟರಿ ಶಾಲೆಯ ಬಾಲಭಾಸ್ಕರ ವಿಜ್ಞಾನ ಸಂಘದ ಸಭೆಯು ಶ್ರೀ ಬಿ. ವಾಮನ ಭಟ್ಟರ ಅಧ್ಯಕ್ಷತೆಯಲ್ಲಿ ತಾ. ೨೪ರಂದು ಜರಗಿತು.

ಶ್ರೀ ಯು. ಕೆ. ದಾಮೋದರ ಆಚಾರ್ಯರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಎಚ್. ರಾಘವೇಂದ್ರ ಕಾಮತರು ಗತವರ್ಷದ ವರದಿಯನ್ನು ಓದಿದರು.

ರಾಮಚಂದ್ರ ಕಾಮತರು ವಿಜ್ಞಾನ ಸಂಘದ ಉದ್ದೇಶಗಳನ್ನು ವಿವರಿಸಿದರು. ರಾಘವೇಂದ್ರ ಆಚಾರ್ಯರು ಗೆಲಿಲಿಯೋನ ಜೀವನ ವೃತ್ತಾಂತವನ್ನೂ ಜಯಂತಿ ಬ್ಯಾಯವರು ಮೇಡಂ ಕ್ಯೂರಿಯ ವಿಷಯವನ್ನೂ ವಿವರಿಸಿದರು.

ಅಧ್ಯಕ್ಷರು ವಿಜ್ಞಾನ ಸಂಘಗಳ ಔಚಿತ್ಯ, ಅವು ಮಾಡಬಹುದಾದ ಕೆಲಸಗಳು, ವಿಜ್ಞಾನಿಗಳು ಮಾಡಿದ ಸಂಶೋಧನೆಗಳ ಕುರಿತು ಅನುಭವಾತ್ಮಕ ಭಾಷಣ ಮಾಡಿದರಲ್ಲದೆ, ಈ ಸಂಘದ ಚಟುವಟಿಕೆಗಳ ಬಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಧನ್ಯವಾದ ಗೈದರು.

ಕಲಾವಿದ ಎಂ. ರಂಗನಾಥ ಭಟ್ಟರಿಗೆ ಸನ್ಮಾನ

ಉಡುಪಿ, ಕಳೆದ ತಾ| 20ರಂದು, ಪ್ರಸಿದ್ಧ ನಾಟಕ ಕಲಾವಿದ ಶ್ರೀ ಮುಂಡಜೆ ರಂಗನಾಥ ಭಟ್ಟರನ್ನು ಉಡುಪಿಯ ರಂಗಭೂಮಿ ಸಂಸ್ಥೆಯವರು ಶ್ರೀ ಎಸ್. ಬಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವಿಸಿದರು. ಆರಂಭದಲ್ಲಿ, ಡಾ| ಬಿ. ಬಿ. ಶೆಟ್ಟರು, ಸ್ವಾಗತಿಸಿದ ಬಳಿಕ ಶ್ರೀ ಕೆ. ಎಸ್. ಭಟ್ ಶಿರೂರುಪಾಲರು ಮುಂಡಾಜೆಯವರ ಪರಿಚಯ ಭಾಷಣ ಮಾಡಿದರು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು, ಮಾನಪತ್ರ ಓದಿದರು. ಶ್ರೀ ಭಟ್ಟರು ತಮ್ಮನ್ನು ಸನ್ಮಾನಿಸಿದ್ದಕ್ಕೆ ವಂದನೆಗಳನ್ನರ್ಪಿಸಿ, ರಂಗಭೂಮಿಯ ಕಲಾಸೇವೆ ಮುಂದೆ ಮರಿಯಲಿ ಸುತ್ತಿರಲಿ ಎಂದು ಹಾರೈಸಿದರು. ಅಧ್ಯಕ್ಷರ ಭಾಷಣದ ನಂತರ ರಾತ್ರಿ ರಂಗಭೂಮಿಯ ಕಲಾವಿದರು ಬಾಹುಕ ಧೀರ ನಾಟಕವನ್ನು ಅಭಿನಯಿಸಿದರು.

ಮಂಗಳೂರಲ್ಲಿ ಮಹಿಳಾ ಪರಿಷತ್ತು

ಅಖಿಲ ಭಾರತ ಮಹಿಳಾ ಪರಿಷತ್ತಿನ 38ನೇ ಅಧಿವೇಶನವು ಮಂಗಳೂರಲ್ಲಿ ನಡೆಯಿತು. ಸ್ವಾಗತ ಸಮಿತಿಯ ಅಧ್ಯಕ್ಷೆ ಶ್ರೀಮತಿ ಮಾಲ್ತಾ ಜಿ ಪಂಡಿತ್ ಅವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಸಂದೇಶಗಳನ್ನು ಓದಿದರು. ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಲೀಲಾ ಡಿ. ಮೆನನ್ನರು ವರದಿ ಓದಿದರು. ಅಧ್ಯಕ್ಷೆಯವರು ಭಾಷಣಮಾಡುತ್ತ "ನೈತಿಕ ಪತನ, ವಿದ್ಯಾರ್ಥಿ ಅಶಿಸ್ತು, ಜಾತೀಯ ಪ್ರಾಂತೀಯ ಮತ್ತು ಭಾಷೀಯ ದುರ್ಘಟನೆಗಳನ್ನು ಪ್ರಸ್ತಾಪಿಸಿ ಈ ಬಗ್ಗೆ ತಮ್ಮ ಚಿಂತನೆಯನ್ನು ವ್ಯಕ್ತಪಡಿಸಿದರು. ರಾಜ್ಯದ ಸಮಾಜ ಕಲ್ಯಾಣ ಉಪ ಸಚಿವೆ ಶ್ರೀಮತಿ ಬಿಸಿವ ರಾಜೇಶ್ವರಿಯವರು ಸ್ಮಾರಕ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಪ್ರಧಾನ ಅತಿಥಿಯಾದ ಡಾ| ಸುಶೀಲ ನಯ್ಯರ್ ಮಾತನಾಡುತ್ತಾ, ಭಾರತೀಯ ಪರಂಪರೆಗೆ ಒಪ್ಪುವ ವಿಶಾಲ ಮನೋಭಾವನೆಯ ಸಮಾಜವಾದ ನಮಗೆ ಬೇಕೆಂದರು. ಪದ್ಮಶ್ರೀ ಡಾ। ಮಾಧವ ಪೈಯವರು "ತೊಟ್ಟಿಲು ತೂಗುವ ಕೈ ರಾಜ್ಯಭಾರ ಮಾಡಬಲ್ಲದು. ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಮಹತ್ವದ ಸ್ಥಾನವಿದೆ" ಎಂದು ಹೇಳಿದರು. ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

ಈ ಸಮ್ಮೇಳನದಲ್ಲಿ ಕೆಲವು ವಿದೇಶೀಗಳಿಂದ ಪೋಷಣೆ ಪೌಷ್ಟಿಕ ಆಹಾರ, ಚಿಕಿತ್ಸಾ ಸೌಲಭ್ಯ, ಶಿಕ್ಷಣ, ಕಂಪೇಶಿ, ಸ್ವಚ್ಛ ವಸ್ತ್ರ ಮತ್ತು ಆರ್ಥಿಕ ಶೋಷಣೆಯ ವಿರುದ್ಧ ರಕ್ಷಣೆ, ಹಾಗೂ ಅಂಗ ವಿಕಲರಿಗೆ ವಿಶೇಷ ಸೌಕರ್ಯಗಳನ್ನು ಒದಗಿಸುವ ಪ್ರಣಾಳಿಕೆಯೊಂದನ್ನು ಲೋಕ ಸಭೆ ರಚಿಸಬೇಕೆಂದು ಸಮ್ಮೇಳನವು ಒತ್ತಾಯ ಮಾಡಿತು. ದೇಶದಲ್ಲಿ ಏರುತ್ತಿರುವ ಜನ ಸಂಖ್ಯೆಯ ಬಗ್ಗೆ ಕಳವಳವನ್ನೂ, ಗರ್ಭಪಾತ ಸಮಿತಿಯ ಶಿಫಾರಸುಗಳಿಗೆ ಬೆಂಬಲವನ್ನೂ ವ್ಯಕ್ತಪಡಿಸಿತು. ಶಿಕ್ಷಣ ಪ್ರಸಾರದಲ್ಲಿ ವಿಶೇಷ ಆಸಕ್ತಿ ವಹಿಸಬೇಕೆನ್ನುವ, ಸಮಾಜ ವಿರೋಧಿ ಶಕ್ತಿಗಳನ್ನು ಹತ್ತಿಕ್ಕುವ ತೊಂದರೆಗೊಳಗಾದ ಸ್ತ್ರೀಯರಿಗೆ ನೆರವು ನೀಡುವ, ಆಹಾರ ಪದಾರ್ಥಗಳಲ್ಲಿ ಬೆರಕೆ ತಪ್ಪಿಸಬೇಕೆನ್ನುವ, ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು ನೀಡಬೇಕೆನ್ನುವ ಇತರ ಗೊತ್ತುವಳಿಗಳನ್ನು ಸಮ್ಮೇಳನವು ಅಂಗೀಕರಿಸಿತು.

ಗೌರವಾರ್ಪಣೆ

ಅಕೆಡೆಮಿ ಆಫ್ ಜನರಲ್ ಎಜುಕೇಶನ್ ಸಂಪ್ರದಾಯದಂತೆ ಹೊಸ ವರ್ಷಾರಂಭದಂದು ಡಾ| ಎಂ. ನರಸಿಂಹ ಪೈ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀ ಎಂ. ವಾಸುದೇವರಾವ್ ಮತ್ತು ಶ್ರೀ ಥಿಯೋಡರ್ ಸೋಯಿನ್ಸ್ ಇವರನ್ನು ಇವರು ಕ್ರಮವಾಗಿ ವಿಜ್ಞಾನ, ಸಮಾಜಸೇವೆ, ಶಿಕ್ಷಣ ಮತ್ತು ಕೈಗಾರಿಕೆ ರಂಗಗಳಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಸತ್ಕರಿಸಿ ಪ್ರಶಸ್ತಿ ಪತ್ರ ನೀಡಿತು.

ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಚಂದ್ರಶೇಖರ್ ಅವರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಡಾ|| ಟಿ. ಎಂ. ಎ. ಪೈಯವರು ಹಾರಾರ್ಪಣೆ ಮಾಡಿದರು. ಮುಖ್ಯ ಅತಿಥಿಗಳು ತಮಗೆ ನೀಡಿದ ಗೌರವಕ್ಕಾಗಿ ಕೃತಜ್ಞತೆಗಳನ್ನು ಸಮರ್ಪಿಸಿದರು. "ಗುರಿಯಲ್ಲಿ ಶ್ರದ್ಧೆಹೊಂದಿ ಆತ್ಮ ವಿಶ್ವಾಸದಿಂದ ಮುಂದುವರಿದರೆ ಜೀವನದಲ್ಲಿ ಹೆದರಿಕೆಯನ್ನು ಗೆಲ್ಲಬಹುದು" ಎಂದು ಡಾ| ನರಸಿಂಹ ಪೈ ತಿಳಿಸಿದರು. ಶ್ರೀಮತಿ ಚಟ್ಟೋಪಾಧ್ಯಾಯರು ಸಮಾಜ ಹಾಗೂ ರಾಷ್ಟ್ರಸೇವೆ ಮಾಡಲು ಯುವಕರು ಮುಂದೆ ಬರಬೇಕೆಂದರು. ಶ್ರೀ ರಾಯರು ಮಣಿಪಾಲದ ವಿದ್ಯಾಸಂಸ್ಥೆಗಳನ್ನು 'ವಿದ್ಯಾ ಗಂಗೋತ್ರಿ'ಯೆಂದು ವರ್ಣಿಸಿದರು. ಶ್ರೀ ಸೋಯಿನ್ಸರು ಶ್ರೀಮಂತನಾಗಬಯಸುವುದು ತಪ್ಪಲ್ಲವೆಂದೂ ಕಷ್ಟಪಟ್ಟು ದುಡಿದೇ ಶ್ರೀಮಂತನಾಗಬೇಕೆಂದೂ ಅಭಿಪ್ರಾಯ ಪಟ್ಟರು. ಕೊನೆಗೆ ಶ್ರೀ ವಿ. ಚಂದ್ರಶೇಖರ್ ಧನ್ಯವಾದವರ್ಪಿಸಿದರು.

ಸಮಾರಂಭದಲ್ಲಿ ಅಕೆಡೆಮಿಯ ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈ ಅವರು ಅತಿಥಿಗಳ ಗುಣಗಾನ ಮಾಡಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರು ನಗರದಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಜನರಲ್ ಬಾಡಿ ಸಭೆಯು 21-12-69ರಂದು ನಿಲಯದ ಅಧ್ಯಕ್ಷರಾದ ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ್ದು ಮುಂದಿನ ಸಾಲಿಗೆ ಈ ಕೆಳಗೆ ಕಂಡ ಆಡಳಿತ ವರ್ಗವನ್ನು ಚುನಾಯಿಸಿತು.

ಶ್ರೀಗಳಾದ ಕೆ. ಪಿ. ದಿನಕರ ಆಳ್ವ ಅಧ್ಯಕ್ಷರು, ಪಿ. ಸಿ. ಶ್ರೀಕಂಠಯ್ಯ ಉಪಾಧ್ಯಕ್ಷರು, ಎ ರಾಮಣ್ಣ ಕಾರ್ಯದರ್ಶಿ, ಎಸ್. ವಸಂತ ಶೆಟ್ಟಿ ಖಜಾಂಚಿ, ಎಸ್. ಬೈರಪ್ಪ, ಕೆ. ಸಂಭ ಶೆಟ್ಟಿ, ಕೆ. ಪಿ. ಜಂಬು ಗೌಡ, ಎನ್. ಶಂಕರ ಪೂಂಜ, ಕೆ. ದಿವಾಕರ ಹೆಗ್ಡೆ, ದೊಡ್ಡ ತಮ್ಮಯ್ಯ, ಡಾ| ಎಸ್. ಟಿ. ವೆಂಕಟಯ್ಯ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳು.

ಸಭೆಯಲ್ಲಿ ಕಾರ್ಯದರ್ಶಿಗಳು ಮಂಡಿಸಿದ ಹಿಂದಿನ ಸಾಲಿನ ಆಡಳಿತ ವರದಿ ಹಾಗೂ ಲೆಕ್ಕಪತ್ರಗಳು ಅಂಗೀಕೃತವಾದವು.

ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತ ಬಯಸಿದರು.

ಹೊಸ ಕಟ್ಟಡ— ನಿಲಯದ ಹೊಸ ಕಟ್ಟಡದ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಈ ಕಟ್ಟಡಕ್ಕೆ ಮಹಾಜನರ ಸಹಾಯ ಸಹಕಾರವನ್ನು ನಿರೀಕ್ಷಿಸಲಾಗಿದೆ.

ವಾರ್ಷಿಕೋತ್ಸವ

ಕಟೀಲು:— ಸ್ಥಾನೀಯ ಶ್ರೀ ದುರ್ಗಾ ಪರಮೇಶ್ವರೀ ದೇವಳ ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾರೀಕು 30-12-69ರಂದು ಸ್ಥಾನೀಯ ಆರೋಗ್ಯ ಕೇಂದ್ರಾಧಿಕಾರಿ ಡಾ| ಎಂ. ಎಸ್. ಭಟ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಸಂಘದಧ್ಯಕ್ಷ ಶ್ರೀ ವೈ. ಶ್ರೀನಿವಾಸರಾಯರಿಂದ ಸ್ವಾಗತ ಭಾಷಣ, ಶ್ರೀ ಕೆ. ಶ್ರೀನಿವಾಸ ಆಸ್ರಣ್ಣರಿಂದ ಅತಿಥಿಗಳಿಗೆ ಹಾರಾರ್ಪಣೆಯೂ ಆಯಿತು.

ಕಾರ್ಯದರ್ಶಿ ಶ್ರೀ ವೈ. ಉಮೇಶ ರಾಯರು ವರದಿವಾಚನ ಗೈದರು. ಆಟೋಟಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣಾನಂತರ ಶ್ರೀಗಳಾದ ಕೊಡೆತ್ತೂರು ಅನಂತ ಪದ್ಮನಾಭ ಉಡುಪ, ಮಂಗಳೂರು ಪೊಲಿಟೆಕ್ನಿಕ್‌ನ ವಿಷ್ಣು ಭಟ್ಟ, ಮತ್ತು ವೈ. ಜಿ. ಭಟ್ಟರು ಸಂಘದ ಶ್ರೇಯಸ್ಸನ್ನು ಹಾರೈಸಿದರು.

ಅಧ್ಯಕ್ಷರ ಭಾಷಣಾನಂತರ ಮನರಂಜನಾ ಕಾರ್ಯಕ್ರಮಗಳಾದುವು. ಕೊನೆಗೆ ವೈ. ಉಮೇಶ ರಾಯರು ಧನ್ಯವಾದಾರ್ಪಣೆಗೈದರು.

ನೂತನ ಅಧಿಕಾರೀ ವರ್ಗ

ಧರ್ಮ ಸಂದೇಶ ಪೋಷಣೀ ಸಭೆಯ ಆಶ್ರಯದಲ್ಲಿ ತಾ. 1-1-70ರಂದು ಕಾರ್ಯಾಲಯದಲ್ಲಿ (ಶ್ರೀ ಅಗಮಿಳ ಕೃಷ್ಣದೀಕ್ಷಿತರ ಮನೆ) ಕಾರ್ಯ ನಿರ್ವಾಹಕ ಸಮಿತಿಯ ಸಭೆಸೇರಿತು. ವಿದ್ವಾನ್ ಎನ್. ಮಲ್ಲಿಕಾರ್ಜುನ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. 'ಧರ್ಮ ಸಂದೇಶ' ಪತ್ರಿಕೆಯನ್ನು ಪುನರುಜ್ಜೀವನಗೊಳಿಸಬೇಕೆಂದೂ, ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಬೇಕೆಂದೂ ಇವುಗಳ ವ್ಯವಸ್ಥೆಗಾಗಿ ಒಂದು ಕಾರ್ಯಕಾರಿ ಸಮಿತಿ ಮತ್ತು ಒಂದು ಸಂಪಾದಕ ಮಂಡಲಿ ಇರತಕ್ಕದ್ದೆಂದೂ ತೀರ್ಮಾನಿಸಲಾಯಿತು. ಶ್ರೀ ಬ. ನ. ಸುಂದರರಾಯರನ್ನು ಈ ಸಮಿತಿಯ ಸಂಚಾಲಕರನ್ನಾಗಿಯೂ ಹಾಗೂ ಪತ್ರಿಕೆಯ ಸಹ ಸಂಪಾದಕರನ್ನಾಗಿಯೂ ಸರ್ವಾನುಮತದಿಂದ ಚುನಾಯಿಸಲಾಯಿತು.

ಈ ಕೆಳಗೆ ಕಂಡ ಮಹನೀಯರು ಕಾರ್ಯಕಾರೀ ಸಮಿತಿಗೆ ಹಾಗೂ ಸಂಪಾದಕ ಮಂಡಲಿಗೆ ಚುನಾಯಿತರಾದರು. ಶ್ರೀಗಳಾದ ಎಸ್. ಮಲ್ಲಿಕಾರ್ಜುನ ಶಾಸ್ತ್ರಿ, ಡಾ| ಕೆ. ಎಸ್. ನಾಗರಾಜನ್, ಪಿ. ಜಿ. ಶ್ರೀನಿವಾಸನ್, ಎನ್ ರಂಗನಾಥ ಶರ್ಮ, ಶ್ರೀ ಟಿ. ಕೇಶವ ಭಟ್ಟರು, ಅಗಮಿಳ ಕೃಷ್ಣ ದೀಕ್ಷಿತರು, ಶ್ರೀನಿವಾಸ ಗೋಪಾಲಾಚಾರ್ಯರು, ಶ್ರೀ ಬ. ನ. ಸುಂದರರಾವ್, ಶ್ರೀ ಎಂ. ಆರ್. ಶ್ರೀನಿವಾಸರಾವ್, ಶ್ರೀ ಜಿ. ವಿಶ್ವೇಶ್ವರಯ್ಯನವರು ಮತ್ತು ಚಂದ್ರಶೇಖರರು.

ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್ ಪುತ್ತೂರು, ದ. ಕ.

ರೆಂಟ್ ಅರ್ಜಿ ನಂಬ್ರ 408/1969

ತನಿಖೆ ತಾರೀಕು 16-1-1970

ಮಣಿ ವೆಂಕಟೇಶ್ವರ ಭಟ್ಟ — ಅರ್ಜಿದಾರ

Vs

ಎರ್ಮ್. ಶಂಕರನಾರಾಯಣ ಮಯ್ಯ ಮತ್ತು ಇತರರು — ಎದುರಿಯರು

ನೋಟೀಸು

ಎರ್ಮ್. ಶಿವರಾಮಯ್ಯ, ಬಾಡೂರು ಗ್ರಾಮ, ಕಾಸರಗೋಡು ತಾಲೂಕು, ಕೇರಳ ರಾಜ್ಯ, ಪೋಸ್ಟ್ ಧರ್ಮತಡ್ಕ.

ಅರ್ಜಿದಾರರು ನಿಮ್ಮ ಮೇಲೆ ಮತ್ತು ಇತರರ ಮೇಲೆ ಪುತ್ತೂರು ಲ್ಯಾಂಡ್ಸ್ ಟ್ರಿಬ್ಯೂನಲ್‌ನಲ್ಲಿ ರೆಂಟ್ ಅರ್ಜಿ ನಂಬ್ರ 408/1969 ಎಂಬ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದ್ರಿ ವ್ಯವಹರಣೆಯು ತಾ. 16-1-70 ರಂದು ನಿಮ್ಮ ಹಾಜರಾತಿ ಬಗ್ಗೆ ಇದೆ. ನೀವು ಆ ದಿನ ಸದ್ರಿ ಟ್ರಿಬ್ಯೂನಲ್‌ನಲ್ಲಿ ಹಾಜರಾಗಿ ಆಕ್ಷೇಪಗಳೇನಾದರೂ ಇರುವುದಾದರೆ ದಾಖಲು ಮಾಡಿ, ತನಿಖೆಗೆ ತಯಾರಾಗಬೇಕೆಂದು ಈ ಮೂಲಕ ನಿಮಗೆ ತಿಳಿಸಲಾಗಿದೆ. ತಾ. 16-1-70ರಂದು ಬೆಳಗೆ 11 ಗಂಟೆಗೆ ನೀವು ಟ್ರಿಬ್ಯೂನಲ್‌ನಲ್ಲಿ ಹಾಜರಾಗಬೇಕಾದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯವಹರಣೆಯು ಮುಂದುವರಿಯುತ್ತದೆ, ತಿಳಿದಿರಲಿ.

ಎ. ಪಿ. ಗೌರೀಶಂಕರ
ಅರ್ಜಿದಾರ ಎಡ್ವೋಕೇಟ್

ಪುತ್ತೂರು, ದ.ಕ. 12-12-'69

ಡಿಸೆಂಬರ್ ಮುಗಿಯಿತು

ನಿಮ್ಮ ರೇಡಿಯೋ / ಟೆಲಿವಿಷನ್ ಲೈಸನ್ಸನ್ನು

ಈಗಲೇ ನವೀಕರಿಸಿ

- ಸರತಿಸಾಲಿನಲ್ಲಿ ನಿಲ್ಲಬಹುದಾದ ಪ್ರಸಂಗವನ್ನು ನಿವಾರಿಸಿ.
- ಜನವರಿ ಕೊನೆಯವರೆಗೂ ಕಾದು ದಂಡ ತೆತ್ತಲು ಆಸ್ಪದ ಕೊಡಬೇಡಿ.
- ಮೂರರಿಂದ ಐದು ವರ್ಷಗಳ ವರೆಗಿನ ರೇಡಿಯೋ ಲೈಸನ್ಸ್ ನವೀಕರಣಕ್ಕೆ ರಿಯಾಯಿತಿ ಉಂಟು.
- ನೀವು ಬೇರೆಯ ಊರಿನಲ್ಲಿ ನೆಲೆಸುವ ಸಂಭವವಿದ್ದರೆ ಹತ್ತಿರದ ಹೆಡ್ ಅಥವಾ ಸಬ್ ಪೋಸ್ಟ್ ಆಫೀಸಿನಲ್ಲಿ ನಿಮ್ಮ ಲೈಸನ್ಸ್ ಕೊಟ್ಟು ಅದರ ವರ್ಗಾವಣೆ ಮತ್ತು ನವೀಕರಣವನ್ನು ಮಾಡಿಸಿ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

ನವ ವರುಷದ ಉಲ್ಲಾಸದಾಯಕ ಶುಭಾಶಯಗಳು

ಸಿಂಡಿಕೇಟ್ ಬ್ಯಾಂಕ್

ವೃದ್ಧಿಹೊಂದುವ ರೀತಿಯಲ್ಲಿ ರಾಷ್ಟ್ರೀಯ ಸೇವೆಗಾಗಿ ತನ್ನನ್ನೇ ಸಮರ್ಪಿಸಿದೆ.

ಜಾಲದಂತೆ ಭಾರತಾದ್ಯಂತ ಹರಡಿರುವ 355 ಶಾಖೆಗಳು

ಆಂಧ್ರ ಪ್ರದೇಶ	....	....	35
ಗುಜರಾಥ್	....	....	3
ಕೇರಳ	....	....	39
ಮಹಾರಾಷ್ಟ್ರ	....	....	25
ಮೈಸೂರು	....	....	191
ತಮಿಳ್ನಾಡು	....	....	30
ಪಶ್ಚಿಮ ಬಂಗಾಳ	....	....	2
ಯೂನಿಯನ್ ಟೆರ್ರಿಟರೀಸ್ (ಅಂಡಮಾನ್ ದ್ವೀಪಗಳು 1, ದಿಲ್ಲಿ 16, ಗೋವಾ 13)		....	30

ಪ್ರತಿಯೊಂದು ಬ್ಯಾಂಕ್ ಸೌಲಭ್ಯಕ್ಕಾಗಿ ಪ್ರತಿಯೊಬ್ಬನ ಬ್ಯಾಂಕು

ಸಿಂಡಿಕೇಟ್ ಬ್ಯಾಂಕು

ಕೇಂದ್ರ ಕಚೇರಿ : ಮಣಿಪಾಲ

ಟಿ. ಎ. ಪೈ
ಕಸ್ಟೋಡಿಯನ್

(ಭಾರತ ಸರಕಾರದ ಆಡಳಿತೆಗೆ ಒಳಪಟ್ಟದ್ದು)

ಮೇಘಾಲಯದಲ್ಲಿ ಒಂದು ಸಂಜೆ

ಆ ದಿನ, ಚೇರಾಪುಂಜಿಯ ಕುಟುಂಬ ಯೋಜನಾ ಕೇಂದ್ರದ ಔಟ್‌ಪೇಷಂಟ್ ಕೊಠಡಿಯಲ್ಲಿ ೧೦ ಜನ ಮಹಿಳೆಯರು ಗುಂಪುಗೂಡಿದ್ದರು. ಈ ಗುಂಪಿನಲ್ಲಿದ್ದವರ ಪೈಕಿ ರೋಜ್‌ಬ್ಲೆಂಟಿನ್ ಒಬ್ಬಳು. ಖಾಸಿ ಜನಾಂಗಕ್ಕೆ ಸೇರಿದ ಅವಳಿಗೆ 23ರ ಪ್ರಾಯ. ಇಬ್ಬರು ಹೆಣ್ಣು ಮಕ್ಕಳು. ರೋಜ್‌ಬ್ಲೆಂಟಿನ್ ಆಗಾಗ್ಗೆ ಈ ಕೊಠಡಿಗೆ ಬಂದು ಹೋಗುತ್ತಿದ್ದುದ ಮಡಿಕೆ ಈ ಬಾರಿಯೂ ಅವಳು ಬಂದಿದ್ದಳು. ಗಂಡ ಡಿಂಗ್ ಬಾಡರ್‌ಸಿಗೆ ಕುಟುಂಬಯೋಜನಾ ಕೇಂದ್ರಕ್ಕೆ ಬಂದು ನಿರೋಧ್ ಒಯ್ಯುವುದೆಂದರೆ ತುಂಬ ನಾಚಿಕೆ.

ರೋಜಬ್ಲೆಂಟೀನಳಿಗೆ ಹೆಚ್ಚು ಮಕ್ಕಳಾಗ ಬೇಕು ಎಂಬ ಇಷ್ಟವಿರಲಿಲ್ಲವೆ? ಇಲ್ಲ, ಇನ್ನು ಕೆಲವು ವರ್ಷಗಳ ವರೆಗಾದರೂ ತನಗೆ ಮಕ್ಕಳಾಗ ಕೂಡದೆಂದು ಅವಳ ಅಭಿಪ್ರಾಯ. ಎರಡು ಹೆಣ್ಣು ಮಕ್ಕಳಲ್ಲಿ ಒಂದಾದರೂ ಗಂಡಾಗಿದ್ದರೆ ಅವಳು ಇನ್ನು ಮಕ್ಕಳು ಸಾಕು ಎಂದು ಹಾಯಾಗಿ ಇರುತ್ತಿದ್ದಳು.

ಆದರೂ ಅವಳು ತನ್ನ ಪಕ್ಕದಲ್ಲೇ ಕುಳಿತಿದ್ದ ಕ್ರಿಯೆಂಟೀಸ್ ಕೊಂಗ್ವಾರಳಿಗಿಂತ ಭಾಗ್ಯವಂತೆ ಎಂದು ಹೇಳಬೇಕು. ಕ್ರಿಯೆಂಟೀಸ್ ಮೋವುಸೋರೆನ್ ಹಳ್ಳಿಯವಳು. ಈ ಹಳ್ಳಿ ಚಿರ್‍ರಾದಿಂದ ಆರು ಮೈಲಿ ದೂರದಲ್ಲಿದೆ. ಕ್ರಿಯೆಂಟೀಸ್ ತನಗೆ ಮೂರನೆಯ ಮಗ ಆದಾಗಿನಿಂದಲೂ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಿಸಿಕೊಳ್ಳಲು ಗಂಡನಿಗೆ ಒತ್ತಾಯಪಡಿಸುತ್ತಿದ್ದಳು. ಗಂಡ ಅವಳ ಬೇಡಿಕೆಯತ್ತ ಗಮನ ಕೊಟ್ಟಿರಲಿಲ್ಲ. ಈಗ ಅವಳಿಗೆ ಐದನೆಯ ಮಗು ಜನಿಸಿದೆ. ಅವಳು ಇನ್ನು ತಡಮಾಡ ಬಯಸಲಿಲ್ಲ. ತನ್ನ ಗಂಡ ಶಿರೋನ್ ಜವಾಘಿಗೆ ದಿನಗೂಲಿಯ ಕೆಲಸ. ಅವನ ಆದಾಯ ಕುಟುಂಬಕ್ಕೆ ಏನೇನೂ ಸಾಲದು. ಕ್ರಿಯೆಂಟೀಸಗೆ ತಾಯಿಯಿಂದ ಬಳುವಳಿಯಾಗಿ ಬಂದ ಕೊಂಚ ಭೂಮಿಯಿದ್ದಿತು. ಅದರಲ್ಲೇ ತರಕಾರಿ ಬೆಳೆಯುತ್ತಿದ್ದಳು. ಬೆಳೆದಿದ್ದನ್ನು ಚಿರ್‍ರಾ ಬಜಾರಿನಲ್ಲಿ ಮಾರಿ ಬಹಳ ಕಷ್ಟದಿಂದ ಉಪಜೀವನ ಸಾಗಿಸುತ್ತಿದ್ದಳು. ಜೊತೆಗೆ ಮಕ್ಕಳ ಪಾಲನೆಯ—ಪೋಷಣೆಯ ಜವಾಬ್ದಾರಿ. ಗಂಡನಿಗೆ ಕುಟುಂಬ ಯೋಜನೆ ಮಾಡುವ ಮನಸ್ಸಿರಲಿಲ್ಲ ಕಾರಣ ಕ್ರಿಯೆಂಟೀಸ್ ತಾನೇ ಪಂಕಿಯನ್ನು ಉಪಯೋಗಿಸಿ, ಬೆಳೆಯುತ್ತಿದ್ದ ಕುಟುಂಬಕ್ಕೆ ಮಿತಿಯನ್ನು ಹಾಕಲು ನಿರ್ಧರಿಸಿದಳು. ಅದೊಂದು ಅಪೂರ್ವ ನಿರ್ಧಾರ.

ಮುಗಿಲುಗಳ ವಿರಾಮ ಸ್ಥಾನವೆಂದು ವಿಖ್ಯಾತವಾಗಿರುವ ಚೇರಾಪುಂಜಿಯಲ್ಲಿ ಅಂದು ಮಳೆ ಇರಲಿಲ್ಲ. ಅಂದು ಸುಗ್ಗಿಯಲ್ಲೇ ಅಪೂರ್ವವಾದಂತಹ ಸೂರ್ಯಾಸ್ತದ ಸೊಬಗು ಚೆಲ್ಲಿದ್ದಿತು. ಶಿಲಾ ಪ್ರಪಾತಗಳಿಂದ ಕೆಳಕ್ಕೆ ಧುಮುಕುತ್ತಿದ್ದ ನೀರು ಇಡಿ ಕಣಿವೆಯುದ್ದಕ್ಕೂ ಹಳ್ಳಕೊಳ್ಳಗಳಲ್ಲಿ ಹರಿದು ಮುಂದೆ ಸಾಗುತ್ತಿದ್ದಿತು.

ಚಿರ್‍ರಾದ ಕುಟುಂಬಯೋಜನಾ ಕೇಂದ್ರದಲ್ಲಿ ಸೇರಿದ್ದ ಮಹಿಳೆಯರ ಗುಂಪು ಹರ್ಷಚಿತ್ತವಾಗಿದ್ದಿತು. ಆರೋಗ್ಯ ಸಹಾಯಕಿ ಶ್ರೀಮತಿ ಪಿ. ಕೆ. ಪಹಲಾಂಗ್ ಕುಟುಂಬದ ಸದಸ್ಯರ ವಿಚಾರವಾಗಿ, ಖಾಸಿ ಭಾಷೆಯಲ್ಲೇ ಮಹಿಳೆಯರೊಂದಿಗೆ ಮಾತನಾಡುತ್ತಿದ್ದರು. ಅವರ ದೃಷ್ಟಿ ಕುಮಾರಿಯಾಗಿ ಸ್ಥೂಲಕಾಯದ ಮಹಿಳೆ ಶ್ರೀಮತಿ ಟ್ರೆಸ್ಸಿಜೋಹ್ ದಿಂಗಬೋ ಕಡೆ ಹರಿಯಿತು. ದಿಂಗಬೋ ಮಧ್ಯವಯಸ್ಸಿನ ಮಹಿಳೆ.

"ಏನು ನೀವೂ ಪಂಕಿ ಧರಿಸಲು ಬಂದಿದ್ದೀರಾ ?" ಆರೋಗ್ಯಸಹಾಯಕಿ ಪಹಲಾಂಗ್ ಮುಗುಳ್ನಗುತ್ತ ದಿಂಗಬೋ ಅವರನ್ನು ಕೇಳಿದರು. ಕೊಠಡಿಯಲ್ಲಿ ಒಮ್ಮೆಲೆ ನಗೆಯ ಭಾರೀ ಅಲೆಗಳೆದ್ದವು. ಪ್ರಶ್ನೆಯಿಂದ ಕೊಂಚವೂ ಅಸಮಾಧಾನಗೊಳ್ಳದೆ ದಿಂಗಬೋ ಬಾಯಲ್ಲಿ ಎಲೆಯನ್ನು ಮೆಲ್ಲುತ್ತ ಶಾಂತವಾಗಿ ಹೇಳಿದಳು.

"ನನಗೀಗಾಗಲೇ 48 ವಿಾರಿದೆ. ಪಂಕಿಯಿಂದ ಏನೂ ಉಪಯೋಗವಿಲ್ಲ.

ಅವಳ ಸೊಸೆಗೆ ಕೆಲವು ತಿಂಗಳುಗಳ ಹಿಂದೆ ಮೊದಲನೆಯ ಮಗು ಆಗಿದೆ. ಅತ್ತೆಯ ಜೊತೆಗೆ ಸೊಸೆಯು ಕುಟುಂಬ ಯೋಜನಾ ಕೇಂದ್ರಕ್ಕೆ ಬಂದಿದ್ದಳು; ಪಂಕಿ ಧರಿಸುವ ಉತ್ಸಾಹದಿಂದ.

ಈ ಸಂದರ್ಭದಲ್ಲೇ ಒಂದು ಪ್ರಸಂಗ ನೆನಪಿಗೆ ಬಂದದ್ದು. ಟ್ರೆಸ್ಸಿಜೋಹ್ ದಿಂಗ್‌ಬೋ ಹೇಳಿದಳು ಆವಳಿಗೆ ಒಂಭತ್ತು ಮಕ್ಕಳಿದ್ದವಂತೆ. ತಮ್ಮ ಕಾಲದಲ್ಲಿ ಮಕ್ಕಳಾಗದಂತೆ ತಡೆಯುವ ಉಪಾಯವನ್ನು ಯಾರೂ ಅವರಿಗೆ ಹೇಳಲಿಲ್ಲವಂತೆ. ವರ್ಷ–ವರ್ಷವೂ ಮಕ್ಕಳನ್ನು ಹೆರುತ್ತ ಹೋಗುವುದು ಎಷ್ಟು ಕಷ್ಟಕರ ಎಂಬುದು ಅವಳಿಗೆ ಗೊತ್ತಿದೆ. ಮಕ್ಕಳು ಜನಿಸಿದ ಮೇಲೆ ಮುಗಿಯಿತೆ? ಅವುಗಳ ಲಾಲನೆ-ಪಾಲನೆ, ಊಟ-ಉಪಚಾರ, ಶಿಕ್ಷಣ ಇತ್ಯಾದಿ ಹೊಣೆಗಾರಿಕೆ ದಿನ-ದಿನವೂ ಹೆಚ್ಚುತ್ತದೆ. ತಾನು ಜೀವನದಲ್ಲಿ ಕಷ್ಟಪಟ್ಟಂತೆ ತನ್ನ ಸೊಸೆ ಕಷ್ಟಪಡಬಾರದೆಂಬ ಉದ್ದೇಶದಿಂದ ಸೊಸೆಯನ್ನು ಕುಟುಂಬ ಯೋಜನಾ ಕೇಂದ್ರಕ್ಕೆ ಕರೆತಂದಿರುವುದಾಗಿ ಹೇಳಿದಳು.

ನಿರೋಧ್

'ನಿರೋಧ'ಎಂದರೆ ತಡೆ. ಇದರ ಸಾರ್ವತ್ರಿಕ ಹಂಚಿಕೆ ಶುರುವಾಗಿ ಸುಮಾರು ಒಂದು ವರ್ಷವಾಯಿತು. ನಗರಗಳಲ್ಲಿ ನಿರೋಧದ ಹಂಚಿಕೆ —ಬಳಕೆ ಸ್ವಲ್ಪತರ. ಆದರೆ ಹಳ್ಳಿಗಳಲ್ಲಿ ಇನ್ನೂ ಇದು ಸಾಕಷ್ಟು ಜನಪ್ರಿಯವಾಗಿಲ್ಲ. ಹಳ್ಳಿಯ ಜನರಿಗೆ ನಿರೋಧದ ಕುರಿತು ಬೇಕಷ್ಟು ತಿಳುವಳಿಕೆ ಬಂದಿಲ್ಲ. ಇದರ ಉಪಯೋಗ ಸರಿಯಾಗಿ ತಿಳಿದಿಲ್ಲ. ಇದರಿಂದ ಹಳ್ಳಿಗಳಲ್ಲಿ ನಿರೋಧದ ಕುರಿತು ತಿಳಿದವರು ತಿಳಿಯದವರಿಗೆ ತಿಳುವಳಿಕೆ ಕೊಡುವುದು ಅತ್ಯಗತ್ಯ.

ನಿರೋಧ್ ಎಲ್ಲಿ ಹೇಗೆ ಸಿಗುತ್ತದೆ ಎಂದು ನೋಡೋಣ. ನಮ್ಮಲ್ಲಿ ವಸ್ತುಗಳ ಹಂಚಿಕೆಗೆ ಪ್ರಸಿದ್ಧವಾದ ಕೆಲವು ಕಂಪನಿಗಳವೆ ಇವು ಟೀ, ಸಿಗರೇಟ್, ಟೂತ್ ಪೇಸ್ಟ್ ಇತ್ಯಾದಿ ದಿನಬಳಕೆಯ ವಸ್ತುಗಳನ್ನು ರಾಷ್ಟ್ರವ್ಯಾಪಿಯಾಗಿ ವ್ಯಾಪಾರಿಗಳಿಗೆ ಹಂಚುತ್ತಿವೆ ಇಂತಹ ಕಂಪನಿಗಳೇ ಇಂದು ನಿರೋಧವನ್ನು ಹಂಚುತ್ತಿವೆ. ಇವುಗಳಲ್ಲಿ ಬ್ರೂಕ್ ಬಾಂಡ್ ಕಂಪನಿ ಮಹಾರಾಷ್ಟ್ರ, ಮೈಸೂರು, ಗೋವಾ, ಗುಜರಾತ್ ರಾಜ್ಯಗಳಲ್ಲಿ ನಿರೋಧ್‌ವನ್ನು ಹಂಚಿದರೆ, ಹಿಂದುಸ್ಥಾನ ಲಿವರ್ ಕಂಪನಿ ಬಂಗಾಳ, ಅಸ್ಸಾಮ, ತ್ರಿಪುರ, ನಾಗಲ್ಯಾಂಡ್ ಪ್ರದೇಶಗಳಲ್ಲಿ ನಿರೋಧ್ ಹಂಚಿಕೆಯ ಕಾರ್ಯವನ್ನು ಕೈಕೊಂಡಿವೆ. ಹಾಗೆಯೇ ಇಂಪೀರಿಯಲ್ ಟೊಬ್ಯಾಕೊ ಮೈಸೂರು, ತಮಿಳುನಾಡು, ಆಂಧ್ರಪ್ರದೇಶ, ಪೊಂಡಿಚೇರಿ, ಕೇರಳರಾಜ್ಯಗಳಲ್ಲಿ. ಯುನಿಯನ್ ಕಾರ್ಬೈಡ್ ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಹಿಮಾಚಲಪ್ರದೇಶ, ಜಮ್ಮು—ಕಾಶ್ಮೀರ, ದೆಹಲಿ, ಹರಿಯಾಣ, ಚಂಡೀಗಡಗಳಲ್ಲಿ. ಟಾಟಾ ಓಯಿಲ್ ಮಿಲ್ಸ್ ಬಿಹಾರದಲ್ಲಿ, ಲಿಪ್ಟನ್ ಕಂಪನಿ ಒರಿಸ್ಸಾದಲ್ಲಿ ನಿರೋಧ್ ಹಂಚುವ ಕಾರ್ಯವನ್ನು ವಹಿಸಿ ಕೊಂಡಿದೆ.

ಬ್ರೂಕ್‌ಬಾಂಡ್ ಕಂಪನಿಯು ಈ ವರ್ಷದ ಎಪ್ರಿಲ್—ಸೆಪ್ಟೆಂಬರ್ ನಡುವಣ ಆರು ತಿಂಗಳುಗಳ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ 239, 184 ನಿರೋಧ್‌ಗಳನ್ನೂ ಇಂಪೀರಿಯಲ್ ಟೊಬ್ಯಾಕೊ ಕಂಪನಿಯು ಜುಲೈ—ಸೆಪ್ಟೆಂಬರ್ ತಿಂಗಳುಗಳ ಅವಧಿಯಲ್ಲಿ 378, 720 ನಿರೋಧ್‌ಗಳನ್ನೂ ಹಂಚಿವೆ.

ಕೇರಳ ಮತ್ತು ಪಾಂಡಿಚೇರಿಯಲ್ಲಿ ನಿರೋಧ್ ಹಂಚಿಕೆ ಕಾರ್ಯವನ್ನು ಇಂಪೀರಿಯಲ್ ಟೊಬ್ಯಾಕೋ ಕಂಪನಿಯು ಈ ವರ್ಷ ಸೆಪ್ಟೆಂಬರದಲ್ಲಿ ಆರಂಭಿಸಿತು. ಈ ಒಂದು ತಿಂಗಳ ಅವಧಿಯಲ್ಲಿ ಕೇರಳದಲ್ಲಿ 520, 128 ನಿರೋಧಗಳನ್ನೂ ಪಾಂಡಿಚೇರಿಯಲ್ಲಿ 14,400 ನಿರೋಧ್‌ಗಳನ್ನೂ ಬಳಕೆದಾರರಿಗೆ ಹಂಚಲಾಗಿದೆ.

ಇದೇ ಕಂಪನಿಯು ಜುಲೈ–ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ತಮಿಳುನಾಡಿನಲ್ಲಿ 1,146,090 ನಿರೋಧಗಳನ್ನು, ಆಂಧ್ರಪ್ರದೇಶದಲ್ಲಿ 524,160 ನಿರೋಧಗಳನ್ನೂ ಹಂಚಿವೆ.

ಬ್ರೂಕ್‌ಬಾಂಡ್, ಹಿಂದೂಸ್ಥಾನ್ ಲಿವರ್, ಇಂಪೀರಿಯಲ್ ಟೊಬ್ಯಾಕೋ, ಲಿಪ್ಟನ್, ಟಾಟಾ ಹಾಗೂ ಯೂನಿಯನ್ ಕಾರ್ಬೈಡ್ ಕಂಪನಿಗಳು ಮೈಸೂರು, ಮಹಾರಾಷ್ಟ್ರ, ಗೋವಾ, ಗುಜರಾತ್, ಪಶ್ಚಿಮಬಂಗಾಳ, ಅಸ್ಸಾಂ, ತ್ರಿಪುರ, ನಾಗಾಲ್ಯಾಂಡ್, ತಮಿಳುನಾಡು, ಆಂಧ್ರಪ್ರದೇಶ, ಪಾಂಡಿಚೇರಿ, ಕೇರಳ, ಬಿಹಾರ್, ಉತ್ತರಪ್ರದೇಶ, ರಾಜಸ್ಥಾನ, ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು—ಕಾಶ್ಮೀರ ದೆಹಲಿ, ಹರಿಯಾಣ ಹಾಗೂ ಚಂಡೀಗಡದಲ್ಲಿ 1969ರ ಇಸವಿಯ ಎಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಒಂದು ಕೋಟಿ 26 ಲಕ್ಷ ಆರವತ್ತು ಸಾವಿರಕ್ಕಿಂತಲೂ ಹೆಚ್ಚು ನಿರೋಧ್‌ಗಳನ್ನು ಹಂಚಿವೆ.

ಇವರಲ್ಲಿ ಲಕ್ಕಿಯದೇ ಒಂದು ದಾರುಣ ಕಥೆ. ಲಕ್ಕಿ 27 ವರ್ಷದ ತರುಣಿ. ಆಕರ್ಷಕ ವ್ಯಕ್ತಿತ್ವ. ಲಕ್ಕಿಗೆ ಬೇಗ ಮದುವೆಯೂ ಆಯಿತು. ಮೂರು ಮಕ್ಕಳೂ ಆದುವು. ಗಂಡ-ಹೆಂಡತಿಯ ವಿರಸ ಏರ್ಪಟ್ಟು ಗಂಡ ಒಂಭತ್ತು ವರುಷಗಳ ಕಾಲ ಅವಳನ್ನು ಬಿಟ್ಟುಹೋದ. ಗಂಡನಿಗೆ ಮತ್ತೆ ಅವಳ ನೆನಪು ಬಂತು. ಮನೆಗೆ ಮರಳಿಬಂದ. ಹೆಂಡತಿಯ ಪ್ರೇಮ ಯಾಚನೆ ಮಾಡಿದ. ಲಕ್ಕಿ ದೀರ್ಘವಾಗಿ ವಿಚಾರಿಸಿ ಒಪ್ಪಿಗೆ ಇತ್ತಳು, ಆದರೆ ಒಂದು ಶರತ್ತು ಹಾಕಿದಳು. ತನಗೆ ಇನ್ನು ಮಕ್ಕಳಾಗಬಾರದು ಇದೇ ಆ ಶರತ್ತು.

ಗಿರಿಪ್ರದೇಶದ ಈ ಆರೋಗ್ಯವಂತ ಮಹಿಳೆಯರಿಗೆ ನಂತೆ ಸಣ್ಣ ಕುಟುಂಬದ ಸಂದೇಶ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಪಾಲುಕಟ್ಟೆ, ಉಡುಪಿ, ದ. ಕ.

NAVAYUGA 8—1—1970
Registered with the Registrar of News Papers for India under No. R. N. 3546/'57

REGD: No: B. Gr 176
LICENCE No: 33
Licensed to Post without Prepayment

ಸ್ವರ್ಗಕ್ಕೆ ಪ್ರಯಾಣ

ಲೇಖಕರು : ಶ್ರೀ "ನವಗಿರಿನಂದ"

ಆದಿ ಕಾಲದಲ್ಲಿ ಬ್ರಹ್ಮದೇವನು ಪ್ರಪಂಚವನ್ನೂ, ಮಾನವರನ್ನೂ, ದೇವತೆಗಳನ್ನೂ ಸೃಷ್ಟಿಸಿ "ನೀವೆರಡು ಪಂಗಡದವರೂ ಒಬ್ಬರಿಗೊಬ್ಬರು ಪೂರಕರಾಗುವಂತೆ ಸಹಕರಿಸಿಕೊಂಡು ಪ್ರಪಂಚದಲ್ಲಿ ಬಾಳಿರಿ" ಎಂದನು.

ಹಾಗೆ ದೇವತೆಗಳೂ ಮಾನವರೂ ಬಾಳಿಕೊಂಡಿರುವಾಗ, ಬ್ರಹ್ಮನು ಸ್ವರ್ಗವೆಂಬ ಬೇರೊಂದು ಪ್ರಪಂಚವನ್ನು ಸೃಷ್ಟಿಸಿರುವ ಸಂಗತಿ ದೇವತೆಗಳಿಗೆ ಗೊತ್ತಾಯಿತು. ಅವರು ಗುಟ್ಟಾಗಿ ಬ್ರಹ್ಮನನ್ನು ಕಂಡು ಅದರ ವಿಷಯ ಪ್ರಸ್ತಾವಿಸಿ "ನಾವು ಸ್ವರ್ಗದಲ್ಲಿರುತ್ತೇವೆ. ಅಲ್ಲಿಗೆ ಹೋಗುವ ದಾರಿ ಹೇಗೆ?" ಎಂದು ಕೇಳಿದರು.

"ಸ್ವರ್ಗವನ್ನು ಸಂಪಾದಿಸ ಬೇಕಾದರೆ ಅದಕ್ಕೆ ತಕ್ಕ ಯಜ್ಞಮಾಡಬೇಕು" ಎಂದು ಬ್ರಹ್ಮನು ಆ ಯಜ್ಞದ ವಿಧಾನವನ್ನು ಅವರಿಗೆ ಹೇಳಿಕೊಟ್ಟನು. ಅದರಂತೆ ದೇವತೆಗಳು ರಹಸ್ಯ ಪ್ರದೇಶದಲ್ಲಿ ಯಜ್ಞವನ್ನು ನಡೆಸಿ ಸ್ವರ್ಗಲೋಕವನ್ನು ಸಂಪಾದಿಸಿಕೊಂಡು ಅಲ್ಲಿಗೆ ಹೋಗಿ ಸೊಗಸಾಗಿ ವಾಸಮಾಡ ತೊಡಗಿದರು.

ಈ ಸಂಗತಿ ಗಾಳೀ ಸಮಾಚಾರವಾಗಿ ಮಾನವರ ಕಿವಿಗೆ ಬಿತ್ತು. ಮಾನವರ ಒಳಗೆ ಅಂಗಿರಸನ ವಂಶದವರು ಬಹಳ ಪಟ್ಟಿಗರು. ಅವರು ಎಡೆಬಿಡದೆ ಶೋಧನೆ ಮಾಡುತ್ತಾ, ದೇವತೆಗಳು ಯಜ್ಞ ಮಾಡಿದ ರಹಸ್ಯ ಪ್ರದೇಶವನ್ನು ಕಂಡು ಹಿಡಿದರು. ಅಲ್ಲಿ ಇನ್ನೂ ಆರದಿರುವ ಯಜ್ಞಾಗ್ನಿಯನ್ನು ನೋಡಿ, ಸ್ವರ್ಗವೇ ದೊರಕಿದಷ್ಟು ಆನಂದದಿಂದ ಆ ಯಜ್ಞಾಗ್ನಿಯನ್ನು ಬ್ರಹ್ಮನನ್ನೂ ಸ್ತುತಿ ಮಾಡಲು ಕುಳಿತರು.

ಈ ಅಂಗೀರಸರಲ್ಲಿ ಕಲ್ಯಾಣಾಂಗಿರಸನೆಂಬವನು ಬಹಳ ಚಾಣಾಕ್ಷನಾಗಿದ್ದನು. ಈ ಮೊದಲು ದೇವತೆಗಳೊಂದಿಗೆ ಹೊಂಚಾಡಿ ಕೊಂಡಿದ್ದವನಾದ್ದರಿಂದ, ಅವನಿಗೆ ಕೆಲವೊಂದು ವಾಕ್ಯಗಳು ಗೊತ್ತಿದ್ದವು. ಸ್ವಾಭಾವಿಕವಾಗಿಯೇ ಅವನಿಗೆ ಒಳ್ಳೆಯ ಕಂಠ ಮಾಧುರ್ಯವೂ ಇತ್ತು. ತನಗೆ ತಿಳಿದ ಅರ್ಥಂಬರ್ಥ ವಾಕ್ಯಗಳನ್ನೇ ರಾಗವತ್ತಾಗಿ ಹಾಡುತ್ತಾ ಅವನು ದೇವತೆಗಳು ಹೋದ ಅಡಿಗಳ ಜಾಡು ಹಿಡಿದು ಹೋಗ ತೊಡಗಿದನು. ತಾನು ಸ್ವರ್ಗವನ್ನು ಸುಲಭದಲ್ಲಿ ಕಂಡು ಹಿಡಿಯುವೆನೆಂದು ಅವನ ನಂಬುಗೆ.

"ನಿನ್ನೊಂದಿಗೆ ನಾವೂ ಬರುತ್ತೇವೆ" ಎಂದು ಅವನ ಬಂಧು ಜನರು ಹೇಳಿದಾಗ 'ತಡೆಯಿರಿ. ನಿಮಗೆ ನನ್ನಂತಹ ಸ್ವರ ಶಕ್ತಿಯಿಲ್ಲ. ಮಂತ್ರಗಳನ್ನು ತಿಳಿದವರೂ ಅಲ್ಲ. ನಾನು ನನ್ನ ಸ್ವಂತ ಸಾಮರ್ಥ್ಯದಿಂದ ಸ್ವರ್ಗವನ್ನು ನೋಡಿ ಬಂದು, ತರುವಾಯ ನಿಮಗೂ ಆ ಮಂತ್ರಗಳನ್ನು ಕಲಿಸಿ ಕೊಡುತ್ತೇನೆ. ಆ ವೇಳೆ ನೀವುಗಳೂ ಸ್ವರ್ಗಕ್ಕೆ ಹೋಗಲು ಸಮರ್ಥರಾಗುವಿರಿ'. ಎಂದು ನುಡಿದು ಕಲ್ಯಾಣನೊಬ್ಬನೇ ಮುಂದೆ ಹೋದನು.

ಬಹುದೂರ ಸಾಗಿದ ಮೇಲೆ ಅವನಿಗೊಂದು ಸುಂದರವಾದ ಲೋಕವು ತೋರಿತು. ಅದುವೇ ಸ್ವರ್ಗವೆಂದುಕೊಂಡು ಅಲ್ಲಿ ಹಾಡುತ್ತಾ ತಿರುಗಲಾರಂಭಿಸಿದನು.

ಅಲ್ಲೊಂದು ಸುಂದರವಾದ ಉದ್ಯಾನದಲ್ಲಿ ಊರ್ಣಾಯುವೆಂಬ ಗಂಧರ್ವನು ಸುಂದರಿಯರಾದ ಅಪ್ಸರಸಿಯರ ನಡುವಿನಲ್ಲಿ ಉಯ್ಯಾಲೆಯಾಡುತ್ತಿರುವುದು ಅವನ ಕಣ್ಣಿಗೆ ಬಿತ್ತು.

'ಇದು ಸ್ವರ್ಗವೇ ಸರಿ' ಎಂದುಕೊಂಡನು ಕಲ್ಯಾಣ. ಆಗ ಊರ್ಣಾಯುವು ಅವನನ್ನು ತನ್ನ ಬಳಿಗೆ ಕರೆದು, "ಕಲ್ಯಾಣಾ, ನಿನ್ನ ಎಣಿಕೆ ತಪ್ಪು. ಇದು ಸ್ವರ್ಗವಲ್ಲ. ಗಂಧರ್ವಲೋಕ. ನಾನೊಂದು ಸಾಮಮಂತ್ರವನ್ನು ನಿನಗೆ ಕಲಿಸುತ್ತೇನೆ. ಆ ಮಂತ್ರವನ್ನು ನಿನ್ನ ಸುಶ್ರಾವ್ಯ ಸ್ವರದಲ್ಲಿ ಗಾನ ಮಾಡುತ್ತಾ ಹೋದರೆ ಸ್ವರ್ಗವು ಸಿಗುತ್ತದೆ. ಈ ಸಾಮವನ್ನು ನಿನ್ನ ಬಂಧುಗಳಾದ ಇತರ ಅಂಗಿರಸರಿಗೂ ಕಲಿಸಿ ಅವರೊಂದಿಗೆ ನೀನೂ ಸ್ವರ್ಗವನ್ನು ಸೇರ ಬಹುದು. ಆದರೆ ಅಪೌರುಷೇಯವಾದ ಈ ಸಾಮವನ್ನು ಯಾರು ರಚಿಸಿದರೆಂಬುದನ್ನು ಮಾತ್ರ ಯಾರಿಗೂ ಹೇಳಬಾರದೆಂಬುದನ್ನು ಮರೆಯಬೇಡ' ಎಂದು ಹೇಳಿ ಎಚ್ಚರಿಸಿ, ಸಾಮ ಮಂತ್ರವನ್ನೂ ಹಾಡುವ ವಿಧಾನವನ್ನೂ ಕಲಿಸಿ ಕೊಟ್ಟನು.

ಕಲ್ಯಾಣನು ಸಂತೋಷದಿಂದ ಅದನ್ನು ಹಾಡುತ್ತ ಸ್ವರ್ಗದ ವರೆಗೂ ಹೋಗಿ, ಅದೇ ಸ್ವರ್ಗವೆಂದು ಕೇಳಿ ತಿಳಿದು ಕೊಂಡು, ಹಿಂದಿರುಗಿ ಬಂದು ತನ್ನ ಬಂಧುಗಳನ್ನು ಕುರಿತು: "ಸ್ವರ್ಗವನ್ನು ನೋಡಿ ಬಂದೆ. ದಾರಿ ತಿಳಿದೆ. ನಾನು ಹೇಳುವ ಸಾಮ ಮಂತ್ರವನ್ನು ಎಲ್ಲರೂ ಕಲಿಯಿರಿ. ನನ್ನ ಹಿಂದೆ ಬನ್ನಿ. ಸ್ವರ್ಗಕ್ಕೆ ಹೋಗೋಣ" ಎಂದನು. ಅವನು ಹೇಳಿದ ಸಾಮವನ್ನು ಕೇಳಿ ಎಲ್ಲರೂ ಆನಂದದಿಂದ ಅವನನ್ನು ಹೊಗಳುತ್ತ 'ಈ ಅಮೂಲ್ಯ ಮಂತ್ರವನ್ನು ಹೇಗೆ ಸಂಪಾದಿಸಿಕೊಂಡೆ?' ಎಂದು ಕೇಳಿದರು.

'ನಾನೇ ನನ್ನ ಸಾಮರ್ಥ್ಯದಿಂದ ರಚಿಸಿದ ನನ್ನ ಸ್ವಂತ ಮಂತ್ರರಚನೆ ಇದು' ಎಂದ ಕಲ್ಯಾಣ, ಮರುಕ್ಷಣವೇ ಕಲ್ಯಾಣನು ಹಾವಿನ ರೂಪವನ್ನು ಹೊಂದಿ ಸರಸರನೆ ಓಡುತ್ತ, ಯಾವುದೋ ಒಂದು ಬಿಲದೊಳಗೆ ಸೇರಿಕೊಂಡನು.

ಅವನ ಸ್ವಪ್ರತಿಷ್ಠೆಯ ಆಕಾಂಕ್ಷೆಯಿಂದಾಗಿ ಉಳಿದ ಅಂಗಿರಸಾದಿಗಳಿಗೆ ಸ್ವರ್ಗಕ್ಕೆ ಹೋಗುವ ಮಂತ್ರ ವಿಧಾನವು ಪೂರ್ಣ ತಿಳಿಯದೆ ಅರ್ಧದಲ್ಲಿಯೇ ನಿಂತು ಹೋಯಿತು. (ವೈದಿಕ ಕಥೆ)

ಅಧಿವೇಶನಗಳು ಸಾಧಿಸಿದ್ದೇನು ?

(ಒಂದನೇ ಪುಟದಿಂದ)

ಗಾಂಧಿಗೆ ಆಕೆಯ ತಂದೆಯಿಂದ ಬಂದ ವರದಾನ, ಅದುದರಿಂದಲೇ ಆಕೆ ಪದೇ ಪದೇ ಗಾಂಧೀಜಿ ಮತ್ತು ನೆಹರೂಜಿಯವರ ಹೆಸರೆತ್ತುತ್ತಿದ್ದರೇ ಹೊರತು ಶಾಸ್ತ್ರೀಜಿಯವರನ್ನು ಉಲ್ಲೇಖಿಸಲಿಲ್ಲ; ಶಾಸ್ತ್ರೀಜಿಯವರ ಫೋಟೊವಲ್ಲಿ ಎಂದು ಇತರರು ಕೇಳಬೇಕಾಗಿ ಬಂತು.

'ಹೊಸ ಕಾಂಗ್ರೆಸ್ಸು ತನ್ನ ನೀತಿಯಲ್ಲಿ ಮಂದಗತಿ ತೋರಿಸಿದ್ದೇ ಆದರೆ ಹೊಸತೊಂದು ಸಿಂಡಿಕೇಟ್ ಹುಟ್ಟಿಕೊಳ್ಳುತ್ತದೆ' ಎಂಬ ಯುವ ಜನಕಾಂಗ್ರೆಸಿಗರ ಮಾತು ಮುಂದಿನ ಸಾರ್ವತ್ರಿಕ ಚುನಾವಣೆಗಳೊಳಗೆ ಸತ್ಯವಾಗುತ್ತದೆ. ಅದುದರಿಂದಲೇ ಪ್ರಧಾನಿಯವರು ಮಧ್ಯಾವಧಿ ಚುನಾವಣೆಗಳ ಸಾಧ್ಯತೆಯನ್ನು ಅಲ್ಲಗಳೆದರೂ ನಿಕಟ ಭವಿಷ್ಯದಲ್ಲೇ ಸಂಸತ್ತನ್ನು ವಿಸರ್ಜಿಸುತ್ತಾರೆ, ತಮ್ಮ ಅಧಿಕಾರ ಉಳಿಸಿಕೊಳ್ಳಲು ಸಿಂಡಿಕೇಟನ್ನು ಸೃಷ್ಟಿಸಿದಂತೆ ಅಧಿಕಾರ ಭದ್ರಪಡಿಸಲು ಯುವಜನ ಕಾಂಗ್ರೆಸಿಗರನ್ನು ಶುದ್ಧ ಕಮ್ಯುನಿಸ್ಟರು ಎಂದೂ ಅವರು ನಾಮಕರಣ ಮಾಡಿದರೆ, ಆಶ್ಚರ್ಯವಿಲ್ಲ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮನೆ-ಮದ್ದು
ಗೃಹವೈದ್ಯ — ರೂ.2 - 00
ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2-00
ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50
ಅಂಚೆ ವೆಚ್ಚ ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

నవయుగ

NAVAYUGA
REPUBLIC DAY
SPECIAL
1970

ప్రజారాజ్య విశేషాంక
౧౯౭౦

౮౦ పైసే



ನಿಮ್ಮ ಕೈಯಲ್ಲಿ
ಯೋಗ್ಯ ಕಾರ್ಡುಗಳಿದ್ದರೆ...



ಆರ್ಥಿಕ ಸಹಾಯದ
ತುರುಪ್ಪ ಕಾರ್ಡನ್ನು
ನಾವು ಒದಗಿಸುತ್ತೇವೆ.

ನೀವು ಉತ್ಪಾದನಾ ಚಟುವಟಿಕೆಯ ಯೋಜನೆಯನ್ನು ಹಾಕಿಕೊಂಡಿರುವಿರಾದರೆ, ಅಧಿಕ ಉತ್ಪಾದನೆಗಾಗಿ ಯಾವುದೇ ಯೋಗ್ಯ ಯೋಜನೆಯನ್ನು ರೂಪಿಸಿಕೊಂಡಿರುವುದಾದರೆ ಉತ್ತಮ ವಿತರಣೆಯ ವ್ಯವಸ್ಥೆಗೆ ಅಥವಾ ಸ್ವಯಂ ಉದ್ಯೋಗ ಒದಗಿಸುವ ಕಾರ್ಯಕ್ರಮಕ್ಕೆ, ಅಗತ್ಯವಾಗಿ ಬೇಕಾದ **ಬಂಡವಾಳ**ವನ್ನು ಒದಗಿಸುವ ಮೂಲಕ ನಾವು ನಿಮ್ಮ ಕನಸನ್ನು ನೆನಸಾಗಿಸಲು ಪ್ರಯತ್ನಿಸುತ್ತೇವೆ. ನಿಮ್ಮಿಂದ ನಾವು ಅಪೇಕ್ಷಿಸುವುದಿಷ್ಟೆ: ಅಗತ್ಯವಿರುವ ತಾಂತ್ರಿಕ ಜ್ಞಾನ ಮತ್ತು ಅನುಭವ ನಿಮಗಿರಬೇಕು. ನಮ್ಮ ಬ್ಯಾಂಕಿನ **355** ಶಾಖೆಗಳಲ್ಲಿ ಯಾವುದಾದರೊಂದರ ಸಂಪರ್ಕ ಬೆಳೆಸಿ **ಉಚಿತವಾಗಿ** ದೊರೆಯುವ ನಮ್ಮ "ವಿಶ್ವಾಸಿ ಜೀವನದ ಮಾರ್ಗದರ್ಶಕ" ಎಂಬ ಕಿರು ಹೊತ್ತಿಗೆಯನ್ನು ಕೇಳಿ ಪಡೆಯಿರಿ.

ಪ್ರತಿಯೊಂದು ಬ್ಯಾಂಕಿಂಗ್ ಸೌಲಭ್ಯಕ್ಕಾಗಿ ಪ್ರತಿಯೊಬ್ಬನ ಬ್ಯಾಂಕು

ಸಿಂಡಿಕೇಟ್ ಬ್ಯಾಂಕ್

ಸಂಪೂರ್ಣವಾಗಿ ಭಾರತ ಸರಕಾರದ ಆಡಳಿತೆಗೊಳಪಟ್ಟಿದ್ದು

ಪ್ರಧಾನ ಕಚೇರಿ: **ಮಣಿಪಾಲ** ಕಸ್ಟೋಡಿಯನ್: **ಟಿ. ಎ. ಪೈ**

With best compliments from

M. MADHWARAJ

CORONET CANNING COMPANY

INDUSTRIALISTS & EXPORTERS

MALPE. SOUTH INDIA

TEL : "CORONET" MALPE

PHONE : 583, 595, 584

ಸೌಂದರ್ಯ ರಕ್ಷಣೆಯಲ್ಲಿ

ಮೈಸೂರು ಶ್ರೀಗಂಧದ ಸಾಬೂನಿಗಿಂತ

ಮಿಗಿಲಾದ ಸಾಬೂನು ಮತ್ತೊಂದು ಇಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು
ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ.

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು - 12.

ಪ್ರಜಾರಾಜ್ಯೋತ್ಸವದ ಶುಭಾಶಯಗಳು!

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ಕಣ್ಮನ ತಣಿಸುವ ಬೆಂಗಳೂರು ಮಹಾನಗರದ ಅತ್ಯಂತ ಕೇಂದ್ರಸ್ಥಾನದಲ್ಲಿರುವ ಮಹೋನ್ನತ ಹೋಟೆಲ್.

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ 150 ಕೊಠಡಿಗಳ ಅತ್ಯಾಧುನಿಕ ವಸತಿ, ಭೋಜನ ಮತ್ತು ಉಪಾಹಾರ ಮಂದಿರ

ರೇಸ್ ಕೋರ್ಸ್ ರೋಡು, ಆನಂದ ರಾವ್ ಸರ್ಕಲ್

ಬೆಂಗಳೂರು - 9.

With best compliments from

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding, Lodging & Restaurant

Phone—72381 (5 lines) Grams—HOTELTOUR

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 33/1968 Exc 365/1969

ಅರ್ಜಿದಾರರು— ಪುಟ್ಟವೇಣಿ.

ಎದ್ರಿ—A. ರಾಮಚಂದ್ರ ನ್ಯಾಕ್.

ಕುಂದಾಪುರ ತಾಲ್ಲೂಕು ಗುಂದಾಪುರ ಕಸ್ಬಾಗ್ರಾಮದಲ್ಲಿರುವ ಬಾಲಣ್ಣ ನ್ಯಾಕರ ಮಗ A. ರಾಮಚಂದ್ರ ನ್ಯಾಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ ಎದ್ರಿಯು ಬಾಬ್ತು ಜಪ್ತಾದ ಚರ ಸೊತ್ತು ಲೀಲಾಂ ಮಾಡುವ ಕುರಿತು ಅರ್ಜಿದಾರರು ದಾಖಲು ಮಾಡಿದ ಲೀಲಾಂ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾ. 21-2-1970ಕ್ಕೆ ತಕ್ಕಿಗೆ ಇಟ್ಟಿರುತ್ತಾರೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

Sd/- N. S Parameshwaraih

Advocate for Petr.

Coondapoor,
ತಾ. 14-1-70

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O.S. 374/1964 Exe case 295/1969

ಸಿಂಡಿಕೇಟ್ ಬೇಂಕ್ ಮಣಿಪಾಲ-ಅರ್ಜಿದಾರ ಮತ್ತು

M. ಯಿಬ್ರಾಹಿಂ ಬ್ಯಾರಿ ಕೂಡ—ಎದ್ರಿರು.

1ನೇ ಎದ್ರಿ M. ಯಿಬ್ರಾಹಿಂ ಬ್ಯಾರಿ ಮೊಹಿದಿನ್ ಬ್ಯಾರಿಗಳ ಮಗ-ಉಡುಪಿ ತಾಲೂಕು ಮೂಲೂರು ಗ್ರಾಮ—

ಸದರಿ 1ನೇ ಎದ್ರಿಗೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರನು ಪ್ರಿಲಿಮಿನೇರಿ ಡಿಕ್ರಿಯಿಂದ ಕಾಣುವ ಸ್ತಿರಾಸ್ತಿ ಮಾರಾಟದ ಬಗ್ಗೆ ಹಾಜರು ಪಡಿಸಿದ ವಿಕ್ರಯದ ಯಿಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸಲಿಕ್ಕೆ 1970ನೇ ಯಿಸ್ವಿ ಫೆಬ್ರವರಿ ತಿಂಗಳು 20ನೇ ತಾರೀಕು ನಿಶ್ಚಯಿಸೋಣಾಗಿಯದೆ ಯಾಂತ ನಿಮಗೆ ಯಿದರೊಂದಿಗೆ ತಿಳಿಸೋಣಾಗುತ್ತದೆ.

By order of the Court

Sd/- H Ramanath Pai,

Advocate for Petitioner.

ಉಡುಪಿ,
ತಾ. 28.1.70

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Exc. 163/1969. in S.C. 98/61.

ಅನಂತ್ರಾಮ ಭಟ್ಟ— ಅರ್ಜಿದಾರ.

ನಲ್ಕೆ ರುಕ್ಮ—ಎದ್ರಿ.

ಬೆಳ್ತಂಗಡಿ ತಾಲ್ಲೂಕು ಒಡಿಲ್ನಾಳ ಗ್ರಾಮದ ಪೊಕ್ಕಿ ಎಂಬಲ್ಲಿರುವ ನಲ್ಕೆ ಬೊಗ್ರನ ಮಗ ನಲ್ಕೆ ರುಕ್ಮ, ಪೋಸ್ಟು ಒಡಿಲ್ನಾಳ, ದ. ಕ. ಇವರೀಗೆ—

ಅರ್ಜಿದಾರರು ಬೆಳ್ತಂಗಡಿಮುನ್ಸಿಫ್ ಕೋರ್ಟಿನಲ್ಲಿ ದಾಖಲು ಮಾಡಿದ Exo. 163/1969ನೇ ಅಮಲ್ದಾರಿಯು ನಿಮ್ಮ ಹಾಜರಾತಿಗೆ 10-2-1970ಕ್ಕೆ ಇರುತ್ತದೆ. ಶೀವು 10-2-1970ನೇ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರೀಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು, ತಿಳಿದಿರಲಿ.

(By order of Court)

Pulu Narayana Bhat.

Advocate for Petitioner,

Belthbangady.
20-1-1970

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 162/69.

ಇಂಡಿಯನ್ ಅಟೊಮೊಬೈಲ್ಸ್ ಉಡ್ಪಿ ಪಾರ್ಟ್‌ನರ್ಸ್ M.R. Karnad—ವಾದಿರು ಮತ್ತು

M. ಶೇಖರ, ಕನಿಯ ಪೂಜಾರಿ ಮಗ, ಉಡ್ಪಿ ತಾಲೂಕು ಕೊಡವೂರು ಗ್ರಾಮದ ಮಲ್ಪೆ— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಯೀ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ವಾದಿರು—ಪ್ಲೆಯಿಂಟ್ ನಿವೃತ್ತಿಗೋಸ್ಕರ ಮಾಡಿದ ಸದ್ರಿ ದಾವೆಯು ತಾ. 6-2-70ಕ್ಕೆ ಯಿಡೋಣಾಗಿಯದೆ. ಆಕುರಿತು ನಿಮಗೆ ಆಕ್ಷೇಪ ಹೇಳತಕ್ಕದ್ದಿದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಜಾಹೀರು ಮಾಡಿ ಕೊಳ್ಳತಕ್ಕದ್ದೆಂತ ಯೀ ಮೂಲಕ ತಿಳಿಸೋಣಾಗಿಯದೆ.

N. V. Kamath

Advocate for Plaintiff

ಉಡ್ಪಿ,
24-1-70

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಸ್ವಯಂಬೋಧಿನಿ.
ಬೆಲೆ : ರೂ. 2—00

Letter Writing Made Easy — ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ಮಾದರಿ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಿಗೆ. ಬೆಲೆ: ರೂ. 1—50

ಮನೆ-ಮದ್ದು — Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ವೈದ್ಯಗ್ರಂಥ, ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹಲವು ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬೆಲೆ : ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಧೂಮ್ರಪಾನದ ಸಹಜವಾದ ಆನಂದಕ್ಕಾಗಿ

ಎಸ್. ಆರ್ ಬೀಡಿಗಳನ್ನು ಸೇದಿರಿ

SR REGD

ಎಲ್ಲ ಕಡೆಗಳಲ್ಲಿಯೂ ಮಾರಲ್ಪಡುತ್ತವೆ

S. R. BEEDI WORKS UDIPI, S.K.

55 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ

ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ
ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:— ಬೆಂಗಳೂರು, ಮಂಗಳೂರು ಮತ್ತು ಮೈಸೂರು.

ಲಕ್ಷಾಂತರ ಜನರ ಮೆಚ್ಚಿನ ಆಯ್ಕೆ

ನಂಬರ್ **ಮೂವತ್ತು** ಮಾರ್ಕಿನ ಬೀಡಿಗಳು

30 REGD.

ದಿ ಬಾರತ್ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಕಾರ್ಕಳ

ಆಡಳಿತ ಆಫೀಸು:

ಪೋಸ್ಟ್ ಬೋಕ್ಸ್ ನಂ. 730, ಮಂಗಳೂರು-3. (ದ. ಕ.)

ಗ್ರಾಮ್ಸ್: THIRTYBIDI

PHONE · 3330 3930 5230

VAIDYARATNAM P. S. VARIER'S

ARYA VAIDYA SALA

KOTTAKKAL (Kerala State).

Regd· Trade Mark

Head Office Telephones — Kottakkal Exchange.

Office with Extension to Managing Trustee & Manager .... Phone No. 31.
Nursing Home .... Phone No. 44.
Chief Physician ... . Phone No. 25.
Managing Trustee (Residence) .... Phone No 27.
Manager (Residence) .... Phone No 26.

MADRAS BRANCH.

No. 1, Krishnamachari Road, NUNGUMBAKKAM, MADRAS-34
(Phone No. 811275).

Other Branches

1. KOZHIKODE (Phone: 2155).
2. PALGHAT (Phone: 104).
3. — do — Sales Depot (Phone: 584).
4. ALWAYE.
5. ERODE (Phone: 172).
6. TIRUR (Phone: 31).
7. ERNAKULAM (Phone: 33026).
8. TRIVANDRUM (Phone: 3924).

and

OVER 100 AUTHORISED AGENCIES AND DEPOTS.

Genuine standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil, Navarakkizhi, etc., are conducted under the supervision of our Chief Physician at our

GOLDEN JUBILEE NURSING HOME, KOTTAKKAL.

MANAGING TRUSTEE.

ಫೋನ್ : 526

ಪ್ರಜಾರಾಜ್ಯ ವಿಶೇಷಾಂಕ ೧೯೭೦

1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೨೦—೨೧
VOL. 49
No. 20—21

ನವಯುಗ

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೨ & ೨೯ ಜನವರಿ ೧೯೭೦

ಸವಾರಿಪ್ರಿಯ ಪ್ರಭುಗಳು

ಆಗೋಸ್ತು ೧೫ರಿಂದ ಜನವರಿ ೨೬ರ ವರೆಗಿನ ಐದು ತಿಂಗಳುಗಳ ಕಾಲಾವಧಿಗೆ ಈ ವರ್ಷ ಬಹಳಷ್ಟು ಮಹತ್ವ ಬಂತು. ರಾಜಕೀಯ ನಾಯಕರು ಪ್ರಜಾಪ್ರಭುತ್ವದ ಜಪ ಮಾಡುತ್ತ ಪ್ರಜೆಗಳ ಮೇಲೆಯೇ ತಮ್ಮ ಪಾದವಿಟ್ಟು ಮೆಟ್ಟುವ ಹಂಚಿಕೆ ಹೂಡಿದರು; ಕೆಲವಂಶ ಯಶವನ್ನೂ ಗಳಿಸಿದರು. ಪ್ರಜಾತಂತ್ರದ ಸಂರಕ್ಷಣೆಯ ನೆಪವನ್ನು ಮುಂದೆ ಮಾಡಿ ಅಧಿಕಾರಕ್ಕಾಗಿ ಭಾರಿ ಕಿತ್ತಾಟ, ಕಚ್ಚಾಟ ಇನ್ನು ಕೆಲವೆಡೆ ಬಡಿದಾಟಗಳು ನಡೆದುವು. ಪರಿಣಾಮ, ನಮ್ಮ ವಿಶಾಲ ಪ್ರಜಾಪ್ರಭುತ್ವದಲ್ಲಿ ಈ ಕಾಲ ಆಡಳಿತೆಯು ಸಾಮಾನ್ಯವಾಗಿ ಸ್ಥಗಿತವಾಗಿ ಅಧಿಕಾರ ರಕ್ಷಣೆಯ ಪ್ರಯತ್ನಗಳು ಮಾತ್ರ ನಡೆದುವು.

ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯೋತ್ತರ ಇತಿಹಾಸಕ್ಕಿಂತ ಸ್ವಾತಂತ್ರ್ಯ ಪೂರ್ವೇತಿಹಾಸವೇ ಕಳಶಪ್ರಾಯವಾದುದು. ದೇಶವು ಸ್ವತಂತ್ರವಾಗುವಂತೆ ತನು ಮನ ಧನಗಳನ್ನೇ ಪಣವಿಟ್ಟ ಅನೇಕಾನೇಕ ಧುರೀಣರು ಈ ಪಕ್ಷವನ್ನು ಬೆಳೆಸಿದರು. ಇತ್ತೀಚಿನ ವರೆಗೂ ಅದು ಅಭೇದ್ಯವಾಗಿ ಉಳಿಯಿತು. ಆದರೆ, ಪ್ರಧಾನಿ ಇಂದಿರಾಗಾಂಧಿಯವರ ಅಧಿಕಾರ ಲಾಲಸೆಯು ಅದನ್ನು ಇಬ್ಭಾಗವಾಗಿ ಒಡೆಯಿತು. ಒಂದಾಗಿದ್ದ ದೇಶ ವಿಭಜನೆಯಾದುವಾಗಲೂ ಕಣ್ಣೀರು ಮಿಡಿಯದವರು ಕಾಂಗ್ರೆಸ್ ಎರಡು ಹೋಳಾದಾಗ ಮರೆ ಮರೆತು ಮರುಗಿದರು. ಈ ಮರುಕ — ಕಣ್ಣೀರು ಇನ್ನೂ ಮುಂದುವರಿದರೆ, ಯಾರಿಗೂ ಲಾಭವಿಲ್ಲ. ಬಂದ ಸನ್ನಿವೇಶವನ್ನು, ಬದಲಾದ ಪರಿಸ್ಥಿತಿಯನ್ನು ಎದುರಿಸಿ ಮುಂದಡಿಯಿಡುವುದು, ಪ್ರಜಾಪ್ರಭುತ್ವದ ಹೆಸರಿನಲ್ಲಿ ಕೆಸರು ತೊಡೆಯದಂತೆ ಎಚ್ಚರಿಕೆ ವಹಿಸ ಬೇಕಾದುದು ಬಹಳ ಅಗತ್ಯ.

ಭಾರತ ಪ್ರಜಾಪ್ರಭುತ್ವವು ಪ್ರಾಯ ಪ್ರಬುದ್ಧವಾಯಿತು. ಸ್ವತಂತ್ರವಾಗಿ ತನ್ನ ಆಗು ಹೋಗುಗಳನ್ನು ಚಿಂತಿಸುವ, ಗಂಡಾಂತರಗಳನ್ನು ಎದುರಿಸುವ ಎದೆಗಾರಿಕೆ ಇದುವರೆಗೆ ಬರಬೇಕಿತ್ತು. ಬಾಲಿಶ ಮನೋವೃತ್ತಿ ದೂರವಾಗಿ ಯುವಕನಲ್ಲಿರ ಬೇಕಾದ ಆತ್ಮವಿಶ್ವಾಸ, ಕೆಚ್ಚು, ಉತ್ಸಾಹಗಳು ಮೂಡ ಬೇಕಾಗಿತ್ತು. ಆದರೆ, ಶ್ರೀ ಸಾಮಾನ್ಯನಲ್ಲಿ ಈ ಗುಣಗಳು ತಲೆದೋರಿವೆಯೆಂದು ಹೇಳುವುದು ಕಷ್ಟ. ಇತ್ತೀಚಿನ ದಿನಗಳಿಂದ ಒಂದು ಬಗೆಯ ಉತ್ಸಾಹ ಕಾಣುತ್ತಿದೆಯಾದರೂ ಅದು ಸರಿಯಾದ ದಾರಿಯಲ್ಲಿ ಹರಿಯುತ್ತಿಲ್ಲ. ಹೊಳೆಯಾಗಿ, ಹುಚ್ಚು ಹೊಳೆಯಾಗಿ, ದೇಶಕ್ಕೆ ಮಾರಿಯಾಗಿ ಅದು ಹರಿದು ಅನಾಹುತಗಳಿಗೆ ಕಾರಣವಾಗುತ್ತಿರುವುದನ್ನು ಅಲ್ಲಗಳೆಯಲಾಗದು. ಇದರಿಂದ ದೇಶ ಉನ್ನತವಾಗುವುದು ಅಸಾಧ್ಯ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳದೇ ಪರಮಾಧಿಕಾರ. ಪಕ್ಷೀಯ ಪದ್ಧತಿಯ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಪಕ್ಷಗಳಿಗೆ ಅತ್ಯಂತ ಪ್ರಾಮುಖ್ಯವಿದೆ. ಆದರೆ, ಈ ವರ್ಷ ಪಕ್ಷದ ಪರಮಾಧಿಕಾರ ಮತ್ತು ಅಧಿಕಾರ ಸೂತ್ರದ ನಡುವೆ ಭಯಂಕರ ಹೋರಾಟ ನಡೆದು ಗೆದ್ದವರದೇ ಸತ್ಯವೆಂದು ಸಿದ್ಧವಾಯಿತು. ಈ ಬಗೆಯ ಅಂತಃಕಲಹ 'ಅಧಿಕಾರದಾಹ' ದಿಂದಲೇ ಪ್ರೇರಿತವಾದುದೆಂದು ವಿದೇಶೀಯರೂ ಅರ್ಥ ಕಟ್ಟಿದ್ದಾರೆ. ದೇಶವಾಸಿಗಳಿಗಿದು ಅಂದೇ ಮನವರಿಕೆಯಾಗಿದೆ. ರಾಜಕೀಯ ಪಕ್ಷಗಳ ಭಾರದಿಂದ ಕುಂಬಿದ ಭಾರತೀಯ ಬಂಡಿಗೆ ಇನ್ನೊಂದು ಪಕ್ಷೀಯ ನೊಗ ಭಾರರೂಪವಾಗುವುದಿಲ್ಲವೆಂದು ಮಾತ್ರ ಸಮಾಧಾನದ ನಿಟ್ಟುಸಿರು ಬಿಡಬೇಕು. ಭಾರತೀಯ ಪ್ರಜಾಪ್ರಭುತ್ವದಲ್ಲಿರುವಷ್ಟು ರಾಜಕೀಯ ಪಕ್ಷಗಳು ಮತ್ತೆಲ್ಲಿಯೂ ಕಾಣಸಿಗಲಾರವು. ಅವರಲ್ಲೂ ಸಮಾನ ನೀತಿಯ ಪಕ್ಷಗಳೇ ಹಲವಾರು. ಎಲ್ಲೋ ಕೆಲವೊಂದು ಕಾರ್ಯವಿಧಾನದ ಬಗ್ಗೆ ಭಿನ್ನಮತವಿರಬಹುದು. ಈ ಪಕ್ಷಾಧಿಕ್ಯದ ಪರಿಣಾಮವನ್ನು ನಾವು ಬಿಹಾರ ರಾಜ್ಯದಲ್ಲಿ ಕಣ್ಣಾರೆ ನೋಡುತ್ತೇವೆ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ನಂತರದ ಕೆಲವು ತಿಂಗಳುಗಳಲ್ಲಿ ಒಂದಕ್ಕಿಂತ ಹೆಚ್ಚು ಸರಕಾರಗಳು ಅಲ್ಲಿ ರಚಿತವಾದುವು. ಮಧ್ಯಾವಧಿ ಚುನಾವಣೆಗಳಲ್ಲೂ ಪಕ್ಷೀಯ ಪೀಡೆಯಿಂದ ವಿಮೋಚನೆ ಆದಕ್ಕಾಗಲಿಲ್ಲ. ಶ್ರೀ ಸರ್ದಾರ ಹರಿಹರ ಸಿಂಗರು ಕಾಂಗ್ರೆಸ್ ನಾಯಕತ್ವದಲ್ಲಿ ಸಮ್ಮಿಶ್ರ ಸರಕಾರ ರಚಿಸಿದರೂ ಮುಂದದು ಮುಂದುವರಿಯಲಿಲ್ಲ. ವಿಚಾರಣೀಯ ಅಂಶವೆಂದರೆ, ರಾಷ್ಟ್ರಪತಿ ಆಡಳಿತ ಅಲ್ಲಿ ಬಂದು ಆರು ತಿಂಗಳುಗಳು ಕಳೆದರೂ ಪರ್ಯಾಯ ಸರಕಾರ ರಚನೆಗೊಳ್ಳದೆ ಹೋದದ್ದು ಮತ್ತು ಅಲ್ಲಿ ವಿಧಾನ ಸಭಾ ಸದಸ್ಯರು ಕೆಲಸವಿಲ್ಲದೆ ವೇತನ ಮತ್ತು ಇತರ ಸೌಲಭ್ಯಗಳನ್ನು ಇವನ್ನೂ ಪಡೆಯುತ್ತಿರುವಂತಹುದು. ಆಗಸ್ಟ್ ೧೫ರ ಕೊನೆಗಣ ರಾಜಕೀಯ ಪರಿಸ್ಥಿತಿಯಲ್ಲೇ ಸರ್ದಾರ ಸಿಂಗರ ಸರಕಾರ ಮುರಿದು ಬಿದ್ದಿರುವಾಗ, ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಇನ್ನೊಂದು ಸರಕಾರ ರಚಿತವಾಗುವ ಆಶೆಯನ್ನಿಟ್ಟುಕೊಳ್ಳುವುದು ಮೂರ್ಖತನವೇ ಸರಿ.

ಪ್ರಜಾಪ್ರಭುತ್ವದಲ್ಲಿ ಪ್ರಜೆಯ ಹಣ ದುರುದ್ದೇಶಗಳಿಗಾಗಿ ಹೇಗೆ ಪೋಲಾಗುತ್ತಿದೆ ಎಂಬುದಕ್ಕಾಗಿ ಬಿಹಾರವನ್ನು ಉದಾಹರಿಸಲಾಯಿತು. ಹಾಗೆಯೇ ಆಡಳಿತ ಕಾಂಗ್ರೆಸಿನ ಮಂತ್ರಿ ಮಾಗಧರು ರಾಜ್ಯಗಳಿಗೆ 'ಅನಧಿಕೃತ' ಸಂದರ್ಶನ ನೀಡಿ ರಾಜ್ಯದ ಬೊಕ್ಕಸಕ್ಕೆ ತೂತು ಕೊರೆಯುತ್ತಿರುವುದರ ಬಗ್ಗೆ ಅಲ್ಲಲ್ಲಿ ದೂರುಗಳು ಬರತೊಡಗಿವೆ. ಬಡತನದಿಂದ ನವೆಯುತ್ತಿರುವ ಶ್ರೀ ಸಾಮಾನ್ಯನ ಕಾಲುಗಳಲ್ಲಿ ನಡೆಯಲೂ ಶಕ್ತಿಯಿಲ್ಲವಾದಾಗ, ಅವನಿಗೆ ಊರಲು ಕೋಲೇ ಇಲ್ಲವಾದಾಗ ಅವನ ಹೆಸರಿನಲ್ಲಿ ಗಾಳಿಯೊಡನೆ ಯಾತ್ರೆ ಮಾಡುವುದು, ಅಥವಾ ಗವರ್ನರದ ಜೀವನ ನಡೆಸುವುದು ಅಧಿಕಾರಾರೂಢರಿಗೆ ಹೇಳಿಸಿದ್ದಲ್ಲ.

ಕ್ಷಾಮ–ಡಾಮರಗಳಿಂದ ಚೇತರಿಸಿಕೊಳ್ಳತೊಡಗಿದ ಭಾರತ ಔದ್ಯೋಗಿಕವಾಗಿಯೂ ಎಚ್ಚರವಾಗ ತೊಡಗಿರುವುದು ಉಲ್ಲೇಖನೀಯವೇ. ಆದರೆ, ದೇಶದಲ್ಲಿ ಪದೇ ಪದೇ ಏಳುತ್ತಿರುವ ಕಾರ್ಮಿಕರ ತಂಟೆ, ಜಾತೀಯ ಗಲಭೆಗಳು ಖೇದಕರ. ಪಶ್ಚಿಮ ಬಂಗಾಳದಲ್ಲಿನ ಕಾರಖಾನೆಗಳಲ್ಲಿ ಬಂಡವಳ ಹೂಡಿದವರ ಕತೆ ಬರಿಯ ವ್ಯಥೆಯಾಗಿ ಪರಿಣಮಿಸಿದ್ದು ಪ್ರಜಾಸತ್ತೆಗೆ ಮಾರಕ. ಶ್ರಮಿಕ – ಕಾರ್ಮಿಕರ ಕಲ್ಯಾಣ ಬಂದ್ – ಘೇರಾವ್‌ಗಳಿಂದಲೇ ಸಾಧ್ಯವೆಂಬ ಭಾವನೆ ಮನೆಮಾಡಿದ್ದು ದುರದೃಷ್ಟಕರ. ಈ ಮನೋವೃತ್ತಿ ಬದಲಾಗದೆ ಹೋದಲ್ಲಿ ದೇಶದ ಉತ್ಪಾದನಾ ರಂಗ ಬಲವಾಗುವುದಿಲ್ಲ. ಇದೇ ರೀತಿ ದೇಶವನ್ನು ತಿನ್ನುವ ಇನ್ನೊಂದು ಹುಳ 'ನಕ್ಸಲೀಯ'ರ ಹಾವಳಿ. ಹಿಂದಿನ ಕಾಲದಲ್ಲಿ ಪಿಂಡಾರಿಗಳು ಶ್ರೀ ಸಾಮಾನ್ಯರನ್ನು ತಿನ್ನುತ್ತಿದ್ದ ಕತೆ ಕೇಳಿದ್ದೇವೆ. ಈ ನಕ್ಸಲೀಯರು ಸಶಸ್ತ್ರ ಹೋರಾಟ ಪ್ರಿಯರು; ಅಪ್ರಕಾಶ ನಿಷ್ಠುರ. ಇವರ ಹಾವಳಿಯಿಂದ ಆತಂಕ ಹಗಲಿನಲ್ಲೂ ತೀವ್ರ ಹರಡುತ್ತಿದೆ. ದೇಶವಾಸಿಯಾಗಿದ್ದರೂ ದೇಶದ್ರೋಹಿ ಚಟುವಟಿಕೆಗಳಲ್ಲಿ ಆಸಕ್ತವಾಗಿರುವ ಕಮ್ಯುನಿಸ್ಟ್ ಪಕ್ಷಗಳು ದೇಶದ ಸ್ವಾತಂತ್ರ್ಯಕ್ಕೆ ಮಾರಕ ಪ್ರಾಯವಾಗುವಂತೆಯೇ ಮುನ್ನಡೆದಿವೆ.

ಭಾರತದ ರಾಜಕೀಯ ವಾತಾವರಣ ಬದಲಾಗಿದ್ದು ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಹೊಸ ಮೊದಲ ಬಾರಿಗೆ ಅಧಿಕೃತ ವಿರೋಧ ಪಕ್ಷವೊಂದು ಸಂಸತ್ತಿನಲ್ಲಿ ಈ ವರ್ಷ ಸ್ಥಾಪಿತವಾಯಿತು. ಪ್ರಾಯಃ ಈ ವರ್ಷದ ನಮ್ಮ ಬಹುದೊಡ್ಡ ಸಾಧನೆಯೆಂದು ಇದನ್ನೇ ತೋರಿಸಬೇಕು. ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಈ ಸ್ಥಾನ ದೊರೆಯ ಬೇಕಾಗಿತ್ತು. ಆದರೆ, ರಾಷ್ಟ್ರೀಕರಣದ ವೇಳೆಯಿದ್ದ ಉತ್ಸಾಹ ಆ ನಂತರ ಉಳಿಯಲಿಲ್ಲವಾದ್ದರಿಂದ ಅದನ್ನು ಮಹಾಸಾಧನೆಯೆಂದು ಹೇಳುವಂತಿಲ್ಲ. ನಮ್ಮ ವಿದೇಶ ನೀತಿಯ ತಳಹದಿಯಲ್ಲಿ ಏನೂ ಬದಲಾವಣೆ ಆಗಿಲ್ಲವಾದರೂ ಕಾರ್ಯ ವಿಧಾನದಲ್ಲಿ ಬದಲಾವಣೆಯು ಅಗತ್ಯವಿದೆ. ಪಾಕಿಸ್ತಾನವು ಭಾರತವನ್ನು ಕಡೃಷ್ಟಿಯಿಂದ ನೋಡುತ್ತಲೇ ಮುಂದುವರಿದಿದ್ದು, ಇದಕ್ಕೆ ಅರಬ ರಾಷ್ಟ್ರಗಳ ವ್ಯಕ್ತಾವ್ಯಕ್ತ ಸಹಾನುಭೂತಿಯಿದೆ. ಆದುದರಿಂದ ಅರಬ ಜಗತ್ತಿನ ಬಗ್ಗೆ ಇದ್ದ ಭಾರತೀಯ ದೃಷ್ಟಿ ವ್ಯಾವಹಾರಿಕವಾಗಿ ಇನ್ನಾದರೂ ಬದಲಾಗಲೇ ಬೇಕು. ಕೆಂಪು ಚೀನದ ಸೇನೆಗಳು ಉತ್ತರ ಗಡಿಯಲ್ಲಿ ಜಮೆಯಾಗುತ್ತಲೇ ಇವೆ, ರಷ್ಯ–ಅಮೆರಿಕೆಗಳ ನಡವಣ ದ್ವಂದ್ವವಿನ್ನೂ ಮುಂದುವರಿಯುತ್ತಿದೆ. ಭಾರತದ ಅಧಿಕಾರಾರೂಢರ ಒಲವು ರಷ್ಯದತ್ತವಿರುವುದರಿಂದ ಅಮೆರಿಕೆಯು ಭಾರತದ ಬಗ್ಗೆ ಅನಾಸಕ್ತಿ ಹೆಚ್ಚಿಸಿಕೊಂಡರೂ ತಪ್ಪಲ್ಲ.

ಭಾರತೀಯ ಪ್ರಜಾತಂತ್ರದ ಒಂದು ವರ್ಷ ಪ್ರಜೆಯ ಹೆಸರಿನಲ್ಲೇ ಪ್ರಭು

(ಮೂವತ್ತೆರಡನೇ ಪುಟ ನೋಡಿರಿ)

ಪುತ್ತೂರು
ಲೇಂಡ್ ಟ್ರಿಬ್ಯುನಲ್‌ನಲ್ಲಿ
R. R. C. 216/69
ಯಸ್. ಈಶ್ವರ ಭಟ್ಟ — ಅರ್ಜಿದಾರ.
ಕೈಜಮ್ಮ ಗೌಡ — ಎದ್ರಿಗಳು.
R. 3 — ಇವರು,
ಬೊಡಿಯ ಪೂಜೆ ವೈದಿಕ ಬ್ಯಾರಿ ಮಗ, ಉಪ್ಪಿನಂಗಡಿ ಕಸಬಾ ಗ್ರಾಮದ ಕುಟೀಲು.
ಸದ್ರಿ ೩ನೇ ಎದ್ರಿಗೆ ಕೋರ್ಟು ಮುಖಾಂತರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ನಿಮ್ಮಿಂದ ಕೊಡಿ ಅರ್ಜಿದಾರರಿಗೆ ತಾರೀ 31-3-68ಕ್ಕೆ ಬರಬೇಕಾದ ಗೇಣಿ ಬಾಕಿಗೆ ದೂರಿದ ಮೇರಿನ ಅರ್ಜಿ ತಾ 18-3-70 ಕ್ಕೆ ನಿಮ್ಮ ನೋಟೀಸಿಗೆ ಇರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಪಾತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವಿಲ್ ವಾದಿಯಾಗಿ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for Petitioner.
ತಾ. 20-1-70.

ಶ್ರೀ ಗೌರೀಶ ಕಾಯ್ಕಿಣಿ

ಅಹಮದಾಬಾದದಿಂದ ರಬಾತ್‌ಕ್ಕೆ

ಭಾರತದ ಮುಸ್ಲಿಂ ಜನಾಂಗದ ತೃಪ್ತಿಗಾಗಿ ಸರಕಾರ ರಬಾತಕ್ಕೆ ನಿಯೋಗ ಕಳಿಸಿ ಮುಖಭಂಗ ಮಾಡಿಕೊಂಡಿತು. ಇದರಲ್ಲಿ ಸೋಜಿಗವೇನೂ ಇರುವುದಿಲ್ಲ. ಆದರೆ, ಅಧಿಕ ಸಂಖ್ಯಾಕ ಭಾರತೀಯರ ದೃಷ್ಟಿ ಅರಬ ದೇಶಗಳತ್ತ ಉಗ್ರವಾಗುತ್ತಿದೆ. ಚೀನಾ - ಪಾಕಿಸ್ತಾನಗಳು ಭಾರತವನ್ನು ಆಕ್ರಮಣ ಮಾಡಿದಾಗ ಅರಬರಾಷ್ಟ್ರಗಳು ಶತ್ರುವಿನ ಬಾಲ ಹಿಡಿದದ್ದೇ ಇದಕ್ಕೆ ಕಾರಣ. ನಮ್ಮ ವಿದೇಶ ನೀತಿಯು ವ್ಯವಹಾರ ಯೋಗ್ಯವಾಗ ಬೇಕೆಂಬ ಬೇಡಿಕೆಗೆ ಬಲ ಬಂದಿದೆ.

ಅಹಮದಾಬಾದದಲ್ಲಿ ಕೋಮುವಾರಿನ ದೊಂಬಿಗಳು ಭುಗಿಲೆದ್ದು ದಾವಳ ಹಬ್ಬಿಸಿದ್ದಿಲ್ಲವಾದರೆ ರಬಾತದ ಮುಸ್ಲಿಂ ಅಗ್ರಮಟ್ಟದ ಪರಿಷತ್ತಿನಲ್ಲಿ ಭಾರತಕ್ಕೆ ಅಷ್ಟೊಂದು ಮನ್ನಣೆಯು ಒದಗುತ್ತಿದ್ದಿಲ್ಲ ಎಂದು ಕೇಂದ್ರ ಸರಕಾರದ ಹೇಳಿಕೆ ಮತ್ತು ಭೂಮಿಕೆ; ಆದ ತೀರ ಅಸಂಗತವೂ ಅಲ್ಲ.

ಆದರೆ ಅಹಮದಾಬಾದಿನಲ್ಲಿಯ ಆ ದಾರುಣ ಪರಿಸ್ಥಿತಿ ಉಂಟಾಗುವ ಮುಂಚೆಯೇ ರಬಾತ ಪರಿಷತ್ತಿನ ಸಂಯೋಜಕರು ಭಾರತವನ್ನು ಅದಕ್ಕೆ ಆಮಂತ್ರಿಸಲು ಅಷ್ಟೇನು ಅನುಕೂಲವಿದ್ದಿಲ್ಲ—ಇದರ ಮರ್ಮವೇನು?

ಮರ್ಮವಿಷ್ಟೇ— ಭಾರತವು ಧರ್ಮಾತೀತ ರಾಷ್ಟ್ರವೆಂದು ಆ ಮುಸ್ಲಿಂ (ಅರಬ) ರಾಷ್ಟ್ರಗಳು ಎಣಿಸಲಿ ಬಿಡಲಿ, ಇದು ಮುಸ್ಲಿಂ ರಾಷ್ಟ್ರವಲ್ಲವೆಂದು ಮಾತ್ರ ರಬಾತದ ಸಂಯೋಜಕರಿಗೆ ಪೂರ್ತಿ ಮನವರಿಕೆ ಇತ್ತು. ಅಂದರೆ ಅವರ ಪಾಲಿಗೆ ಭಾರತ ಬಹುಸಂಖ್ಯ ಹಿಂದೂಗಳ ರಾಷ್ಟ್ರವೇ ಆಗಿದೆ ಎನ್ನಬಹುದೇ? ಹಾಗಾದರೆ ನಮ್ಮ ಸೆಕ್ಯೂಲರ್ ಅವಿಭಾವ ಎಷ್ಟಾದ ಮಟ್ಟಿಗಾದರೂ ತನ್ನ ಉದ್ದಿಷ್ಟ ಪ್ರಭಾವ ಬೀರಲು ಅಯಶಸ್ವಿ ಆಗಿದೆಯೆಂದು ಅರ್ಥವಾಗುವುದಿಲ್ಲವೆ?

ಭಾರತದ ನಿಲುವು ಹೀಗಿತ್ತು — ಈ ದೇಶದಲ್ಲಿ 60 ಲಕ್ಷ ಮುಸ್ಲಿಮರಿದ್ದಾರೆ. ಜೆರುಸಲೇಮದಲ್ಲಿಯ (ಅಲ್ ಅಕ್ಸಾ) ಮಸೀದಿಯನ್ನು ಯಹೂದಿಗಳು ಸುಟ್ಟದ್ದರಿಂದ ನಮ್ಮ ಈ ಬಹುಸಂಖ್ಯೆ ಮುಸ್ಲಿಂ ಬಾಂಧವರಿಗೆ ವಿಪರೀತ ಮನಸ್ತಾಪವಾಯಿತು. ಆ ಕುರಿತು ತಮ್ಮ ನಿಷೇಧದ ಜನಾಭಿಪ್ರಾಯವು ಈ ಮುಸ್ಲಿಂ ರಾಷ್ಟ್ರಗಳ ಪರಿಷತ್ತಿನಲ್ಲಿ ಭಾಗವಹಿಸಲು ಇವರು ಕೇಂದ್ರ ಸರಕಾರಕ್ಕೆ ಬಲವಾಗಿ ಒತ್ತಾಯ ಪಡಿಸಿದರು.

ಅಂದರೆ ರಬಾತದಲ್ಲಿ ಭಾರತದ ಭಾಗವಹಿಸುವಿಕೆ ಮುಖ್ಯವಾಗಿ ರಾಜಕೀಯವಾಗಿತ್ತು. ಈ ಪರಿಷತ್ತಿನ ಆಯೋಜಕರೂ ಪ್ರತಿನಿಧಿಗಳೂ ಮುಸ್ಲಿಮರು ಆಗಿದ್ದರೂ ಅದರ ಪ್ರಯೋಜನ, ಅಲ್ಲಿಯ ಚರ್ಚೆ ಶುದ್ಧ ಧಾರ್ಮಿಕ ಸ್ವರೂಪದ್ದಿದ್ದಿಲ್ಲ. ಭಾರತದ ವಿದೇಶಿ ನೀತಿಯು ಏಷಿಯಾದ ಈ ಭಾಗದಲ್ಲಿ ಅರಬರಿಗೆ ಅನುಕೂಲವೂ, ಇಸ್ರಾಯಿಲರಿಗೆ ಪ್ರತಿಕೂಲವೂ ಆಗಿದೆ. ಅರಬ ರಾಷ್ಟ್ರಗಳಿಗೆ ತಮ್ಮ ಈ ಪಕ್ಷಪಾತಿ ಪ್ರತಿಕೂಲ ಧೋರಣೆಯನ್ನೂ ಭೂಮಿಕೆಯನ್ನೂ ಪ್ರತಿಪಾದಿಸಿ ತೋರಿಸಲು ರಬಾತ ಪರಿಷತ್ತು ಒಂದು ಅನಾಯಾಸವಾಗಿ ದೊರಕುವ ಹೊಸ ರಂಗವೆಂದು ನಮ್ಮ ಸರಕಾರದ ವಿದೇಶಾಂಗ ವಿಭಾಗದ ನೀತಿ ನಿಪುಣರು ಭಾವಿಸಿದರು. ಅದೊಂದು ಮುಸ್ಲಿಂ ರಾಷ್ಟ್ರಗಳ ಮುಸ್ಲಿಂ ಧರ್ಮವಿಚಾರದ ಪರಿಷತ್ತೆಂದು ಭಾರತ ಸರಕಾರ ಪರಿಗಣಿಸಲೇ ಇಲ್ಲ. ಅವರಿಗೆ ಅದು ಇಸ್ರಾಯಿಲ್‌ದ ಕುರಿತು ಪ್ರತಿಕೂಲ ನಿಲುವೆಯನ್ನು ಪ್ರಕಟಿಸಲು ಅರಬ ರಾಷ್ಟ್ರಗಳು ಒದಗಿಸಿದ ಆಯಕ ಸಂದರ್ಭ. ವಿಶೇಷತಃ ಅರಬ ಗಣರಾಜ್ಯದ ಅಧ್ಯಕ್ಷ ಭಾರತ ಮಿತ್ರ ಜನರಲ್ ನಾಸೇರರ ಕೈಗೆ ಬಲ ಹೆಚ್ಚಿಸಲು ಭಾರತಕ್ಕೆ ಅದೊಂದು ಅನುಕೂಲ ಸಂಧಿ.

ಅಂದಾಗ ಭಾರತವು ಈ ಪರಿಷತ್ತಿನಲ್ಲಿ ಮುಸ್ಲಿಂ ರಾಷ್ಟ್ರಗಳಲ್ಲಿ ಒಂದೆಂದು ಭಾಗವಹಿಸಲು ಹೊರಗಿದ್ದೇ ಅಲ್ಲ. ಒಂದು ವಿಶಿಷ್ಟ ರಾಜಕಾರಣಿಕ ಹಿತಸಾಧಿಸಲು ಹೋಗಿದ್ದು, ಮುಖಭಂಗಿತವಾಯಿತು. ಇದು ಮುಗಿದ ಮೇಲಿನ ಹಿನ್ನೋಟದ ವಿಷಯ. ಹಾಗೆ ನೋಡಿದರೆ ಈ ಪ್ರಸಿದ್ಧ ಪ್ರಾಚೀನ ಮಸೀದಿಗೆ ಬೆಂಕಿ ಹಚ್ಚಿದವನೂ ಯಹೂದಿಯಲ್ಲ. ಆಸ್ಟ್ರೇಲಿಯಾದ ಒಬ್ಬ ಕ್ರಿಶ್ಚನನೆಂದೂ ಗೊತ್ತಾಗಿದೆ.

ಇಂಥ ಪ್ರಕಾಂಡ ಪ್ರಮೇಯಗಳಲ್ಲಿ ಮುಂದಿಟ್ಟ ಸಂಗತಿಗಳಿಗಿಂತ ಹಿನ್ನೆಲೆಯ ಒಳವು ಹೊಳವುಗಳೇ ಮಹತ್ವದವಾಗುತ್ತವೆ. ಇಂದು ರಬಾತದಲ್ಲಿ ಮುಖಭಂಗಿತರಾಗಿ ನಮ್ಮ ಪ್ರತಿನಿಧಿಗಳು ಹಿಂದಿರುಗಿದ್ದರಿಂದ ಸಂಸತ್ತಿನಲ್ಲಿ ಸರಕಾರದ ಮೇಲೆ ಇಷ್ಟೊಂದು ಉರಿತಂಬು ಕಾರಲಾಯಿತು. ಅದೇ ನಮ್ಮ ನಿಯೋಗ ಅಂಥ ಭಂಗ ಪಟ್ಟುಕೊಳ್ಳದೇ ಗೌರವದಿಂದಲೇ ಹಿಂದಿರುಗಿದ್ದರೆ ನಾವು ಈ ಮುಸ್ಲಿಂ ಪರಿಷತ್ತಿನಲ್ಲಿ ಭಾಗವಹಿಸಿದ್ದೇ ಅಪರಾಧವಾಯಿತೆಂದು ನಮ್ಮ ಈ ಉಗ್ರ ಉಜ್ವಲ ದೇಶಾಭಿಮಾನಿಗಳು ರೇಗಾಡುತ್ತಿದ್ದರೆ? ಇದೂ ಒಂದು ವಿಚಾರಣೀಯ ಪ್ರಶ್ನೆ. ಅಷ್ಟೇ ವಿಚಾರಣೀಯವಾದ ಇನ್ನೊಂದು ಪ್ರಶ್ನೆಯೇನೆಂದರೆ, ನಮ್ಮ ಪ್ರಧಾನಿ, ವಿದೇಶ ಮಂತ್ರಿ ಪ್ರಭೃತಿಗಳು ವಿರೋಧಿ ಪಕ್ಷಗಳತ್ತಿದ ಸವಾಲಿನ ಬೋನಿನಲ್ಲಿ ತಾವೂ ಹೇಗೆ ಬಿದ್ದರು? ಗಾಂಧೀಜೀ ಖಿಲಾಫತ ಚಳವಳ ಎತ್ತಿಕೊಂಡಿದ್ದರು. ನೆಹರೂಜಿಯ ಕಾಲದಲ್ಲಿ ಮುಸ್ಲಿಂ ಪರಿಷತ್ತುಗಳಲ್ಲಿ (ಅಂತರಾಷ್ಟ್ರೀಯ) ಭಾರತ ಭಾಗವಹಿಸಿತ್ತು. ಹೀಗೆಲ್ಲ ಜಿದ್ದಿಗೆ ಬಿದ್ದೇ ಪ್ರತೀವಾದ ಹೂಡಿದಂತೆ ರಾಣ ತ್ತಿತ್ತು.

ನಿಜವಾಗಿಯೂ ರಬಾತಕ್ಕೆ ನಿಯೋಗ ಒಯ್ದುದ್ದು ಒಂದು ಪ್ರಮಾದವೇ ಸರಿ. ವಿಶೇಷತಃ ಅಹಮದಾಬಾದಿನ ದುರಂತ ಹತ್ಯಾಕಾಂಡದ ದಳ್ಳುರಿ ಧಗ ಧಗಿಸುತ್ತಿರುವಾಗ ಈ ಮೂಲಕ ಪರರಾಷ್ಟ್ರಗಳಲ್ಲಿ ಭಾರತದ ಮೋರೆಗೆ ಹೊಗೆ ಬಳಿದದ್ದು ಸಾಲದೋ ಎಂಬಂತೆ, ರಬಾತದಲ್ಲಿಯೂ

(ಮೂವತ್ತೆರಡನೇ ಪುಟ ನೋಡಿರಿ)

ಪುತ್ತೂರು
ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ
Rent Petition 1476/68.
ಕೃಷ್ಣ ಬಾಳ್ತಿಲ್ಲಾಯ — ಅರ್ಜಿದಾರ
ಅಯ್ಯ ಕನಡ ಕೂಡಾ — ಎದುರು.

R. 2— ರಾಮ ಕನ್ನಡ
ಪುಟ್ಟನ ಮಗ
ಉಜಿರೆ ಗ್ರಾಮ, ಬೆಳ್ತಂಗಡಿ ತಾಲ್ಲೂಕು.

ಸದ್ರಿ ೨ನೇ ಎದುರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ನಿಂಮಿಂದ ಕೂಡಾ ಅರ್ಜಿದಾರರಿಗೆ ತಾರೀಕು 31-8-67ಕ್ಕೆ ಬರಬೇಕಾದ ಗೇಣಿ ಬಾಕಿಗೆ ಮಾಡಿದ ಮೇಲಿನ ಅರ್ಜಿ ತಾರೀಕು 18-2-1970ಕ್ಕೆ ನಿಂಮ ನೋಟೀಸಿಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಂಮನ್ನು ಗೈರ್ಹಾಜರು ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/. M. Rammohan Rao.
Advocate for Petitioner.
ತಾ. 30-1-1970.



ಶ್ರೀ ಕಡ್ಡಲಸೆ ವಿಶ್ವೇಶ್ವರ ಶರ್ಮಾ—

ಅರ್ಥಪರತೆಯ ಸೇವಾ ಪ್ರಿಯತೆ

(ಅರ್ಥಾತ್ ಸ್ವಾರ್ಥಕ ಸೇವೆ)

●●●

ರಾಜ್ಯಕೀಯದಲ್ಲಿ ವಿಕೇಂದ್ರೀಕರಣವನ್ನು ನಾವು ಅಲ್ಪಸ್ವಲ್ಪವಾಗಿ ವ್ಯವಹಾರಕ್ಕೆ ತರುತ್ತಿದ್ದೇವೆ. ಆದರೆ, ಸಮಾಜದಲ್ಲಿ ಅಂತಹ ವಿಕೇಂದ್ರೀಕರಣವಿನ್ನೂ ಸಾಧ್ಯವಾಗಿಲ್ಲ. ಸೇವೆಯ ಹೆಸರಿನಲ್ಲಿ ಹತ್ತಾರು ಸೇವಾ ಸಂಸ್ಥೆಗಳನ್ನು ಗುತ್ತಿಗೆ ಪಡೆದು ಸ್ವಾರ್ಥ ಸಾಧನೆಗಾಗಿ ಸೇವಾ ಸ್ಥಾನಗಳನ್ನು ಬಳಸುವ ಸೇವಾಸಾಧನಗಳ ಕೇಂದ್ರೀಕರಣ ಮೊತ್ತಮೊದಲು ವಿಕೇಂದ್ರೀಕೃತಗೊಂಡರೆ, ದೇಶಕ್ಕೆ ಒಳಿತಿದೆ.

●●●

ಪ್ರತಿಯೊಂದು ವಸ್ತು-ವ್ಯವಹಾರ-ವ್ಯವಸ್ಥೆಯಲ್ಲಿ ಒಂದು ಇತಿ ಮಿತಿಯಿರಬೇಕೆಂದು ಹೇಳುತ್ತೇವೆ. ಯಾವುದೂ ಅತಿಯಾಗಿ ಅನಿರ್ಬಂಧವಾಗಿ ಬೆಳೆಯುವುದು ಕ್ಷೇಮಕರವಲ್ಲ. ಹಾಗೆ ಬೆಳೆಯುವ ಸಂದರ್ಭದಲ್ಲಿ ಸರಕಾರವಾಗಲೀ, ಸಮಾಜವಾಗಲೀ ಅದನ್ನು ಲಕ್ಷಿಸಿ ಸೂಕ್ತ ಕ್ರಮ ಕೈಕೊಳ್ಳುವ ಕೆಲಸ ನಿರ್ವಹಿಸಬೇಕಾಗುತ್ತದೆ.

ಈ ವಿಚಾರದ ಪ್ರಯೋಗವನ್ನಿಂದು ನಮ್ಮ ರಾಜಕೀಯ ಸಾಮಾಜಿಕ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಮಾಡಬೇಕಾದ ಪ್ರಸಂಗ ಬರತೊಡಗಿದೆ ಎಂದು ಹೇಳಲೇಬೇಕಾಗಿದೆ. ಯಾವುದೇ ಕ್ಷೇತ್ರದ ಅಧಿಕಾರ ಪಡೆಯುವಲ್ಲಿ ಇಂದು ಕೆಲವು ವ್ಯಕ್ತಿಗಳು ಅಳತೆಗೆಟ್ಟು ಗುತ್ತಿಗೆ ಪಡೆಯುತ್ತಿದ್ದಾರೆಯೋ ಏನೋ ಎಂದೆನಿಸುವಷ್ಟು ಅಧಿಕಾರಗಳಿಸುವಲ್ಲಿ ಮುಂದೆ ಸಾಗಿದ್ದಾರೆ. ಈ ರೀತಿ ಇತಿ ಮಿತಿಯಿಲ್ಲದ ಈ ಗುತ್ತಿಗೆದಾರಿಕೆಯ ಮೇಲೆ ಸರಕಾರದ ಸುತ್ತಿಗೆ ನಿಯಂತ್ರಣದ ಕಡಿವಾಣ ಹಾಕದಿದ್ದರೆ ಈ ಅಧಿಕಾರ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕರಿಸಿ ಅದರಿಂದ ಸಾರ್ವಜನಿಕ ಸ್ಥಿತಿ-ಗತಿ-ಹದಗೆಟ್ಟು ಹೋಗುವ ಪ್ರಸಂಗವೂ ಬರಬಹುದೆಂದು ಬಲ್ಲವರು ಹೇಳುತ್ತಿದ್ದಾರೆ.

ಅಧಿಕಾರದ ಕೇಂದ್ರೀಕರಣ

ಅಧಿಕಾರವು ಕೇಂದ್ರೀಕರಣವಾಗುವುದು ಹಿತಕರವಲ್ಲವೆಂದೂ ಅದನ್ನು ವಿಕೇಂದ್ರೀಕರಿಸಿ ಎಲ್ಲ ದಿಸೆಯಲ್ಲೂ ಅದು ಕ್ರಿಯಾತ್ಮಕ ಶಕ್ತಿಯಾಗಿ ಬೆಳೆಯಬೇಕೆಂಬ ಉದ್ದೇಶದಿಂದಲೇ ಈ ವಿಕೇಂದ್ರೀಕರಣದ ಯೋಜನೆ ನಮ್ಮಲ್ಲಿ ಬಂದಿದೆ. ಈ ಸಾಧನೆಯ ಪ್ರಥಮ ಪ್ರಯೋಗವಾಗಿ ಪಂಚಾಯತಗಳು ರೂಪುಗೊಂಡಿವೆ. ವಿಕೇಂದ್ರೀಕರಣದ ಒಂದು ಪ್ರಯತ್ನ ಅದು.

ಆದರೆ ಈ ಆಡಳಿತ ವ್ಯವಸ್ಥೆಯ ವಿಕೇಂದ್ರೀಕರಣವನ್ನು ವ್ಯಕ್ತಿಗೂ ಅನ್ವಯಿಸುವ ಕಾನೂನು ಇಂದು ಬಂದಿಲ್ಲ. ಆಡಳಿತ ವ್ಯವಹಾರದ ವಿಕೇಂದ್ರೀಕರಣ ನಡೆದರೂ ವ್ಯಕ್ತಿಗತ ಅಧಿಕಾರದ ವಿಚಾರ ಹಾಗೆಯೇ ಉಳಿದಿದೆ. ಒಂದೇ ವ್ಯಕ್ತಿ ಹತ್ತೆಂಟು ಕಡೆಯ ಅಧಿಕಾರವನ್ನು ಹೊಂಚು ಹಾಕಿ ಪಡೆಯುವುದನ್ನು ಕಂಡಾಗ ಇಲ್ಲಿಯೂ ವಿಕೇಂದ್ರೀಕರಣದ ಕಾನೂನು ವ್ಯವಸ್ಥೆ ಬೇಕೆಂದು ಯಾರಿಗಾದರೂ ಅನಿಸುತ್ತದೆ.

ಒಬ್ಬನೇ ಇಂದು ಹತ್ತೆಂಟು ಸಂಸ್ಥೆಗಳಲ್ಲಿ ಸಮಿತಿಗಳಲ್ಲಿ ಅಧಿಕಾರ ಸ್ಥಾನ ಪಡೆಯುತ್ತಾನೆ. ಸಮಿತಿಗಳಲ್ಲಿ ಕೊಡಬಹುದಾದ—ಸಿಗಬಹುದಾದ ಎಲ್ಲ ಗೌರವ ಸಂಭಾವನೆ—ಸಂಪಾದನೆಯನ್ನೂ ಸ್ವೀಕರಿಸುತ್ತಾನೆ. ಇದರಿಂದಾಗಿ ಆ ಸ್ಥಾನವನ್ನೂ ತನ್ನ ಆಸ್ತಿಯನ್ನಾಗಿಯೇ ತಿಳಿದು ಅದನ್ನು ತನಗಾಗಿ ಉಳಿಸಿ ಕೊಳ್ಳುವುದಕ್ಕೆ ಬಳಸಿ ಕೊಳ್ಳುವುದಕ್ಕೆ ಪ್ರಯತ್ನಿಸುತ್ತಾನೆ. ಆದರೆ ಸಮಾಜದ, ಸರಕಾರದ ಸೊತ್ತು, ಈ ಅಧಿಕಾರ ಒಂದೇ ವ್ಯಕ್ತಿಗೆ ಹಲವು ರೀತಿಯಿಂದ ಹಲವು ಕಾಲದ ವರೆಗೆ ದಕ್ಕಿಸುವುದಕ್ಕೆ ಅವಕಾಶ ಮಾಡಿಕೊಡುವುದು ಸೂಕ್ತವೇ ಎಂದು— ವಿಚಾರವಂತರು ವಿಚಾರ ಮಾಡಬೇಕಾದುದು ಅವಶ್ಯವಾಗಿದೆ. ಈ ರೀತಿಯ ಅಧಿಕಾರದ ಕೇಂದ್ರೀಕರಣ ಕೆಲವು ಅನಿಷ್ಟ ಪರಂಪರೆಗೂ ಕಾರಣವಾಗಬಹುದೇನೋ ಎಂದೆನಿಸುತ್ತದೆ.

ಅಧಿಕಾರದ ಗುತ್ತಿಗೆ

ಸಾರ್ವಜನಿಕ, ಸ್ಥಾನಿಕ, ಸಹಕಾರ ಸಂಸ್ಥೆಗಳಲ್ಲಿ ಅಧಿಕಾರ ಪಡೆಯುವಲ್ಲಿ ಯಾವುದೂ ನಿರ್ಬಂಧವಿಲ್ಲದ್ದರಿಂದ ಅದನ್ನು ಗುತ್ತಿಗೆ ಹಿಡಿದಂತೆ ಒಬ್ಬರೇ ಹತ್ತಾರು ರೀತಿಯಲ್ಲಿ ಅದರ ಸ್ವಾದ ಪಡೆಯುವುದನ್ನು ಕಾಣಬಹುದಾಗಿದೆ. ಪ್ರತಿಯೊಂದರಲ್ಲಿಯೂ ಒಬ್ಬರದೇ ಹೆಸರು. ಕೆಲವರದೇ ಗುಂಪು.

ಇದು ಕೇವಲ ಒಂದೆರಡು ಕಡೆಯಲ್ಲಲ್ಲ. ಹಲವಾರು ಕಡೆ ಇದನ್ನು ಕಾಣಬಹುದಾಗಿದೆ. ಅಧಿಕಾರಕ್ಕಾಗಿ ಈ ಗುತ್ತಿಗೆದಾರರ ಮುತ್ತಿಗೆ ಎಲ್ಲ ಕಡೆಯೂ ಇದೆ. ಹಾಗಾಗಿ ಇವರ ಮೇಲೆ ಸರಕಾರದ ಕಾನೂನು ಸುತ್ತಿಗೆ ಇದ್ದರೆ ಈ ರೀತಿ ಮುತ್ತಿಗೆ ಹಾಕುವ ಪರಿಸ್ಥಿತಿ ದೂರ ಹೋಗಬಹುದು. ವಿಕೇಂದ್ರೀಕರಣದ ಉದ್ದೇಶವೂ ಸಫಲವಾಗಿ ಅದು ತಕ್ಕ ಅರ್ಹತೆಯ ಜನಕ್ಕೂ ಸಿಗುವಂತಾಗಬಹುದು.

ಅಧಿಕಾರ ದೊಡ್ಡ ಅಮಲು ಇದ್ದ ಹಾಗೆ. ಒಮ್ಮೆ ಅದರ ರುಚಿ ನೋಡಿದವರು ಪುನಃ ಅದನ್ನು ಬಿಡಲು ಒಪ್ಪಲಾರರು. ಹಾಗಾಗಿ ಅದನ್ನು ಏನಕೇನ ಪ್ರಕಾರೇಣ ಪಡೆಯುವ ಹಂಚಿಕೆ, ಹೊಂಚು ನಡೆಸುತ್ತಾರೆ. ಅದಕ್ಕೆ ಬೇಕು ಬೇಕಾದ

(ಮೂವತ್ತನೇ ಪುಟ ನೋಡಿರಿ)

ಉತ್ತಮ ವಿಶ್ವಾಸದಾಯಕ

ಆಯುರ್ವೇದ ಔಷಧಿಗಳ

ತಯಾರಿಕೆಯಿಂದ

ಸೇವಾದೃಷ್ಟಿಯಿಂದ ಪರಿಶ್ರಮಿಸುವ

ನಿಮ್ಮ ಪ್ರೀತಿ ವಿಶ್ವಾಸದ ಸಂಸ್ಥೆ—

ನಾಯಕ್

ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ಸ್ಥಾಪಕರು: ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್

'ನಾವು ಉಳಿತಾಯ ಮಾಡುವೆವು. ಆದರೆ ನಮ್ಮ ಉಳಿತಾಯ, ದೇಶದ ಬೆನ್ನೆಲುಬಾದ ಬಡ ರೈತರ ನೇಗಿಲಿಗೆ ಪೂರಕ ಶಕ್ತಿಯಾಗುವಂತೆಯೂ ಪ್ರಯತ್ನಿಸುವೆವು' — ಗಣರಾಜ್ಯ ದಿನೋತ್ಸವದಂದು ಇದೇ ಭಾರತೀಯರ ಪ್ರತಿಜ್ಞೆಯಾಗಿರಲಿ.

ಈ ಪ್ರತಿಜ್ಞೆ ಸಫಲವಾಗುವಂತೆ ಪ್ರಯತ್ನಿಸುವುದೇ ನಮ್ಮ ಪ್ರತಿಜ್ಞೆ. ನಿಮ್ಮ ಉಳಿತಾಯವನ್ನು ನಮ್ಮಲ್ಲಿ ವಿನಿಯೋಗಿಸಿರಿ.

ದ. ಕ. ಜಿಲ್ಲಾ

ಕೇಂದ್ರ ಸಹಕಾರ ಬ್ಯಾಂಕ್, ಲಿ.

ಕೊಡಿಯಾಲ್‌ಬೈಲ್, ಮಂಗಳೂರು-3.

ಶಾಖೆಗಳು:— ಕುಂದಾಪುರ, ಪುತ್ತೂರು, ಬಂಟ್ವಾಳ, ಉಡುಪಿ, ಕಾರ್ಕಳ, ಬೆಳ್ತಂಗಡಿ, ಮಂಗಳೂರು (ಜನತಾ ಬಜಾರ್ ಶಾಖೆ), ಮತ್ತು ಸುಳ್ಯ.

For your Motor Transport
Needs
in South Kanara

REMEMBER

THE
HANUMAN TRANSPORT Co.
(PRIVATE) LIMITED,

Post Box No. 27,

UDIPI, S.K.

(Estd: 1930)

Telephone:		Telegrams
Managing Director	319	"HANUMANCO"
Controller of Works & Stores	319A	

ಪ್ರಜಾರಾಜ್ಯ ದಿನದ ಶುಭಾಶಯಗಳು!

ರಾಷ್ಟ್ರಕ್ಕೆ ಅನ್ನದಾತನಾದ ರೈತನ ಭಾಗ್ಯನಿಧಿ

Kirloskar Pump Set

ಆಹಾರೋತ್ಪಾದನಾ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕೆ?
ಹಾಗಿದ್ದರೆ

ಕಿರ್ಲೋಸ್ಕರ್
ಪಂಪ್ ಸೆಟ್‌ಗಳನ್ನು

ಉಪಯೋಗಿಸಿರಿ.

ಕಿರ್ಲೋಸ್ಕರ ಪಂಪ್ ಸೆಟ್‌ಗಳು ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ಮಿತ ವ್ಯಯದ ನಿರ್ವಹಣೆಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿವೆ. ಸಣ್ಣ ಹಿಡುವಳಿದಾರರಿಗಂತೂ ಅತ್ಯನುಕೂಲವಾಗಿವೆ.

ವಿತರಣೆಗಾರರು

ಕರ್ಕೇರಾ ಸನ್ಸ್ & ಕೊ.

ಮೈದಾನ್ ವೆಸ್ಟ್ ರೋಡು, ಮಂಗಳೂರು—1

Phone: 3967

ದಿ ಶಂಕರ್ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್
ಮಂಗಳೂರು
(ದಕ್ಷಿಣ ಕನ್ನಡ ಜಿಲ್ಲೆ).

ಇಪ್ಪತ್ತೊಂದನೆಯ ಪ್ರಜಾರಾಜ್ಯ ದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ,
ಪ್ರಯಾಣಿಕರಿಗೂ, ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED
MANGALORE

ಶ್ರೀ ಕೆ. ಗೋಪಾಲಕೃಷ್ಣ ಹೆಗಡೆ, ಕೇರಿಮನೆ.

ಪ್ರಜಾರಾಜ್ಯದ ಪ್ರಜ್ಞೆ-ಪ್ರತಿಜ್ಞೆ

ಪ್ರಜಾರಾಜ್ಯದ ಪ್ರಜ್ಞೆ ವರ್ಷಕ್ಕೆ ಒಂದು ದಿನ ಗೋಚರವಾಗಿ ಮಾಯವಾದರೆ, ದೇಶವೆಂತು ಬೆಳೆದೀತು? ಪ್ರಜಾರಾಜ್ಯದಿನ ಪ್ರತಿಜ್ಞಾ ದಿನವೂ ಆಗಬೇಕು. ಉಳಿದ ದಿನಗಳು ಆ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರುವ ದಿನಗಳಾಗಬೇಕು. ಹೀಗಾಗದಿದ್ದರೆ, ನಮಗೆ ಉಳಿಗಾಲವೆಂಬುದಿಲ್ಲವಾಗುತ್ತದೆ.

ಇಂದು ಜನವರಿ ಇಪ್ಪತ್ತಾರು!

ಇಪ್ಪತ್ತೊಂದನೆಯ ಪ್ರಜಾರಾಜ್ಯ ದಿನೋತ್ಸವವನ್ನು ಈ ದಿನ ನಾವು ಭಾರತೀಯರು ದೇಶದಾದ್ಯಂತ ಅತೀವ ಸಂಭ್ರಮದಿಂದ ಆಚರಿಸುತ್ತಲಿದ್ದೇವೆ. ತಳಿರು ತೋರಣಗಳನ್ನು ಕಟ್ಟುತ್ತಿದ್ದೇವೆ. ಸಭೆ ಸಮಾರಂಭಗಳನ್ನೇರ್ಪಡಿಸುತ್ತಿದ್ದೇವೆ. ಧ್ವಜವಂದನೆ, ಪ್ರಭಾತ ಫೇರಿಗಳಲ್ಲಿ ಪಾಲುಗೊಂಡು ಎಲ್ಲೆಲ್ಲಿಯೂ ಸಂತಸದ ವಾತಾವರಣವನ್ನು ಕಾಣುತ್ತಿದ್ದೇವೆ. ಇದೊಂದು ರಾಷ್ಟ್ರೀಯ ಹಬ್ಬ ನಮಗೆ. ಭಾರತೀಯನಾದವನು — ಬೇರಾವರೆ ಆತ ಪ್ರಪಂಚದ ಯಾವುದೇ ಮೂಲೆಯಲ್ಲಿರಲಿ-ಪ್ರಜಾರಾಜ್ಯ ದಿನದ ಈ ಪರಮ ಪವಿತ್ರ ಸಂದರ್ಭವನ್ನು ನೆನಪಿಸಿಕೊಳ್ಳದೆ ಇರಲಾರ. ಭಾರತೀಯ ಎಲ್ಲಿದ್ದರೂ ಆತ ಭಾರತೀಯನೇ. ನಮ್ಮ ದೇಶದ ನೋವು ನಲಿವು, ಸುಖ ದುಃಖ, ಅಳಿವು ಉಳಿವುಗಳೆಲ್ಲ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಆತನ ಹೃದಯದ ರಕ್ತ ಸಂಬಂಧವಿದೆ. ಈ ದೇಶದ ನಡೆದ ಸ್ವಾತಂತ್ರ್ಯ ಹೋರಾಟದ ಕಲ್ಪನೆ ಇರುವವರಿಗೆ ಹಾಗೂ ಆ ವೇಳೆ ಹುಟ್ಟಿ ಮೊದಲ ಹೆಜ್ಜೆಯ ತಿಳುವಳಿಕೆ ಇರುವವರಿಗೆ ಜನವರಿ ಇಪ್ಪತ್ತಾರರ ದಿನದ ಮಹತ್ವ ಮತ್ತೆ ವಿವರಿಸುವದು ಬೇಡ.

ಒಂದು ಕಥೆ — ಒಂದು ವ್ಯಥೆ

ಸಾಮಾನ್ಯವಾಗಿ ರೂಢಿಯಾಗಿರುವ ಒಂದು ಅಭಿಪ್ರಾಯ ಸಂಪ್ರದಾಯ ಎನೆಂದರೆ ಬಹುತೇಕ ಸಂದರ್ಭಗಳಲ್ಲಿ ನಾವು ಭಿಡೆಯಾಗಿಯೂ ಆಗುವುದಕ್ಕೆ ಹೆಚ್ಚು ಮಹತ್ವ ಕೊಡಬೇಕೋ, ಯಾವುದನ್ನು ಚಿರಕಾಲ ನೆನೆಯಬೇಕೋ ಅದನ್ನು ಮಹತ್ವ ಕೊಡದ ಕಾಲ ಕ್ರಮೇಣ ಮರೆಯುತ್ತೇವೆ. ಯಾವುದು ಅಲ್ಪ ವಿಷಯ ಎಂದು ನಾವು ಭಾವಿಸುತ್ತೇವೆಯೋ ಅದೇ ಎಷ್ಟೋ ಬಾರಿ ಬಹುಕಾಲ ನೆನಪಿನಲ್ಲಿಯುವ ವಿಷಯವಾಗಿ ಬಿಡುತ್ತದೆ. ಮಹಾಭಾರತ ಯುದ್ಧದ ಹದಿನೆಂಟು ದಿನಗಳಲ್ಲಿ ಏನೇನೆಲ್ಲ ನಡೆಯಿತೋ, ಎಂತೆಂಥ ಸಾವು ನೋವುಗಳುಂಟಾದವೋ, ಯಾರು ಎಷ್ಟು ಕಷ್ಟನಷ್ಟಗಳನ್ನನುಭವಿಸಿದರೋ ಆ ಕಥೆಯುಸ್ಮೆಲ್ಲ ನಾವು ಕೇವಲ ಕೆಲವು ಅಂಶಗಳಲ್ಲಿ ಅಷ್ಟೇಕೆ — ನಿವಿ ಕಣಗಳಲ್ಲಿ ಹೇಳಿ ಮುಗಿಯಿಸಿ ಬಿಡುವದಿಲ್ಲವೇ? ಹಾಗೆಯೇ ಅದೇ ರೀತಿಯಲ್ಲಿ ಈಗಲೂ ಸಹ ಸದಾ ಜೀವಂತ ಪ್ರಜಾರಾಜ್ಯ ದಿನವೆಂದ ಹಾಡಿ ಹಾರೈಸಿ ಒಂದು ದಿನ ಸಂಭ್ರಮದಿಂದ ಕುಣಿದಾಡುತ್ತೇವೆ. ಅಷ್ಟಕ್ಕೇ ನಾವು ಮಾಡಬೇಕಾದ ಬಹುದೊಡ್ಡ ಕರ್ತವ್ಯವನ್ನು ಮಾಡಿ ಮುಗಿಸಿದ ಸಮಾಧಾನ ತಾಳಿಬಿಡುತ್ತೇವೆ. ಪ್ರಜಾರಾಜ್ಯದಿನ ನಮ್ಮ ಕರ್ತವ್ಯ, ಹೊಣೆಗಾರಿಕೆಯನ್ನು ನೆನಪಿಸಿ ಕೊಡುವ ದಿನ ಎಂಬುದು ನಮಗೆ ಗೊತ್ತು. ಆದರೆ ಜ್ಞಾಪಕಕ್ಕೆ ಬಂದ ನಮ್ಮ ಜವಾಬುದಾರಿಯೆಲ್ಲ ಅಂದೇ ಸಂಜೆಯ ದೀಪೋತ್ಸವದೊಂದಿಗೆ, ದೀಪವಾರಿದ ಹಾಗೆ ಮರೆಸೂ ಹೋಗುತ್ತದೆ. ಮಾರನೆಯ ದಿನದಿಂದ ಮತ್ತೆ ಪ್ರಾರಂಭ ನಮ್ಮ ದೈನಂದಿನ — ದೇಶಕ್ಕೆ ಒಳಿತೋ — ಕೆಡುಕೋ — ಜೀವನ! ನಾವು ಪ್ರಜಾರಾಜ್ಯದ ಪ್ರಜೆಗಳ ಎಂಬ ನೆನಪು ಮರಳಿ ಬರಲು ಮತ್ತೆ ಮುಂದಿನ ಜನವರಿಯೇ ಬರಬೇಕು. ಇದೂ ಒಂದು ಸೋಜಿಗವೇ!

ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟವೊಂದ ಶರ್ಟಾಯು ಇತಿಹಾಸ. ನಮ್ಮನ್ನು ಬಂಧಿಸಿದ್ದ ಪರದಾಸ್ಯದ ಬೇಡಿಗಳನ್ನು ಕಳೆದೊಗೆಯಲು ಸಹಸ್ರಾರು ಜನ ಈ ನೆಲದ ಮೇಲೆ ತಮ್ಮ ನೆತ್ತರ ಚೆಲ್ಲಿದರು. ಮನೆ ಮಾರು ಕಳೆದುಕೊಂಡು ಸೆರೆಮನೆ ಸೇರಿದರು. ತಮ್ಮ ಪೂರ್ಣ ಜೀವನವನ್ನೇ ಈ ಮಹಾನ್ ಕಾರ್ಯಕ್ಕೆ ಮುಡಿಪಾಗಿಟ್ಟರೆಷ್ಟೋ ಜನರು. ಅಸೋ ರಾತ್ರಿ ಈ ಹೋರಾಟದ ನಂತರ ಶತ ಶತಮಾನಗಳ ದಾಸ್ಯ ಮುಗಿಸಿ ಸ್ವಾತಂತ್ರ್ಯದ ಬೆಳಕು ಹರಿಯಿತು, ನಮ್ಮ ದೇಶ. ನಾವು ಸ್ವತಂತ್ರರಾದೆವು. ಈ ದೇಶ ನಮ್ಮದು ಎಂದು ಸಂಪೂರ್ಣವಾಗಿ ಹೇಳಿಕೊಳ್ಳುವ ಹಾಗಾಯಿತು. ನಮ್ಮದೇ ಆದ ಘಟನೆ ರೂಪಿಸಿಕೊಂಡ ಪರಿಪೂರ್ಣವಾಗಿ ನಾವು ಪ್ರಜಾರಾಜ್ಯದ ಪ್ರಜೆಗಳಾದುದು ೧೯೫೦ನೇ ಜನವರಿ ಇಪ್ಪತ್ತಾರರಂದು. ಅಂದಿನಿಂದ ಈ ವರೆಗೂ ಈ ದಿನವನ್ನು ನಾವು ಸ್ಮರಿಸುತ್ತ ಬಂದಿದ್ದೇವೆ. ಆದರೆ ದುರ್ದೈವದ ಸಂಗತಿಯೆಂದರೆ ಯಾವ ದಿನ ನಮ್ಮ ಕರ್ತವ್ಯಗಳನ್ನು ನೆನಪಿಸಿ ಕೊಡುವ ಸಾಂಕೇತಿಕ ದಿನವೋ ಅದನ್ನು ನ ವೃತಿಪ್ಪಾಗಿ ನೆನಪಿಟ್ಟು ನಮ್ಮ ಮೂಲ ಕರ್ತವ್ಯಗಳನ್ನೇ ಮರೆತ ಬಿಟ್ಟಿದ್ದೇವೆ.

ನಮ್ಮ ದಿನನಿತ್ಯದ ವ್ಯವಹಾರ ಜಂಜಡದಲ್ಲಿ ಅಂದಿನ ಸ್ವಾತಂತ್ರ್ಯಯೋಧರನ್ನು ನೆನಪಿಗೆ ತಂದುಕೊಳ್ಳುವ ಅವಕಾಶ ಬಹು ಕಡಿಮೆ. ಸ್ವಾತಂತ್ರ್ಯೋತ್ತರ ಜನಜೀವನ ಅಷ್ಟು ಜಟಿಲವಾಗಿಬಿಟ್ಟಿದೆ. ಅಂದು ಚಳವಳಿಯಲ್ಲಿ ಭಾಗವಹಿಸಿದ ಅನೇಕರು ಈಗಲೂ ನಮ್ಮ ನಡುವೆ ಇದ್ದಾರೆ. ಆದರೆ ಅವರೆಲ್ಲ ತಾವೆಂದು ಹೋರಾಟ ನಡೆಯಿಸಿದ್ದು ನಮ್ಮ ದೇಶಕ್ಕೆ ಗಾಂಧಿಯವರು ಹೇಳಿದ ರಾಮರಾಜ್ಯ ಬರುತ್ತದೆ ಎಂದು. ಆದರೆ ಬಂದುದು ರಾವಣರಾಜ್ಯವೇ! — ಎಂದು ಮರುಗುವ ದುಸ್ಥಿತಿ ಈಗ ಬಂದಿದೆ. ಯಾವ ಒಂದು ಮಹದುದ್ದೇಶಕ್ಕಾಗಿ ಅಂದು ಹೋರಾಟ ನಡೆಯಿತೋ ಯಾವ ಕಲ್ಯಾಣ ರಾಜ್ಯದ ಕನಸನ್ನವರು ಕಂಡರೋ ಆ ಕನಸು ನನಸಾಗಲಿಲ್ಲವಲ್ಲಾ ಎಂಬುದು ಅವರ ಕೊರಗು. ಇದು ಅವರ ಪಕ್ವ ಅನುಭವದ ಕೊರಗು ಮಾತ್ರವಲ್ಲ ಇಡೀ ನಮ್ಮ ದೇಶದ ನಿಟ್ಟುಸಿರು. ಇಂದಿನ ಈ ಪ್ರಜಾರಾಜ್ಯಕ್ಕಿಂತ ಹಿಂದೆಯೇ ಸುಖದ ದಿನಗಳಿದ್ದವು ಎಂಬ ಮಾತನ್ನು ನಾವು ಹಲವಂದ ಕೇಳಿದ್ದೇವೆ. ನಮ್ಮ ನಾಡಿನ, ದೇಶದ ಹದ್ದಿನ ಅಧಿರ್ನಿಷ್ಟ, ಅನಿಯಮಿತ ಧೋರಣೆಯನ್ನು ಕಂಡು ಮರುಗಿ ಬಂದ ಮಾತುಗಳವು. ಮೊಟ್ಟ ಮೊದಲನೆಯ ಗಣರಾಜ್ಯ ದಿನವನ್ನಾಚರಿಸಿದಾಗ ನಮ್ಮಲ್ಲಿ ಯಾವ ಸಂತಸ, ಉತ್ಸಾಹ, ಗೆಲುವು ಆದರ್ಶಗಳಿದ್ದವೋ! ಅವೇ ಈಗಲೂ ನಮ್ಮಲ್ಲಿವೆಯೇ ಎಂದು ನಾವು ನನ್ನನ್ನು ಕೇಳಿಕೊಳ್ಳುವ ಕಾಲ ಈಗ ಬಂದಿದೆ.

ಪ್ರಜಾರಾಜ್ಯದ ಪ್ರಜ್ಞೆ

ಹೀಗೇಕಾಯಿತು? ಪ್ರಜಾರಾಜ್ಯದ ಪ್ರಜೆಗಳಲ್ಲಿ ಹಲವರಿಗೆ ಪ್ರಭುಗಳಾಗಿ ಮೆರೆಯುವ ಹಂಬಲವುಂಟಾದದ್ದೇ ಈ ಅರಾಜಕತೆಗೆ ಕಾರಣ ಎನ್ನೋಣವೇ? ಅಂತಹ: ಇರಲು ಬಹುದು ಎಂದೇ ಇಟ್ಟುಕೊಳ್ಳೋಣ. ಆದರೆ ಅದೇ ಪೂರ್ಣ ನಿಜ ಎನ್ನಲೂ ಬರುವಂತಿಲ್ಲ. ನಾವು ಸ್ವತಂತ್ರ ದೇಶವೊಂದರ ಪ್ರಜೆಗಳು ಸ್ವೇಚ್ಛೆಯಿಂದ ಸ್ವಚ್ಛಂದ ಹಾಗೆ ವರ್ತಿಸತೊಡಗಿದುದೂ ಇದಕ್ಕೆ ಕಾರಣ ಎನ್ನಬಹುದು. ಯಾವದೇ ಲಂಗುಲಗಾಮಿಲ್ಲದೆ ನಮ್ಮಷ್ಟಕ್ಕೆ ನಾವು ಸ್ವತಂತ್ರರಾಗಿ ಬೆಳೆಯಬೇಕೆಂದೆವೇ ವಿನಾ ನಾವೆಲ್ಲರೂ ಒಂದಾಗಿ ಒಂದೇ ಮನೆಯವರಾಗಿ ಒಂದು ದೊಡ್ಡ ಕುಟುಂಬದ ಸದಸ್ಯರಾಗಿ ದೇಶವನ್ನು ಸುಭದ್ರವಾಗಿ ಕಟ್ಟಬೇಕು ಎನ್ನುವ ಹಂಬಲಿಸಲಾರದಾದೆವು. ಪ್ರತಿಯೊಬ್ಬನೂ ತನ್ನ ಸ್ವಾರ್ಥ, ಅಧಿಕಾರ

(ಇಪ್ಪತ್ತೆಂಟನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
Ex Case 208/69 in O. S. 109/66
ಮ. ಹಾರಾಷ್ಟ್ರ ಎಫೆಕ್ಸ್ ಕೋಆಪರೇಶನ್ ಲಿಮಿಟೆಡ್, ಉಡುಪಿ —ಅರ್ಜಿದಾರ
ಮತ್ತು
ರಗು ಶೆಟ್ಟಿ ವಗೈರೆ —ಯೆದುರು
3 ಲಕ್ಷ್ಮಿ ಶೆಡ್ತಿ 4 ಗಿರಿಜ ಶೆಡ್ತಿ —ರಾದು ಶೆಡ್ತಿ ಮಕ್ಕಳು.
5 ವಾಸುದೇವ 6 ವಸಂತ 7 ಬಾಬು — ಬಿನ್ನನಂದು, ರತ್ನ ಶೆಡ್ತಿ ಮಕ್ಕಳು, ಗಾರ್ಡಿಯನ್ ರತ್ನ ಶೆಡ್ತಿ.
— ಉಡುಪಿ ತಾಲ್ಲೂಕು ಅಂಬಾರು ಗ್ರಾಮದ ಪಡು ಅಂಬಾರು ದೊಡ್ಡಮನೆಯಲ್ಲಿರುವವರು.
ಸದ್ರಿ ಯದ್ರಿಗೆ ಯಾ ಸಾರ್ವಜನಿಕರಿಗೆ ತಿಳಿಸುವ ದೇನೆಂದ್ರೆ—
ಸದ್ರಿ ಅಮಲ್‌ಜ್ಯಾರಿಯಲ್ಲಿ ಯೇಲಂ ಆಗತಕ್ಕ ಆಸ್ತಿಗಳ ಬಾಬ್ತು ಅರ್ಜಿದಾರನು ಹಾಜರು ಪಡಿಸಿದ ಯಸ್ತಿ ಹಾಜಿನ ಶರ್ತಗಳನ್ನು ನಿರ್ಣಯಿಸುವರೇ ಸಿಬ್ರ ಅಮಲ್‌ಜ್ಯಾರಿಯು ತಾ. 7-2-70ಕ್ಕೆ ಮೇಲಿನ ಕೋರ್ಟಿನಲ್ಲಿ ತಕ್ಕಾಗೆಯಿಟ್ಟಿರುವುದರಿಂದ ಆಕ್ಷೇಪ ಹೇಳತಕ್ಕದ್ದು ಇದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ವ್ಯಾಹಿತು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಯೇಕಪಕ್ಷವಾಗಿ ಸದ್ರಿ ಅಮಲ್‌ಜ್ಯಾರಿ ತೀರ್ಮಾನ ಮುಂದುವರಿಯುವುದು ಎಂತಲೂ ಸದಾ ಈ ಮೂಲಕ ಮೇಲಿನ ಯದ್ರಿಗೆ ತಿಳಿಸಲಾಗುತ್ತದೆ.
B. Krishna Bhat
Advocate for Petitioner
Udipi, 9-1-1970

M/S. ARVIND MOTORS,
BALMATTA ROAD,
MANGALORE-1.
Dealers for
TATA
MERCEDES-BENZ
VEHICLES
Branches at
SHIMOGA, KARWAR
& KOPPA-KADUR

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ.....................

ಹಿಂದುಸ್ಥಾನ್ ಬ್ರೌನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳನ್ನೇ ಆರಿಸುತ್ತಾರೆ.

ಕಾರಣವೇನೆಂದರೆ........................ ..

- ಸ್ವಿಜರ್‌ಲ್ಯಾಂಡಿನ ತಜ್ಞರ 75 ವರ್ಷಗಳ ತಾಂತ್ರಿಕ ಜ್ಞಾನ ಮತ್ತು ಅನುಭವದ ಮೇರೆಗೆ ಮೋಟಾರು ತಯಾರಿಸಲ್ಪಟ್ಟಿದೆ.
- ಅದು ಅತ್ಯಂತ ವಿಶ್ವಾಸನೀಯವಾಗಿದೆ, ಗಟ್ಟಿಮುಟ್ಟಾಗಿದೆ, ನೋಡಲು ಚೆನ್ನಾಗಿದೆ.
- 'E' ಇನ್ಸುಲೇಶನಿಂದಾಗಿ ಕಡಿಮೆ ವೋಲ್ಟೇಜಿನಲ್ಲಿ ಕೂಡಾ ಸರಾಗವಾಗಿ ನಡೆಯುತ್ತದೆ. ಸುಟ್ಟು ಹೋಗುವುದಿಲ್ಲ.
- ಕಡಿಮೆ ವಿದ್ಯುತ್ ಖರ್ಚಿನಲ್ಲಿ ಅಧಿಕ ಕೆಲಸವನ್ನು ಕೊಡುತ್ತದೆ.
- ಒಂದು ವರುಷದ ಗ್ಯಾರಂಟಿಯನ್ನು ಪಡೆದಿದೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು ಕೆಳಗಿನವರಲ್ಲಿ ಸದಾ ದಾಸ್ತಾನದಿಂದ ಪಡೆಯಬಹುದು.

VICTOR TRADING CORPORATION
FALNIR ROAD - - MANGALORE-1

GOPAL FARM ENGINEERS
FALNIR ROAD - - MANGALORE-1

ONCE YOU PAY A VISIT YOU WILL NEVER FORGET

THE CITY'S POPULAR VEGETARIAN RESTAURANT

MADHU NIVAS

BOARDING & LODGING

GANDHI SQUARE, MYSORE.

For Quality Vegetarian Preparations and Comfortable Stay in Our Double and Single Rooms. Try for a while and be satisfied.

Phone : 1593. Res : 1777.

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿ ಮಧುವಿಗಿಂತಲೂ ಮಧುರವಾದ ತಯಾರಿಕೆ— ಸೇವಾ ಸುಧಾರಿಕೆಗಳಿಂದ ಅತ್ಯಂತ ಜನಪ್ರಿಯವಾದ

ಮಧು ನಿವಾಸ

ಸಂದರ್ಶಿಸಲೇ ಬೇಕಾದ ವಸತಿ, ಭೋಜನ ಹಾಗೂ ಉಪಾಹಾರ ಮಂದಿರ

ಗಾಂಧಿ ಚೌಕ - — - ಮೈಸೂರು

ವ್ಯಾಪಾರಸ್ಥರು: ಬಿ. ರಾಮದಾಸ್ ಭಟ್ ಮತ್ತು ಸಹೋದರರು.

ಪ್ರಜಾಪ್ರಭುತ್ವ - ಮನೋಪ್ರಭುತ್ವ

ಶ್ರೀ ಶಿವಶಂಕರ

ದೇಶದ ಉದ್ಧಾರಕನೆಂದು ಕೊಚ್ಚಿಕೊಳ್ಳುತ್ತಿದ್ದ, ಜನತೆಯಿಂದ ಗೌರವಿಸಲ್ಪಡುತ್ತಿದ್ದ ಕಾಂಗ್ರೆಸ್ ಪಕ್ಷದ ವಿಭಜನೆಯಾದದ್ದು ಸರ್ವವೇದ್ಯ. "ಎರಡೂ ತುಂಡುಗಳು ತಾವೇ 'ಅಸಲೀ ಕಾಂಗ್ರೆಸ್' ಇನ್ನುಳಿದುದು ಗುಂಪಿನವರೇ ಪಕ್ಷ ತೊರೆದವರು" ಎಂದು ಹೇಳುತ್ತ ಬಂದಿವೆ. ಈ ಹೇಳಿಕೆಯ ಹಿಂದಿರುವ ರಹಸ್ಯವನ್ನರಿಯುವುದೇ ಒಂದು ತಮಾಷೆ!

ಜನವರಿ ೨೬, ೧೯೭೦- ಸೋಮವಾರ, ರಜಾದಿನ-ಪ್ರಜಾಪ್ರಭುತ್ವ ದಿನಾಚರಣೆ. ಎಲ್ಲೆಲ್ಲೂ ಸರಕಾರೀ ತ್ರಿವರ್ಣ ಧ್ವಜ ಹಾರಿಸಲಾಗಿರುತ್ತದೆ. ಶಾಲೆಗಳಲ್ಲಿ ಮಕ್ಕಳಿಗೆ ಪೆಪ್ಪರ್‌ಮಿಂಟಾಯಿ ಕೊಡಲಾಯಿತು. ಅದು ಪರಂಪರೆ ನಡೆಯುವಂತೆಯೇ ನಡೆಯಿತು. ಆದರೆ ಈ ಸಲ ತಳಿರು-ತೋರಣ ಬಾವುಟ ಜಾಸ್ತಿಯಿವೆ. ಇಷ್ಟು ವರ್ಷ ಕಾಂಗ್ರೆಸ್ಸಿಗರು ಒಂದೆಡೆಯಲ್ಲೇ ಪ್ರಜಾಪ್ರಭುತ್ವ ದಿನಾಚರಣೆ ನಡೆಸುತ್ತಿದ್ದರಾದಲ್ಲಿ ಈ ವರ್ಷ ಎರಡು ವೇದಿಕೆಗಳ ಮೇಲಿಂದ ನಡೆಸುತ್ತಿದ್ದಾರೆ. ಆದರೆ ಈ ಕಾಂಗ್ರೆಸ್ಸಿಗರು ೧೯೬೭ರ ಚುನಾವಣೆಯಲ್ಲಿ ಎರಡು ವೇದಿಕೆಗಳ ಮೇಲಿಂದ ಮತ ಕೇಳಲಿಲ್ಲ. ಆಗ ಎರಡು ಹೋರಿಗಳೂ ಒಂದೇ ನೊಗದಡಿಯಲ್ಲಿದ್ದುವು. ಇಂದು ಎರಡು ಹೋರಿಗಳಿಗೆ ಭಿನ್ನಭಿನ್ನ ನೊಗಗಳಿವೆ. ಒಂದು ದೃಷ್ಟಿಯಿಂದ, ಅದರಲ್ಲೂ ಪ್ರಗತಿಪರ ದೃಷ್ಟಿಯಿಂದ ನೋಡಿದಲ್ಲಿ ಇದರಲ್ಲೇನೂ ವಿಶೇಷ ಇರುವದಿಲ್ಲ. ಮನಃಸ್ಮರನ್ನು ಆಶೀರ್ವದಿಸುತ್ತ ಪ್ರಜಾಪತಿಯು ಅವರ ಸಂಖ್ಯೆ ಅಭಿವೃದ್ಧಿಯಾಗಲೆಂದು ಹರಸಿದವಂತೆ. ಇದು ಎಲ್ಲಾ ವಲಯಕ್ಕೂ ಅನ್ವಯವಾಗುತ್ತದೆ. ಪ್ರಾಣಿಗಳಿಗೂ ಪಕ್ಷಿಗಳಿಗೂ ಇದು ಅನ್ವಯವಾಗುವಂತೆ ಪಕ್ಷಗಳಿಗೂ ಅನ್ವಯವಾಗುತ್ತದೆ. ಆರಂಭದಲ್ಲಿ ಬ್ರಿಟಿಷರು ಇಂಡಿಯನ್ ನೇಶನಲ್ ಕಾಂಗ್ರೆಸ್ಸನ್ನು ರಚಿಸಿದಾಗ ಒಂದು ರಾಜಕೀಯ ಪಕ್ಷ ಹುಟ್ಟಿತು. ಅದಕ್ಕೆದುರಾಗಿ ಮುಸ್ಲಿಂ ಲೀಗ್ ತಲೆ ಎತ್ತಿತು. ಇದನ್ನು ಕಂಡ ಹಿಂದೂಗಳು ಮಹಾಸಭೆಯನ್ನು ಸ್ಥಾಪಿಸಿದರು. ಪ್ರವೇಣ ಕಮ್ಯೂನಿಸ್ಟ್ ಪಾರ್ಟಿ, ಸೋಶಲಿಸ್ಟ್ ಪಾರ್ಟಿ, ಭಾರತೀಯ ಜನಸಂಘ, ಸ್ವತಂತ್ರಪಾರ್ಟಿ, ಸಂಯುಕ್ತ ಸೋಶಲಿಸ್ಟ್ ಪಾರ್ಟಿ ಮುಂತಾದ ಪಕ್ಷೋಪಪಕ್ಷಗಳು ಹುಟ್ಟಿದುವು. ಇಂದು ಭಾರತದಲ್ಲಿ ರಾಜಕೀಯ ಪಕ್ಷಗಳಿಗೆ ಬರಗಾಲ ಬಂದಿರುವದಿಲ್ಲ. ಬೇಕಾದಷ್ಟು ಪಾರ್ಟಿ-ಪಕ್ಷಗಳಿವೆ. ಇವುಗಳಲ್ಲಿ ಹೆಚ್ಚಿನವು ಕಾಂಗ್ರೆಸ್ಸಿನ ಉದರದಿಂದಲೇ ಬಂದವು. ಇವು ಕೆಲವಂತೂ ಉದರವನ್ನೂ ಬೇಧಿಸಿಬಂದಿವೆ. ಆ ರೀತಿ ಆಗಲು ಕಾರಣವೇನು?

ಬ್ರಿಟಿಷರು ತಮ್ಮ ಧೋರಣೆಯು ಒಡೆದು ಆಳುವ ನೀತಿಯ ಬೀಜವನ್ನು ಅದಕ್ಕೆ ತಕ್ಕುದಾಗಿದ್ದ ಮಂದಾಸಿನ ಮಣ್ಣಿನಲ್ಲಿ ಬಿತ್ತಿದರು. ಕಬ್ಬಿಣವನ್ನೂ ಚಿನ್ನವನ್ನಾಗಿಸುವ, ಕಲ್ಲಿದ್ದಲಿನಿಂದಲೂ ವಜ್ರವನ್ನಾಗಿಸುವ, ಜೆನ್ನೆಲುಬಿನಿಂದ ವಜ್ರಾಯುಧವನ್ನು ತಯಾರಿಸುವ ಭಾರತೀಯರು ಬ್ರಿಟಿಷರ ವಿಷವೃಕ್ಷವನ್ನು ಫಲವೃಕ್ಷವನ್ನಾಗಿ ಮಾರ್ಪಡಿಸಿದರು. ಆದರೂ ಆ ವೃಕ್ಷದ ಹುಟ್ಟುಗುಣ ಬಿಟ್ಟು ಹೋಗುವದುಂಟೇ—ಹುಟ್ಟು ಭಸ್ಮವಾಗದೆ? ಜನತಾ ಸೇವೆಯ ಬದಲಿಗೆ ಪ್ರಜೆಗಳ ಮೇಲೆ ಪ್ರಭುತ್ವ ನಡೆಸುವ ಮನೋಭಾವನೆ ಆ ಪಕ್ಷದ ಸದಸ್ಯರಿಗೆ ಬರುವದರಲ್ಲೇನೂ ಆಶ್ಚರ್ಯ ಇರುವದಿಲ್ಲ. ಆದಕ್ಕೆ ಅಧಿಕಾರ ಬಂದೊಡನೆ ಅವರು ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ, ಕೃಷಿಕ ಮಜ್ದೂರ್ ಪಾರ್ಟಿ, ಪ್ರಜಾ ಪಕ್ಷ, ಸ್ವತಂತ್ರಾದಿ ಪಾರ್ಟಿಗಳನ್ನು ಕಟ್ಟಿಕೊಳ್ಳದೆ ಇನ್ನೇನು ಮಾಡಲು ಸಾಧ್ಯ. ಅದಕ್ಕೆ ಬಲಿಯಾಗಲು ಮನಸ್ಸಿಲ್ಲದವರು ಸ್ವರಾಜ್ಯ ಪಕ್ಷ, ಫಾರ್ವರ್ಡ್ ಬ್ಲಾಕ್ ಇತ್ಯಾದಿ ಪಕ್ಷಗಳನ್ನು ಸ್ಥಾಪಿಸಿಕೊಂಡರು. ಆದರ ಗಂಧಗಾಳಿಯೂ ಬೇಡವೆಂದು ಭಾವಿಸಿಕೊಂಡವರು ಭಾರತೀಯ ಜನಸಂಘದಂತಹ ಪಕ್ಷಗಳನ್ನು ನಿರ್ಮಿಸಿಕೊಂಡರು. ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರವಂತೂ ಪಕ್ಷಗಳ ಸಂಖ್ಯಾ ಬೆಳವಣಿಗೆ ಉತ್ತಮ ರೀತಿಯಲ್ಲಾಗಿದೆ. ದೇಶ ಮುಂದುವರಿದಿಲ್ಲವೆನ್ನುವವರು ಈ ದೃಷ್ಟಿ ಹಾಯಿಸಲೇ ಬೇಕು. ಅನಂತರ ಆ ದಿಕ್ಕಿನಲ್ಲಿ ವಿಪರೀತ ಪ್ರಗತಿಯಾಗಿರುವದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಸ್ವತಂತ್ರ ದೇಶದ ಪ್ರಜೆಗಳು ಪಕ್ಷಗಳ ಸ್ನೇಹಕ್ಕೆ ಕಟ್ಟಿಕೊಳ್ಳುವುದು? ದೇಶದ ಆಳ್ವಿಕೆಗಾಗಿ ತಾನೇ? ಪ್ರಜೆಗಳೆಲ್ಲರೂ ಹೋಗಿ ದಿಲ್ಲಿಯಲ್ಲಿ ಕುಳಿತುಕೊಳ್ಳಲು ಸಾಧ್ಯ ಇರುವುದಿಲ್ಲ. ಅವರ ಪ್ರತಿನಿಧಿಗಳು ಮಾತ್ರ ಅಲ್ಲಿ ಹೋಗಿ ಪ್ರಭುತ್ವ ನಡೆಸಲು ಸುಲಭ ಸಾಧ್ಯವಿದೆ. ಈ ದೃಷ್ಟಿಯಲ್ಲಿ ಪಕ್ಷಗಳಿಗೆ ಸ್ಥಾನವಿಲ್ಲವಾದರೂ ಒಂದೇ ಪಕ್ಷದ ಅಧಿಕ ಪ್ರತಿನಿಧಿಗಳಿದ್ದಲ್ಲಿ ಆಡಳಿತ ನಡೆಸಲು ಸುಲಭ ಸಾಧ್ಯವಾಗಬಹುದೆಂಬುದು ಒಂದು ಭಾವನೆ. ಈಗ ಆ ಹಕೆಯ "ಅಂಥ ಶ್ರದ್ಧೆ"ಗೂ ಸವಾಲನ್ನು ಕೊಡಲಾಗಿರುತ್ತದೆ. ವೈಜ್ಞಾನಿಕ ಐಲಯದಲ್ಲಿ ಪ್ರಗತಿಯಾಗಿರುವಂತೆ ಮಾನವನ ಮಾನಸಿಕ ಮಟ್ಟದಲ್ಲೂ ಪ್ರಗತಿಯಾಗಿರುತ್ತದೆ. ಹಿಂದೆ ಆ ಋಣಗಳನ್ನು ಒಡೆಯಲು ಸಾಧ್ಯವಿಲ್ಲವೆನ್ನುತ್ತಿದ್ದರು.

(ಇಪ್ಪತ್ತಾರನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಖಾಯಂ ಠೇವಣಾತಿಗಳ ಮೇಲೆ ಈ ಕೆಳಗಿನ ದರಗಳಂತೆ ಬಡ್ಡಿ ನೀಡುತ್ತದೆ

ಠೇವಣಾತಿಗಳ ಅವಧಿ			ವಾರ್ಷಿಕ ಬಡ್ಡಿಯ ದರಗಳು
91 ದಿನಗಳಿಗೆ ಮಿಕ್ಕಿ 6 ತಿಂಗಳ ಕಡಿಮೆ ಅವಧಿಗೆ	....	....	4¼%
6 ತಿಂಗಳಿಗೆ ಮಿಕ್ಕಿ 9 ತಿಂಗಳ ಕಡಿಮೆ ಅವಧಿಗೆ	....	....	4¾%
9 ತಿಂಗಳಿಗೆ ಮಿಕ್ಕಿ 1 ವರ್ಷದ ಕಡಿಮೆ ಅವಧಿಗೆ	....	....	5¼%
1 ವರ್ಷಕ್ಕೆ ಮಿಕ್ಕಿ 2 ವರ್ಷಗಳ ಕಡಿಮೆ ಅವಧಿಗೆ	....	....	5¾%
2 ವರ್ಷಗಳಿಗೆ ಮಿಕ್ಕಿ 3 ವರ್ಷಗಳ ಕಡಿಮೆ ಅವಧಿಗೆ	....	....	6%
3 ವರ್ಷಗಳಿಗೆ ಮಿಕ್ಕಿ 5 ವರ್ಷಗಳ ಕಡಿಮೆ ಅವಧಿಗೆ	....	....	6¼%
5 ವರ್ಷಗಳು ಮತ್ತು ಮಿಕ್ಕಿದ ಅವಧಿಗೆ	....	....	6½%
ಸೇವಿಂಗ್ಸ್ ಬ್ಯಾಂಕ್ ಅಕೌಂಟ್	....	....	3¼%

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

1906ರಿಂದ ರಾಷ್ಟ್ರಸೇವೆಯಲ್ಲಿ ನಿರತವಾಗಿದೆ.

ರಿಜಿಸ್ಟರ್ಡ್ ಆಫೀಸು : ಉಡುಪಿ

ಆಡಳಿತ ಕಚೇರಿ : ಮಂಗಳೂರು

With best compliments
from

S. S. UDIPI
Karnataka University Canteen
DHARWAR-3

ಪ್ರಜಾರಾಜ್ಯದಿನದ ಶುಭಾಶಯಗಳು!

ಎಸ್. ಎಸ್. ಉಡುಪಿ
ಕರ್ನಾಟಕ ಯುನಿವರ್ಸಿಟಿ ಕೇಂಟೀನ್
ಧಾರವಾಡ-3

WITH BEST COMPLIMENTS OF:-

K. V. Veerappa
& Brothers

CALTEX DEALERS
MANDYA

WITH BEST COMPLIMENTS OF:

M. S. RAMANNA,
INSPECTOR,

THE NEW INDIA
ASSURANCE
COMPANY LTD.,
MANDYA.

With Best Compliments of:-

H. B. DORESWAMAIAH,
B A., LL. B.,
Proprietor:

SURESH
SERVICE STATION
AGENTS & DEALERS:
M/s. Esso Standard Eastern Inc.
& Kerosine,
MANDYA.
Phone: 195

For
Prompt & Courteous Service
Please visit our Service Station

Wishing all our Patrons
a happy and prosperous New Year

ಶ್ರೀ ಸುಬೋಧ ಎಂ. ರಾಮರಾವ್

ಮ। ಗಾಂಧೀ ಜನ್ಮಶತಾಬ್ದಿಯ ಮಹತ್ವ

ಮಹಾತ್ಮಾ ಗಾಂಧಿಯವರ ಜನ್ಮ ಶತಾಬ್ದಿಯ ಅದ್ದೂರಿಯು ಸತ್ಯ ಅಹಿಂಸೆಗಳ ಅಧ್ಯಯನಕ್ಕೆ ಮಹಾ ಅಪಚಾರ. ಗಾಂಧೀ ತತ್ವಗಳನ್ನು ವಿದೇಶೀಯರಿಗೆ ಮಾರಿಬಿಟ್ಟು ಅವರ ಚಿತ್ರಪಟ-ಮೂರ್ತಿಗಳಿಗೆ ಹೂಮಾಲೆ ಹಾಕುವ ಸುಲಭದ ಕಾರ್ಯವನ್ನು ಮಾತ್ರ ನಾವು ಕೈಕೊಂಡಿದ್ದೇವೆ. ದೇಶದ ನಾಯಕರೂ ಬುದ್ಧಿಜೀವಿಗಳೂ ಗಾಂಧೀ ತತ್ವೋಪದೇಶ ಮಾಡುವಾಗ ಗಾಂಧೀ ಮೂರ್ತಿಗಳಿಗೆ ನಗೆಯು ಬರುತ್ತದೆ!

ಭಾರತ ಭೂಮಾತೆಯ ಸುಪುತ್ರರಲ್ಲಿ ಅಗ್ರಗಣ್ಯರಾದ ಮಹಾತ್ಮಾ ಗಾಂಧಿಯವರ ಜನ್ಮಶತಾಬ್ದಿಯನ್ನು ಇಂದು ಭಾರತ ದೇಶ ಮಾತ್ರವಲ್ಲ—ಜಗತ್ತಿನ ಸಕಲ ದೇಶಗಳೂ ಆಚರಿಸುತ್ತಿವೆ. ಗಾಂಧಿಯವರು ಇಂದು ಭಾರತ ದೇಶಕ್ಕೆ ಮಾತ್ರ ಸೇರಿದವರು, ಎಂದು ಭಾವಿಸಬಾರದು. ಅವರು ಅದ್ಯಂತ ವಿಶ್ವಕ್ಕೇ ಸಂಬಂಧಪಟ್ಟವರು. ಇಂದು ಅವರು ವಿಶ್ವದ ಅನೇಕಾನೇಕ ಸಾಧುಸತ್ಪುರುಷರ ಮಾಲೆಯಲ್ಲಿ ಬೆಳಗುವ ಒಂದು ಅದ್ವಿತೀಯ ರತ್ನಮಣಿಯಂತೆ ಶೋಭಿಸುತ್ತಿದ್ದಾರೆ. ಭಾರತವು—ಹಿಂದೂ ಧರ್ಮವು ಲೋಕಕ್ಕೇ ಇಂತಹ ಒಂದು ಜೀವರತ್ನವನ್ನು ನೀಡಿದ ಮಹಾ ಸೌಭಾಗ್ಯವನ್ನು ಗಳಿಸಿದೆ.

ಮಹಾತ್ಮಾಜಿಯವರ ಜನ್ಮಶತಾಬ್ದಿಯ ಈ ಮಹಾ ಸಂದರ್ಭದಲ್ಲಿ, ಭಾರತೀಯರು, ಅವರ ತತ್ವಗಳನ್ನು ಮರೆತು, ವ್ಯಕ್ತಿ ಪೂಜೆಗೇ ಹೆಚ್ಚು ಮಹತ್ವ ಕೊಟ್ಟಿರುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ಲೋಕವು ತಾವು ಬೋಧಿಸಿದ ತತ್ವಗಳನ್ನು ಆಚರಣೆಯಲ್ಲಿ ತಂದು ಉದ್ಧಾರವಾಗಬೇಕೆಂದ ಅವರು ಬಯಸಿದ್ದರಲ್ಲದೆ—ಶಿಲಾ ಪ್ರತಿಮೆ ತಮ್ಮ ಮೂರ್ತಿಗಾಗಲೀ—ಚಿತ್ರಪಟಕ್ಕಾಗಲೀ ಹೂಮಾಲೆಗಳನ್ನು ಹಾಕಿ ಮೆರೆಸಬೇಕೆಂದು ಇಚ್ಛಿಸಿರಲಿಲ್ಲ. ಆದರೆ—ಇಂದು ಎಲ್ಲೆಲ್ಲೂ ನಡೆದಿರುವುದೇನು? ಆಡಂಬರದ ಅವರ ಮೂರ್ತಿಪೂಜೆಯಲ್ಲದೆ-ಅವರಿಗೆ ಅತ್ಯಂತ ಪ್ರಿಯವಾಗಿದ್ದ ಸತ್ಯ-ಅಹಿಂಸೆ ಮುಂತಾದ ತತ್ವಗಳೆಲ್ಲಾ ಗಾಳಿಗೆ ತೂರಿಹೋಗಿವೆ.

ಗಾಂಧಿಜೀ ಅವರ 'ಕರ್ತವ್ಯ ನಿಷ್ಠೆ—ಭಗವದ್ಭಕ್ತಿ, ಕಾಲನಿಯಮ ಪಾಲನೆ, ಶಿಸ್ತು, ಪರಮತ ಸಹಿಷ್ಣುತೆ, ಬ್ರಹ್ಮಚರ್ಯಪಾಲನೆ, ಆತ್ಮಶೋಧನೆ, ನಿರ್ವಿಕಾರ ಮನೋಭಾವ, ಮಾನವ ವರ್ಗದಲ್ಲಿ ಸಮಾನತೆ, ಲೋಕಸೇವಾ ತತ್ಪರತೆ, ಪ್ರಾಪಂಚಿಕ ವಸ್ತು ಸಂಗ್ರಹಣದಲ್ಲಿ ಅನಾಸಕ್ತಿ, ನುಡಿಗನುಸಾರವಾದ ನಡೆ-ಇವುಗಳೆಲ್ಲ ಲೋಕದ ಸಕಲ ಜನಾಂಗಗಳಿಗೂ ಆದರ್ಶವಾಗಿರುವುವು. ಅವರ ವ್ಯಕ್ತಿತ್ವದೊಂದಿಗೆ ನಾಲ್ಕಾರು ದಶಕಗಳ ಕಾಲ ನಿಕಟ ಸಂಬಂಧ ಹೊಂದುವ ಸದಾವಕಾಶ ಪಡೆದಿದ್ದ—ಅವರ ನಡೆನುಡಿಗಳನ್ನು ಪ್ರತ್ಯಕ್ಷ ಕಂಡ'—ಕೇಳಿದ ಭಾರತೀಯರು—ಇಂದು ಅವುಗಳನ್ನೆಲ್ಲ ಪರದೇಶೀಯರಿಗೆ ಒಪ್ಪಿಸಿ-ಕೇವಲ ಅವರ ಜಡ ಪ್ರತಿಮೆಗಳಿಗೆ ಹಾರಹಾಕಿ ತೃಪ್ತರಾಗುತ್ತಿರುವುದು ಪರಮ ಶೋಚನೀಯ ವಿಚಾರ.

ಮಹಾತ್ಮಾಜಿಯವರ, ತಮ್ಮ ಲೇಖನ—ಭಾಷಣಾದಿಗಳಿಂದ ಪರಾಧೀನತೆಯ ಸಂಕಲೆಯನ್ನು ಹೊತ್ತು ತೊಳಲುತ್ತಿದ್ದ ಭಾರತೀಯರಲ್ಲಿ — ಅದ್ಭುತ ಧೈರ್ಯ, ಸಾಹಸ, ಕಷ್ಟ ಸಹಿಷ್ಣುತೆ, ದೇಶಭಕ್ತಿ ಇವುಗಳ ಉದಾತ್ತ ಭಾವಗಳನ್ನು ತುಂಬಿ ಕುರಿಗಳಂತೆ—ಧೈರ್ಯ ಹೀನರಾಗಿದ್ದವರನ್ನು ಸಿಂಹಶಾಬಗಳಂತಹ ಧೈರ್ಯಶಾಲಿಗಳನ್ನಾಗಿ ಪರಿವರ್ತಿಸಿದರು. ಜಗತ್ತಿನಲ್ಲಿ-ಸೂರ್ಯಾಸ್ತವನ್ನು ಕಾಣದಷ್ಟು ವಿಸ್ತಾರವಾದ ಸಾಮ್ರಾಜ್ಯವನ್ನು ಗಳಿಸಿದ್ದೇವೆಂದು ಹೆಮ್ಮೆಗೊಂಡಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಬಲ ಆಡಳಿತವನ್ನು ಪ್ರತ್ಯಕ್ಷವಾಗಿ ಎದುರಿಸಿ—ಸತ್ಯ ಅಹಿಂಸಾ— ಎಂಬೆರಡು ಅಪೂರ್ವ ಅಸ್ತ್ರಪ್ರಯೋಗದಿಂದ ಹೋರಾಡಿ—"ಬ್ರಿಟಿಷರೇ ಇಲ್ಲಿಂದ ತೊಲಗಿರಿ" ಎಂದು ಘೋಷಿಸಿದರು. ಸಹಸ್ರಾರು ಸಂವತ್ಸರಗಳ ನಂತರ ಅಖಂಡ ಭಾರತ ದೇಶವು ಸ್ವತಂತ್ರವಾಗುವ ಸುಯೋಗ ಒದಗಿತು. ಆಗಲೂ ಆ ಕಪಟ ರಾಜತಂತ್ರಜ್ಞರು—ಹಿಂದೂ ಮುಸ್ಲಿಮ್ ಜನಾಂಗಗಳಲ್ಲಿ ಪರಸ್ಪರ ದ್ವೇಷ ಬೀಜಗಳನ್ನು ಬಿತ್ತಿ ಬೆಳೆಸಿ—ದೇಶವನ್ನು ಇಬ್ಭಾಗ ಮಾಡಿ ಹೊರಟು ಹೋದರು.

ಗಾಂಧಿಯವರ ಅಹಿಂಸೆ ಎಂಬುದು ಶಸ್ತ್ರಹೀನರ ದೌರ್ಬಲ್ಯಪ್ರದರ್ಶಕ ಹೇಡಿತನದ ಉದ್ಗಾರವಲ್ಲ. ಅನ್ಯಾಯವನ್ನು ಪ್ರತಿಭಟಿಸಿ—ಶತ್ರುವಿನ ಹೃದಯ ಪರಿವರ್ತನೆ ಮಾಡುವ ಅದೃಶ್ಯ ಶಸ್ತ್ರಾಯುಧವೇ ಅದು. ಅಹಿಂಸೆ ಎಂದರೆ ಪ್ರಾಣಿ ಮಾತ್ರಕ್ಕೆ ಹಿಂಸೆ ಮಾಡಬಾರದೆಂಬಷ್ಟೇ ಮಾತ್ರವಲ್ಲ—ಮನಸ್ಸು ಮಾತ್ರವೇ ಅಲ್ಲ—ಯಾವ ಪ್ರಾಣಿಗೂ ದುಃಖದಾಯಕವಾದ ವಿಚಾರವನ್ನು ಕುರಿತು ಯೋಚಿಸಲೂ ಬಾರದು ಎಂಬುದು ಅದರ ಅಧ್ಯಾತ್ಮಾರ್ಥ! ಹಿಂದೂ ಧರ್ಮದ ಈ ಪ್ರಾಚೀನ ಸಿದ್ಧಾಂತವನ್ನು ಅವರು—ದುಷ್ಟ ಶಕ್ತಿಗಳ ಪ್ರಾಬಲ್ಯದಿಂದ ಸರ್ವತ್ರ ಹಿಂಸೆಯೇ ಪ್ರಚಲಿಸಿರುವ ಈ ಇಪ್ಪತ್ತನೆಯ ಶತಮಾನದಲ್ಲೂ ಯಶಸ್ವಿಯಾಗಿ ಪ್ರಚುರಗೊಳಿಸಿದರು. ಅವರ ಈ ತತ್ವವನ್ನು—ಗಡಿನಾಡ ಗಾಂಧಿ ಎಂದು ಪ್ರಸಿದ್ಧರಾಗಿ

(ಇಪ್ಪತ್ತನಾಲ್ಕನೇ ಪುಟ ನೋಡಿ)

Call: 326921 Cable: PANKAJRISE

PANKAJ MERCANTILE CO.

MANUFACTURERS—EXPORTERS

COSTUME JEWELLERY :
ORIENTAL, ENAMELLED, SHELLAC, FILIGREE & PLASTICS.

LADIES HAND BAGS :
RAW SILK, WOOD BEADED, JARI EMBROIDERY, ARTISTIC LEATHER & PLASTICS.

ALLIED HANDICRAFTS

REP. BY : MANU DESAI

194 NAGDEVI STREET, BOMBAY-3 (INDIA)

ಕರೆ. 326921 ಕೇಬಲ್. ಪಂಕಜ್‌ರೈಸ್

ಪಂಕಜ ಮರ್ಕಂಟೈಲ್ ಕಂಪನಿ

ಉತ್ಪಾದಕರು—ರಫ್ತುಗಾರರು

ಧರಿಸುವ ಆಭರಣಗಳು :
ಪ್ರಾಚ್ಯ, ಗಿಲಾಯಿ, ಶೆಲ್ಲಾಕ್, ಫಿಲಿಗ್ರಿ ಮತ್ತು ಪ್ಲಾಸ್ಟಿಕ್‌ಗಳಿಂದ ತಯಾರಿಸಿದವುಗಳು.

ಮಹಿಳೆಯರ ಕೈಚೀಲಗಳು :
ಕಚ್ಚಾ ರೇಷ್ಮೆ, ಮರದ ಮಣಿ, ಜರಿ ಕಸೂತಿ, ಕಲಾಪೂರ್ಣ ಚರ್ಮ ಮತ್ತು ಪ್ಲಾಸ್ಟಿಕ್‌ಗಳಿಂದ ತಯಾರಿಸಿದವುಗಳು

ಮತ್ತು ಇತರ ಸಂಬಂಧಿಸಿದ ಹಸ್ತ ಕೌಶಲ್ಯದ ಒಡವೆ ವಸ್ತುಗಳು

ಪ್ರತಿನಿಧೀಕರಿಸುವವರು : ಮನು ದೇಸ್ಾಯಿ

194—ನಾಗ್ದೇವಿ ರಸ್ತೆ, ಮುಂಬಯಿ-3 (ಭಾರತ)

ಶ್ರೀ ಎಂ. ವಿ. ಶರ್ಮಾ

ಸಾಂಸ್ಕೃತಿಕ ಸಂಘರ್ಷ

ಭಾರತದಲ್ಲಿ ಸಂಸ್ಕೃತಿಯು ಸಂಘರ್ಷಕ್ಕೆ ಗುರಿಯಾಗಿದೆ. ಜೀವನಕ್ಕೆ ಉಪಯುಕ್ತ ಅರ್ಥವಿಲ್ಲದಂತಹ ವಾತಾವರಣ ಮೂಡಿದೆ. ಸರ್ವಪ್ರವೃತ್ತಿಯ ಸಂಪೂರ್ಣತೆ ಹೊಂದುವುದೇ ಮಾನವ ಜೀವಿತದ ಪರಮ ಧ್ಯೇಯವೆಂದು ಹೇಳುವವರು ಅದಕ್ಕೆ ಬೇಕಾದ ವಾತಾವರಣವನ್ನು ಶಿಕ್ಷಣ ಸೌಕರ್ಯವನ್ನು ಒದಗಿಸಬೇಡವೆ? 'ದುಡಿಮೆ'ಯನ್ನು ವ್ಯಾಪಾರ ಮಟ್ಟದಿಂದ ಹೃದಯ ಮಟ್ಟಕ್ಕೆ ಏರಿಸಿದರೆ ಮಾತ್ರ ಇದು ಸಾಧ್ಯ.

ಇಂದು ನಮ್ಮ ಜನಕ್ಕೆ ನಡೆಯುತ್ತಿರುವ ವಿದ್ಯೆ, ಸನ್ನಿವೇಶ, ಸರಕಾರ ಎಲ್ಲವೂ ನಮ್ಮ ಸಂಸ್ಕೃತಿಯ ದುಃಸ್ಥಿತಿಗೆ ಕಾರಣಗಳು. ಸದ್ಯ ನಮ್ಮಲ್ಲಿ ಶಾಸ್ತ್ರ ವಿಸ್ತರಣೆಯೇನೂ ಆಗಿಲ್ಲ. ಕಲಾಭಿವೃದ್ಧಿಯೂ ಆಗಬೇಕಾದಷ್ಟು ಆಗಿಲ್ಲ. ದೇಹವಿರುವ ದೆಸೆಯಿಂದ ಎಷ್ಟು ಮಟ್ಟಿನ ಪ್ರಯತ್ನವು ನಮಗೆ ಅನಿವಾರ್ಯವೋ ಅಷ್ಟನ್ನು ಮಾಡುವವರಾಗಿ ಈಗ ನಾವಿದ್ದೇವೆ. 'ತರೋಣ, ತರೋಣ, ತಿಂದಾಕೋಣ, ಮಲಗೋಣ, ಮತ್ತೇಳೋಣ, ಬೆಳಗು ಬೈಗೂ ಊಟದ ಕೆಲಸ ಹೊರತಿಲ್ಲದ ಮೇಲೆಸಯ್ಯ'- ಎಂದು ಶ್ರೀ ಪುರಂದರದಾಸರು ಬಣ್ಣಿಸಿರುವ ಕೇವಲ ಶಾರೀರಿಕ ಜೀವನಕ್ಕೆ ಎಷ್ಟು ಬುದ್ಧಿ ಶ್ರಮವು ಅನಿವಾರ್ಯವೋ ಅಷ್ಟಕ್ಕಿಂತ ಒಂದು ಎಳ್ಳಷ್ಟಾದರೂ ಹೆಚ್ಚಾಗಿ ನಾವು ಪ್ರಯತ್ನ ಮಾಡುತ್ತಿಲ್ಲ.

ಈಗ ನಮಗಿರುವ ದುಃಖಕ್ಕೆ ಮೂಲ ಎಲ್ಲಿ? ಅವುಗಳನ್ನು ಹೇಗೆ ಪರಿಹಾರ ಮಾಡಬಹುದು? ನಮ್ಮ ಜೀವನದಲ್ಲಿ ತಿದ್ದಬೇಕಾದವುಗಳು ಅವಶ್ಯವೇ.... ನಮ್ಮ ನಾನಾ ಸಂಸ್ಥೆ-ಸಂಪ್ರದಾಯಗಳನ್ನು ಹೇಗೆ ಹೇಗೆ ಸಮೀಕರಿಸಬೇಕು... ಈ ವಿಧವಾದ ಪ್ರಶ್ನೆಗಳೂ ನಮ್ಮ ಮನಸ್ಸಿಗೆ ಎಷ್ಟು ತೀವ್ರವಾಗಿ ತೋರಬೇಕೋ ಅಷ್ಟು ತೀವ್ರವಾಗಿ ತೋರುತ್ತಿಲ್ಲ. 'ಪುರುಷಕಾರ ಸ್ವರೂಪವಾದ ವೈಜ್ಞಾನಿಕ ಚಿತ್ತವೃತ್ತಿ ನಮ್ಮಲ್ಲಿ ಅಭಾವವಾಗಿದೆ' ಎಂಬ ಮಾತಿನತ್ತ ಲಕ್ಷ್ಯ ಕೊಟ್ಟರೆ ನಮ್ಮ ಇಂದಿನ ಸಂಸ್ಕೃತಿಯ ದುರ್ದೆಸೆಯ ಸ್ವರೂಪ ಸ್ಪಷ್ಟವಾಗುತ್ತದೆ. ಕಲೆ, ವಿಜ್ಞಾನ, ತತ್ವ, ಈ ಯಾವ ಕಾರ್ಯರಂಗದಲ್ಲಿ ಕಾಲಿಟ್ಟರೂ ಮೇಲೆ ಹೇಳಿದ ಕುಂಠಿತ ಪ್ರಗತಿಯೇ ಕಣ್ಣಿಗೆ ಗೋಚರ. ಪರ ಮನೋರಂಜನದಿಂದ ಸ್ವಾರ್ಥ ಸಾಧಿಸುವದು ಅನುಕ್ತವಾದರೂ ಅವ್ಯಕ್ತವಲ್ಲದ ಇಂದಿನ ಆಚಾರವಾಗಿದೆ; ಅದನ್ನುಳಿದರೆ ಜನಕ್ಕೆ ಉಳಿದ ಯಾವುದೂ ಸತ್ಯವೆಂದು ನಂಬಿಗೆಯಿಲ್ಲ. ಬಾಯಲ್ಲಿ ಉದಾರ ಕಾರ್ಯದಲ್ಲಿ ಕಂಜೂಷಿ—ಎಂಬ ಹಾಗೆ ಜನತೆಯ ದೃಷ್ಟಿ ಬಹಳ ಸಂಕುಚಿತವಾಗುತ್ತ ನಡೆದಿದೆ. "ಕಲಕವು ಇಂದು ವ್ಯಾಪಾರವಾಗಿ ಹೋಗಿದೆ; ಕೆಲಸಗಾರನು ಅದರಿಂದ ತಪ್ಪಿಸಿಕೊಳ್ಳ ಬಯಸಿ ಹೊರಗಿನ ಸಿನೇಮಾ ಮತ್ತು ಸಂಗೀತ ಶಾಲೆಗಳಲ್ಲಿ ಸಂತೋಷ ಪಡೆಯಲು ಅಪೇಕ್ಷಿಸುತ್ತಾನೆ" ಎಂಬುದರಿಂದ ಇಂದು ಜನತೆಯ ಕರ್ತವ್ಯ ಪರತೆಯ ಮಟ್ಟ ಎಲ್ಲಿ ಗಿಳಿದಿದೆಯೆಂಬುದರ ಅರಿವಾಗುವದು. ಕಾರಣ ನಮ್ಮ ಹಿಂದಿನ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಯೋಗ್ಯವಾದ ಕೆಲಸ ನಡೆಯದೆ ಅವ್ಯವಸ್ಥೆ, ಅರಾಜಕತೆ, ನಿರುತ್ಸಾಹ, ನಿರ್ಲಕ್ಷ್ಯಗಳು, ತಲೆದೋರುವಂತಾಗಿದೆ. ವಿರಾಮವೆಂದರೆ ಸೋಮಾರಿಯಾಗಿ ಕಾಲ ಕಳೆಯುವದೆಂದೂ, ಕೆಲಸವೆಂದರೆ ನಿರ್ಬದ್ಧವೂ ನಿರಪೇಕ್ಷಣೀಯವೂ ಆದ ಶಿಕ್ಷಾನುಭವವೆಂದೂ ತಿಳಿಗು ಜನರು ಅಶ್ರದ್ಧರೂ, ಅನುತ್ಸಾಹಿಗಳೂ, ಅಧುರಂಧರರೂ, ಆಗುತ್ತ ಬಂದಿದ್ದಾರೆ. ಇದರ ನಿವಾರಣೆಯಿಲ್ಲದೆ ಭಾರತೀಯ ಸಂಸ್ಕೃತಿಯ ಏಳಿಗೆಯು ಮಾತು ಬರಿ ಕನಸು.

ಪಾಶ್ಚಾತ್ಯ ಸಂಸ್ಕೃತಿ ಸಂಪ್ರದಾಯ ಪ್ರಿಯರಾಗಲಿ, ಪೌರಸ್ತ್ಯ ಸಂಸ್ಕೃತಿಸಂಪ್ರದಾಯ ಪ್ರಿಯರಾಗಲಿ ನಮ್ಮಲ್ಲಿ ಇಂದು ಗುರಿಯಿಟ್ಟು ಮಾಡುವ ಕೃತಿ ಕಡಿಮೆಯಾಗಿದೆ. ಹೇಗಾದರೂ ಆಗಲಿ ಎಂಬ ಪ್ರವೃತ್ತಿ ಬೆಳೆಯುತ್ತಿದೆಯಲ್ಲದೆ ಹಾಗೆ ಮಾಡಿದ್ದೇ ಸರಿಯೆಂದು ಕಾಳಗಕ್ಕೆ ಕತ್ತಿ ಕಟ್ಟಿ ನಿಲ್ಲುವದೂ ಹೆಚ್ಚಾಗುತ್ತಿದೆ. ಅದಲ್ಲದೆ "ಮಹಾಜನೋ ಯೇನ ಗತಃ ಸ ಪಂಥಾಃ" ಎಂಬಂತೆ ಹೇಗೆ ನಡೆದರೂ ಅತೃಪ್ತಿಯನ್ನೇ ವ್ಯಕ್ತಪಡಿಸುವ ಗುಂಪೂ ಅಲ್ಲಲ್ಲಿ ತಲೆದೋರುತ್ತಿವೆ; ಜ್ಞಾನದ ಗಾಂಭೀರ್ಯ ಗೌರವಗಳು ಹಸ್ತಗತವಾಗದೆ ಜ್ವಲಿಸುವದೂ ಕೇಳಿ ಬರುತ್ತಿದೆ. ಉತ್ಸಾಹವು ವಾಙ್ಮಾತ್ರ ನಿಷ್ಠವಿದೆಯೇ ಹೊರತು ಕಾರ್ಯದಲ್ಲಿಲ್ಲವಾಗಿದೆ.

ಇಂದು ಹಳೆತನ — ಹೊಸತನಗಳಲ್ಲಿ ಸಂಘರ್ಷ ನಡೆಯುತ್ತಿದೆಯಾದರೂ ಹೇಳುವಷ್ಟು ಕಾರ್ಯಪ್ರಪಂಚದಲ್ಲಿ ರೂಪುಗೊಂಡಿಲ್ಲ. ವಿಚಾರವೆದ್ದಿದೆಯಾದರೂ ಅದು ಆತ್ಮ ಸಮರ್ಥನೆಗೆ ಬೇಕಾದಷ್ಟು ವೀರ್ಯವತ್ತಾಗಿಲ್ಲ. ಒಂದು ವಿಧದ ಕ್ಲೈಬ್ಯದಿಂದ ಜನರ ಆಚಾರ ವ್ಯವಹಾರಗಳು ಕೇವಲ ಭಯ ನಿಯಂತ್ರಿತವಾಗಿವೆಯೇ ಹೊರತು ಶ್ರದ್ಧಾಜನ್ಯವಾದ ಧೀರ ಪ್ರಾಮಾಣಿಕತೆಯಿಂದ ಸಾಗಿಲ್ಲ. ಸಂಸ್ಕೃತಿ ಸಂಕರದ ಹೆಸರಿನಲ್ಲಿ ಅಸಂಸ್ಕೃತಿ—ಉಸಂಸ್ಕೃತಿಗಳ ಚಿಹ್ನೆಗಳು ತಲೆದೋರುತ್ತಿರುವದು ಶೋಚನೀಯ. ಲಂಚ ನಿರ್ಮೂಲನ ಪ್ರಯತ್ನದಲ್ಲಿ ಕೈ ಹಾಕಿದ ಅಧಿಕಾರಿಗಳಿಗೆ ಈ ಮಾತು ಬಹಳ ಸಲ ಅನುಭವಕ್ಕೆ ಬಂದಿದೆ. ಸ್ವದೇಶೀಯ ಭಾಷೆ ಸಂಸ್ಕೃತಿಗಳನ್ನು ಶ್ರದ್ಧೆಯಿಂದ ಕಲಿಸುವ ಉಪಾಧ್ಯಾಯರುಗಳೂ ತಲೆ ನೋಯಿಸುವಷ್ಟು ಇದರ ಅರಿವಾಗಿದೆ. ಕಾಪಡದ ಕುದುರೆಯು ಸರಕಾರದ ದೆಸೆಯಿಂದ ಮನುಷ್ಯನ ಜ್ಞಾನ-ಗುಣ ಸತ್ಪ್ರಯತ್ನಗಳು ಕೆಲವೆಡೆ ಕಂಠಸ್ಥವಾಗಿಯೂ ಮತ್ತೆ ಕೆಲವೆಡೆ ಕೇವಲ ಗ್ರಂಥಸ್ಥವಾಗಿಯೂ ಇರುವದು ಇಂದಿನ ಅನೇಕರಿಗೆ ಗೋಚರ.

ಸಂಸ್ಕೃತಿ ಧಾರಿಣಿಯನ್ನೆರೆಯುವ, ಜ್ಞಾನವನ್ನು ಬಡಿಸುವ, ವಿವೇಚನಾ ಶಕ್ತಿಯನ್ನು ಎಚ್ಚರಿಸುವ ವಿದ್ಯಾಭ್ಯಾಸ ಪದ್ಧತಿ ಇಲ್ಲದಿದ್ದು ಮೇಲೆ ಹೇಳಿದ ಸರ್ವದೋಷಗಳಿಗೂ ಪ್ರಧಾನ ಕಾರಣ. ಮತದಂತೆ ನ್ಯಾಯದಂತೆ, ವಿದ್ಯೆ ಅಂಶತಃ ವಿತ್ತ ಸಾಧ್ಯವೆನಿಸಿರುವದು ಜನರ ಆತ್ಮಗ್ಲಾನಿಗೆ ಕಾರಣ. ವಿತ್ತೈಕ ಪರತೆಯಿಂದಲೇ ಒಂದು ಜನಾಂಗದ ಆತ್ಮಶಕ್ತಿಗೆ ಹತ್ತುವ ಬೆದ್ದಲೆಂದರೆ ಇದೇ. ಕಪ್ಪು ಕನ್ನಡಕಗಳ ಮುಖಾಂತರ ಜಗತ್ತನ್ನು ನೋಡುವವರಿಗೆ ಅದೇ ಸರ್ವ ಸಾಧನವೆನಿಸುವದು ಸಹಜ. ಆದರೆ ಸ್ವಲ್ಪ ವಿವೇಚಿಸಿದರೆ ಅದರಿಂದ ಲಭಿಸುವದು ಉದ್ದಿಷ್ಟ ವಸ್ತುವಲ್ಲ—ಅದರ ಅಭಾಸಿತ ರೂಪ.

ಪಾಶ್ಚಾತ್ಯ ಪದ್ಧತಿಯ ಪ್ರಭಾವ ಅತಿಯಾಗಿದೆ. ಪಾಶ್ಚಾತ್ಯ ನಾಗರಿಕತೆಯ ಬಹುದೊಡ್ಡ ದೋಷವೆಂದರೆ ಬೌದ್ಧಿಕ ಬೆಳವಣಿಗೆಗೆ ಪ್ರಾಮುಖ್ಯ ಕೊಟ್ಟಷ್ಟು ಹಾರ್ದಿಕ ಬೆಳವಣಿಗೆಗೆ ಕೊಡದಿರುವದು. ಆದರಿಂದ ಜನರಲ್ಲಿ ಸ್ವಾರ್ಥ ಹೆಚ್ಚುತ್ತ ಹೋಗುವದೇ ವಿನಃ ಔದಾರ್ಯ ಹೆಚ್ಚುವದಿಲ್ಲ. ಹೃದಯವಿಲ್ಲದೆ ಬುದ್ಧಿ ಎಂದೂ ಜನ ಸ್ಯನನ್ನು ದೈವೀ ಪ್ರಪಂಚಕ್ಕೆ ಒಯ್ಯಲಾರದೆಂದು ತಿಳಿದವರ ಮತ. ಜೀವನದ ಗುರಿಯು ಉತ್ತಮ ಜೀವನವೆಂಬುದನ್ನು ನಂಬಿದರೆ ಮಾನವನಿಗೆ ಅತಿಮಾನವತೆಯೇ ಆದರ್ಶವೆನಿಸುತ್ತದೆ. ಸರ್ವಪ್ರವೃತ್ತಿಯು ಸಂಪೂರ್ಣತೆ ಹೊಂದುವದೇ ಮಾನವ ಜೀವಿತದ ಪರಮ ಧ್ಯೇಯವೆಂದಾದರೆ ಅದಕ್ಕೆ ಬೇಕಾದ ವಾತಾವರಣ, ಶಿಕ್ಷಣ ಸೌಕರ್ಯಗಳನ್ನು ಒದಗಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ.

ಎಲ್ಲಾ ವಿದ್ಯಾಭ್ಯಾಸ ಪದ್ಧತಿಯ, ಶಿಕ್ಷಣದ ಗುರಿಯೂ ಮಾನವ ನಿರ್ಮಿತಿಯಾಗಿರಬೇಕು. ಶಿಕ್ಷಣದ ಉದ್ದೇಶ ಮನುಷ್ಯನು ಬೆಳೆಯುವಂತೆ ಮಾಡುವದು. ಆತ್ಮಶಕ್ತಿಯು ಪ್ರವಾಹ-ಪ್ರಕಾಶನಗಳ ಹಿಡಿತದಲ್ಲಿ ನಿಲ್ಲುವಂತೆ ಪ್ರಯೋಜನಕಾರಿಯಾಗಿ ಮಾಡುವದಕ್ಕೆ ವಿದ್ಯಾಭ್ಯಾಸವೆಂದು ಹೆಸರು. ನಮ್ಮ ನಾಡಿಗೆ ಇಂದು ಆಗತ್ಯವಾದುದೆಂದರೆ: "ಕಬ್ಬಿಣದಂತಹ ದೇಹಬಲ, ಉಕ್ಕಿನಂತಹ ಹೃದಯಬಲ, ಮತ್ತು ಸಾಗರದ ತಳದಲ್ಲಿ ಹೋಗಿ ಮೃತ್ಯುವನ್ನೇ ಎದುರಿಸುವ ಪ್ರಸಂಗ ಬಂದರೆ ಅದಕ್ಕೂ ತಯಾರಿದ್ದು ವಿಶ್ವದ ಹುಟ್ಟುಗುಟ್ಟುಗಳೊಳ ಹೊಕ್ಕು ತಮಗೆ ಇಷ್ಟಬಂದ ಹಾಗೆ ತಮ್ಮ ಇಷ್ಟವನ್ನು ಸಾಧಿಸಬಲ್ಲ ಅಜಯ್ಯವಾದ, ಭೀಮವಾದ ಆತ್ಮಶಕ್ತಿಗಳು." ಎಂಬುದು ವಿವೇಕಾನಂದರ ವೀರವಾಣಿ. ಇಂದು ಹೊರಗೆ ಕಾಣುವ ಎಲ್ಲ ವಿಧದ ಆಡಂಬರಮಯ ಜೀವನಕ್ಕೂ ಒಳಗಿನ ಅಂತರಂಗ ದುರ್ಬಲವೇ ಕಾರಣ. ನಮ್ಮ ಹಿಂದಿನ ತ್ಯಾಗಿಗಳ ಧೀರ ಗಂಭೀರ ಜೀವನದ ಆದರ್ಶದಲ್ಲಿ ನಮ್ಮ ತರುಣರು, ನವ ಭಾರತ ನಿರ್ಮಿತಿಗೆ ನವವಿಧದ, ನವಸ್ಫೂರ್ತಿದಾಯಕವಾದ, ಓಜಸ್ವೀ, ಪ್ರತೀಪಕವಾದ ವಿದ್ಯಾಭ್ಯಾಸವನ್ನು ಪಡೆಯಬೇಕು. ಇದನ್ನೇ ನಮ್ಮ ಪ್ರಾಚೀನ ಮಹರ್ಷಿಗಳು ಬ್ರಹ್ಮಚಾರಿಯು "ಅಗ್ನಿಕಾರ್ಯ"ದಲ್ಲಿ ಹೇಳುವ ಮಂತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

FOR ALL YOUR REQUIREMENTS

VISIT

JANATHA BAZAAR

SAHAKARI MAHAL,

MANGALORE.

S. K. C. C. W. Stores Ltd.

With best compliments from

M/s. DURGA TEA & GENERAL STORES

&

M/s. DURGA BHAVAN

BAGALKOT

Phone No. 187

With best compliments from

BABURAO A. SHETTY

Prop.

MYSORE RESTAURANT

NEW MARKET ROAD

BIJAPUR

Phone: 561

ಕಾರ್ಯದಕ್ಷತೆಗೆ — ಕ್ಲಪ್ತ ಸೇವೆಗೆ ಪ್ರಸಿದ್ಧವಾದ

ಮೇಲ್ತರಗತಿಯ ಉಪಾಹಾರ ಮಂದಿರ

ಮೈಸೂರು ರೆಸ್ಟೋರೆಂಟ್

ಹೊಸ ಮಾರ್ಕೆಟು ರಸ್ತೆ

ಬಿಜಾಪುರ

ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ

ಫೋನ್:
561

ಬಾಬುರಾವ್ ಎ. ಶೆಟ್ಟಿ
ಪ್ರೊಪ್ರೈಟರ್

'ಮುದ್ದಣ' ಕವಿಯ ಕೃತಿಗಳು

ಕನ್ನಡ ಕವಿಪುಂಗವ ಕಬ್ಬಿಗರ ಬಲ್ಲಹ 'ಮುದ್ದಣ'ನ ಅಧಿಕೃತ ಜೀವನ ವೃತ್ತಾಂತವನ್ನು ಸಂಗ್ರಹಿಸುವ ಕಾರ್ಯವಿಂದು ಅತ್ಯಗತ್ಯ. ಆತನ ಬಗ್ಗೆ ಆತನ ಕೃತಿಗಳ ಬಗ್ಗೆ ಮೌಲಿಕ ಮತ್ತು ವಿವೇಚನಾತ್ಮಕ ಅಧ್ಯಯನವೂ ಅಗತ್ಯ. ಕವಿಯ ಶತಮಾನೋತ್ಸವದ ಸಂದರ್ಭದಲ್ಲಿ ಈ ಬಗ್ಗೆ ಕಾರ್ಯ ಸಾಗಬೇಕೆನ್ನುತ್ತಾರೆ ಶ್ರೀ ಆಚಾರ್ಯರು.

೨೦ನೆ ಶತಕದ ಕನ್ನಡ ಸಾಹಿತ್ಯಾಕಾಶದಲ್ಲಿ ಧ್ರುವ ತಾರೆಯಂತೆ ಮಿನುಗುತ್ತಿರುವ ಕವಿಗಳು 'ಮುದ್ದಣ'ನ ಕೃತಿಗಳ ಕೆಲವು ವಿಚಾರ ಬರೆಯುವುದು ಅಪ್ರಸ್ತುತವಾಗದು. ಏಕೆಂದರೆ, ಇದೀಗ ಆತನ ಜನ್ಮ ಶತಾಬ್ದಿ ಮಹೋತ್ಸವವು ಎಲ್ಲೆಡೆ ನಾನಾ ವಿಧವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಈ ವೇಳೆಯಲ್ಲಿ, ಆತನ ಕೃತಿಗಳ ಒಳ್ಳೆಯ ವಿಚಾರಕ್ಕೆಳಸಿದರೆ ಉಚಿತವಾದೀತು. ಆ ಮೊದಲಲ್ಲಿ 'ಮುದ್ದಣ' ಕವಿಯ ಏಕೈಕ ಪುತ್ರರಾದ, ಭದ್ರಾವತಿಯ ಶ್ರೀ ನಂದಳಿಕೆ ಎನ್. ರಾಧಾಕೃಷ್ಣಯ್ಯನವರು ನನಗೆ ಬರೆದ ಒಂದು ಪತ್ರದ ವಿಚಾರ ಮೊದಲಾಗಿ ಬರೆಯಲಿದೆ.

೧. "ತಾವು ಬರೆದ ವಿಷಯದಲ್ಲಿ ಸರಿಯಾದ ಉತ್ತರವು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ (ಅಲ್ಲಿಯ) ಕರ್ನಾಟಕ ಸಂಘದಿಂದ ಪ್ರಕಟವಾದ 'ಮುದ್ದಣ' ಎಂಬ ಪುಸ್ತಕವು ರೂಪಿಸುತ್ತದೆ. ಆ ಪುಸ್ತಕದಲ್ಲಿ ಕವಿಯ ಜೀವನ ಚರಿತ್ರೆಯನ್ನು 1. ರಾವ್‌ಬಹದೂರ್ ನರಸಿಂಹಾಚಾರ್ಯರು, 2. ಎ. ವೆಂಗೀಶರಾಯರು, 3. ಬೆನಗಲ್ ರಾಮರಾಯರು, 4. ಹುರುಳಿ ಭೀಮರಾಯರು, 5. ಮಳಲಿ ಸುಬ್ಬರಾಯರು, 6. ರಾ. ಸು. ಸಾಲಿ, ಇವರು ಬರೆದಿರುತ್ತಾರೆ. ಗ್ರಂಥಗಳ ವಿಮರ್ಶೆಯನ್ನು 1. ಎ. ವೆಂಗೀಶರಾಯರು, 2 ಪಂಡಿತ ಮ. ಮಾದೇವ ಪ್ರಭಾಕರ ಪೂಜಾರರು, 3. ಮಾಸ್ತಿ ವೆಂಕಟೇಶ ಅಯ್ಯಂಗಾರ್ 4. ಎಂ. ಎನ್. ಎಸ್. ಮತ್ತು ಬಿ. ಯಂ. ಎಸ್. ಬರೆದಿರುತ್ತಾರೆ. ಈ ಪುಸ್ತಕ ಬೇಕೆಂದು ಜಿ. ಎಸ್. ಶಿವರುದ್ರಪ್ಪನವರು, ಕಾರ್ಯದರ್ಶಿ, ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು ಇವರಿಗೆ ಬರೆದಿದ್ದೆ. ಅದಕ್ಕವರು ಪುನಃ ಮುದ್ರಿತವಾದೊಡನೆ ಕಳಿಹಿಸುತ್ತೇನೆಂದು ಬರೆದಿರುತ್ತಾರೆ."

(ಇದು ಮಾತ್ರವಲ್ಲ, ಇತರರು ಹಲವಾರು ವಿದ್ವಾಂಸರು ಬರೆದ ಲೇಖನಗಳು ಬೇರೆ ದೊಡ್ಡ ಪುಸ್ತಕಾಕಾರದಷ್ಟು ಆಗಬಲ್ಲುದಾದರೂ, ಈ ಬಗೆಗೆ ಮುಂದಾಳುಗಳಾಗಿ ಯಾರೂ ಬಂದಿಲ್ಲ. ಈ ಬಾರಿ ಉಡುಪಿ ಕ್ರಿಶ್ಚನ್ ಹೈಸ್ಕೂಲಿನಲ್ಲಿ "ಮುದ್ದಣ"ನು ಕೊನೆಗೆ ಕನ್ನಡ ಪಂಡಿತನಾಗಿದ್ದ ಕಾರಣದಿಂದಲೆಂಬಂತೆ ಆತನ ಬಗೆಗೆ ಬೇರೆಬೇರೆ ಲೇಖನ ಬರೆಯಿಸಿ ಪ್ರಕಟಿಸಲಿದ್ದಾರೆಂದು ಕೇಳುತ್ತದೆ. ಆದರೆ, ಕೇವಲ ಗತಾನುಗತಿಕವಾಗಿಯೂ ಆಗಲೀ, ಪೂರ್ವಾಗ್ರಹದಿಂದಾಗಲೀ, ಊಹನಾತ್ಮಕವಾಗಿಯೂ ಆಗಲೀ ಬರೆಯುವುದು ಬೇಕಿಲ್ಲ. 'ಮುದ್ದಣ'ನ ಸಂಬಂಧಿಕರಿಂದ ವಿಷಯಗಳನ್ನು ಸಂಗ್ರಹಿಸಿ, ಆತನ ಕನ್ನಡ ಕೃತಿಗಳ ಮೌಲಿಕ ಗ್ರಂಥಗಳ ಪರಿಶೀಲನೆಯಿಂದ ತತ್ಕೃತಿಗಳ ವೈಶಿಷ್ಟ್ಯವನ್ನು ಬರೆಯುವುದಕ್ಕೆ ವಿದ್ವಾಂಸರು ಮುನ್ನಡೆಯಬೇಕಾಗಿದೆಯೆಂದೂ ಕಳಕಳಿಯಿಂದ ವಿಜ್ಞಾಪಿಸಬಹುದು. ಏಕೆಂದರೆ, ಕೇವಲ ವಿಮರ್ಶೆಯೆಂದು ಆತನ-ಕೃತಿಗಳ ಬಗೆಗೆ ದೂರು ನುಡಿಯುವುದು ಉಭಯ ಭೂಷಣವಲ್ಲ! (ಈ ಬಗೆಯಲ್ಲಿ ಮಂಗಳೂರ "ಪ್ರಭಾತ"ದಲ್ಲಿ ಈ ಬಾರಿ ಸ್ವಾತಂತ್ರ್ಯ ಸಂಚಿಕೆಯಲ್ಲಿ, ಶಿಮೊಗ್ಗೆಯ "ಯುಗಪುರುಷ" ದಶರಾಂಕದಲ್ಲೂ ನನ್ನ ಬರೆಹ ನೋಡಬಹುದು.)

೨. "ನನ್ನ ಜನಿತ್ರೀಯವರ ಹೆಸರು ಕಮಲಮ್ಮ. 1950ರ ವರೆಗೂ ಇದ್ದು, ಆಶ್ವಯುಜ ಬ. ೨ರಲ್ಲಿ ನಮ್ಮನ್ನಗಲಿರುವರು. ಅವರಿಗ ಲಗ್ನವಾದಾಗ ಅವರ ವಯಸ್ಸು 15—16 ಇರಬಹುದೆಂದು ಗೊತ್ತಾಗುತ್ತದೆ. ಅವರಿಗೆ ನಾನೊಬ್ಬನೇ ಮಗ, ಜನನ 4—1—1900. ತಾಯಿಯವರ ತಂದೆಯ ಹೆಸರು ನಾರಾಯಣಪ್ಪನವರು, ತಾಯಿಯ ಹೆಸರು ತಿಪ್ಪಮ್ಮನವರು. ಇವರು ದಕ್ಷಿಣ ಕನ್ನಡ ಜಿಲ್ಲೆಯವರೇ, ಕಾರಣಾಂತರದಿಂದ ಇಲ್ಲಿಗೆ ಬಂದು ನೆಲಸಿದ್ದರಂತೆ. ನಮ್ಮ ಅಜ್ಜನವರು (ತಂದೆಯವರ ತಂದೆ) ನಂದಳಿಕೆಯಲ್ಲಿ ಇದ್ದು ದೇವಾಲಯದ ಕೆಲಸದಲ್ಲಿದ್ದರೆಂದೂ, ತಾಯಿಯ ತಂದೆ ಕಾಗೇಕೋಡಮಗ್ಗಿ (ಭದ್ರಾವತಿ ತಾಲೂಕ)ಯಲ್ಲಿದ್ದು ಜಮೀನಿನ ವ್ಯವಸಾಯ ಮಾಡಿ ಜೀವಿಸುತ್ತಿದ್ದರೆಂದೂ ಹಿರಿಯರು ಅಭಿಪ್ರಾಯಪಡುತ್ತಾರೆ. ಮತದ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಸರಿಯಾಗಿದೆ (ಕವಿಯು ಶಿವ ಬ್ರಾಹ್ಮಣ, ಅರ್ಥಾತ್ ಸ್ಥಾನಿಕ ಬ್ರಾಹ್ಮಣರಬೇಕೆಂದು ನನ್ನೆಣಿಕೆ) ನಮ್ಮ ತಂದೆಯವರು ಆರೋಗ್ಯವಂತರಾಗಿಯೇ ಇದ್ದರಂತೆ. ಸಾಯುವ ಸಮಯಕ್ಕೆ ಕೆಲವು ಸಮಯ ಹಿಂದೆ ಬಿ ರಾಮರಾಯರಿಗೆ ಉಡುಪಿಯಿಂದ ಬರೆದ (31-1-1901ರ) ಕಾಗದದಲ್ಲಿ, "ನಿಶ್ಶಕ್ತಿ, ಕೂರಲು ಶಕ್ತಿಯಿಲ್ಲ, ಮಲಮಾತ್ರ ಇದ್ದಲ್ಲಿಯೆ, ಕ್ಷಯರೋಗವೆಂದು ಹೇಳುತ್ತಾರೆ" ಎಂದು ಬರೆದಿರುತ್ತಾರೆ. ನನ್ನ ಸೋದರ ಮಾವನವರು (ತಾಯಿಯ ಅಣ್ಣ) ಸುಬ್ಬಣ್ಣನವರು

(ಇಪ್ಪತ್ತೊಂದನೆಯ ಪುಟ ನೋಡಿರಿ)

With best compliments from

M. P. SHETTY

Prop :

REGAL RESTAURANT

MARKET,

DHARWAR

ಧಾರವಾಡದಲ್ಲಿ ಜನಾದರಣೀಯವಾದ
ಉತ್ತಮ ದರ್ಜೆಯ ಉಪಾಹಾರ ಮಂದಿರ—

ರೀಗಲ್ ರೆಸ್ಟೋರೆಂಟ್

ಮಾರ್ಕೆಟ್,
ಧಾರವಾಡ

ಎಂ. ಪಿ. ಶೆಟ್ಟಿ
ವ್ಯಾಪಾಲಕ

With best compliments from

NARAYANA SHETTY

Prop :

HOTEL GURUPRAKASH
(Restaurant)

MARKET ROAD

DHARWAR

ಧಾರವಾಡದಲ್ಲಿ ನಿಮ್ಮ ಅಚ್ಚುಮೆಚ್ಚಿನ
ಉಪಾಹಾರ ಗೃಹ—

ಹೋಟೆಲ್ ಗುರುಪ್ರಕಾಶ

ಮಾರ್ಕೆಟ್ ರೋಡು,
ಧಾರವಾಡ

ಉತ್ತಮ ತಿಂಡಿತೀರ್ಥಗಳು!
ಕ್ಲುಪ್ತ ಸೇವೆ ಹಾಗೂ ಆದರಾತಿಥ್ಯ!

ನಾರಾಯಣ ಶೆಟ್ಟಿ
ವ್ಯಾಪಾಲಕ

ಅಸತ್ಯಮೇವ ಜಯತೇ

— ಶ್ರೀ ಕೆ. ಜಿ. ಹೆಗಡೆ

'ಸತ್ಯಮೇವ ಜಯತೇ' ಎಂಬ ನುಡಿಮುತ್ತನ್ನು ಅಳವಡಿಸಿರುವ ನಾಡು ಈ ಹೊತ್ತಿನ ವಿಪರೀತವನ್ನೇ ನಿತ್ಯ ಜೀವನದಲ್ಲಿ ಕಾಣುತ್ತೇವೆ. ಭ್ರಷ್ಟಾಚಾರ—ಭಾಷಣ - ಆಶ್ವಾಸನೆಗಳ ತ್ರಿವೇಣಿಯಲ್ಲಿ ಈ ನುಡಿ ಅವಗಾಹನೆಯಿಲ್ಲದೆ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಪರಿಸ್ಥಿತಿ ಬದಲಾಗದೆ ಹೋದರೆ 'ಅಸತ್ಯಮೇವ ಜಯತೇ' ಎಂಬುದನ್ನೇ ಅಳವಡಿಸಿ ಕೊಂಡಿದ್ದನ್ನಾದರೂ ಅರಿದಾರರೆ? ನೊಂದ ಹೃದಯದ ಜಿಜ್ಞಾಸೆಯಿದು.

"ಸತ್ಯಂವದ; ಧರ್ಮಂಚರ" ಎಂಬುವದು ನಮ್ಮ ದೇಶದ ಸಂಸ್ಕೃತ ಭಾಷೆಯಲ್ಲಿನ ನುಡಿ ಮುತ್ತು. ಅಂದರೆ ಸತ್ಯವನ್ನೇ ಹೇಳು; ಧರ್ಮವನ್ನೇ ಮಾಡು ಎಂಬುದು ಶಬ್ದಾರ್ಥ. ಪುಣ್ಯ ಭೂಮಿ ಭಾರತವರ್ಷದ ಸಾಂಸ್ಕೃತಿಕ ಸಂಪತ್ತಿನಲ್ಲಿ ಈ ಮಾತು ರತ್ನ ಸದೃಶವಾದದ್ದು. ರತ್ನಕ್ಕಿಂತಲೂ ಅಮೂಲ್ಯವಾದುದು.

ಯಾಕೆಂದರೆ ಸತ್ಯವೇ ದೇವರು ಎಂದು ಜಗತ್ತಿಗೇ ಸಾರಿದವರು ನಮ್ಮ ಸಾಧುಸಂತರು, ಮಹಾತ್ಮರು, ಋಷಿಗಳು, ಯೋಗಿಗಳು, ಮಹರ್ಷಿಗಳು ಮುಂತಾಗಿ ಧಾರ್ಮಿಕ ಮಹಾಪುರುಷರೆಲ್ಲ ನುಡಿದ ಸತ್ಯವಚನವಿದು. ಎಂದೇ ನಮ್ಮ ಭಾರತ ಸರಕಾರವೂ, "ಸತ್ಯಮೇವ ಜಯತೇ" ಎಂಬ ಶಿರೋನಾಮೆಯಲ್ಲಿ ತನ್ನ ಎಲ್ಲ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ. ಅಂದರೆ, ಸತ್ಯವನ್ನೇ ಹೇಳಿರಿ; ಸುಳ್ಳು ಬೇಡ. ಸತ್ಯವೇ ನಿತ್ಯ. ಬೇರೆಲ್ಲ ಅನಿತ್ಯ. ಸತ್ಯಕ್ಕೇನೇ ವಿಜಯ. ಸತ್ಯ ಮಾತ್ರವೇ ತ್ರಿಕಾಲಾಬಾಧಿತವಾದುದು. ಸತ್ಯಂ ಶಿವಂ ಸುಂದರಂ—ಎಂದೆಲ್ಲ ಸತ್ಯವನ್ನು ಸಾರ್ವತ್ರಿಕ ಅನುಷ್ಠಾನದಲ್ಲಿ ಅಳವಡಿಸಿಕೊಂಡ ವಿಶಿಷ್ಟ ದೇಶ ನಮ್ಮದು.

ಪ್ರಾಚೀನ ಕಾಲದಲ್ಲಿ ಗುರುಕುಲದಿಂದ ಅಥವಾ ಋಷ್ಯಾಶ್ರಮದಿಂದ ಶಿಕ್ಷಣ ಪಡೆದು ಮರಳುವಾಗ, ಗುರುಮುನಿಗಳು, ಋಷಿ ಪುಂಗವರು, "ಸತ್ಯವನ್ನೇ ಹೇಳು; ಧರ್ಮವನ್ನೇ ಮಾಡು" ಎಂದು ಆಶೀರ್ವದಿಸುತ್ತಿದ್ದರು. ಅವರ ಕಾಲದ ಗುಟ್ಟು ಸತ್ಯ.

ಆದರೆ ಈ ನೈತಿಕ, ಧಾರ್ಮಿಕ ಮತ್ತು ಪಾರಮಾರ್ಥಿಕ ಸಂಪತ್ತಿನ ಪ್ರಾಬಲ್ಯ ತರವು ನುರವು ಆಗಿಬಿಟ್ಟಿದೆ. ಸತ್ಯಕ್ಕೆ ಈಗ ಬೆಲೆಯೇ ಇಲ್ಲ! ಸತ್ಯ ಹೇಳಿದವನು ಸತ್ತೇ ಹೋದಾನು. ಅಸತ್ಯವೇ ಅಮರವಾದುದು. ಅಸತ್ಯಮೇವ ಜಯತೇ! ಅಸತ್ಯವೇ ಸರ್ವ ಜನರ ಪಾರಿಭಾಷಿಕ ದೈನಂದಿನ ಜೀವನದ ಸಬಲ ಸೂತ್ರವಾಗಿ ಪರಿಣಮಿಸಿಬಿಟ್ಟಿದೆ. ಈ ಸುಳ್ಳಿನ ಸಂತೆಯಿಂದ ಏನನ್ನೂ ಸಾಧಿಸಬಹುದು, ಎಲ್ಲಿಗೂ ಹೋಗಬಹುದು, ಎಂಥ ಬಿಕ್ಕಟ್ಟಿನಿಂದಲೂ ಪಾರಾಗಬಹುದು ಎಂಬ ಭಾವನೆ ಎಲ್ಲರಲ್ಲೂ ರಕ್ತಗತವಾಗಿದೆ!

ಹಿಂದಿನ ಕಾಲದಲ್ಲಿ ಸತ್ಯವಂತರಿಗೆ ಮಾತ್ರ ಸ್ವರ್ಗಲೋಕದ ಅಧಿಕಾರವಿತ್ತು. ಗೋಲೋಕ, ವೈಕುಂಠ ಮೊದಲಾದ ದೇವರ ನಾಡಿಗೆ ಪ್ರವೇಶವಿತ್ತು. ಆದರೆ ಅದೀಗ ಈ ಕಲಿಕಾಲದಲ್ಲಿ ಸರ್ವನಾಶವಾಯ್ತು. ಸತ್ಯವೇ ಮಾಯವಾಗಿದೆ! ಸ್ವಾರ್ಥ ಲಾಲಸೆಯ ಪಂಚಾಕ್ಷರಿಯಲ್ಲಿ, ಮದ ಮತ್ಸರಗಳ ಮೋಹದಲ್ಲಿ. ಜನರು ಸ್ವರ್ಗದ ಬದಲು "ಸೈತಾನ"ನ ನರಕವನ್ನೇ ಬಯಸುತ್ತಾರೆ. ಸತ್ಯದ ಬದಲು ಸುಳ್ಳನ್ನೇ ಆಡುತ್ತಾರೆ. ದೇವರು, ಧರ್ಮ, ನೀತಿ, ನಿಯಮ, ಒಳಿತು, ಕೆಟ್ಟದು ಸತ್ಯಾಚರಣೆಗಳ ಕಟ್ಟೇ ಕಡಿದಾಗಿದೆ. ಜಗತ್ತಿನಲ್ಲಿ ಬಹುಮುಖ ಯಶಸ್ಸಿಗೆ ಸತ್ಯವೇ ಮಾರು ಪಾಲು ಎಡೆ ತಡೆಗಳನ್ನು ತಂದೊಡ್ಡುತ್ತಿದೆ. ಅಸತ್ಯವೇ ಸರ್ವರಿಗೂ ಪ್ರಿಯವಾಗಿದೆ. ನಾವೆಲ್ಲರೂ ವಿಥಾರಧರರೆಂದ ಮೇಲೆ ಅಸತ್ಯ ಜಯವಾಗದೇ ಹೋದೀತೇ?

ಮುಂಬಯಿಯ ಆರೇ ಡೈರಿಯ ಕೇಂದ್ರದಿಂದ ಎರಡು ಬಗೆಯ ಹಾಲಿನ ಸರಬರಾಯಿಯನ್ನು ಸರಕಾರ ನಡೆಸುತ್ತದೆ. ಒಂದು ಪೂರ್ಣ (Whole) ಹಾಲು. ಇನ್ನೊಂದು ಹಾಲು ಪುಡಿ ಮಿಶ್ರಿತ ಅಪೂರ್ಣ (Toned) ಹಾಲು. ಪೂರ್ಣ ಹಾಲು ಪೌಡರ್ ಉಪಯೋಗಕ್ಕೆ, ಅಪೂರ್ಣ ಹಾಲು ಮರಿ ಮಕ್ಕಳಿಗೆ. (ಅದರಲ್ಲಿ ಬೆಣ್ಣೆ ಅಥವಾ ಕೊಬ್ಬಿನಾಂಶ ಬಹಳ ಕಡಿಮೆ. ಅದ್ದರಿಂದ ಸುಲಭದಲ್ಲೇ ಪಚನವಾಗುತ್ತದೆ.)

ನಮಗೆ ದಿನಕ್ಕೆ ಎರಡು ಲೀಟರ್ ಹಾಲಿನ ವ್ಯವಸ್ಥೆಯಿದೆ. ನಮ್ಮ ಕಾರ್ಡಿನಲ್ಲಿ ಅರ್ಧ ಪೂರ್ಣ ಮತ್ತು, ಉಳಿದದ್ದು ಅಪೂರ್ಣ. ಆದರೆ ನಮಗೆ ಬಹುತೇಕ ಪೂರ್ಣದ ಬದಲು ಅಪೂರ್ಣ ಸಿಗುತ್ತದೆ. ಅಪೂರ್ಣದ ಬದಲು ಪೂರ್ಣ ದೊರಕುತ್ತದೆ. ಸಾರಾಂಶವೇನೆಂದರೆ ಪೂರ್ಣ ಬೇಕಾದವರಿಗೆ ಅಪೂರ್ಣ ಮತ್ತು ಅಪೂರ್ಣದವರಿಗೆ ಪೂರ್ಣ. ಈ ತೆರನಾಗಿ ಹಾಲಿನ ವಿತರಣೆಯಾಗುತ್ತದೆ. ಬಾಯ್ದೆರೆ ಕೇಳಿದರೆ ಸರಬರಾಯಿ ಇಲ್ಲ. ಅಥವಾ ಈ ದಿನ ಬಂದಿಲ್ಲ ಎಂದು ಸುಳ್ಳು ಹೇಳುತ್ತಾರೆ. ಈ ಪರಿ ಸುಳ್ಳು ನಮಗೆ ಈಗ ಅಭ್ಯಾಸವಾಗಿಬಿಟ್ಟಿದೆ.

ಸೀದಾ ಅಂಗಡಿಗಳ ವ್ಯವಹಾರವೂ ಹೀಗೆಯೇ. ಗೋಧಿ ಬೇಕಾದವರಿಗೆ ಗೋಧಿಯಿಲ್ಲ! ಅಕ್ಕಿ ತಿನ್ನುವವರಿಗೆ ಅಕ್ಕಿಯಿಲ್ಲ! ಅಂದರೆ ಗೋಧಿ ಭಕ್ಷಕರಿಗೆ ಅನ್ನ ತಿನಿಸುತ್ತಾರೆ. ಅನ್ನ ಉಣ್ಣುವವರಿಗೆ ಗೋಧಿ ತಿನಿಸುತ್ತಾರೆ. ಸಕ್ಕರೆ ತಿನ್ನುವವರಿಗೆ ಬೆಲ್ಲ; ಬೆಲ್ಲ ಬೇಕಾದವರಿಗೆ ಸಕ್ಕರೆ. ಹೀಗೆಲ್ಲ ವಿತರಣಾ ಪಂಚಿಕೆಯಲ್ಲಿ ಸುಳ್ಳು ನಡೆಯುತ್ತದೆ. ಸರಕಾರದ ಸೀದಾ ಅಂಗಡಿಗಳಲ್ಲಿ ಸಿಗದ ಎಲ್ಲಾ ಆಹಾರ ವಸ್ತುಗಳು ಬೀದಿಯಂಗಡಿಗಳಲ್ಲಿ ಮಾರಾಟಕ್ಕೆ ಸಿಗುತ್ತವೆ. ಆದರೆ ಅವರ ವಿತರಣಾ ವೈಖರಿಯೇ ಬೇರೆ. ಅಕ್ಕಿ ಇದೆಯೇ ಎಂದರೆ ಇಲ್ಲ ಎನ್ನುತ್ತಾರೆ. ಸಕ್ಕರೆ ಸಿಕ್ಕೀತೇ ಎಂದು ಕೇಳಿದರೆ ಇಲ್ಲವೆನ್ನುತ್ತಾರೆ. "ಇಲ್ಲ; ಇಲ್ಲ" ಎಂದು ಸುಳ್ಳು ಹೇಳುತ್ತಾರೆ! ಇಲ್ಲ ಅಂದರೆ ಇಲ್ಲವೆಂದರ್ಥವಲ್ಲ. ಇದೆ ಎಂದರ್ಥ. ಯದ್ವಾ ತದ್ವಾ ಶಬ್ದಾರ್ಥ.

ಈ ಚಾಂದ್ರಯುಗ (Moon Age)ದಲ್ಲಿ ನಡೆದು ಪ್ರಯಾಣ ಮಾಡಲು ಸಾಧ್ಯವೇ ಇಲ್ಲ. ಬಸ್ಸು ಬಂಡಿಗಳ ವಾಹನ ಬೇಕೇ ಬೇಕು. ಬಸ್ಸಿನಲ್ಲಿ ಕೂತರೆ, ರೂಪಾಯಿಯ ನೋಟು ಕೊಟ್ಟರೆ ಚಿಲ್ಲರೆಯೇ ಇಲ್ಲ. ಸುಳ್ಳು. ರೈಲು ಪ್ರಯಾಣದ ಟಿಕೇಟು ಕೊಳ್ಳುವಾಗ ಚಿಲ್ಲರೆ ಪೈಸಾಗಳು ಮರಳಿ ಸಿಗುವದಿಲ್ಲ. ಅದಕ್ಕೆಂದೇ ರೈಲು ವಿಭಾಗದವರು ಕನಿಷ್ಠ ಟಿಕೇಟಿಗೆ ಇಪ್ಪತ್ತು ಪೈಸಾ ಮಾಡಿದ್ದಾರೆ. ಮಕ್ಕಳ ಟಿಕೇಟಿಗೂ ಕನಿಷ್ಠ ದರ ಇಪ್ಪತ್ತು ಪೈಸೆ. ಈ ಚಾಂದ್ರಯುಗದ ರೂಪಾಯಿಗೆ ಸ್ವಾತಂತ್ರ್ಯ ಪೂರ್ವ ರೂಪಾಯಿಯಂತೆ ಸುಮಾರು ಇನ್ನೂರರ ಬದಲು ನೂರು ಪೈಸೆ ಆಗಿದ್ದರೂ ಒಂದು ಪೈಸೆಗೆ ಬೆಲೆಯೇ ಇಲ್ಲ. ಮೊದಲಿನ ಒಂದು ಪೈಸೆಗೆ (ಪೈಸೆಯಲ್ಲಷ್ಟೆ) ಎಷ್ಟು ಬೆಲೆಯಿತ್ತು!

ನಮಗೊಂದು ಜಾತಿಯ ಅಥವಾ ಮಾರ್ಕಿನ ಬಟ್ಟೆಯೋ, ಬರೆಯೋ, ಯಾವುದೋ ಒಂದು ವಸ್ತು ಬೇಕಾಗಿದೆ. ಅಂಗಡಿಗೆ ಹೋಗಿ ಕೇಳುತ್ತೇವೆ. ಆ ವಸ್ತು ಅಲ್ಲಿಲ್ಲ. ಅಂತಹ ವಸ್ತು ಈಗ ಬರುವುದೇ ಇಲ್ಲ ಎನ್ನುತ್ತಾನೆ ಮಾರಾಟಗಾರ. ಅಲ್ಲೂ ಸುಳ್ಳು. ನಮಗೊಂದು ಬಣ್ಣದ ವಸ್ತ್ರ ಬೇಕು. ಅವನಲ್ಲಿ ಇಲ್ಲ. ಅಂತಹ ಬಣ್ಣವೇ ಒಳ್ಳೆಯದಲ್ಲ ಅನ್ನುತ್ತಾನೆ. ಇವೆಲ್ಲವನ್ನು ಈಗ ಯಾರೂ ಉಪಯೋಗಿಸುವುದಿಲ್ಲ ಎನ್ನುವ ತೀರಾ ಸುಳ್ಳು. ಅದೇಕೆ ನಿಮ್ಮ ದರ್ಜಿಯನ್ನೇ ಕೇಳಿರಿ. ನೀವು ಹೊಲಿಸಿದ ನಿಲುವಂಗಿ ಅಥವಾ ಪಾಯಜಾಮ ತುಂಬ ಉದ್ದವಿದೆ. ಅದು ಒಗೆದ ನಂತರ ಗಿಡ್ಡವಾಗುತ್ತದೆಂಬ ಉತ್ತರ. ಅದು ನಿಜಕ್ಕೂ ಗಿಡ್ಡವಿದೆ. ನೀರಿಗೆ ಬಿದ್ದ ನಂತರ ಉದ್ದವಾಗುತ್ತದೆಯಂತೆ. ನಿಮ್ಮ ಅಗಸ ಎಂದಾದರೂ ನಿಮ್ಮ ಬಟ್ಟೆಬರೆಗಳನ್ನು ಸಮಯಕ್ಕೆ ಸರಿಯಾಗಿ ತಂದಿದ್ದಾನೆಯೇ? ಇಂದು ನಾಳೆ ಕೊಡುತ್ತೇನೆ ಎಂದರೂ ಕೊಡುವದಿಲ್ಲ. ಮದುವೆಯಾದ ನಂತರ ಮಂಗಲಸೂತ್ರ ಕೊಟ್ಟ ಅಕ್ಕಸಾಲಿಗನ ಕತೆಯನ್ನು ನೀವು ಕೇಳಿಲ್ಲವೇ? ಅಲ್ಲೂ ಸುಳ್ಳು.

(ಇಪ್ಪತ್ತನೇ ಪುಟ ನೋಡಿರಿ)

ಕೊಡುವವನಿಗೆ ಹರುಷ
ಪಡೆವವನಿಗೆ ಹರುಷ
ಜನಪ್ರಿಯ "ಪ್ರಕಾಶ".

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿವ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು
PRAKASH BEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ
ಸೇವನೆಯ ಆನಂದವೀಯುತ್ತಿವೆ!

ಪ್ರಜಾರಾಜ್ಯದಿನದ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1 | ಫೆಕ್ಟರಿ: ಕೊಡಿಯಾಲಬೈಲ್, ಮಂಗಳೂರು-3

ಫೋನ್ : 3718 | ಫೋನ್ : 3532

VENUS TOURIST HOTEL,

MANDYA

Please alight once on your way

FEEL PLEASANT

IN

Decent Lodging

WITH

Vegetarian Food

Non-vegetarian Food

&

LIQUORS

Always look forward to serve you.

VENUS TRADERS,

MANDYA

ಅಂದು ಇದ್ದಕ್ಕಿದ್ದಂತೆಯೇ ನರಕದಲ್ಲಿ ಶೀತಲ ವಾಯುವಿನ ಸಂಚಾರವಾಯಿತು. ಉಗ್ರ ಬೇಗೆಗಳಲ್ಲಿ ಬೇಯುತ್ತಿದ್ದ ಶರೀರಗಳು ಚೇತನಗೊಂಡುವು. ಒಣಗಿದ್ದ ಗಂಟಲುಗಳು ಎಂಥಲರಸದಿಂದ ಒದ್ದೆಯಾದುವು. ನರಕದ ಭೀಕರ ಕಾರ್ಯಪ್ರಣಾಲಿ ಒಂದರೆಕ್ಷಣ ಸ್ತಬ್ಧವಾಯಿತು. ನರಕವಾಸಿಗಳು ಚಕಿತರಾಗಿ ಸುತ್ತುಮುತ್ತು ನೋಡತೊಡಗಿದರು. ನರ ರತ್ನವೊಂದು ನಿಧಾನವಾಗಿ ಹೆಜ್ಜೆಯಿಡುತ್ತಾ ಅವರೆಡೆಗೆ ಬರುತ್ತಿತ್ತು. ದೇದೀಪ್ಯಮಾನಾಂಗನಾದ ಯಮದೂತನೊಬ್ಬ ಅವನನ್ನು ಹಿಂಬಾಲಿಸುತ್ತಿದ್ದನು. ಅವನು ಆ ನರಪುಂಗವನಿಗೆ ನರಕದ ವಿಭಿನ್ನ ಸ್ಥಳಗಳ ವಿವರವನ್ನೀಯುತ್ತಿದ್ದನು. ಯಾತನೆ, ಪೀಡೆಗಳ ಈ ಭೀಷಣ ದೃಶ್ಯಗಳನ್ನು ಕಂಡು ಆ ಪುರುಷನ ಮುಖ ವಿಷಣ್ಣವಾಗಿತ್ತು.

ಅವನು ಯಮದೂತನೆಡೆಗೆ ತಿರುಗಿ ಅತ್ಯಂತ ಖಿನ್ನ ಸ್ವರದಲ್ಲಿ—"ಹೇ, ಯಮದೂತನೇ, ಜನಕ ವಂಶದಲ್ಲಿ ಹುಟ್ಟಿದ, ವಿದೇಹ ದೇಶದ ನೃಪತಿಯಾದ ನನಗೆ ರಾಜಾ ವಿಪಶ್ಚಿತ್ ಎಂದು ಹೆಸರಿದೆ. ನಾವು ಜೀವನವಿಡೀ ಧರ್ಮ ಶಾಸ್ತ್ರಾನುಸಾರವಾಗಿ ಪೃಥ್ವಿಯನ್ನೂ ಪ್ರಜೆಗಳನ್ನೂ ಪಾಲಿಸಿದ್ದೇವೆ. ಪರಸ್ತ್ರೀ - ಪರಧನಗಳನ್ನು ನಾವೆಂದೂ ಕಣ್ಣೆತ್ತಿ ಕೂಡ ನೋಡಿದವರಲ್ಲ. ಅನೇಕ ಯಜ್ಞಗಳನ್ನೂ, ವಿವಿಧ ಶುಭಕರ್ಮಗಳನ್ನೂ ನಾವು ವಿಧಿವತ್ತಾಗಿ ಆಚರಿಸಿದ್ದೇವೆ. ದೇವ, ಪಿತೃ, ಋಷಿ ಮತ್ತು ಅತಿಥಿಗಳನ್ನು ನಾವು ಯಥಾವಿಧಿ ಪೂಜಿಸಿ ಗೌರವಿಸಿದ್ದೇವೆ. ಹೀಗಿದ್ದರೂ ನಾವು ಯಾವ ಪಾಪಕ್ಕಾಗಿ ಈ ನರಕಕ್ಕೆ ಬರಬೇಕಾಯಿತು?" ಎಂದು ವಿಚಾರಿಸಿದನು.

ಶ್ರೀ ಶಿವಮುಂಜಿ ಪರಾರಿ

ಕರುಣಾಸಾಗರ

ತನ್ನ ಪುಣ್ಯಪ್ರಭಾವ ಬಲವನ್ನು ನರಕವಾಸಿಗಳಿಗೆ ದಾನ ನೀಡಿದ ವಿಪಶ್ಚಿತ್ ಮಹಾರಾಜನ ಉದಾರಮತಿ ಕೋಟಿ ಕೋಟಿ ನರಕ ಜೀವಿಗಳನ್ನು ಉದ್ಧರಿಸಿತು. ಅಂತಹ ಕರುಣಾಸಾಗರನ ಕಣ ಕಣವೂ ಹೇಗೆ ಪುಣ್ಯಮಯವಾಯಿತು?

"ರಾಜನ್, ತಾವು ಹೇಳಿದುದು ಅಕ್ಷರಶಃ ಸತ್ಯ. ನಿಮ್ಮಂತೆ ಧರ್ಮಾತ್ಮರಾಗಿ ರಾಜ್ಯಭಾರ ಮಾಡುವುದು ತೀರಾ ಕಠಿಣ. ಆದರೂ ನಿಮ್ಮಿಂದ ಒಮ್ಮೆ ಕರ್ತವ್ಯ ಲೋಪವಾಗಿತ್ತು" ಎಂದ ವಿನಮ್ರ ಸ್ವರದಲ್ಲಿ ಯಮ ಕಿಂಕರನು ನಿವೇದಿಸಿದನು.

ಯಮದೂತನು ಅರಸನಿಗೆ ಸೂಚಿಸಿದ ತಪ್ಪನ್ನು ಇಂದಿನ ಕಾಲದಲ್ಲಿ ನಾವು ಅಧರ್ಮ ಎಂದು ತಿಳಿಯುವುದಿಲ್ಲ—ಕರೆಯುವುದಿಲ್ಲ. ಆದರೂ ಅದು ಪುರಾಣಯುಗ, ಆ ಸಮಯದ ಆಚಾರ ವಿಚಾರಗಳು ಭಿನ್ನವಾಗಿದ್ದುವು.

"ರಾಜನ್, ನರಕ ದರ್ಶನ ಮಾತ್ರದಿಂದಲೇ ಶೀಘ್ರ ನಿಮ್ಮ ತಪ್ಪಿಗೆ ಶಿಕ್ಷೆ ಪಡೆದಂತಾಯಿತು. ಆದಕಾರಣ ಇನ್ನು ಮುಂದುವರಿಯದೆ, ನಿಮ್ಮ ಪುಣ್ಯಕರ್ಮಗಳ ಸುಖೋಪಭೋಗಗಳಿಗಾಗಿ ಸ್ವರ್ಗವನ್ನು ಪ್ರವೇಶಿಸಬೇಕು" ಎಂದು ದೂತನು ಭಿನ್ನವಿಸಿದನು.

ಅನಂತರ ನಿರ್ಗಮನದ ದ್ವಾರದತ್ತ ರಾಜಾ ವಿಪಶ್ಚಿತನನ್ನು ಕರೆದೊಯ್ಯಲು ದೂತನು ಮುಂದಾದನು. ಅರಸನು ಹಿಂತಿರುಗಲು ಅಡಿಯಿಡುತ್ತಿದ್ದಷ್ಟರಲ್ಲಿ, ನರಕವಾಸಿಗಳೆಲ್ಲರೂ ಆರ್ತ ಸ್ವರದಲ್ಲಿ — "ಓ ಅರಸನೇ, ಎರಡು ಕ್ಷಣ ಅಲ್ಲಿಯೇ ನಿಂತಿರು. ನಿನ್ನ ಮೈಯನ್ನು ಸೋಂಕಿ ಮುಂದುವರಿಯುತ್ತಿರುವ ಗಾಳಿ ನಮ್ಮೆಲ್ಲರ ತಾಪವನ್ನು ಕಡಿಮೆ ಮಾಡುತ್ತಿದೆ" ಎಂದು ಕೂಗಿಕೊಂಡರು.

ಈ ಕರುಣಾರ್ದ್ರ ಸ್ವರವನ್ನು ಕೇಳಿದ ಮಹಾರಾಜ ವಿಪಶ್ಚಿತ್ ಅಲ್ಲಿಯೇ ನಿಂತುಬಿಟ್ಟನು. ಅನಂತರ ಧರ್ಮದೂತನೆಡೆಗೆ ತಿರುಗಿ—ನನ್ನ ಮೈಯನ್ನು ಮುಟ್ಟಿ ಮುಂದುವರಿಯುವ ಗಾಳಿ ಇವರೆಲ್ಲರ ತಾಪವನ್ನು ಕಡಿಮೆ ಮಾಡಲು ಹೇಗೆ ಸಮರ್ಥವಾಗುವುದು?" ಎಂದು ವಿಚಾರಿಸಿದನು.

"ಮಹಾರಾಜಾ, ಪಿತೃ, ದೇವತೆ, ಋಷಿ, ಅತಿಥಿ ಮತ್ತು ಭೃತ್ಯರೆಲ್ಲರನ್ನೂ ಸಂತುಷ್ಟಗೊಳಿಸಿದ ಬಳಿಕ, ಶೇಷ ಅನ್ನದಿಂದ ನಿಮ್ಮ ಶರೀರವು ಪೋಷಿತವಾದ ಕಾರಣ, ಅದೇ ಪುಣ್ಯದ ಪ್ರಭಾವದಿಂದ ನಿಮ್ಮ ಮೈಯನ್ನು ಸೋಂಕಿ ಮುಂದುವರಿಯುವ ವಾಯು ದುಃಖಿಗಳ ಸಂತಾಪವನ್ನು ದೂರಗೊಳಿಸಲು ಸಮರ್ಥವಾಗುವುದು. ನಿಮ್ಮ ಸಾತ್ವಿಕ ಪ್ರಭೆಯಿಂದಾಗಿ ನರಕದ ಕ್ರೂರ ದಂಡ ವಿಧಾನಗಳೆಲ್ಲವೂ ಕೋಮಲವಾಗಿ ಬಿಟ್ಟವೆ" ಎಂದು ದೂತನು ವಿವರಿಸಿದನು. ಆಗ ಅರಸನು—

> ನ ಸ್ವರ್ಗೇ ಬ್ರಹ್ಮಲೋಕೇ ವಾ ತತ್
> ಸುಖಂ ಪ್ರಾಪ್ಯತೇ ನರೈಃ
> ಯದಾರ್ತ್ತಜಂತು ನಿರ್ವಾಣದಾನೋ
> ತ್ಥಮಿತಿ ಮೇ ಮತಿಃ

"ನಾವು ತಿಳಿದ ಮಟ್ಟಿಗೆ, ದುಃಖಿಗಳ ದುಃಖವನ್ನು ದೂರಗೊಳಿಸಿ ಅವರಿಗೆ ಶಾಂತಿಯನ್ನು ಕೊಡುವುದರಲ್ಲಿರ ಮಂತಹ ಸುಖವನ್ನು ಮನುಷ್ಯನು ಸ್ವರ್ಗಲೋಕ, ಬ್ರಹ್ಮಲೋಕಗಳಲ್ಲಿಯೂ ಪಡೆಯಲಾರನು. ಆದದರಿಂದ, ಹೇ ಧರ್ಮದೂತನೇ ನಾವು ಇಲ್ಲಿ ಉಳಿಯುವುದರಿಂದ ಈ ಜೀವಗಳಿಗೆ ನರಕದ ಯಾತನೆಯನ್ನು ಕೊಡಲಾರದಾದರೆ, ನಾವು ಇಲ್ಲಿಯೇ ಇರಲು ಅಪೇಕ್ಷಿಸುತ್ತೇವೆ" ಎಂದನು. ಯಮದೂತನು ಎಷ್ಟೋ ಬಗೆಯಲ್ಲಿ ರಾಜನಿಗೆ ಸಮಾಧಾನವನ್ನು ಹೇಳಿದನು—"ರಾಜನ್, ಪ್ರತಿಯೊಬ್ಬನೂ ತನ್ನ ಕರ್ಮಫಲವನ್ನು ತಾ

(ಹದಿನೆಂಟನೇ ಪುಟ ನೋಡಿ)

Telegram: "MYFINCORP" Telephone: 71169

MYSORE STATE FINANCIAL CORPORATION

"SRI SAILAM", NO. 7, FIRST MAIN ROAD,

GANDHINAGAR, BANGALORE - 9.

• • •

Do you require financial assistance for the expansion of existing industries or for the starting of new industries in the Mysore State?

WE offer financial assistance for those engaged or to engaged in ....

THE Manufacture, Preservation or Processing of Goods;

THE Mining Industry, Hotel Industry, Transport Industry;

THE Generation or Distribution of Electricity or any other form of power; and—

THE Development of a contiguous area of land as an Industrial Estate.

AVAIL yourself of this opportunity and help industrialisation of the State.

FOR particulars, please contact the Managing Director at the office of the Corporation.

ಡಾ। ಪಿ. ಎಸ್. ರೈ, ಪಿ. ಎಚ್‌ಡಿ.

ಆಯುರ್ವೇದ ಜೀವಿತಶಾಸ್ತ್ರ

ಜೀವಿತದ ಬಗ್ಗೆ ಬೋಧಿಸುವ ಆಯುರ್ವೇದಕ್ಕೆ ಸೂಕ್ತ ಪ್ರೋತ್ಸಾಹ ದೊರೆತು, ಅದರಲ್ಲಿ ಸಂಶೋಧನೆಗಳು ಧಾರಾಳವಾಗಿ ನಡೆಯಬೇಕು. ಆಗ, ಅತಿ ಕಡಿಮೆ ವೆಚ್ಚದಲ್ಲಿ ಅತ್ಯಂತ ಯಶಸ್ವಿಯಾದ ಚಿಕಿತ್ಸೆ ಜನತೆಗೆ ದೊರೆಯುವುದು ಸಾಧ್ಯವಾಗುತ್ತದೆ. ಸರಕಾರಿ ಸೂತ್ರಧಾರಿಗಳು ಅವಜ್ಞೆಗೆ ಬದಲು ಪುರಸ್ಕಾರ ಹಸ್ತ ನೀಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

ಆಯುಃ=ಜೀವಿತ, ವೇದ=ತಿಳುವಳಿಕೆ ಈ ಎರಡು ಶಬ್ದಗಳ ಸಂಯೋಗವೇ ಆಯುರ್ವೇದ ಅಥವಾ ಜೀವಿತದ ಬಗ್ಗೆ ಬೋಧಿಸುವ ವಿಜ್ಞಾನ.

ಜಗತ್ತಿನ ಉತ್ಪತ್ತಿ ಎಂದು ಹ್ಯಾಗೆ ಆಗಿದೆ ಎಂಬ ಬಗ್ಗೆ ತೃಪ್ತಿಕರವಾದ ಉತ್ತರ ದೊರೆಯಲಿಲ್ಲ. ಆದರೆ ಪ್ರಕೃತಿ ಮತ್ತು ಪುರುಷ ಎಂಬ ಆದ್ಯಂತ್ಯ ಇಲ್ಲದ ಎರಡು ಮಹಾ ತತ್ವಗಳಿಂದಲೂ, ಪೃಥ್ವಿ ಅಪ್ ತೇಜ, ವಾಯು ಮತ್ತು ಆಕಾಶಗಳೆಂಬ ಪಂಚ ಮಹಾಭೂತಗಳಿಂದಾಗಿಯೂ ಜಗತ್ತು ಹಾಗೂ ಎಲ್ಲಾ ಜೀವಜಂತುಗಳ ಉತ್ಪತ್ತಿಯಾಗುತ್ತದೆ ಎಂಬುದು ಸ್ಪಷ್ಟ ವಿಷಯವಾಗಿದೆ.

ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳ ಬಗ್ಗೆ ಹಾಗೂ ಜಗತ್ತಿನ ವ್ಯವಹಾರದ ಬಗ್ಗೆ ಬೋಧಿಸತಕ್ಕ ಗ್ರಂಥಗಳು ವೇದಗಳೆನ್ನಿಸಿಕೊಂಡಿವೆ. ವೇದಗಳೇ ಪುರಾತನ ಗ್ರಂಥಗಳೆಂಬ ಬಗ್ಗೆ ಆಧಾರಗಳಿವೆ.

ಋಗ್, ಯಜುರ್, ಸಾಮ ಮತ್ತು ಅಥರ್ವಗಳೆಂದ, ನಾಲ್ಕು ಪ್ರಾಮುಖ್ಯ ವೇದಗಳು. ಋಗ್ ವೇದವು ಜಗತ್ತಿನ ಉತ್ಪತ್ತಿಯ ಬಗ್ಗೆ, ಯಜುರ್ವೇದವು ವಿಶ್ವಕಲ್ಯಾಣಕ್ಕಾಗಿ ನಡೆಸಲ್ಪಡುವ ಯಜ್ಞಯಾಗಾದಿಗಳ ಬಗ್ಗೆ, ಸಾಮ ವೇದವು ಸೃಷ್ಟಿ ಕರ್ತನ ಹಾಗೂ ಸ್ಥಿತಿ ಲಯಗಳಿಗೆ ಕಾರಣೀಭೂತನ ಬಗ್ಗೆ ಪಡೆಸತಕ್ಕ ಪ್ರಾರ್ಥನೆಗಳ ಬಗ್ಗೆ, ಅಥರ್ವವೇದವು ಮೇಲಿನ ಮೂರು ವೇದಗಳ ಸಾರರೂಪವಾಗಿದ್ದು, ಜಗತ್ತಿನ ವ್ಯವಹಾರಕ್ಕಾಗಿ ಬೇಕಾಗಿರುವ ಎಲ್ಲಾ ವಿಜ್ಞಾನಗಳ ಬಗ್ಗೆ ವಿವರಿಸುವ ಬೃಹತ್ ಗ್ರಂಥಗಳಾಗಿರುವುವು.

ಮಾನವನ ಹುಟ್ಟು, ಜೀವನ ಮತ್ತು ಸಾವುಗಳ ಬಗ್ಗೆ ವಿವರಿಸುವ ಹಾಗೂ ಆಜನ್ಮದಿಂದ ಬ್ರಹ್ಮಾಂಡದ ತನಕ ಎಲ್ಲಾ ವ್ಯವಹಾರಗಳನ್ನು ಬೋಧಿಸುವ ಗ್ರಂಥವೇ ಆಯುರ್ವೇದವೆನಿಸಿಕೊಂಡಿರುವುದು.

ವೇದಾಂತದ ತಳಹದಿಯನ್ನೊಳಗೊಂಡ ಆಯುರ್ವೇದ ವಿಜ್ಞಾನವು ಸಮಸ್ತ ವನಸ್ಪತಿ, ಖನಿಜ, ಪ್ರಾಣಿಕೋಟಿ ಹಾಗೂ ಮಾನವನ ಬಗ್ಗೆ ಸೂಕ್ಷ್ಮರೂಪದಿಂದ ವಿವರಿಸಿದ ಮಹಾಗ್ರಂಥವಾಗಿರುವುದು.

ಇದರಿಂದಾಗಿಯೇ ಆಯುರ್ವೇದವು ಉಪವೇದ ಅಥವಾ ಪಂಚಮವೇದ ಎಂಬ ಕರೆಸಲ್ಪಡುತ್ತದೆ.

ಈ ಬೃಹತ್ ವಿಜ್ಞಾನದ ವಿಷಯವನ್ನು ಆದಷ್ಟು ಮಟ್ಟಿಗೆ ವಿವರವಾಗಿ ತಿಳಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ನಹಿನಾಭೂತ್ ಕದಾಚಿದಾಯುಷಃ ಸಂತಾನೋ ಬುದ್ಧಿ ಸಂತಾನೋ ವಾ "ಚರಕ". ಚರಕನು ಹೇಳಿದ ಪ್ರಕಾರ ಜೀವ ಎಂದೆಂದಿಗೂ ಶಾಶ್ವತವಾಗಿತ್ತು. ಹಾಗೆಯೇ ಆಯುರ್ವೇದ ವಿಜ್ಞಾನವೂ ಚಿಕಿತ್ಸಾ ವಿಷಯವೂ ತಿಳಿದೇ ಇತ್ತು.

ಜೀವನವು ಮುಂದೊತ್ತಿದಂತೆಯೇ ಜೀವನದ ಬಗ್ಗೆ ವಿಜ್ಞಾನವೂ ಮುಂದೊತ್ತಿ ಬಂದಿರುವುದು. ಮಾನವ ಜೀವನದ ಆಗುಹೋಗುಗಳ ಬಗ್ಗೆಯೂ ವ್ಯಾಧಿಗಳ ಉತ್ಪತ್ತಿ ಅವುಗಳ ಚಿಕಿತ್ಸೆ ಇತ್ಯಾದಿಗಳನ್ನು ಮಾನವ ಜೀವನವು ಸುಖಮಯವಾಗಿ ದೀರ್ಘಕಾಲ ಬಾಳುವ ಬಗೆಯನ್ನೂ ವಿವರಿಸುವುದು.

ಚರಕಾಚಾರ್ಯರಿಂದಂತೆ

ಹಿತಾಹಿತಂ, ಸುಖಂ, ದುಃಖಂ
ಮಾಯುಸ್ತಸ್ಯ ಹಿತಾಹಿತಂ
ಮಾನಂ ಚತ್ತ್ಯ ಯತ್ರೋಕ್ತ ಮಾಯುರ್-
ವೇದಸ ಉಚ್ಯತೇ

ಜೀವನವು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಅವು ಅನುಕೂಲ, ಅನನುಕೂಲ, ಸಂತೋಷ ಮತ್ತು ದುಃಖ; ಈ ನಾಲ್ಕು ವಿಷಯಗಳ ಬಗ್ಗೆ ವಿವರಿಸಿ ತಕ್ಕ ಸಲಹೆಯನ್ನೀಯುವುದೇ ಆಯುರ್ವೇದದ ಮುಖ್ಯ ತತ್ವ.

ವೇದಕಾಲದಲ್ಲಿ ನೂರಾರು ವೈದ್ಯರುಗಳೂ ಸಾವಿರಾರು ಔಷಧಿಗಳೂ ಇದ್ದ ಉದಾಹರಣೆಗಳಿವೆ. ಅಲ್ಲದೆ ಚಿಕಿತ್ಸಾ ವಿಜ್ಞಾನವು ಮಾನವನಿಗೆ ಪ್ರಾಣಿ ಮತ್ತು ಪಕ್ಷಿಗಳ ಮೂಲಕವೂ ತಿಳಿದು ಬಂದ ಉದಾಹರಣೆಗಳಿವೆ.

ವೇದಗಳಲ್ಲಿ ಅಲ್ಲಲ್ಲಿ ಚಿಕಿತ್ಸಾ ವಿಷಯದ ಬಗ್ಗೆ ವಿವರಿಸಿರುವುದು ಕಂಡು ಬರುತ್ತದೆ. ಆಯುರ್ವೇದವನ್ನು ನಿಜ ಸ್ಥಿತಿಯಲ್ಲಿ ತಿಳಿಯ ಬೇಕಾದಲ್ಲಿ ಪ್ರಾಮುಖ್ಯ ಎರಡು ವಿಷಯಗಳು ಅಗತ್ಯ ಇದೆ. ಒಂದನೇದಾಗಿ ಈ ವಿಜ್ಞಾನವನ್ನು ಅತಿ ಪುರಾತನ ಕಾಲದಲ್ಲಿ ತಪಸ್ಸಿದ್ಧಿಯನ್ನು ಹೊಂದಿದ ಆಚಾರ್ಯರು (ಗುರುಗಳು) ಶಿಷ್ಯರಿಗೆ ಬಾಯಿಯಿಂದ ಹೇಳಿದ್ದನ್ನು ಶಿಷ್ಯರು ಅವರವರ ಬುದ್ಧಿಯ ಪ್ರಮಾಣದಲ್ಲಿ ಗ್ರಂಥಗಳಾಗಿ ಮಾಡಿರುವ ಉದಾಹರಣೆಗಳಿವೆ. ಹೀಗೆ ಉತ್ಪತ್ತಿಯಾದಂತಹ ಶಾಸ್ತ್ರವನ್ನು ತಿಳಿಯುವ ವ್ಯಕ್ತಿಯು ಅದೇ ವಿಶಾಲ ದೃಷ್ಟಿಯಿಂದ ತಿಳಿದು ಈ ವಿಜ್ಞಾನದ ಬಗ್ಗೆ ನವಂಚಕ, ಅಪಮಾನಕ ವಿಷಯಗಳನ್ನು ಪರಿಶೀಲಿಸಿಕೊಂಡು ವ್ಯವಹರಿಸುವುದು ಸಹಜವಾಗಿದೆ.

ಇನ್ನೊಂದು ವಿಷಯವೆಂದರೆ ವೇದಗಳು ಹಾಗೂ ಆಯುರ್ವೇದ ವಿಜ್ಞಾನವು

With best compliments
from

SRI MANJUNATH
MOTOR SERVICE

UDIPI, S. K.

Phone : 382

ಆರ್ಷರುಗಳಿಂದ ಸಂಸ್ಕೃತ ಭಾಷೆಯಲ್ಲಿ ವಿವರಿಸಲ್ಪಟ್ಟಿರುವ ಗ್ರಂಥಗಳಾಗಿರುವ ಕಾರಣ ಈ ವಿಜ್ಞಾನದ ಸಂಪೂರ್ಣ ತಿಳುವಳಿಕೆ ಬೇಕಾದಲ್ಲಿ ಸಂಸ್ಕೃತದ ಜ್ಞಾನ ಅತ್ಯಗತ್ಯವೆನ್ನಬೇಕಾಗಿದೆ.

ವಿಶಾಲವಾದ ಆಯುರ್ವೇದ ವಿಜ್ಞಾನವನ್ನು ಸೂಕ್ಷ್ಮವಾಗಿ ಅಭ್ಯಸಿಸುವ ಬಗ್ಗೆ ಪೂರ್ವಜರೇ ಈ ವಿಜ್ಞಾನವನ್ನು 8 ವಿಧಗಳಾಗಿ ವಿಂಗಡಿಸಿರುವರು.

1. ಕಾಯ ಚಿಕಿತ್ಸಾ:- ರೋಗ ಚಿಕಿತ್ಸೆ
2. ಕೌಮಾರ ಭೃತ್ಯ ಪ್ರಸೂತಿ ತಂತ್ರ:- ಪ್ರಸೂತಿ ಮತ್ತು ಬಾಲರೋಗ ಚಿಕಿತ್ಸೆ
3. ಭೂತವಿದ್ಯಾ:- ಗ್ರಹಚಿಕಿತ್ಸೆ ಮಾನಸ ಚಿಕಿತ್ಸೆ
4. ಶಾಲಕ್ಯ ತಂತ್ರ:- ಶಸ್ತ್ರ ಚಿಕಿತ್ಸೆ ಕಿವಿ, ಮೂಗು, ಗಂಟಲು
5. ಶಲ್ಯ ತಂತ್ರ:- ಶಸ್ತ್ರ ಚಿಕಿತ್ಸೆ
6. ಅಗದ ತಂತ್ರ:- ವಿಷ ಚಿಕಿತ್ಸೆ
7. ರಸಾಯನ:- ವೃದ್ಧಾಪ್ಯ ದೂರೀಕರಿಸುವ ಚಿಕಿತ್ಸೆ
8. ವಾಜೀಕರಣ:- ವೀರ್ಯ ವೃದ್ಧಿ ಚಿಕಿತ್ಸೆ

ಆಯುರ್ವೇದದ ಚಿಕಿತ್ಸಾ ಪದ್ಧತಿಯಲ್ಲಿ ಅದಕ್ಕೂ ಹೆಚ್ಚಿನದಾಗಿ ಈ ವಿಜ್ಞಾನದಲ್ಲಿ ರೋಗ ನಿದಾನವು ಬಹಳ ಸೂಕ್ಷ್ಮವಾಗಿ ವಿವರಿಸಲ್ಪಟ್ಟಿರುವುದರಿಂದ ಯಾವ ಯಂತ್ರೋಪಕರಣಗಳ ಸಹಾಯವೂ ಇಲ್ಲದೆ ಮಾನವ ದೇಹದ ಸಮಸ್ತ ವ್ಯಾಧಿಗಳನ್ನು ನಾಡಿ ಪರೀಕ್ಷೆಯೆ ಇತ್ಯಾದಿ ಅಷ್ಟವಿಧ ಪರೀಕ್ಷೆಗಳಿಂದ ತಿಳಿದುಕೊಳ್ಳಬಹುದಾಗಿದೆ.

ಪಂಚ ಮಹಾಭೂತಗಳ ಸಂಯೋಗದಿಂದಲೂ, ತ್ರಿದೋಷ ತತ್ವಗಳಿಂದಲೂ ಜಗತ್ತು ಹ್ಯಾಗೆ ನಿರ್ಮಿಸಲ್ಪಟ್ಟಿರುವುದೋ ಅದೇ ರೀತಿಯಲ್ಲಿ ಮಾನವ ದೇಹವು ರೂಪುಗೊಳ್ಳುವುದೆಂಬುದು ಈ ವಿಜ್ಞಾನದಿಂದ ತಿಳಿದುಕೊಳ್ಳಬಹುದು.

ಆಯುರ್ವೇದ ತತ್ವ ಪ್ರಕಾರದೇಹವು ನಿರೋಗದಿಂದಿದ್ದರೂ, ಮನಸ್ಸು ಪ್ರಫುಲ್ಲತೆಯಿಂದ ಇಲ್ಲದ್ದಲ್ಲಿ ಆರೋಗ್ಯವಂತನೆನ್ನಿಸಿಕೊಳ್ಳಲು ಸಾಧ್ಯವಿಲ್ಲ. ತ್ರಿದೋಷ ತತ್ವವೆಂಬುದು ಒಂದು ಕುರುಡು ಭಾವನೆ ಎಂಬುದಾಗಿ ಅನೇಕ ಪಾಶ್ಚಾತ್ಯ ಶಿಕ್ಷಕರು ಹೇಳಿದ್ದು ಇದೆ. ಆದರೆ ಇತ್ತೀಚೆಗೆ ಜಗತ್ತಿನ ಎಲ್ಲಾ ವ್ಯವಹಾರಕ್ಕೂ ತ್ರಿದೋಷ ತತ್ವವೇ ಮೂಲಕಾರಣವೆಂಬುದು ತಿಳಿದು ಬಂದಿದೆ. ಆಯುರ್ವೇದ ರೀತ್ಯಾ ರೋಗ (ನಿದಾನ) ಪರೀಕ್ಷಿಸಲ್ಪಟ್ಟರೆ ಚಿಕಿತ್ಸೆಯು ಅತಿ ಸುಲಭ.

ಸಾವಿರಾರು ವರ್ಷಗಳ ಹಿಂದೆ ಭಾರತದ ಆಯುರ್ವೇದ ವಿಜ್ಞಾನವು ವಿಶ್ವ ಪ್ರಖ್ಯಾತಿಯನ್ನು ಪಡೆದಿದ್ದರೂ ಅನೇಕ ರಾಜಕೀಯ, ಸಾಮಾಜಿಕ, ವ್ಯಾವಹಾರಿಕ ವ್ಯತ್ಯಾಸಗಳಿಂದಾಗಿ ಆಯುರ್ವೇದದ ಹೆಸರು ಅಳಿಯುವ ಅವಸ್ಥೆಯಲ್ಲಿದ್ದರೂ ದೈವವಶಾತ್ ಪುನಃ ಈ ವಿಜ್ಞಾನವು ಬೆಳೆದು ಬರುವ ಶುಭ ಲಕ್ಷಣಗಳು ಕಾಣುತ್ತಿವೆ. ಪ್ರಾಯಶಃ ಈ ವಿಜ್ಞಾನಕ್ಕೆ ಸರಕಾರದ ಪ್ರೋತ್ಸಾಹವು ಇನ್ನಷ್ಟು ದೊರೆತಲ್ಲಿ ಮತ್ತೊಮ್ಮೆ ಇದು ವಿಶ್ವಾದ್ಯಂತ ತನ್ನ ಧ್ವಜ ಹಾರಿಸ ಬಲ್ಲುದು.

ಸಾಮಾನ್ಯ ವನಸ್ಪತಿಗಳಿಂದ ಅಥವಾ ಮೂಲ್ಯ ಖನಿಜ ದ್ರವ್ಯಗಳ ತನಕ ಈ ಚಿಕಿತ್ಸೆಗೆ ವಸ್ತುಗಳಾಗಿದ್ದರೂ ಸಾಮಾನ್ಯ ರೋಗಗಳನ್ನು ಕೇವಲ ಅತ್ಯಲ್ಪ ಶ್ರಮದಿಂದ ಹಾಗೂ ಅತ್ಯಲ್ಪ ವೆಚ್ಚದಿಂದ ದೊರೆಯುವ ವನಸ್ಪತಿಗಳಿಂದ ಚಿಕಿತ್ಸಿಸಬಹುದಾಗಿದೆ.

ನಿತ್ಯಜೀವನದ ಆಹಾರಗಳಿಗಾಗಿ ಉಪಯೋಗಿಸುವ ಅನೇಕ ಪದಾರ್ಥಗಳಿಂದಲೇ ಸಾಮಾನ್ಯ ಚಿಕಿತ್ಸೆ ಮಾಡುತ್ತಿರುವುದು ನಮ್ಮ ಹಿರಿಯರ ಕಾಲದಿಂದ ವಾಡಿಕೆಯಾಗಿರುವುದು.

ಇಂದಿಗೂ ಆಧುನಿಕ ಪ್ರಚಲಿತ ಚಿಕಿತ್ಸಾ ಕ್ರಮಗಳಿಗೆ ಮಣಿಯದ ಅನೇಕ ವ್ಯಾಧಿಗಳು ಆಯುರ್ವೇದದ ಸಾಮಾನ್ಯ ಚಿಕಿತ್ಸೆಗಳಿಂದ ಗುಣ ಹೊಂದುತ್ತಿರುವ ವಿಷಯವನ್ನು ದಿನನಿತ್ಯ ನೋಡುತ್ತಿದ್ದೇವೆ. ಆನಿಲೆ, ನೆಲ್ಲಿ, ತಾಂತಿ ಕಾಯಿಗಳ ಕೂಡುವಿಕೆಗೆ ಆಯುರ್ವೇದದಲ್ಲಿ ತ್ರಿಫಲ ಎಂಬ ಹೆಸರಿದೆ. ಈ ಸಾಮಾನ್ಯ ವನಸ್ಪತಿಗಳ ಸಮಭಾಗ ಮಿಶ್ರಣ ಹಾಗೂ ಅಸಮ ಭಾಗ ಮಿಶ್ರಣಗಳ ಪ್ರಯೋಗವು ಆಧುನಿಕ ಚಿಕಿತ್ಸೆಗೆ ಬಗ್ಗದ ಅನೇಕ ವ್ಯಾಧಿಗಳನ್ನು ಗುಣ ಪಡಿಸಿದ ಉದಾಹರಣೆಗಳಿವೆ. ಆಯುರ್ವೇದ ಔಷಧ ಪ್ರಯೋಗಗಳು ಕೇವಲ ವ್ಯಾಧಿಯನ್ನು ನಿವಾರಣೆ ಮಾಡುವುದು ಮಾತ್ರವಲ್ಲದೆ ವ್ಯಾಧಿಗ್ರಸ್ತನನ್ನು ದೃಢಕಾಯನನ್ನಾಗಿ ಮಾಡಿ ದೀರ್ಘ ಜೀವಿಯನ್ನಾಗಿ ಮಾಡುತ್ತಿರುವ ದೃಷ್ಟಾಂತಗಳಿವೆ. ಆಯುರ್ವೇದ ಚಿಕಿತ್ಸಾ ವಿಜ್ಞಾನವು ಮಾನವನಿಗೆ ದಿನಚರಿಯ ಬದಲಾಗುತ್ತಿರುವ ಋತು ಚರ್ಯ, ಆಹಾರ, ನಿದ್ರೆ, ವಿಶ್ರಾಂತಿ ಇತ್ಯಾದಿಗಳ ಬಗ್ಗೆ ವಿವರವಾದ ಬೋಧನೆಯನ್ನು ಉಂಟು ಮಾಡುತ್ತದೆ. ರಸಾಯನ ಮತ್ತು ವಾಜೀಕರಣ ಚಿಕಿತ್ಸಾ ಪದ್ಧತಿಯು ವೃದ್ಧರನ್ನು ಯುವಕರಾಗಿ ಪರಿವರ್ತಿಸಿದ ಉದಾಹರಣೆಗಳಿವೆ. ಭೂಗೋಳ, ಖಗೋಳ, ಜ್ಯೋತಿಷ್ಯ ಮತ್ತು ಸಾಮುದ್ರಿಕ ಶಾಸ್ತ್ರಗಳ ಆಧಾರದಿಂದ ಕೂಡಿದ ಆಯುರ್ವೇದ ವಿಜ್ಞಾನವು ವ್ಯಾಧಿಗಳ ಉತ್ಪತ್ತಿ ಅವುಗಳ ಶಮನ ಚಿಕಿತ್ಸೆ ಇತ್ಯಾದಿಗಳನ್ನು ವಿವರಿಸಿರುವುದು. ಅಲ್ಲದೆ ಮಾನವ ಜೀವನದ ಬಾಲ್ಯ, ಕೌಮಾರ್ಯ, ಯವ್ವನ ಮತ್ತು ವಾರ್ಧಕ್ಯ ಈ ಕಾಲಗಳಲ್ಲಿ ಆಯಾ ಕಾಲಕ್ಕನುಸರಿಸಿದ ಆಹಾರ ವ್ಯವಹಾರಗಳನ್ನು ಸೂಕ್ಷ್ಮವಾಗಿ ವಿವರಿಸಿರುವುದು.

ಇಂದು ಜಗತ್ತಿನಲ್ಲಿ ನಡೆಸುತ್ತಿರುವ ವೈದ್ಯಕೀಯ ಸಂಶೋಧನೆಗಳೆಲ್ಲದಕ್ಕೂ ಮಿಗಿಲಾಗಿ ಆಯುರ್ವೇದ ಸಂಶೋಧನೆಯು ಕ್ರಮವಾಗಿ ಪ್ರಯೋಗಕ್ಕೆ ತಂದಲ್ಲಿ ಭಾರತದಲ್ಲಿ ದೊರೆಯುವ ಸಾವಿರಾರು ಸಾಮಾನ್ಯ ವನಸ್ಪತಿಗಳಿಂದ ಚಿಕಿತ್ಸೆಗೆ ಕಷ್ಟಸಾಧ್ಯವಾಗಿರುವ ಹಾಗೂ, ಚಿಕಿತ್ಸೆ ಬಗ್ಗೆ ಅತಿ ವೆಚ್ಚ ತಗಲುವ ರೋಗಗಳನ್ನು ಸುಲಭವಾಗಿ ಗುಣಪಡಿಸಬಹುದೆಂಬುದು ಖಚಿತ.

ಆಧುನಿಕ ಚಿಕಿತ್ಸಾ ಪದ್ಧತಿಯಲ್ಲಿ ಕೆಲವು ವ್ಯಾಧಿಗಳಿಗೆ ಸಮರ್ಪಕ ಔಷಧಿಗಳು ಇಲ್ಲವೆಂಬುದನ್ನು ಅನೇಕ ಉಚ್ಚ ಶಿಕ್ಷಣ ಪಡೆದ ಆಧುನಿಕ ವೈದ್ಯರುಗಳು ಹೇಳುವುದನ್ನು ಕೇಳುತ್ತಿದ್ದೇವೆ.

ಇಂತಹ ಕಠಿಣ ವ್ಯಾಧಿಗಳನ್ನು ಆಯುರ್ವೇದ ಚಿಕಿತ್ಸೆಯಿಂದ ಗುಣಪಡಿಸುತ್ತಿರುವುದನ್ನು ದಿನವೂ ನೋಡುತ್ತಿದ್ದೇವೆ. ಆದರೂ ಆಧುನಿಕ ಚಿಕಿತ್ಸೆಗೆ ಹಾಗೂ ವೈದ್ಯರುಗಳಿಗಿದ್ದ ಮನ್ನಣೆ ಆಯುರ್ವೇದ ಚಿಕಿತ್ಸೆಗಾಗಲೀ ಚಿಕಿತ್ಸಕರಿಗಾಗಲೀ ದೊರೆಯದಿರುವುದು ವ್ಯಸನಕರ.

ಅನೇಕ ತರದ ತಾತ್ಕಾಲಿಕ ಕಾಯಿಲೆಗಳಲ್ಲಿ ಬಹಳ ತೀಕ್ಷ್ಣ ಗುಣಕೊಡತಕ್ಕ ಆಧುನಿಕ ಔಷಧಿಗಳು ಧಾರಾಳವಾಗಿವೆ. ಆದರೆ ಇವುಗಳ ಉಪಯೋಗವು ಕ್ರಮಬದ್ಧವಾಗಿಲ್ಲದಿದ್ದಲ್ಲಿ ಅಂತಹ ಔಷಧಿಗಳೇ ಬಹಳ ಕೆಡುಕನ್ನುಂಟು ಮಾಡಿದ ಉದಾಹರಣೆಗಳು ಬೇಕಾದಷ್ಟಿವೆ. ಈ ರೀತಿಯ ಪರಿಣಾಮವು ಆಯುರ್ವೇದ ಚಿಕಿತ್ಸೆಯಿಂದ ಇಲ್ಲವೆನ್ನಲಾಗುವುದಿಲ್ಲ.

ಆದರೆ ಆಯುರ್ವೇದ ಔಷಧಿಯಿಂದ ಚಿಕಿತ್ಸಿಸತಕ್ಕ ವೈದ್ಯನು ರೋಗಿಯ ದೇಹಪ್ರಕೃತಿ ಮತ್ತು ಅವನ ವ್ಯಾಧಿ ಇವುಗಳ ಸಂಪೂರ್ಣ ಪರಿಜ್ಞಾನದಿಂದ ಮಾಡಿದ ಚಿಕಿತ್ಸೆಯಲ್ಲಿ ಈ ತರದ ದುಷ್ಟ ಪರಿಣಾಮಗಳಾದುದು ವಿರಳ.

ಇತ್ತೀಚೆಗೆ ಕೇಳಿ ಬರುತ್ತಿರುವಂತೆ ಆಯುರ್ವೇದ ವಿಜ್ಞಾನದ ತತ್ವವನ್ನು ಸಮರ್ಪಕವಾಗಿ ತಿಳಿದಿದ್ದು, ಅನ್ಯಚಿಕಿತ್ಸಾ ಪದ್ಧತಿಗಳಲ್ಲಿರುವ ಮುಖ್ಯಾಂಶಗಳನ್ನು ತಿಳಕೊಂಡು ಉತ್ತಮ ಜ್ಞಾನಾರ್ಜನೆಗಳಿಸಿದ ಶಿಕ್ಷಕರಿಂದ ಈ ವಿಜ್ಞಾನವು ಕಲಿಸಲ್ಪಟ್ಟರೆ, ಸರಕಾರದ ಪ್ರೋತ್ಸಾಹ, ಬೆಂಬಲಗಳದ್ದಲ್ಲಿ ಕೆಲವೇ ವರ್ಷಗಳಲ್ಲಿ ಆಯುರ್ವೇದವು ಪುನರುದ್ಧಾರವಾಗುವುದು.

ಆಯುರ್ವೇದದ ಅಭಿವೃದ್ಧಿಗೆ ಈ ವಿಜ್ಞಾನದ ಚಿಕಿತ್ಸಾ ಕ್ರಮ ಔಷಧಿ ಗುಣಧರ್ಮ ಮತ್ತು ವ್ಯಾಧಿನಿದಾನ ಇವುಗಳ ಬಗ್ಗೆ ಹೆಚ್ಚಿನ ಸಂಶೋಧನೆಯು ಅಗತ್ಯವಾಗಿದೆ. ಸಂಶೋಧನೆಯು ಶಾಸ್ತ್ರೋಕ್ತವಾಗಿ ನಡೆದಲ್ಲಿ ಇದರ ಪ್ರಯೋಜನ ಭಾರತ ದೇಶಕ್ಕೆ ಮಾತ್ರವೇ ಅಲ್ಲದೆ ಇಡೀ ಜಗತ್ತಿಗೆ ಒದಗಬಹುದು.

ಆಯುರ್ವೇದ ವಚನದಂತೆ "ಚಿಕಿತ್ಸೆ ಧರ್ಮ, ಚಿಕಿತ್ಸೆ ಕರ್ಮ, ಚಿಕಿತ್ಸೆಯಶಸ್ಸು, ಚಿಕಿತ್ಸೆಲಭ" ಅಂದರೆ ವೈದ್ಯನಾದವನು ಮಾನವನಾಗಿ ಹುಟ್ಟಿದ ಪುಣ್ಯಕ್ಕಾಗಿ ತಾನು ಮಾಡತಕ್ಕ ಧಾರ್ಮಿಕ ಕಾರ್ಯವೇ ಚಿಕಿತ್ಸೆ. ಇದು ಉತ್ತಮ ಉದ್ಯೋಗ, ಇದರಿಂದ ಕೀರ್ತಿ ಬರುತ್ತದೆ. ಅಲ್ಲದೆ ಜೀವನಕ್ಕಾಗಿ ಉತ್ಪತ್ತಿಯನ್ನೂ ಕೊಡುತ್ತದೆ ಎಂಬ ಪವಿತ್ರ ಭಾವನೆಯಿಂದ ಈ ವಿಜ್ಞಾನದ ವ್ಯಾಸಂಗ ಮಾಡಬೇಕಾದ್ದು ಅತ್ಯಗತ್ಯವಾಗಿದೆ.

ವೈದ್ಯನಾದವನು ನಿತ್ಯ ವಿದ್ಯಾರ್ಥಿಯಾಗಿರುವುದು ಈ ವ್ಯಕ್ತಿಗೆ ಇನ್ನೊಂದು ಶ್ರೇಯಸ್ಸನ್ನು ತರುವ ವಿಚಾರ. ಚಿಕಿತ್ಸಾ ವಿಜ್ಞಾನವು ಬಹು ವಿಶಾಲ ಹಾಗೂ ಅನೇಕ ತರದಾಗಿರುವುದರಿಂದ ವೈದ್ಯನು ಎಲ್ಲಾ ವಿಭಾಗಗಳ ಪರಿಜ್ಞಾನವನ್ನು ಗಳಿಸುವುದು ಅಗತ್ಯ.

ಆಯುರ್ವೇದ ಶಿಕ್ಷಣಾಲಯಗಳು ಉತ್ತಮ ಸಲಕರಣೆಗಳನ್ನೊಳಗೊಂಡು ಪರಿಣತ ಅಧ್ಯಾಪಕರುಗಳಿಂದ ಕೂಡಿರುವುದು ಪ್ರಾಮುಖ್ಯವಾಗಿದೆ. ವಿದ್ಯಾರ್ಥಿಗಳಾಗಿ ವಿದ್ಯಾರ್ಜನೆ ಮಾಡುತ್ತಿರುವ ಸ್ತ್ರೀ ಪುರುಷರು ಈ ತಮ್ಮ ವಿಜ್ಞಾನವು ಬಹು ಪವಿತ್ರ ಶಿಕ್ಷಣವೆಂಬುದನ್ನು ತಿಳಿದಿರಬೇಕು. ತಮ್ಮ ಆರೋಗ್ಯವನ್ನು ಕಾಪಾಡುತ್ತಿರುವ ಜನಕ್ಕೆ ಬದ್ಧಿಯನ್ನು ಪವಿತ್ರವಾಗಿರುವಂತೆ ಪ್ರಯತ್ನಿಸಬೇಕು. ಪದವೀಧರರಾಗಿ ವೃತ್ತಿಯಲ್ಲಿ ಪ್ರವೇಶಿಸಿದಾಗ ವೈದ್ಯವೃತ್ತಿಯೆಂಬುದು ಅತಿ ಪವಿತ್ರ ವೃತ್ತಿಯೆಂದು ತಿಳಿದು ಜನತಾ ಸೇವೆಯೊಂದಿಗೆ ಸ್ವಾಭಿಮಾನವೃತ್ತಿಯ ಕಾರ್ಯಗಳಲ್ಲೂ ನಿರತರಾಗಿದ್ದರೆ, ತಮ್ಮ ವೈಯಕ್ತಿಕ ಜೀವನದಲ್ಲಿ ಅತ್ಯುತ್ತಮ ಶಿಸ್ತು ಪರಿಪಾಲಿಸುವುದು ಅತ್ಯಗತ್ಯವಾಗಿದೆ. ವೈದ್ಯರು ಶಾಂತಚಿತ್ತರಾಗಿ ಪ್ರಸನ್ನತೆಯಿಂದ ಕೂಡಿರುವುದು ಶ್ರೇಷ್ಠ ಲಕ್ಷಣವಾಗಿದೆ. ಇಂಥವರಿಂದ ಚಿಕಿತ್ಸೆ ಹೊಂದಬಯಸುವ ರೋಗಿಗಳ ಅರ್ಧಾಂಶ ಕಾಲದಲ್ಲೇ ಗುಣಹೊಂದುವುದರಲ್ಲಿ ಸಂಶಯವಿಲ್ಲ.

ರಣರಂಗದಲ್ಲಿ ಹೋರಾಡುವ ಯೋಧರು ಶಸ್ತ್ರಸಜ್ಜಿತರಾಗಿರಬೇಕಾದಂತೆ ವೈದ್ಯ ವ್ಯವಸಾಯ ಮಾಡುವವರು ಉತ್ತಮ ಔಷಧಿಗಳ ಜೋಡಣೆಯಿಂದ ಸಜ್ಜಿತರಾಗಿರುವುದು ಮುಖ್ಯವಾಗಿದೆ.

ಮೇಲೆ ವಿವರಿಸಿದ ಮಾರ್ಗದರ್ಶನಗಳಂತೆ ಈ ವಿಜ್ಞಾನವು ಮುಂದುವರಿದಲ್ಲಿ ಜಗತ್ತಿನಲ್ಲೆಲ್ಲಾ ಇನ್ನೊಂದು ಅತ್ಯುತ್ತಮ ಜೀವಿತ ಶಾಸ್ತ್ರ ವಿಜ್ಞಾನವೆಂಬ ಕೀರ್ತಿ ಶಾಶ್ವತವಾಗಿ ಉಳಿಯುವುದು.

ಅಮೃತ ತಂದೆ
ಅಮರ ತಂದೆ

೧

ಧನ್ಯ ಭಾರತ ಪುತ್ರ
ನಿನ್ನ ದರ್ಶನ ಮಾತ್ರ
ದಾಸ್ಯದಾ ದಸ್ಯುವನೆ ಓಡಿಸಿದೆ ತಂದೆ
ನಿನ್ನ ಸಾಧನೆ ಶಕ್ತಿ
ನಿನ್ನ ಬೋಧನೆ ಯುಕ್ತಿ
ಭಾರತದ ಜನಕೋಟಿ ಬೆಂಬಲವ ತಂದೆ

೨

ಆತ್ಮ ಸಾಧನೆ ಮಾಡಿ
ಪರಮಾತ್ಮನನು ನೋಡಿ
ಪುಣ್ಯಪೀಯೂಷವನೆ ಹರಿಸಿ ಪೋದೆ
ಸತ್ಯ ಶೋಧನೆ ಮಾಡಿ
ನಿತ್ಯ ಪ್ರಾರ್ಥನೆಗೈದು
ದೇಶ ಸೇವಕನಾಗಿ ಸೇವೆಗೈದೆ ತಂದೆ

೩

ಜಾತಿ ಭೂತವ ಓಡಿಸಿ
ಪ್ರೀತಿ ಭಾವವ ಬೆಳೆಸಿ
ಐಕ್ಯ ಮಂತ್ರದ ಸಾರ ಬೋಧಿಸಿದೆ ತಂದೆ
ವಿರಸವೆಲ್ಲವ ಅಳಿಸಿ
ಸ್ನೇಹ ಸಮತೆಯ ಉಳಿಸಿ
ವಿಶ್ವ ಬಾಂಧವ್ಯವನೆ ಬೆಳಸಿ ಹೋದೆ

೪

ನಿನ್ನ ನಾಮ ಸ್ಮರಣೆ
ಜನರ ಭಾವಸ್ಫುರಣೆ
ನಾಡ ಮುನ್ನಡೆಗಾಗಿ ದಾರಿ ತಂದ
ಸ್ವಾತಂತ್ರ್ಯ ತಂದಿಹನೆ
ಶಾಂತಿಯನೆ ನೀಡಿಹನೆ
ನಾಡಜನರಿಗೆ ನೀನೆ ಅಮೃತ ತಂದ
ಅಮರ ತಂದೆ.

— ತಡ್ಪಲಸೆ ನಿತ್ಯೇಶ್ವರ ಶರ್ಮಾ,
ಪಿರಸಿ.

ಕರುಣಾ ಸಾಗರ

(ಹದಿನೈದನೇ ಪುಟದಿಂದ)

ಸಾಟಿನ ಭವಿಸಲೇಬೇಕು. ಈ ಪಾಪಿಗಳು ತಮ್ಮ ಕರ್ಮಭಾಗವನ್ನು ಅನುಭವಿಸಲಿ, ನೀವು ನಿಮ್ಮ ಪುಣ್ಯಭಾಗವನ್ನು ಪಡೆಯಲು ಸ್ವರ್ಗಕ್ಕೆ ಹೊರಡಿರಿ."

ಆದರೆ ವಿಪಶ್ಚಿತ್ ತನ್ನ ನಿರ್ಧಾರದಲ್ಲಿ ಅಚಲನಾಗಿದ್ದನು—"ಹೇ ಧರ್ಮದೇವನ ಅನುಚರನೇ, ನಾನು ಬರುವುದು ಸಾಧ್ಯವಿಲ್ಲ. ಇಷ್ಟೊಂದು ಜೀವಗಳನ್ನು, ಈ ಘೋರ ಯಾತನೆಗಳನ್ನು ಅನುಭವಿಸಲು ಬಿಟ್ಟು ನಾನು ಸ್ವರ್ಗೋಪಭೋಗಕ್ಕೆ ಹೇಗೆ ಹೋಗಲಿ?" ಎಂದು ಬಿಟ್ಟನು.

ಧಿಕ್ ತಸ್ಯ ಜೀವಿತಂ ಪುಂಸಃ ಶರಣಾ
ರ್ಥಿನಮಾತುರಮ್ |
ಯೋ ನಾರ್ತಮನುಗೃಹ್ಣಾತಿ ವೈರಿ
ಪಕ್ಷಮಪಿ ಧ್ರುವಮ್ ||

—"ಶರಣಾರ್ಥಿ, ಪೀಡಿತ ಮತ್ತು ರೋಗಿಯಾದಂತಹ ಮನುಷ್ಯನಿಗೆ ಅವನು ವೈರಿಗಣದವನೇ ಆಗಿದ್ದರೂ—ಕೃಪೆ ತೋರದವನ ಜೀವನಕ್ಕೆ ಧಿಕ್ಕಾರವಿದೆ. ಆದುದರಿಂದ ಹೇ ಯಮದೂತನೇ ನೀನು ಹೋಗು, ನಾನು ಇಲ್ಲೇ ಇರುತ್ತೇನೆ."

ರಾಜಾ ವಿಪಶ್ಚಿತನ ಈ ಉತ್ತರವನ್ನು ಕೇಳಿ ಸಂತುಷ್ಟರಾದ ನರಕವಾಸಿಗಳೆಲ್ಲರೂ 'ಆಹಾ ಆಹಾ' ಎಂದರು.

ಈ ಹೊತ್ತಿಗೆ ಸರಿಯಾಗಿ ಪ್ರಕಾಶಮಾನವಾದ ದಿವ್ಯ ವಿಮಾನವೊಂದು ಅಲ್ಲಿಗೆ ಆಗಮಿಸಿತು. ಸಾಕ್ಷಾತ್ ಯಮಧರ್ಮನೂ, ದೇವರಾಜ ಇಂದ್ರನೂ ವಿಮಾನದಿಂದ ಇಳಿದು ರಾಜನಿದ್ದಲ್ಲಿಗೆ ಬಂದರು. "ರಾಜನ್, ಪೃಥ್ವಿಯ ಮೇಲೆ ನೀನು ನನ್ನ ಉಪಾಸನೆಯನ್ನು ಮಾಡಿರುವ ಕಾರಣ ನಿನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಲು ಸ್ವಯಂ ನಾನೇ ಬಂದಿರುತ್ತೇನೆ' ಎಂದನು ಧರ್ಮದೇವ.

ಇಬ್ಬರೂ ದೇವತೆಗಳನ್ನು ಅಭಿವಂದಿಸಿದ ನಂತರ ವಿಪಶ್ಚಿತನು ಯಮದೇವನೊಂದಿಗೆ ———

ನರಕೇ ಮಾನವಾ ಧರ್ಮ ಪೀಡ್ಯಂತೇ
ತ್ರ ಸಹಸ್ರಶಃ|
ತ್ರಾಹೀತಿ ಚಾರ್ತಾಃ ಕ್ರಂದಂತಿ ಮಾ
ಮಿತೋ ನ ವ್ರಜಾಮ್ಯಹಮ್||

"ಧರ್ಮದೇವಾ, ನರಕದ ಈ ಸಹಸ್ರಾರು ಮಂದಿ ಮಾನವರು ಆರ್ತಸ್ವರದಿಂದ ತಮ್ಮನ್ನು ರಕ್ಷಿಸಲು ನನ್ನನ್ನು ಕರೆಯುತ್ತಿದ್ದಾರೆ. ಇವರೆಲ್ಲರನ್ನೂ ಇಲ್ಲೆ ಬಿಟ್ಟು ಸ್ವರ್ಗಕ್ಕೆ ಹೋಗುವಂತಹ ಕಠೋರ ಹೃದಯವನ್ನು ನಾವು ಎಲ್ಲಿಂದ ತರೋಣ? ಇವರೆಲ್ಲರೂ ತೊರೆದ ನೀವು ಸ್ವರ್ಗಕ್ಕೆ ಏರಬಹುದು."

ಪುನಃ ರಾಜನೇ ತನ್ನ ಮಾತನ್ನು ಮುಂದುವರಿಸಿದನು—"ದೇವಾ, ನಮ್ಮ ಪುಣ್ಯ ಶೇಷವೆಷ್ಟು ಎಂಬುದನ್ನು ತಿಳಿದಿದ್ದರೆ ನೀವಾಗಲೀ-ಇಂದ್ರನಾಗಲೀ ನನಗೆ ತಿಳಿಸುವಿರಾ?" ಎಂದನು. "ರಾಜನ್, ಸಾಗರದ ಜಲಬಿಂದುಗಳಂತೆ, ಗಗನದಲ್ಲಿರುವ ತಾರೆಗಳಂತೆ, ಗಂಗಾನದಿಯ ದಡದ ಮರಳ ಕಣಗಳಂತೆ ನಿಮ್ಮ ಪುಣ್ಯವೂ ಅಪಾರ. ಅವುಗಳ ಸಂಖ್ಯೆಯು ಅಗಣಿತವಾದುದು. ಆದರ ಫಲ ಸ್ವರೂಪರಾಗಿಯೇ ತಾವು ದೇವಲೋಕಕ್ಕೆ ಆಗಮಿಸಿ ಸುಖವನ್ನು ಭೋಗಿಸಬೇಕು-ಈ ಪಾಪಿಗಳು ನರಕದಲ್ಲಿ ತಮ್ಮ ಶೇಷ ಪಾಪವನ್ನು ಕಳೆದುಕೊಳ್ಳಲಿ." ಎಂದು ಉತ್ತರಿಸಿದ ಯಮಧರ್ಮ ರಾಜನು ಮತ್ತಷ್ಟು ಖಿನ್ನನಾಗಿ-

ಕಥಂ ಸ್ಪೃಹಾಂ ಕರಿಷ್ಯಂತಿ ಮತ್ಸಂ
ಪರ್ಕೇಷು ಮಾನವಾಃ
ಯದಿ ಮತ್ಸನ್ನಿಧಾವೇಷಾಮುತ್ಕ
ರ್ಷೋ ನೋಪಜಾಯತೇ|
ತಸ್ಮಾದ್ ಯತ್ ಸುಕೃತಂ ಕಿಂಚಿನ್ಮ
ಮಾಸ್ತಿ ತ್ರಿದಶಾಧಿಪ
ತೇನ ಮುಚ್ಯಂತು ನರಕಾತ್ ಪಾಪಿ
ನೋ ಯಾತನಾಂ ಗತಾಃ||

"ಹೇ ದೇವತೆಗಳೇ, ನಮ್ಮ ಬಳಿ ಬಂದ ಬಳಿಕವೂ ಈ ದುಃಖಿತ ಜೀವಿಗಳಿಗೆ ಸುಖವು ಲಭಿಸದಿದ್ದರೆ, ಮುಂದೆ ಯಾವ ಮನುಷ್ಯನಾದರೂ ನಮ್ಮ ಹತ್ತಿರ ಸುಳಿಯಬಹುದೇ? ಆದುದರಿಂದ ನನ್ನ ಸಮಸ್ತ ಪುಣ್ಯ ಬಲದ ಬದಲಾಗಿ, ಈ ಜೀವಿಗಳು ನರಕದಿಂದ ಮುಕ್ತವಾಗಲಿ ಎಂದು ನಾವು ಅಪೇಕ್ಷಿಸುತ್ತೇವೆ. ಇದು ನಮ್ಮ ಆಸೆ. ದೇವಭೂಮಿಯ ಸುಖದ ಅಭಿಲಾಷೆ ನಮಗಿಲ್ಲ."

ರಾಜನ ಉತ್ತರವನ್ನು ಕೇಳಿದ ಇಂದ್ರನು 'ಧನ್ಯ! ಧನ್ಯ!' ಎಂದು ಉದ್ಗರಿಸಿದನು. 'ಹೇ ಕ್ಷತ್ರಿಯ ಶ್ರೇಷ್ಠನೇ, ನಿಮ್ಮ ಈ ನಿರ್ಧಾರದಿಂದಾಗಿ ನಿಮ್ಮ ಪುಣ್ಯಬಲವು ಸಹಸ್ರ ಪಾಲು ವೃದ್ಧಿಯಾಯಿತು. ಅಲ್ಲಿ ನೋಡಿ, ನರಕದ ಜೀವಿಗಳು ಯಾತನೆಯಿಂದ ಮುಕ್ತವಾಗಿ ನಿರ್ಗಮನ ಹೊಂದುತ್ತಿರುವರು. ಈಗ ನೀವು ಕೂಡ ಸ್ವರ್ಗಕ್ಕೆ ನಡೆಯಿರಿ' ಎಂದನು ದೇವರಾಜ.

"ಕರುಣಾಮೂರ್ತಿ ಮಹಾರಾಜ ವಿಪಶ್ಚಿತನಿಗೆ ಜಯವಾಗಲಿ!" ಎಂಬ ಜಯ ಘೋಷದೊಂದಿಗೆ ನರಕವಾಸಿಗಳು ಮುಕ್ತರಾಗಿ, ತಮ್ಮ ತಮ್ಮ ಕರ್ಮಾನುಸಾರವಾಗಿ ಅನ್ಯ ಲೋಕಗಳತ್ತ ತೆರಳಲಾರಂಭಿಸಿದರು. ಅಲ್ಲಿಂದ ಪ್ರತಿಯೊಬ್ಬನೂ ಹೊರಬೀಳುವ ತನಕ ರಾಜಾ ವಿಪಶ್ಚಿತ ಅಲ್ಲೇ ನಿಂತಿದ್ದನು. ಅವನ ಶರೀರದ ಮೇಲೆ ಪುಷ್ಪವೃಷ್ಟಿಯಾಗುತ್ತಲೇ ಇತ್ತು.

(ಮೂಲ: ಚಂದ್ರಶೇಖರ ಪಾಂಡೇಯ. ನವನೀತದಿಂದ)

ಗುರುನಾನಕರ ಅಮರವಾಣಿ

ಬೆಳ್ಳಿ—ಬಂಗಾರ, ಕೇವಲ ಒಂದು ಭ್ರಾಂತಿ. ಒಂದು ದಿನ ಇವೆಲ್ಲವೂ ಮಣ್ಣಲ್ಲಿ ಮಣ್ಣಾಗಿ ಹೋಗುತ್ತವೆ.

00 00 00

ಈ ಜಗತ್ತಿನಲ್ಲಿ ಬಾಳುವವರು ಕಮಲದಂತೆ ರಾಜಹಂಸದಂತೆ ಬಾಳಬೇಕು. ಇವು ನೀರಲ್ಲಿದ್ದರೂ ನೀರಿನಿಂದ ಮುಕ್ತವಾಗಿರುತ್ತವೆ.

00 00 00

THE

BHARATH MOTOR SERVICE

Maidan III Cr. Road,

MANGALORE-1

(Phone: 3446)

We provide special buses at moderate charges for the conveyance of marriage, excursion, pilgrimage and tourist parties.

Special concession allowed on Students' Educational Tours.

PLEASE TRAVEL ONCE AND ALWAYS IN OUR COMFORTABLE BUSES.

Estd. 1947

Tele: GOLDKING Phone: 3242 Res: 3272

— ಸಂದರ್ಶಿಸಿರಿ —

ಬ್ಲೂ ಜಾಗರಾ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಸುವಿಖ್ಯಾತವಾದ

ಎಸ್. ಎಲ್. ಶೇಟ್

ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ, ಉಡುಗೊರೆ ವಸ್ತುಗಳಿಗೂ ಪ್ರಸಿದ್ಧವಾದ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ ಜನಪ್ರಿಯವಾದ

ಐಡಿಯಲ್ ಫೋಟೋ ಹೌಸ್

Phone: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು

ಕೆ. ಎಸ್. ರಾವ್ ರೋಡ್,

ಹಂಪನಕಟ್ಟೆ, ಮಂಗಳೂರು-1

GRAMS : "SHAMSON" MANDYA

PHONE { Factory : 346, Office : 314, Res : 10

The Untold Story of "SHAMSON"

A lion hit a mighty Elephant and the Elephant was killed immediately. The same lion hit a mighty SHAMSON Rolling shutter again and again, but alas! the Lion was killed.



Remember

"SHAMSON" products are stronger than the MIGHTY LION.



Manufacturers:

SHAMSON METAL INDUSTRIES (P) LTD.,

SUVARNAGIRI,

TAVARAGERE, **MANDYA.**

MANAGING DIRECTOR

K. B. SHETTY, *B. A., LL. B.*

ಅಸತ್ಯಮೇವ ಜಯತೇ

ಶ್ರೀ

(ಹದಿನೈದನೇ ಪುಟದಿಂದ)

ಪ್ರಾಮಾಣಿಕತೆಗೆ ಈಗ ಬೆಲೆಯಿಲ್ಲ. ಇಲ್ಲೊಂದು ನಿದರ್ಶನ. ದನದ ಬಾಲ ಹಿಡಿದು ಪ್ರಮಾಣ ಮಾಡಿದರೆ ಸತ್ಯವೆಂದು ನಂಬಲಾಗುತ್ತದೆ. ಆದೊಬ್ಬ ಗೊಲ್ಲ ಸುಳ್ಳನ್ನು ಹೇಳಲು ಅಂಜಿ ಗೋವಿನ ಬಾಲ ಹಿಡಿಯಲು ಒಪ್ಪಲೇ ಇಲ್ಲ. ಪರಿಣಾಮ ಸಣ್ಣ ನ್ಯಾಯಾಲಯದಲ್ಲಿ ಅವನ ದಾವೆ ಅವನ ಮೇಲೇ ತಿರುಗಿತು. ನಷ್ಟಕಷ್ಟಗಳನ್ನು ಅನುಭವಿಸಬೇಕಾದ ಪ್ರಸಂಗ ಬಂತು. ಕೇಸು ಜಿಲ್ಲಾ ಅಥವಾ ಉಚ್ಚ ನ್ಯಾಯಾಲಯವನ್ನು ಸೇರಿತು. ಇಂಗ್ಲೆಂಡಿನಿಂದ ವಕಾಲತ್ತು ಕಲಿತು ಹಿಂದಿರುಗಿದ ವಕೀಲರನ್ನೇ ಅವನ ಪರವಾಗಿ ನೇಮಿಸಲಾಯಿತು. ಬೇರೆ ಮಾರ್ಗವೇ ಇಲ್ಲ. ಮನೆ ಮಠಗಳನ್ನು ಕಳೆದುಕೊಳ್ಳುವ ಪ್ರಸಂಗವದು. ದನದ ಬಾಲ ಮುಟ್ಟಿ ಹೇಳು; ತಪ್ಪೇನೂ ಆಗುವದಿಲ್ಲವೆಂದು ಸಲಹೆ ಸಿಕ್ಕಿತು. ಅದು ವರೆಗೆ ಭವಿಷ್ಯಕ್ಕೆ ಅಂಜುತ್ತಿದ್ದ ಆರೋಪಿ ಬಾಲ ಹಿಡಿದು ಸುಳ್ಳು ಹೇಳಿದ. ದಾವೆಯಲ್ಲಿ ಅವನಿಗೆ ಜಯವಾಯಿತು. ಅಸತ್ಯ ಮೇವ ಜಯತೇ ಆಯಿತು!

ಇನ್ನೊಂದು ಖೂನಿ ಮೊಕದ್ದಮೆ ನಡೆಯಿತು. ಆಪಾದಿತ ಪೊಲೀಸರಿಂದ. ಖಂಡಿತ ಶಿಕ್ಷೆ ಯಾಗಲು ಪೊಲೀಸರಿಗೂ ಬೇಕಾಗಿತ್ತು. ನಿಂಬಲ್ಕರ ಜನರನ್ನು ಬಂಧಿಸಿ ಬಿಡಲಾಯಿತು. ಕೂಡಾ ನಾಗೆ ಸತ್ಯ ಹೇಳಿದರೆ ಬಿಟ್ಟು ಬಿಡುತ್ತೇನೆ ಎಂದು ಆಶ್ವಾಸನೆ ಬಂತು, ಕೊಲೆ ಮಾಡಿದವ ಸತ್ಯ ಹೇಳಿದ. ಇನ್ಸ್‌ಪೆಕ್ಟರಿಗೆ ಇನಾಮು ಸಿಕ್ಕಿತು. ಬಡ್ತಿ ಮತ್ತು ವೇತನಗಳಲ್ಲಿ ಬಡ ತಿ ಆಯಿತು. ಸತ್ಯ ಹೇಳಿದ ಅಪರಾಧಿಯನ್ನು ಗಲ್ಲಿಗೇರಿಸಿದರು.

ಇಲ್ಲೊಬ್ಬ ಶ್ರೀಗಂಧದ ತುಂಡುಗಳನ್ನು ಮಾರುತ್ತಾನೆ. ಅವನ ಕೈ ಚೀಲದಲ್ಲೆಲ್ಲ ಗಂಧದ ತುಂಡುಗಳು ಘಮಗಮಿಸುತ್ತವೆ. ಒಂದು ತುಂಡಿಗೆ ಒಂದೇ ರೂಪಾಯಿ. ಶ್ರೀಗಂಧದ ತವರು ಮನೆಯಾದ ಮೈಸೂರಿನಲ್ಲೂ ಒಂದು ರೂಪಾಯಿಗೆ ಒಂದು ತುಂಡು ಸಿಗುವದಿಲ್ಲವಲ್ಲಾ ಎಂದೆ. ಇದು ಮೈಸೂರಿನದಲ್ಲ. ಮಲಯಾದ್ರಿ ಎಂದ. ಸುಳ್ಳು ಹೇಳಿದ. ಸತ್ಯಕ್ಕೆ ಅಪಮಾನ ಮಾಡಿದುದು ಹಾಗೆಂದಾದರೆ ಅದರ ಬೆಲೆ ಇನ್ನೂ ಹೆಚ್ಚಿರಬೇಕು. ಅವನ ಸರಕು ಗಂಧವೇ ಅಲ್ಲ. ಕಾಡು ಮರದ ತುಂಡುಗಳಿಗೆ ಶ್ರೀಗಂಧದ ಎಣ್ಣೆ ಮಾತ್ರ ಸವರಿದುದಾಗಿದೆ. ಜನರಿಗೂ ಅದರ ಮೇಲೆ ಗಂಧಬೇಕು. ಅವನೇನು ಮಾಡಿಯಾನು? ಈ ತರ ಮೋಸ ಮಾಡಿ ಸುಳ್ಳು ವ್ಯಾಪಾರ.

ಇವನೊಬ್ಬ ಜೋಳದ ಕಾಳುಗಳನ್ನು ಹುರಿದ ಅರಳು ಮಾಡಿ (Pop Corn) ಸುಂದರವಾದ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ತುಂಬಿಸಿ ವಿಕ್ರಯಿಸುತ್ತಾನೆ. ಬೆಲೆ ಬರೇ ನಾಲ್ಕಾಣೆ. ಅದನ್ನು ತಿಂದರೆ ಹತ್ತು ತತ್ತಿಗಳನ್ನು ತಿಂದ ಶಕ್ತಿ ಬರುವದಂತೆ. ಇದು ಕಾಡುತ್ತೆ ಹಾಲು ಕುಡಿದ ಸಮಾನವಂತೆ. ಒಂದು ವ್ಯಾಖ್ಯಾನ ಭೋಜನದ ಶಾಕತತ್ತ್ವ ಒಂದು ವಾಕೀಟಿನಲ್ಲಿದೆಯಂತೆ. ಅವನ ಜಾಹೀರಾತು, ಪ್ರಚಾರದ ಪ್ರಣಾಳಿ, ಯಾರನ್ನು ಮೋಹಗೊಳಿಸುವುದಿಲ್ಲ? ಬರೆದುದೆಲ್ಲಾ ಸುಳ್ಳು ಹಸಿ ಸುಳ್ಳು.

ಇಲ್ಲೊಬ್ಬ ದೇವರಿಗೆ ಹರಕೆ ಹೇಳುತ್ತಾನೆ. ಸಾವಿನಿಂದ ಬದುಕಿದರೆ ಹೂವಿನ ಬದಲು ಹೊನ್ನಿನ ಪೂಜೆಯನ್ನೇ ಮಾಡಿಸುವೆನೆಂದು. ಸತ್ತರಂತೂ ಸಂಗತಿ ಮುಗಿಯಿತು. ಸಾಯಲಿಲ್ಲ, ಹೊನ್ನಿನ ಪೂಜೆಯೂ ಇಲ್ಲ, ಹೂವಿನ ಪೂಜೆಯೂ ಇಲ್ಲ. ದೇವರು ನಡೆಸಿದರೆ ತಾನೆ ಹರಕೆ ಸಂದಾಯ ಮಾಡಿಸುವುದು? ಇವನೊಬ್ಬ ಪೂಜೆ ಮಾಡುತ್ತಾನೆ. ನಾನಾವಿಧ ಫಲಂ ಸಮರ್ಪಯಾಮಿ. ಪುಷ್ಪಂ ಸಮರ್ಪಯಾಮಿ. ಗಂಧಂ ಸಮರ್ಪಯಾಮಿ-ಎಂದೆಲ್ಲ. ಗಂಧವೂ ಇಲ್ಲ, ಪುಷ್ಪವೂ ಇಲ್ಲ, ಫಲವೂ ಇಲ್ಲ. ಎಲ್ಲವನ್ನು ಬಾಯಿ ಮಾತಿನಿಂದಲೇ ದೇವರಿಗರ್ಪಿಸಿ ನೂರಕ್ಕೆ ನೂರು ಪಾಲು ಸುಳ್ಳು ಹೇಳಿ ದೇವರನ್ನೇ ಒಲಿಸಿಕೊಳ್ಳುವ. ಈ ಯುಗದ ಬಾಲಬ್ರಹ್ಮಚಾರಿ. ವಿಚಿತ್ರ ವಿಶ್ವದ ಠಕ್ಕ ಪೂಜಾರಿ.

ಈ ಕಾಲದಲ್ಲಿ ಒಂದು ಸತ್ಯ ಹೇಳಿದರೆ ಅದನ್ನು ಸ್ಥಿರ ಪಡಿಸಲು ಸಾವಿರ ಸುಳ್ಳು ಹೇಳಬೇಕಾಗುತ್ತದೆ. ಅದ್ದರಿಂದ ಸುಳ್ಳು ಹೇಳಿದರೆ ಎತ್ತಲೂ ಭಯವಿಲ್ಲ. ಎಲ್ಲರೂ, ಎಲ್ಲೆಲ್ಲೂ ಸುಳ್ಳು ಹೇಳುವವರೇ ಎಂದಾದ ಬಳಿಕ ಸತ್ಯಕ್ಕೆ ಬಲ, ಬೆಂಬಲ ಎಲ್ಲಿಂದ ಸಿಕ್ಕೀತು?

ಹಿಂದಿನ ಕಾಲದಲ್ಲಿ ಪ್ರಾಣ ಹೋದರೂ ಪರವಾಯಿಲ್ಲ; ಸತ್ಯವನ್ನು ಬಿಡಬಾರದು. ಎಂಬ ಆದರ್ಶ ಜೀವನದಲ್ಲಿ ಹಾಸು ಹೊಕ್ಕಾಗಿ ಹೋಗಿತ್ತು. ಈಗ ಸತ್ತು ಹೋದರೂ ತೊಂದರೆಯಿಲ್ಲ. ಸುಳ್ಳಾಡುವದನ್ನು ಬಿಡಬಾರದು ಎಂಬ ಧೋರಣೆ ಬೆಳೆದಿದೆ. ಸುಳ್ಳು ಹೇಳದವನು ಯಾವ ಕೆಲಸಕ್ಕೂ ಬಾರನು. ಸುಳ್ಳು ಹೇಳಿದರೆ ಇಹಲೋಕದಲ್ಲಿ ಮಾತ್ರವಲ್ಲ, ಪರಲೋಕದಲ್ಲೂ ಜಯ ಸಾಧಿಸಬಹುದು. ಅನ್ನವಿಲ್ಲದೆ ಬದುಕಬಹುದು; ಸಾಧ್ಯವಿದೆ. ಸುಳ್ಳು ಹೇಳದೆ ಜೀವನ ಕಳೆಯಲು ಸಾಧ್ಯವೇ ಇಲ್ಲ. ಸುಳ್ಳಿನ ಸಮಾನ ಧರ್ಮವಿಲ್ಲ; ದೇವರಿಲ್ಲ. ಸುಳ್ಳಾಡದಿದ್ದರೆ ದೇಶಭಕ್ತನಾಗಲು ಸಾಧ್ಯವಿಲ್ಲ. ಸಮಾಜ ಸೇವಕ, ಲೋಕ ಸೇವಕ ವಿಶ್ವ ಕಲ್ಯಾಣ ಸಾಧಿಸಬೇಕಾದರೆ ಮೊದಲು ಸುಳ್ಳು ಹೇಳಲು ಕಲಿಯಬೇಕು. ಸುಳ್ಳು ಹೇಳದಿದ್ದರೆ ನಮ್ಮ ಜನರು ಓಟನ್ನೇ ಕೊಡುವದಿಲ್ಲ.

ಅನ್ನವಿಲ್ಲದವರಿಗೆ ಅನ್ನ. ಮನೆಯಿಲ್ಲದವರಿಗೆ ಮನೆ, ಭೂಮಿಯಿಲ್ಲದವರಿಗೆ ಭೂಮಿ ಧನವಿಲ್ಲದವರಿಗೆ ಸಂಪತ್ತು, ಕೆಲಸವಿಲ್ಲದವರಿಗೆ ಕೆಲಸ—ಎಲ್ಲ ಕೊಡುತ್ತೇವೆ ಎಂದು ಘೋಷಿಸಬೇಕು. ಸುಳ್ಳು ಆಶ್ವಾಸನೆ ಕೊಡಬೇಕು ಆಗ ಎಲ್ಲರೂ ಓಟುಕೊಡುತ್ತಾರೆ. ಶಾಲೆಯಿಲ್ಲದಲ್ಲಿ ಶಾಲೆ. ಸಂಕವಿಲ್ಲದಲ್ಲಿ ಸಂಕ. ಕೆರೆಯಿಲ್ಲದ ಪರಿಸರ. ಕಲ್ಯಾಣವಿಲ್ಲದ ಪ್ರದೇಶ—ಹೀಗೆಲ್ಲ ಸುಳ್ಳು ಭರವಸೆ ನೀಡಿದರೆ ಹುಂಬರೂ ಹಿರಿಯರೂ ಆಗ ಬಹುದು. ಆಗಬಹುದಲ್ಲ; ನಮ್ಮಲ್ಲಿ ಅನೇಕರು ಆಗಿದ್ದಾರೆ. ಇಂಥವರು ಎಂಥಹ ಚುನಾವಣೆಯನ್ನೂ ಗೆಲ್ಲಬಲ್ಲರು.

ಇನ್ನೊಂದು ಮಾರ್ಗವಿದೆ. ಗಾಂಧೀ ಮಾರ್ಗ. ಅಹಿಂಸೆ, ಸತ್ಯಾಗ್ರಹ, ನಿರಶನ ವ್ರತ ಮುಂತಾದವುಗಳನ್ನು ಜನರಿಗೆ ಬೋಧಿಸಬೇಕು. ತನ್ನ ಹಿಂಬಾಲಕರಿಗೆ ಅದೆಲ್ಲ ಸುಳ್ಳು. ಕಲ್ಲು ತೂರಿದವನೇ ಕಂಠೀರವ ಎಂದು ಪ್ರಚೋದಿಸಬೇಕು. ಬಸ್ಸನ್ನು ಬೆಂಕಿ ಕೊಟ್ಟು ಸುಡಬೇಕು. ರೈಲನ್ನು ಉರುಳಿಸಬೇಕು. ಅಂದರೆ ವಿಧ್ವಂಸಕ ಕಾರ್ಯಗಳಲ್ಲಿ ನಿರತರಾಗಬೇಕು. ಧುರೀಣರಾಗಬೇಕಾದರೆ ಇದು ಅತ್ಯಂತ ಸುಲಭ ಮಾರ್ಗ. ಅಮೇರಿಕಾದವರು ಚಂದ್ರಲೋಕಕ್ಕೆ ಹೋಗಿದ್ದಾರೆ. ರಷ್ಯನರು ಮಂಗಳಕ್ಕೆ ಹೋಗುತ್ತಾರೆ. ನಮ್ಮವರು ಧ್ರುವ ನಕ್ಷತ್ರಕ್ಕೆ ಹೋಗುವ ಸಿದ್ಧತೆಯಲ್ಲಿಲ್ಲ. ಇದು ಘೋರ ಅನ್ಯಾಯ ಎಂದು ಚಳವಳಿ ಮಾಡಿ, ಅದರ ಮೂಲಕ ಸ್ವಾವಲಂಬನದಿಂದ ಯಾವ ದೇಶವಾದರೂ ಪ್ರಸಿದ್ಧಿ ಪಡೆದಿದೆಯೇ — ಹೀಗೆಲ್ಲ ಸುಳ್ಳು ಹೇಳಬೇಕು.

ಇಲಿಗಳು ತಿನ್ನುವ ಆಹಾರವನ್ನು ಉಳಿಸಿದರೆ ಆಮದಿನ ಅವಶ್ಯತೆಯಿಲ್ಲವೆನ್ನುತ್ತಾರೆ ಆಹಾರತಜ್ಞರು. ಆದರೆ ನಮ್ಮ ಪಥಿಕರು ಇಲಿಗಳನ್ನು ಕೊಲ್ಲುವ ಬದಲು ಹುಲಿಗಳನ್ನು ಕೊಲ್ಲುತ್ತಾರೆ. ಒಂದು ಕಡೆ ಕಾಡುಪ್ರಾಣಿಗಳನ್ನು (ವನ್ಯಸಂಪತ್ತು) ರಕ್ಷಿಸಿರಿ ಎಂದು ಸರಕಾರ ಸಾರುತ್ತಿದೆ. ಇನ್ನೊಂದು ಕಡೆ, ಚಿರತೆ, ಜಿಂಕೆ, ಹುಲಿ ಮುಂತಾದ ಕಾಡು ಮೃಗಪಕ್ಷಿಗಳ ಸಂತಾನವೇ ಸಂಪೂರ್ಣ ನಾಶವಾಗುತ್ತದೆ ಅಂದರೆ ಕೊಲ್ಲಲಾಗುತ್ತದೆ. ಮಾನವನ ಕೋವಿ ಪಿಪಾಸೆಗೆ-ಪೌರುಷ ಪ್ರದರ್ಶನಕ್ಕೆ ಅವಕಾಶ ಬೇಕಲ್ಲ! ಯಾವ ಪ್ರಾಣಿ ಸತ್ತರೇನು? ಜನರಿಗೆ ಸಂಕಟಕಾರಿ; ಉಪಟಳದ ಮಾರಿ ಎಂದು ಕೊಂದುಬಿಟ್ಟರಾಯಿತು. ಸತ್ಯ ಹೇಳಿದರೆ ಬೇಟೆಯಾಡಲು ಪ್ರತಿಬಂಧವಿದೆ. ಸುಳ್ಳು ಹೇಳಿ ಬೇಟೆಯಾಡಿ ವಿಕ್ರಮ ಸಾಧಿಸಬಹುದು. ಒಂದು ಇಲಿಯನ್ನೋ ಹುಲಿಯನ್ನೋ ಕೊಂದು ಆ ಸ್ಪತ್ತೊಂದು ಅವರ ಭಾವಚಿತ್ರದೊಂದಿಗೆ ವೃತ್ತಪತ್ರಿಕೆಯಲ್ಲಿ ಪ್ರಕಟಿಸಬಹುದು. ವಿರಲವಾದ ವನ್ಯಮೃಗವನ್ನು ಕೊಂದೂ ಲೋಕಸೇವಕನಾಗಬಹುದು.

ಇನ್ನು ನಮ್ಮ ಪ್ರಚಲಿತ ರಾಜಕೀಯದ ಪೀಠಲಾಟವೇ ಸಣ್ಣ ಕಾಕ, ಇಂಗ್ಲೀಷಿನಲ್ಲೊಂದು ಗಾದೆಯಿದೆ— ನಾಯಿಯನ್ನು ಕೊಲ್ಲಬೇಕಾದರೆ ಅದನ್ನು ಕೊಲ್ಲುವ ಮೊದಲು ನಾಯಿಗೆ ಹುಚ್ಚು ಹಿಡಿದಿದೆಯೆಂದು ಸುಳ್ಳು ಪ್ರಚಾರಮಾಡಿದರಾಯಿತು. ಇದೇ ತರ ಇಂದು ರಾಜಕೀಯ ಆಟ ಅಥವಾ ವಿಡಂಬನೆ ನಡೆಯುತ್ತದೆ. ಗದ್ದುಗೆಯಲ್ಲಿದ್ದ ಕಾಂಗ್ರೆಸ್ ಮಂತ್ರಿಮಂಡಳವನ್ನು ಉರುಳಿಸಬೇಕಾದರೆ ಒಂದೇ ಒಂದು ಸುಳ್ಳು ಮಾತು ಸಾಕು. ಅವನು

(ಇಪ್ಪತ್ತೆಂಟನೇ ಪುಟ ನೋಡಿರಿ)

Estd: 1965 Phone. 172

SREE MAHADEV
COMMERCIAL CHIT-FUND COMPANY
(P) LTD.,

GUTHALU COLONY,
MANDYA (Mysore State)
(Regd. No. 1566)

ಸ್ಥಾಪನೆ: 1965 ರಿ. ನಂ. 1566

ಓಂ

ಶ್ರೀ ಮಹದೇವ್
ಕಮರ್ಷಿಯಲ್ ಚಿಟ್-ಫಂಡ್ ಕಂಪೆನಿ
(ಪ್ರೈ) ಲಿ.,
ಗುತ್ತಲು ಕಾಲೋನಿ, ಮಂಡ್ಯ.
(ಫೋನ್ ನಂ. 172)

ನಮ್ಮಲ್ಲಿ ದಿನ ಚೀಟಿಗಳು ಮತ್ತು ತಿಂಗಳ ಚೀಟಿಗಳು ನಡೆಯುತ್ತವೆ. ಅಲ್ಲದೆ ಹೆಚ್ಚಿನ ಲಾಭವೂ ಸಿಗುತ್ತೆ.
ನಾವು ಬಡ್ಡಿ ಚೀಟಿಗಳನ್ನೂ ಸಹ ಹರಾಜು ಮಾಡುತ್ತೇವೆ.

ಪ್ರಾಮಾಣಿಕ ವ್ಯವಹಾರ! ಆಕರ್ಷಕ ಡಿವಿಡೆಂಡ್!!

ಹೆಚ್ಚಿನ ವಿವರಗಳಿಗೆ—
ಕಂಪೆನಿಯ ಆಫೀಸಿಗೆ ಖುದ್ದು ಯಾ ಫೋನ್ ಮೂಲಕ ವಿಚಾರಿಸಬೇಕಾಗಿ ವಿನಂತಿ.

BRANCH OFFICE
JAIN STREET, MANDYA.

ಬಿ. ದೇವಯ್ಯ,
ಮ್ಯಾನೇಜಿಂಗ್ ಡೈರೆಕ್ಟರ್.

'ಮುದ್ದಣ' ಕವಿಯ ಕೃತಿಗಳು

(ಹನ್ನೆರಡನೆಯ ಪುಟದಿಂದ)

ಊರಿನ ಪರೀಲರ ಕೆಲಸ ಮತ್ತು ಜಮೀನಿನ ಉತ್ಪತ್ತಿಯಿಂದ ಜೀವಿಸುತ್ತಿದ್ದರು. ಅವರು 1939ರಲ್ಲಿ ತೀರಿಹೋದರು. ಅವರ ಒಬ್ಬಳೇ ಮಗಳನ್ನು ನನಗೆ ಲಗ್ನಮಾಡಿ ಕೊಟ್ಟಿರುತ್ತಾರೆ. ನನಗೆ 2 ಗಂಡು ಮಕ್ಕಳು, 5 ಹೆಣ್ಣು ಮಕ್ಕಳಿರುತ್ತಾರೆ.

ನನಗೆ ದೊಡ್ಡ ತಾಯಿ (ತಾಯಿಯ ಅಕ್ಕ) ಒಬ್ಬರು ಇದ್ದರು. 1959ರಲ್ಲಿ ತೀರಿ ಹೋದರು. ನನ್ನ ತಾಯಿಯವರಿಗೆ ಸಾಧಾರಣ ವಿದ್ಯೆಯಿತ್ತು, ಗ್ರಹಣಶಕ್ತಿ ಚೆನ್ನಾಗಿಯಿತ್ತು, ಕಂಠ ಪಾಠದಲ್ಲಿ ತಂಬಾ ಆಸಕ್ತಿಯಿತ್ತು, ಸರಳಸ್ವಭಾವದವರು.

(ಕವಿಯ ತಂದೆಯ ಹಾಗೂ ಹೆಂಡತಿಯ ಪೂರ್ವಿಕರ ಕುರಿತು ವಿಷಯ ಇಲ್ಲಿದೆ. ಇಂತಹ ಬಗೆಗೆ ಸಂಬಂಧಿಸಿದ ಮಾಹಿತಿ ಆಧಾರವಾದೀತೆಂದು ತಿಳಿದರೆ ತಪ್ಪಾಗದು. ಕವಿ ಕೃತಿಯ ಬಗೆಗೆ ಇವರು ತಿಳಿಸಿದ ಇನ್ನು ಮುಂದಿನ ವಾಕ್ಯಗಳು ಹೀಗಿವೆ:)

೩. "ಕವಿಗೆ ಹಲವಾರು ನಾಲ್ಕಾರು ಭಾಷೆಯಾದರೂ ತಿಳಿದಿತ್ತೆಂದು ನನ್ನ ಮಾವನವರು ಅಭಿಪ್ರಾಯ ಪಡುತ್ತಿದ್ದರು. ಅವರಿಗೆ (ಕವಿಗೆ) ಚರ, ಸ್ಥಿರ ಆಸ್ತಿಗಳಾವುದೂ ಇರಲಿಲ್ಲವಂತೆ. ಇದ್ದ ಕೆಲವು ಪುಸ್ತಕಗಳು (ಬೆಲೆ ಬಾಳುವ) ಕಡೆಕಾರಿನ ರಾಜಗೋಪಾಲರಾಯರು ಮತ್ತು ಕಂಬದಕೋಣೆ ಸಂದರರಾಯರ ಬಳಿ ಸೇರಿದವಂತೆ. ನನ್ನ ಚಿಕ್ಕ ತಂದೆಯವರು (ತಂದೆಯವರ ತಮ್ಮ) ಶಿವರಾಮಯ್ಯ, ಹೆಬ್ರಿಯಲ್ಲಿ ಪೋಸ್ಟ್ ಮಾಸ್ತರಾಗಿದ್ದು ತೀರಿಹೋದರು. ಅವರಿಗೂ ಮಕ್ಕಳಿಲ್ಲ, ನನ್ನ ಗಂಡುಮಕ್ಕಳಿಬ್ಬರೂ ಕೆಲಸದಲ್ಲಿ ಇದ್ದಾರೆ. ಹಿರಿಯವನು (ಶ್ರೀನಿವಾಸ ಮೂರ್ತಿ) ಕೆನರಾ ಕಾರ್ಪರೇಶನ್ ಬ್ಯಾಂಕಿನಲ್ಲಿಯೂ, ಕಿರಿಯವನು (ಸೀತಾರಾಮ ರಾವ್) ಪೇಪರ್ ಮಿಲ್ಲಿನಲ್ಲಿಯೂ ಕೆಲಸದಲ್ಲಿರುತ್ತಾರೆ"

[ಕವಿಯ ಭಷಾಜ್ಞಾನ, ಪುಸ್ತಕ ಭಂಡಾರಗಳ ಬಗ್ಗೆ ಶ್ರೀ ಹ. ರಾ. ಭೀಮರಾವ್ ಹೇಳಿದಂತಿದೆ. ಕುಟುಂಬಿಕರ ವಿಚಾರ ಕುರಿತು ಇಲ್ಲಿದೆ. ಈ ಬಗ್ಗೆಯು ಇನ್ನು ಹೆಚ್ಚು ತಿಳಿಯುತಕ್ಕದೆಂದು ಸೂಚಿಸಬಯಸುವೆನು.]

'ಮುದ್ದಣ'ನ ಕೃತಿಗಳೆಂದರೆ, 2 ಯಕ್ಷಗಾನ ಪ್ರಸಂಗ (ರತ್ನಾವತೀ ಕಲ್ಯಾಣ ಮತ್ತು ಕುಮಾರವಿಜಯ), 1 ಕಿರಿಯ ಬರೆಹ (ಜೋಗುಳ) ಗಳು ಈ ಜಿಲ್ಲೆಯಲ್ಲಿ ಪ್ರಕಟವಾದವು; 1 ಪದ್ಯಕೃತಿ (ಶ್ರೀರಾಮ ಪಟ್ಟಾಭಿಷೇಕ), 2 ಗದ್ಯಕೃತಿ (ಅದ್ಭುತ ರಾಮಾಯಣ ಮತ್ತು ರಾಮಾಶ್ವಮೇಧ) ಮೈಸೂರಲ್ಲಿ ಅಚ್ಚಾದುವು! ಇನ್ನು ಕೆಲವು ಅಮುದ್ರಿತಗಳ ಹೆಸರು ಮಾತ್ರ ಇದುವರೆಗೆ ಉಳಿದಿವೆಯಲ್ಲದೆ; ಅವುಗಳ ಸಾರಸೂಚನೆ—ಪ್ರಕಟಣೆಗಳಾಗಿಲ್ಲ!

"ಅದ್ಭುತ ರಾಮಾಯಣ"ದ ಹಸ್ತಪ್ರತಿಯು ಮೊದಲ ಪಟದ ಪಡಿಯಚ್ಚು (ಶ್ರೀ ಚಿನ್ನಕೇಶವಯ್ಯಂಗಾರರ ಬಳಿಯಿದ್ದ ಪ್ರತಿಯದು) ಪ್ರಕಟವಾಗಿದೆ. ಆ ಹಸ್ತಪ್ರತಿ ಇತ್ತೀಚಿಗೆ ಸನ್ಮಾನ್ಯ ಶ್ರೀ ಡಿ. ಎಲ್. ನರಸಿಂಹಾಚಾರ್ಯರಲ್ಲಿದೆಯೆಂದು ಪ್ರಶ್ನಿಸಿದಾಗ ನನಗೆ ತಿಳಿದ ವಿಚಾರ: "ಮುದ್ದಣ ಕವಿಯ ಅದ್ಭುತ ರಾಮಾಯಣದ ಹಸ್ತಪ್ರತಿ ನನ್ನ ಬಳಿಯಲ್ಲಿತ್ತು. ಅದನ್ನು ಒಬ್ಬ ಮಿತ್ರರು ಒಯ್ದಿದ್ದಾರೆ. ಅವರು ಯಾವಾಗ ಹಿಂದಿರುಗಿಸುವರೋ ನಾನು ಕಾಣೆ. ಅದರಲ್ಲಿ ಕೆಲವು ಅಧಿಕ ಸಂಖ್ಯೆಯ ಆಶ್ವಾಸಗಳಿರುವಂತೆ ನೆನಪು ಅವು ಒಂದು ಉಪದೇಶಕ್ಕೆ ಸಂಬಂಧಿಸಿದವು. ನೀವು ಸೂಚಿಸಿರುವ ಉಪದೇಶದ ಆಶ್ವಾಸಗಳು ಬಹುಶಃ ಅವೇ ಇರಬಹುದು." (ಕನ್ನಡ ಅದ್ಭುತ ರಾಮಾಯಣದ 10-11 ಆಶ್ವಾಸಗಳ ನಡುವೆ ಸಮುದ್ರಾಂತರ್ಗೆ ಶ್ರೀ ರಾಮನ ದಿವ್ಯೋಪದೇಶ ಸಂಸ್ಕೃತದಲ್ಲಿವೆ, ಅವೇ ಈ ಹಸ್ತಪ್ರತಿಯಲ್ಲಿರಬೇಕೆಂದು ನನ್ನ ಎಣಿಕೆಯಾಗಿದೆ. ಈಗಣ ಮುದ್ರಿತ ಪ್ರತಿಯಲ್ಲಿ ಆ ಭಾಗವಿಲ್ಲ. ಆದ ದರಿಂದ ಈ ಕನ್ನಡ ರೂಪಾಂತರ ಬೇಗನೆ ಮುದ್ರಣವಾದರೆ ಕವಿ ಕೃತಿಗಳ ಪರಿಚಯದೊಂದಿಗೆ, ಸಾಹಿತ್ಯ ಪ್ರಪಂಚಕ್ಕೆ ಉಪಕಾರವಾದೀತು!)

ಪದ್ಯರೂಪದ ಶ್ರೀರಾಮ ಪಟ್ಟಾಭಿಷೇಕವು ಮೂಲದ - ಪದ್ಮ ಪುರಾಣದ ನಾಲ್ಕನೆಯ ಪಾತಾಳ ಖಂಡದ ಕತೆಯ ನಾಲ್ಕು ಅಧ್ಯಾಯಗಳ ಆಧಾರದಿಂದ ಬರೆದುದು, ಇಲ್ಲಿಯು ಕವಿಯು ಜಾಣ್ಮೆ ಹೊಗಳತಕ್ಕದು, ಮೂಲದಲ್ಲಿಲ್ಲದ ಇತರ ಕೃತಿಗಳಲ್ಲಿರುವ—ಹಲವು ವರ್ಣನೆಗಳಿವೆ! ಆ ಮೇಲಿನ 64 ಅಧ್ಯಾಯಗಳ ಮೂಲದ ಕತೆಯು ಜದಿನಾರು ಆಶ್ವಾಸದ ಶ್ರೀ ರಾಮಾಶ್ವಮೇಧದಲ್ಲಿ ಪ್ರತಿಬಿಂಬಿತವಾಗಿದೆ. ಇಲ್ಲಿಯೂ ನಿರೂಪಣವು ಹೊಸತು; ಉಪಾಧ್ಯಾಯನು ಪಾರಾಂತರದಲ್ಲಿ ಪ್ರಶ್ನಿಸಿ ಹಿಂದಿನ ಕತೆಯನ್ನು ಪುನಃ ನಿರೂಪಿಸುವಂತಿದೆ. "ಮುದ್ದಣ"ನು 'ಮನೋರಮೆ' ಯೆಂಬ ಪಾತ್ರವನ್ನು ಕಲ್ಪಿಸಿ, ಕತೆಯ ಬಗೆಗೆ ಬೇರೆಯವರ ಜಿಜ್ಞಾಸೆಗಳಿಗೆ ಉತ್ತರಿಸಿದಂತಿದೆ. ಇದೊಂದು ತರದ ಹಳೆಗನ್ನಡದಿಂದ ಮಿಶ್ರಿತವಾದರೂ ವಾಚಕರಿಗೆ ಕುತೂಹಲಕಾರಿಯಾಗಿದೆ! ಈ ಕವಿಕೃತಿಗಳಲ್ಲಿ ಇದರ ಮೇಲ್ಮೆಯನ್ನು ವಿದ್ವಾಂಸರು ಮುಕ್ತ ಕಂಠದಿಂದ ಹೊಗಳಿದ್ದಾರೆ!

'ಮುದ್ದಣ'ನು ಈ ೩ ಕೃತಿಗಳನ್ನು ನಾಮನಾಶದಿಂದಲೇ ಬರೆದು ಕಳುಹಿಸಿದನು. ಶ್ರೀರಾಮ ಪಟ್ಟಾಭಿಷೇಕವು 'ಮಹಾಲಕ್ಷ್ಮಿ'ಯೆಂಬ ಕನ್ಯೆಡಿತ ಬರೆದುದೆಂದಿದೆ. (ಲಕ್ಷ್ಮಿಯೆಂದರೆ ಕವಿಯು ಊಟಮಾಡುತ್ತಿದ್ದ ಉಸ. ಪಿ ಯ ಹೋಟೆಲಿನ ಮಾಲೀಕನ ಮಗಳ ಹೆಸರೆಂದು ಕೆಲವರು ಊಹಿಸುತ್ತಾರಂತೆ! ಮೈಸೂರು ವಿಶ್ವವಿದ್ಯಾಲಯದ 'ಮುದ್ದಣ' ಪುಸ್ತಕ-ಪಟ 10 ನೋಡಿ ಇವನ ಇತರ ಕೃತಿಗಳಿಗೂ ಇದಕ್ಕೂ ಇರುವ ಸಾಮ್ಯಾದಿಗಳನ್ನು ಪರೀಕ್ಷಿಸಿದರೆ, ಇಂತಹ ಅಪವಾದ ಆದೇನೂ ಸರಿಯಲ್ಲ!) 'ಮುದ್ದಣ'ನೆಂಬ ಹೆಸರು ಈ ಕೃತಿಗಳಿಂದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆಚಂದ್ರಾರ್ಕವಾಗಿ ರಾರಾಜಿಸುತ್ತಿದೆ!

ಪ್ರಜಾರಾಜ್ಯ ದಿನದ ಶುಭಾಶಯಗಳು!

ಧಾರವಾಡದಲ್ಲಿ ನಿಮ್ಮ ನೆಚ್ಚಿನ
ಉಪಾಹಾರ ಗೃಹ—

ಮನೋರಮಾ ಟೀ ಕ್ಲಬ್

ಮಾರ್ಕೆಟ್,
ಧಾರವಾಡ

ಸ್ವಚ್ಛತೆ— ಗ್ರಾಹಕರ ಸೇವೆಗಳಿಂದಾಗಿ
ಜನಪ್ರಿಯತೆ ಗಳಿಸಿದ ಪ್ರಸಿದ್ಧ ಫಲಾಹಾರ ಮಂದಿರ

ಪ್ರೊ! ಕೆ. ಎಂ. ಶೆಟ್ಟಿ

Manorama Tea Club
MARKET,
DHARWAR
Prop: K. M. Shetty

ಪ್ರಜಾರಾಜ್ಯ ದಿನದ ಶುಭಾಶಯಗಳು!

ಶುಚಿ-ರುಚಿಯಾದ ತಿಂಡಿ ಪಾನೀಯಗಳಿಗೆ —
ಆದರದ ಸ್ವಾಗತ-ಸತ್ಕಾರಗಳಿಗೆ —
ಆಧುನಿಕ ಸೇವಾ ಸೌಕರ್ಯಗಳಿಗೆ —

ಸಂದರ್ಶಿಸಿರಿ—

ಹೊಟೆಲ್ ಸತ್ಕಾರ

ನ್ಯೂ ಮಾರ್ಕೆಟ್ ರೋಡು
ಬಿಜಾಪುರ

ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ಪ್ರೊ: ಎಂ. ಕೆ. ಸಾಲಿಯನ್

HOTEL SATKAR
NEW MARKET ROAD
BIJAPUR

ಕಥನ ಕವನ

ದೀವಿಗೆ

ಮುತ್ತಿನಂತಹ ತೆನೆಯು
ಹೊತ್ತು ನಿಂತಿಹ ಬೆಳೆಯು,
ಕಾಯುತಿಹ ಕಡು ಚೆಲುವೆ!
ಹೆಣ್ಣು ಕಂಡು

ದಾರಿ ನಡೆದಿಹ ದಣಿವ
ಮರೆತು ಕಾಮನೆಯಿಂದ
'ನೀರು' ಎಂದಿತು ಕಣ್ಣು
ಮಿಟುಕಿ ಗಂಡು.

ಅರ್ಥ ಗುರುತಿಸಿ ಚಲುವೆ
ಕೆಂಡವಾದಳು ಒಳಗೆ
ದುಷ್ಟ ಬಯಕೆಯ ದುರುಳ
ನೋಟ ಕಂಡು!

ಏಕಾಂಗಿ ತಾನೆಂದು
ಜಾಣ್ಮೆಯಲಿ ಹೇಳಿದಳು
ತನ್ನ ರಕ್ಷಣೆಯನ್ನು
ನೆನೆದು ಕೊಂಡು.

"ಇದ್ದ ನೀರನು ನನ್ನ
ಗಂಡನಾಗಲೇ ಕೊಂಡು
ಮಣ್ಣಕೊಡ ಬಿಟ್ಟಿಹನು
ಇಲ್ಲ ನೀರು

ನೀರಡಿಕೆಯಾದಲ್ಲಿ
ಬಾವಿಯಿದೆ ಸನಿಹದಲಿ
ಇನ್ನಷ್ಟು ನಡೆದಲ್ಲಿ
ಇಹುದು ಊರು!"

ಅವಳ ಮಾತಿಗೆ ಮಾತು
ಬೆಳೆಸುತ್ತ ಅವನೆಂದ
"ನೀರಡಿಸಿ ಸಾಯುತಿಹೆ
ದಯೆಯ ತೋರು!

ಮಣ್ಣಕೊಡ ಕೊಟ್ಟು ಬಿಡು
ಉಪಕಾರವಾಗುವದು;
ಬಾವಿಯಲಿ ಸೇದಿಯೇ
ಕುಡಿವೆ ನೀರ!"

ಧೂರ್ತ ಉತ್ತರ ಕೇಳಿ
ಬೆರಗುಗೊಂಡಳು ಆಕೆ,
ಸುಮ್ಮನಿರೆ ಮೈ ಮೇಲೆ
ಎರಗುವನೆಂದು

"ಹೆರರ ಮನೆಯ ಮಣ್ಣ-
ಕೊಡವು ಬಳಕೆಗೆ ಸಲ್ಲ"
ಹೇಳಿದಳು "ಕೊಡಲಾರೆ
ನನಗೆ ಮುಂದೆ!"

"ಬಳಕೆಗದು ಸಲ್ಲದಿರೆ
ಉಳಿಸಿ ಕೊಳ್ಳುವೆ ಏಕೆ
ಹೇಳದಿರು ಕೊಡುವಿಯೊ
ಬರಲೆ ಬಳಿಗೆ?"

ಹೀಗೆ ಹೇಳುತಲವನು
ಮುಂದೆ ಹೆಜ್ಜೆಯನಿಟ್ಟು,
ಸಂಪೂರ್ಣ ಏತ್ತು
ಅವಳು ತಲೆಗೆ!

"ಹುಚ್ಚು ಹಿಡಿದಿದೆ ಇವಗೆ
ನನ್ನ ರಕ್ಷಣೆ ಹೇಗೆ
ದೇವರೇ ಕಾಪಾಡ
ಬೇಕು ನಿಂತು"

ಮುಂದೆ ಅವ ಬರದಂತೆ
ಮಾತಿಗೆಳೆಯಲು ಬಯಸಿ
ಹೊತ್ತುಗಳೆಯಲು ನಯದಿ
ನುಡಿದಳಿಂತು—

"ಹೆರರ ಮನೆ ಮಣ್ಣ ಕೊಡ
ಬಯಸುವಣ್ಣನೆ ಕೇಳು
ನಿನ್ನ ಮನೆ ಮಣ್ಣ ಕೊಡ
ಕೊಡಬಲ್ಲೆಯಾ?

ಬುದ್ಧಿವಂತನು ನೀನು
ಸುವಿಚಾರವೇ ಜೀವು
'ಪರಹೆಣ್ಣು ಮಹದೇವಿ'
ಎನ್ನಲೊಲ್ಲೆಯಾ?"

ಇಷ್ಟು ಹೇಳಿದರೂನೂ,
ಹೋಗಲಿಲ್ಲತ್ತ ಅವನು,
ಹೇಗಾದರೂ ಬಳಿಗೆ
ಕೆಡುಹಲೆಂದು;

ಚಲುವಿಕೆಯ ಹೊಗಳಲಿಕೆ
ಆಮಿಷವ ತೋರಲಿಕೆ
ಆರಂಭ ಮಾಡಿದನು
ನಗುತ ನಿಂದು!

"ಉಪದೇಶ ಗಿಪದೇಶ
ಕೇಳಲಿಕೆ ಹೇಳಲಿಕೆ
ನನಗೂ ನಿನಗೂ ಈಗ
ಕಾಲವಲ್ಲ;

ಮೇನಕೆಯು ಕುಣಿವಾಗ
ಬ್ರಹ್ಮರ್ಷಿಯೋಗವನ
ಮನಸೋತ ವಿಷಯವನು
ಮರೆತೆಯಲ್ಲ!

ಮುಚ್ಚು ಮರೆ ಏಕಿನ್ನು
ಹುಚ್ಚು ಹಿಡಿಸಿಹೆ ನೀನು
ಬಿಟ್ಟು ಬಾಳೆನು ನಾನು
ನಿನ್ನ ಮರೆತು!

ಚೆಲುವಿನರಗಿಣಿ ನೀನು
ಹೊಲವ ಕಾಯುವದೇಕೆ?
ರಾಣಿಯಾಗಿರ ಬಾರೆ,
ನನ್ನ ಬೆರೆತು!"

ಕೆಂಡವಾದಳು ಆಕೆ
ಹೇಳಿದಳು ಸಿಡಿದೆದ್ದು
ಬಂದ ಸಂಕಟ ಬರಲಿ
ಎಂದು ಕೊಂಡು.

"ಅವಿವೇಕಿ ನಾನಲ್ಲ
ನಡೆಗೆಡೆನು ನಿನ್ನಂಥ-
ಎಂಜಲುಣ್ಣುವ ನಾಯಿ
ನಂಬಿಕೊಂಡು.

ಸುಮ್ಮನೇ ಕಡೆ ಹೋಗು
ಬೆಳೆಸದಿರು ಮಾತನ್ನು
ಗಂಡ ಬರುವನು ಇನ್ನು
ಕಾಲ ಕಿತ್ತು!

ನಿನ್ನ ನಡತೆಯ ರೀತಿ
ತಿದ್ದಿಕೋ ಇಲ್ಲದಿರೆ
ಕಡಿಸಿಕೊಂಡೇ ಸಾಯ್ವೆ
ಕಾಲು; ಕತ್ತು?"

ಅವಳ ಮಾತಿನ ಕೆಚ್ಚು
ಕೇಳಿ ಇಳಿಯಿತು ಹುಚ್ಚು;
ತನ್ನ ದೌರ್ಜನ್ಯಕ್ಕೆ
ನಾಚಿಕೊಂಡ!

"ಇಂಥ ಕುಲ ನಾರಿಯರು
ಇರುವರೆಂದೇ ಸಾಧ್ಯ
ಬೈಗು ಬೆಳಗಾಗುತಿವೆ"
ಎಂದು ಕೊಂಡ

ತಂಗಿ ನನ್ನನ್ನು ಕ್ಷಮಿಸು
ಕಣ್ಣು ತೆರೆಸಿದೆ ನೀನು"
ಎಂದು ಅವಳಲಿ ಕ್ಷಮೆಯ
ಬೇಡಿಕೊಂಡ!

ಅಷ್ಟರಲಿ ಸನಿಹದಲಿ
ಕೊಡಲಿ ಹಿಡಿದಿಹ ಗಂಡು
ಬರುವವನ ಮನಗಂಡು
ಅಂಜಿಕೊಂಡ

ಕೊಡಲಿ ಹಿಡಿದಿಹ ಗಂಡು
ಇವನ ಹತ್ತಿರ ಬಂದು
ಗುರುತು ಹತ್ತಲು ಬೆನ್ನು
ತಟ್ಟನೆಂದ

"ಯಾವಾಗ ಬಂದಿಹಿರಿ
ಅಳಿಯ ದೇವರೇ ನೀವು
ದಾರಿ ಸಿಕ್ಕಿತೆ ನಮ್ಮ
ಊರಿ"ಗೆಂದ!

"ಏ ಹೆಣ್ಣೆ ನೋಡಿವನು
ನಮ್ಮ ಅಕ್ಕನ ಮಗನು
ಮೊದಲ ಸಲ ಬಂದಿಹನು
ಬಲ್ಲೆ ಏನು?

ನಡೆ ಬೇಗ ಮನೆಗೀಗ
ಅವ್ವನಿಗೆ ಹೇಳಿಬಿಡು
ತಿಮ್ಮಣ್ಣ ಬಂದಿರುವ
ವಾರ್ತೆ ಜೇನು!"

ಆ ಮಾತಿಗವನೆಂದ
"ಮುಂದೆ ಕಳಿಸುವದೇಕೆ
ಒಟ್ಟಾಗಿ ಹೋಗೋಣ
ಮಾತಾಡುತ"

ಆ ವೇಳೆ ಅವರ ಜೊತೆ
ಆಡುತ್ತ ಮಾತುಕತೆ
ಸಾಗಿದಳು ಚಿಂತೆಯಲಿ
ಜೋತಾಡುತ!

"ದುಡುಕಿದ್ದರೀ ಹೊತ್ತು
ಅಧರ್ಮಕಾಸ್ಪದವಿತ್ತು!
ಎಂದು ಕೊಂಡನು ತನ್ನ
'ಬಲೆ'ಯುಳಿಯಲು!

ತಂಗಿ ಹೇಳಿದ ಹಾಗೆ
ತಿದ್ದಿಕೊಳ್ಳಲೇಬೇಕು
ನೀತಿಯೇ ದೀವಿಗೆಯು
ಬಾಳ್—ಬೆಳಗಲು!

—ಜಿ. ಎಸ್. ಅನ್ನದಾನಿ

With best compliments from

T. S. ALVA

JEEVAN CAFE

MARKET ROAD

DHARWAR

ಧಾರವಾಡದಲ್ಲಿ
ಸಕಲ ಸೌಕರ್ಯಗಳಿಂದೊಡಗೂಡಿರುವ
ಆಧುನಿಕ ಮಾದರಿಯ
ಮಾಂಸಾಹಾರಿ ಭೋಜನ
ಹಾಗೂ ವಸತಿ ಮಂದಿರ—

ಜೀವನ ಕೆಫೆ

ಮಾರ್ಕೆಟ್ ರಸ್ತೆ

ಧಾರವಾಡ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು—4

With best compliments from

HOTEL SUDHA

Phone No. 287

BAGALKOT

ಕಳೆದ ೫೦ ವರುಷಗಳಿಂದ
ಕರ್ನಾಟಕದ ಏಕಮೇವಾದ್ವಿತೀಯ ಉಕ್ಕಿನ
ಸಾಮಾನುಗಳ ತಯಾರಕರು

ಸಿದ್ಧೇಶ್ವರ ಮತ್ತು ಕಂಪನಿ (ಹುಬ್ಬಳ್ಳಿ) ಪ್ರಾ. ಲಿ.

ಸಿದ್ಧೇಶ್ವರ ನಗರ - - - ಹುಬ್ಬಳ್ಳಿ

ನಮ್ಮಲ್ಲಿ ಆಫೀಸು ಅಥವಾ ಮನೆಗಳಿಗೆ ಬೇಕಾಗುವ ಉಕ್ಕಿನ ಪಲ್ಲಂಗ, ಕುರ್ಚಿ ಮೇಜುಗಳು ಕಪಾಟುಗಳು, ತಿಜೋರಿಗಳು, ಬೇಂಕುಗಳಿಗೆ ಬೇಕಾಗುವ ಸ್ಟ್ರಾಂಗ ರೂಮ ಡೋರ್ಸ್, ಸೇಫ್ ಡಿಪಾಜಿಟ್ ಲಾಕರ್ಸ್, ಕ್ಯಾಶ್ ಬಾಕ್ಸಗಳು, ಲಾಯಬ್ರರಿಗಳಿಗೆ ಬೇಕಾಗುವ ಆಧುನಿಕ ಸಲಕರಣೆಗಳು, ಅಲ್ಲದೇ ರೋಲಿಂಗ ಶಟರ್ಸ್, ಗ್ರಿಲ್ ಶಟರ್ಸ್, ಕೊಲಾಪ್ಸಿಬಲ್ ಗೇಟ್ಸ್ ಮುಂತಾದ ಎಲ್ಲ ಉಕ್ಕಿನ ಸಾಮಾನುಗಳು ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ತಯಾರಾಗುತ್ತವೆ.

ಭದ್ರತೆಯ ಹೆಗ್ಗುರುತು "ಸಿದ್ಧೇಶ್ವರ"

"ಉಕ್ಕಿನ ತಗಡುಗಳ ಕೊರತೆಯ ಮೂಲಕ ನಮ್ಮ ತಯಾರಿಕೆಗಳು ಮಿತವಾಗಿರುತ್ತವೆ."

ಮ॥ ಗಾಂಧೀ ಜನ್ಮಶತಾಬ್ದಿಯ ಮಹತ್ವ

(ಒಂಭತ್ತನೇ ಪುಟದಿಂದ)

ರುವ ಖಾನ್ ಅಬ್ದುಲ್ ಗಫಾರ್ ಖಾನ್ ಅವರು ಅದನ್ನುಪಯೋಗಿಸಿ—ಯುದ್ಧಪ್ರಿಯರೂ—ಶೌರ್ಯಪ್ರಧಾನ ಚಿತ್ತವೃತ್ತಿಯವರೂ ಆದ ತಮ್ಮ ಅಫ್ಘಾನ್ ಜನತೆಯನ್ನು ಸಾತ್ವಿಕರನ್ನಾಗಿಸಿದರೆಂದರೆ ಅದಕ್ಕಿಂತಲೂ ಹೆಚ್ಚಿನ ವಿಜಯ ಮತ್ತೊಂದಿಲ್ಲ.

ಹೀಗೆ ಅಹಿಂಸಾ ಧರ್ಮವನ್ನು ಯಶಸ್ವಿಯಾಗಿ ಪ್ರಯೋಗಿಸಿಕೊಟ್ಟು ವಿಜಯ ಗಳಿಸಿದ ಮಹಾತ್ಮಾಜೀ ಅವರ ಜನ್ಮ ಶತಾಬ್ದಿಯ ಈ ಸಂವತ್ಸರದಲ್ಲಿ ಅವರ ಈ ತತ್ವ, ಅವರ ಅನುಯಾಯಿಗಳಿಂದ ಪ್ರತಿಷ್ಠಿತವಾಗಿರುವ ರಾಜ್ಯಭಾರದಲ್ಲಿ ಎಷ್ಟು ಮಟ್ಟಿಗೆ ಭ್ರಷ್ಟತೆಗೀಡಾಗಿದೆ ಎಂದು ಯೋಚಿಸುವುದೇ ಹೃದಯ ವಿದ್ರಾವಕ ವಿಚಾರ. ಅವರಿಂದ ಗಳಿಸಲ್ಪಟ್ಟ ಸ್ವರಾಜ್ಯದ ರಾಜನೀತಿಯನ್ನನುಸರಿಸಿ, ಜಾತ್ಯತೀತ ತತ್ವೋದ್ದೇಶವನ್ನು ವಹಿಸಿದ ಈ ರಾಜ್ಯದಲ್ಲಿ ಪರದೇಶೀ ವಿನಿಮಯಗಳಿಗಾಗಿ ಸಹಸ್ರಾರು ಲಕ್ಷಾಂತರ ಕಪಿಗಳ—ಕಪ್ಪೆಗಳ ಅಂಗಗಳನ್ನು ವಿದೇಶೀ ವೈದ್ಯ ಸಂಶೋಧನ ಸೌಕರ್ಯಕ್ಕಾಗಿ ಒದಗಿಸುವ ಕಾರ್ಯವೊಂದು ಕಡೆ. ಚರ್ಮ ವ್ಯಾಪಾರದಿಂದ ದೊರಕುವ ಲಕ್ಷಾಂತರ ದ್ರವ್ಯ ವಿನಿಮಯಕ್ಕಾಗಿಯೂ, ಈಸಾಯಿ ಇಸ್ಲಾಂ ಜನತೆಯ ಸಂತುಷ್ಟಿಗಾಗಿಯೂ—ಮಟ್ಟ ಮರೆಯೇ—ಭೋಗೇಚ್ಛುಗಳಾದ ಸ್ವದೇಶೀಯರ ನಾಲಿಗೆಯ ರುಚಿಗಾಗಿಯೂ, ಕುರಿ ಮೇಕೆ ಕೋಳಿ ಮತ್ತು ಗೋವುಗಳ ಲಕ್ಷಾಂತರ ಸಂಖ್ಯೆಯ ವಧಾಕಾರ್ಯಕ್ಕಾಗಿ ವಧಾಲಯಗಳನ್ನು ನಿರ್ಮಿಸಿ-ಸರ್ಕಾರದ ಮೇಲ್ವಿಚಾರಣೆಯಲ್ಲಿ ನಡೆಸುತ್ತಿರುವ ವ್ಯವಸ್ಥಿತ ಕಾರ್ಯಕ್ರಮ ಒಂದು ಕಡೆ. ಹೀಗೆ ಜಾತ್ಯತೀತ ಭಾರತ ನಿವಾಸಿಯು ಇಂದು ಮನುಷ್ಯೇತರ ಸಕಲ ಪ್ರಾಣಿಗಳನ್ನೂ ಕೊಂದು ತಿನ್ನಲು ಹೇಸದೆ—ಆದರೂ ಜಗತ್ತಿಗೆ ಅಹಿಂಸಾ ಧರ್ಮ ಪ್ರವಾದಿಯಾದ ಮಹಾತ್ಮ ಗಾಂಧಿಯವರ ಜಾತ್ರೆಯನ್ನು ಒದಗಿಸುವವನಾಗಿದ್ದಾನೆ.

ಗೋಪಾಲಕೃಷ್ಣನ ನಾಡಾದ ಈ ಭಾರತದಲ್ಲಿ ಗೋವಧೆಯನ್ನು ರಾಷ್ಟ್ರ ಶಾಸನದ ಮೂಲಕ ತಡೆಗಟ್ಟಬೇಕೆಂಬ ಆಂದೋಲನವನ್ನು ಪ್ರಾರಂಭಿಸಿದ ಸಾಧು ಸಂತರೂ, ಮುನಿಗಳೂ, ಲಕ್ಷಾಂತರ ಮಂದಿ ಗೋವಧಾ ನಿರೋಧಿಗಳೂ ಸರ್ಕಾರದ ಸೆರೆಮನೆಗಳಲ್ಲಿ ವಿವಿಧ ರೀತಿಯ ಹಿಂಸೆಗಳಿಗೀಡಾಗಿ ತಪಿಸಿದರಾದರೂ— ಇನ್ನೂ ಆ ಪ್ರಶ್ನೆ ಇತ್ಯರ್ಥವಾಗದೆ ಹಾಗೆಯೇ ಉಳಿದಿದೆ. ಮಹಾತ್ಮಾ ಗಾಂಧಿಯವರೂ, ಲೋಕಮಾನ್ಯ ತಿಲಕರೂ, ಮಹಾಮನಾ ಮದನಮೋಹನ ಮಾಳವೀಯರೂ, ಸ್ವರಾಜ್ಯ ಪ್ರಾಪ್ತವಾದೊಡನೆಯೇ ಗೋವಧೆಯನ್ನು ತಡೆಗಟ್ಟುವುದು ನಮ್ಮ ಪ್ರಥಮ ಕರ್ತವ್ಯ ಎಂದು ಅಭಿವಚನವಿತ್ತಿದ್ದುದು— ಇಂದಿನ ರಾಜ್ಯಕಾರಭಾರ ವಾಹಕರಿಗೆ ಎಂದೋ ಮರೆತು ಹೋಗಿ— ನಮ್ಮ ಸಹಜೀವಿಗಳಾದ ಈಸಾಯಿ—ಇಸ್ಲಾಂ ಜನತೆಗೆ ತುಷ್ಟಿ-ಪುಷ್ಟಿಕರವಾದ ಆಹಾರ ಪದಾರ್ಥವನ್ನು ಒದಗಿಸುವುದ-ಜಾತ್ಯತೀತ ರಾಷ್ಟ್ರವಾದ ಭಾರತದ ಪ್ರಥಮ ಕರ್ತವ್ಯ ಎಂಬ ನಿಷ್ಠೆ—ಅವರಲ್ಲಿ ಮೂಡಿದೆಯಲ್ಲ, ಇದಕ್ಕಿಂತ ದುರದೃಷ್ಟಕರ ವಿಚಾರವ್ಯಾವುದು? ಗಾಂಧೀಜಿಯವರು ಗೋಕ್ಷೀರವು—ಅದರ ರಕ್ತಮಾಂಸಾದಿಗಳ ಉತ್ಪನ್ನವೆಂಬ ಭಾವನೆಯಿಂದ ಅದನ್ನು ಸ್ವೀಕರಿಸದೆ ಮೇಕೆಯ ಹಾಲನ್ನು ಕುಡಿಯುತ್ತಿದ್ದರಂತೆ. ಹೀಗಿರುವಲ್ಲಿ ಅಷ್ಟು ತತ್ವನಿಷ್ಠ ಮನೋಭಾವದಿಂದ ಅಹಿಂಸಾ ಧರ್ಮವನ್ನು ಪಾಲಿಸಿದ್ದ ಮಹಾತ್ಮರ ನಾಡಿನಲ್ಲಿ ನಡೆಯುತ್ತಿರುವ ಪಶು ಮೃಗ ಪಕ್ಷ್ಯಾದಿಗಳ ಅಗಾಧ ಹಿಂಸಾಕಾರ್ಯ ಅವರ ಈ ಶತಾಬ್ದಿ ಸಂವತ್ಸರದಲ್ಲಿ ಉಚಿತವೆನ್ನಿಸೀತೆ?

ಗಾಂಧಿಜೀ ಅವರಿಗೆ ಮನಸಾ ವಾಚಾ ಕರ್ಮಣಾ—ಸತ್ಯಪಾಲನೆ, ಅಹಿಂಸಾ ಧರ್ಮದಷ್ಟೇ ಮುಖ್ಯವಾದುದೆನ್ನಿಸಿತ್ತು. ಅವರ ಆತ್ಮಾಚರಣೆಯಲ್ಲಿ ಈ ತತ್ವಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದುದರಿಂದಲೇ ಅವರನ್ನು ಪ್ರತಿಭಟಿಸುವುದು, ಬ್ರಿಟಿಷ ಪ್ರಭುತ್ವದ ಅಧಿಕಾರಿ ವರ್ಗಕ್ಕೂ ಸಾಧ್ಯವಿರಲಿಲ್ಲ. ಆದರೆ, ಇಂದಿನ ಆಡಳಿತ ವೈಖರಿಯಲ್ಲಿ ವಂಚನೆ, ಲಂಚ, ಮೋಸಗಾರಿಕೆಗಳು, ದಬ್ಬಾಳಿಕೆ, ಮಾನವ ಹಕ್ಕುಗಳ ನಿರ್ಮೂಲನ ಇವುಗಳೆಲ್ಲ ಸ್ವೇಚ್ಛೆಯಿಂದ ನಡೆಯುತ್ತಿದ್ದರೂ ಕೇಳುವವರೇ ಇಲ್ಲದಂತಾಗಿದೆಯಲ್ಲಾ—ಇದು ಈ ಶತಾಬ್ದಿಯ ಮಹೋತ್ಸವಕ್ಕೆ ಶೋಭಿಸುವುದೇ?

ಗಾಂಧಿಜೀ ಅವರು, ಅಧಿಕಾರ ಮೋಹ, ಐಶ್ವರ್ಯದ ಗಳಿಕೆ, ವಸ್ತ್ರಾಭರಣಾದಿಗಳ ಆಡಂಬರ, ಇವುಗಳನ್ನೆಲ್ಲ ತಡೆಗಟ್ಟುವುದಕ್ಕಾಗಿಯೇ, ಸ್ವರಾಜ್ಯ ಪ್ರಾಪ್ತವಾದೊಡನೆಯೇ ಕಾಂಗ್ರೆಸ್ ಸಂಸ್ಥೆಯು ತನ್ನ ರಾಜಕೀಯ ಧೋರಣೆಯನ್ನು ಬದಿಗಿಟ್ಟು ಲೋಕಸೇವಾ ಸಂಸ್ಥೆಯಾಗಲಿ ಎಂದು ಅಪೇಕ್ಷಿಸಿದ್ದರು ಆದರೆ ಅಧಿಕಾರಾಕಾಂಕ್ಷಿಗಳಾದ ಅವರ ಅನುಯಾಯಿಗಳಿಗೆ ಅದು ಸೂಕ್ತವೆನ್ನಿಸಲಿಲ್ಲ. ಹೀಗಾಗಿ ನಾಲ್ಕೈದು ರಾಜ್ಯಗಳಲ್ಲಿ ಬಹುಮತವನ್ನು ಕಳೆದು ಕೊಂಡರೂ, ಖಾದೀ ವಸ್ತ್ರಧಾರೀ ಕಾಂಗ್ರೆಸ್ಸಿಗರು—ಕೇಂದ್ರದಲ್ಲೂ ಮಿಕ್ಕ ಹಲವು ರಾಜ್ಯಗಳಲ್ಲೂ ಅಧಿಕಾರ ಗದ್ದುಗೆಗಳಿಗೆ ಅಂಟಿಕೊಂಡೇ ಉಳಿದರು, ಆದರೆ ಅವರ ನಿರೀಕ್ಷಣೆಯಂತೆ ಕಾಂಗ್ರೆಸ್ಸಿನಲ್ಲಿ ಭ್ರಷ್ಟಾಚಾರವೆಂಬುದು ಮೇರೆ ಮೀರಿ ಅದು ಎರಡಾಗಿ ಒಡೆದು ಹೋಗುವಂತಹ ಪರಿಸ್ಥಿತಿಯೂ—ಇದೇ ಅವರ ಶತಾಬ್ದಿಯ ಈ ಸಂವತ್ಸರದಲ್ಲೇ ಸಂಭವಿಸಿದುದು ಪರಮ ಶೋಚನೀಯ. ಈಗಲಾದರೂ ಮೂಲ ಕಾಂಗ್ರೆಸ್ ಸಂಸ್ಥೆಗೆ ನಿಷ್ಠರಾಗಿ ಉಳಿದಿರುವ ಕಾಂಗ್ರೆಸ್ ಭಕ್ತರು, ಮಹಾತ್ಮಾ ಗಾಂಧಿಯವರ ಪವಿತ್ರ ತತ್ವಗಳ ಪಾಲನೆಯಲ್ಲಿ ಶ್ರದ್ಧಾ ವಿಶ್ವಾಸಗಳನ್ನಿಟ್ಟು ಶ್ರಮಿಸುವರೇ ಎಂದು ಕಾದು ನೋಡಬೇಕಾಗಿದೆ.

ಸ್ವರಾಜ್ಯ ಪ್ರಾಪ್ತಿಯ ಕಾಲದಲ್ಲಿ ಹಿಂದೂಸ್ಥಾನ — ಪಾಕಿಸ್ಥಾನಗಳೆಂದು ವಿಭಾಗವಾಗಿ, ಮುಹಮ್ಮದೀಯರಿಗೆ ಅವರ ಧರ್ಮಾನುಸಾರವಾಗಿ ನಡೆಯಲು ಪ್ರತ್ಯೇಕ ರಾಜ್ಯವೇ ಕೊಡಲ್ಪಟ್ಟಿತಾದರೂ, ಭಾರತದಲ್ಲುಳಿದ ಮುಹಮ್ಮದೀಯ ಮತಸ್ಥರು ಭಾರತ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಅವರ ಮನಸ್ಸು ಪಾಕಿಸ್ಥಾನದತ್ತಲೇ ವಾಲುತ್ತಿದೆ. ಹಿಂದೂಸ್ಥಾನದಲ್ಲಿ ಹುಟ್ಟಿ-ಬೆಳೆದು-ಇದರ ಆಶ್ರಯದಲ್ಲೇ ಜೀವಿಸುತ್ತಿರುವರಾದರೂ ಇದನ್ನು ಮಲತಾಯಿಯ ಭಾವನೆಯಿಂದ ಕಾಣುತ್ತ-ಪಕ್ಷಪಾತ ದೃಷ್ಟಿಯುಳ್ಳವರಾಗಿ ಸ್ವಲ್ಪ ಅವಕಾಶ ದೊರೆತರೂ ಸಹವಾಸಿಗಳಾದ ಹಿಂದೂಗಳನ್ನು ಲೂಟಿ-ಬೆಂಕಿ-ಚೂರಿ, ಇರಿತಗಳಿಂದ ಬೆದರಿಸಿ-ಕೊಲೆ ಸುಲಿಗೆಗಳಿಗೇ ಸಿದ್ಧವಾಗಿರುವ ಪರಿಸ್ಥಿತಿ ನಿತ್ಯದ ಅನುಭವವಾಗಿದೆ.

ಮಹಾತ್ಮಾಜೀ ಅವರು ಈ ಮಹಾರಾಷ್ಟ್ರದ ಎರಡು ಮುಖ್ಯ ಜನಾಂಗಗಳಾದ ಹಿಂದೂ ಮತ್ತು ಮುಹಮ್ಮದೀಯರು ಒಗ್ಗಟ್ಟಾಗಿ ಒಮ್ಮನಸ್ಸಿನಿಂದ ಜೀವಿಸುವಂತಾದರೇನೇ ದೇಶದಲ್ಲಿ ಶಾಂತಿ ನೆಲೆಗೊಂಡೀತು-ಎಂದು ಕಾಣುತ್ತಿದ್ದ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ಅವರ ಜನ್ಮ ಶತಾಬ್ದಿಯ ಈ ಸಂವತ್ಸರದಲ್ಲೇ ಅವರ ಜನ್ಮ ಸ್ಥಳವೂ—ವಾಸಸ್ಥಳವೂ ಆಗಿದ್ದ ಗುಜರಾತ ದೇಶದಲ್ಲೇ ಅದ್ಭುತ ಮತೀಯ ಕಲಹ—ದೊಂಬಿ—ಅಗ್ನಿಕಾಂಡ, ನರಹತ್ಯೆಗಳು ನಡೆದುದು ಪರಮ ಶೋಚನೀಯ ವಿಚಾರ—ಇಷ್ಟಾದರೂ ಸರ್ಕಾರದವರು—ಮತೀಯ ಕಲಹಗಳಿಗೆ ಪ್ರೋತ್ಸಾಹ ನೀಡುವ ದುಷ್ಟ ಜನಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಕಂಡು ಹಿಡಿದು ಶಿಕ್ಷಿಸಿ ಅಡಗಿಸದೆ ಇನ್ನೂ ಅಲ್ಪಸಂಖ್ಯಾಕರೆಂಬ ಕಾರಣವನ್ನೇ ಮುಂದಿಟ್ಟುಕೊಂಡು ಪುಂಡ ಜನತೆಗೆ ಪ್ರೋತ್ಸಾಹವಾಗುವಂತೆ ವರ್ತಿಸುತ್ತಿರುವುದನ್ನು ಯಾವ ರೀತಿಯಿಂದ ಸಮರ್ಥಿಸಬೇಕೋ ತೋರದಾಗಿದೆ.

ಮಹಾತ್ಮಾ ಗಾಂಧಿಯವರು, ನಮ್ಮ ನಾಡಿನವರು—ನಮ್ಮಲ್ಲೇ ಒಬ್ಬರಾಗಿ ಜನಿಸಿ—ಜಗತ್ತಿಗೇ ಮಹೋನ್ನತ ವ್ಯಕ್ತಿಯೆನ್ನಿಸಿಕೊಂಡು ಜಗತ್ತಿನ ಸಕಲ ದೇಶೀಯರಿಂದಲೂ "ಮಹಾತ್ಮಾ" ಎಂದು ಸಂಬೋಧಿತರಾದರು ಎಂಬುದೊಂದು ಮಹತ್ವಕ್ಕಾಗಿ ಈ ದೇಶದ ಹಿಂದೂ ಜನತೆ ಹೆಮ್ಮೆಗೊಳ್ಳಬಹುದಾಗಿದೆ. ಅವರು ಜೀವಾವಧಿ ಉಪವಾಸ—ಸೆರೆವಾಸ ಮುಂತಾದ ಅನೇಕ ಬಗೆಯ ಕಷ್ಟ ನಿಷ್ಠುರಗಳ ಪಾಲಾಗಿ ಗಳಿಸಿಕೊಟ್ಟ ಸ್ವರಾಜ್ಯದಲ್ಲಿ ಅಧಿಕಾರ ಸ್ಥಾನಗಳನ್ನು ವಹಿಸಿ, ಸುಖ ಸಂತೋಷಗಳಲ್ಲೂ ಅರಮನೆ ಸಿರಿವಂತಿಕೆಗಳಲ್ಲೂ ಮೆರೆಯುತ್ತಿರುವ ಮಹನೀಯರು ಈ ಇಪ್ಪತ್ತೆರಡು ವರ್ಷಗಳಲ್ಲಿ ಪಡೆದ ಅನುಭವದಿಂದಲಾದರೂ, ಜಾಗೃತರಾಗಿ—ಮಹಾತ್ಮರ ಜೀವನ ಧ್ಯೇಯವೇನಿತ್ತೆಂಬುದನ್ನು ಲಕ್ಷ್ಯಕ್ಕೆ ತಂದುಕೊಂಡು ಜನ್ಮ ಶತಾಬ್ದಿಯ ಈ ಪರ್ವಕಾಲವು ಅಂತ್ಯವಾಗುವುದರೊಳಗಾಗಿಯಾದರೂ, ಅವರ ತತ್ವಗಳನ್ನು ಯಥಾನು ಶಕ್ತಿ ಆಚರಣೆಯಲ್ಲಿ ತರುವ ಸಂಕಲ್ಪ ಮಾಡಿದರಾದರೆ ಅದೊಂದು ಸಾರ್ಥಕ ಕಾರ್ಯವಾದೀತು. ಮಹಾತ್ಮರು ಮೆಚ್ಚಿ ಆಶೀರ್ವದಿಸುವ ಉತ್ತಮ ಕಾರ್ಯವಾದೀತು.!

WITH THE BEST COMPLIMENTS FROM

NORTON & CO., (Spartan Type Foundry)

CHOOLAI :: MADRAS-7.

WITH BEST COMPLIMENTS OF :-

MANDYA EXHIBITORS
ENTERTAINMENT CENTRES OF THE TOWN.

When at *Mandya* Please visit:-

THEATRE SANJAYA.
NANDA PICTURE HOUSE.
GIRIJA PICTURE PALACE.

H· C· CHANNIAH· M· K· PAPIAH·

FOR GLAMOUR & EMBELLISHMENT,

Sole Agents For:

MAFATLAL GROUP OF MILLS
TATA MILLS, MODI AND VINAR TERYLENES AND
GUARANTEED PURE SILK SAREES IN
DHARMAVARAM KANCHEEPURAM ARNI AND BANGALORE SILKS.

[illegible]:

Well Known Calico netting, Readymade nets,
Coats stitching and Anchor embroidery threads.

Please remember that we are at your Service

SRI LAKSHMI VILAS

Telephone No –
Shop— 207
Residence – 287

TEXTILE SHOW ROOM
MANDYA
(MYSORE STATE)

Proprietors :
A. Sheenappa & Sons

ಶ್ರೀ ಲಕ್ಷ್ಮೀ ವಿಲಾಸ

[illegible] ಜವಳಿ ಅಂಗಡಿ, ಮಂಡ್ಯ.

ಪ್ರಜಾಪ್ರಭುತ್ವ – ಮನೋಪ್ರಭುತ್ವ

(ಏಳನೇ ಪುಟದಿಂದ)

ಈಗ ಅದು ಸಾಧ್ಯ ಅದಕ್ಕೆ, ಪರಮಾಣುವನ್ನೊಡೆಯಲು ಸಾಧ್ಯವಿಲ್ಲವೆನ್ನುತ್ತಾರೆ. ಇತ್ತೀಚೆಗೆ ಅದೂ ಸಾಧ್ಯವೆನ್ನುತ್ತಿದ್ದಾರೆ–ವಿಜ್ಞಾನಿಗಳು. ರಾಜಕೀಯ ಶಾಸ್ತ್ರಜ್ಞರೂ ಹಾಗೇನೇ. ಹಿಂದೆ ಒಂದು ದೇಶದ ಜನರನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲವೆನ್ನಲಾಗುತ್ತಿತ್ತು. ಅದು ಸಾಧ್ಯ, ಆದರೆ ಪಕ್ಷದ ಜನರನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲವೆನ್ನುತ್ತಿದ್ದರು. ಈಗ ಅದೂ ಸಾಧ್ಯವೆನ್ನುತ್ತಾರೆ. ಅದಕ್ಕೆ ಕಮ್ಯುನಿಸ್ಟ್ ಹಾಗೂ ಕಾಂಗ್ರೆಸ್ಸ್ ಪಕ್ಷಗಳೇ ಜೀವಂತ ಉದಾಹರಣೆಗಳು. ಕಾಂಗ್ರೆಸ್ ಕಾಲು ಸಾಗುತ್ತಿರುವ ರೀತಿಯನ್ನು ಕಂಡು ಹೇಸಿ ರೋಸಿ ಹೋದವರೂ, ರೋಸಿ ಹೇಸಿಹೋದವರೂ ಬೇರೆ ಬೇರೆ ಪಕ್ಷ–ಪಾರ್ಟಿಗಳನ್ನು ಕಟ್ಟಿಕೊಳ್ಳುತ್ತಿದ್ದ ಕಾಲ ಇಂದು ಬದಲಾಗಿ ಅಲ್ಲೇನಿಂತು ತಾನೇ ಕಾಂಗ್ರೆಸ್ಸನ್ನು ವ ಕಾಲಬಂದಿದೆ. ಅದೇ ರೀತಿ ಕಾಂಗ್ರೆಸ್ಸಿನೊಳಗಿನ ಅಧಿಕಾರದ ನೊಗವನ್ನು ಒಗ್ಗದವರು ಅದನ್ನು ತಪ್ಪಿಸಿಕೊಂಡು ಹೊರ ಬಂದು ಬ್ಲಾಕ್, ಪಾರ್ಟಿ ವಗೈರೆಗಳನ್ನು ಕಟ್ಟಿಕೊಳ್ಳುತ್ತಿದ್ದ ಅಧಿಕಾರಶಾಹಿ ಇಂದು ತಡೆ ಬಂದು ಅವರೂ ಅಲ್ಲೇ ನಿಂತು ತಾನೇ ಕಾಂಗ್ರೆಸ್ಸನ್ನುವ ಕಾಲ ಬಂದಿದೆ. ಸುಭಾಷ್ ಬಾಬು, ಪುರುಷೋತ್ತಮದಾಸ್ ಟಂಡನ್, ಆಚಾರ್ಯ ಕೃಪಲಾನಿ ಮುಂತಾದವರು ಮುಗ್ಗರಿಸಿದಲ್ಲಿ ನಿಜಲಿಂಗಪ್ಪನವರಿಂದು ಸುಮ್ಮನೆ ನಿಂತು ಕೊಂಡಿದ್ದಾರೆ! ಇದು ಪ್ರಜಾಪ್ರಭುತ್ವ ಇದೆ; ಅಧಿಕಾರ ಪ್ರಭುತ್ವ ಅಲ್ಲವೆಂದವರು ದಿಟ್ಟವಾಗಿ ತೋರಿಸುತ್ತಿದ್ದಾರೆ.

ಪಕ್ಷಾಂತರಕ್ಕೂ, ಪಕ್ಷವಿಪಕ್ಷ ಸ್ಥಾಪನೆಗೂ, ಪಕ್ಷಪ್ರಮುಖರನ್ನು ಪಾತಾಳಕ್ಕೆ ತಳ್ಳಲೂ ಮನಸ್ಸಾಕ್ಷಿಯೇ ಕಾರಣವೆನ್ನಲಾಗುತ್ತಿದೆ. ಕೃಪಲಾನಿಯೇ ಆಗಲೀ ರಾಜಾಜಿಯೇ ಆಗಲೀ ಅದೇ ಕಾರಣವನ್ನು ಹೇಳುತ್ತಾರೆ. ಅದೇ ಕೊಳದಿಂದ ಬಂದಿರುವ ಇಂದಿರ ಕೂಡಾ ಅದೇ ಕಾರಣವನ್ನು ಕೊಡುತ್ತಿದ್ದಾರೆ. ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ತಾವು ಪಕ್ಷದ ಅಭ್ಯರ್ಥಿ ಸಂಜೀವ ರೆಡ್ಡಿಯವರಿಗೆ ಮತದಾನ ಮಾಡುವುದಿಲ್ಲವೆಂದು ಅವರು ಖಂಡಿತವಾಗಿ ಹೇಳಿ ಅದರಂತೆ ವರ್ತಿಸಿದರು. ಸಂಜೀವರೆಡ್ಡಿಯವರ ನಾಮಪತ್ರಕ್ಕೆ ತಾನು ಸಹಿ ಹಾಕಿಲ್ಲವೆಂದು ಅವರನ್ನೂ ಅಲ್ಲಗಳೆದಿರುವುದಿಲ್ಲ. ಅದೇ ರೀತಿ ನಿಜಲಿಂಗಪ್ಪನವರು ಬಲಾತ್ಕಾರದಿಂದ ತನ್ನ ಕೈಹಿಡಿದು ಸಹಿ ಹಾಕಿಸಿಕೊಂಡರೆಂದೂ ಇದುವರೆಗೂ ಅವರೆಂದಿರುವುದಿಲ್ಲ. ಅಥವಾ ಅವರು ತನ್ನ ಮನಸ್ಸಿಲ್ಲದನೇ ಸಂಜೀವ ರೆಡ್ಡಿಯವರ ನಾಮಪತ್ರಕ್ಕೆ ಸಹಿ ಹಾಕಿರುವರು, ಅನಂತರ ಕೆಲ ಕಾರಣಗಳಿಂದಾಗಿ ಅವರ ಮನಸ್ಸಾಕ್ಷಿಯು ಮೊಗ್ಗೆ ಅರಳಿತು. ಅದರ ಕಂಪು ಹಲವಾರು ತುಂಬಿಗಳನ್ನು ಆಕರ್ಷಿಸಿತು.

ದಕ್ಷ ಉಪ-ರಾಷ್ಟ್ರಾಧ್ಯಕ್ಷರಾಗಿದ್ದ ಗಿರಿಯವರು ರಾಷ್ಟ್ರಾಧ್ಯಕ್ಷ ಗಿರಿಯನ್ನಲಂಕರಿಸಲು ಸಮರ್ಥರೇ ಸರಿ. ಹಾಗಿದ್ದರೂ ಪ್ರಜಾಪ್ರಭುತ್ವ ಪಥದಲ್ಲಿ ಸಾಗಿ ಪಕ್ಷ ಪೇಟೆಗೆ ಬಂದ ಮೇಲೆ ಅಲ್ಲಿ ಚೈನೀ ಪೂಳಿಯಂತೆ ವರ್ತಿಸುವುದು ಪ್ರಜಾಪ್ರಭುತ್ವಕ್ಕೆ ಶೋಭನೀಯವಲ್ಲ. ಉಪ-ರಾಷ್ಟ್ರಾಧ್ಯಕ್ಷರಾಗಿದ್ದುಕೊಂಡು ಎಲ್ಲರಿಂದಲೂ ಭಲೇ ಎನಿಸಿಕೊಂಡವರನ್ನು ರಾಜಕೀಯ ಪಕ್ಷಗಳು ಒಂದಾಗಿ ಸೇರಿ ಪ್ರಜಾಪ್ರಭುತ್ವಕ್ಕೆ ಗೌರವ ತರುವ ರೀತಿಯಲ್ಲಿ ರಾಷ್ಟ್ರಾಧ್ಯಕ್ಷರನ್ನಾಗಿ ಆರಿಸಬೇಕಾಗಿತ್ತು. ಆರಂಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ತಪ್ಪು ಹೆಜ್ಜೆ ಹಾಕಿ ಎಡವಿ ಬಿದ್ದಿವೆ. ಪ್ರಜಾಪ್ರಭುತ್ವ ಯುಗದಲ್ಲಿ ಆಯಾಯಾ ಪಕ್ಷಗಳಿಗೆ ಸೇರಿದವರೂ ಆಯಾಯ ಪಕ್ಷದ ತೀರ್ಮಾನದಂತೆ ವರ್ತಿಸಲೇಬೇಕು. ಇಲ್ಲದಿದ್ದಲ್ಲಿ ಆವತ ಮನೋಭಾವನೆಯನ್ನು ಪ್ರಜಾಪ್ರಭುತ್ವ ಕಾಲದಲ್ಲಿ, ಸರ್ವಾಧಿಕಾರ ಕಾಲಕ್ಕೆಂದು ಸೂಚಿಸಲೇ ಬೇಕಾಗುತ್ತದೆ. ಆದರಲ್ಲದೆ ಇಂದಿರಾ ಗಾಂಧಿಯವರ ಮನಸ್ಸಾಕ್ಷಿಯು ಮೊಗ್ಗು ಅವರಿಗೆ ಬೇಕಾದಾಗ ಮಾತ್ರ ಅರಳುತ್ತದೆ, ಬೇಡವಾದಾಗ ಪುನಃ ಮೊಗ್ಗೆಯಾಗುತ್ತದೆ. ಉಪ-ರಾಷ್ಟ್ರಾಧ್ಯಕ್ಷ ಸ್ಥಾನದಿಂದ ಶ್ರೀ ಗಿರಿಯವರು ರಾಷ್ಟ್ರಾಧ್ಯಕ್ಷ ಗಿರಿಯನ್ನೇರಬೇಕೆಂದು ಹಟತೊಟ್ಟ ಇಂದಿರಾಜಿಯವರು ನಿಷ್ಪಕ್ಷಪಾತತನದಿಂದ ಶ್ರೀಮತಿ ವಾಯಲೇಟ್ ಆಳ್ವರನ್ನು ರಾಜ್ಯಸಭೆಯ ಉಪಾಧ್ಯಕ್ಷ ಸ್ಥಾನದಿಂದ ಅಧ್ಯಕ್ಷ ಅಂತಸ್ತಿಗೇರಿಸಲು ಮನಸ್ಸಾಕ್ಷಿಯ ಮೊಗ್ಗೆಯನ್ನು ಅರಳಲು ಬಿಡಬೇಕಾಗಿತ್ತು. ಆಗ ಅದು ಗಮಗಮನೆ ಸುವಾಸನೆ ಬೀರುತ್ತಿತ್ತು. ಇಲ್ಲಿ ಅವರ ಮೊಗ್ಗನ್ನು ಪಕ್ಷಪಾತತನದ ಹಾಗೂ ತಾನಾಶಾಹಿಯ ಕ್ರಿಮಿ ತಿಂದು ಬಿಟ್ಟಿತು. ವಯಲೇಟ್ ಆಳ್ವರಿಗೆ ಮೊದಲು ಅಧ್ಯಕ್ಷ ಅಂತಸ್ತಿನ ಕೈತೋರಿಸಲಾಗಿತ್ತಂತೆ, ನಂತರ, ಅದನ್ನು ಅಲ್ಲಗಳೆದುದರಿಂದ ಅವರ ಮನಸ್ಸು ಹೇಸಿ ಹೋಯಿತು. ಅವರ ಅಕಾಲ ಮರಣ ರಾಜಕೀಯ ವೈಯಕ್ತಿಕ ಕೊಲೆಯೆನ್ನಲಾಗುತ್ತಿದೆ. ಅದಂತೂ ಅವರ ರಾಜಕೀಯ ಆತ್ಮಹತ್ಯೆ. ಇದಕ್ಕೆ ಯಾರು ಹೊಣೆ? ಭಾರತದ ಪ್ರಜಾಪ್ರಭುತ್ವ ಹೊಣೆಯೋ?—ಇಂದಿರಾಜೀಯವರ ಮನಸ್ಸಾಕ್ಷಿ ಹೊಣೆಯೋ?

ನೈಜ ಪ್ರಜಾಪ್ರಭುತ್ವಕ್ಕೆ ಪಕ್ಷಬಲ ಆಗತ್ಯವಿಲ್ಲವಾದರೂ ಇಂದದು ಅತ್ಯಗತ್ಯವಾಗಿ ಬಿಟ್ಟಿದೆ. ಒಂದು ಪಕ್ಷದ ಬೆಂಬಲದಿಂದ ಒಬ್ಬನು ಪ್ರಜೆಗಳಿಂದ ಆರಿಸಲ್ಪಟ್ಟಿದ್ದಾನೆಂದರೆ ಅವನು ಪ್ರಜಾಪ್ರಭುತ್ವ ಪದ್ಧತಿಗನುಸಾರವಾಗಿ ಆರಿಸಲ್ಪಟ್ಟಿದ್ದಾನೆಂದೇ ಅರ್ಥ. ಆದುದರಿಂದ ಅಂತಹ ಅವನು ಆ ಪಕ್ಷಕ್ಕೆ ದ್ರೋಹ ಬಗೆದನೆಂದರೆ ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆದಂತೆಯೇ ಸರಿ. ಆ ಪಕ್ಷದ ಪ್ರಮುಖರು ಹೇಳಿದಂತೆ ಕೇಳಲೇಬೇಕು. ಇಲ್ಲವಾದಲ್ಲಿ ಎಲ್ಲದಕ್ಕೂ ತಿಲಾಂಜಲಿ ಇತ್ತು ದೂರ ಸರಿಯಬೇಕು. ಕಾಂಗ್ರೆಸ್ಸಿನ ಅಧ್ಯಕ್ಷ ನಿಜಲಿಂಗಪ್ಪನವರು ಇಂದಿರಾ ಗಾಂಧಿ ನೆಹ್ರೂರನ್ನು ಕಾಂಗ್ರೆಸ್ಸಿನಿಂದ ಹೊರ ಹಾಕಿದಾಗ ಅವರು ಒಡನೆ ಪ್ರಧಾನಿ ಪಟ್ಟದಿಂದಲೂ ಕೆಳಗಿಳಿಯಲೇಬೇಕು. ಇತ್ತ, ತನಗೆ ಅಧಿಕ ಬೆಂಬಲವಿರುವುದನ್ನು ಸ್ಪಷ್ಟ ಪಡಿಸಿದ ಮೇಲೆ ಪುನಃ ಪ್ರಧಾನಿಯಾಗಬಹುದು. ಶ್ರೀ ಗಿರಿಯವರೂ ಪ್ರಜಾಪ್ರಭುತ್ವಕ್ಕೆ ಲೋಪಬಾರದಂತೆ ಆ ಕೈಯಲ್ಲಿ ಶ್ರೀ ಮಾತೆ ಇಂದಿರಾಜೀಯವರಿಂದ ರಾಜೀನಾಮೆಯನ್ನು ಈ ಕೈಯಲ್ಲಿ ಹೊಸ ಮಂತ್ರಿಮಂಡಲ ಪಟ್ಟಿಯನ್ನೂ ಸ್ವೀಕರಿಸುತ್ತಿದ್ದಲ್ಲಿ ಅವರನ್ನು ಕೆಸರಿನಲ್ಲಿದ್ದ ಕಮಲವೆಂದು ಎಲ್ಲರೂ ಶ್ಲಾಘಿಸುತ್ತಿದ್ದರು. ಇಲ್ಲಿ ಇಂದಿರಾಜೀಯವರೂ ಗಿರಿಯವರೂ ಪ್ರಜಾಪ್ರಭುತ್ವದ ಗಿರಿಯನ್ನೇರುವ ಬದಲು ಅಗ್ಗದ ರಾಜಕೀಯ ರೀತಿಯಿಂದ ಮೇಲೇಳದೆ ಹೋದರು.

ದೇಶವನ್ನು ವಿಭಜಿಸಿದ, ಪ್ರಜೆಗಳನ್ನು ವಿಭಜಿಸಿದ (ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್....) ಕಾಂಗ್ರೆಸ್ಸ್ ವಿಭಜನೆ ಹೊಂದಿದವರದಲ್ಲೇನೂ ಆಶ್ಚರ್ಯವಿಲ್ಲವಾದರೂ, ೧೯೭೦ ಜನವರಿ ೨೬ರ ಗಣರಾಜ್ಯದಿನದಂದು ಭಾರತೀಯನು ಯೋಚಿಸುತ್ತಾನೆ —ಪ್ರಜಾಪ್ರಭುತ್ವ ಎತ್ತ ಹೋಗುತ್ತಿದೆ? ಮನಸ್ಸಾಕ್ಷಿ ಎತ್ತ ಕೊಂಡೊಯ್ಯುತ್ತಿದೆ? ಒಂದಕ್ಕೊಂದು ಪೂರಕವಾಗಿ ಹೋಗಲಾರದೇ? ಅದು ಮಾರಕವಾಗಿಯೇ ಮುಂದರಿದೀತೇ? ಈ ರಾಜಕೀಯ ಅಂಧಕಾರದಿಂದ ನಾವು ಬೆಳಕಿನತ್ತ ಬರಲು ಸಾಧ್ಯವಿಲ್ಲವೇನು? ಗಣರಾಜ್ಯದಧಿಪತಿ ಗಣಪತಿ ನಮ್ಮನ್ನು ಕಾಪಾಡಲಾರನೇ? ಆದರೆ ಸೆಕ್ಯುಲರ್ ಸಂಕಟದಿಂದ ನರಳುತ್ತಿರುವ ನಾವು ಗಣೇಶನ ಬದಲು ಗಧಾ (ಕತ್ತೆಯನ್ನು) ಮಕ್ಕಳಿಗೆ ತೋರಿಸುತ್ತಿರುವಾಗ ಅದೆಂತು ವಿಘ್ನೇಶ್ವರನು ನಮ್ಮನ್ನು ವಿಘ್ನಗಳಿಂದ ಪಾರುಗೊಳಿಸಿಯಾನು?

WITH BEST COMPLIMENTS OF:

B. S. NARASIMHAIAH SON & CO.,

GENERAL MERCHANTS
& COMMISSION AGENTS,

MANDYA.

DISTRIBUTORS :

THE IMPERIAL TOBACCO OF INDIA LTD.,
CALTEX (INDIA) LTD.,
RAVI VEGETABLE OIL INDUSTRIES,
DAVANAGERE.

AGENTS :

THE RAJU SOAP FACTORY, MYSORE.
THE NUTRINE CONFECTIONERY CO.,
(P) LTD., CHITTOOR.

Grams: "VENKATESH" Phone: 56

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ
ದ. ಕ.

O. S. No. 311/1969.

ಅಡ್ಕ ಶ್ರೀಪತಿ — ವಾದಿ.
ಮತ್ತು
ಅಡ್ಕ ವಿಷ್ಣುಮೂರ್ತಿಯಯ್ಯ—ಪ್ರತಿವಾದಿ.
ಇವರೊಳಗೆ

ನೋಟೀಸು

ಉಡ್ಪಿತಾಲ್ಲೂಕು ಮಟ್ಟು ಗ್ರಾಮದ ಕಟಪಾಡಿಯಲ್ಲಿರುವ ಅಡ್ಕ ನಾರಾಯಣಯ್ಯರ ಮಗ. ಪ್ರತಿವಾದಿ ಅಡ್ಕ ವಿಷ್ಣುಮೂರ್ತಿಯಯ್ಯನವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ:-

ಮೇಲಿನ ವಾದಿಯು ನಿಮ್ಮ ಮೇಲೆ ಪ್ಲೈಂಟು ಪ್ರತಿ ಸಹಿತ ದಾಖಲು ಮಾಡಿರುವ ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾರೀಖು 7—2—1970 ಕ್ಕೆ ಇಟ್ಟಿದ್ದು, ನಿಮ್ಮದೇನಾದರೂ ಉದಾಹರಣೆಯಿದ್ದಲ್ಲಿ ಈ ಕೋರ್ಟು ಮುಂದೆ ಆ ದಿನ ಬೆಳಗ್ಗೆ 11.00 ಗಂಟೆಗೆ ಖುದ್ದಾಗಿ— ಯಾ— ವಕೀಲರ ಮುಖಾಂತ್ರ ಹಾಜರಾಗತಕ್ಕದ್ದು, ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕ್ಕುಂ ಮೇರೆಗೆ)

ಪಿ. ಎನ್. ಕೃಷ್ಣಮೂರ್ತಿ ರಾವ್,
ಬಿ. ಎ., ಎಲ್. ಎಲ್. ಬಿ.,
ವಾದಿ ಪರ ಎಡ್ವಕೇಟ್

ಉಡ್ಪಿ, ದ. ಕನ್ನಡ. ತಾ. 7—1—1970.

GRAMS:- "SHAMSON" MANDYA

PHONE { OFFICE 314 / RES. 10

Siemens-Shamson combination Serves the Ryot better than the Best.

Flexibility, Convenience & Quality in every product of Siemens.

SHAMSON supplies guarantees free and prompt after sales service.

Buy the best! Buy Siemens pump set.

Distributors:-

SHAMSON AGENCIES,

SANJAYA BUILDING,
RAJENDRA PRASAD ROAD,

MANDYA.

MANAGING PARTNER,

K. B. SHETTY, *B. A., LL B.*

ಅಸತ್ಯಮೇವ ಜಯತೇ

(ಇಪ್ಪತ್ತನೇ ಪುಟದಿಂದ)

ಅಥವಾ ಅವಳು ಕಮ್ಯುನಿಸ್ಟ್ (ಸಮತಾವಾದಿ) ಎಂದರಾಯಿತು. ಇದನ್ನು ಒಂದು ಬಾರಿ ಹೇಳಿದರೆ ಸಾಲದು. ಸಾವಿರ ಬಾರಿ ಹಸಿ ಹಸಿ ಸುಳ್ಳಿನ ಪ್ರಚಾರ ಮಾಡಬೇಕು. ಈಗಿನ [illegible] ಯಂತ್ರದ ಪ್ರಕಾರ ಸಾವಿರ ಸುಳ್ಳು ಒಂದು ಸತ್ಯವನ್ನು ಸಾರುವುದಂತೆ. ಸಮತಾವಾದಿಯು ಪಕ್ಷದಿಂದ ಹೊರಬೇಕಾದರೆ ಅವನು ಹಳೆಯ ಅಥವಾ ಹೊಸ ಕಾಂಗ್ರೆಸ್ ಪಕ್ಷದ ಪ್ರಧಾನ ಭಕ್ತನೆಂದರಾಯಿತು. ಜನಸಂಘ ಹಿಂದೂಗಳ ಪಕ್ಷವೆಂದು ಪ್ರಚಾರ. ಕಾಶ್ಮೀರ ಜನಸಂಘದ ಅಧ್ಯಕ್ಷನೇ ಮುಸಲ್ಮಾನ [illegible], ಕ್ರೈಸ್ತರಾಗಲಿ—ಎಲ್ಲರಿಗೂ ಜನಸಂಘದಲ್ಲಿ ಸ್ವಾಗತವಿದೆಯೆನ್ನುತ್ತಾರೆ. ಯಾವುದು ಸತ್ಯ? ಯಾವುದು ಸುಳ್ಳು?

ಆದರೆ ಎಲ್ಲರೂ ಸಮಾಜ ಕಲ್ಯಾಣದ ಹೆಸರಿನಲ್ಲಿ ಸುಳ್ಳು ಹೇಳುವವರೇ. ಯಾಕೆಂದರೆ ಸೃಷ್ಟಿಕರ್ತನೇ ಸಮಾಜವಾದದ ವಿರೋಧಿ. ಅವನು ಸಮತಾವಾದಿ. ಎಲ್ಲರನ್ನೂ ಬೆತ್ತಲೆ ಹುಟ್ಟಿಸುತ್ತಾನೆ! ಅಂತೆಯೇ ಕರೆದೊಯ್ಯುತ್ತಾನೆ!! ಎಲ್ಲರಿಗೂ ಒಂದೇ ತರದ ಸಾವು ನೋವು; ಹಸಿವು. ಒಂದೇ ತರದ ದೇಹ; ಅಂಗಾಂಗ. ಒಂದೇ ಬಣ್ಣದ ರಕ್ತ. ಒಂದೇ ಆಕಾಶ, ಗಾಳಿ ಮತ್ತು ನೀರ.—ಇವನ್ನೆಲ್ಲ ಆತ ಕೊಟ್ಟಿರುತ್ತಾನೆ. ಆದರೆ ಆತ ಸಮಾಜವಾದಿಯೂ ಅಲ್ಲ; ಸಮತಾವಾದಿಯೂ ಅಲ್ಲ. ಕೆಲವರು ಹಳೆಯ ಕಾಂಗ್ರೆಸ್ಸು ಎನ್ನುತ್ತಾರೆ, ಕೆಲವರು ಹೊಸ ಕಾಂಗ್ರೆಸ್ಸೆನ್ನುತ್ತಾರೆ. ಅಂತೂ ಜನಸಂಘದವನಲ್ಲ. ಸ್ವತಂತ್ರ ಪಕ್ಷದವನೂ ಅಲ್ಲ. ನಮ್ಮ ಕಣ್ಣಿನ ಮುಂದೆ ಸಾವಿರ ನಮೂನೆಯ ಸರ್ಕಸ್ಸು ನಡೆಯುತ್ತಲೇ ಇದೆ. ಇದು ನಗ್ನ ಸತ್ಯ. ಆದರೂ ನಾವು ಶುದ್ಧ ಸುಳ್ಳು ಎನ್ನುತ್ತೇವೆ. ಅಥವಾ ಅಸತ್ಯವನ್ನೇ ಹಿಂಬಾಲಿಸುತ್ತೇವೆ, ಕಾರಣ ನಮ್ಮ ಅಸ್ತಿತ್ವವನ್ನೇ ನಾವು ಅರಿಯದಾಗಿದ್ದೇವೆ. ನಮ್ಮನ್ನೇ ನಮ್ಮವರನ್ನೇ ನಾವು ನಂಬುವುದಿಲ್ಲ. ಅಂದಾಗ ದೇವರ ಮೇಲೆ ಎಂತಹ ವಿಶ್ವಾಸ ಬೆಳೆದೀತು? ಸುಳ್ಳಿನ ಅಸತ್ಯದ ಮಹಾತ್ಮ್ಯ ಪ್ರಭಾವವಿದು.

ಬೊಂಬಾಯಿಯ ಬೋರಿವಲಿ ರೈಲು ನಿಲ್ದಾಣದಿಂದ ಬೋರಿಬಂದರ (ವ್ಹಿಕ್ಟೋರಿಯಾ ಟರ್ಮಿನಸ್)ದ ಪ್ರಯಾಣಕ್ಕೊಂದು ಟಿಕೇಟು ಬೇಕಿದೆ. ಕಿಸೆಯಲ್ಲಿ ತುರುಕಿ ಪ್ರಯಾಣ ಮಾಡಿದೆ. ಅದು ಮುಂಬಯಿಯ ಚರ್ಚಗೇಟ ನಿಲ್ದಾಣದ ಟಿಕೇಟು. ಎರಡಕ್ಕೂ ಪ್ರವಾಸದ ಬೆಲೆ ಅಥವಾ ದರ ಒಂದೇ. ಮರಾಠಿಗೇ ಕನ್ನಡಕ ಎರಡರ ನನಗೆ ಓದಲು ಬರುವದಿಲ್ಲ. ಅವಸರದಲ್ಲಿ ಅಷ್ಟೆಲ್ಲ ಪ್ರಯಾಸವೇಕೆಂದು ಸಿಕ್ಕ ಟಿಕೇಟಿನ, ಕಿಸೆಯಲ್ಲಿ ತೂರಿ ಪ್ರವಾಸ ಮಾಡಿದಾಗ ಬೋರಿಬಂದರದಲ್ಲಿ ಅದು ಚರ್ಚಗೇಟಿನ ಟಿಕೇಟೆಂದು ಹತ್ತು ರೂಪಾಯಿ ಅಥವಾ ದಂಡವನ್ನು ತೆರಬೇಕಾಯಿತು. ನನ್ನೊಡನೆ ಟಿಕೇಟು ಇದ್ದರೂ Ticket less Travel ಕಾನೂನಿನನ್ವಯ ದಂಡ ವಿಧಿಸಲಾಯಿತು. ಈ ಘಟನೆ ನಾನು ನಡೆದ ಸಂಗತಿಯನ್ನೆಲ್ಲ ಸತ್ಯ ಹೇಳಿದೆ. ಅದರ ಬದಲು ಇದು ಚರ್ಚಗೇಟ ಅಲ್ಲವೇ; ಅಲ್ಲವಾದರೆ ನಾನು ಬಂದಂತೆ ಹಿಂತಿರುಗಿ ಹೋಗುವೆನೆಂದು ಸುಳ್ಳು ಹೇಳಿದ್ದರೆ ನನಗೆ ದಂಡ ತೆರುವ ಪ್ರಸಂಗ ಬರುತ್ತಿರಲಿಲ್ಲ. ಒಂದೇ ಸರಕಾರ. ಎರಡು ರೈಲುಗಳೂ ಒಂದೇ ಆಡಳಿತ ಅಥವಾ ಮಾರ್ಗದರ್ಶನದಲ್ಲಿವೆ. ಎಂತಹ ವಿಪರ್ಯಾಸ! ಯಾರಾದರೊಬ್ಬ ಮುದುಕನ ಟಿಕೇಟು ಪಡೆದು ಮುಂಬಯಿಗೆ ಏಕೆ ಪ್ರಯಾಣ ಮಾಡಿಯಾನೆಂದು ಆತನಿಗೆ ಬೇಡ. ಮುಂದ ಮಾತಿಗಳ ಕಾರುಬಾರ. ಇಂತಹ ಪ್ರಸಂಗಗಳಲ್ಲಿ ಅಶಿಕ್ಷಿತ ಜನರು ರೈಲು ಡಬ್ಬಿಗಳಿಗೆ ಬೆಂಕಿ ಕೊಡದೆ ಸುಮ್ಮನ ಕೂಡಾರೇ?

ಆದರೆ ಈ ಬಗೆ ಹನುಮಂತನ ಬಾಲದಂತೆ ಬೆಳೆಯುತ್ತ ಹೋಯಿತು. ಬೇಕರ ಬೇಡ ಇಂತಹ ಒಂದಲ್ಲ ಅನೇಕ ಅನುಭವಗಳು ನಿಮ್ಮ ಜೀವಮಾನದಲ್ಲಿ ಆಗಿರಬಹುದು. ಆಗುತ್ತಲಿವೆ. ಅನುಭವ ಹೇಳುತ್ತಿದೆ. ಈ ಕಲಿಕಾಲದಲ್ಲಿ ಸತ್ಯವನ್ನು ಹೇಳಬಾರದು, ಯಾಕೆಂದರೆ ಅಸತ್ಯಕ್ಕೇನೇ ಜಯವಾಗುತ್ತದೆ. ಅಸತ್ಯ ಮೇವ ಜಯತೇ!

ಟೀಕೆ: — ಪ್ರಪಂಚದಲ್ಲಿನ ಸಾಮಾಜಿಕ ನ್ಯಾಯ ಯುದ್ಧ ತಪ್ಪಿ ಆದರೂ ನೈಸರ್ಗಿಕ ನ್ಯಾಯ ಸತ್ಯವನ್ನೇ ಪ್ರತಿಪಾದಿಸುತ್ತಿದೆ. ಆದ್ದರಿಂದ ಪ್ರಳಯವೇ ಆದರೂ ಸತ್ಯಕ್ಕೆ ಮಾತ್ರ ವಿಜಯವಾಗುತ್ತದೆ. ಸತ್ಯಮೇವ ಜಯತೇ ಸತ್ಯವನ್ನೇ ಹೇಳಿರಿ ಧರ್ಮವನ್ನೇ ಮಾಡಿರಿ.

ಪುತ್ತೂರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ

Rent Petition 1228/68

T. ಸುಶೀಲಮ್ಮ —ಅರ್ಜಿದಾರಳು

[illegible] —ಎದುರು

R. 3 — ಕಮಲಾ, [illegible] ಪುತ್ತೂರು ತಾಲೂಕು.

ಸದ್ರಿ 3ನೇ ಎದುರಿಗೆ ಕೋರ್ಟು ಮುಖಾಂತರ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ—

[illegible] ಕೂಡಾ ಅರ್ಜಿದಾರಳಿಗೆ ತಾರೀ: 31-3-67ಕ್ಕೆ ಬರಬೇಕಾದ ಗೇಣಿ ಬಾಕಿಗೆ ನಡಸಿದ ಮೇಲಿನ ಅರ್ಜಿ ತಾ. 31.1.'70ಕ್ಕೆ [illegible] ನೋಟೀಸಿಗೆ ಆಗುತ್ತದೆ. ಸದ್ರಿ ದಿನ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು [illegible] ಕಂಡಂತೆ ತೀರ್ಮಾನಿಸಲಾದೀತು.

Sd. M. Rammohan Rao
Advocate for Petitioner

ತಾ. 7—1—70.

ಪುತ್ತೂರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ

R. R. C.582/69

ಉಪ್ಪಿನಂಗಡಿ ಲಕ್ಷ್ಮೀವೆಂಕಟೇಶ [illegible] —ಅರ್ಜಿದಾರ

[illegible] —ಎದುರು

R. 1. [illegible] ಪುತ್ತೂರು ತಾಲೂಕು.

ಸದ್ರಿ 1ನೇ ಎದುರಿಗೆ ಕೋರ್ಟು ಮುಖಾಂತರ ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ—

ನಿಮ್ಮಿಂದ ಕೂಡಾ ಅರ್ಜಿದಾರ ದೇವಸ್ಥಾನಕ್ಕೆ ತಾರೀಕು 31-8-69ಕ್ಕೆ ಬರಬೇಕಾದ ಗೇಣಿ ಬಾಕಿಗೆ ನಡಸಿದ ಮೇಲಿನ ಅರ್ಜಿ ತಾರೀಕು 2.2.1970ಕ್ಕೆ ನಿಮ್ಮ ನೋಟೀಸಿಗೆ (ಸ್ವತಹ ಮುಖ್ತ ಗಾರ್ಡಿಯನ್ ಸಹಾ) ಇರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd. M. Rammohan Rao
Advocate for Petitioner

ತಾ. 7.1.1970.

ಪ್ರಜಾರಾಜ್ಯದ ಪ್ರಜ್ಞೆ - ಪ್ರತಿಜ್ಞೆ

(ಐದನೇ ಪುಟದಿಂದ)

ಲಾಲಸೆ, ಸ್ವಹಿತಗಳ ಅಡಿಪಾಯದ ಮೇಲೆ ಭವಿತವ್ಯ ರೂಪಿಸ ಹೊರಟವನೇ ಹೊರತು ತನ್ನ ಹೊರತಾಗಿ ತನ್ನ ಸಮಾಜ, ದೇಶ ಇದೂ ತನ್ನದು ಎಂಬ ವಿಶಾಲಭಾವನೆ ತಾಳಲಾರದೆ ಹೋದುದು ನಮ್ಮನ್ನು ನಾವೇ ಮರೆತುಬಿಡಲು ಕಾರಣವಾಗಿರಲು ಸಾಕು.

ಪ್ರತಿಯೊಬ್ಬ ವ್ಯಕ್ತಿಯು ತಾನು ತನ್ನ ಪಾಲಿನ ಕೊಡುಗೆಯನ್ನು ದೇಶಕ್ಕಾಗಿ ಕೊಡಲೇ ಬೇಕಾಗುತ್ತದೆ. ಅದು ಶಾರೀರಿಕ ಶ್ರಮದ ರೂಪವಾಗಿರಬಹುದು, ಹಣದ ರೂಪದಲ್ಲಿರಬಹುದು. ಅಥವಾ ಇದ್ದ ಏನೆಲ್ಲಾ ರೂಪದಲ್ಲಿಯೋ ಇರಬಹುದು. ಸರ್ವ ಶಕ್ತಿಮಾನಾಗಿ [illegible]ವಾಗಿ ಬಹು ವಿಸ್ತಾರವಾದ ದೇಶ ನಮ್ಮದು. ನಮ್ಮ ದೇಶದ ಸಮಸ್ಯೆಗಳೂ ಅಷ್ಟೇ ಹೆಚ್ಚಾಗಿ ಇವೆ. ಇವನ್ನೆಲ್ಲ ಮರೆತು ನಮ್ಮ ದೇಶ, ನಮ್ಮ ಸರಕಾರ ನಮಗೇನು ಕೊಟ್ಟಿದೆ ಎನ್ನುವುದರ ಕುರಿತಾಗಿಯೇ ನಮ್ಮಲ್ಲಿ ಲಕ್ಷ್ಯವೇ ಹೊರತು ನಾನು ದೇಶಕ್ಕಾಗಿ ಏನು ಕೊಟ್ಟಿದ್ದೇನೆ, ಯಾವ ತ್ಯಾಗವನ್ನು ಮಾಡಿದ್ದೇನೆ ಎಂದು ಯಾರೂ ಯೋಚಿಸುವದಿಲ್ಲ. ಯಾರೋ ಮಾಡಿದ ತ್ಯಾಗದ ಫಲದಿಂದ ತಮ್ಮ ಉದ್ಧಾರವಾಗಬೇಕೆಂದು ಬಯಸುವ ಯಾರಿಂದಲೂ ನಾವು ಹೆಚ್ಚಿನದೇನನ್ನೂ ನಿರೀಕ್ಷಿಸುವದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ತನ್ನ ಕಾರ್ಯ ಕ್ಷೇತ್ರದಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಆತ ತನ್ನ ಜೀವನವನ್ನು ಸುಗಮತೆಯೆಡೆಗೆ ಕೊಂಡೊಯ್ಯುವದು ಸಾಧ್ಯವಾಗಿರುವಂತೆ ಆತ ತನ್ನ ದೇಶವನ್ನೂ ಸುಭದ್ರವನ್ನಾಗಿ ಮಾಡಲು ಶಕ್ತನಾಗುತ್ತಾನೆ. ನಮ್ಮ ಅಂತರಾಳದಲ್ಲಿಯೇ ಕಪಟ, ಅಪ್ರಾಮಾಣಿಕತೆ, ಮೋಸ, ಭ್ರಷ್ಟಾಚಾರಗಳನ್ನು ಅಡಗಿಸಿಟ್ಟುಕೊಂಡು ದೇಶದಾದ್ಯಂತ ಉನ್ನತ ಆದರ್ಶಗಳನ್ನು ಹುಡುಕುತ್ತಾ ಹೋಗುವದು ಹಾಸ್ಯಾಸ್ಪದ ಸಂಗತಿಯೇ ಸರಿ.

ನಾವು ನಮ್ಮ ಜೀವನವನ್ನು ಉನ್ನತ ಆದರ್ಶಗಳಿಂದ ಪೋಷಿಸಿ ಬೆಳೆಸಿಕೊಂಡು ಬಂದರೆ ನಮ್ಮ ಸುತ್ತ ಮುತ್ತಲಿನ ಜೀವನದಲ್ಲಿಯೂ ಅದನ್ನೇ ಕಾಣುವದು ಸಾಧ್ಯ

With Best Compliments

From

M/s. Jyothi Talkies

MANGALORE

Running Picture

'Shivandaman'

ಶಿವಂದಮನ್

ನಾಗುತ್ತದೆ. ಜನ ಸಾಮಾನ್ಯರ ನೈತಿಕ ಸ್ಥೈರ್ಯ, ಜೀವನ ಮೌಲ್ಯಗಳು ಉನ್ನತವಾಗಿದ್ದರೆ ಅಂತಹ ಜನರಿಂದ ಕೂಡಿದ ದೇಶವೂ ಉನ್ನತ ಸ್ಥಾನಕ್ಕೇರುತ್ತದೆ. ಪ್ರಪಂಚದಲ್ಲಿ ಅಂತಹ ದೇಶ ಮನ್ನಣೆ ಪಡೆಯುತ್ತದೆ. ಅದಿಲ್ಲದಿದ್ದರೆ ನಮ್ಮನ್ನೇ ನಾವು ಕಳೆದುಕೊಂಡು ಇದ್ದೂ ಇಲ್ಲದವರಂತಾಗುತ್ತೇವೆ. ಬದುಕಿಯೂ ಸತ್ತ ಬಾಳಾಗುತ್ತದೆ ನಮ್ಮದು. ಒಳ್ಳೆಯ ದೇಶವನ್ನು ಕಟ್ಟಬೇಕೆನ್ನುವ ನಾವು ನಮ್ಮ ಗುರಿ ತಲುಪುವ ಮುನ್ನವೇ ಇದ್ದ ಬಿದ್ದ ಒಳ್ಳೆಯತನವನ್ನೂ ಕಳೆದು ಕೊಂಡು ಪರದೇಶಿಗಳಾಗಿ ಬಿಡುತ್ತೇವೆ.

ಹಾಗೆ ಆಗಬಾರದು ಎಂಬ ಉದ್ದೇಶದಿಂದಲೇ ಇಂತಹ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಪರಿಪಾಠ ಬೆಳೆದು ಬಂದುದು. ನಮ್ಮ ರಾಷ್ಟ್ರದ ಹಿರಿಮೆ, ಆ ರಾಷ್ಟ್ರಕ್ಕೊಂದು ಒಳ್ಳೆಯ ಹೆಸರು ತರುವ ಪ್ರಜೆಗಳ ಮನೋಧರ್ಮ ಇವುಗಳ ಕಡೆಗೆ ಸರಿಯಾದ ತಿಳುವಳಿಕೆ ಮೂಡಿಸಿಕೊಂಡು, ನಾವು ನಡೆದು ಬಂದ ದಾರಿಯನ್ನೊಮ್ಮೆ ಹಿಮ್ಮರಳಿ ನೋಡಿ ತಪ್ಪು ತಡೆಗಳಿದ್ದರೆ ತಿದ್ದಿಕೊಂಡು, ಮುಂದೆ ಸರಿಯಾದ ದಾರಿಯಲ್ಲಿ ನಡೆಯುವ ಅರಿವು ಮೂಡಿಸಿಕೊಳ್ಳುವದಕ್ಕೋಸುಗವಾಗಿಯೇ ಈ ರೀತಿಯ ದಿನಾಚರಣೆಗಳನ್ನು ನಾವು ಆಚರಿಸಬೇಕಾಗಿದೆ. ಪ್ರಜಾರಾಜ್ಯ ಹಾಗೂ ಪ್ರಜೆ ಈ ನಡುವಿನ ಪವಿತ್ರ ಸಂಬಂಧದ ಅರಿವು ಮೂಡಿಸುವ ದಿನ ಪ್ರಜಾರಾಜ್ಯ ದಿನ. ಈ ಅರಿವನ್ನು ಮರೆಯಗೊಡದಂತೆ ನಮ್ಮಲ್ಲಿಯ ದೇಶಾಭಿಮಾನ ಸದಾ ಜಾಗೃತವಾಗಿರುವಂತೆ ಸಂದೇಶ ನೀಡುವ ಪರ್ವದಿನ ಪ್ರಜಾರಾಜ್ಯದಿನವೆಂದರೂ ತಪ್ಪಿಲ್ಲ!

ಪ್ರತಿಜ್ಞೆಯ ದಿನ

ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ ದಿಗ್ಭ್ರಮೆಯುಂಟಾಗುತ್ತದೆ. ಯಾವುದನ್ನೂ ನಿಶ್ಚಯವಾಗಿ ಹೇಳಲು ಬಾರದಂತೆ ವಿಚಿತ್ರ ಪರಿಸ್ಥಿತಿ ನಿರ್ಮಾಣಗೊಂಡಿದೆ. ಬೆಲೆಗಳು ಆಕಾಶದೆತ್ತರ ಏರಿನಿಂತಿವೆ. ಜೀವನ ಮಟ್ಟ ಏರುತ್ತಿದೆಯೆಂಬ ಕೂಗು ಒಂದೆಡೆ ಕೇಳಿ ಬಂದರೆ ಇನ್ನೊಂದೆಡೆ ಜೀವನ ಮೌಲ್ಯ ಕಳೆಗುಂದಿದೆಯೆಂಬ ಕೂಗು. ಲಂಚ, ಅನಾಚಾರ, ಭ್ರಷ್ಟಾಚಾರ ರೋಗಗಳ ಶರತಲ್ಪದ ಮೇಲೆ ಮಲಗಿದ್ದಾನೆ ಭಾರತದ ಪ್ರಜೆ. ಎಲ್ಲಿ ನೋಡಿದರಲ್ಲಿ ಕೊಲೆ, ಸುಲಿಗೆ, ದಬ್ಬಾಳಿಕೆ, ವಾಹನಗಳ ಅಪಘಾತಗಳು ರಾಜಕೀಯ ರಂಗವಂತೂ ತೀರ ಹೊಲಸೆದ್ದು ನಾರುತಿದೆ. ನಮ್ಮ ದೇಶದ ಭವಿತವ್ಯವನ್ನು ನೋಡಿದರೆ ಎದುರು ಕಾಣುವದು ಅಂಧಃಕಾರ. ಈ ಕತ್ತಲನ್ನು ಭೇದಿಸಿ ನಾವು ಮುನ್ನುಗ್ಗುವೆವೇ? ರಾಮರಾಜ್ಯದ ಕನಸು ಕಂಡ ನಾವು ಅದನ್ನು ನಿಜವಾಗಿಯೂ ನನಸನ್ನಾಗಿ ಮಾಡಿಕೊಳ್ಳುವೆವೇ?

ಮಾಡಿಕೊಳ್ಳಬೇಕು. ನಗುವವರ ಮುಂದೆ ಎಡವಿ ಬೀಳುವ ಮೂರ್ಖತನವನ್ನು ನಾವು ಮಾಡಿಕೊಳ್ಳಬಾರದು. ಈಗ ಕಣ್ಣು ಕಟ್ಟುವ ಕತ್ತಲೆ ಬಹುದಿನ ಉಳಿಯಲಾರದು. ಬೆಳಕು ಬಂದೇ ಬರುತ್ತದೆ. ನಾವೆಲ್ಲರೂ ಒಂದಾಗಿ ಒಮ್ಮನಸ್ಸಿನಿಂದ ಆ ದಿವ್ಯವಾದ ಬೆಳಕನ್ನು ಕಾಣಬೇಕು.

ಈ ಪ್ರಜಾರಾಜ್ಯದ ದಿನದಂದು ನಾವೆಲ್ಲ ಪ್ರತಿಜ್ಞೆ ಮಾಡಬೇಕು. ಇದು ನಮ್ಮ ದೇಶ. ನಾವು ಭಾರತೀಯರು ದೇಶ ರಕ್ಷಣೆಗಾಗಿ ಮಾತು ಬಂದಾಗ ನಾವೆಲ್ಲರೂ ಒಂದೇ. ನಾವಾಡುವ ಭಾಷೆ, ಆಚಾರ ವಿಚಾರ ಬೇರೆ ಬೇರೆಯಾಗಿರಬಹುದು. ನಮ್ಮ ನಮ್ಮ ವೈಯಕ್ತಿಕ ಸಮಾಧಾನ, ಅಸಮಾಧಾನ ಕುಂದು ಕೊರತೆಗಳು ಏನೇ ಇರಬಹುದು. ಅವನ್ನೆಲ್ಲ ಮರೆತು ಹೆಗಲಿಗೆ ಹೆಗಲು ಹಚ್ಚಿ ದೇಶದ ಒಳಿತಿಗಾಗಿ ನಾವು ಒಂದಾಗಬೇಕು. ನಮ್ಮ ಒಗ್ಗಟ್ಟನ್ನು ಮುರಿಯಲು ಯಾರಿಂದಲೂ ಸಾಧ್ಯವಿಲ್ಲ ಎಂಬುದನ್ನು ಪ್ರಪಂಚಕ್ಕೇ ತೋರಿಸಿ ಕೊಡಬೇಕು. ಅಸ್ಪೃಶ್ಯತೆಯಿಂದ ಉದ್ಭವಿಸಿದ ಹಾನಿ, ಉಂಟಾದ ಪ್ರಮಾದಗಳನ್ನು ನಾವು ಇತಿಹಾಸದಿಂದ ತಿಳಿದು ಕೊಂಡಿದ್ದೇವೆ. ಒಮ್ಮೆ ಆದ ತಪ್ಪನ್ನು ಅದು ತಪ್ಪೆಂದು ತಿಳಿದ ಮೇಲೆಯೂ ಮತ್ತೆ ಮಾಡುವದು ಬೇಡ. ನಮ್ಮ ದೇಶದಲ್ಲಿಂದು ನಡೆಯುವ ಸಂಪುಗಳು, ಅನ್ನ ಸತ್ಯಾಗ್ರಹಗಳು, ಲೂಟಿ, ಜಾತೀಯ ಗಲಭೆಗಳು, ವಿದ್ಯಾರ್ಥಿಗಳ ಪುಂಡಾಟಿಕೆ ಇವಾವವೂ ನಮ್ಮ ದೇಶಕ್ಕೆ ಒಳ್ಳೆಯ ಹೆಸರನ್ನು ಖಂಡಿತವಾಗಿಯೂ ತರಲಾರವು. ವೈಯಕ್ತಿಕ ಲಾಭಕ್ಕಾಗಿ ದೇಶದ ಆಸ್ತಿ ಪಾಸ್ತಿಗಳಿಗೆ, ಸಾರ್ವಜನಿಕ ಹಿತಕ್ಕೆ ಧಕ್ಕೆ ತರುವ ಕಾರ್ಯದಿಂದ ದೇಶದ್ರೋಹದ ಅಪವಾದ ಹಣೆಗಂಟುವದೇ ಹೊರತು ಯಾವ ಮಹತ್ಪ್ರಯೋಜನವೂ ಮಾಡಿದಂತಾಗುವದಿಲ್ಲ. ಅದು ವೈಯಕ್ತಿಕ ಲಾಭದ ಬದಲಾಗಿ ತುಂಬಿ ಬರಲಾಗದ ನಷ್ಟ. ದೇಶ ಅನುಭವಿಸುವ ರಾಷ್ಟ್ರೀಯ ಹಾನಿ. ಈ ಕೆಲಸ ಯಾರಿಗೆ ತಾನೇ ಪ್ರೀತಿಯೆನಿಸಬೇಕು? ಅಂತಹ ಘಾತಕ ಪ್ರವೃತ್ತಿಯನ್ನು ತ್ಯಜಿಸುವ ಪ್ರತಿಜ್ಞೆಯನ್ನು ನಮ್ಮ ದೇಶ ಬಾಂಧವರು ಮಾಡಬೇಕು. ದೇಶದ ಕೀರ್ತಿಗೆ ಭಂಗ ಬರುವ ಯಾವ ಕಾರ್ಯವನ್ನೂ ಮಾಡಲಾರೆನೆಂಬ ಪಣ ತೊಡಬೇಕು. ಈ ಪ್ರಜಾರಾಜ್ಯದ ದಿನ ಆ ಪ್ರತಿಜ್ಞೆಯ ದಿನವಾಗಬೇಕು. ಅದು 'ಪ್ರಜೆಯ-ಪ್ರಜಾರಾಜ್ಯದ ರಕ್ಷಣೆಯ ಪ್ರತಿಜ್ಞೆ' ಅಂತಹ ಭಾವೈಕ್ಯದ ಪ್ರತಿಜ್ಞೆಯೊಂದೇ ನಮ್ಮ ದೇಶವನ್ನಿಂದು ಸುಗಮತೆಯ ದಾರಿಯಲ್ಲಿ ಮುನ್ನಡೆಸಬಲ್ಲದು.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್‌ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1	25
ಪ್ರೇಮ ವಿಜಯ	1	00
ಮುಂದಿನ ದೇವರು	0	25
ವ್ಯಭಿಚಾರಿ ಯಾರು?	1	00
ಹೆಂಡ್ತಿ ಗಂಡನಾದರೆ?	0	25
ಪುರುಷ ವಧು	0	25
ಸನ್ಯಾಸಿಯ ಸೆರೆಗಿನಲ್ಲಿ	0	75
ಸಂಶಯ ಪಿಶಾಚಿ	0	75
ಕುಶ ಲವ	0	50
ಚಿತ್ರಾಂಗದೆ	0	60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

With best compliments

from

BALLAL
MOTOR SERVICE

MOODABIDRI —— —— MANGALORE

ಅರ್ಥ ಪರತೆಯ ಸೇವಾ ಪ್ರಿಯತೆ

(ಮೂರನೇ ಪುಟದಿಂದ)

ಆತ, ಅನುಪ ತೋರಿಸಿ ತನ್ನ ವೇಷ ಮರೆಯಿಸಿ ಅಧಿಕಾರದ ಗುತ್ತಿಗೆಯನ್ನೇ ಹಿಡಿಯುತ್ತಾರೆ. ಹಾಗಾಗಿ ಸಾಮಾಜಿಕವಾಗಿ ನಿಯಂತ್ರಿಸುವುದು ಅಷ್ಟೊಂದು ಸುಲಭವಲ್ಲ, ಸಾಧ್ಯವೂ ಅಲ್ಲ. ಕಾನೂನಿನ ಕಡಿವಾಣವೇ ಇದನ್ನು ನಿಯಂತ್ರಿಸ ಬಲ್ಲದಾಗಿದೆ.

ಸೇವೆಯ ಮುಸುಕು

ಈ ಅಧಿಕಾರದ ಗುತ್ತಿಗೆ ಪಡೆಯುವ ಜನರು ಅದನ್ನು ಸೇವೆಯೆಂದು ಹೇಳಿಕೊಂಡ ಅದರ ಮುಸುಕಿನಲ್ಲಿ ಅಧಿಕಾರ ಗಿಟ್ಟಿಸುವುದು ಇಂದು ಅಪರೂಪವೇನೂ ಅಲ್ಲ. ಎಲ್ಲ ಕಡೆಯಲ್ಲಿಯೂ ಈ ತಂತ್ರ-ಮಂತ್ರ ನಡೆದೇ ಇದೆ. ಅದಕ್ಕೆ ಮೂಲ ಸೇವೆಯ ಸೋಗು ಮುಸುಕು.

ಸೇವೆಯು ಕೇವಲ ಇಷ್ಟೇ ಎಂಬುದು ಎಲ್ಲಿಯೂ ಸೀಮಿತವಾಗಿಲ್ಲ. ಅದು ಅವರ ಕಾರ್ಯದಕ್ಷತೆ, ಕ್ರಿಯಾತ್ಮಕ ಶಕ್ತಿಯನ್ನು ಅವಲಂಬಿಸಿಕೊಂಡಿದೆ. ಹಾಗೆಯೇ ಇಂದೂ ಈ ಅಧಿಕಾರ ಲಾಲಸರೂ ಅದನ್ನು ಬೇಕಾದ ಹಾಗೆ ಬಳಸಿ—ಬೆಳೆಸಿಕೊಳ್ಳುತ್ತಿದ್ದಾರೆ. ಸೇವೆಯ ಪರದೆಯು ಸ್ವಲ್ಪ ಬಿಟ್ಟು ಅದರಿಂದ ಅಧಿಕಾರದ ಅಗ್ರಸ್ಥಾನ ಪಡೆಯುವ ಕೆಲಸ ಸುಲಭ ಸಾಧ್ಯವಾಗಿ ಬಿಟ್ಟಿದೆ.

ಪೂಜ್ಯ ಬಾಪೂಜಿಯವರು ಸೇವೆಯ ಅಂತರಾಳವನ್ನೇ ತೋರಿಸಿದವರು. ಅದು ಎಷ್ಟು ಪವಿತ್ರವಾಗಿದೆ, ಎಂಥ ಸಂಸ್ಕಾರ ಕೊಡಬಲ್ಲದಾಗಿದೆ—ಎಂದು ಸಾಕ್ಷಾತ್ಕಾರ ಮಾಡಿದವರು. ಇಂಥ ಸೇವೆಯ ಹೆಸರನ್ನೆತ್ತಿ ಕಳಂಕ ಹಚ್ಚುವ ಹಾಗೆ ಬಳಸಿ ಮೇಲೆ ಗುತ್ತಿಗೆ ಹಿಡಿಯುವುದಕ್ಕೂ ಇಂಥವರ ಹೆಸರನ್ನು ಹೇಳಿ ಅದನ್ನು ರಕ್ಷಣಾ ಕವಚವಾಗಿ ಮಾಡಿಕೊಳ್ಳುತ್ತಿದ್ದಾರೆಂದರೆ ಅತಿಶಯೋಕ್ತಿಯಲ್ಲ.

ಇದೂ ಒಂದು ವ್ಯವಸಾಯ

ಈ ಅಧಿಕಾರಗಳಿಗೆ ಅದನ್ನು ಹಲವಾರು ಕಾಲ ಚಲಾಯಿಸುವುದೂ ಒಂದು ವ್ಯವಸಾಯವೇ ಆಗಿದೆ. ಇತರ ವ್ಯಾಪಾರೋದ್ಯಮಗಳಿಗೆ ಕೆಲವಷ್ಟು ಭಂಡವಲು ತೊಡಗಿಸಿ ಅದನ್ನು ಸರಿಯಾಗಿ ನಡೆಸಿ ಲಾಭ ಗಳಿಸುವಂತೆ ಈ ಸೇವಾ ಅಧಿಕಾರವು ಕೆಲವರಿಗೆ ಸಾರ್ಥಕ ಸೇವೆಯೆಂದು ಹೇಳಿ ಸ್ವಾರ್ಥಕವಾದದ್ದು ಮರೆಯುವಂತಿಲ್ಲ.

ಚುನಾವಣೆಯಲ್ಲಿ ಅಥವಾ ಸ್ಥಾನಿಕ ಸಂಸ್ಥೆಗಳಲ್ಲಿ ಉಮೇದ್ವಾರನಾಗಿ ನಿಂತು ಸಾವಿರಾರು ರೂ.ಗಳ ಭಂಡವಾಳ ತೊಡಗಿಸಿ ನಂತರ ಅಧಿಕಾರ ಗಳಿಸಿದ ಮೇಲೆ ನಿರಂತರಗಳಿಕೆಯ ಸಾಧನವನ್ನಾಗಿ ಅದನ್ನು ಮಾಡಿಕೊಳ್ಳದಿದ್ದರೆ ಚುನಾವಣೆಯಲ್ಲಿ ತೊಡಗಿಸಿದ, ತೆತ್ತ, ಭಂಡವಾಳಕ್ಕೆ ಏನು ಬೆಲೆ? ಹಾಗಾಗಿ ಹಲವಾರು ಸಂಘ, ಸಮಿತಿಗಳಲ್ಲಿ ಅಧಿಕಾರಗಳಿಸುವುದೂ ಒಂದು ಲಾಭದಾಯಕ ವ್ಯವಸಾಯವೇ ಆಗಿ ಕೆಲವರಿಗೆ ಕಂಡಿದೆ, ಕೆಲವರಿಗೆ ಕಾಣತೊಡಗಿದೆ. ಈ ಕಾರಣದಿಂದಲೇ ಅಧಿಕಾರದ ಗುತ್ತಿಗೆ ಹಿಡಿಯುವ ಮಂತ್ರಿಗೇ ಹಾಕುವ ಪರಿಸ್ಥಿತಿ ಬಂದಿದೆ ಎಂದರೆ ತಪ್ಪೇನಿಲ್ಲ. ಒಂದೇ ದಿನದಲ್ಲಿ ಹತ್ತಾರು ಸಭೆಗಳಲ್ಲಿ ಹಾಜರಾಗಿ ಅಲ್ಲಿಯ ಸಂಭಾವನೆ ಸ್ವೀಕರಿಸಿ ಸಂಪಾದಿಸುವುದೂ ಇಂದು ಕೆಲವರಿಗೆ ಉಪ ಉದ್ಯೋಗವಾಗಿದೆ. ಕಾನೂನಿನ ಕಣ್ಣಿಗೆ ಮಣ್ಣೆರಚಿ ಸಂಪಾದಿಸುವ ಈ ಗತ್ತು ಕೆಲವರಿಗೇ ಹಿಡಿಸಿದ್ದು, ಅವರೇ ಈ ಗುತ್ತಿಗೆದಾರಿಕೆಯ ಮೊಕ್ತೇಸರರು.

ಪಟ್ಟ ಭದ್ರರ ವಿಕಸಿಷ್ಣುತೆ

ಹಲವಾರು ಸಂಘ ಸಂಸ್ಥೆಗಳಲ್ಲಿ ಈ ಪಟ್ಟ ಭದ್ರರ ಪಾತ್ರ ಬಹುವಾಗಿ ಬೆಳೆದಿದೆ. ಸಂಘ ತಮ್ಮದೆಂದೇ ಭಾವನೆ ಅವರಿಗೆ. ತಮಗಾಗಿಯೇ ಸಾಧನೆ. ಇದರಿಂದಾಗಿ ಅದರ ಉದ್ದೇಶ ಸಫಲವಾಗದೇ ಇದ್ದ ಉದಾಹರಣೆ ಅನೇಕ ಕಡೆಯುಂಟು.

ಅಧಿಕಾರ ದಾಹಿಗಳೇ ಮುನ್ನುಗ್ಗಿ ಹೆಚ್ಚು ಹೆಚ್ಚು ಅಲ್ಲಿಯ ಸ್ಥಾನ ಮಾನಗಳನ್ನು ಗಳಿಸಿ ತಮ್ಮ ಜೀವಾವಧಿಯ ಉದ್ದಗಲಕ್ಕೂ ಅವನ್ನು ಉಳಿಸಿ ಕೊಳ್ಳುವ, ಪ್ರಯತ್ನ ನಡೆಸುವ ಈ ಏಕಸ್ವಾಮ್ಯತೆಗೆ ಹಿನ್ನೆಲೆಯೇನು? ಮುನ್ನೆಲೆಯೇನು? ಎನ್ನುವುದು ವಿಚಾರಣೀಯ ಅಂಶವಾಗಿದೆ. ಈ ದೃಷ್ಟಿಯಿಂದ ಇತ್ತೀಚೆ ಸರಕಾರ ಕೆಲವು ಸೂಕ್ತ ಬದಲಾವಣೆಗಳನ್ನು ಸಹಕಾರೀ ಸಂಘಗಳಲ್ಲಿ ಮಾಡುವ ಮನಸ್ಸು ಮಾಡಿದ್ದನ್ನು ಪರೀಕ್ಷಿಸಿದಾಗ ಈ ಪಟ್ಟ ಭದ್ರರಿಂದ ಆದ ಶೋಷಣೆ ವ್ಯಕ್ತವಾಗುತ್ತದೆ.

ಅನ್ಯರಿಗೂ ಅವಕಾಶ ಸಿಗಬೇಕು

ದೀರ್ಘಕಾಲದ ವರೆಗೂ ಒಂದೇ ವ್ಯಕ್ತಿಗೆ ಅಥವಾ ಆ ವ್ಯಕ್ತಿಯ ಹಿತಾಸಕ್ತ ವರ್ಗಕ್ಕೆ ಕೆಲವು ಸಂಘ ಸಂಸ್ಥೆಗಳು, ಅಧಿಕಾರಗಳು ಅಧೀನವಾಗಿರುವುದು ಸಾಧುವಲ್ಲ. ಇದರಿಂದಾಗಿ ಅರ್ಹ ವ್ಯಕ್ತಿಗಳ ಜ್ಞಾನ ಕ್ರಿಯಾ ಶಕ್ತಿಗಳಿಗೆ ತಕ್ಕ ಅವಕಾಶ ಸಿಕ್ಕಂತಾಗುವುದಿಲ್ಲ. ಅವುಗಳ ಪ್ರಯೋಜನವನ್ನು ದೊರಕಿಸಿ ಕೊಂಡಂತಾಗುವುದಿಲ್ಲ.

ನಾವು, ಸಮಾಜ, ದೇಶ ಬೆಳೆಯಬೇಕಾದರೆ ಎಲ್ಲರ ಬುದ್ಧಿ, ಎಲ್ಲರ ಶಕ್ತಿ, ಕೂಡಿ ದುಡಿಯಬೇಕು. ಒಬ್ಬೊಬ್ಬರಲ್ಲಿ ಒಂದೊಂದು ವಿಶಿಷ್ಟವಾದ ಶಕ್ತಿಯಿರುತ್ತದೆ. ಆ ಶಕ್ತಿಯು ವಿಕಾಸಕ್ಕಾಗಲೀ, ಪ್ರಯೋಜನಕ್ಕಾಗಲೀ, ತಕ್ಕ ಅವಕಾಶ ಸಿಗದಿದ್ದರೆ ಅದು ಹಾಗೆಯೇ ಕುಗ್ಗಿ ಹೋಗುವ ಪ್ರಸಂಗವೂ ಬರಬಹುದು. ಹಾಗಾಗಿ ದೇಶದ ಭವಿಷ್ಯತ್ತಿಗೆ ಸಹಾಯಕವಾಗತಕ್ಕ ಬೇರೆ ಬೇರೆ ವಿಶಿಷ್ಟ ಶಕ್ತಿಗಳಿಗೂ ತಕ್ಕುದಾದ ಸ್ಥಾನ ಸಿಕ್ಕುವುದಕ್ಕಾಗಿ ಈ ಪಟ್ಟ ಭದ್ರರ ಅಧಿಕಾರದ ಗುತ್ತಿಗೆದಾರಿಕೆಯ ಮೇಲೆ ಏನಾದರೂ ಕಡಿವಾಣ ಹಾಕುವುದು ಅವಶ್ಯ. ಇಲ್ಲದಿದ್ದರೆ ಸಾಮಾಜಿಕ ಸ್ಥಿತಿ-ಗತಿಗಳನ್ನೂ ಹದಗೆಡಿಸಿ, ಅಸಮಾನತೆ, ಅವ್ಯವಸ್ಥೆಗಳನ್ನು ಹುಟ್ಟಿಸಿ, ಬೆಳೆಸುವುದಕ್ಕೂ ಈ ಅರ್ಥ ಪರತೆಯ ಸೇವಾ ಪ್ರಿಯತೆ ಕಾರಣವಾಗಬಹುದಾಗಿದೆ.

With Best Compliments

From

M/s. B. GOKULDAS PAI

Dealers in

Fertilizers &

Asbestos Sheets,

BRAHMAVAR.

(S. K.)

LOANS TO STUDENTS

Canara Bank has been the First Bank in India to introduce a Scheme of Loans to Students.

Today the Bank has various attractive loan schemes for helping students and their parents.

For instance the Bank gives Loan-Scholarships for Technical College Studies in India, loans to students going abroad, loans to students for certain post-graduate studies and loans to parents for purchase of books, instruments etc.

These loans are becoming more and more popular day by day.

For details, kindly personally contact any Branch of the Canara Bank or the Head Office at Bangalore.

CANARA BANK

Head Office : BANGALORE.

ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಲಿಮಿಟೆಡ್

ಪೋಸ್ಟ್ ಬಾಕ್ಸ್ ನಂ. 10 — ಮಂಡ್ಯ.

ರೈತ ಗುರುತಿನ ಜಾನುವಾರುಗಳ ಪೌಷ್ಟಿಕ ಆಹಾರ

ಪಶುಪಾಲನಾ ಇಲಾಖೆಯ ತಜ್ಞರ ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಲ್ಪಟ್ಟು ಹಾಗೂ ನೂತನವಾಗಿ ಸ್ಥಾಪಿಸಲ್ಪಟ್ಟ ಹೊಸ ಯಂತ್ರಗಳಿಂದ ತಯಾರಿಸಲ್ಪಟ್ಟು ರೈತ ಗುರುತಿನ ಪೌಷ್ಟಿಕ ಆಹಾರವು ರಿಯಾಯಿತಿ ದರದಲ್ಲಿ ಮಾರಾಟಕ್ಕಿದೆ. ಮೆಕ್ಕೆ ಜೋಳ, ಹಿಂಡಿ, ಬೂಸ, ಕಾಕಂಬಿ ಲವಣಗಳು ಮುಂತಾದುವುಗಳನ್ನು ಸಮತೂಕವಾಗಿ ಸೇರಿಸಿದೆ.

1. ಗುಣದಲ್ಲಿ ಶ್ರೇಷ್ಠ,
2. ಬೆಲೆಯಲ್ಲಿ ಲಾಭಕರ,
3. ಹೆಚ್ಚಿನ ಕ್ಷೀರೋತ್ಪತ್ತಿ,
4. ಕಾಯಪುಷ್ಟಿ ಅತ್ಯುತ್ತಮ ಆಹಾರ—

ಇವು ಈ ಆಹಾರದ ವಿಶೇಷ ಗುಣಗಳು.

ಮೇವಿನ ಅಭಾವವಿರುವ ಈ ಕಾಲದಲ್ಲಿ ಮೇಲ್ಕಂಡ ಆಹಾರವನ್ನು ಹಸುಗಳಿಗೂ ಮತ್ತು ಇತರೇ ಜಾನುವಾರುಗಳಿಗೂ ಕೊಟ್ಟು ಹೆಚ್ಚು ಹೆಚ್ಚು ಹಾಲು ಪಡೆಯಿರಿ

ಜಿ. ಎಸ್. ಬೊಮ್ಮೇಗೌಡ,
ಅಧ್ಯಕ್ಷ.

ಎಸ್. ಚೆನ್ನಕೇಶವಯ್ಯ,
ಕಾರ್ಯದರ್ಶಿ.

ಸವಾರಿಪ್ರಿಯರು ಪ್ರಭುಗಳು

(ಒಂದನೇ ಪುಟದಿಂದ)

ಗಳ ಲಾಭಾಲಾಭಗಳಲ್ಲಿ ಕಳೆಯಿತು. ದೈವ ಕೃಪೆಯಿಂದ ಮಳೆ-ಬೆಳೆಗಳು ಲಭ್ಯವಾದುದರಿಂದ ಶ್ರೀ ಸಾಮಾನ್ಯನು ಶ್ರೀ ಸಾಮಾನ್ಯನಾಗಿಯಾದರೂ ಉಳಿದಿದ್ದಾನೆ. ಮುಂದಿನ ವರ್ಷವಾದರೂ ಅಧಿಕಾರಾರೂಢರು ತಮ್ಮ ಸವಾರಿ ಮಾಡುವ ಹವ್ಯಾಸದಿಂದ ದೂರವುಳಿದು ಶ್ರೀ ಸಾಮಾನ್ಯನಿಗೆ ಸುಖ ಸಂತೋಷಗಳನ್ನು ದಯಪಾಲಿಸಲೆಂದು ಆಶಿಸೋಣ.

ಪ್ರಜಾರಾಜ್ಯ ಸಂಚಿಕೆ

ಪ್ರಜಾಪ್ರಭುತ್ವ ದಿನದಂದು ಈ ವಿಶೇಷ ಸಂಚಿಕೆ ನಿಮ್ಮ ಕೈಗಳಲ್ಲಿದೆ. ಹಲವಾರು ಹಳೆಯ ಮತ್ತು ಹೊಸ ಲೇಖಕರ ಲೇಖನಗಳನ್ನು ಸಂಗ್ರಹಿಸುವ ಪ್ರಯತ್ನವಿಲ್ಲಿ ನಡೆದಿದೆ. ನಡೆಸಬೇಕಾದ ಪ್ರಯತ್ನ ಬಹಳವಿದೆಯಾದರೂ ರಾಜ್ಯಕೀಯದಂತೆಯೇ ಎಲ್ಲಾ ಕ್ಷೇತ್ರಗಳಲ್ಲೂ ಈಗ ಪರಿಸ್ಥಿತಿ ತೀವ್ರ ಗತಿಯಿಂದ ಬದಲಾಗುತ್ತಿರುವುದರಿಂದ ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆ ಮುಂದಿಡಬೇಕಾಗಿದೆ; ಕೆಲವೊಮ್ಮೆ ಇಟ್ಟ ಹೆಜ್ಜೆಯನ್ನೂ ಹಿಂದೆ ತಂದುಕೊಳ್ಳಬೇಕಾಗುತ್ತದೆ.

ನಮ್ಮ ಚಂದಾದಾರರಿಗೆ ಜಾಹೀರಾತುದಾರರಿಗೆ ಮತ್ತೆಲ್ಲ ಹಿತೈಷಿಗಳಿಗೆ ಪ್ರಜಾಪ್ರಭುತ್ವ ದಿನದ ಶುಭಾಶಯಗಳು. ವಿಶೇಷ ಸಂಚಿಕೆಯನ್ನು ತಯಾರಿಸುವಲ್ಲಿ ಸಹಕಾರ ನೀಡಿದ ಲೇಖಕ ಮಹನೀಯರಿಗೂ ಜಾಹಿರಾತು ನೀಡಿ ಸಹಕರಿಸಿದವರಿಗೂ ಕೃತಜ್ಞತೆಗಳು. ಹತ್ತಾರು ಬಗೆಯಿಂದ ನೆರವಾದ ನೂರಾರು ಅಭಿಮಾನಿಗಳನು ನಾವೆಂದೂ ಮರೆಯಲಾರೆವು. ನಿಮ್ಮೆಲ್ಲರ ಸಹಾಯವು ಮುಂದೆ ದ್ವಿಗುಣಿತ, ತ್ರಿಗುಣಿತವಾಗುತ್ತ ದೊರೆಯುವಂತಾಗಲಿ.

ಅಹಮದಾಬಾದಿನಿಂದ ರಬಾತಕ್ಕೆ

(ಎರಡನೇ ಪುಟದಿಂದ)

ಅದೇ ನಿಮಿತ್ತ ಮತ್ತೆ ಮುಖಭಂಗವಾಗಲು ತಾವಾಗಿ ಇಂಬು ಮಾಡಿಕೊಂಡದ್ದು ಅದೂರದರ್ಶಿತನವೆಂದು ಯಾವ ತಟಸ್ಥರೂ ಒಪ್ಪಬಹುದು. "ಕರೆದು ಕಚ್ಚಿಸಿಕೊಂಡ ಕರಿಮುಸುಡು" ಎಂದು ನಮ್ಮ ಕಡೆಗೆ ಒಂದು ಗ್ರಾಮೀಣ ಗಾದೆಯು ಮಾತಿದೆ. ಅದರ ಜಾಗತಿಕ ಪ್ರದರ್ಶನ ಭಾರತ ರಬಾತದಲ್ಲಿ ಮಾಡಿಕೊಂಡಿತು.

ಇನ್ನು ಈ ರಬಾತ—ಅಹಮದಾಬಾದುಗಳ ಎರಡು ದುರ್ನೀತಿ ಪ್ರದರ್ಶನಗಳ ಹಿನ್ನೆಲೆಗೆ ಒಂದು ಸಂಬಂಧವಿದೆಯೊ ? ರಬಾತದ ಭಂಗದ ಬಗೆಗೆ ಸಾರ್ವಜನಿಕರ ಪ್ರತಿಕ್ರಿಯೆ ತೀಕ್ಷ್ಣವಾದಷ್ಟೇ ವ್ಯಾಪಕವಾಗಲು ಕಾರಣವೇನು? ಜನಸಂಘದ ಧುರೀಣರು ಈ ಬಗ್ಗೆ ಕರೆದ ಸಭೆಗಳಿಗೆ ದೊಡ್ಡ ಸಂಖ್ಯೆಯಲ್ಲಿ ಜನ ಕಿಕ್ಕಿರಿದದ್ದೇಕೆ ?

ಇದಕ್ಕೆ ಇತರ ತಾತ್ಕಾಲಿಕ ತಾತ್ಪೂರ್ತಿಕ ಕಾರಣಗಳು ಏನೇ ಇರಲಿ, ಇತ್ತೀಚೆಗೆ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಹಿರಿಕಿರಿ ಮಧ್ಯಮಗಳ ಹಿಂದುಗಳ ಭಾವನೆ ಹಾಗೂ ಭೂಮಿಕೆ, ದೇಶದೊಳಗೆ ಮುಸ್ಲಿಂರ ಕುರಿತು ದೇಶದ ಹೊರಗೆ ಅರಬರಾಷ್ಟ್ರಗಳ ಕುರಿತು ತೀವ್ರವಾಗಿದೆ, ಕಠಿಣವಾಗಿದೆ. ಅಹಮದಾಬಾದವು ಮೊದಲಿನದಕ್ಕೆ, ರಬಾತ ಪ್ರತಿಕ್ರಿಯೆಯು ಎರಡನೆಯದಕ್ಕೂ ಪ್ರಚಂಡ ನಿದರ್ಶನವೆಂದರೆ ತಪ್ಪಾಗಲಿಕ್ಕಿಲ್ಲ.

ದೇಶದಲ್ಲಿ ಹಿಂದೂ ಮುಸ್ಲಿಂ ಬಾಂಧವ್ಯಾನುಬಂಧಗಳು ಹದಗೆಡುತ್ತಿದ್ದಂತೆ ದೇಶದ ಹೊರಗೆ ಕೇಂದ್ರ ಸರಕಾರದ ಅರಬ ಅನುಕೂಲ ಧೋರಣೆ ಅಥವಾ ನಿಲುವೇ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಒಂದೆರಡು ಕಾರಣಗಳನ್ನು ಇಲ್ಲಿ ಎತ್ತಿ ಕಾಣಿಸಬಹುದು.

ಅರಬರಾಷ್ಟ್ರಗಳ ಬಗೆಗೆ ನಮ್ಮ ಜನತೆಯ ದೃಷ್ಟಿ ಬದಲಾಗಲು ಆರಂಭವಾದದ್ದೂ ಹೆಚ್ಚು ಕಡಿಮೆ 1962ರಿಂದ 1965ರ ಒಳಗೆ. ಇದು ವಿಶೇಷ ಕಾರಣ ಚೀನಿ ಆಕ್ರಮಣ ಹಾಗೂ ಪಾಕಿಸ್ತಾನಿ ಆಕ್ರಮಣದ ಆ ಕಾಲಮಾನದಲ್ಲಿ ಅರಬರಾಷ್ಟ್ರಗಳು ಒಟ್ಟಾರೆ ಭಾರತದ ಮೈತ್ರಿಯ ಕರೆಗೆ ಓಗೊಡಲು ತಪ್ಪಿದವು. ಇಸ್ರಾಯಿಲರ ವಿರುದ್ಧ, ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರುದ್ಧ ಅರಬರ ಹೋರಾಟಗಳಲ್ಲಿ ಭಾರತವು ಅವರಿಗೆ ಅನಿರ್ಬಂಧ ನೈತಿಕ ಬೆಂಬಲ ಕೊಟ್ಟಿತು. ಅದಕ್ಕೆ ತಕ್ಕ ಪ್ರತ್ಯುತ್ತರ ನಮ್ಮ ಗಂಡಾಂತರದ ಸಮಯಕ್ಕೆ ಅರಬರು ಸಾಕಷ್ಟು ತೋರಿಸಲು ತಪ್ಪಿದರು. ಇದು ಇತಿಹಾಸದ ಒಂದು ಕಟು ಸತ್ಯ.

ಇನ್ನು 1962ರಲ್ಲಿ ಅಧ್ಯಕ್ಷ ನಾಸೇರ್ ವೈಯುಕ್ತಿಕವಾಗಿ ನಮಗೆ ಸಹಾಯಕರಾಗಿದ್ದರು ನಿಜ. ಆದರೆ ಅತ್ತ ಚೀನದ ಮನಸ್ಸು ನೋಯಿಸದಂತೆ ಅವರು ಎಲ್ಲ ವಿಧವಾಗಿಯೂ ಜಾಗ್ರತೆ ವಹಿಸಿದರು. ಈ ಕುರಿತು ಅವರ ವ್ಯಗ್ರತೆ ಯೋಗ್ಯವೇ ಇತ್ತು. ಆದರೆ ನಮ್ಮ ಜನಸಾಮಾನ್ಯರ ಅಭಿಪ್ರಾಯ ಅವರಲ್ಲಿ ಕಾರ್ಪಣ್ಯ ಕಾಣುವುದೂ ಅಷ್ಟೇ ಸಹಜವಿತ್ತು. ಅಧ್ಯಕ್ಷ ನಾಸೇರ್ ಭಾರತದ ನಿಲುವು ಎತ್ತಿ ಹಿಡಿದಿದ್ದರೂ ಅವರ ಪ್ರಧಾನಿ ಅಲಿಸಾಬ್ರಿ ಪೇಕಿಂಗ ಪಕ್ಷವನ್ನೇ ಸಮರ್ಥಿಸಿದನು!

ಅದೇ ರೀತಿ ಪಾಕಿಸ್ತಾನದ ಆಕ್ರಮಣದ ಸಮಯಕ್ಕೆ ಜೋರ್ಡಾನ್ ಮತ್ತು ಸೌದಿ ಅರೇಬಿಯಾದ ಸರಕಾರಗಳು ಭಾರತಕ್ಕೆ ಪ್ರತ್ಯಕ್ಷವಾಗಿಯೇ ವಿರುದ್ಧವಾಗಿದ್ದವು. ಅಲ್ಲದೆ ಬೇರೆ ಯಾವ ಅರಬ ರಾಷ್ಟ್ರವೂ ಭಾರತಕ್ಕೆ ಶಾಬ್ದಿಕ ಸಹಾನುಭೂತಿಯನ್ನು ತೋರಿಸಲಿಲ್ಲ. ಮೇಲಾಗಿ ಪಾಕಿಸ್ತಾನಕ್ಕೆ ಅವೇ ರೀತಿಯ ನೆರವು ನೀಡಲು ಇರಾಣ ದಾರಿ ತೆರೆದ ಕೊಟ್ಟಿತು! ಅಂದಾದ ಅರಬ ರಾಷ್ಟ್ರಗಳ ಬಗೆಗೆ ಒಟ್ಟಾರೆ ಭಾರತೀಯ ಜನತೆ ಅಸಹನೆ ಅಲ್ಲದಿದ್ದರೂ ಉಗ್ರ ಉದಾಸೀನತೆ ತಳೆದರೆ ಆಶ್ಚರ್ಯವೇನು?

(ಮೂವತ್ತೈದನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಊಟ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

With best compliments from

HOTEL USHA

COURT ROAD, UDIPI.

**A luxury Hotel in the heart of the city
with boarding and lodging and bar attached**

ಉಡುಪಿಯಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ
ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿದ
ಅತ್ಯುತ್ತಮ ಆಕರ್ಷಣೀಯ ಹೋಟೆಲ್

ಹೋಟೆಲ್ ಉಷಾ

ಕೋರ್ಟ್ ರಸ್ತೆ, ಉಡುಪಿ.

ಉಪಾಹಾರ, ಊಟ ಮತ್ತು ವಸತಿ ಗೃಹ

ಬಾರ್ ಲಗ್ತೀಕರಿಸಿದೆ.

ಫೋನ್: 399

"Riches amassed in a haste may diminish. But those Collected little by little will multiply through."

MANGALORE BENEFIT CHIT FUND PRIVATE LTD.

Regd. Office: Church Building, KODIYALBAIL,

MANGALORE-3.

Branches at : MANGALORE (Phone 5209)
PUTTUR (Phone 131)
COONDAPOOR and UDIPI.

ಗಣರಾಜ್ಯೋತ್ಸವದ ಶುಭಸಂದರ್ಭದಲ್ಲಿ
ಸಮಸ್ತರಿಗೂ ಸುಖಸಂತೋಷಗಳು ಲಭಿಸಲಿ

ಸುವಾಸಿನಿ ಬೀಡಿ ವರ್ಕ್ಸ್

ಕದ್ರಿ ರಸ್ತೆ—ಮಂಗಳೂರು-3

With best compliments from

THE PARTNERS

SUVASINI BEEDI WORKS

Kadri Road—Mangalore-3

ಗಣರಾಜ್ಯೋತ್ಸವದ ಶುಭಾಶಯಗಳು!

ಶ್ರೀ ಮಂಜುನಾಥ ಟಾಯರ್ ರಿಟ್ರೇಡಿಂಗ್ ವರ್ಕ್ಸ್

ಬಲ್ಮಠ ರಸ್ತೆ, **Phone:** 4923
ಮಂಗಳೂರು-೧ 3255

— ಶಾಖೆಗಳು —

ಶಿರಿಬೀಡು, ಉಡುಪಿ
Phone: 212

ಬೊಳ್ವಾರ್, ಪುತ್ತೂರು
Phone: 161

Telegram: 'SAHAKARI' Phone 4637

THE S. K. A. C. M. S. LTD.,

MANGALORE-1.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಲಿಮಿಟೆಡ್

ಸಹಕಾರಿ ಮಹಲ್,
ಮಂಗಳೂರು—1

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ,
ತೆಂಗಿನ ಕ್ಯಾ ವಗೈರೆ (ಅಕ್ಕಿ ಭತ್ತ ಹೊರತು)
ವ್ಯವಸಾಯದ ಎಲ್ಲಾ ಉತ್ಪತ್ತಿಗಳನ್ನು
ಕಮಿಶನ್ ವ್ಯಾಪಾರಕ್ಕೆ ಪಡಕೊಂಡು
ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಎಸ್. ನರ್ಸಪ್ಪಯ್ಯ, B. A., B. L., ಉಪಾಧ್ಯಕ್ಷ

ಬಿ. ಪ್ರಭಾಕರ ರಾವ್, M. A., B. L. ಅಧ್ಯಕ್ಷ

SRI KRISHNA TOURIST TAXI

COURT CANTEEN,

BIJAPUR

Phone: 161

Prop: **K. Krishna Rao A. Shetty.**

ಅಖಿಲ ಭಾರತ ಪ್ರವಾಸಕ್ಕೆ

ಅತ್ಯನುಕೂಲ! ಸುಖಸೌಕರ್ಯ!!

ಶ್ರೀ ಕೃಷ್ಣ ಟೂರಿಸ್ಟ್ ಟ್ಯಾಕ್ಸಿ

ಕೋರ್ಟ ಕೇಂಟೀನ್

ಬಿಜಾಪುರ

BANGALORE RESTAURANT

Station Road

BIJAPUR

Phone: 505

Prop: **K. Srinivasa Rao A. Shetty**

ಬಿಜಾಪುರಕ್ಕೆ ಬಂದಾಗ

ತಪ್ಪದೆ ಸಂದರ್ಶಿಸಿರಿ—

ರುಚಿಕರ ತಿಂಡಿ-ತಿನಸುಗಳಿಗೆ,

ಆಹ್ಲಾದಕರವಾದ ಪಾನೀಯಗಳಿಗೆ—

ಬೆಂಗಳೂರು ರೆಸ್ಟೋರೆಂಟ್

ಸ್ಟೇಶನ್ ರೋಡು — ಬಿಜಾಪುರ

ಬಿಜಾಪುರದಲ್ಲಿ ಹೊಸತಾಗಿ ಪ್ರಾರಂಭಿಸಿದ

ಸುಸಜ್ಜಿತ ವ್ಯವಸ್ಥೆಯಿಂದೊಡಗೂಡಿರುವ

ದುರ್ಗಾ ವಿಲಾಸ

ಸದಾ ನಿಮ್ಮ ಸೇವೆಗೆ ಸಿದ್ಧವಾಗಿದೆ

ನವೀನ ರೀತಿಯ ತಿಂಡಿತಿನಸುಗಳು !

ವಿನಯಶೀಲ ನೌಕರವರ್ಗ! ಗ್ರಾಹಕರ ತೃಪ್ತಿಯೇ

ಧ್ಯೇಯವಾಗಿರುವ ಆಡಳಿತ!

DURGA VILAS

Near Laxmi Temple,

STATION ROAD

BIJAPUR

Prop: **K. Srinivasa Rao A. Shetty**

ಅತ್ಯಾಧುನಿಕ ಸುಸಜ್ಜಿತ ರೀತಿಯಲ್ಲಿ ತಯಾರಿಸಿದ

ಊಟ ಮತ್ತು ರೂಮುಗಳು!

ಯಾವಾಗಲೂ ಉತ್ತಮ ಸೇವೆಗೆ ಸಿದ್ಧವಿರುವ

ಏಕೈಕ ಸ್ಥಳವೆಂದರೆ ಒಂದೇ ಒಂದು—

ಮಿತ್ರ ಸಮಾಜ

ಭೋಜನ ಮತ್ತು ವಸತಿಗೃಹ

ಬಿಜಾಪುರ

ಇದರ ಶಾಖೆ- ನಾರಾಯಣಪುರ

P. W. D. Canteen

MITHRA SAMAJA

BOARDING & LODGING

NEAR TRIPURA SUNDARA TALKIES

BIJAPUR

Phone: 470

Prop: **K. Narayana Shetty**



ಶ್ರೀ ಟಿ. ಅನಂತ ಪೈ

ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣವನ್ನು ಈಗ ಎಲ್ಲರೂ ಸಮರ್ಥಿಸುವವರೇ. ಆದರೆ, ಇದನ್ನು ಸಂಪೂರ್ಣ ಹೃದಯದಿಂದ ಸಮರ್ಥಿಸುವವರು ಕೆಲವೇ ಮಂದಿ. ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೋನ್ನೆ ಅನಂತ ಪೈಯವರು ರಾಷ್ಟ್ರೀಕರಣದ ಹಿಂದಿರುವ ಆತ್ಮವಾಲ್ಯ ಉದ್ದೇಶವನ್ನು ಬಹಳಷ್ಟು ಹಿಂದೆಯೇ ಮನಗಂಡಿಕೆ ಮಾಡಿಕೊಂಡವರು; ಅದನ್ನು ಸಾಧ್ಯವಾದಷ್ಟು ಕಾರ್ಯರೂಪಕ್ಕೆ ತರಲು ಅಂದಿನಿಂದಲೇ ಪ್ರಯತ್ನಿಸುತ್ತ ಬಂದವರು.

ಸಿಂಡಿಕೇಟ್ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿ ಮತ್ತದು ದೇಶದ ಪ್ರಥಮ ವರ್ಗದ ಬ್ಯಾಂಕೆನಿಸುವುದಕ್ಕೆ ಶ್ರೀ ಪೈಯವರ ಸಾಹಸಮಯ ಸೇವೆ ಮುಖ್ಯ ಕಾರಣ. ಗ್ರಾಮೀಣ ಜನತೆಗೂ ಬ್ಯಾಂಕಿಂಗ್ ಸೌಲಭ್ಯ, ಬಡಗಾಸುಗಳನ್ನೂ ಉಳಿಸುವ ಯೋಜನೆಗಳು ದೇಶವನ್ನು ಕಟ್ಟುವಲ್ಲಿ ಮಹತ್ವದ ಪಾತ್ರವಹಿಸುತ್ತವೆಯೆಂಬ ಕಟುಸತ್ಯ ಶ್ರೀ ಪೈಯವರು ಮೊದಲೇ ಅರಿತುಕೊಂಡಿದ್ದರು. ಶ್ರೀ ಅನಂತ ಪೈಗಳ ನಾಯಕತ್ವದಲ್ಲಿ ಸಿಂಡಿಕೇಟ್ ಬ್ಯಾಂಕು ಅನಂತಾನಂತ ಶಾಖೆಗಳಾಗಿ ಬೆಳೆದು ಅನಂತ ಜನಕೋಟಿಗೆ ಬ್ಯಾಂಕಿಂಗ್ ರುಚಿಯನ್ನು ಸವಿಸಿದೆ.

ಶ್ರೀ ಪೈಯವರದು ಸಾಹಸಮಯ ವ್ಯಕ್ತಿತ್ವ. ಉಡುಪಿ - ಮಣಿಪಾಲಗಳ ಶೈಕ್ಷಣಿಕ, ಸಾಮಾಜಿಕ ರಂಗಕ್ಕೆ ಇವರು ಸಲ್ಲಿಸಿದ ಸೇವೆ ಮರೆಯತಕ್ಕದಲ್ಲ. "ಉದಯವಾಣಿ" ದಿನ ಪತ್ರಿಕೆಯು ಉದಯವಾಗುವುದಕ್ಕೆ ಹಿನ್ನೆಲೆಯಲ್ಲಿ ನಿಂತು ಶಕ್ತಿ ತುಂಬಿದವರಲ್ಲಿ ಶ್ರೀ ಪೈ ಒಬ್ಬರು. ರಾಜಕೀಯದಲ್ಲೂ ಅವರ ಸೇವೆ ಅಲ್ಪವಲ್ಲ.

ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರ ಪದ ಸದ್ಯ ಖಾಲಿಯಾಗಲಿದ್ದು ಇದಕ್ಕೆ ಶ್ರೀ ಪೈಯವರ ಹೆಸರೂ ಕೇಳಿ ಬರುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಮಹಾ ಮಂಡಲ ರಚನೆಯಾಗುವುದೆಂದೂ ಇದರ ಮುಖ್ಯಸ್ಥರಾಗಿ ಶ್ರೀ ಪೈಯವರು ಆಯ್ಕೆಯಾಗುವರೆಂದೂ ಕೇಂದ್ರದಂತೆ. ಈ ಎರಡೂ ಸುದ್ದಿ ಗಾಳಿ ಸುದ್ದಿಯಾಗಲಾರದು. ಆದರೆ, ಈ ಎರಡೂ ಹುದ್ದೆಗಳಿಗೆ ಶ್ರೀ ಪೈಯವರು ಸಮರ್ಥರು, ಯೋಗ್ಯರು ಎಂಬುದಕ್ಕೆ ಅವರ ಇದುವರೆಗಿನ ಸೇವಾ ಇತಿಹಾಸವೇ ಸಾಕ್ಷಿ ಹೇಳುತ್ತದೆ.

ಅಹಮ್ಮದಾಬಾದದಿಂದ ರಬಾತಕ್ಕೆ

(ಮೊದಲನೆಯ ಪುಟದಿಂದ)

ಇಲ್ಲಿ ಇನ್ನೊಂದು ಮಹತ್ವವನ್ನು ಗಮನಿಸಬೇಕು. ಅದೇನೆಂದರೆ, ಗಾಂಧೀಜಿಯ ಭಾರತ ಗಾಂಧೀಜಿಯ ಭಾಷೆಯನ್ನೇ ಆಡುತ್ತಿದ್ದ ನೆಹರೂಜಿಯ ನೀತಿಯು ಪ್ರತಿಪಕ್ಷದ ಪ್ರಕ್ರಿಯೆಗೆ ನಿರಪೇಕ್ಷವಿರುತ್ತಿತ್ತು. ಈ ನಿರಪೇಕ್ಷತೆಯನ್ನು ಭಾರತೀಯ ಜನತೆಗೂ ಅವರು ಬೋಧಿಸಿದ್ದರು. ಇತರರು ಹೇಗೇ ನಡೆಯಲಿ, ಅವರ ನೋಟ ನಿಲುವು ಏನೇ ಇರಲಿ—ನಮ್ಮ ನೀತಿ ತನ್ನ ನಿಷ್ಠೆಗೆ ಪ್ರಾಮಾಣಿಕವಾಗಿ ಮುಂದರಿಸುವುದು ನೆಹರೂ ಧೋರಣೆ ಆಗಿತ್ತು.

ಆದರೆ ನೆಹರೂಜಿಯ ನಂತರ ನಮ್ಮ ಜನ ಈ ನಿರಪೇಕ್ಷತೆಯ ನಿಲುಮೆಯನ್ನು ಮನಸಿಗವಾಗಿ ಕ್ರಮೇಣ ಬಿಟ್ಟುಕೊಟ್ಟಂತಿದೆ. Reciprocity ಇದು ನಮ್ಮ ವಿದೇಶಾಂಗ ನೀತಿಗೆ ಆಧಾರ ಶಿಲೆಯಾಗಬೇಕೆಂದು ಜನತೆಯ ಅವರ ಆಶೋತ್ತರಗಳನ್ನು ಪ್ರತಿನಿಧಿಸುವ ಪಕ್ಷಗಳ ಆಗ್ರಹವಾಗಿದೆ. ಆದ್ದರಿಂದ ಅರಬರೇನು, ಅಮೆರಿಕೆಯೇನು, ಸೋವಿಯತ್ ರಶಿಯ ಏನು—ಯಾವ ಸಂದರ್ಭಕ್ಕೂ ಈ "ಪ್ರತಿಯೋಗಿ ಸಹಕಾರಿತ್ವ"—ಹಿಂದೆ ಲೋಕಮಾನ್ಯರು ಪ್ರತಿಪಾದಿಸಿದ ತತ್ವ—ನಮ್ಮ ರಾಜಕೀಯರಂಗದಲ್ಲಿ ಪ್ರವೇಶಮಾಡಿದೆ. ಮಹಾತ್ಮರ ಏಕ ಪಕ್ಷೀಯ ಧೋರಣೆಯ ವ್ಯಾವಹಾರಿಕ ಮೌಲ್ಯ ಕಡಿಮೆ ಆಗಿದೆ.

ಆದ್ದರಿಂದ ಅರಬ ರಾಷ್ಟ್ರಗಳನ್ನು ನೋಡುವ ಹಿಂದಿನ ದೃಷ್ಟಿಯು ಹಿಂದಿನಷ್ಟು ಶುಭ್ರವಾಗಿ ಉಳಿದಿಲ್ಲ. ಈಗಲಾದರೂ ರಬಾತದಲ್ಲಿ ನಮ್ಮ ಪ್ರವೇಶ ಮತ್ತು ಮುಖಭಂಗ ಎರಡನ್ನೂ ಸಮರ್ಥಿಸಿಕೊಳ್ಳುವ ನಮ್ಮ ಕೇಂದ್ರ ಸರಕಾರ ತಾವು ನಡೆದ ರೀತಿ ಸರಿಯೆಂದು ಸಾಧಿಸುತ್ತಿರುವಾಗಲೇ ಮೊರಕ್ಕೊದಿಂದ ತನ್ನ ರಾಯಭಾರಿಯನ್ನು ಹಿಂದೆಗೆದುಕೊಂಡಿದ್ದೇಕೆ? ಇದು Reciprocity ಯ ಪ್ರತಿಕ್ರಿಯೆಯಲ್ಲದೆ ಮತ್ತೇನು?

ಅರಬರ ಕುರಿತು ಭ್ರಮನಿರಸನಕ್ಕೆ ಇದೊಂದು ವಿಶೇಷ ಕಾರಣವಲ್ಲದೆ, ಒಂದು ಸಾಮಾನ್ಯ ಕಾರಣವೂ ಇದೆ. ಇತ್ತೀಚೆಗೆ ಭಾರತೀಯ ಕಣ್ಣಿನಲ್ಲಿ ಅರಬ ರಾಷ್ಟ್ರಗಳು ಕೆಳಗಿಳಿಯಲು ಅವರ ಚರಿತ್ರೆಯು ಕಾರಣವಾಗಿದೆ. ಅದು ಸಂಗ್ರಹವಾಗಿ ಇಂತಿದೆ—

ಅನೇಕ ಅರಬ ದೇಶಗಳಲ್ಲಿ ರಾಜಕೀಯ ಅಸ್ಥಿರತೆ "ಸ್ಥಾಯಿ"ಯಾಗಿದೆ. ಅಲ್ಲಿಯ ಸರಕಾರಗಳು ಸರ್ವಾಧಿಕಾರಿಯಾಗಿವೆ ನಮ್ಮ ಪ್ರಜಾಪ್ರಭುತ್ವದ ಪ್ರವೃತ್ತಿಗೆ ಅದು ವಿರೋಧಿ. ಇರಾಕ್ ಸಿರಿಯಾಗಳಲ್ಲಿ ರಕ್ತಮಯ ಕ್ರಾಂತಿಗಳಾಗಿ ಹಳೆ ಆಳರಸರ ನೆತ್ತರದಲ್ಲಿ ಹೊಸ ಆಳರಸರ ಕೈ ಕಾಲು ಅದ್ದಿವೆ! ಅರಬ ರಾಷ್ಟ್ರಗಳು ಪ್ರಜಾಪ್ರಭುತ್ವದತ್ತ ವಿಶೇಷ ಪ್ರಗತಿಯನ್ನು ಮಾಡಿದ್ದೂ ಕಂಡು ಬರುವುದಿಲ್ಲ. ಒಟ್ಟಾರೆ ಅವರ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆ ಕೆಳಮಟ್ಟದ್ದಾಗಿದೆ. ಇದರ ವಿಶ್ವ ಪ್ರದರ್ಶನ 1967ರಲ್ಲಿ ಇಸ್ರಾಯಿಲರ ಕೈಯಲ್ಲಿ ಸೋತು ಪೆಟ್ಟು ತಿನ್ನುವುದರಲ್ಲಿ ಆಯಿತು. ಸೋವಿಯತ್ ರಶಿ

ಶ್ರೀ ಎಂ. ಸುಂದರರಾಮ ಶೆಟ್ಟಿ

ವಿಜಯಾ ಬ್ಯಾಂಕಿನ ಚೇರ್ಮನ್ ಶ್ರೀ ಎಂ. ಸುಂದರರಾಮ ಶೆಟ್ಟರು ಬ್ಯಾಂಕಿಂಗ್ ಕ್ಷೇತ್ರದ ಉನ್ನತ ಪದವಿಗೆ ಬಂದದ್ದು ಅನಿರೀಕ್ಷಿತ. ಅವರದನ್ನು ಬಯಸಿರಲಿಲ್ಲ. ಆದರೆ, ಈ ಪದವಿಯು ಅವರ ಆದರ್ಶ ಸೇವೆ ಶ್ರೀ ಸಾಮಾನ್ಯನಿಗೂ ದೊರೆಯುವಂತೆ ಮಾಡಿತು. ಇತ್ತೀಚಿನ ವರ್ಷಗಳಲ್ಲಿ ವಿಜಯಾಬ್ಯಾಂಕು ತನ್ನ ಶಾಖೆಗಳನ್ನು ರಭಸದಿಂದ ತೆರೆಯುತ್ತಿದೆ; ಇತರ ಕೆಲವು ಚಿಕ್ಕಪುಟ್ಟ ಬ್ಯಾಂಕ ಗಳನ್ನು ತನ್ನಲ್ಲಿ ವಿಲೀನ ಮಾಡಿಕೊಂಡಿದೆ. ಜನತಾ ಜನಾರ್ದನನ ಸೇವೆಗೆ ತನ್ನ ತಾನೇ ಸಮರ್ಪಿಸಿಕೊಂಡಿದೆ. ಈ ಸೇವೆಯ ಹಿಂದಿರುವ ಸುಪ್ತ ವ್ಯಕ್ತಿ ಶ್ರೀ ಎಂ. ಸುಂದರರಾಮ ಶೆಟ್ಟರು.

ಶ್ರೀ ಶೆಟ್ಟರು ವ್ಯವಹಾರ ಕುಶಲರ; ಸರಳ ಹೃದಯರು. ಅವರ ಸರಳತೆ ಜನರನ್ನು ಆಕರ್ಷಿಸುತ್ತದೆ, ವ್ಯವಹಾರ ಕುಶಲತೆ ವ್ಯವಹಾರವನ್ನೂ ಸಾಧಿಸುತ್ತದೆ. ವಿಜಯಾ ಬ್ಯಾಂಕು ಇವರ ಛಾಯಾಛತ್ರವನ್ನು ಪಡೆದ ಮೇಲೆ ತನ್ನ ಶಾಖೆಗಳನ್ನು ಮೂರು ಪಟ್ಟು-ನಾಲ್ಕು ಪಟ್ಟು ಹೆಚ್ಚಿಸಿಕೊಂಡದನ್ನು ಯಾರೂ ಮರೆಯಲಾರರು. ಸಾಮಯಿಕ ಅವಶ್ಯಕತೆಗಳನ್ನು ಮನಗಂಡು, ಅವನ್ನು ಸಾಧಿಸಲು ವಿಜಯಾ ಬ್ಯಾಂಕಿಗೆ ತರಬೇತಿ ನೀಡಿದವರೂ ಶ್ರೀ ಶೆಟ್ಟರೆಂದರೆ, ಆಶ್ಚರ್ಯವಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೌಲಭ್ಯಗಳೇ ಅಲಭ್ಯವಿರುವಲ್ಲಿ ವಿಜಯಾ ಬ್ಯಾಂಕು ಈಗ ತನ್ನ ಶಾಖೆಗಳನ್ನು ತೆರೆಯ ತೊಡಗಿದೆ. ದೇಶದ ಪುನಾರಚನೆಯಲ್ಲಿ ದೇಶದ ಆರ್ಥಿಕ ವ್ಯವಸ್ಥೆಯ ಬ್ಯಾಂಕುಗಳು ಮಹತ್ವದ ಪಾತ್ರವಹಿಸುತ್ತವೆಂಬುದನ್ನು ಅರಿತವರು ಇದನ್ನು ತಿಳಿದು ಕೊಂಡ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಶೆಟ್ಟರೂ ಒಬ್ಬರು. ಇವರನ್ನು ನಾಯಕರೆಂದು ಕರೆಯುವುದಕ್ಕಿಂತ ಸೇವಕರೆಂದು ಹೇಳುವುದು ಸೂಕ್ತ. ಉತ್ತಮ ಗುಣಶೀಲದ ಮೃದುಮಧುರ ಸ್ವಭಾವದ ಧೀರ ಸರಳ ಗಾಂಭೀರ್ಯದ ಶ್ರೀ ಸುಂದರರಾಮ ಶೆಟ್ಟರಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ಕಾದಿದೆ.

ಯಾ ... ಗೆ ಶಸ್ತ್ರಾಸ್ತ್ರಗಳ ನೆರವನ್ನು ಕೊಟ್ಟರೂ ಅದರ ವಿನಿಯೋಗ ಮಾಡಿಕೊಳ್ಳಲಿಕ್ಕೂ ಅವರಿಂದ ಆಗಲಿಲ್ಲ.

ಇಂಥ ಅರಬ ರಾಷ್ಟ್ರಗಳ ಆರಾಧನೆ ನಮ್ಮ ಸರಕಾರ ಏಕೆ ಒಪ್ಪಿಕೊಂಡಿತು? ಅಪ್ಪಿಕೊಂಡಿತು? ದೇಶದಲ್ಲಿಯ 6 ಕೋಟಿ ಮುಸ್ಲಿಮರ ಸಂತೋಷಕ್ಕಾಗಿ ಎಂಬ ಭಾವನೆ ನಮ್ಮಲ್ಲಿ ಹಿಂದುತ್ವ ನಿಷ್ಠ ರಾಜಕೀಯ ಧುರೀಣರು ಸುಸಂಘಟಿತವಾಗಿ ಪ್ರಚಾರಗೊಳಿಸಿದ್ದಾರೆ. ಈ ಪ್ರಚಾರ ಮೇಲೆ ಹೇಳಿದ ವಿಶೇಷ ಕಾರಣಗಳಿಂದಾಗಿ ಇತ್ತೀಚೆಗೆ ಸಫಲವಾಗುತ್ತಿರುವಂತೆ ಕಾಣುತ್ತಿದೆ. ಭಾರತೀಯ ಮುಸ್ಲಿಮರು ಭಾರತದ ಹೊರಗಿನ ತಮ್ಮ ಧರ್ಮದ ರಾಷ್ಟ್ರಗಳೊಡನೆ ತಾದಾತ್ಮ್ಯ ಹೊಂದಲು ಹಂಬಲಿಸುತ್ತಾರೆಯೇ ಹೊರತು ತಮ್ಮ ರಾಷ್ಟ್ರದೊಂದಿಗೆ ಅಲ್ಲ ಎಂಬ ಒಂದು ತೀವ್ರಮತವನ್ನು ಇಟ್ಟುಕೊಂಡು ದೇಶದ ರಾಜಕೀಯವನ್ನು ಕುರಿತು ನೋಡುವ, ನಡೆಯುವ ಒಲವು ಬಲಿಯ ತೊಡಗಿದೆ.

ಈ ಒಲವಿಗೆ ಕಡೆಯೆಲ್ಲಿ? ಕಡೆಯೆಂತು? ಇದೊಂದು ನಂಜಿನ ಸುತ್ತು. ಸಂಶಯದಿಂದ ಭಯ, ಭಯದಿಂದ ಸಂಶಯ, ಇದು ಬುದ್ಧಿಯ ವಿರುದ್ಧ ಭಾವನೆಯ ಬಂಡಾಯ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. & S. C No. 8/1969.

1. ಬೆನೆಡಿಕ್ಟ ಡಿ'ಸೋಜ
2. ಜೇರೊಮ್ ಸಾಲ್ಡಾಂಘಾ

3. ಎಲಿಯಾಸ್ ಸಾಲ್ಡಾಂಘಾ, 4. ಜಾಸಿಂತಾ ಫಿಲೋಮಿನಾ ಸಾಲ್ಡಾಂಘಾ, 5. ಅನ್ನಾ ಸಿಂತಿಯಾ ಸಾಲ್ಡಾಂಘಾ, 6. ಗ್ರೇಸ್ ಲಿಡ್ವಿನ್ ಸಾಲ್ಡಾಂಘಾ—ಮೈನರರು ಗಾರ್ಡಿಯನ್ ಅಡ್ ಲಿಟೆಮ್ ಕೆಸ್ಟರಿನೋ.

ಸಾಲ್ವದೋರ್ ಜೋನ್ ಸಾಲ್ಡಾಂಘಾರ ಮಕ್ಕಳು, ಉಡುಪಿ ತಾಲೂಕು, ಶಿರ್ವ ಗ್ರಾಮದ —ಅರ್ಜಿದಾರರು.

ಅರ್ಜಿದಾರರ ತಂದೆ ಮೃತ ಸಾಲ್ವದೋರ್ ಜೋನ್ ಸಾಲ್ಡಾಂಘಾರ ಹಕ್ಕಿನ ಬ್ಯಾಂಕ್ ಡಿಪೊಸಿಟುಗಳು ರೂ. 17,665-12ನ್ನು ವಸೂಲು ಪಡಿಯುವರೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯ ತಾರೀಕು 30-1-70ಕ್ಕೆ ಇಟ್ಟಿದೆ. ಇದಕ್ಕೆ ಆಕ್ಷೇಪಿಸುವವರು ಸದರಿ ತಾ. 30-1-70ನೇ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಸ್ವಂತ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪ ಮಾಡಿಕೊಳ್ಳತಕ್ಕದು ಎಂಬುದಾಗಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುವದು

Sd/- Gratian C. Rego
Vakil for Petitioners.

ಉಡುಪಿ,
ತಾ. 28-1-70

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಮಾಲಾಕೋಟೆ, ಉಡುಪಿ, ದ. ಕ.

With best compliments from

HOTEL SATKAR

Boarding, Lodging & Restaurant

Behind Corporation Office,
9 MISSION ROAD

BANGALORE-27

Phone No.—
1 28337
2 29887

Grams:
HOST SATKAR

Vegetarian Cuisine

Attached Bath Rooms & Phones

Running H and C Water.

Moderate Charges

Railway Station, Laundry, Post Office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

Prop. T S. SHETTY

With best compliments from

THE CANARA NURSERY RESEARCH GARDENS

(Well known orchard in South Kanara)

POST: ULIARGOLI,

KAUP, S. K.

Founder: LATE KAUP MUDDANNA SHETTY

Varieties of grafted fruit and flower plants are available for sale.

Phone : 42 Kaup

ಗಣರಾಜ್ಯೋತ್ಸವದ ಶುಭಾಶಯಗಳು!

ಕಾಮತ್ ಹೋಟೆಲ್

ಬೆಂಗಳೂರಲ್ಲಿ ಸರ್ವರ ಅಚ್ಚುಮೆಚ್ಚಿನ
ಆದರಣೀಯ ಹಾಗೂ ಆಕರ್ಷಣೀಯ
ಉತ್ತಮ ಫಲಾಹಾರ ಮತ್ತು ಭೋಜನ ಮಂದಿರ
ಶೇಷಾದ್ರಿಪುರಂ, ಬೆಂಗಳೂರು-20

ಶುಚಿ ರುಚಿಕರ ತಿಂಡಿ ತಿನಸುಗಳು! ಆಹ್ಲಾದಕರ ಪಾನೀಯಗಳು!
ವಿನಯಶೀಲ ಉತ್ಸಾಹಿ ಮೆನೇಜರರ ಮೇಲ್ವಿಚಾರಣೆ!
ದಕ್ಷ ಸೇವಾಸೌಕರ್ಯ!

KAMAT HOTEL

Restaurant & Boarding

SHESHADRIPURAM,

BANGALORE-20

Phone: 29012

Prop. **R. B. KAMATH**

ಮನೆಗೆ ಬೇಕು ಮನ ಮೆಚ್ಚುವ ಮಡದಿ—
ವ್ಯವಹಾರಕ್ಕೆ ಬೇಕು ನಂಬಿಗಸ್ಥ ವ್ಯಾಪಾರಿ

ದಕ್ಷಿಣ ಭಾರತದ ಹೆಸರಾಂತ
"ಸಂಜಯ"
ಯಾಂತ್ರಿಕ ಕಡೆಯುವ ಕಲ್ಲುಗಳಿಗೆ,
ಪಂಪುಸೆಟ್ಟು, ಮೋಟಾರು, ಎಣ್ಣೆಯ ಇಂಜಿನು
ಪೊಲಿತಿನ್ ಪೈಪು, ಫೇನ್ ಮುಂತಾದವುಗಳಿಗೆ
ವಿಶ್ವಾಸೀ ಸಂಸ್ಥೆ—

ಸಂಜಯ ಇಂಡಸ್ಟ್ರೀಸ್

ಹಂಪನಕಟ್ಟೆ ಬಳಿ, ಮಂಗಳೂರು-1

ಫೋನ್: **6453**

ಇದೀಗ
ಮೈಸೂರು ಸರ್ಕಾರದ ರೇಷ್ಮೆ ನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮಾನಂದವಾಡಿ ರಸ್ತೆ, ಮೈಸೂರು-4.

With best compliments from:

NARAYAN SHETTY

BHARATH JYOTHI

ICE CREAM

OUTDOOR CATERERS AND CONTRACTORS

KAILAS DARSHAN BUILDING
KENNEDY BRIDGE NEAR NANA CHOWK
BOMBAY-7. WB.

H. O. **NIKADWARI LANE, GIRGAUM, BOMBAY-4. BR.**

PHONE NO. 353483

NAVAYUGA
22 & 29 JAN· 1970

REGD. No. 176
LICENCE No. 33
Licensed to Post without Prepayment

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ನಿಮ್ಮ ವ್ಯವಹಾರವನ್ನು
ವಿಜಯಾ ಬ್ಯಾಂಕ್
ಅವರಲ್ಲಿ ಬೆಳೆಸಿ

'ವಿಜಯಾ ಬ್ಯಾಂಕ್'ನೊಡನೆ ಬ್ಯಾಂಕಿಂಗ್ ವ್ಯವಹಾರ ಹೊಂದುವುದು, ಬ್ಯಾಂಕ್ ಅಕೌಂಟ್ ಹೊಂದಿರುವುದಕ್ಕಿಂತ ಹೆಚ್ಚಿನದಾದುದು. 'ವಿಜಯಾ ಬ್ಯಾಂಕ್' ಮಾಡುವ ಸೇವೆ, ನೀಡುವ ಸಸ್ನೇಹಯುತ ಔಪಯೋಗಿಕವಾದ ಸಲಹೆ, ತಿಳಿಸುವ ವಿಷಯಗಳು ವ್ಯಾಪಾರಿ ಕ್ಷೇತ್ರದ ಅನೇಕರನ್ನು ಆಕರ್ಷಿಸಿವೆ. **38** ವರ್ಷದ ಅನುಭವದ ಉಪಯೋಗ ಸಣ್ಣ ಹಾಗು ಭಾರಿ ವ್ಯವಹಾರ ಉಳ್ಳ ಎಲ್ಲ ಗಿರಾಕಿಗಳಿಗೂ ಸಮಾನವಾಗಿ ದೊರೆಯುವುದು. ನಿಮ್ಮ ವ್ಯಾಪಾರ ಹಾಗು ಅದರ ಸಮಸ್ಯೆಗಳ ಪರಿಹಾರಕ್ಕೆ 'ವಿಜಯಾ ಬ್ಯಾಂಕ್' ಸರ್ವದಾ ಸಹಾಯ, ಸಹಕಾರ ನೀಡುವುದು.

★

ನಿಮ್ಮ ಸೇವೆಗಾಗಿ
ಈಗ
ಮೈಸೂರು ರಾಜ್ಯದಲ್ಲಿ
ಕೇರಳ ರಾಜ್ಯದಲ್ಲಿ
ಮದ್ರಾಸು ರಾಜ್ಯದಲ್ಲಿ
ಆಂಧ್ರ ಪ್ರದೇಶ
ಮತ್ತು
ಮಹಾರಾಷ್ಟ್ರ ರಾಜ್ಯದಲ್ಲಿ
ನಮ್ಮ ಶಾಖೆಗಳು
114 ಇವೆ.

ವಿಜಯಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1931

ಆಡಳಿತ ಕಛೇರಿ:
ಭಾರತೀಯ ವಿದ್ಯಾ ಭವನ ಬಿಲ್ಡಿಂಗ್
ರೇಸ್ ಕೋರ್ಸ್ ರೋಡ್
ಬೆಂಗಳೂರು-1

ರಿಜಿಸ್ಟರ್ಡ್ ಆಫೀಸ್:
"ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು-3

ಶ್ರೀ ಯಂ. ಸುಂದರ್‌ರಾವ್ ಶೆಟ್ಟಿ
ಚೆಯರ್‌ಮೇನ್

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 5—2—1970 ಸಂಪುಟ 49 ಸಂಚಿಕೆ 22

ವಿಚಲಿತ ಮನದ ವ್ಯಸನ - ವಿದ್ಯಾರ್ಥಿ ಕ್ರಾಂತಿ - ಅಶಿಸ್ತು

ಲೇಖಕರು: ಶ್ರೀ ಕೂರಾಡಿ ಸೀತಾರಾಮ ಅಡಿಗ, ಫಲಿಮಾರು

ನಮ್ಮ ಬೃಹತ್ ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಿ ಸ್ವಾಭಾವಿಕವೆನ್ನುವಂತೆ ದಿನದಿನವೂ ಮೂರ್ತ ಸ್ವರೂಪ ತಾಳಿದ ತ್ವೇಷವು ಎದ್ದು ನಿಂತು ಕಾಡುತ್ತಿರುವ ಇತ್ತೀಚಿನ ಸಮಸ್ಯೆಗಳಲ್ಲಿ ವಿದ್ಯಾರ್ಥಿ ಕ್ರಾಂತಿ, ವಿದ್ಯಾರ್ಥಿಗಳಲ್ಲಿ ಅಶಿಸ್ತು ಪ್ರಮುಖವಾದುವು. ಮಹಾ ಮಹಾ ರಾಷ್ಟ್ರ ಧುರೀಣರು, ಜ್ಞಾನಿಗಳ ಮಸ್ತಿಷ್ಕವನ್ನೂ ಕದಡಿಸಿದ ಸಮಸ್ಯೆ, ರಾಷ್ಟ್ರದ ಭವಿಷ್ಯದ ಕರಾಳ ಸ್ವರೂಪದ ಛಾಯೆ ಎಲ್ಲ ವಿಸ್ತರ ಮಟ್ಟಿಗೂ ರಾಷ್ಟ್ರವ್ಯಾಪಿಯಾಗಿ ಬಲಿಯಿತು. ಪಕ್ಷ ಸ್ಪರ್ಧೆಯಲ್ಲಿ ಆಡಳಿತದ ಚಾಕರಿಯನ್ನು ರೂಪಿಸಿದ ನಮ್ಮ ಪ್ರಜಾಪ್ರಭುತ್ವ ಸಿದ್ಧಾಂತವನ್ನನುಸರಿಸಿ ಒಂದು ಪಕ್ಷದವರು ಇನ್ನೊಂದು ಪಕ್ಷಕ್ಕೆ ಛೀಂಗೆ; ಟೀಕೆ, ಆರೋಪ, ಮೂದಲಿಕೆಗಳಿಂದ ಇಂತಹ ಅಶಿಷ್ಟಕಾರಕ ವಿದ್ಯಾರ್ಥಿ ಕ್ರಾಂತಿಗೆ ಕಾರಣಕರ್ತರು ಎಂಬ ಹೊಣೆಗಾರಿಕೆಯ ತಲೆ ಪಟ್ಟಿ ಕಟ್ಟಿ ಕುಳಿತರು. ಸರಕಾರದ ನೀತಿಯೇ ಈ ಅವ್ಯವಸ್ಥೆಗೆ ಕಾರಣವೆಂದರು ಕೆಲವರು, ಅಧ್ಯಾಪಕರೇ ಇದಕ್ಕೆ ಹೊಣೆಗಾರರು ಎಂದವರು ಹಲವರು, ರಾಜಕೀಯ ಪುಢಾರಿಗಳೇ ಇಂತಹ ಕಿಡಿ ಹೊತ್ತಿಸಿದರೆಂದು ಬೇರೆ ಕೆಲವರಿಂದ. ತಮ್ಮ ಮಕ್ಕಳ ಬಗೆಗಿನ ಹೆತ್ತವರ ಹೇಡಿತನವೇ ಇದರ ಮೂಲವೆಂದು ಆರೋಪಿಸಿದರು ಇನ್ನನೇಕರು. ಧಾರ್ಮಿಕತೆ—ನೈತಿಕತೆಗಳ ಭಾವ ದಾರಿದ್ರ್ಯವೇ ಇದರ ಹೇತುವೆಂಬರು ಅನೇಕ ಸಂಪ್ರದಾಯವಾದಿಗಳು. ಹಲವು ನಿಟ್ಟಿನಿಂದ ನಮ್ಮ ರಾಷ್ಟ್ರ, ಸ್ವಾವಲಂಬನೆ—ಸ್ವಸಾಮರ್ಥ್ಯಗಳ ಬಗ್ಗೆ ಚಿಂತಿಸಿಕೊಳ್ಳುತ್ತಿರುವ ಪರಿಸ್ಥಿತಿಯಲ್ಲೂ, ಘಟಿಸಿದ್ದ ಈ ವಿದ್ಯಾರ್ಥಿ ಆಂದೋಲನಗಳಿಂದ ಸಾಕಷ್ಟು ದುಷ್ಪರಿಣಾಮಗಳನ್ನು ಅನುಭವಿಸಿತು. ರಾಷ್ಟ್ರದ ಉದ್ದಗಲಕ್ಕೂ ಅಪಾರ ಸ್ವತ್ತು, ಜೀವ, ಮೇಲಾಗಿ ರಾಷ್ಟ್ರದ ಸುಭದ್ರತೆಗೆ ದುಡಿಯಬೇಕಾಗಿದ್ದ ಎಷ್ಟೋ ಅಮೂಲ್ಯ ಸಮಯ — ಮಾನಸಿಕ ಶಾಂತಿ ಈ ಆಂದೋಲನಗಳಿಗೆ ಬಲಿಯಾಯಿತು.

ಈ ವಿಷ ವರ್ತುಲದ ಮೂಲವನ್ನು ಶೋಧಿಸಿ, ಇದಕ್ಕೊಂದು ಪರಿಹಾರ ಕಾಣಬೇಕೆನ್ನುವುದು ಅಷ್ಟು ಸುಲಭವಲ್ಲ. ತಾತ್ವಿಕ ಸಿದ್ಧಾಂತದಂತೆ ಈ ಸ್ಥಿತಿಯ ಸ್ವರೂಪ ಕಾಣುವುದು ಸಾಧ್ಯವಲ್ಲ; ಮೂಲತಃ ವಿದ್ಯಾರ್ಥಿಗಳೇ ಈ ಸ್ಥಿತಿಗೆ ತಾವು ಹೇಗೆ ಕಾರಣರೆಂದು ಅರಿಯಲಾರರು. ಅಂತರ್ಬಾಹ್ಯಿಯಾಗಿ— ಸಮಾಜದ ಒಂದು ಬಗೆಯ ಶೈಥಿಲ್ಯ. ಈ ಸ್ಥಿತಿಯು ಒಳ ಬಗೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ದಿನ ಬೆಳಗಾಗುವುದರೊಳಗಾಗಿ ಇದ್ದಕ್ಕಿದ್ದಂತೆ ಈ ಸ್ಥಿತಿಯು ನಿರ್ಮಾಣವಾಗಿಲ್ಲ, ಉಚ್ಚಾಟನೆಯೂ ಸಾಧ್ಯವಿಲ್ಲ.

ನಮ್ಮ ರಾಷ್ಟ್ರ ಸ್ವಾತಂತ್ರ್ಯವನ್ನೇನೋ ಗಳಿಸಿತು. ಆದರೆ ಗಣನೀಯ ಜನ ಸಂಪತ್ತನ್ನು ಹೊಂದಿದ ನಮ್ಮ ದೇಶ, ಈ ಎಲ್ಲಾ ದಿನಗಳಲ್ಲಿ ಪ್ರಜಾಪ್ರಭುತ್ವದ ಶುದ್ಧ ತತ್ವವನ್ನು ಉಳಿಸಿಕೊಂಡು ಬೆಳಸಿಕೊಂಡು, ಭದ್ರ ಭವಿಷ್ಯದೆಡೆಗೆ ಹೆಜ್ಜೆ ಹಾಕಿದೆಯೇ? ವ್ಯಕ್ತಿ—ರಾಷ್ಟ್ರ ಎಂಬ ಪರಸ್ಪರ ಪೂರಕ ಮೌಲ್ಯಗಳನ್ನು ನಮ್ಮ ಸಮಾಜ ಎಷ್ಟರ ಮಟ್ಟಿಗೆ ತನ್ನ ಅಂತಃಸತ್ವವಾಗಿ ಜೀರ್ಣಿಸಿಕೊಂಡಿದೆ? ಈ ಪ್ರಶ್ನೆಗಳ ಶುದ್ಧ ವಿವೇಚನೆಯೇ ನಮ್ಮ ಸಮಸ್ಯೆಗಳ ತಳ ಶೋಧನೆಯಲ್ಲಿ ಸಹಾಯಕವಾಗಬಹುದು.

ವಿದ್ಯಾರ್ಥಿ ಆಂದೋಲನಗಳಂತಹ—ಇವುಗಳಿಗೂ ಮಿಗಿಲಾದ ಎಷ್ಟೋ ವಿಧ್ವಂಸಗಳು ಆಗಿಂದಾಗ್ಗೆ ನಮ್ಮ ದೇಶದಲ್ಲಿ ಆಗಿರಬಹುದು. ಇದು ಒಂದು ಪ್ರಜಾಪ್ರಭುತ್ವ ರಾಷ್ಟ್ರದ ಮೂಲಘಾತಕ ಭೂತವೇನಲ್ಲ ಇದ್ದರೂ, ರಾಷ್ಟ್ರದ ವರ್ತಮಾನ, ಭವಿಷ್ಯತ್ತುಗಳು ಈ ಘಂಡ ಕಾಲದ ಮೇಲೆಯೇ ಸುಭದ್ರವಾಗಿ ನಿಲ್ಲಬಲ್ಲವು. ವಿದ್ಯಾಕ್ಷೇತ್ರದ ಒಂದು ಸೂಕ್ಷ್ಮ ಘಟ್ಟವೂ ರಾಷ್ಟ್ರಜೀವನದ ಮಹತ್ವದ ಪರಿಣಾಮದ ಮೂಲವಾಗಬಲ್ಲುದು. ಆದರೆ ಸ್ವಾತಂತ್ರ್ಯದ ಈ ಇಪ್ಪತ್ತು ವರ್ಷಗಳಲ್ಲಿ ನಮ್ಮ ಸಂಸ್ಕೃತಿಯ ತಳಹದಿಯ ಮೇಲೆ ಸ್ವಾಯತ್ತವಾದ ಒಂದು ವಿದ್ಯಾಧೋರಣೆಯನ್ನು ರೂಪಿಸುವಲ್ಲಿ ನಾವಿನ್ನೂ ಎಡವುತ್ತಿದ್ದೇವೆ. ಸಮರ್ಥ ಧೋರಣೆ ರೂಪಿಸುವ ಅಭ್ಯಾಸದಲ್ಲೇ ಆಗಾಗ್ಗೆ ಬದಲಾಗುತ್ತಿರುವ ಸರಕಾರಗಳು ಹೊಸ ಹೊಸ ಪ್ರಯೋಗಗಳಲ್ಲಿ ನಿರತವಾಗುತ್ತಿವೆ. ಈ ಎಲ್ಲಾ ಪ್ರಯೋಗಗಳಿಂದ ನಾವು ಪಡೆದುದಕ್ಕಿಂತಲೂ ಕಳೆದುಕೊಂಡ ಅಂಶವೇ ಜಾಸ್ತಿ. ಪರಿಣಾಮವಾಗಿ, ಯಾವುದರಲ್ಲೂ ಸ್ಥಿರತೆ ಇಲ್ಲದ—ಅವಾಸ್ತವವಾದ ಒಂದು ಪರಿಸ್ಥಿತಿ ಈಗ ನಿರ್ಮಾಣಗೊಂಡಿದೆ. ತನ್ಮೂಲಕ ಛಾತ್ರ ಜೀವನದಲ್ಲಿ ಇಂದಿನ ವಿದ್ಯಾರ್ಥಿ ಸಮೂಹವು ಜೀವನ ಮೌಲ್ಯದ ಯಥಾರ್ಥ ಜ್ಞಾನದಿಂದ ವಂಚಿತವಾಗಿದೆ. ಹೊಸದಾಗಿ ಬೆಳೆದ ಈ ಪೀಳಿಗೆ ಪೂರ್ಣ ವಸ್ತುನಿಷ್ಠ ಸಾಮಾಜಿಕ ಪ್ರಜ್ಞೆಯಿಂದ ಆಂತರಿಕ ಮೌಲ್ಯವನ್ನು ಬಹುಮಟ್ಟಿಗೆ ಕಳೆದುಕೊಂಡಿದೆ. ನಮ್ಮ ಶಿಕ್ಷಣ ಪದ್ಧತಿ, ಪರಿಸರದ ಸ್ಥಿತಿ ನಿಸ್ಸಹಾಯಕವಾಗಿ ಭವಿಷ್ಯದ ಬಗೆಗೆ ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಪರೀಕ್ಷೆಗಾಗಿ ಶಿಕ್ಷಣ, ಜೀವನಕ್ಕಾಗಿ ಪರೀಕ್ಷೆ, ಕ್ಷಿಪ್ರ ಸುಖಕ್ಕಾಗಿ ಜೀವನ. ಈ ವಿಷ ವರ್ತುಲ ವ್ಯಕ್ತಿ ಜೀವನದ ನೀತಿ, ನಿಯತಿ, ರಾಷ್ಟ್ರೀಯ ಪ್ರಜ್ಞೆ, ವಿಶ್ವ ಬಂಧುತ್ವದ ಕ್ಷೇತ್ರದಿಂದ ಹರಿದು ಹೊರ ಹಾರಿತು. ಮಾನವತೆಯ ಸೂಕ್ಷ್ಮ ಸಂವೇದನೆಗೆ ಸ್ಪಂದಿಸಲಾರದ ಕಾಠಿಣ್ಯಕ್ಕೆ ಕಾರಣವಾಯಿತು.

ಮಾನವೀಯ ವ್ಯವಹಾರಗಳೆಲ್ಲ ಶುದ್ಧ ವ್ಯಾಪಾರೀ ಭಾವ ತಳೆದುವು. ಅಪಾರದ ಶಿಕ್ಷಣ ಪ್ರಸಾರದ ಧ್ಯೇಯದಿಂದ ರಾಷ್ಟ್ರಾದ್ಯಂತ ಶಿಕ್ಷಣ ಸಂಸ್ಥೆಗಳ ಕಂತೆ ಬಲಿಯಿತು. ನಿತ್ಯ, ನಿತ್ಯ ಪ್ರವರ್ಧಮಾನವಾಗಿ ಬಲಿಯುವ ವಿದ್ಯಾರ್ಥಿಗಳ ಮಾನಸಿಕ ಪ್ರವೃತ್ತಿಗಳಿಗೆ ಪುಷ್ಟಿಕರ ರೂಪದ ಆಹಾರ ಒದಗಿಸುವುದು ನಮ್ಮ ಸರಕಾರಗಳ ಶಕ್ತಿಗೆ ಮೀರಿದ ವಿಷಯವಾಯಿತು. ಉದಾತ್ತ ಧ್ಯೇಯವಾದಿಗಳಾದ ಶಿಕ್ಷಕರನ್ನು ನಿಯಮಿಸಿ, ಮಾನವತೆಯ ಮೌಲ್ಯಗಳನ್ನಾಧರಿಸಿ ಸಾಕಷ್ಟು ಸ್ವಾತಂತ್ರ್ಯವನ್ನೂ ಕೊಡುವುದೂ ಅಶಕ್ಯವಾಯಿತು. ಸಾರ್ವತ್ರಿಕವಾಗಿ ಇಂತಹ ಸುಸಂಬದ್ಧ ವಾತಾವರಣವನ್ನು ನಿರ್ಮಿಸದೇ ಹೋದಾಗ, ಎಲ್ಲವೂ ಅವಾಸ್ತವಿಕತೆಯ ಹಂದರವಾಗಿ, ವಿದ್ಯಾರ್ಥಿಗಳ ಅಂತಃಪ್ರೇರಣೆಗೆ ತಕ್ಕ, ಶುದ್ಧ ಬಾಹ್ಯ ಪ್ರಚೋದನೆ ಲಭಿಸದೆ, ಅವರು ಮಾನಸಿಕವಾಗಿ ವಿಚಲಿತರಾಗುವುದು ಆಶ್ಚರ್ಯವಲ್ಲ. ವಿಚಲಿತವಾದ ಎಳೆಯ ಮನಸ್ಸಿನ ಮೇಲೆ, ಶಿಥಿಲ ಸಾಮಾಜಿಕ ವ್ಯವಸ್ಥೆ, ಸರಕಾರದ ಸಡಿಲು ಧೋರಣೆ, ಸುಲಭ ಸುಖ ಪ್ರಲೋಭನೆಗಳು ಲೀಲಾಜಾಲವಾಗಿ ಪ್ರಭಾವ ಬೀರಿ ವಿದ್ಯಾರ್ಥಿ ಗಣವನ್ನು ದುರ್ಮಾರ್ಗಕ್ಕೆ ಸಾಗಿಸಿದುವು. ಸುಧಾರಣೆ ಪ್ರಗತಿಗಳೆಂಬ ಹೆಸರಲ್ಲಿ, ನಿಜವಾದ ಪ್ರಯತ್ನ ಪ್ರತಿಭೆಗಳಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗದೆ, ದುರ್ಬಲ ಮಾನಸಿಕ ಸ್ಥಿತಿಯು ಅನುಚಿತ ಅನುಕಂಪದೊಡನೆ ಎಲ್ಲಾ ಕ್ಷೇತ್ರಗಳಲ್ಲೂ ಪುರಸ್ಕಾರ ಪಡೆಯುವಂತಾಯಿತು. ಪ್ರತಿಭೆಯ ಬದಲಿಗೆ ಪ್ರಭಾವಗಳೇ ಸಮಾಜ ಶಕ್ತಿಯಾಗಿ ಬೆಳೆಯಲವಕಾಶವಾಯಿತು. ಇದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನದಾಹ, ಅನನ್ಯ ಸಾಧನೆ, ನಿಷ್ಠೆಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುವಂತಾಯಿತು. ಪರೀಕ್ಷೆ ಕಷ್ಟವಾಯಿತೆಂದು, ನಕಲು ಹೊಡೆಯಲು ಬಿಡಲಿಲ್ಲವೆಂದು, ಪಾಸಾಗುವ ನಿಗದಿತ ಅಂಕಗಳು ಲಭಿಸಿಲ್ಲವೆಂದು, ಓದು ನಡೆಯದ ಕಾರಣ ನಿಶ್ಚಿತ ವೇಳೆಯ ಪರೀಕ್ಷೆ ಸಲ್ಲದೆಂದು, ಪಠ್ಯ ವಿಷಯ ಕಷ್ಟವಾಯಿತೆಂದು, ಆ ಭಾಷೆ ಬೇಡ, ಈ ಭಾಷೆ ಬೇಡವೆಂದು, ಯಾರ್ಯಾರದೋ ವರ್ತನೆ ಏನೋ ಸರಿಯಾಗಿಲ್ಲವೆಂದು ಹೀಗೆ ನೂರು ಸಾವಿರ ಆಕ್ಷೇಪ— ಅಪೇಕ್ಷೆಗಳಿಂದ ಬಲಿತ ಚಳವಳಿ ವೃಕ್ಷಗಳು ಬೆಳೆದುವು, ಪ್ರತಿ ಬಲಾತ್ಕಾರ-ಘೇರಾವೋ ಮುಂತಾದ ಹೊಸ ಹೊಸ ಆವಿಷ್ಕಾರಗಳೂ ನಡೆದುವು. ಇಂತಹ ಸನ್ನಿವೇಶಗಳೇ ಬೆಳೆದು ಬಂದಾಗ ಅನುಚಿತ ಔದಾರ್ಯ ಅನುಕಂಪದಿಂದ—ಚಳವಳಿಕ್ಕೆ ಮಾತ್ರ ತಲೆ ಬಾಗುವ ದುರ್ಬಲ ಸ್ಥಿತಿ ಎಲ್ಲಾ ಕ್ಷೇತ್ರಗಳಲ್ಲೂ ಸ್ವಾಭಾವಿಕವಾಯಿತು. ಹದಗೆಟ್ಟ ಪರಿಸ್ಥಿತಿಯು ನಿರ್ಮಾಣವಾದ ಮೇಲೆ ಅದನ್ನನುಸರಿಸಿಯೇ ಪರಿಹಾರ ಹುಡುಕಬೇಕಾದುದು ಅನಿವಾರ್ಯ. ಇತ್ತಿಗೆ ಪಕ್ಷ ಪಂಗಡಗಳು, ವಿಭಿನ್ನ ಅಭಿಪ್ರಾಯ ಹೊಂದಿದವರು ತಮ್ಮ ತಮಗೆ

(ಕೊನೆಯ ಪುಟ ನೋಡಿರಿ)

ಸಂಬಂಧ

ಲೇಖಕರು ಶ್ರೀ ಜಿ. ಎಸ್. ಅವಧಾನಿ

ಅವಿ—ಗಾಯತ್ರಿಯರದು ಒಂದೇ ಸಬ್ಜೆಕ್ಟು. ಆತ ಸೀನಿಯರ್ ಈಕೆ ಜ್ಯೂನಿಯರ್. ಒಬ್ಬರ ಭಾವನೆಗಳನ್ನು ಮತ್ತೊಬ್ಬರು ಅರಿತುಕೊಳ್ಳುತಿದ್ದರು. ಅದೇ ಗಾಯತ್ರಿ ಬಿಸ್ನೆಸ್‌ಗೂ ಪೇಮೆಂಟ್ ಆದಾಗ?

ಮೂರು ವರ್ಷಗಳಿಂದ ಇಲ್ಲದ ಒಂಟಿತನ ಇದ್ದಕ್ಕಿದ್ದಂತೆ ತನ್ನ ಸುತ್ತಲೂ ಬೆಳೆಯುತ್ತಿದೆಯೆನ್ನಿಸಿತು. ಯಾವಾಗಲೂ ಸ್ನೇಹಿತ . ಸಿನಿಮಾ, ಹರಟೆಗಳ ಅವ್ಯಕ್ತದಲ್ಲಿರುತ್ತಿದ್ದವನು ಈ ರೀತಿ ಹಠಾತ್ತನೆ ಬದಲಾದದ್ದೂ ಒಂದು ಆಕಸ್ಮಿಕವೇನೊ ಅಂದುಕೊಂಡ. ಯಾರೊಡನೆಯೂ ಹೆಚ್ಚು ಮಾತು ಬೇಕಾಗುತ್ತಿಲ್ಲ. ಕ್ಲಾಸಿನಲ್ಲಿ ಕೂತಾಗಲೂ ಅಷ್ಟೆ. ಏನೊ ಏಕಾಗ್ರತೆ, ಬಿಚ್ಚುವುದಕ್ಕಾಗದ ಸುರುಳಿಗಳು. ಗೆಳೆಯರೇನಾದರೂ, "ಯಾಕೊ ಅವಿ, ಈಗಿತ್ತಲಾಗಿ ತುಂಬ ಸೀರಿಯಸ್ ಅಲ್ಲ" ಎಂದರೆ ಬಲವಂತವಾಗಿ ನಗುವುದುಂಟು.

ಇಷ್ಟೊಂದು ಗಂಭೀರನಾಗುವುದಕ್ಕೆ ಕಾರಣವೇನಿರಬಹುದೆಂದು ಸುಮ್ಮಸುಮ್ಮನೆ ತಲೆಕೆಡಿಸಿ, ವಿಚಾರಗಳ ವಿರುದ್ಧ ಸೆಣಸುತ್ತಾನೆ ತನ್ನೊಳಗೆ, ಬೆಳೆದ ಪರಿಸರ, ಶಾಲೆ—ಗುರುಗಳು, ತಂದೆ—ತಾಯಿ ಸಂಬಂಧವನ್ನೆಲ್ಲ ನೆನೆಸಿಕೊಂಡಾಗ, ಆಗಿನದಕ್ಕೂ ಈಗಿನದಕ್ಕೂ ಎಷ್ಟೊಂದು ವ್ಯತ್ಯಾಸ ಎನಿಸುತ್ತದೆ. ಹಳ್ಳಿಯ ಜನರ ದಿಗೆ ಬೆಳೆದು ಬಂದ ವ್ಯಕ್ತಿತ್ವ—ಸಂಬಂಧ ಕಳೆಕೆ ತಪ್ಪುತ್ತಿರುವುದೂ, ವಾಸ್ತವಿಕತೆಗೆ ಹೊಂದಿಕೊಳ್ಳುವ ಬದುಕಿಗೂ ನಡುವೆ ಕತ್ತಲೆಯಲ್ಲಿ ಕಂದರ ಬಿದ್ದಿರುವುದನ್ನೇಕೊ ಈಗ ಅರ್ಥಮಾಡಿಕೊಳ್ಳುವುದಕ್ಕೆ ಅಸಮರ್ಥನೆನಿಸುತ್ತದೆ.

ಇಂಥವನ್ನೆಲ್ಲ ವಿಚಾರಿಸುವುದಕ್ಕೆ ಗಾಯತ್ರಿಯಿಂದ ಸಾಧ್ಯವಿಲ್ಲ. ಏನಾದರೂ ಹೇಳಿದರೆ ಸಾಕು.

"ಶ್ರೀ ಮಿಸ್ಟರ್, ಫಿಲಾಸಫರ್, ಕಾಂಪ್ಲೆಕ್ಸ್ ವಿಚಾರಗಳೆಲ್ಲ ನನ್ನ ತಲೆ ಒಳಗೆ ಇಳಿಯೋಲ್ಲ ಕಣ್ರಿ. ಎಲ್ಲಾ ಬಿಟ್ಟು ವೇದಾಂತ ಹೇಳೋಕೆ ಶುರು ಮಾಡಿದಿರಲ್ಲ! ಏನೋಪ್ಪ ನನ್ನ ಲಕ್." ಎನ್ನುತ್ತಾಳೆ, ಮುಖ ಸಿಂಡರಿಸುತ್ತಾಳೆ.

ಅವಳಿಗೆ ಮಾತು ಬೇಕು, ಸರಸ ಬೇಕು, ತಮಾಷೆ ಬೇಕು. ಹಾಗಂತ ಇಲ್ಲಿ [illegible] ಅಲ್ಲ. ಸಮಕಾಲೀನತೆಗೆ ಜೋತು ಬಿದ್ದಿದ್ದಾಳೆ. ಎಲ್ಲವನ್ನೂ ತನ್ನದೇ ದೃಷ್ಟಿಯಲ್ಲಿ ಅಳೆದು ತೂಗಿ ಲೆಕ್ಕಾಚಾರ ಹಾಕುತ್ತಾಳೆ. ಚುರುಕು ಮನೋವೃತ್ತಿಯಾದರೂ ಮೃದು ಸ್ವಭಾವ.

"ಯೂ ಸೀ ಮಿಸ್, ಬದಲಾದ ಮೌಲ್ಯಗಳನ್ನು ಕಳಚುವುದರ ಜೊತೆಗೆ ಹೊಸ ಮೌಲ್ಯಗಳ ಸ್ವೀಕಾರವೂ ಅಷ್ಟೇ ಸಹಜವಾದೆ. ನೀನೇ ಹೇಳ್ತಿದ್ದೀಯಾ— ನಮ್ಮ ಸಮಾಜ ನಿಧಾನವಾಗಿ ಆ ಕೋಶದಿಂದ ಈಚೆ ಬರುತ್ತೆ—ಎಂದು"

ಎಂದಾಗೆಲ್ಲ

"ಒಂದ್ ಹತ್ತು ನಿಮಿಷ ಹಾಯಾಗಿ ಟೈಂ ಪಾಸ್ ಮಾಡೋದಕ್ಕೂ ಬಿಡೋಲ್ಲಪ್ಪ ನೀವು. ಅಲ್ಲ, ಮಗು ಹಾಗೆ ಇದ್ದೋರು ಅದ್ಹೇಗೆ ಹೀಗಾಗ್ಬಿಟ್ರೊ ನಂಗರ್ಥನೇ ಆಗಲ್ಲ" ಎಂದು ವ್ಯಾಕುಲಿಸಿ ನಗುತ್ತಾಳೆ ಥೇಟ್ ಮಳ್ಳಿ ಹಾಗೆ!

ಹೀಗೇ ಎಷ್ಟೊ ಸಂಜೆಗಳು ಬೀಚಿನಲ್ಲಿ ಕರಗಿದ್ದುಂಟು.

ಗಾಯತ್ರಿ ತನ್ನನ್ನು ತುಂಬಾ ಹಚ್ಕೊಂಡಿದ್ದಾಳೆ. ಅವರಿಬ್ಬರದೂ ಒಂದೇ ಕಾಲೇಜು. ಅವಿನಾಶ್ ಸೀನಿಯರ್, ಗಾಯತ್ರಿ ಜೂನಿಯರ್. ಇಬ್ಬರದೂ ಒಂದೇ ಸಬ್ಜೆಕ್ಟು. ತನಗೂ, ಅವಳಿಗೂ ಆಕರ್ಷಣೆ ಹುಟ್ಟಿದ್ದೇ ವಿಚಿತ್ರ. ಎಲ್ಲೊ ಯಾವುದೊ ಸನ್ನಿವೇಶದಲ್ಲಿ ಸ್ವಿಚ್ ಆನ್ ಆಗಿಬಿಟ್ಟಿತು. ತಾರೀಖ ಸರಿಯಾಗಿ ನೆನಪಿಲ್ಲ. ಈ ಸಂಗತಿ ಹಲವರಲ್ಲಿ ವಿಕಾರ ಕಲ್ಪಿಸಿ ಕಣ್ಣು ಮೂಗುಗಳನ್ನು ಕೊರೆದು, ಕೆಲವರಿಗೂ ಹೆಚ್ಚು ಮೋರೆ ಹಾಕುವಂತಾದಾಗ ತಾವಿಬ್ಬರೂ ಹತ್ತಿರ ಹತ್ತಿರ ಬಂದಿದ್ದೆವು.

ಗಾಯತ್ರಿ! 'ನಂಗ್ಯಾಕೊ ಹೆದರಿಕೆಯಾಗುತ್ತೆ' ಎಂದು ಊರಿಗೆ ಹೋದವಳು ಇನ್ನೂ ಬಂದಿಲ್ಲ. ಹುಚ್ಚು ಹುಡುಗಿ, ಸೆನ್ಸಿಟಿವ್. ಮಾಮಾನ ಮನೆಯಲ್ಲಿ ಒಬ್ಬಳೇ ಇರೋದಕ್ಕೆ ಭಯವಂತೆ. ತುಂಬಿದ ಮನೆಗೆ ತಾನೇ—ಮಾವಿ ಇಬ್ಬರೇ ಎನ್ನುತ್ತಾಳೆ. ಮನೆಯ ಸುತ್ತ ಗಸ್ತು ಹಾಕಿ, ಶಿಳ್ಳೆ ಹೊಡೆಯುವ ಪಠ್ಠಾಂ ಬಹದೂರ್, ರದ್ದೀಕರನನ್ನು 'ಶುದ್ಧ ಪೋಲಿ ಮುಂಡೇವು. ಬಕ್ರ" ಎಂದು ಉಗುಳುತ್ತಾಳೆ, ಮೊನ್ನೆಮೊನ್ನೆ ಹೈಹೀಲ್ಡಿನಿಂದ ಎರಡು ಬಾರಿಸಿಯೂ ಬಿಟ್ಟಿದ್ದಾಳಂತೆ. ಇಷ್ಟೆಲ್ಲ ಧೈರ್ಯವಿದ್ದವಳು ಅಂಜುಬುರುಕಿಯ ಹಾಗೆ ನರ್ವಸ್ ಆಗುವುದೇಕೊ. ಗಾಯತ್ರಿ ಇಂದೊ ನಾಳೆ ಬರಬಹುದು. ಬರ್ತೀನಿ ಎಂದು ಮಾರುದ್ದ ಪತ್ರ ಬರೆದಿದ್ದನ್ನು ನೆನೆಸಿ ನಕ್ಕ.

ಎದ್ದ. ಗಂಟೆ ಆಗಲೆ ಆರು. ಬೀಚಿಗೆ ಹೋಗುವ ವೇಳೆ. ರೂಮಿಗೆ ಬೀಗ ಜಡಿದು ಕೆಳಗಿಳಿಯುವಾಗ ಎದುರಿನ ಕಂಪೌಂಡಿನ ಬಾಗಿಲಕಟ್ಟೆಯ ಬಳಿ ಶೀಲಾ ಸ್ಟೈಲಾಗಿ ನಾಟಕದ ಮಾತನ್ನು ಓದುತ್ತಿದ್ದುದು ಕಂಡು ನಗು ಬರುವ ಹಾಗಾದರೂ ತಡೆದುಕೊಂಡ.

ಶರಾವತಿ ಕಡಲನ್ನು ಕೂಡುತ್ತದೆ. ರೊಮ್ಯಾಂಟಿಕ್ ಕವಿಯೇನಾದರೂ ಇದ್ದಿದ್ದರೆ ಪೊಗದಸ್ತಾಗಿ ಗಂಡ—ಹೆಂಡಿರ ಸಂಗಮ." ಎಂದು ವರ್ಣಿಸುತ್ತಿದ್ದನೇನೊ ಎಂದುಕೊಂಡ. ಇಲ್ಲಿ ಕುಳಿತಾಗೆಲ್ಲ ಅವಳ ನೆನಪಾಗಿ ಪುಳಕಗೊಳ್ಳುತ್ತವೆ.

ಹೌದು ಹಾಗೇ ಎಷ್ಟೋ ಸಂಜೆಗಳನ್ನು ಇಲ್ಲಿ ಕುಳಿತು ಕಳೆದಿದ್ದಾರೆ. ಕಡಲಿನ ತೆರೆಯಾಗಿ ನೊರೆಯಾಗಿದ್ದೂ ಉಂಟು. ದೂರದ ಕ್ಷಿತಿಜದಂಚಿನಲ್ಲಿ ಒಬ್ಬರಿಗೊಬ್ಬರು ಸೇರ್ತೇವೆಂದು ಕೇಳಿದ್ದರೆ ಎಷ್ಟೋ ಮುಷ್ಟಿಯಲ್ಲಿದ್ದ ಮರಳನ್ನು ಅಂಗಿಯ ಮೇಲೆ ತೂರಿ.

'ನನ್ನನ್ ಯಾಕೆ ಲೈಕ್ ಮಾಡ್ತೀರಾ ಅವಿ" ಎಂದು ಮುದ್ದು ಮುದ್ದಾಗಿ ಕೇಳಿದ್ದಳು.

"ನಿನ್ನನ್ನ ಕಂಡ್ರೆ ನಂಗೊತ್ತಿಲ್ಲ ಯಾಕೋ ಅಷ್ಟು ಅಟ್ರಾಕ್ಟ್. ನೀನು—ನೀನು ತುಂಬಾ ಸ್ವೀಟ್, ನನ್ನ ಭಾವನೆಗಳನ್ನ ಅರ್ಥ ಮಾಡ್ಕೊತೀಯಾ. ನಿನ್ನ ಚೆಲುವನ್ನು ಇಂಚು ಇಂಚಿಗೂ ಕಡಿದು ಕುಡಿಯಲಿ ಎನಿಸುತ್ತದೆ'

ಎಂದು ಅವಳ ಮೂಗು ಹಿಡಿ ಬಡಬಡಿಸಿದ್ದ ಕಾಮತ್ ಹೊಟೆಲ್ ಫೆಮಿಲಿ ರೂಂನಲ್ಲಿ ಕುಳಿತಾಗೊಮ್ಮೆ.

"ನನ್ನನ್ನು ಮದುವೆಯಾಗ್ತೀರಾ" ಎಂದಿದ್ದಳು. ತನಗೆ ಆಶ್ಚರ್ಯವಾಗಿತ್ತು. ಇನ್ನೂ ತನ್ನ ಮೇಲೆ ನಂಬಿಕೆ ಹುಟ್ಟಿಲ್ವಲ್ಲ ಈ ಹುಡುಗಿಗೆ ಎಂದುಕೊಂಡು.

"ನಿನಗಿನ್ನೂ ಭರವಸೆ ಆಗಿಲ್ಲವಾ, ಅಯ್ಯೋ ಪಾಪ. ನಿನ್ನದು ಬಾಳ ಸೂಕ್ಷ್ಮ ಪರ್ಸನಾಲಿಟಿ ಕಣೆ" ಎಂದಿದ್ದ.

'ಅದಕ್ಕಲ್ಲ, ನಾನೆಷ್ಟು ಸೂಕ್ಷ್ಮನೊ ಅಷ್ಟೇ ನೀವ್ರು ಗೊತ್ತಾ.

ಗಂಡಸರೇ ಹೀಗೆ. ಆರಂಭದಲ್ಲಿ ಮುಂ—ಗಿರಿ ಎಂತ ಮುದ್ದು ಮಾಡೋದು. ಆ ಮೇಲೆ...ಆ ವೇ— ಜಾತೀ ಅಂತ ರಾಗ ಎಳೆಯೋದು ಅಲ್ವಾ"

ಅವಳು ಅಷ್ಟೇ ತೀವ್ರವಾಗಿ ಹೇಳಿದ್ದಳು.

"ಛೆ ಬಿಡ್ತೂ ಅನ್ನು. ನಿಂಗೆಷ್ಟು ಹೇಳೋದ — ಐ ಹೇವ್ ನೊ ಕಾಸ್ಟ್—ಅಂತ"

ಸರಳವಾಗಿಯೇ ಹೇಳಿದ್ದ. ತನ್ನ ಇರುವಿಕೆಯ ಅರಿವು ಅವಳಿಗಿತ್ತು. ತನ್ನ ಬದು

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕಂಚ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗಜ್ಜಾಯ	2—00
ಪುಷ್ಪಕನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಫೋನ್ : 526
ಸಂಪುಟ ೪೯
ಸಂಚಿಕೆ ೨೨
VOL. 49
No. 22

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೫—೨—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ

"ಸುಶಿಕ್ಷಿತ ನಿರುದ್ಯೋಗಿಗಳು" ಎಂಬ ಹೆಸರು ಹಚ್ಚಿಸಿಕೊಂಡವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಇವರಿಗೆ ಸೂಕ್ತ ಉದ್ಯೋಗ ಕೊಡಿಸುವುದು ಸರಕಾರಕ್ಕೆ ದೊಡ್ಡ ತಲೆನೋವು. ಈ ಸುಶಿಕ್ಷಿತರು ಹಲವಾರು ಸಮಸ್ಯೆಗಳನ್ನು ಹುಟ್ಟಿಸುತ್ತಾರೆ, ಅವನ್ನು ಜಟಿಲಗೊಳಿಸುತ್ತಾರೆ; ಅವನ್ನು ಅಪರಿಹಾರ್ಯವೆನ್ನಿಸುವ ಮಟ್ಟಕ್ಕೂ ಹೋಗುತ್ತಾರೆ. ಇಂಜಿನಿಯರಿಂಗ್ ಪದವೀಧರರು ತನಗೆ ಉದ್ಯೋಗ ದೊರಕಿಸಿ ಕೊಡಿ ಎಂದು ಸರಕಾರದ ಮೇಲೆ ಒತ್ತಾಯ ಹೇರಿದ್ದ ಉದಾಹರಣೆಗಳುಂಟು. ವಿಶ್ವವಿದ್ಯಾಲಯಗಳ ಪದವಿದಾನ ಸಮಾರಂಭದಲ್ಲಿ "ನಮಗೆ ಪದವಿ ಬೇಡ; ಉದ್ಯೋಗ ಬೇಕು" ಎಂದು ಕೂಗಿದ್ದುಂಟು. ಇದಕ್ಕಿಂತ ದೊಡ್ಡ ಶೋಚನೀಯ ಸಂಗತಿ ಏನಿದೆ?

ವಿಶಾಲವಾದ ದೇಶ ಭಾರತದಲ್ಲಿ ಉದ್ಯೋಗಗಳಿಗೆ ಕೊರತೆ ಎಂದರೆ ಹಾಸ್ಯಾಸ್ಪದ. ಅಭಿವೃದ್ಧಿಶೀಲ ದೇಶದಲ್ಲಿರುವ ನಾವು ಮಾಡಬೇಕಾದ್ದು ಬೆಟ್ಟದಷ್ಟಿರುವಾಗ ಮಾಡಲು ಕೆಲಸವಿಲ್ಲವೆಂಬ ಕೂಗು ವಿರೋಧಾಭಾಸವಾದದ್ದು. ನಮ್ಮ ಸುಶಿಕ್ಷಿತರಲ್ಲಿ, ಪದವೀಧರರಲ್ಲಿ ಆತ್ಮವಿಶ್ವಾಸದ ಅಭಾವವಿರುವುದರಿಂದಲೇ ಅವರು ಪರರ ಮುಂದೆ ಕೈಚಾಚುತ್ತಾರೆ; ನಿರುದ್ಯೋಗಿಗಳಾಗುತ್ತಾರೆ. ನಾವು ಪಡೆಯುವ 'ಪದವಿ'ಗೆ ತಕ್ಕ ಸ್ಥಾನಮಾನಗಳು ತನಗೆ ದೊರೆಯಬೇಕು; ಇದನ್ನು ದೊರಕಿಸಿಕೊಡುವುದು ಸರಕಾರದ ಹೊಣೆ ಎಂಬ ತಪ್ಪು ಭಾವನೆ ನಮ್ಮ ಮನಾಂಗದಲ್ಲಿ ರಕ್ತಗತವಾಗಿ ಹೋಗಿದೆ. ಬ್ರಿಟಿಷರು ತಮಗೆ ಬೇಕಾಗಿದ್ದ ಕಾರಕೂನರನ್ನು ಮಾತ್ರ ತರಬೇತಿಗೊಳಿಸಿ ಉದ್ಯೋಗ ಕೊಡುತಿದ್ದರೇನೋ ನಿಜ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಸಾಧಿಸ ಹೊರಟ ನಾವು ಸರಕಾರದ ಸೀಮಿತ ಉದ್ಯೋಗಾವಕಾಶಗಳಿಗಾಗಿ ಹಾತೊರೆಯುತ್ತ ದಿನದೂಡುವುದು ನ್ಯಾಯೋಚಿತವಲ್ಲ. ಉದ್ಯೋಗಗಳಲ್ಲಿ ಮೇಲು ಕೀಳು ಎಂಬ ಪರಭೇದವಿಲ್ಲ, ಉದ್ಯೋಗ ಗೌರವ ಎಲ್ಲದಕ್ಕೂ ಇದ್ದೇ ಇದೆ. ಆದರೆ, ನಮ್ಮ ಪದವೀಧರರು ಇದನ್ನು ಮನವರಿಕೆ ಮಾಡಿಕೊಂಡಿಲ್ಲ; ಸ್ವತಂತ್ರವಾಗಿ ಆತ್ಮವಿಶ್ವಾಸದಿಂದ ದುಡಿಯುವ ಎದೆಗಾರಿಕೆಯೂ ಅವರಿಗಿಲ್ಲ. ಆದುದರಿಂದಲೇ ನಮ್ಮ ಸಮಸ್ಯೆ ಬಹಳ ಆಳಕ್ಕೆ ಬೇರುಬಿಟ್ಟಿದೆ.

ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ.ಎ.ಪೈ ಅವರು ಇತ್ತೀಚೆಗೆ ಉಡುಪಿಯ ಬಿ.ಎಡ್. ಕಾಲೇಜಿನಲ್ಲಿ 'ಬುಕ್ ಬ್ಯಾಂಕ'ನ್ನು ಉದ್ಘಾಟನೆ ಮಾಡಿದ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದು ಸಹಜ; ಸ್ವತಂತ್ರವಾಗಿ ತಮ್ಮ ಜೀವನ ನಿರ್ವಹಿಸಬಲ್ಲ ಬಡಗಿ, ಕಮ್ಮಾರ, ಚಿಪ್ಪಿಗ, ಕೃಷಿಕ, ದಿನಕೂಲಿಯವ—ಇವರಿಗೆಲ್ಲ ಯಾವ ವಿಶ್ವ ವಿದ್ಯಾಲಯವೂ ಪದವಿ ನೀಡಿಲ್ಲ. ಆದರೆ, ಅವರೆಲ್ಲರೂ ಉದ್ಯೋಗ ಮಾಡಿ ಉಣ್ಣುವ ಆತ್ಮವಿಶ್ವಾಸದಿಂದ ಬದುಕಿದ್ದಾರೆ; ಒಳ್ಳೆಯ ರೀತಿಯಲ್ಲೇ ಬದುಕುತ್ತಾರೆ. ಆದರೆ, ವಿಶ್ವವಿದ್ಯಾಲಯಗಳ ಪದವೀಧರರಲ್ಲಿ ಆತ್ಮವಿಶ್ವಾಸದ ಅಭಾವವಿದೆ; "ಉದ್ಯೋಗ ಗೌರವ"ದ ಬಗ್ಗೆ ದುರಭಿಪ್ರಾಯವಿದೆ. ಇದಕ್ಕೆ "ಪದವಿ"ಯು ಸರದಿ ಅಡ್ಡ ಬರುತ್ತದೆ. ಪ್ರಾಯಶಃ ದುಡಿಯುವ ಪ್ರತಿಯೊಬ್ಬನಿಗೂ ವಿಶ್ವವಿದ್ಯಾಲಯ ಪದವಿ ನೀಡಿದರೆ, ಪದವೀಧರರು ಅವರ ಉದ್ಯೋಗಗಳನ್ನು ಕೀಳುಭಾವನೆಯಿಂದ ನೋಡುವುದನ್ನು ಬಿಟ್ಟು ಬಿಡುವರೋ ಏನೋ!

ಇಂದು ನಮ್ಮ ಶಿಕ್ಷಣ ಪದ್ಧತಿ ಆದರ್ಶಮಯವಾಗಿರಬಹುದು; ಆದರೆ, ಅದರ ವ್ಯಾವಹಾರಿಕ ಉದ್ದೇಶ ಪರೀಕ್ಷಾ ಭೂತವನ್ನೆದುರಿಸುವುದು ಮಾತ್ರ. ಪರೀಕ್ಷೆಯಲ್ಲಿ ಪಾಸಾಗಲು ಎಷ್ಟು ಬೇಕೋ ಅಷ್ಟನ್ನು ಅಧ್ಯಾಪಕರು ಹೇಳಿಕೊಡುತ್ತಾರೆ; ಅದರಲ್ಲಿ ಕೆಲವನ್ನಾದರೂ ಮಕ್ಕಳು ಉರುಹೊಡೆಯುತ್ತಾರೆ; ಪಾಸಾಗುತ್ತಾರೆ. ಪದವಿ ಅವರದ್ದಾಗುತ್ತದೆ. ಆದರೆ 'ಪದವಿ ಮಾತ್ರದಿಂದ ಏನನ್ನೂ ಸಾಧಿಸಲಾಗದೆಂಬುದನ್ನು ವಿದ್ಯಾರ್ಥಿಗಳು ತಿಳಿಯರು. ಆದುದರಿಂದ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವ ಮಹತ್ಕಾರ್ಯವನ್ನು ಮಾಡಬೇಕು. ವಿದ್ಯಾರ್ಥಿಗಳ ಭಾವನೆ, ಊಹನೆಗಳನ್ನು ಕೆರಳಿಸಿ, ಒಂದಿಷ್ಟು ಆತ್ಮವಿಶ್ವಾಸವನ್ನು ಹುಟ್ಟಿಸಿ ಅವರ ಸುಪ್ತ ಶಕ್ತಿಯನ್ನು ಹೊರಗೆಡಹುವ ಸಾಹಸ ಅಧ್ಯಾಪಕರಿಂದಾಗಬೇಕು. ಇದು ಕಠಿನತರವಾದ ಕೆಲಸವೆಂಬುದು ನಿಜ. ಆದರೆ ದೇಶದ ಹಿತದೃಷ್ಟಿಯಿಂದ ಇದು ಶಿಕ್ಷಕರು ಸಲ್ಲಿಸುವ ಬಹಳ ದೊಡ್ಡ ಸೇವೆಯೆಂಬುದೂ ಸತ್ಯ.

ಮಾಮೂಲಿ ವಿರೋಧ

ಕರ್ನಾಟಕದ ಶಾಸನ ಸಭೆ ಸೇರುವುದು ಇದೇ ಮೊದಲಲ್ಲ. ಆದರೆ, ಈ ಸಲದ ಅಧಿವೇಶನದಲ್ಲಿ ಇಂಡಿಕೇಟ್ ಕಾಂಗ್ರೆಸ್ಸಿ ಸದಸ್ಯರು ವಿರೋಧ ಪಕ್ಷವಾಗಿ ಕುಳಿತದ್ದು ಹೊಸತು. ಇವರಿಗೆಲ್ಲ ನಾಯಕರು ಶ್ರೀ ಎಚ್. ಸಿದ್ಧವೀರಪ್ಪ; ಮಾಜಿ ಮಂತ್ರಿಗಳ ಸಾಲಿಗೆ ಸೇರಿದವರು. ಸರಕಾರದ ಮೇಲೆ ಮುಖ್ಯಮಂತ್ರಿ ಮತ್ತವರ ಸಹೋದ್ಯೋಗಿಗಳ ಮೇಲೆ ಟೀಕೆ, ಟಿಪ್ಪಣಿಗಳು ಸಹಜ; ಆರೋಪಗಳ ಜಡಿಮಳೆಯೂ ಹೊಸತೇನಲ್ಲ. ಆದರೆ, ಇವುಗಳ ಹಿಂದಿನ ಜನಶಕ್ತಿ, ಜನಧ್ವನಿ ಮಾತ್ರ ಈ ಬಾರಿ ಹೆಚ್ಚು.

ಇದರಿಂದ ಮುಖ್ಯಮಂತ್ರಿಗಳು ಧೃತಿಗೆಡಲಿಲ್ಲ. ಅಷ್ಟೆ ಖಂಡತುಂಡವಾಗಿತ್ತು ಅವರ ಉತ್ತರ. ಕೆಲವೊಮ್ಮೆ ಧ್ವನಿ ಸರಣಿ ಖಾರವಿತ್ತಾದರೂ ಅದು ಸ್ವಾಭಾವಿಕ, ಅನಿವಾರ್ಯ. ಆರೋಪಗಳಲ್ಲಿ ಹೊಸತನವಿಲ್ಲ. ಈ ಹಿಂದೆಯೇ ಅವನ್ನು ಚರ್ಚಿಸಿ ಹುರುಳಿಲ್ಲದ್ದೆಂದು ನಿರ್ಧರಿಸಲಾಗಿದೆ. ಟೀಕೆ ಟಿಪ್ಪಣಿಗಳು ಸಹಜವೇ. ಸರಕಾರದ ಕಾರ್ಯನೀತಿಯಲ್ಲಿ ತಪ್ಪಿದ್ದಲ್ಲಿ ತೋರಿಸಿ ಕೊಡಿ, ಅವನ್ನು ಸರಿಪಡಿಸುತ್ತೇವೆ ಎಂಬ ಸಹೃದಯತೆ. "ಶ್ರೀ ನಿಜಲಿಂಗಪ್ಪನವರ ಕೈಗೊಂಬೆ" ಎಂಬ ಮಾತು ನಿಲುಮೆಗೆ ಏರಿದ ಮಾತು. ಆಡಳಿತ ನಡೆಸುವಾಗ ಹಲವರೊಡನೆ ವಿಚಾರ ವಿನಿಮಯ ಅಗತ್ಯ. ಹಾಗೆಯೇ ನಿಜಲಿಂಗಪ್ಪನವರ ಸಲಹೆಗಳನ್ನೂ ಕೇಳಿದ್ದುಂಟು. ಮುಖ್ಯಮಂತ್ರಿಯವರ ಸತ್ಯವಾಕ್ಯ—ಅಂದರೆ ವಿರೋಧ ಪಕ್ಷಗಳು ಬಯಸಿದ್ದೇನ? ವಿರೋಧ ವ್ಯಕ್ತ ಮಾಡುವುದು ಮಾತ್ರವೆ? ಸರಕಾರದ ಪ್ರತಿಯೊಂದು ಹೆಜ್ಜೆಯನ್ನು ವಿರೋಧಿಸುವುದಷ್ಟೇ ಅವರ ಕರ್ತವ್ಯವೆ? ಇದಕ್ಕಾಗಿಯೇ ಅವರು ಸಂಬಳ ಭತ್ತೆ ಮತ್ತಿತರ ಸೌಲಭ್ಯ ಪಡೆಯುವುದಾದರೆ, ಇದಕ್ಕಿಂತ ದೊಡ್ಡ ದ್ರೋಹದ ಮಾತು ಬೇರಿಲ್ಲ. ರಚನಾತ್ಮಕ ವಿರೋಧ ಬುದ್ಧಿ ಬೆಳೆಯದೆ ಪ್ರಜಾಪ್ರಭುತ್ವ ಸುದೃಢವಾಗುವುದಿಲ್ಲ.

ವಂದನಾರ್ಪಣೆ

ತಾ 28-1-1970ರಂದು ಜರಗಿದ ನಮ್ಮ ನೂತನ ಗೃಹ ಪ್ರವೇಶದ ಆಮಂತ್ರಣಗಳನ್ನು ಮನ್ನಿಸಿ ಅಂದಿನ ಸಮಾರಂಭದಲ್ಲಿ ಭಾಗ ವಹಿಸಿದ ಸಹೃದಯ ಬಂಧು-ಭಗಿನಿಯರಿಗೂ ಹಿತೈಷಿ-ಮಿತ್ರರಿಗೂ ಬೇರೆ ಬೇರೆ ವಿಧದಲ್ಲಿ ಸಹಕರಿಸಿದ ಸರ್ವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಆಭಾರ ಸೂಚಿಸಲು ಅಸಾಧ್ಯವಾದ ಬಗ್ಗೆ ನಮ್ಮನ್ನು ಮನ್ನಿಸಬೇಕಾಗಿ ಕೇಳಿಕೊಳ್ಳುವೆವು.

'ಸ್ವಾಗತಮ್' — ಮಲ್ಪೆ ಮಧ್ವರಾಜ
ಮಲ್ಪೆ, ತಾ. 31-1-70 — ಮನೋರಮಾ ಮಧ್ವರಾಜ

ಬಿನ್ನಹ

ಪತ್ರಿಕೆಗಳಿಗೆ ಬಳಸುವ ಕಾಗದದ (ನ್ಯೂಸ್‌ಪ್ರಿಂಟ್) ಕೊರತೆಯಿಂದಾಗಿ ಕೆಲ ವಾರಗಳಿಂದ ನಾವು 'ನವಯುಗ'ದ ಪುಟಗಳನ್ನು ಇಳಿಸಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ. ಈ ವಾರವೂ ಎಂಟು ಪುಟಗಳನ್ನಷ್ಟೇ ಕೊಡಲಾಗಿದೆ. ಮುಂದೆ ಕಾಗದದ ಕೊರತೆ ನೀಗಿ ಅನುಕೂಲ ಪರಿಸ್ಥಿತಿ ಒದಗಿದಂತೆ ಪುಟಸಂಖ್ಯೆ ಹೆಚ್ಚಿಸುವುದಲ್ಲದೆ ಪತ್ರಿಕೆಯಲ್ಲಿ ಸಾಕಷ್ಟು ಬದಲಾವಣೆ ಕೂಡ ಮಾಡಲಿರುವೆವು. ಸಹೃದಯರಾದ ನಮ್ಮ ಚಂದಾದಾರ ಬಂಧುಗಳು ಸಹಾನುಭೂತಿಯಿಂದ ಸಹಕರಿಸಬೇಕಾಗಿ ಬಿನ್ನಹ ಮಾಡಿಕೊಳ್ಳುತ್ತೇವೆ.

ಚಂದಾಹಣ ಬಾಕಿ ಇರುವ ಚಂದಾದಾರರು ದಯಮಾಡಿ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿ ಎಂದಿನಂತೆ ಪ್ರೋತ್ಸಾಹಿಸಬೇಕಾಗಿಯೂ ವಿನಂತಿ.

—ಮೆನೇಜರ್

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

IA. VI & VII
In O. S. 443/63

ಕೆ. ಅಶ್ರಫ್ —ವಾದಿ
ಪಿ. ವೆಂಕಟೇಶ ಶೆಟ್ಟಿ ಕೂಡಾ—ಪ್ರತಿವಾದಿಯು

೩ನೇ ಎದ್ರಿ ಪುತ್ತೂರು ಕಸಬಾ ಗ್ರಾಮದ ದರ್ಬೆಯಲ್ಲಿರುತ್ತಿದ್ದ ಅಮ್ಮು ಯಾನೆ ಕಾವೇರಿ ಹೆಂಗ್ಸಿನ ಮಗ ಗೋಪಾಲ ಶೆಟ್ಟಿಗೆ,

ಮೇಲಿನ ದಾವೆಯಲ್ಲಿ ತನಗೆ ಫೈನಲ್ ಡಿಕ್ರಿ ಕೊಡ್ಸಿ ಕೊಡಬೇಕೆಂದು ಮತ್ತು ಪ್ರಿಲಿಮಿನರಿ ಡಿಕ್ರಿಯಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕೆಂದು ಹಾಕಿದ ಮೇಲೆ ಹೇಳಿದ ಎರಡು ಅರ್ಜಿಗಳು ತಾರೀಖು 20.2.1970ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದಕಾರಣ ಆ ದಿನ ನೀವು ಬೆಳಿಗ್ಗೆ ಗಂಟೆ 11ಕ್ಕೆ ಮೇಲೆ ಹೇಳಿದ ಕೋರ್ಟಿನ ಮುಂದೆ ಖುದ್ದು ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ನಿಮ್ಮನ್ನು Exparte ಮಾಡಿ ದಾವೆ ಮುಂದುವರಿಸಲಾಗುವುದು, ತಿಳಿದಿರಿ.

(ಸಹಿ) ಪಿ. ರಾಮಚಂದ್ರ ಭಟ್ಟ
ವಾದಿ ಪರ ಎಡ್ವೊಕೇಟ್

ಪುತ್ತೂರು, 28.1.1970

ರಾಷ್ಟ್ರೀಯ ಆಹಾರ ಧೋರಣೆಯ ಅವಶ್ಯಕತೆ

— ಶ್ರೀ ಟಿ. ಎ. ಪೈ

ಇತ್ತೀಚೆಗೆ, ಮುಲ್ಕಿ ಲಾಯನ್ಸ್ ಕ್ಲಬ್, ಮಂಗಳೂರು ತಾಲೂಕು ಮಂಡಲಿ ಹಾಗೂ ಮುಲ್ಕಿ ಪಂಚಾಯತುಗಳು ಜೊತೆಯಾಗಿ ಏರ್ಪಡಿಸಿದ್ದ ತಾಲೂಕು ಮಟ್ಟದ ಕೃಷಿ ಕೂಟದಲ್ಲಿ, ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ. ಎ. ಪೈಯವರು ಮಾತನಾಡುತ್ತಾ, ಎಲ್ಲಿಯ ವರೆಗೆ ಆಹಾರದ ಬಗ್ಗೆ ಸ್ವಯಂ ಪರಿಪೂರ್ಣತೆಯ ಕಳಕಳಿಯಲ್ಲಿ ರೂಪಿತವಾಗಿರುವ ರಾಷ್ಟ್ರೀಯ ವ್ಯವಸಾಯ ಧೋರಣೆಯು ನಿರ್ಧಾರವಾಗದೋ ಆ ತನಕ ನಾವು ಅಸಹಾಯಕರಾಗಿ ಪ್ರಕೃತಿಯ ಪ್ರಕೋಪ ಹಾಗೂ ಹವಾಮಾನವನ್ನು ನಮ್ಮ ಸೋಲಿಗಾಗಿ ದೂಷಿಸಬೇಕಾಗುವುದೆಂದು ನುಡಿದರು. ಅವರು ಮುಂದುವರಿಯುತ್ತಾ ರಾಷ್ಟ್ರದಲ್ಲಿ ಆಹಾರ ಮಂತ್ರಿಯಿರುವ ತನಕ ವ್ಯವಸಾಯ ಮಂತ್ರಿ ಸಫಲನಾಗಲಾರನೆಂದು ಪರಿಗಣಿಸಬಹುದಾಗಿ ನುಡಿದರು.

ಶ್ರೀ ಪೈಯವರು ಮುಂದುವರಿಯುತ್ತಾ ಹೀಗೆಂದರು: "ನಾವು ಕೇವಲ ದವಸಧಾನ್ಯಗಳಲ್ಲಿ ಮಾತ್ರ ಸ್ವಯಂ ಪರಿಪೂರ್ಣತೆಯನ್ನು ಹೊಂದದೆ ಉದ್ದಿಮೆಗಳಿಗೆ ಅಗತ್ಯವಿರುವ ಇತರ ವ್ಯಾವಸಾಯಿಕ ಕಚ್ಚಾ ಪದಾರ್ಥಗಳಲ್ಲಿಯೂ ಸ್ವಯಂ ಪರಿಪೂರ್ಣತೆಯಾಗುವಂತೆ ಪ್ರಯತ್ನಿಸಬೇಕು. ಎಲ್ಲಿಯ ವರೆಗೆ ಕೃಷಿ ಉತ್ಪನ್ನಗಳ ದರ ಧೋರಣೆಯು ಕೃಷಿಉತ್ಪನ್ನಗಳಿಗೆ ಬೆಂಬಲಿತವಾಗಿ ನಿರ್ಧಾರವಾಗುವುದಿಲ್ಲವೋ, ಎಲ್ಲಿಯ ವರೆಗೆ ಪ್ರತಿಕೂಲ ಹವಾಮಾನದ ಹಾವಳಿಯು ನಿಯಂತ್ರಿತವಾಗದೋ, ಎಲ್ಲಿಯ ವರೆಗೆ ಕೃಷಿ ವಿಮೆಯು ಜಾರಿಯಾಗದೋ, ಎಲ್ಲಿಯ ವರೆಗೆ ಅಗತ್ಯವಿರುವ ಗೊಬ್ಬರ ಹಾಗೂ ಇತರ ಕೃಷಿ ಅವಶ್ಯಕತೆಗಳ ಬೆಲೆಯೂ ಸಾಮಾನ್ಯ ರೈತನಿಗೆ ಅನುಕೂಲವಾಗುವ ರೀತಿಯಲ್ಲಿ ನಿರ್ಧಾರವಾಗುವುದೋ ಅಲ್ಲಿಯ ವರೆಗೆ ಹಸಿರು ಕ್ರಾಂತಿ ಬಹಳವಾಗಿ ಸಫಲವಾಗದು. ಹಿಂದಿನ ವರ್ಷ ಬಂದ ಉತ್ತಮ ಫಸಲುಗಳಿಂದಾಗಿ ರೈತರುಗಳು ನಾವು ಸುಧಾರಿತ ಕೃಷಿ ವಿಧಾನಗಳನ್ನು ಅವಲಂಬಿಸಿ, ಉತ್ತಮ ತರದ ಬೀಜಗಳನ್ನು ಪ್ರಯೋಗಿಸಿದ್ದಕ್ಕೆ ಫಲವಾಗಿ ಈಗ ಕೃಷಿ ಉತ್ಪನ್ನಗಳ ದರಗಳು ಇಳಿಮುಖವಾಗುತ್ತಿರುವುದಕ್ಕೆ ಖಿನ್ನ ಮನಸ್ಕರಾಗಿರುತ್ತಾರೆ.

ಕಸ್ಟೋಡಿಯನ್ ಪೈಯವರು ಮುಂದುವರಿಸಿ ಹೀಗೆಂದರು: "ಹಸಿರು ಕ್ರಾಂತಿಯು ಸಫಲವಾಗಬೇಕಾದಲ್ಲಿ ಅದಕ್ಕೆ ಅನುಕೂಲವಾಗಿ ದರಗಳ ಬೆಂಬಲ ದಾಸ್ತಾನು ಸೌಕರ್ಯಗಳ ನಿರ್ಮಾಣ ಹಾಗೂ ಮಾರಾಟ ವ್ಯವಸ್ಥೆಗಳ ವ್ಯವಸ್ಥೆಗಳಾಗಿ ರೈತರಿಗೆ ತಮ್ಮ ಶ್ರಮವು ವ್ಯರ್ಥವಾಗದು ಎಂಬ ಭರವಸೆ ಒದಗಿಸಲ್ಪಡಬೇಕು. ಯಾವಾಗ ಈ ನಮ್ಮ ಇಡೀ ದೇಶವು ರೈತನ ಮಾರುಕಟ್ಟೆಯಾಗಿ ತೆರೆಯಲ್ಪಡುವುದೋ ಆಗ ಮಾತ್ರ ವ್ಯವಸಾಯವು ಲಾಭದಾಯಕವಾಗಿ ಪರಿಣಮಿಸಿ ರೈತರ ಏಳಿಗೆಯಾದೀತು. ಎಲ್ಲಿಯ ವರೆಗೆ ಪ್ರಾದೇಶಿಕ ಅಡ್ಡಿ ತಡೆಗಳು ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಅಡ್ಡಿ ಬರುವುದೋ ಅಲ್ಲಿಯ ವರೆಗೆ ದರಗಳು ಸುಧಾರಿತವಾಗದೆ ರೈತನಿಗೆ ಉಪಯೋಗವಾಗದು.

ಶ್ರೀ ಪೈಯವರು ತಮ್ಮ ಭಾಷಣವನ್ನು ಮುಂದುವರಿಸಿ ಮುಲ್ಕಿಯಲ್ಲಿ ಈ ತರಹದ ಕೃಷಿಕೂಟವನ್ನು ಏರ್ಪಡಿಸಿದುದಕ್ಕೆ ಲಾಯನ್ಸ್ ಕ್ಲಬ್ಬನ್ನು ಅಭಿನಂದಿಸಿ, ಲಾಯನ್ಸ್ ಹಾಗೂ ರೋಟರಿಗಳಂತಹ ಸಂಸ್ಥೆಗಳು ತಮ್ಮ ಗಮನವನ್ನು ರೈತರ ಕಡೆಗೆ ಕೇಂದ್ರೀಕರಿಸಿ ವ್ಯವಸಾಯವನ್ನು ಲಾಭದಾಯಕವಾಗಿ ಪರಿಗಣಿಸುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಪೈಯವರು, ರೈತರಿಗೆ ಅವಶ್ಯವಿರುವ ಅವಕಾಶಗಳು ದೊರೆತಲ್ಲಿ ಅವರು ಹೆಚ್ಚಿನ ಫಲಿತಾಂಶಗಳನ್ನು ನೀಡಿ ದೇಶಕ್ಕೆ ಗರ್ವ ಮೂಡುವ ಚೈತನ್ಯವನ್ನು ತರುವರೆಂದು ನುಡಿದರು.

ಎಲ್ಲವೂ ಇದ್ದೂ ಏನೂ ಇಲ್ಲ!

ಪೋಲೀಸರಿದ್ದಾರೆ—ಆದರೆ ಸಂರಕ್ಷಣೆ ಇಲ್ಲ!
ಪಂಚಾಯತಿ ಇದೆ—ಆದರೆ ಒಗ್ಗಟ್ಟು ಇಲ್ಲ!
ನ್ಯಾಯಾಲಯ ಇದೆ—ಆದರೆ ನ್ಯಾಯ ಇಲ್ಲ!
ವಿದ್ಯಾಲಯ ಇದೆ— ಆದರೆ ವಿದ್ಯೆ ಇಲ್ಲ!
ಸರಕಾರ ಇದೆ— ಆದರೆ ಕೇಳುವವರೇ ಇಲ್ಲ!

ಯಾವ ಸರಕಾರವನ್ನು ಜನತೆಯು ತನ್ನ ಮತದಾನದಿಂದ ತಯಾರಿಸುತ್ತದೆಯೋ ಮತ್ತು ತಾನು ಕೊಡುವ ಟಿಕ್ಸಗಳಿಂದ ನಡೆಸುತ್ತದೆಯೋ ಅದೇ ಸರಕಾರದಲ್ಲಿ ಜನತೆಯ ಸುಖದುಃಖ ಕೇಳುವವರೇ ಇಲ್ಲದಿದ್ದರೆ ಜನತೆ ಎಲ್ಲಿ ಹೋಗಬೇಕು? ಜನತೆಯ ಭರವಸೆ ಪರಮಾತ್ಮನ ಮೇಲೆಯೇ ಇದೆಯೆನ್ನೋ ನಿಜ. ಆದರೆ ಪರಮಾತ್ಮನ ಕೃಪೆ ಎಂದು ಮತ್ತು ಯಾವ ರೀತಿಯಲ್ಲಿ ಆದೀತು ಎಂಬುದು ಯಾರಿಗೂ ತಿಳಿಯುವುದಿಲ್ಲ! ಜನರಿಗೆ ತಮ್ಮ ಸುತ್ತುಮುತ್ತಲೂ ಪ್ರತ್ಯಕ್ಷ ಕಾಣಿಸುತ್ತಿರುವ ಮಹಾಶಕ್ತಿ ಸರಕಾರದ ಶಕ್ತಿ! ಸರಕಾರದ ನೋಟು ನಡೆಯುತ್ತದೆ, ಸರಕಾರದ ರೇಲ್ವೆ ನಡೆಯುತ್ತವೆ. ಸರಕಾರದ ಲಾಠೀ ಬಂದೂಕು ನಡೆಯುತ್ತವೆ. ಸರಕಾರದ ಕೋರ್ಟು ಕಚೇರಿ ನಡೆಯುತ್ತವೆ. ಸರಕಾರದ ಶಾಲೆಕಾಲೇಜು ನಡೆಯುತ್ತವೆ! ಎಲ್ಲ ಕಡೆಯಲ್ಲಿಯೂ ಅವರದೇ ಎಲ್ಲಾ ನಡೆಯುತ್ತದೆ! ಸರಕಾರವೇ ಎಲ್ಲಕ್ಕಿಂತ ಹೆಚ್ಚಿನದು; ಎಲ್ಲರಿಗಿಂತ ಶ್ರೀಮಂತ ಮತ್ತು ಎಲ್ಲರಿಗಿಂತ ಬಲಿಷ್ಠ ಎಂದು ಜನರು ಹೇಳುತ್ತಾರೆ.

ಆದರೆ ಬಡಜನರಾದರೋ ಹಳ್ಳಿಗಳಲ್ಲಿ ಕಾಣುವ ದೃಶ್ಯವೇ ಬೇರೆ! ಅಲ್ಲಿಯಾದರೋ ಧನಿಕರ ಹಾಗೂ ಪುಂಡಜನರದೇ ರಾಜ್ಯ. ಸರಕಾರವೆಲ್ಲ ಅವರ ಕೈಯಲ್ಲಿ! ಕೈಯಲ್ಲಿ ದೊಣ್ಣೆ ಉಳ್ಳವರು, ಜೇಬು ತುಂಬ ರೊಕ್ಕ ಉಳ್ಳವರು, ಮುಖಂಡರಲ್ಲೂ ಅಧಿಕಾರಿಗಳಲ್ಲೂ ವಶೀಲಿ ಉಳ್ಳವರು, ಇವರದೇ ರಾಜ್ಯ ನಡೆಯುತ್ತದೆ!

(ಗಾಂವಕೀ ಬಾತ್)

ಹೊಸ ವರ್ಷದ ಹಾಡು

ಹಾಡೊಂದ ಹಾಡಿ
ನಾವೆಲ್ಲ ಕೂಡಿ
ನಲಿದಾಡಿ ಕುಣಿದಾಡಿ
ಕಲೆಯೋಣ ಬನ್ನಿ || ಪಲ್ಲ ||
ಹೊಸ ವರ್ಷದ ಹಾಡು
ಕನವರಿಸಿದ ಕನಸು
ಸುಫಲಾಗಲಿ ಸಂತಸವು
ನನಸಾಗಲಿ ನಮ್ಮಯ ಕನಸು ||೧||
ಶುಭಕೋರುವ ನಾವಿಂದು
ಹೊಸ ವರ್ಷದ ದಿನದಂದು
ಒಡನಾಡಿಗಳೊಂದಾಗಿ
ಹೊಸ ವರ್ಷದ ಹಾಡನು ಹಾಡಿ ||೨||
ಹೊಸ ವರ್ಷವು ನಮಗೆ
ಕಹಿಯಾಗದೆ ಇರಲಿ
ಸಿಹಿಯೆಲ್ಲವ ತುಂಬಿರಲಿ
ಬಾಳೆಲ್ಲವು ಹಸನಾಗಿರಲಿ ||೩||
ಹೊಸ ಹುರುಪನು ಹೊಂದಿ
ನವ ಚೈತನ್ಯದಿ ಕೂಡಿ
ದುಡಿಯುವ ಬನ್ನಿರಿ, ನಾವೆಲ್ಲ
ಹೊಸ ವರ್ಷದ ಶುಭ ದಿನದಂದ ||೪||
ಹಸಿರಾಗಿರಲಿ ನಾಡು
ಹುಲುಸಾಗಿರಲಿ ಬೆಳೆಯು
ಚೆಲುವಾಗಿರುವ ಬಾಳು
ಹೊಸ ವರ್ಷದಿ ದೊರೆಯಲಿ ನಮಗೆಲ್ಲರ್ಗೂ ||೫||
ಕೂಗಿತು ಕೋಗಿಲೆ 'ಕುಹೂ'
ಅರಳಿತು ಜಗದಿನ ಚೆಲುವು
ಹರಡಿಹ ಬೆಳ್ಳಿಯ ಬೆಳಕು
ನವಜ್ಯೋತಿಯನೀವುದು ನಮಗಿಂದು ||೬||
ಮೂಡಣ ಚೆಲುವನು ನೋಡಿ
ಕಣ್ಣಿಗೆ ತಂಪನ್ನೀಯುವ ನೋಟ,
ನವ ವಸಂತನು ಬರುತಿಹನು
ಆಹ್ವಾನಿಸಲು ನಮ್ಮನು ನೋಡಿ ||೭||

—"ಕೃಪಾಭ" ಮಾನಸ ಗಂಗೋತ್ರಿ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಶ್ರೀಸಾಮಾನ್ಯರ ಜೀವನ ಸುಧಾರಣೆಯಲ್ಲಿ ಶಿಕ್ಷಣದ ಪಾತ್ರ

ಕೇಂದ್ರ ಸರಕಾರದ ಶಿಕ್ಷಣ ಮತ್ತು ಯುವಜನ ಖಾತೆಯ ಮಂತ್ರಿಗಳಾದ ಪ್ರೊ. ವಿ. ಕೆ. ಆರ್. ವಿ. ರಾವ್ ಅವರು ನವದೆಹಲಿಯಲ್ಲಿ ಕಾಮನ್‌ವೆಲ್ತ್ ಅಂತರ್ ವಿಶ್ವವಿದ್ಯಾನಿಲಯಗಳ ಸಮ್ಮೇಳನದಲ್ಲಿ ಮಾಡಿದ ಭಾಷಣದ ಮುಖ್ಯಾಂಶಗಳು—

ನಮ್ಮ ದೇಶದಲ್ಲಿ 1947ರಲ್ಲಿ ಕೇವಲ ಹತ್ತೊಂಭತ್ತು ವಿಶ್ವವಿದ್ಯಾನಿಲಯಗಳಿದ್ದವು. ಈಗ ಇದರ ಸಂಖ್ಯೆ ತೊಂಭತ್ತಕ್ಕೆ ಏರಿದೆ. ಅಂದಿನ ದಿನಗಳಲ್ಲಿ ಇಡೀ ದೇಶಕ್ಕೆಲ್ಲಾ 250 ಕಾಲೇಜುಗಳಿದ್ದು, 245,000 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಸೌಲಭ್ಯ ಪಡೆಯುತ್ತಿದ್ದರು. ಈಗ ದೇಶದ ಬೇರೆ ಬೇರೆ ಭಾಗಗಳಲ್ಲಿ 3000ಕ್ಕೂ ಹೆಚ್ಚು ಕಾಲೇಜುಗಳಿದ್ದು, ಎರಡು ದಶಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಇವುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಗುಣಮಟ್ಟದ ದೃಷ್ಟಿಯಿಂದಲೂ ಶೈಕ್ಷಣಿಕ ವ್ಯವಸ್ಥೆ ಉತ್ತಮಗೊಂಡಿದೆ. ಮತ್ತೆ ಕೆಲವು ಕ್ಷೇತ್ರಗಳಲ್ಲಿ ಗುಣ ಮಟ್ಟ ಕಡಿಮೆಯಾಗಿದೆ. ದಿನೇ ದಿನೇ ಒಂದಲ್ಲ ಒಂದು ಸಮಸ್ಯೆ ಉದ್ಭವವಾಗುತ್ತಿದೆ. ವಿದ್ಯಾರ್ಥಿಗಳ ಗಲಭೆಗಳು ಮತ್ತು ನಿರುದ್ಯೋಗ ಸಮಸ್ಯೆಗಳಂತೂ ಹೆಚ್ಚುತ್ತಿವೆ. ದೇಶದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವಿಶ್ವವಿದ್ಯಾನಿಲಯಗಳು ಇಂದೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಆದರೆ ಇವು ಸಾಮಾನ್ಯವಾದವು. ಜಗತ್ತಿನ ಎಲ್ಲೆಡೆಯಲ್ಲೂ ಇಂತಹದನ್ನು ನಾವು ಕಾಣಬಹುದು. ಅಗಾಧವಾಗಿ ಹೆಚ್ಚುತ್ತಿರುವ ಜ್ಞಾನ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅವ್ಯವಸ್ಥೆ ಮತ್ತು ಇದಕ್ಕಿಂತ ಮಿಗಿಲಾಗಿ ವಿದ್ಯಾರ್ಥಿಗಳಲ್ಲಿರುವ ಅಸಂತೋಷ ಇವು ವಿಶ್ವವಿದ್ಯಾನಿಲಯಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಮುಖ್ಯ ಕಾರಣಗಳಿರಬಹುದು. ಈಗಾಗಲೇ ನಮ್ಮ ವಿಶ್ವವಿದ್ಯಾನಿಲಯಗಳು ಸಾಂಪ್ರದಾಯಿಕವಾಗಿ ಬಂದಿರುವ ಆಡಳಿತ ವ್ಯವಸ್ಥೆ ಹಾಗೂ ಶಿಕ್ಷಣ ಪದ್ಧತಿ ಬೇಕಾದಷ್ಟು ಸುವ್ಯವಸ್ಥಿತವಾಗಿಲ್ಲ ಎಂಬುದನ್ನು ಅರಿವು ಮಾಡಿಕೊಂಡಿವೆ. ಹಾಗೂ ಹೊಸ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗಲು ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿವೆ.

ವಿಶ್ವ ವಿದ್ಯಾಲಯಗಳ ಮಟ್ಟದಲ್ಲಿ ಜ್ಞಾನಾರ್ಜನೆಯೇ ಮುಖ್ಯ ಗುರಿ. ಮಾನವನಿಗೆ ಬಾಹ್ಯ ಪ್ರಪಂಚದ ಮೇಲೆ ಪ್ರಭುತ್ವ ಈ ಜ್ಞಾನದಿಂದಲೇ ಪ್ರಾಪ್ತವಾಗುತ್ತದೆ. ಕಾರಣ ಇದು ಅತ್ಯಂತ ಸಮರ್ಪಕ. ಇಷ್ಟೇ ಅಲ್ಲ ಇದರಿಂದ ಜನತೆಯಲ್ಲಿ ಬಡತನ ಮತ್ತು ಅನಾರೋಗ್ಯ ನಿವಾರಣೆಯಾಗಲು ಸಾಧ್ಯವಾಗುತ್ತದೆ. ಇದರಲ್ಲಿ ಒಂದು ಲೋಪದೋಷವೂ ಇದೆ.

ಸ್ವಾರ್ಥಿಯೆಂದು ಹೇಳದಿದ್ದರೂ ಅನೇಕ ಬಾರಿ ನಾವು ಇತರರ ಹಿತಚಿಂತನವನ್ನೇ ಬಯಸುವುದಿಲ್ಲ. ತನ್ನ ಸುಖ ಸಂತೋಷಗಳ ಕಡೆಗೆ ಹೆಚ್ಚು ಗಮನ ಕೊಡುತ್ತಾನೆ. ಹೀಗಾದರೆ ದೇಶದ ಸಾಮಾನ್ಯ ವ್ಯಕ್ತಿಯ ಜೀವನ ಮಟ್ಟ ಉತ್ತಮಗೊಳ್ಳುವುದಿಲ್ಲ. ಆತನು ದಾರಿದ್ರ್ಯತೆಯಲ್ಲಿಯೇ ಮುಂದುವರಿಯಬೇಕಾಗುವುದು. ಇಂದಿನ ವೈಜ್ಞಾನಿಕ, ತಾಂತ್ರಿಕ ಶಾಸ್ತ್ರ ಹಾಗೂ ಪ್ರೌಢ ಶಿಕ್ಷಣ ಇವುಗಳ ಬಹುಮುಖ ಪ್ರಗತಿಯಿಂದಾಗಿ ಈಗ ಹೊಸ ತಾಂತ್ರಿಕ ಯುಗವೇ ಆರಂಭವಾಗಿದೆ. ತಾಂತ್ರಿಕ ಮುನ್ನಡೆಯಿಂದ ಸಾಮಾನ್ಯ ವ್ಯಕ್ತಿಯ ಜೀವನ ಮಟ್ಟ ಸುಧಾರಿಸುವಂತಹ ಕಾರ್ಯದಲ್ಲಿ ಬುದ್ಧಿವಂತ ವ್ಯಕ್ತಿಗಳು ತಮ್ಮದೇ ಆದ ಸಹಕಾರವನ್ನು ಇಂದು ನೀಡಬೇಕಾಗಿದೆ.

ಪ್ರಸ್ತುತ ವರ್ಷದಿಂದ ದೇಶದ ಬೇರೆ ಬೇರೆ ಕಾಲೇಜುಗಳು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸಮಾಜ ಸೇವೆ ಕುರಿತು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲು ಕೇಂದ್ರ ಶಿಕ್ಷಣ ಮಂತ್ರಿ ಖಾತೆಯವರು ಉದ್ದೇಶಿಸಿದ್ದಾರೆ. ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಕೈಗೊಳ್ಳುವ ಇಂತಹ ಎಲ್ಲ ಕಾರ್ಯಕ್ರಮಗಳು ಪ್ರಶಂಸನೀಯವೆಂಬುದು ನನ್ನ ಭಾವನೆ. ಇವರೊಂದಿಗೆ ದೇಶದ ವಿಶ್ವವಿದ್ಯಾನಿಲಯಗಳು ವಯಸ್ಕರ ಶಿಕ್ಷಣಕ್ಕೂ ಅಷ್ಟೇ ಪ್ರಾಧಾನ್ಯತೆ ನೀಡಬೇಕಾಗಿದೆ. ಹಿಂದಿನ ಶಿಕ್ಷಣ ಪದ್ಧತಿಗೆ ಅನುಗುಣವಾಗಿ ನಡೆಯದೆ ಮಾನವ ಜ್ಞಾನವನ್ನು ಆಜೀವ ಪರ್ಯಂತ ಸಂಪಾದಿಸಲು ಸೌಲಭ್ಯವನ್ನು ಒದಗಿಸಬೇಕಾಗಿದೆ. ಸಾಕಷ್ಟು ಸೌಲಭ್ಯಗಳು ಇಂದು ದೊರೆಯುತ್ತಲೂ ಇವೆ. ಶಿಕ್ಷಣ ಸಂಸ್ಥೆಗಳು ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳ ಮೂಲಕ ವಿವಿಧ ರಂಗಗಳಲ್ಲಿ ಸಾಹಿತ್ಯ ಸಂಬಂಧವಾದ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಾಕಷ್ಟು ಸೇವೆ ಸಲ್ಲಿಸಬಹುದಾಗಿದೆ. ಇಂತಹ ಕಾರ್ಯಕ್ರಮಗಳು ಶಿಕ್ಷಣ ಪದ್ಧತಿಯ ಸುಧಾರಣೆಗೂ ಕಾರಣವಾಗುವುದು. ಹಾಗೂ ನಮ್ಮ ಸಂಸ್ಕೃತಿ ಸಮೃದ್ಧವಾಗಿ ಬೆಳೆಯಲು ಸಹಾಯವಾಗುವುದು.

ದೇವರು ಮನೆಯವನಾಗುತ್ತಾನೆ

ದೇವರಿದ್ದಾನೆಯೇ? ಇದ್ದರೆ, ಆತ ನಮಗೇಕೆ ಪ್ರತ್ಯಕ್ಷನಾಗುವುದಿಲ್ಲ?

ನಮ್ಮಲ್ಲಿ ದೇವರನ್ನು ಕಾಣುವ ಇಚ್ಛೆಯೇ ವಾಸ್ತವಿಕವಾಗಿಯೂ ಇಲ್ಲ. ಪ್ರಪಂಚದ ಕ್ಷುದ್ರ ವಸ್ತುಗಳನ್ನು ಗಳಿಸಲು ಮತ್ತು ಭೋಗಿಸಲು ನಾವು ಸಮಯ ಕಳೆಯುತ್ತೇವೆ. ಅವು ನಮ್ಮ ಕೈಜಾರಿದವೆಂದರೆ, ಮರುಗುತ್ತೇವೆ, ಗೋಳಿಡುತ್ತೇವೆ. ಅವು ದೊರೆಯದೆ ಹೋದರೆ, ನೃಥಿಸುತ್ತೇವೆ ಆದರೆ, ಭಗವಂತನ ಅಪ್ರಾಪ್ತಿಗಾಗಿ ನಾವೆಂದಾದರೂ ಕರುಬಿದ್ದಿದೆಯೇ? ಆತನಿಗಾಗಿ ನಮ್ಮ ಹೃದಯ ಗೋಗರೆದದ್ದಿದೆಯೇ? ನಿತ್ಯ ಸರ್ವವ್ಯಾಪಿ ಭಗವಂತನ ದರ್ಶನ ನಮಗಾಗಿಲ್ಲ ಏಕೆ ರೇನು?

ಪ್ರಾರಬ್ಧದಿಂದ ಲಭಿಸುವ ಕರ್ಮಜನ್ಯ ಅನಿತ್ಯವಸ್ತುವಲ್ಲ ಭಗವಂತ. ಕರ್ಮಜನ್ಯ ಅನಿತ್ಯ ವಸ್ತುಗಳು ದೊರೆಯುತ್ತವೆ, ಸುಲಭವಾಗಿ, ಬರಿಯ ಇಚ್ಛಾಪೂರ್ತಿಯಿಂದ. ಭಗವಂತನನ್ನು ಹೊಂದುವ ಇಚ್ಛೆ ನಮಗಿರಬಹುದು; ಅವನನ್ನು ಭಜಿಸಬಹುದು; ಆದರೆ, ಏಕೆ? ನಾವು ಆ ನಿತ್ಯನನ್ನೂ ಅನಿತ್ಯ ವಸ್ತುವಿನಂತೆ. ಕರ್ಮಜನ್ಯ ವಸ್ತುವಿನಂತೆ ಭೋಗಿಸಲು ಇಚ್ಛಿಸುತ್ತೇವೆ. ಆತನನ್ನು ಸಾಮಾನ್ಯ ಭೌತಿಕ ವಸ್ತುವೆಂದು ತಿಳಿದು ಸುಖ ಪಡೆಯ ಬಯಸುತ್ತೇವೆ. ನಮ್ಮ ಭೋಗ–ವಿಲಾಸಗಳು, ಧನಸಂಪತ್ತಿಗಳು ಉಳಿಯುವ ವರೆಗೆ, ಮನಸ್ಸಿನ ಇಚ್ಛೆಯು ಪೂರ್ಣವಾಗುವ ವರೆಗೆ ದೇವರು ದಯಾಳುವೆನ್ನುತ್ತೇವೆ. ಇವುಗಳಲ್ಲಿ ಕೊಂಚವಾದರೂ ಹಾನಿ ಕಾಣಿಸಿದರೆ, ದೇವರನ್ನೇ ಶಪಿಸುತ್ತೇವೆ; ಆತನ ಅಸ್ತಿತ್ವದಲ್ಲೇ ಸಂದೇಹ ಪಡುತ್ತೇವೆ. ಪರರ ಸುಖವನ್ನು ಕಂಡು ಅಸೂಯೆಗೊಳ್ಳುತ್ತೇವೆ. ದೇವರನ್ನೇ ನಂಬಿದರೂ ನಮಗೇಕೆ ಈ ಬಗೆಯ ಗೋಳು ಎಂದು ನಮ್ಮ ಸಂಕಟಕ್ಕಾಗಿ ಮರುಗುತ್ತೇವೆ; ಪರರ ಅಭ್ಯುದಯದಲ್ಲಿ ಈರ್ಷ್ಯೆ ಹೊಂದುತ್ತೇವೆ. ಭಗವಂತನ ಕೃಪೆ ಮತ್ತು ಅಸ್ತಿತ್ವದಲ್ಲಿ ನಂಬಿಕೆ ಕಳೆದುಕೊಳ್ಳುತ್ತೇವೆ.

ನಾವು ಚಿಂತಿಸಬೇಕು: ನಮಗೇನು ಬೇಕು? ನಾವು ಭಗವದ್ಪ್ರಾಪ್ತಿಯನ್ನು ಬಯಸುತ್ತೇವೆಯೇ? ಅಥವಾ ಕರ್ಮಜನ್ಯ ಅನಿತ್ಯ ಸುಖ ಭೋಗಗಳನ್ನೇ? ಶುದ್ಧ ಮನೋಭಾವದಿಂದ ಸರಿಯಾದ ಉತ್ತರ ದೊರೆಯುತ್ತದೆ— ನಮಗೆ ದೇವರನ್ನು ಕಾಣುವ ಆಶೆಯಿಲ್ಲ; ಕರ್ಮಜನ್ಯ ಅನಿತ್ಯ ಸುಖ ವಿಲಾಸಗಳನ್ನು ಹೊಂದುವ ಬಯಕೆ ಇದೆ.

ಹಾಗಿರುವಾಗ ದೇವರು ನಮಗೇಕೆ ಪ್ರತ್ಯಕ್ಷವಾಗುತ್ತಾನೆ?

ದೇವರು ಪರಮ ದಯಾಳು. ಕ್ಷಣಿಕ ಸುಖಭೋಗಗಳಲ್ಲಿ ನಾವು ವ್ಯವಹರಿಸುವಾಗ ದೇವರು ಸಂಕಟವೆಂಬ ವರದಾನ ನೀಡುತ್ತಾನೆ. ಸಂಕಟದ ಅಗ್ನಿ ಪರೀಕ್ಷೆಯಲ್ಲಿ ಆತ ನಮ್ಮಲ್ಲಿರುವ ಮೋಹ, ಲೋಭ—ಕಾಮಾಸಕ್ತಿ ಎಲ್ಲವನ್ನೂ ದೂರ ಮಾಡುವ ಪವಿತ್ರ ಕಾರ್ಯ ಮಾಡುತ್ತಾನೆ. ಇದರಿಂದ ಆಂತರಿಕ ಕಲ್ಮಷಗಳು ತೊಳೆದು ಹೋಗುತ್ತವೆ. ಹೃದಯ ಪರಿಶುದ್ಧವಾದೊಡನೆಯೇ ಭಗವಂತ ಅದರಲ್ಲಿ ವಿರಾಜಮಾನನಾಗುತ್ತಾನೆ; ಇದರ ಅನುಭವ ನಮಗಾಗುತ್ತದೆ ಇದೇ ಭಗವದ್ಕೃಪೆ. ಈ ಸಮಯದಲ್ಲಿ ನಾವು ನಿಶ್ಚಿಂತರಾಗಿ ನಮ್ಮನ್ನು ಆತನ ಚರಣಕಮಲಗಳಿಗೆ ಅರ್ಪಿಸೋಣ. ಅಂದರೆ, ದೇವರು ನಮ್ಮ ಸೆರೆಮನೆಯವನಲ್ಲ, ನಮ್ಮ ಮನೆಯವನೇ ಆಗಿಬಿಡುತ್ತಾನೆ.

ನಮ್ಮ 'ಪಿಗ್ಮಿ ಠೇವಣಿ'ಯ ಅದ್ಭುತ ಯೋಜನೆಯಿಂದ ಎರಡು ಲಕ್ಷಕ್ಕೂ ಮಿಕ್ಕಿದ ಜನರು ಪ್ರಯೋಜನ ಪಡೆದಿದ್ದಾರೆ

ನೀವೂ ಏತಕ್ಕೆ ಪಡೆಯಬಾರದು ?

ಅದು ನಿಮ್ಮ ಆಕಾಂಕ್ಷೆಯನ್ನು ಈಡೇರಿಸಲು ಸಹಾಯಕವಾಗಿದೆ !

ಡಾಕ್ಟರರೊಬ್ಬರು ಹೀಗೆ ಬರೆಯುತ್ತಾರೆ :

"..........."...... ನಿಮ್ಮ ನೌಕರರೊಬ್ಬರ ಒತ್ತಾಯದ ಮೇರೆಗೆ ನಾನು ಮನಸ್ಸಿಲ್ಲದ ಮನಸ್ಸಿನಿಂದ ಪಿಗ್ಮಿ ಡಿಪಾಜಿಟ್ ಯೋಜನೆಗೆ ಸೇರಿದೆ. ಇದು ನನಗೆ ಒಂದು ಮನೆಯನ್ನು ಕ್ರಯಕ್ಕೆ ಪಡೆಯಲು ಸಹಾಯಕವಾದುದನ್ನು ನೋಡುವಾಗ್ಗೆ ನಾನು ಈ ಯೋಜನೆಗೆ ಸೇರದೆ ಇರುತ್ತಿದ್ದರೆ ಎಂತಹ ಮೂರ್ಖನಾಗುತ್ತಿದ್ದೆ ಎಂಬುದು ನನಗೀಗ ಮನವರಿಕೆಯಾಗುತ್ತಿದೆ."

ನಿಮ್ಮ ಈ ಅತ್ಯದ್ಭುತ ಯೋಜನೆಗಾಗಿ ನನ್ನ ಅಭಿನಂದನೆಗಳನ್ನು ಸ್ವೀಕರಿಸಿರಿ.

ಪಿಗ್ಮಿ ಡಿಪಾಜಿಟುಗಳನ್ನು ಪ್ರತಿ ದಿನವೂ ನಿಮ್ಮ ಬಾಗಿಲುಗಳಲ್ಲಿಯೇ ಸಂಗ್ರಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ನಮ್ಮ 355 ಶಾಖೆಗಳಲ್ಲಿ ನಿಮಗೆ ಅತಿ ಸಮೀಪವಿರುವ ಒಂದರೊಡನೆ ವಿಚಾರಿಸಿರಿ.

FAITHFUL SB FRIENDLY

ಪ್ರತಿಯೊಂದು ಬ್ಯಾಂಕಿಂಗ್ ಸೌಕರ್ಯಕ್ಕಾಗಿ ಪ್ರತಿಯೊಬ್ಬನ ಬ್ಯಾಂಕ್

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ | ಕಸ್ಟೋಡಿಯನ್: ಟಿ. ಎ. ಪೈ

ಗೋಹರಾಜ್ಯದಲ್ಲಿ

ಚೀರಿದರೆ ಮಾತ್ರ ಮಗುವಿಗೆ ಹಾಲು

'ನೀವು ಏನೇ ಹೇಳಿ, ಇಂದಿರಾಗಾಂಧಿ ಹೋಗಿದ್ದರೂ ಧೀರೆ...'

'ಓ, ಸೋದಲ್ಲಾಂತಾರೆ ?"

'ಅಲ್ಲಾಂತ ಯಾರೂ ಅನ್ನಿಲ್ಲ. ಆದರೆ, ಅಷ್ಟು ಸರ್ವಾಧಿಕಾರಿಣಿ ಅಂತಾರೆ...."

"ಇಲ್ಲ, ಆಕೆ ಧೀರೆ ಅನ್ನೋದು ಇಂದು ಗೊತ್ತಾಯ್ತೇನು?"

"ನೋಡಿ, ನಾಲ್ಕು ವರ್ಷಗಳಿಂದಲೂ ನನೆಗುದಿಗೆ ಬಿದ್ದ ಚಂಡಿಗಢ...."

"ಓ, ಅದಕ್ಕೆ! ಇದೊಳ್ಳೇ ಲಾಯಕ್ಕಾಯ್ತು'

"ಯಾಕೆ?"

"ಅಲ್ವ, ಚಂಡಿಗಢದ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕೆಂದಿದ್ದರೆ, ಇಷ್ಟು ವರೆಗೇಕೆ ಕಾಯಬೇಕಿತ್ತು?'

"ಅದು ಹಾಗನ್ನಿ. ಅದಗೂ ಸಮಸ್ಯೆ ಬಿಡಿಸುವುದು ಕಷ್ಟವೇ ತಾನೆ?"

"ಅಲ್ವೆ, ಸಮಸ್ಯೆ ತಂದುಕೊಂಡದ್ದು ಅವರೇ ತಾನೆ? ಶ್ರೀಮತಿ ಗಾಂಧಿ ಭಾರಿ ತೂಗಿ ನೋಡಿ ಈಗ ನಿರ್ಧಾರಕ್ಕೆ ಬಂದರು...."

"ಆದ್ದರಿಂದಲೇ ಧೀರೆ ಅನ್ನುವುದು"

'ಧೀರೆಯಲ್ಲ, ದಿಟ್ಟೆ...'

"ಯಾಕೆ ಹಾಗನ್ನುತ್ತೀರಿ?"

"ಈಗ ಅನಿವಾರ್ಯ ಪ್ರಸಂಗ, ಅನನ್ಯ ಕಾಲ ಸನ್ನಿವೇಶ ಒದಗಬಹುದೆಂಬ ಭೀತಿ....'

"ಯಾಕೆ ಹಾಗೆಂತೀರಿ?"

'ಅಲ್ಲವೆ, ಸಂತ ಫತ್ತೇಸಿಂಗರ ಆತ್ಮಬಲಿದಾನದ ನಿರ್ಧಾರ—ಅದಕ್ಕೆ ಪಂಜಾಬ ಮುಖ್ಯಮಂತ್ರಿಗಳ, ಗುರುದ್ವಾರದ ಪುರಸ್ಕಾರಗಳಿಂದ ಇಂದಿರಾಜಿ ತತ್ತರಿಸಿ ಹೋದರು..."

"ಅಲ್ರಿ, ಹಿಂದೆ ದರ್ಶನ ಸಿಂಗ ಫೆರುಮಾನರು ಉಪವಾಸದಲ್ಲಿ...."

'ಅದೇ ಅಂದದ್ದು. ದರ್ಶನ ಸಿಂಗರ ದಿವ್ಯದರ್ಶನ ಹುಲ್ಲಿಗಿಂತ ಕಡೆಯಾಯ್ತು ಇಂದಿರಮ್ಮರಿಗೆ. ಫತ್ತೇಸಿಂಗರದ್ದು ಮಾತ್ರ.."

"ಫತ್ತೇಸಿಂಗರೆಂದರೆ ಸಾಮಾನ್ಯರಲ್ಲವೆನ್ನಿ. ಅವರು ಉಪವಾಸ ಆರಂಭಿಸಿದ್ದೇ ತಡ ಪಂಜಾಬದ ವಾತಾವರಣವೇ ಬದಲಾಯ್ತು. ಇನ್ನು ಬಲಿದಾನದ ವರೆಗೂ ಕಾದಿದ್ದರೆ, ಇಂದಿರಾಜಿ ಹಾರಿ ಹೋಗಿ ಪ್ರಾಣಃ ಬಿಟ್ಟರು ಅಡಳಿತವೇ ಬದುಕಿತ್ತೋ ಏನೋ!"

"ಇದಕ್ಕೇ ನೋಡು, ಇಂದಿರಾ ಗಾಂಧಿ ಪಂಜಾಬಕ್ಕೆ ಚಂಡಿಗಢ ಕೊಟ್ಟರು. ಪಂಜಾಬಿಗಳಿಗೆ ಖುಶಿಯಾಯ್ತು. ಹರಿಯಾನಕ್ಕೆ ಕೋಟಿ ಗಟ್ಟಲೆಯ ಪ್ರೊಗದಿ ನೀಡಿದರು. ಅವರೂ ನಾಲ್ಕು ದಿನ ಗುಣುಗುಣಿಸಿಂದು ಸುಮ್ಮನಾಗರು."

'ಏನೇ ಆಗಲಿ, ಫತ್ತೇಸಿಂಗರ ಜೀವ ಬದುಕಿತು ತಾನೆ?'

"ಸದ್ಯ ಬದುಕಿತು. ಆದರೆ, ಇದರಿಂದ ಇಂದಿರಮ್ಮನಿಗೆ ತಲೆ ನೋವು ಕಡಿಮೆಯಾಗುವುದಿಲ್ಲ.'

'ಯಾಕೆ?'

'ಯಾಕಂದರೆ? ನೋಡು, ಸಂತ ಫತ್ತೇಸಿಂಗರು ಯಾವಾಗಲೂ ಒಂದಲ್ಲ ಒಂದು ಬೆದರಿಕೆ ಹಾಕುತ್ತಲೇ ಬಂದಿದ್ದಾರೆ....'

'ಅಲ್ರಿ, ಪ್ರತ್ಯೇಕ ಪಂಜಾಬವಾಯ್ತು, ಚಂಡಿಗಢವಾಯ್ತು. ಇನ್ನೇನು ಬಾಕಿ?"

"ಅಯ್ಯೋ, ನೀನೂ ಹೀಗನ್ನೋದೆ? ಬೆದರಿಕೆ ಹಾಕುತ್ತಿರುವುದೇ ಸ್ವಭಾವವಾಗಿರುವವರಿಗೆ ಏನಾದರೊಂದು ನೆವನ ಸಿಕ್ಕೇ ಸಿಗುತ್ತದೆ.'

"ಅದು ಹೌದೂನ್ನಿ... ಅಂತೂ ಹಠಮಾಡುವರು ಆಶೆ ಮಾಡಿದ್ದೇ ಬಂತು....'

"ಅಲ್ವೆ, ತಾಯಿ ಕೂಡ ಚೀರದೆ ಹೋದರೆ ಹಾಲುಣಿಸುವುದಿಲ್ಲ. ಹಾಗಿರುವಾಗ, ಇರದಿರಮ್ಮ ಆ ತಾಯಿಗೂ ಹೀನರಾದರೇನ?"

"ಅಂದರೆ, ಬೊಬ್ಬೆ ಹಾಕಿದರೆ ಮಾತ್ರ ಇಷ್ಟ ಸಾಧನೆ...."

"ಸಮ್ಮರ್ಕಾರದ ಕಿವಿ ಸ್ವಲ್ಪ ದೂರ. ಗಲಭೆಯೆಬ್ಬಿಸದೆ ಅದಕ್ಕೆ ಕೇಳಿಸುವುದೇ ಇಲ್ಲ."

'ಅಂತೂ ಯಾರಿಗೆ ನ್ಯಾಯವಾಗಲಿ, ಅನ್ಯಾಯವಾಗಲಿ, ಒಂದು ಪ್ರಶ್ನೆಗೆ ಉತ್ತರ ಬಂತು."

"ಹ್ಞಾಂ.... ಆದರೆ, ಅದಕ್ಕೂ ಹಳೆಯ ಪ್ರಶ್ನೆಯೊಂದು ಇನ್ನೂ ಉತ್ತರ ಪಡೆದಿಲ್ಲ"

'ಕನ್ನಡಿಗರ ಮಹಾರಾಷ್ಟ್ರದ ಬಗೆ ತಾನೇ ನೀವನ್ನೋದು..."

"ಹ್ಞಾಂ...."

"ಅದಕ್ಕೇನಂತೆ? ಬೆಳಗಾಂವಿ ಮರಾಠಿಗಳಿಗೆ ಸೋಲಾಪುರದ ಕೆಲವು ಗ್ರಾಮಗಳು ಕನ್ನಡಿಗರಿಗೆ..."

"ಭಲೆ ಭಲೆ... ನಿನ್ನ ತಲೆಯೆಂದರೆ ತಲೆ.... ಇಂದಿರಮ್ಮ ದಿಟ್ಟೆ ಮಾತ್ರವಾದರೆ ನೀನು...'

'ಸಾಕು ಬಿಡೀಂದ್ರೆ... ಮತ್ತೆ ನೀವೆಲ್ಲ ಸಮಸ್ಯೆಗಳನ್ನು ಹುಟ್ಟಿಸುತ್ತ ಹೋಗಿ'

"ಹೋಗ್ಲಿ ಬಿಡೇ, ನಮಗೇನಂತೆ? ಬಿಟ್ಟಹಾಗಂತೆ ಸಮಸ್ಯೆಗಳು ಬರುತ್ತವೆ, ಮುಗಿಲಂತೆ ಹಾರಿ ಹೋಗುತ್ತವೆ...."

'ಅದು ನಮ್ಮ ನಮ್ಮ ಭಾಗ್ಯ....'

"ಸದ್ಯ ಆದಾದಗೂ ನಮಗಿದೆ ತಾನೆ?"

"ಅಞಾಂ, ಏನಂದಿರಿ?"

'ಅನ್ನೋದೇನು ಬಂತೆ....'

"....ಇದೇನೊಂದ್ರೆ...."

"ಏನೂ ಇಲ್ಲಾನ್ನು....'

—ಗೋರಾ

In the Court of the Rent Controller, [Munsif] Puttur

H. R. C. O. P. 20/69

Sri Laxminivenkatramana Temple, Puttur— *Petitioner,*

—Vs—

P. Narasimha Reddy & others *Respondents.*

To

The 1st respondent, P. Narasimha Reddy, son of Narasa Reddy, Proprietor, Venkateshwara Engineering Works, Puttur, S. K.

Please take notice that you are hereby summoned to appear in this Court in person or by a pleader on 27—2—70 at 11 A.M. and to file your counter, if any failing which it will be decided in your absence.

(By order of Court)

K. R. Shenoy,

Advocate for petitioner.

Puttur, 29—1—1970.

"ಆಹಾರ ಧಾನ್ಯಗಳ ಬೆಲೆ" ಕುರಿತಾದ ವಿಚಾರಗೋಷ್ಠಿ

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನ್ನಿನವರು ಜನವರಿ 31ರಂದು ಮಣಿಪಾಲದ ನಿವಾಸದಲ್ಲಿ ಆಹಾರ ಧಾನ್ಯಗಳ ಬೆಲೆ ಎಂಬ ಕುರಿತ ವಿಚಾರಗೋಷ್ಠಿಯನ್ನು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಇದನ್ನು ಉದ್ಘಾಟಿಸಿದ ಮೈಸೂರು ರಾಜ್ಯದ ಅಭಿವೃದ್ಧಿ ಕಮಿಶನರ್ ಶ್ರೀ ಜಿ.ವಿ.ಕೆ. ರಾಯರು ನಮ್ಮಲ್ಲಿ ಸರ್ವ ಅನುಕೂಲತೆಗಳಿದ್ದರೂ ನಾವು ಅವುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಿಲ್ಲವೆಂದೂ ನಮ್ಮದೂ ಕೃಷಿಕರ ದೇಶವಾದುದರಿಂದ ಅಧಿಕ ಧಾನ್ಯಗಳನ್ನು ರಫ್ತು ಮಾಡಿದರೆ ನಾವು ಅಭಿಮಾನ ಪಡಬಹುದೆಂದೂ ಹೇಳಿದರು. ಅಧ್ಯಕ್ಷ ಶ್ರೀ ಪೈಗಳು ಕೃಷಿ ಉತ್ಪಾದನೆಗಳಿಗೆ ಕೂಡ ನಿರ್ಬಂಧವಿಲ್ಲದ ಸಾಗಾಟ ಹಾಗೂ ಮಾರಾಟ ಸೌಕರ್ಯಗಳಿರಬೇಕೆಂದು ಸರ್ವ ದೃಷ್ಟಿಯಿಂದಲೂ ಅತ್ಯಗತ್ಯವೆಂದೂ ಕೃಷಿ ಉತ್ಪನ್ನಗಳ ಬೆಲೆ ನಿರ್ಧರಿಸುವಾಗ ಕೃಷಿಕರ ಹಿತವನ್ನು ಕಡೆಗಣಿಸಬಾರದೆಂದೂ ಮುಂತಾಗಿ ಹೇಳಿ ವಿಚಾರ ಪ್ರಚೋದಕ ಭಾಷಣ ಮಾಡಿದರು. ಆರಂಭದಲ್ಲಿ ಸ್ವಾಗತಭಾಷಣ ಮಾಡಿದ ಶ್ರೀ ಕೆ. ಕೆ. ಪೈಯವರು ವಿಚಾರ ಗೋಷ್ಠಿಯ ವಿವರಗಳನ್ನಿತ್ತರು. ಶ್ರೀ ಕೆ. ವಿ. ಬೇರಾಯರು ವಿಚಾರ ಗೋಷ್ಠಿಯ ವಿಚಾರ ಮಂಡಿಸಿದರು.

ವಿಚಾರ ಗೋಷ್ಠಿಯಲ್ಲಿ ಡಾ। ಆರ್. ರಾಮಣ್ಣ, ಡಾ। ಎನ್. ಕೆ. ತಿಂಗಳಾಯ ಶ್ರೀಗಳಾದ ಎಲ್. ಟಿ. ಕಾರ್ಲೆ, ಬಿ. ಪೂರ್ಣಾಚಾರ್, ಪಿ. ಆನಂದಕುಂದ ಹೆಗ್ಡೆ, ಎಸ್. ಬಿ. ಸಾಮ್ರಾಜ್ಯ, ಬೈಕಾಡಿ ವೆಂಕಟಕೃಷ್ಣ ರಾವ್, ಪಿ. ಶ್ರೀನಿವಾಸ ರಾವ್, ಟಿ. ಅಚ್ಯುತ ಪ್ರಭು, ಎಚ್. ಭಾಸ್ಕರ ರಾವ್ ಮೊದಲಾದವರು ಪಾಲ್ಗೊಂಡಿದ್ದರು. ಅಂತ್ಯದಲ್ಲಿ ಶ್ರೀ ಎ. ಬಾಲಕೃಷ್ಣ ಶೆಟ್ಟಿರು ಆಭಾರ ಮನ್ನಣೆ ಸಲ್ಲಿಸಿದರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 49/69.

Sri K. ನಾರಾಯಣ ರಾವ್ —ವಾದಿ.

ಮತ್ತು

ಬಾಣಬೆಟ್ಟು ಲೋರೇನ್ ಸೋಜ ಪೆದ್ರು ಸೋಜರ ಮಗ— ಹಾವಂಜೆ ಗ್ರಾಮದ ಬಾಣಬೆಟ್ಟು —ಪ್ರತಿವಾದಿ.

ಇವರಿಗೆ

ವಾದಿಯು ರಿಸೀವರನಾಗಿ ಕೆಲ್ಸವನು ಸಂವತ್ಸರದ ಆದಿ ಲಾಗಾಯ್ತು ಪ್ಲವಂಗ ಸಂವತ್ಸರದ ಅಂತ್ಯದ ವರೆಗೆ ಬರತಕ್ಕ ಗೇಣಿ ಬಾಕಿ ಬಡ್ಡಿ ಕೂಡಿ ರೂ. 863-68ಕ್ಕೆ ದಾಖಲು ಮಾಡಿದ ವೇಳಿನ ದಾವೆಯು ತಾ. 9-3-70ಕ್ಕೆ ಇಟ್ಟಿದೆ. ಪ್ರತಿವಾದಿಯು ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದರಿ ನಂಬ್ರದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಪ್ರತಿವಾದಿಯ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

Sd/- Gratian C. Rego.

Pleader for plaintiff

Dated. 27—1—70.

ಶ್ರೀ ಮಲ್ಪೆ ಮಧ್ವರಾಜರ ನೂತನ ಗೃಹದ ಪ್ರವೇಶೋತ್ಸವ

ಮಾಜಿ ಎಂ. ಎಲ್. ಎ. ಗಳೂ, ಉಡುಪಿ ತಾಲೂಕು ಬೋರ್ಡು ಅಧ್ಯಕ್ಷರೂ, ಪ್ರಸಿದ್ಧ ವ್ಯಾಪಾರಿ ಮತ್ತು ಮತ್ಸ್ಯೋದ್ಯಮಿಗಳೂ ಆದ ಶ್ರೀ ಎಂ. ಮಧ್ವರಾಜರು ಮಲ್ಪೆಯಲ್ಲಿ ಚಿತ್ತಾಕರ್ಷಕವಾಗಿ ಅತ್ಯಾಧುನಿಕ ರೀತಿಯಲ್ಲಿ ಕಟ್ಟಿಸಿದ ಸ್ವಾಗತಮ್ ಎಂಬ ನೂತನ ಗೃಹದ ಪ್ರವೇಶೋತ್ಸವವು ತಾ. 28 ರಂದು ಶ್ರೀ ಪೇಜಾವರ ಶ್ರೀ ಪಾದಂಗಳವರ ಹಸ್ತದಿಂದ ಉದ್ಘಾಟನಾ ಪೂರ್ವಕ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಆರಂಭದಲ್ಲಿ ಶ್ರೀ ಪಾದಂಗಳವರನ್ನು ವೈಭವದಿಂದ ಮೆರವಣಿಗೆಯಲ್ಲಿ ಕರೆಸಿಕೊಳ್ಳಲಾಯಿತು. ಅನಂತರ ಶ್ರೀ ಪಾದಂಗಳವರು, ಶ್ರೀ ಮಧ್ವರಾಜರ ಮತ್ತವರ ಸಹಧರ್ಮಿಣಿ ಶ್ರೀಮತಿ ಮನೋರಮಾ ಮಧ್ವರಾಜರಿಂದ ಪಾದಪೂಜೆ ಸ್ವೀಕರಿಸಿ ನೂತನ ಗೃಹದ ದೇವರ ಕೋಣೆಯ ಮಂಟಪದಲ್ಲಿ ಶ್ರೀ ಕೃಷ್ಣನ ಮೂರ್ತಿಯನ್ನು ಪೂಜೆಗಾಗಿ ಅನುಗ್ರಹ ರೂಪದಲ್ಲಿ ಕೊಟ್ಟು ಆಶೀರ್ವದಿಸಿದರು. ಅನಂತರ ಶ್ರೀ ಪಾದಂಗಳವರನ್ನು ಸಂಭ್ರಮದಿಂದ ಬೀಳ್ಕೊಡಲಾಯಿತು. ಈ ಸಮಾರಂಭಕ್ಕೆ ದೇಶ ವಿದೇಶಗಳ ಆಪ್ತ ಬಂಧು ಭಗಿನಿಯರು ಆಗಮಿಸಿದರಲ್ಲದೆ ಪ್ರವೇಶೋತ್ಸವದ ಸಂಬಂಧ ಸರ್ವ ಜಾತಿಯ ಸುಮಾರು 10,000 ಜನರಿಗೆ ಅನ್ನ ಸಂತರ್ಪಣೆಯ ವ್ಯವಸ್ಥೆ ಇತ್ತು. ರಾತ್ರಿ ಶ್ರೀ ಮಂದಾರ್ತಿ ಮೇಳದವರಿಂದ ಯಕ್ಷಗಾನ ಬಯಲಾಟವನ್ನು ಏರ್ಪಡಿಸಲಾಗಿತ್ತು.

ಶತಾಬ್ದಿ — ಆಚರಣೆ

ಗಾಂಧೀ ಶತಾಬ್ದಿ ಸಮಾರಂಭದ ವೇಳೆ ಮದ್ಯಪಾನಕ್ಕೇಕೆ ಹಾಕುವುದು ಮಾಲೆ? ಗಡಿಯಾರಗಾಂಧಿ ಪಾನರೋದಿತಿ ಕನಸೆ ಗಡಿಗಡಿಗು ಹೆಚ್ಚುತಿದೆ ಬಾಯ್ದೆರೆದ ಮೊಸಳೆ,

ಮ, ಗೋ. ರಾವ್.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 305/69.

M. S. E. B. By Executive Engineer Elect. Mangalore............ವಾದಿ

ಮತ್ತು

ಸೋಮಶೇಖರ ಹೆಗ್ಡೆ —ಪ್ರತಿವಾದಿ.

ಪ್ರತಿವಾದಿ ಸೋಮಶೇಖರ ಹೆಗ್ಡೆ, ಸರಸ್ವತಿ ಹೆಗ್ಗಡ್ತಿ ಮಗ, ಉಡುಪಿ ತಾಲ್ಲೂಕು ಹಿರೇಬೆಟ್ಟು ಗ್ರಾಮದಲ್ಲಿರುವವರು,

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವಾದಿಯು— ಪ್ಲೈಂಟ್ ನಿವೃತ್ತಿಗೋಸ್ಕರ ಮಾಡಿದ ಸದ್ರಿ ದಾವೆಯು ತಾ. 28—2—70ಕ್ಕೆ ಫಿಂಮ ಹಾಜರಿ ಬಗ್ಗೆ ಇಡಲಾಗಿದೆ. ಆ ಕುರಿತು ನಿಮಗೆ ಆಕ್ಷೇಪ ಹೇಳತಕ್ಕದ್ದಿದ್ರೆ ಸದ್ರಿ ದಿನ್ನ ಬೆಳಿಗ್ಗೆ 11ಗಂಟೆಗೆ ಸದ್ರಿ ಕೋರ್ಟ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದೆಂದು ಈ ಮೂಲಕ ತಿಳಿಸಲಾಗಿದೆ,

Y. C. S. Hegde.

Advocate for Plaintiff.

Udipi, Dated 29—1—1970.

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರರು ಬೇಕಾಗಿದ್ದಾರೆ. ಕಂಪೋಸಿಂಗ್ ವಿಭಾಗದಲ್ಲಿ ತರಬೇತಿಗಾಗಿಯೂ ಕೆಲವು ಹುಡುಗರನ್ನು ಸೇರಿಸಿಕೊಳ್ಳಲಾಗುವುದು. ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

ಸಂಬಂಧ

(ಎರಡನೇ ಪುಟದಿಂದ)

ತನ್ನ ಯಾರೂ ಹೇಳಿ ರೂಪಿಸಬೇಕಾದ್ದಿಲ್ಲ ಎನ್ನುವಷ್ಟರ ಮಟ್ಟಿಗೆ ಅವನಲ್ಲಿ ಸಂಯಮ ಹೆಪ್ಪುಗಟ್ಟಿತ್ತು. ಎಲ್ಲದಕ್ಕೂ ಸಿದ್ಧವಾಗಿಯೇ ಅವನ ಮನಸ್ಸಿನ ಸ್ತರಗಳು ಬೆಳೆದುಕೊಂಡಿದ್ದವು. ಯಾರ್ಯಾರೂ ಏನೇನೊ ಹೇಳಿದ್ದರು. ಎಂಥೆಂಥವನ್ನೆಲ್ಲ ಕಲ್ಪಿಸಿ ಆಡಿದ್ದಿಲ್ಲ. ಅವಳು ಒನ್ ನಾಟ್ ಒನ್–ಬೇಕಾದವರೊಟ್ಟಿಗೆ ಮಲಗುತ್ತಾಳೆ–ಮಜಾ ನೋಡುತ್ತಾಳೆ–ಏನೆಲ್ಲ ಅಪಲಾಪಗಳು, ಘೋರಾರು ನಾಲಿಗೆಗಳು, ಕಿವಿಗಳು ಎಲ್ಲವನ್ನೂ ಪಡೆದುಕೊಂಡಿದ್ದ; ವಾಸ್ತವಿಕತೆಯ ಪರಿಧಿಯಲ್ಲಿ ಪ ಜಲುಮಾಡಲಾಗಿ ಇಳಿದು ಹೋಡಿದ್ದ. ಹೊರಗಿನ ಅವಳಿಷ್ಟಕ್ಕಷ್ಟೇ ಕಿವಿ ಈ ಜನ, ಸಮಾಜ ಪರಿಸ್ಥಿತಿ ಪೊಳ್ಳು ಎಂದು ಅವು ಕಂಪಿಸಿದ್ದ. ಬೆಳಕನ್ನು ಕಾಣಲಾರದ ಅಸಹಾಯಕ ಪ್ರಾಣಿಗಳೆಂದು ಪಶ್ಚಾತ್ತಾಪದಿಂದ ನೊಂದಿದ್ದ.

ಗಾಯಿತ್ರಿ ತಾನು ಮದುವೆಯಾಗಲಿರುವ ಹುಡುಗಿ, ಮೊದಲೆ ಹೇಳಿದ್ದ—

"ಗಾಯಿತ್ರಿ, ಜೀವನವನ್ನೂ ಅನುಭವವನ್ನೂ ಬೇರು ಹಿಡಿದು ನೋಡಬೇಕೆನ್ನುವವನು ನಾನು. ಸಮಕಾಲೀನ ಸಮಾಜದಲ್ಲಿ ಯಾವುದು ಬರಬೇಕು ಅಂತ ಹೇಳ್ತೀವೊ, ಅದನ್ನು ಪ್ರಾಯೋಗಿಕವಾಗಿಸಬೇಕಾದ್ದು ತೀರ ಅವಶ್ಯ."

"[illegible] ಒಪ್ಪಿಗುವರು ಅವಿ"

ಗಾಯಿತ್ರಿ ಕೈಯಲ್ಲಿ ಮುಖ ಮುದುಗಿಸಿ ಅತ್ತಿದ್ದಳು.

ತಂದೆ ತನ್ನ ನಿರ್ಧಾರಕ್ಕೆ ಅಡ್ಡಿ ಬರಲಾರ. ತಾನು ಸ್ವತಂತ್ರ. ಸ್ವತಂತ್ರವಾಗಿ ವಿಚಾರಿಸುತ್ತೇನೆ, ಅಜ್ಜ ಮಾತ್ರ ವಿರೋಧಿಸಬಹುದು. ಬಿಲ್‌ಕುಲ್ ರೇಗುತ್ತಾನೆ. ಅವನಿಗೆ ಹೇಳಿಯೇ ಬಿಡಬೇಕು ತಾನು ನಿಮ್ಮ ಪರಿಧಿಯಲ್ಲಿ ತೆವಳಲಾರೆ ಎಂದ. ಅಜ್ಜನ ಕಣ್ಣುಗಳು ಬೆನ್ನ ಹಿಂದೆ ಬಂದಂತಾದಾಗ, ಯಾಕೊ ಅವರೆಲ್ಲ ಚಿಪ್ಪಿನೊಳಗಿನ ಹುಳಗಳಿದ್ದ ಹಾಗನ್ನಿಸಿತು. ಅಜ್ಜ, ಅಪ್ಪ, ಆಯಿ, ಊರ ತೋಟ, ಗದ್ದೆ, ಮನೆ–ಜಂತಿ–ಜಗಲಿಗಳೆಲ್ಲ 'ಹಳೆ ಮನೆಯ ಮಂದಿ'ಯಾಗಿ ತೋರಿದವು. ವ್ಯಕ್ತಿತ್ವವನ್ನು ಕಳೆದುಕೊಂಡು ಬದುಕುವ ಹೇಡಿತನ ತನ್ನದಾಗಬಾರದು, ಖಂಡಿತವಾಗಿ ಆಗಕೂಡದು. ಜೀವನಕ್ಕೊಂದು ಸಮಾಧಾನ ಬೇಕು. ತನ್ನತನ ಎಂಬುದೊಂದಿರಬೇಕು. ಅವನೆಲ್ಲ ಅರಗಿಸಿಕೊಳ್ಳಬೇಕಾದ್ದು ತನ್ನ ಮಟ್ಟಿಗಂತೂ ಅನಿವಾರ್ಯ.

ಇಂದು ಗಾಯಿತ್ರಿ ಬಂದಿದ್ದಾಳೆ. ತುಂಬಾ ಸೊರಗಿದ್ದಾಳೆ. ಒಣಗಿದ ತುಟಿಗಳಲ್ಲಿ ಉತ್ಸಾಹದಿಂದ ನಗೆಯನ್ನು ಎಳೆದು ತಂದ ಹಾಗಿದೆ. ಕಣ್ಣುಗಳು ಬಾಡಿ ಎವೆಯ ಕಣಿವೆಯ ಮೂಳೆ ಎದ್ದು ತನ್ನ ಕರುಳನ್ನು ಹಿಸುಕುತ್ತಿದೆ. ಅವಿನಾಶ ನರಳಿದ. ವಾಕಿಂಗ್ ಹೋಗುವಾಗ ಅವಳ ಕೈ ಹಿಡಿದು ಬೆರಳುಗಳನ್ನು ಸವರಿದಾಗ ಬೆಚ್ಚಗೆನಿಸಲಿಲ್ಲ.

ಹುಲ್ಲಿನ ಮೇಲೆ ಕುಳಿತರು. ಇಬ್ಬರೂ ಮಾತನಾಡಲಿಲ್ಲ. ಮೌನ, ಬರೀ ಮೌನ.

ಅವನಿಗೆ ತಡೆಯಲಾಗಲಿಲ್ಲ. ಅವಳ ಕೆನ್ನೆ, ಮೂಗು, ತುಟಿಗಳನ್ನೆಲ್ಲ ಮುಟ್ಟಿ ಮುಟ್ಟಿ

"ಡಿಯರ್ [illegible], ನನ್ನ್ಯಾಕೆ ನೋಡಕ್ಕಾಗಲ್ಲ ಗಾಯಿತ್ರಿ" ಎಂದು ಹಲುಬಿದ.

ಗಾಯಿತ್ರಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಮಾತು ಗಂಟಲಲ್ಲಿ ತೂರಿ ಬರುತ್ತಿತ್ತು. ಅವಳು ನಡುಗುತ್ತಿದ್ದಳು.

"ಅವಿ, ನಂಗೆ.... ನಂಗೆ... ಹಿಸ್ಟೀರಿಯಾ.... ಅಂತೆ" ಅಂಗೈಯಿಂದ ಮುಖ ಮುಚ್ಚಿಕೊಂಡು ಬಿಕ್ಕಳಿಸಿದಳು.

ಅವಿ ಗಾಳಿಗೆ ಬೆತ್ತಲೆಯಾದ ಮರಗಳಲ್ಲಿ ಶೂನ್ಯದೃಷ್ಟಿ ಇಟ್ಟಿದ್ದ. ಮೈ ಕೊರೆಯುವಂಥ ಗಾಳಿ ಸುಳಿದಾಡುತ್ತಿತ್ತು. ಹಳ್ಳಕೊಳ್ಳ, ಮರ, ಹಸಿರುಗಳೆಲ್ಲ ಬಣ್ಣ ಕಳೆದುಕೊಂಡು ನಿಶ್ಶಕ್ತಿ ಹೊಂದುತ್ತಿರುವ ಹಾಗಾದಾಗ

"ನನ್ ಸಂಬಂಧ ಕಡ್ಕೊಂಬಿಡ್ತೀಯಾ ಅವಿ? ನನ್ನನ್ನ ಮುಟ್ಟಿ ಮಾಡ್ಕೊಳ್ಳಲ್ವ?"

ಅವನ ಕೈಗಳನ್ನ ಬಲವಾಗಿ ಹಿಡಿದುಕೊಂಡು ನರಳಿದಳು, ಇಗ್ಗಿದಳು.

ಬಿಗಿಯಾಗಿ ಅವಳ ಸೊಂಟವನ್ನು ಬಳಸಿ ಆಲಿಂಗಿಸುತ್ತಿರುವ ತುಟಿಯನ್ನೆತ್ತಿ ಚೀರಿದ:

'ಇಲ್ಲ, ಇಲ್ಲ ನನ್ ಗಾಯಿತ್ರಿಗೇನೂ ಆಗಿಲ್ಲ, ಎಲ್ಲಾ ಸುಳ್ಳು ಶ ದ್ಧ ಸುಳ್ಳು'

ಅವಿನಾಶ ತುಟಿ ಬಿಡಿಸಿಕೊಂಡ. ತಂಡಾನೆಯ ಗಾಳಿ ಬೀಸಿತು. ಗಾಯಿತ್ರಿಯನ್ನು ನೋಡಿದ ಕಣ್ಣು, ಕೆನ್ನ ಮೂಗಿನಲ್ಲೆಲ್ಲ ಸಿಕ್ಕಾಪಟ್ಟೆ ಕೆಂಪಗಿನ ಹೀರಿನೆಲ್ಲ ಕುಡಿದು ಮುಗಿಸಿದ್ದ. ಹಾಯೆನಿಸಿತು.

ಗಾಯಿತ್ರಿ ಅವನ ಮೂಗು ಹಿಂಡಿದಳು. ಅವಿ ಅವಳ ಜೊಂಪಲ್ಲಿ ಬೆರಳಿಟ್ಟು ನಕ್ಕ

(ವಿಶೇಷ ಸಂಚಿಕೆಗೆ ಬಂದುದು)

ಬಹುಮುಖೀ ಸತ್ಯ

ನನ್ನ ದೃಷ್ಟಿಕೋನದಿಂದ ನನ್ನದೇ ಯಾವಾಗಲೂ ಸರಿ ಇರುತ್ತದೆ. ಮತ್ತು ನನ್ನ ಪ್ರಾಮಾಣಿಕ ಟೀಕಾಕಾರ ದೃಷ್ಟಿಯಿಂದ ನಾನು ಎಷ್ಟೋ ಸಲ ತಪ್ಪು ಇರುತ್ತೇನೆ ಎಂಬುದು ನನ್ನ ಅನುಭವ. ನಮ್ಮ ನಮ್ಮ ದೃಷ್ಟಿಕೋನದಿಂದ ಪ್ರತ್ಯೊಬ್ಬರದೂ ಸರಿಯೇ ಇರುತ್ತದೆ ಎಂಬುದೂ ನನಗೆ ಗೊತ್ತು! ಈ ಪರಿಜ್ಞಾನ ನನ್ನಲ್ಲಿ ಇರುವದರಿಂದಲೇ ನನ್ನ ವಿರೋಧಿಗಳ ಹಾಗೂ ಟೀಕಾಕಾರರ ಮೇಲೆ ನನ್ನಿಂದ ದುರುದ್ದೇಶದ ಆರೋಪ ಮಾಡಲಾಗುವುದಿಲ್ಲ! ಆನೆಯ ಕುರಿತು ಭಿನ್ನ ಭಿನ್ನ ವಿವರಣೆಗಳನ್ನು ಕೊಟ್ಟ ಆ ಏಳು ಜನ ಕುರುಡರು ತಮ್ಮ ತಮ್ಮ ದೃಷ್ಟಿಯಿಂದ ಸರಿಯೇ ಇದ್ದರು! ಆದರೆ ಇತರರ ದೃಷ್ಟಿಯಿಂದ ತಪ್ಪಿದ್ದರು, ಮತ್ತು ಪ್ರತ್ಯಕ್ಷ ಆನೆಯನ್ನು ನೋಡಿದವರ ದೃಷ್ಟಿಯಲ್ಲಿ ಕೆಲ ಮಟ್ಟಿಗೆ ಮಾತ್ರ ಸರಿ ಹಾಗೂ ಬಹು ಮಟ್ಟಿಗೆ ತಪ್ಪಾಗಿದ್ದರು. ನಾ ಈ ಬಹುಮುಖಿ ಸಿದ್ಧಾಂತವನ್ನು ನಾನು ನಂಬುತ್ತೇನೆ!

ಸೌಂದರ್ಯ ರಕ್ಷಣೆಯಲ್ಲಿ

ಮೈಸೂರು ಶ್ರೀಗಂಧದ ಸಾಬೂನಿಗಿಂತ

ಮಿಗಿಲಾದ ಸಾಬೂನು ಮತ್ತೊಂದು ಇಲ್ಲ

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು

ಚರ್ಮದ ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ.

ಮೈಸೂರು ಸರಕಾರದ ಸಾಬೂನು ಕಾರ್ಖಾನೆ,

ಬೆಂಗಳೂರು - 12.

NAVAYUGA 5—2—1970
Registered with the Registrar of News Papers for India under No. R. N. 3546/'57

REGD. No. B. Gr 176
LICENCE No. 33
Licensed to Post without Prepayment

ವಿಚಲಿತ ಮನದ ವ್ಯಸನ—
ವಿದ್ಯಾರ್ಥಿ ಕ್ರಾಂತಿ—ಅಶಿಸ್ತು

(ಒಂದನೇ ಪುಟದಿಂದ)

ಸರಿಕಂಡ ರೀತಿಯಲ್ಲಿ ಪ್ರಚೋದನೆಗೆ ಕಾರಣರಾಗುತ್ತಾರೆ. ಅಭಿಪ್ರಾಯ ತಿಳಿಸುತ್ತಾರೆ. ಹೀಗೆ ಗೊಂದಲಮಯ ವಾತಾವರಣದ ಆವಿರ್ಭಾವ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಾಮೂಹ್ಯ ಜೀವನದ ಮೇಲೆ ಅತ್ಯಂತ ಪ್ರಭಾವ ಬೀರುವ ಒಂದು ಘಟಕ ರಾಜಕೀಯ ಧುರೀಣರದು. ಮಹಾಜನ ತುಳಿದ ಹಾದಿ ಸರಿಯಾದ ಹಾದಿ. ಯಾರು ಈ ಮಹಾಜನರ ಜನದ ನಡುವೆ ಮಹಾ ಆಗಿ ಬೆಳೆದವರು—ಜನ ಪ್ರತಿನಿಧಿಗಳು. ಪ್ರಜಾಪ್ರಭುತ್ವದಲ್ಲಿ ಇವರೇ ಸಮಾಜ ಶಿಕ್ಷಕರು.

ಒಂದು ಕಾಲದಲ್ಲಿ ಸ್ವಾತಂತ್ರ್ಯಗಳಿಕೆಯೊಂದೇ ಪರಮ ಗುರಿ ಎಂಬ ಸನ್ನಿವೇಶ ನಿರ್ಮಾಣವಾದಾಗ ಸದ್ವಿವೇಕದೊಂದಿಗೆ ಮಹಾ ಧ್ಯೇಯವಾದಿ ನೇತಾರರ ಕಟು ಮಾರ್ಗದರ್ಶನದಲ್ಲಿ ವಿಕೃತ ಸ್ವರೂಪದ ಆತಂಕಕಾರ ಚಳವಳಿ, ಕ್ರಾಂತಿ—ಅನಿವಾರ್ಯ ಸಾಧನೆಯಾಗಿದ್ದರೂ ಪೂರ್ಣ ಸ್ವರೂಪದ ಸ್ವತಂತ್ರ ರಾಷ್ಟ್ರವೊಂದಕ್ಕೆ ಸಾಮಾಜಿಕ ನೈತಿಕತೆ, ಸಾಮಾಜಿಕ ನಿಷ್ಠೆ, ಸಾಮಾಜಿಕ ಗೌರವ ಆದರ್ಶಗಳಿಂದೊಡಗೂಡಿದ ಒಂದು ಸೂಕ್ಷ್ಮ ಮಿತಿಯ ಹಿಡಿತ ಸ್ವಾತಂತ್ರ್ಯಕ್ಕಿರಬೇಕು. ಹಿತಮಿತವಾದ ಸುಸಂಬದ್ಧತೆಯೊಂದಿಗೆ ಕಟ್ಟುನಿಟ್ಟಿನ ಭಯವು ಪಾಲನೆಯ ಜಾಗೃತಿ ಜಾಗೃತವಾಗಿರಬೇಕು. ಹಕ್ಕಿನ ಪ್ರಜ್ಞೆಗಿಂತ ಹೆಚ್ಚು ಹೊಣೆಯ ಪ್ರಜ್ಞೆ ಆಚರಣೆಯಲ್ಲಿ ನೆಲೆನಿಲ್ಲಬೇಕು. ಇಲ್ಲವಾದರೆ ಇಂತಹ ಬೃಹತ್ ರಾಷ್ಟ್ರದ ಸ್ವಾತಂತ್ರ್ಯ ವಿಕೃತರೂಪವನ್ನು ಹೊಂದುವುದು ಕಷ್ಟವಲ್ಲ. ಅನಿರ್ಬಂಧ ಅರಾಜಕತೆ ಹೀಗೇ ಮುಂದುವರಿಯುವಾಗ, ಮುಂದೆ ವಿದ್ಯಾಸಂಸ್ಥೆಗಳೇ ರಾಜಕೀಯ ಪ್ರತಿಸ್ಪರ್ಧೆಯ ಕೇಂದ್ರ ಕಣವಾಗುವುದೂ ಕಷ್ಟವಲ್ಲ. ಹಿಂದೆಯೇ ಹೇಳಿದಂತೆ ವಿಚಲಿತ ಮನಸ್ಕರಾದ ವಿದ್ಯಾರ್ಥಿಗಳು ಬಹು ಬೇಗನೇ ಇಂತಹ ಸುಳಿಗಳಿಗೆ ಸಿಲುಕುತ್ತಾರೆ. ಸೆಣಸಾಟ, ಸ್ಪರ್ಧೆಯೇ ಮೂಲಧ್ಯೇಯವಾಗಿ ಮುಂದುವರಿದಾಗ, ಧ್ಯೇಯ, ನೀತಿ, ನಿಯಮ, ರಾಷ್ಟ್ರೀಯ ಪ್ರಜ್ಞೆ, ಪಾವಿತ್ರ್ಯ ಕಲ್ಪನೆಗಳೆಲ್ಲಾ ಕ್ಷಣಾರ್ಧದಲ್ಲಿ ಮಣ್ಣುಪಾಲಾಗುತ್ತವೆ.

ಸಾಧಾರಣ, ಪ್ರಗತಿ ಪ್ರಭಾವದ ವಿಪರ್ಯಾಸ ಪರಿಸ್ಥಿತಿಯಿಂದ, ಅವಸರದ ವಿದ್ಯಾಪ್ರಸಾರದ ಧೋರಣೆಯಿಂದ ಅಲ್ಲದೇ ಜ್ಞಾನಾರ್ಜನೆಯ ಸಾಧನೆಯ ಸತ್ವ ಸಡಿಲದಂತೆ ಅಧ್ಯಾಪನ ಕಾರ್ಯ ಸುಲಭವೆಂಬ ಕಾರಣಗಳಿಂದ ಸಹಜವಾದ ವೃತ್ತಿ ಗೌರವವಿಲ್ಲದ ಜನರೂ, ಪ್ರತಿಭೆ, ಪಾಂಡಿತ್ಯ ಹೀನರೂ ಬರೀ ಜೀವನ ನಿರ್ವಹಣೆಯ ನಿಮಿತ್ತ ದೃಷ್ಟಿಯಿಂದ ಈ ಸಂಸ್ಥೆಗಳಿಗೆ ಕಾಲಿಡುವಂತಾಯಿತು. ತತ್ಪರಿಣಾಮವಾಗಿ ಹೊರ ಸಮಾಜದ ಲಘುಭಾವನೆ, ಸುಲಭ ಸುಖಾಪೇಕ್ಷೆ, ಸ್ವಚ್ಛಂದ ಪ್ರವೃತ್ತಿ: ಧ್ಯೇಯದ ಕಡೆಗಿನ ನಿರಾಸಕ್ತಿ, ಅಂತಃಸತ್ವ ವರ್ಧನೆಯಲ್ಲಿ ಔದಾಸೀನ್ಯ ಶಿಕ್ಷಕ ಸಮಾಜದಲ್ಲಿ ಸಾಮಾನ್ಯವಾಯಿತು. ಇದರಿಂದಾಗಿ ಮೊದಲೇ ಸಾಮಾಜಿಕ ವಿಷವರ್ತುಲದ ದುಷ್ಪ್ರಭಾವದಿಂದ ಪ್ರಭಾವಿತರಾದ ವಿದ್ಯಾರ್ಥಿಗಳನ್ನು ಶಾಲಾ ಜೀವನದ ಕ್ಷಣ ಕ್ಷಣಗಳನ್ನೂ ಜ್ಞಾನಾರ್ಜನೆಯ ಪವಿತ್ರ ಕಾರ್ಯದಲ್ಲಿ ಮಗ್ನರಾಗಿರುವಂತೆಯೂ, ಸದಾ ಕಾಲ ಶಿಕ್ಷಣದ ಯಥಾರ್ಥ ಮೌಲ್ಯದ ಬಗ್ಗೆ ಆಸಕ್ತಿ ಹೊಂದಿ ಸಾಧನೆಯಲ್ಲಿ ತೊಡಗಿರುವಂತೆಯೂ, ಜೀವನ ಮೌಲ್ಯಗಳನ್ನು ಗುರುತಿಸುವಂತೆ ಮಾಡುವಲ್ಲಿಯೂ, ಶಿಕ್ಷಕರೂ ಅಸಮರ್ಥರಾದರು. ಸದಾ ಜೀವನ ಸೌಕರ್ಯಕ್ಕಾಗಿ ತುಡಿಯುತ್ತಾ, ಯಾಂತ್ರಿಕ ಜೀವನವನ್ನು ನಡೆಸಿ, ವೈಯಕ್ತಿಕ ಸಾಮಾಜಿಕ ಭಾವನೆಗಳ ಐಕ್ಯ ಸಾಮರಸ್ಯ ಕಾಣದೇ ಶಕ್ತಿಯ ದುರುಪಯೋಗ ಸಹಜವಾಯಿತು. ಅಧ್ಯಾಪನ ಪ್ರವೃತ್ತಿಯಾಗಿ ಗುರು ಪೀಠದಲ್ಲಿ ಮೆರೆಯುವ ಬದಲು ಬರೀ ವೃತ್ತಿಯಾಗಿ ಉದರೋನ್ಮುಖವಾಯಿತು.

ಇನ್ನು ರಕ್ಷಕರ ಪಾಲೂ ಅರಿವಿಲ್ಲದಂತೆಯೇ ಈ ಪ್ರವೃತ್ತಿಗೆ ನೆರವಾಯಿತು. ಮನಃಶಾಸ್ತ್ರವನ್ನನುಸರಿಸಿ ಮಕ್ಕಳನ್ನು ಬೆಳೆಸುವಲ್ಲಿ, ಎಂತಹ ಪ್ರೇರಕಗಳು ಬೇಕು; ಹಿನ್ನೆಲೆ ಮುನ್ನೆಲೆಗಳೇನು? ಮಕ್ಕಳ ಪೋಷಣೆಯಲ್ಲಿ ಎಂತಹ ಸೂಕ್ಷ್ಮ ನಾಜೂಕಾದ ಸಂವೇದನೆಗಳನ್ನು ನಿರೀಕ್ಷಿಸುತ್ತಾ ಮುನ್ನಡೆಸಬೇಕು ಎಂಬ ಯಾವ ಕಲ್ಪನೆಗಳನ್ನೂ ಹೊಂದದೇ—ಅಪೂರ್ಣ ಅಲ್ಪ ಜ್ಞಾನದಿಂದ ಬರೀ ಮನಃಶಾಸ್ತ್ರ ಸಿದ್ಧಾಂತವೆಂಬಂತೆ ಸ್ವಾತಂತ್ರ್ಯ—ಪ್ರೀತಿ ಎಂಬುದನ್ನೇ, ತಾರತಮ್ಯವರಿಯದೇ ಅನುಸರಿಸುತ್ತಿರುವುದರಿಂದ– ಜೀವನದಲ್ಲಿ ಹೊಣೆಗಾರಿಕೆಯ ಪ್ರಜ್ಞೆ ಬೆಳೆಸುವಲ್ಲಿ ಅಸಮರ್ಥತೆ ಎದ್ದು ಕಾಣುತ್ತದೆ. ಬಹುಮಟ್ಟಿಗೆ ಹೊತ್ತು ಹೊತ್ತಿಗೆ ಬಟ್ಟಲಿದಿರು ಕುಳಿತ ಮಕ್ಕಳಿಗೆ ಅನ್ನವೋ ಗಂಜಿಯೋ ಹಾಕುವುದಷ್ಟೆ ರಕ್ಷಕರಾಗಿ ತಮ್ಮ ಹಿರಿಯ ಹೊಣೆ ಎಂಬ ಭಾವ ಸಾರ್ವತ್ರಿಕವಾಗಿ ಬಲಿಯುತ್ತಿರುವುದರಿಂದ, ರಕ್ಷಕರಿಗೆ ತಮ್ಮ ಮಕ್ಕಳ ಮೇಲೆ ನಿಶ್ಚಿತವಾದ ನೈತಿಕ ಹಿಡಿತವಿರಿಸುವುದು ಕಷ್ಟಸಾಧ್ಯವಾಗಿದೆ. ಮಗುವಿನಲ್ಲಿ—ವಿದ್ಯಾರ್ಥಿಯಲ್ಲಿ ಎಂತಹ ಸಂವೇದನೆಗಳು ಬಲಿಯುತ್ತಿವೆ. ಅದಕ್ಕೆ ತಮ್ಮ ಪರಿಹಾರವೇನು ಎಂಬ ಬಗೆಗೆ ರಕ್ಷಕರು ಆಳವಾಗಿ ಚಿಂತಿಸುವುದಿಲ್ಲ. ತಮ್ಮ ಮಕ್ಕಳು ಹೊಣೆಗಾರಿಕೆಯಿಂದ ದೂರವಿರುವುದನ್ನು ಮನಸ್ಸಿಲ್ಲವಾದರೂ ಸಹಿಸುವುದು, ತಾವು ಮಕ್ಕಳ ಮೇಲೆ ಇರಿಸಬೇಕಾಗಿದ್ದ ಪ್ರೀತಿಯ ಸಂಕೇತವೆಂಬ ಕಲ್ಪನೆ ಬಹುಮಟ್ಟಿಗೆ ಬೆಳೆದುದರಿಂದ, ಅವ್ಯಕ್ತವಾಗಿ ವಿದ್ಯಾರ್ಥಿಗಳು ತಮ್ಮದಲ್ಲದ ಕ್ಷೇತ್ರದಲ್ಲಿ ಅನುಚಿತವಾಗಿ ವರ್ತಿಸುವುದಕ್ಕೆ ಪೋಷಕರು ಪೋಷಣೆ ಒದಗಿಸಿದಂತಾಗಿದೆ. ಎಂದಮೇಲೆ ಸ್ವಲಕ್ಷಣವೂ ಉಜ್ವಲ ವಿಕಾಸದ ಹಾದಿಯಲ್ಲಿ ಮುನ್ನಡೆಸಬೇಕಾಗಿದ್ದ ವಿದ್ಯಾರ್ಥಿ ಜೀವನವು, ಸರಕಾರ– ಸಮಾಜ– ಸಹವಾಸ–ಶಿಕ್ಷಣ ಎಲ್ಲಾ ಕ್ಷೇತ್ರಗಳಲ್ಲಿ, ಪರಸ್ಪರ ವಿಚ್ಛಿನ್ನತೆಗೆ ಪೂರಕವಾದ ವಾತಾವರಣದಿಂದ ಜೀವನ ಮೌಲ್ಯಗಳೇ ಇಲ್ಲದ ಮರಳಿನ ಮೇಲೆ ಮನೆ ಕಟ್ಟುವಂತಾಗಿದೆ.

ಸರಕಾರ, ಸಮಾಜ, ಅಧ್ಯಾಪಕ, ರಕ್ಷಕ–ಯಾರಾದ ಮೇಲೆ ಯಾರು? ಯಾರು ಮೊದಲು? ಎಲ್ಲಿಂದ ಮೊದಲಾಗಿ ಈ ಪರಿಸ್ಥಿತಿಯ ಸುಧಾರಣೆ ಆಗಬೇಕು? ಎಂದ ಸಿದ್ಧಾಂತ ರೂಪದಲ್ಲಿ ತೋರಿಸುವುದು ಸಾಧ್ಯವಲ್ಲ. ಈ ಎಲ್ಲಾ ಘಟಕಗಳು ಮಿತ್ರವಾಗಿ ತಮ್ಮ ಒಳ ಬಗೆಯನ್ನು ತಿದ್ದಿ, ತೀಡಿ, "ನಾವೊಂದು ಸಾಮ್ರಾಜ್ಯವನ್ನು ಕಟ್ಟುತ್ತಿದ್ದೇವೆ" ಎಂಬ ಪವಿತ್ರ—ಮಹಾ ಕಲ್ಪನೆಯಿಂದ ಸುಸ್ಥಿತಿ ಸ್ಥಾಪನೆಗೆ ಪ್ರಯತ್ನಿಸುವುದು ಅಗತ್ಯ. ಅಂತೂ 'ಸಮಾಜ ರಂಗ' ಶುದ್ಧವಾಗಬೇಕು. ಕರ್ತವ್ಯ ಪ್ರಜ್ಞೆ, ನೈತಿಕ ನೆಲೆಯ ಮಿತಿಯಲ್ಲಿ ಸ್ವಾತಂತ್ರ್ಯಕ್ಕೊಂದು ತಡೆ ಬೇಕು, ಎಂದರೆ ಸ್ವಚ್ಛಂದತೆಯ ನಗ್ನ ದರ್ಶನವಾಗದಂತೆ ಹತೋಟಿ ಅಗತ್ಯ. ಸರಕಾರದ ಯಾವುದೇ ರಂಗದಲ್ಲಿ—ಮುಖ್ಯವಾಗಿ ವಿದ್ಯಾಕ್ಷೇತ್ರದಲ್ಲಿ ಪದೇ ಪದೇ ಪ್ರಯೋಗಗಳನ್ನು ನಡೆಸುವ ಪ್ರವೃತ್ತಿ ವಾಂಛನೀಯವಲ್ಲ. ಆತುರದ ವಿದ್ಯಾಯೋಜನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅಗತ್ಯ. ವ್ಯಾಸಂಗ ಮುಗಿಸಿ ಹೊರಬಂದಾಗ ನಿಜವಾದ ಸಾಧನೆ, ಸತ್ವವನ್ನು ಗುರುತಿಸಿ, ಪ್ರತಿಭೆಯನ್ನು ಗೌರವಿಸುವ ಹವ್ಯಾಸ ಬಲಿಯಬೇಕು. ಸತ್ಯ ಪೂರ್ಣ ಶಿಕ್ಷಣವನ್ನು ಹೊಂದುವುದು ಜೀವನದ ಏಕೈಕ ಗೆಲವಿನ ಗುಟ್ಟು ಎಂದು ಮನವರಿಕೆಯಾಗುವ ಸನ್ನಿವೇಶ ಸಾಮಾಜಿಕವಾಗಿ ವರ್ಧಿಸಬೇಕು.

ಸಮಾಜದ ನೇತೃಗಳೆಂತಿರುವ ಧುರೀಣರು ತಮ್ಮ ಕ್ಷಣಕ್ಷಣದ ಕೃತಿಯನ್ನು ವಿಮರ್ಶಿಸಿ, ಮಾತಿನ ಶಬ್ದ ಶಬ್ದವನ್ನೂ ಶುದ್ಧವಾಗಿಟ್ಟುಕೊಂಡು ಸಾಮಾಜಿಕ ಶಕ್ತಿ ಸಂಪನ್ನತೆಯನ್ನು ಗೌರವಿಸಬೇಕು. ವಿದ್ಯಾಕ್ಷೇತ್ರವನ್ನು ಪವಿತ್ರ ಭಾವನೆಯಿಂದ ಕಾಣಬೇಕು.

ವಿದ್ಯಾರ್ಥಿಗಳಿಗೆ ವಿದ್ಯೆಯ ಸಾಧನೆಯಲ್ಲಿ ಮಾತ್ರವೇ ಪೂರ್ಣ ಸ್ವಾತಂತ್ರ್ಯ ನೀಡಬೇಕು. ಹೊಣೆಯ ಪ್ರಜ್ಞೆಯಷ್ಟೆ ತಮ್ಮ ಹಿರಿಯ ಗುರಿ ಎಂಬುದನ್ನು ಅಲ್ಲಗಳೆಯಬಾರದು. ಹೊಣೆಯ ಪರಿಣಾಮವಾಗಿ ಹಕ್ಕು ಬರಬೇಕೇ ಹೊರತು ಇವೆರಡೂ ಜತೆಜತೆಗೆ ಮುನ್ನಡೆವ ಸಾಥಿಗಳಲ್ಲ.

ಅಧ್ಯಾಪಕರು ಹಿರಿಯ ಮನೋಭೂಮಿಕೆಯ ಮೇಲೆ ತಮ್ಮ ಪವಿತ್ರ ಬಾಳನ್ನು ರೂಪಿಸಿ, ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ತೃಷೆಯನ್ನು ಮೂಡಿಸಲು ಕಟಿಬದ್ಧರಾಗಬೇಕು.

ಜೀವನದ ಮೌಲಿಕತೆಯಲ್ಲಿ ವ್ಯಾಪಿಸಿದ ವಿಷ ವರ್ತುಲದ ಕೊನೆಯಾಗಬೇಕು.

ಒಟ್ಟಿನಿಂದ ಹೇಳುವುದಿದ್ದರೆ — ವಿದ್ಯಾರ್ಜನೆಯೊಂದು ಮಹಾ ಬಾಳಿನ ಸಾಧನೆ ಎಂಬ ಕಲ್ಪನೆಯಿಂದ, ಈ ಅವಧಿಯಲ್ಲಿ ವಿದ್ಯಾರ್ಥಿಗಳು ಸಂಪೂರ್ಣ ಅದರಲ್ಲೇ ತಲ್ಲೀನರಾಗಿರಲು ಸಾಧ್ಯವಾಗುವಂತೆ, ಅವರ ಮನಸ್ಸಿನ ಆಮೋದ, ಪ್ರಮೋದವನ್ನೂ ಸಹ ರಂಜನೀಯವಾಗಿ ಪ್ರತೀ ಕ್ಷಣದಲ್ಲೂ ಧ್ಯೇಯದ ಕಡೆಗೆ ಉದ್ಯೋಗಶೀಲರಾಗಿರುವಂತೆ ಶಿಕ್ಷಣ ಪದ್ಧತಿ ರೂಪಿಸಲ್ಪಟ್ಟು, ಈ ಬಗ್ಗೆ ಅಧ್ಯಾಪಕರು ಉಲ್ಲಸಿತರಾಗಿ ಕಾರ್ಯೋನ್ಮುಖರಾಗುವಂತಹ ಸನ್ನಿವೇಶ ನಿರ್ಮಿಸಲ್ಪಡಬೇಕು.

(ಪ್ರಜಾರಾಜ್ಯ ಸಂಚಿಕೆಗೆ ಬಂದುದು)

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337 2 29887 Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 12—2—1970 ಸಂಪುಟ 49 ಸಂಚಿಕೆ 23

ಬದುಕಿನ ಶ್ರೀಮಂತಿಕೆಯನ್ನು ಹೆಚ್ಚಿಸುವ ಭಾರತದ ಕುಶಲ ಕೈಗಾರಿಕೆ

ಲೇಖಕರು: ಪೂಪುಲಜಯಕರ

(ಅಧ್ಯಕ್ಷರು, ಭಾರತದ ಕುಶಲ ಕೈಗಾರಿಕೆ ಮತ್ತು ಕೈಮಗ್ಗ ರಫ್ತು ವ್ಯಾಪಾರ ಕಾರ್ಪೋರೇಷನ್)

● ●

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕುಶಲ ಕೈಗಾರಿಕೆ ಬೆಳೆದು ಬಂದಿದೆ. ಈಗಲೂ ಅದು ಗ್ರಾಮೀಣ ಪ್ರದೇಶಗಳಲ್ಲಿ ಅಲ್ಪಸ್ವಲ್ಪವಾಗಿ ಉಳಿದಿದೆ. ಕುಶಲ ಕೈಗಾರಿಕೆ ಭಾರತದ ಗ್ರಾಮೀಣ ಪ್ರದೇಶಗಳ ವೈಶಿಷ್ಟ್ಯಗಳಲ್ಲಿ ಒಂದು. ಗ್ರಾಮೀಣ ಪ್ರದೇಶಗಳಲ್ಲಿ ಆನಂದಕರವಾದ ವಾತಾವರಣವನ್ನು ಕಲ್ಪಿಸಲು ಇದು ಸಹಾಯಕ.

ಕುಶಲ ಕೈಗಾರಿಕೆ ವಸ್ತುಗಳ ಆಕಾರ, ಗುಣ ಮತ್ತು ಅವುಗಳ ರೂಪ, ವಿನ್ಯಾಸಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡುವುದು ವಾಡಿಕೆ. ನಿಜರೂಪದ ಆನೆಗಳು ಕುದುರೆಗಳಂತಿರುವ ಕೃತಿಗಳನ್ನು ಬಹಳವಾಗಿ ತಯಾರಿಸುತ್ತಿದ್ದರು. ಈ ಕೃತಿಗಳು ಕುಶಲ ಕರ್ಮಿಗಳ ಕುಶಲ ನೈಪುಣ್ಯತೆಗೆ ಉದಾಹರಣೆಗಳು. ದೇವ — ದೇವತೆಗಳಲ್ಲಿರುವ ನಂಬಿಕೆಯನ್ನು, ಭಕ್ತಿಯನ್ನು ಎತ್ತಿತೋರಿಸಲು ಬಣ್ಣ ಬಣ್ಣಗಳಿಂದ ಚಿತ್ರಗಳನ್ನು ಬರೆಯುವ ರೂಢಿ ಇಂದಿಗೂ ಉಳಿದು ಬರುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಹೊಸ ವಾತಾವರಣ ಸೃಷ್ಟಿಯಾಗುತ್ತಿರುವಂತೆ ಈ ವೈಶಿಷ್ಟ್ಯವೂ ಬದಲಾವಣೆ ಹೊಂದುತ್ತಿದೆ.

ಗುಡ್ಡಗಾಡಿನ ಜನರಿಗಾಗಿ ಕುಶಲ ವಸ್ತುಗಳನ್ನು ತಯಾರಿಸಲಾಗುತ್ತಿತ್ತು. ಮರ, ಲೋಹ ಮತ್ತು ಮಣ್ಣಿನ ಕೆಲಸ ಮಾಡುತ್ತಿದ್ದವರೇ ಬಹಳ ಮಂದಿ. ಅನೇಕ ವೇಳೆ ಮರಕೆಲಸಗಾರರೇ ಆಗಾಗ್ಗೆ ಮರಗಳಿಂದ ಕಂಬಗಳನ್ನು ನಿರ್ಮಿಸಿ ಅದಕ್ಕೆ ಹಿತ್ತಾಳೆ ಲೋಹದಿಂದ ಮಾಡಿದ ಹಲಗೆಯನ್ನು ಸುತ್ತಿ, ಅದರ ಮೇಲೆ ಒಬ್ಬ ವ್ಯಕ್ತಿಯ ಅಥವಾ ಕುದುರೆಯ ವಿಗ್ರಹವನ್ನು ಕಿಲ್ಲಿಸಿ, ಅವುಗಳನ್ನು ಊರಿನ ಪ್ರವೇಶದ್ವಾರದಲ್ಲಿಯಾಗಲೀ ಅಥವಾ ದೊಡ್ಡ ಮರದ ಕೆಳಗಡೆಯಾಗಲಿ ನಿಲ್ಲಿಸುತ್ತಿದ್ದರು. ಈ ಕಂಬಗಳು ದೇವರಲ್ಲಿ, ಪ್ರಕೃತಿಯಲ್ಲಿ ಜನರಿಗಿದ್ದ ನಂಬಿಕೆ—ಭಕ್ತಿ ಇವುಗಳ ಸಂಕೇತವಾಗಿದ್ದವು.

ತಮ್ಮ ಅರಮನೆಯ ಸೌಂದರ್ಯವನ್ನು ಹೆಚ್ಚಿಸಲು ತಮಗೆ ನಂಬಿಕೆ ಇದ್ದ ದೇವರುಗಳ ಪ್ರಭಾವವನ್ನು ತಮ್ಮ ಪ್ರಜೆಗಳಿಗೆ ಎತ್ತಿ ತೋರಿಸುವ ದೃಷ್ಟಿಯಿಂದ ಅನೇಕ ದೊರೆಗಳು ಕುಶಲ ಕೈಗಾರಿಕೆಯನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸಿದರು. ಕೆಲವು ಕಾಲದ ನಂತರ ಪಟ್ಟಣಗಳ ವಾತಾವರಣದಲ್ಲಿ ಕುಶಲ ಕೈಗಾರಿಕೆ ಬೆಳೆಯಲಾರಂಭಿಸಿತು. ಹೆಚ್ಚಿನ ಜೀವಂತ ವಿಗ್ರಹಗಳನ್ನು ಕೆತ್ತಲಾಯಿತು. ಕುಶಲ ಕೈಗಾರಿಕೆ ವಿದ್ಯೆ ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ ಈ ರೀತಿಯಾಗಿ ಮುಂದುವರೆಯಿತು. ಕುಶಲ ಕೈಗಾರಿಕೆ ವಿದ್ಯೆಯ ಸೂತ್ರಗಳಿಗೆ ಸಂಸ್ಕೃತ ಭಾಷೆ ಮಾಧ್ಯಮವಾಯಿತು. ನಕ್ಷೆಗಾರ ಹಾಗೂ ಕುಶಲಕರ್ಮಿ ಕೆಲಸಗಳನ್ನು ಸಾಮೂಹ್ಯವಾಗಿ ಒಬ್ಬನೇ ನಿರ್ವಹಿಸುತ್ತಿದ್ದನು.

ಮೊಗಲರ ಕಾಲದಲ್ಲಿ ಶಿಲ್ಪ ಕೌಶಲ್ಯವಿದ್ಯೆಗೆ ಹೆಚ್ಚಿನ ಉತ್ತೇಜನ ದೊರೆಯಿತು. ಆಭರಣಗಳನ್ನು ತಯಾರಿಸುವುದು, ಅಮೃತಶಿಲೆ, ಜೇಡಿಶಿಲೆ, ದಂತ, ಬೆಳ್ಳಿಲೋಹ— ಇವೇ ಮೊದಲಾದವುಗಳಿಂದ ಶಿಲ್ಪಗಳನ್ನು ಸೃಷ್ಟಿಸುವ ಕಲೆ ಬಹಳ ಪ್ರವರ್ಧಮಾನಕ್ಕೆ ಬಂದಿತು.

ಸಿಂಧೂ ನದಿ ಪ್ರದೇಶ ಮತ್ತು ಸುಮೇರ ಹಾಗೂ ಉತ್ತರ ಪ್ರದೇಶಗಳ ನಡುವೆ ಬಹಳ ಹಿಂದಿನಿಂದಲೂ ವಾಣಿಜ್ಯ ಸಂಪರ್ಕವಿತ್ತು. ಸುಮಾರು 3000 ವರ್ಷಗಳ ಹಿಂದೆ, ದಂತದ ವಸ್ತುಗಳ, ಮಸ್ಲಿಂ ಬಟ್ಟೆ, ಹತ್ತಿ ಬಟ್ಟೆಗಳನ್ನು ಬ್ಯಾಬಿಲೋನ್‌ಗೆ ಕಳುಹಿಸುತ್ತಿದ್ದರು. ಭಾರತದಲ್ಲಿ ತಯಾರಾದ ಕುಶಲ ವಸ್ತುಗಳನೇಕವನ್ನು ಚೀಣಾ, ಪೂರ್ವ ಮಧ್ಯ ಏಷ್ಯಾಗಳಿಗೆ ಕಳುಹಿಸಲಾಗುತ್ತಿತ್ತು.

ಕ್ರಿಸ್ತಶಕದ ಮೊದಲ ಸಾವಿರ ವರ್ಷಗಳಲ್ಲಿ ಭಾರತದ ಕುಶಲ ಕೈಗಾರಿಕೆ ವಸ್ತುಗಳನ್ನು ಬಳಕೆದಾರರ ಸೌಂದರ್ಯೋಪಾಸನೆ ದೃಷ್ಟಿಯಿಂದ ಕಳುಹಿಸಲಿಲ್ಲ. ಅದರೆ ಕುಶಲಕರ್ಮಿಗಳ ಪ್ರತಿಭೆಯನ್ನು ಎತ್ತಿ ತೋರಿಸುವುದು ಅದರ ಉದ್ದೇಶವಾಗಿತ್ತು. ಕುಶಾನರ ಕಾಲದಲ್ಲಿ ಕಳುಹಿಸಿದ ದಂತ ಕೆತ್ತನೆಗಳು ಕೆಲವು ಅಫ್ಘಾನಿಸ್ತಾನದಲ್ಲಿ ದೊರೆತಿವೆ.

ರಫ್ತು ವ್ಯಾಪಾರದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ದೇಶದ ಅನೇಕ ಕಡೆಗಳಲ್ಲಿ ಕುಶಲ ಕೈಗಾರಿಕೆಯ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಪಾಶ್ಚಾತ್ಯ ಸಂಸ್ಕೃತಿಗೆ ಒಪ್ಪುವ ಕೃತಿಗಳನ್ನು ರಚಿಸಲಾಯಿತು. ಕೈಗಾರಿಕಾ ಕ್ರಾಂತಿಯ ಸ್ಫೂರ್ತಿ ಭಾರತದಲ್ಲೂ ಹರಡಿತು. ನವೀನ ಕುಶಲ ಕೈಗಾರಿಕಾ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಶಿಲ್ಪಿಗಳು ತಯಾರಿಸಿದರು.

ಅಭಿವೃದ್ಧಿ ಕಾರ್ಯಕ್ರಮಗಳು

ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕುಶಲಕೈಗಾರಿಕೆಯ ಪಾತ್ರ ಮತ್ತು ಅವುಗಳ ಮಹತ್ವದ ಬಗ್ಗೆ 1947 ರಿಂದೀಚೆಗೆ ಹೆಚ್ಚಿನ ಗಮನವನ್ನು ಕೊಡಲಾಗಿದೆ. ಈ ಕೈಗಾರಿಕೆಗಳ ಸಮಸ್ಯೆಗಳ ನಿರ್ಮೂಲನಕ್ಕಾಗಿ ಸತತಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿವೆ. ಕುಶಲ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ನಿರ್ಮೂಲನೆ ಹಾಗೂ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸೂಕ್ತವಾದ ಸಲಹೆಗಳನ್ನು ಮಾಡಲು ಅಖಿಲ ಭಾರತ ಕೈಮಗ್ಗದ ಮಂಡಳಿ, ಕುಶಲ ಕೈಗಾರಿಕಾ ಮಂಡಳಿ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗಳನ್ನು ರಚಿಸಲಾಗಿದೆ. ಸಹಕಾರ ಮೂಲಕ ಕುಶಲ ವಸ್ತುಗಳ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಹಾಗೂ ಅವುಗಳಿಗೆ ಮಾರುಕಟ್ಟೆಯನ್ನು ಗಳಿಸಲು ಈ ಸಂಸ್ಥೆಗಳು ಸಹಾಯ ಮಾಡುತ್ತವೆ. ಕುಶಲ ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಅವುಗಳಿಗೆ ಹೊಸ ಸಾಮಗ್ರಿಗಳನ್ನು ಮತ್ತು ಉಪಕರಣಗಳನ್ನು ಒದಗಿಸುವ ಸಲುವಾಗಿ ಸಂಶೋಧನಾ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ.

ಶಿಲ್ಪ ಕುಶಲಗಾರರ ಆರ್ಥಿಕಮಟ್ಟ ಹೆಚ್ಚಿದೆ. ಕುಶಲ ಕೈಗಾರಿಕಾ ವಸ್ತುಗಳಿಗಿರುವ ಬೇಡಿಕೆ ಪ್ರಮಾಣವೂ ಬೆಳೆದಿದೆ. ನೇಯ್ಗೆ, ಕೈಮುದ್ರಣ, ಕಸೂತಿ, ಮರಕೆಲಸ, ಲೋಹಕೆಲಸ, ಆಭರಣಗಳನ್ನು ತಯಾರಿಸುವುದು ಇವೇ ಮುಂತಾದ ಕೈ ಕೈಗಾರಿಕೆಗಳು ಭಾರತದಲ್ಲಿ ಈಗಲೂ ಕಂಡು ಬರುತ್ತಿವೆ. ದಂತದಿಂದ ವಿಗ್ರಹಗಳನ್ನು ಕೊರೆಯುವುದು, ಕಾಗದಗಳಿಂದ ಸುಂದರವಾದ ಬೊಂಬೆಗಳನ್ನು ಮಾಡುವುದು ದೇಶಾದ್ಯಂತ ನೋಡಬಹುದು.

ನಗರಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಕುಶಲ ಕೈಗಾರಿಕೆಗಳು ಕೇಂದ್ರೀಕೃತವಾಗಿವೆ. ರಸ್ತೆ ಮತ್ತು ಸಂಪರ್ಕ ಸೇವೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವಂತೆ ಕುಶಲ ಕೈಗಾರಿಕೆಗಳ ಪ್ರಮಾಣ ಕಡಿಮೆಯಾಗುತ್ತಿದೆ. ಸುಮಾರು 400ರಿಂದ 500 ದಶಲಕ್ಷ ರೂ.ಗಳ ಬೆಲೆಬಾಳುವಷ್ಟು ವಸ್ತುಗಳನ್ನು ಈಗ ರಫ್ತು ಮಾಡಲಾಗುತ್ತಿದೆ. ಕೈಯಿಂದ ತಯಾರಿಸಿದ ರೇಷ್ಮೆ ಹತ್ತಿಬಟ್ಟೆ, ಜಮಖಾನೆ ಇವೇ ಮುಂತಾದ ವಸ್ತುಗಳನ್ನು ವಿದೇಶಗಳಿಗೆ ಕಳುಹಿಸಲಾಗುತ್ತಿದೆ. ಈಗ ಭಾರತದಲ್ಲಿ ಸುಮಾರು ದಶಲಕ್ಷಗಳಿಗೂ ಮಿಗಿಲಾಗಿ ಕೈಮಗ್ಗಗಳಿವೆ. ಸುಮಾರು 2000 ದಶಲಕ್ಷ ಗಜಗಳಷ್ಟು ಬಟ್ಟೆಯನ್ನು ಇವುಗಳಿಂದ ತಯಾರಿಸಲ್ಪಡುತ್ತಿದೆ. ಸ್ವಂತ ಬಳಕೆಗಾಗಿಯೂ ಮತ್ತು ಮಾರಾಟದ ದೃಷ್ಟಿಯಿಂದಲೂ ಕಸೂತಿ ಕೆಲಸವನ್ನು ಕೈಗೊಳ್ಳುತ್ತಾರೆ.

ಪ್ರಸ್ತುತ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಮರಕೆಲಸ ಬಹಳ ಉನ್ನತ ಸ್ಥಿತಿಯಲ್ಲಿದ್ದಿತೆಂದು ಹೇಳಲಾಗಿದೆ. ಗುಜರಾತ ಮತ್ತು ಕೇರಳ ರಾಜ್ಯಗಳಲ್ಲಿ ಮರಗಳಿಂದ ಕಟ್ಟಿರುವ ದೇವಾಲಯಗಳು, ವಸತಿ ಗೃಹಗಳು ಕೆಲವು ಅಲ್ಲಲ್ಲಿ ಕಂಡು ಬಂದು ಅಂದಿನ ಕುಶಲಕರ್ಮಿಗಳ ನೈಪುಣ್ಯತೆಯನ್ನು ತೋರಿಸುತ್ತವೆ.

ಕಂಚು, ಹಿತ್ತಾಳೆ, ತಾಮ್ರ, ಬೆಳ್ಳಿ——ಇವೇ ಮುಂತಾದ ಲೋಹಗಳ ಬಳಕೆ ದೇಶದ ಎಲ್ಲ ಕಡೆಗಳಲ್ಲೂ ಇವೆ. ಹಿತ್ತಾಳೆ ವಸ್ತುಗಳನ್ನು ಹೊರದೇಶಗಳಿಗೂ ರಫ್ತು ಮಾಡಲಾಗುತ್ತಿದೆ. ಕುಂಬಾರ ಕೆಲಸ, ಆಭರಣಗಳನ್ನು ತಯಾರಿಸುವುದು, ಮರಗೆಲಸ, ಮುಂತಾದವುಗಳು ಅತಿಮುಖ್ಯ ಕುಶಲ ಕೈಗಾರಿಕೆಗಳಾಗಿವೆ.

ನವಭಾರತದ ನಿರ್ಮಾಪಕಿ

ಡಾ|| ಅನಿಬೆಸೆಂಟ

ಲೇ: ಸಿ. ಆರ್. ಪಿ. ರಾಮನ್

ಡಾ॥ ಅನಿಬೆಸೆಂಟರಿಗೂ ಭಾರತಕ್ಕೂ ಅನ್ಯೋನ್ಯ ಸಂಬಂಧ. ಅವರಿಂದ ಭಾರತದ ಸ್ವಾತಂತ್ರ್ಯ ಹೋರಾಟ ನವಸ್ಫೂರ್ತಿ ಪಡೆಯಿತು. ವಿದೇಶೀಯರಾದರೂ ಭಾರತದ ಏಳಿಗೆಗಾಗಿಯೇ ತ್ರಿಕರಣಪೂರ್ವಕವಾಗಿ ಶ್ರಮಿಸಿದ ಅವರು ಸದಾ ಭಾರತದ ಹಿತಾಕಾಂಕ್ಷಿಯೂ ಆಗಿದ್ದರು.

ಭಾರತದ ಇತಿಹಾಸದಲ್ಲಿ ಡಾ॥ ಅನಿಬೆಸೆಂಟರಿಗೆ ವಿಶಿಷ್ಟ ಸ್ಥಾನವಿದೆ. ಇಂಗ್ಲೆಂಡ್ ಮತ್ತು ಪಶ್ಚಿಮದ ಇತರ ರಾಷ್ಟ್ರಗಳಲ್ಲಿದ್ದಾಗಲೂ, ಅಲ್ಲಿಂದ ಭಾರತಕ್ಕೆ ಬಂದಾಗಲೂ ಅವರು ಸ್ವತಃ ಒಂದು ಸಂಸ್ಥೆಯೇ ಆಗಿದ್ದರು. ಕೋಟಿ-ಕೋಟಿ ಜನರ ಗೌರವಾದರಗಳಿಗೆ ಪಾತ್ರರಾಗಿದ್ದರು. ಡಾ. ಅನಿಬೆಸೆಂಟ ನವಭಾರತದ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ.

ಕಳೆದ ಶತಮಾನದ ಅಂತ್ಯದ ವೇಳೆಗೆ ಭಾರತ ಯಾವ ರೀತಿ ಇದ್ದಿತು? ಎಂಬುದರ ಕಲ್ಪನೆಯನ್ನು ಮಾಡಿಕೊಳ್ಳುವುದು ಇಲ್ಲಿ ಅತ್ಯಗತ್ಯ. ಭಾರತೀಯರ ಜೀವನ ಮತ್ತು ವಿಚಾರಧಾರೆಯ ಮೇಲೆ ಆಗ ಬ್ರಿಟಿಷರ ಪ್ರಭಾವ ಅಗಣಿತವಾಗಿದ್ದಿತು. ಬ್ರಿಟಿಷ ಸಾಮ್ರಾಜ್ಯವು ವೈಭವದ ತುತ್ತತುದಿಯನ್ನು ತಲುಪಿದ್ದಿತು. ಸುಶಿಕ್ಷಿತ ಯುವಕರಿಗೆ ಜಾನ್ ಸ್ಟುಅರ್ಟ್ ಮಿಲ್, ಬೆಂಥಾಮ್, ಬಿಕನ್, ಬರ್ಕಲಿ ಇವರೇ ಮೊದಲಾದವರ ಹೆಸರುಗಳು ನಾಲಿಗೆಯ ಮೇಲೆ ನಲಿದಾಡುತ್ತಿದ್ದವು. ಅಂದಿನ ಭಾರತೀಯ ಯುವಕರಲ್ಲಿ ಬಹುತೇಕ ಜನ ಯುರೋಪಿಯನ್ನರಂತೇ ಉಡುಪು ಧರಿಸುತ್ತಿದ್ದರು. ನಮ್ಮ ರಾಷ್ಟ್ರೀಯ ಉಡುಪಿಗೆ ಪ್ರಾಧಾನ್ಯ ದೊರೆಯುತ್ತಿರಲಿಲ್ಲ. ಬಹುತೇಕ ಓದು ಬರೆಹವೆಲ್ಲವೂ ಇಂಗ್ಲೀಷಿನ ಮುಖಾಂತರವೇ ನಡೆಯುತ್ತಿದ್ದಿತು. ಸಂಸ್ಕೃತ ಹಾಗೂ ದೇಶದ ಇತರ ಭಾಷೆಗಳನ್ನು ಕಡೆಗಣಿಸಿರಲಿಲ್ಲವಾದರೂ ಅವುಗಳಿಗೆ ಎರಡನೆಯ ಸ್ಥಾನ ದೊರೆತಿದ್ದಿತು. ಇಂತಹ ಒಂದು ಸನ್ನಿವೇಶದಲ್ಲಿ ಡಾ. ಬೆಸೆಂಟ ಭಾರತದಲ್ಲಿ ಪಾದಾರ್ಪಣ ಮಾಡಿದರು. ಅವರ ಬರುವಿಕೆಯೂ ಅಷ್ಟೇ ಪವಾಡ ಸದೃಶವಾಗಿದ್ದಿತು.

ಅನಿವುಡ್ ಕ್ರಿ. ಶ. 1847ರ ಅಕ್ಟೋಬರ 1ರಂದು ಜನಿಸಿದರು. ಖ್ಯಾತ ಕುಟುಂಬವೊಂದರಲ್ಲಿ ಅವರ ಜನನವಾಯಿತು. ಅವರ ಪೂರ್ವಜರಲ್ಲಿ ಒಬ್ಬರು ಇಂಗ್ಲೆಂಡಿನ ಲಾರ್ಡ್ ಚಾನ್ಸಲರ ಆದರೆ, ಇನ್ನೊಬ್ಬರು ಲಾರ್ಡ್ ಮೇಯರ ಆಗಿದ್ದರು. ಐರಿಶ್ ತಾಯಿಯ ಮಗಳಾದ ಅನಿವುಡ್‌ಗೆ ಐರ್‌ಲ್ಯಾಂಡ್ ಎಂದರೆ ತುಂಬ ಪ್ರೀತಿ. ಆರ್ಥಿಕ ತೊಂದರೆಗಳಿದ್ದಾಗಲೂ ಎದೆಗುಂದದೇ ಅನಿವುಡ್ ಇಂಗ್ಲೀಷ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಪ್ರಾವಿಣ್ಯ ಪಡೆದರು. ಜೀವನದಲ್ಲಿ ಬಹುಬೇಗನೇ ಅವರು ಒಬ್ಬ ಬಹುದೊಡ್ಡ ವಿಚಾರವಾದಿ ಎಂದು ಹೆಸರಾದರು. ಮಾನವರ ಜೀವನದ ಸ್ಥಿತಿಯನ್ನು ಸುಧಾರಿಸುವುದು ಹೇಗೆ? ಮಾನವ ಜನಾಂಗದ ಗೌರವವನ್ನು ಹೆಚ್ಚಿಸುವ ಬಗೆ ಎಂತು? ಎಂಬಿವೇ ವಿಚಾರಗಳು ಸದಾ ಅವರ ಮನಸ್ಸನ್ನು ಕೊರೆಯುತ್ತಿದ್ದವು.

ಕಷ್ಟಗಳ ಪರಂಪರೆ

ಮುಂದೆ ಅನಿವುಡ್ ಕಷ್ಟ ಪರಂಪರೆಯನ್ನೇ ಎದುರಿಸಬೇಕಾಯಿತು. ಅವರ ಹಾಗೂ ಬ್ರಾಡಲಾಫರ ಬಂಧನವಾಯಿತು. ಇಂಗ್ಲೆಂಡಿನ ಶ್ರೇಷ್ಠ ನ್ಯಾಯಾಧೀಶರ ಎದುರಿನಲ್ಲಿ ವಿಚಾರಣೆ ಆರಂಭವಾಯಿತು.

ಅನಿವುಡ್ ಮತ್ತು ಬ್ರಾಡಲಾಫ್ ನ್ಯಾಯಾಲಯದಲ್ಲಿ ತಮ್ಮ ವಕಾಲತ್ತನ್ನು ತಾವೇ ವಹಿಸಿಕೊಂಡರು. ಬಳಿಕ ಅವರು ನಿರ್ದೋಷಿಗಳೆಂದು ನಿರ್ಣಯಿಸಲಾಯಿತು. ಗಾಯದ ಮೇಲೆ ಬರೆ ಎಳೆದಂತೆ, ಅವರು ತಮ್ಮ ಇಬ್ಬರು ಮಕ್ಕಳಿಂದ ದೂರ ಇರುವ ಪ್ರಮೇಯ ಬಂದಿತು. ವಿವಾಹ ವಿಚ್ಛೇದನಗೊಂಡಿತು.

ಈ ಹೊತ್ತಿಗಾಗಲೇ ಅನಿಬೆಸೆಂಟ್ ಆಂದೋಳನವೊಂದರ ಮುಖಂಡರಾಗಿದ್ದರು. ಡಬ್ಲ್ಯು. ಟಿ. ಸ್ಟೆಡ್, ಬರ್ನಾರ್ಡ್‌ಷಾ, ಬಳಿಕ, ಸಿಡ್ನಿ ಮತ್ತು ಬೀಟ್ರಿಸ್ ವೆಬ್ ಅವರ ಸಹಕಾರ್ಯಕರ್ತರಾಗಿದ್ದರು.

ಬರ್ನಾರ್ಡ್‌ಷಾ ಅವರು 1947ರಲ್ಲಿ ಪ್ರಕಟವಾದ "ಅನಿಬೆಸೆಂಟರ ಶತಾಬ್ದಿ ಗ್ರಂಥ"ಕ್ಕೆ ಬರೆದ ಲೇಖನವೊಂದರಲ್ಲಿ ಡಾ. ಅನಿಬೆಸೆಂಟರ ವಿಷಯವಾಗಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "ಮಿಸೆಸ್, ಬೆಸೆಂಟ ತ್ವರಿತ ನಿರ್ಧಾರ ಕೈಗೊಳ್ಳುವ ಮಹಿಳೆ. ಬೆಸೆಂಟ್ ಸ್ವಯಂ ಆಂದೋಳನವನ್ನು ಆರಂಭಿಸುವ ಮುನ್ನ ಅನೇಕ ಆಂದೋಳನವನ್ನು ಕಂಡವರು. ಯಾವುದೇ ಚಳುವಳಿಯನ್ನೇ ಆರಂಭಿಸಿದಾಗಲೂ, ಅವರ ಯೋಜನೆ ಸ್ಪಷ್ಟ. ನಿರ್ಧಾರ ಖಚಿತವಾಗಿರುತ್ತಿದ್ದಿತು."

ಡಾ ಅನಿಬೆಸೆಂಟರು ಸಮಾಜವಾದದ ಕ್ಷೇತ್ರವನ್ನು ಪ್ರವೇಶಿಸಿದಾಗ ಬರ್ನಾರ್ಡ್‌ಷಾ ಅನಿಬೆಸೆಂಟರನ್ನು "ಇಂಗ್ಲೆಂಡ್ ಅಷ್ಟೇ ಏಕೆ ಇಡೀ ಯುರೋಪಿನಲ್ಲೇ ಸರಿಸಾಟಿಯಿಲ್ಲದ ವಾಗ್ಮಿ" ಎಂದು ಪ್ರಶಂಸಿಸಿದರು.

ಬ್ರಿಟನ್ನಿನಲ್ಲೂ ಅಷ್ಟೇ. ಎಲ್ಲಾ ಸಮಾಜ ಸುಧಾರಣಾ ಚಳುವಳಿಗಳಲ್ಲೂ ಡಾ. "ಅನಿಬೆಸೆಂಟರೇ ಮುಂದಾಳು. ಅನಿಬೆಸೆಂಟರ ಸಾಮಾಜಿಕ ಹಾಗೂ ರಾಜಕೀಯ ಕಾರ್ಯಚಟುವಟಿಕೆಗಳ ಬಗ್ಗೆ ಸಂಪೂರ್ಣವಾಗಿ ಬರೆಯುವುದೆಂದರೆ ಬ್ರಿಟನ್ನಿನ ಸುಧಾರಣಾ ಚಳುವಳಿಯ ಪೂರ್ಣ ಇತಿಹಾಸವನ್ನೇ ಬರೆದಂತೆ" ಎಂದು ಜಾರ್ಜ ಲ್ಯಾನ್ಸಬರಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಫೆಬಿಯನ್ ಸೊಸೈಟಿ ಹಾಗೂ ಲಂಡನ್ನಿನ ಸ್ಕೂಲ್ ಅಫ್ ಇಕಾನಾಮಿಕ್ಸ್ ಸಂಸ್ಥೆಗಳೂ ಸೇರಿದಂತೆ ಅನೇಕ ಸಂಸ್ಥೆಗಳು ಡಾ ಅನಿಬೆಸೆಂಟರಿಂದ ಸ್ಫೂರ್ತಿಯನ್ನು ಪಡೆದಿವೆ.

ಭಾರತಕ್ಕೆ ಪವಿತ್ರ ದಿನ

ಡಾ ಅನಿಬೆಸೆಂಟ್ 1893ರ ನವೆಂಬರ 16ರಂದು ಪೂರ್ವ ದೇಶಗಳ ಪ್ರವಾಸವನ್ನು ಆರಂಭಿಸಿದರು. ಅದು ಭಾರತಕ್ಕೆ ಒಂದು ಶುಭದಿನ. ಅನಿಬೆಸೆಂಟ ಈ ಹೊತ್ತಿಗಾಗಲೇ ಬ್ರಹ್ಮವಿದ್ಯಾವಾದಿಯಾಗಿದ್ದರು. ಸಿಲೋನಿನ ಕ್ಯಾಂಡಿಯಿಂದ ಪ್ರವಾಸವನ್ನು ಆರಂಭಿಸಿದ ಅವರು, ಭಾರತದ ತುತಿಕೋರಿನ್, ಬೆಂಗಳೂರು, ಕುಂಭಕೋಣಗಳಿಗೂ ಭೇಟಿ ನೀಡಿದರು. ಅಡ್ಯಾರಿಗೆ ಭೇಟಿ ನೀಡಿ ಸಮ್ಮೇಳನವೊಂದರಲ್ಲಿ ಭಾಗವಹಿಸಿದರು.

ಈ ಸಮ್ಮೇಳನದ ನಂತರ ಅವರು ಇಡೀ ದೇಶದಲ್ಲಿ ಪ್ರವಾಸ ಮಾಡಿದರು. ಮದ್ರಾಸಿನ ಪಚಿಯಪ್ಪ ಕಾಲೇಜಿನಲ್ಲಿ ಭಾಷಣ ಮಾಡಿದ ಅವರು ಆ ರಾಜ್ಯದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಯನ್ನು ಆರಂಭಿಸಿದರು. ಇದಾದ ಕೆಲದಿನಗಳ ನಂತರ ಹಿಂದುಳಿದವರಿಗಾಗಿ ಪಂಚಮಾ ಕಾಲೇಜನ್ನು ಸ್ಥಾಪಿಸಿದರು. ಡಾ || ಸಿ. ಪಿ. ರಾಮಸ್ವಾಮಿಯವರು ಹೇಳಿದಂತೆ ಡಾ || ಅನಿಬೆಸೆಂಟರು ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಮೊದಲು ಹೋರಾಡಿದವರಲ್ಲಿ ಒಬ್ಬರು.

ಪೂರ್ವ ದೇಶಗಳ ಧರ್ಮಗಳ ವಿಚಾರದಲ್ಲಿ ಅವರಿಗೆ ದೃಢವಾದ ಶ್ರದ್ಧೆಯಿದ್ದಿತು.

ಸ್ವರಾಜ್ಯ ಸಾಧನೆಗೆ ಹೋರಾಟ

1913ರ ಹೊತ್ತಿಗೆ ಭಾರತದ ಜನರನ್ನು ಸ್ವಾಯುತ್ತಾಡಳಿತ ಅಥವಾ ಸ್ವರಾಜ್ಯ ಸಾಧನೆಗೆ ಜಾಗೃತಗೊಳಿಸುವ ಅಗತ್ಯ ಅವರಿಗೆ ಕಂಡುಬಂದಿತು. 1914ರಲ್ಲಿ ಅವರು 'ಕಾಮನ್‌ವೀಲ್' ವಾರಪತ್ರಿಕೆಯನ್ನು ಆರಂಭಿಸಿದುದಲ್ಲದೇ "ನ್ಯೂ ಇಂಡಿಯ' ದಿನಪತ್ರಿಕೆಯನ್ನು ಆರಂಭಿಸಿದರು. 1915ರಲ್ಲಿ ಮುಂಬಯಿಯಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಭಾಗವಹಿಸಿದರು. ಬಳಿಕ ಹೋಂ ರೂಲ್ ಲೀಗ್‌ನ್ನು ಆರಂಭಿಸಿದರು. ರಾಜಕೀಯ ಚಳುವಳಿಯನ್ನು ಮೊಟ್ಟ ಮೊದಲಿಗೆ ಜನಸಾಮಾನ್ಯರಿಗೆ ತಲುಪಿಸಿದ ಶ್ರೇಯಸ್ಸು ಡಾ| ಅನಿಬೆಸೆಂಟರಿಗೆ ಸಲ್ಲುತ್ತದೆ. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಯುವಕ ಧುರೀಣರಾದ ಎ। ಜಿನ್ನಾ, ಶಂಕರಲಾಲ್, ಸರೋಜಿನಿ ನಾಯಿಡು, ವಾಡಿಯಾ, ಸಿಂಹ, ಚಟ್ಟೋಪಾಧ್ಯಾಯ, ಬಸು, ಮೋತಿಲಾಲ್‌ಜಿ, ಡಾ| ತೇಜಬಹಾದ್ದೂರ್ ಸಪ್ರು, ಭಗವಾನ್ ದಾಸ್, ಶ್ರೀ ಪ್ರಕಾಶ್, ಪಂಡಿತ್ ಕುಂಜ್ರು, ರಾಜ ಅಫ್ ಮೊಹಮುದಾಬಾದ್, ಅಲಿ ಇಮಾಮ್, ಹಸನ್ ಇಮಾಮ್— ಇವರೇ ಮೊದಲಾದವರು ಡಾ || ಅನಿಬೆಸೆಂಟರೊಂದಿಗೆ ಸಹಕರಿಸಿದರು. ಡಾ | ಬೆಸೆಂಟ್ ಭಾರತೀಯರಲ್ಲಿ ಅಖಿಲ ಭಾರತೀಯ ದೃಷ್ಟಿಕೋನವನ್ನು ರೂಪಿಸಲು ಪ್ರಥಮತಃ ಕಾರಣರಾದರು. ಅವರ ನಾಯಕತ್ವದಲ್ಲಿ ರಾಷ್ಟ್ರದ ಐಕ್ಯಮತ್ಯ ಭಾವನೆ ರೂಪುಗೊಂಡು, ದಿನೇ ದಿನೇ ವೃದ್ಧಿ ಹೊಂದುತ್ತಾ ಬಂದಿತು.

ಲಕ್ನೋನಲ್ಲಿ 1916ರಲ್ಲಿ ಕಾಂಗ್ರೆಸ್ ಸಮಾವೇಶಗೊಂಡಾಗ ಸೌಮ್ಯವಾದಿಗಳು ಹಾಗೂ ತೀವ್ರವಾದಿಗಳ ನಡುವೆ ತಾತ್ಕಾಲಿಕ ಅಭಿಪ್ರಾಯ ಭೇದ ಉಂಟಾಯಿತು. ಡಾ॥ ಬೆಸೆಂಟ್ ಇಂಡಿಯನ್ ಹೋಂ ರೂಲ್ ಪರವಾಗಿ ಒಂದು ಪ್ರಕಟ

(ಐದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 528
ಸಂಪುಟ ೪೯
ಸಂಚಿಕೆ ೨೩
VOL. 49
No. 23

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೨—೨—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ರಾಜಕೀಯ ದಾಂಪತ್ಯ

ಪಶ್ಚಿಮ ಬಂಗಾಳದಲ್ಲಿ ಮಧ್ಯಾವಧಿ ಚುನಾವಣಾನಂತರ ಸಂಯುಕ್ತ ರಂಗಕ್ಕೆ ಅಸ್ಪಷ್ಟ ಬಹುಮತ ದೊರಕಿದ ಮೇಲೆ, ಅಲ್ಲಿ ಸರಕಾರ ರಚಿಸಲು ಕೆಲವು ದಿವಸಗಳು ತಡವಾದವು. ಇದಕ್ಕೆ ಸರಕಾರದ ನಾಯಕರು ಯಾರಾಗಬೇಕು ಮತ್ತು ಗೃಹ ಖಾತೆಯು ಯಾರ ಕೈಯೊಳಗಿರಬೇಕು ಎಂದು ಬಂಗ್ಲಾ ಕಾಂಗ್ರೆಸ್ಸಿನ ಅಜಯ್ ಮುಖರ್ಜಿ ಮತ್ತು ವಾಮ ಕಮ್ಯುನಿಸ್ಟರ ಜ್ಯೋತಿಬಸುಗಳ ನಡುವೆ ಜಿಜ್ಞಾಸೆ ಎದ್ದದ್ದೇ ಮುಖ್ಯ ಕಾರಣ. ಅಧಿಕಾರ ಗ್ರಹಣಕ್ಕಾಗಿ ಬಸು ಮುಖ್ಯಮಂತ್ರಿತನವನ್ನು ತ್ಯಾಗ ಮಾಡಿದರೆ, ಮುಖರ್ಜಿ ಗೃಹ ಖಾತೆಯನ್ನು ಒಡೆದು ಪೋಲೀಸ್ ವಿಭಾಗವನ್ನು ಬಸುವಿಗೆ ಕೊಡಲು ಸಮ್ಮತಿಸಿದರು. ಅಂತೂ ಸರಕಾರವೇನೋ ರಚನೆಗೊಂಡಿತು; ಆದರೆ, ಅಂದು ತಲೆದೋರಿದ್ದ ವಿವಾದಗಳು ಇತ್ತೀಚಿನ ದಿವಸಗಳಲ್ಲಿ ಮಿತಿಮೀರಿವೆ; ಪರಸ್ಪರ ದೋಷಾರೋಪಣೆಗಳು ಹರಿಯತೊಡಗಿವೆ. ಆದರೂ ಒಂದು ತಮಾಷೆಯೆಂದರೆ, ಅಧಿಕಾರದಿಂದ ಇಳಿಯಲು ಯಾರೂ ಸಿದ್ಧರಿಲ್ಲ!

ಮುಖ್ಯಮಂತ್ರಿ ಮುಖರ್ಜಿಯವರು ತನ್ನ ಸರಕಾರದ ವಿರುದ್ಧ ತನ್ನ ನಾಯಕತ್ವದಲ್ಲೇ ಸತ್ಯಾಗ್ರಹ ಆರಂಭಿಸಿ ಕೊನೆಗೊಳಿಸಿದರು. ತಮ್ಮ ನೇತೃತ್ವದ ಆಡಳಿತವನ್ನು ಬರ್ಬರಾಡಳಿತವೆಂದು ಕರೆದರು. ಒಳಾಡಳಿತವನ್ನು ತಾವೇ ಟೀಕಿಸಿದರು. ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣದ ಚರ್ಚೆಗೆ ಉತ್ತರಿಸುತ್ತ ಆಡಳಿತದ ಬಗ್ಗೆ ವಿರೋಧ ಪಕ್ಷೀಯರ ಬಾಯಿಯಿಂದ ಬರಬಹುದಾದ ಉದ್ಗಾರಗಳನ್ನು ಮಾಡಿದರು. ಇವನ್ನು ತಾವು ಸಂಯುಕ್ತ ರಂಗದಲ್ಲಿರುವುದಕ್ಕೆ ಪರಿಸ್ಥಿತಿ ಸ್ವಾಧೀನತೆಂಬ ಆಶಾಭಾವನೆಯೇ ಕಾರಣವೆಂದು ಗೋಗರೆದರು. ಅಂದರೆ, ಬಂಗ್ಲಾ ಕಾಂಗ್ರೆಸ್–ಕಮ್ಯೂನಿಸ್ಟ್ ಮೈತ್ರಿಯಲ್ಲಿ ಬಗೆಹರಿಸಲಾಗದಷ್ಟು ಭಿನ್ನತೆ ಮೂಡಿದೆ. ಜ್ಯೋತಿಬಸುರವರು ಅಜಯ ಮುಖರ್ಜಿಯವರನ್ನು ಹುಲ್ಲಿಗಿಂತ ಕಡೆಯಾಗಿ ಬಗೆದಿದ್ದಾರೆ, ಮುಖ್ಯಮಂತ್ರಿಯು ಉಳಿದ ಮಂತ್ರಿಗಿಂತ ಯಾವುದೇ ರೀತಿಯಲ್ಲಿ ಹೆಚ್ಚಿನವನಲ್ಲ–ಎಂದು ಘಂಟಾಘೋಷವಾಗಿ ಸಾರಿದ್ದಾರೆ. ತನ್ನ ಮಂತ್ರಿ ಖಾತೆಯಲ್ಲಿ ಕೈ ಹಾಕಬಾರದೆಂದು ಎಚ್ಚರಿಸಿದ್ದಾರೆ. ಅಜಯ್ ಮುಖರ್ಜಿ ಮತ್ತು ಅವರ ಬಂಗ್ಲಾ ಕಾಂಗ್ರೆಸ್ಸು ತಪ್ಪು ದಾರಿ ತುಳಿಯುತ್ತಿದ್ದಾರೆಂದೂ ಸಂಯುಕ್ತ ರಂಗವನ್ನೊಡೆಯಲು ಸಂಚು ಹೂಡುತ್ತಿದ್ದಾರೆಂದೂ ದೂರಿದ್ದಾರೆ.

ಮಾರ್ಕ್ಸಿಸ್ಟ್ ಕಮ್ಯೂನಿಸ್ಟರು ಸಶಸ್ತ್ರ ಬಂಡಾಯವೆಬ್ಬಿಸುವ ಸಿದ್ಧತೆ ನಡೆಸುತ್ತಿದ್ದಾರೆಂದೂ ಕೆಲವರ ಅಭಿಪ್ರಾಯ. ಪಶ್ಚಿಮ ಬಂಗಾಳದಲ್ಲಿ ಅವರದ್ದೇ ನೇತೃತ್ವದಲ್ಲಿ ಗೃಹ ಖಾತೆಯಿರುವುದರಿಂದ, ಈ ಹೋರಾಟಕ್ಕೆ ಅಲ್ಲಿ ಸಾಕಷ್ಟು ಪ್ರಚೋದನೆಯೂ ದೊರೆತೀತು. ಇತ್ತೀಚೆಗೆ ಕೇರಳದ ಕೆಲವೆಡೆ ನಡೆದ ಭೂಮಿಯ ಆಕ್ರಮಣ ಭಾವಿ ಕ್ರಾಂತಿಯ ಪೂರ್ವಸಿದ್ಧತೆಯ ಪ್ರಾಯೋಗಿಕ ಪ್ರದರ್ಶನವಿದ್ದರೂ ಇರಬಹುದು. ಬಂಗಾಳವೇ ಹಿಂದೆ "ನಕ್ಸಲೀಯ್" ಕ್ರಾಂತಿಗಾರರಿಗೆ ಜನ್ಮಕೊಟ್ಟು ಮುನ್ನೀತವಾಯ್ತು; "ಘೇರಾವ್" ತಂತ್ರವನ್ನು ಸಂಶೋಧಿಸಿತು. ಇನ್ನು ಯಾವ ಯಾವ ರಂಗದಲ್ಲಿ ಎಂತೆಂತಹ ಸಂಶೋಧನೆಗಳನ್ನು ಜ್ಯೋತಿಬಸು ಮಾಡಲಿರುವರೆಂದು ಈಗಲೇ ಹೇಳುವುದು ಸಾಧ್ಯವಿಲ್ಲ. ಬಂಗ್ಲಾ ಕಾಂಗ್ರೆಸ್ಸು ಬರ್ಬರತೆಗೆ ಮಾರ್ಕ್ಸಿಸ್ಟರನ್ನು ದೂಟ್ಟು ಮಾಡುತ್ತದೆ. ಮಾರ್ಕ್ಸಿಸ್ಟರು ಎಲ್ಲವೂ ಸರಿಯಾಗೇ ನಡೆಯುತ್ತಿದೆ ಎನ್ನುತ್ತಿದ್ದಾರೆ. ಮುಖ್ಯಮಂತ್ರಿ ಮುಖರ್ಜಿಯವರು ಆಡಳಿತದಿಂದ ಬಹಳಷ್ಟು ನೊಂದುಕೊಂಡಂತೆ ಮಾತಾಡುತ್ತಿದ್ದಾರೆ. ಆದರೆ, ವಸ್ತುತಃ ಹಾಗಿದ್ದಿದ್ದರೆ, ತನಗಾಗುತ್ತಿರುವ ಅಪಮಾನವನ್ನು ಸಹಿಸಿಯೂ ಅವರು ನಾಯಕರಾಗಿ ಏಕೆ ಮುಂದುವರಿಯುತ್ತಿದ್ದಾರೆ? ಈ ಹೋರಾಟ ಇಂದು ನಿನ್ನೆಯದಲ್ಲ. ಇದು ವರೆಗೂ ಮಾರ್ಕ್ಸಿಸ್ಟರನ್ನು ತಮ್ಮ ದಾರಿಗೆ ತರಲಾಗದ ಮೇಲೆ ಮುಖ್ಯಮಂತ್ರಿಯಾಗಿ ಅವರೇಕೆ ಮುಂದುವರಿಯಬೇಕು?

ಇಲ್ಲಿ ಎರಡು ಸಂಗತಿಗಳಿವೆ. ಒಲ್ಲದ ಮಡದಿಯೊಡನೆಯೂ ಸಹಬಾಳ್ವೆ ನಡೆಸುವ ಶ್ರೀ ಮುಖರ್ಜಿಯವರ ಸಾಹಸ ಪ್ರಶಂಸನೀಯವಾದದ್ದು. ಮುಳ್ಳಿಡಿದ ಮರ ಪೇರಿದಂತಾದರೂ ಎದೆಗೆಡದೆ ಮುಂದುವರಿಯುತ್ತಿರಬೇಕಾದರೆ, ಮುಖರ್ಜಿ–ಬಸು ಸಂಬಂಧ ದಾಂಪತ್ಯಕ್ಕಿಂತ ಮಿಗಿಲಾದದ್ದೇ ಇರಬೇಕು. ಏಕೆಂದರೆ, ಡೈವರ್ಸ್ ಆಗುವ ಸಂಭವವೇ ಇಲ್ಲ. ಪರಸ್ಪರ ಟೀಕೆ ಟಿಪ್ಪಣಿಗಳನ್ನು ಮಾಡಿ ಬಾಲಿಗೆ ತುರಿಕೆ ತೀರಿಸಿಕೊಳ್ಳುವಷ್ಟು ಲಘು ಮಟ್ಟಕ್ಕೆ ಇಬ್ಬರೂ ಬಂದಿರಲಾರರು. ಇವರಿಬ್ಬರ ಆರೋಪ–ಪ್ರತ್ಯಾರೋಪಗಳ ಮಾಲೆಗಳು ಪಶ್ಚಿಮ ಬಂಗಾಳದ ಜನತೆಗೆ ಉರುಳಾಗಿ ಪರಿಣಮಿಸುವುದು ಖಂಡಿತ. ಇಂಡಿಕೇಟಿನ ಪ್ರಧಾನಿ ಶ್ರೀಮತಿ ಗಾಂಧಿಯವರೂ ಬಂಗಾಳದ ಹುಲಿಗಳನ್ನು ಈ ಉರುಳಿನಿಂದಲೇ ಬಗಿಹಿಡಿಯಲು ಬಯಸಿದಂತಿದೆ. ಇದರಿಂದಲೇ ಅತಿಯೂ ಶ್ರೀ [illegible]ವ ಸೇವೆಗಾಗಿ ಅಧಿಕಾರದಲ್ಲಿ ಉಳಿಸಬೇಕು. ಹೇಗಿದೆ ರಾಜಕೀಯ ದಾಂಪತ್ಯ?

ಬರ್ಟ್ರೆಂಡ್ ರಸ್ಸೆಲ್

೯೭ ವಯಸ್ಸಿನ ಬರ್ಟ್ರೆಂಡ್ ರಸ್ಸೆಲ್ ಬ್ರಿಟನ್ನಿನ ಮಹಾ ತತ್ವಜ್ಞಾನಿ, ಜಗತ್ತಿನ ತತ್ವಜ್ಞಾನಿಯೂ ಹೌದು. ವಿಶ್ವದ ಸುವಿಖ್ಯಾತ ಶಾಂತಿವಾದಿಗಳೆಂದು ಅವರಿಗೆ ಹೆಸರು ಬಂತು. ೬೦ಕ್ಕೂ ಮಿಕ್ಕಿದ ಪುಸ್ತಕಗಳ ಲೇಖಕರಾದ ಅವರಿಗೆ ನೊಬೆಲ್ ಬಹುಮಾನವೂ ದೊರಕಿತು; ಹಲವರು ಅವರನ್ನು ಪ್ರಶಂಸಿಸಿದರು. ಉಳಿದವರು ನಿಂದಿಸಿದರು. ಒಂದಲ್ಲ ಒಂದು ರೀತಿಯಿಂದ ರಸ್ಸೆಲ್ಲರ ಪ್ರಭಾವಕ್ಕೆ ಗುರಿಯಾಗದವರು ವಿರಳರು. ಆತ್ಮ ಸಾಕ್ಷಿಗೆ ಸರಿಯಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಲಾರ್ಡ್ ರಸ್ಸೆಲ್ಲರ ಬಗ್ಗೆ ಕಾಲಕಾಲದಲ್ಲಿ ಜಾಗತಿಕ ಅಭಿಪ್ರಾಯವೂ ಬದಲಾಗುತಿತ್ತು. ಶಾಂತಿವಾದ ಮತ್ತು ಲೈಂಗಿಕ ಸ್ವಾತಂತ್ರ್ಯಗಳ ಬಗ್ಗೆ ಅವರು ತಳೆದ ನಿಲುವಿನ ಕಾರಣ ಜಗತ್ತಿನಲ್ಲಿ 'ವಕ್ರ'ವೆಂಬ ಪದವಿ ನೀಡಿತ್ತು. ದ್ವಿತೀಯ ಜಾಗತಿಕ ಸಮರಾನಂತರ ಅವರು ಕಮ್ಯೂನಿಜಂನ ಪ್ರಬಲ ವಿರೋಧಿಯೆಂದು ಹೆಸರಾದರು. ಆದರೆ, ಇತ್ತೀಚಿನ ದಿನಗಳಲ್ಲಿ ಅವರು ಅಮೆರಿಕಾ ವಿರೋಧಿ ಎಂದು ಹೆಸರು ಪಡೆದಿದ್ದಾರೆ. ಚರಿತ್ರೆ ಬಣ್ಣಬಣ್ಣವಾಗಿದ್ದರೂ ಲಾರ್ಡ್ ರಸ್ಸೆಲ್ಲರ ಸ್ಥಾನ ಉಚ್ಚವಾದದ್ದು. ತಾ. ೨ರಂದು ನಿಧನಹೊಂದಿದ ಈ ದಾರ್ಶನಿಕ ಶಾಂತಿವಾದಿಯ ಆತ್ಮಕ್ಕೆ ಚಿರಶಾಂತಿ ಲಭಿಸಲಿ.

ಸ್ಥಾನಕಂಪನ

ಚಂಡೀಗಢವನ್ನು ತನಗೇ ಕೊಡಬೇಕೆಂಬ ಚಳವಳಿಯನ್ನು ಬೆದರಿಕೆಯ ರೂಪದಲ್ಲೂ ಹೂಡಿ ಯಶಗಳಿಸಿದ ಪಂಜಾಬಿಗಳು ಹರ್ಯಾನಕ್ಕೆ ಕೊಡಮಾಡಿದ ಫಜಿಲ್ಕ ತಹಶೀಲೂ ತನ್ನಲ್ಲೇ ಉಳಿಯಬೇಕೆಂದು ಚಳುವಳಿಗೆ ಪೂರ್ವ ತಯಾರಿ ನಡೆಸ ಹತ್ತಿದ್ದಾರೆ.

ಶ್ರೀಮತಿ ಇಂದಿರಾ ಗಾಂಧಿಯವರು ಅಕಾಲಿಗಳ ಒತ್ತಾಯದ, ಬಲಾತ್ಕಾರದ ಮುಂದೆ ಹಿಂದೆ ಮಣಿದಂತೆ ಮುಂದೆಯೂ ಮಣಿಯದಿರುವುದು ಕಷ್ಟಸಾಧ್ಯವಾಗಬಹುದು. ಪಾಪ, ಬನ್ಸೀಲಾಲರ ಬಾಂಸುರಿಯು ಅವರಿಗೆ ಬರೀ ಗುಲ್ಲಾಗಿ ಪರಿಣಮಿಸಿದ್ದು ಹರ್ಯಾನದ ಹಗರಣಕ್ಕೆ ನಾಂದಿ ಹಾಡಬಹುದು.

ಇಂಡಿಕೇಟ್ ಕಾಂಗ್ರೆಸ್ಸಿನ ಪ್ರಬಲ ನಾಯಕರಾದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಹೊಸ ಸಮಸ್ಯೆಯೊಂದನ್ನು ಎದುರಿಸಬೇಕಾಗಿದೆ. ತೆಲಂಗಾಣ ಕಾಂಗ್ರೆಸ್ಸಿಗರು ಶಾಸನ ಸಭೆಗಳಲ್ಲಿ ವಿರೋಧ ಪಕ್ಷವಾಗಿ ಕುಳಿತುಕೊಳ್ಳಲು ನಿರ್ಧರಿಸಿದ್ದಾರೆ. ಇದರಿಂದ ಶ್ರೀ ರೆಡ್ಡಿಯವರ 'ತ.ಕಾ.ಕ.ವ' ಬಹುಮತ ಸೋರಿ ಹೋಗುವ ಸಂಭವವೂ ಇದೆ. 'ತೆಲಂಗಾಣ' ಪ್ರಶ್ನೆಗೆ ಉತ್ತರ ಹುಡುಕಲು ತಡ ಮಾಡುತ್ತ ಹೋಗುವುದರಿಂದ ರೆಡ್ಡಿಯವರ, ತನ್ಮೂಲಕ ಶ್ರೀಮತಿ ಗಾಂಧಿಯವರ ಸ್ಥಾನವೂ ಅಲ್ಲಾಡುತ್ತ ಹೋಗುತ್ತದೆ.

ಉಡುಪಿಯಲ್ಲಿ
ಶ್ರೀ ಜಗನ್ನಾಥ ರಾವ್ ಜೋಶಿ

ಇದೇ ತಾ. 7ರಂದು ಉಡುಪಿಯಲ್ಲಿ ಪುರಸಭಾಧ್ಯಕ್ಷ ಡಾ|| ವಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾರತೀಯ ಜನಸಂಘದ ನಾಯಕರಾದ ಶ್ರೀ ಜಗನ್ನಾಥ ರಾವ್ ಜೋಶಿಯವರು ಮಾತನಾಡುತ್ತಾ ಕಳೆದ ಇಪ್ಪತ್ತರಡು ವರ್ಷಗಳ ಕಾಂಗ್ರೆಸಿನ ಆಡಳಿತದಲ್ಲಿ ದೇಶದ ದುರ್ಗತಿ ಹೆಚ್ಚಾಗಿದೆ ಮಾತ್ರವಲ್ಲ ನೆರೆಹೊರೆಯ ರಾಷ್ಟ್ರಗಳ ವಿಶ್ವಾಸವನ್ನೂ ಕಳಕೊಳ್ಳುವ ಪರಿಸ್ಥಿತಿ ಒದಗಿದೆ ಎಂದರು. ಮುಂದುವರಿಯುತ್ತಾ ಅವರು ಜನತೆಯ ಹಣ ಪೋಲು ಮಾಡುವ ಸ್ವಾರ್ಥ ಸಾಧನೆಯ ಕಾರ್ಯ ನಿಲ್ಲಬೇಕು. ನಮ್ಮಲ್ಲಿರುವ ಸಂಪತ್ತನ್ನೇ ಉಪಯೋಗಿಸಿ ಸಮೃದ್ಧ ದೇಶ ನಿರ್ಮಾಣವಾಗಬೇಕಾಗಿದೆ ಎಂದರು. ದೇಶ ದ್ರೋಹಿ ಕಮ್ಯುನಿಸ್ಟರು ಮತ್ತು ದೇಶ ಮುಳುಗಿಸುವ ಕಾಂಗ್ರೆಸಿಗರಿಂದಾಗಿ ದೇಶದ ಮುಂದೆ ಭಾರೀ ಆಪತ್ತು ಕಾದಿದೆಯೆಂದು ಅವರು ಜನತೆಯನ್ನು ಎಚ್ಚರಿಸಿದರು.

ರಾಜಕೀಯ ತಂತ್ರದ ಬಗ್ಗೆ ಅವರು ಪ್ರಸ್ತಾಪಿಸುತ್ತಾ ಕಾಸರಗೋಡಾಗಲೀ ಬೆಳಗಾವಿ ಅಥವಾ ಚಂಡೀಗಢವಾಗಲಿ ಅರ್ಹತೆಯ ಮೇಲೆ ಸಮಸ್ಯೆಯ ಇತ್ಯರ್ಥವಾಗುವ ಬದಲಾಗಿ ರಾಜಕೀಯ ಹಿನ್ನೆಲೆಯಲ್ಲಿ ನಿರ್ಧರಿತವಾಗುತ್ತಿವೆ ಎಂದರು. ಅತೀವ ಅಧಿಕಾರ ಲಾಲಸೆಯೇ ಇಂದಿನ ಎಲ್ಲ ಸಮಸ್ಯೆಗಳಿಗೆ ಮೂಲ ಎಂದು ವಾದಿಸಿದರು.

ಪ್ರಾರಂಭದಲ್ಲಿ ಉಡುಪಿ ಮಂಡಲ ಜನಸಂಘ ಅಧ್ಯಕ್ಷ ಶ್ರೀ ರಾಮದಾಸ ಶೆಟ್ಟಿ ಅವರು ಸ್ವಾಗತಿಸಿದರು. ಕೊನೆಗೆ ಶ್ರೀ ಸೋಮಶೇಖರ ಭಟ್ ಅವರು ಧನ್ಯವಾದ ಸಮರ್ಪಿಸಿದರು.

ದಿ|| ಶ್ರೀಮತಿ ಗಿರಿಜಾ ಶೆಡ್ತಿಗೆ
ಶ್ರದ್ಧಾಂಜಲಿ

ಶ್ರೀ ಕೊಳ್ಕೆಬೈಲ್ ಸೂರಪ್ಪ ಶೆಟ್ಟರ ಧರ್ಮಪತ್ನಿ ಹಾಗೂ ನಮ್ಮ ಪಂಚಾಯತಿನ ಅಧ್ಯಕ್ಷಿಯರಾದ ಶ್ರೀಮತಿ ಗಿರಿಜಾ ಶೆಡ್ತಿಯವರು ತಾ. 29-1-70ರಂದು ಸ್ವರ್ಗಸ್ಥರಾಗಿ ನಮ್ಮನ್ನೆಲ್ಲ ಅಪಾರ ದುಃಖಕ್ಕೆ ಈಡು ಮಾಡಿದ್ದಾರೆ. ಸಹೃದಯರೂ ಪರೋಪಕಾರಿಗಳೂ ಆಗಿರುವ ಶ್ರೀಮತಿಯವರ ಆತ್ಮಕ್ಕೆ ಶ್ರೀ ದೇವರು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುವ

ಕಾಂದೇಬಾರಂದಾಡಿ ಪಂಚಾಯತಿನ
ಉಪಾಧ್ಯಕ್ಷ ಮತ್ತು ಸದಸ್ಯರು

[illegible]

ಮಿಶ್ರ ಮದುವೆ ಮತ್ತು ರಾಷ್ಟ್ರೈಕ್ಯ

ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಿ ಡಾ|| ಚಂದ್ರಶೇಖರರವರು ರಾಷ್ಟ್ರೈಕ್ಯಕ್ಕೊಂದು ಹೊಸ ವಿಧಾನವನ್ನು ಕಂಡುಹಿಡಿದಿದ್ದಾರೆ. ಅದಕ್ಕಾಗಿ ಅದ್ಯಾವುದಾದರೂ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ್ ಕೊಟ್ಟಲ್ಲಿ ಆಶ್ಚರ್ಯಪಡಬೇಕಿಲ್ಲ. ಶ್ರೀಯುತರು ಶ್ರೀಮತಿ ಇಂದಿರಾ ಗಾಂಧಿ ನೆಹ್ರೂಜೀಯವರ ಸಚಿವ ಸಂಪುಟದಲ್ಲಿರುವರು. ಅವರು ಇತ್ತೀಚಿಗೆ ಅಹಮ್ಮದಾಬಾದಿಗೆ (ಕರ್ಣಾವತಿ) ಹೋಗಿದ್ದಾಗ ಅಲ್ಲೊಂದು ಸಭೆಯಲ್ಲಿ ಭಾಷಣ ಮಾಡುತ್ತ ತನ್ನ ಸಂಶೋಧನೆಯನ್ನವರು ಬಹಿರಂಗಪಡಿಸಿರುವರು. ಶ್ರೀಮಾನ್ ಚಂದ್ರಶೇಖರ್‌ರವರು ಸಂತಾನಾಭಿವೃದ್ಧಿಗೆ ಅರ್ಧಚಂದ್ರ ಪ್ರಯೋಗ ನಡೆಸುತ್ತಿರುವದೆಲ್ಲರಿಗೂ ಗೊತ್ತಿರುವ ವಿಷಯ. ಆದರೆ ಅದಕ್ಕಾಗಿ ಅವರಿಗೆ ಮಂತ್ರಿಮಂಡಲದಲ್ಲಿ ಉನ್ನತಿಯ ಬದಲು ಕೆಳಕಳ್ಳುವಿಕೆಯೇ ನಡೆದಿರುವದು ಆಶ್ಚರ್ಯದ ಸಂಗತಿಯೇ ಸರಿ. ಅದು ಹಾಗಿರಲಿ, ಈಗ ಡಾಕ್ಟರೇಟ್ ಆದರೂ ಕೊಡಬಹುದಲ್ಲವೇ?

ಅಹಮ್ಮದಾಬಾದಿನಲ್ಲಿ ಅಲ್ಲೋಲ ಕಲ್ಲೋಲ ನಡೆದಿದ್ದು ಅದು ಶಾಂತವಾದದಂತೆ ಶ್ರೀಮತಿ ಇಂದಿರಾ ಗಾಂಧಿ, ಅಬ್ದುಲ್ ಗಫಾರ್ ಖಾನ್, ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಮುಸ್ಲಿಂ ಲೀಗು ಕಲಹ-ಬಿರುಗಾಳಿಯನ್ನೆಬ್ಬಿಸುತ್ತಿರುವದು ಕಡು ಸಕ್ಕವಿದೆ ಅಲ್ಲಿ ರಾಷ್ಟ್ರೈಕ್ಯಕ್ಕೊಂದು ಉಪಾಯವನ್ನು ಡಾಕ್ಟರರು ಸೂಚಿಸಿದ್ದಾರೆ. ರಾಷ್ಟ್ರೈಕ್ಯಕ್ಕೆ ಮಿಶ್ರ ಮದುವೆಯೇ ಏಕಮೇವ ಮದ್ದಂತೆ. ಡಾಕ್ಟರರು ಹೇಳಿರುವರು. ಪ್ರತಿಯೊರ್ವ ಡಾಕ್ಟರರೂ ತಾನು ಕೊಡುವ ಔಷಧಿ ಮತ್ತು ಆ ರೋಗಕ್ಕೆ ಪರಿಹಾರವೆಂದು ಬಂಬಡ ಬಾರಿಸುವದು ಅವರ ವೈದ್ಯಕೀಯ ರಂಗಕ್ಕೆ ವಿಶೇಷವಾದ ವಿಷಯವಿದೆ. ಅದೇ ಅಭ್ಯಾಸ ಬಲದಿಂದ ಈ ಡಾಕ್ಟರ್ ಕೂಡಾ ಆ ರೀತಿ ಹೇಳಿರಬಹುದೇ?

ಎರಡು ಗಂಡು ಅಥವಾ ಎರಡು ಹೆಣ್ಣು 'ಮದುವೆ'ಯಾಗದೆ ಒಂದು ಹೆಣ್ಣು ಒಂದು ಗಂಡು ಮದುವೆಯಾಗುವದನ್ನು ಮಿಶ್ರ ಮದುವೆಯೆನ್ನಲು ಶ್ರೀ ಸಾಮಾನ್ಯ ಸಿದ್ಧವಿಲ್ಲ. ಇಲ್ಲಿ ಲಿಂಗಗಳ ಮಿಶ್ರವಾಗಬಹುದು. ಡಾಕ್ಟರರು ಹೇಳುವ ಮದುವೆ ಕಣ್ವತಿಯ ಕರ್ಣಕಠೋರ, ಕರುಣಾಜನಕ ಕಥೆಗೆ ಸಂಬಂಧಪಟ್ಟಿದ್ದಿದೆ. ಸೋಮನಾಥ ದೇವಾಲಯವನ್ನು, ಜಗನ್ನಾಥ ಮಂದಿರವನ್ನ ಆಧುನಿಕ ಘಜ್ನಿಗಳಿಂದ ತಪ್ಪಿಸಬೇಕಾದಲ್ಲಿ ನಮ್ಮ ನಾರೀಮಣಿಗಳನ್ನು...... ಅರ್ಪಣೆಗೆನೇ ತೃಪ್ತಿಯಾಗಿಲ್ಲವೆಂದ ಮೇಲೆ ಈಗ ಕೇಳಬೇಕೇ? ಇದ್ದರೂ ಶ್ರೀಮಾನ್ ಚಂದ್ರಶೇಖರ್‌ರವರ ಸಂಶೋಧನೆಗೆ ಪಂಡಿತ ಜವಾಹರಲಾಲ ನೆಹ್ರೂಜೀಯವರು ಖಂಡಿತವಾಗಿ ಡಾಕ್ಟರೇಟ್ ಗಿಟ್ಟಿಲ ವಿಚಾರ ಮಾಡುತ್ತಿದ್ದರೋ, ಏನೋ? ಆದರೆ ಅಬ್ದುಲ ಕಲಂ ಅಜಾದ್ ಅಥವಾ ಜಕೀರ್ ಹುಸೇನರು ಏನು ಹೇಳುತ್ತಿದ್ದರು? ಅದನ್ನೇ ಅವರು ಮಾಡಿತೋರಿಸಿದ್ದಾರೆ. ಅಂದರೆ, ತಮಗೆ ಸಂಬಂಧಪಟ್ಟ ಹುಡುಗಿಯರು ಹಿಂದೂ ಹುಡುಗರನ್ನು 'ಪ್ರೇಮಿ'ಸಿದಾಗ ಹುಡುಗರನ್ನು ಇಸ್ಲಾಮಿಗೆ ಮತಾಂತರಿಸಿ ಮದುವೆ ಮಾಡಿಸಿ ಬಿಟ್ಟಿದ್ದಾರೆ. ಇಸ್ಲಾಮಿಗೆ ಅವರ ಕೊಡುಗೆ ಅದು. ಅಂತಹವರು ಈ ಮಾತು ಕೇಳುತ್ತಿದ್ದಲ್ಲಿ ಶ್ರೀ ಚಂದ್ರಶೇಖರರಿಗೆ ಮಂತ್ರಿಮಂಡಲದಿಂದ ಅರ್ಧಚಂದ್ರ ಪ್ರಯೋಗ ನಡೆಸಿಬಿಡುತ್ತಿದ್ದರು.

ಹಾಗಿದ್ದರೂ ಡಾ|| ಚಂದ್ರಶೇಖರರವರು ಧೈರ್ಯದಿಂದ ಭಾರತೀಕರಣದ (ಅಥವಾ ಇಂಡೀಕರಣ) ಕುರಿತು ಹೇಳಿದ್ದಾರೆ. ಇಲ್ಲಿಯ ಜನರು ತಾವು ಇಂಡಿಯನರೆಂದು [ಇಂದಿನ ಇಂಡಿಯಾವೆಂದರೆ ಭಾರತವೆಂದಾದಲ್ಲಿ ಇಂಡಿಯನರೆಂದರೆ ಭಾರತೀಯರಾರಬೇಕೆಂಬ ಸವಿಚಾರ] ತಿಳಿದುಕೊಳ್ಳಬೇಕಾದಲ್ಲಿ ಅದಕ್ಕಿರುವದೊಂದೇ ಉಪಾಯ—ಅದುವೇ ಕಲಬೆರಿಕೆ ಕಲ್ಯಾಣ ಅಥವಾ ಮಿಶ್ರ ಮದುವೆ (ವಿವಿಧ ವಿವಾಹ?). ಇದುವೇ ಡಾ|| ಚಂದ್ರಶೇಖರರು ತೋರಿಸಿರುವ ದಾರಿ. ಇಲ್ಲಿಂದ ಜನರು ಇವನ್ನು [ಇಪ್ಪತ್ತೆರಡು ವರ್ಷಗಳ ಒಂದೇ ಪಕ್ಷದ ಆಳ್ವಿಕೆಯಲ್ಲೂ] ತಾವು ಭಾರತೀಯರೆಂದು ತಿಳಿದುಕೊಂಡಿಲ್ಲವೆಂಬುದು ಡಾ|| ಚಂದ್ರಶೇಖರರವರ ಮಾತಿನಿಂದ ಸ್ಪಷ್ಟವಾಗುತ್ತದೆ. ಅಂದರೆ ಅವರೂ ಭಾರತೀಯ ಜನಸಂಘದವರಂತೆ 'ಇಂಡಿಯನೈಸೇಶನ್' (ಭಾರತೀಕರಣ) ಘೋಷ ಹಾಕುತ್ತಿದ್ದಾರೆಂದಾಯಿತು.

ಪಂಕಿವಾದಿ ಲೂಪ್ ಶೇಖರರವರೂ ಮಿಶ್ರ ವಿವಾಹದಿಂದ (ಮಿಶ್ರ ಲಿಂಗ್ಸ್?) ಇಂಡಿಯನ್ (ಒಂದೋ, ಹಲವೋ?) ಹುಟ್ಟುತ್ತಾರೆಂದು ಘಂಟಾ ಘೋಷವಾಗಿ ಎಷ್ಟು (ಯಾರದ?) ಹೇಳುತ್ತಿದ್ದಾರೆ. ಮಂಕಿಧಾರಣೆಯಿಂದ ಗರ್ಭಧಾರಣೆ ಇಲ್ಲದನೇ ಭಾವನೆ ಬರುತ್ತದೆ. ಐಕ್ಯದ ಕಲ್ಪನಾ ಶಿಶು ಅದೆಷ್ಟು ಚೆಂದ! —ಅಮಾವಾಸ್ಯೆಯ ಚಂದ್ರ! ('ನ್ಯೂ-ಹೌಸ್-ಮೂನ್-ಚಂದ್ರ'). ಅದರ ಶೇಖರಣೆಯೇ ಇಂದು ನಡೆಯುತ್ತಿದೆ. ಇವು ಇಂದಿರೆಯ ಸಚಿವ ಸಂಪುಟದಲ್ಲಿರುವ ಚಂದ್ರಶೇಖರರವರು ದಿಲ್ಲಿ ಅಧಿಕಾರ ಆಸನದಿಂದ ಬಾರಿಸುತ್ತಿರುವ ಬಂಬಡ.

ಅಲ್ಲಿ ಹಿಮಾಲಯದ ತುತ್ತತುದಿಯಿಂದ ಇಲ್ಲಿ ಕನ್ಯಾಕುಮಾರಿಗೆ ಕೇಳಿಬರುತ್ತಿರುವ ಆ ಚಂದ್ರಶೇಖರನ, ಗಂಗಾಧರನ; ಪರಮೇಶ್ವರನ ಡಮರಿನ ನಾದ—ಲಿಂಗಗಳ ಐಕ್ಯದಿಂದ, ಭೇದದಿಂದ, ವಿಲಾಸದಿಂದ, ಘೋಷಣೆಗಳಿಂದ ಬರುವಂತಹದ್ದಲ್ಲ ಭಾರತೀಯತೆ. ಅದಿಲ್ಲಿಯ ಮಣ್ಣಿನಲ್ಲಿ, ನೀರಿನಲ್ಲಿ, ವಾಯುವಿನಲ್ಲಿ ಸಹಜವಾಗಿಯೇ ಇದೆ. ಈ ನಾಡ ಭಾರತೀಯತೆ ಇದ್ದಿದೆ. ಇದು ಅವರ ಮಾತೃಭೂಮಿ ಇದೆ. ಅವರ ಅವಹೇಳನೆ ಅಸಹನೀಯವೇ ಅಹುದು. ಆದರೆ ಚಂದ್ರಿಯನ್ನು ಚರಂಡಿಗೆಸೆದು ಅಮರು ಆಗಿರುವ ಕಲ್ಪನಾ ಭಾರತೀಯತೆಯ ಮೃಗಜಲದ, ಮರೀಚಿಕೆ ಹಿಂದುಗಡೆ ಅದೇತಕ್ಕೆ ಓಡಬೇಕು? ಶುದ್ಧ ಬೆಣ್ಣೆ ಇರುವಾಗ ಕೊಬ್ಬಿನ ಕೃತಕ ತುಪ್ಪಕ್ಕೆ ಆಶೆಪಡುವದು ಸರಿ ಏನ? ಕಿತ್ತೊಗೆಯಬೇಕು, ಇಂದು ಭಾರತೀಯತೆಗೆ ಹಾಕಿರುವ ಮಂಕುಬೂದಿಯನ್ನು. ಕೊಂಡುಕೊಳ್ಳಿರೋ ಈ ಭಾರತೀಯತೆಯ ಕಲ್ಪನೆ ಸಕ್ಕರೆಯನ್ನು. ಇದನ್ನು ಅದ್ಯಾವ ಪರಕೀಯರೂ ಹಾಗೂ ಗುಲಾಮಿತನದ ಇರುವೆಯೂ ತಿನ್ನದು, ತಪ್ಪಿಸಲಾಗದ ತೆರಿಗೆ ಅದಕ್ಕಿಲ್ಲ. ರಾಷ್ಟ್ರೈಕ್ಯಕ್ಕಿರುವ ದಾರಿ ಇದೊಂದೇ. ಅದನ್ನೇ ಅಮರನಾಥ ಅಮೃತಹಸ್ತದಿಂದ ತೋರಿಸುತ್ತಿದ್ದಾನೆ; ನಾವೆಲ್ಲರೂ ಅದನ್ನು ಕಾಪಾಡಬೇಕೆಂದು ಕನ್ಯಾಕುಮಾರಿಯಲ್ಲಿ ನಂದಾದೀಪ ಸದಾ ಉರಿಯುತ್ತಿದೆ.

— ಶಿವಶಂಕರ

ಸಾಂಚಿಯ ಸರಪಂಚನ ಸಹಾಯ

ಸಾಂಚಿಯ ಹೆಸರು ಗತಕಾಲದ ಚಿತ್ರ ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಸ್ತೂಪದ ಭಗ್ನಾವಶೇಷ, ಬೌದ್ಧವಿಹಾರ, ಕ್ರಿ. ಪೂ. 3ನೇ ಶತಮಾನದ ನಾಗರಿಕತೆ—ಈ ಪ್ರಾಚೀನ ಪರಂಪರೆಯ ನೆರಳಿನಲ್ಲಿ ಸಾಂಚಿಯ ಜೀವನ ಸಾಗುತ್ತಿದೆ.

ಪ್ರಾಚೀನ ಭಗ್ನಾವಶೇಷವನ್ನೊಳಗೊಂಡ ಶಿಲೆಗಳ ಉನ್ನತ ದಿಣ್ಣೆಯ ಪಾದದಲ್ಲಿ ಸಾಂಚಿ ಗ್ರಾಮವಿದೆ. ಇಲ್ಲಿನ ಜನಸಂಖ್ಯೆ 600, ಇಲ್ಲೊಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಈ ಕೇಂದ್ರ ಸಾಂಚಿ ಘಟಕದ 230 ಗ್ರಾಮಗಳಿಗೆ ಸೇವೆ ಸಲ್ಲಿಸುತ್ತಿದೆ.

ಸಾಂಚಿಯ ಗ್ರಾಮಸ್ಥರು ಬಹುತೇಕ ಬೇಸಾಯಗಾರರು. ಇಲ್ಲಿನ ಭೂಮಿಯಲ್ಲಿ ಗೋಧಿ ಮತ್ತು ಕಾಳುಗಳ ಸಮೃದ್ಧಿ ಬೆಳೆ ಸಿಗುತ್ತದೆ. ಸಾಂಚಿ ಆಧುನಿಕ ಯುಗದೊಂದಿಗೆ ಸಮನಾಗಿ ನಡೆಯುತ್ತಿದೆ. ಇಲ್ಲಿ ಹಸಿರು ಕ್ರಾಂತಿ ಸಫಲವಾದಂತೆಯೇ ಕುಟುಂಬಯೋಜನಾ ಕಾರ್ಯವೂ ಪ್ರಗತಿ ಸಾಧಿಸಿದೆ.

ಈಗ ಕೆಲವು ತಿಂಗಳ ಹಿಂದೆ, ಏಳು ಮಕ್ಕಳ ತಂದೆಯೂ ಸಾಂಚಿಯ ಸರಪಂಚನೂ ಆದ ಗಂಭೀರ ಸಿಂಗನನ್ನು ಸ್ಥಳೀಯ ವೈದ್ಯರು ಸಂತತಿ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಗ್ರಾಮದ ನಾಯಕನಾದ ಗಂಭೀರಸಿಂಗ್ ಇಂದು ಕುಟುಂಬ ಯೋಜನೆಯ ಅತ್ಯುತ್ತಮ ಪ್ರೋತ್ಸಾಹಕರಾಗಿದ್ದಾರೆ. ಆತ ಗ್ರಾಮದ ಪ್ರತಿ ಮನೆಗೂ ಕುಟುಂಬಯೋಜನೆಯ ಸಂದೇಶ ಮುಟ್ಟಿಸಿದ್ದಾನೆ. ಗಂಭೀರಸಿಂಗ್ ಸಾಂಚಿ ಗ್ರಾಮದ 50 ಜನರು ಸಂತತಿ ನಿರೋಧ ಚಿಕಿತ್ಸೆಗೊಳಗಾಗುವಂತೆ, ಅಲ್ಲಿನ ಗ್ರಾಮ ಪಂಚಾಯತಿ ಪ್ರದೇಶದ ನೂರು ಜ

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಶ್ರೀ ಪುರಂದರ ದಾಸರು ತೋರಿದ ದಾರಿ

ಲೇಖಕರು: ಶ್ರೀ ಸಿ. ಎಸ್. ನಾಗರಾಜ್.

ಹಿಂದೊಮ್ಮೆ ವ್ಯಾಸರಾಯರೇ "ದಾಸರೆಂದರೆ ಪುರಂದರದಾಸರಯ್ಯ!" ಎಂದಿದ್ದರಂತೆ. ಹಾಗೆಂದ ಮೇಲೆ ಪುರಂದರ ದಾಸರ ವಿಷಯದಲ್ಲಿ ನಾವು ಏನು ಹೇಳಿದರೂ ಅದು ಅಲ್ಪವೆಂದೇ ನನ್ನ ಭಾವನೆ.

ಜೀವನವೆಂದರೇನು? ಜೀವನದ ಆದರ್ಶ ಗುರಿ ಯಾವುದು? ಮಾನವ ಸಮಾಜದಲ್ಲಿ ಹೇಗೆ ಜೀವಿಸಬೇಕು? ಮುಕ್ತಿ ಹೊಂದಲು ಮನುಷ್ಯ ಅನುಸರಿಸಬೇಕಾದ ಮಾರ್ಗಗಳಾವುವು?........ಇತ್ಯಾದಿಗಳಿಗೆ ಉತ್ತರವನ್ನು ತಿಳಿಗನ್ನಡದಲ್ಲಿ, ಕೀರ್ತನಾರೂಪದಲ್ಲಿ ರಚಿಸಿ, ಹಾಡಿ, ಪಂಡಿತ-ಪಾಮರರೀರ್ವರಿಗೂ ಸುಲಭದಲ್ಲಿ ಅರ್ಥವಾಗುವಂತೆ ಉಪದೇಶ ನೀಡಿ, ದಾಸಕೂಟದಲ್ಲೇ ಕಿರೀಟಪ್ರಾಯರಾದವರೇ ಶ್ರೀ........ಪುರಂದರದಾಸರು. ವ್ಯಾಸಕೂಟದ ಪ್ರಮುಖನೇಕರು ಸಂಸ್ಕೃತದಲ್ಲಿ ಮಧ್ವಾಚಾರ್ಯರ ತತ್ತ್ವೋಪದೇಶ ಮಾಡಿದರೆ ಅಚ್ಚಕನ್ನಡದಲ್ಲಿ ಅವನ್ನು ಸಾಮಾನ್ಯರಿಗೂ ತಿಳಿಯುವಂತೆ ಹಾಡಿ ಹೊಗಳಿದವರೇ ಶ್ರೀ ಪುರಂದರದಾಸರು.

ಬದುಕಿನ ಹಿರಿಮೆ, ಹುಟ್ಟಿನಿಂದ ಹಿಡಿದು ಬಾಳಿನ ವರೆಗೆ ಆಗಬೇಕಾಗಿರುವ ಸುಧಾರಣೆಗಳು, ಹಿತೋಕ್ತಿಗಳನ್ನು ಹೃದಯಕ್ಕೆ ಹಿಡಿಯುವಂತೆ ತಿಳಿಸುವ ಬಗೆ—ಮುಂತಾದವುಗಳಿಗೆ ತಮ್ಮ ಅಮೂಲ್ಯ ಅನುಭವದ ಮೂಲಕ ಕೀರ್ತನಾರೂಪದಲ್ಲಿ ಉತ್ತರವಿತ್ತಿದ್ದಾರೆ.

ಅತ್ಯಲ್ಪ ಬುದ್ಧಿಯನ್ನು ಗಳಿಸಿ, ಗುರುವಿನಿಂದ ಆಶೀರ್ವಾದಿಸಲ್ಪಟ್ಟು, ಅನಂತರ ಲೋಕಕಲ್ಯಾಣದ ದೀಕ್ಷೆ ತೊಟ್ಟು ಹೊರಟ ಪುರಂದರ ದಾಸರ ನುಡಿ ತಿಳಿಯಾಗಿರುವುದರ ಜೊತೆಗೆ ಪರಿಶುದ್ಧವಾದುದು. ದಾಸರು ನಮಗೆ ತೋರಿರುವ ಜೀವನದ ಆದರ್ಶ ಅತ್ಯಂತ ಹಿರಿದು. ಇವರ ಉಪದೇಶದ ವಿಧಾನವೂ ಬಹು ವಿಶಿಷ್ಟವಾದುದು. ಪುರಂದರದಾಸರು ಸ್ವಮತ ಪ್ರಚಾರಕ್ಕೆ ಕೈಕಟ್ಟಿ ದುಡಿಯುತ್ತಿದ್ದರೂ ಪರರು ಮನಸಿನಲ್ಲಿಯೂ ಅನ್ಯಮತ ತೆಗಳಿದವರಲ್ಲ.

ಬೆಲೆಯುಳ್ಳದ್ದೆಂದು ಇಂದು ನಾವು ಎಣಿಸಿದ ವಸ್ತುಗಳು, ಅನುಭವವಾದಂತೆಲ್ಲಾ ಬೆಲೆರಹಿತವಾಗಿ ತೋರುವುದು ಸಹಜ. ಜೀವನದಲ್ಲಿ ಎಲ್ಲವೂ ಹಾಗೆಯೇ! ಎಷ್ಟೇ ಹಣವಿದ್ದರೂ, ಅಧಿಕಾರವಿದ್ದರೂ, ಎಂದಾದರೊಂದು ದಿನ ಅವೆಲ್ಲವನ್ನೂ ತೊರೆದು ಮಣ್ಣಲ್ಲಿ ಮಣ್ಣಾಗಿ, ಮುಗಿಲಲ್ಲಿ ಹೊಗೆಯಾಗಿ ಹೋಗುವ ನಮ್ಮ ಈ ಶರೀರ ಶಾಶ್ವತವಾದದಲ್ಲವೆಂದು ದಾಸರು ಬಗೆಬಗೆಯಾಗಿ ಹೇಳಿದ್ದಾರೆ.

ಹೀಗೆ ನಾವು ಬೆಲೆ ಕಟ್ಟಿ ಸಂಗ್ರಹಿಸಿದ ಈ ವಸ್ತುಗಳ ಬೆಲೆಗಿಂತಲೂ ಮಿಗಿಲಾದ ವಸ್ತುವೊಂದಿದೆ ಎಂದು ದಾಸರು ತಿಳಿಸಿದ್ದಾರೆ. ಅದೇ 'ಜ್ಞಾನ.' ಅನುಭವ ಹೆಚ್ಚಿದಂತೆಲ್ಲಾ ಜ್ಞಾನವೊಂದೇ ಅತಿ ಬೆಲೆಯುಳ್ಳ ವಸ್ತುವೆಂದು ಅರಿವಾಗುತ್ತದೆ. ಜ್ಞಾನದ ಮಾರ್ಗ ತಿಳಿದಂತೆಲ್ಲಾ ಅದು ಸಮುದ್ರವೆಂಬುದೂ ಅರಿವಾಗುತ್ತದೆ.

ಬೆಳಕಿನ ಹಿನ್ನಲೆಯಲ್ಲಿಯೇ ಕತ್ತಲೆಯೂ ಇರುವಂತೆ ಪುರಂದರ ದಾಸರ ವೈಯಕ್ತಿಕ ಜೀವನದಲ್ಲೂ ಸುಖದ ಹಿಂದೆಯೇ ಶೋಕವೂ ಇತ್ತು. ಬಾಲ್ಯ ಹಾಗೂ ಯೌವ್ವನಗಳಲ್ಲಿ ಸುಖದ ರುಚಿಯನ್ನುಂಡ ದಾಸರಿಗೆ ಮಧ್ಯ ಹಾಗೂ ಮುಪ್ಪಿನಲ್ಲಿ ದುಃಖದ ಕಹಿಯೂ ಕಾದಿತ್ತು.

ವಿದ್ಯಾರ್ಥಿ ಪರೀಕ್ಷೆಯಲ್ಲಿ ತೇರ್ಗಡೆ ಆಗಲು ಅನ್ನ ಆಹಾರಾದಿಗಳನ್ನು ತೊರೆದು ವ್ಯಾಸಂಗ ಮಾಡುತ್ತಾನೆ. ಅಮೂಲ್ಯ ವಸ್ತುವೊಂದರ ಸಂಶೋಧನೆಗಾಗಿ ವಿಜ್ಞಾನಿ ಬಾಹ್ಯ ಪ್ರಪಂಚದ ಪರಿವೆಯನ್ನೇ ಮರೆತು ಶೋಧನೆಗಾಗಿ ಪ್ರಯಾಸ ಪಡುತ್ತಾನೆ. ಹೀಗೆಯೇ ಎಲ್ಲರೂ ತಮ್ಮ ತಮ್ಮ ಐಹಿಕ ಸಾಧನಗಳಲ್ಲಿ ಮುಳುಗಿರುತ್ತಾರೆ. ಆದರೆ ಜೀವನದ ಸಫಲತೆಯನ್ನು ಕೊಡುವ ನೀತಿ, ನಡತೆ, ಪ್ರಾಮಾಣಿಕತೆ, ಶೀಲತೆ, ದೈವಭಕ್ತಿ, ಸಭ್ಯತೆ, ಜ್ಞಾನ, ಮುಕ್ತಿ, ಮುಂತಾದವುಗಳಿಗೆ ಪ್ರಯತ್ನಿಸುವವರು ಬಹು ವಿರಳ. ಆದರೆ ಪುರಂದರದಾಸರ ವ್ಯಕ್ತಿತ್ವದಲ್ಲಿ ನಾವು ಇವೆಲ್ಲವನ್ನೂ ಕಾಣಬಹುದು. ಆದ್ದರಿಂದಲೇ ನಾವು ಅವರನ್ನು ದಾಸಕೂಟದ 'ಚಕ್ರವರ್ತಿ'ಯನ್ನಾಗಿ ಮಾಡಿದ್ದೇವಲ್ಲವೆ!

ಲೋಕ ಕಲ್ಯಾಣಕ್ಕೆ ಹೊರಟ ದಾಸರಿಗೆ ಬಾಳಿನ ನಾನಾ ಮುಖಗಳು ಗೋಚರವಾಗುವುದರಲ್ಲಿ ಆಶ್ಚರ್ಯವೇನಿಲ್ಲ. ಜೀವನದ ಸಫಲತೆಗೆ ಮನುಷ್ಯ ಜೀವನದ ಮಹತ್ವ ತಿಳಿಸುವ ಅವರ ಹಂಬಲ ಹಾಡಾಗಿ ಮೂಡಿದುದು ನ್ಯಾಯವೇ ಆಗಿದೆ. "ಮಾನವ ಜನ್ಮ ದೊಡ್ಡದು, ಇದನು ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂದು ಬಹಳ ಹಿಂದೆಯೇ ಅವರು ನುಡಿದಿದ್ದರು. ಅದರ ಸತ್ಯತೆಯನ್ನು ಇಂದಿಗೂ ಕಾಣದ ಆವೆಷ್ಟು ಮೂಢರು! "ಎಲ್ಲವೂ ಹುಸಿ, ಮನುಜನಾಗಿರುವ ನೀನಿಗಲಾದರೂ ನೆನೆ ಪುರಂದರ ವಿಠಲನ" ಎಂದು ಹೇಳಿದ್ದರು. "ಪರಮಾತ್ಮನನ್ನು ಮನದಲ್ಲೊಂದು ಬಾರಿ ನೆನೆಸಿದರೆ ಮುಕ್ತಿಯು ಒಂದೇ ಗೇಣು" ಎಂದೂ ಹೇಳಿದ್ದರು. ಎಂತಹ ಗಹನವಾದ ವಿಷಯವಿದು. "ಮಾತೇ ಮಾಣಿಕ್ಯವೆಂಬಂತೆ" ಮಾತಿನ ಬೆಲೆ ಹಿರಿದಾದುದು. ನುಡಿದರೆ ಮುತ್ತು ದುರಿದಂತಿರಲಿ ಎಂದು ಹಿರಿಯರು ಹೇಳಿದುದನ್ನು ನಾವೆಂದಿಗೂ ಮರೆಯಲೇ ಬಾರದು. ಕೆಟ್ಟನುಡಿಗಳನ್ನಾಡುವ ನಮ್ಮ ನಾಲಿಗೆಯನ್ನು ಕುರಿತು ದಾಸರು 'ಆಚಾರವಿಲ್ಲದ ನಾಲಗೆ; ನಿನ್ನ ನೀಚ ಬುದ್ಧಿಯ ಬಿಡು ನಾಲಗೆ'—ಎಂಬುದಾಗಿಯೂ ಹೇಳಿದ್ದಾರೆ.

ಈ ಪ್ರಕಾರವಾಗಿ ಜೀವನ್ಮುಕ್ತಿಯ ಬಗ್ಗೆ ಹೇಳುತ್ತ ದಾಸರು ಹೆಣ್ಣು, ಹೊನ್ನು ಹಾಗೂ ಮಣ್ಣುಗಳ ಬಗ್ಗೆಯೂ ವಿಚಾರ ಪೂರಿತ ನುಡಿಗಳನ್ನಾಡಿದ್ದಾರೆ "ಆವ ಹಿತವಾವ ನಿನಗೆ ಈ ಮೂವರೊಳಗೆ! ನಾರಿಯೋ, ಧಾರುಣಿಯೋ, ಬಹು ಧನದ ಸಿರಿಯೋ?" ಎಂದೂ ಪ್ರಶ್ನೆ ಹಾಕಿದ್ದಾರೆ. ಪುರಂದರದಾಸರ ದೃಷ್ಟಿಯಲ್ಲಿ ಮಾನವನಿಗೆ ಈ ಮೂರೂ ಅತ್ಯವಶ್ಯಕವಾದುದಾದರೂ ಎಲ್ಲೆಮೀರಿದಾಗ ಬಹು ಅಪಾಯಕಾರಿ.

ಮುತ್ತೈದೆಯೋರ್ವಳ ಕಾಲನ್ನು ಕಂಡ ಕೂಡಲೇ ಆಕೆಯು ಕಾಲುಂಗುರವು ಹೇಗೆ ಆವಳು ವಿವಾಹಿತ ಸ್ತ್ರೀ ಎಂದು ಪ್ರಚುರಪಡಿಸುತ್ತದೆಯೋ ಹಾಗೆಯೇ ಇತರರು ನಮ್ಮ ವ್ಯಕ್ತಿತ್ವವನ್ನು ಕಂಡಕೂಡಲೇ ನಮ್ಮ ರೀತಿ, ನೀತಿ, ನಡತೆ ಮುಂತಾದ ವಿವರಗಳನ್ನು ಕಂಡುಹಿಡಿವ. ಪಿಸ.ತ್ತಿ... ಇದರಿಂದ ನಮ್ಮ ಅಂತರಂಗ ಅರಿಯಲು ಅವರಿಗೆ ಕಷ್ಟವಾಗುವುದಿಲ್ಲ. ಹೀಗೆ ಪುರಂದರ ದಾಸರು ಹೆಣ್ಣು, ಹೊನ್ನು ಮತ್ತು ಮಣ್ಣುಗಳ ಬಗ್ಗೆ ನಮ್ಮ ದೃಷ್ಟಿ ಹೇಗಿರಬೇಕೆಂದು ಒತ್ತಿಒತ್ತಿ ಹೇಳಿದ್ದಾರೆ.

"ಅಧಿಕಾರವಿದ್ದಾಗ ಅರಸನಿಗೆ ಅನ್ನ ಹಾಕಿದರೆ ಆರು ವರ್ಷ ಸಲಹುವ ಡಿಯರು" ಎಂಬ ಹಿರಿಯರ ನುಡಿಯೊಂದಿದೆ. ದಾಸರೂ ಸಹ 'ಸೇವೆ'ಯ ಬಗ್ಗೆ ನಾನಾ ರೀತಿಯ ಉಪದೇಶಗಳನ್ನು ನೀಡಿದ್ದಾರೆ. ಮನುಷ್ಯ ಕೇವಲ ತನ್ನ ಬಗ್ಗೆ ಮಾತ್ರ ಚಿಂತಿಸದೆ ಅಥವಾ ತನಗಿರುವ ಐಹಿಕ ಸಂಪತ್ತುಗಳನ್ನು ತಾನು ಮಾತ್ರ ಉಪಯೋಗಿಸದೆ ಇತರರಿಗೂ ಉಪಯೋಗಿಸಿ ಬಾಳಬೇಕೆಂದು ಪುರಂದರದಾಸರ ಆಸೆ. ಹುಟ್ಟಿರೂಪಿತವಾದ ಪ್ರತಿಯೊಂದು ವಸ್ತುವಿಗೂ ನಾಶವಿದ್ದೇ ಇದೆ. ಇದು ನಿಸರ್ಗದ ನಿಯಮವಲ್ಲವೆ! ಇಂದು ಹುಟ್ಟಿದ ಮನುಷ್ಯನೂ ಮುಂದೆ ಒಂದು ದಿನ ಕಾಲನ ಕರೆಯನ್ನು ತಿರಸ್ಕರಿಸಲಾಗುವುದಿಲ್ಲ. ಮನುಷ್ಯನ ಜೀವಿತ ಕಾಲ ಬಹು ಅತ್ಯಲ್ಪ. ನಮ್ಮ ಜೀವನದಲ್ಲಿ ಒಂದೊಂದು ದಿನ ಕಳೆದರೆ ನಾವು ವೃದ್ಧಾಪ್ಯ ಮುಖಿಂಗಳು ದಿನಗಳು ಸನಿಹದಲ್ಲಿ ಬರುತ್ತಿರುವಂತೆ ತೋರುವುದು. ಮನುಷ್ಯ ತನಗಿರುವ ಅಲ್ಪ ಕಾಲದಲ್ಲಿಯೇ ಏನಾದರೂ ಉಪಯುಕ್ತ ಕಾರ್ಯಗಳನ್ನು ಮಾಡುತ್ತಿದ್ದಲ್ಲಿ ಮುಂದೆ ಅವುಗಳೇ ಅವನನ್ನು ಕಾಯುತ್ತವೆ. ವ್ಯರ್ಥವಾದ ಜೀವನದಲ್ಲಿ ಏನೂ ಸುಖವಿರುವುದಿಲ್ಲವೆಂದು ದಾಸರು ತಿಳಿಸಿದ್ದಾರಲ್ಲದೆ, ಜೀವನದಲ್ಲಿ ಜಿಗುಪ್ಸೆ ಹೊಂದಿದ ಅನೇಕ ಜನರಿಗೆ "ಈಸಬೇಕು ಇದ್ದು ಜಯಿಸಬೇಕು." ಎಂದೂ ಸಮಾಧಾನ ಹೇಳಿದ್ದಾರೆ. (ಸಶೇಷ)

ನರು ಸ್ಥಳೀಯ ವೈದ್ಯಶಾಲೆಗೆ ಶಸ್ತ್ರಚಿಕಿತ್ಸೆಗೆ ಹೋಗುವಂತೆ ಶ್ರದ್ಧೆಯಿಂದ ದುಡಿದಿದ್ದಾನೆ. ಕಳೆದ ಡಿಸೆಂಬರ ಮಾಸದಲ್ಲಿ ಸಾಂಚಿ ಗ್ರಾಮದಲ್ಲಿ ಪ್ರಪ್ರಥಮವಾಗಿ ಆರು ಮಹಿಳೆಯರು ಸಂತತಿ ನಿರೋಧ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರು.

ಇಂತಹ ಗ್ರಾಮಸ್ಥಾಯಕರ ಸಹಾಯ ಸಹಕಾರಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಹಾಗೂ ಅವರ ಸಿಬ್ಬಂದಿ ಸ್ಫೂರ್ತಿ ಪಡೆದು ಪ್ರತಿಗ್ರಾಮದಲ್ಲಿರುವ ಪ್ರತಿ ಮನೆಗೂ ಭೇಟಿ ನೀಡುತ್ತಾರೆ ಕಳೆದ ಡಿಸೆಂಬರ ಮಾಸದಲ್ಲಿ ಮಧ್ಯ ಪ್ರದೇಶದಲ್ಲಿ ಕುಟುಂಬ ಯೋಜನಾ ಚಳುವಳಿ ನಡೆಸಿದಾಗ ಸಾಂಚಿ ಆರೋಗ್ಯ ಕೇಂದ್ರದಲ್ಲಿ 14 ವೆಸಕ್ಟಮಿ, ಶಸ್ತ್ರಚಿಕಿತ್ಸೆಯನ್ನೂ 10 ಮಹಿಳೆಯರಿಗೆ ವಂಕಿ ಧಾರಣೆಯನ್ನೂ ಮಾಡಲಾಯಿತು.

ಈ ವರ್ಷದ ಜನವರಿಯ ಮೊದಲ ವಾರದಲ್ಲಿ ಸಾಂಚಿ ಗ್ರಾಮದಲ್ಲಿ ಏಳು ವೆಸಕ್ಟಮಿ, ಒಂದು ಟ್ಯುಬೆಕ್ಟಮಿ ಚಿಕಿತ್ಸೆಯನ್ನೂ ಐದು ಮಹಿಳೆಯರಿಗೆ ವಂಕಿಧಾರಣೆಯನ್ನೂ ಮಾಡಲಾಯಿತು. ಸರಪಂಚ ಗಂಭೀರ ಸಿಂಗ್ ಆರೋಗ್ಯ ಕೇಂದ್ರಕ್ಕೆ ನಿತ್ಯವೂ ಭೇಟಿ ನೀಡುತ್ತಾನೆ. ಅಲ್ಲಿನ ಕುಟುಂಬಯೋಜನಾ ಕಾರ್ಯ ಪ್ರಗತಿಯ ಬಗ್ಗೆ ಸದಾ ಕಣ್ಣಿಟ್ಟಿರುತ್ತಾನೆ. ಗಂಭೀರ ಸಿಂಗ್ ಮನವೊಲಿಕೆ ಕಾರ್ಯದಲ್ಲಿ ವೈದ್ಯರಿಗೆ ಸಹಾಯಕನಾಗಿದ್ದಾನೆ.

ದಿನಂಪ್ರತಿ 25 ಪೈಸೆಗಳ

ಬೀಜಾರೋಪಣ ಮಾಡಿರಿ..........



ಪಿಗ್ಮಿ ಠೇವಣಿ ಯೋಜನೆಯನ್ವಯ

ಏಳು ವರ್ಷಗಳ ನಂತರ

ರೂಪಾಯಿ 700/- ಪಡೆಯಿರಿ.

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗೆ

ಪ್ರತಿಯೊರ್ವನ ಬ್ಯಾಂಕು

ಸಿಂಡಿಕೇಟ್ ಬ್ಯಾಂಕ್

(ಭಾರತ ಸರಕಾರದ ಆಡಳಿತೆಗೆ ಒಳಪಟ್ಟುದು)

ಪ್ರಧಾನ ಕಾರ್ಯಾಲಯ: ಮಣಿಪಾಲ

ಟಿ. ಎ. ಪೈ, ಕಸ್ಟೋಡಿಯನ್

ಗೇಹರಾಜ್ಯದಲ್ಲಿ

ತುಂಬಿದ ಚೆಂಡು ನೆಗೆಯಬಾರದೆ?

"ಅಲ್ರಿ, ಇದೇನು ಬಂತೂಂತ ?"

"ಯಾವುದು ?"

"ನೋಡಿ, ಇಸ್ರೇಲಿಗೆ ಅಮೇರಿಕದ ಶಸ್ತ್ರಾಸ್ತ್ರಗಳ ಸರಬರಾಜು ಆಮತ್ತಂತೆ."

'ಅಯ್ಯೋ, ಅದ್ರಲ್ಲಿ ವಿಶೇಷವೇನು ಬಂತೆ ?"

"ಏನೂ ಇಲ್ಲಾಂತೀರಾ ?"

"ಅಲ್ರೀ, ಅದು ಸಹಜವೇ ಅಪ್ಪ.'

"ಯಾಕೆ ?"

"ಅಮೇರಿಕೆಗೆ ಇಸ್ರಾಯೇಲ್ ಮೇಲೆ ಪ್ರೀತಿ ಮಮತೆ."

"ಅದಕ್ಕೆ ?"

'ಅದಕ್ಕೆ ಐಗುಪ್ತದ ವಿರುದ್ಧ ಇಸ್ರಾಯೇಲನ್ನು ಎತ್ತಿಕಟ್ಟುವುದು.'

'ಅಂದರೆ, ಯುದ್ಧಕ್ಕೆ ಉತ್ತೇಜನ ನೀಡುವುದು...'

'ಛೆ, ಛೆ, ಹಾಗನ್ನಬಾರದು. ಕಮ್ಯುನಿಸ್ಟ್ ಆಕ್ರಮಣದ ವಿರುದ್ಧ ಪಾಕಿಸ್ತಾನಕ್ಕೆ ಅಮೇರಿಕೆ ಶಸ್ತ್ರಾಸ್ತ್ರ ನೆರವು ನೀಡಿದಂತೆಯೇ ಕಮ್ಯುನಿಸ್ಟರ ಮೋಸಕ್ಕೆ ಬಲಿಯಾಯಿಯಂದ ಐಗುಪ್ತರು ಈ ನೆರವು ಇರಬಹುದು....'

"ಅಲ್ರಿ, ಪಾಕಿಸ್ತಾನ ಆ ಶಸ್ತ್ರಾಸ್ತ್ರಗಳನ್ನ ಭಾರತದ ಮೇಲೆಯೇ ಬಳಸಿತಲ್ಲ ?"

"ಹೌದು ಅದರೆ, ಇನ್ನು ಮುಂದೆ ಮತ್ತೊಂದು ಎಚ್ಚರಿಕೆ ನೀಡಿಯೇ ಆದಕ್ಕೆ ಸರಬರಾಜು. ಅದು ವರೆಗೆ ಕಂಡಿತಕ್ಕೂ ಇಲ್ಲ...."

"ಸಾಕು ಬಿಡೀಂದ್ರೆ, ಮಗುವಿಗೆ ಕುಡಿ ಕೆಂದು ಚಿಕ್ಕಿನ ಬಳಿ ಹಾಲಿಟ್ಟು ಹೋದರೆ ?'

'ಅದು ಚಿಕ್ಕಿನ ತಪ್ಪು'

"ಅಂದರೆ, ಇಟ್ಟವರು ನಿರ್ದೋಷಿಗಳು."

'ಹಾಗೆಯೇ ಸರಿ."

'ಅಂದರೆ, ಅಮೇರಿಕೆ ಮಾಡಿದ್ದು ನ್ಯಾಯಾನ್ನಿ....'

"ಅದೂ ನ್ಯಾಯವೇ. ರಷ್ಯ ಐಗುಪ್ತಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಿದ್ದು ನ್ಯಾಯ.'

"ಓ, ಅದೂ ಆಯಿತೂನ್ನಿ."

"ಆಗದೆ ಉಂಟೆ ? ರಷ್ಯ-ಅಮೇರಿಕೆಗಳಿಂದ ಐಗುಪ್ತ-ಇಸ್ರಾಯೇಲ್‌ಗಳು ಪರಿಪುಷ್ಟಗೊಂಡಿವೆ."

"ಅಂದರೆ, ಯುದ್ಧ ನಡೆಯಬಹುದು ನಡೆಯಬಹುದು...."

"ನಡೆಯಲಿ, ಯಾರು ಬೇಡಾಂತಾರೆ?"

"ಅಲ್ರಿ, ವಿಶ್ವಶಾಂತಿಯ ಮಹಾ ಕೈವಾರಿಗಳು"

'ಯಾರೆ ?'

'ಮತ್ಯಾರು, ರಷ್ಯ-ಅಮೇರಿಕೆ...."

'ನೋಡಪ್ಪ, ಅವು ಶುದ್ಧಾಂತಃಕರಣರು."

'ಯಾಕೆ ಹಾಗಂತೀರಾ ?"

'ಶಾಂತಿಗೆ ಅಹಿಂಸೆ ಮೂಲ; ಅಹಿಂಸೆಗೆ ತ್ಯಾಗ ಮೊದಲ ಮೆಟ್ಟಿಲು. ಅದಕ್ಕೆಂದೇ ಹಿಂದಿನ ಕಾಲದಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ ಕಾಡುಗಳಲ್ಲಿ ಋಷಿ-ಮುನಿಗಳು ಬಾಳುತ್ತಿದ್ದರು....."

"ಅದ್ರೆ, ಸಂಸಾರದಲ್ಲಿದ್ದುಕೊಂಡೇ ಇಂತಹ ತಪಸ್ಸಿಗೆಯ್ಯುವುದು ಎಷ್ಟೋ ಶ್ರೇಷ್ಠ."

"ಯಾಕೆ ಅಲ್ಲಾಂತಾರೆ? ನೀರಲ್ಲಿದ್ದೂ ನೀರು ಕುಡಿಯಬಾರದೆಂದರೆ ಆರಂಭದಲ್ಲಿ ಅಷ್ಟು ದಮನ ಶಕ್ತಿ ಎಲ್ಲಿಂದ ಬರಬೇಕು? ಭಗವಾನ್ ಬುದ್ಧ ಬುದ್ಧನಾದ ಮೇಲೆ, ತನ್ನ ಹೆಂಡತಿಯನ್ನೂ ಸನ್ಯಾಸಿನಿಯ ದಲ್ಲೇ ಇರಗೊಟ್ಟ."

"ಅದು ಸರೀನ್ನಿ. ಆಕೆಯೇ ಮೊದಲು ಕಾಲ ತೊಡಕಾಗಿದ್ದಳಲ್ಲ ?"

'ಹ್ವಾಂ.. ಫೂಟ್‌ಬಾಲ್ ನೆಗೆಯಬಾರದೆಂದಿದ್ದರೆ, ಅದಕ್ಕೆ ಗಾಳಿಯೇ ಹಾಕಬಾರದು. ತುಂಬಿದ ಚೆಂಡು ಪುಟನೆಗೆಯ ಬಾರದೆಂದರೆ ಹೇಗೆ ?"

"ಅದು ಸರೀನ್ನಿ. ರಷ್ಯ-ಅಮೇರಿಕೆಗಳು ಶಸ್ತ್ರಾಸ್ತ್ರ ಭಾರದಿಂದ ಪುಟನೆಗೆಯುತ್ತಿವೆ."

"ಹ್ವಾಂ, ಅವು ಹಾರಲೇಬೇಕು."

'ಅಥವಾ ಹಾರಾಡಿಸಲಾದರೂಬೇಕು."

"ಯಾರನ್ನು ?'

— ಚಿಂತೆ —

ಎಂಥಾ ದೂರಕಟ್ಟಲಿ ನಿನ್ನ,
ಓ ಚಿಂತೆ ? ಅಜ್ಞಗಳ ಕಂತೆ !
ಸುತ್ತು ಸುತ್ತಿ ಬರುವಿ
ಬಿಡಿಸಿದಷ್ಟು ಮತ್ತೆ
ಸುತ್ತಿಕೊಳ್ಳುವ ದಡ್ಡೊಲಿಯ ಹಾವೆ
ಯುಂತೆ !

ಬೆಲ್ಲ-ಹುಟ್ಟಿಯ ಮೇಲೆ
ಎಡೆ ಬಿಡದೆ ಧೀಂಕಿಡುವ
ಹೊಲಸು ನೊಣಗಳ ಹಿಂಡಿನಂತೆ
ದಿನದಿನಕ್ಕೂ ಏಕಿಂತು ಕಾಡುತಿರುವೆ?
ಕೊರೆವೆ ನೀ ಏಕೆ ಮಿದುಳನ್ನು
ಮೆಲ್ಲಮೆಲ್ಲನೆ ಮಾರಿ ಗೆದ್ದಲಿನಂತೆ
ಅರಿಗಳಿಗೆಗಾದರೂ ದೂರ ಸರಿ
ಕೊಂಚ ಕೊಡು ಶಾಂತಿ !
ಸ್ವಲ್ಪ ನಿದ್ದೆಯಾದರೂ ಗೈವೆನಂತೆ !

— ಕೆ.ವಿಷ್ಣು ಹೆಬ್ಬಾರ, ಮಾಧೂರು.

(ನಿಸ್) ಸ್ವಾರ್ಥ

ಗಾಂಧೀಜಿ ಹೆಸರಿಂದು ಸ್ವಾರ್ಥ
ಸಾಧಕರ ಸೊತ್ತು
ಸರಿಹದ್ದು ಗಾಂಧಿ ಸಾಧು ದಿಟದ
ಅನುಭವದ ಮುತ್ತು
ಗಾಂಧೀಜಿ ಹೆಸರಿನಲಿ ಪುಢಾರಿ
ತುಂಬುವನು ಜೇಬು
ಗಾಂಧೀ ಶಿಷ್ಯನುಪದೇಶ ಆತನಿಗೆ
ಕಹಿ ಸೇಬು

ಮತ್ತು

ನಾಡಿನಲಿ ಬಂದಿರುವ ಹೊಸ ತರಹ
ರೋಗ
ಆತ್ಮ ಸಾಕ್ಷಿಗನ ಗುಣವಾಗಿ ಹಾಕುವುದು
ರಾಗ
ಆತ ಹೇಳಿದ "ನಿನಗೆ ಆತ್ಮ ಇದೆಯೋ"?
ಈತ ಹಾಹಾಂದ ನನ್ನಾತ್ಮ ಮನೆಯಲ್ಲೆ
ಅಯ್ಯೋ !!

—ಮು. ಗೋ. ರಾವ್.

'ಏನು ಹೀಗೆ ನೋಡುತ್ತೀರಿ ?"
"ಏನೋಂತನ್ನೋದು ?'
"ಏನೂ ಅನ್ನ ಬೇಡಿ__'
"ಹ್ವಾಂ...."

—ಗೋರಾ.

ವಾರ್ಷಿಕೋತ್ಸವ

ಶಿರ್ವ ಸ್ಪೋರ್ಟ್ಸ್ ಯೂನಿಯನಿನ ವಾರ್ಷಿಕೋತ್ಸವವು ತಾ. 26.1.70ರಲ್ಲು ಡಾ. ಎಸ್. ಆರ್. ಉಳ್ಳಾಲರ ಅಧ್ಯಕ್ಷತೆಯಲ್ಲಿ ಸೈಂಟ್ ಮೇರಿಸ್ ಹಾಯರ್ ಸೆಕೆಂಡರಿ ಶಾಲೆಯ ಆವಾರದಲ್ಲಿ ವಿಜೃಂಭಣೆಯಿಂದ ಜರಗಿತು. ಯೂನಿಯನಿನ ಉಪಾಧ್ಯಕ್ಷ ಶ್ರೀ ಬಿ. ಜಯರಾಮ ಶೆಟ್ಟರು ಸ್ವಾಗತಿಸಿದ ನಂತರ ಯೂನಿಯನಿನ ಅಧ್ಯಕ್ಷ ಡಾ| ಕೆ. ಆರ್. ವೆಂಕಟಕೃಷ್ಣನವರು ಡಾ| ಉಳ್ಳಾಲರವರಿಗೆ ಯೂನಿಯನಿನ ಪರವಾಗಿ ಹೂವಿನ ಹಾರ ವನ್ನು ಅರ್ಪಿಸಿದರು. ಕಾರ್ಯದರ್ಶಿ ಶ್ರೀ ಬಿ. ಬಿ. ಶೆಟ್ಟರು ವರದಿಯನ್ನೂ ಶ್ರೀ ಸುಬ್ಬಯ ಹೆಗ್ಡೆಯವರು ಸಂದೇಶಗಳನ್ನೂ ಓದಿದರು.

ಅಧ್ಯಕ್ಷರು ಯೂನಿಯನಿನ ಕಾರ್ಯಕ್ರಮಗಳನ್ನು ಶ್ಲಾಘಿಸಿ ಮಾತಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಸಂಘದ ಸದಸ್ಯರಿಂದ ವಿವಿಧ ವಿನೋದಾವಳಿಗಳು ನಡೆದು ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಪೂರ್ವಾಹ್ನ ಧ್ವಜವಂದನೆ ಮತ್ತು ಕ್ರೀಡೋತ್ಸವದ ಉದ್ಘಾಟನೆಯು ಶ್ರೀ ಎಲ್. ಮೆಂಡೋನ್ಸರಿಂದ ನೆರವೇರಲ್ಪಟ್ಟಿತು.

ಯಕ್ಷಗಾನ

ಬೇಲಂಜಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾವೃಂದದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ ವಿರಚಿತ 'ಶಿವ ಪಂಚಾಕ್ಷರೀ ಮಹಿಮೆ' ಎಂಬ ಯಕ್ಷಗಾನ ತಾಳಮದ್ದಲೆಯು ಕಳೆದ ತಾ. 8ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಮುದಿಯಾರು ಶೀನಪ್ಪ ಗೌಡರ ಪತಿಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ವ. ಕೇಶವ, ಟಿ ಗೋಪಾಲಕೃಷ್ಣ ಭಟ್, ಡಾ| ವಿಶ್ವವಿನೋದ ಭಟ್, ಡಿ. ಗೋಪಾಲಕೃಷ್ಣ ಭಟ್, ಅಣ್ಣಯ ಗೌಡ, ನಾರಾಯಣ ನಾಯರ್ ಮಾಸ್ಟರ್, ಕೆ. ಅಣ್ಣಯ ಭಂಡಾರಿ, ವೆಂಕಪ್ಪ ಬಾಂಗೇಮಣ್ಣೂರ್, ಸಾಂತಪ್ಪ ಗೌಡ ಮಾಸ್ಟರ್, ರಾಮ ಪಾಟಾಳಿ ಎಂ. ಎಸ್. ಗೌಡ, ಕಲ್ಲಡ್ಕ ಬಾಬು ರೈ, ಸಾಂತಪ್ಪರೈ, ಲಕ್ಷ್ಮಣ ಗೌಡ, ಶ್ರೀಧರ ಗೌಡ ಮೊದಲಾದವರು ಭಾಗವಹಿಸಿದ್ದರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Exc 345/1969 O. S. 556/1962

ಸಂಕಪ್ಪ —Decree Holder

ಲೋಕಯ್ಯ ಪೂಜಾರಿ ಸಹಾ —J. Ds.

4 ಮಹಾಬಲ 5. ವೆಂಕಮ್ಮ — ಕಾವೇರಿ ಜಂಗ್ಲಿನ ಮಕ್ಕಳು.

ಮಂಗಳೂರು ತಾಲ್ಲೂ ದೇಲಂತಬೆಟ್ಟು ಗ್ರಾಮದ ಮುಂಡರ ಕಂಡ ಮನೆ ಎಂಬಲ್ಲಿರುವವರು.

ಸದ್ರಿ 8, 4ನೇ J. D. ಗಳಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ಸದ್ರಿ ಅಮಲ್ಜಾರಿಯಲ್ಲಿ ಡಿಕ್ರಿಯಲ್ಲಿ ಹಾಜರಾಟಕ್ಕೆ ನಿರ್ಧಯಿರುವ ಸ್ಥಿರಾಸ್ತಿಗಳನ್ನು ಲೋಲಂಗೆ ಅಪೇಕ್ಷಿಸಿ ಡಿಕ್ರಿದಾರರು ದಾಖಲು ಮಾಡಿದ ಸದ್ರಿ ಅಮಲ್ಜಾರಿಯು ತಾರೀಕು 10-3-1970ಕ್ಕೆ ನಿಲ್ಲಾಮಾಡರು ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಅಮಲ್ಜಾರಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath
Advocate for Dff.

Karkala, 6—2—70.



ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ನವಭಾರತದ ನಿರ್ಮಾಪಕಿ ಡಾ|| ಅನಿಬೆಸೆಂಟ

(ಎರಡನೇ ಪುಟದಿಂದ)

ಣೆಗಳನ್ನು ನೀಡಿದರು. ಆಗ ಮದ್ರಾಸಿನ ಗೌರ್ನರಾಗಿದ್ದ ಲಾರ್ಡ್ ಪೆಂಟ್ ಲ್ಯಾಂಡ್ ಅವರು ಈ ಪ್ರಕಟಣೆಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಡಾ|| ಅರುಂಡೇಲ್ ಮತ್ತು ವಾಡಿಯಾ ಹಾಗೂ ಡಾ|| ಅನಿಬೆಸೆಂಟ್ ಇವರನ್ನು ಬಂಧಿಸಿ ಉಟಕ್ ಮಂಡ್‌ನಲ್ಲಿ ಇಡಲಾಯಿತು. ಡಾ|| ಅನಿಬೆಸೆಂಟ್‌ರ ಬಂಧನ ಭಾರತದ ಜನಸಮುದಾಯದಲ್ಲಿ ಭಾರೀ ಪ್ರತಿಕ್ರಿಯೆಯನ್ನು ಉಂಟುಮಾಡಿತು. ಅನೇಕ ಪ್ರತಿಭಟನಾ ಸಭೆಗಳು ನಡೆದವು. ಮೊದಲ ವಿಶ್ವ ಸಮರದ ಬಳಿಕ ಮಾಂಟೆಗ್ಯು ಚೇಮ್ಸ್‌ಫರ್ಡ್ ಘೋಷಣೆ ಹೊರಬಿದ್ದಿತು. ಈ ಘೋಷಣೆಯಲ್ಲಿ ಭಾರತಕ್ಕೆ ಸ್ವಯಮಾಡಳಿತ ನೀಡುವ ವಿಷಯಕ್ಕೆ ಪ್ರಾಧಾನ್ಯ ಇದ್ದಿತು. ಡಾ|| ಬೆಸೆಂಟ್ ಮತ್ತು ಇತರ ನಾಯಕರ ಬಿಡುಗಡೆಯಾಯಿತು. ಡಾ|| ಬೆಸೆಂಟರಿಗೆ ಭಾರತೀಯರ ವಿಷಯದಲ್ಲಿ ಅಸಾಧಾರಣವಾದ ಪ್ರೀತಿ, ವಿಶ್ವಾಸವಿದ್ದವು. ಭಾರತದ ಭವಿಷ್ಯದ ಬಗ್ಗೆ ದೃಢವಾದ ನಂಬುಗೆಯಿದ್ದಿತು. ಅವರು ಭಾರತೀಯರನ್ನುದ್ದೇಶಿಸಿ ಹೀಗೆ ಹೇಳಿದರು: 'ನನಗೆ ಅಧಿಕಾರವು ಅಪಮಾನ ಮಾಡಿದಾಗ ನೀವು ನನ್ನನ್ನು ಗೌರವದಿಂದ ಕಂಡಿರಿ. ನನ್ನ ವಿರುದ್ಧ ಟೀಕೆಗಳು ಕೇಳಿಬಂದಾಗ ನೀವು ನನ್ನಲ್ಲಿ ಅಪಾರ ವಿಶ್ವಾಸವಿಟ್ಟಿರಿ. ಆಡಳಿತ ಯಂತ್ರದ ಜಾಲಕ್ಕೆ ಸಿಕ್ಕ ನನ್ನನ್ನು ನೀವು ನಿಮ್ಮ ಮುಂದಾಳಾಗಿ ಅಂಗೀಕರಿಸಿಕೊಂಡಿರಿ. ನಾನು ಅಸಹಾಯಕಳಾದಾಗ ನೀವು ನನ್ನ ರಕ್ಷಣೆಗೆ ಬಂದಿರಿ. ನನ್ನ ಬಿಡುಗಡೆಗೆ ಯತ್ನಿಸಿ ಈ ಕಾರ್ಯದಲ್ಲಿ ಸಫಲತೆ ಗಳಿಸಿದಿರಿ. ಮಾತೃಸೇವೆಗಾಗಿ ನಾವೆಲ್ಲರೂ ಸದಾ ಹೋರಾಡಲು ಸಂಕಲ್ಪ ಮಾಡಬೇಕು. ಇದೇ ನನ್ನ ಅಪೇಕ್ಷೆ."

ಗಾಂಧೀಜಿ ಮತ್ತು ಡಾ|| ಬೆಸೆಂಟ್

1918ರಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ಪ್ರವಾಸವನ್ನು ಮುಗಿಸಿಕೊಂಡು ಭಾರತಕ್ಕೆ ಬಂದರು. ಅಸಹಕಾರ ಹಾಗೂ ಅಹಿಂಸಾತ್ಮಕ ಹೋರಾಟದಲ್ಲಿ ಆಗ ಅವರಿಗೆ ಸಾಕಷ್ಟು ಅನುಭವ ಬಂದಿದ್ದಿತು. ಗಾಂಧೀಜಿಯವರು ಭಾರತದಲ್ಲಿ ವಕೀಲರು ತಮ್ಮ ವೃತ್ತಿಗೆ ತಿಲಾಂಜಲಿ ನೀಡಿ ಹಾಗೂ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕೆಂದು ಕರೆಯಿತ್ತರು. ಡಾ|| ಬೆಸೆಂಟ್ ಅವರು ವಿದ್ಯಾರ್ಥಿಗಳು ರಾಜಕೀಯವನ್ನು ಪ್ರವೇಶಿಸಬಾರದು ಎಂಬ ಅಭಿಪ್ರಾಯದವರಾಗಿದ್ದರು. ಈ ಹೊತ್ತಿಗಾಗಲೇ ಗಾಂಧೀಜಿಯವರ ಚಳುವಳಿ ಹೆಚ್ಚು ಪ್ರಬಲವಾಗಿತ್ತು.

ಸ್ವರಾಜ್ಯ ಸಾಧನೆಯಲ್ಲಿ ಕಂಡು ಬಂದ ವಿಫಲತೆಗಳು ಜನರಲ್ಲಿ ಅಸಮಾಧಾನಕ್ಕೆ ಕಾರಣವಾದವು. ಈ ಅಸಮಾಧಾನದ ನಿವಾರಣೆಗಾಗಿ ಲಂಡನ್ನಿನಲ್ಲಿ ಅನೇಕ ದುಂಡುಮೇಜಿನ ಪರಿಷತ್ತುಗಳು ನಡೆದವು.

ಡಾ|| ಬೆಸೆಂಟ್ ಅವರ ಕೊನೆಯ ದಿನಗಳು ಅವರ ವ್ಯಕ್ತಿತ್ವದ ಹಿರಿಮೆಯನು ಸಾರುತ್ತಿವೆ. ಅವರು ತಮ್ಮ ರಾಜಕೀಯ ಗುರಿ ಸಾಧ್ಯವಾಗಲಿಲ್ಲವೆಂದು ವಿಷಾದಿಸಲಿಲ್ಲ. ಭಾರತದ ಸೇವೆಯಲ್ಲಿ ಅವರು 1933ರಲ್ಲಿ ನಿಧನ ಹೊಂದಿದರು. ಬೆಸೆಂಟ್ ಅವರು ದೇಶದ ಸ್ವಾತಂತ್ರ್ಯಸಾಧನೆಗಾಗಿ ಆರಂಭಿಸಿದ ಹೋರಾಟ ಮಹಾತ್ಮ ಗಾಂಧೀಜಿ ಹಾಗೂ ಅವರ ಅನುಯಾಯಿಗಳ ಸೇವೆಯಿಂದ ಸಫಲವಾಯಿತು. ಗಾಂಧೀಜಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ತಂದು ಕೊಟ್ಟರು.

ಸಿಂಹವನ್ನು ಚಿತ್ರಿಸಿ ಆರೋಗ್ಯವಂತರಾಗಿ

ಹಸುಳೆ ಕಾಟ್ರಿನಾ ತನ್ನ ಚಿಕ್ಕ ಕೈಗಳಿಂದ ಅಗಲವಾದ ಕುಂಚವನ್ನು ಹಳದಿ ಬಣ್ಣದೊಳಗೆ ಮುಳುಗಿಸಿ ಸಿಂಹವನ್ನು ಚಿತ್ರಿಸಿ ಸಂತೋಷ ಪಡುತ್ತಿದೆ. ಅಂತೆಯೇ ಇತರ ಮೂರರಿಂದ ಆರು ವರುಷ ಪ್ರಾಯದ ಮಕ್ಕಳು ಚಿತ್ರಗಳನ್ನು ಚಿತ್ರಿಸಿ ಸಂತೋಷ ಪಡುತ್ತಿದ್ದಾರೆ. ಈ ಒಂದು ಪ್ರಯೋಗವನ್ನು ಮ್ಯೂನಿಕ್ ನಗರದಲ್ಲಿರುವ ಇಬ್ಬರು ಮಹಿಳೆಯರು ನಡೆಯಿಸಿರುವರು ಮ್ಯೂನಿಕ್ ಕಲಾ ಶಾಲೆಯ ಸಹಾಯದಿಂದ ಈ ಪ್ರಯೋಗವನ್ನು ನಡೆಯಿಸಿದರು.

ಕಿಂಡರ್ ಗಾರ್ಟನ್ ಶಾಲೆಯೆಂದರೆ ಅವರು ಅದಕ್ಕೆ ಪ್ರತ್ಯೇಕ ರೂಪವನ್ನು ಕೊಡುತ್ತಿದ್ದಾರೆ. ಹಳೇ ಪದ್ಧತಿಯನ್ನು ಅನುಸರಿಸುವುದು ಅಲಕ್ಷ್ಯದಾಯಕ ಎನ್ನುತ್ತಿದ್ದಾರೆ ಇವರು. ಹಳೇ ಪದ್ಧತಿಗಳು ಶಿಸ್ತು ಮತ್ತು ವಿಧೇಯತೆ ಹಾಗೂ ಶುಚಿತ್ವ ತರುತ್ತದೇನೋ ನಿಜ. ಆದರೂ ಅದಕ್ಕಿಂತಲೂ ಹೆಚ್ಚಾಗಿ ಮಕ್ಕಳ ಮೆದುಳಿನ ಮೇಲೆ ಪ್ರತಿಕ್ರಿಯೆಯನ್ನು ತರಿಸುವ ವಿಧಾನವಿದೆ ಎನ್ನುತ್ತಿದ್ದಾರೆ.

ತಾಳಬದ್ಧ ಶಬ್ದ, ಕುಂಚ ಹಾಗೂ ವರ್ಣದಿಂದ ಮೆದುಳು ಕಟ್ಟಿರುವ ಮಕ್ಕಳ ಮೇಲೆ ಇವರ ಪ್ರಯೋಗ ತುಂಬಾ ಫಲಕಾರಿಯಾಗಿದೆ. ಉದಾಹರಣೆಗಾಗಿ ಮಾತನಾಡುತ್ತಿರುವಾಗ ತಡವರಿಸುತ್ತಿರುವ ಮಕ್ಕಳೊಡನೆ ದೊಡ್ಡ ವೃಕ್ಷಗಳನ್ನು ಬಿಡಿಸಲು ಹೇಳುತ್ತಾರೆ. ಈ ಚಲನೆಗೆ ಹೆಚ್ಚಿನ ತಾಳ ಸೌಮ್ಯತೆ ಅಗತ್ಯ. ಇದಕ್ಕೆ ಕೇವಲ ಕಣ್ಣುಗಳ ಮತ್ತು ಕೈಗಳ ಸಹಕಾರವಿದ್ದರೆ ಸಾಲದು ಬದಲು ಸಂಪೂರ್ಣ ಶರೀರದ ತಾಳ ಅಗತ್ಯ. ಇಂತಹಾ ಪ್ರಯೋಗಗಳಿಂದ ಎಷ್ಟೋ ಮಾತು ಬಾರದ ಮಕ್ಕಳನ್ನು ಗುಣಪಡಿಸಿದ್ದಾರೆ.

ಗುರುನಾನಕರ ಹಿತನುಡಿಗಳು

ಸದ್ಗುರುವಿನ ಸಂದರ್ಶನದಿಂದ ಅಜ್ಞಾನದ ಕತ್ತಲೆ ದೂರವಾಗುತ್ತದೆ. ಅಹಂಕಾರ ಮಾಯವಾಗುತ್ತದೆ. ಭಕ್ತನು ದೇವನಲ್ಲಿ ಐಕ್ಯವಾಗುತ್ತಾನೆ.

00 00 00

ಈ ಭೂಮಿ ಹಾಗೂ ಈ ಆಕಾಶ ಎಲ್ಲವೂ ಅಸ್ಥಿರ. ಆದರೆ ಒಬ್ಬನು ಮಾತ್ರ ಸ್ಥಿರವಾಗಿರುತ್ತಾನೆ, ಅವನೇ ದೇವರು. ಚಂದ್ರ—ಸೂರ್ಯರು, ಹಗಲು—ರಾತ್ರಿಗಳು—ತಾರೆಗಳ ಸಮೂಹ ಎಲ್ಲವೂ ಕಣ್ಮರೆಯಾಗುತ್ತವೆ. ಆದರೆ ದೇವರ ವಾಸಸ್ಥಾನ ಮಾತ್ರ ಚಿರಂತನವಾಗಿ ಉಳಿಯುತ್ತದೆ.

ಮೈಸೂರು ಉಪಕರಣಗಳ ಕಾರ್ಖಾನೆ
ಹಾಸನ
(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರೆಗೆ ಹಚ್ಚಬಹುದು.
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ.
ದೀರ್ಘಕಾಲ ಬಾಳಿಕೆ ಬರುತ್ತವೆ.
ಒಂದು ಸುದೈವ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ
ಪತ್ರ ವ್ಯವಹಾರ ಮಾಡಬಹುದು.

NAVAYUGA 12-2-1970
Registered with the Registrar of News Papers for India under No. R. N. 3640/'57

REGD: No: B. G. 178
LICENCE No. 33,
Licensed to Post without Prepayment

ಮಸಾಲೆಗಳ ರಾಣಿ - ಏಲಕ್ಕಿ

ಏಲಕ್ಕಿಯು ಹೆಸರಿಗೊಂದು ಮಸಾಲೆಯಾಗಿರದೆ ಹಲವು ವಿಶೇಷತೆಗಳನ್ನು ಪಡೆದಿದೆ. ಏಲಕ್ಕಿ ಮಸಾಲೆಗಳ ರಾಣಿ. ವಿದೇಶಿ ವಿನಿಮಯವನ್ನು ಗಳಿಸುವ ಖನಿ. ಮಾನವ ಇತಿಹಾಸದಲ್ಲಿಯೂ ಮಸಾಲೆ ವ್ಯಾಪಾರದ ಪ್ರಕರಣ ಅತ್ಯಂತ ಕುತೂಹಲಕಾರಿ. ಪ್ರಾಗೈತಿಹಾಸ ಕಾಲದಿಂದಲೂ ದೇಶ ವಿದೇಶದ ಜನರು ಮಸಾಲೆ ಸಾಮಗ್ರಿಗಾಗಿ ಅಲೆದಾಡಿದ್ದಾರೆ. ಮಸಾಲೆ ವ್ಯಾಪಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ದೇಶ ದೇಶಗಳು ಯುದ್ಧ ಮಾಡಿವೆ, ದೊಂಬಿ ಎಬ್ಬಿಸಿವೆ. ಗುಪ್ತಚಾರರ ಜಾಲವನ್ನೇ ಹರಡಿವೆ - ಎಂಬ ಮಾತೆಲ್ಲ ಐತಿಹಾಸಿಕ ಘಟನೆಗಳಾಗಿವೆ.

ಖಂಡಾಂತರಗಳಿಗೆ ಹೋಗುವ ಹೊಸ ಮಾರ್ಗಗಳನ್ನು ಕಂಡು ಹಿಡಿಯಲು ಪ್ರೇರೇಪಿಸಿದ್ದು ಮಸಾಲೆ ವ್ಯಾಪಾರವೆ. ಮಸಾಲೆಯ ಮಾರುಕಟ್ಟೆಯಲ್ಲಿ ಏಕಾಧಿಪತ್ಯ ಹೊಂದಬೇಕೆಂಬ ಮಹತ್ವಾಕಾಂಕ್ಷೆ ಅನೇಕ ದೇಶಗಳ ರಾಜಕೀಯ, ಸಾಮಾಜಿಕ, ಸೈನಿಕ ಮತ್ತು ಆರ್ಥಿಕ ಚರಿತ್ರೆಯಲ್ಲಿ ಬಹಳ ಬದಲಾವಣೆಗೆ ಕಾರಣೀಭೂತವಾಗಿದೆ.

ಮಸಾಲೆಯ ವ್ಯಾಪಾರ—ಪ್ರಪಂಚದಲ್ಲಿ ಭಾರತೀಯ ಸಂಬಾರ ಪದಾರ್ಥಗಳು ಮಹತ್ವದ ಪಾತ್ರವಹಿಸಿವೆ. ಇಂದಿಗೂ ಕೂಡ ಭಾರತ 'ಮಸಾಲೆಗಳ ತೌರು' ಎಂಬ ಪ್ರಸಿದ್ಧಿಯನ್ನು ಹೊಂದಿದೆ. ಭಾರತೀಯ ಮಸಾಲೆ ಸಾಮಾನುಗಳು ಪ್ರಪಂಚದ ಮೂಲೆ ಮೂಲೆಗೂ ಹೋಗಿವೆ, ವಿದೇಶಿಯರ ಆಹಾರ ವಸ್ತುಗಳನ್ನು ಪರಿಮಳಗೊಳಿಸಿವೆ, ಅವರ ಪಾನೀಯಗಳನ್ನು ಸುಗಂಧಗೊಳಿಸಿವೆ. ಔಷಧಿಯ ಭಾಗವಾಗಿ ಉಪಕರಿಸಿವೆ, ಸೌಂದರ್ಯ ಸಾಧನೆಗಳಿಗೆ ಮೋಹಕ ವಾಸನೆ ನೀಡಿವೆ.

27 ಕೋಟಿ ರೂ. ರಫ್ತು

ಮಸಾಲೆ ವಸ್ತುಗಳ ರಫ್ತು ವ್ಯಾಪಾರದಿಂದ ಭಾರತಕ್ಕೆ ಪ್ರತಿವರ್ಷ ಒಟ್ಟು 27 ಕೋಟಿ ರೂ.ಗಳ ಆದಾಯವಿದೆ. ಇದರ ಪೈಕಿ ಏಲಕ್ಕಿಯೊಂದೇ ಏಳು ಕೋಟಿ ರೂ.ಗಳನ್ನು ಗಳಿಸುತ್ತಿದೆ.

ವಿದೇಶಿ ವಿನಿಮಯವನ್ನು ಗಳಿಸುವ ಮಸಾಲೆ ಪದಾರ್ಥಗಳಲ್ಲಿ ಮೆಣಸು ಪ್ರಥಮ ಸ್ಥಾನವನ್ನು, ಏಲಕ್ಕಿ ದ್ವಿತೀಯ ಸ್ಥಾನವನ್ನು ಪಡೆದಿವೆ. ಪ್ರಪಂಚದಲ್ಲಿ ಏಲಕ್ಕಿ ಬೆಳೆಯುವ ದೇಶಗಳಲ್ಲಿ ಭಾರತವೇ ಅಗ್ರಗಣ್ಯ. ದಕ್ಷಿಣ ಅಮೇರಿಕೆಯ ಗ್ವಾಟೆಮಾಲಾ, ಸಿಂಹಳ, ತಾಂಝಾನಿಯಾ, ಎಲ್ ಸಾಲ್ವೇದೋರ್, ವಿಯೆಟ್ನಾಮ್ ಮತ್ತು ಕಾಂಬೋಡಿಯಾ ದೇಶಗಳೂ ಏಲಕ್ಕಿಯನ್ನು ಬೆಳೆಸುತ್ತವೆ. ಭಾರತದಲ್ಲಿ ಸುಮಾರು 75000 ಹೆಕ್ಟೇರುಗಳಲ್ಲಿ ಏಲಕ್ಕಿಯನ್ನು ಬೆಳೆಸಲಾಗುತ್ತಿದೆ, ಮೈಸೂರು ರಾಜ್ಯದ 23,606 ಹೆಕ್ಟೇರುಗಳಲ್ಲಿ, ಕೇರಳರಾಜ್ಯದ 47026 ಹೆಕ್ಟೇರುಗಳಲ್ಲಿ ಏಲಕ್ಕಿಯನ್ನು ಬೆಳೆಸಲಾಗುತ್ತಿದೆ, ಉಳಿದ ಏಲಕ್ಕಿಕ್ಷೇತ್ರ ತಮಿಳನಾಡಿನಲ್ಲಿ.

ಉತ್ಪತ್ತಿ ಮತ್ತು ರಫ್ತು

ಒಂದು ವರ್ಷಕ್ಕೆ ಭಾರತದಲ್ಲಿ ಸರಾಸರಿ 3500 ಟನ್ ಏಲಕ್ಕಿಯನ್ನು ಬೆಳೆಯಲಾಗುತ್ತಿದೆ. ಇದರ ಶೇಕಡ 70 ಭಾಗದಷ್ಟು ಏಲಕ್ಕಿ ರಫ್ತಾಗುತ್ತಿದೆ. 1963-64ರಲ್ಲಿ ಭಾರತವು 4130 ಟನ್ ಏಲಕ್ಕಿ ಬೆಳೆದು ಹೊಸ ದಾಖಲೆ ಸ್ಥಾಪಿಸಿತು. ಆ ಮೇಲೆ ಏಲಕ್ಕಿ ಬೆಳೆಯಲ್ಲಿ ಇಳಿಮುಖವಾಗಿದೆ. ಮಳೆಯ ಅಭಾವ ಮತ್ತು ಕಟ್ಟೆ ರೋಗ—ಇವು ಏಲಕ್ಕಿ ತೋಟದ ಪ್ರಗತಿಗೆ ಅಡ್ಡಿಯನ್ನುಂಟು ಮಾಡಿವೆ. ಪ್ರಪಂಚದ ಸುಮಾರು ಐವತ್ತು ರಾಷ್ಟ್ರಗಳು ಭಾರತದ ಏಲಕ್ಕಿಗೆ ಗಿರಾಕಿಗಳಾಗಿವೆ. ಅರೇಬಿಯನ್ ದೇಶಗಳೇ ಹೆಚ್ಚಾಗಿ ಭಾರತದ ಏಲಕ್ಕಿಯನ್ನು ಆಮದು ಮಾಡಿಕೊಳ್ಳುವವು.

1966-67 ಸಾಲಿನಲ್ಲಿ ನಮ್ಮ ದೇಶದಲ್ಲಿ ಬೆಳೆದ ಏಲಕ್ಕಿಯ ಶೇಕಡ 62.07 ಭಾಗವನ್ನು ರಫ್ತು ಮಾಡಿದ್ದರೆ, 1967-68ರಲ್ಲಿ 62.21 ಭಾಗವನ್ನು ರಫ್ತು ಮಾಡಲಾಗಿದೆ ಮತ್ತು ಈಗ ರಫ್ತು ವ್ಯಾಪಾರದ ಈ ಪ್ರಮಾಣವೇ ಉಳಿದಿದೆ. ದೇಶದ ಆಂತರಿಕ ಬಳಕೆಯ ಮೇಲೆ ಏಲಕ್ಕಿಯ ರಫ್ತು ಮತ್ತು ಅದರ ಬೆಲೆಗಳು ನಿರ್ಧಾರವಾಗುತ್ತವೆ. ಹೀಗಾಗಿ ಏಲಕ್ಕಿಯ ಉತ್ಪಾದನೆಯಲ್ಲಿ ಏರುಪೇರು ಸಂಭವಿಸಿದರೆ, ಏಲಕ್ಕಿ ರಫ್ತು ವ್ಯಾಪಾರಕ್ಕೆ ಏಟು ಬೀಳುವುದು, ಹೊರತು ಅದರ ಆಂತರಿಕ ಬಳಕೆಗಲ್ಲ. ದೇಶದಲ್ಲಿಯೇ ಏಲಕ್ಕಿಯ ಉತ್ಪಾದನೆ ಪ್ರಚಂಡವಾಗಿ ಹೆಚ್ಚಾಗದ ಹೊರತು, ಏಲಕ್ಕಿ ರಫ್ತುವ್ಯಾಪಾರದ ವ್ಯಾಪಕತೆಯನ್ನು ಹೆಚ್ಚಿಸುವುದು ಕಷ್ಟಸಾಧ್ಯದ ಕೆಲಸ. ಭಾರತದ ಏಲಕ್ಕಿಗಿರುವ ಸ್ವಾದು ರೂಪ, ಪರಿಮಳ ಮತ್ತು ತೈಲಾಂಶಗಳು ಪ್ರಪಂಚದ ಮತ್ತಾವ ದೇಶದ ಏಲಕ್ಕಿಗೂ ಮಿಗಿಲಾಗಿರುವದು ಹೆಮ್ಮೆಯ ಮಾತು.

ಏಲಕ್ಕಿ ಮಂಡಳಿ

ಏಲಕ್ಕಿ ಉತ್ಪಾದನೆಗೆ ಮತ್ತು ಅದರ ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹ ನೀಡಲೆಂದ 1966ರಲ್ಲಿ ಏಲಕ್ಕಿ ಮಂಡಳಿಯನ್ನು ಸ್ಥಾಪಿಸಲಾಗಿದೆ. ಕಟ್ಟೆರೋಗ ನಿವಾರಕ ಔಷಧವನ್ನು ಸರಬರಾಜು ಮಾಡುವದು; ಒಳ್ಳೆಯ ಏಲಕ್ಕಿ ತಳಿ ಸಸಿಗಳನ್ನು ನೀಡುವದು, ಜಲಸೇಚನ ಉಪಕರಣಗಳನ್ನು ಒದಗಿಸುವದು, ಏಲಕ್ಕಿ ಬೆಳೆಗಾರರಿಗೆ ಆರ್ಥಿಕ ನೆರವನ್ನು ನೀಡುವದೇ ಮೊದಲಾದ ಕಾರ್ಯಗಳನ್ನು ಈ ಮಂಡಳಿ ಕೈಕೊಳ್ಳುವದು. ಮಾರುಕಟ್ಟೆ ಸಮೀಕ್ಷೆ ಮಾಡಿ, ವಿದೇಶಗಳಲ್ಲಿ ನಮ್ಮ ಏಲಕ್ಕಿಗೆ ಬೇಡಿಕೆಗಳನ್ನು ದೊರಕಿಸಲು ಈ ಮಂಡಳಿ ಸತತವಾಗಿ ಕೆಲಸ ಮಾಡುವದು. ಯುರೋಪಿಯನ್ ಮಾರುಕಟ್ಟೆಗಳಲ್ಲಿ ಭಾರತದ ಏಲಕ್ಕಿ ವ್ಯಾಪಾರ ಹೆಚ್ಚಿಸಲು ಏಲಕ್ಕಿ ಮಂಡಳಿಯು ಬ್ರುಸೆಲ್ಸಿನಲ್ಲಿ ಒಂದು ಕಚೇರಿಯನ್ನು ಪ್ರಾರಂಭಿಸಿದೆ.

ಗುಣ ಪರೀಕ್ಷೆ

ಏಲಕ್ಕಿಯನ್ನು ರಫ್ತು ಮಾಡುವುದಕ್ಕೆ ಮೊದಲು ಅದರ ಗುಣ ಶ್ರೇಷ್ಠತೆಯನ್ನು ಕಾಯ್ದುಕೊಂಡು ಬರಲು ಕಟ್ಟುನಿಟ್ಟಾದ ಪರೀಕ್ಷೆ ಮಾಡಲಾಗುವದು. ಭಾರತ ಸರಕಾರಕ್ಕೆ ಕೃಷಿ ಮಾರುಕಟ್ಟೆ ಸಲಹೆ ನೀಡುವ ಅಧಿಕಾರಿಗಳು ಏಲಕ್ಕಿಯ ಗುಣ—ಗಾತ್ರಗಳ ಆಧಾರದ ಮೇಲೆ ವಿಂಗಡಣೆ ಮಾಡಿ ರಫ್ತು ವ್ಯಾಪಾರಕ್ಕೆ ಅನುಮತಿ ನೀಡುವರು.

"ಅಲೆಪ್ಪಿ ಹಸಿರು' ಎಂಬ ಜಾತಿಯ ಏಲಕ್ಕಿಗೆ ವಿಶೇಷ ಬೇಡಿಕೆಯಿದ್ದು, ಭಾರತದಿಂದ ರಫ್ತಾಗುವ ಒಟ್ಟು ಏಲಕ್ಕಿಯ ಶೇಕಡ 87 ಭಾಗವು "ಅಲೆಪ್ಪಿ ಹಸಿರೇ" ಆಗಿದೆ!

ರಾಜಕೀಯ ಶಿಕ್ಷಣ

ಸಾಧಾರ ಪದ್ಧತಿಯ ಮೂಲ ಶಿಕ್ಷಣವೆ ಚಿನ್ನ
ಬಾಪುವಿನ ಕುಡಿಮುತ್ತಿಗೆ ಕೈದ್ದೋವೆ ಚಿನ್ನ
ರಾಜಕೀಯದ ಗಾಳಿ ಶಿಕ್ಷಣಾಲಯಕು ಬೀಸಿ
ಸರಸತಿಯು ಆಗಿಹಳು ಇಂದವರ ದಾಸಿ.

ಮ. ಗೋ. ರಾವ್.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಆತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

HOTEL SATKAR

Boarding, Lodging & Restaurant
Behind Corporation Office,
9 Mission Road — **Bangalore—27.**

Phone No.— 1 28337
2 29887
Grams: HOST SATKAR

Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 19—2—1970

ಸಂಪುಟ 49
ಸಂಚಿಕೆ 24

ಪ್ರಗತಿಯ ನಾಮಬಲ ಸಾಕೆ?

ಪ್ರಜಾಪ್ರಭುತ್ವದಲ್ಲಿ ಜನತೆಯೇ ಪ್ರಭುಗಳು. ಪ್ರಜಾಪ್ರಭುಗಳಿಗೆಲ್ಲ ಶಾಸನ ಸಭೆಗಳಲ್ಲಿ, ಸಂಸತ್ತಿನಲ್ಲಿ ಸಿಂಹಾಸನ ಕೊಡಲು ಅಷ್ಟು ಸಿಂಹಾಸನಗಳಿಗೆ ದಾರಿದ್ರ್ಯ ಒದಗಿದ್ದರಿಂದ, ಪ್ರಜಾಪ್ರಭುಗಳ ಪ್ರತಿನಿಧಿ ಸಭೆಗಳಿಗೆ ಮಾತ್ರ ವಿಶೇಷ ಸೌಕರ್ಯ— ಸೌಲಭ್ಯ— ವೇತನ— ಭತ್ಯೆ ನೀಡುವ ಅವಕಾಶ. ಮೊದಲ ಒಂದು ಚುನಾವಣೆಯ ವೇಳೆ ಈ ಪ್ರತಿನಿಧಿ ಪ್ರಭುಗಳ ಸ್ಥಾನಮಾನಗಳತ್ತ ಪ್ರಜಾಪ್ರಭುಗಳ ಗಮನ ಹರಿಯಲಿಲ್ಲ. ಅವಿರೋಧ ಆಯ್ಕೆ, ಪ್ರಚಂಡ ಬಹುಮತದ ಆಯ್ಕೆಗಳೇ ಹೆಚ್ಚಾದವು. ಬರಬರುತ್ತ ಪ್ರಜಾಪ್ರಭುತ್ವಗಳಲ್ಲಿ ಪ್ರಜಾಸತ್ತೆ ರೂಢವಾಗತೊಡಗಿತು. ಜಿಲೇಬಿತೆ ಮತದಾನ, ಪಾನಕ ವೂಹಿಸಿ ಓಟುದಾನ ಇತ್ಯಾದಿ ಇತ್ಯಾದಿ ಪ್ರಜಾಪ್ರಭುಗಳಿಗೆ ಚಟ ಗುಣಗಳು ರಕ್ತಗತವಾಗತೊಡಗಿ ಇದೀಗ ಅದು ರೋಮರೋಮಗಳಲ್ಲಿ ತುಂಬಿ ತುಳುಕಾಡ ಹೊರಟಿದೆ.

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಪ್ರಜಾಪ್ರಭುಗಳ ಸಂಕೇತ; ಪ್ರತೀಕ. ಶ್ರೀ ಜಗಜ್ಜೀವನ ರಾಮ್, ಶ್ರೀ ಸಿ. ಸುಬ್ರಹ್ಮಣ್ಯಂ ಮೊದಲಾದವರು ಹೇಳುವಂತೆ ಭಾರತದ ಪ್ರಜಾ ಪ್ರಭುಗಳು ಅದರಲ್ಲಿ ಅಸೀಮ ವಿಶ್ವಾಸವಿಟ್ಟಿದ್ದಾರೆ. ಬದಲಾಗುತ್ತಿರುವ ಸಮಾಜದಲ್ಲಿ ಬದಲಾವಣೆ ಅನಿವಾರ್ಯ. ಈ ಬದಲಾವಣೆಯ ದ್ಯೋತಕೀಯ ನಾಮಧೇಯ "ಪ್ರಗತಿ" ಪ್ರಗತಿಗಾಮಿಯಾದ ತನ್ನ ಕೈ ಹಿಡಿದು ಎಳೆಯಲು ಶ್ರೀ ಎಸ್. ನಿಜಲಿಂಗಪ್ಪ ಮತ್ತು ಕಂಪೆನಿಯು ಪ್ರಯತ್ನಿಸಿದ್ದರಿಂದ ಕಾಂಗ್ರೆಸ್ ಒಡೆಯುವುದು ಅನಿವಾರ್ಯವಾಯ್ತು ಎಂದು ಶ್ರೀಮತಿ ಗಾಂಧಿ ಒಪ್ಪ್, ಅಂದರೆ, ಕೆಲವೇ ದಿನಗಳಲ್ಲಿ ಅದೇ ವಿಚಾರಧಾರೆಯಲ್ಲೊ ಪ್ರಗತಿಯಾಯಿತು. 'ನನ್ನನ್ನು ಪ್ರಧಾನಮಂತ್ರಿ ಪಟ್ಟದಿಂದ ಇಳಿಸಲು ಸಂಚು ಹೂಡುತ್ತಿರುವರೆಂದು ನನಗರಿಕೆಯಾದ್ದರಿಂದ ತಾನಿಂತಹ ದಿಟ್ಟ ಹೆಜ್ಜೆಯನ್ನು, ಪ್ರ-ಪ್ರಗತಿ— ಇಡಬೇಕಾಯಿತು' ಎಂದರು.

ಕಾಂಗ್ರೆಸ್ಸು ಅಬೇಧ್ಯವಾಗಿದ್ದಾಗ, ವಿರೋಧಿ ಪಕ್ಷಗಳು ಅದನ್ನು ಉರುಳಿಸಲು ಸೊಂಟಕಟ್ಟಿದುವು; ಮಣ್ಣುಮುಕ್ಕಿದುವು. ಆದರೆ, ಇಂದು ಈ ದಿಸೆಯಲ್ಲಿ ಬಹಳಷ್ಟು ಪ್ರಗತಿ ಹೊಂದಿದೆ. ಕಾಂಗ್ರೆಸ್ಸಿನ ಇಬ್ಬಣಗಳು ಸಮಾನಾಂತರವಾಗೇ ಮುಂದುವರಿದಿರುವುದು ಸರ್ವವೇದ್ಯ. ಇದರ ಹಿಂದೆ ಯಾವ ದೊಡ್ಡ ಶಬ್ದವೇ ಇರಲಿ, ಅದು 'ಪ್ರಭುತ್ವ'ದ ಹಬ್ಬಾಸಕೆ ಮಾತ್ರ. ಶ್ರೀಮತಿ ಗಾಂಧಿಯವರ ಇಂಡಿಕೇಟ್ ಲೋಕಸಭೆಯಲ್ಲಿ ಅಲ್ಪಸಂಖ್ಯಾತ ಪಕ್ಷವಾಗಿದೆ; ಆದರೆ, ಕಮ್ಯುನಿಸ್ಟರಿಂದಿಡಾಗಿ ಹಲವರ ಬೆಂಬಲ ಅದಕ್ಕಿದೆ. ಇಂಥದೇ ಪರಿಸ್ಥಿತಿ ರಾಜ್ಯ ವಿಧಾನ ಸಭೆಗಳಲ್ಲೂ ಇದೆ.

ಫೆಬ್ರವರಿ ತಿಂಗಳಲ್ಲಿ ಸರ್ವೇಸಾಮಾನ್ಯವಾಗಿ ಕೇಂದ್ರ ಮತ್ತು ರಾಜ್ಯಗಳ ವಿಧಾನ ಸಭೆಗಳು ಅಧಿವೇಶನ ಸೇರುತ್ತವೆ. ಭಾವಿ ವರ್ಷದ ಮುಂಗಡ ಪತ್ರವನ್ನು ಪರಿಶೀಲಿಸುವುದು ಹಾಗೂ ಮಂಜೂರು ಮಾಡುವುದೇ ಈ ಚಳಿಗಾಲದ ಅಧಿವೇಶನದ ಮುಖ್ಯ ಕಾರ್ಯ. ವಿರೋಧೀ ಪಕ್ಷಗಳಿಗೆ ಸರಕಾರವನ್ನು ಮನಸ್ವಿಯಾಗಿ ಟೀಕೆ ಮಾಡಲು ಈ ಅಧಿವೇಶನದಲ್ಲಿ ದೊರೆಯುವಷ್ಟು ಅವಕಾಶ ಮತ್ತೆಲ್ಲಿಯೂ ದೊರೆಯದು. ಪ್ರತಿನಿಧಿ ಪ್ರಭುಗಳೆಲ್ಲರೂ ಇಂತಹ ಅವಕಾಶವನ್ನು ಕಳೆದುಕೊಂಡರೂ ತಮ್ಮ 'ಪ್ರಭುತ್ವ'ಕ್ಕೆ ಲಭ್ಯವಾಗುವ ಸೌಕರ್ಯ-ಸೌಲಭ್ಯಗಳಿಗೆರವಾಗಲು ಸಿದ್ಧರಿಲ್ಲ.

ಕಾಂಗ್ರೆಸ್ಸಿನ ಇಬ್ಬಣಗಳು ಕಾಳಗೆ ನಿಂತ ಹುಂಜಗಳಂತಾಗಿವೆ. ಇಂಡಿಕೇಟ್ ಸರ್ವಾಧಿಕಾರಿ, ಅದನ್ನು ಅಧಿಕಾರದಿಂದ ಉರುಳಿಸಬೇಕು— ಇದು ಸಿಂಡಿಕೇಟ್ ಉಗ್ಗಡಣೆ. ಸಿಂಡಿಕೇಟ್ ಪ್ರಗತಿ ವಿರೋಧಿ, ಪ್ರತಿಗಾಮಿ, ಅದರ ಅಧಿಕಾರವನ್ನು ತಪ್ಪಿಸಬೇಕು— ಇದು ಇಂಡಿಕೇಟ್ ಘೋಷಣೆ. ತಂತಮ್ಮ ಶಕ್ತಿ ಪ್ರದರ್ಶನಕ್ಕೆ ಇವೆರಡೂ ಗುಂಪುಗಳು ಕೆಲವು ಕೇಂದ್ರಗಳನ್ನು ಆರಿಸಿಕೊಂಡಿವೆ. ಇದುವರೆಗೆ ಪಕ್ಷದ ಕಾರ್ಯಕಾರಿ ಸಮಿತಿಗಳ ಪದಚ್ಯುತಿ-ನೇಮಕಗಳಲ್ಲಿ ನಿರತವಾದ ಸಿಂಡಿಕೇಟ್‌ಗಳು ನೈಜ ಪ್ರಭುತ್ವಕ್ಕಾಗಿ ಸೊಂಟಕಟ್ಟಿ ಹೋರಾಟಕ್ಕೆ ಸಿದ್ಧವಾಗಿವೆ.

ಬಿಹಾರದ ಗರುಡಿಯಲ್ಲಿ ಇಬ್ಬರೂ ತಂತಮ್ಮ ಪಟ್ಟು ವರಸೆಗಳನ್ನು ತೋರಿಸ ಹೊರಟರು. ಇಕ್ಕಡೆಯವರೂ ತಮತಮಗೆ ಬಹುಮತವಿದೆಯೆಂದು ರಾಜ್ಯಪಾಲ ನಿತ್ಯಾನಂದ ಕಾನುಂಗೋರವರ ಕಿವಿಯೂದಿದರು. ಕಿವಿಗಡಚಿಕ್ಕಿರಬೇಕು ಅವರಿಗೆ—ಇನ್ನೊಂದು ಹೊಸ ತಪ್ಪು ಮಾಡಲಾರೆ; ಯುದ್ಧ ನಡೆಯಲಿ ಎಂದು ಅವರು ದೂರ ಅಟ್ಟಿದರು. ಹದಿನಾರು ಹರಿದ ಪಕ್ಷಗಳ ಬಿಹಾರದಲ್ಲಿ ರಾಜ್ಯಕೀಯ ಪಕ್ಷಗಳ ಡೊಂಬರಾಟ—ಕುಚೋದ್ಯ ನಡೆಯಿತು. ಸಿಂಡಿಕೇಟ್ ತಟ್ಟೆ ಭಾರವಾದಂತೆ ಭಾಸವಾಗುವುದೇ ತಡ, ಒಂದು ಮರಿಕಪ್ಪೆ ಪಟಕ್ಕನೆ ಕೆಳಗೆ ನೆಗೆಯಿತು. ಮತ್ತೆ ಅದನ್ನು ಎತ್ತಿ ಹಾಕುವ ಪ್ರಯತ್ನ ಇಂಡಿಕೇಟಿನದು. ಈ ಮರಿಗಪ್ಪೆಯನ್ನು ಪ್ರಯತ್ನಪೂರ್ವಕ ಹಿಡಿದು ತರುವಷ್ಟರಲ್ಲಿ ಆದರ ತಟ್ಟೆಯಿಂದ ಹಿರಿಗಪ್ಪೆಯು ನಿರ್ಗಮನ... ಅಂತೂ ಬಿಹಾರದ ಮಂಡೂಕವಿಹಾರ ಇನ್ನೂ ಕಾಣದು ಪರ್ಯವಸಾನ.

ಅಲ್ಪ ಸಂಖ್ಯಾತ ಪಕ್ಷದ ನಾಯಕಿ ಶ್ರೀಮತಿ ಇಂದಿರಾಗಾಂಧಿ ಪ್ರಧಾನಿಯಾಗಿ ಮುಂದುವರಿಯಬಹುದಾದರೆ, ಅಲ್ಪ ಸಂಖ್ಯಾತ ಪಕ್ಷದ ಚಂದ್ರಭಾನು ಗುಪ್ತರು ಏಕೆ ಮುಖ್ಯಮಂತ್ರಿಯಾಗಬಾರದು? ಇದು ಸಿಂಡಿಕೇಟಿನ ಪಾಟೀ ಸವಾಲು. ವಿಧಾನ ಸಭೆಯೇ ಸರ್ವಶ್ರೇಷ್ಠ ನ್ಯಾಯಪತಿ. ಅದಕ್ಕಾಗಿ ಬೇಗನೇ ವಿಧಾನ ಸಭೆ ಸೇರಿಸುವ ಇಂಡಿಕೇಟ್ ಪ್ರಯತ್ನ— ರಾಜ್ಯಪಾಲರಿಂದ ಭರವಸೆ ಮಾತ್ರ. ಕೊನೆಗೂ ಉ. ಪ್ರ. ದಲ್ಲಿ ಯಥಾಪ್ರಕಾರ ಶಕ್ತಿ ಪ್ರದರ್ಶನದ ಅಖಾಡದ ಬಾಗಿಲು ತೆರೆಯಿತು. ಗುಪ್ತರ ಒಂದೊಂದೇ ಸಚಿವರಿಂದ ರಾಜೀನಾಮೆ ಕೊಡಿಸಿ, ಶ್ರೀ ಚರಣಸಿಂಗರ ಕೇಸರಕ್ಕೆ ಗರಿ ಮೂಡಿಸಿ ಇಂಡಿಕೇಟ್ ನಾಯಕ ಕಮಲಾಪತಿ ತ್ರಿಪಾಠಿಯವರು ಇಳಿದಿದ್ದಾರೆ — ಕಣಕ್ಕೆ. ಅತ್ತ ಗುಪ್ತರು ಸುಮ್ಮನಿದ್ದಾರೆಯೆ? ತಮಗೆ ಸಹಾಯ ಯಾವ ಮೂಲೆಯಿಂದ ಬಂದರೂ ಅದನ್ನು ಎರಡೂ ಕೈಗಳಿಂದ ಸ್ವಾಗತಿಸಿದ್ದಾರೆ. ಜನಸಂಘ—ಇತ್ಯಾದಿ ಇತ್ಯಾದಿ ಅಲ್ಲಿ ಗುಪ್ತರ ಬೆಂಗಾವಲಿಗೆ ನಿಂತರೂ ಅತಿಶಯವಿಲ್ಲ. ಚಂದ್ರಭಾನು ಗುಪ್ತರು ಎದುರಾಳಿಯನ್ನೇ ಮಲಗಿಸಬಲ್ಲರು; ತಾನೇ ಮಲಗಲೂ ಶಕ್ತರು. ಆ ಮಾತು ಬೇರೆ.

ಒಂದೊಮ್ಮೆ ಗುಪ್ತ ಸರಕಾರ ಉರುಳಿಸುವಲ್ಲಿ ತ್ರಿಪಾಠಿ—ಸಿಂಗರು ಯಶಗಳಿಸಿದರೆ ಮುಂದೇನು? ಭಾರತೀಯ ಕ್ರಾಂತಿದಳ—ಇಂಡಿಕೇಟ್‌ಗಳ ಸಂಯುಕ್ತ ರಂಗದ ಸರಕಾರ—ಇದೆಷ್ಟು ದಿನ? ಹಿಂದೆ ಮಧ್ಯಪ್ರದೇಶದಲ್ಲಿ ಗುರು ನಾರಾಯಣ ಸಿಂಗರು ಹದಿನೆಂಟು ತಿಂಗಳು ಕಾಲಯಾಪನೆ ಮಾಡಿದಂತೆ.

ಇದೆಲ್ಲಾ ರಾಜಕೀಯ ಪ್ರಗತಿಯ ಹೆಸರಿನಲ್ಲಿ, ಪ್ರಜಾಪ್ರಭುಗಳಿಗೆ ಅವರ ಸರಿಯಾದ ಸ್ಥಾನ-ಮಾನ-ಅಧಿಕಾರಗಳನ್ನು ನೀಡುವುದಕ್ಕಾಗಿ ಪ್ರತಿನಿಧಿ ಪ್ರಭುಗಳ ತೃಪ್ತಿಗಾಗಿಯೆಂದು ಯಾರಾದರೂ ಅಂದರೆ, ಡಂ... ಅವರು ಪ್ರಗತಿ ವಿರೋಧಿಗಳು.

ಉತ್ತರ ಪ್ರದೇಶದಲ್ಲಿ ಸಿಂಡಿಕೇಟ್ ಸರಕಾರವುರುಳಿಸುವ ಸಂಚು ನಡೆದಿದ್ದರೆ, ಮಧ್ಯಪ್ರದೇಶದಲ್ಲಿ ಇಂಡಿಕೇಟ್ ಸರಕಾರವನ್ನು ತಪ್ಪಿಸೆಯುವ ಕ್ರಮಗಳು ಆರಂಭವಾಗಿವೆ. ಆ ಕ್ರಮ ಎಷ್ಟರ ಮಟ್ಟಿಗೆ ಸಫಲಗೊಳ್ಳುವುದೆಂದು ಹೇಳಲಾಗದಿದ್ದರೂ, ಪ್ರಭುತ್ವ ಪ್ರಿಯರು ಏನನ್ನು ಮಾಡುವುದಕ್ಕೂ ಹಿಂಜರಿಯಲಾರರು. ಈ ಪ್ರಾಯೋಗಿಕ ಯೋಜನೆಗಳು ಜಾತಫಲಿಸಿದರೆ, ಮುಂದೆ ದಿಗ್ವಿಜಯಕ್ಕೆ ಹೊರಡಲು ನೈತಿಕ ಬಲ ಬರುತ್ತದೆ; ಇಲ್ಲವಾದರೆ, ಮರಳಿ ಯತ್ನ ಮಾಡುವ ಆಗತ್ಯವಿರುತ್ತದೆ.

ಹೀಗೆ ಇದುವರೆಗೆ ಸ್ಥಿರವಾಗಿದ್ದ ಸರಕಾರಗಳು ಅಭದ್ರತೆಯ ತಳಿಯ ಮೇಲೆ ನಿಂತಿವೆ. ಅಭದ್ರ ಸರಕಾರಗಳು ಏನು ಸಾಧಿಸಬಲ್ಲವು? ತಮ್ಮ ಅಧಿಕಾರ ಸ್ಥಿರೀಕರಿಸುವ ಪ್ರಯತ್ನಗಳಷ್ಟೇ ಅವರಿಗೆ ಮರ್ಯಾದಿತ. ಇಂತಹ ಸರಕಾರಗಳಿಂದ, ಪ್ರತಿನಿಧಿ ಪ್ರಭುಗಳಿಂದ ಪ್ರಗತಿ ಹೇಗೆ ಸಾಧ್ಯವಾದೀತು? ಜನಕಲ್ಯಾಣ ಹೇಗೆ ನಡೆದೀತು? ಈ ಬಗೆಯ ಅಭದ್ರತೆಯನ್ನೇ ಪ್ರಗತಿಯೆನ್ನುವುದಾದರೆ, ಅಂತಹ ಪ್ರಗತಿವಾದಿಗಳನ್ನು ಪ್ರಜಾಪ್ರಭುಗಳು ತಾವು ನೋಡಿಕೊಳ್ಳಲೇ ಬೇಕಾಗುತ್ತದೆ.

(ಎಂಟನೇ ಪುಟ ನೋಡಿ)

ಗುರುನಾನಕ್ - ಆಧ್ಯಾತ್ಮಿಕ ಕವಿ ಪುಂಗವ

ಲೇಖಕರು: ಡಾ। ಗೋಪಾಲಸಿಂಗ್.

ಗುರುನಾನಕರನ್ನು ಪ್ರವಾದಿಯೆಂದು ಕರೆಯಲಾಗಿದೆ. ನಾನಕ್ ಗೃಹಸ್ಥಾಶ್ರಮದ ಪಾವಿತ್ರ್ಯತೆಯನ್ನು ಎತ್ತಿ ಹಿಡಿದರೂ ಅವರ ಬಹುಪಾಲು ಕವಿತೆಗಳು ಪ್ರಾಪಂಚಿಕ ಪರಿತ್ಯಾಗದ ಕುರಿತದ್ದಾಗಿವೆ. ಎಲ್ಲವೂ ಶೂನ್ಯವಾಗುತ್ತದೆ ಹಾಗೂ ಎಲ್ಲವೂ ಬ್ರಹ್ಮಾತ್ಮಕವಾಗಿದೆ ಎಂಬ ದೃಷ್ಟಿಕೋನವೇ ನಾನಕರ ಸಂದೇಶ ಸಾರವೆಂದು ಜನತೆಯ ಮನದ ಮೇಲೆ ಬಿಂಬಿಸಲಾಗಿದೆ. ಆದರೆ ನಾನಕ್ ಜಗತ್ತಿನ ಅಸ್ತಿತ್ವದ ಬಗ್ಗೆ ಹಾಗೂ ದೇವರಾತೆಯ, ಅನಂತವಾದ ಕಾಲಾತೀತತೆಯ ಬಗ್ಗೆ ದೃಢನಂಬಿಕೆ ಹೊಂದಿದ್ದರೂ ನಾನಕರನ್ನು ಸಂತರೆಂದು ಚಿತ್ರೀಕರಿಸಲಾಗಿದೆ.

ನಾನಕ್ ಸಾಮಾಜಿಕ ಕ್ರಾಂತಿಕಾರಿ ಹಾಗೂ ಧರ್ಮ ಸಂಸ್ಥಾಪಕರೆಂದು ಕರೆಯಲಾಗಿದೆ, ನಾನಕ್‌ರನ್ನು ಪವಾಡ ಪುರುಷರೆಂದು ಹೇಳಲಾಗಿದೆ, ಆದರೆ ಅವರು ಮಾನವನನ್ನು ದೇವತೆಯಾಗಿ ಪರಿವರ್ತಿಸಲು ಶ್ರಮಿಸುವುದಾಗಿ ಹೇಳುತ್ತಿದ್ದರು.

ಶ್ರೇಷ್ಠ ಕವಿ

ಇವೆಲ್ಲಕ್ಕಿಂತ ಮಿಗಿಲಾಗಿ ಗುರುನಾನಕ್ ಶ್ರೇಷ್ಠ ಕವಿಯಾಗಿದ್ದರು. ಅವರು ಭಾರತೀಯ ಸಾಹಿತ್ಯದಲ್ಲಿ ಆಧುನಿಕ ಯುಗಾರಂಭದ ಮೂಲ ಪ್ರವರ್ತಕರಾಗಿದ್ದರು. ಉದ್ಭೂತ ಪೆಮ ಬೆಳವಣಿಗೆಗೆ ನಾನಕ್ ಬೋಧಿಸಿದ ಕ್ರಾಂತಿಕಾರಿ ತತ್ವಗಳೇ ಕಾರಣವಾಗಿವೆ. ನಾನಕ್ ಭಾರತೀಯ ಛಂದಶಾಸ್ತ್ರದಲ್ಲಿರುವಂತಹ ಎಲ್ಲ ಛಂದಸ್ಸುಗಳನ್ನೂ, ಜಾನಪದ ಛಂದಸ್ಸನ್ನೂ ತಮ್ಮ ರಚನೆಗಳಲ್ಲಿ ಬಳಸಿಕೊಂಡಿದ್ದಾರೆ. ತಮ್ಮ ಕಾವ್ಯರಚನೆಗಳ ಮತ್ತು ವಿರಿ ಸಹಜವಾಗಿ ವಂತೆ ಸಾಂಪ್ರದಾಯಿಕ ಛಂದಸ್ಸುಗಳನ್ನು ಪರಿಷ್ಕರಿಸಿಕೊಂಡರು. ಬಹುಶಃ ಸರಳ ರಗಳೆ ಮತ್ತು ಮುಕ್ತ ಛಂದದಲ್ಲಿ ಕವನ ರಚನೆಯ ಪ್ರಯೋಗ ನಡೆಸಿದ ಪ್ರಥಮ ಭಾರತೀಯ ಕವಿ ನಾನಕ್ ಆಗಿದ್ದರು. ನಾನಕರೊಂದಿಗೆ ಹಿಂದಿ ಸಾಹಿತ್ಯದ ಆಧುನಿಕ ಯುಗ ಆರಂಭವಾಗಿದ್ದರೂ ಯಾವೊಬ್ಬ ಹಿಂದಿ ಸಾಹಿತ್ಯ ವಿದ್ವಾಂಸರೂ ಈ ವಿಷಯದಲ್ಲಿ ಆಳವಾದ ಅಧ್ಯಯನ ನಡೆಸದಿರುವುದು ವಿಷಾದನೀಯ ಅಂಶವಾಗಿದೆ.

ನಾನಕರ ಕಾವ್ಯ ಆಧ್ಯಾತ್ಮಿಕ ಪ್ರಧಾನವಾಗಿದ್ದರೂ, ಭಾವಗೀತೆಗಳ ಮಾಧುರ್ಯ ಹೊಂದಿದ್ದರಿಂದ, ಅವರನ್ನು ಅನುಭಾವಿ ಕವಿಯೆಂದು ಪರಿಗಣಿಸಲಾಗಿದೆ. ಅವರ ಕಾವ್ಯ ವಸ್ತು ಅಲಂಕರಣಾತಿ, ಅರ್ಥ ಸೂಕ್ತಿಗಳಿಂದ ವಿಜೃಂಭಿಸಿದೆ.

ಕಾವ್ಯದ ಮೆರುಗು

ನಾನಕರ ಕಾವ್ಯ ಭಾರತೀಯ ಸಾಹಿತ್ಯ ಪರಂಪರೆಯಲ್ಲಿರುವ ನವರಸಗಳಾದ ಶೃಂಗಾರ, ಶಾಂತ, ಕರುಣ, ರೌದ್ರ, ಭಯ, ಅದ್ಭುತ, ವೀರ, ಹಾಸ್ಯ ಹಾಗೂ ಭೀಭತ್ಸಗಳನ್ನೂ ಪ್ರತಿಬಿಂಬಿಸಿವೆ. ಈ ರಸಗಳ ಬಹುವಿಧ ಭಾವ ಪ್ರಕಾಶನ ಅವರ ಕಾವ್ಯಕ್ಕೆ ಮೆರುಗಿತ್ತಿವೆ. ನಾನಕರ ಕಾವ್ಯದಲ್ಲಿ ಅನುಭಿಜ್ಞತೆಯಿದೆ. ದೇವರ ಅಸ್ತಿತ್ವ ತಾನುಭವ, ದೈವ ಸಾಕ್ಷಾತ್ಕಾರದ ಮಾರ್ಗ—ಇವುಗಳ ವರ್ಣನೆಯಲ್ಲಿ ಕಲಾತ್ಮಕತೆಯಿದೆ.

ನಾನಕ್ ದೃಷ್ಟಿಯಲ್ಲಿ ಸತ್ಯವೆಂಬುದು ಅಮೂರ್ತವಾದುದಲ್ಲ. ಅದು ಸೌಂದರ್ಯಪೂರ್ಣವಾಗಿಯಾಗಲಿ ಅಥವಾ ಮುಕ್ತವಾಗಿಯಾಗಲಿ ಅವರಿಗೆ ಅನುಭವವಾಗಲಿಲ್ಲ. ನಾನಕರಿಗೆ ಸತ್ಯವೆಂಬುದು ಸಜೀವವಾದ, ಸಕ್ರಿಯವಾದ, ದೃಷ್ಟಿಗೋಚರವಾದ, ಅನುಭವ ನೆಲೆಯಾಗಿತ್ತು.

ನಾನಕರ ಕಾವ್ಯಶೈಲಿ ಸಾರವತ್ತಾದ, ಗಂಭೀರವಾದ, ನೇರವಾದ ಸರಳವಾದ ನುಡಿಗಟ್ಟುಗಳಿಂದ ಬೆಳಗುವುದರಿಂದ ಅವರ ಕೃತಿಗಳು ಇಂದು ಜನಪದ ಸಾಹಿತ್ಯವಾಗುಳಿದಿವೆ. ನಾನಕರ ನಿಸರ್ಗ ಗೀತೆಗಳೂ, ಪ್ರೇಮ ಗೀತೆಗಳೂ ಅವರ್ಣನೀಯವಾಗಿವೆ. ಅವುಗಳು ಅನುಭವಪೊಂದರ ರಸಘಟ್ಟವೆನಿಸುತ್ತವೆ.

ಅಪೂರ್ವ ಶೈಲಿ

ನಾನಕರ ರಚನೆಗಳು ಅಸಾಮಾನ್ಯ ಶೈಲಿಯಲ್ಲಿವೆ. ಅವರ ವಿಚಾರಧಾರೆ ಹಾಗೂ ಬರಹಗಳು ಕ್ರಾಂತಿಕಾರಿಯಾಗಿವೆ. ನಾನಕ್ ಸ್ತ್ರೀಯರನ್ನು ಪುರುಷರಿಗಿಂತಲೂ ಉನ್ನತ ಸ್ಥಾನದಲ್ಲಿಟ್ಟಿದ್ದಾರೆ. ಅವರು ಮಾನವನನ್ನು ಕುರಿತು ಕವನ ರಚಿಸಿದ್ದಾರೆ. ಆದರೆ ಮಾನವ ಸೃಜಿತ ಜಾತಿ, ವರ್ಣ, ಧರ್ಮ, ಭಾಷೆ, ಲಿಂಗ ಹಾಗೂ ಸ್ಥಾನಮಾನಗಳ ವಿರುದ್ಧ ಪ್ರತಿಭಟಿಸಿದ್ದಾರೆ. ಅವರ ಕಾವ್ಯ ಮಾನವನೆಂದರೆ ಏನೆಂಬುದನ್ನು ಕುರಿತು ಆಸಕ್ತಿದಾಯಕವಾಗಿ ವಿಶ್ಲೇಷಿಸಿದೆಯೇ ವಿನಃ ದೇವರೆಂಬುದನ್ನು ಕುರಿತು ವಿವರಿಸಿಲ್ಲ.

ನಾನಕರ ತರುವಾಯ ಮಾನವತೆ ಮಾಡಿರುವ ವೈಜ್ಞಾನಿಕ ಪ್ರಗತಿ ಕುರಿತು ಅವರು ನಿಷೇಧಭಾವನೆ ಹೊಂದಿರದ ಅಂಶ ಅವರ ಕಾವ್ಯಾಭ್ಯಾಸಿಗಳಿಗೆ ವಿಸ್ಮಯಕಾರಿಯಾಗಿ ತೋರುತ್ತದೆ. ಈ ಅಂಶವೇ ನಾನಕ್ ಮಹಾ ವಿಚಾರವಾದಿಯಾಗಿದ್ದರೆಂಬುದಕ್ಕೆ ಹಾಗೂ ಮಹಾನ್ ಸ್ರಷ್ಟಾರರಾಗಿದ್ದಾರೆಂಬುದಕ್ಕೆ ಸಂಕೇತವಾಗಿದೆ.

ಪ್ರಜಾಪ್ರಭುತ್ವಾಚರಣೆಯಲ್ಲಿ ಅಪಘಡ

ಈ ಸಲದ ಪ್ರಜಾಪ್ರಭುತ್ವ ದಿನೋತ್ಸವದಲ್ಲಿ ಮದರಾಸಿನಿಂದ ಹೋಗಿರುವ ಯೆನ್. ಸಿ. ಸಿ. ಭಾಗವಹಿಸಿರುವುದು ಸಂತೋಷದಾಯಕ ಸಂಗತಿಯೇ ಸರಿ. ಆದರೆ ಉತ್ಸವದಲ್ಲಿ ಭಾಗವಹಿಸುವ ಸಲುವಾಗಿ ವಿಮಾನದಳದವರು ಅಭ್ಯಾಸ ನಡೆಸುತ್ತಿದ್ದಾಗ ಮಿಗ್ ವಿಮಾನವೊಂದು ಅಪಘಡಕ್ಕೊಳಗಾದ ಕಾರಣ ವಿಮಾನದಳದವರು ಉತ್ಸವದಲ್ಲಿ ಭಾಗವಹಿಸಲಿಲ್ಲ. ಚಾಲಕನ ಸಾಹಸ ಹಾಗೂ ಕರ್ತವ್ಯದಕ್ಷತೆಯಿಂದಾಗಿ ದಿಲ್ಲಿ ಮಹಾ ನಗರದ ಜನತೆಗೇನೂ ಅಪಾಯ ಸಂಭವಿಸಿಲ್ಲವಾದರೂ ವಿಮಾನ ದಳಕ್ಕೆ ನಷ್ಟವಾಗಿರುತ್ತದೆ. ಅಂದರೆ ಭಾರತೀಯರೆಲ್ಲರಿಗೂ ನಷ್ಟವೇ ಇದೆ. ಇದೇನನ್ನಾದರೂ ಸೂಚಿಸುತ್ತದೆಯೇ? ನಮ್ಮ ಪ್ರಜಾಪ್ರಭುತ್ವಕ್ಕೇನಾದರೂ ಅಪಘಡ ಸಂಭವಿಸೀತೇ? ಕಮ್ಯುನಿಸ್ಟ್ ನಾಯಕ, ಬಂಗಾಲದ ಉಪ ಮುಖ್ಯಮಂತ್ರಿ ಬಸುರವರು ಕೇಂದ್ರ ಸರಕಾರದ ಆಸನವನ್ನು ಆಕ್ರಮಿಸಲು ಸಿದ್ಧವಾಗಿರಬೇಕೆಂದು ತನ್ನ ಪಕ್ಷದವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಹಾಗಿರುವಾಗ......

ಉತ್ಸವದ ಸಮಯ ರಾಷ್ಟ್ರಾಧ್ಯಕ್ಷರು ಭಾಷಣವೀಯುವ ಅಭ್ಯಾಸವಿದೆ. ಈ ಸಲ ಶ್ರೀಯುತ ವಿ. ವಿ. ಗಿರಿಯವರು ಭಾಷಣ ಮಾಡಿದರು. ಅವರು ಭಾಷಣದಲ್ಲಿ ಹುತಾತ್ಮರಿಗೆ ಗೌರವ ಸಲ್ಲಿಸಿದರು. ಅದೇನನ್ನೂ ಇಚ್ಛಿಸದೆ ಮಾತೃಭೂಮಿಗಾಗಿ ತಮ್ಮನ್ನು ಬಲಿದಾನ ಮಾಡಿಕೊಂಡಿರುವ ಸೈನಿಕರಿಗೆ ಅವರು ಗೌರವ ಸಲ್ಲಿಸಿದರು. ಸ್ವಾತಂತ್ರ್ಯ ಸಮರಾಂಗಣದಲ್ಲಿ ತಮ್ಮ ದೇಹವನ್ನರ್ಪಿಸಿರುವ ತ್ಯಾಗಿಗಳಿಗೆ ಅವರು ಗೌರವ ಸಲ್ಲಿಸಿದರು. ಆದರೆ ಯಾವ ಸೈನಿಕರಿಗೆ, ಹುತಾತ್ಮರಿಗೆ, ತ್ಯಾಗಿಗಳಿಗೆ? 'ರಾಷ್ಟ್ರಪಿತ' ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಜೀವ ಕೊಟ್ಟವರಿಗೆ.

ಮೋಹನದಾಸ ಕರಂಚಂದ ಗಾಂಧಿಯವರು ಮಹಾತ್ಮರೇನೋ ಸರಿ. ಅವರನ್ನು ಭಾರತ ಮಾತೆಯ ಸುಪುತ್ರರನ್ನು ನಾವು 'ತಾಯಿಡಂಡ'ನೆಂದು ಕರೆಯುವ ದೆಂಸರಿ ಅದ್ಯಾವ ಗಿರಿಯನ್ನೇರುವದೋ! ಆದರೂ ಅದಿಂದು ಅಭ್ಯಾಸವಾಗಿ ಬಿಟ್ಟಿದೆ—ಸಮಾಜವಾದದ ಸೋಗಿನಲ್ಲಿ—ಆಧುನಿಕ ನವ-ನಾಗರೀಕತೆಯ ನೋಟದಲ್ಲಿ. ಮಹಾತ್ಮಾ ಗಾಂಧೀಜೀ ಸ್ವಾತಂತ್ರ್ಯಕ್ಕೋಸ್ಕರ ತ್ಯಾಗ ಮಾಡಿದ್ದಾರೆ, ಹೆಣಗಾಡಿದ್ದಾರೆ, ಎಲ್ಲಾ ಸರಿ. ಅವರು ಮಾತ್ರ ತಮ್ಮ ತನು-ಮನ-ಧನ ಸಾರ-ಸರ್ವಸ್ವವನ್ನು ಭಾರತಾಂಬೆಯ ಪದತಲದಲ್ಲಿ ಮಡದವರೇನು? ಇತರರು ಮಮಗೆ ಮಾಡುವ ಅನ್ಯಾಯವಾದರೂ ಏನು? ಭಾರತಕ್ಕೆ ಅವರೆಸಗಿರುವ ಅಪಚಾರವಾದರೂ ಅದ್ಯಾವುದು? ಬಾಲ ಗಂಗಾಧರ ಟಿಳಕರೇನು ಕಮ್ಮಿ? ಸಾವರ್ಕರರೇನು ಕಮ್ಮಿ? ಕೇಶವ ಬಲಿರಾಂ ಹೆಡ್ಗೆವಾರರೇನು ಕಮ್ಮಿ? ಸುಭಾಷ್ಚಂದ್ರ ಬೋಸ್ ಸುಮ್ಮಗಿದ್ದರೇನ? ಆ ಕ್ರಾಂತಿಕಾರಿಗಳಿಂದು ನಮಗೆ ಶಾಂತಿ ಪ್ರಿಯರಿಗೆ ಸಲ್ಲದ ಸರಿಯೇನು? ಅವರಿಂದು ನೆಹ್ರೂರ ಹೊಳೆ ಹರಿಸದಿದ್ದಲ್ಲಿ ನಾವಿಂದು ಸ್ವತಂತ್ರರೆನಿಸಿಕೊಳ್ಳುತ್ತಿದ್ದೆವೇನ? ಹಾಗಿರೆ ಮಾಗ ಶ್ರೀ ಗಿರಿಯವರ ಬಾಯಿಂದ ಇಂತಹ ಮಾತುಗಳೆಂತು ಬಂದವೆಂಬುದು ಆಶ್ಚರ್ಯದಾಯಕ ವಿಷಯವಿದೆ. ಅವರು ಇಂತಹ ಸಮಯಗಳಲ್ಲಿ ಪ್ರಧಾನಿಯವರು ತಯಾರಿಸಿ ಕೊಟ್ಟ ಭಾಷಣವನ್ನು ಓದಬೇಕೇನು? — ಕಮ್ಯುನಿಸ್ಟ್ ದೇಶಗಳಲ್ಲಿರುವಂತೆ ಸರಕಾರ (ಪಾರ್ಟಿ) ಒಪ್ಪಿತ ಭಾಷಣವನ್ನು ಅವರು ಓದಬೇಕೇನು?

ಅಪಘಡ ಸಂಭವಿಸಿದೆ. ಮುನ್ನೆಚ್ಚರಿಕೆ ಕೊಟ್ಟಿದೆ. ಭಾರತೀಯರಿಗೆ ಗಣರಾಜ್ಯ ಬೇಕೇನು? ಅಥವಾ ಕಮ್ಯುನಿಸ್ಟ್-ಸಾಂಘಿಕ-ಗುಲಾಮ ಜೀವನ ಬೇಕೇನು? ಅಥವಾ ಪ್ರತಿಯೊರ್ವ ಭಾರತೀಯನೂ ಯೋಚಿಸಬೇಕು. ಭಾರೀ ಅಪಘಡ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕು. ಕಾಲ ಮೀರಿದ ಮೇಲೆ ಕಣ್ತೆರೆದೇನು ಫಲ! ಚೆಲ್ಲಿ ಹೋದ ಹಾಲಿನ ಮೇಲೆ ಕಣ್ಣೀರು ಸುರಿಸಿ ಏನು ಫಲ? ಭಾಷಾ ಜಗಳಾಟ, ಪ್ರಾಂತ್ಯ ಹೋರಾಟ ವಗೈರೆಗಳನ್ನು ಬದಿಗೆ ಸರಿಸಿ ಪ್ರಜಾಪ್ರಭುತ್ವದ ಉಳಿವಿಗಾಗಿ ಭಾರತೀಯರು (ಪರದೇಶಗಳಿಂದ ಹಣ, ಸೂಚನೆ ವಗೈರೆಗಳನ್ನು ಪಡೆಯುವವರಲ್ಲ—ನೈಜ ಭಾರತೀಯರು) ಒಂದಾಗ ಬೇಕಾಗಿದೆ ಈಗ.

—ಶಿವಶಂಕರ

ಪಕ್ಷ-ಪ್ರತಿಪಕ್ಷ

ಆಡಳಿತ ಪಕ್ಷದಲ್ಲಿಂದು ಜಗ್ಗಾಟ
ಆಟ ಪ್ರೇಮಿಗಳಿಗೆ ಇದುವೆ ರಸದೂಟ
ಅಧಿವೇಶನದ ಪುಢಾರಿ ಸಿಕ್ಕಿದನು ಮುಖತಿ
ಸಡಗರದ ವೃದ್ಧದಳೀತ ತಿಂದನು

"ಚಪಾತಿ"

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526
ಸಂಪುಟ ೪೯
ಸಂಚಿಕೆ ೨೪
VOL. 49
No. 24

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೨—೨—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ತಳುವ ತಾಳ್ಮೆಯಿಲ್ಲ

ಸಮಾಜವಾದ ನಾವು ನೆಚ್ಚಿದ ಸಾಮಾಜಿಕ ಪ್ರಣಾಳಿ. ಶ್ರೀ ಸಾಮಾನ್ಯನನ್ನೂ ಶ್ರೀ ಸಂಪನ್ನನನ್ನೂ ಒಂದೇ ತಕ್ಕಡಿಯಲ್ಲಿ ತೂಗುವ ವಸ್ತು ಪ್ರಯತ್ನ. ಆರ್ಥಿಕ—ಸಾಮಾಜಿಕ ರಂಗಗಳಲ್ಲಿ ಸಮಾಜವಾದವನ್ನು ಯಾವ ಬೆಲೆ ತೆತ್ತಾದರೂ ತತ್‌ಕ್ಷಣ ಜ್ಯಾರಿಗೆ ತರಬೇಕೆಂಬ ಹಟ್ಟಯಿಕೆ ಯುವಜನಾಂಗದ್ದು. ಸಮಾಜವಾದ—ಶ್ರೀಸಾಮಾನ್ಯರ ಜಪ ಜಪಿಸುತ್ತಲೇ ತಮ್ಮ ಅಧಿಕಾರವು ತಪ್ಪಿ ಹೋಗಬಹುದೆಂದು ಹೆದರಿದ ಪ್ರಧಾನಿ ಇಂದಿರಾ ಗಾಂಧಿಯವರು ವಿಭೀಷಣ ಪ್ರವೃತ್ತಿಗ ತೊಡಗಿದರು; ಕಾಂಗ್ರೆಸ್ಸನ್ನು ಮುರಿದರು. ತನ್ನದೇ ಕಾಂಗ್ರೆಸ್ ಪಕ್ಷವನ್ನು ರಚಿಸಿಕೊಂಡು, ಶ್ರೀಸಾಮಾನ್ಯನ ಹೆಸರಲ್ಲಿ ಸಮಾಜವಾದದ ಜಪದಲ್ಲಿ ದಿನಯಾಪನೆ ಮಾಡುತ್ತಿರುವುದನ್ನು ಯಾರೂ ಮರೆಯಲಾರರು.

ಸಮಾಜವಾದದ ಗುರಿಯತ್ತ ಇಟ್ಟ ಎತ್ತರದ ಹೆಜ್ಜೆಯೆಂದು ಅವಸರವಸರದಲ್ಲಿ ೧೪ ದೊಡ್ಡ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ ಕೆಚ್ಚು ಶ್ರೀಮತಿ ಗಾಂಧಿಯವರದ್ದು. ರಾಷ್ಟ್ರೀಕರಣ ವಿರೋಧಿಗಳು ಈ ಹೆಜ್ಜೆ ರಾಜಕೀಯ ಕಾರಣಪ್ರೇರಿತವೆಂದು ವಾದಿಸಿದರೂ ನ್ಯಾಯಸ್ಥಾನವು ಇದನ್ನು ಒಪ್ಪಲಿಲ್ಲ. ಆದರೆ, ರಾಷ್ಟ್ರೀಕರಣವು ಅಸಿಂಧುವೆಂದು ನ್ಯಾಯಾಲಯವು ಅಭಿಪ್ರಾಯಪಡಲು ಬೇರೆಯೇ ಕಾರಣಗಳಿದ್ದುವು. ಕಾಂಗ್ರೆಸ್ಸಿನ ಇಂದು ಸಿಂಡಿಕೇಟ್ ಎಂದು ಕರೆಯಲ್ಪಡುವ ಗುಂಪು ರಾಷ್ಟ್ರೀಕರಣ ವಿರೋಧಿಯೇನಲ್ಲ. ಆದರೆ, ಗಡಿಬಿಡಿಯಿಂದ ತರಾತುರಿಯಿಂದ ಇಂತಹ ದಿಟ್ಟ ಹೆಜ್ಜೆಯಿಡಬಾರದಿತ್ತೆಂದು ಹಿಂದೆಯೇ ಹೇಳಿದೆ. ಶ್ರೀಮತಿ ಗಾಂಧೀಯವರಿಂದ ಮುರಾರ್ಜೀ ಭಾವಿ ನಿರ್ಗಮೀಕರಣ ಮತ್ತು ಬ್ಯಾಂಕ್ ರಾಷ್ಟ್ರೀಕರಣಗಳನ್ನು ಯಾವ ಪೂರ್ವ ಯೋಜನೆ—ಯೋಚನೆಗಳಿಲ್ಲದೆ ಏಕಪಕ್ಷೀಯವಾಗಿಯೇ ಜ್ಯಾರಿಗೆ ತಂದದ್ದು ತೀರ ಗಡಿಬಿಡಿಯಲ್ಲೇ ಎಂಬುದೀಗ ವ್ಯಕ್ತವಾಗಿದೆ.

ನ್ಯಾಯಾಲಯವು ತನ್ನ ಹೆಜ್ಜೆಯನ್ನು ಅಸಿಂಧುವೆಂದು ಸಾರಿದ್ದರಿಂದ ಶ್ರೀಮತಿ ಗಾಂಧಿಯವರು ತಮ್ಮ ಕಡಿದು ಹೋದ ಮೂಗನ್ನು ಮತ್ತೆ ಜೋಡಿಸಬೇಕಾಯಿತು. ಇದಕ್ಕಾಗಿಯೇ ಮತ್ತೆ ಅವೇ ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದರು. ಮೊದಲಿನ ಸುಗ್ರೀವಾಜ್ಞೆಯ ಬಗ್ಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಅಧ್ಯಯನ ಮಾಡಿಯೇ ಈ ಎರಡನೆಯ ಆಜ್ಞೆ ಹೊರಟಿದ್ದರಿಂದ, ಇದರ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರೂ ಅನುಕೂಲ ತೀರ್ಮಾನ ಹೊರಡುವುದೆಂಬ ಆಶಯವನ್ನು ಹೊಂದಬಹುದು. ಸ್ವತಂತ್ರ ಪಕ್ಷ ಮತ್ತು ಜನಸಂಘಗಳನ್ನು ಬಿಟ್ಟು ಉಳಿದ ಎಲ್ಲ ರಾಜಕೀಯ ಪಕ್ಷಗಳು ಸಾಮಾನ್ಯವಾಗಿ ಬ್ಯಾಂಕ್ ರಾಷ್ಟ್ರೀಕರಣವನ್ನು ಸ್ವಾಗತಿಸಿವೆಯಾದ್ದರಿಂದ ಈ ಹೆಜ್ಜೆಯಿಂದ ಹಿಂದೆ ಸರಿಯಬೇಕಾದ ಪ್ರಮೇಯವಿಲ್ಲ. ಆದರೂ ಹೆಜ್ಜೆ ಇಡುವಾಗ ಪೂರ್ವಾಪರ ವಿವೇಚನೆ ಅಗತ್ಯವೆಂದೂ ಪ್ರಜಾಪ್ರಭುಗಳ ಹೆಸರಲ್ಲಿ ಯಾರಿಗಾದರೂ ಅನ್ಯಾಯ ಮಾಡುವುದು ಸರಿಯಲ್ಲವೆಂದೂ ಸರಕಾರ ನಡೆಸುವವರು ತಿಳಿದಿರಬೇಕು.

ಶ್ರೀಮತಿ ಗಾಂಧಿಯವರು ಬಜೆಟ್ ಅಧಿವೇಶನವನ್ನು ಎದುರಿಸಲು ಸಿದ್ಧರಾಗಿದ್ದಾರೆ. ಇದಕ್ಕೆ ಮೊದಲು ಹಲವು ಸಮಸ್ಯೆಗಳಿಗೆ ಉತ್ತರವೀಯಬೇಕಾಗಿತ್ತು. ಅವರ ಉತ್ತರ ಹೇಳಿದ್ದು ಚಂಡಿಗಡ ಪ್ರಶ್ನೆಗೆ ಮಾತ್ರ. ಈ ಉತ್ತರವಾದರೂ ಸರ್ವ ಸಮ್ಮತವಲ್ಲ. ಸಂತ ಫತ್ತೇ ಸಿಂಗರ ಜೀವವುಳಿಸುವುದಕ್ಕಾಗಿಯೇ ಚಂಡಿಗಡವನ್ನು ಅವರಿಗೆ ಬಳುವಳಿ ಕೊಡಲಾಯಿತು ಅಷ್ಟೆ. ಮುಂದೆ ಪಂಜಾಬ–ಹರಿಯಾಣಗಳ ರಾಜಕೀಯ ವಲಯಗಳಲ್ಲಿ ಯಾವ ಬಗೆಯ ಬೆಳವಣಿಗೆಯಾಗಬಹುದೆಂದು ಕಾದು ನೋಡಬೇಕು.

ರಾಜಧನದ ಪ್ರಶ್ನೆಗೆ ಯಾವ ಉತ್ತರವೂ ಬಂದಿಲ್ಲ. ರಾಜ– ಮಹಾರಾಜರೊಡನೆ ಈ ಸಂಬಂಧದಲ್ಲಿ ಮಾತುಕತೆ ನಡೆದಿದ್ದರೂ ಅದು ಸಫಲವಾಗಿಲ್ಲ. ಹಿಂದೆ ಗೃಹಮಂತ್ರಿ ಸರ್ದಾರ ವಲ್ಲಭಭಾಯಿ ಪಟೇಲರ ಕಾಲದಲ್ಲಿ ಕೇಂದ್ರ ಸರಕಾರ ಮತ್ತು ರಾಜ-ಮಹಾರಾಜರ ನಡುವೆ ಒಡಂಬಡಿಕೆಯಾಗಿತ್ತು. ಮುಂದೆ, ಜವಾಹರಲಾಲರ ಕರೆಯಂತೆ ಈ ರಾಜ-ಮಹಾರಾಜರಲ್ಲಿ ಹೆಚ್ಚಿನವರು ತಮ್ಮ ರಾಜಧನದಲ್ಲಿ ಕಡಿತ ಮಾಡಿಕೊಂಡದ್ದೂ ಉಂಟು. ಈಗ ಶ್ರೀ ಸಾಮಾನ್ಯನ ಸಮಾಜವಾದದ ಹೆಸರಲ್ಲಿ ಇವರಿಗೆ ದೊರೆಯುತ್ತಿರುವ ರಾಜಧನವೂ ಸಂವಿಧಾನದತ್ತವಾದ ಸೌಲಭ್ಯಗಳೂ ಇಲ್ಲವಾಗುವ ಕಾಲ ಬರುತ್ತಿದೆ. ಇವನ್ನು ಕಳೆದುಕೊಳ್ಳಲು ಯಾರು ತಾನೇ ಸಿದ್ಧರಾದಾರು? ಸಂಧಾನವು ಅಮಾನ್ಯವಾದ್ದರಿಂದ ಕೇಂದ್ರವು ಏಕಪಕ್ಷೀಯವಾಗಿಯೇ ಕ್ರಮ ಕೈಕೊಳ್ಳಬೇಕಾಗುತ್ತದೆ. ಈ ಕ್ರಮವಷ್ಟೂ ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಂಭವ ಬಹಳವಿರುವುದರಿಂದ, ಈ ಸಂಬಂಧದಲ್ಲಿ ಸೂಕ್ಷ್ಮ ವಿವೇಚನೆ ಅತ್ಯಗತ್ಯವಾಗಿದೆ. ಮೂಲಭೂತ ಅಧಿಕಾರಗಳನ್ನೇ ಶ್ರೀ ಸಾಮಾನ್ಯನ ಹೆಸರಿನಲ್ಲಿ ಮೊಟಕು ಮಾಡುವ ಬಗ್ಗೆ ಮಾತುಗಳು ಕೇಳಿ ಬರುತ್ತಿವೆ. ಶ್ರೀಮತಿ ಇಂದಿರಾ ಗಾಂಧಿಯವರು ಕಮ್ಯೂನಿಸ್ಟರೇ ಮೊದಲಾದವರ ಸಹಕಾರದಿಂದ ಸಂವಿಧಾನವನ್ನು ತಿದ್ದುಪಡಿ ಮಾಡಲು ಮುಂದೆ ಬರುವ ಸಾಧ್ಯತೆಯಿದೆ. ಆದರೆ, ೫೫ ಕೋಟಿ ಜನರಿಗಿರುವ ಮೌಲಿಕ ಅಧಿಕಾರವನ್ನು ೫೦೦ ಪ್ರತಿನಿಧಿಗಳು ಗೊತ್ತುಮಾಡುವುದು ನ್ಯಾಯವಾದೀತೆ? ಆದುದರಿಂದಲೇ ಈ ಬಗ್ಗೆ ವಿರೋಧವೂ ಕಂಡು ಬರುತ್ತಿದೆ.

ಪ್ರಧಾನಿ ಶ್ರೀಮತಿ ಗಾಂಧಿಯವರು ರಾಕೆಟ್ ವೇಗದಲ್ಲಿ ಸಮಾಜವಾದವನ್ನು ತರಲು ಹವಣಿಸಿದ್ದು ನಿಜ; ಆದರೆ, ಅವರಿಗೆ ಮೊದಲಿನವರೂ ಇದೇ ರೀತಿ ಹವಣಿಸಿದ್ದರೆಂಬ ದನ್ನವರು ಮರೆತುಬಿಟ್ಟರು. ತೊಡಕುಗಳನ್ನು ನಿವಾರಿಸಿಕೊಂಡು ಸಮಾಜವಾದದತ್ತ ಮುಂದುವರಿಯುವಾಗ ನಿಧಾನ ಅನಿವಾರ್ಯವಾಗುತ್ತ ಬಂತು. ಇದರ ಅನುಭವ ಶ್ರೀಮತಿ ಗಾಂಧಿಗೂ ಆಗುತ್ತ ಬಂದಿದೆ; ಇದರಿಂದಾಗಿ ಅವರು ತಮ್ಮ ಗುಂಪಿನ ಯಾವ ಜನರ ಬೆಂಬಲಕ್ಕೆ ಎರವಾಗಿ ಅಧಿಕಾರ ಚ್ಯುತರಾಗಬೇಕಾದೀತು; ಇಲ್ಲವೇ, ಕಮ್ಯುನಿಸ್ಟರ ಶಕ್ತಿ-ಯುಕ್ತಿಗಳ ಬಲದಿಂದ ಶ್ರೀ ಸಾಮಾನ್ಯನ ಹೆಸರಲ್ಲೇ ಆತನ ಮೌಲಿಕ ಅಧಿಕಾರಗಳನ್ನು ಕಿತ್ತು ಹಾಕಬೇಕಾದೀತು; ತಳುವಷ್ಟು ತಾಳ್ಮೆಯಂತೂ ಯಾರಿಗೂ ಇಲ್ಲ.

ತಿರುವು – ಮುರುವು

ಉದ್ಘಾಟನೆಗೆಂದು, ಅಧ್ಯಕ್ಷತೆಗೆಂದು ಒಪ್ಪಿಕೊಂಡವರು ತಡಮಾಡಿ ಬರುವುದು ಅಥವಾ ಅನಿವಾರ್ಯ ಕಾರಣಗಳನ್ನು ಮುಂದಿಟ್ಟು ಅಥವಾ ಮುನ್ಸೂಚನೆಯೇ ನೀಡದೆ ಗೈರುಹಾಜರಾಗುವುದು ಇದುವರೆಗೆ ನಡೆದು ಬಂದ ಪದ್ಧತಿ ಇಂಡಿಯನ್ ಪಂಕ್ಚುವಾಲಿಟಿಯು ಇವರ ಸೊತ್ತಾಗಿತ್ತು.

ಇತ್ತೀಚೆಗೆ ವರದಿಯಾದಂತೆ 'ದೊಡ್ಡ ಮನುಷ್ಯ'ರ ಈ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಸಂಗ ನಡೆದಂತಿದೆ. ಕಟ್ಟಡವೊಂದರ ಉದ್ಘಾಟನೆಗೆಂದು ಗೊತ್ತಾಗಿದ್ದ ಮಾನ್ಯ ಮಂತ್ರಿವರ್ಯರು ನಿಯಮಿತ ವೇಳೆಗೆ ಸರಿಯಾಗಿ ಆಗಮಿಸಿದ್ದರೂ ಉದ್ಘಾಟನೆ ನಡೆಯಲಿಲ್ಲವಂತೆ. ಕಟ್ಟಡದ ಕೆಲಸವೇ ಪೂರ್ಣವಾಗದ್ದರಿಂದ ಉದ್ಘಾಟನೆ ಮಾಡುವುದು ಅಸಾಧ್ಯವಾಯಿತಂತೆ. ಪೂರೈಸದಷ್ಟಕ್ಕೆ ಉದ್ಘಾಟನೆ ಮಾಡಲಿಲ್ಲವೇಕೋ ತಿಳಿಯದು. ಅಂತೂ ಕಂಟ್ರಾಕ್ಟರು-ಕೂಲಿಕಾರರ ಅಧಿಕಾರಗಳೇ ಬಲಿತಿರುವ ಈ ಕಾಲದಲ್ಲಿ ಅವರು ಇಟ್ಟರೆ ಉಂಟು ಎಂಬಂತಾಗಿದೆಯೆಂಬುದಕ್ಕೆ ಬೇರೆ ಉದಾಹರಣೆ ಅನಗತ್ಯ.

ಯಕ್ಷಗಾನ

ತಾ. 13, ಶ್ರೀ ಜನಾರ್ದನ ದೇವಸ್ಥಾನದ ಉತ್ಸವದ ಅಂಗವಾಗಿ ಭಾಸ್ಕರ ಶೆಟ್ಟಿ, ಯಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾ ಮಂಡಲ (ರಿ.) ಉಡುಪಿ ಇದರ ಅರ್ಥಧಾರಿಗಳ ಕೂಡುವಿಕೆಯಿಂದ ಕರ್ಣಾರ್ಜುನ ಕಾಳಗ ಎಂಬ ಯಕ್ಷಗಾನ ಕೂಟವು ಶ್ರೀಗಳಾದ ಉಡುಪಿ ಕೆ. ನಾರಾಯಣ ಶೆಟ್ಟಿ ಇವರ ಹಾಡುಗಾರಿಕೆ, ಮಟ್ಟಿ ಸುಬ್ಬರಾವ್–ಮೃದಂಗ, ಎನ್. ಗೋವರ್ಧನ ರಾವ್ ಚೆಂಡೆ, ಸರ್ವ ಶ್ರೀ ಪೊಲ್ಯ ದೇಜಪ್ಪ ಶೆಟ್ಟಿ, ಮಟ್ಟೆಕೋಟೆ ಸುಬ್ರಾಯ, ಸೀತಾನದಿ ಗಣಪಯ್ಯ ಶೆಟ್ಟಿ, ಪಡುಬಿದ್ರಿ ವಾಸು ಶೆಟ್ಟಿ, ಎಡಮೂರು ವಿಟ್ಠಲ ಶೆಟ್ಟಿ, ಸಿ. ಎಲ್. ರಾಘವೇಂದ್ರರಾವ್, ಸಿ. ಸಿ. ಗೋವಿಂದ ನಾಯಕ್, ಎಮ್. ವೆಂಕಟಾಚಲರಾವ್, ಬಾ. ಲಾ. ಸಾ. ಉಪಾಧ್ಯಾಯ, ಶ್ರೀ ತಿಮ್ಮ ಶೆಟ್ಟಿ ಮೊದಲಾದ ಕಲಾವಿದರಿಂದ ಯಶಸ್ವಿಯಾಗಿ ಜರಗಿತು. ಪೊಲ್ಯ ದೇಜಪ್ಪ ಶೆಟ್ಟಿಯವರು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 267/1969.

ಕಾರ್ಕಳ ಶ್ರೀ ವೆಂಕಟ್ರಮಣ ದೇವರ ಭಂಡಾರ ಯಾದ್ರಿ ಆಡಳ್ತೆ ಮೊಕ್ತೇಸರರು.

ಕೆ. ಸಂಜೀವ ಪ್ರಭು ಸಹಾ—ವಾದಿಗಳು.

ಜೋಗಪ್ಪ ಶೆಟ್ಟಿ ಸಹಾ—ಪ್ರತಿವಾದಿಗಳು.

8. ಕಿಟ್ಟ ಶೆಟ್ಟಿ, ಮಹಾಬಲ ಸೆಟ್ಟರ ವಿಧವೆ, 6. ಶೀನರ ಶೆಟ್ಟಿ, 8. ಸರ್ವೋತ್ತಮ, 9. ದಾಸ, 10. ಸರೋಜಿನಿ—ಕಿಟ್ಟ ಶೆಟ್ಟರ ಮಕ್ಕಳು.

ಕಾರ್ಕಳ ತಾಲ್ಲೂಕು ಹಿರ್ಗಾನ ಗ್ರಾಮ ಪರೀಕೆರೆಯೆಂಬಲ್ಲಿರುವವರು.

11. ವಿಟಲ ಶೆಟ್ಟಿ, ಕಾರ್ಕಳ ತಾಲ್ಲೂಕು, ಯರ್ಲಪಾಡಿ ಗ್ರಾಮದ ತೋಟ ಎಂಬಲ್ಲಿರುವವ—

ವಾದಿ ದೇವರ ಭಂಡಾರದ ಪೂರ್ವಾಧಿಕಾರಿ ಬೈಲೂರು ಬಾಲಕೃಷ್ಣ ಕಿಣಿ ಮತ್ತು ವಿಶ್ವನಾಥ ಸೆಟ್ಟಿ ವಗೈರೆಯರು ತಾ. 10.9.1919 ರಲ್ಲಿ ಡಿ. ಕಿ. ಮಾಡಿಕೊಂಡ ಕರಾರು ಪ್ರಕಾರ ದಾವಾ ಆಸ್ತಿ ಜವಾಬ್ದಾರಿಯಿಂದ ಬರತಕ್ಕ ಕಳೆದ 6 ವರುಷಗಳ ಸಲುವಳಿ ಬಡ್ಡಿ ಸಹಾ ರೂಪಾಯಿ 604.16 ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾ. 23.3.70 ಕ್ಕೆ ನಿಮ್ಮ ಹಾಜರು ಬಗ್ಗೆ ಇಡೋಣಾಗಿರುತ್ತದೆ. ಆಕ್ಷೇಪ ಇದ್ದರೆ ಸದ್ರಿ ದಿನ ನೀವು ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರು ಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

Sd/. K. V. Kamath
Advocate for Plaintiff
Karkala, 13-2-70.

ಶ್ರೀ ಪುರಂದರ ದಾಸರು ತೋರಿದ ದಾರಿ

ಲೇಖಾಂಕ — ೨

ಲೇಖಕರು : ಶ್ರೀ ಸಿ. ಎಸ್. ನಾಗರಾಜ್

ಕೇವಲ ಶರೀರವನ್ನು ತೊಳೆಯುವುದರಿಂದ ಯಾವನೂ ಉತ್ತಮನಾಗುವುದಿಲ್ಲ. ಮನದಲ್ಲಿ ಅಡಗಿರುವ ಮಲಿನಗಳ ಸಮೂಹವನ್ನು ಯಾವನ ತೊಡೆದು ಹಾಕುತ್ತಾನೋ ಅವನೇ ಪರಿಶುದ್ಧನೆಂದೂ, ಉತ್ತಮನೆಂದೂ ಪುರಂದರದಾಸರು ತಮ್ಮ "ತನುವ ನೀರೊಳಗದ್ದಿ ಫಲವೇನು ...." ಎಂಬ ಕೀರ್ತನೆಯಲ್ಲಿ ಅತ್ಯಂತ ಉನ್ನತವಾಗಿ ಚಿತ್ರಿಸಿ ಹಾಡಿದ್ದಾರೆ. ಇಷ್ಟಾದರೂ, ನಾವು ಎಂದಾದರೊಂದು ದಿನ ಈ ರೀತಿ ಪರಿಶುದ್ಧರಾಗಲು, ಉತ್ತಮರಾಗಲು ಪ್ರಯತ್ನಿಸಿದ್ದೇವೆಯೆ? ಖಂಡಿತಾ ಇಲ್ಲ. ಜೀವನದಲ್ಲಿ ಸತ್ಯವನ್ನು ಆರಾಧಿಸಿದಂತೆ ನಡೆದುಕೊಳ್ಳುವವರೇ ಮುಕ್ತಿ ಹೊಂದಲು ಅರ್ಹರು ಎಂಬುದಾಗಿಯೂ ಹೇಳಿದ್ದಾರೆ.

'ಮಡಿಯ' ಬಗ್ಗೆ ಪುರಂದರದಾಸರು ಹೇಳುತ್ತಾ ಕೇವಲ ದಿನಕ್ಕೆ ಮೂರು ಬಾರಿ ಸ್ನಾನ ಮಾಡಿ 'ಮಡಿವಂತ'ನೆಂದರೆ ಅದು ಸರಿಯೂ ಆಗದ ಮಾತು. ಹೃದಯದಲ್ಲಿ ತುಂಬಿರುವ ಕಾಮಕ್ರೋಧವನ್ನು ಬಿಟ್ಟು, ದೇವರನ್ನು ಸದಾ ನೆನೆಯುತ್ತ, ದೇವರ ಧ್ಯಾನದಲ್ಲಿ ತಲ್ಲೀನನಾಗುವುದೇ ನಿಜವಾದ ಮಡಿಯು, ಮಡಿಯು ಕೇವಲ ಬ್ರಾಹ್ಮಣರಿಗೆ ಮಾತ್ರವೇ ಮೀಸಲಲ್ಲ. ಯಾವ ಜಾತಿಯವನಾದರೂ ಈ ರೀತಿಯ 'ಆಚಾರದ, ಭಕ್ತಿಯ, ಮಡಿ ಮಾಡಿದರೆ ಅವನೇ ಸದ್ಗುಣ ಸಂಪನ್ನನಷ್ಟೇ ಅಲ್ಲ, ಪರಿಶುದ್ಧನೂ ಮುಕ್ತಿವಂತನೂ ಆಗುತ್ತಾನೆಂದು ಪುರಂದರದಾಸರ "ಮಡಿ, ಮಡಿ ಎಂದಡಿಗಡಿಗ್ಹಾರುತಿ, ಮಡಿ ಮಾಡುವ ಬಗೆ ಬೇರುಂಟು'— ಎಂಬ ಜನಪ್ರಿಯ ಕೀರ್ತನೆಯೊಂದರಲ್ಲಿ ಬಹಳ ಚೆನ್ನಾಗಿ ವರ್ಣಿಸಿದೆ.

ಜೀವನದಲ್ಲಿ ಅನೇಕ ಸಂದರ್ಭಗಳು ನಮಗೆ ವಿರುದ್ಧವಾಗಿರುವಂತೆ ಕಂಡುಬರುತ್ತವೆ. ದಾಸರು ಅದಕ್ಕೆ "ಧೈರ್ಯಗೆಡಬೇಡಿರಿ, ನಿರಾಶರಾಗಬೇಡಿ, ಪುರಂದರವಿಠಲನನ್ನು ಧ್ಯಾನಿಸಿರಿ" ಎಂದು ಮೂಢರನೇಕರಿಗೆ, ಅಷ್ಟೇಕೆ, ನಮ್ಮೆಲ್ಲರಿಗೂ ಸನ್ಮಾರ್ಗ ತೋರಿದ್ದಾರೆ.

ಎಲ್ಲಾ ಜನರೇ, ನೀವು ಬುದ್ಧಿವಂತರಾಗಿದ್ದೀರೆಂದು ಎಂದೂ ಭಾವಿಸಬೇಡಿ. ನೀವು ಕೇವಲ ಪರರೇಳಿಗಾಗಿ ಬೆಳೆಯುತ್ತಿರುವಿರಿ. ಪರರೇಳಿಗೆ ಪರಹಿತದ ಬೆಳವಣಿಗೆಯನ್ನು ಸಹಿಸಿಕೊಳ್ಳಲು ಪ್ರಯತ್ನಿಸಿ ಎಂದು ನೀವು ನಿಮ್ಮನ್ನೇ ಅರಿಯಿರಿ 'ದೇವಮಾನವ'ರೆಂದು ಕರೆದಿದ್ದಾರೆ.

ಪಾಳುಗುಡಿಯ ದುರಸ್ತಿ ಮಾಡಿ, ದೇವಾಲಯದ ಜೀರ್ಣೋದ್ಧಾರ ಮಾಡಿಸಿದೆ' ಎಂದು ಮೆರೆಯುವ ಜನರಿಗೆ ನಮ್ಮಲ್ಲೇನು ಕೊರತೆ ಇಲ್ಲ. ಛೀ! ಇದೇನು ಅನ್ಯಾಯ? ಸಮಸ್ತದಳಿಗೂ ಕಾರಣಕರ್ತನೂ, ಸೃಷ್ಟಿಕರ್ತನೂ ಆದ ದೇವರ ಜೀರ್ಣೋದ್ಧಾರ ಮಾಡಿಸಲು ಈ ಸಾಧಾರಣನಾದ ಮಾನವನಿಗೆ ಎಂದಾದರೂ ಸಾಧ್ಯವೆ?–ಎಂಬೀ ವಿಷಯಗಳು ದಾಸರ ಕೀರ್ತನೆಗಳಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿವೆ.

ಇಷ್ಟಾದರೂ ನಮ್ಮ ಅಹಂಕಾರವು ಇಂದಿಗೂ ಇಳಿದಿಲ್ಲ. ನಾನೇ 'ಜ್ಞಾನಿ' ಎಂದು ಬಾರಿ ಬಾರಿಗೆ ಹೇಳುವುದು ಅಜ್ಞಾನದ ಲಕ್ಷಣವೇ ಹೊರತು ಜ್ಞಾನದ ಗುರುತಲ್ಲ. ಮುಂದೆ ಮಹಾಸ್ವಾದಂತೆಲ್ಲಾ ನಮ್ಮ ಅಜ್ಞಾನದ ಆಳ ಅರಿವಾಗುವುದೇ ಹೊರತು ಜ್ಞಾನದ ಶಿಖರ ಏರಿದಂತಾಗುವುದಿಲ್ಲ. ಮೊಸಳೆಯು ಬಾಯಲ್ಲಿ ಹೂನ್ನಿದೆಯೆಂದಾಗ ಮನುಷ್ಯ ಪ್ರಾಣದ ಭಯವನ್ನೇ ತೊರೆದು ಮೊಸಳೆಯ ಬಾಯಲ್ಲಿ ಕೈಹಾಕುತ್ತಾನೆ. ಮುತ್ತು ರತ್ನ ಮುಂತಾದವುಗಳೆಂದರೆ ಎಂಥ ನೀಚ ಕಾರ್ಯವನ್ನೂ ಮಾಡಲು ಸಿದ್ಧ! ಹೀಗೆ ನಾವು ಕೇವಲ ಈ ಐಹಿಕ ಸುಖಗಳಿಗೆ ತನ್ನ ಜೀವನವನ್ನೇ ಪಣವನ್ನಾಗಿ ಇಡಲೂ ಸಿದ್ಧರು. ಆದರೆ ಎಂದೂ ನಾವು ಈ ರೀತಿ ಪ್ರಯತ್ನವನ್ನು ಮೋಕ್ಷಸಾಧನೆಗೆ ಮಾಡುವುದಿಲ್ಲ! ಏಕೆ? ಇದಕ್ಕೆ ನಮ್ಮ ಅಜ್ಞಾನವೇ ಕಾರಣ. ಹೀಗಾಗಿ ಜೀವನದಲ್ಲಿ ಯಾವುದಕ್ಕೋ ಬೆಲೆಕಟ್ಟಿ ಏನೋ ವ್ಯರ್ಥ ಪ್ರಯತ್ನ ಮಾಡುತ್ತಿರುವ ಅಜ್ಞಾನಿಗಳಿಗೆ ಪುರಂದರದಾಸರ ನಾನಾ ವಿಧದಲ್ಲಿ ಎಚ್ಚರಿಸಿ, ಸನ್ಮಾರ್ಗ ತೋರಿ, ಮುಕ್ತಿವಂತರನ್ನಾಗಿ ಮಾಡಿ, ನಮ್ಮ ಬಾಳುವೆಯನ್ನು ಹಸನಾಗಿ ನಡೆಸಲು ಬಹಳವಾಗಿ ಪ್ರಯತ್ನಿಸಿದ್ದಾರೆ. ದಾಸರ ಸಂದೇಶಗಳೆಲ್ಲವೂ ಕೀರ್ತನಾರೂಪದಲ್ಲೇ ಇವೆ.

ಮೂಢರನ್ನು ಕುರಿತು ಪುರಂದರದಾಸರು ಹೀಗೆ ಹೇಳಿದ್ದಾರೆ– "ನಿಮ್ಮ ಆಸೆ, ಆಕಾಂಕ್ಷೆಗಳು ಕೈಗೂಡಲಿಲ್ಲವೆ? ಹೋಗಲಿ ಬಿಡಿ ಕಂಬನಿ ಮಿಡಿಸಬೇಡಿ. ಜಗತ್ತು ಕೇವಲ ಅಳುತ್ತಾ, ಸಿಟ್ಟಿಗೆದ್ದು ಕೊಡುವ ಸ್ಥಳವಲ್ಲ. ನೀವು ಸಾಧಿಸಬೇಕಾದ ಎಷ್ಟೋ ಕಾರ್ಯಗಳಿವೆ. ಏಳಿ! ಎದ್ದೇಳಿ"—ಎಂಬ ದಾಸರ ಕರೆ ನಿಜವಾಗಿಯೂ ಶ್ಲಾಘನೀಯವಾದುದು. ಪುರಂದರದಾಸರ ಈ ವಾಕ್ಯಗಳು ಎಷ್ಟು ಸತ್ಯವಾದುದು! ಒಮ್ಮೆ ಭಗವಾನ್ ಬುದ್ಧನ ಬಳಿಗೆ ಮಹಿಳೆಯೊಬ್ಬಳು ತನ್ನ ಶಿಶುವಿನ ಶವವನ್ನು ತಂದು ಅಮಿತವಾದ ದುಃಖದಿಂದ ರೋಧಿಸುತ್ತಾ ಕುಳಿತುಕೊಂಡಳಂತೆ. ಹೇಗಾದರೂ ಮಾಡಿ ತನ್ನ ಮಗುವನ್ನು ಬದುಕಿಸಿಕೊಡಬೇಕೆಂದು ಬೇಡಿಕೊಂಡಳಂತೆ. ಆಗ ಜ್ಞಾನಿಯಾದ ಬುದ್ಧನು "ಯಾರೂ ಸಾಯದ, ಸತ್ತಿರದ, ಸಾವೇ ಇರುವ ಗೃಹವೊಂದರಿಂದ ನೀರು ತಂದರೆ ಮಗು ಬದುಕುವುದೆಂದು" ತಿಳಿಸಿದನಂತೆ— ಆಗ ಮಹಿಳೆಗೆ ಅರಿವುಂಟಾಗಿ ಸಮಾಧಾನ ತಂದುಕೊಂಡಳಂತೆ. ಪುರಂದರದಾಸರೂ ಸಹ ಅಂಥ ಜನರಿಗೆ "ಏಕೆ ಚಿಂತಿಸುವೆ ಬರಿದೆ ಮರುಳೆ! ವಿಧಿ ಬರೆದ ವಾಕು ತಪ್ಪದೆಂದಿಗೂ ಮರುಳೆ"– ಎಂದೂ ತಿಳಿಸಿದ್ದಾರೆ.

ಸಾಧಾರಣ ಮನುಜರಾದ ನಾವು ಬಾಲ್ಯದಲ್ಲೇ ವಿಧವಿಧ ಆಟಗಳಲ್ಲಿ ತಲ್ಲೀನರಾಗಿಬಿಡುತ್ತೇವೆ. ಜವಾಬ್ದಾರಿಯುತ ಯೌವನದಲ್ಲೋ ಭೋಗ ವಿಲಾಸ ಮುಂತಾದ ಐಹಿಕ ಸುಖಗಳ ಗುಲಾಮರಾಗಿಬಿಡುತ್ತೇವೆ. ಮುಪ್ಪಿನಲ್ಲಾದರೋ ನಿರಾಶೆ ತುಂಬಿ ಶಕ್ತಿಹೀನರಾಗಿ ಮಾಡುವ ಮನವಿದ್ದರೂ ಏನೂ ಸಾಧಿಸದವರಾಗುತ್ತೇವೆ. ಒಟ್ಟಿನಲ್ಲಿ ನಾವು ಅರ್ಥವಿಲ್ಲದ, ಗುರಿರಹಿತ ಬಾಳುವೆ ಮಾಡುತ್ತಿದ್ದೇವೆ. ಹೀಗಾದರೆ ನಮ್ಮ ಬದುಕಿನ ಅರ್ಥವೇನು? "ಯಾರು ಕೈಬಿಟ್ಟರೂ ನೀನೆನ್ನ ಕೈಬಿಡಬೇಡ" ಎಂದು ದೇವರನ್ನು ಪ್ರಾರ್ಥಿಸುವ ನಾವು, ದಾಸರು ಬರೆದ "ಮರೆಯಬೇಡ ಮನವೆ ಹರಿಚರಣವ" ಕೀರ್ತನೆಯ ಅರ್ಥವೇನೆಂಬುದನ್ನು ಅರಿಯಲು ಇನ್ನೂ ಪ್ರಯತ್ನಿಸಿಲ್ಲ? "ನೆಚ್ಚದಿರು ಭಾಗ್ಯವ, ನಿಶ್ಚಯ ಸಲ್ಲ, ಎಚ್ಚರಿಕೆ"—ಎಂದು ದಾಸರು ಎಷ್ಟೊ ವಿಧದಲ್ಲಿ ಹೇಳಿದರೂ ನಮ್ಮ ಬಾಳೇಕೆ ಹೀಗಾಗುತ್ತಿದೆ? ಇದಕ್ಕೆ ಉತ್ತರ ನಮ್ಮಲ್ಲೇ ಇದೆಯಲ್ಲವೆ!

ಸಮಯದ ಸದುಪಯೋಗದಲ್ಲಿ, ಜೀವನದಲ್ಲಿ, ಹೊಂಬೆಳಕನ್ನೇ ಕಾಣಬಹುದೆಂಬುದು ದಾಸರ ಅಭಿಪ್ರಾಯ. ವ್ಯಾಪಾರಿಯು ಹೇಗೆ ತನ್ನ ಬಂಡವಾಳದಲ್ಲಿ ಬಿಡಿಗಾಸೂ ವ್ಯಯವಾಗದಂತೆ ಎಚ್ಚರಿಕೆಯಿಂದ ಕಾಪಾಡುತ್ತಾನೋ ಅದನ್ನೇ ನಾವು ನಿದರ್ಶನವಾಗಿಟ್ಟುಕೊಳ್ಳಬೇಕು! ಮಾನವನ ಜೀವಿತಕಾಲವೂ ವ್ಯಾಪಾರಿಯ ಬಂಡವಾಳದಂತೆ, ಜೀವಿತಕಾಲದ ವ್ಯಯದಲ್ಲೂ ನಾವು ಬಹಳ ಎಚ್ಚರಿಕೆ ವಹಿಸಬೇಕು......ಹೇಗೆ!

ಪುರಂದರದಾಸರು ಇನ್ನೂ ಏನೇನೋ ಅತ್ಯುಪಯುಕ್ತ ವಿಷಯಗಳನ್ನು ನಮ್ಮೆಲ್ಲರಿಗೂ ತಮ್ಮ ಕೀರ್ತನೆಗಳ ಮೂಲಕ ತಿಳಿಸಿ ಕಣ್ತೆರೆಸಿದ್ದಾರೆ. ಎಷ್ಟೊ ಜನ ಅಜ್ಞಾನಿಗಳು ಪುರಂದರದಾಸರು ತೋರಿದ ಈ ದಾರಿಯಲ್ಲಿ ನಡೆದು ದೇವಸಾಕ್ಷಾತ್ಕಾರ ಕಂಡು ಪುಣ್ಯವಂತರಾಗಿದ್ದಾರೆ.

ಮುಕ್ತಿಹೊಂದಲು ದಾಸರು ಸಂಸ್ಕೃತ ವೇದಾದಿಗಳ ಅಧ್ಯಯನ ಮಾಡಬೇಕೆಂದು ಹೇಳಲಿಲ್ಲ, ಬ್ರಾಹ್ಮಣನಾಗೇ ಜನಿಸಬೇಕೆಂದೂ ಹೇಳಲಿಲ್ಲ, ಅಥವಾ ಮಡಿ ಮಾಡಿ ಪರಿಶುದ್ಧನಾಗಬೇಕೆಂದಿಲ್ಲ. ಹಾಗಾದರೆ ದಾಸರು ಏನು ಮಾಡಿದರೆ ಮುಕ್ತಿ ಸಾಧ್ಯವೆಂದು ತಿಳಿಸಿದ್ದಾರೆ?... ನಮಗೆ ಇರುವ ಅತ್ಯಲ್ಪ ಜೀವಿತ ಕಾಲದಲ್ಲಿ ಧರ್ಮ, ನಿಷ್ಠೆ, ಪ್ರೀತಿ, ಸತ್ಯ, ದಯೆ, ದಾನ, ಸದ್ಗುಣ, ನಿಸ್ವಾರ್ಥತೆ, ಜ್ಞಾನ, ಸಂಯಮ.... ಇವೇ ಮೊದಲಾದವುಗಳನ್ನೂ ರೂಢಿಸಿಕೊಂಡು ಬಂದರೆ ನಿಜವಾಗಲೂ ನಮ್ಮ ಜೀವನ ಆದರ್ಶವಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗಾದರೆ ಪುರಂದರದಾಸರು ತೋರಿದ ಮಾರ್ಗದಲ್ಲಿ ನಡೆದರೆ ಸರ್ವ ಸಿದ್ಧಿ ಸಿಗುತ್ತದೆಯೋ? ಸಾಧ್ಯ! ಭಗವಂತನ ಸಾಕ್ಷಾತ್ಕಾರ ಕಾಣಲು ಹೊರಟ ದಾರಿಯಲ್ಲಿ ಸರ್ವಸಿದ್ಧಿಗಳಿಗೇನು ಕೊರತೆ?!

ಇಂದು ಪುರಂದರದಾಸರು ಕಣ್ಮರೆಯಾಗಿದ್ದರೂ ಅವರ ಕೀರ್ತನೆಗಳು ಚಿರಸ್ಮರಣೀಯವಾಗಿವೆ. ಪುರಂದರ ದಾಸರ ಕೀರ್ತನೆಗಳು ಕನ್ನಡನಾಡಿನ ಮನೆಮನೆಗಳಲ್ಲಿಯೂ ಹಾಡಲ್ಪಡುತ್ತಿದೆ. ಕೇವಲ ಪುರಂದರದಾಸರ ಕೀರ್ತನೆ ಹಾಡಿದರೆ ಮಾತ್ರ ಸಾಲದು ಅದರಲ್ಲಿರುವ ಸಂದೇಶವನ್ನೂ ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು.

ಪುರಂದರದಾಸರು ಮರೆಯಾಗಿದ್ದರೂ ಅವರು ನಡೆದು ಬಂದ ದಾರಿ ಮಾಯವಾಗಿಲ್ಲ. ಆ ದಾರಿಯಲ್ಲಿ ಯಾವ ಕಾರೂ, ಬಸ್ಸೂ ಹೋಗಲಾರದು. ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೇ ಮುಂತಾದ ವೇಷಾಕಾಶ ಧರಿಸಿರುವವರು ಯಾರೂ ಆ ದಾರಿಯ ಬಳಿಗೆ ಹೋಗಲು ಅಸಾಧ್ಯ! ದಾಸರು ನೀಡಿದ ಪ್ರತಿಯೊಂದು ಸಂದೇಶವೂ ಆ ದಾರಿಯಲ್ಲಿ ಅಜ್ಞಾನಿಗಳು ಬಂದು ಜೀವನದಲ್ಲಿ ಮಾರ್ಪಾಡು ಹೊಂದಲೆಂದು ಸದಾ ಹಾರೈಸುತ್ತಿವೆ

ಪುರಂದರದಾಸರ ಸಂದೇಶಗಳನ್ನು ಕೇವಲ ಇಷ್ಟರಲ್ಲೇ ತಿಳಿಸುವುದು ಅಸಾಧ್ಯ. ಅದಕ್ಕೆ ಈ ಜೀವನಾಂಶವೇ ಸಾಲದಾಗಬೇಕು, ಸಮುದ್ರವೇ ಶಾಯಿ ಆಗಬೇಕು.

'ಪುರಂದರ ದಾಸರು ತೋರಿದ ದಾರಿ' ಅಷ್ಟೇನು ಕಷ್ಟವಾಗಿಲ್ಲ. ನಿಜವಾಗಿ ಅದು ಜೀವನ ಮಾರ್ಗಕ್ಕೆ ದೀಪ ಮಾಲೆಯಾಗಿದೆ!

(ಮುಗಿಯಿತ)

Gram : VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಇಷ್ಟೇ ಸಾಕು

ಶ್ರೀ

ಕಾಡುಗೊಂಡನ ಹಳ್ಳಿಗೆ ಬೆಂಗಳೂರಿನಿಂದ ಸುಮಾರು ಎಂಟು ಮೈಲಿ ದೂರ. ಇದು ಬೆಂಗಳೂರು ಜಿಲ್ಲೆಯ ಉತ್ತರ ತಾಲೂಕಿನಲ್ಲಿದೆ. ಇಲ್ಲಿ ಒಂದು ಪ್ರಸೂತಿ ಹಾಗೂ ಶಿಶು ಆರೋಗ್ಯ ಸೇವಾ ಕೇಂದ್ರವಿದೆ. ಈ ಕೇಂದ್ರ ತನ್ನ ಸುತ್ತಮುತ್ತಲ 23 ಹಳ್ಳಿಗಳಿಗೆ ಸೇವೆ ಸಲ್ಲಿಸುತ್ತದೆ. ಬಸುರಿ ಬಾಣಂತಿಯರಿಗೆ ಹೆರಿಗೆ—ಚಿಕಿತ್ಸೆ ಮಕ್ಕಳ ಯೋಗಕ್ಷೇಮ, ಕುಟುಂಬ ಯೋಜನೆ ಇವಕ್ಕೆಲ್ಲ ಈ ಕೇಂದ್ರ ಮೀಸಲು. ಅದರಲ್ಲೂ ಕುಟುಂಬ ಯೋಜನೆಯ ಕಾರ್ಯಕ್ರಮದಲ್ಲಿ ಈ ಕೇಂದ್ರಕ್ಕೆ ಬೆಂಗಳೂರು ಜಿಲ್ಲೆಗೇ ಪ್ರಥಮ ಸ್ಥಾನ ದೊರೆತ ಕೀರ್ತಿ.

ಇಲ್ಲಿ ಕುಟುಂಬ ಯೋಜನೆಯ ಬಗ್ಗೆ ಶಸ್ತ್ರ ಚಿಕಿತ್ಸೆ ಇತ್ಯಾದಿ ಆರಂಭವಾದದ್ದು 1962ರಲ್ಲಿ. ಆ ವರೆಗೆ ಸುಮಾರು 2575 ಮಂದಿ ಗಂಡಸರು ಹಾಗೂ 94 ಮಂದಿ ಹೆಂಗಸರು ಇಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ತಮ್ಮ ತಮ್ಮ ಕುಟುಂಬವನ್ನು ಮಿತಿಯಲ್ಲಿರಿಸಿ ಕೊಂಡಿದ್ದಾರೆ.

ಶ್ರೀಮತಿ ರಾಧಮ್ಮ. ಈಕೆ ನಾಗಪಟ್ಟ ಹಳ್ಳಿಯಿಂದ ಬಂದವರು. ಕಾಡುಗೊಂಡನ ಹಳ್ಳಿಯಿಂದ ಇಲ್ಲಿಗೆ ಹದಿನೈದು ಮೈಲಿ. ಇವರ ಗಂಡ ರುದ್ರಪ್ಪನವರಿಗೆ ಇರುವುದು ಎರಡೋ ಮೂರೋ ಎಕರೆ ಜಮೀನು. ಗಂಡನ ಆರೋಗ್ಯ ಸ್ವಲ್ಪ ಚೆನ್ನಾಗಿಲ್ಲವೆಂದು ತಾನೇ ಶಸ್ತ್ರಚಿಕಿತ್ಸೆಗೆ ಮುಂದಾಗಿದ್ದಾರೆ ರಾಧಮ್ಮ. ನಾಗಪಟ್ಟ ಹಳ್ಳಿಯಿಂದ ಬಂದ ಮಹಿಳೆಯರಲ್ಲಿ ಇವರೇ ಮೊದಲನೆಯವರು. "ನಾಲ್ಕು—ಐದು ಮಕ್ಕಳ ತಾಯಂದಿರು ಇನ್ನು ಮುವತ್ತು—ನಾಲ್ವತ್ತು ಮಂದಿ ನಮ್ಮ ಹಳ್ಳಿಯಲ್ಲಿದ್ದಾರೆ. ನಾನು ಹೆರಿಗಾಗಿ ಮನೆಗೆ ಹೋದ ವೇಳೆ ಅವರಿಗೆಲ್ಲ ಇಲ್ಲಿಗೆ ಬರುವಂತೆ ಹೇಳುತ್ತೇನೆ" ಎನ್ನುತ್ತಾ "ಇವಳು ಸಾಕಮ್ಮ, ಕೂಡಿಗೆ ಹಳ್ಳಿಯಿಂದ ಬಂದಿದ್ದಾಳೆ. ಇವಳಿಗೆ ಮೂರು ಮಕ್ಕಳು" ಎಂದು ಪಕ್ಕದ ಹಾಸಿಗೆಯಲ್ಲಿ ತನ್ನ ಕಡೆ ದಿಟ್ಟಿಸುತ್ತಿದ್ದ ಮಹಿಳೆಯನ್ನು ಪರಿಚಯ ಮಾಡಿದರು, "ಸಾಕಮ್ಮ ತನ್ನ ತಾಯಿಗೆ ಕೊನೆಯ ಮಗಳಂತೆ. ಮಕ್ಕಳನ್ನು ಹೊತ್ತು ಹೆತ್ತು ಸಾಕಾಗಿ ಈಕೆಯನ್ನು ಹೆತ್ತಾಗ ಸಾಕಮ್ಮ" ಎಂದು ಸಾಕು ಮಾಡಿದ್ದಳಂತೆ ಸಾಕಮ್ಮನ ತಾಯಿ" ಎಂದು ನಗುತ್ತಾ ನುಡಿದರು ರಾಧಮ್ಮ.

ಸಾಕಮ್ಮನ ಗಂಡ ಮುನಿಸ್ವಾಮಿ. ಕೂಡಿಗೆಹಳ್ಳಿಯಲ್ಲಿ ಎರಡೇ ಎರಡು ಎಕರೆಗಳ ಜಮೀನ್ದಾರರು. ಆರು ಮಕ್ಕಳನ್ನು ಹಡೆದ ಸಾಕಮ್ಮನಿಗೆ ಬದುಕಿ ಉಳಿದವರು ಮೂರೇ ಮಂದಿ. ಅದರೂ ಹನ್ನೆರಡು ವಯಸ್ಸಿನ ತನ್ನ ಮಗನಿಗೆ ಓದಿಸಲಾಗಲಿಲ್ಲ. ಕೊನೆಯ ಮಗನಿಗಾದರೂ ಓದಿಸಬೇಕೆಂದು ಹಂಬಲ. ಮೂರೇ ಮಂದಿ ಅಷ್ಟೇ—ತಮ್ಮಂದಿರು, ಗಂಡನ ಪಾಲಿಗೆ ಬಂದುದು ಎರಡು ಎಕರೆ, ಅದೂ ಬೆಟ್ಟ—ಭೂಮಿ. ಬೇರೆಯವರ ಹೊಲದಲ್ಲಿ ದುಡಿದು ಜೀವನ. ಇದರಿಂದ ಇದ್ದ ಮಕ್ಕಳೇ ಸಾಕು ಎಂದು ಶಸ್ತ್ರಚಿಕಿತ್ಸೆಗೆ ಬಂದಿದ್ದಾರೆ ಸಾಕಮ್ಮ. ಇನ್ನೂ ಇವರಿಗೆ ಮುವತ್ತೈದು ದಾಟಿಲ್ಲ.

ಪಕ್ಕದ ಇನ್ನೊಂದು ಹಾಸಿಗೆಯಲ್ಲಿದ್ದವರು ಪಾರ್ವತಮ್ಮ. ಗಂಡನ ಹೆಸರು ಕೃಷ್ಣಪ್ಪ. ಬೇಸಾಯವೇ ಜೀವನಕ್ಕೆ ಹಾದಿ. ಈಗಾಗಲೇ ಐದು ಮಕ್ಕಳು. ಗಂಗಮ್ಮ, ಇಂದಿರಾ, ರಾಜ, ರವಿ ಎಲ್ಲಾ ಮುದ್ದಾದ ಹೆಸರುಗಳು. ಕೊನೆಯ ಮಗುವಿಗೆ ಇನ್ನೂ ಹೆಸರಿಡಲಿಲ್ಲ. ಎಂಟುದಿನಗಳ ಮುದ್ದು ಹಸುಳೆ. ಹೊಟ್ಟೆಗೆ—ಬಟ್ಟೆಗೆ ಸಾಕಾಗದ ಈ ಕಾಲದಲ್ಲಿ ಇದ್ದ ಮಕ್ಕಳನ್ನು ಸಾಕಿಕೊಂಡರೆ ಸಾಕೆಂದು ಬಂದೆ ಎಂದಾಗ ಪಾರ್ವತಮ್ಮನ ಮುಖದಲ್ಲಿ ಕಷ್ಟಗಳ ಕಾರ್ಮೋಡವೇ ಕವಿದಂತೆ ಕಂಡಿತು.

ಬೇಸಾಯಗಾರನ ಪಾಡು ಹೀಗಾದರೆ ಕೆಲಸಗಾರನ ಪಾಡೂ ಹೀಗೆಯೇ. ಸೈನ್ಯದ ಕಾರ್ಯಾಗಾರದಲ್ಲಿ ದುಡಿಯುತ್ತಿರುವ ಬಡಗಿ ಅಗಸ್ಟಿನ್, ಈತನ ಪತ್ನಿ ಇರುದಿಯ ಮೇರಿಗೆ ಐದು ಮಕ್ಕಳು. ಇವರಲ್ಲಿ 19 ವರ್ಷ ರಾಜನ್ ಇಲೆಕ್ಟ್ರೀಶಿಯನ್. 13ರ ಅಲೆಕ್ಸಾಂಡರ್ 7ನೇ ಕ್ಲಾಸ್. 6ರ ಜೋನ್ ಪ್ರಕಾಶ್ 2ನೇ ಕ್ಲಾಸ್. ಶಾಂತರಾಜನಿಗೆ ಇನ್ನು 2 ವರ್ಷ ದಾಟಿಲ್ಲ. ಪೈಕುಮಾರನಿಗೆ ಎರಡು ತಿಂಗಳು. ಇವನೇ ಕೊನೆಯ ಮಗು. ಡಾಕ್ಟರರನ್ನು ನೋಡಿ ಹೋಗೋಣ ಎಂದು ಬಂದೆ. ನನಗೆ ಯಾವ ತೊಂದರೆಯೂ ಇಲ್ಲ, ಸುಖವಾಗಿದ್ದೇನೆ. ಇವನೇ ಶಾಂತರಾಜ್" ಎಂದು ಮಗನ ತಲೆಯನ್ನು ಸವರುತ್ತಿದ್ದಂತೆ ಮೇರಿಯ ಮುಖದಲ್ಲಿ ತೃಪ್ತಿ ಸಂತೋಷಗಳು ಎದ್ದು ಕಾಣುತ್ತಿದ್ದವು.

ಇಷ್ಟರಲ್ಲಿ ಕೇಂದ್ರದ ಬಾಗಿಲಿಯ ಗೋಡೆಗೆ ಒರಗಿ ನಿಂತಿದ್ದ ದಿವ್ಯನಾಥನ್ ತನ್ನ ಗೆಳೆಯನ ಕಡೆ ನೋಡಿ ಮುಗುಳ್ನಗುತ್ತಿದ್ದ. ನಾಲ್ಕು ಮಕ್ಕಳ ತಂದೆ ದಿವ್ಯನಾಥನಿಗೆ ಅಪರೇಶನ್ ಆಗಿ ವರ್ಷ ಒಂದಾಯಿತು. ತನ್ನ ಅನುಭವವನ್ನು ಹೇಳಿ ಗೆಳೆಯ ಜೈಶೀಲನನ್ನು ಒಪ್ಪಿಸಿ ಶಸ್ತ್ರ ಚಿಕಿತ್ಸೆಗಾಗಿ ಕರೆತಂದಿದ್ದ. ಕಬ್ಬಿಣದ ಸಲಾಕೆಗಳನ್ನು ಬಡಿದು ಬಗ್ಗಿಸುವುದು ಜೈಶೀಲನ ಕೆಲಸ. ಗೋಡೆ, ಕಂಭ, ಏಣಿಗಳಿಗೆ ಬಣ್ಣ ಬಳಿಯುವುದು ದಿವ್ಯನಾಥನ ಕೆಲಸ.

ಜೈಶೀಲನಿಗೆ ಸಹಾಯನಾಥನ್ ಮತ್ತು ಹೃದಯನಾಥನ್ ಎಂದು ಇಬ್ಬರು ಗಂಡು ಮಕ್ಕಳು. ನೇರಿ ಕೊನೆಯ ಮಗು. ಇನ್ನು ಮುಂದೆ ಮಕ್ಕಳಾಗುವುದಿಲ್ಲ. 'ಮೂರೇ ಸಾಕು' ಎಂದು ಸಂತೋಷ. ಇದಕ್ಕೆ ಇವನೇ ಕಾರಣ ಎಂದು ದಿವ್ಯನಾಥನನ್ನು ಅಪ್ಪಿಹಿಡಿದು ಇಪ್ಪತ್ತಾರರ ತರುಣ ಜೈಶೀಲ ತನ್ನ ಗೆಳೆಯರಿಗೆಲ್ಲ ಕುಟುಂಬ ಯೋಜನೆ ಮಾಡಿಸಿಕೊಳ್ಳಲು ಖಂಡಿತ ಸಲಹೆ ನೀಡುತ್ತೇನೆ ಎಂದು, ತನ್ನ ಸರದಿಗಾಗಿ ಕಾದಿದ್ದ.

ಅಂಕೆಗಳು ಮಾತಾಡಿದಾಗ — 1969ನೇ ವರ್ಷ

ನಮ್ಮ ಸಾಧನೆ

	ಶತಾಂಶ ಹೆಚ್ಚಳ
ನಮ್ಮ ಠೇವಣಿ ರೂ. 112·19 ಕೋಟಿ ರೂಪಾಯಿಗಳಿಂದ ರೂ. 144·32 ಕೋಟಿ ರೂ.ಗಳಿಗೇರಿದ್ದು 32·13 ಕೋಟಿ ರೂಪಾಯಿಗಳಷ್ಟು ಹೆಚ್ಚಿದೆ	+28·6
ನಮ್ಮ ಮುಂಗಡ ರೂ. 70·61 ಕೋಟಿ ರೂಪಾಯಿಗಳಿಂದ 105·15 ಕೋಟಿ ರೂ.ಗಳಿಗೇರಿದ್ದು 34·54 ಕೋಟಿ ರೂ.ಗಳಷ್ಟು ಹೆಚ್ಚಿದೆ.	+48·9
ನಮ್ಮ ಠೇವಣಿ ಖಾತೆಗಳು 11,79,929 ರಿಂದ 14,40,126 ಕ್ಕೇರಿದ್ದು 2,60,197 ಖಾತೆಗಳು ಹೆಚ್ಚಿವೆ.	+22
ನಮ್ಮ ಸಾಲದ ಖಾತೆಗಳು 2,23,264 ರಿಂದ 2,98,259 ಕ್ಕೇರಿದ್ದು 74,995 ಖಾತೆಗಳು ಹೆಚ್ಚಿವೆ.	+33·5

ನಮ್ಮ ಮುಂಗಡಗಳು

	ಜೂನ್ 1969 ಖಾತೆಗಳ ಸಂಖ್ಯೆ	ಮೊತ್ತ	ಡಿಸೆಂಬರ್ 1969 ಖಾತೆಗಳ ಸಂಖ್ಯೆ	ಮೊತ್ತ
ಕೃಷಿಗೆ	36,273	9·04 ಕೋಟಿ ರೂ	50,498	12·65 ಕೋಟಿ ರೂ
ಸಣ್ಣ ಮಟ್ಟದ ಕೈಗಾರಿಕೆಗಳಿಗೆ	6,019	10·97 ಕೋಟಿ ರೂ	7,391	13·91 ಕೋಟಿ ರೂ.
ಸಾರಿಗೆ ನಿರ್ವಾಹಕರಿಗೆ (ಟ್ರಕ್ಕುಗಳು, ಟ್ಯಾಕ್ಸಿಗಳು ಮತ್ತು ರಿಕ್ಷಾಗಳು)	1,201	2·27 ಕೋಟಿ ರೂ.	2,090	4·42 ಕೋಟಿ ರೂ
ಚಿಲ್ಲರೆ ವ್ಯಾಪಾರಿಗಳಿಗೆ	22,822	6·11 ಕೋಟಿ ರೂ.	26,160	7·15 ಕೋಟಿ ರೂ
ವಿದ್ಯಾರ್ಥಿಗಳಿಗೆ	549	26·49 ಲಕ್ಷ ರೂ	954	53·33 ಲಕ್ಷ ರೂ.

ಪ್ರಾಶಸ್ತ್ಯ ವಿಭಾಗಕ್ಕೆ ಮುಂಗಡಗಳು

ಯಾವುವೆಂದರೆ: ಕೃಷಿ, ಸಣ್ಣ ಮಟ್ಟದ ಕೈಗಾರಿಕೆ, ಸಾರಿಗೆ ಮತ್ತು ರಫ್ತು. ಇವುಗಳಿಗೆ 1969ನೇ ಡಿಸೆಂಬರ 31ನೇ ತಾರೀಕಿನಲ್ಲಿದ್ದಂತೆ ಒಟ್ಟು ಮುಂಗಡ (35·5%) 105·15 ಕೋಟಿ ರೂಪಾಯಿಗಳಲ್ಲಿ 37·30 ಕೋಟಿ ರೂಪಾಯಿ ಮುಂಗಡ ನೀಡಲಾಗಿದೆ.

31-12-1969 ರಲ್ಲಿದ್ದಂತೆ ಶಾಖೆಗಳು : 355

ಗ್ರಾಮಗಳಲ್ಲಿ ಶಾಖೆಗಳು	ಉಪನಗರ ಪ್ರದೇಶಗಳಲ್ಲಿ ಶಾಖೆಗಳು	ನಗರ ಪ್ರದೇಶಗಳಲ್ಲಿ ಶಾಖೆಗಳು	ಮೊತ್ತ
125	124	106	355
1969 ರಲ್ಲಿ ನಾವು 101 ಶಾಖೆಗಳನ್ನು ತೆರೆದಿದ್ದೇವೆ			
52	20	29	101

1968ರಲ್ಲಿ 66 ಸ್ಥಳಗಳಲ್ಲಿ ನಮ್ಮದೊಂದೇ ಬ್ಯಾಂಕು

1969ರಲ್ಲಿ 121 ಸ್ಥಳಗಳಲ್ಲಿ ನಮ್ಮದೊಂದೇ ಬ್ಯಾಂಕು.

ಸಿಂಡಿಕೇಟ್ ಬ್ಯಾಂಕ್

(ಭಾರತ ಸರಕಾರದ ನಿರ್ವಹಣೆ)

ಮುಖ್ಯ ಕಚೇರಿ : ಮಣಿಪಾಲ — ಕಸ್ಟೋಡಿಯನ್ : ಟಿ. ಎ. ಪೈ

ಎಲ್. ಐ. ಸಿ.ಯ ಹೊಸ ಅಧ್ಯಕ್ಷ ಶ್ರೀ ಪೈ



ಸಿಂಡಿಕೇಟ್ ಬ್ಯಾಂಕ್ ಪ್ರಗತಿಶೀಲ ಬ್ಯಾಂಕಿಂಗ್ ಪ್ರಣಾಳಿಗೆ ಇನ್ನೊಂದು ಹೆಸರು. ಇದರ ಸರ್ವತೋಮುಖ ಅಭಿವೃದ್ಧಿಗಾಗಿ ತನ್ನ ಜೀವನವನ್ನು ಮುಡುಪಾಗಿಟ್ಟ ವ್ಯಕ್ತಿ ಶ್ರೀ ಟಿ. ಎ. ಪೈ ಕಾಲು ಶತಮಾನಕ್ಕೂ ಮಿಕ್ಕಿ ದುಡಿದು ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕ್ರಾಂತಿಯ ಕಹಳೆ ಊದಿದ ಶ್ರೀ ಪೈಯವರಿಂದ ದೇಶ ಇನ್ನೂ ಬಹಳಷ್ಟನ್ನು ಬಯಸುತ್ತಿರುವುದು ತೀರ ಸಹಜ.

ಸಾಮಾನ್ಯವಾಗಿ ಐ. ಸಿ. ಎಸ್. ಅಧಿಕಾರಿಗಳಿಗಾಗಿಯೇ ಮೀಸಲಿಟ್ಟ ಕೆಲವು ಹುದ್ದೆಗಳು ಸರಕಾರಿ ವಲಯದಲ್ಲಿವೆ. ಜೀವ ವಿಮಾ ಕಾರ್ಪೋರೇಶನ್ನಿನ ಅಧ್ಯಕ್ಷ ಪದವಿಯೂ ಇವುಗಳಲ್ಲಿ ಒಂದು. ಸದ್ಯ ಅಧ್ಯಕ್ಷರಾಗಿರುವ ಶ್ರೀ ಎಂ. ಆರ್. ಭಿಡೆಯವರು ಕೆಲವು ದಿನಗಳಲ್ಲೇ ನಿವೃತ್ತರಾಗಲಿದ್ದು ಇವರ ಸ್ಥಾನಕ್ಕೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಪ್ರಗತಿಶೀಲ ಮನೋಭಾವದ ಕ್ರಿಯಾಪಟುವಿನ ಅಗತ್ಯವಿದೆ. ಇದಕ್ಕಾಗಿ ಶ್ರೀಮತಿ ಗಾಂಧಿಯವರು ಶ್ರೀ ಟಿ. ಎ. ಪೈಯವರನ್ನು ಆರಿಸಿಕೊಂಡಿರುವುದು ನಿಜಕ್ಕೂ ಪ್ರಶಂಸನೀಯ.

ಶ್ರೀ ಪೈಯವರ ಸಾಹಸೀ ಮನೋಭಾವದ ಪರಿಚಯವಿರದ [illegible] ದೇಶದಲ್ಲಿ ಎಲ್ಲ [illegible] ಇದೆ. ಆ ಕಾರ್ಪೋರೇಶನ್ನಿನ ಅಧ್ಯಕ್ಷರಾಗಿ ಅವರು ದೇಶಕ್ಕೆ [illegible] ಭಾರತ [illegible] ಸೇವೆ ಸಲ್ಲಿಸಿದ್ದನ್ನು [illegible]. ಅದಲ್ಲದೆ, ರಾಷ್ಟ್ರೀಯ [illegible] ಹಾಕತೊಡ [illegible]. ಆ ಪದದಲ್ಲಿ ಮುಂದು [illegible] ಇದೀಗ [illegible] ಆಗಿರುವ ಪ್ರಧಾನಿಯವರು [illegible] ಶಕ್ತಿಯೂ ತಮ್ಮ [illegible] ಎಂದು ಶ್ರೀ ಪೈಯವರು [illegible] ಸ್ವೀಕರಿಸಲೊಪ್ಪಿದ್ದಾರೆ.

ಜೀವವಿಮಾ ಕಾರ್ಪೋರೇಶನ್ನಿನ ವಿಶಾಲ ಸಂಪನ್ಮೂಲಗಳನ್ನು ದೇಶದ ಆರ್ಥಿಕ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗಿ ತೊಡಗಿಸುವ, ಜೀವವಿಮಾ ಉದ್ಯಮದಲ್ಲಿ ಹೊಸ ಹೊಸ ದಾರಿಯನ್ನು ತುಳಿದು, ಜೀವವಿಮೆಯ ಸಂದೇಶವನ್ನು ಜನಜನಕ್ಕೂ ಮುಟ್ಟಿಸುವ ಹೊಚ್ಚ ಹೊಸ ಹೊಣೆಗೆ ಹೊಣೆಗಾರ ವ್ಯಕ್ತಿಯಾಗಿ ಶ್ರೀ ಪೈಯವರು ಆಯ್ಕೆಗೊಂಡಿದ್ದಾರೆ. 'ನವಯುಗ'ದ ಆತ್ಮೀಯರೊಬ್ಬರಿಗೆ ಲಭ್ಯವಾದ ಈ ಹುದ್ದೆಗಾಗಿ 'ನವಯುಗ'ವು ಅತೀವ ಆನಂದಿತವಾಗಿದೆ. ಶ್ರೀ ಪೈಯವರನ್ನೂ ಅವರ ಆಯ್ಕೆಗೆ ಕಾರಣೀಭೂತರಾದವರನ್ನೂ 'ನವಯುಗ'ವು ಹೃತ್ಪೂರ್ವಕ ಅಭಿನಂದಿಸುತ್ತದೆ.

ಶ್ರೀ ಪೈಯವರು ತಮ್ಮ ಸರ್ವಶಕ್ತಿಯನ್ನೂ ಕೇಂದ್ರೀಕರಿಸಿ, ಅವರಲ್ಲಿ ಜನತೆಯೂ ಜನನಾಯಕರೂ ಇಟ್ಟಿರುವ ಭರವಸೆಗಳನ್ನು ಸಂಪೂರ್ಣ ಪೂರೈಸುವುದು ನಿಸ್ಸಂದೇಹ.

ಪ್ರಶ್ನೆಯ ಗಾತ್ರ: ಪರಿಹಾರ ಸೂತ್ರ

ಭಾರತವು ಎದುರಿಸುತ್ತಿರುವ ಭೀಕರ ಸಮಸ್ಯೆಗಳಲ್ಲಿ ಜನಸಂಖ್ಯೆಯ ಆಸ್ಫೋಟನೆ ಎಲ್ಲಕ್ಕೂ ಬೃಹತ್ ಸಮಸ್ಯೆಯೆಂದೇ ಹೇಳಬಹುದು. ಅಂಕಿ ಸಂಖ್ಯೆಗಳೇ ಈ ಮಾತಿಗೆ ಕನ್ನಡಿ ಹಿಡಿಯುತ್ತವೆ.

1969—70 ಸಾಲಿನ ಅಂದಾಜು ಲೆಕ್ಕದ ಪ್ರಕಾರ ನಮ್ಮ ದೇಶದ ಜನಸಂಖ್ಯೆ ಐವತ್ತನಾಲ್ಕು ಕೋಟಿ! ಪ್ರತಿವರ್ಷ ಹೆಚ್ಚುತ್ತಿರುವ ಜನಸಂಖ್ಯೆ 13 ದಶಲಕ್ಷ! ಪ್ರಪಂಚದ ಒಟ್ಟು ಭೂಮಿಯಲ್ಲಿ ಭಾರತಕ್ಕೆ ಸೇರಿದ ನೆಲ ಕೇವಲ ಶೇಕಡ 2·4 ರಷ್ಟು. ಆದರೆ ಪ್ರಪಂಚದ ಒಟ್ಟು ಜನಸಂಖ್ಯೆಯ ಶೇಕಡ ಹದಿನಾಲ್ಕರಷ್ಟು ಜನ ಭಾರತದಲ್ಲಿ ನೆಲಸಿದ್ದಾರೆ!

1951—60 ಸಾಲಿನಲ್ಲಿ ನಮ್ಮ ದೇಶದಲ್ಲಿ ಜನನ ಪ್ರಮಾಣ 41·7, ಮರಣ ಪ್ರಮಾಣ 22·8 ಮತ್ತು ಜನಸಂಖ್ಯಾ ಬೆಳವಣಿಗೆ ಪ್ರಮಾಣ 2·15 (ಪ್ರತಿ ಸಾವಿರಕ್ಕೆ) 1966—70 ಸಾಲಿನಲ್ಲಿ (ನಿಯೋಜಿತ) ಜನನ ಪ್ರಮಾಣ 38·6, ಮರಣ ಪ್ರಮಾಣ 14 00 ಮತ್ತು ಜನಸಂಖ್ಯಾ ಬೆಳವಣಿಗೆ ಪ್ರಮಾಣ 2 46 (ಪ್ರತಿ ಸಾವಿರಕ್ಕೆ) ಇದ್ದು, 1976—81 ಸಾಲಿನಲ್ಲಿ ಜನಸಂಖ್ಯಾ ಬೆಳವಣಿಗೆ ಪ್ರಮಾಣವನ್ನು 1 95ಕ್ಕೆ ಇಳಿಸಬೇಕೆಂಬ ಗುರಿಯಿರಿಸಿಕೊಳ್ಳಲಾಗಿದೆ.

1941—50ರ ಅವಧಿಯಲ್ಲಿ ಗಂಡಸರ ಆಯುರ್ಮಾನವು 32·5, ಸ್ತ್ರೀಯರು 31·7 ವರ್ಷವಿದ್ದು, 1966—70 ಅವಧಿಯಲ್ಲಿ ಗಂಡಸರ ಆಯುರ್ಮಾನವು 53·2 ಮತ್ತು ಸ್ತ್ರೀಯರು 51·9 ವರ್ಷವಾಗಬಹುದು ಎಂದು ಅಂದಾಜು ಮಾಡಲಾಗಿದೆ.

1968—69ರಲ್ಲಿ ಮಕ್ಕಳನ್ನು ಹೆರಬಲ್ಲ ದಂಪತಿಗಳ ಸಂಖ್ಯೆ 94, 552, 216 (ಹೆಂಡತಿಯ ವಯಸ್ಸು 15ರಿಂದ 44ರ ವರೆಗೆ) ಇದ್ದು, ಇವರ ಪೈಕಿ ಕುಟುಂಬ ಯೋಜನೆಗೆ ಒಳಪಡಿಸಬೇಕಾಗಿದ್ದ ದಂಪತಿಗಳ ಸಂಖ್ಯೆ 52, 529, 428· 1969—70ರಲ್ಲಿ ಕುಟುಂಬಯೋಜನೆಗೆ ಒಳಪಡಿಸಬೇಕಾದ ದಂಪತಿಗಳ ಸಂಖ್ಯೆ 53,835,000ರಷ್ಟಾಗಿದೆ.

ಕುಟುಂಬಯೋಜನೆಯ ಪ್ರಗತಿ

1969ರ ನವೆಂಬರ್ ಅಖೈರದ ವರೆಗೆ ದೇಶದಲ್ಲಿ ನಡೆದ ಶಸ್ತ್ರಕ್ರಿಯೆಗಳ ಒಟ್ಟು ಸಂಖ್ಯೆ 68 ಲಕ್ಷ; ವಂಕಿಧಾರಣೆ ಮಾಡಿದ ಮಹಿಳೆಯರ ಸಂಖ್ಯೆ 31 ಲಕ್ಷ. 1969-70 ಸಾಲಿನಲ್ಲಿ (ನವೆಂಬರ್‌ದ ವರೆಗೆ) 53,386,069 ನಿರೋಧ್‌ಗಳನ್ನೂ, 14 036 ಡಯಾಫ್ರಾಗ್‌ಮ್‌ಗಳನ್ನೂ 23,8050 ಜೆಲಿಗಳನ್ನೂ; 24 216 15 ನೊರೆಗುಳಿಗೆಗಳನ್ನೂ ಹಂಚಲಾಗಿದೆ. ಕುಟುಂಬಯೋಜನೆಯ ಕಾರ್ಯಕ್ರಮವು ದೇಶದ ಮೂಲೆ ಮೂಲೆಗೆ ತಲುಪಿ ದೇಶದ ಜನನ ಪ್ರಮಾಣವು ಇಳಿಮುಖವಾಗಲು ಸಹಾಯಕವಾಗಿದೆ. ಕುಟುಂಬಯೋಜನೆಯ ಕಾರ್ಯಕ್ರಮದ ಫಲವಾಗಿ 1961 ರಲ್ಲಿ 32000 ಜನನಗಳ ತಡೆ ಹಿಡಿಯಲ್ಪಟ್ಟವೆ 1966-67 ಸಾಲಿನಲ್ಲಿ 52, 4000 1967-68ರಲ್ಲಿ 89, 8000 ಮತ್ತು 1968-69 ಸಾಲಿನಲ್ಲಿ 14, 17000 ಜನನಗಳು ತಡೆಹಿಡಿಯಲ್ಪಟ್ಟವೆ.

ದೇಶದಲ್ಲಿ 14 ಪ್ರಾದೇಶಿಕ ಕುಟುಂಬ ಯೋಜನಾ ತರಬೇತಿ ಕೇಂದ್ರಗಳೂ, 16 ಕೇಂದ್ರ ಕುಟುಂಬಯೋಜನಾ ಕ್ಷೇತ್ರ ಘಟಕಗಳೂ, 5 ಕೇಂದ್ರ ಸಂಸ್ಥೆಗಳೂ ಈಗ ಕುಟುಂಬಯೋಜನಾ ತರಬೇತಿ ಕಾರ್ಯವನ್ನು ನಡೆಸುತ್ತಿವೆ. ಇದುವರೆಗೆ 3336 ಡಾಕ್ಟರರೂ ಮತ್ತು 18145 ಉಳಿದ ವೈದ್ಯಕೀಯ ಸಿಬ್ಬಂದಿಯು ದೀರ್ಘಾವಧಿ ಕೋರ್ಸಿನ ತರಬೇತಿಯನ್ನೂ, 11268 ಡಾಕ್ಟರರು ಮತ್ತು 139054 ಉಳಿದ ವೈದ್ಯಕೀಯ ಸಿಬ್ಬಂದಿಯು ಸಂಕ್ಷಿಪ್ತ ಕಾಲದ ಕೋರ್ಸಿನ ತರಬೇತಿಯನ್ನು ಪಡೆದಿದ್ದಾರೆ. ಕುಟುಂಬ ಯೋಜನಾ ಕಾರ್ಯಕ್ರಮದ ಬೆನ್ನೆಲುಬಾಗಿ ದುಡಿಯುತ್ತಿದ್ದಾರೆ.

ಕಾಲೇಜ್ ಯೂನಿಯನ್

ಉಡುಪಿ ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು ಯೂನಿಯನ್ನಿನ ಜೆನರಲ್ ಸೆಕ್ರೆಟರಿ ಸ್ಥಾನಕ್ಕೆ ತಾ. 14-2-70ರಂದು ನಡೆದ ಚುನಾವಣೆಯಲ್ಲಿ II ಬಿ. ಕಾಂ. ಕ್ಲಾಸಿನ ಶ್ರೀ ಟಿ. ಎ. ಕೃಷ್ಣರಾಜ್‌ರವರು ಪ್ರಚಂಡ ಬಹುಮತದಿಂದ ಆರಿಸಲ್ಪಟ್ಟಿದ್ದಾರೆ. ಅಲ್ಲದೆ ಶ್ರೀಯುತರಾದ ವಿಠಲ ಶೆಟ್ಟಿ, III ಬಿ. ಎ. ಇವರು ಪ್ರೆಸಿಡೆಂಟರಾಗಿಯೂ, ಎಮ್. ರವೀಂದ್ರ ಶೆಟ್ಟಿ, II ಬಿ. ಎ ಇವರು ಕಾರ್ಯದರ್ಶಿಗಳಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 35/69

N. S. ಕೃಷ್ಣಯ್ಯ — ವಾದಿ

N. S. ಶ್ರೀನಿವಾಸ ರಾವ್ ಸಹಾ — ಪ್ರತಿವಾದಿರು

2ನೇ ಪ್ರತಿವಾದಿ:— N. S. ರಘುವೀರ ರಾವ್, N. S. ಶ್ರೀನಿವಾಸ ರಾಯರ ಮಗ, Headmaster, ಶಾರದಾ ಹೈಸ್ಕೂಲ್, ಪ್ರೇಜರಪೇಟೆ,

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ದ. ಕ. ಸಬ್ ಕೋರ್ಟು O S. 86/47 ನೇ ಡಿಕ್ರಿ ಪ್ರಕಾರ ಹಿಸೆ ಬರ್ತಿ ಬಗ್ಗೆ ತಾ. 19-4-68ಕ್ಕೆ 1ನೇ ಪ್ರತಿವಾದಿಯಿಂದ ಸಲ್ಲತಕ್ಕ ಸಲುವಳಿಗೆ ವಾದಿಯು ಮಾಡಿದ ದಾವೆಯನ್ನು ತಾ. 26—2—70ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು [illegible] ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao,
Advocate for plaintiff.

Puttur, 9—2—70,

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337, 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮನೆ-ಮದ್ದು

ಗೃಹವೈದ್ಯ — ರೂ.2 - 00

ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 - 50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ

ಏಜಂಟರಿಗೆ ರಿಯಾಯತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

ಭರದಿಂದ ಬೆಳೆಯುತ್ತಿರುವ

ಪ್ಲಾಸ್ಟಿಕ್ ಮತ್ತು ಲಿನೋಲಿಂ ಕೈಗಾರಿಕೆ

ಅಂದಚಂದದ ಬಣ್ಣಗಳಿಂದ ಕಂಗೊಳಿಸುತ್ತಿರುವ ಪ್ಲಾಸ್ಟಿಕ್ ಸಾಮಾನುಗಳು ಶಹರದ ಮನೆಮನೆಗೂ ವ್ಯಾಪಿಸಿವೆ. ಪ್ಲಾಸ್ಟಿಕ್ ಸಾಮಾನುಗಳ ವೈವಿಧ್ಯತೆಯೂ ದಿನೇ ದಿನೇ ಹೆಚ್ಚುತ್ತಿದೆ. ಪ್ಲಾಸ್ಟಿಕ್ ಉದ್ಯಮವು ದೇಶದ ಒಂದು ದೊಡ್ಡ ಕೈಗಾರಿಕೆಯಾಗಿ ಪ್ರಗತಿಪಥದಲ್ಲಿದೆ.

ಪ್ಲಾಸ್ಟಿಕ್ ಮತ್ತು ಲಿನೋಲಿಂ ರಫ್ತು ಅಭಿವೃದ್ಧಿ ಮಂಡಳಿಯು ಪ್ಲಾಸ್ಟಿಕ್ ಕೈಗಾರಿಕೆ ಮತ್ತು ಸರಕಾರದ ಪ್ರತಿನಿಧಿಗಳೊಂದಿಗೆ ವಿಚಾರ ವಿನಿಮಯ ಮಾಡಿ ನಮ್ಮ ದೇಶದ ಪ್ಲಾಸ್ಟಿಕ್ ಸಾಮಾನುಗಳಿಗೆ ವಿದೇಶಿ ಮಾರುಕಟ್ಟೆಗಳಲ್ಲಿ ಭರದಿಂದ ಬೇಡಿಕೆ ಬರುವಂತೆ ಮಾರ್ಗದರ್ಶನ ಮಾಡುತ್ತಿದೆ. ಇದಲ್ಲದೆ ಪ್ಲಾಸ್ಟಿಕ್ ಕೈಗಾರಿಕೆಯ ಮುಂದಾಳು ಉದ್ಯಮದಾರರೂ ತಮ್ಮ ಉತ್ಪಾದನಾ ಘಟಕಗಳ ಅಭಿವೃದ್ಧಿಗೆ ಯೋಜನಾಬದ್ಧ ಶ್ರಮ ಕೈಕೊಂಡಿದ್ದಾರೆ.

ಈ ಮಂಡಳಿಯು ಪ್ಲಾಸ್ಟಿಕ್ ಕೈಗಾರಿಕೆಯ ಎಲ್ಲ ಅಂಶಗಳ ಬಗ್ಗೆ ಅಭ್ಯಾಸ ಮಾಡಿದೆ. ಯಾವ ಯಾವ ದೇಶಗಳು ಪ್ಲಾಸ್ಟಿಕ್ ಸಾಮಾನುಗಳ ಬಗ್ಗೆ ಬೇಡಿಕೆ ಮಂಡಿಸುತ್ತಿವೆ ಎಂಬುದನ್ನು ಮಂಡಳಿ ಪರಿಶೀಲಿಸಿ, ಗ್ರಾಹಕರ ಬೇಡಿಕೆ ಎಂಥದಿದೆಂಬುದನ್ನು ಕಂಡು ಕೊಂಡಿದೆ. 1950 ರಿಂದ 1969ರ ವರೆಗೆ ನಮ್ಮ ದೇಶದ ಪ್ಲಾಸ್ಟಿಕ್ ಕೈಗಾರಿಕೆ ತಾನು ಉತ್ಪಾದಿಸಿದ ಸರಕುಗಳನ್ನು ರಫ್ತು ಮಾಡುತ್ತಿತ್ತು. ಆದರೆ 1966ರಿಂದ ಗ್ರಾಹಕರು ಎಂಥ ಸರಕುಗಳನ್ನು ಅಪೇಕ್ಷಿಸುವರೊ ಅಂಥವುಗಳನ್ನೇ ನಮ್ಮ ದೇಶದ ಪ್ಲಾಸ್ಟಿಕ್ ಕೈಗಾರಿಕೆ ಉತ್ಪಾದಿಸುತ್ತಿದೆ. ಈಗ ಭಾರತವು ಅನೇಕ ವಿದೇಶಗಳಿಗೆ—ಪ್ಲಾಸ್ಟಿಕ್ ಸರಕುಗಳನ್ನು ನಿರ್ಮಿಸಿ ಜನಪ್ರಿಯಗೊಳಿಸಿದ ದೇಶಗಳಿಗೇ—ಪ್ಲಾಸ್ಟಿಕ್ ಸರಕುಗಳನ್ನು ರಫ್ತು ಮಾಡುತ್ತಿದೆ. ಈ ಕೈಗಾರಿಕೆಗಳಲ್ಲಿ ಭಾರತ ಯಾವುದೇ ಮುಂದುವರಿದ ರಾಷ್ಟ್ರದೊಂದಿಗೆ ಸರಿಸಮಾನವಾಗಿ ನಿಲ್ಲುವಂತಾಗಿದೆ; ಗೌರವಾನ್ವಿತ ಪ್ರತಿಸ್ಪರ್ಧಿಯೆನಿಸಿದೆ.

ಆರುಕೋಟಿ ರೂ. ಸರಕು ರಫ್ತು

ಕೇವಲ ಐದು ವರ್ಷಗಳ ಹಿಂದೆ ಅಂದರೆ 1964-65ರ ಸಾಲಿನಲ್ಲಿ ಭಾರತವು ಪ್ಲಾಸ್ಟಿಕ್ ಮತ್ತು ಲಿನೋಲಿಂ ವಸ್ತುಗಳನ್ನು ವಿದೇಶಗಳಿಗೆ ರಫ್ತು ಮಾಡಿ 3.17 ಕೋಟಿ ರೂ.ಗಳನ್ನು ಗಳಿಸಿದ್ದರೆ, 1969 ಮಾರ್ಚ್ ಅಂತ್ಯಕ್ಕೆ ಕೊನೆಯಾಗುವ ವರ್ಷದಲ್ಲಿ 6.2 ಕೋಟಿ ರೂ. ಮೌಲ್ಯದ ಪ್ಲಾಸ್ಟಿಕ್ ಮತ್ತು ಲಿನೋಲಿಂ ಸರಕುಗಳನ್ನು ರಫ್ತು ಮಾಡಿದೆ. ಲಿನೋಲಿಂ ಒಂದು ತರಹದ ರಂಗ ರಂಗಿನ ಹಾಸುಬಟ್ಟೆ. 19 9ರಲ್ಲಿ ಲಿನೋಲಿಂ ರಫ್ತು ವ್ಯಾಪಾರ 75 ಲಕ್ಷ ರೂ.ಗಳಷ್ಟಾಗಿದೆ. ರಫ್ತು ವ್ಯಾಪಾರಾಭಿಮುಖಿ ಪ್ಲಾಸ್ಟಿಕ್ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಮಂಡಳಿ ಯೋಜನಾಬದ್ಧ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಪ್ಲಾಸ್ಟಿಕ್ ಉದ್ಯಮಕ್ಕೆ ಬೇಕಾದ ಯಂತ್ರ ಮತ್ತು ಪಡಿಅಚ್ಚುಗಳ ನಿರ್ಮಾಣಕ್ಕೆ ಸಾಕಷ್ಟು ಗಮನ ಕೊಡಲಾಗಿದೆ. ಸದ್ಯೋಭವಿಷ್ಯದಲ್ಲಿ ಭಾರತವು ಇತರ ದೇಶಗಳಲ್ಲಿ ಪ್ಲಾಸ್ಟಿಕ್ ಉದ್ಯಮ ಯೋಜನೆಗಳನ್ನು ಸಂಯುಕ್ತವಾಗಿ ಪ್ರಾರಂಭಿಸಬಹುದಾಗಿದೆ. ಈಗಾಗಲೇ ಸಿಲೋನಿನಲ್ಲಿ ತೊಗಲು ಬಟ್ಟೆಯ ಕಾರ್ಖಾನೆಯನ್ನು, ಇಥಿಯೋಪಿಯಾದಲ್ಲಿ ಪಡಿಅಚ್ಚು ಘಟಕವನ್ನು ಪ್ರಾರಂಭಿಸಲಾಗಿದೆ. ಮಲೇಶಿಯಾ ಮತ್ತು ನೈಜೀರಿಯಾಗಳಲ್ಲಿ ಲಿನೋಲಿಂ ಉತ್ಪಾದನಾ ಕಾರ್ಖಾನೆಗಳನ್ನು ಪ್ರಾರಂಭಿಸುವ ಸಾಧ್ಯತೆಯಿದೆ. ಪ್ಲಾಸ್ಟಿಕ್ ಉದ್ಯಮದಲ್ಲಿ ಭಾರತವು ಸಾಕಷ್ಟು ತಾಂತ್ರಿಕ ಜ್ಞಾನವನ್ನೂ ಸಾಮರ್ಥ್ಯವನ್ನೂ ಸಂಪಾದಿಸಿದೆ.

ಮಾರುಕಟ್ಟೆಗಳ ಒಲವು

ಮಂಡಳಿಯು ಪಶ್ಚಿಮ ಯುರೋಪಿನಲ್ಲಿ ನಡೆದ ಪ್ಲಾಸ್ಟಿಕ್ ಮತ್ತು ಲಿನೋಲಿಂ ಸರಕುಗಳ ವಸ್ತುಪ್ರದರ್ಶನದಲ್ಲಿ ಭಾಗವಹಿಸಿದೆ. ಭಾರತದ ಸರಕುಗಳು ವಿದೇಶದ ಯಾವುದೇ ಶ್ರೇಷ್ಠ ಪ್ಲಾಸ್ಟಿಕ್ ಸಾಮಾನುಗಳಿಗೆ ಪ್ರತಿಭಾನ್ವಿತ ಪ್ರತಿಸ್ಪರ್ಧಿಯಾಗಿದ್ದು ಕಂಡುಬಂದಿತು. ವಿದೇಶಗಳಿಗೆ ತಜ್ಞರ ಮಂಡಳಿಯನ್ನು ಕಳುಹಿಸಿ, ಮಂಡಳಿಯು ಹೊಸ ಹೊಸ ವಿದೇಶಿ ಮಾರುಕಟ್ಟೆಗಳನ್ನು ಭಾರತಕ್ಕೆ ದೊರಕಿಸಿಕೊಟ್ಟಿದೆ. ಬೆಲೆ ಅಂಶ ಮುಂತಾದ ವಿಷಯಗಳ ಬಗ್ಗೆ ಗ್ರಾಹಕರ ಬೇಡಿಕೆ, ಸತತ ಅಧ್ಯಯನ ನಡೆಸುತ್ತಿದೆ. ಈಗ ದೇಶದ ಪ್ಲಾಸ್ಟಿಕ್ ಉದ್ಯಮಕ್ಕೆ ಯಾವುದೇ ಪ್ರೋತ್ಸಾಹಕ ಧನ ನೆರವಿನ ಅವಶ್ಯಕತೆಯಿಲ್ಲ; ತನ್ನ ಕಾಲ ಮೇಲೆ ತಾನೇ ನಿಲ್ಲಬಲ್ಲುದು. ಈ ಉದ್ಯಮಕ್ಕೆ ಬೇಕಾದ ಕಚ್ಚಾ ಮಾಲು ದೇಶದಲ್ಲಿ ಶೀಘ್ರವಾಗಿ ದೊರೆಯುವಂತೆ ಯೋಜಿಸಲಾಗಿದೆ. ಈ ಉದ್ಯಮವು ದೇಶಿಮೂಲ ಕಚ್ಚಾವಸ್ತುಗಳನ್ನು ಬಳಸುವಾಗ ಅಂತರರಾಷ್ಟ್ರೀಯ ಪ್ರಮಾಣಕ್ಕೆ ಅನುಗುಣವಾದ ರೀತಿಯಲ್ಲಿ ಮಾಡುತ್ತಿದೆ. ರಫ್ತಾಗುವ ಪ್ಲಾಸ್ಟಿಕ್ ಸರಕುಗಳನ್ನು ಹಡಗಿಗೆ ಹೇರುವ ಮುನ್ನ ರಫ್ತು ತನಿಖಾ ಏಜನ್ಸಿಯವರು ಪರೀಕ್ಷಿಸುವರು. ಹೀಗಾಗಿ ಗುಣಮಟ್ಟವನ್ನು ಕಟ್ಟುನಿಟ್ಟಾಗಿ ಕಾಯ್ದುಕೊಂಡು ಬರಲು ಶಕ್ಯವಾಗಿದೆ. ಇಷ್ಟರಲ್ಲೇ ಮಂಡಳಿಯು ಪರಿಶೀಲನ ದಕ್ಷೆಗೆ ಲಿನೋಲಿಂ ಮತ್ತು ಅನ್ಯಪದಕಗಳ ಪಟ್ಟಿಗಳನ್ನು ತರಲಾಗುವುದು.

ಭಾರತದ ಪ್ಲಾಸ್ಟಿಕ್ ಮತ್ತು ಲಿನೋಲಿಂ ಉದ್ಯಮವು ಇನ್ನೂ ಉತ್ತಮ ಭವಿಷ್ಯ ಹೊಂದಲು ಈ ಮಂಡಳಿಯು ಸತತವಾಗಿ ಪ್ರಯತ್ನ ಮುಂದುವರಿಸುವುದು.

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರರು ಬೇಕಾಗಿದ್ದಾರೆ. ಕಂಪೋಸಿಂಗ್ ವಿಭಾಗದಲ್ಲಿ ತರಬೇತಿಗಾಗಿಯೂ ಕೆಲವು ಹುಡುಗರನ್ನು ಸೇರಿಸಿಕೊಳ್ಳಲಾಗುವುದು. ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರೆಗೆ ಹಚ್ಚಬಹುದು.
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ.
ದೀರ್ಘಕಾಲ ಬಾಳಿಕೆ ಬರುತ್ತವೆ.
ಒಂದು ಸುದೈವ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ
ಪತ್ರ ವ್ಯವಹಾರ ಮಾಡಬಹುದು.

NAV. YUGA 19-2-1970
Registered with the Registrar of News Papers for India under No. R. N. 3546/'57

REGD. No. B. G/ 176
LICENCE No. 33,
Licensed to Post without Prepayment

ಜನಪ್ರಿಯವಾಗಿರುವ

ಭಾರತದ ಟೀ

ನಮ್ಮ ದೇಶದ ಟೀ ಕೈಗಾರಿಕೆ ಇಡೀ ವಿಶ್ವದ ಟೀ ಕೈಗಾರಿಕೆಯಲ್ಲಿಯೇ ಅತ್ಯಂತ ಪುರಾತನವಾಗಿದೆ. ಇದು ಸುವ್ಯವಸ್ಥಿತ ಕೈಗಾರಿಕೆಯೂ ಹೌದು—1823ರಷ್ಟು ಹಿಂದೆಯೇ ಈ ಉದ್ಯಮವನ್ನು ದೇಶದ ವಾಣಿಜ್ಯ ಉದ್ದೇಶಗಳಿಗಾಗಿ ಅಧಿಕ ಪ್ರಮಾಣದಲ್ಲಿ ಆರಂಭಿಸಲಾಯಿತು. ಈಗ ಟೀ ಕೈಗಾರಿಕೆಯಲ್ಲಿ ದೇಶದ 800,000 ಮಂದಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಪ್ರಾರಂಭದಲ್ಲಿಯೇ ಈ ಕೈಗಾರಿಕೆ ಯಶಸ್ವಿಯಾಗಿ ಬಂದವಾಳಗಾರರು, ತಾಂತ್ರಿಕ ತಜ್ಞರ ಮತ್ತು ವಿಜ್ಞಾನಿಗಳನ್ನು ಬಹಳವಾಗಿ ಆಕರ್ಷಿಸಿತು. ಉತ್ತರದಲ್ಲಿರುವ ಹಿಮಾಲಯ ಪರ್ವತ, ನೀಲಗಿರಿ ಬೆಟ್ಟಗಳು, ದಕ್ಷಿಣದ ಪಶ್ಚಿಮ ಘಟ್ಟಗಳು ಈ ದೇಶದ ಸೌಂದರ್ಯವನ್ನು ಹೆಚ್ಚಿಸುತ್ತಿರುವುದರ ಜೊತೆಗೆ ಈ ಕೈಗಾರಿಕೆ ಬೆಳೆಯಲೂ ಹೆಚ್ಚು ಸಹಾಯ ಮಾಡಿವೆ. ಭಾರತದ ಈಶಾನ್ಯ ಪ್ರದೇಶಗಳಾದ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಇತ್ತ ದೇಶದ ಟೀ ಬೆಳೆಯುವ ಪ್ರಮುಖ ಪ್ರದೇಶಗಳಾಗಿವೆ. ದಕ್ಷಿಣದ ಮೈಸೂರು, ಕೇರಳ ಮತ್ತು ಮದರಾಸುಗಳಲ್ಲಿಯೂ ದೇಶದ ಒಟ್ಟು ಬೆಳೆಯಲ್ಲಿ 25ರಷ್ಟು ಬೆಳೆಯಲಾಗುತ್ತಿದೆ. ಇನ್ನೇ ಉಳಿದ ತ್ರಿಪುರ, ಬಿಹಾರ್, ಉತ್ತರ ಪ್ರದೇಶ, ಮತ್ತು ಕಾಂಗ್ರಾ ಕಣಿವೆ ಈ ಸ್ಥಳಗಳಲ್ಲಿಯೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ಟೀಯನ್ನು ಬೆಳೆಯುತ್ತಿದ್ದಾರೆ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನಲ್ಲಿ ಬೆಳೆಯುವ ಡಾರ್ಜಿಲಿಂಗ್ ಟೀ ಮತ್ತು ಅಸ್ಸಾಂ ಟೀ ಇಡೀ ವಿಶ್ವದಲ್ಲೆ ಅದರ ಸ್ವಾದನೆಗೆ ಅತ್ಯಂತ ಪ್ರಸಿದ್ಧವಾಗಿವೆ. ನೀಲಗಿರಿಯ ಟೀ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಧಿಕ ಪ್ರಮಾಣದಲ್ಲಿ ಬೇಡಿಕೆ ಇದೆ

ವಿಶ್ವದ ಒಟ್ಟು ಟೀ ಬೆಳೆಯುಲ್ಲಿ ಭಾರತದಲ್ಲಿಯೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಟೀಯನ್ನು ಬೆಳೆಸಲಾಗುತ್ತಿದೆ. ಸುಮಾರು 3,350 ಹೆಕ್ಟಾರ್‌ಗಳಿಗೂ ಹೆಚ್ಚಿನ ಭೂಮಿಯಲ್ಲಿ ಟೀ ಉತ್ಪಾದನೆಯನ್ನು ಕೈಗೊಳ್ಳಲಾಗುತ್ತಿದ್ದು 400,000ಕ್ಕೂ ಹೆಚ್ಚು ಟನ್‌ಗಳಷ್ಟು ಟೀಯನ್ನು ಉತ್ಪಾದಿಸುತ್ತಿದ್ದೇವೆ. ಸಿಲೋನ್‌ನಲ್ಲಿ ಹೆಕ್ಟಾರ್ ಒಂದಕ್ಕೆ 900 ಕೆ. ಜಿ., ಪಾಕಿಸ್ತಾನದಲ್ಲಿ 750, ಪೂರ್ವ ಆಫ್ರಿಕಾದಲ್ಲಿ 1000 ಮತ್ತು ಇಂಡೋನೇಶಿಯಾದಲ್ಲಿ 1000 ಕೆ. ಜಿ. ಬೆಳೆಯುತ್ತಿದ್ದರೆ ಭಾರತದಲ್ಲಿ ಹೆಕ್ಟಾರ್ ಜಮೀನಿನಲ್ಲಿ 1100 ಕೆ.ಜಿ.ಗೂ ಹೆಚ್ಚಾಗಿ ಟೀಯನ್ನು ಬೆಳೆಸುತ್ತಿದ್ದೇವೆ.

ಟೀ ಸೊಪ್ಪಿನ ಉತ್ಪಾದನೆಯಲ್ಲಿ ಬಳಸುವ ವಿಧಾನಗಳಲ್ಲಿ ಸುಮಾರು 100 ವರ್ಷಗಳಿಂದಲೂ ವೈಜ್ಞಾನಿಕ ಸಂಶೋಧನೆಯನ್ನು ನಡೆಸುತ್ತಿದ್ದಾರೆ. ಈ ರೀತಿ ಸಂಶೋಧನೆಗಳನ್ನು ನಡೆಸುತ್ತಿರುವುದರಲ್ಲಿ ಅಸ್ಸಾಂನ ಟೋಕ್ಲಾಯ್ ವೈಜ್ಞಾನಿಕ ಕೇಂದ್ರ ಬಹಳ ಪ್ರಧಾನವಾದುದು.

ನಮ್ಮ ದೇಶದಲ್ಲಿ ಬೆಳೆಸುತ್ತಿರುವ ಟೀ ರಿಟೇರ ಬಗೆಯುಳ್ಳ ಕಪ್ಪು ಟೀ ಮತ್ತು ಹಸಿರು ಟೀ ಎಂಬುದಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಸಾಂಪ್ರದಾಯಕ, ಸಿ. ಟಿ. ಸಿ. ಲೆಗ್ಸ್—ಕಟ್ ಮತ್ತು ಫ್ಲಾಷ್‌ಕಟ್ ಇವು ನಮ್ಮ ದೇಶದಲ್ಲಿ ಉತ್ಪಾದಿಸಲಾಗುತ್ತಿರುವ ಬೇರೆ ಬೇರೆ ಬಗೆಯ ಟೀ. ಸಿ. ಟಿ. ಸಿ. ಬಗೆಯ ಟೀಗೆ ಅಮೇರಿಕಾ ಮತ್ತು ಇತರ ದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಬೇಡಿಕೆ ಇದೆ. ವಿಶ್ವದ ಮಾರುಕಟ್ಟೆಯಲ್ಲಿ ಭಾರತ ಟೀಯನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತುಮಾಡುತ್ತಿರುವ ದೇಶವಾಗಿದೆ. ಬೇರೆ ದೇಶಗಳು ತಮ್ಮ ಟೀ ಉತ್ಪಾದನೆಯನ್ನು ಹೆಚ್ಚಿಸಿದರೂ ಭಾರತ ತನ್ನ ಅಗ್ರಗಣ್ಯ ಸ್ಥಾನವನ್ನು ಉಳಿಸಿಕೊಂಡಿದೆ. ಇಂಗ್ಲೆಂಡ್, ಅಮೇರಿಕಾ, ಕೆನಡಾ, ಪಶ್ಚಿಮ ಜರ್ಮನಿ, ಐರ್ಲೆಂಡ್, ನೆದರ್‌ಲ್ಯಾಂಡ್, ಇಟಲಿ, ಫ್ರಾನ್ಸ್, ಸ್ಕಾಂಡಿನೇವಿಯನ್ ದೇಶಗಳು, ರಷ್ಯಾ ಮತ್ತು ಪೂರ್ವ ಯೂರೋಪ್ ರಾಷ್ಟ್ರಗಳಾದ ಸಂಯುಕ್ತ ಅರಬ ಗಣರಾಜ್ಯ, ಇರಾನ್, ಸೂಡಾನ್ ಟ್ಯುನೀಶಿಯಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಅಫ್ಘಾನಿಸ್ತಾನ್ ಈ ದೇಶಗಳು ನಮ್ಮ ಟೀಗೆ ಅಧಿಕ ಪ್ರಮಾಣದಲ್ಲಿ ಆಮದು ಮಾಡುತ್ತಿರುವ ರಾಷ್ಟ್ರಗಳು. ಈ ರಾಷ್ಟ್ರಗಳೊಡನೆ ಭಾರತದ ವಾಣಿಜ್ಯ ಸಂಬಂಧ ದಿನೇ ದಿನೇ ಏರುತ್ತಿದೆ. ನಮ್ಮ ದೇಶದಿಂದ 1965ರಲ್ಲಿ 1·5 ದಶಲಕ್ಷ ಕೆ. ಜಿ. ಟೀ ಪ್ಯಾಕೆಟ್‌ಗಳ ಮೂಲಕ ಹೊರದೇಶಗಳಿಗೆ ರಫ್ತಾಗುತ್ತಿತ್ತು. ಇದು 1966ರ ವೇಳೆಗೆ 2·6 ದಶಲಕ್ಷ ಕೆ. ಜಿ.ಗಳಿಗೆ ಏರಿ 1968ರಲ್ಲಿ 3·5 ದಶಲಕ್ಷ ಕೆ. ಜಿ.ಗಳಷ್ಟಕ್ಕೆ ಏರಿತು. ಪ್ಯಾಕೆಟ್ ಮೂಲಕ ರಫ್ತು ಮಾಡುವುದು ಈ ದಿನಗಳಲ್ಲಿ ಹೊಸದೊಂದು ವಿಧಾನವಾಗಿದೆ. ಬಳಕೆದಾರರ ಹಿತದೃಷ್ಟಿಯಿಂದಾಗಿ ಪ್ಯಾಕೆಟ್‌ಗಳ ಮೂಲಕ ರಫ್ತು ಮಾಡುವ ಚಿಕ್ಕ ವ್ಯಾಪಾರದಿಂದಾಗಿ ನಾವು ಹೆಚ್ಚು ಹೆಚ್ಚು ವಿದೇಶಿ ವಿನಿಮಯವನ್ನು ಗಳಿಸಿದ್ದೇವೆ. ಹೊರದೇಶಗಳಲ್ಲಿ ಪ್ಯಾಕೆಟ್ ಟೀಗಳಿಗೆ ಮಾರುಕಟ್ಟೆ ಹೆಚ್ಚುತ್ತಲೇ ಇದೆ. ಇತ್ತೀಚಿನ ದಿನಗಳಲ್ಲಿ ಮೊರಾಕೋ ಮತ್ತು ಇರಾಕ್ ದೇಶಗಳಿಂದಲೂ ನಮ್ಮಲ್ಲಿ ಉತ್ಪಾದನೆಯಾಗುವ ಹಸಿರು ಟೀಗೆ ಬೇಡಿಕೆ ಬರುತ್ತಿದೆ. ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ಜಪಾನಿನ ಟೀ ವಾಣಿಜ್ಯ ನಿಯೋಗವೊಂದು ಭಾರತದಿಂದ ಹಸಿರು ಟೀಯನ್ನು ಆಮದು ಮಾಡಿಕೊಳ್ಳುವ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಈಗಾಗಲೇ ಈ ಬಗ್ಗೆ ಕೆಲವು ಸೂಕ್ತಕ್ರಮಗಳನ್ನೂ ಕೈಗೊಳ್ಳಲಾಗಿದೆ. ಹೊರದೇಶಗಳಲ್ಲಿ ಟೀ ಮಾರಾಟ ಮಾಡಲು ಹಾಗೂ ನಮ್ಮ ಬಳಕೆದಾರರಿಗೆ ಭಾರತದ ಟೀ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಸುವ ಸಲುವಾಗಿ ನ್ಯೂಯಾರ್ಕ್, ಲಂಡನ್, ಬ್ರುಸೆಲ್ಸ್, ಸಿಡ್ನಿ ಮತ್ತು ಕೈರೋದಲ್ಲಿರುವ ಭಾರತ ಟೀ ವಾಣಿಜ್ಯ ಸಂಸ್ಥೆಗಳು ಅತ್ಯಂತ ಗಣನೀಯ ಸೇವೆ ಸಲ್ಲಿಸುತ್ತಿವೆ.

ಕಲ್ಕತ್ತಾ ಮತ್ತು ಕೊಚ್ಚಿನ್ ನಮ್ಮ ದೇಶದ ಪ್ರಮುಖ ಬಂದರುಗಳು. ಈ ಕಡೆಗಳಲ್ಲಿ ಆಗಾಗ್ಗೆ ದೇಶದಲ್ಲಿ ಬೆಳೆದ ಟೀಯನ್ನು ಹರಾಜು ಮೂಲಕ ಮಾರಾಟ ಮಾಡಲಾಗುತ್ತದೆ. ವರ್ಷದಲ್ಲಿ ಸುಮಾರು 160 ದಶಲಕ್ಷ ಹಾಗೂ 60ದಶಲಕ್ಷ ಕೆ.ಜಿ ಗಳಷ್ಟು ಟೀಯನ್ನು ಈ ಬಂದರುಗಳಲ್ಲಿ ಮಾರಾಟ ಮಾಡಲಾಗುವುದು. ಅನೇಕ ಸಂದರ್ಭಗಳಲ್ಲಿ ಇಂಗ್ಲೆಂಡಿಗೆ ರಫ್ತು ಮಾಡುವ ಟೀಯಲ್ಲಿ 75ರಷ್ಟು ಭಾಗ ಲಂಡನ್‌ನಲ್ಲಿ ಹರಾಜು ಮೂಲಕ ಒಟ್ಟಿಗೆ ಮಾರಾಟ ಮಾಡುವರು. ಮುಂದಿನ ವರ್ಷಗಳಲ್ಲಿಯೂ ಟೀ ಉತ್ಪಾದನೆಯಿಂದಾಗಿ ನಮ್ಮ ವಿದೇಶಿ ವಿನಿಮಯ ಹೆಚ್ಚುವುದು. ಇದರಿಂದಾಗಿ ಟೀ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಟೀ ಮಂಡಳಿಯ ಶ್ರಮ ಬಹಳ ಅಗತ್ಯವಾಗಿದೆ.

ಪ್ರಗತಿಯ ನಾಮಬಲ ಸಾಕೆ?

(ಒಂದನೇ ಪುಟದಿಂದ)

ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿರುವ ಈ ಬಗೆಯ ಕೃತ್ಯಗಳಿಂದ ಪ್ರಜಾಪ್ರಭುಗಳಿಗೆ ಸಂಕಟ ಉಂಟಾದಿದೆ; ಪ್ರಜಾಪ್ರಭುತ್ವ ಎದುರಿಸಬೇಕಾಗಿ ಬರುವ ವಿಸ್ಫೋಟಕ ಪರಿಸ್ಥಿತಿ ಕಾಣಿಸಿ ಕೊಂಡಿದೆ. ನಮ್ಮ ಪ್ರತಿನಿಧಿಗಳೂ, ನಾಯಕರೂ ನಡೆಸುತ್ತಿರುವ ಈ 'ರಾಜ್ಯಕೀಯ ಪ್ರಗತಿ'ಯು ಪ್ರಜೆಗಳಿಗೆ ನಿಜಕ್ಕೂ ಮಾರಕವಾಗೇ ಇದೆ. ಪ್ರಜಾಪ್ರಭುತ್ವದ ಅತ್ಯಂತ ವಿಷಾದನೀಯ ದುರವಸ್ಥೆಯಿದು ಎನ್ನಲೇಬೇಕಾಗುತ್ತದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮಿತ ಕುಟುಂಬ ಯೋಜನೆಗೆ
ಮಿತ ಸಂತತಿ
ಬೆಲೆ 0-75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ.
ಬಾಲುಕೋಟೆ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 26—2—1970 ಸಂಪುಟ 49 ಸಂಚಿಕೆ 25

ಮಾತೃ ವಾತ್ಸಲ್ಯದ ಪ್ರತೀಕ - ಬಾ

ಲೇಖಕರು : ರಾಮದಾಸ ಗಾಂಧಿ.

ಮಾನವ ಜನಾಂಗಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹಾತ್ಮ ಗಾಂಧೀಜಿಯವರ ನೆನಪು ನಮ್ಮಲ್ಲಿ ಸದಾ ಇರುವಂತೆಯೇ ದೈವಭಕ್ತಿ ಮತ್ತು ಪತಿಭಕ್ತಿ ವಿಷಯದಲ್ಲಿ 'ಬಾ' ಅವರ ಹೆಸರು ಚಿರಕಾಲ ಉಳಿಯುವುದು. ಬೆಳಗಾಗುತ್ತಲೆ ದೇವರ ಪ್ರಾರ್ಥನೆ ಮತ್ತು ಕುಲದೇವರ ಪೂಜೆ ಅವರ ಪ್ರತಿದಿನದ ಕಾರ್ಯಕ್ರಮಗಳಾಗಿದ್ದವು.

ನಾನು 1906—1909ರಲ್ಲಿ ದಕ್ಷಿಣ ಆಫ್ರಿಕಾದ ಫೋನಿಕ್ಸ್ ಆಶ್ರಮದಲ್ಲಿದ್ದೆ. ಆಗ ಬಾ ಮತ್ತು ಬಾಪು ಅವರ ಧಾರ್ಮಿಕ ಆದರ್ಶ ನನ್ನ ಮೇಲೂ ಪ್ರಭಾವ ಬೀರಿತು. ನನ್ನ ಇಬ್ಬರು ಅಣ್ಣಂದಿರು ಮತ್ತು ತಮ್ಮ ದೇವದಾಸರಿಗೂ ಆಗ ಅವರ ತೀಕ್ಷ್ಣ ಬುದ್ಧಿಯ ಅರಿವುಂಟಾಯಿತು. ಫೋನಿಕ್ಸ್ ಡರ್ಬನ್‌ನಿಂದ ಹನ್ನೆರಡು ಮೈಲಿ ದೂರದಲ್ಲಿದೆ. ಅಂದಿನ ದಿನಗಳಲ್ಲಿ ಅಲ್ಲಿ ಸಂಪರ್ಕ ವ್ಯವಸ್ಥೆ ಇದ್ದಿರಲಿಲ್ಲ. ಆ ಪ್ರದೇಶದಲ್ಲಿ ರವಂತೆ ಎತ್ತರವಾಗಿ ಹುಲ್ಲು ಬೆಳೆದಿತ್ತು. ಬಾ ಮತ್ತು ಬಾಪು ಅವರಿಗೆ ಅಷ್ಟೇ ಅಲ್ಲದೆ ಬಾಪು ಅವರ ಶಿಷ್ಯರಿಗೂ ಅಲ್ಲಿನ ವಾಸ ಕಷ್ಟವಾಗಿತ್ತು. ಗಾಂಧೀಜಿಯವರು ಅಲ್ಲಿಯೇ ಅನೇಕ ಸಾಮೂಹಿಕ ಪ್ರಯೋಗಗಳನ್ನು ನಡೆಸಿದರು. ನನ್ನ ಹತ್ತನೆ ವರ್ಷ ವಯಸ್ಸಿನಲ್ಲಿಯೇ 'ಬಾ' ಅವರ ದೈವಭಕ್ತಿ ಮತ್ತು ಕುಲದೈವರಲ್ಲಿನ ಅಚಲವಿಶ್ವಾಸ ನನ್ನ ಮೇಲೆ ಪ್ರಭಾವ ಬೀರಿತು. ಬೆಳಗ್ಗೆ ಸ್ನಾನದ ನಂತರ ದೇವರಮನೆಯಲ್ಲಿ ಹತ್ತಿಯಿಂದ ಹೂ ಬತ್ತಿ ಮಾಡುವುದು, ದೇವರಿಗೆ ದೀಪ ಹಚ್ಚುವುದು, ದೇವರನ್ನು ಕುರಿತ ಭಕ್ತಿಗೀತೆಗಳನ್ನು ಹಾಡುವುದು, ನಂತರ ಸೂರ್ಯನಮಸ್ಕಾರ, ವರುಣ ಲಕ್ಷ್ಮಿ ಮತ್ತು ಸರಸ್ವತಿ ಇವರಿಗೆ ನಮಸ್ಕರಿಸುತ್ತಿದ್ದರು. ತಾವು ಖಾಯಿಲೆ ಮಲಗಿದಾಗಲೂ ಸದಾ ಈ ಕಾರ್ಯಕ್ರಮಗಳನ್ನು ಜರಗಿಸುತ್ತಿದ್ದರು.

ನನ್ನ ತಂದೆ ಬಯಸಿದ್ದರೆ ನಮಗೆಲ್ಲ ಯೂರೋಪಿಯನ್ ಶಾಲೆಗಳಲ್ಲಿ ವಿದ್ಯಾಭ್ಯಾಸ ಕೊಡಿಸಬಹುದಿತ್ತು. ಆದರೆ ಈ ಶಾಲೆಗಳಲ್ಲಿನ ವಿದ್ಯಾಭ್ಯಾಸ ಭಾರತೀಯರಿಗೆ ಒಂದು ಧಕ್ಕೆ ಎಂಬುದಾಗಿ ಅವರು ತಮ್ಮ "ಹಿಂದ್ ಸ್ವರಾಜ್ಯ"ದಲ್ಲಿ ಬರೆಯುತ್ತಿದ್ದರು. ಇದರಿಂದಾಗಿ ನಮಗೆ ಮನೆಯೇ ಶಾಲೆಯಾಯಿತು. ಬಾ ಅವರು ನಮ್ಮ ಶಿಕ್ಷಕರಾದರು. ಶ್ರೀ ಗನ್‌ಲಾಲ್ ರವರೂ ಸದಾ ನಮಗೆ ಶಿಕ್ಷಣ ನೀಡಿದರು. ಛಗನ್‌ಲಾಲ್ ಗಾಂಧಿ ಮತ್ತು ಸಂತೋಕ್ ಬೆನ್ ಗಾಂಧಿ ಇವರುಗಳು ನಮ್ಮ ಶಿಕ್ಷಕರಾದರು. ಎಲ್ಲ ತಾಯಂದಿರಂತೆ ನಮ್ಮ ಬಾ ಅವರು ನಮ್ಮ ಶಿಕ್ಷಣದ ಬಗ್ಗೆ ಹೆಚ್ಚು ಶ್ರಮ ವಹಿಸಿದ್ದರು. ಬಾಪು ಅವರಿಗೆ ನಮ್ಮ ಬಗ್ಗೆ ಹೆಚ್ಚಿನ ಮಮತೆ ಇತ್ತು, ಆದರೂ ಅವರು ಆಶ್ರಮದಲ್ಲಿ ಸಾಮೂಹಿಕವಾಗಿ ಇರುತ್ತಿರಲಿಲ್ಲ. ನಾನು ಶಿಕ್ಷಣದಲ್ಲಿ ಹಿಂದುಳಿದ್ದೇನೆ ಎಂಬುದು ಬಾ ಅವರಿಗೆ ತಿಳಿದಾಗ ಅಂತು ತುಂಬ ವ್ಯಥೆಗೊಂಡರು. ತಮ್ಮನ್ನೇ ತಾವು ನಿಂದಿಸಿಕೊಂಡರು. ಅವರಿಗೆ ಕೋಪ ಬಂದಿರುವ ಸಂದರ್ಭದಲ್ಲಿ ನಾನು ಮನೆಗೆ ಬಾರದೆ ಕೆಲವು ಘಂಟೆಗಳ ನಂತರ ಬರುತ್ತಿದ್ದೆ. ಆಗ್ಗೆ ಅವರ ಕೋಪ ಶಮನವಾಗಿರುತಿತ್ತು.

ಕಸ್ತೂರಿಬಾ ಅವರ ಸ್ಮಾರಕ ದಿನಾಚರಣೆ. ಕಸ್ತೂರಿಬಾ ಅವರೊಡನೆ ಗಾಂಧೀಜಿ.

ಗಾಂಧೀಜಿಯವರು ಆಗಾಖಾನ್‌ನ ಅರಮನೆಯ ಜೈಲಿನಲ್ಲಿದ್ದರು. 21 ದಿನಗಳ ಉಪವಾಸದಿಂದಾಗಿ ಅವರ ದೇಹ ಕೃಶವಾಯಿತು. ಬಂಧುಗಳು, ಮಿತ್ರರು ಮೊದಲಾಗಿ ಅನೇಕರು ಅಲ್ಲಿಗೆ ಬಂದು ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದರು. ಡಾ। ಸುಶೀಲನಯ್ಯರ್, ಜನರಲ್ ಕೆಡ್ಡಿ, ಡಾ। ಬಿ. ಸಿ. ರಾಯ್ ಅವರು ಆಗ ಅಲ್ಲಿಗೆ ಬಂದಿದ್ದರು. ಅವರ ಮುಖದಲ್ಲಿ ಕಳವಳ ಎದ್ದು ಕಾಣುತಿತ್ತು. ಬಾಪು ಅವರಲ್ಲಿ ಮೊದಲಿನ ಕಳೆ ಬರಲಿ, ಅವರ ಆರೋಗ್ಯ ಸುಧಾರಿಸಲಿ ಎಂಬುದಾಗಿ 'ಬಾ' ಅವರು ಪ್ರತಿದಿನ ದೇವರಲ್ಲಿ ಪ್ರಾರ್ಥಿಸಿದರು.

ಮಾತೃ ವಾತ್ಸಲ್ಯದ ಸಮಯದಲ್ಲಿ ಆಕೆ ಆದರ್ಶ ವ್ಯಕ್ತಿ. ಮೂವತ್ತೈದು ವರ್ಷಗಳ ಹಿಂದೆ ಒಂದು ಬಾರಿ ದೇವದಾಸ್ ಖಾಯಿಲೆಗೀಡಾದ. ತನ್ನ ಕಾರ್ಯಭಾರಗಳಿಂದಾಗಿ ಮುಂಬೈಗೆ ಬಂದ. ಆತನ ಹೆಂಡತಿಯೂ ಆತನೊಂದಿಗೆ ಇದ್ದಳು. ನನಗೆ ಕಾರಣ ತಿಳಿಯದು. ಆಕೆಯೂ ರೋಗಿಯಾದಳು, ದಿನ ರಾತ್ರಿ ಖಾಯಿಲೆ ಜಾಸ್ತಿಯಾಗುತಿತ್ತು. ಆ ಸಂದರ್ಭದಲ್ಲಿ ಬಾ ವಾರ್ಧಾದಿಂದ ಮುಂಬೈಗೆ ಹೊರಟರು. ತಾಯಿಯನ್ನು ನೋಡಿದಮನೇ ದೇವದಾಸ್ ತನ್ನ ಹೃದಯ ಹಗುರವಾಯಿತು ಎಂದರಿತ. ಆಕೆಯ ದರ್ಶನ ಅವನ ಆರೋಗ್ಯ ಭಾಗ್ಯದ ಬಾಗಿಲು ತೆರೆಯಿತು. ಅಂದಿನಿಂದ ರೋಗಿಯ ಪಾಲನೆಯ ಜವಾಬ್ದಾರಿಯನ್ನು ಬಾ ಅವರೇ ವಹಿಸಿಕೊಂಡರು.

ನಾನೇ 1934ರಲ್ಲಿ ಒಮ್ಮೆ ಖಾಯಿಲೆಗೀಡಾದೆ. ಔಷಧಿಗಳನ್ನು ತೆಗೆದುಕೊಂಡರೂ ಖಾಯಿಲೆ ವಾಸಿಯಾಗಲಿಲ್ಲ. ಆಗ ಸಬರಮತಿ ಆಶ್ರಮದಲ್ಲಿ ಬಾ ಅವರೇ ನನ್ನನ್ನು ನೋಡಿಕೊಳ್ಳಲು ನಿಶ್ಚಯಿಸಿದರು. ಬೆಳಗಿನಿಂದ ಸಂಜೆಯವರೆಗೆ ನನ್ನನ್ನು ನೋಡಿಕೊಳ್ಳುವುದೇ ಅವರ ಕೆಲಸವಾಯಿತು. 'ಸಬರಮತಿ' ಆಶ್ರಮದ ವಾತಾವರಣ ನನಗೆ ಹಿತಕರವಾಗಿರಲಿಲ್ಲವಾಗಿ ನಾವು ವಾರ್ಧಾಗೆ ತೆರಳಿದೆವು. ಅಲ್ಲಿ

(ಎಂಟನೇ ಪುಟ ನೋಡಿರಿ)

ಕಾಫೀ ಉದ್ಯಮದ ಬೆಳವಣಿಗೆ

ಉತ್ಪಾದನೆ, ರಫ್ತು ಮತ್ತು ಬಳಕೆ ಮುಂತಾದ ಎಲ್ಲ ರಂಗಗಳಲ್ಲಿಯೂ ಭಾರತದ ಕಾಫೀ ಉದ್ಯಮ ಗಣನೀಯ ಪ್ರಗತಿ ಸಾಧಿಸಿದೆ. ನಮ್ಮ ದೇಶದಲ್ಲಿ ಕಾಫಿ ಹೆಚ್ಚಾಗಿ ದಕ್ಷಿಣವಲಯದಲ್ಲಿಯೇ ಬೆಳೆಯುತ್ತಿದೆ. ಮೈಸೂರು, ತಮಿಳುನಾಡು ಮತ್ತು ಕೇರಳದಲ್ಲಿ ಕಾಫೀ ತೋಟಗಳು ಹಬ್ಬಿವೆ. ಭಾರತದ ಅರ್ಥ ವ್ಯವಸ್ಥೆಯಲ್ಲಿ ಕಾಫೀ ಮಹತ್ವದ ಪಾತ್ರ ವಹಿಸುತ್ತದೆ.

ಕಾಫೀ ತೋಟಗಳಲ್ಲಿ ಕೆಲಸ ಮಾಡುತ್ತಿರುವವರ ಒಟ್ಟು ಸಂಖ್ಯೆ ಸುಮಾರು ಮೂರು ಲಕ್ಷ. ಕಾಫೀ ತೋಟಗಳ ಅಭಿವೃದ್ಧಿಗೆಂದು ತೊಡಗಿಸಲಾದ ಬಂಡವಾಳವು ಗಣನೀಯವಾಗಿದೆ. 47 000ಕ್ಕೂ ಹೆಚ್ಚು ನೊಂದಾಯಿಸಲ್ಪಟ್ಟ ಕಾಫಿ ತೋಟಗಳಿವೆ. ನೊಂದಾಯಿಸದೇ ಇದ್ದ ಕಾಫಿ ತೋಟಗಳ ಸಂಖ್ಯೆ ಸುಮಾರು 5000.

ದೇಶದ ಸುಮಾರು 130000 ಹೆಕ್ಟೇರುಗಳಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ.

35ಕೋಟಿ ರೂಪಾಯಿಗಳು

ಕಾಫಿಯಿಂದ ಬರುವ ರಾಷ್ಟ್ರೀಯ ವರಮಾನ 35 ಕೋಟಿ ರೂ.ಗಳು. ಇದರಲ್ಲಿ 18 ಕೋಟಿ ರೂ.ಗಳು ವಿದೇಶಿ ವಿನಿಮಯ ರೂಪದಲ್ಲಿ ಲಭ್ಯವಾಗುತ್ತವೆ. ಕಾಫಿ ಉದ್ಯಮದಿಂದ ಕೇಂದ್ರ ಬೊಕ್ಕಸಕ್ಕೆ ಅಬಕಾರಿ ರೂಪದಲ್ಲಿ ದೊರೆಯುವ ಲಾಭ 3 ಕೋಟಿ ರೂ.ಗಳು. ಇದಲ್ಲದೆ ರಫ್ತು ಕರ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಮತ್ತೆ ಮೂರು ಕೋಟಿ ರೂ.ಗಳ ಆದಾಯವಿದೆ.

ಕಾಫೀ ತೋಟಗಳ ಸಂಖ್ಯೆಯಲ್ಲಿಯಾಗಲಿ ಅಥವಾ ಅವುಗಳ ಕ್ಷೇತ್ರದಲ್ಲಿಯಾಗಲಿ ಬಹಳಷ್ಟು ಹೆಚ್ಚಳವಾಗಿಲ್ಲ. ಆದಾಗ್ಯೂ ಕಾಫಿ ಉತ್ಪಾದನೆ ಗಮನಾರ್ಹವಾಗಿ ಹೆಚ್ಚಿದೆ. 1948-1967ರ ಎರಡು ದಶಕಗಳಲ್ಲಿ ಕಾಫಿ ಬೆಳೆದ ಕ್ಷೇತ್ರ ಶೇಕಡಾ 45ರಷ್ಟು ಹೆಚ್ಚಾಗಿದೆ; ಅದೇ ಅವಧಿಯಲ್ಲಿ ಕಾಫೀ ಉತ್ಪಾದನೆ ಶೇಕಡ 245ರಷ್ಟು ಹೆಚ್ಚಿದೆ. ಅತಿ ಹೆಚ್ಚು ಅಂದರೆ 78275 ಟನ್ ಕಾಫಿಯನ್ನು ಒಮ್ಮೆ ಬೆಳೆಯಲಾಗಿದೆ. ಉತ್ತಮ ಬೇಸಾಯ ಪದ್ಧತಿ, ಒಳ್ಳೇ ಕಾಫಿ ತಳಿಗಳ ನೆರವು ಪಡೆದು ಕಾಫೀ ತೋಟಗಳನ್ನು ಪ್ರಗತಿಪರವಾಗಿ ಅಭಿವೃದ್ಧಿಗೊಳಿಸಲಾಗಿದೆ. ಕಾಫಿ ಬೀಜಗಳನ್ನು ಕೇಂದ್ರೀಕೃತ ಮಾಡಿದ ಮಾರುಕಟ್ಟೆ ವಿಧಾನದಿಂದ ಕಾಫೀ ಬೆಳೆಗಾರರು ತಮ್ಮ ಬೆಳೆಗೆ ಉತ್ತಮ ಬೆಲೆಯನ್ನು ಪಡೆಯಲು ಶಕ್ತರಾಗಿದ್ದಾರೆ ಈ ಯೋಜನೆಯನ್ವಯ ಕಾಫಿ ತೋಟಗಾರರಿಗೆ ತಮ್ಮ ಬೆಳೆಯನ್ನು ಮಾರುಕಟ್ಟೆಗೆ ಒಯ್ಯಬೇಕಿಲ್ಲ, ದೇಶದ ಆಂತರಿಕ ಅಥವಾ ಅಂತರ್ರಾಷ್ಟ್ರೀಯ ಬೆಲೆಗಳ ಏರುಪೇರುಗಳ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಿಲ್ಲ. ತಮ್ಮಲ್ಲಿ ಶಕ್ತಿಯನ್ನು ಕಾಫಿ ತೋಟಗಳ ತೀವ್ರ ಅಭಿವೃದ್ಧಿಯತ್ತ ತೋಟಗಾರರು ವ್ಯಯಿಸಬಲ್ಲರು. ಕಾಫಿ ಬೋರ್ಡ್ ಕಾಫಿ ತೋಟಗಾರರ ಪರವಾಗಿ ಕಾಫಿ ಮಾರುಕಟ್ಟೆಯ ವ್ಯವಸ್ಥೆ ಮಾಡುವುದು, ಹೊಸ ಹೊಸ ವಿದೇಶ ಮಾರುಕಟ್ಟೆಯನ್ನು ಪ್ರವೇಶಿಸಲು ಯತ್ನಿಸುವದು, ಕಾಫೀ ಬೆಳೆಗಾರರಿಗೆ ಯೋಗ್ಯ ಲಾಭ ದೊರಕುವಂತೆ ಸತತವಾಗಿ ಯತ್ನಿಸುವದು. ಕಾಫೀ ಬೋರ್ಡ್ ಲಾಭ ಸಂಪಾದನೆಗಾಗಿ ಕೆಲಸ ಮಾಡುವ ವ್ಯಾಪಾರೀ ಸಂಸ್ಥೆಯಲ್ಲ. ಕಾಫೀ ಬೀಜ ಸಂಗ್ರಹದ ಉಸ್ತುವಾರಿ, ಮಾರುಕಟ್ಟೆಯ ವೆಚ್ಚ, ಆಡಳಿತದ ಖರ್ಚು — ಇವುಗಳ ಬಗ್ಗೆ ಬೇಕಾದ ಹಣವನ್ನು ಇಟ್ಟುಕೊಂಡು ಕಾಫೀ ಬೋರ್ಡ್ ಉಳಿದೆಲ್ಲ ಹಣವನ್ನು ಕಾಫಿ ತೋಟಗಾರರಿಗೆ ನೀಡುವದು. ಇಂತಹ ಕ್ರಮ ಕಾಫೀ ಉದ್ಯಮದ ಸ್ಥಿರತೆಗೆ ಕಾರಣವಾಗಿದೆ.

ರಫ್ತು ವ್ಯಾಪಾರ

ಕಾಫೀ ಉತ್ಪಾದನೆ ಹೆಚ್ಚಿದಂತೆ ಅದಕ್ಕೆ ಯೋಗ್ಯ ಮಾರುಕಟ್ಟೆಯನ್ನು ಹುಡುಕುವ ಅದರಲ್ಲೂ ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾದ ಮೇಲೆ—ದುಸ್ತರವಾಗ ತೊಡಗಿತು. ಯುರೋಪಿನ ಅನೇಕ ದೇಶಗಳಿಗೆ ಕಾಫಿಯನ್ನು ರಫ್ತು ಮಾಡುವದು ಕಠಿಣವಾಯಿತು; ದೇಶದಲ್ಲಿ ಕಾಫಿಯ ಆಂತರಿಕ ಬಳಕೆಯನ್ನು ಹೆಚ್ಚಿಸಿ, ಕಾಫಿ ಉದ್ಯಮವನ್ನು ಸ್ಥಿರಗೊಳಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಯಿತು. ತದನಂತರ ಕಾಫೀ ರಫ್ತು ವ್ಯಾಪಾರವನ್ನು ಹೆಚ್ಚಿಸಲು ಪ್ರಯೋಜಕ ಸರ್ವತೋಮುಖ ಪ್ರಯತ್ನ ಮಾಡಲಾಯಿತು. ಯುರೋಪಿನಲ್ಲಿ ಕಾಫೀ ಜನಪ್ರಿಯತೆ [illegible]ಕೆಯಿತು. ಪೂರ್ವ ಯುರೋಪ್ ದೇಶಗಳೊಡನೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಯಿತು. ತತ್ಪರಿಣಾಮವಾಗಿ 1967—68 ಸಾಲಿನಲ್ಲಿ ಸುಮಾರು 18 ಕೋಟಿ ರೂ. ಮೌಲ್ಯದ 34000 ಟನ್ ಕಾಫಿಯನ್ನು ವಿದೇಶಿ ಮಾರುಕಟ್ಟೆಯಲ್ಲಿ ಮಾರಲು ಸಾಧ್ಯವಾಯಿತು. 1953—54 ಸಾಲಿನಲ್ಲಿ ಕೇವಲ 2800 ಟನ್ ಕಾಫಿಯನ್ನು ರಫ್ತು ಮಾಡಲಾಗಿತ್ತು.

1963ರ ಒಪ್ಪಂದ

1963 ಜುಲೈ ತಿಂಗಳಲ್ಲಿ ಅಂತರ್ರಾಷ್ಟ್ರೀಯ ಕಾಫೀ ಒಡಂಬಡಿಕೆ ಅಸ್ತಿತ್ವದಲ್ಲಿ ಬರುವ ಮೊದಲು ಬೇಕಾದಷ್ಟು ಕಾಫಿಯನ್ನು ರಫ್ತು ಮಾಡಲು ಅವಕಾಶವಿತ್ತು. ಈ ಒಡಂಬಡಿಕೆ ಬಂದ ವೇಳೆನವ್ಯ ಕಾಫೀ ರಫ್ತು ವ್ಯಾಪಾರ ಅಷ್ಟು ಸುಲಲಿತವಾಗಿಲ್ಲ. ಅಂತರ್ರಾಷ್ಟ್ರೀಯ ಕಾಫೀ ಒಡಂಬಡಿಕೆಯು ಪ್ರಮಾಣವಾಗಿ ಕಾಫೀ ಬೆಳೆಯುವ ದೇಶಗಳು 1972—73 ಸಾಲಿಗೆ ಎಷ್ಟು ಕಾಫೀ ಬೆಳೆಯಬೇಕೆಂಬ ಗುರಿಯನ್ನು ನಿಗದಿ ಪಡಿಸಿಕೊಂಡಿವೆ. 1973ರಲ್ಲಿ ಈ ಒಪ್ಪಂದದ ಅವಧಿ ಮುಗಿಯುವದು.

ಈ ಒಪ್ಪಂದದ ಪ್ರಕಾರ ಭಾರತವು 83,000 ಟನ್ ಕಾಫಿಯನ್ನು ಉತ್ಪಾದಿಸಿ ತನ್ನ ಸಂಪ್ರದಾಯದ ವಿದೇಶಿ ಮಾರುಕಟ್ಟೆಗೆ 25380 ಟನ್ ಕಾಫಿಯನ್ನು ಮಾರಬೇಕು; ಕೋಟಾ ಇಲ್ಲದ ರಾಷ್ಟ್ರ

(ಏಳನೇ ಪುಟ ನೋಡಿರಿ)

ದೇಶಕ್ಕೆ ಬೇಕಾಗಿರುವದು ಆಹಾರ

ಜಿ. ಇ. ಎಫ್. ಪಂಪುಸೆಟ್ಟುಗಳು ಅದರ ಪರಿಹಾರ.

ಅತ್ಯಂತ ಆಧುನಿಕ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಟ್ಟ
ಜಿ. ಇ. ಎಫ್. ಪಂಪುಸೆಟ್ಟುಗಳನ್ನು ಉಪಯೋಗಿಸಿ
ಹೆಚ್ಚು ಬೆಳೆಯಿರಿ.

ದೇಶದ ಸಂಪತ್ತನ್ನು ಹೆಚ್ಚಿಸಲು ಹೆಚ್ಚು ಆಹಾರ ಬೆಳೆಯಲು
ಜಿ. ಇ. ಎಫ್. ಪಂಪುಸೆಟ್ಟುಗಳನ್ನೇ ಉಪಯೋಗಿಸಿರಿ.

ತಯಾರಕರು
ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಬೆಂಗಳೂರು.

ಬೇಡಿಕೆಗಾಗಿ :—
ಮೆ| ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್,
ನಂ. 36 "ಹರಿನಿವಾಸ್" ಕನಿಂಗ್‌ಹ್ಯಾಮ್ ರೋಡ್,
ಬೆಂಗಳೂರು—1
ಅವರೊಂದಿಗೆ ವ್ಯವಹರಿಸಿ.

ಫೋನ್ : 526
ಸಂಪುಟ ೪೯
ಸಂಚಿಕೆ ೨೫
VOL. 49
No. 25

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೬—೨—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಬೆಳಗಾಂವಿ ನ್ಯಾಯ

ಸಂಸ್ಥಾ ಕಾಂಗ್ರೆಸ್ಸಿನ ಗಂಡುಭೂಮಿ ಕರ್ನಾಟಕದ ಪ್ರಾದೇಶಿಕ ರಾಜ್ಯಕೀಯ ಸಮ್ಮೇಳನವು ಬೆಳಗಾಂವಿಯಲ್ಲಿ ಅದ್ದೂರಿಯಿಂದ ನಡೆದದ್ದು, ಅಲ್ಲಿ ಕನ್ನಡದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು "ನನ್ನ ನಿಷ್ಠೆ ನನ್ನ ಪಕ್ಷಕ್ಕೆ, ಶ್ರೀಮತಿ ಇಂದಿರಾ ಗಾಂಧಿಗಲ್ಲ" ಎಂದು ದೃಢಪಡಿಸಿದ್ದು "ಬೆಳಗಾಂವಿಯನ್ನು ಇನ್ನೊಂದು ಬರ್ಲಿನ್ ನಗರವಾಗಗೊಡಲಾರೆ" ಎಂದು ಸಿಂಹಗರ್ಜನೆ ಮಾಡಿದ್ದು — ಇವೆಲ್ಲವೂ ಪಾರ್ಲಿಮೆಂಟಿನ ಬಜೆಟ್ ಅಧಿವೇಶನಕ್ಕೆ ಪೂರ್ವಭಾವಿಯಾಗಿ ನಡೆದದ್ದು — ಎಲ್ಲಕ್ಕೂ ಭಾರಿ ಹಿನ್ನೆಲೆಯಿದೆ. ಪ್ರಧಾನಿ ಗಾಂಧಿಯವರು ಬಜೆಟ್ ಅಧಿವೇಶನವನ್ನು ಕಠಿನತರ ಅಧಿವೇಶನವೆಂದು ತಾನೇ ಕರೆದಿರುವುದರಲ್ಲಿ ಸಾಕಷ್ಟು ಔಚಿತ್ಯವಿದೆ. ಸದ್ಯಕ್ಕೆ ಅಲ್ಪ ಸಂಖ್ಯಾತ ಪಕ್ಷವು ಅವರದ್ದಾಗಿರುವುದರಿಂದ, ತನ್ನ ಸರಕಾರದ ಉಳಿವಿಗಾಗಿ ಅವರು ಹಲವಾರು ಪಕ್ಷಗಳ ಸಹಕಾರ ಬಯಸುವುದು ಅಸಹಜವಲ್ಲ. ಆದರೆ, ಇತರರ ಸಹಾಯ ಸುಮ್ಮನೇ ದೊರೆಯದು. ಸರಕಾರಕ್ಕೆ ಬೇಷರತ್ ಬೆಂಬಲವನ್ನು ಯಾರೂ ಕೊಡುವುದಿಲ್ಲ. ಕಾರ್ಯ ಪ್ರಣಾಳಿಯನ್ನು ನೋಡಿ ಒಂದೊಂದು ಹೆಜ್ಜೆಗೂ ಒಂದೊಂದು ನಿರ್ಣಯ ಕೈಕೊಳ್ಳುವುದು ರಾಜ್ಯಕೀಯ ಪಕ್ಷಗಳ ನಿಲುಮೆಯಾದುದರಿಂದ ಪಾರ್ಲಿಮೆಂಟಿನಲ್ಲಿ ಬಹುಮತ ಗಳಿಸಬಹುದಾದಂತಹ ನೀತಿಯನ್ನೇ ಶ್ರೀಮತಿ ಗಾಂಧಿ ಸರಕಾರವು ಅನುಸರಿಸಬೇಕಾಗುತ್ತದೆ.

ಇದೂ ಅಲ್ಲದೆ ಇಂಡಿಕೇಟ್ ಕಾಂಗ್ರೆಸ್‌ಗೆ ನಿಜವಾಗಿ ಎಷ್ಟು ಪಾರ್ಲಿಮೆಂಟ್ ಸದಸ್ಯರ ನಿಷ್ಠೆಯಿದೆಯೆಂದು ಹೇಳಲಾಗದು. ಚಂಡೀಗಢವನ್ನು ಗಿಟ್ಟಿಸಿಕೊಳ್ಳುವ ಸಲುವಾಗಿಯೇ ಪಂಜಾಬ–ಹರಿಯಾಣಾಗಳ ಕಾಂಗ್ರೆಸಿಗರು ಇಂದಿರಾ ಪಕ್ಷವಹಿಸಿದ್ದರ ಭಾರೀ ಹಿನ್ನೆಲೆ, ಇದೀಗ ಚಂಡೀಗಢವನ್ನು ಶ್ರೀಮತಿಯವರು ಪಂಜಾಬಿಗೆ ಕೊಡಮಾಡಿದರು; ಆದುದರಿಂದ ಪಂಜಾಬಿಗಳಿಗೆ ಭಾರಿ ಖುಶಿಯಾಯಿತು; ಆದರೆ, ಹರ್ಯಾನದಲ್ಲಿ ಬಹಳಷ್ಟು ಅಪಸ್ವರಗೊಳಗಾಗಿದ್ದಾರೆ. ಇದರ ಪರಿಣಾಮ ಶ್ರೀಮತಿ ಗಾಂಧಿಯವರ ಮೇಲೆ ಆಗದಿರದು. ಶ್ರೀಮತಿಯವರ ಸರಕಾರ ಸ್ವಪಕ್ಷೀಯರ ಬೆಂಬಲವನ್ನೇ ಅವಲಂಬಿಸಿಲ್ಲ; ಅವರಿಗೆ ವಿರೋಧೀ ಪಕ್ಷಗಳ ಭಾರಿ ಬಲವೇ ಆಧಾರಸ್ತಂಭ. ಹರಿಯಾಣವನ್ನು ತೃಪ್ತಿಪಡಿಸಲು ಭಾರಿ ಮೊತ್ತದ ಪರಿಹಾರದ ಆಮಿಷವನ್ನು ಮುಂದಿಟ್ಟು ಬಜೆಟ್ ಅಧಿವೇಶನವನ್ನೆದುರಿಸಲು ಅವರು ಹೊರಟಿದ್ದಾರೆ.

ಮಹಾರಾಷ್ಟ್ರವು ಆರಂಭದಲ್ಲಿ ಸಿಂಡಿಕೇಟಿನತ್ತ ವಾಲಿಕೊಂಡಿದ್ದರೂ ಮುಂದೆ ಶ್ರೀಮತಿ ಗಾಂಧಿಯವರ ಪ್ರಬಲ ಸಮರ್ಥಕವಾಯಿತು. ಬೊಂಬಾಯಿ ಪ್ರಾದೇಶಿಕ ಕಾಂಗ್ರೆಸ್ ಇಂಡಿಕೇಟಿನ ಬೊಂಬಾಯಿ ಅಧಿವೇಶನಕ್ಕೆ ಆತಿಥ್ಯ ನೀಡಲು ಸ್ಪಷ್ಟವಾಕ್ಯದಿಂದ ತಿರಸ್ಕರಿಸಿದ್ದರೂ ಮಹಾರಾಷ್ಟ್ರ ಕಾಂಗ್ರೆಸ್ಸು ಆತಿಥೇಯ ಘಟಕವೆನಿಸಿ ಇಂಡಿಕೇಟ್ ಅಧಿವೇಶನವನ್ನು ಮುಗಿಸಿತು. ಇವೆಲ್ಲವುಗಳ ಹಿಂದೆ 'ಬೆಳಗಾಂವಿ' ಇದೆ ಎಂಬುದನ್ನು ಕನ್ನಡಿಗರು ಚೆನ್ನಾಗಿ ಬಲ್ಲರು. ಬೆಳಗಾಂವಿಯನ್ನು ಕಬಳಿಸುವ ಹೆಬ್ಬಯಕೆ ಮರಾಠಿಗರಿಗೆ ಇಂದು ನಿನ್ನೆಯದಲ್ಲ. ಅದಕ್ಕೆಂದೇ ಮಾಡಬಾರದ ಉಪದ್ವ್ಯಾಪವೆಬ್ಬಿಸಿದವರು ಅವರು, ಮಲಗಿ ನಿದ್ರಿಸುತ್ತಿದ್ದ ಈ ಸೀಮಾವಿವಾದವನ್ನು ಕೆಣಕಿ ಹೊರಟವರು. ಮಹಾಜನ ಆಯೋಗದ ರಚನೆಗೆ ಕಾರಣೀಭೂತರಾದರು, ಆದರೆ, ಈ ವರದಿಯು ತಮಗನುಕೂಲವಾದ ನಿರ್ಣಯ ಮಾಡಲಿಲ್ಲವೆಂಬ ಕಾರಣದಿಂದ ಅದನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸಿದರು. ಅಂದಿನಿಂದಲೂ ಕೇಂದ್ರ ಸರಕಾರದ ಮೇಲೆ ಒಂದಲ್ಲ ಹಲವು ರೀತಿಯ ಒತ್ತಡ ಹೇರುತ್ತಲೇ ಬಂದಿದ್ದಾರೆ. ಕಾಂಗ್ರೆಸ್ ಒಡೆದು ಹೋದ ಸಂದರ್ಭವನ್ನೂ ಇವರು ಬಹಳ ಚೆನ್ನಾಗಿಯೇ ಉಪಯೋಗಿಸಿಕೊಂಡರು. ಸಂಸ್ಥಾ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ಎಸ್ಸೆನ್ನರವರು ಕನ್ನಡಿಗರೇ ಇದ್ದುದರಿಂದ ಅವರಿಗೆ ಬೆಂಬಲ ನೀಡುವುದರಿಂದ ಬೆಳಗಾಂವಿ—ಕಾರವಾರ ಕೃಷ್ಣೆ ತಮ್ಮದೆಂದು ಶ್ರೀಮತಿ ಇಂದಿರಾ ಗಾಂಧಿಯವರ ಆಕ್ಷ ಸಾಕ್ಷಿ ಪಕ್ಷವನ್ನು ಬೆಂಬಲಿಸಿದರು. ಬಜೆಟ್ ಅಧಿವೇಶನಕ್ಕೆ ಮೊದಲು ಈ ಪ್ರಶ್ನೆಯನ್ನು ಉತ್ತರಿಸಬೇಕೆಂಬ ಬಲಾತ್ಕಾರ ಆಕೆಯ ಮೇಲೆ ಹೇರಲಾಯಿತು. ಅಧಿವೇಶನದ ಮೊದಲು ಇತ್ಯರ್ಥ ಮಾಡದೆ ಹೋದರೆ, ಇದರ ಘೋರತರ ಪರಿಣಾಮ ಶ್ರೀಮತಿ ಗಾಂಧಿಯವರ ಸರಕಾರದ ಮೇಲಾಗುವುದೆಂಬ ಭೀತಿಯನ್ನು ಹರಡಿದರು. ಹಾಗಾಗಿ ಶ್ರೀಮತಿ ಗಾಂಧೀಜಿಯವರು ಚಂಡೀಗಢಕ್ಕೊಂದು 'ನ್ಯಾಯ' ಹುಡುಕಿದಂತೆಯೇ ಬೆಳಗಾಂವಿಗೂ ಒಂದು ನ್ಯಾಯ ರೂಪಿಸಿದರು. ಈ ನ್ಯಾಯದ ಸ್ಪಷ್ಟ ಸ್ವರೂಪ ತಿಳಿಯದಿದ್ದರೂ ಬೆಳಗಾಂವಿ ನಗರದ ವಿಭಜನೆ ಇದರಲ್ಲಿ ಒಳಗೊಂಡಿದೆಯೆಂಬ ಸೂಚನೆ ನಿನ್ನೆಯೇ ದೊರಕಿದಂತಿದೆ. ಆದುದರಿಂದಲೇ ಬಿಜಾಪುರದಲ್ಲಿ ಎಂದೋ ಸೇರಬೇಕಾಗಿದ್ದ ಕರ್ನಾಟಕ ಕಾಂಗ್ರೆಸ್ಸಿನ ರಾಜ್ಯಕೀಯ ಸಮ್ಮೇಳನವನ್ನು ಬೆಳಗಾಂವಿಯಲ್ಲೇ ಕೂಡಿಸಲಾಯಿತು, ಸಂಸ್ಥಾ ಕಾಂಗ್ರೆಸ್ಸಿನ ಹಿರಿಯರನ್ನು ಆಮಂತ್ರಿಸಲಾಯಿತು; ಬೆಳಗಾಂವಿ ವಿಭಜನೆಗೆ ಬಲವಾದ ವಿರೋಧ ವ್ಯಕ್ತಪಡಿಸಲಾಯಿತು. ಇದಾದ ಕೂಡಲೇ 'ಇಂದಿರಾ ಗಾಂಧಿ ಸೂತ್ರ' ರಾಜ್ಯ ಪರಿಷತ್ತಿಗೆ ಬಂತು. ಇಲ್ಲೂ ಉಭಯತರರ ಫಲವು ಬೇರೆ ಬೇರೆಯೇ. ಮಹಾಜನ ವರದಿಗೆ ಸಂಪೂರ್ಣ ಮನ್ನಣೆ ಕರ್ನಾಟಕದ ನಿಲುವಾದರೆ, ಅದರ ಸಂಪೂರ್ಣ ತಿರಸ್ಕಾರ ಮರಾಠಿಗರ ನಿಲುವು. ಶ್ರೀಮತಿ ಇಂದಿರಾ ಗಾಂಧಿಯವರ ನ್ಯಾಯವು ಇಬ್ಬರಲ್ಲಿ ಯಾರೊಬ್ಬರಿಗೂ ಸಮಾಧಾನಕರವಿಲ್ಲ. ಆದುದರಿಂದ, ಮರಾಠಿಗರನ್ನು ತೃಪ್ತಿಪಡಿಸಲು ಬೆಳಗಾಂವಿಯನ್ನು ಅವರಿಗೆ ಬಲಿಗೊಡುವ ಅಂತಿಮ ಸಂಚನ್ನು ಫಲಿಸದಂತೆ ನೋಡಿಕೊಳ್ಳುವುದು ಕನ್ನಡಿಗ ನಾಯಕರ ಆದ್ಯ ಕರ್ತವ್ಯ.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337 / 2 29887   Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಮದ್ರಾಸ್ ದಾನಪ್ರಸಾದದಲ್ಲಿ ಮಧ್ವನವಮೀ ಉತ್ಸವ

ಮದ್ರಾಸ್ ಮಧ್ವಸಂಘದ ಪರವಾಗಿ ಈ ಫೆಬ್ರವರಿ ತಾ. 14-16ನೆಯ ದಿನಗಳಲ್ಲಿ ಮಧ್ವನವಮೀ ಉತ್ಸವವು ಮದ್ರಾಸಿನಲ್ಲಿರುವ ಧರ್ಮಭೂಷಣ ಭಕ್ತ ಶ್ರೀ ಸೀತಾರಾಮರಾಯರ ಸ್ವಗೃಹವಾದ ದಾನಪ್ರಸಾದದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ದೇಶವಿದೇಶಗಳ ಅನೇಕ ಪ್ರಮುಖ ವಿದ್ವಾಂಸರು ಭಾಗವಹಿಸಿದ್ದರು. ಎರಡು ದಿನಗಳಲ್ಲಿಯೂ ಶಾಸ್ತ್ರ ಪಾರಾಯಣ ವಿಶೇಷ ದೇವರ ಪೂಜೆ ಉಪನ್ಯಾಸ ಸಂತರ್ಪಣೆಗಳು ನಡೆದವು.

ರಮೇಶ ಪೈಗಳ ವಿದೇಶಯಾತ್ರೆ

ಶ್ರೀ ಟಿ. ರಮೇಶ ಪೈಯವರು ತಾರೀಖು 22-2-70ರಂದು ಉಡುಪಿಯಿಂದ ಮುಂಬಯಿಗೆ ತೆರಳಿ ತಾ. 25-2-70ರಂದು ಭಾರತ ಬಿಟ್ಟು ಹೊನಲುಲುವಿಗೆ ತೆರಳಿದ್ದಾರೆ, ಅವರು ಫೆಬ್ರವರಿ 26 ಮತ್ತು ಮಾರ್ಚ 6ರ ನಡುವೆ ನಡೆಯಲಿರುವ ಜೂನಿಯರ್ ಚೇಂಬರುಗಳ ಅಮೇರಿಕಾದ ಏಶಿಯಾ-ಪೆಸಿಫಿಕ್ಕಿನ ಅಂತರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸುವರು. ಹೊನಲುಲುವಿನಿಂದ ಅವರು ಜಪಾನ್‌ಗೆ ತೆರಳುವರು ಮತ್ತು ಅಲ್ಲಿಂದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಕ್ಕೆ ತೆರಳಿ ಲೇಕ್ ಪ್ಲೆಸಿಡ್‌ನಲ್ಲಿ ಜರಗುವ ರೋಟರೀ ಇಂಟರ್‌ನ್ಯಾಶನಲ್‌ನ ಸಭೆಗೆ ಹಾಜರಾಗುವರು. ಅವರು ಅಟ್ಲಾಂಟ, ಜಾರ್ಜಿಯೋದಲ್ಲಿ ನೆರವೇರುವ ರೋಟರೀ ಇಂಟರ್‌ನ್ಯಾಶನಲ್ ಸಭೆಯಲ್ಲಿ ಸಹಾ ಭಾಗವಹಿಸಲಿರುವರು. ಶ್ರೀಯುತರು ಜೂನ್ ತಿಂಗಳಾದಿಯಲ್ಲಿ ಭಾರತಕ್ಕೆ ಹಿಂದಿರುಗುವ ನಿರೀಕ್ಷೆಯಿದೆ.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 415/1969.

ಕುಮಾರ ರೈ — ವಾದಿ,
ತಿಮ್ಮಪ್ಪ ರೈ ಕೂಟಾ — ಪ್ರತಿವಾದಿಗಳು.

2ನೇ ಪ್ರತಿವಾದಿ ಸೀತಪ್ಪ ರೈ, ತಿಮ್ಮಪ್ಪ ರೈಗಳ ಅಳಿಯ, ಪುತ್ತೂರು ತಾಲೂಕು, ಬೆಳಂದೂರು ಗ್ರಾಮದಲ್ಲಿರುವವ.

ಸದ್ರಿ 2ನೇ ಎದುರಿಗೆ ಈ ಮೂಲಕ ತಿಳಿಸುವುದೇನೆಂದರೆ:

ನೀವು ಮತ್ತು ನಿಮ್ಮ ಕೂಡ ತಿಮ್ಮಪ್ಪ ರೈಗಳು ಕೂಡಾ ಎರಡು ಜನರು, ವಾದಿಗೆ ಬರೆದುಕೊಟ್ಟ ಡಿ. ಪ್ರೊ. ನೋಟಿನ ಅಸಲು ಬಡ್ಡಿ ಸಹಾ ಬರ ಮಾಡಿಕೊಳ್ಳುವರೆ ವಾದಿ ಹಾಕಿದ ಮೇಲಿನ ದಾವೆಯು ತಾ. 13-3-1970ಕ್ಕೆ ಇಟ್ಟಿರುತ್ತದೆ. ಸದ್ರಿ ದಿನ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನ ಮುಂದೆ ನೀವು ಹಾಜರಾಗಿ ನಿಮ್ಮ ಆಕ್ಷೇಪವನ್ನು ದಾಖಲು ಮಾಡತಕ್ಕದ್ದು. ತಪ್ಪಿದ, ತಾವು ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟ್ ಹುಕುಂ ಪ್ರಕಾರ)

P. A Ariga
Advocate for Plaintiff.

Puttur,
19-2-1970

ಇಂದಿರಮ್ಮನಾಡುವ ಗೊಂಬೆಯಾಟ

ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಆತ್ಮಸಾಕ್ಷಿ ಜಾಗೃತವಾದ ಮೊದಲ ಗಳಿಗೆಯಲ್ಲೇ ಹುಟ್ಟಿದ ಕೂಸು "ಬ್ಯಾಂಕ್ ರಾಷ್ಟ್ರೀಕರಣ" ಇದೀಗ ಸರ್ವೋಚ್ಚ ನ್ಯಾಯಾಲಯದ ಈ ಕೂಸು ಅಕ್ರಮವೆಂದು ಸಾರಿ ಅದರ ಗಂಟಲು ಒತ್ತಿತು. ೧೪ ಬ್ಯಾಂಕುಗಳ ರಾಷ್ಟ್ರೀಕರಣದ ಕಾಯಿದೆ ಅಕ್ರಮವೆಂದು ಅದು ಸಾರಲು ಎರಡು ಮುಖ್ಯ ಕಾರಣಗಳನ್ನು ಮುಂದೆ ಮಾಡಿದೆ. ಅಂದರೆ, ಬ್ಯಾಂಕು ರಾಷ್ಟ್ರೀಕರಣದ ಸುಗ್ರೀವಾಜ್ಞೆ ಹೊರಡಿಸುವುದಕ್ಕೆ ಮೊದಲು ಕಾನೂನು ದೃಷ್ಟಿಯಿಂದ ಸರಿಯಾದ ಕೂಲಂಕಷವಾದ ವಿವೇಚನೆಯನ್ನು ಪ್ರಧಾನಿ ಉರುಫ್ ಅರ್ಥ ಮಂತ್ರಿ ಶ್ರೀಮತಿ ಗಾಂಧಿಯವರು ಮಾಡಿದಂತಿಲ್ಲ. ಏನನ್ನಾದರೂ ಮಾಡಿ ತಾನು ಕ್ರಾಂತಿಕರ್ತೆಯೆನಿಸಬೇಕೆನ್ನುವ ಮಹತ್ವಾಕಾಂಕ್ಷೆಯೇ ಈ ಮಹತ್ವದ ಘಟನೆಯ ಹಿಂದಿದೆಯೆಂಬುದಕ್ಕೆ ನ್ಯಾಯಾಂಗದ ಅನುಮೋದನೆಯೂ ದೊರಕಿದಂತಾಯಿತು.

ಮಾಜಿ ಉಪ ಪ್ರಧಾನಿ ಪದಚ್ಯುತ ವಿತ್ತ ಸಚಿವ ಮೊರಾರ್ಜಿ ಭಾಯಿ ಅನ್ನುತ್ತಿದ್ದದ್ದೂ ಅದೇ. ಸಿಂಡಿಕೇಟ್ ಕಾಂಗ್ರೆಸ್‌ನ ನೀತಿಯೂ ಅದೇ. ಬ್ಯಾಂಕುಗಳ ರಾಷ್ಟ್ರೀಕರಣ ನೀತಿಯನ್ನು ಯಾರೂ ವಿರೋಧಿಸುವುದಿಲ್ಲ; ಆದರೆ, ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ತೋರಿದ ಅನಪೇಕ್ಷಣೀಯ ಆತುರವನ್ನು ಮಾತ್ರ ಅವರು ಟೀಕಿಸಿದ್ದರು.

ಒನ್ನು ಹೆತ್ತ ಕೂಸು ಸತ್ತು ಹೋದರೆ, ಮತ್ತೆ ಹೆರಬಾರದೆಂದೇನೂ ಇಲ್ಲ. ಈಗ, ಕೇಂದ್ರ ಸರಕಾರವು ಶ್ರೀಮತಿ ಗಾಂಧಿಯವರ ಮಾನ ಉಳಿಸುವ ಯೋಜನೆಯೊಂದನ್ನು ರೂಪಿಸ ಹೊರಟಿತು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲೇ ಮೊದಲಿನ ೧೪ ಬ್ಯಾಂಕುಗಳನ್ನೇ ರಾಷ್ಟ್ರೀಕರಣಗೊಳಿಸಲು ಏನು ಮಾಡಬೇಕೋ ಅದಕ್ಕೆ ಸಿದ್ಧತೆಗಳು, ಅಡಿಗೆ ಬಿದ್ದರೂ ಮೂಗು ಮೇಲೆನ್ನುವ ಪ್ರಧಾನಿ ಗಾಂಧಿಯವರ ನೀತಿಯನ್ನೇ ಮತ್ತೊಮ್ಮೆ ಎತ್ತಿ ಹಿಡಿಯುವ ಹೊಸ ಪ್ರಯತ್ನ ನಡೆಯಿತು. ಮತ್ತೆ ಬ್ಯಾಂಕುಗಳು (೧೪) ಸುಗ್ರೀವಾಜ್ಞೆಯಿಂದ ರಾಷ್ಟ್ರೀಕೃತಗೊಂಡುವು.

ಸರಕಾರದ ಕ್ರಾಂತಿಕಾರಿ ಅರ್ಥನೀತಿಗೆ ಸಂಬಂಧಿಸಿದ ಬ್ಯಾಂಕ್ ರಾಷ್ಟ್ರೀಕರಣ ರದ್ದಾದುದರಿಂದ ಮುಖಕ್ಕೆ ಹಾರಿದ ಮಸಿಯನ್ನು ಒರಸಿಕೊಳ್ಳಲೇ ಬೇಕಾದುದು, ಅದಕ್ಕೆ ಬೇರೇನೂ ಕಾರಣವಿಲ್ಲವೆಂದು ಸ್ಪಷ್ಟ ಪಡಿಸುವುದ — ಈಗ ಪ್ರಧಾನಿಯ ಕಾರ್ಯ.

ಮೂರಿದ್ದರೂ ಒಂದೇ

ಕಾಮರಾಜ-ಸುಬ್ರಹ್ಮಣ್ಯಂ-ಇಬ್ಬರೂ ಕಾಂಗ್ರೆಸ್ ಮಾಜಿ ಅಧ್ಯಕ್ಷರು. ಒಬ್ಬರು ಇಡಿ ಕಾಂಗ್ರೆಸ್ಸಿನ ಇಡಿ ಕಾಲದ ಅಧ್ಯಕ್ಷರು; ಇನ್ನೊಬ್ಬರು ಇಡಿ ಕಾಂಗ್ರೆಸ್‌ನ ನಡು ಕಾಲದ ಅಧ್ಯಕ್ಷರು. ಇಬ್ಬರೂ ಮದ್ರಾಸದ ಮುಖ್ಯಮಂತ್ರಿ ಪದಕ್ಕೆ ಸ್ಪರ್ಧಿಸಿದ್ದಾಗ, ಶ್ರೀ ಸಿ. ಸು. ಸೋತರು. ಸೋತ ಮೇಲೆ ಕಾಮರಾಜರ ನೆರಳನ್ನೇ ಅನುವರ್ತಿಸಿದರು. ಮುಂದವರು ಕೇಂದ್ರಕ್ಕೆ ಹೋದ ಮೇಲೆ, ಕಾಮರಾಜ—ಸಿ. ಸು. ದಾರಿಗಳು ಕವಲೊಡೆದವು. ಇತ್ತೀಚೆಗೆ ಇದು ಸ್ಪಷ್ಟವಾಯಿತು.

ಶ್ರೀ ಸಿ. ಸು.ರಂತೆ ಪ್ರಧಾನಿಯವರ ನೂತ ನಾಡುವ ಮತ್ತೊಬ್ಬ ವ್ಯಕ್ತಿ ಇಂದು ಭಾರತದಲ್ಲೇ ಇಲ್ಲ. ತಮಿಳುನಾಡಿನ ಮಾಜಿನಾಯಕರ ಸಾಲಿಗೆ ಸೇರಿದ ಕಾಮರಾಜರೂ ಸಿ. ಸು.ಗಳೂ ಪರಸ್ಪರ ಹೋರಾಟಕ್ಕೆ ಹೊರಟಿದ್ದು ಡಿ. ಎಂ. ಕೆ.ಗೆ ತುಂಬ ಲಾಭಕರ. ಭಾಷಾವಿಷಯದಲ್ಲಿ ಡಿ. ಎಂ. ಕೆ.ಯ ನೀತಿಗೂ ಕೇಂದ್ರ ನೀತಿಗೂ ತಾಳಿಕೆಯೇ ಕೂಡಿಬರುವುದಿಲ್ಲ. ಆದ್ದರಿಂದ, ಇಂಡಿಕೇಟ್ ಕಾಂಗ್ರೆಸ್ಸಿಗೆ ಬೆಂಬಲ ನೀಡುವ ಡಿ. ಎಂ. ಕೆ. ಯ ಭಾಷಾ ನೀತಿಯ ಬಗ್ಗೆ ಪ್ರಧಾನಿ ತುಟಿಯೆತ್ತುವುದಿಲ್ಲ. ಶ್ರೀ ಸಿ. ಸು.ರವರು, ಕೇಂದ್ರ ಸರಕಾರದ ಭಾಷಾ ನೀತಿಯನ್ನು ಸ್ಪಷ್ಟಗೊಳಿಸಬೇಕೆಂದು ಕಾಮರಾಜರೆಂದರೆ, ಸಿಂಡಿಕೇಟ ತನ್ನ ನೀತಿಯನ್ನು ಉದ್ಘೋಷಿಸಲಿ ಎಂದು ಸಿ.ಸು. ಕರೆ ನೀಡಿದ್ದಾರೆ. ಬಲಾತ್ಕಾರದ ಹಿಂದೀ ಹೇರಿಕೆಯನ್ನು ತಾನು ವಿರೋಧಿಸುವುದಾಗಿ ಶ್ರೀ ಕರುಣಾನಿಧಿ ಹೇಳುತ್ತಾರೆ.

ಈ ಮೂವರು ನಾಯಕರ ನೀತಿ ಯಾವುದು? ಯಾವುದೂ ಸ್ಪಷ್ಟವಿಲ್ಲ—ಅಂದರೆ, ಸರಿಯಾಗಿ ಮನವರಿಕೆಯಾಗುವುದಿಲ್ಲ. ಎಲ್ಲವೂ ಅಸ್ಪಷ್ಟ. ತಮಿಳು ನಾಡಿನ ಜನಪ್ರಿಯ ಹಿಂದೀ ವಿರೋಧ ಭಾವನೆಯಿಂದಾಗಿ ಮೂವರೂ ಅದನ್ನು ವಿರೋಧಿಸುವುದಿಲ್ಲ; ಅಖಿಲಭಾರತ ನೀತಿಯಿಂದಲೂ ದೂರ ಸರಿಯುವಂತಿಲ್ಲ. ಕಳೆದಷ್ಟು ಮಳೆಗಾಲ ಕಳೆಯಲಿ ಎಂಬ ಮನೋಭಾವನೆಯೇ ಈ ಮೂವರಲ್ಲೂ ಮನೆ ಮಾಡಿದೆ. ಆದುದರಿಂದಲೇ ಒಬ್ಬೊಬ್ಬರು ಮತ್ತೊಬ್ಬರನ್ನು ಬೊಟ್ಟು ಮಾಡ ಹೊರಟಿದ್ದಾರೆ.

ಇಷ್ಟೆಲ್ಲಾ ವಿಷ-ವೇಷವೇಕೆ? ಜನ ಬೆಂಬಲವನ್ನುಗಳಿಸಲು ಎರಡೇ ಮಾರ್ಗ- ತನ್ನ ಕಾರ್ಯ ಸಾಧನೆ ಮತ್ತು ಪರನಿಂದನೆ. ತಮಿಳು ನಾಡಿನ ನಾಯಕ ಮಣಿಗಳು ಎರಡನೆಯ ದಾರಿ ತುಳಿಯ ಹತ್ತಿದ್ದಾರೆ. 'ಮಾಜಿ' ಗಳು ಮತ್ತೇನು ಮಾಡಿಯಾರು!

ಪ್ರಧಾನಿ ಪ್ರಭಾವ

ಉತ್ತರ ಪ್ರದೇಶದ ರಾಜ್ಯಕೀಯದಲ್ಲಿ ಪ್ರಧಾನಿ ತಂತ್ರ ಕೊನೆಗೂ ಫಲಿಸಿತು. ಪಕ್ಷಾಂತರಗಳ ಹೊಯ್ದಾಟ, ಪಕ್ಷಗಳ ಕರಾರುವಾಕ್ಕುಗಳ ಮುಂದೆ ಮುಖ್ಯಮಂತ್ರಿ ಶ್ರೀ ಚಂದ್ರಭಾನುಗುಪ್ತರು ಮಣಿದು ರಾಜಿನಾಮೆ ನೀಡಿದರು. ವಿಧಾನಸಭೆ ಸೇರಬೇಕೆಂದು ಗೊತ್ತಾದ ದಿನಕ್ಕೆ ಕೆಲವೇ ತಾಸು ಮೊದಲೇ ಅವರು ಅಧಿಕಾರ ಬಿಟ್ಟುಕೊಟ್ಟದ್ದು. ಅಧಿಕಾರ ಉಳಿಸಲು ಅವರು ಕೊನೆಯ ಗಳಿಗೆಯ ತನಕವೂ ಪ್ರಯತ್ನ ನಡೆಸುತ್ತಿದ್ದರೆಂದೂ ಅದರಲ್ಲಿ ವಿಫಲರಾದರೆಂದೂ ಹೇಳುತ್ತದೆ.

ಉತ್ತರ ಪ್ರದೇಶವು ಶ್ರೀ ಚಂದ್ರಭಾನು ಗುಪ್ತರಿಗೆ ನಾಲ್ಕು ಬಾರಿ ಮುಖ್ಯಮಂತ್ರಿ ಪದ ಕೊಡಮಾಡಿತು. ಆದರೆ, ಒಂದು ಬಾರಿಯಾದರೂ ಪೂರ್ಣಾವಧಿಯ ವರೆಗೆ ಆ ಪದವಿಯನ್ನವರು ಉಳಿಸಿಕೊಳ್ಳಲಿಲ್ಲ. ದೇಶದ ಅತಿದೊಡ್ಡ ರಾಜ್ಯದ ಆಂತರಿಕ ಕಾರಣಗಳೇ ಇದಕ್ಕೆ ಮುಖ್ಯ ಕಾರಣ. 'ಪ್ರಧಾನ ಮಂತ್ರಿ'ಗಳ ರಾಜ್ಯವೆನಿಸಿದ ಉತ್ತರ ಪ್ರದೇಶದ ರಾಜ್ಯಕೀಯದ ಮೇಲೆ ಪ್ರಧಾನ ಮಂತ್ರಿಯ ಪ್ರಭಾವವು ಬೇಡವೆಂದಿದ್ದರೂ ಬಿದ್ದೇ ತೀರುತ್ತದೆ.

ಮುಂದೇನು? ಬಿಕೆಡಿ ಮತ್ತು ಇಂಡಿಕೇಟ್ ಕಾಂಗ್ರೆಸ್‌ಗಳ ಸಂಯುಕ್ತ ಸರಕಾರ ಒಮ್ಮೆಗೆ ರಚನೆಗೊಂಡಿತು. ಚರಣ ಸಿಂಗರು ಎರಡನೆ ಬಾರಿಗೆ ಮುಖ್ಯಮಂತ್ರಿಯಾದರು. ಆದರೆ, ಇದೂ ಬಹುಕಾಲ ಉಳಿಯುವುದಿಲ್ಲ. ರಾಷ್ಟ್ರಪತಿ ಆಳಿಕೆಗೆ ಉತ್ತರ ಪ್ರದೇಶವೂ ಒಳಗಾಗಲೇ ಬೇಕು. ಮರು ಚುನಾವಣೆಗಳನ್ನು ಎದುರಿಸಲು ಇಂಡಿಕೇಟ್ ಕಾಂಗ್ರೆಸ್ಸು ಸೂಕ್ತ ವೇದಿಕೆ ನಿರ್ಮಿಸಿಕೊಳ್ಳುವವರೆಗೆ ಚರಣ ಸಿಂಗರೇ ಜೈ. ಗೆದ್ದವರದ್ದೇ ಸತ್ಯ ತಾನೆ?

ಧರ್ಮಪಾಲನೆ

ಉಕ್ಕಿನ ಕಾರ್ಖಾನೆಯ ಬಗ್ಗೆ ಕರ್ನಾಟಕ ಹೊಸಪೇಟೆಯನ್ನೂ, ಆಂಧ್ರಪ್ರದೇಶ ವಿಶಾಖಪಟ್ಟಣವನ್ನೂ, ತಮಿಳುನಾಡು ಸೇಲಮನ್ನೂ ಶಿಫಾರಸು ಮಾಡಿ ಬಹುಕಾಲ ಸಂದಿತು. ಪರಿಶೀಲನೆಗೆಂದು ಬಂದ ತಜ್ಞರು ಹೊಸಪೇಟೆಯ ಬಗ್ಗೆ ಸದಭಿಪ್ರಾಯ ನೀಡಿದ್ದರು. ಆದರೆ, ಇವರ ವರದಿಯ ನಡುವೆ ಒತ್ತಾಯ-ಬೆದರಿಕೆ ಮತ್ತಿತರ ಮಾಮೂಲಿ ರಾಜ್ಯಕೀಯ ಪ್ರವೇಶ ಮಾಡಿದ್ದರಿಂದ ಉಕ್ಕಿನ ಕಾರಖಾನೆ ಯಾರಿಗೂ ದಕ್ಕಲಿಲ್ಲ.

ಇದೀಗ ಮಹತ್ವದ ಸುದ್ದಿ. ತಜ್ಞರ ಶಿಫಾರಸಿನಂತೆ ಹೊಸಪೇಟೆಯಲ್ಲೇ ಉಕ್ಕಿನ ಕಾರಖಾನೆಯಾಗುವುದು. ಭಲೇ ಶಹಭಾಸ್. ಅದರ ಜತೆಗೆ ವಿಶಾಖಪಟ್ಟಣದಲ್ಲೂ ಸೇಲಂನಲ್ಲೂ ಮತ್ತೆರಡು ಉಕ್ಕಿನ ಕಾರಖಾನೆಗಳನ್ನು ಕಟ್ಟಲಾಗುವುದು! ಅಂದು ಒಂದನ್ನು ಕಟ್ಟಲಾರದವರು ಇಂದು ಮೂರಕ್ಕೆ ಮುಂದೆ ಬಂದಿದ್ದಾರೆ. ಇಂದಿರಾ ಗಾಂಧಿ ನೀಡುವಾಗ ಯಾರು ಒಲ್ಲೆನೆನ್ನುತಾರೆ?

ಆದರೆ, ಬರಿಯ ನಿರ್ಧಾರದಿಂದ ಏನೂ ಪ್ರಯೋಜನವಿಲ್ಲ. ಹೊಸಪೇಟೆಯಲ್ಲಿ ಕಾರಖಾನೆ ಎಷ್ಟು ಬೇಗನೇ ಆರಂಭವಾಗುತ್ತದೆ, ಅಷ್ಟು ಶೀಘ್ರ ಧರ್ಮದ ಪಾಲನೆಯಾಗುತ್ತದೆ.

ನೀವೂ ಇದರ ಉಪಯೋಗ ಪಡೆಯಬಹುದು....



ತುರ್ತು ಪರಿಸ್ಥಿತಿ ಒದಗಿ ಬರುವಾಗ ನಮಗೆ ಮುನ್ಸೂಚನೆ ಕೊಟ್ಟು ಬರುವುದಿಲ್ಲ. ಅನಾರೋಗ್ಯದ ನಿಮಿತ್ತ, ಆಕಸ್ಮಿಕ ಪ್ರವಾಸದ ನಿಮಿತ್ತ, ನಿತ್ಯೋಪಯೋಗಿ ಸೊತ್ತುಗಳನ್ನು ಕೊಂಡುಕೊಳ್ಳುವ ನಿಮಿತ್ತ— ಹೀಗೆ ಅನಿರೀಕ್ಷಿತವಾಗಿ ಬರುವ ಖರ್ಚು ವೆಚ್ಚಗಳ ಸಮಸ್ಯೆಯನ್ನು ನಮ್ಮ 'ತ್ರಿವಿಧ ಸಾಲ ಸೌಕರ್ಯ'ದ ಮೂಲಕ ಸುಲಭವಾಗಿ ಬಗೆಹರಿಸಬಹುದು.

ನಮ್ಮ ಬ್ಯಾಂಕಿನಲ್ಲಿ ಉಳಿತಾಯ ಠೇವಣಿ ಖಾತೆ (ಸೇವಿಂಗ್ಸ್ ಡಿಪಾಸಿಟ್ ಅಕೌಂಟ್ಸ್)ಯನ್ನು ಇಟ್ಟವರಿಗೆ ಮಾತ್ರವೆ, ಕೆಲವು ಪೂರ್ವಯೋಜಿತ ನಿಯಮುಗಳಿಗನುಸಾರವಾಗಿ, ಈ ತ್ರಿಮುಖ ಸಾಲದ ಸೌಕರ್ಯವನ್ನು ನೀಡಲಾಗುವುದು.

ಈ ಸಾಲವನ್ನು ಮೂರು ತೆರನಾಗಿ ಕೊಡಲಾಗುವುದು: 1. ಪ್ರತಿ ತಿಂಗಳೂ ವೇತನದಿಂದ ನಿರ್ದಿಷ್ಟವಾಗಿ ತುಂಬುವ ಸಾಲ (ಸ್ಯಾಲರಿ ರಿಸರ್ವ್ ಸ್ಕೀಮ್); 2. ತಾತ್ಕಾಲಿಕ ಸಾಲ (ಎಡ್‌ಹಾಕ್ ಲೋನ್ ಸ್ಕೀಮ್); 3. ಮತ್ತು ಮನೆವಾರ್ತೆಯ ಸಂಬಂಧ ಸಾಲ (ಹೌಸಿಂಗ್ ಲೋನ್ ಸ್ಕೀಮ್).

ಈ ತ್ರಿವಿಧ ಸಾಲ ಸೌಕರ್ಯದ ಬಗ್ಗೆ ಪ್ರಕಟವಾದ ಪುಸ್ತಿಕೆ ನಮ್ಮ ಎಲ್ಲ 362 ಶಾಖೆಗಳಲ್ಲು ದೊರಕುತ್ತದೆ. ನಿಮ್ಮ ಸಮೀಪದ ಶಾಖೆಯಲ್ಲಿ ನೀವೂ ಅದರ ಪ್ರತಿಯನ್ನು ಪಡೆದು ವಿವರಗಳನ್ನು ತಿಳಿದುಕೊಳ್ಳಬಹುದು. ನಿಮಗೆ ಸಹಕರಿಸಲು ನಾವು ಸದಾಸಿದ್ಧ. ಈ ಅವಕಾಶವನ್ನು ಸದುಪಯೋಗಿಸಿಕೊಳ್ಳುವುದು ನಿಮ್ಮ ಕೈಯಲ್ಲಿದೆ.

ಎಲ್ಲ ಅವಶ್ಯಕತೆಗಳಿಗೂ ಒದಗುವ ಮತ್ತು ಎಲ್ಲರಿಗೂ ಎಟಕುವ ಬ್ಯಾಂಕು

ಸಿಂಡಿಕೇಟ್ ಬ್ಯಾಂಕ್

(ಭಾರತ ಸರಕಾರದ ನಿರ್ವಹಣೆ)

ಹೆಡ್ ಆಫೀಸು: ಮಣಿಪಾಲ

ಕಸ್ಟೋಡಿಯನ್ ಟಿ. ಎ. ಪೈ

ಪರಿಚಯ

ಶಿಕ್ಷಣ ಕ್ಷೇತ್ರದಲ್ಲಿ ದುಡಿದು ನಿವೃತ್ತರಾದ ಹೆಸರಾಂತ ಶ್ರೀ ಎಂ. ವಾಸುದೇವ ರಾಯರ ಸಂಭಾವನ ಗ್ರಂಥ ಅರ್ಪಣೆ.

ವಿದ್ಯಾಭ್ಯಾಸವು ಜನಜೀವನದ ಪ್ರಗತಿಗೆ ಮೂಲಸಾಧನವಾಗಿದೆ. ಈ ಕ್ಷೇತ್ರದಲ್ಲಿ ದುಡಿದ ಶಾಂಕೇತಿಕವಾಗಿ ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಪಡೆಯುವುದು ಸಾಫಲ್ಯವಾಗಿದೆ. ಆ ಮೇರೆಗೆ, ಸುರತ್ಕಲ್ಲು ವಿದ್ಯಾದಾಯಿನೀ ಹೈಸ್ಕೂಲಿನ ಪ್ರಾರಂಭದಿಂದ ಇದುವರೆಗೆ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಂ. ವಾಸುದೇವ ರಾಯರು ಇದೇ ಕಳೆದ ದಶಂಬರ 5ರಲ್ಲಿ ಅರುವತ್ತರ ಹರೆಯವನ್ನು ಮುಟ್ಟಿ ನಿವೃತ್ತರಾದರು. ಶ್ರೀಯುತರಿಗೆ ಕೇಂದ್ರ ಸರಕಾರವು 'ಉತ್ತಮ ಶಿಕ್ಷಕ'ನೆಂಬ ರಾಷ್ಟ್ರೀಯ ಪ್ರಶಸ್ತಿ ಬಹುಮಾನಗಳನ್ನು ಈ ಹಿಂದೆ ನೀಡಿತ್ತು. ಇದೇ ಕಳೆದ ಜನವರಿಗೆ ಮಣಿಪಾಲದ ಜನರಲ್ ಎಡ್ಯುಕೇಶನ್ ಸೊಸ್ಯಾಟಿಯವರು ಮಣಿಪಾಲ (ಉಡುಪಿ)ದಲ್ಲಿ ಬೇರೆ ಸನ್ಮಾನಿಸಿದ್ದರು. ಇದೇ ಜನವರಿ 25ರಲ್ಲು ಸುರತ್ಕಲ್ಲು ವಿದ್ಯಾದಾಯಿನೀ ಶಾಲೆಯಲ್ಲಿ ಶ್ರೀಯುತರಿಗೆ 'ಅರ್ಪಣೆ' ಯೆಂಬ ಹೆಸರಿನ ಸಂಭಾವನ ಗ್ರಂಥವನ್ನು ಒಪ್ಪಿಸಲಾಗಿತ್ತು ಎಂಬುದು ಇನ್ನೊಂದು ಹಿರಿಮೆ!

ಈ ಗ್ರಂಥದ ಬಿಡುಗಡೆಯು ಶ್ರೀ ಪ್ರಾಧ್ಯಾಪಕ ಎಸ್. ವಿ. ಪರಮೇಶ್ವರ ಭಟ್ಟರಿಂದ ನಡೆಯಿತು. ಶ್ರೀ ಪ್ರಿನ್ಸಿಪಾಲ್ ಶಂಕರಲಿಂಗಯ್ಯನವರು ಸಭಾಧ್ಯಕ್ಷರಾಗಿದ್ದರು. ಶ್ರೀ ವಾಸುದೇವರಾಯರು 1944ರ ಹಿಂದೆ ಬರೆದು ಜೀವನ, ಕನ್ನಡ ನುಡಿ, ತ್ರಿವೇಣಿ, ಜಯಕರ್ನಾಟಕ, ಉದ್ಯಾನ ಇತ್ಯಾದಿಗಳಲ್ಲಿ ಪ್ರಕಟವಾದ ಆರು ಕವಿತೆಗಳು ಹಾಗೂ ಒಂದು ಪ್ರಬಂಧವು ಇದರಲ್ಲಿ ಸೇರಿರುತ್ತದೆ. ಶ್ರೀಯುತರು ಆಗಾಗ ಹೇಳಿದ ಕೆಲವು ವಿಚಾರಧಾರೆಗಳು ಬೇರೊಂದು ಬಗೆಯಲ್ಲಿ ಶ್ರೀ ಸೀ. ಹೊಸಬೆಟ್ಟು ಅವರಿಂದ ಸಂಕಲಿತವಾಗಿವೆ. ಇವರ ಜೀವನ ಚರಿತೆ ಹಾಗೂ ಅಧ್ಯಾಪಕತ್ವದ ನೆನಪಿನ 2 ಲೇಖನಗಳು ಶ್ರೀ ಸೋಮಯಾಜಿ ಮತ್ತು ಶ್ರೀ ಗೋಪಾಲಕೃಷ್ಣ ರಾಯರಿಂದ ಬರೆಯಲ್ಪಟ್ಟಿವೆ. ಶ್ರೀ ಪುಟ್ಟಣ್ಣಗೌಡರ 'ನಾಡೋಜ'ವೆಂಬ ಬರಹ, ಮುದ್ದಣ್ಣಭಟ್ಟರವರ ಯಕ್ಷಗಾನ ಕೃತಿಯ ಉಪೋದ್ಘಾತ ಶ್ರೀ ಪಾ. ರಾ. ಹೊಸಬೆಟ್ಟು, ಅವರ ಬರಹ, 'ಅರುವತ್ತರ ತುಂಬು ಹಬ್ಬ'ವೆಂಬ ಶ್ರೀ ಪಾ. ರಂಗರಾಯರ ಲೇಖನಗಳಲ್ಲಿ ಪ್ರಾಸ್ತಾವಿಕವಾಗಿ ಶ್ರೀ ಎಂ. ವಾಸುದೇವರಾಯರ ಹೆಸರು ಬಳಸಿದೆ.

ಇನ್ನುಳಿದ ೧೯ ಲೇಖನಗಳಲ್ಲಿ ಸಾಹಿತ್ಯ ಸಾಮಾಜಿಕ ವಿಚಾರಗಳ ವಿವಿಧ ಪ್ರಕಾರಗಳು ಕನ್ನಡದ ಖ್ಯಾತ ಲೇಖಕರಿಂದ ನಿರೂಪಿಸಲಾಗಿವೆ. ಅವುಗಳು ಇಂದಿನ ಜನರಲ್ಲಿ ಸಾಹಿತ್ಯ—ಸಾಂಸ್ಕೃತಿಕದ ಅಭಿರುಚಿಯನ್ನು ಹುಟ್ಟಿಸುತ್ತವೆಯೆಂಬುದು ಸ್ವಾಗತಾರ್ಹವಾಗಿದೆ. 'ಏಳಿ—ತ್ರಿಪದಿ—



ಗಾದೆ ಇವುಗಳ ರೂಪ ಸಾಮ್ಯ'ವನ್ನು ಕುರಿತು ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಚರ್ಚಿಸಿದ್ದಾರೆ. ಏಳನೆಯ ರೂಪಾಂತರದ ಬಗೆಗೆ ಶ್ರೀ ಎ. ವಿ. ನಾವಡರು ಚಿಕ್ಕ ಬರೆಹದಲ್ಲಿ ಆ ಬಗೆಗೆ ಹೊಸ ವಿವೇಚಿಸಿದ್ದಾರೆ. ೧೮ನೇ ಶತಕದ ಹರಿದಾಸರು ಎಂಬುದು ಶ್ರೀ ಶ್ರೀನಿವಾಸ ಹಾವನೂರ್ ಬರೆದರು ಸಂಶೋಧನೆಯಲ್ಲಿ ಜೈನ ಧರ್ಮ ಹೇಗೆ ಜನಪ್ರಿಯವಾಗ ಬಂದಿತೆಂಬುದನ್ನು ಶ್ರೀ ಹಂ. ಭುಜಬಲಿ ಶಾಸ್ತ್ರಿಗಳು ಉಲ್ಲೇಖಿಸಿದ್ದಾರೆ 'ಕರೆ ಪದಿಕತ್ತಿನ ಸಂದೇಶ'ವೇನೆಂದು ಶ್ರೀ ಅ. ಶಂ. ನಾವಡರು ಸಂಗ್ರಹಿಸಿದ್ದಾರೆ. 'ಹವ್ಯಕ ಭಾಷೆಯ ಕೆಲವು ಪದಗಳು' ಎಂಬ ಬಗೆಗೆ ಶ್ರೀ ವ ರಿಯಪ್ಪ ಭಟ್ಟರು ಹೊಸ ಬರೆದಿದ್ದಾರೆ. ಹರಿಶ್ಚಂದ್ರ ಕಾವ್ಯದ 'ಗಾವದಿ' ಶಬ್ದದ ಮೂಲ ಅರ್ಥ ರೂಪಗಳನ್ನು ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಹೇಳಿದ್ದಾರೆ. "ಖಾಂಡ್ಯ" ಮಂಟಪದ ಸಾಲವೇನ? ಎಂಬುದು ಶ್ರೀ ಜನ್ನಾಥಲ ಲೇಖನದಲ್ಲಿ ವಿಸ್ತರಿಸಲಾಗಿದೆ. ಕವಿ ಪ್ರತಿಭೆಯ ಬಗೆಗೆ ಶ್ರೀ ಸಂಕಟೇಶ ಪ್ರಪಂಚತ್ತಾಯರು ಇವರು ನೋಟಿತ್ಯೆಗಳಿದ್ದಾರೆ ಜೀವನ ಶಿಕ್ಷಣದಲ್ಲಿ ಜಟ ಪಟಿಕೆಯೇಕೆಂದು ಶ್ರೀ ಪ. ಜಿ ಅಣ್ಣಾರಾಯರು ನಿರ್ದೇಶಿಸಿದ್ದಾರೆ. 'ನಗೆ ಮೂಲದ ಧರ್ಮ'ವೆಂದು ಶ್ರೀ ರಾಮಾಯಣ ವಿಶ್ವೇಶರ ನಾವಡರು... ಶ್ರೀ ಕನ್ನಡದ ಕೆಲವು ಶಾಬ್ದಿಕ ವಿಚಾರವ ಶ್ರೀ ಡಿ. ಎನ್. ಶಂಕರ ಭಟ್ಟರ ಲೇಖನದಲ್ಲಿದೆ ಗತಕಾಲದ ತೆಳುನಾಡಿನ ವಿದ್ಯಾಭ್ಯಾಸದ ಬಗೆಗೆ ಡಾ. ಕೆ. ವಿ. ರಮೇಶರು ನಿರೂಪಿಸಿದ್ದಾರೆ. 'ಕನ್ನಡ ಮಲಯಾಳಗಳಲ್ಲಿ ಕೆಲವು ಪದಗಳ ಅರ್ಥವ್ಯತ್ಯಾಸ' ವು ಡಾ. ಶಂಕರ ಕೆದಿಲಾಯರ ಲೇಖನದ ವಸ್ತುವಾಗಿದೆ. 'ಶ್ರೀ ವಾದಿರಾಜರ ಕೀರ್ತನೆಗಳು' ಎಂಬ ದು ಇದು ವರೆಗೆ ಪ್ರಕಟವಾಗದ 3 ಕೀರ್ತನೆಗಳ ಪಾಠವನ್ನು ಶ್ರೀ ಕೆ. ವೆಂಕಟರಾಯಾಚಾರ್ಯರಿಂದ ಪ್ರಕಟಿಸಲ್ಪಟ್ಟಿ. ನೃಪತುಂಗನ ಪ್ರಶ್ನೋತ್ತರ ರತ್ನಮಾಲಿಕೆಯ ಪರಿಚಯ-ವಿಚಾರ ಶ್ರೀ ಟಿ. ಕೇಶವ ಭಟ್ಟರು ಬರೆದುದು, 'ತೇಲಾಡುವಾಗ' ಎಂಬ ಶ್ರೀ ದ. ರಾ. ಬೇಂದ್ರೆಯವರ ಕವಿತೆಯ ವಿಚಾರ ಶ್ರೀ ಚ. ಸುಂದರೇಶರು ಬರೆದಿದ್ದಾರೆ. 'ಶುಕಸಪ್ತತಿ'ಯ ಎರಡು ಮುಖಗಳು (ದಾಕ್ಷಿಣಾತ್ಯ ಹಾಗೂ ಔತ್ತರೇಯ) ಹೇಗಿವೆಯೆಂದು ಶ್ರೀ ಸಾ. ಶಿ. ಮರುಳಯ್ಯನವರು ವಿವರಿಸಿದ್ದಾರೆ. ಗಿರೀಶ್ವ ರಾಂಶಯ್ಯನ ಕರ್ಣಪರ್ವದ ವಿಷಯ ಶ್ರೀ ರಾಮಚಂದ್ರರು ಉಲ್ಲೇಖಿಸಿದ್ದಾರೆ.

ಈ ಸಾಹಿತ್ಯಕ ಲೇಖನಗಳು ಮಾತ್ರವಲ್ಲ ಶ್ರೀ ವಾಸುದೇವರಾಯರ ವ್ಯಂಗ್ಯ ಚಿತ್ರ ಹಾಗೂ ಸಾಮೂಹಿಕ ಛಾಯಾಚಿತ್ರಗಳು ಹನ್ನೆರಡು ಇದ್ದವೆ. ಒಟ್ಟಾರೆ ಈ ಜಿಲ್ಲೆಯಲ್ಲಿ ಪ್ರಕಟವಾದ ಹಲವಾರು ಸಂಭಾವನ ಗ್ರಂಥಗಳ ಸಾಲಿನಲ್ಲಿ ಈ 'ತರ್ಪಣ'ವು ಚಿಕ್ಕದಾದರೂ ಸೇರಿಕೊಳ್ಳಲು ಶಕ್ಯವಾಗಿದೆ. ಇಂತಹ ಸಂಕಲನಗಳಿಂದ ಜನತೆಯ ಸಾಹಿತ್ಯಕ ಅಭಿರುಚಿ ಬೆಳೆಯಲು ಅವಕಾಶವಾಗಲಿಕ್ಕೆ ಯಿಲ್ಲ!

ಕೆ. ವೆಂಕಟರಾಯಾಚಾರ್ಯ ಸುರತ್ಕಲ್ಲು.

In the Court of the
3rd additional Munsiff,
Puttur, S K.

R L C. 61/70

Between

D. N. Srinivasa Rao — Applicant

v

D. N Raghavendra Rao
and others— Respondents

To

Sri D. N Raghavendra Rao,
S/o Deshakodi Narasimhayya,
residing in Deshakodi of
Markanja Village and Post,
Sullia Taluk

Sir,

Please take notice that the above application is posted for your appearance on 3—3—1970 on the file of the above Court If you fail to appear either in person or through advocate, you will be viewed as ex-parte, be it known.

(By order)

Venkatraman B. N.
Advocate for applicant.

Puttur, 16—2—70.

ಗೇಹರಾಜ್ಯದಲ್ಲಿ

ಅಬ್ಬರ ತಾಳ — ಭೇರಿತಾಡನ

'ಸ್ವಲ್ಪ ಇಲ್ಲಿ ಕೇಳೀಂದ್ರೆ....'

"ಏನು ?"

'ಅಲ್ರಿ, ನಮ್ಮ ಮುಖ್ಯಮಂತ್ರಿಗಳು.."

"ಹ್ಞಾಂ, ವೀರೇಂದ್ರ ಪಾಟೀಲರು...'

'ಬೆಳಗಾಂವಿಯಲ್ಲಿ ರಾಜ್ಯಕೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದಾಗ....'

"ಪಾಟೀಲರೂಂತೇನು, ಹೆಚ್ಚಿನ ಕಾಂಗ್ರೆಸಿಗರು ಅಲ್ಲಿ ಬಂದಾಗಿದ್ದರು."

"ಹೆಣ್ಣನ್ನಿ. ಅದೇ ಹೊತ್ನಲ್ಲಿ ಇಂಡಿಕೇಟಿನ ಅಧ್ಯಕ್ಷ, ಉಮಾಶ್ ಕೇಂದ್ರ ಆಹಾರ ಮಂತ್ರಿ ಜಗಜ್ಜೀವನ ರಾಮ್ ಹಾಗೂ ಚಂದ್ರಶೇಖರ್ ಮೊದಲಾದ ಯುವಕರೂ ನಮ್ಮ ರಾಜ್ಯದ ಸಂಚಾರದಲ್ಲಿ ತಲ್ಲೀನರಾಗಿದ್ದಾರಲ್ಲಾ?"

"ಓಹೋ, ಇದು ಭಾರಿ ದೊಡ್ಡ ಪ್ರಶ್ನೆ. ತಾವೇಕೆ ಸಂಚಾರ ಮಾಡುತ್ತೇವೆ ಎಂದು ತಮಗೇ ತಿಳಿಯದಾಗ ಮಂತ್ರಿಗಳು ಹೇಳುತ್ತಾರೆ—ಜನ ಸಂಪರ್ಕ ಸಾಧನೆಗೆ ಅಂತ."

"ಆಂದ್ರೆ ಇದೂ ಜನ ಸಂಪರ್ಕ ಸಾಧನೆಗೇಂತಲೆ ?"

'ಶ್ರೀ ಜಗಜ್ಜೀವನ ರಾಮರು ಆಹಾರ ಸಚಿವರಾಗಿ ಬಂದಿದ್ದರೆ. ಸರಕಾರ ಟಿ. ಎ. ಕೊಡಬೇಕು. ಇಂಡಿಕೇಟಿನ ಅಧ್ಯಕ್ಷರಾಗಿ ಬಂದಿದ್ದರೆ....'

'ಅಲ್ರಿ, ಅದು ಯಾರು ಬೇಕಾದ್ರೂ ಕೊಟ್ಟುಕೊಳ್ಳಿ. ನಮಗಂತೂ ದುಡಿದುಣ್ಣೋದು ತಪ್ಪದೇ....'

"ಅಲ್ಲಾ, ದುಡಿಯದೆ ಉಣ್ಣಬೇಕೆಂಬ ಬಯಕೆಯೇನು ನಿನಗೆ ?"

"ನನಗ್ಯಾವ ಬಯಕೆಯೂ ಇಲ್ಲ. ಅಂಥ ಭಾಗ್ಯಾನ ಪಡೀ ಬೇಕಾದ್ರೆ ಪುಣ್ಯ ಮಾಡಿರ್ಬೇಕು....'

"ಅದ್ರೂ! ನೋಡು, ದುಡಿಯದೆ ಉಣ್ಣಬಾರದೂಂತ ಎಲ್ರೂ ಹೇಳ್ತಾರೆ. ಕಾಯಕವೇ ಕೈಲಾಸ, ಆಲಸ್ಯಕ್ಕೆ ಸಮಾನವಾದ ಶತ್ರುವಿಲ್ಲ...."

"ಅಯ್ಯೋ, ನಾನು ಯಾಗೆಲ್ಲಿ ಹೇಳ್ದೆ?"

'ಮತ್ತೆ ಹೇಳ್ದೇನು ? !

'ಹಾಗಲ್ಲ, ಯಾರು ಅಧಿಕಾರಕ್ಕೆ ಬಂದರೂ ನಮ್ಮ ಹೆಸರಲ್ಲಿ ನಮ್ಮ ಮೇಲೆ ಅಧಿಕಾರ ಮಾಡೋರೇ ಬರೋರೂಂದೆ....'

"ಸದ್ಯ ಹಾಗಿದ್ದೀತು; ಮುಂದೆ ನಾವೇ ಏಕೆ ಅಧಿಕಾರಕ್ಕೆ ಬರಬಾರದು?"

"ಭಾರೀ ಚಲೋದಾಯ್ತು; ಆಗ ನಾವೇ ಮೆರೆಯುವ ವೇಳೆ..."

"ನೋಡು, ಆ ಭಾವನೆಯೇ ತಪ್ಪು."

"ಅದೆಂಥದೇ.... ಇಲ್ಲಿ ಬಿಡಿ. ಪ್ರಜಾಸತ್ತೆಯಲ್ಲಿ ಪ್ರಜೆಯದೇ ಪರಮಾಧಿಕಾರ. ನಾವು ಸತ್ಪ್ರಜೆಗಳಾಗಿದ್ದುಕೊಂಡೇ ಸುಖಪಡೋಣ.

'ಹ್ಞಾಂ ...'

"ಅಲ್ರಿ, ರಾಂ ಪ್ರಭೃತಿಗಳ....'

"ಅದೇ ? ನೋಡು, ಕರ್ನಾಟಕ ಸಿಂಡಿಕೇಟಿನ ಗಂಡು ಭೂಮಿ. ಎಸ್ಸೆನ್ ಇಂಡಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ರಾಜ್ಯದ ಮುಖ್ಯಮಂತ್ರಿಯಾಗಿಯೂ ಇದ್ದಂತೆ ಈಗ ರಾಂ ಇಂಡಿಕೇಟ್ ಅಧ್ಯಕ್ಷರಾಗಿಯೂ ಕೇಂದ್ರ ಮಂತ್ರಿಯಾಗಿಯೂ ಇದ್ದಾರೆ ಎಸ್ಸೆನ್‌ಗೆ ತಾವು ಕಡಿಮೆಯಲ್ಲ ಎಂಬುದನ್ನು ತೋರಿಸೋದಕ್ಕೆ...."

'ಛೆ, ಇದೆಂಥದ ಕಾರಣ ?'

"ಹಾಗಾದರೆ ಕೇಳು, ಸಿಂಡಿಕೇಟ್ ಗಂಡು ಭೂಮಿಯಿಂದ ಸಿಂಡಿಕೇಟನ್ನು ಓಡಿಸಲು, ಕೊನೆಗೆ ಒಡೆದಾದರೂ ತಮ್ಮ ಕಾಲು ಬಲಪಡಿಸಲು...'

'ಇದರಲ್ಲಿ ಪೂರ್ಣ ಸತ್ಯಾಂಶವಿರಲಾರದು...'

"ಅಂತಾದರೆ ಮುಂದೇಳು. ಬೆಳಗಾಂವಿಯಲ್ಲಿ ಸಿಂಡಿಕೇಟ್ ಅಧ್ವರ್ಯುಗಳು ಅಬ್ಬರ ತಾಳ ಬಾರಿಸುತ್ತಿರುವಾಗ ಕರ್ನಾಟಕದ ಇಂಡಿಕೇಟ್ ಪಿಳ್ಳೆಗಳು ಸುಮ್ಮನಿರುವುದು ಸಾಧ್ಯವಿಲ್ಲ. ತಾವೂ ಕಡಿಮೆಯವರಲ್ಲ ಎಂದು ತೋರಿಸಲು ಭೇರಿತಾಡನ, ರಾಮ ಮೆರವಣಿಗೆ ಏರ್ಪಡಿಸಿದರು."

"ನೋಡಿ, ಇದೀಗ ಸತ್ಯ."

'ಅಂದರೆ, ಎಲ್ಲಾ ಬರಿಯ ಪ್ರದರ್ಶನ!'

"ಪಾಟೀಲರು ಬೆಳಗಾಂವಿನ ಬಗ್ಗೆ ವೀರ ಘೋಷಣೆ ಮಾಡಿದರಲ್ಲಾ ?'

"ರಾಂ ಕಡಿಮೆಯೇನು? ಎಸ್ಸೆನ್ ಜಿಲ್ಲೆಯಲ್ಲೇ ತಮಗೆ ಹೆಚ್ಚು ಬೆಂಬಲ ಎಂದು ಸಾರಿದರಲ್ಲಾ!"

'ಪಾಪ, ಜಗಜ್ಜೀವನ ರಾಮರ ಮಾತಿಗೆ ಅವರ ರಾಜ್ಯದಲ್ಲೇ ಕಾಸಿನ ಬೆಲೆ ಇಲ್ಲವೆಂಬುದು ಮರೆತು ಹೋಗಿತ್ತೆ!'

"ಹಿತ್ತಲ ಗಿಡ ಮದ್ದಲ್ಲ"

"ಬಚ್ಚಲ ನೀರು ತಿಳಿಯಲ್ಲ"

"ಹೋಗಲಿ ಬಿಡಿ..."

"ಹಾಗೆಲ್ಲಾ ಬಿಡಬಾರದು"

'ಹಾಗಾದ್ರೆ ಬಿಡಬೇಡಿ....'

—ಗೋರಾ.

ವಾರ್ಷಿಕೋತ್ಸವ

ಉಡುಪಿ ಮೋಹನ್ ಹಾಯರ್ ಎಲಿಮೆಂಟರೀ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಫೆಬ್ರವರಿ ತಿಂಗಳ 16ನೇ ತಾರೀಕಿನಂದು ಮುಂಜಾನೆ ಶ್ರೀ ರಘೋದ್ದಿನ್ ರವರಿಂದ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲ್ಪಟ್ಟು ಬಳಿಕ ಹಳೇ ವಿದ್ಯಾರ್ಥಿಗಳಿಗಾಗಿ ವಿವಿಧ ಪಂದ್ಯಾಟಗಳು ಜರುಗಿದವು. ಅಪರಾಹ್ನ ಹಳೇ ವಿದ್ಯಾರ್ಥಿಗಳ ಛದ್ಮವೇಷ ಸ್ಪರ್ಧೆಯು ಮನೋರಂಜಕವಾಗಿ ಜರಗಿದ ಬಳಿಕ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಗೋಪಾಲಕೃಷ್ಣ ಅಡಿಗ ಇವರ ಅಧ್ಯಕ್ಷತೆಯಲ್ಲಿ ಮನರಂಜನಾ ಕಾರ್ಯಕ್ರಮಗಳು ಜರಗಿದುವು. ಸಂಘದ ಅಧ್ಯಕ್ಷ ಡಾ| ಮೋಹನದಾಸ ಪೈಗಳು ಸ್ವಾಗತಿಸಿದರು. ಶಾಲಾ ಮೆನೇಜರ್ ಜಗನ್ನಾಥ ನಾಯಕರು ಹಳೇ ವಿದ್ಯಾರ್ಥಿ ಸಂಘವು ಶಾಲೆಗಾಗಿ ಕೈಕೊಂಡ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು. ಅಧ್ಯಕ್ಷರಿಂದ ಬಹುಮಾನ ವಿತರಣೆಯಾಗಿ ಅಧ್ಯಕ್ಷ ಗೋಪಾಲಕೃಷ್ಣ ಅಡಿಗರು ಇಂದಿನ ವಿದ್ಯಾಭ್ಯಾಸ ಕ್ರಮವನ್ನು ಅನುಭವಪೂರ್ಣವಾಗಿ ವಿಮರ್ಶಿಸಿ ಭಾಷಣ ಮಾಡಿದರು. ಹಳೇ ವಿದ್ಯಾರ್ಥಿಗಳಿಂದ ವಿವಿಧ ಮನರಂಜನೆ ಕಾರ್ಯಕ್ರಮಗಳು ಜರಗಿ "ಪಂಕಜಾ ಪರಿಣಯ" ಎಂಬ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಜತೆ ಕಾರ್ಯದರ್ಶಿ ಶ್ರೀ ಪಿ. ಡಿ. ಶೆಟ್ಟಿಯವರಿಂದ ವಂದನಾರ್ಪಣೆಯಾಯಿತು.

ಮ. ಮಹಾಸಭೆ

ಉಡುಪಿ ಮೋಹನ್ ಹಾ. ಎ. ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಫೆಬ್ರವರಿ ತಿಂಗಳ 16ನೇ ತಾರೀಕಿನಂದು ಸಂಘದ ಅಧ್ಯಕ್ಷ ಡಾ| ಕೆ. ಮೋಹನದಾಸ ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಧ್ಯಕ್ಷ ಶ್ರೀ ಎಸ್. ಶ್ರೀಶ ಬಲ್ಲಾಳರವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಸೋಮಶೇಖರ ಭಟ್‌ರವರು ವರದಿಯನ್ನು ಓದಿದ ಬಳಿಕ ಮುಂದಿನ ವರ್ಷಕ್ಕೆ ನಡೆದ ಚುನಾವಣೆಯಲ್ಲಿ ಡಾ| ಮೋಹನದಾಸ ಪೈ (ಅಧ್ಯಕ್ಷರು) ಶ್ರೀ ಎಸ್. ಶ್ರೀಶ ಬಲ್ಲಾಳ (ಉಪಾಧ್ಯಕ್ಷರು) ಶ್ರೀ ಬಾಲಕೃಷ್ಣ ಶಾನುಭಾಗರವರು ಕಾರ್ಯದರ್ಶಿಯಾಗಿಯೂ ಶ್ರೀ ಪಿ. ದೇವದಾಸ ಶೆಟ್ಟಿಯವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

Gram : VISHWA   Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಕಾಫೀ ಉದ್ಯಮದ ಬೆಳವಣಿಗೆ

(ಎರಡನೇ ಪುಟದಿಂದ)

ಗಳಿಗೆ 9000 ಟನ್ ಕಾಫೀ ರಫ್ತು ಮಾಡಬೇಕು ಮತ್ತು ಆಂತರಿಕ ಬಳಕೆಗೆಂದು 43600 ಟನ್ ಕಾಫೀ ಉಪಯೋಗಿಸಬೇಕು. ಕೋಟಾ ಇಲ್ಲದ ರಾಷ್ಟ್ರಗಳಲ್ಲಿ ಕಾಫೀಗೆ ಬರುವ ಬೇಡಿಕೆಗೆ ಅನುಗುಣವಾಗಿ, ಒಪ್ಪಂದದ ಕರಾರುಗಳನ್ನು ವರ್ಷ ವರ್ಷ ಪರಿಶೀಲಿಸಲಾಗುವದು.

1969—70 ಸಾಲಿಗೆ ಪ್ರಪಂಚದ 46ದಶಲಕ್ಷ ಚೀಲ ಕಾಫೀ ಉತ್ಪತ್ತಿಯಲ್ಲಿ ಭಾರತದ ಪಾಲು 20807ಟನ್ ಇದೆ. ಪಶ್ಚಿಮ ಜರ್ಮನಿ ಡೆಮೊಕ್ರಾಟಿಕ್ ರಿಪಬ್ಲಿಕ್ ಯುಗೋಸ್ಲಾವಿಯಾ, ಝೆಕೋಸ್ಲಾವಾಕಿಯಾ ಮತ್ತು ಬಲ್ಗೇರಿಯಾ ದೇಶಗಳು 'ಕೋಟಾ' ಪಡೆದ ರಾಷ್ಟ್ರಗಳಾಗಿದ್ದು ಇವುಗಳಿಗೆ ಭಾರತವೇ ಸುಮಾರು ಹತ್ತು ಸಾವಿರ ಟನ್ ಕಾಫೀಯನ್ನು ಪೂರೈಸಬೇಕೆಂದು ಒಪ್ಪಲಾಗಿದೆ.

1968—69 ಸಾಲಿನಲ್ಲಿ ನಮ್ಮ ಸಂಪ್ರದಾಯದ ವಿದೇಶೀ ಮಾರುಕಟ್ಟೆಗಳಲ್ಲಿ ನಮ್ಮ ಕಾಫೀ ರಫ್ತು ವ್ಯಾಪಾರ ಶೇಕಡ 30ರಷ್ಟು ಕಡಿಮೆಯಾಗಿದೆ.

ಪೂರ್ವಯುರೋಪಿಯನ್ ದೇಶಗಳಿಗೆ ನಮ್ಮ ಕಾಫೀ ರಫ್ತು ವ್ಯಾಪಾರ ಹೆಚ್ಚುತ್ತಿರುವದು ಶುಭ ಸೂಚಕವಾಗಿದ್ದರೂ, ನಮ್ಮ ಸಂಪ್ರದಾಯದ ವಿದೇಶಿ ಮಾರುಕಟ್ಟೆಗಳು ನಮ್ಮ ದೇಶಕ್ಕೆ ಮೀಸಲಾಗಿ ಉಳಿಯುವಂತೆ ಮಾಡುವದರಲ್ಲಿ ನಮ್ಮ ಕಾಫೀ ಉದ್ಯಮದ ಭವಿಷ್ಯ ಅಡಗಿದೆ.

ಮಹಿಳೆಯರಿಗೆ ಉದ್ಯೋಗ ಅಗತ್ಯವೇ

ಬೋರ್ನ್: ಮಹಿಳೆಯರ ಸ್ಥಾನ ಕೇವಲ ಅಡುಗೆ ಮನೆಯಲ್ಲಿರಬಹುದೇ ? ಜರ್ಮನಿಯಲ್ಲಿ ಅದು ಎಂದಿಗೂ ಇರಲಾರದು. ಜರ್ಮನಿಯಲ್ಲಿ ಉದ್ಯೋಗಸ್ಥ ಮಹಿಳೆಯರ ಅಂಕೆ ದಿನದಿಂದ ದಿನಕ್ಕೆ ಏರುತ್ತಿದೆ. ಇಂದು ಫೆಡರಲ್ ರಿಪಬ್ಲಿಕಿನ ಸಂಪೂರ್ಣ ಕಾರ್ಮಿಕ ಶಕ್ತಿಯ ಸೇಕಡಾ 39 ಮಹಿಳೆಯರು ಅಂದರೆ 9.5 ಮಿಲಿಯ. ಇವರಲ್ಲಿ 5 ಮಿಲಿಯ ಮಹಿಳೆಯರು ವಿವಾಹಿತರು, 2 ಮಿಲಿಯಕ್ಕಿಂತಲೂ ಅಧಿಕ ಮಹಿಳೆಯರಿಗೆ ಮಕ್ಕಳಿರುವರು. ಆದುದರಿಂದ ಇವರಿಗೆ ಒಂದು ಪ್ರಶ್ನೆ ಉದ್ಭವಿಸಿದೆ, ಈ ವಿವಾಹಿತ ಮಹಿಳೆಯರು ಇತ್ತ ಸಾಂಸಾರಿಕ ಜೀವನವನ್ನೂ ಅತ್ತ ಉದ್ಯೋಗವನ್ನೂ ಯಾವ ರೀತಿಯಲ್ಲಿ ಸುಖಕರವಾಗಿ ನಡೆಸಬಹುದು. ಇವರ ಸಾಂಸಾರಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ಜರ್ಮನಿಯಲ್ಲಿ ಒಂದು ಉಪಾಯವನ್ನು ಕಂಡು ಹುಡುಕಿರುವರು. ಇಂದು ಅಧಿಕ ಮಹಿಳೆಯರಿಗೆ ಪಾರ್ಟ್ ಟೈಮ್ ಉದ್ಯೋಗಗಳನ್ನು ಕೊಟ್ಟಿರುವರು. ಇಂದು ಜರ್ಮನ್ ಪಾರ್ಟ್‌ಟೈಮ್ ಉದ್ಯೋಗಸ್ಥರಲ್ಲಿ ಸೇಕಡಾ 80 ಮಹಿಳೆಯರಿರುವರು. ಇವರಲ್ಲಿ ಸೇಕಡಾ 13 ವಿಧವೆಗಳು ಹಾಗೂ ಸೇಕಡಾ 7 ಅವಿವಾಹಿತೆಯರು.

ಐ. ಟಿ. ಎಫ್.

ಹಳ್ಳಿ ಡಾಕ್ಟರ

ಪ್ಯಾಂಟು ಬೂಟಿನ ಜೊತೆಗೆ ಕೊರಳಿಗುಗ್ಗು ಸುಮ್ಮಲನಿಧ ಹೇಮಗನೆ ಪರಕು ಇಂಗ್ಲೀಷ್!
ತಲೆನೋವಿಗೂ ಕೊಡುವ ನಾಲ್ಕು ಇಂಜಕ್ಷನ್
ಬಡ ಜನರ ಸುಲಿಯುವ ನವ್ಯ ಫ್ಯಾಶನ್ನು!

—'ದೇವಕಿನಂದ' ವಿಜಾಪುರ

ಗಾಂಧೀಜಿ ಅಮರವಾಣಿ

ನಾವೆಲ್ಲರೂ—ಹಿಂದುಗಳು—ಮುಸಲ್ಮಾನರು—ಪಾರ್ಸಿಗಳು—ಸಿಕ್ಕರು—ಕ್ರೈಸ್ತರು—ಭಾರತೀಯರಾಗಿಯೇ ಸೌಹಾರ್ದದಿಂದ ಬಾಳೋಣ. ಒಂದೇ ತಾಯಿಯ ಮಕ್ಕಳಾಗಿ ತಮ್ಮ—ತಮ್ಮ ಧರ್ಮ ಹಾಗೂ ಶ್ರದ್ಧೆಯನ್ನು ಕಾಪಾಡಿಕೊಂಡು ಬಾಳುವುದೇ ನಮ್ಮೆಲ್ಲರ ಹಿರಿಗುರಿಯಾಗಬೇಕು.

o o o

ನನ್ನ ಕಲ್ಪನೆಯ ಭಾರತದಲ್ಲಿ ಒಂದೇ ಧರ್ಮ ಬೆಳೆಯಬೇಕೆಂಬುದು—ಅಂದರೆ ಕೇವಲ ಹಿಂದುಗಳು ಅಥವಾ ಕ್ರೈಸ್ತರು ಅಥವಾ ಮುಸಲ್ಮಾನರು ಇರಬೇಕು ಎಂಬುದು ನನ್ನ ಅಭಿಪ್ರಾಯವಲ್ಲ. ಭಾರತ ಎಲ್ಲಾ ಧರ್ಮಗಳ ವಿಷಯದಲ್ಲಿ ಸಹಿಷ್ಣುತೆಯಿಂದಿರಬೇಕು. ಎಲ್ಲಾ ಧರ್ಮಗಳು ಪರಸ್ಪರ ಹೊಂದಿಕೊಂಡು ಕಾರ್ಯ ನಿರ್ವಹಿಸಬೇಕು.

o o o

ನಿಮ್ಮ ಜೀವನದಲ್ಲಿ ಅನೇಕ ಸಲ ಸಂಕಷ್ಟದ ಪ್ರಸಂಗಗಳು ಬರುತ್ತವೆ. ಆಗ ನಿಮ್ಮ ಆಪ್ತರು ಮಿತ್ರರೇ ನಿಮಗೆ ವಿರೋಧಿಯಾಗಬಹುದು. ಅಂತಹ ಸಂದರ್ಭಗಳಲ್ಲೆಲ್ಲ ನಿಮ್ಮ ಅಂತರಾತ್ಮನ ವಿವೇಕವಾಣಿಯನ್ನು ಆಲಿಸಬೇಕು. ಅದರಂತೆ ನಡೆದುಕೊಳ್ಳಬೇಕು.

o o o

ತನ್ನ ಸದಸದ್ವಿವೇಕ ಬುದ್ಧಿಗೆ ವಿರೋಧಿಸಾಗಿ ವರ್ತಿಸುವ ನಾಯಕ ನಿರುಪಯೋಗಿ. ಎಲ್ಲ ಬಗೆಯ ಅಭಿಪ್ರಾಯಗಳ ಚಪರ ನಡುವೆ ಇರುವ ಅವನ ಸ್ಥಿತಿ ಚುಕ್ಕಾಣಿಯಿಲ್ಲದ ನೌಕೆಯಂತೆ. ಅಂತರಾತ್ಮನ ವಾಣಿಯೇ ಅವನಿಗೆ ಮಾರ್ಗದರ್ಶನ ಮಾಡಬಲ್ಲುದು.

o o o

ನಾನೇನಾದರೂ ಒಂದು ದೇಶದ ಸರ್ವಾಧಿಕಾರಿಯಾಗಿದ್ದರೆ, ಧರ್ಮ ಹಾಗೂ ಸರ್ಕಾರ ಎರಡನ್ನೂ ಪರಸ್ಪರ ದೂರ ಇಡುತ್ತಿದ್ದೆ. ನನಗೆ ಧರ್ಮದಲ್ಲಿ ಅಚಲವಾದ ನಂಬುಗೆಯಿದೆ. ಅದಕ್ಕಾಗಿ ಪ್ರಾಣ ಸಾಯಲೂ ಸಿದ್ಧ. ಅದು ನನ್ನ ಸ್ವಂತದ ವಿಚಾರ. ಅದಕ್ಕೂ ಸರ್ಕಾರಕ್ಕೂ ಯಾವ ಸಂಬಂಧವೂ ಇರದು. ಜಾತ್ಯಾತೀತ ಸಮಾಜದ ಹಿತ—ರಕ್ಷಣೆ, ಆರೋಗ್ಯ, ಸಂಪರ್ಕ, ವಿದೇಶ ವ್ಯವಹಾರಗಳು, ಹಣಕಾಸಿನ ಚಲಾವಣೆ, ಇತ್ಯಾದಿ ಅನೇಕ ವಿಷಯಗಳನ್ನು ಸರ್ಕಾರ ನೋಡಿಕೊಳ್ಳಬೇಕು. ನಿಮ್ಮ ಹಾಗೂ ನನ್ನ ಧರ್ಮವನ್ನಲ್ಲ. ಏಕೆಂದರೆ ಇದು ಎಲ್ಲರಿಗೂ ಸಂಬಂಧಿಸಿದ ವಿಷಯ.

o o o

ಸಮಾಜವಾದದ ತಿರುಳು

ಸಮಾಜವಾದ ಕಿವಿಗೆ ಇಂಪಾದ ಶಬ್ದ. ನನಗೆ ಗೊತ್ತಿರುವಂತೆ, ಸಮಾಜವಾದ ವ್ಯವಸ್ಥೆಯಲ್ಲಿ ಮೇಲು—ಕೀಳು ಭಾವನೆಯಿರದು. ಇಲ್ಲಿ ಎಲ್ಲರೂ ಸಮಾನರು. ಉದಾಹರಣೆಗೆ ವ್ಯಕ್ತಿಯ ದೇಹದಲ್ಲಿ ತಲೆ ಎಲ್ಲಕ್ಕೂ ಮೇಲೆಯಿದೆ ಎಂಬ ಕಾರಣದಿಂದ ಅದು ಶ್ರೇಷ್ಠವೆನ್ನಬಹುದೇ? ಪಾದಗಳು ನೆಲವನ್ನು ಮುಟ್ಟುವುದರಿಂದ ಅವು ಕೀಳು ಎಂದು ಹೇಳಬಹುದೇ? ಇಲ್ಲ. ದೇಹದ ಎಲ್ಲ ಅವಯವಗಳು ಸಮಾನವಾಗಿದೆ. ಇದೇ ರೀತಿ ಸಮಾಜದಲ್ಲಿ ಎಲ್ಲರೂ ಸಮಾನರು. ಇದೇ ಸಮಾಜವಾದ.

o o o

ಲೋಕದ ಸಕಲ ಜೀವಿಗಳೊಂದಿಗೆ ಸ್ನೇಹದಿಂದಿರುವುದೇ ನನ್ನ ಗುರಿ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
[illegible]
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 28—2—1970
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಆದರ್ಶ ಮಹಿಳಾಮಣಿ-

ಕಸ್ತೂರಬಾ

ಕಸ್ತೂರಬಾ ಭಾರತದ ಮಹಿಳೆಯರ ಆದರ್ಶಗಳ ಪ್ರತೀಕ. ಕಾರಣ ಅವರಿಗೆ ನಮ್ಮ ದೇಶದ ಎಲ್ಲಾ ಸ್ತ್ರೀ—ಪುರುಷರ ಹೃದಯಗಳಲ್ಲಿ ಅಮರವಾದ ಸ್ಥಾನವಿದೆ. ಈಗಿನ ಕಾಲಕ್ಕೆ ತಕ್ಕಂತೆ ಹೇಳುವುದಾದರೆ ಬಾ ಕಲಿತವರೂ ಅಲ್ಲ, ಹೇಳಿಕೊಳ್ಳುವಷ್ಟು ಪ್ರತಿಭಾವಂತರೂ ಅಲ್ಲ. ಅವರು ಸ್ವಪ್ರಯತ್ನಗಳಿಂದ ಕೀರ್ತಿ ಶಿಖರವನ್ನು ಏರಿದರು.

ಕಸ್ತೂರಬಾ 1869ರಲ್ಲಿ ಪೋರಬಂದರಿನಲ್ಲಿ ಜನಿಸಿದರು. 1883ರಲ್ಲಿ ಮೋಹನದಾಸ ಕರಮಚಂದ ಗಾಂಧಿ ಅವರನ್ನು ಮದುವೆಯಾದರು. 1944ರ ಫೆಬ್ರವರಿ 22ರಂದು ತಮ್ಮ ಎಪ್ಪತ್ತೈದನೆಯ ವಯಸ್ಸಿನಲ್ಲಿ ನಿಧನಹೊಂದಿದರು.

ಕಸ್ತೂರ ಬಾ "ಬಾ" ಎಂದು ಜನಪ್ರಿಯವಾಗಿದ್ದರು. ವಾಸ್ತವವಾಗಿ ಹೇಳುವುದಾದರೆ ಗಾಂಧೀಜಿಯವರೂ ಸೇರಿದಂತೆ ಎಲ್ಲರಿಗೂ ಅವರು ತಾಯಿಯಾಗಿದ್ದರು. ದಕ್ಷಿಣ ಆಫ್ರಿಕಾದ ಫೋನಿಕ್ಸ್ ಆಶ್ರಮದಿಂದಲೇ ಮಾತೆಯ ಪಾತ್ರವನ್ನು ಅವರು ನಿರ್ವಹಿಸಲಾರಂಭಿಸಿದರು. ಸಬರಮತಿ ಮತ್ತು ಸೇವಾಗ್ರಾಮ ಆಶ್ರಮಗಳಲ್ಲಿ ಅವರು ತಮ್ಮ ಈ ಕರ್ತವ್ಯವನ್ನು ಮುಂದುವರಿಸಿಕೊಂಡು ಬಂದರು. ಅವರ ಸ್ವಭಾವ ಸಹಜವಾದ ವಿನಯ, ತ್ಯಾಗ ಮನೋಭಾವ ಅವರಿಗೆ ಹಾಗೂ ಗಾಂಧೀಜಿಯವರಿಗೆ ಹೆಸರು ತಂದಿತು.

ಇದೇ ಫೆಬ್ರವರಿ 22ರಂದು ಕಸ್ತೂರಬಾ ಅವರ ಪುಣ್ಯತಿಥಿ. ಅದೇ ದಿನ ಗಾಂಧೀ ಶತಾಬ್ದಿ ಉತ್ಸವಗಳು ಮುಗಿಯುತ್ತವೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 102/69

ದಿ. ವೆಂಕಟೇಶ ಭಟ್ಟ (ರಿಟೈರ್ಡ್)—ವಾದಿ
ಧರ್ಮಪಾಲ ಶೆಟ್ಟಿ —ಪ್ರತಿವಾದಿ

ಪ್ರತಿವಾದಿ:–
ಧರ್ಮಪಾಲ ಶೆಟ್ಟಿ, ಸೀತಮ್ಮ ಶೆಡ್ತಿ ಇವರ ಮಗ, ಉಡ್ಪಿ ತಾಲೂಕು ಪಳ್ಳಿ ಗ್ರಾಮದ ಅವರಾಲು ಕಂಕಣಗುತ್ತು—ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ನಿಮ್ಮಿಂದ ವಾದಿಗೆ (ರಿಟೈರ್ಡ್) ಕಳೆದ ಹಿತ್ತಲು, ಕರಾಭವ ಮತ್ತು ಪ್ಲವಂಗ ಸಂವತ್ಸರಗಳಿಗೆ ಬರತಕ್ಕ ಚಾಲಗೇಣಿ, ಬಡ್ಡಿ, ವಕೀಲ್ ನೋಟೀಸ್ ಖರ್ಚು ವಗೈರೆ ಒಟ್ಟು ರೂಪಾಯಿ 1148-75 ಕ್ಕೆ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಖು 7-3-70ಕ್ಕೆ ಇಡಲಾಗಿಯದೆ. ಆ ತಾರೀಖು ನಿಮಗೆ ಅನುಕೂಲವಾಗದಿದ್ದರೆ ನೀವು ತಾರೀಖು 7-3-70ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಘಂಟೆ 10ಕ್ಕೆ ಖುದ್ದಾಗಲೀ ವ ವಕೀಲರ ಮೂಲಕವಾಗಲೀ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat
ವಾದಿ

ಕಾರ್ಕಳ, 9-2-70.



ಕಸ್ತೂರಿ ಬಾ ಗಾಂಧಿಯವರು ನೆಲೆಸಿದ್ದ ಸೇವಾಗ್ರಾಮದಲ್ಲಿಯ "ಬಾ ಕುಟಿ"

ಮಾತೃ ವಾತ್ಸಲ್ಯದ ಪ್ರತೀಕ — ಬಾ

(ಒಂದನೇ ಪುಟದಿಂದ)

ಯೂ ಸಹಾ ನನ್ನ ಯೋಗಕ್ಷೇಮ ಅವರ ಕೆಲಸವಾಯಿತು. ಮಹಿಳಾಶ್ರಮದಲ್ಲಿ ಗಾಂಧೀಜಿಯವರಿದ್ದರು. ನಾವು ಬಜಾಜ್‌ವಾಡಿಯಲ್ಲಿದ್ದೆವು. ದಿನಕ್ಕೆ ಒಂದೆರಡು ಬಾರಿ ನನ್ನ ಆರೋಗ್ಯ ವಿಚಾರಿಸಲು ಬಾಪು ಅವರು ಬರುತ್ತಿದ್ದರು. ನಾನು ರೋಗ ಅಲ್ಪಸ್ವಲ್ಪವಾಗಿ ವಿಮುಕ್ತನಾದೆ. ಮುಂಬೈಗೆ ಹೋಗಲು ನಿರ್ಧರಿಸಿದೆ. ಬಾ ಮತ್ತು ಬಾಪು ಒಪ್ಪಲಿಲ್ಲ. ಇದರಿಂದಾಗಿ ಅಂದಿನ ರಾತ್ರಿ ನನಗೆ ನಿದ್ದೆ ಬರಲಿಲ್ಲ. ನನಗೆ ನಿದ್ದೆ ಬಾರದಿದ್ದನ್ನು 'ಬಾ' ವಿಚಾರಿಸಿದರು. ನನಗೆ ನಿದ್ದೆ ಬಾರದುದಕ್ಕೆ ಕಾರಣ ಅವರಿಗೆ ಚೆನ್ನಾಗಿ ತಿಳಿದಿತ್ತು. ನನ್ನನ್ನು ತಮ್ಮ ಕೈಗಳಿಂದ ಸವರಿ ಮತ್ತೆ ನಿದ್ದೆ ಮಾಡಲು ತಿಳಿಸಿದರು.

ಅವರ ಅಮೃತ ಹಸ್ತದ ಸ್ಪರ್ಶದಿಂದಾಗಿ ನನ್ನ ಯೋಚನೆ ಮಾಯವಾಯಿತು. ಎರಡು ಗಂಟೆಗಳ ಗಾಢನಿದ್ರೆ ನನ್ನನ್ನು ಆವರಿಸಿತು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿರುವಾಗ ನಾಲ್ಕು ಮಂದಿ ನಿಗ್ರೋಗಳು ಮನೆಯನ್ನು ಚೊಕ್ಕಟಮಾಡುತ್ತಿದ್ದರು. ಬೆಳಗ್ಗೆ ಎದ್ದು ಗಾಂಧೀಜಿಯವರು ತಾವೇ ಸ್ವತಃ "ಟೀ" ತಯಾರಿಸಿ ಅವರಿಗೆ ಕೊಡುತ್ತಿದ್ದರು. ಇದರಿಂದ ತೃಪ್ತರಾದ ಅವರು 'ದೇವರು ನಮ್ಮೆಲ್ಲರಿಗಿಂತ ಮೇಲಿರುವವನು ಎನ್ನುತ್ತಾರೆ. ಆದರೆ ಈತ ದೇವರ ಅವತಾರ, ಮೂರ್ತಿಯಿಂದಲೇ ಈ ಟೀ ಸಿಗುತ್ತದೆ' ಎಂಬುದಾಗಿ ನುಡಿಯುತ್ತಿದ್ದರು. ನನ್ನ ಬಗ್ಗೆ ಹೇಳುವುದಾದರೆ ಅವರು ನಾವೂನ್ನ ತಂದೆತಾಯಿ ಗಳಿಗಿಂತ ಹೆಚ್ಚಿನವರಾಗಿದ್ದರು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಬೇಗ ಏಕೆ ಏಳಬೇಕು ?

(ರವಿಶಂಕರ ಮಹಾರಾಜ)

ನಾನು ಚಿಕ್ಕವನಿದ್ದಾಗ ನಮ್ಮ ಊರಿಗೆ ಒಬ್ಬ ಸನ್ಯಾಸಿ ಬಂದಿದ್ದ! ನಾನು ಅವನ ಉಪದೇಶ ಕೇಳಲಿಕ್ಕೆ ಹೋಗಿದ್ದೆ. ಬೆಳಗ್ಗೆ ಬೇಗ ಎದ್ದರೆ ಆಯುಸ್ಸು ಹೆಚ್ಚುತ್ತದೆ ಎಂದು ಆತ ಹೇಳಿದ.

ನಾನು ಮರುದಿನದಿಂದಲೇ ಆತನ ಉಪದೇಶದಂತೆ ನಡೆಯಹತ್ತಿದೆ. ಮುಂಜಾನೆ ೪ ಗಂಟೆಗೇ ಎದ್ದೆ. ಇಡೀ ಊರು ಮಲಗಿತ್ತು. ನಾನು ಹಾಸಿಗೆಯಿಂದ ಎದ್ದು ಇಡೀ ಊರು ತಿರುಗಿ ಬಂದೆ! ಆದರೂ ಯಾರೂ ಏಳಲೇ ಇಲ್ಲ! ಇನ್ನೇನ ಮಾಡುವುದು ? ಮನೆಗೆ ಬಂದು ತಿರುಗಿ ಮಲಗಿದೆ ಮತ್ತು ೮ ಗಂಟೆಗೆ ಎದ್ದೆ! ಬೇಗ ಏಳಬೇಕೆಂದೇನೋ ಆ ಸನ್ಯಾಸಿ ಹೇಳಿದ್ದ—ಆದರೆ ಎದ್ದು ಏನು ಮಾಡಬೇಕು ಎಂಬುದನ್ನು ಆತ ಹೇಳಿರಲೇ ಇಲ್ಲ! ಅದರಿಂದ ಹೀಗಾಯಿತು!

ನಮ್ಮ ಮುಂದೆ ಕೆಲಸದ ಯೋಜನೆ ಇರಬೇಕು. ನಾಳೆ ಮುಂಜಾನೆ ಬೇಗ ಎದ್ದು ನಾನು ಏನೇನು ಮಾಡಬೇಕು ? ಎಂಬುದರ ಯೋಜನೆಯನ್ನು ಹಿಂದಿನ ದಿನ ಮಲಗುವ ಮೊದಲೇ ನಿಶ್ಚಯಿಸಿಕೊಂಡಿರಬೇಕು! ಆಗ ಮಾತ್ರ ಬೇಗ ಎದ್ದದ್ದು ಸಾರ್ಥಕವಾಗುತ್ತದೆ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 5—3—1970 ಸಂಪುಟ 49
ಸಂಚಿಕೆ 26

ಕಸ್ತೂರಬಾ - ಜೀವನದರ್ಶನ

ಬಾ, ಅವರಿಗೆ ಯಾವುದೇ ಮಹತ್ವಾಕಾಂಕ್ಷೆಗಳಿರಲಿಲ್ಲ. ಮಹಾತ್ಮಾ ಗಾಂಧಿ ಅವರ ಪತ್ನಿ ಎಂಬ ಕಾರಣದಿಂದ ತಮಗೆ ಮನ್ನಣೆ ಸಿಗಬೇಕೆಂದು ಅವರು ಎಂದೂ ಇಚ್ಛಿಸಲಿಲ್ಲ. ಸಾರ್ವಜನಿಕ ಸಭೆಗಳಲ್ಲಿ ಬಾ ಅವರು ಸಭಿಕರ ಜೊತೆಗೇ ಕುಳಿತುಕೊಳ್ಳುತ್ತಿದ್ದರು. ವೇದಿಕೆಯ ಮೇಲೆ ಕುಳಿತುಕೊಳ್ಳುವಂತೆ ಅವರನ್ನು ಕೇಳಿದರೆ ಅವರು "ಇಲ್ಲ, ಇಲ್ಲ, ನಾನು ಸಭಿಕರೊಂದಿಗೇ ಕುಳಿತುಕೊಳ್ಳುತ್ತೇನೆ. ಇದರಲ್ಲೇ ನನಗೆ ಆನಂದವಿದೆ" ಎಂದು ಹೇಳುತ್ತಿದ್ದರು.

ಬಾ ಅತ್ಯಂತ ಧೈರ್ಯಶಾಲಿಯಾಗಿದ್ದರು. ಧೈರ್ಯ ಗುಣದಿಂದಾಗಿಯೇ ಅವರು ಎಲ್ಲಾ ರಾಜಕೀಯ ಚಳುವಳಿಯಲ್ಲಿ, ಗಾಂಧೀಜಿಯವರಿಗೆ ಬೆಂಬಲವಾಗಿ ನಿಂತರು. ಅದಕ್ಕಾಗಿ ಬಾ ಲೆಕ್ಕವಿಲ್ಲದಷ್ಟು ಕಷ್ಟಪಡಬೇಕಾಯಿತು. ಅನೇಕ ಬಾರಿ ಸೆರೆವಾಸವನ್ನು ಅನುಭವಿಸಬೇಕಾಯಿತು. ಇದಾವುದೂ, ಅವರನ್ನು ಎದೆಗುಂದಿಸಲಿಲ್ಲ.

ಗುಜರಾತಿನ, ಬೋರಸಡ್ ಸತ್ಯಾಗ್ರಹ ಬಾ ಅವರ ಜೀವನದಲ್ಲಿ ಒಂದು ಮರೆಯಲಾಗದ ಘಟನೆ. ಅದು ಅವರ ಜನಪ್ರಿಯತೆಯ ದ್ಯೋತಕವೂ ಹೌದು. ಕ್ರಿ. ಶ. 1922ನೇ ಇಸವಿ ಗಾಂಧೀಜಿ ಜೈಲಿನಲ್ಲಿದ್ದರು. ಆಗ ಬೋರಸಡದ ಮಹಿಳೆಯರು ಬಾ ತಮ್ಮೊಂದಿಗೆ ಇರುವಂತೆ ಕೇಳಿಕೊಂಡರು. 'ಬಾ ನಮ್ಮೊಡನೇ ಇರಲಿ. ನಮ್ಮಲ್ಲಿ ಧೈರ್ಯ ಉತ್ಸಾಹಗಳನ್ನು ತುಂಬಲಿ, ನಮಗೆ ಸ್ಫೂರ್ತಿ ನೀಡಲಿ" ಎಂಬುದೇ ಅವರ ಘೋಷಣೆಯಾಗಿತ್ತು.

ಮಹಿಳೆಯರ ಈ ಕರೆ, ಮಾತೆಯ ಹೃದಯವನ್ನು ಮುಟ್ಟಿತು. ಬಾ, ಆ ಕ್ಷಣವೇ ಬೋರಸಡಗೆ ಹೋಗಲು ನಿರ್ಧರಿಸಿದರು.

ಸೂರತ್‌ನ ಮರೋಲಿಯಲ್ಲಿ ಕಸ್ತೂರಬಾ ಅವರ ಅತಿಥೇಯರಾಗಿದ್ದ, ಶ್ರೀಮತಿ ಮಿಥುಬೇನ ಪಟೇಲ ಅವರು ಕಸ್ತೂರಬಾ ಅವರ ಆರೋಗ್ಯವನ್ನು ಗಮನಿಸಿ ಅವರ ಈ ನಿರ್ಣಯವನ್ನು ಬದಲಿಸಲು ಯತ್ನಿಸಿದರು.

"ಬಾ ನಿಮ್ಮ ಆರೋಗ್ಯ ಸರಿಯಾಗಿಲ್ಲ. ಡಾಕ್ಟರರು ನಿಮಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದ್ದಾರೆ; ನಿಮ್ಮ ಬದಲಿಗೆ ನಾನೇ ಬೋರಸಡ್‌ಗೆ ಹೋಗಿ ಬರುವೆ" ಎಂದು ಹೇಳಿದರು.

ಮರುಕ್ಷಣವೇ ಬಾ ಅವರಿಂದ ಉತ್ತರ ಬಂದಿತು. "ಪೋಲೀಸರ ಲಾಠಿ ಪೆಟ್ಟುಗಳನ್ನು ಧೈರ್ಯದಿಂದ ಎದುರಿಸಿದ ಆ ಮಹಿಳೆಯರನ್ನು ನಾನು ನೋಡಲೇಬೇಕು. ಅವರಿಗೆ ಬೆಂಬಲ ಕೊಡಲು ನಾನು ಅಲ್ಲಿರಲೇಬೇಕು. ಬಾಪು ಖಂಡಿತ ಅವರೊಂದಿಗೆ ಇರುತ್ತಿದ್ದರು. ಆದರೆ ಅವರು ಬಂಧನದಲ್ಲಿದ್ದಾರೆ" ಎಂದು ಕಸ್ತೂರಬಾ ಹೇಳಿದರು.

o o o

ಮಹಾತ್ಮಾಜಿ ಅನೇಕ ಬಾರಿ ಉಪವಾಸವನ್ನು ಕೈಗೊಂಡರು. ಬಾಪೂ ಅವರು ಹಾಗೆ ಉಪವಾಸ ಮಾಡುತ್ತಿದ್ದಾಗಲೆಲ್ಲ ಬಾ ಅವರು ಭಕ್ತಿಯಿಂದ ದೇವರನ್ನು ಪ್ರಾರ್ಥಿಸುತ್ತಿದ್ದರು. ಬಾಪೂ ಸೇವೆಯಲ್ಲಿ ಅವರು ಬಹು ವೇಳೆಯನ್ನು ಕಳೆಯುತ್ತಿದ್ದರು. ಸ್ವಲ್ಪ ಕಾಫಿಯನ್ನೋ ಅಥವಾ ಕಿತ್ತಳೆ ರಸವನ್ನೋ ಮಾತ್ರ ಸೇವಿಸುತ್ತಿದ್ದರು. ಉಪವಾಸದ ಸಂದರ್ಭಗಳಲ್ಲೇ, ಬಾ ಗಾಂಧೀಜಿಯವರೊಂದಿಗೆ ವಾದ—ವಿವಾದಗಳಲ್ಲಿ ತೊಡಗುತ್ತಿರಲಿ

(ಎರಡನೇ ಪುಟ ನೋಡಿರಿ)



ಕೃಷಿ ಉತ್ಪಾದನೆಯಲ್ಲಿ ರಾಸಾಯನಿಕ ಗೊಬ್ಬರದ ಸ್ಥಾನ

ಬೇಸಾಯ ಉತ್ಪನ್ನ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಗೊಬ್ಬರಗಳನ್ನು ಉಪಯೋಗಿಸುವುದು ನಮ್ಮ ದೇಶದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಬೇರೆಬೇರೆ ಬೆಳೆಗಳನ್ನು ಪಡೆಯುವುದಕ್ಕಾಗಿ ನಮ್ಮ ಪೂರ್ವಿಕರು ಬೇರೆಬೇರೆ ಬಗೆಯ ಗೊಬ್ಬರಗಳನ್ನು ಉಪಯೋಗಿಸುತ್ತಿದ್ದರು. ಈ ಗೊಬ್ಬರಗಳ ಬಳಕೆಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ವರಾಹಮಿಹಿರನ 'ಬೃಹತ್ ಸಂಹಿತ'ದ' ನಾವು ಕಾಣಬಹುದಾಗಿದೆ.

ಪ್ರಾಚೀನ ಕಾಲದ ನಮ್ಮ ರೈತರು ಗೊಬ್ಬರಗಳನ್ನು ಹೇರಳವಾಗಿ ಬಳಸುತ್ತಿದ್ದರಾದರೂ ಅವರಿಗೆ ಕೃತಕ ಹಾಗೂ ರಾಸಾಯನಿಕ ಗೊಬ್ಬರಗಳ ತಯಾರಿಕೆ ಮತ್ತು ಬಳಕೆ ತಿಳಿದಿರಲಿಲ್ಲ. ವರಾಹಮಿಹಿರ ಕೃತಕ ಗೊಬ್ಬರಗಳನ್ನು ತಯಾರಿಸುವ ವಿಧಾನವನ್ನು ಕೈಗೊಳ್ಳಲೇ ಇಲ್ಲ. ರೈತರು ತಾವೇ ಸ್ವತಂತ್ರವಾಗಿ ಈ ಕಾರ್ಯವನ್ನು ಕೈಗೊಳ್ಳಬೇಕಾಗಿಲ್ಲ. ತಮಗೆ ಹತ್ತಿರದ ಮಾರುಕಟ್ಟೆಯಿಂದ ಕೃತಕ ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಬಹುದು. ಕೆಲವು ದೇಶಗಳಲ್ಲಂತೂ ಕೃತಕ ಹಾಗೂ ರಾಸಾಯನಿಕ ಗೊಬ್ಬರವನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲಾಗುತ್ತಿದೆ. ಒಳ್ಳೆಯ ಉತ್ಪಾದನೆಯನ್ನೂ ತೆಗೆಯಲಾಗುತ್ತಿದೆ. ಬೇಸಾಯಕ್ಕೆ ಪುಷ್ಟಿ ಕೊಡುವ ವಸ್ತುಗಳಿಗಾಗಿ ಅಮೇರಿಕಾದವರು ಒಂದು ಶತಕೋಟಿಗೂ ಹೆಚ್ಚು ಡಾಲರ್‌ಗಳನ್ನು ವೆಚ್ಚ ಮಾಡುತ್ತಿದ್ದಾರೆ. ಇತರ ದೇಶಗಳಿಗೆ ಹೋಲಿಸಿ ನೋಡಿದರೆ ಭಾರತದಲ್ಲಿ ರಾಸಾಯನಿಕ ವಸ್ತುಗಳ ಬಳಕೆ ಪ್ರಮಾಣ ಬಹಳ ಕಡಿಮೆ. ದೇಶದಲ್ಲಿ ಬೇಸಾಯ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಆಹಾರ ವಿಷಯದಲ್ಲಿ ಸ್ವಾವಲಂಬನೆಯನ್ನು ಗಳಿಸಬೇಕಾದರೆ ನಾವು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೃತಕ ಗೊಬ್ಬರವನ್ನು ತಯಾರಿಸಬೇಕು. ಹಾಗೂ ಅವುಗಳನ್ನು ಜನಪ್ರಿಯಗೊಳಿಸಬೇಕು. ನಾಲ್ಕನೇ ಯೋಜನೆಯಲ್ಲಿ 3·7 ದಶಲಕ್ಷ ಟನ್ ನೈಟ್ರೋಜನ್ 1·8 ದಶಲಕ್ಷ ಟನ್ ಪಿ—205 ಉತ್ಪಾದಿಸಲು ಉದ್ದೇಶಿಸಲಾಗಿದೆ.

ಭಾರತ ರಾಸಾಯನಿಕ ಗೊಬ್ಬರ ಕಾರ್ಪೋರೇಷನ್ ವರ್ಷದಲ್ಲಿ 400,000 ಟನ್ ನೈಟ್ರೋಜನ್ ಮತ್ತು 36,000 ಟನ್‌ಗಳಷ್ಟು 205ನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಗಳಿಸಿದೆ. ರಾಸಾಯನಿಕ ಗೊಬ್ಬರದ ಉತ್ಪಾದನೆ ಹಾಗೂ ಮಾರುಕಟ್ಟೆ ವಿಷಯಗಳಲ್ಲಿ ಈ ಕಾರ್ಪೋರೇಷನ್ ಅಗ್ರಸ್ಥಾನ ಪಡೆದಿದೆ. ಇನ್ನೆರಡು ವರ್ಷಗಳಲ್ಲಿ ಈ ಸಂಸ್ಥೆಯು ಉತ್ಪಾದನೆಯನ್ನು ದ್ವಿಗುಣಹೊಂದುವ ನಿರೀಕ್ಷೆ ಇದೆ. 1975ರ ಸುಮಾರಿನಲ್ಲಿ ಈ ಕಾರ್ಪೋರೇಷನ್‌ನ ಉತ್ಪಾದನೆ ಒಂದಕ್ಕೆ ಐದರಷ್ಟು ಹೆಚ್ಚುವುದಾಗಿ ಅಂದಾಜು ಮಾಡಲಾಗಿದೆ.

ಬಿಹಾರದ ಸಿಂದ್ರಿ, ಪಂಜಾಬಿನ ನಾಂಗಲ್, ಉತ್ತರಪ್ರದೇಶದ ಗೋರಖ್‌ಪುರ್, ಮಹಾರಾಷ್ಟ್ರದ ಟ್ರಾಂಬೆ, ಅಸ್ಸಾಂನ ನಾಮ್‌ರೂಪ್ ಈ ಸ್ಥಳಗಳಲ್ಲಿ ಈ ಸಂಸ್ಥೆಯ ಐದು ಘಟಕಗಳು ಈಗ ಕಾರ್ಯಾಚರಣೆಯಲ್ಲಿವೆ. ಪಶ್ಚಿಮ ಬಂಗಾಳದಲ್ಲಿರುವ ದುರ್ಗಾಪುರ, ಬಿಹಾರದ ಬರೌನಿಗಳಲ್ಲಿ ಇನ್ನೆರಡು ಘಟಕಗಳು ಈಗ ನಿರ್ಮಾಣಘಟ್ಟದಲ್ಲಿವೆ. ಸಿಂದ್ರಿಯಲ್ಲಿರುವ ವಿಭಾಗವನ್ನು ಅಭಿವೃದ್ಧಿಪಡಿಸುವುದು ಹಾಗೂ ನಾಮ್‌ರೂಪದ ವಿಭಾಗವನ್ನು ವಿಸ್ತರಿಸುವುದು ಇವನ್ನು ಈಗ ಕೈಗೊಳ್ಳಲಾಗುತ್ತಿದೆ; 1972ಕ್ಕೆ ಈ ವಿಸ್ತರಣಾ ಕಾರ್ಯ ಪೂರ್ಣಗೊಳ್ಳುವುದು.

ರಾಸಾಯನಿಕ ಗೊಬ್ಬರಗಳ ತಯಾರಿಕೆಯುಕ್ತ ಟರುವಣ್ಣೆ ಅಥವಾ ಪೆಟ್ರೋಲಿಯಂ ಅನ್ನು ಬಳಸುವುದರಿಂದ ಹೆಚ್ಚು ವೆಚ್ಚವಾಗುವುದರಿಂದ ಕಲ್ಲಿದ್ದಲನ್ನು ಬಳಸಲು ಭಾರತ ಸರಕಾರ ನಿರ್ಧರಿಸಿದೆ. ಕಲ್ಲಿದ್ದಲನ್ನು ಅವಲಂಬಿಸಿದ ರಾಸಾಯನಿಕ ಗೊಬ್ಬರ ಕಾರ್ಖಾನೆಯ ವಿಭಾಗಗಳು ಆಂಧ್ರಪ್ರದೇಶದ ರಾಮಗುಂಡಂ, ಒರಿಸ್ಸಾದ ತಾಲ್‌ಚರ್, ಮಧ್ಯಪ್ರದೇಶದ ಕೋರ್‌ಬಾಗಳಲ್ಲಿ ಸ್ಥಾಪಿತವಾಗುವುವು. ಇವುಗಳ ನೈಟ್ರೋಜನ್ ಉತ್ಪಾದನಾ ಪ್ರಮಾಣ 2,28,000 ಟನ್‌ಗಳಷ್ಟು. ಕಲ್ಲಿದ್ದಲನ್ನು ಅವಲಂಬಿಸಿರುವ ಈ ಗೊಬ್ಬರ ಕಾರ್ಖಾನೆ ಇಡೀ ಜಗತ್ತಿನಲ್ಲೇ ದೊಡ್ಡ ಘಟಕಗಳಾಗಿರುವವು. 1975–76ರ ಸುಮಾರಿನಲ್ಲಿ ಈ ಯೋಜಿತ ಸಂಸ್ಥೆಗಳು ಉತ್ಪಾದನೆಯನ್ನು ಆರಂಭಿಸುವವು. ಈಗಾದರೆ ಎಫ್. ಸಿ. ಐ.ನ ನೈಟ್ರೋಜನ್ ಉತ್ಪಾದನೆ 20,00,000 ಟನ್‌ಗಳಿಗೆ ಹಾಗೂ ಪಿ—205ನ ಉತ್ಪಾದನೆ 4,70,000 ಟನ್‌ಗಳಿಗೆ ಏರುವುದು.

ಉತ್ಪಾದನೆಯಷ್ಟೇ ಅಲ್ಲದೆ ರಾಸಾಯನಿಕ ಗೊಬ್ಬರಗಳ ಮಾರುಕಟ್ಟೆ ಮತ್ತು ವಿತರಣೆ ಈ ವಿಷಯಗಳಿಗೂ ಎಫ್. ಸಿ. ಐ. ಸಂಸ್ಥೆ ಹೆಚ್ಚು ಗಮನವನ್ನು ಕೊಡುತ್ತಿದೆ. ಗೊಬ್ಬರಗಳನ್ನು ಶೀಘ್ರದಲ್ಲಿ ಮಾರಾಟ ಮಾಡಲು ಕೆಲವು ಸ್ಥಳಗಳನ್ನು ಆರಿಸಿ ಅಲ್ಲಿ ತನ್ನ ಶಾಖೆಗಳನ್ನು ತೆರೆದಿದೆ. ವ್ಯವಸ್ಥಿತ ವಿತರಣೆ ದೃಷ್ಟಿಯಿಂದ ಕೆಲವು ಕಡೆಗಳಲ್ಲಿ ಅಧಿಕೃತ ಮಾರಾಟಗಾರರನ್ನು ನೇಮಿಸಲಾಗಿದೆ. ಗೊಬ್ಬರಗಳ ಮಾರಾಟಕ್ಕೆ ಸಂಬಂಧಿಸಿದ ವಿಷಯದಲ್ಲಿ ನಿರುದ್ಯೋಗ ಪದವೀಧರರಿಗೆ ತರಬೇತಿ ನೀಡುವ ಹೊಸ ಯೋಜನೆಯನ್ನು ಈ ಸಂಸ್ಥೆ ಆರಿಸಿದೆ.

ಬೇಸಾಯ ಉತ್ಪನ್ನವನ್ನು ಹೆಚ್ಚಿಸಲು ರೈತನೊಂದಿಗೆ ಈ ಸಂಸ್ಥೆ ದುಡಿಯುತ್ತಿದೆ.

ದೇಶಕ್ಕೆ ಬೇಕಾಗಿರುವದು ಆಹಾರ

ಜಿ. ಇ. ಎಫ್. ಪಂಪುಸೆಟ್ಟುಗಳು ಅದರ ಪರಿಹಾರ.

ಅತ್ಯಂತ ಆಧುನಿಕ ಶಾಸ್ತ್ರೀಯ ರೀತಿಯಿಂದ ತಯಾರಿಸಲ್ಪಟ್ಟ
ಜಿ. ಇ. ಎಫ್. ಪಂಪುಸೆಟ್ಟುಗಳನ್ನು ಉಪಯೋಗಿಸಿ
ಹೆಚ್ಚು ಬೆಳೆಯಿರಿ.

ದೇಶದ ಸಂಪತ್ತನ್ನು ಹೆಚ್ಚಿಸಲು ಹೆಚ್ಚು ಆಹಾರ ಬೆಳೆಯಲು
ಜಿ. ಇ. ಎಫ್. ಪಂಪುಸೆಟ್ಟುಗಳನ್ನೇ ಉಪಯೋಗಿಸಿರಿ.

ತಯಾರಕರು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಬೆಂಗಳೂರು.

ಬೇಡಿಕೆಗಾಗಿ :—

ಮೆ| ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್,

ನಂ. 36 "ಹರಿನಿವಾಸ್" ಕನಿಂಗ್‌ಹ್ಯಾಮ್ ರೋಡ್,
ಬೆಂಗಳೂರು—1
ಅವರೊಂದಿಗೆ ವ್ಯವಹರಿಸಿ.

ಫೋನ್ : 526
ಸಂಪುಟ ೪೯
ಸಂಚಿಕೆ ೨೬
VOL. 49
No. 26

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೫—೩—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಬಲವಂತದ ತ್ಯಾಗ

ಫೆಬ್ರುವರಿ ತಿಂಗಳ ಕೊನೆಯ ವಾರ ಬಂತೆಂದರೆ ಭಾರತೀಯರಿಗೆಲ್ಲ ಕುತೂಹಲ ಹೆಚ್ಚು. ಈ ತಿಂಗಳಲ್ಲೇ ಭಾರತ ಸರಕಾರದ ಮತ್ತು ವಿವಿಧ ರಾಜ್ಯಗಳ ಮುಂಗಡಪತ್ರ ಅಧಿವೇಶನ ಆರಂಭವಾಗುವುದು, ಬಜೆಟ್ಟನ್ನು ಮಂಡಿಸುವುದು ಸಂಪ್ರದಾಯ. ಪ್ರತಿ ಬಜೆಟ್ಟೂ ಕೆಲವೊಂದು ಕೋಟಿ ರೂಪಾಯಿ ಆದಾಯ ತರುವಂತೆ ಹೊಸ ಹೊಸ ತೆರಿಗೆಗಳನ್ನು ವಿಧಿಸುವುದೂ, ಇರುವ ತೆರಿಗೆಯ ಪ್ರಮಾಣವನ್ನು ಏರಿಸುವುದೂ ಹಾಗೂ ಕೊರತೆಯಲ್ಲಿ ಪರ್ಯವಸಾನ ಹೊಂದುವುದೂ ನಮ್ಮ ನಡೆದು ಬಂದ ದಾರಿ. ಬೇರೆ ಬೇರೆ ರಾಜ್ಯಗಳು ಕೇಂದ್ರದಿಂದ ಅಧಿಕಾಧಿಕ ಸಹಾಯವನ್ನು ನಿರೀಕ್ಷಿಸುವುದು, ಕೇಂದ್ರವು ವಿದೇಶಗಳತ್ತ ಉದ್ದನೆಗೆ ಕೈಚಾಚುವುದು— ಬಹುಕಾಲದಿಂದಲೂ ನಡೆದು ಬಂದದ್ದು. ದೇಶದಲ್ಲೆಲ್ಲಾ ಹೊಸ ರಾಜಕೀಯ ಗಾಳಿ ಬೀಸಿದೆಂದು ಡಣಾಡಂಗುರವಾಗಿ ಸಾರುತ್ತ ಬಂದಿರುವುದು ಹೌದಾದರೂ ನಮ್ಮ ಬಜೆಟ್ಟುಗಳು ಹಿಂದಿನ ದಾರಿಯನ್ನೇ ಈ ಬಾರಿಯೂ ಮೆಟ್ಟುತ್ತ ಬಂದಿವೆಯೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಮೊರಾರ್ಜಿ ಭಾಯಿಯ ಕೈಯಿಂದ ಹಠಾತ್ತನೆ ವಿತ್ತಖಾತೆಯನ್ನು ಕಸಿದುಕೊಂಡು ತನ್ನ ಕೈಗಳಲ್ಲಿಟ್ಟುಕೊಂಡು ಬಂದ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಗತಿಯ ಮಾತನ್ನೇ ಆಡುತ್ತ ಬಂದಿದ್ದಾರೆ. ಕಾಣಾಡುವ ಮಾತು ಮಾತು ಸಮಾಜವಾದದ ಘೋಷಣೆಯೆಂದೂ ಇಡುವ ಹೆಜ್ಜೆ ಹೆಜ್ಜೆಯೂ ಸಮಾಜವಾದೀ ಪಥದ ಮುನ್ನಡೆಯೆಂದೂ ಆರಂಭದಲ್ಲಿ ಆಡಿಕೊಂಡರು. ಆದರೆ, ಅವರೇ ಮುಂದೆ ಮಾತನಾಡುತ್ತ ಬರುವಾಗ ತನ್ನ ರಾಗವನ್ನು ಬದಲಾಯಿಸಿದರು. ಸಮಾಜವಾದ ಎನ್ನುವುದು ನಮ್ಮ ಗುರಿ. ಅದನ್ನು ಹೇಳುವಷ್ಟು ಸಲೀಸಾಗಿ ಜ್ಯಾರಿಗೆ ತರಲಾಗುವುದಿಲ್ಲ. ಕಾಲಬೇಕು ಎನ್ನತೊಡಗಿದರು. ವಿತ್ತಸಚಿವೆಯೂ ಆಗಿರುವ ಪ್ರಧಾನಿ ಶ್ರೀಮತಿ ಗಾಂಧಿಯವರು ಲೋಕಸಭೆಯಲ್ಲಿ ಮಂಡಿಸಿದ 'ಪ್ರಗತಿಶೀಲ' ಮುಂಗಡಪತ್ರವು ಸಮಾಜವಾದದ ಗುರಿಯತ್ತ ನಡೆದಿದೆಯೆಂದಾದರೆ, ಹಿಂದಿನ ಬಜೆಟ್ಟುಗಳೂ ಅದರತ್ತಲೇ ನಡೆದಿವೆಯೆನ್ನಬೇಕು. 'ಕ್ರಾಂತಿಕಾರಿ'ಯೆಂದು ಕರೆದುಕೊಳ್ಳಬಹುದಾದ ಯಾವ ಅಂಶವೂ ಈ ಮುಂಗಡ ಪತ್ರದಲ್ಲಿಲ್ಲವಾದುದರಿಂದ 'ಶೀಘ್ರವಾದಿ ಇಂಡಿಕೇಟ್' ಇದರಿಂದ ತೀವ್ರ ವ್ಯಾಕುಲಕ್ಕೊಳಗಾಗುವುದೂ ನಿರಾಶರಾಗುವುದೂ ಸಹಜ. ಅವರಿನ್ನೂ ಶ್ರೀಮತಿ ಗಾಂಧಿಯವರನ್ನು ಆರಾಧಿಸುವುದಾದರೆ, ಅದು ವ್ಯಕ್ತಿ ಪೂಜೆ ಮಾತ್ರವೆಂದು ಹೇಳಲೇ ಬೇಕಾಗುತ್ತದೆ.

ಶ್ರೀ ಸಾಮಾನ್ಯನನ್ನು ದೃಷ್ಟಿಯಲ್ಲಿಟ್ಟುಕೊಂಡೇ ಶ್ರೀ ಸಾಮಾನ್ಯನ ಪ್ರಧಾನಿಯವರು ಈ ಬಜೆಟ್ಟನ್ನು ಮಂಡಿಸಿದ್ದಾರೆಂದು ತಿಳಿಯಬೇಕು. ಏಕೆಂದರೆ, ಅವರು ಆಡುವ ಮಾತು ಮಾತು ಮಾಡುವ ಕೃತಿ ಕೃತಿ ಆತನ ಉದ್ಧಾರಕ್ಕಾಗಿ. ಶ್ರೀಸಾಮಾನ್ಯನನ್ನು ಎತ್ತರಿಸುವ ಸೂತ್ರಗಳನ್ನು ಮುಂಗಡ ಪತ್ರಗಳಲ್ಲಿ ಅಳವಡಿಸಿಕೊಳ್ಳುವ ಸದವಕಾಶ ಅವರಿಗೆ ದೊರಕಿದೆ. ಇದನ್ನವರು ಉಪಯೋಗಿಸದೆ ಹೋದರೆ, ಅವರೂ ಪ್ರತಿಗಾಮಿಯೆನ್ನಬೇಕು. ರೇಲ್ವೆ ಮುಂಗಡ ಪತ್ರದಲ್ಲಿ ರೇಲು ಪ್ರಯಾಣದ ದರಗಳನ್ನು ಬಹಳಷ್ಟು ಏರಿಸಿದ್ದು ಶ್ರೀ ಸಾಮಾನ್ಯನ ಹಿತಕ್ಕೆ ಎಷ್ಟು ಪ್ರಯೋಜನಕಾರಿಯಾಗಿದೆ ಎಂದು ಹೇಳುವಂತಿಲ್ಲ. ಮೂರನೆಯ ದರ್ಜೆಯ ದರದಲ್ಲಿ ಏರಿಕೆಯು ಕಡಿಮೆಯಾಗುವ ಸಂಭವವಿದೆಯೆಂದು ಹೇಳಲಾಗುತ್ತದೆ. ಆದರೆ, ಬಡವರೆಲ್ಲರೂ ಮೂರನೆಯ ದರ್ಜೆಯಲ್ಲೇ ಪ್ರಯಾಣ ಮಾಡಬೇಕೆಂದು ಬಯಸುವುದು ಸಮಂಜಸವಲ್ಲ. ಮೂರನೆ ದರ್ಜೆಯ ರೇಲು ಪ್ರಯಾಣಕ್ಕೂ ನರಕವಾಸಕ್ಕೂ ವ್ಯತ್ಯಾಸವೇನೂ ಇರಲಾರದು. ದಟ್ಟೈಸಿದ ಜನಸಂದಣಿಯಿಂದ ಟಿಕೇಟು ಕೊಂಡವರೆಲ್ಲ ಸರ್ವೇಸಾಮಾನ್ಯ ನಿಂತುಕೊಂಡೋ ನೇತಾಡಿಕೊಂಡೋ ಪ್ರಯಾಣ ಮಾಡುತ್ತಿರುವುದು ಮಾಮೂಲು. ರೇಲ್ವೆ ವಿಭಾಗಕ್ಕೆ ಅಲ್ಲಲ್ಲಿನ ಗಲಭೆ ಗೊಂದಲಗಳಿಂದ ಆದ ನಷ್ಟ, ಹೆಚ್ಚಿನ ವೆಚ್ಚ ಇತ್ಯಾದಿಗಳಿಂದಾಗಿ ದರಗಳನ್ನು ಏರಿಸುವುದು ಅನಿವಾರ್ಯವಾಗಬಹುದು. ರೇಲ್ವೆ ಬೋರ್ಡಿನ ಬಗ್ಗೆ ಹಲವಾರು ಟೀಕೆಗಳನ್ನೂ ಆಡೇರಿಸಬೇಕಾಗಿ ಬಂದಿರುವಾಗ ಆದಾಯವನ್ನು ಹೆಚ್ಚಿಸುವುದಕ್ಕಾಗಿ ಅಧಿಕ ಹಣವೂ ದಗಿಸ ಬೇಕಾದದ್ದೂ ಅಗತ್ಯವೇ.

ಕೇಂದ್ರ ಸರಕಾರದ ಬಜೆಟ್ಟು ಸುಮಾರು ೧೭೦ ಕೋಟಿ ರೂಪಾಯಿ ನೂತನ ಹೊಸ ತೆರಿಗೆಗಳನ್ನು ಹೇರಿಸಿದೆ. ಅಂದರೆ; ಈ ಬಾರಿ ಹಿಂದಿನ ಮುಂಗಡ ಪತ್ರಗಳಂತೆಯೇ ಮುಂದುವರಿದಿದೆ. ನೊನ್ನೆ ನೊನ್ನೆ ಹೆಚ್ಚಿದ ಅಂಚೆ ತಂತಿ ದರಗಳಲ್ಲಿ ಈ ಬಜೆಟ್ಟು ಮತ್ತೆ ಪರಿಷ್ಕರಣ ಮಾಡಿ ಅವನ್ನು ಮತ್ತಷ್ಟು ಹೆಚ್ಚಿಸಿದೆ. ಆದಾಯ ತೆರಿಗೆಯಲ್ಲಿ ಹೆಚ್ಚಳ ಕಂಡಿದೆ. ಸಂಪತ್ತು ಮತ್ತು ದತ್ತಿಗಳ ಮೇಲೆ ಇನ್ನೂ ಇನ್ನೂ ತೆರಿಗೆ ವಿಧಿಸುತ್ತ ಹೋಗುವುದರಿಂದ ಅವನ್ನು ಬಚ್ಚಿಡುವ ಹವ್ಯಾಸ ಇನ್ನೂ ಪ್ರಬಲವಾಗುವ ಅವಕಾಶ ಹೆಚ್ಚಾದಂತಾಗಿದೆ. ಆದಾಯ ತೆರಿಗೆಯ ಮಿತಿಯನ್ನು ರೂ. ೫೦೦೦ಕ್ಕೆ ಏರಿಸಿದ ಅಂಶವೊಂದು ಮಾತ್ರ ಈ ಮುಂಗಡಪತ್ರ ಮಧ್ಯಮ ವರ್ಗದವರಿಗೆ ನೀಡುವ ಒಂದು ಕೊಡುಗೆ. ಇಂದಿನ ತೆರಿಗೆ ಪದ್ಧತಿಯಲ್ಲಿ ಹೊರೆಹೊರುವವರು ಮಧ್ಯಮ ವರ್ಗದ ಜನರು ಮಾತ್ರ. ತೆರಿಗೆಯ ಅಂಶ ಅಂಶವೂ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಅವರ ಮೇಲೆ ಬೀಳುತ್ತದೆ. ಶ್ರೀಮಂತರು 'ಭಿನಾಮಿ'ಯಲ್ಲಿ ತೊಡಗಿಯೂ ತೆರಿಗೆಗಳಿಂದ ತಪ್ಪಿಸಿಕೊಳ್ಳುತ್ತಾರೆ. ಶ್ರೀಸಾಮಾನ್ಯನಿಗೆ ನೇರವಾಗಿ ತೆರಿಗೆಗಳನ್ನು ತೆರುವ ಪ್ರಮೇಯವೇ ಬರುವುದಿಲ್ಲ. ದಿನಕ್ಕೆ ಐದಾರು ರೂಪಾಯಿ ಸಂಪಾದನೆ ಮಾಡುತ್ತಿರುವವರಿಗೂ ವೃತ್ತಿ ತೆರಿಗೆಯೂ ಲಾಗೂವಾಗದ ಹಲವಾರು ಉದಾಹರಣೆಗಳು ನಮ್ಮಲ್ಲಿವೆ.

ಪ್ರಗತಿಶೀಲ ಸಮಾಜದಲ್ಲಿ ಹಲವರ ಹಿತಕ್ಕಾಗಿ ಕೆಲವರು ತ್ಯಾಗ ಮಾಡುವುದು ಅನಿವಾರ್ಯವಾಗುವುದು. ಸ್ವೇಚ್ಛೆಯಿಂದ ತ್ಯಾಗಮಾಡದೆ ಹೋದರೆ, ಬಲವಂತದಿಂದಾದರೂ ಮಾಡಿಸಲೇ ಬೇಕಾಗುತ್ತದೆ. ಬಲವಂತ ತ್ಯಾಗದ ಹೆಸರೇ 'ತೆರಿಗೆ' ಎಂದರೆ ತಪ್ಪಲ್ಲ. ಶ್ರೀಮತಿ ಗಾಂಧಿಯವರು ಶ್ರೀ ಸಾಮಾನ್ಯನನ್ನು ಕರುಣಾಪೂರ್ಣ ದೃಷ್ಟಿಯಿಂದ ನೋಡುವುದು ನ್ಯಾಯ; ಜತೆಯಲ್ಲೇ ಅವರ ದೃಷ್ಟಿಯಲ್ಲಿ ಶ್ರೀ ಸಾಮಾನ್ಯೇತರರಾದವರನ್ನೂ ಮಾನವೀಯತೆಯಿಂದ ನಡೆಸಿಕೊಳ್ಳುವುದೂ ಅಗತ್ಯವೇ.

ಶ್ರೀ ಕೆ. ಕೆ. ಪೈ

ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ ಎ ಪೈ ಅವರು ಜೀವ ವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ನಿಯುಕ್ತರಾದ ಬಳಿಕ ಆ ಸ್ಥಾನಕ್ಕೆ ಯಾರು ನೇಮಕಗೊಳ್ಳುವರೆಂಬ ಕುತೂಹಲ ಎಲ್ಲರಲ್ಲೂ ಇತ್ತು. ಬ್ಯಾಂಕಿನ ಹಿರಿಯ ಅಧಿಕಾರಿಯಾಗಿ ಹಲವಾರು ವರ್ಷಗಳಿಂದಲೂ ನಿಷ್ಠೆಯ ಸೇವೆ ಸಲ್ಲಿಸಿದ್ದ ಶ್ರೀ ಕೆ.ಕೆ. ಪೈಯವರೇ ಈ ಸ್ಥಾನಕ್ಕೆ ಯೋಗ್ಯರೆಂದೂ ಸಮರ್ಥರೆಂದೂ ಜನತೆ ತಿಳಿದುಕೊಂಡಿತ್ತು. ಈಗ ಸರಕಾರವೂ ಶ್ರೀ ಕೆ. ಕೆ. ಪೈ ಅವರ ವ್ಯಕ್ತಿತ್ವವನ್ನೂ ಕಾರ್ಯದಕ್ಷತೆಯನ್ನೂ ಅರಿತುಕೊಂಡು, ಜನತೆಯ ನಿರೀಕ್ಷೆಯಂತೆ ಅವರನ್ನೇ ಬ್ಯಾಂಕಿನ ಕಸ್ಟೋಡಿಯನ್ ಆಗಿ ನೇಮಿಸಿದೆ. ಇದು ಅತ್ಯಂತ ಸ್ತುತ್ಯ ಸಂಗತಿ.

'ನವಯುಗ'ದ ಹಿತೈಷಿಗಳಲ್ಲಿ ಒಬ್ಬರಾದ ಶ್ರೀ ಕೆ. ಕೆ. ಪೈಯವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಇಪ್ಪತ್ತೇಳು ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ ಧೀಮಂತ ವ್ಯಕ್ತಿ. ಉತ್ತಮ ಆಡಳಿತ, ಅಪ್ರತಿಮ ಉತ್ಸಾಹ, ಕೈಹಿಡಿದ ಕಾರ್ಯಸಾಧನೆಗಾಗಿ ಛಲವಾದಿತನ, ಅದಮ್ಯ [illegible] ಪಟುತ್ವ— ಮೊದಲಾದ ಉತ್ಕೃಷ್ಟ[illegible]ಮ ಕಾರ್ಯಕರ್ತರಲ್ಲಿರಬೇಕಾದ ಮಹೋನ್ನತ ಗುಣಗಳು ಶ್ರೀ ಪೈಯವರಲ್ಲಿವೆ. ಬ್ಯಾಂಕು ಸರ್ವಾಂಗೀಣ ಪ್ರಗತಿ ಹೊಂದಿದ್ದರಲ್ಲಿ ಇವರ ಸೇವೆಯೂ ಪ್ರಶಂಸಾರ್ಹವಾಗಿದೆ. ಶ್ರೀ ಕೆ. ಕೆ ಪೈ ಅವರು ಬ್ಯಾಂಕಿನ ಉನ್ನತ ಅಧಿಕಾರಿಗಳಾದರೂ ತನ್ನ ಸರಳ ಸೌಜನ್ಯಕ್ಕೆ ಎರವಾಗಲಾರರು. ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗೆ ಪ್ರತಿಯೊಬ್ಬನ ಬ್ಯಾಂಕು ಸಿಂಡಿಕೇಟ್ ಬ್ಯಾಂಕಾದರೆ, ಪ್ರತಿಯೊಂದು ಸಾಮಾಜಿಕ ಚಟುವಟಿಕೆಗೆ ಪ್ರತಿಯೊಬ್ಬನ ವ್ಯಕ್ತಿ ಶ್ರೀ ಕೆ. ಕೆ. ಪೈ. ಈ ಸರಳ ನಗುಮೊಗದ ಉತ್ಸಾಹಿ ಪೈಯವರಿಗೆ 'ನವಯುಗ'ವು ಹಾರ್ದಿಕ ಅಭಿನಂದನೆಗಳನ್ನು ಅರ್ಪಿಸುತ್ತದೆ. ತನ್ನ ಹೊಸ ಹುದ್ದೆಯ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಅವರು ಸಮರ್ಥರಾಗುವರೆಂದು ಆಶಿಸುತ್ತದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ತಾಂತ್ರಿಕ ಶಿಕ್ಷಣ: ಉದ್ಯೋಗಾವಕಾಶದ ಸಮಸ್ಯೆ

ಲೇಖಕರು: ಪ್ರೊ. ವಿ. ಜಿ. ಆರ್. ವಿ. ರಾವ್
(ಕೇಂದ್ರ ಶಿಕ್ಷಣ ಸಚಿವರು)

ಭಾರತ 20ನೇ ಶತಮಾನದ ದ್ವಿತೀಯಾರ್ಧದಲ್ಲಿ ವಿರೋಧಾಭಾಸ ಪರಿಸ್ಥಿತಿ ಎದುರಿಸುತ್ತಿದೆ. ವಿಶ್ವವನ್ನು ಬದಲಿಸಿದ ಹಾಗೂ ಕೈಗಾರಿಕಾಭಿವೃದ್ಧಿ ವಿಸ್ತರಣೆಗೆ ಮೂಲ ಹೇತುವಾದ ವೈಜ್ಞಾನಿಕ—ತಾಂತ್ರಿಕ ವಿಜ್ಞಾನದ ಕ್ರಾಂತಿಗೆ ಭಾರತ ಆಕರ್ಷಿತವಾಗಿದೆ. ಇದೇ ಸಮಯದಲ್ಲಿ ಅತ್ಯುನ್ನತ ಇಂಜಿನಿಯರಿಂಗ್ ಪದವಿ ಪಡೆದಿರುವ ತಜ್ಞರಿಗೆ ಉದ್ಯೋಗ ನೀಡುವುದರಲ್ಲಿ ಭಾರತ ತೀವ್ರ ಕಷ್ಟ ಪರಿಸ್ಥಿತಿಗೀಡಾಗಿದೆ.

ಸ್ವಾತಂತ್ರ್ಯಾನಂತರ ತಾಂತ್ರಿಕ ಶಿಕ್ಷಣದ ಎಲ್ಲ ಮಟ್ಟಗಳಲ್ಲಿ ಅದ್ಭುತ ವಿಸ್ತರಣೆಯಾಗಿದೆ. 1947ರಲ್ಲಿ 3 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಂತಹ 38 ಇಂಜಿನಿಯರಿಂಗ್ ಕಾಲೇಜುಗಳಿತ್ತು. 3700 ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಂತಹ 53 ತಾಂತ್ರಿಕ ಶಾಲೆಗಳಿತ್ತು. ಇಂದು ವರ್ಷಂಪ್ರತಿ 25 ಸಾವಿರ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಪದವಿ ನೀಡುವಂತಹ 120 ಇಂಜಿನಿಯರಿಂಗ್ ಕಾಲೇಜುಗಳಿವೆ. ಅದೇ ರೀತಿ ವರ್ಷಂಪ್ರತಿ 50 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ 300 ತಾಂತ್ರಿಕ ಶಿಕ್ಷಣ ಶಾಲೆಗಳಿವೆ. ಇಂದು ಬೆಂಗಳೂರಿನಲ್ಲಿರುವ ಭಾರತ ವಿಜ್ಞಾನ ಸಂಸ್ಥೆ [illegible] ತಾಂತ್ರಿಕ [illegible] ಸ್ಥೆಗಳೊಂದಿಗೆ ಇತರ 30 [illegible] ಇಂಜಿನಿಯರಿಂಗ್ [illegible] ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನ [illegible] ನೀಡುವ ಸೌಭಾಗ್ಯವಿದೆ. ಇಂತಹ ಸಾಧನೆಯ ಬಗ್ಗೆ ಯಾವ ದೇಶವಾದರೂ ಹೆಮ್ಮೆ ಪಡುತ್ತದೆ.

ಇಂಜಿನಿಯರುಗಳ ನಿರುದ್ಯೋಗ

ಆದರೆ ಇಂದು ದುರದೃಷ್ಟವಶದಿಂದ ಅನೇಕ ಇಂಜಿನಿಯರಿಂಗ್ ಪದವೀಧರರು ನಿರುದ್ಯೋಗ ಸಮಸ್ಯೆ ಎದುರಿಸಬೇಕಾಗಿದೆ. 1965ರಲ್ಲಿ ದೇಶದಾದ್ಯಂತ 2,29,300 ಇಂಜಿನಿಯರುಗಳಿದ್ದರು. ಅವರಲ್ಲಿ ಶೇಕಡ 7ರಷ್ಟು ಮಂದಿಗೆ ಉದ್ಯೋಗ ದೊರಕಲಿಲ್ಲ. ಬೃಹತ್ ಕೈಗಾರಿಕಾ ಹಿಂಜರಿತ ಎದುರಿಸಿದ 1968ನೇ ಇಸವಿಯಲ್ಲಿ 3,32,000 ಇಂಜಿನಿಯರುಗಳಿದ್ದರು. ಆದರೆ ಪದವೀಧರರು ಮತ್ತು ಡಿಪ್ಲೋಮಾ ಪಡೆದವರ ನಿರುದ್ಯೋಗ ಪ್ರಮಾಣ ಶೇ. 17ಕ್ಕೇರಿತು. ಇಂದು ಹತ್ತು ಸಾವಿರ ಇಂಜಿನಿಯರಿಂಗ್ ಪದವೀಧರರು 46 ಸಾವಿರ ಡಿಪ್ಲೋಮಾ ಪಡೆದವರೂ ಸೂಕ್ತ ಹುದ್ದೆಗಳನ್ನು ಅನ್ವೇಷಿಸುತ್ತಿದ್ದಾರೆ.

ಪರಮ ಆದ್ಯತೆಯ ಮೇಲೆ ಪರಿಹರಿಸಬೇಕಾಗಿರುವ ಈ ಸಮಸ್ಯೆಗಾಗಿ ಕೇಂದ್ರ ಸರ್ಕಾರ ಅನೇಕ ವಿಶೇಷ ಕ್ರಮಗಳನ್ನು ಕೈಗೊಂಡಿದೆ. ವಿದ್ಯುತ್—ನೀರಾವರಿ ಯೋಜನೆಗಳು, ರಸ್ತೆಗಳಿಗೆ ಅಭಿವೃದ್ಧಿ—ಭೂಸಮೀಕ್ಷೆಯ ಪ್ರಾರಂಭಿಕ ತಕ್ಷಣ ಕಾರ್ಯ; ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳ ಕಾರ್ಯ ನಿರ್ವಹಣೆ; ಅನೇಕ ಸಂಸ್ಥೆಗಳಲ್ಲಿರುವ ಇಂಜಿನಿಯರುಗಳ ಹುದ್ದೆ ಭರ್ತಿ ಮಾಡುವಿಕೆ; ಸಂರಕ್ಷಣಾ ಪಡೆಯಲ್ಲಿ ಅಲ್ಪಾವಧಿ ಕಮಿಷನ್; ಭಾರತೀಯ ತಾಂತ್ರಿಕ ಸಮಾಲೋಚನೆ ಸೇವೆಯ ಅಭಿವೃದ್ಧಿ; ಖಾಸಗಿ ಕಂಟ್ರಾಕ್ಟರುಗಳು ಇಂಜಿನಿಯರುಗಳನ್ನು ರಚನಾ ಕಾರ್ಯಕ್ಕಾಗಿ ಇಂಜಿನಿಯರುಗಳು ಸಹಕಾರಿ ಸಂಸ್ಥೆ ರಚಿಸಲು ಉತ್ತೇಜನ. ಈ ರೀತಿ ಇಂಜಿನಿಯರುಗಳಿಗೆ ಉದ್ಯೋಗ ಕಲ್ಪಿಸಲಾಗಿದೆ.

ಇಂತಹ ಶೀಘ್ರ ನಿರ್ಣಯಗಳ ಅಗತ್ಯವನ್ನು ರಾಜ್ಯ ಸರಕಾರಗಳು ಅರಿತುಕೊಂಡು ಇಂಜಿನಿಯರುಗಳು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕ ಸ್ಥಾಪಿಸಲು ಸಹಕಾರಿ ಸಂಸ್ಥೆಗಳ ನೆರವಿಗಾಗಿ ಉತ್ಸಾಹ ಕ್ರಮ ಕೈಗೊಂಡವು. ರಾಜ್ಯ ಕೈಗಾರಿಕಾಭಿವೃದ್ಧಿ ಕಾರ್ಪೋರೇಷನ್ನುಗಳ ಮೂಲಕ ಸ್ವಂತವಾಗಿ ಸಣ್ಣ ಕೈಗಾರಿಕೆ ಆರಂಭಿಸಲು ಸಹಾಯ ಮಾಡಲಾಯಿತು. ಗುಜರಾತ್ ಕೈಗಾರಿಕಾ ಕಾರ್ಪೋರೇಷನ್ ಪ್ರತಿ ಇಂಜಿನಿಯರಿಗೂ ಸುಲಭ ದರದಲ್ಲಿ ಭೂಮಿ ಮತ್ತು ಕಾರ್ಖಾನೆಯ ಷಡ್‌ಗಳನ್ನು ನೀಡಿತು. ಮೂರು ಸಾವಿರಕ್ಕಿಂತಲೂ ಹೆಚ್ಚು ಇಂಜಿನಿಯರುಗಳಿಗೆ ವಿವಿಧ ಯೋಜನೆಗಳ ಮೂಲಕ ಸಹಾಯ ಮಾಡಲು ಮಹಾರಾಷ್ಟ್ರ ಸರಕಾರ ಯೋಜನೆ ರೂಪಿಸಿದೆ. ಈ ಕ್ರಮಗಳ ಪರಿಣಾಮವನ್ನು ಅರಿಯಲು ಇನ್ನೂ ಸಮಯವಾಗದಿದ್ದರೂ 1968ನೇ ಇಸವಿಯಲ್ಲಿ 22 ಸಾವಿರ ಇಂಜಿನಿಯರಿಂಗ್ ಪದವೀಧರರು ಮತ್ತು ಡಿಪ್ಲೋಮಾ ವಿಜೇತರು ಉದ್ಯೋಗ ಪಡೆದರು.

ಪರಿಣಾಮಕಾರಿ ವಿಧಾನಗಳು

ಈ ಪರಿಸ್ಥಿತಿ ಎದುರಿಸಲು ಶಾಶ್ವತವಾಗಿ ಕೈಗೊಳ್ಳಬೇಕಾದ ಶೀಘ್ರವಾದ ಹಾಗೂ ಪರಿಣಾಮಕಾರಿಯಾದ ವಿಧಾನಗಳೇನು? ಇಂಜಿನಿಯರುಗಳಿಗೆ ಅಲ್ಪಾವಧಿ ಸಹಾಯವನ್ನು ಹೇಗೆ ಮಾಡಬಹುದೆಂಬುದನ್ನು ಪರಿಶೀಲಿಸೋಣ. ತಮಿಳುನಾಡಿನಲ್ಲಿರುವ ಮಧುರೈ ತಾಂತ್ರಿಕ ಶಾಲೆಯ ಯಂತ್ರಾಗಾರದಲ್ಲಿರುವ ಯಂತ್ರ ಮತ್ತು ಸಾಧನೋಪಕರಣಗಳನ್ನು ಉಪಯೋಗಿಸದ ಅವಧಿಯಲ್ಲಿ ನಿರುದ್ಯೋಗಿ ಇಂಜಿನಿಯರುಗಳಿಗೆ ತಯಾರಿಕೆಗಾಗಿ ನೀಡಲಾಗುತ್ತಿದೆ. ಸ್ಥಳೀಯ ಕೈಗಾರಿಕೆಗಳಿಗೆ ಬೇಕಾಗಿರುವ ವಸ್ತುಗಳನ್ನು ತಾಂತ್ರಿಕ ಶಾಲೆಯ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ತಯಾರಿಸಲಾಗುತ್ತಿದೆ. ಈ ರೀತಿ ಸುಮಾರು 20 ಡಿಪ್ಲೋಮಾ ಪಡೆದ ತಂತ್ರಜ್ಞರು ದಿನಂಪ್ರತಿ 8—10 ರೂಪಾಯಿ ಸಂಪಾದಿಸುತ್ತಿದ್ದಾರೆ. ಇದರ ಫಲವಾಗಿ ಸ್ವತಂತ್ರವಾಗಿ ಸಣ್ಣ ಯಂತ್ರಾಗಾರಗಳನ್ನು ಸ್ಥಾಪಿಸುವ ಧೈರ್ಯ ಬಂದಿದೆ. ಈ ಪ್ರಯೋಗವನ್ನು ಎಲ್ಲ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ತಾಂತ್ರಿಕ ಶಾಲೆಗಳಿಗೆ ವಿಸ್ತರಿಸಬಹುದು. ಈ ಕೈಗಾರಿಕಾ ಚಳುವಳಿಯ ಮೂಲಕ ದೇಶದ ಆರ್ಥಿಕ ಜೀವನಕ್ಕೆ ಪುನಶ್ಚೇತನ ನೀಡಬಹುದು.

ಹಾಗಾದರೆ ನಿರುದ್ಯೋಗಿ ಇಂಜಿನಿಯರುಗಳ ಸಮಸ್ಯಾ ಪರಿಹಾರಕ್ಕೆ ದೀರ್ಘಾವಧಿ ಯೋಜನೆಯೇನು? ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶವನ್ನು ಕಡಿಮೆ ಮಾಡಬೇಕು. ಇಂಜಿನಿಯರಿಂಗ್ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕು; ನಿರ್ದಿಷ್ಟ ಕ್ಷೇತ್ರಗಳ ಕೈಗಾರಿಕಾ ಶಕ್ತಿಯ ಸಮೀಕ್ಷೆ ನಡೆಸಿ ಆ ಮೂಲಕ ವಿದ್ಯಾರ್ಥಿಗಳಿಗೆ ಸಹಾಯಮಾಡಬೇಕು.

ನಮ್ಮ ತಾಂತ್ರಿಕ ಶಾಲೆಗಳು ನೀಡುವ ತರಬೇತಿ ಕಾರ್ಯಕ್ರಮದಲ್ಲಿ ಪ್ರತ್ಯಕ್ಷಾನುಭವಕ್ಕೆ ಅವಕಾಶವಿಲ್ಲವೆಂಬ ಟೀಕೆಯಿದೆ. ತಾಂತ್ರಿಕ ಶಾಲೆಗಳು ವ್ಯಾಪಕ ಔದ್ಯೋಗಿಕ ಕಾರ್ಯಗಳಿಗೆ ಬೇಕಾಗುವ ಮಧ್ಯಮ ವರ್ಗದ ತಂತ್ರಜ್ಞರನ್ನು ಸಿದ್ಧಪಡಿಸುತ್ತಿವೆ. ಆದ್ದರಿಂದ ತಾಂತ್ರಿಕ ಶಾಲೆಗಳು ಕೈಗಾರಿಕೆಯ ಪ್ರತ್ಯಕ್ಷಾನುಭವ ಬರುವಂತೆ ಶಿಕ್ಷಣ ವಿಧಾನವನ್ನು ಬದಲಾಯಿಸಬೇಕು. ಇದರಿಂದ ತಾಂತ್ರಿಕ ಶಾಲೆಗಳ ಶಿಕ್ಷಣದಲ್ಲಿ ಕ್ರಾಂತಿಯಾಗುತ್ತದೆ.

ಮಾನವ ಶಕ್ತಿ ಅಪವ್ಯಯ

ಭಾರತದಲ್ಲಿರುವ ಶೇಕಡ 40ರಷ್ಟು ತಂತ್ರ ಕುಶಲರ ಕೆಲಸವನ್ನು ಪದವೀಧರ ಇಂಜಿನಿಯರುಗಳು ಮಾಡುತ್ತಿದ್ದಾರೆ. ಇದು ಮಾನವ ಶಕ್ತಿಯ ಅಪವ್ಯಯ. ಇದನ್ನು ಸರಿಪಡಿಸಬೇಕಾಗಿದೆ. ಮುಂದಿನ ಐದು ವರುಷಗಳ ಅವಧಿಯಲ್ಲಿ ಒಬ್ಬ ಇಂಜಿನಿಯರಿಗೆ ಮೂರು ಅಥವ ನಾಲ್ಕು ತಂತ್ರ ಕುಶಲರ ಪ್ರಮಾಣವಿರುವಂತೆ ನೋಡಿಕೊಳ್ಳಬೇಕಾಗಿದೆ. ಈ ಪ್ರಮಾಣ ಬದಲಾವಣೆಯನ್ನು ಹೇಗೆ ಮಾಡುವುದು? ಪರಸ್ಪರ ಹತ್ತಿರದಲ್ಲಿರುವ ತಾಂತ್ರಿಕ ಶಾಲೆ

ಸಿಂಡಿಕೇಟ್ ಬ್ಯಾಂಕ್

ನೆರವಿನಿಂದ ಕೃಷಿ ಅಭಿವೃದ್ಧಿ

ಸಿಂಡಿಕೇಟ್ ಬ್ಯಾಂಕು ಬ್ಯಾಂಕಿಂಗ್ ಸೇವೆಯಲ್ಲಿ ಹಲವು ಅದ್ವಿತೀಯ ವಿಧಾನಗಳನ್ನು ವಿಸ್ತರಿಸುವುದರಲ್ಲಿ ಪ್ರಪ್ರಥಮನಾಗಿದೆ. ಮತ್ತು ಅವುಗಳಲ್ಲಿ ಒಂದಾದ ಕೃಷಿಗೆ ಹಣಕಾಸಿನ ನೆರವನ್ನು 1961ರಲ್ಲಿಯೇ ಪ್ರಾರಂಭಿಸಿದೆ.

ಸಿಂಡಿಕೇಟ್ ಬ್ಯಾಂಕು ರೈತರ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಮಧ್ಯಮ ಹಾಗೂ ಅಲ್ಪಾವಧಿಯ ಸಾಲಗಳನ್ನು ನೀಡುತ್ತದೆ. ಈ ಸಾಲಗಳಿಂದ ಉತ್ತಮ ಬೀಜಗಳು, ರಾಸಾಯನಿಕ ಗೊಬ್ಬರಗಳು, ಪಂಪ್‌ಸೆಟ್ಟುಗಳು, ಪವರ್ ಟಿಲ್ಲರ್, ಕ್ರಿಮಿನಾಶಕಗಳನ್ನು ಮತ್ತು ಟ್ರಾಕ್ಟರುಗಳನ್ನು ಪಡೆಕೊಳ್ಳಬಹುದಾಗಿದೆ. ಕೃಷಿ ಆರ್ಥಿಕ ಖಾತೆಯ ಮತ್ತು ಅದರ ಕೃಷಿ ಪ್ರತಿನಿಧಿಗಳ ಮೂಲಕ ತಾಂತ್ರಿಕ ಸಲಹೆ ಮತ್ತು 'ಅಗ್ರಿಕಾರ್ಡಿನ' ಮೂಲಕ ಪ್ರತ್ಯೇಕ ಸಹಾಯವನ್ನು ಪಡೆಯಬಹುದು.

1969ನೆ ಇಸವಿಯಲ್ಲಿ ಕೃಷಿಗಾಗಿ ಕೊಟ್ಟ ಮುಂಗಡಗಳು 56,498 ಲೆಕ್ಕಗಳಲ್ಲಿ ರೂ. 12·5 ಕೋಟಿಗೂ ಮಿಕ್ಕಿರುವುದು.

ಸಿಂಡಿಕೇಟ್ ಬ್ಯಾಂಕು 1925ರಲ್ಲಿ ಸ್ಥಾಪನೆಗೊಂಡಂದಿನಿಂದ ಯಾವ ಮನುಷ್ಯನೂ ಬ್ಯಾಂಕ್ ಲೆಕ್ಕಕ್ಕೆ ಸಣ್ಣವನಲ್ಲ ಎಂಬ ಅದರ ಧ್ಯೇಯಕ್ಕನುಗುಣವಾಗಿ ಸಾಮಾಜಿಕ ಉದ್ದೇಶಗಳನ್ನು ಮುಂದಿಟ್ಟುಕೊಂಡು ದೇಶಸೇವೆ ಗೈದಿದೆ.

ಈಗ 362 ಶಾಖೆಗಳ ಮೂಲಕ ರಾಷ್ಟ್ರಸೇವೆ ಸಲ್ಲಿಸುತ್ತಿದೆ

ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗೆ
ಪ್ರತಿಯೊಬ್ಬನ ಬ್ಯಾಂಕ್

FAITHFUL SB

ಸಿಂಡಿಕೇಟ್ ಬ್ಯಾಂಕ್

(ಭಾರತ ಸರಕಾರದ ನಿರ್ವಹಣೆ)

ಪ್ರಧಾನ ಕಚೇರಿ:
ಮಣಿಪಾಲ

ಟಿ. ಎ. ಪೈ
ಕಸ್ಟೋಡಿಯನ್

ಮತ್ತು ಕೈಗಾರಿಕೆಯು ನಡುವೆ ಸಹಕಾರ ಏರ್ಪಟ್ಟು ಕೈಗಾರಿಕೆಗೆ ಅವಶ್ಯವಾದಂತಹ ತಂತ್ರಜ್ಞರನ್ನು ಒದಗಿಸ ಬೇಕು. ತಾಂತ್ರಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಹೊಣೆಗಾರಿಕೆ ಏರ್ಪಡಬೇಕು. ಪ್ರತ್ಯಕ್ಷ ತರಬೇತಿ ತಾಂತ್ರಿಕ ಶಾಲೆ ಶಿಕ್ಷಣದ ಅಂಗವಾದರೆ ಮಾತ್ರ ಕೈಗಾರಿಕೆಗೆ ಅನುರೂಪವಾದ ತಂತ್ರಜ್ಞರನ್ನು ಪಡೆಯಬಹುದು.

ಅಭಿವೃದ್ಧಿ ಹೊಂದುತ್ತಿರುವ ಸಮಾಜಕ್ಕೆ ಕಾಲ ಅತಿ ಮುಖ್ಯವಾದುದು. ಇತರರು 50 ವರ್ಷದಲ್ಲಿ ಸಾಧಿಸಿದುದನ್ನು ನಾವು ಐದು ವರ್ಷದಲ್ಲಿ ಮಾಡಬೇಕಾಗುತ್ತದೆ. ಯಶಸ್ವಿ ಹಸಿರು ಕ್ರಾಂತಿಯ ಫಲವಾಗಿ ಕೇಂದ್ರ ಕೃಷಿ ಶಾಖೆಯು ಗ್ರಾಮಾಂತರ ಪ್ರದೇಶದಲ್ಲಿ 2000 ಸೇವಾ ಕೇಂದ್ರಗಳನ್ನು ತೆರೆಯುವ ಯೋಜನೆ ಹೊಂದಿದೆ. ಇಲ್ಲಿ ಇಂಜನಿಯರುಗಳು ಮತ್ತು ಡಿಪ್ಲೋಮಾ ಪಡೆದವರಿಗೆ ಉದ್ಯೋಗಾವಕಾಶ ದೊರಕುತ್ತದೆ.

ಹಸಿರುಕ್ರಾಂತಿ ನಡೆದ ಕ್ಷೇತ್ರದ ಯೋಜನೆಯಂತೆ ದೇಶದಾದ್ಯಂತ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲೂ ವಿಸ್ತೃತ ಕಾರ್ಯ ನಡೆಸಬಹುದು. ಮುಂದಿನ ನಾಲ್ಕು ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ, ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯ ಕೈಗೊಳ್ಳಬಹುದು. ಈ ಕಾರ್ಯಕ್ರಮ ಆರಂಭಿಸಲು ಆರ್ಥಿಕ ಸ್ಥಿತಿ ಅನುಕೂಲಕಾರಿಯಾಗಿದೆ. ಲೋಕೋಪಯೋಗಿ ಕಾರ್ಯದ ವೆಚ್ಚದಿಂದ ಹಣದುಬ್ಬರವಾಗುವ ಸ್ಥಿತಿಯೂ 2 — 3 ವರ್ಷದಿಂದೀಚೆಗೆ ಸುಧಾರಿಸಿದೆ. ಈ ರೀತಿ ದೇಶದ ತಾಂತ್ರಿಕ ಸಂಪನ್ಮೂಲವನ್ನು ಚೆನ್ನಾಗಿ ಉಪಯೋಗಿಸಿಕೊಂಡರೆ ಹಸಿರು ಕ್ರಾಂತಿಯ ರೀತಿಯಲ್ಲೇ ಕೈಗಾರಿಕಾ ಕ್ರಾಂತಿ ಸಂಭವಿಸುತ್ತದೆ.

ಉತ್ಪಾದನೆ ಹೆಚ್ಚಳ

ಇಂಜಿನಿಯರುಗಳಿಗೆ ಯಕ್ತಿಚಿ ಗಂತೆ ಹುದ್ದೆ ಸೃಷ್ಟಿಸಲಾಗುವುದಿಲ್ಲ. ಇದು ಆರ್ಥಿಕಾಭಿವೃದ್ಧಿ ಅವಲಂಬಿಸಿದೆ. ಆದ್ದರಿಂದ ಉತ್ಪಾದನೆ ಹೆಚ್ಚಿಸಬೇಕು. ಇದರಿಂದ ಮರುಬಂಡವಾಳ ಹೂಡಿಕೆ ಸಾಧ್ಯವಾಗುತ್ತದೆ; ಉದ್ಯೋಗಾವಕಾಶ ಹೆಚ್ಚುತ್ತದೆ. ಈ ದಿಸೆಯಲ್ಲಿ ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ ಸಂಸ್ಥೆಗಳು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಭಾರತೀಯ ಜನತೆಗೆ ಅನುಭವ ಅವಕಾಶ ಹೆಚ್ಚಿಸಬಹುದಾಗಿದೆ.

ವಿಶ್ವದ ಸಮೃದ್ಧಿಪರ ದೇಶಗಳಲ್ಲಿ ಸುಖ, ಸಂಸ್ಕೃತಿ, ಸಂಪತ್ತುಗಳಿವೆ. ದೇಶ ಜನತೆಯು ವಿಶೇಷ ದುಡಿಮೆಯಿಲ್ಲದೆ ಸಂಪದಭಿವೃದ್ಧಿ ಹೊಂದಿರುವ ದೇಶವನ್ನು ನಾನು ನೋಡಿಲ್ಲ. ವಿಶ್ವವಿದ್ಯಾಲಯಗಳು, ತಾಂತ್ರಿಕ ಸಂಸ್ಥೆಗಳು ಮತ್ತು ಕೈಗಾರಿಕೆಗಳ ಸಹಕಾರ ಹಾಗೂ ಕ್ರಿಯಾಶಾಲಿ ಕಾರ್ಯಕರಿಂದ ಉತ್ತಮ ಇಂಜಿನಿಯರುಗಳ ಸೃಷ್ಟಿಯಾಗುವುದಲ್ಲದೆ ಅವರಿಗೆ ಯೋಗ್ಯ ಉದ್ಯೋಗವೂ ದೊರಕುತ್ತದೆ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಗುರುನಾನಕ್ ಮತ್ತು ಭಕ್ತಿ ಮಾರ್ಗ

ಲೇಖಕರು: ಡಾ। ತರನ್ ಸಿಂಗ್

ಗುರುನಾನಕರು ಭಕ್ತ, ಸಂತ, ಸಾಧು, ಅಥವ ಪೀರ್ ಅಷ್ಟೇ ಅಲ್ಲ ಅವರು ಇವುಗಳೆಲ್ಲಕ್ಕೂ ಹೆಚ್ಚಿನ "ಗುರು" ಆಗಿದ್ದರು. ಗುರುವಿನಲ್ಲಿ ಸಾಮಾನ್ಯವಾಗಿ ಈ ಮೇಲಿನ ಎಲ್ಲ ಗುಣಗಳೂ ಇರುತ್ತವೆ. ಆಧ್ಯಾತ್ಮಿಕ ಶಕ್ತಿಯನ್ನು ದೇವರಿಂದ ಗುರು ನೇರವಾಗಿಯೇ ಪಡೆಯುತ್ತಾನೆ. ಆತ ದೇವರೇ ಈ ಲೋಕದಲ್ಲಿ ನೇಮಕ ಮಾಡುವ ವ್ಯಕ್ತಿಯಾಗಿರುತ್ತಾನೆ. ಧರ್ಮಶಾಸ್ತ್ರಜ್ಞರಂತೆ ಆತ ವಾದಮಾಡುವುದಿಲ್ಲ, ಆತನಿಗೆ ಯಾವ ಧಾರ್ಮಿಕ ಶಿಕ್ಷಕನಿಂದಾಗಲೀ ಶಿಕ್ಷಣ ದೊರೆತಿರುವುದಿಲ್ಲ. ಅಥವಾ ಯಾವ ಸಂತನಿಂದಾಗಲಿ ಆತನು ದೀಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ಗುರು ಎಂದೂ ಸಂತ ಅಥವಾ ಭಕ್ತರಂತೆ ಪ್ರಾಚೀನ ಭಾರತದ ಧರ್ಮಶಾಸ್ತ್ರಗಳಿಗೆ ಹೆಚ್ಚಿನ ಗಮನ ನೀಡುವುದಿಲ್ಲ. ಗುರು ನಾನಕರ ವಾಣಿಯೇ ಒಂದು ಧರ್ಮಗ್ರಂಥ ನಾನಕರು ಧಾರ್ಮಿಕ ಚಳುವಳಿಯ ಸುಧಾರಣೆಯನ್ನು ಮಾಡಲಿಲ್ಲ ಅದಕ್ಕಿಂತಲೂ ಹೆಚ್ಚಿನ ಆಂದೋಳನವನ್ನು ಎಬ್ಬಿಸಿದರು. ಹೊಸ ಸಂದೇಶಗಳನ್ನು ನೀಡಿದರು.

ನಾನಕರು ಹಳೆಯ ಧಾರ್ಮಿಕ ಸಿದ್ಧಾಂತಗಳಲ್ಲಿ ಕೆಲವನ್ನು ತಿರಸ್ಕರಿಸಿದರು. ಮತ್ತೆ ಕೆಲವು ಸಿದ್ಧಾಂತಗಳನ್ನು ಒಪ್ಪಿದರು. ಕೆಲವು ಸಿದ್ಧಾಂತಗಳನ್ನು ಮಾರ್ಪಡಿಸಿದರು. ಅವರು ವೇದ ಉಪನಿಷತ್ತುಗಳನ್ನು ತಿರಸ್ಕರಿಸಿದಾಗ್ಯೂ ಈ ಪೂರ್ವ ಗ್ರಂಥಗಳ ಬಗ್ಗೆ ಅವರಿಗೆ ಗೌರವವಿತ್ತು. ಬಹು ದೇವತಾರಾಧನೆಯನ್ನು ಸಹ ಅವರು ಒಪ್ಪಲಿಲ್ಲ. ಆದರೆ ಬೇರೆ ಬೇರೆ ರೂಪಗಳ ದೇವರು ಬೇರೆ ಬೇರೆ ಕರ್ತವ್ಯ ನಿರ್ವಹಿಸುತ್ತಿರುವವನೆಂಬುದರ ಬಗ್ಗೆ ಅವರಿಗೆ ನಂಬಿಕೆ ಇತ್ತು. ದೇವರು ನಿತ್ಯ ಆತನೇ ಸೃಷ್ಟಿಕರ್ತ; ಆತನು ಸರ್ವವ್ಯಾಪಿ. ಆತನು ನಿರ್ಭಯ, ಆತನೇ ಕಾಲಾತೀತ. ಆತನಿಗೆ ಹುಟ್ಟು ಸಾವುಗಳೆಂಬುದು ಇಲ್ಲ; ಆತನೇ ವಿಶ್ವದ ಬೆಳಕು ಎಂಬುದಾಗಿ ನಾನಕರು ಹೇಳಿದ್ದಾರೆ.

ಭಕ್ತಿಮಾರ್ಗದ ಎಲ್ಲ ಸಂತರು ದೇವರ ಅವತಾರ ಪುರುಷನೆಂಬುದನ್ನು ಒಂದಲ್ಲ ಒಂದು ರೀತಿ ಒಪ್ಪಿಕೊಂಡಿದ್ದಾರೆ. ಸರ್ವಶ್ರೇಷ್ಠನಾದ ದೇವರಿಗೆ ಜನನವಿಲ್ಲ. ಆದರೂ ಆತನು ಸ್ವಯಂಭೂ ಎಂದರು. ಮಾನವ ಮತ್ತು ದೇವರ ನಡುವೆ ನೇರವಾದ ಸಂಪರ್ಕವನ್ನು ಕಲ್ಪಿಸಲು ನಾನಕರು ಆಶಿಸಿದ್ದರು. ದೇವರ ಮತ್ತು ಮಾನವರ ಮಧ್ಯೆ ಇರುವ ಮಧ್ಯವರ್ತಿಗಳನ್ನು ಹೋಗಲಾಡಿಸುವುದು ಅವರ ಹೆಬ್ಬಯಕೆಯಾಗಿತ್ತು. ಬುದ್ಧ ಮತ್ತು ಮಹಾವೀರರಂತೆಯೇ ನಾನಕರೂ ಜಾತಿಗಳ ಪದ್ಧತಿ ವಿರುದ್ಧ ಉಪದೇಶಿಸಿದರು. ಜಾತ್ಯತೀತ ಸಮಾಜದ ಸೃಷ್ಟಿಯೇ ಅವರ ಗುರಿಯಾಗಿತ್ತು. ಸರಳ ರೀತಿಯ ಉಪದೇಶಗಳಿಗೆ ಅವರು ಹೆಚ್ಚಿನ ಮಹತ್ವ ನೀಡಿದರು.

ಗುರುನಾನಕರ ದೃಷ್ಟಿಯಲ್ಲಿ ಭಕ್ತಿ, ಕರ್ಮ ಮತ್ತು ಜ್ಞಾನ ಇವು ಬೇರೆ ಬೇರೆಯಾಗಿರಲಿಲ್ಲ. ಪೂರ್ಣ ಮನುಷ್ಯನೆನಿಸಿಕೊಳ್ಳಲು ಇವು ಮೂರು ಅಗತ್ಯವೆಂದರು. ಭಕ್ತಿಯಿಂದಾಗಿ ಕರ್ಮ ಮತ್ತು ಜ್ಞಾನ ವೃದ್ಧಿಯಾಗುತ್ತಾದರೂ ಅದಕ್ಕೆ ಸಾಕಷ್ಟು ಆದ್ಯತೆ ನೀಡಬೇಕೆಂದು ನಾನಕರು ತಿಳಿಸಿದ್ದಾರೆ. ಪ್ರತಿಯೊಬ್ಬ ಮಾನವನೂ ಭಕ್ತಿ, ಕರ್ಮ, ಮತ್ತು ಜ್ಞಾನ ಇವು ಮೂರರ. ಸರಿಸಮವಾಗಿ ಬೆಳೆಸಿಕೊಳ್ಳಬೇಕು. ಸತ್ಯವನ್ನು ಆತ ತಿಳಿಯಬೇಕು. ಸತ್ಯದಿಂದಲೇ ಜೀವನ ನಡೆಸಬೇಕೆಂದರು.

ಗುರುನಾನಕರ ಉಪದೇಶಗಳು ಇಡೀ ಭಾರತದ ಮೂಲೆ ಮೂಲೆಯಲ್ಲಿ ಅಷ್ಟೇ ಅಲ್ಲದೆ ದೇಶದ ಹೊರಗೂ ಹರಡಿವೆ.

ಮನೆ-ಮದ್ದು

ಗೃಹವೈದ್ಯ — ರೂ.2 . 00

ಪ್ರತಿಯೊಬ್ಬರೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 . 50

ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2.00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ

ರಖಂ ಪ್ರತಿಗಳಿಗೆ ರಿಯಾಯತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

Statement about ownership and other particulars about Newspaper: NAVAYUGA

FORM IV (Rule 8)

1. *Place of Publication*	...	UDIPI
2. *Periodicity of the Publication*	...	WEEKLY
3. *Printer's Name*	...	K. H. SHETTY
Nationality	...	INDIAN
Address	...	Palukote, Udipi (S. K.)
4. *Publisher's Name*	...	K. H. SHETTY
Nationality	...	INDIAN
Address	...	Palukote, Udipi (S. K.)
5. *Editor's Name*	...	K. H. SHETTY
Nationality	...	INDIAN
Address	...	Palukote, Udipi (S. K.)
6. *Name and addresses of individuals who own the Newspaper and partners or shareholders holding more than one percent of the total capital.*		K. H. SHETTY Palukote, Udipi (S. K.) (Prop.)

I, K. H. Shetty, hereby declare that the particulars given above are true to the best of my knowledge and belief.

(*Sd.*) K. H. SHETTY
Signature of Publisher.

Date 2—3—1970.

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms. Courteous service.

Attached bath rooms with running hot and cold water.

Telephone attached rooms.

ಟಿ. ಎ. ಪೈ ಅವರಿಗೆ ವಿದಾಯ ಸತ್ಕಾರ

ಜೀವವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಟಿ. ಎ. ಪೈಯವರನ್ನು ಮಣಿಪಾಲದಲ್ಲಿ ಸಿಂಡಿಕೇಟ್ ಬ್ಯಾಂಕಿನ ಬೇರೆ ಬೇರೆ ಶಾಖೆಗಳ ನೌಕರರು ತಾ. 26-2-70ರಂದು ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಸತ್ಕರಿಸಿ ವಿದಾಯ ಬಯಸಿದರು. ಶ್ರೀ ಪೈಯವರ ಮುಂದಾಳುತನ ಉತ್ತಮ ಮಾರ್ಗದರ್ಶನ, ಸದ್ಗುಣಗಳನ್ನು ನೆನಪಿಗೆ ತಂದುಕೊಳ್ಳಲಾಯಿತು. ಶ್ರೀ ಎಚ್. ಎನ್. ಪೈಯವರು ಸ್ವಾಗತಿಸಿದರು. ಶ್ರೀ ಎಚ್. ಎನ್. ಕಾಮತರು ಬ್ಯಾಂಕಿನ ನೌಕರರ ಪರವಾಗಿ ಮಾನಪತ್ರವನ್ನರ್ಪಿಸಿದರು. ಶ್ರೀ ಕೆ. ಕೆ. ಪೈಯವರು ನೌಕರ ವರ್ಗದ ಪ್ರೀತಿಯ ಕಾಣಿಕೆಯಾಗಿ ಗಂಧದ ವಿಗ್ರಹವನ್ನು ಅರ್ಪಿಸಿದರು. ಶ್ರೀಗಳಾದ ಎಚ್. ಎನ್. ರಾವ್, ಎಚ್. ಡಿ. ಎಸ್. ಪೈ, ಪಿ. ಪಿ. ನಾಯರ್, ಕೆ. ಸಿ. ಮಲ್ಯ, ಕೆ. ಆರ್. ಪ್ರಸಾದ್, ವಿ. ನಾರಾಯಣನ್, ಕೆ. ಜಿ. ಕಾಮತ್ ಮೊದಲಾದವರು ಮಾತನಾಡಿ ಶ್ರೀ ಪೈಯವರ ವಿಶಿಷ್ಟ ಗುಣಗಳನ್ನು ಕೊಂಡಾಡಿ ಪ್ರಶಂಸೆ ಮಾಡಿದರು.

ಶ್ರೀ ಟಿ. ಎ. ಪೈಯವರು ತಮ್ಮ ಭಾಷಣದಲ್ಲಿ ನಿಮ್ಮೊಡನಿದ್ದ ನಾನು ಈಗ ನಿಮ್ಮನ್ನೆಲ್ಲ ಬಿಟ್ಟು ಹೋಗಬೇಕಾಗಿದೆ. ಆದೂ ನಾನು ಬಯಸದೇ ಇದ್ದ ಹುದ್ದೆಯನ್ನು ನಿರ್ವಹಿಸುವುದಕ್ಕಾಗಿ, ಎಂದು ಹೇಳಿ ಬ್ಯಾಂಕಿನ ಬೆಳವಣಿಗೆಯ ರೀತಿನೀತಿಯನ್ನು ಗಮನಿಸಿಕೊಂಡು ಜೆಚ್ಚಾಗಿ ದುಡಿಯಬೇಕೆಂದು ಕರೆ ಕೊಟ್ಟರು. ಶ್ರೀ ಕೆ. ಕೆ. ಪೈಯವರು ಶ್ರೀ ಟಿ. ಎ. ಪೈಯವರ ಆದರ್ಶಗಳನ್ನು ಶ್ಲಾಘಿಸಿ ಅವರಿಗೆ ಶುಭ ಕೋರಿದರು. ಶ್ರೀ ಜಿ. ಎ. ರೇಗೋರವರು ವಂದನೆಗಳನ್ನರ್ಪಿಸಿದರು.

ಟಿ. ಎ. ಪೈ ಅವರಿಗೆ ನಾಗರಿಕ ಸನ್ಮಾನ

ಉಡುಪಿಯ ವಿಕ್ಟೋರಿಯಾ ಜ್ಯುಬಿಲೀ ಯೂತ್ ಯೂನಿಯನ್ ಕ್ಲಬ್ಬಿನ ಸಭಾಂಗಣದಲ್ಲಿ ತಾ. 21-2-70ರಂದು ಜೀವ ವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ನಿಯೋಜಿತರಾದ ಶ್ರೀ ಟಿ. ಎ. ಪೈ ಅವರಿಗೆ ನಗರ ಸಭೆಯ ವತಿಯಿಂದ ನಾಗರಿಕ ಸನ್ಮಾನವಿತ್ತು ಗೌರವಿಸಲಾಯಿತು. ಸನ್ಮಾನ ಪತ್ರ ಹಾಗೂ ಕೆಲವರು ತಮ್ಮ ಉಪನ್ಯಾಸಗಳಲ್ಲಿ ಹೇಳಿದ ವಿಷಯಗಳಿಗೆ ಶ್ರೀ ಪೈಯವರು ಉತ್ತರ ರೂಪವಾಗಿ ಮಾತನಾಡುತ್ತಾ ಎಲ್. ಐ. ಸಿ.ಯ ಮುಂದೆ ಬಿಡಿಸಲಾರದ ಹಲವು ಸಮಸ್ಯೆಗಳಿವೆ. ಈ ಸಮಸ್ಯೆಗಳ ನಿವಾರಣೆಗಾಗಿ ರಾಷ್ಟ್ರದ ಹಿತದೃಷ್ಟಿಯಿಂದ ದುಡಿದರೆ ಎಲ್. ಐ. ಸಿ.ಯು ಸಮರ್ಥವಾಗುತ್ತದೆ. ನೌಕರರಿಗೆ ಬೋನಸ್, ವಿಮಾ ಏಜಂಟರಿಗೆ ಕಮಿಶನ್ ಹೆಚ್ಚಿಸುವುದೇ ಮೊದಲಾದ ವಿಷಯಗಳ ಕಡೆಗೆ ಅದರ ಲಕ್ಷ್ಯ ಮಾತ್ರ ಹಣ ಹಾವತಿಯ ಕುರಿತು ವಿಶೇಷ ಗಮನ ಕೊಡಬೇಕಾಗಿದೆ ಎಂದರು. ರಾಷ್ಟ್ರದ ಪ್ರಗತಿ ಮುಖ್ಯವಲ್ಲದೇ, ಖಾಸಗೀ ಹಾಗೂ ಸರಕಾರೀ ಕ್ಷೇತ್ರವೆಂಬ ಭೇದವೇನೂ ಇಲ್ಲ. ಜನರಿಂದ ಅಸಾಧ್ಯವಾದ ಜಟಿಲ ಕೆಲಸಗಳಿಗೆ ಯಂತ್ರಗಳನ್ನು ಉಪಯೋಗಿಸದೇ ಸಾಧ್ಯವಿಲ್ಲ ಎಂದವರು ನುಡಿದರು. ಉಡುಪಿಯ ಹಲವಾರು ಸಂಘ ಸಂಸ್ಥೆಗಳ ಕಡೆಯಿಂದ ಶ್ರೀ ಪೈ ಅವರಿಗೆ ಹಾರಗಳನ್ನರ್ಪಿಸಲಾಯಿತು.

ಟಿ. ಎ. ಪೈ ಅವರಿಗೆ ಮಧ್ವರಾಜರ ಭೋಜನ ಸತ್ಕಾರ

ಮಣಿಪಾಲ, ಜೀವವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ನೇಮಕ ಹೊಂದಿದ ಶ್ರೀ ಟಿ. ಎ. ಪೈಯವರ ಗೌರವಾರ್ಥವಾಗಿ ತಾ. 23-2-70ರಂದು ಮಣಿಪಾಲದಲ್ಲಿ ಶ್ರೀ ಎಂ. ಮಧ್ವರಾಜರು ಭೋಜನ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ತನ್ನ ಸಾಮಾಜಿಕ ಹಾಗೂ ಉದ್ಯಮ ಕ್ಷೇತ್ರದ ಪ್ರಗತಿಗೆ ಶ್ರೀ ಪೈ ಮತ್ತು ಡಾ|| ಪೈಯವರ ಬೆಂಬಲವೇ ಮೂಲವೆಂದ ಶ್ರೀ ಮಧ್ವರಾಜರು ಶ್ರೀ ಪೈಯವರ ಕಾರ್ಯವಿಧಾನಗಳಿಂದ ಜಿಲ್ಲೆ ಲಾಭ ಹೊಂದಿದೆ. ಇದೀಗ ಅವರ ಮೇಲೆ ಹಿರಿಯ ಜವಾಬ್ದಾರಿಯನ್ನು ದೇಶದ ನಾಯಕರು ಹೊರಿಸಿದ್ದಾರೆ ಎಂದರು. ಶ್ರೀ ಟಿ. ಎ. ಪೈಯವರು ತನ್ನ ಭಾಷಣದಲ್ಲಿ ಶ್ರೀ ಮಧ್ವರಾಜರು ಮತ್ಸ್ಯೋದ್ಯಮದಲ್ಲಿ ಕ್ರಾಂತಿ ಹಾಗೂ ಹೊಸ ದಾಖಲೆ ಸ್ಥಾಪಿಸಿದ್ದಾರೆ. ನಾವೆಲ್ಲರೂ ಬೃಹತ್ ಪ್ರಗತಿಗಾಗಿ ಪ್ರಯತ್ನಿಸಬೇಕು ನನ್ನ ಹೊಸ ಜವಾಬ್ದಾರಿಯನ್ನು ಉನ್ನತ ರೀತಿಯಲ್ಲಿ ನಿರ್ವಹಿಸಲು ಶ್ರಮಿಸುವುದಾಗಿ ಹೇಳಿದರು. ಡಾ|| ಟಿ. ಎಮ್. ಎ. ಪೈಯವರು ತಮ್ಮ ಭಾಷಣದಲ್ಲಿ ಶ್ರೀ ಟಿ. ಎ. ಪೈಯವರಿಂದ ಜೀವ ವಿಮಾ ಕಾರ್ಪೊರೇಶನಿಗೆ ನವ ಚೈತನ್ಯವುಂಟಾಗಲಿ ಎಂದು ಹಾರೈಸಿ ಶ್ರೀ ಮಧ್ವರಾಜರ ಕಾರ್ಯ ಪಟುತ್ವವನ್ನು ಕೊಂಡಾಡಿದರು. ಶ್ರೀ ಎಂ. ಕೃಷ್ಣರಾಜರು ಧನ್ಯವಾದಗಳನ್ನರ್ಪಿಸಿದರು.

ಕಲ್ಯಾಣ ಕಲಾರಂಗಮಂಟಪದ ಉದ್ಘಾಟನೆ

ಕಾರ್ಕಳ, ಫೆ. 26: ದಕ್ಷ ಹೋಟೆಲ್ ಉದ್ಯಮಿಗಳಾದ ಶ್ರೀ ಸದಾನಂದ ಕಾಮತರು ನೂತನವಾಗಿ ಕಟ್ಟಿಸಿದ ಪ್ರಕಾಶ್ ಹೋಟೆಲ್ ಇದರ ಕಲ್ಯಾಣ ಕಲಾರಂಗಮಂಟಪವು ತಾ. 25-2-70ರಂದು ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಎಡ್ವೊಕೇಟ್ ಶ್ರೀ ಕೆ. ವಿ. ಕಾಮತರು ವಹಿಸಿದ್ದರು.

ಮರುದಿನ ನಗರದ ಅತ್ಯಾಧುನಿಕ ಹೋಟೆಲ್ ದ್ವಾರಕಾವನ್ನು ತಾಲೂಕ್ ಬೋರ್ಡ್ ಅಧ್ಯಕ್ಷ ಎಡ್ವೊಕೇಟ್ ಶ್ರೀ ಎಸ್. ಮೋಹನ್‌ದಾಸ್ ಅಡ್ಯಂತಾಯರು ಶ್ರೀ ಎಸ್. ಧರ್ಮಸಾಮ್ರಾಜ್ಯರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಮಾಲಕ ಶ್ರೀ ಸದಾನಂದ ಕಾಮತರ ಸಾಹಸೋದ್ಯಮವು ಶ್ಲಾಘನೀಯವಾಗಿದೆ.

ಕಿದಿಯೂರಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು:

ಕಿದಿಯೂರು, ಉಡುಪಿ, 3: ಶ್ರೀ ವಿದ್ಯಾಸಮುದ್ರ ತೀರ್ಥ ಹೈಸ್ಕೂಲು ಮತ್ತು ಶ್ರೀ ವಿದ್ಯಾಸಮುದ್ರ ತೀರ್ಥ ಸೀನಿಯರ್ ಪ್ರೈಮರಿ ಶಾಲೆಗಳ ಜಂಟಿ ವಾರ್ಷಿಕೋತ್ಸವವು ತಾ. 21-2-70ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಶ್ರೀಧರ ಭಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಉಭಯ ಶಾಲೆಗಳ ಕರೆಸ್ಪಾಂಡೆಂಟ್ ಶ್ರೀ ಎ. ಜಿ. ಅಲ್ಸೆಯವರು ಸ್ವಾಗತ ಭಾಷಣ ಮಾಡಿದರು. ಹೈಸ್ಕೂಲಿನ ಮತ್ತು ಸೀನಿಯರ್ ಪ್ರೈಮರಿ ಶಾಲೆಗಳ ಮುಖ್ಯೋಪಾಧ್ಯಾಯರುಗಳಾದ ಶ್ರೀ ಬಿ. ಎ. ಸಾಮಕ್ ಮತ್ತು ಶ್ರೀ ಕೆ. ಕೆ. ತಂತ್ರಿಗಳು ಉಭಯ ಶಾಲೆಗಳ ವರದಿವಾಚನಗೈದರು. ಶ್ರೀ ಸಿ. ಅಪ್ಪಾಜಿರಾಯರು ಪ್ರಶಸ್ತಿ ವಾಚನಗೈದರು. ದಿವಂಗತ ರಾಷ್ಟ್ರಾಧ್ಯಕ್ಷ ಶ್ರೀ ಜಾಕೀರ್ ಹುಸೇನರ ಮತ್ತು ಇಂದಿರಾ ಗಾಂಧಿಯವರ ಭಾವ ಚಿತ್ರಗಳನ್ನು ಶ್ರೀ ಸಿ. ಶ್ರೀಪತಿರಾಯರು ಅನಾವರಣಗೈದು ಶುಭ ಕೋರಿದರು. ಶ್ರೀ ಬಿ. ರಾಮಚಂದ್ರ ರಾಯರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು. ಉಭಯ ಶಾಲೆಗಳ ಆಡಳಿತದಾರ ಮತ್ತು ಸಂಸ್ಥೆಯ ಕಾರ್ಯಾಧ್ಯಕ್ಷ ಶ್ರೀ ಕಾಣಿಯೂರು ಮಠದ ಶ್ರೀ ಶ್ರೀ ವಿದ್ಯಾವಾರಿಧಿತೀರ್ಥ ಶ್ರೀ ಪಾದಂಗಳವರು ತಮ್ಮ ಅನುಗ್ರಹ ಭಾಷಣದಲ್ಲಿ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಸಾರ್ವಜನಿಕರ, ಸರಕಾರದ ಮತ್ತು ವಿದ್ಯಾಇಲಾಖೆಯ ತನು ಮನ ಧನಗಳ ಸಹಾಯವನ್ನು ಕೋರಿದರು. ಜಿಲ್ಲಾ ವಿದ್ಯಾಧಿಕಾರಿಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಖಾಸಗಿ ಆಡಳಿತೆಯ ಸಂಸ್ಥೆಗಳಿಗೆ ಸರಕಾರಿ ನಿಯಮಗಳನ್ವಯ ದೊರಕುವ ಸಹಾಯ ಸವಲತ್ತುಗಳನ್ನು ವಿದ್ಯಾಸಂಸ್ಥೆಗೆ ದೊರಕಿಸುವ ಭರವಸೆಯೊಂದಿಗೆ ಸಾರ್ವಜನಿಕ ಸಹಾಯ ಸಹಕಾರಗಳ ವಿನಾ ಶಿಕ್ಷಣದ ಸಂಪೂರ್ಣ ವೆಚ್ಚವನ್ನು ಸರಕಾರವೇ ನಿರ್ವಹಿಸುವುದು ಕಷ್ಟಸಾಧ್ಯವೆಂದರು. ಅಂತ್ಯದಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದುವು.

ಅಂದು ಪೂರ್ವಾಹ್ನ ಡಾ|| ಕೆ. ಗುರುರಾಜ ಭಾಗವತರು ಧ್ವಜಾರೋಹಣಗೈದರು.

ವಿದ್ಯಾರ್ಥಿ ಜೀವನ ರೂಪಿಸುವ ಹೊಣೆ

ಕಳೆದ ತಾ. 23ರಂದು ನಡೆದ ಗಂಗೊಳ್ಳಿಯ ಎಸ್. ವಿ. ಹಾಯರ್ ಸೆಕೆಂಡರಿ ಶಾಲೆ ಮತ್ತು ಎಸ್. ವಿ. ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ಎಂ. ಮಧ್ವರಾಜರು ಅಧ್ಯಕ್ಷ ಭಾಷಣದಲ್ಲಿ ವಿದ್ಯಾರ್ಥಿ ಜೀವನವನ್ನು ರೂಪಿಸುವುದರಲ್ಲಿ ಶಿಕ್ಷಕ ರಕ್ಷಕರು ತಮ್ಮ ಹೊಣೆಗಾರಿಕೆಯನ್ನು ಮರೆಯಬಾರದೆಂದರು. ಈ ಶಾಲೆಯ ಅಭಿವೃದ್ಧಿಯನ್ನು ಶ್ಲಾಘಿಸಿದರು. ಶ್ರೀಮತಿ ಮನೋರಮಾ ಮಧ್ವರಾಜ್‌ರು ಬಹುಮಾನ ವಿತರಣೆ ಮಾಡಿದರು. ಶಾಲೆಗಳ ವ್ಯವಸ್ಥಾಪಕರಾದ ಶ್ರೀ ಬಿ. ಸುರೇಂದ್ರ ನಾಯ್ಕರು ಮಧ್ವರಾಜ್ ದಂಪತಿಗಳ ಪರಿಚಯ ಮಾಡಿದರು. ಶ್ರೀ ಬಿ. ನಾರಾಯಣ ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

MYSORE STATE FINANCIAL CORPORATION

BANGALORE

ಮೈಸೂರು ಸ್ಟೇಟ್ ಫಿನಾನ್ಸಿಯಲ್ ಕೋರ್ಪೊರೇಶನ್ ಬೆಂಗಳೂರು

(ರಾಜ್ಯ ಆರ್ಥಿಕ ಕೋರ್ಪೊರೇಶನಿನ 1951 ಆಕ್ಟಿನ ಅನ್ವಯ ಸ್ಥಾಪಿಸಲ್ಪಟ್ಟದ್ದು)

ಇದರ

ಪ್ರಥಮ ಶಾಖಾ ಕಚೇರಿಯು

ಬೆಳಗಾಂವಿನ

ಇಂಡಸ್ಟ್ರಿಯಲ್ ಎಸ್ಟೇಟಿನ ಪ್ರದೇಶದಲ್ಲಿ

ಹೊಸ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ, ಹೆಚ್ಚಿಗೆ ಸಹಾಯ ಕೊಡುವುದಕ್ಕಾಗಿ, ವಿಸ್ತರಿಸುವುದಕ್ಕಾಗಿ, ಆಧುನೀಕರಿಸುವುದಕ್ಕಾಗಿ ಚಾಲ್ತಿಯಲ್ಲಿರುವ ಉದ್ಯಮಗಳನ್ನು ಪರಿಷ್ಕರಿಸುವುದಕ್ಕಾಗಿ

ಶ್ರೀ ಎನ್. ಎಸ್. ರಾಮಚಂದ್ರ, ಐ. ಎ. ಎಸ್.

(ಡಿವಿಜನಲ್ ಕಮಿಷನರ್)

ಇವರಿಂದ

1970ನೆ ಫೆಬ್ರವರಿ ತಾರೀಕು 27ನೆ ಶುಕ್ರವಾರ ತೆರೆಯಲ್ಪಟ್ಟಿದೆ

ಎಂದು ತಿಳಿಸಲು ಸಂತೋಷಪಡುತ್ತೇವೆ.

ಬೆಳ್ತಂಗಡಿ ಮುನ್ಸಿಫ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

O. S. 121/69.

ವೇದಾವತಿ—ವಾದಿ

ಮತ್ತು

ಧರ್ಮರಾಜ ಪೂವಣಿ—ಪ್ರತಿವಾದಿ

ಬೆಳ್ತಂಗಡಿ ತಾಲ್ಲೂಕು ಬೆಳ್ತಂಗಡಿಯಲ್ಲಿರುವ ಅಪ್ಪು ಪಕ್ಕಳರ ಮಗ ಧರ್ಮರಾಜ ಪೂವಣಿಯವರಿಗೆ—

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ಹಾಗೂ ಜಪ್ತಿ ಅರ್ಜಿ I. A. 2 ತಾ. 24-3-1970ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿದೆ. ನಿಮ್ಮ ಆಕ್ಷೇಪವೇನಾದರೂ ಇದ್ದರೆ ಆ ದಿನ್ನ 11 ಗಂಟೆಗೆ ನೀವು ಸ್ವತಃ ಯಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವ್ವಾ ಮಾಡಿ ದಾವಾ ಮುಂದುವರಿಸಲಾಗುವುದು ಎಂದು ಕೋರ್ಟು ಹುಕುಂ ಪ್ರಕಾರ ಮಾಡಿದ ನೋಟೀಸು.

Sd/- N. J. Kadamba

Advocate far Plaintiff.

ಬೆಳ್ತಂಗಡಿ, 26-2-1970.

ಬೆಳ್ತಂಗಡಿ ಮುನ್ಸಿಫ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

O. S. 122/69.

ಬಿ. ಎಸ್. ನಾರಾಯಣರಾವ್—ವಾದಿ

ಮತ್ತು

ಎಸ್. ಧರ್ಮರಾಜ ಪೂವಣಿ—ಪ್ರತಿವಾದಿ

ಬೆಳ್ತಂಗಡಿ ತಾಲ್ಲೂಕು ಬೆಳ್ತಂಗಡಿಯಲ್ಲಿರುವ ಅಪ್ಪು ಪಕ್ಕಳರ ಮಗ ಧರ್ಮರಾಜ ಪೂವಣಿಯವರಿಗೆ—

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ಹಾಗೂ ಜಪ್ತಿ ಅರ್ಜಿ I. A. 2 ತಾ. 24-3-1970ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿದೆ. ನಿಮ್ಮ ಆಕ್ಷೇಪವೇನಾದರೂ ಇದ್ದರೆ ಆ ದಿನ್ನ 11 ಗಂಟೆಗೆ ನೀವು ಸ್ವತಃ ಯಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿವ್ವಾ ಮಾಡಿ ದಾವಾ ಮುಂದುವರಿಸಲಾಗುವುದು ಎಂದು ಕೋರ್ಟು ಹುಕುಂ ಪ್ರಕಾರ ಮಾಡಿದ ನೋಟೀಸು.

Sd/- N. J. Kadamba

Advocate for the Plaintiff.

ಬೆಳ್ತಂಗಡಿ, 26-2-1970.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಭಾರತದಲ್ಲಿ ಕುಟುಂಬ ಯೋಜನೆ

ಭಾರತದ ಜನಸಂಖ್ಯೆ 1966ರಲ್ಲಿ 50 ಕೋಟಿಯಿದ್ದಿತು. ಜನಸಂಖ್ಯೆ ಈಗಿನ ಪ್ರಮಾಣದಲ್ಲೇ ಬೆಳೆಯುತ್ತ ನಡೆದರೆ, 1994ರ ಹೊತ್ತಿಗೆ ದ್ವಿಗುಣಗೊಳ್ಳಲಿದೆ. ಜನಸಂಖ್ಯೆಯಲ್ಲಾಗಿರುವ ಈ ಹೆಚ್ಚಳದಿಂದ ನಮ್ಮ ಯೋಜನೆಗಳ ಫಲ ನಮಗೆ ಲಭಿಸದಂತಾಗಿದೆ. 1951ರಿಂದ 1966ರ ವರೆಗಿನ ಅವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆಯು 17 ದಶಲಕ್ಷ ಟನ್‌ಗಳಷ್ಟು ಹೆಚ್ಚಿದೆ, ಆದರೂ ಪ್ರತಿಯೊಬ್ಬರಿಗೆ ದೊರೆಯುತ್ತಿರುವ ಆಹಾರದ ಪ್ರಮಾಣದಲ್ಲೇನೂ ಹೇಳಿಕೊಳ್ಳುವಷ್ಟು ವ್ಯತ್ಯಾಸವಾಗಿಲ್ಲ.

1951ರಲ್ಲಿ ಉದ್ಯೋಗಾರ್ಥಿಗಳ ಸಂಖ್ಯೆ ಮೂವತ್ತು ಲಕ್ಷದಷ್ಟಿತ್ತು. 1965–66ರಲ್ಲಿ ಅದು ಒಂದು ಕೋಟಿಯಷ್ಟಾಯಿತು. 31 ಲಕ್ಷದಷ್ಟು ಹೆಚ್ಚು ಉದ್ಯೋಗ ಸೌಕರ್ಯಗಳನ್ನು ಒದಗಿಸಿದರೂ ಈ ಸಮಸ್ಯೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.

ಜನನ ಪ್ರಮಾಣವನ್ನು ಕಡಿಮೆ ಮಾಡುವುದೇ ಈ ಸಮಸ್ಯೆಗೆ ಇರುವ ಏಕೈಕ ಪರಿಹಾರ ಮಾರ್ಗ. ಮುಂಬರುವ ಹತ್ತು ವರ್ಷಗಳಲ್ಲಿ ಜನನ ಪ್ರಮಾಣವನ್ನು ಪ್ರತಿ ಸಾವಿರಕ್ಕೆ 41ರಿಂದ 23ಕ್ಕೆ ಇಳಿಸುವುದೇ ನಮ್ಮ ಗುರಿ.

ಭಾರತ, ಕುಟುಂಬಯೋಜನಾ ಕಾರ್ಯಕ್ರಮಕ್ಕೆ ವಿಶೇಷ ಆದ್ಯತೆಯನ್ನು ನೀಡಿದೆ. ನಗರ ಪ್ರದೇಶಗಳಲ್ಲಿ ಪ್ರತಿ 50,000 ಜನರಿಗೆ ಒಂದು ಕುಟುಂಬ ಯೋಜನಾ ಕೇಂದ್ರವನ್ನು ತೆರೆಯಲಾಗಿದೆ. ಹಾಗೂ ಪ್ರತಿ 10 ಸಾವಿರ ಜನರಿಗೆ ಒಂದರಂತೆ ಉಪಕೇಂದ್ರಗಳಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ 80,000 ಜನರಿಗೆ ಒಂದರಂತೆ ಕುಟುಂಬಯೋಜನಾ ಕೇಂದ್ರಗಳಿವೆ. ಇದೂ ಅಲ್ಲದೇ ಪ್ರತಿಯೊಂದು ಜಿಲ್ಲೆಯಲ್ಲಿ ಸಂಚಾರಿ ಸೇವಾ ಘಟಕಗಳಿವೆ.

ರಾಸಾಯನಿಕ ಸಂತತಿ ನಿರೋಧ ಸಾಧನಗಳ ವಿಷಯದಲ್ಲಿ ಭಾರತ ಇಂದು ಸ್ವಾವಲಂಬಿಯಾಗಿದೆ. ಲೂಪ್ (ವಂಕಿ) ಕಾರ್ಖಾನೆ ದಿನವೊಂದಕ್ಕೆ 30 000 ಲೂಪ್‌ಗಳನ್ನು ತಯಾರಿಸುತ್ತಿದೆ.

"ಕೆಂಪು ತ್ರಿಕೋಣ"ದ ಸಂಕೇತದಿಂದ ಕುಟುಂಬ ಯೋಜನಾ ಸಿಬ್ಬಂದಿಯನ್ನು ಹಾಗೂ ಅವರು ಕೊಡುವ ಸೇವೆಯನ್ನು ಗುರುತಿಸಬಹುದಾಗಿದೆ. ಕುಟುಂಬ ಯೋಜನಾ ಸಂದೇಶವೂ ಅಷ್ಟೇ ಸರಳ. "ಎರಡು ಅಥವಾ ಮೂರು ಮಕ್ಕಳು ಸಾಕು", 'ನಿಮ್ಮ ವೈದ್ಯರ ಸಲಹೆ ಪಡೆಯಿರಿ' —ಇದೇ ಆ ಸಂದೇಶ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 288/1969

ಗೋಪು ಪೂಜಾರ್ತಿ — ವಾದಿಳು

ಮತ್ತು

ಚಿನ್ನು ಪೂಜಾರ್ತಿ ಕೂಡಾ 6 ಜನ — ಪ್ರತಿವಾದಿಗಳು

ಇವರೊಳಗೆ

6ನೇ ಪ್ರತಿವಾದಿ ಸದಿಯ ಪೂಜಾರಿ, ಚಿಂನು ಪೂಜಾರ್ತಿ ಮಗ, ಉಡುಪಿ ತಾಲ್ಲೂಕು, [illegible] ಗ್ರಾಮದಲ್ಲಿರುವವ—

ವಾದಿಳು ನೀವು ಕೂಡಾ 6 ಜನರ ಮೇಲೆ ಮಾಡಿದ ಪಾಲಿನ ದಾವೆಯು ತಾ 21.3.70 ಕ್ಕೆ ನಿಂಮ ನೋಟೀಸಿನ ಬಗ್ಗೆ ಇಡಲಾಗಿದೆ. ನಿಂಮ ಆಕ್ಷೇಪ ಏನಾದರೂ ಇದ್ದರೆ ಆ ದಿವಸ ಬೆಳಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹಾಜೀರು ಮಾಡಿಕೊಳ್ಳಬೇಕು. ಈ ಮುಂಚೆ ಎರಡು ಸಾರಿ ನೋಟೀಸುಗೂ ಸಿಕ್ಕದ ಕಾರಣ—ಕೋರ್ಟಿನ ಹುಕುಂ ಪ್ರಕಾರ ಪ್ರಕಟಣೆ ಮಾಡಿಯದೆ.

Sd/- B. Yogishwara Holla
Advocate for Plaintiff.

ಉಡುಪಿ, 23–2–70.

ಕಸ್ತೂರಬಾ– ಜೀವನದರ್ಶನ

(ಒಂದನೇ ಪುಟದಿಂದ)

ಲ್ಲ, ಹಾಗೂ ಅವರೊಂದಿಗೆ ಮತಸ್ವಾತಂತ್ರ್ಯ ಮಾಡಿಕೊಳ್ಳುತ್ತಿರಲಿಲ್ಲ. ಉಪವಾಸ ಮುಗಿಯುವ ವರೆಗೂ ಅವರು ಗಾಂಧೀಜಿಯವರ ಸೌಕರ್ಯದತ್ತ ಗಮನಕೊಡುತ್ತಿದ್ದರು. ಬಾ ತಮ್ಮ ಕೊನೆಯ ದಿನಗಳಲ್ಲಿ ದೈಹಿಕ ವೇದನೆಯಿಂದ ನರಳುತ್ತಿದ್ದರು. ಆಗಲೂ ಅವರಿಗೆ ಬಾಪೂ ಅವರದೇ ಚಿಂತೆ.

○ ○ ○

1942ರ ಆಗಸ್ಟ್ ತಿಂಗಳು, ಮುಂಬಯಿಯಲ್ಲಿ ಪೋಲಿಸರು ಬಾಪೂಜಿಯವರನ್ನು ಬಂಧಿಸಿದರು. ಆಗ ಬಾ ಅವರು ಬಾಪೂಜಿಯವರ ಬಳಿಯಲ್ಲಿದ್ದರು. ಬಾಪೂ ಹೇಳಿದರು, "ಬಾ, ನಿನ್ನ ಆರೋಗ್ಯ ಚೆನ್ನಾಗಿಲ್ಲ, ನೀನು ಸೇವಾಶ್ರಮಕ್ಕೆ ಹೋಗಿ ಅಲ್ಲಿ ಚೇತರಿಸಿಕೊ. ಆಶ್ರಮವಾಸಿಗಳ ಯೋಗಕ್ಷೇಮವನ್ನು ನೋಡಿಕೊ" ಎಂದರು.

ಆಗ ಬಾ ಹೇಳಿದರು "ಇಲ್ಲ, ನಾನು ನಿಮ್ಮೊಂದಿಗೆ ಬರುತ್ತೇನೆ". ಅದೇ ದಿನವೇ ಬಾ ಅವರ ಬಂಧನವೂ ಆಯಿತು. ಮುಂಬಾಯಿಯಲ್ಲಿ ಅವರನ್ನು ಜೈಲಿನಲ್ಲಿಡಲಾಯಿತು. ಜೈಲಿನಲ್ಲಿ ಅವರಿಗೆ ತೀವ್ರ ಖಾಯಿಲೆಯಾಯಿತು ಮುಂದೆ ಬಾ ಆಗಾಖಾನ್ ಅರಮನೆಯಲ್ಲಿ ಬಾಪೂವಿನೊಂದಿಗೆ ಇದ್ದರು.

1944ರ ಫೆಬ್ರವರಿ 22ರಂದು ಆಗಾಖಾನ್ ಅರಮನೆಯಲ್ಲಿ ಕಸ್ತೂರಬಾ ದೈವಾಧೀನರಾದರು. ಆಗ ಅವರಿಗೆ 75ರ ವಯಸ್ಸು. ತಮ್ಮ ಇಂತಹ ಇಳಿ ವಯಸ್ಸಿನಲ್ಲಿ ಜ್ಞಾನಾರ್ಜನೆಗಾಗಿ ಹಂಬಲಿಸುತ್ತಿದ್ದರು. ನಿತ್ಯ ಜೀವನದ ವ್ಯಾಪಾರವೇನು? ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಖಾದಿ ಬಟ್ಟೆಗಳಿಗೆ ಬದಲಾಗಿ ಗಿರಣಿ ಬಟ್ಟೆಗಳನ್ನು ಬಹಿಷ್ಕರಿಸಿದ ತಮ್ಮ ಮೊಮ್ಮಗಳಿಗೆ ಗಾಂಧೀಜಿಯವರು ಕೈಗೊಂಡಿದ್ದ ಪ್ರತಿಜ್ಞೆಯನ್ನು ತಾವೆಲ್ಲರೂ ಕಡ್ಡಾಯದಿಂದ ಪರಿಪಾಲಿಸಬೇಕೆಂದು ತಿಳಿಸಿದರು. ಯಾರೊಬ್ಬರು ಯಾವ ಕಲುವಾಗಿಯೇ ಆ ಪ್ರತಿಜ್ಞೆಯನ್ನು ಸ್ವೀಕರಿಸಿದ್ದರೆ ಅದರ ಆಚರಣೆಗೆ ಸಂಬಂಧಪಟ್ಟ ಎಲ್ಲಾ ಕರ್ತವ್ಯವೆಂಬುದು ಅವರ ಅಭಿಪ್ರಾಯವಾಗಿತ್ತು.

ಗಾಂಧೀಜಿಯವರು ಸ್ವಯಂ ಮಹಾತ್ಯಾಗಿ ಹೌದು. ಗಾಂಧೀಜಿಯವರು ಮಹತ್ಕಾರ್ಯ ಸಾಧಿಸಿರುವಲ್ಲಿ ಕಸ್ತೂರಬಾ ಅವರು ಸಹಕಾರ ನೀಡಿದ್ದಾರೆ. ಗಾಂಧೀಜಿಯವರನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ಅವರನ್ನು ಚಾಚೂ ತಪ್ಪದೇ ತಮ್ಮ ಜೀವನ ಪರ್ಯಂತ ಅನುಸರಿಸಿದ್ದಾರೆ; ಗಾಂಧೀಜಿಯವರ ಮನೆತನದವರೆಲ್ಲ ಆಕೆಯನ್ನು "ದೊಡ್ಡಮ್ಮ" ಎಂದು ಕರೆದರು. ಅವರನ್ನು ಬಹಳವಾಗಿ ಗೌರವಿಸಿದರು, ತನಗಾಗಿ ಆಕೆ ಮಾಡುತ್ತಿರುವ ನಿಸ್ವಾರ್ಥ ಸೇವೆ ಎಷ್ಟರ ಮಟ್ಟಿನದು ಎಂಬುದನ್ನು ಗಾಂಧೀಜಿಯವರಿಗೂ ತಿಳಿದಿತ್ತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

E. X. Case 46/69.

ನರಸಿಂಹ ಪೆರಂಪಳ್ಳಿ—ಅರ್ಜಿದಾರ

ಮತ್ತು

ಕಾಮಿಲ್ ಫೊರ್ಟೆರಾ ಕೂಡಾ—ಎದುರು 7 ಜನರು—ಇವರೊಳಗೆ

4ನೇ ದ್ರಿವಳ ಕಾಮಿಲ್‌ನ್ ಫುರ್ಟಾಡೋ, ಲೋರೆನ್ಸ್ ಫೊರ್ಟೆರ್ರಾ ಹೆಂಡ್ತಿ, ಜೋನ್ ಫುರ್ಟಾಡೊರ ಮಗಳು

5ನೇ ಎದುರು ಅರ್ಜಿ ಯಾನೆ ಜೋರ್ಜ್ ಫೊರ್ಟೆರಾ, ಕಾಮಿಲ್ ಫೊರ್ಟೆರ್ರ ಮಗ ಉಡುಪಿ ತಾಲ್ಲೂಕು, ಪೆರಂಪಳ್ಳಿ ಗ್ರಾಮದಲ್ಲಿ ಇರುವವರು—

ಅರ್ಜಿದಾರನು ನಿಮ್ಮ ಮತ್ತು ಇತರರ ಮೇಲೆ ಪಡೆದ ಈ ಕೋರ್ಟಿನ O. S. 87/56ನೇ ಡಿಕ್ರಿಯ ಮೇಲೆ ನಡ್ಸಿದ ಅಮಲ್ದಾರಿಯಲ್ಲಿ ನಿಮ್ಮ ಮೂಲಗೇಣಿ ಹಕ್ಕಿನ ಸ್ಥಿರಾಸ್ತಿ ನಿಲಾಮಿಗೆ ಇಡ್ಸಿದ ಬಾಬಿನಲ್ಲಿ ನಿಮಗೆ ಕಳುಹಿಸಿದ ನೋಟೀಸನ್ನು ಸ್ವೀಕರಿಸದೆ ಇದ್ದದ್ದರಿಂದ ಈಗ ಸದ್ರಿ ಸೇಲ್ ನೋಟೀಸು, ತಾ. 11–3–70ಕ್ಕೆ ಉಂಟು. ನಿಮ್ಮ ಆಕ್ಷೇಪಣೆ ಇದ್ರೆ ಆ ದಿವಸ 11 ಗಂಟೆಗೆ ಕೋರ್ಟಿನಲ್ಲಿ ಹಾಜೀರು ಮಾಡಿಕೊಳ್ಳಬೇಕು. ಇಲ್ಲವಾದ್ರೆ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟಿನ ಹುಕುಂ ಪ್ರಕಾರ)

Sd/- B Yogishwara Holla
Advocate for Petitioner.

ಉಡುಪಿ, 23–2–70

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore — 27.
Phone No.— 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

NAVAYUGA 5—3—1970
Registered with the Registrar of News Papers for India under No. R. N. 3646/'57

REGD. No. B. G. 176
LICENCE No. 33;
Licensed to Post without Prepayment

ಚಿಕಿತ್ಸೆ ತಂದ ಬಳುವಳಿ

ನಿಯಮಗಳನ್ನು ಉಲ್ಲಂಘಿಸಲು, ಸಾಮಾಜಿಕ ಬಹಿಷ್ಕಾರಗಳ ವಿರುದ್ಧ ಎದುರಿ ನಡೆಸಲು ಅಂತರಾತ್ಮನ ನಿರ್ದೇಶನದಂತೆ ನಡೆಸಲು ಧೈರ್ಯ ಬೇಕು. ಸೌರಾಷ್ಟ್ರದ— ಪರಾಕ್ರಮಶಾಲಿ ರಜಪೂತ ವಂಶದ ವಹೇರ್ ಪಂಗಡದ ಸುಬಾರ್ಕರ್ ಈ ಎಲ್ಲಾ ಗುಣಗಳೂ ತನ್ನಲ್ಲಿರುವುದನ್ನು ಪ್ರದರ್ಶಿಸಿದ.

ವಹೇರ್ ರಜಪೂತರು ಕುಟುಂಬ ಯೋಜನೆಯ ವಿರೋಧಿಗಳು. ಅವರ ದೃಷ್ಟಿಯಲ್ಲಿ ಗರ್ಭ ನಿರೋಧಕಗಳ ಬಳಕೆ ಹಾಗೂ ಸಂತತಿ ನಿರೋಧ ಶಸ್ತ್ರ ಚಿಕಿತ್ಸೆ ದೈವ ದ್ರೋಹದ ಕೆಲಸ. ಅವನು ಕೆಲಸ ಮಾಡುತ್ತಿದ್ದ ಕಾರ್ಖಾನೆಯಲ್ಲಿ ಸುಬಾರ್ಕರ್ "ಕಥಾರ್ಯಿ," ಎಂದು ಜನಪ್ರಿಯ ಹೆಸರನ್ನು ಪಡೆದಿದ್ದ. ಆತನ ಮಡದಿ ಎರಡನೇ ಬಾರಿಗೆ ಪುತ್ರನನ್ನು ಪಡೆದ ನಂತರ ಸುಬಾರ್ಕರ್ ಹಿರಿಯರ ಮಾತನ್ನು ಮೀರಿ ಸಂತತಿ ನಿರೋಧ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ನಿರ್ಧರಿಸಿದ.

ಹದಿನಾಲ್ಕು ಸೋದರ ಸೋದರಿಯರಲ್ಲಿ ಒಬ್ಬನಾಗಿದ್ದ ಸುಬಾರ್ಕರ್‌ಗೆ ಸದಾ ಬಾಲ್ಯದ ನೆನಪಾಗುತ್ತಿತ್ತು. ಅವನು ಹಿರಿಯರ ಅಲಕ್ಷ್ಯಕ್ಕೆ ಗುರಿಯಾಗಿದ್ದ. ಸದಾ ಏಕಾಂಗಿಯಾಗಿರುತ್ತಿದ್ದ. ಆತನು ಎಂದೂ ಮಾತಾಪಿತರ ಪೂರ್ಣ ವಾತ್ಸಲ್ಯ ಅನುಭವಿಸಿಲ್ಲ. ಮಾತಾಪಿತರ ವಾತ್ಸಲ್ಯ ತನ್ನ ಎಂಟು ಸಹೋದರರು ಮತ್ತು ಐದು ಸಹೋದರಿಯರಿಗೆ ಹಂಚಿ ಹೋಗಿತ್ತು. ಸುಬಾರ್ಕರ್ ಬಾಲ್ಯದ ದಿನಗಳನ್ನು ಸ್ಮರಿಸಿಕೊಂಡಾಗ ಅಂದಿನ ಜೀವನ ದಾರಿದ್ರ್ಯಮಯವಾಗಿದ್ದುದು ತಿಳಿಯಿತು. ಆತನ ಹಿರಿಯರು ಉತ್ತಮ ಶಿಕ್ಷಣ ಹಾಗೂ ಸಾಮಾನ್ಯ ಸೌಲಭ್ಯಗಳನ್ನು ನೀಡುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಸುಬಾರ್ಕರ್ ತನ್ನ ತಂದೆ ಮಾರ್ಗದಲ್ಲಿ ಮುಂದುವರಿಯಲು ಆಶಿಸಲಿಲ್ಲ; ಇಬ್ಬರು ಪುತ್ರರಿಂದಲೇ ತೃಪ್ತನಾಗಲು ನಿರ್ಧರಿಸಿದ.

ಕುಟುಂಬದ ಸದಸ್ಯರ ಸಂಖ್ಯೆ ನಿಯಂತ್ರಿಸಲು ನಿರ್ಧರಿಸಿದ ಸುಬಾರ್ಕರ್‌ಗೆ ಅವನು ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಮ್ಯಾನೇಜರ್ ಮೇಜರ್ ಮುಂಡ್ಕೂರ್ ಪ್ರೋತ್ಸಾಹ ನೀಡಿದರು. ಸೇನಾ ಪಡೆಯ ನಿವೃತ್ತ ಅಧಿಕಾರಿಯಾದ ಮೇಜರ್ ಮುಂಡ್ಕೂರ್ ಜಾಮ್‌ನಗರ ಜಿಲ್ಲೆಯ ಓಖಾದಲ್ಲಿದ್ದ ಬಾಕ್ಸೈಟ್ ಅದುರು ಸಂಸ್ಕರಣ ಮಾಡುವ ಕಾರ್ಖಾನೆಯಲ್ಲಿ ಮ್ಯಾನೇಜರಾಗಿದ್ದು ಅಲ್ಲಿ ಶಿಸ್ತನ್ನು ಮೂಡಿಸಿದ್ದರು. ಕಾರ್ಖಾನೆಯ ನೈರ್ಮಲ್ಯವೇ ಅಲ್ಲಿನ 101 ಉದ್ಯೋಗಿಗಳಿಗೆ ಶಿಸ್ತಿನ ಸಂಕೇತವಾಯಿತು. ಮೇಜರ್ ಮುಂಡ್ಕೂರ್ ಪರಾಕ್ರಮಶಾಲಿಯಾದ ದೇಶ ನಿರ್ಮಾಣ ಕಾರ್ಯದಲ್ಲಿ ಕಂಕಣಬದ್ಧರಾಗಿದ್ದಾರೆ. ಅಂತಹ ದೇಶ ನಿರ್ಮಾಣ ಮಾಡಲು ಮಕ್ಕಳ ಅತ್ಯುತ್ತಮ ಲಾಲನೆ ಪಾಲನೆಯಲ್ಲಿ ಎಚ್ಚರಿಕೆ ವಹಿಸಬೇಕೆಂದು ಅವರು ಹೇಳುತ್ತಾರೆ. ಮಕ್ಕಳ ಸಂಖ್ಯೆ ಕಡಿಮೆಯಿದ್ದರೆ, ತಂದೆತಾಯಿಯರ ಸಂಪನ್ಮೂಲ ಇದಕ್ಕೆ ಸಾಕಾಗುತ್ತಿದ್ದರೆ ಈ ಕಾರ್ಯ ಸುಲಭವಾಗುತ್ತದೆ.

ಓಖಾದಲ್ಲಿ ವೆಸೆಕ್ಟಮಿ ಶಸ್ತ್ರಚಿಕಿತ್ಸಾ ಶಿಬಿರ ವ್ಯವಸ್ಥೆಗೊಳಿಸಿದಾಗ 28 ವಯಸ್ಸಿನ ಬಲಿಷ್ಠ ವ್ಯಕ್ತಿ ಸುಬಾರ್ಕರ್ ಮೇಜರ್ ಮುಂಡ್ಕೂರ್‌ರ ಮಾರ್ಗದರ್ಶನದಂತೆ ಸಂತತಿ ನಿರೋಧ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಇತರರಿಗೆ ಉತ್ತಮ ನಿದರ್ಶನನಾದ. ಈ ಶಿಬಿರದಲ್ಲಿ ಕಾರ್ಖಾನೆಯ 101 ಉದ್ಯೋಗಿಗಳಲ್ಲಿ ಐವರು ಚಿಕಿತ್ಸೆ ಮಾಡಿಸಿಕೊಂಡರು. ಈ ಸಮಾಜ ಕಲ್ಯಾಣ ಚಟುವಟಿಕೆಗೆ ಪ್ರೋತ್ಸಾಹ ನೀಡಲು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಕಾರ್ಖಾನೆಯ ಉದ್ಯೋಗಿಗಳಿಗೆ ಟ್ರಾನ್ಸಿಸ್ಟರ್ ರೇಡಿಯೋಗಳನ್ನು ಬಳುವಳಿಯಾಗಿ ನೀಡಲಾಯಿತು!



ವಿದ್ಯಾವರ್ಧಕ ಸಂಘ (ರಿ),
ಶಿರ್ವ, ದ. ಕ.

ಮಹಾಸಭೆಯ ನೋಟೀಸು

ಮೇಲಿನ ಸಂಘದ ಮಹಾಸಭೆಯು ತಾ. 8-3-1970ನೇ ಆದಿತ್ಯವಾರ ಅಪರಾಹ್ನ ಗಂಟೆ 3-00ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾನಂದ ಸದನದಲ್ಲಿ ಜರಗಲಿರುವುದು. ಸದಸ್ಯರು ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು:-
1. ಲೆಕ್ಕಪತ್ರಗಳ ಪರಿಶೀಲನೆ
2. ಕ್ರಮನಿಬಂಧನೆಗಳ ತಿದ್ದುಪಡಿ
3. ಕಾರ್ಯಕಾರಿ ಮಂಡಳಿಯ ಆಯ್ಕೆ
4. ಇತರ ವಿಷಯಗಳು.

ಕೆ. ವಾಸುದೇವ ಶೆಟ್ಟಿ — ಕಾರ್ಯದರ್ಶಿ
ಪಿ. ಶಿವಾಜಿ ಶೆಟ್ಟಿ — ಅಧ್ಯಕ್ಷ

ಶಿರ್ವ, ದ. ಕ, 15-2-1970.

ಕುಂದಾಪುರ ಮುನ್ಸೀಫ್
ಕೋರ್ಟಿನಲ್ಲಿ

O S. 243/67 I A. I

ಅರ್ಜಿದಾರ —ಹುದರಬ್ ಬಿಟ್ಟಲ
ಎದುರು —ಮೂಡಿ ಹೆಂಗ್ಸು ಕೋಮಾ

ಕುಂದಾಪುರ ತಾಲ್ಲೂಕು ನಾವುಂದ ಗ್ರಾಮದಲ್ಲಿರುವ ಮೂಡಿ ಹೆಂಗ್ಸಿನ ಮಗಳು ... ಹೆಂಗ್ಸಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಸದ್ರಿ ವ್ಯವಹಾರದಲ್ಲಿ ಪ್ರಿಲಿಮಿನರಿ ಡಿಕ್ರಿಯಿಂದ ಕಾಣುವ ಬ್ಯಾಲನ್ಸು ಡಿಕ್ರಿಯಿಂದ ಕಾಣುವ ಆಸ್ತಿ ಮಾರಾಟದಿಂದ ವಸೂಲು ಮಾಡಿಕೊಳ್ಳುವರೆ ಸದ್ರಿ ಪ್ರಿಲಿಮಿನರಿ ಡಿಕ್ರಿಯ ಮೇರೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 28-3-70ಕ್ಕೆ ವಿಚಾರಣೆಗೆ ಇರುತ್ತದೆ. ಆ ಕಾರಣ ನೀವಾದರೂ ಪ್ಲೀಡರುಗಳ ದ್ವಾರಾ ಆ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪವಿದ್ದರೆ ತಿಳಿಸತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah
Advocate for Petr.
Date 14-2-1970 Coondapoor

Edited, Printed & Published by K. H. Shetty at the Navayuga Press, Udipi. S. India.

ನವಯುಗ

NAVAYUGA 12 – 3 – 1970

ಸಂಪುಟ 49
ಸಂಚಿಕೆ 27

ಸಂಗೀತದಿಂದ - ಸಮಗ್ರತೆಯ ಕಡೆಗೆ

ಲೇಖಕರು : ಡಾ|| ವಿ. ಕೆ. ಆರ್. ವಿ. ರಾವ್.

ಸಂಗೀತದಲ್ಲಿ ಅದ್ಭುತ ಶಕ್ತಿಯಿದೆ, ವೈವಿಧ್ಯತೆಯಿದೆ. ಈ ಸಂಗೀತದ ಕಲೆ, ಶೈಲಿ ಹಾಗೂ ಸಂಪ್ರದಾಯಗಳನ್ನು ಅರಿತುಕೊಳ್ಳುವುದು ಅಗತ್ಯ. ನಮ್ಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುವ ಈ ಕಲೆಗಳ ಏಳಿಗೆಗಾಗಿ ಸಾಕಷ್ಟು ಉತ್ತೇಜನ ದೊರೆಯಬೇಕು. ಮದ್ರಾಸಿನ ಸಂಗೀತ ಅಕಾಡೆಮಿ ಈ ದಿಸೆಯಲ್ಲಿ ಸಲ್ಲಿಸಿರುವ ಸೇವೆ ಪ್ರಶಂಸಾರ್ಹ. ಈ ಅಕಾಡೆಮಿ ಈ ವರ್ಷ 43ನೆಯ ವಾರ್ಷಿಕ ಸಂಗೀತ ಸಮ್ಮೇಳನವನ್ನು ಏರ್ಪಡಿಸಲಿದೆ. ಮದ್ರಾಸಿನ ಸಂಗೀತ ಅಕಾಡೆಮಿ ದೇಶದ ಸಂಗೀತ ಶಾಸ್ತ್ರದ ಅಭಿವೃದ್ಧಿಗಾಗಿ, ವಿಶೇಷತಃ ಕರ್ನಾಟಕ ಸಂಗೀತದ ಏಳಿಗೆಗಾಗಿ ಅಪೂರ್ವ ಸೇವೆಯನ್ನು ಸಲ್ಲಿಸಿದೆ. ಈ ಅಕಾಡೆಮಿಯು ವ್ಯವಸ್ಥೆಗೊಳಿಸಿದ್ದ ಸಂಗೀತ ಸಮ್ಮೇಳನಗಳಿಗೆ, ಖ್ಯಾತ ಸಂಗೀತ ವಿದ್ವಾಂಸರು ಹಾಗೂ ಸಂಗೀತಶಾಸ್ತ್ರಜ್ಞರು ಅಧ್ಯಕ್ಷರಾಗಿದ್ದಾರೆ. ಈ ಸಮ್ಮೇಳನಗಳ ಅಂಗವಾಗಿ ನಡೆದ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದ ತಜ್ಞರು ಕರ್ನಾಟಕ ಸಂಗೀತ ಸಾಧನೆಯಲ್ಲಿ ಕಂಡುಬರುವ ಸಮಸ್ಯೆಗಳ ಬಗ್ಗೆ ಬಿಚ್ಚುಮನಸ್ಸಿನಿಂದ ಚರ್ಚಿಸಿದ್ದಾರೆ. ಫಲಸ್ವರೂಪವಾಗಿ ಈ ಸಮ್ಮೇಳನಗಳು ರಾಗಲಕ್ಷಣಗಳನ್ನು ಗೊತ್ತುಪಡಿಸುವ ದಿಶೆಯಲ್ಲಿ ಗಮನಾರ್ಹ ಪ್ರಗತಿಯಾಗಿದೆ.

ಮದ್ರಾಸ್ ಸಂಗೀತ ಅಕಾಡೆಮಿ ಭರತನಾಟ್ಯ ಕಲಾ ಕೇಂದ್ರವೊಂದನ್ನು ತೆರೆದಿದೆ. ಖ್ಯಾತ ನೃತ್ಯಕಲಾ ಪ್ರವೀಣೆ ಶ್ರೀಮತಿ ಟಿ. ಬಾಲಸರಸ್ವತಿ ಅವರು ಈ ಕೇಂದ್ರದ ಮಾರ್ಗದರ್ಶಕರು. ಭರತನಾಟ್ಯ, ದಕ್ಷಿಣದಲ್ಲಿ ಪ್ರಚಲಿತವಿರುವ ಪುರಾತನ ಜನಪ್ರಿಯ ಕಲೆ. ಸಂಗೀತ ಶಿಕ್ಷಕರ ಕಾಲೇಜಿನ ಸ್ಥಾಪನೆ ಅಕಾಡೆಮಿಯ ಇನ್ನೊಂದು ಮಹತ್ವದ ಸಾಧನೆಯಾಗಿದೆ. ಶ್ರೀ ವೆಂಕಟರಾಮ ಅಯ್ಯರ್ ಅವರು ಈ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾರೆ. ಆಧುನಿಕ ಸಂಗೀತ ಶಿಕ್ಷಣದ ಕೇಂದ್ರಗಳ ಮೂಲಕ ಗುರುಕುಲಗಳ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲು [illegible]

ಈ ಮದ್ರಾಸ್ ಸಂಗೀತ ಅಕಾಡೆಮಿಯು ಪ್ರಕಟಿಸುತ್ತಿರುವ ಕೃತಿಗಳು, ಹಾಗೂ ಗ್ರಂಥಗಳು ಪ್ರಶಂಸಾರ್ಹವಾಗಿವೆ.

ಸಂಗೀತದಿಂದ ಸಮಗ್ರತೆ

ನಮ್ಮ ಸಂಸ್ಕೃತಿಯಲ್ಲಿ ಕಂಡುಬರುವ ವೈವಿಧ್ಯತೆಯನ್ನು ಪರಸ್ಪರರು ಅರಿತುಕೊಂಡು ರಾಷ್ಟ್ರೀಯ ಸಮಗ್ರತೆ ಸಾಧಿಸಬಹುದು. ಮದ್ರಾಸ್ ಅಕಾಡೆಮಿ ಪ್ರತಿವರ್ಷ ಕರ್ನಾಟಕ ಸಂಗೀತೋತ್ಸವವನ್ನು ಏರ್ಪಡಿಸುತ್ತಿದೆ. ಈ ಉತ್ಸವಕ್ಕೆ ಉತ್ತರದ ಒಬ್ಬರು ಅಥವಾ ಇಬ್ಬರು ಸಂಗೀತ ವಿದ್ವಾಂಸರನ್ನು ಆಹ್ವಾನಿಸುತ್ತದೆ. ಹೀಗೆ ದಕ್ಷಿಣ ಸಂಗೀತ ಪ್ರೇಮಿಗಳಿಗೆ ಹಿಂದುಸ್ಥಾನಿ ಸಂಗೀತದ ಬಗ್ಗೆ ತಿಳಿದುಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತದೆ. ಪರಸ್ಪರ ಕಲೆ, ಶೈಲಿ ಹಾಗೂ ಸಂಪ್ರದಾಯಗಳ ವಿನಿಮಯಕ್ಕೆ ಉತ್ತೇಜನ ನೀಡುವ ಇಂತಹ ಪ್ರಯತ್ನಗಳು ಅತ್ಯಂತ ಮಹತ್ವಪೂರ್ಣ. ಉತ್ತರದಲ್ಲಿ ಕರ್ನಾಟಕ ಸಂಗೀತದ ಬಗ್ಗೆ ಅಭಿರುಚಿ ಬೆಳೆಯಲು ಅನುವಾಗುವಂತೆ ಇಂತಹ ಪ್ರಯತ್ನಗಳು ನಡೆಯಬೇಕು.

ಸಂಗೀತದ ಈ ಎರಡೂ ಪದ್ಧತಿಗಳ ನಡುವೆ ಆಗಾಗ ಏರ್ಪಡುವ ಸಂಪರ್ಕ, ನಡೆಯುವ ವಿನಿಮಯ ಕಾರ್ಯಕ್ರಮಗಳು, ಎರಡೂ ವಿಧವಾದ ಸಂಗೀತ ಪರಂಪರೆಗಳನ್ನು ಇನ್ನಷ್ಟು ಸಮೃದ್ಧಗೊಳಿಸುತ್ತವೆ. ಸಮಕಾಲೀನ ಭಾರತದ ಸಂಗೀತ ಕ್ಷೇತ್ರದಲ್ಲಿ, ಹೊಸ ರಚನಾತ್ಮಕ ಕಾರ್ಯಕ್ಕೆ ಕಾರಣವಾಗುತ್ತದೆ. ಸಂಗೀತದ ಈ ಎರಡೂ ಪರಂಪರೆಗಳಿಗೆ ಸೇರಿದ ಸಂಗೀತ ವಿದ್ವಾಂಸರ ಸಭೆಗಳನ್ನು ನಡೆಸುವುದು, ಹಾಗೂ ಕರ್ನಾಟಕ ಮತ್ತು ಹಿಂದುಸ್ಥಾನಿ ಸಂಗೀತ ಪ್ರೇಮಿಗಳು ಒಂದೆಡೆ ಸೇರುವಂತೆ ಮಾಡುವುದು ಅತ್ಯಂತ ಉಪಯುಕ್ತ.

ದೆಹಲಿ ವಿಶ್ವವಿದ್ಯಾನಿಲಯಕ್ಕೆ ನಾನು ಉಪಕುಲಪತಿಯಾಗಿದ್ದಾಗ ಅಲ್ಲಿ ಸಂಗೀತ ಶಾಸ್ತ್ರಕ್ಕಾಗಿ ಪ್ರತ್ಯೇಕ ಅಧ್ಯಯನ ವಿಭಾಗವೊಂದನ್ನು ತೆರೆದಿದ್ದೇನೆ. ಸಂಗೀ[illegible] ಕಾಣಿಕೆ. ಈ ಅಧ್ಯಯನ ಪದ್ಧತಿಗಳ ಕೇಂದ್ರದಲ್ಲಿ ಸಂಗೀತದ ಎರಡು ಅಧ್ಯಯನದ ವ್ಯವಸ್ಥೆಯಿದೆ. ಪಾಶ್ಚಿಮಾತ್ಯ ಸಂಗೀತದ ಒಂದು [illegible] ಇದೆ. ಭಾರತೀಯ ರಾಗಗಳು ಪಾಶ್ಚಿಮಾತ್ಯ ಸಂಗೀತ ಪರಂಪರೆಯಲ್ಲಿ ಸಂಪರ್ಕ ಕಲ್ಪಿಸಲು ಇದು ಸಹಾಯಕವಾಗುವುದು. ಈ ಕ್ಷೇತ್ರದಲ್ಲಿ ಯಹೂದಿ ಮೆನುಹಿನ್, ರವಿಶಂಕರ್ ಹಾಗೂ ನಾರಾಯಣ ಮೆನನ್ ಅವರು ಈಗಾಗಲೇ ಸಾಕಷ್ಟು ಕಾರ್ಯವನ್ನು ನಿರ್ವಹಿಸಿದ್ದಾರೆ.

ಐಕಮತ್ಯದ ತಿರುಳು

ಪರಸ್ಪರ ಸಾಹಿತ್ಯ ಹಾಗೂ ಕಲಾ ಸಂಪ್ರದಾಯಗಳನ್ನು ಅರಿತುಕೊಳ್ಳಬೇಕು, ಅವುಗಳ ವಿಷಯದಲ್ಲಿ ಒಲವನ್ನು ಬೆಳೆಸಿಕೊಳ್ಳಬೇಕು. ಅಂದಾಗ ಮಾತ್ರ ಶಾಶ್ವತವಾಗಿ ಉಳಿಯಬಲ್ಲ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿಕೊಳ್ಳಬಹುದಲ್ಲದೇ ರಾಷ್ಟ್ರೀಯ ಸಮಗ್ರತೆಯನ್ನು ಬಲಗೊಳಿಸಲು ನೆರವಾಗಬಹುದಾಗಿದೆ. ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಸಾಂಸ್ಕೃತಿಕ ಜಾಗೃತಿ ಕಂಡುಬಂದಿದೆ. ಈ ಜಾಗೃತಿಯ ಅಂಗವಾಗಿ ಸಂಗೀತ ಲೋಕದಲ್ಲಿ ಗಣನೀಯ ಉತ್ಸಾಹವುಂಟಾಗಿದೆ. ಸಂಗೀತ ಪ್ರೇಮಿಗಳ ಸಂಖ್ಯೆ ಹೆಚ್ಚಿದೆ ಆದರೂ ಇನ್ನೂ ಈ ದಿಶೆಯಲ್ಲಿ ಕೊರತೆಗಳಿವೆ. ಅವುಗಳನ್ನು ನಿವಾರಿಸಲು ಪ್ರಯತ್ನಿಸಬೇಕಾಗಿದೆ. ಸಂಸ್ಕೃತಿಯ ಪ್ರವಾಹದಿಂದ ನಾವು ಯುವಜನರನ್ನು [illegible]ದು. ಸಂಗೀತ, ಕಲೆ, ಹಾಗೂ ನೃತ್ಯದ ಕಲೆಗಳನ್ನು ಯುವಜನರು ಅರಿತುಕೊಳ್ಳುವಂತೆ [illegible] ಅವುಗಳ ವಿಷಯದಲ್ಲಿ [illegible] ಬೆಳೆಸಿಕೊಳ್ಳುವಂತೆ ಹಾಗೂ ಅವುಗಳ ವಿಷಯದಲ್ಲಿ ಅಭಿರುಚಿ ಬೆಳೆಸಿಕೊಳ್ಳುವಂತೆ ಅನುಕೂಲ ಕಲ್ಪಿಸಲು ಸಂಗೀತ ಗೋಷ್ಠಿಗಳಿಗೆ ಯುವಜನರನ್ನು ಆಹ್ವಾನಿಸಬೇಕು. ಈ ಗುರಿಯನ್ನು ಸಾಧಿಸಲು ನಮ್ಮ ಗ್ರಂಥಾಲಯಗಳಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ, ಕ್ಲಬ್‌ಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳ ಸಂಘಗಳಲ್ಲಿ, ಸಂಗೀತ ಕಛೇರಿಗಳ ತಂಡಗಳನ್ನು ಏರ್ಪಡಿಸಬೇಕು. ಇಂತಹ ತಂಡಗಳಿಗೆ ಸಂಗೀತ ಶಿಕ್ಷಣ ಸಂಸ್ಥೆಗಳಿಂದ ಹಾಗೂ ಶಿಕ್ಷಣ ಇಲಾಖೆಗಳಿಂದ ಸಾಕಷ್ಟು ಪ್ರೋತ್ಸಾಹ ದೊರೆಯಬೇಕು.

ಸಮೂಹದ ಸಾಧನೆಗೆ, [illegible] ಬಹುದಾಗಿದೆ. ಸಮೂಹ ಗೀತೆಗಳಿಗೆ—ವಿಶೇಷತಃ ನಮ್ಮ ಬಾಲಕ-ಬಾಲಕಿಯರು ಹಾಡುವ ಸಮೂಹ ಗೀತೆಗಳಿಗೆ ಉತ್ತೇಜನ ನೀಡಲು ನಾವು ಪ್ರಯತ್ನಿಸುತ್ತಿಲ್ಲ. ಕೇಂದ್ರ ಸರಕಾರದ ಶಿಕ್ಷಣಮಂತ್ರಿ ಖಾತೆಯು ಈ ವಿಷಯದ ಮಹತ್ವವನ್ನು ಅರಿತುಕೊಂಡು ಇತ್ತೀಚೆಗೆ ಸಂಬಂಧಿಸಿದ ತಜ್ಞರ ಸಭೆ ಕರೆದು, ಸಮೂಹಗೀತೆಗಳ ಅಭಿವೃದ್ಧಿಗಾಗಿ ರೂಪಿಸಬೇಕಾದ ಯೋಜನೆಗಳ ಬಗ್ಗೆ ಚರ್ಚೆ ನಡೆಯಿತು.

ಸಂಗೀತ ಅಕಾಡೆಮಿ, ಸಂಗೀತ ಸಭೆ—ಸಮ್ಮೇಳನಗಳ ಕಾಲಕ್ಕೆ ಸಂಗೀತ ಕ್ಷೇತ್ರದ ವಿಶಿಷ್ಟ ಸಮಸ್ಯೆಗಳನ್ನು ಚರ್ಚಿಸಲು ವಿಚಾರಗೋಷ್ಠಿಗಳನ್ನು ಏರ್ಪಡಿಸಿದ್ದರು. ಆದರೂ ಈ ಕ್ಷಣ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆಯುತ್ತಿಲ್ಲ. ಸಂಗೀತ, ನೃತ್ಯ ಕಲಾ ಕ್ಷೇತ್ರಗಳಲ್ಲಿ ಗಣನೀಯ ರೀತಿಯಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡು ಅದನ್ನು ವಿಸ್ತರಿಸಬೇಕು. ಸಂಗೀತ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರು, ಹಳೆಯ ಗ್ರಂಥಗಳ ಮೇಲೆ ಹೊಸ ಟಿಪ್ಪಣಿಗಳನ್ನು ಬರೆದರೆ ಅಥವಾ ತಮ್ಮ [illegible] ಗ್ರಂಥಗಳನ್ನು ಪ್ರಕಟಿಸಿದರೆ [illegible]

ಭಾಷಾ ಪತ್ರಿಕೆಗಳ ಪಾತ್ರ

[illegible] ಯ ಭಾಷೆಗಳ ಸಾಕಷ್ಟು ಪತ್ರಿಕೆಗಳು ಹಾಗೂ ಸಾಹಿತ್ಯ ಪ್ರಕಟವಾಗಬೇಕು. ಅಂದರೆ ಮಾತ್ರ ಇಂತಹ ಕಲೆಗಳನ್ನು ಮೆಚ್ಚುವ, ಕಲಾರಾಧಕರ ಸಂಖ್ಯೆ ಹೆಚ್ಚುತ್ತದೆ. ನಮ್ಮ ದೇಶದಲ್ಲಿ ಸಂಗೀತಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ಗಣನೀಯವಾಗಿ ಹೆಚ್ಚಿವೆ. ಆದರೂ ನಮ್ಮ [illegible]

ಗಾಂಧೀಜಿಯವರ ಜೀವನದಲ್ಲಿ ಬಾ ಅವರ ಪಾತ್ರ

ಲೇಖಕರು : ಜೆ. ಪಿ. ಚತುರ್ವೇದಿ.

ಕಸ್ತೂರಿಬಾ ಗಾಂಧೀಜಿ ಅವರ ಪತ್ನಿಯಾದ ಕಾರಣದಿಂದ ಮಹಾನ್ ವ್ಯಕ್ತಿಯಾಗಲಿಲ್ಲ ಅವರು ಸ್ವಯಂ ದೊಡ್ಡ ವ್ಯಕ್ತಿಯಾಗಿದ್ದರು. ಬಾ ಅವರು ಜನಿಸಿದ್ದು 1869ರಲ್ಲಿ, ಸ್ಥಳ ಪೋರಬಂದರು. ಆ ದಿನ ದಿನಗಳಲ್ಲಿ ಪೋರಬಂದರು ದೇಶದ ಸುಪ್ರಸಿದ್ಧ ನಗರವಾಗಿದ್ದಿತು. ಅವರ ವಿವಾಹ ದಿವಾನರ ಮನೆತನವಾದ ಪೋರಬಂದರಿನ ಕರಮಚಂದ ಉತ್ತಮಚಂದ ಗಾಂಧಿಯವರ ಪುತ್ರ ಮೋಹನದಾಸ್ ಗಾಂಧಿಯವರೊಂದಿಗೆ 1883ರಲ್ಲಿ ನಡೆಯಿತು. ಗಾಂಧೀಜಿಯವರು ಮಹತ್ತರ ಶ್ರೀಮಂತರಾಗಿರಲಿಲ್ಲ.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಗಾಂಧೀಜಿಯವರು ಡರ್ಬನ್ನಲ್ಲಿದ್ದರು. ಆಗ ಬಾ ಅವರು ಅಸ್ಪೃಶ್ಯತೆ ಭಾವ ತೋರಿದರು. ಆದರೆ ತಮ್ಮ ಧರ್ಮದ ಬಗ್ಗೆ ತಮಗಿದ್ದ ವಿಶ್ವಾಸವನ್ನು ಮಾತ್ರ ಬಿಡಲಿಲ್ಲ. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದ ಕೂಡಲೆ ತುಳಸಿಪೂಜೆ ಮಾಡುತ್ತಿದ್ದರು. ಧಾರ್ಮಿಕ ಸಂಪ್ರದಾಯಗಳನ್ನು ಆಚಾರರೀತಿ ನಡೆಸುತ್ತಿದ್ದರು. ಹಿಂದೂ, ಮುಸ್ಲಿಂ, ಹರಿಜನ, ಕ್ರಿಶ್ಚಿಯನ್ನರ ಆತ್ಮ ಪವಿತ್ರ, ಒಂದೇ ಎಂಬುದನ್ನು ಚೆನ್ನಾಗಿ ಅರಿತಿದ್ದರು. ಹರಿಜನರನ್ನು ಸಂತೈಸುತ್ತಿದ್ದಂತೆಯೇ ಹಿಂದೂ ಮುಸ್ಲಿಮರನ್ನು ಆಕೆ ಆದರಿಸಿದರು. ಕೆಲವು ಸಂದರ್ಭಗಳಲ್ಲಿ ಈ ಬೇರೆಬೇರೆ ಮತಧರ್ಮಗಳ ಆದರ್ಶಗಳ ಬಗ್ಗೆ ವಿಚಾರಮಾಡುತ್ತಲೂ ಇದ್ದರು.

ಗಾಂಧೀಜಿಯವರೊಂದಿಗೆ ಬಾ ಅವರು ದಕ್ಷಿಣ ಆಫ್ರಿಕಾಕ್ಕೆ ಹೊರಟಾಗ ಅವರು ಅವಿದ್ಯಾವಂತ ಮಹಿಳೆ. ಆ ಸಂದರ್ಭದಲ್ಲಿ ಬಾಪು ಅವರು ಬಾ ಅವರಿಗೆ ಗುಜರಾತಿ ಭಾಷೆಯಲ್ಲಿ ಸ್ವಲ್ಪ ಶಿಕ್ಷಣ ಕೊಟ್ಟರು. 1915ರಲ್ಲಿ ಬಾ ಭಾರತಕ್ಕೆ ಮರಳಿ ಬಂದಾಗ ಹೆಚ್ಚು ಜ್ಞಾನ ಗಳಿಸಿದ್ದರು. ಸತ್ಯಾಗ್ರಹಿ ಎಂಬುದಾಗಿ ಬಾ ಜನಪ್ರಿಯರಾಗಿದ್ದರು. ಅಲ್ಲದೇ ತಾನೇ ಸ್ವತಃ ಜನತಾ ನಾಯಕರೂ ಆಗಲು ಸಮರ್ಥರಿದ್ದರು. ಗೋಂಡಾಲದ ಆಯುರ್ವೇದ ಶಾಲೆಯಲ್ಲಿ ಬಾಪು ಮತ್ತು ಬಾ ಅವರಿಗೆ ಮೊದಲನೆ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಆಗಲೇ ಬಾಪು ಅವರಿಗೆ ಮಹಾತ್ಮರೆಂದು ಕರೆಯಲಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಬಾ ಅವರಿಗೆ ಆದ ಅನ್ಯಾಯದಿಂದಾಗಿ ಭಾರತದಲ್ಲಿ ಕೋಪ ಕೆರಳಿತು. ಜನರನೇಕರು ಉದ್ರೇಕಗೊಂಡರು. ಜನತಾ ಹೋರಾಟ ಆರಂಭವಾಯಿತು. ಅನೇಕ ಮಂದಿ ಸಾರ್ವಜನಿಕ ನಾಯಕರೂ ಈ ಹೋರಾಟದಲ್ಲಿ ಭಾಗಿಗಳಾದರು. ಗೋಪಾಲಕೃಷ್ಣ ಗೋಖಲೆಯವರು ದಕ್ಷಿಣ ಆಫ್ರಿಕಾಕ್ಕೆ ಪ್ರವಾಸ ಕೈಗೊಂಡ ನಂತರ ಸತ್ಯಾಗ್ರಹ ಮತ್ತು ಉಪವಾಸ ಚಳುವಳಿಗಳು ಅಧಿಕವಾದವು. ಈ ಘಟನೆಗಳಿಗೆ ಬ್ರಿಟೀಶ್ ಸರ್ಕಾರದವರು ಹೆಚ್ಚು ಗಮನ ನೀಡಬೇಕಾಗಿ ಬಂತು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿರುವಾಗ ಬ್ರಹ್ಮಚರ್ಯ ಜೀವನವನ್ನು ನಡೆಸಲು ನಿರ್ಧರಿಸಿದರು. ಆಗ ಬಾ ಅವರಿಗೆ ಕೇವಲ 37 ವರ್ಷ ವಯಸ್ಸು. ಆದರೆ ಅದೇ ಅವರ ಜೀವನ ಗುರಿಯಾಗಿರಲಿಲ್ಲ. ಲೌಕಿಕ ಜೀವನದ ಎಲ್ಲ ಸುಖ ಭೋಗಗಳನ್ನು ತೊರೆದರು. ತಮ್ಮ ನಾಲ್ಕು ಮಂದಿ ಮಕ್ಕಳಿಗೆ ಅಲ್ಲಿನ ಶಿಕ್ಷಣ ಕೊಡಿಸಬಾರದೆಂದೂ ನಿರ್ಧರಿಸಿದರು. ಅಲ್ಲಿನ ವಿದ್ಯಾಭ್ಯಾಸ ತೃಪ್ತಿಕರವಾಗಿರಲಿಲ್ಲವೆಂಬುದೇ ಆ ನಿರ್ಧಾರದ ಮುಖ್ಯ ಅಭಿಪ್ರಾಯವಾಗಿತ್ತು. ತಮ್ಮ ಪತಿಯ ಈ ಎಲ್ಲ ನಿರ್ಧಾರಗಳಿಗೂ ಬಾ ಅವರು ಸಮ್ಮತಿಸಿದರು; ಕೆಲಕಾಲದ ನಂತರ ತಮ್ಮ ಇಬ್ಬರು ಮಕ್ಕಳಾದ ರಾಮದಾಸ್ ಮತ್ತು ಮಣಿಲಾಲ್ ರು ತಮ್ಮ ತಂದೆಯ ವೃತ್ತಿಯನ್ನು ಮುಂದುವರಿಸುವ ಸಲುವಾಗಿ ದಕ್ಷಿಣ ಆಫ್ರಿಕಾದಲ್ಲಿ ನಿಂತರು. ಗುಜರಾತಿನ ವ್ಯಾಪಾರಿಯೊಂದಿಗೆ ಜೊತೆ ಸೇರಿ ವ್ಯಾಪಾರ ಮಾಡುವ ಬಗ್ಗೆ ರಾಮದಾಸ್ ಒಮ್ಮೆ ತಮ್ಮ ತಂದೆ ಅನುಮತಿ ಪಡೆಯಲು ಬಂದರು. ಆಗ ದೇಶದಲ್ಲಿ ಸತ್ಯಾಗ್ರಹ ಚಳುವಳಿ ನಡೆಯುತ್ತಿತ್ತು. ಗಾಂಧೀಜಿ ಮಗನನ್ನು ಕುರಿತು "ಇಂತಹ ಕಠಿಣ ಪರಿಸ್ಥಿತಿಯಲ್ಲಿ ಭಾರತವನ್ನು ತೊರೆಯುವುದೇ?" ಎಂಬುದಾಗಿ ಪ್ರಶ್ನಿಸಿದರು. ದಂಡಿನ ಸತ್ಯಾಗ್ರಹದಲ್ಲಿ ರಾಮದಾಸರನ್ನೇ ಮೊದಲು ಬಂಧಿಸಲಾಯಿತು. ಅನೇಕ ಬಾರಿ ಅವರು ಜೈಲುವಾಸವನ್ನು ಅನುಭವಿಸಿದರು. ಕಳೆದ ವರ್ಷ ರಾಮದಾಸ್ ನಿಧನಹೊಂದಿದಾಗ ತನ್ನ ಪತ್ನಿಯೊಡನೆ ಸೇವಾಗ್ರಾಮದಲ್ಲಿದ್ದರು. ಅವರಿಗೆ ತಿಂಗಳ ವರಮಾನ ಕೇವಲ 75 ರೂ.ಗಳಿದ್ದಿತು.

ಗಾಂಧೀಜಿಯವರ ಮನೆ ಒಂದು ಅತಿಥಿಗೃಹವಾಗಿತ್ತು. ಉತ್ತರ ಭಾರತೀಯರಿಗೆ ಉತ್ತರ ಭಾರತದ ತಿಂಡಿತಿನಿಸುಗಳು ದಕ್ಷಿಣದವರಿಗೆ ಅನ್ನ ಸಾರು, ಗುಜರಾತಿಗಳಿಗೆ ಗುಜರಾತಿನ ಆಹಾರ, ಹೀಗಾಗಿ ಕಸ್ತೂರಿಬಾ ಅವರು ಸರ್ವ ಬಗೆಯ ತಿಂಡಿಗಳ ತಯಾರಿಕೆಯಲ್ಲಿ ವಿಶೇಷ ಪರಿಣತರಾಗಿದ್ದರು. ಕೆಲವು ಬಾರಿ ತಮ್ಮ ಮೊಮ್ಮಕ್ಕಳು ತಮ್ಮನ್ನು ಕಾಣಲು ಸೇವಾಗ್ರಾಮಕ್ಕೆ ಅಥವಾ ಸಬರಮತಿಗೆ ಬರುತ್ತಿದ್ದರು. ಆಗ ಮಕ್ಕಳ ಖರ್ಚುವೆಚ್ಚಗಳನ್ನು ಕಸ್ತೂರಿಬಾ ಅವರು ಆಶ್ರಮದ ಮೇನೇಜರಿಗೆ ಕೊಡುತ್ತಿದ್ದರು. ಅಷ್ಟೊಂದು ಸಾರ್ವಜನಿಕ ವ್ಯಕ್ತಿತ್ವ ಅವರಲ್ಲಿದ್ದಿತು.

ಪೂನಾದ ಆಗಾಖಾನ ಅರಮನೆಯಲ್ಲಿ ಬಾ ಅವರ ಪ್ರಕೃತಿ ಸರಿಯಾಗಿರಲಿಲ್ಲ. ಆಗಲೂ ಅವರು ಸುಶೀಲಾಬೆನ್, ಮೀರಾಬೆನ್, ಮನುಬೆನ್, ಡಾ|| ಗಿಲ್ಡರ್

(ಐದನೇ ಪುಟ ನೋಡಿರಿ)

ಇದೀಗ

ಮೈಸೂರು ಸರ್ಕಾರದ ರೇಶ್ಮೆ ನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು
ಮನಮೋಹಕ ನಮೂನೆಯ
ವಿಶಿಷ್ಟ ನಯಗಾರಿಕೆಯ
ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,

ಮಾನಂದವಾಡಿ ರಸ್ತೆ, ಮೈಸೂರು-4.

ಫೋನ್ : 526
ಸಂಪುಟ ೪೯
ಸಂಚಿಕೆ ೨೭
VOL. 49
No. 27

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೨—೩—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಇಂದಿರಮ್ಮನ ದಾಳಗಳು

ಕೇಂದ್ರ-ರಾಜ್ಯಗಳಲ್ಲಿ ವಿಭಿನ್ನ ಪಕ್ಷೀಯ ಸರಕಾರಗಳಿರುವುದು ಭಾರತಕ್ಕೆ ಹೊಸತಲ್ಲ. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ ಆತ್ಮಸಾಕ್ಷಿ ಜಾಗೃತಗೊಂಡ ಬಳಿಕ ಕೆಲವೊಂದು ಕೇಂದ್ರ- ರಾಜ್ಯಗಳ ಸಂಬಂಧಕ್ಕೆ ವಕ್ರತೆ ತಾಗಿಸಿಕೊಂಡಿವೆ. ತಂದೆಯ ಕಡೆಯವರು ದಾಯಾದಿಗಳಾದುದರಿಂದ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಾರದೆಂದೂ ತಾಯಿಯ ಕಡೆಯವರೇ ನಿಸ್ವಾರ್ಥ ಬಂಧುಗಳೆಂದೂ ಉಪದೇಶಿಸಿದನಂತೆ ದುರ್ಯೋಧನ ಮಹಾರಾಜನಿಗೆ, ಆತನ ಸೋದರಮಾವ ಶಕುನಿ. ದುರ್ಯೋಧನನೂ ಆತನ ಮಾತಿಗೇ ಮರುಳಾದ, ಬಲಿಯಾಗಿ ಬಿದ್ದ; ಕೊನೆಗೆ ಮಣ್ಣುಮುಕ್ಕಿದ. ಇತಿಹಾಸ ಕಾಲದಲ್ಲಿ ಮಗಳು ವಿಧವೆಯಾದರೂ ಚಿಂತಿಲ್ಲವೆಂದ ಜಯಚಂದ ಅಳಿಯ ಪೃಥ್ವೀರಾಜನನ್ನು ಕೊಲ್ಲಲು ಘೋರಿ ಮಹಮ್ಮದನ ಸಹಾಯ ಯಾಚಿಸಿದ. ಶ್ರೀಮತಿ ಗಾಂಧಿಯವರು ತನ್ನ ಇಂಡಿಕೇಟನ್ನು ಬಲಪಡಿಸಲು, ಅದಾಗದೆ ಹೋದರೂ ತನ್ನ ಸಿಂಹಾಸನವನ್ನು ಬಿಗಿಯಿಟ್ಟುಕೊಳ್ಳಲು ಸಿಂಡಿಕೇಟನ್ನು ಮಟ್ಟಮಲಗಿಸಲು ದೇಶದ್ರೋಹಿ ಪಕ್ಷಗಳ ನೆರವನ್ನು ಹೊಂದಿದ್ದಾರೆ. ಅವರನ್ನು, ಅವರಲ್ಲಿ ತುಂಬಿ ತುಳುಕಾಡುವ ರಾಷ್ಟ್ರಘಾತಕ ತೃಷೆಗಳನ್ನು ತಣಿಸಲು ಸಿಂಡಿಕೇಟ್ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ನಿರಪರಾಧಿ ಶ್ರೀಸಾಮಾನ್ಯರನ್ನು ಸದೆಬಡಿಯಲು ಸೊಂಟಕಟ್ಟಿದ್ದಾರೆ.

ಶ್ರೀಮತಿ ಗಾಂಧಿಯವರು ತಮ್ಮ ರಾಜಕೀಯ ದಾಳವನ್ನು ಮೊದಲು ಉರುಳಿಸಿದ್ದು ಸ್ವರಾಜ್ಯ ಉತ್ತರ ಪ್ರದೇಶದಲ್ಲಿ. ಅಲ್ಲಿನ ಚಂದ್ರಭಾನು ಗುಪ್ತರ ಅರ್ಧಸ್ಥಿರ ಸರಕಾರವನ್ನು ಉರುಳಿಸಿ ಪೂರ್ಣ ಅಸ್ಥಿರ ಸರಕಾರವನ್ನು ಸ್ಥಾಪಿಸಿದರು. ಮುಂದಿನ ಚುನಾವಣೆಯ ಹೊತ್ತಿಗೆ ಜನತೆ ತಮಗೇ ಒಲಿಯಬೇಕೆಂಬ ರಾಜಕೀಯ ದುರುದ್ದೇಶವೇ ಇದಕ್ಕೆ ಪ್ರೇರಕ ಶಕ್ತಿ. ಇಂತಹುದೇ ಮತ್ತೊಂದು ಆಟವನ್ನವರು ಬಿಹಾರದಲ್ಲಿ ಆಡಿದರು. ಸಿಂಡಿಕೇಟಿಗೆ ಸರಕಾರ ರಚಿಸುವ ಬಲವಿಲ್ಲವೆಂದು ನಗಾರಿ ಬಾರಿಸಿದರು. ಉತ್ತರದ ರಾಜಕೀಯ ನಾಟಕ—ವಿಡಂಬನೆ ಹಿಂದಿನಿಂದಲೂ ನಡೆಯುತ್ತಿದ್ದದ್ದು, ಇಂದಿಗೂ ನಡೆಯುತ್ತಿರುವಂಥದ್ದು ಪಶ್ಚಿಮ ಬಂಗಾಳದಲ್ಲಿ. ಆದರೆ, ಶ್ರೀಮತಿ ಗಾಂಧಿಯವರು ಈ ಪ್ರಹಸನವನ್ನು ಮೂಕ ಪ್ರೇಕ್ಷಕರಾಗಿಯೇ ನೋಡುವಲ್ಲಿ ತೃಪ್ತರಾಗಿದ್ದಾರೆ. ಕಾನೂನು—ಸುರಕ್ಷೆಗಳನ್ನು ಗಾಳಿಗೆ ತೂರಿ, ಶ್ರೀಸಾಮಾನ್ಯನ ಹಿತವನ್ನು ಪಾತಾಳಕ್ಕೆ ಮೆಟ್ಟಿ ಅಲ್ಲಿ ವಾಮ ಕಮ್ಯೂನಿಸ್ಟರು ಅರಾಜಕತೆಯನ್ನೇ ರಾಜಕೀಯೆಂದು ಹೆಸರಿಸುತ್ತಿರುವರಾದರೂ ಶ್ರೀಮತಿಯವರು ಶ್ರೀಮದ್ಗಾಂಭೀರ್ಯವನ್ನು ಒಡೆಯಲಿಲ್ಲ. ಅವರು ಬಾಯಿ ಬಿಟ್ಟರೆಂದರೆ, ಅವರ ಸಿಂಹಾಸನ ಗಡಗಡನೆ ಅಲ್ಲಾಡುವುದು; ಅವರೂ ಉರುಳಿ ಮುಗ್ಗರಿಸುತ್ತಾರೆ.

ಶ್ರೀಮತಿ ಗಾಂಧಿಯವರು ಕಾಂಗ್ರೆಸ್ಸೇತರ ಪಕ್ಷಗಳ ಬೆಂಬಲದಿಂದಲೇ ಇಂದು ಸಿಂಹಾಸನಾಧೀಶ್ವರಿಯಾಗಿದ್ದಾರೆ. ಆದುದರಿಂದ ಕಾಂಗ್ರೆಸ್ಸೇತರ ಸರಕಾರಗಳನ್ನು ಏನಕೇನಪ್ರಕಾರೇಣ ತೃಪ್ತಿಪಡಿಸುವುದಗತ್ಯ. ಚಂಡಿಗಡವನ್ನು ಪಂಜಾಬಿಗೆ ಕೊಡಮಾಡಿದ್ದು ಇದಕ್ಕೆ ನಿದರ್ಶನ. ನಾಲ್ಕು ವರ್ಷಗಳ ಕೆಳಗೆ ಶ್ರೀಮತಿಯವರು ಪಂಜಾಬಿ ರಾಜ್ಯರಚನೆ ಮಾಡಿದಾಗ ಇತ್ಯರ್ಥ ಮಾಡಲಾಗದ "ಚಂಡಿಗಡ" ಕಾಂಗ್ರೆಸ್ ವಿಭಜನೆಯಾದೊಡನೆಯೇ ಸಲೀಸಾಗಿ ಸಾಗಿತು. ಈಗ ಅವರು ಮರಾಠಿಗರನ್ನು ತೃಪ್ತಿಪಡಿಸ ಹೊರಟಿದ್ದಾರೆ. ಕರ್ನಾಟಕದ ಕಾಂಗ್ರೆಸ್ಸು ತನಗೆ ನಿಷ್ಠವಿಲ್ಲದಿದ್ದುದರಿಂದ ಶ್ರೀಮತಿಯವರು ಕೆರಳಿದ ಸರ್ಪಿಣಿಯಾಗಿದ್ದಾರೆ. ಶ್ರೀ ನಿಜಲಿಂಗಪ್ಪನವರ ಮೇಲೆ ಅವರಿಗೆ ವ್ಯಕ್ತಿಗತದ್ವೇಷ ತುಂಬಿ ತುಳುಕಾಡುತ್ತಿದೆ. ಸಿಂಡಿಕೇಟನ್ನು ಭಗ್ನಗೊಳಿಸಿ ಇಂಡಿಕೇಟನ್ನು ಬಲಪಡಿಸುವ ಅವರ ಇರಾದೆಯೀಗ ವಕ್ರದಾರಿ ಹಿಡಿದಿದೆ. ಬೆಳಗಾಂವಿಯು ದೊರೆಯದೆ ಹೋದರೆ, ಮರಾಠಿಗರ ಬೆಂಬಲಕ್ಕೆರವಾಗಬೇಕಾದೀತು. ಶ್ರೀಮತಿಯವರು ಆದುದರಿಂದಲೇ ಮಹಾಜನ ವರದಿಯನ್ನು ತಿಪ್ಪೆಗೆಸೆದು ಬೆಳಗಾಂವಿ ವಿಭಜನೆಯ ಸಲಹೆ ನೀಡಿದ್ದಾರೆ. ಇಡೀ ಬೆಳಗಾಂವಿಯನ್ನೇ ಬಯಸುವ ಮರಾಠಿಗರೂ ಮಹಾಜನ ವರದಿಯೇ ಅಂತಿಮವೆಂದು ತಿಳಿದ ಕನ್ನಡಿಗರೂ ಈ ಸಲಹೆಯನ್ನು ತಿರಸ್ಕರಿಸುವುದು ಸಹಜ. ಆದರೆ, ಇಲ್ಲಿ ಕನ್ನಡಿಗರಿಗೆ ಆಗುವ ಅನ್ಯಾಯವನ್ನು, ಅಧರ್ಮವನ್ನು ತಮ್ಮ ರಾಜಕೀಯ ದ್ವೇಷಜ್ವಾಲೆಗೆ ಕನ್ನಡಿಗರನ್ನು ಬಲಿಗೊಡುವ ಶ್ರೀಮತಿ ಮನೋಭಾವವನ್ನು ಖಂಡಿಸಲೇ ಬೇಕಾಗಿದೆ. ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಾನು ಈ ಪದವಿಯಲ್ಲಿರುವವರೆಗೆ ಬೆಳಗಾಂವಿ ಕೈತಪ್ಪುವುದಿಲ್ಲವೆಂದು ವೀರವಾಣಿ ನುಡಿದಿದ್ದಾರೆ. ಕೇಂದ್ರಕ್ಕೆ ಸಲಹೆಗಳ ಸಂಪೂರ್ಣ ವಿವರಗಳನ್ನು ಕೇಳಿ ಪತ್ರ ಬರೆದಿದ್ದಾರೆ. ಇದಕ್ಕೆ ಶ್ರೀಮತಿಯವರು ಇನ್ನೂ ಮೌನದಿಂದಿರುವ ಅರ್ಥವೇನೆಂದರೆ, ತನ್ನ ವಿಭಜನಾ ಸೂತ್ರ ಕನ್ನಡಿಗರ ಮುಂದೆ ಸಾಗುವುದಿಲ್ಲವೆಂದೇ.

ಇದೇ ಗಳಿಗೆಯಲ್ಲಿ ಶ್ರೀಮತಿ ಗಾಂಧಿಯವರು ಮತ್ತೊಂದು ಆಘಾತ ಮಾಡಿದರು. ನೀರಾವರಿ ಮಂತ್ರಿ ಡಾ॥ ಕೆ.ಎಲ್. ರಾವ್ ಅವರು ರಾಜ್ಯ ಮುಖ್ಯಮಂತ್ರಿಗೊಂದು ಪತ್ರಬರೆದು ಕಾವೇರಿ ನದೀ ಕಣಿವೆಯ ಯೋಜನೆಗಳನ್ನು ಯೋಜನಾ ಆಯೋಗದಿಂದ ಅನುಮತಿ ಬರುವವರೆಗೆ ನಿಲ್ಲಿಸಬೇಕೆಂದು ತಿಳಿಸಿದ್ದಾರೆ. ಇದು ಆದೇಶವೇ, ಸಲಹೆಯೇ, ಎಂಬುದು ಸ್ಪಷ್ಟವಾಗಿಲ್ಲ. ಅದರೂ ತಮಿಳುನಾಡಿನ ಡಿ.ಎಂ.ಕೆ.ಯ ಬೆಂಬಲವುಳಿಸಿಕೊಳ್ಳಲು ಶ್ರೀಮತಿ ಗಾಂಧಿಯವರು ಹೂಡಿದ ಹೊಸ ತಂತ್ರವಿದು. ಕಾವೇರೀ ನದೀ ನೀರಿನ ಸಿಂಹಪಾಲನ್ನು ತಮಿಳುನಾಡಿಗೆ ನೀಡಿ ಅಲ್ಲಿ ಕಾಮರಾಜ ಪಟಾಲೆಯನ್ನು ಮುರಿದು ತನ್ನ ಧ್ವಜ ಹಾರಾಡಿಸುವ ಮಹತ್ವಾಕಾಂಕ್ಷೆಯಿಂದ ಕೂಡಿದ್ದು. ಕರ್ನಾಟಕವು ಕಾವೇರಿ ಕಣಿವೆಯಲ್ಲಿ ಹಲವು ಕೋಟಿ ರೂಪಾಯಿಗಳನ್ನು ಸುರುವಿದೆ. ಈಗ ಯೋಜನೆಯನ್ನು ಸ್ಥಗಿತಗೊಳಿಸುವುದೆಂದರೆ, ರಾಜ್ಯದ ಜನತೆಗೆ ದ್ರೋಹ ಬಗೆದಂತೆ. ಮರಾಠಿ ದಾಳ ಪರಿಣಾಮವಾಗದ್ದರಿಂದ ಇಂದಿರಾಜಿ ತಮಿಳು ದಾಳವನ್ನು ಎಸೆದಿದ್ದಾರೆ. ಇದಕ್ಕೂ ಮುಖ್ಯಮಂತ್ರಿಯವರು ಕಟಕ್ಕಿನ ಉತ್ತರ ನೀಡಲಿದ್ದಾರೆ. ಯೋಜನೆಗಳನ್ನು ನಿಲ್ಲಿಸಲು ನಿರಾಕರಿಸಿದ್ದಾರೆ. ಕೇಂದ್ರವು ತಾನೊಲ್ಲದ ಸರಕಾರವನ್ನು ಯಾವ ಯಾವ ಬಗೆಯಲ್ಲಿ ಭಂಗಪಡಿಸಬಹುದೋ ಅವೆಲ್ಲವಕ್ಕೂ ಶ್ರೀ ಪಾಟೀಲರು ಸಿದ್ಧರಿದ್ದಾರೆ. ಕನ್ನಡಿಗರು ಒಂದಾಗಿ ಕೇಂದ್ರ ಸರಕಾರದ ಈ ಕುಟಿಲ ರಾಜಕೀಯ ನೀತಿಯನ್ನು ಎಂಟೆದೆಯಿಂದ ಎದುರಿಸುವಲ್ಲಿ ಮುಖ್ಯಮಂತ್ರಿ ಶ್ರೀ ಪಾಟೀಲರ ಭುಜಕ್ಕೆ ಭುಜ ಕೊಡಬೇಕು. ಶ್ರೀಮತಿ ಗಾಂಧಿಯವರ ರಾಜಕೀಯ ದ್ವೇಷಸಾಧನಾಪ್ರೇರಿತ ರಾಜ್ಯನೀತಿಯನ್ನು ಏಕಮುಖದಿಂದ ಒಕ್ಕೊರಲಿನಿಂದ ವಿರೋಧಿಸಿ ಯಶ ಗಳಿಸಬೇಕು.

ಭಾಷೆಗಳಿಗೆ ಅಪಮಾನ

ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕೆಂಬುದೇ ರಾಜ್ಯ ಪುನರ್ವಿಂಗಡಣೆಯ ಉದ್ದೇಶ. ಆದರೆ, ಬ್ರಿಟಿಷ್ ಗುಲಾಮಿಯ ನೊಗದಿಂದ ಹೊರಬಂದರೂ ಸ್ವಾತಂತ್ರ್ಯ, ಮತ್ತು ತಮ್ಮತನಗಳಿಗಿಂತ ಬ್ರಿಟಿಷ್ ನೊಗವೇ ಆಪ್ಯಾಯಮಾನವೆಂಬ ಕೆಲವು ಮಂದಿ ಕುಳಗಳ ಕೈವಾಡ ಸರಕಾರದ ಕಾರ್ಯಾಂಗದಲ್ಲಿ ನಡೆಯುತ್ತಿದೆ. ರಾಜ್ಯ ಸರಕಾರವು ಇತ್ತೀಚೆಗೆ ತನ್ನ ನೌಕರರ ವೇತನವನ್ನು ತಕೋಳ ಆಯೋಗದ ಸಲಹೆಯ ನೆಲೆಯಲ್ಲಿ ಪರಿಷ್ಕರಿಸಿತು. ಆದರೆ, ಪರಿಷ್ಕರಣೆಯಲ್ಲಿ ಹಿಂದಿನ "ಬ್ರಿಟಿಷ್ ನೀತಿ" ಎದ್ದು ತೋರುತ್ತದೆ. ಕೆಲವೊಂದು ವೇಳೆ ಅದನ್ನೂ ನಾಚಿಸುತ್ತದೆ.

ಸೆಕೆಂಡರಿ ತರಬೇತಾದವರಿಗೆ ಮುನ್ನೂರು ರೂಪಾಯಿ ವೇತನವಾದರೆ ಪದವೀಧರ ತರಬೇತಾದವರಿಗೆ ರೂ. ನೂರ ಎಪ್ಪತ್ತೈದು. ಈ ಆಕಾಶಪಾತಾಳದ ಅಂತರ ಪ್ರಾಥಮಿಕ ಶಿಕ್ಷಣದ ಮೇಲೆ ಭೀಕರ ಪರಿಣಾಮ ಬೀರದುಳಿಯದು. ಭಾಷಾ ಪಂಡಿತರಿಗೆ ತರಬೇತಿ ನೀಡುವ ಹೊಸ ಅವಕಾಶವನ್ನೂ ಕಲ್ಪಿಸದೆ ಅವರನ್ನು ತ್ರಿಶಂಕು ಸ್ವರ್ಗದಲ್ಲಿರಿಸಿದ್ದು ಭಾರತೀಯ ಭಾಷೆಗಳಿಗೆ ಭಾರತದ ಒಂದು ರಾಜ್ಯದಲ್ಲಿ ಆದ ಅಪಮಾನ. ಇವರಿಗೆ ಈಗ ೧೩೦ ರೂಪಾಯಿಗಳ ಮೂಲವೇತನವಿದ್ದು ಪರಿಷ್ಕಾರಗೊಂಡಾಗಲೂ ಇದೇ ಉಳಿಯುವುದು. ಪರಿಷ್ಕರಣದಿಂದ ಚಿಕ್ಕಾಸೂ ಲಾಭ ದೊರೆಯುವುದಿಲ್ಲ ಮಾತ್ರವಲ್ಲ, ಮುಂದಿನ ಭಡ್ತಿ ವಗೈರೆಗಳಿಗೆ ಬಾಧೆ ಬಂದರೂ ಬರಬಹುದು. 'ಇಂಗ್ಲಿಷ್ ಬಲ್ಲವರು ಮಾತ್ರ ಸುಸಂಸ್ಕೃತರು; ಉಳಿದವರು ಅನಾಗರಿಕರು, ಗೊಡ್ಡು ಪಂಡಿತರು' ಎಂಬ ಆಂಗ್ಲಕಿರೀಟಧಾರಿ ಮನೋಭಾವ ಜನತಾ ಜನಾರ್ದನನ ಕಾಲದಲ್ಲಿ ಮತ್ತೆ ಮೂಡಿದ್ದು ನಾಚಿಗೇಡು. ತಮಗಾದ ಅಪಮಾನವನ್ನು, ಅನ್ಯಾಯವನ್ನು ಭಾಷಾ ಪಂಡಿತರು ಸಹಿಸಿಯಾರೆ? ಸರಕಾರವು ಕಾಲ—ಮಾನವನ್ನರಿತು ತರಬೇತಾದ ಪದವೀಧರರ ವೇತನ ಶ್ರೇಣಿಯನ್ನು ಅವರಿಗೆ ಅನುಗ್ರಹಿಸಿ ಅವರಿಗೂ ಭಾರತೀಯ ಭಾಷೆಗಳಿಗೂ ಇಂಗ್ಲಿಷ್ ಭಾಷೆಗಿಂತ ಉನ್ನತವಲ್ಲವಾದರೂ ಅದಕ್ಕೆ ನೀಡಿದ ಸ್ಥಾನಮಾನವನ್ನಾದ್ರೂ ದಯಪಾಲಿಸಬೇಕು. ಇಲ್ಲವಾದರೆ, ಪರಿಣಾಮ ಭೀಕರವಾಗುವುದು ಖಂಡಿತ. ಭಾಷಾ ಪಂಡಿತರು ಸಾಮಾನ್ಯವಾಗಿ ಇತರ ಅಧ್ಯಾಪಕರಿಗಿಂತ ಹೆಚ್ಚಿನ ಸೇವೆ ಸಲ್ಲಿಸುತ್ತಾರೆ. ವೇತನ ಶ್ರೇಣಿಯಲ್ಲಿರುವ ಅಂತರ ಒಡೆದು ಆಳುವ ಬ್ರಿಟಿಷ್ ನೀತಿಯ ಪುನರಾವರ್ತನೆ. ಭೇದ ಕಲ್ಪಿಸಲು ಬಿತ್ತಿದ ಬೀಜ. ಸರಕಾರದೊಡನೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಕೊಳ್ಳುವುದೀಗ ಪಂಡಿತ ವರ್ಗದ ಹೊಣೆ.

ಸ್ವೀಕಾರ

ಕಥೆ ಮತ್ತು ಕಥಾವಸ್ತು (ಮೂರು ಪ್ರಬಂಧಗಳು) ಲೇ. ಶ್ರೀ ಎಸ್. ಎಲ್. ಭೈರಪ್ಪ, ಪುಟ 1/8 ಕ್ರೌನ್ 162, ಬೆಲೆ ರೂ. 3.50.

ಪ್ರಕಾಶಕರು—ಸಾಹಿತ್ಯ ಭಂಡಾರ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ-೨೦, ರಾಷ್ಟ್ರೀಯ ವಿದ್ಯಾಲಯ ಬೀದಿ, ವಿಶ್ವೇಶ್ವರಪುರ, ಬೆಂಗಳೂರು-೪.

ಮೊಟಕು

ಕಿರಿ ಮಂಜೇಶ್ವರದ ಇತಿಹಾಸ

ಲೇಖಕರು: ಶ್ರೀ ಕೆ. ಜಿ. ವಸಂತಮಾಧವ, ಎಂ. ಎ.

ಕೆನರಾ ಜಿಲ್ಲೆಯಲ್ಲಿ ಧಾರ್ಮಿಕ ದೃಷ್ಟಿ ಹಾಗೂ ಐತಿಹಾಸಿಕ ದೃಷ್ಟಿಯಿಂದ ಕೂಡಿದ ಪುಣ್ಯಕ್ಷೇತ್ರಗಳಲ್ಲಿ ಈಗಿನ ಕಿರಿ ಮಂಜೇಶ್ವರವು ಒಂದಾಗಿದೆ. ಈ ಕ್ಷೇತ್ರದ ಹಿರಿಮೆ ಮತ್ತು ಐತಿಹಾಸಿಕ ಘಟನೆಗಳನ್ನು ಸ್ಕಂದ ಪುರಾಣದ ಅಪರಖಂಡ, ವಿಜಯನಗರದ ಶಾಸನಗಳು ಮತ್ತು ಇಂಗ್ಲೀಷ್ ಪ್ರವಾಸಿ ಬುಕಾನನ್ ವರದಿಗಳು ತಿಳಿಸುತ್ತವೆ. ಈ ಕಿರಿಮಂಜೇಶ್ವರ ಕುಂದಾಪುರದಿಂದ ಒಂಭತ್ತು ಮೈಲು ಉತ್ತರದ ಸಮುದ್ರ ತಟದಲ್ಲಿದೆ. ಇಲ್ಲಿ ಸಮುದ್ರ ದಡದಲ್ಲಿರುವ ಕಿರಿಮುನೀಶ್ವರ ದೇವಾಲಯ, ಷಣ್ಮುಖದುರ್ಗೆ ಮತ್ತು ಗಣಪತಿ ದೇವಾಲಯಗಳು, ಕಮಂಡಲ ತೀರ್ಥ, ಅಗಸ್ತ್ಯತೀರ್ಥಗಳು ಮತ್ತು ಈಗ ಮುಚ್ಚಿಕೊಂಡಿರುವ ಸಿದ್ಧತೀರ್ಥ ಇವು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಇಲ್ಲಿರುವ ಶಿವ ದೇವಾಲಯವನ್ನು ಅಗಸ್ತ್ಯ ಮುನಿಗಳು ಸ್ಥಾಪಿಸಿದ ಕಾರಣ ಈ ಊರನ್ನು ಕಿರಿ ಮುನೀಶ್ವರ ಎಂದೂ ಕರೆಯಲಾಗುತ್ತಿತ್ತು. ಅದು ಈಗ ಕಿರಿ ಮಂಜೇಶ್ವರ ಆಗಿದೆಯೆಂದು ಇಲ್ಲಿನ ಜನರು ಹೇಳುವರು. ವಿಜಯನಗರ ಕಾಲದಲ್ಲಿ ಸಿಕ್ಕಿದ ಶಾಸನಗಳು ಈ ಸ್ಥಳವನ್ನು ಕಿರು ಮಂಡಲೇಶ್ವರವೆಂದು ಉಲ್ಲೇಖಿಸಿವೆ. ಸ್ಕಂದ ಪುರಾಣದ ಪ್ರಕಾರ ಅಗಸ್ತ್ಯರು ಇಲ್ಲಿ ಮಂಡಲವಿಟ್ಟಾಗ ತೀರ್ಥವಾದ ಕಾರಣ ಈ ಸ್ಥಳವನ್ನು ಕಿರು ಮಂಡಲೇಶ್ವರವೆಂದು ಕರೆಯಬಹುದು. ಇದು ಮೇಲಿನ ಹೇಳಿಕೆಗೆ ಬಲವಾದ ಆಧಾರ. ಹತ್ತೊಂಬತ್ತನೇ ಶತಮಾನದಲ್ಲಿ ಬಂದ ಇಂಗ್ಲೀಷ್ ಯಾತ್ರಿಕ ಈ ಸ್ಥಳವನ್ನು ಕಿರಿ ಮಂಜೇಶ್ವರವೆಂದೇ ಉಲ್ಲೇಖಿಸಿದ್ದಾನೆ.

ಸ್ಕಂದ ಪುರಾಣದ ವಿವರ: ಸ್ಕಂದ ಪುರಾಣದ ಅಪರಖಂಡದ 76-77 ನೇ ಅಧ್ಯಾಯದಲ್ಲಿ ಈ ಸ್ಥಳವನ್ನು ನಾಗಪುರವೆಂದು ತಿಳಿಸಿದೆ. ಈ ನಾಗಪುರಕ್ಕೆ ಕಿರಿಮಂಜೇಶ್ವರ ಮತ್ತು ನಾಗೂರು ಗ್ರಾಮಗಳು ಸೇರಿದ್ದುವು. ಈ ಗ್ರಂಥದ ಪ್ರಕಾರ ಅಗಸ್ತ್ಯರು ದಕ್ಷಿಣಕ್ಕೆ ತೆರಳುವಾಗ ಇಲ್ಲಿಗೆ ಬಂದಿದ್ದರು. ತಮ್ಮ ಕಮಂಡಲ ಇಲ್ಲಿ ಇಟ್ಟಾಗ ಅಕಸ್ಮಾತ್ ತೀರ್ಥವಾದ ಕಾರಣ ಈ ಸ್ಥಳಕ್ಕೆ ಬಹಳ ಮಹಿಮೆ ಇದೆ ಎಂಬ ಕಾರಣದಿಂದ, ಕಮಂಡಲು ತೀರ್ಥದ ಈಶಾನ್ಯ ದಿಕ್ಕಿಗೆ ಸಮುದ್ರ ತೀರದಲ್ಲಿ ಒಂದು ಉತ್ತಮ ಸ್ಥಳವನ್ನು ನೋಡಿ ಅಲ್ಲಿ ಅಗಸ್ತ್ಯರು ಒಂದು ಶಿವಲಿಂಗ ಪ್ರತಿಷ್ಠೆ ಮಾಡಿದರು. ಆದುದರಿಂದ ಈ ದೇವಸ್ಥಾನಕ್ಕೆ ಅಗಸ್ತ್ಯೇಶ್ವರ ದೇವಾಲಯವೆನ್ನುತ್ತಾರೆ.

ಈ ಸ್ಕಂದ ಪುರಾಣವು ಅಷ್ಟಾದಶ ಪುರಾಣಗಳಲ್ಲಿ ಒಂದಾಗಿದೆ. ಅದರಲ್ಲಿರುವ ಸಹ್ಯಾದ್ರಿ ಮತ್ತು ಅಪರಖಂಡಗಳು ಬೇರೆ ಬೇರೆ ಕಾಲದಲ್ಲಿ ಬರೆಯಲ್ಪಟ್ಟಿರಬಹುದೆಂದು ತೋರುತ್ತದೆ. ಈ ಗ್ರಂಥದಲ್ಲಿ ಬರುವ ಕೆಲವು ಸಾಮಾಜಿಕ, ಐತಿಹಾಸಿಕ ಘಟನೆಗಳು 13ನೇ ಶತಮಾನದಲ್ಲಿ ನಡೆದ ಘಟನೆಗಳಾಗಿವೆ. ಅದರಲ್ಲಿ ಅಗಸ್ತ್ಯ ಮಹಾತ್ಮ್ಯದಲ್ಲಿ ಬರುವ ಕೆಲವು ಘಟನೆ 8ನೇ ಶತಮಾನದ ನಂತರದವುಗಳಾಗಿವೆ. ಆದುದರಿಂದ ಈ ಗ್ರಂಥದಲ್ಲಿರುವ ಹಲವಾರು ಖಂಡಗಳು ಕಾಲಾನುಕ್ರಮದಲ್ಲಿ ಸೇರಿಸಲ್ಪಟ್ಟವು. ಒಟ್ಟಿನಲ್ಲಿ ಈ ಗ್ರಂಥವು ಏಕ ಕಾಲದಲ್ಲಿ ರಚಿತವಾದದ್ದಲ್ಲ.

ಇನ್ನು ಈ ಪುರಾಣದಲ್ಲಿ ಹೇಳಿದ ಅಗಸ್ತ್ಯರಾರು? ಇವರು ಶಿವಲಿಂಗವನ್ನು ಇಲ್ಲಿ ಯಾವ ಕಾಲದಲ್ಲಿ ಸ್ಥಾಪಿಸಿದ್ದರೆಂದು ತಿಳಿಯುವುದು ಅಗತ್ಯವಿದೆ. ಈ ಅಗಸ್ತ್ಯರ ಕುರಿತಾಗಿ ತಮಿಳರಲ್ಲಿ ಹಲವಾರು ಕತೆಗಳಿವೆ. ಕೆಲವು ತಮಿಳು ಗ್ರಂಥಗಳು ಅಗಸ್ತ್ಯರ ದಕ್ಷಿಣ ವಾಸದ ಕುರಿತಾಗಿ ತಿಳಿಸುತ್ತದೆ. ಅಗಸ್ತ್ಯರು ತಮಿಳು ವ್ಯಾಕರಣ ರಚಿಸಿದ್ದರೆಂದೂ, ಮತ್ತು ಅವರು ಪಾಂಡ್ಯ ಚಕ್ರವರ್ತಿಗಳ ಕುಲಗುರುಗಳಾಗಿದ್ದರೆಂದು ತಮಿಳರ ನಂಬಿಕೆ. ಚಾರಿತ್ರಿಕವಾಗಿ ಈ ಘಟನೆಯನ್ನು ತಿಳಿಸುವುದಾದರೆ ಅಗಸ್ತ್ಯರು ಆರ್ಯ ಸಂಸ್ಕೃತಿಯನ್ನು ದಕ್ಷಿಣದಲ್ಲಿ ಪ್ರಚಾರ ಮಾಡಿದರೆಂದು ಕೆಲವು ಇತಿಹಾಸಕಾರರ ಅಭಿಪ್ರಾಯವಿದೆ. ಈ ಆರ್ಯ ಸಂಸ್ಕೃತಿಯು ದಕ್ಷಿಣ ಭಾರತದಲ್ಲಿ ಕ್ರಿ. ಪೂ. 6ನೇ ಶತಮಾನದಿಂದ ಆರಂಭವಾಯಿತು ಎಂಬ ಅಭಿಪ್ರಾಯವನ್ನು ಇಲ್ಲಿ ನೆನೆಯಬೇಕು. ಆದರೆ ಕ್ರಿ. ಶ. 4 ಅಥವಾ 5ನೇ ಶತಮಾನದ ತಮಿಳರ ಗ್ರಂಥಗಳು ಅಗಸ್ತ್ಯರ ವಿಚಾರವಾಗಿ ಏನೂ ಹೇಳುವುದಿಲ್ಲ. ತಮಿಳಿನ ಪ್ರಾಚೀನ ಗ್ರಂಥವಾದ ತೊಲಕಾಪ್ಪಿಯಮ್ (Tolukappiyam)ದಲ್ಲಿ ಇವರ ವಿಚಾರವೇ ಇಲ್ಲ. ಅಗಸ್ತ್ಯರ ವಿಚಾರ ಮೊಟ್ಟಮೊದಲು ತಮಿಳು ಗ್ರಂಥಗಳಲ್ಲಿ ಬರುವುದು ಕ್ರಿ. ಶ. 8ನೇ ಶತಮಾನದಲ್ಲಿ. ಆದುದರಿಂದಾಗಿ ಅಗಸ್ತ್ಯರ ಕುರಿತಾದ ಕಥೆಗಳು 8 ಅಥವಾ 9ನೇ ಶತಮಾನದ ನಂತರ ಪ್ರಚಾರಕ್ಕೆ ಬಂದಿರಬೇಕು. ಎರಡನೆಯದಾಗಿ ಅಗಸ್ತ್ಯರು ಸ್ಕಂದ ಪುರಾಣದಂತೆ ಲವಣ ಸಮುದ್ರ ದಡದಲ್ಲಿರುವ ನಾಗಪುರದಲ್ಲಿ ಶಿವಲಿಂಗ ಸ್ಥಾಪಿಸಿ, ತೀರ್ಥದ ನೀರಿನಿಂದ ಅಭಿಷೇಕ ಮಾಡಿ, ಗಂಧ ಪುಷ್ಪಾದಿಗಳಿಂದ ಪೂಜಿಸಿ, ಭಕ್ಷ್ಯ ಭೋಜ್ಯಾದಿ ನೈವೇದ್ಯ ಮಾಡಿ ನೀಲಾಂಜನ ಮಂತ್ರಪುಷ್ಪದಿಂದ ಪ್ರದಕ್ಷಿಣೆಗೈದರು. ಈ ರೀತಿಯ ಪೂಜಾಕ್ರಮ ದಕ್ಷಿಣ ಭಾರತದ ಹಿಂದುಗಳಲ್ಲಿ ಕ್ರಿ.ಶ. 8 ನೇ ಶತಮಾನದ ನಂತರ ರೂಢಿಗೆ ಬಂದಂತೆ ತೋರುತ್ತದೆ. ಈ ಮೊದಲು ಪೂಜಾಕ್ರಮ ಈ ರೀತಿಯಲ್ಲಿರಲಿಲ್ಲವೆಂದು ಇತಿಹಾಸದ ಘಟನೆಗಳು ತಿಳಿಸುತ್ತವೆ. ಆದುದರಿಂದ ಈ ದೇವಸ್ಥಾನವನ್ನು ಅಗಸ್ತ್ಯರು ಪ್ರತಿಷ್ಠಾಪನೆ ಮಾಡಿದರೆಂಬ ಹೇಳಿಕೆ 8ನೇ ಶತಮಾನದ ನಂತರ ಬಳಕೆಗೆ ಬಂದಿತೆಂದು ಊಹಿಸಬಹುದು. ಆದರೆ ಆ ಕಾಲದಲ್ಲಿ ಆಳಿದ ಆಲುಪ ಅರಸರ ಶಾಸನಗಳು ಈ ದೇವಸ್ಥಾನದ ವಿಚಾರ ಉಲ್ಲೇಖ ಮಾಡದಿರುವುದನ್ನು ಗಮನಿಸುವುದು ಆವಶ್ಯಕ.

ಶಾಸನಗಳಲ್ಲಿ: ವಿಜಯನಗರದ ಕೆಲವು ಶಾಸನಗಳು ಕಿರು ಮಂಜೇಶ್ವರ ದೇವಸ್ಥಾನ ಮತ್ತು ಇತರ ವಿಷಯಗಳನ್ನು ಉಲ್ಲೇಖಿಸುತ್ತವೆ. ಈ ಶಾಸನಗಳು ಈ ಪ್ರದೇಶವನ್ನು ಕಿರು ಮಂಡಲೇಶ್ವರ ಎಂದು ಉಲ್ಲೇಖಿಸಿದೆ. ಈ ಪ್ರದೇಶದ ವಿವರವನ್ನು ಮೊತ್ತ ಮೊದಲು ತಿಳಿಸುವ ಶಾಸನವೇ "ಕಂಚಿಕಾನ"ಯ "ಹಟ್ಟಿಹನೆ"ಯಲ್ಲಿ ಸಿಕ್ಕಿದ ಶಾಸನ. ಈ ಶಾಸನದ ಕಾಲ ಕ್ರಿ.ಶ. 1349. ಈ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಬಾರಕೂರು ರಾಜ್ಯಕ್ಕೆ ಒಳಪಟ್ಟಿದೆಯೆಂದೂ, ಮಲ್ಲಿನಾಥನ ನಾಯ್ಕನು ಬಾರಕೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದನೆಂದೂ ಈ ಶಾಸನ ತಿಳಿಸುತ್ತದೆ. ಕ್ರಿ. ಶ. 1359ರ ಕೊಡೇರಿ ಹಕ್ಕಲದ ಶಾಸನವು ವಿಜಯನಗರದ ಅರಸ ಬುಕ್ಕರಾಯನನ್ನು ಉಲ್ಲೇಖಿಸಿ ವಿಠಣ್ಣ ನಾಯಕನು ವಿಜಯನಗರದ ಅರಸರಿಗೆ ಶ್ರೇಯಸ್ಸು ದೊರೆಯಬೇಕೆಂದು ಆನೆ ಬಯಲನ್ನು ಕಿರುಮಂಡಲೇಶ್ವರ ದೇವರಿಗೆ ದತ್ತಿ ಬಿಟ್ಟದ್ದನ್ನು ತಿಳಿಸುತ್ತದೆ. ಕ್ರಿ. ಶ. 1380ರ ಕಂಬದಕೋಣೆಯಲ್ಲಿದ್ದ ತಾಮ್ರಶಾಸನವು ಈ ಪ್ರದೇಶದಲ್ಲಿರುವ ಆಡಳಿತ ವಿಭಾಗಗಳಾದ ಹೋಬಳಿ, ಸೀಮೆ, ಮಾಗಣೆ ಮತ್ತು ರಾಜ್ಯಗಳನ್ನು ತಿಳಿಸುತ್ತದೆ. ಕಿರಿಮಂಜೇಶ್ವರದ ಲಕ್ಷ್ಮೀನಾರಾಯಣ ದೇವಸ್ಥಾನದ ಎದುರು ಇರುವ ಹಾಳಾದ 15ನೇ ಶತಮಾನದ ಶಿಲಾಶಾಸನವು ರಾಮಕೃಷ್ಣ ಸರಸ್ವತಿ ಎಂಬ ವಿದ್ವಾಂಸರನ್ನು ಉಲ್ಲೇಖಿಸಿ, ಅವರ ವಿದ್ವತ್ತಿಗೆ ರಾಜನು ಕೊಟ್ಟ ಬಹುಮಾನವನ್ನು ತಿಳಿಸುತ್ತದೆ. ಕ್ರಿ. ಶ. 1514ರ ಕಂಬದ ಕೋಣೆಯಲ್ಲಿ ಸಿಕ್ಕಿದ ಇನ್ನೊಂದು ತಾಮ್ರ ಶಾಸನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಈ ಪ್ರದೇಶವು ಬಾರಕೂರು ರಾಜ್ಯದಲ್ಲಿ ಇತ್ತೆಂದು ರತ್ನಪ್ಪ ಒಡೆಯರ ಮಗ ವಿಜಯಪ್ಪ ಒಡೆಯನು ಅದನ್ನು ಆಳುತ್ತಿದ್ದನೆಂತಲೂ ತಿಳಿಸುತ್ತದೆ. ಇವನು ರಾಜನಿಗೆ ಶ್ರೇಯಸ್ಸು ಬರಲೆಂದು 20 ವರಹ ಗದ್ಯಾಣ ಯಾ 50 ಕಟ್ಟಿ ಗದ್ಯಾಣಗಳನ್ನು ಇಲ್ಲಿನ ಚಾಮರನಾಥ ಸ್ವಾಮಿ ದೇವರಿಗೆ ನಡೆಯುವ ಅಮೃತ ನಂದಾದೀಪಕ್ಕೆ ದತ್ತಿ ಬಿಟ್ಟದ್ದನು. ಈ ಶಾಸನಗಳಿಂದ ತಿಳಿದು ಬರುವುದೇನೆಂದರೆ ಇಲ್ಲಿನ ದೇವಸ್ಥಾನವು ವಿಜಯನಗರ ಕಾಲದಲ್ಲಿ ಬೆಳಕಿಗೆ ಬಂದಿತು. ಕೆಲವು ಶಾಸನಗಳು ಈ ದೇವಸ್ಥಾನದಲ್ಲಿ ನಡೆಯುವ ಪೂಜಾಕ್ರಮ, ಧಾರ್ಮಿಕ ವಿಧಿ ಮತ್ತು ಹಬ್ಬ ಹುಣ್ಣಿಮೆಗಳಲ್ಲಿ ನಡೆಯುವ ಆಚರಣೆಗಳನ್ನು ತಿಳಿಸುತ್ತವೆ. ಉದಾ: ಕೊಡೇರಿಯಲ್ಲಿ ಸಿಕ್ಕಿದ ಕ್ರಿ. ಶ 1368ರ ಶಾಸನವು ಕಿರುಮಂಡಲೇಶ್ವರದಲ್ಲಿ ನಡೆಯುವ ನಂದಾದೀಪ, ಕಾರ್ತಿಕಪೂಜೆ, 14 ಬ್ರಾಹ್ಮಣರಿಗೆ ಅನ್ನದಾನ ಸಂತರ್ಪಣೆಗಳನ್ನು ತಿಳಿಸುತ್ತದೆ. ಇಲ್ಲಿನ ಇನ್ನೊಂದು ಶಾಸನವು ಇಲ್ಲಿಯ ಅಗ್ರಹಾರಗಳ ವಿಷಯ ತಿಳಿಸುತ್ತದೆ. ಈ ಶಾಸನದ ಪ್ರಕಾರ ಇಲ್ಲಿ 14 ಅಗ್ರಹಾರಗಳಿದ್ದವು; ಈ ಅಗ್ರಹಾರದಲ್ಲಿ ಶಾಸ್ತ್ರಾಧ್ಯಯನ ನಡೆಯುತ್ತಿತ್ತು. ಅದರಂತೆ ಲಕ್ಷ್ಮೀಹೃದಯ ಪಾರಾಯಣ, ಗಣೇಶ ಉಪನಿಷತ್ತು ಪಂಚಾಂಗ ಶ್ರವಣ ನಡೆಯಿಸಲು ಉಪಾಧ್ಯಾಯರಿದ್ದರು. ಇಲ್ಲಿಯ ಪಂಡಿತರಿಗೆ ಶಾಸ್ತ್ರಾಧ್ಯಯನ ನಡೆಸಿದ್ದಕ್ಕೆ ರಾಜನಿಂದ ಉಂಬಳಿ ಸಿಗುತ್ತಿತ್ತು. ಆದರೆ ಪಂಡಿತರು ತಮ್ಮ ಕಾರ್ಯದಲ್ಲಿ ನಿರತರಾಗಿರಬೇಕೆಂಬ ಕಟ್ಟಪ್ಪಣೆ ಇತ್ತು. ಇದಕ್ಕೆ ತಪ್ಪಿದರೆ ಅವರು ದಂಡಕ್ಕೆ ಗುರಿಯಾಗಬೇಕು. ಉದಾ:— ಪಂಚಾಂಗ ಶ್ರವಣ ನಡೆಸುವ ಉಪಾಧ್ಯಾಯರು ತನ್ನ ಕೆಲಸದಲ್ಲಿ ಚ್ಯುತಿ ಮಾಡಿದರೆ ಹತ್ತೂವರೆ ಹೊನ್ನು ದಂಡ. ಶಾಸ್ತ್ರಾಧ್ಯಯನದ ಉಪಾಧ್ಯಾಯನು ತನ್ನ ಕೆಲಸವನ್ನು ಮಾಡದಿದ್ದರೆ ಐದುವರೆ ಹೊನ್ನು ದಂಡ. ಲಕ್ಷ್ಮೀಹೃದಯ ಪಾರಾಯಣವನ್ನು ಕಾಲಕ್ರಮದಲ್ಲಿ ನಡೆಸದಿದ್ದರೆ ಆ ಉಪಾಧ್ಯಾಯರಿಗೆ ಹತ್ತುವರೆ ಹೊನ್ನು ದಂಡ. ಈ ದೇವಸ್ಥಾನದ ಮೇಲ್ವಿಚಾರಣೆ ನಡೆಸಲು ಪ್ರಸ್ತುತದಲ್ಲಿ ಸೇನಭೋವನಿರುತ್ತಿದ್ದನು ಎಂಬುದನ್ನು ಗಮನಿಸಬೇಕು. ಆದರೆ ಈ ಸೇನಬೋವನು ಈ ದೇವಸ್ಥಾನದ ನಿತ್ಯಕ್ರಮಗಳನ್ನು ಪರಿಪಾಲಿಸುವ ಹಾಗೂ ಪಾಲಿಸದಿರುವ ಬಗ್ಗೆ ಇವನು ದಿನನಿತ್ಯದ ಆಗುಹೋಗುಗಳನ್ನು ಮತ್ತು ದೇವಸ್ಥಾನದ ಖರ್ಚಿನ ವಿವರಗಳನ್ನು ಬರೆದಿಡಬೇಕಾಗುತ್ತಿತ್ತು. ಇದಕ್ಕೆ ತಪ್ಪಿದರೆ ಅವನು ಅಧಿಕಾರ ಚ್ಯುತಿಯೊಂದಿಗೆ ನೂರು ಹೊನ್ನು ದಂಡ ಕೊಡಬೇಕಾಗುತ್ತಿತ್ತು. ವಿಜಯನಗರ ಅರಸರ ನಂತರ ಈ ಪ್ರದೇ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಗೇಹರಾಜ್ಯದಲ್ಲಿ

ಬಸ್ಸು ಚಳವಳಿಗೆ ಹೊಸ ಹಾದಿ

"ಅಲ್ರಿ, ಇದೇನೊಂದ್ರಿ?"

"ಯಾವ್ದದು?"

"ಇಲ್ಲಿ ನೋಡೀಂದ್ರೆ...."

"ನೋಡೋದೇನು ಬಂತೆ? ಈ ಏಳು ವರ್ಷಗಳಿಂದ ಪ್ರತಿನಿತ್ಯ ನೋಡಿ ನೋಡಿ...'

"ಸಾಕು ಬಿಡೀಂದ್ರೆ..."

"ಅದು ಹೇಗೆ ಸಾಧ್ಯಾಂತೆ?'

'ಹೋಗ್ಲಿ, ನಿಮ್ಮ ಗಂಡಸ್ರು..."

"ಜಾತಿಯೇ ಹಾಗೆ ಒಮ್ಮೆ ಹಿಡಿದು ಬಿಟ್ರೆ ಮತ್ತೆ ಬಿಡೋದಿಲ್ಲ...."

"ಅದು ನಂಗೂ ಗೊತ್ತು...."

"ಮತ್ತೇನು ಗೊತ್ತಿಲ್ಲ?'

'ಅಲ್ರಿ, ನೋಡಿ, ಲಂಡನ್ ನಗರದಲ್ಲಿ...'

'ಹ್ಞಾಂ....'

'ಒಬ್ಬಾತ ಇಡೀಯ ಬಸ್ಸನ್ನೇ ನುಂಗುವ ಪಣಕ್ಕಿಳಿದಿದ್ದಾನಂತೆ...."

'ಬಸ್ಸು ಚಳವಳಿಯು ಹೊಸ ರೂಪ ತಾಳಬಹುದು..."

"ಹಾಗಲ್ಲರೀ....!

'ಮತ್ತೇನಂತೆ? ಹೊಟ್ಟೆಗೆ ರೊಟ್ಟಿ ಇಲ್ಲಾಂತೇನು?"

'ಅಯ್ಯೋ, ಅದೇನು ಹೇಳ್ತೀರಾ? ಆತ ಬಹುದೊಡ್ಡ ಕಂಪೆನಿಯ ಮಾಲಿಕನಂತೆ."

"ಮತ್ತೇನಿದು?"

'ಇದೊಂದು ಹೊಸ ಬಗೆಯ ಪಣ.."

'ಅಂದರೆ?"

'ಆರಂಭದಿಂದಲೇ ಆತ ಬಕಾಸುರನ ಕುಲಕ್ಕೆ ಸೇರಿದವನಂತೆ....'

"ಇರ್ಲಿ ಬಿಡು. ಅದ್ರೆ ನಮ್ಮ ಬಕಾಸುರ ಗಾಡಿ ಅನ್ನ, ಎತ್ತು ನರಮಾನವರನ್ನು ತಿಂದನೆಂದು ಭಾರತ ಹೇಳಿದೆಯೇ ಹೊರತು ಗಾಡಿಯನ್ನು ತಿಂದದ್ದನ್ನು ಎಲ್ಲೂ ಹೇಳಿಲ್ಲ ನೋಡು."

"ಬಕಾಸುರ ಅಂದ್ರೆ ಬರೀ ಹೊಟ್ಟೆ ಬಾಕ."

"ಹ್ಞಾಂ...."

'ಈ ಆಧುನಿಕ ಬಕಾಸುರ ವಿಲಿಯಂ ಭೋಜನಕ್ಕೆ ಕುಳಿತಾಗ ಸುದ್ದಿಯೊಂದನ್ನು ಓದಿದನಂತೆ....'

"ಏನೊಂತ?"

"ಆಸ್ಟ್ರೇಲಿಯಾದವನೊಬ್ಬ ನಾಲ್ಕು ವರ್ಷಗಳಲ್ಲಿ ಕಾರೊಂದನ್ನು ತಿಂದು ಮುಗಿಸುವ ಪಣಕ್ಕೆ ಇಳಿದಿದ್ದಾನೆಂತ...."

'ಸರಿ....'

"ಆತನಿಗಿಂತ ತಾನು ಹೆಚ್ಚು ತಿನ್ನಬಲ್ಲೆ ಎಂಬ ಆತ್ಮವಿಶ್ವಾಸ ಅವನಿಗೆ...."

"ಊಟದ ಭಟ್ರಿಗಿರುವಂತೆ..."

"ಅಯ್ಯೋ, ಊಟದ ಭಟ್ರು ಬೇರೆಯವ್ರ ಮನೆಗೆ ಹೋದಾಗ ಮಾತ್ರ ಅಂತಹ ವಿಶ್ವಾಸ ತಾಳ್ತಾರೆ....'

'ಮತ್ತೆ ವಿಲಿಯಮ್ಸ್ ಏನು ತನ್ನ ಬಸ್ಸನ್ನೇ ನುಂಗುತ್ತಾನೇನು?"

'ಅಲ್ರಿ, ಆತ ದ್ವಿತೀಯ ಹಸ್ತದ ಬಸ್ಸೊಂದನ್ನು ಹುಡುಕುತಿದ್ದಾನೆ.'

'ಅಯ್ಯೋ, ಇನ್ನೂ ಸಿಕ್ಕಿಲ್ಲವೇನು?'

'ಪ್ರಾಯಃ ಇಲ್ಲ .'

"ಅಲ್ವೆ, ಲಂಡನ್ನದಲ್ಲಿ ದ್ವಿತೀಯ ಹಸ್ತದ ಬಸ್ಸುಗಳಿಗೇನು ಬರಗಾಲಾಂತ?'

'ಸಿಕ್ಕೀತು ಬಿಡಿ..." ಅಲ್ಲಾ, ನನ್ನ ತಲೆಗೊಂದು ಹೊಸ ಯೋಚನೆ ಬಂತು ಇದೆ....'

"ಹ್ಞಾಂ, ಏನದು?"

'ವಿಲಿಯಮ್ಸ್‌ನಂತೆಯೇ ಎಲ್ಲ ಲಂಡನ್ನಿಯರೂ ಬಸ್ಸು—ಕಾರುಗಳನ್ನು ತಿನ್ನಲು ಅಭ್ಯಾಸ ಮಾಡಿಕೊಂಡರೆ ಹೇಗೆ?"

'ಹ್ಞಾಂ, ಭಲೇದಾದೀತು."

'ಮತ್ತೆ ನೋಡ, ನಮ್ಮ ದೇಶದ ಬಸ್ಸು ಕಾರುಗಳನ್ನೆಲ್ಲಾ ಲಂಡನ್ನಿಯರಿಗೆ ವಿತರಣೆ ಮಾಡುವ ಕಂಪೆನಿಯೊಂದು ತೆರೆಯಬಹುದು."

"ಭಾರೀ ಆಲೋಚನೆ...'

'ಈಗ ನೀನೇ ಹೇಳಿದೆ, ವಿಲಿಯಂ ದ್ವಿತೀಯ ಹಸ್ತದ ಬಸ್ಸು ಅರಸುತ್ತಿದ್ದಾನೆಂತ...."

'ಹೌದು..."

'ಅಲ್ಲಿ ಅದಕ್ಕೆ ಭಾರಿ ಅಭಾವವಿರಬೇಕು.'

"ಇದ್ದರೂ ಇರಬಹುದು ..."

"ಅಭಾವ ಪೀಡಿತ ಪ್ರದೇಶದಲ್ಲಿ ಧಾರಣೆ ಗಗನವೇರುವುದು ತೀರ ಸಹಜ."

'ಹ್ಞಾಂ...."

'ಹಾಗೇ ವಿನಿಮಯ ಕೇಂದ್ರವೊಂದನ್ನು ಯಾಕೆ ತೆರೆದು ಲಾಭಗಳಿಸಬಾರದೋತ?'

'ಓಹೋ, ಭಾರೀ ಆಲೋಚನೆ. ಆದರೆ, ಒಂದು ಸಂದೇಹ...'

'ಏನು?'

'ಅಲ್ರಿ, ಬಸ್ಸು ತಿನ್ನುವುದು ಅಶಕ್ಯತೆಯ ಪ್ರಯತ್ನವೆಂದು ಆರೋಪಿಸಿ ಅವರನ್ನೂ ನಮ್ಮನ್ನೂ ಜೇಲಿಗಟ್ಟಿದರೆ...."

"ಓ, ಅದೊಂದ ಬೇರೆ ಇದೆ ನೋಡು, ನಮಗೆಲ್ಲಾ ಸ್ವಾತಂತ್ರ್ಯವಿದೆ. ಆದರೆ, ಉಣ್ಣುವ, ತಿನ್ನುವ ಸ್ವಾತಂತ್ರ್ಯವಿಲ್ಲ...'

"ನಮ್ಮ ಸಂವಿಧಾನ ಕೊಡಮಾಡಿದ ಭೂತಭೂತ ಅಧಿಕಾರಗಳಲ್ಲಿ ಬೇಕಾದ್ದನ್ನು ತಿನ್ನುವ ಅಧಿಕಾರವಿಲ್ಲ ಪ್ರಾಣ ಕಳೆದುಕೊಳ್ಳುವ ಅಧಿಕಾರವಿಲ್ಲ...?

"ಹ್ಞಾಂ.... ಸರಕಾರ ವಿದ್ಯೆ ಕೊಡುತ್ತೆ ಅಂದ್ರೆ ತಿಂಬುವ ಅನ್ನ ನೀವು ನೀವೇ ಸಂಪಾದಿಸಿಕೊಳ್ಳಿ ಅಂತ ತಾನೇ ಆದೇಶ?"

"ಹ್ಞಾಂ, ಈ ವಾದ ಸುಪ್ರೀಂ ಕೋರ್ಟಿಗೆ ಒಯ್ದು ನೋಡಿ...'

'ಅಲ್ವೆ ಬಸ್ಸು—ಕಾರುಗಳನ್ನು ನುಂಗುವ ಶಕ್ತಿ ಕರಗತವಾದರೆ...'

'ನಮ್ಮ ದೇಶದ ಚಳುವಳಿಗಳಿಗೆ ಹೊಸತೊಂದು ಹಾದಿ ಕಾಣುತ್ತದೆ....'

'ಹ್ಞಾಂ ...ನಮಗೇನಂತೆ? ಚಳುವಳಿಗಳಿಗಿಂತ ಬೊಂಬಡಿ ಬಾರಿಸಿದರೆ...'

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾರ್ಟಿಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

'ಬಾರಿಸಲಿ ಬಿಡಿ....'

"ಹಾಗೆಲ್ಲ ಬಿಡೋಕಾಗುತ್ತ್ರೆ?'

"ಬಿಡಬೇಡ ಮತ್ತೆ...."

"ಹ್ಞಾಂ...'

'ಹ್ಞಾಂ.... ಏನಂದ್ರೆ ಇದು?'

'ಅಷ್ಟೂ ತಿಳಿಯೋಲ್ವೆ?'

— ಗೋರಾ

ಪ್ರಜಾತಂತ್ರ ದಿನಾಚರಣೆ

(ವಾ. ಅ. ಹೊದಿಕೆ)

ಆಧುನಿಕ ಭಾರತದಲ್ಲಿ ಆಗಸ್ಟ್ ೧೫ 'ಸ್ವಾತಂತ್ರ್ಯದಿನ' ಮತ್ತು ಜನವರಿ ೨೬ 'ಪ್ರಜಾತಂತ್ರದಿನ' ಇವೆರಡು ಐತಿಹಾಸಿಕ ದಿನಗಳಾಗಿವೆ.

ಆಗಸ್ಟ್ ೧೫ರಂದು, ನಾವು ಪಾರತಂತ್ರ್ಯದಿಂದ ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತರಾದೆವು. ಸ್ವತಂತ್ರರಾದೆವು.

ಆದರೆ "ಸ್ವತಂತ್ರ" ಎಂಬುದನ್ನು ಕಂಡುಹಿಡಿದು ಅದರಂತೆ ನಡೆದು, ನಿರ್ಧಾರ ಮಾಡುವ ವರೆಗೆ ಪೂರ್ಣವಾಗಿ 'ಸ್ವತಂತ್ರ' ಎನ್ನಲಾಗುವದಿಲ್ಲ. ಅದಕ್ಕಾಗಿಯೇ ಭಾರತ ರಾಜ್ಯಘಟನಾ ಸಮಿತಿಯನ್ನು ನೇಮಿಸಲಾಯಿತು. ಅದು ಭಾರತದ ರಾಜ್ಯಘಟನೆಯನ್ನು ತಯಾರಿಸಿತು. ಅದು 'ಪ್ರಜಾತಂತ್ರ' ಸ್ವರೂಪದ್ದು. ಜನವರಿ ೨೬ರಿಂದ ಅಮಲಿನಲ್ಲಿ ಬಂದದ್ದರಿಂದಲೇ ಜನವರಿ ೨೬ 'ಪ್ರಜಾತಂತ್ರ ದಿನ' ಎನಿಸಿಕೊಳ್ಳುತ್ತದೆ.

ಉತ್ಸವದಿನಗಳನ್ನು ಆಚರಿಸುವಾಗಲೇ ನಾವು ಅಂದಿನ ದಿನದ ವೈಶಿಷ್ಟ್ಯವನ್ನೂ, ಅವುಗಳಿಂದಾಗಿ ನಮ್ಮ ನಿತ್ಯ ಜೀವನದಲ್ಲಿ ಒಡಮೂಡಬೇಕಾಗಿರುವ ಸಂಸ್ಕಾರಗಳನ್ನೂ ಕುರಿತು ವಿಚಾರ ಮಾಡಬೇಕು. ಇಲ್ಲವಾದರೆ ಹಬ್ಬ ಹುಣ್ಣಿಮೆ, ವ್ರತ, ಉಪವಾಸ, ತೀರ್ಥಯಾತ್ರೆ, ದಾನಧರ್ಮ, ಪೂಜೆ ಪುರಸ್ಕಾರಗಳೆಲ್ಲ ಕೇವಲ ಜಡ ಕರ್ಮಕಾಂಡಗಳಾಗಿ, ನಮ್ಮ ಜೀವನದಲ್ಲಿ ಯಾವದೇ ಸುಸಂಸ್ಕಾರವಾಗದೆ, ನಮ್ಮ ಜೀವನವು ಜಡಸಂಪ್ರದಾಯದಂತೆಯೇ ಮುನ್ನಡೆಯುತ್ತ ಉಳಿದೀತು.

ಪ್ರಜಾತಂತ್ರದಲ್ಲಿ ರಾಜ ಮತ್ತು ಪ್ರಜೆ ಎಂಬ ವ್ಯತ್ಯಾಸವೇ ಉಳಿಯುವದಿಲ್ಲ ಎಂಬುದೇ ಪ್ರಾಮುಖ್ಯವಾಗಿ ಗಮನಿಸಬೇಕಾದ ವಿಷಯ. ಅರ್ಥಾತ್ ಪ್ರಜಾತಂತ್ರ ರಾಜ್ಯದಲ್ಲಿ ಯಾವದೇ ಪ್ರಕಾರದ ವಿರೋಧ, ತಿಕ್ಕಾಟಕ್ಕೆ ಅವಕಾಶ ಇರಿಸಲಾಗದು. ಪ್ರತಿಯೊಂದು ವ್ಯವಹಾರವೂ ನಿರ್ದಿಷ್ಟವಾದ 'ತಂತ್ರ'ದಂತೆಯೇ ನಡೆಯಬೇಕು. ತಂತ್ರದಲ್ಲಿ ನ್ಯೂನತೆಗಳು ಕಂಡುಬಂದರೆ ಪ್ರಜಾತಂತ್ರಾತ್ಮಕ ರೀತಿಯಲ್ಲಿಯೇ ಆ ತಂತ್ರವನ್ನು ಬದಲಿಸಿಕೊಳ್ಳಬೇಕಲ್ಲದೆ 'ತಂತ್ರ'ವನ್ನು ಮುರಿಯಲಾಗದು, ಅರ್ಥಾತ್ ಯಾವತ್ತು ವ್ಯವಹಾರವು ವಿಚಾರ ಪ್ರಚಾರ ಮತ್ತು ಲೋಕಶಿಕ್ಷಣದಿಂದ ನಡೆಯಬೇಕೇ ಹೊರತು, ಹಿಂಸಾತ್ಮಕ ಮಾರ್ಗದಿಂದಲ್ಲ. ಅಹಿಂಸಾ

ನೀತಿ ಅರ್ಥಾತ್ ಬಂಧುಭಾವವೇ ಲೋಕತಂತ್ರದ ಜೀವಾಳ.

ಲೋಕತಂತ್ರವು ಒಂದು ರಾಜ್ಯ ಪದ್ಧತಿ ಮಾತ್ರವಲ್ಲ, ಅದೊಂದು ಜೀವನದ ಪದ್ಧತಿಯಾಗ ಬೇಕು. ಅದರಲ್ಲಿ ಸಮಗ್ರ ಸಮಾಜದ ಹಿತದ ದೃಷ್ಟಿಯಿಂದ ವ್ಯವಹಾರ ನಡೆಯಬೇಕು. ಅದು ಗ್ರಾಮ ಮಟ್ಟದ ಘಟಕದಿಂದಲೇ ನಡೆಯಬೇಕು. ಪ್ರಜೆ ಮತ್ತು ಸರಕಾರ ಬೇರೆ ಬೇರೆ ಇಲ್ಲ. ಪ್ರಜೆಗಳೇ ಸರಕಾರವಾಗಿ ಪ್ರಜಾಹಿತದ ಕೆಲಸಗಳನ್ನೆಲ್ಲ ಮಾಡಿಕೊಳ್ಳಲು ಕಲಿಯಬೇಕು. ಗ್ರಾಮ ಮಟ್ಟದಲ್ಲಿ ಪರಿಶುದ್ಧವಾದ ಪ್ರಜಾತಂತ್ರದ ಪ್ರತ್ಯಕ್ಷ ಶಿಕ್ಷಣದ ಮುಖಾಂತರವೇ ಮತದಾರರಿಗೆ ಶಿಕ್ಷಣ ದೊರೆಯಬೇಕು. ಅಂಥ ಪ್ರತ್ಯಕ್ಷ ಶಿಕ್ಷಣ ಕೊಡದೆ, ಕೇವಲ ಮತವನ್ನು ನೀಡಿ ಮತಾಧಿಕಾರ ಕೊಡುವುದರಿಂದ ಪ್ರಜಾತಂತ್ರದ ಮೂಲಭೂತ ಉದ್ದೇಶವೆಂದೂ ಸಾಧಿಸಲಾರದು.

ಕುಟುಂಬವೇ ಪ್ರಜಾತಂತ್ರದ ಚಿಕ್ಕ ಪ್ರತಿರೂಪ. ಕುಟುಂಬದಲ್ಲಿಯ ಪದ್ಧತಿಯೇ ಗ್ರಾಮಕ್ಕೆ ಅನ್ವಯಿಸುವಂತಾದರೆ ಅರ್ಥಾತ್ ಗ್ರಾಮಸಭೆಯ ಮುಖಾಂತರ ಏಕಮತದಿಂದ ಗ್ರಾಮದ ವ್ಯವಹಾರಗಳೆಲ್ಲ ನಡೆಯುವಂತೆ ಮಾಡಿದಾಗಲೇ ಗ್ರಾಮಜನರಿಗೆಲ್ಲ ಮತದಾನದ ಶಿಕ್ಷಣ ದೊರೆತೀತು. ಹಾಗೆ ಪ್ರತ್ಯಕ್ಷ ಶಿಕ್ಷಣ ಹಾಗೂ ಅನುಭವ ಪಡೆದ ಮತದಾರರೇ ಭಾರತದಂಥ ವಿಶಾಲ ದೇಶದ ಪ್ರಜಾತಂತ್ರವನ್ನು ನಡೆಸಲು ಸಮರ್ಥರಾಗಿರು. ಇದೇ ದೃಷ್ಟಿಯಿಂದ ಗ್ರಾಮದಾನ, ಗ್ರಾಮಸ್ವರಾಜ್ಯ, ಸರ್ವೋದಯ ಸಮಾಜದ ವಿಚಾರವನ್ನು ಪುರಸ್ಕರಿಸಲಾಗುತ್ತಿದೆ.

ಇಂದು ನಡೆಯುತ್ತಲಿರುವುದು ಕೇವಲ "ಶಾಬ್ದಿಕ" "ತೋರಿಕೆಯ" ಪ್ರಜಾತಂತ್ರವಾಗಿರುವುದರಿಂದಲೇ ರಾಜಕಾರಣಿಗಳ ಹಾಗೂ ರಾಜಕೀಯ ಪಕ್ಷಗಳ "ಕುರುಕ್ಷೇತ್ರ" ಹಾಗೂ "ಯಾದವಸ್ಥಳಿ" ನಡೆಯುತ್ತಲಿವೆ. ಮತ್ತು ಪ್ರಜೆಗಳು ಮತದಾರರು ನಿಷ್ಕ್ರಿಯ ಪ್ರೇಕ್ಷಕರಾಗಿದ್ದಾರೆ! ಪ್ರಜಾತಂತ್ರದ ಹೆಸರಿನಲ್ಲಿ ಬಡ ಪ್ರಜೆಗಳ ಕಷ್ಟಾರ್ಜಿತ ಧನವೆಲ್ಲ ಸೂರೆಹೋಗುತ್ತಲಿದೆ.

ಸಂಗ್ರಾಹ್ಯ ಸಂಕಲನಗಳು

ಕಿಲ್ಲಿ	1—50
ಪ್ರತಿಜ್ಞಾ ಪೂರ್ತಿ	1—00
ಪ್ರೀತಿ ವಿನೋದ ಕತೆಗಳು	1—00
ಕಥಾವಳಿ	2—00
ಬಾಲಕರ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಶಕ್ತಿ	1—00
ಅನುವಾದಿತ ಕತೆಗಳು	1—20
ರಾಜ ಸುಮತಿ	1—20
ಜಾನಪದ ಕತೆಗಳು	2—00
ನುಡಿಮುತ್ತುಗಳು	1—50
ರತ್ನಗನ್ನಡಿ	2—00
ಪುಷ್ಪಕನ	2—00
ಸುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿನೋದ ನಾಟಕಗಳು	1—00
ಭಾರತದ ನಾಲ್ಕು ಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಧುನಿಕ ಫೇಶನ್

ಜನರೆಲ್ಲ ಫೇಶನ್ ಭಕ್ತರೆ!

ಲೇ— ಶ್ರೀ ಎಂ. ರತ್ನಾಮಣಿ

ವಿಜ್ಞಾನವು ಮಾನವನ ಸುಖಲೋಲುಪತೆಗೆ ಧಾರೆಯೆರೆಯಲ್ಪಟ್ಟು ಅತನ ಶ್ರೇಯಸ್ಸನ್ನೇ ಮಾಡುತ್ತಿದೆ. ಅದರ ಸಹಾಯದಿಂದ ಅತಿ ದೂರದ ಬಾನಿನ ಚಂದ್ರಮನಲ್ಲಿಗೆ ನೆಗೆದ. ಯಾರೂ ಈವರೆಗೆ ನೋಡದ ಹಾಗೂ ಎಂದೆಂದಿಗೂ ನೋಡಲಾಗದ ಚಂದ್ರನ ನೆಲ ಮುತ್ತಿತರ ಭಾಗಗಳನ್ನು ನೋಡಿಕೊಂಡು ಬಂದ. ಅದರಿಂದ ನಮಗೆ ಇಲ್ಲ ಕಲ್ಪನಾ ವಿಹಾರ.

ವಿಜ್ಞಾನವು ದೇವರು ಕೊಟ್ಟ ಲಿಂಗವನ್ನು ಪರಿವರ್ತಿಸುತ್ತವೆಯೆಂದ ಮೇಲೆ ಮತ್ತೇನನ್ನು ಹೇಳಲಿ ಮಾನವನ ಕೌಶಲ್ಯಕ್ಕೆ? ದೈಹಿಕವಾದ ಹೊಸ ಶೋಭೆ ಅಲಂಕಾರಗಳನ್ನು ತನ್ನ ಫ್ಯಾಶನ್ ಮೂಲಕ ವಿಜ್ಞಾನವು ಮಾನವನಿಗೆ ನೀಡುತ್ತದೆ. ಫ್ಯಾಶನ್ ಸೂಪರ್‌ಸಾನಿಕ್ ಜೆಟ್‌ನಂತೆ, ಕಣ್ಣು ಮಿಟುಕಿಸುವದರೊಳಗೆ ರಾಷ್ಟ್ರದಿಂದ ರಾಷ್ಟ್ರಕ್ಕೆ ವಿದ್ಯುತ್ವೇಗದಲ್ಲಿ ಹರಿಯುತ್ತದೆ. ಪೂರ್ವಾಹ್ನ ಚಲಚಿತ್ರದಲ್ಲಿ ಕಂಡದ್ದು ಸಾಯಂಕಾಲ ಬೀದಿಯಲ್ಲಿ ಕಂಡು ಬರುತ್ತದೆ. ಫ್ಯಾಶನ್ ಎಷ್ಟು ಚುರುಕು?

ಇಂದಿನ ತರುಣ ಪೀಳಿಗೆಯನ್ನು ಪ್ರಥಮತಃ ಆಕರ್ಷಿಸುವುದು ಫ್ಯಾಶನ್. ಕಪ್ಪು ಬಿಳುಪು, ಬಾಲಿಕೆ ಮುದುಕಿ, ವಿದ್ಯಾವಂತ ಅವಿದ್ಯಾವಂತ, ನಾಗರಿಕ ಮೊದಲಾದವುಗಳೊಳಗಿನ ಅಂತರವನ್ನೇ ಇಲ್ಲದಂತೆ ಸಮತಾ ಭಾವನೆಯನ್ನು ಹೊರಗೆಡಹಿ, ಪ್ರದರ್ಶಿಸಿ, ದೈಹಿಕ ಲಾವಣ್ಯದ ವೈಭವವನ್ನು ರೂಪತ್ರೀಯ ಬೆತಗಳ್ಳೂ, ಮೋಹಕತೆಯ ವಿಶಾಲತೆ ಯನ್ನೂ ಸರ್ವರೂ ಆಸ್ವಾದಿಸುವಂತೆ ಮಾಡುವ ಫ್ಯಾಶನ್ ಪ್ರಪಂಚಕ್ಕೆ ಎಲ್ಲರೂ ಋಣಿಯಾಗಿರಲೇ ಬೇಕು.

ಈಗ ಕನಕದಾಸಂದ್ದಿದ್ದರೆ ಅವರು ತನ್ನ ಹಾಡಿನ ಸರಣಿಯನ್ನೇ ಬದಲಿಸಿ "ಫ್ಯಾಶನ್ ಫ್ಯಾಶನ್ ಫ್ಯಾಶನ್ ಎಂದು ಹೊಡೆಬಾಡಬಿರಿ. ನಿಮ್ಮ ಫ್ಯಾಶನ್ನಿನ ನೆಲೆಯೇನಾದರೂ ಬಲ್ಲಿರಾ? ಫ್ಯಾಶನ್ ಮಾಡದ ವ್ಯಕ್ತಿಗಳಿಲ್ಲ. ಫ್ಯಾಶನ್ ಮೆಚ್ಚದ ಹೃದಯಗಳಿಲ್ಲ. ಫ್ಯಾಶನೇ ಇಲ್ಲದ ರಾಷ್ಟ್ರವಿಲ್ಲ, ಫ್ಯಾಶನ್ ಕಾಣದ ಕಾರ್ಯವೇನು, ವ್ಯಕ್ತಿಯೇನು? ಫ್ಯಾಶನು ಎಲ್ಲರನ್ನು ಸಲಹುತ್ತಿದೆಯೆಂಬುದಕ್ಕೆ ಸಂಶಯವಿಲ್ಲ" ಎಂದು ಹಾಡುತ್ತಿದ್ದರು.

ಫ್ಯಾಶನ್ ಇಂದು ಮನುಷ್ಯನನ್ನು ಪೀಡಿಸುತ್ತಿರುವ ಅಂತಾರಾಷ್ಟ್ರೀಯ ವ್ಯಾಧಿಯೇನಲ್ಲ. ಅನುಕರಣೆಯ ಸ್ಪಂದನ ಫ್ಯಾಶನ್ ಮಾಡುತ್ತಿದೆ, ಆದರೆ ಫ್ಯಾಶನ್ ಸಂಶೋಧಕರು ಕೆಲವೇ ಮಂದಿ. ಎಲ್ಲರೂ ಅವರನ್ನೇ ಹಿಂಬಾಲಿಸುವವರು ಇದನ್ನೇ ಅನುಕರಣೆ ಅನ್ನೋದು. ಆದರೆ ಸಚಿವರು ರಾಜಕಾರಣಿಗಳೆಲ್ಲ ಬಾಯಿಮಾತಿಗೆ ಇಂಥ ಅನುಕರಣೆಯನ್ನು ಖಂಡಿಸುತ್ತಾರೆ. 'ನಮ್ಮ ಇತಿಹಾಸ ಸಂಸ್ಕೃತಿಗಳ ಅರಿವು ನಮಗೆ ಅವಶ್ಯ. ೨೦೦ ವರ್ಷಗಳ ಪರದಾಸ್ಯದಿಂದ ವಿಮುಕ್ತರಾಗಿದ್ದರೂ ಪರಾವಲಂಬನೆ ಅನುಕರಣೆ ನಮ್ಮಿಂದ ತೊಲಗಿಲ್ಲ. ನಮ್ಮತನವನ್ನು ನಾವರಿತು ಅನುಷ್ಠಾನಕ್ಕೆ ತರಬೇಕು' ಎಂದು ಅವರೆಲ್ಲ ಗಂಟಾಘೋಷವಾಗಿ ಹೇಳುತ್ತಾರೆ. ಆದರೆ ಅವರೂ ತೊಟ್ಟಿರುವುದು ವಿದೇಶೀ ಸಂಸ್ಕೃತಿಯ ತೊಡುಗೆಯೆಂಬುದನ್ನೇಕೆ ಅವರಾಗ ಮರೆಯುತ್ತಾರೋ? ವಾಸ್ತವಿಕ ವಿಚಾರದಿಂದ ನಮ್ಮ ಮುಂದಾರಿಗಳೆಲ್ಲ ದೂರವೆಂಬುದು ನಮಗೆ ಇಂದು ಮೊನ್ನೆ ತಿಳಿದುದೇ? ಎಂತೋ ಮನನವಾಗಿದೆ.

ಫ್ಯಾಶನ್ ಸಂಶೋಧನೆ, ಸಂಯೋಜನೆಗಳಿಗೆ ಬಹಳ ಪ್ರಾವೀಣ್ಯ ಬೇಕು. ಒಂದು ದೃಷ್ಟಿಯಿಂದ ಅದೊಂದು ಪರಿಣತ ಕಲೆ ಎಂದೆನಿಸಬಹುದು. ಹೇಗಿದ್ದರೂ ಕಲೆಯೇ ಅದೊಂದು ಸೊಗಸಾದ ವಿದ್ಯೆ ಫ್ಯಾಶನ್ ಮಾಡುವದಕ್ಕೆ ಎಲ್ಲರಿಗೂ ಬರುವುದಿಲ್ಲ, ಕೆಲವು ದಿನದ ತರಬೇತಾದರೂ ಅದಕ್ಕೆ ಅಗತ್ಯ. ಮನಮೋಹಕವಾಗಿ ಉಡುಗೆಗಳನ್ನು ಆಳವಡಿಸಿಕೊಳ್ಳಲು ಹಾಗೂ ಹಾಕಿಕೊಳ್ಳಲು, ಸಂಯೋಜಿಸಲು, ಹೋಲಿಸಿ ಕೊಳ್ಳಲು, ಎಲ್ಲದಕ್ಕು ಸ್ವಲ್ಪ ಕಲಿತು ಕೊಳ್ಳಬೇಕಾಗುತ್ತದೆ. ಇಷ್ಟೇನೆ? ಹಾಕಿ ಕೊಂಡ ನಂತರ ಹೇಗೆ ನಡೆಯಬೇಕು ಯಾವ ರೀತಿ ವರ್ತಿಸಬೇಕು ಎಂಬಿತ್ಯಾದಿಗಳೂ ಫ್ಯಾಶನ್ ಪ್ರಪಂಚದ ಶಿಕ್ಷಣ ರಂಗಕೆ ಸೇರಿದೆ. ಆದುದರಿಂದ ಫ್ಯಾಶನ್ ಶಿಕ್ಷಣ ಪಡೆಯುವುದಕ್ಕೂ ನೈಪುಣ್ಯ; ಜಾಣ್ಮೆಗಳ ಅವಶ್ಯಕತೆಯಿದೆ.

ದೇಹದಲ್ಲಿಲ್ಲದ ಸೃಷ್ಟಿಕರ್ತನಿಂದ ನಿಗೂಢವಾಗಿರಿಸಲ್ಪಟ್ಟ ಕಾಂತಿ, ಶೋಭೆಯನ್ನು ಚೆಲುವುಗಳನ್ನು ಅಂದ ಚೆಂದವ ನಾವರ್ಷಕ ಫ್ಯಾಶನ್ ಮೂಲಕ ಹೊರ ಹೆಣೆವುವಂತೆ ಮಾಡುವಂಥ ಆ ಕಲೆಗೆ ಮಣಿಯದವರಾರು? ಕಲಾ ಪ್ರಪಂಚದಲ್ಲಿ ಫ್ಯಾಶನ್ ಉಳಿದ ಕಲೆಗಳಿಗಿಂತ ಅತ್ಯಂತ ವೈಭವದ ಹಾಗೂ ಶ್ರೇಷ್ಠ ಕಲೆಯೆಂದು ನಾವು ಮನಗಾಣಲೇ ಬೇಕು.

ಅಪೊಲೊ ಅಂತರಿಕ್ಷ ನೌಕೆ ಅಗಸದಲ್ಲಿ ಚಂದ್ರನತ್ತ ಮೇಲ ಮೇಲಕ್ಕೇರಿದಂತೆ ಹುಡುಗಿಯರ ಲಂಗ ಇಂದು ಮೇಲೆ ಮೇಲೇರುತ್ತಿದೆ.

ಚಂದ್ರನ ಕಾಣದ ಬದಿಯನ್ನು ಪ್ರವೇಶಿಸಿದ ಬಾಹ್ಯಾಕಾಶ ನೌಕೆ ಕಣ್ಮರೆಯಾಗುವಂತೆ ಹೆಂಗಸರ ಬ್ಲೌಸಿನ ಕೈ ಕೂಡಾ ಕಣ್ಮರೆಯಾಗಿದೆ. ಬಿಗಿ ಉಡುಪು ಬಂತು. ತರುಣರ ಪ್ಯಾಂಟ್ ಮತ್ತು ಕಾಲಿನ ಚರ್ಮ ಒಂದಾಯಿತು. ತರುಣಿಯರಿಗೂ ಪ್ಯಾಂಟ್ ಬಂತು. ಹುಡುಗಿಯರಿಗೆ ತರುಣರ ಅಂಗಿಯೂ ಆಯಿತು. ತರುಣರ ಅಂಗಿ ಬ್ಲೌಸಾಯಿತು. ಮೇಲೆ ಪಲ್ಲಟಗೆ ಒಂದಿಷ್ಟು ಅದಾವುದೂ ಅಲಂಕಾರಕ್ಕೆ ಲಕ್ಷಣವಿದೆ. ಸೀರೆಗಳೂ "ಮಿನಿ" ಆದವು, ಮೊಣಕಾಲ ಮೇಲೇರಿ ಬಂದುವು. ಇಂತಾದರೂ ಕಾಣುವ ಕಣ್ಣಿಗೆ ಅದಕ್ಕಿರುವ ಸೌಭಾಗ್ಯ ಇನ್ನೊಂದಕ್ಕಿಲ್ಲವೆನಿಸುತ್ತದೆ. ಶೃಂಗಾರ ಲೋಕದಲ್ಲಿ ಫ್ಯಾಶನ್ ಇಷ್ಟೇ ಅಲ್ಲ, ಇನ್ನೂ ಏನೇನೋ ಇದೆ. ಅದೆಲ್ಲವನ್ನು ಬರೆಯಲು ಹೋದರೆ "ಡಾಕ್ಟರೇಟನ್ನೇ" ಗಳಿಸಬಹುದೇನೋ!

ಇಂದಿನ ತರುಣ ಪೀಳಿಗೆಯ ಜೀವನದ ಸಮಸ್ತ ಸಾರವೇ ಫ್ಯಾಶನ್. ಯೌವನ ಪೂರ್ಣವಾದ ದೇಹಕ್ಕೆ ಫ್ಯಾಶನ್ ಜೋಡಣೆಗೊಂಡಾಗ ಅದನ್ನು ಕಾಣುವ ಯಾರ ಕಣ್ಮನಂಗಳು ತುಂಬಿ ನಿಲ್ಲವು? ಚೆಲುವಿಗೆ ಬೇಕಷ್ಟೂ, ಫ್ಯಾಶನ್ ಸೊಲ್ಲು!

—ಕೊಡಗು.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇರುವವರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಆದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಪಾಲುಕೋಟೆ, ಉಡುಪಿ, ದ. ಕ.

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್

ಪಾಲುಕೋಟೆ, ಉಡುಪಿ, ದ. ಕ.

ಕವು ಕೆಳದಿ ಅರಸರ ರಾಜ್ಯಕ್ಕೆ ಸೇರಿತು. ಈ ಪ್ರದೇಶವು ಸಂಗಾಳಕ ಕೋಳಾಹರ ಪಾಳ್ಯದಲ್ಲಿ ಇತ್ತು. ಇವರ ಕಾಲದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಗಮನಾರ್ಹ ವ್ಯತ್ಯಾಸವಾಗಲಿಲ್ಲ. ಕೆಳದಿ ಅರಸರು ವೀರಶೈವರಾದ ಕಾರಣ ಈ ದೇವಸ್ಥಾನದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದರು. ಈ ಅರಸರು ಇಲ್ಲಿಯ ಕಾರ್ತಿಕ ಪೂಜೆ, ನಂದಾದೀಪಕ್ಕೆ ಉಂಬಳಿ ಬಿಟ್ಟಿದ್ದರೆಂದು ಅಲ್ಲಿಯ ಶಾಸನವು ತಿಳಿಸುತ್ತದೆ.

ಬುಚಾನನ್ ವರದಿ: ಕ್ರಿ.ಶ. 1801 ರಲ್ಲಿ ಇಂಗ್ಲೀಷ್ ಪ್ರವಾಸಿಗ ಬುಚಾನನು ಈ ಪ್ರದೇಶಕ್ಕೆ ಬಂದಿದ್ದನು. ಹತ್ತು ವರ್ಷಗಳ ಹಿಂದೆ ಇಲ್ಲಿ ಅಗ್ರಹಾರಗಳಿದ್ದವೆಂದೂ ಮರಾಠರ ಸೇನಾನಿ ಬಾಲುರಾಯನು ಈ ಅಗ್ರಹಾರಗಳನ್ನು ನಾಶಪಡಿಸಿದನೆಂದೂ ಇಲ್ಲಿಯ ಬ್ರಾಹ್ಮಣರು ತನಗೆ ತಿಳಿಸಿದರೆಂದೂ ಬುಚಾನನ್ ತನ್ನ ವರದಿಯಲ್ಲಿ ತಿಳಿಸಿದ್ದಾನೆ. ಆತನ ಹೇಳಿಕೆಯಂತೆ ಇಲ್ಲಿಯ ಜನರು ಆಗಿಂದಾಗ್ಗೆ ಸಾಂಕ್ರಾಮಿಕ ಜ್ವರ ಬಾಧೆಯಿಂದ ತುತ್ತಾಗುತ್ತಿದ್ದರು. ಇದರಿಂದ ಹೆಚ್ಚಿನ ಬ್ರಾಹ್ಮಣರು ಬೇರೆಬೇರೆ ಸ್ಥಳಗಳಿಗೆ ವಲಸೆ ಹೋದರು. ಇಲ್ಲಿಯ ಭೂಮಿ ಫಲವತ್ತಾಗಿಲ್ಲ. ಇದ್ದ ತೆಂಗಿನ ಮರಗಳೂ ಫಲ ನೀಡದಾಗಿದ್ದವು. ಈ ರಾಜ್ಯವು ತುಳುರಾಜ್ಯವಾದರೂ ಇಲ್ಲಿನ ಜನರು ಕನ್ನಡ ಮಾತಾಡುತ್ತಾರೆ. ಇಲ್ಲಿನ ಜನರು ಕೃಷಿಯಲ್ಲಿ ನಿರತರಾಗಿದ್ದರೆ ಇಲ್ಲಿಯ ದೇವಸ್ಥಾನದ ಕಟ್ಟಡ ಶೋಚನೀಯವಾಗಿತ್ತು. ಈ ದೇವಸ್ಥಾನಕ್ಕೆ ಬಹಳ ಪೂರ್ವದಲ್ಲಿ 100 ಪಗೋಡಾ ಬೆಲೆ ಬಾಳುವ ಜಮೀನು ಇತ್ತು. ಆದರೆ 1800ರಲ್ಲಿ 5 ಪಗೋಡಾ ಕಸ್ತಿರು ಈ ದೇವಸ್ಥಾನಕ್ಕೆ ಕೊಡಲ್ಪಟ್ಟಿತು.

ಉಪಸಂಹಾರ:— ಸ್ಕಂದ ಪುರಾಣದಲ್ಲಿ ಉಲ್ಲೇಖಿತವಾದ ಕಿರಿ ಮಂಜೇಶ್ವರ 7 ನೆಯ ಮತ್ತು ಅಗಸ್ತ್ಯೇಶ್ವರ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ಕಿರು ಮಂಗಳೇಶ್ವರವಾಗಿ ಬೆಳಕಿಗೆ ಬಂತು. ಕ್ರಿ.ಶ. 1791ರ ವರೆಗೆ ಇಲ್ಲಿ ವಿದ್ವಾಂಸರಿಂದ ಕೂಡಿದ ಅಗ್ರಹಾರಗಳು, ವಿವಿಧ ಧಾರ್ಮಿಕ ಪೂಜೆಗಳು ಈ ದೇವಸ್ಥಾನದಲ್ಲಿ ನಡೆಯುತ್ತಿದ್ದವು. ಈ ದೇವಸ್ಥಾನ ಮತ್ತು ಅಗ್ರಹಾರಗಳು ಈ ಪ್ರದೇಶದ ಜನರಿಗೆ ಧಾರ್ಮಿಕ ರೀತಿಯಲ್ಲಿ ನಡೆಯುವಂತೆ ಮಾಡಿತು. ಈಗ ಇದು ಕುಗ್ರಾಮವಾದರೂ ಇದಕ್ಕೆ ಐತಿಹಾಸಿಕ ಹಿನ್ನೆಲೆ ಇರುವುದನ್ನು ಮರೆಯಲು ಸಾಧ್ಯವಿಲ್ಲ. ಕೆನರಾ ಜಿಲ್ಲೆಯಲ್ಲಿ ಸಮುದ್ರದಡದಲ್ಲಿ ಶೋಭಿಸುತ್ತಿರುವ ಪ್ರಸಿದ್ಧ ಶಿವಾಲಯಗಳಲ್ಲಿ ಕಿರಿಮಂಜೇಶ್ವರ ದೇವಾಲಯವೂ ಒಂದಾಗಿದೆ.

ಆಧಾರಗ್ರಂಥ:—

ನಾಗಪುರ ಕ್ಷೇತ್ರ ಮಹಾತ್ಮೆ.

Annual report of Epigrophica 1953—54—61.

South Indian History— K. A. W. Shastri.

Buchanan's Diary II Volume.

ಈ ಲೇಖನ ಬರೆಯಲು ಹಲವಾರು ರೀತಿಯಲ್ಲಿ ಸಹಕರಿಸಿದ ಕಿರಿಮಂಜೇಶ್ವರ ಶ್ರೀ ವಿಷ್ಣು [illegible]ರಿಗೆ ಲೇಖಕರು ಕೃತಜ್ಞತೆ ಅರ್ಪಿಸುತ್ತಾರೆ.



ಅಂಕೋಲೆಯ ಭೀಷ್ಮ ಗಾಂವಕರ್

ಉತ್ತರ ಕನ್ನಡದ ಪುಟ್ಟ ಊರು ಅಂಕೋಲೆ. ಇದಕ್ಕೆ ಇನ್ನೊಂದು ಹೆಸರು ಕರ್ನಾಟಕದ ಬಾರ್ಡೋಲಿ. ಕರನಿರಾಕರಣ ಚಳುವಳಿಗೆ ಮಹಾತ್ಮಾ ಗಾಂಧಿಯವರು ಕರೆ ನೀಡಿದಾಗ, ಅದಕ್ಕೆ ಓಗೊಟ್ಟ ಕನ್ನಡಿಗರು ಅಂಕೋಲೆಯಲ್ಲಿ ಒಂದಾದರು. ವೀರ ಸತ್ಯಾಗ್ರಹಿಗಳಲ್ಲಿ ಉತ್ಸಾಹವನ್ನು ತುಂಬಿ ಅವರಿಗೆ ಬೆಂಬಲವನ್ನು ನೀಡಿದ ಒಂದು ವ್ಯಕ್ತಿ ಇತ್ತು. ಎಂತಲೇ ಚಳುವಳಿ ಬಿರುಸಿನಿಂದಲೇ ಸಾಗಿತು. ಈ ವ್ಯಕ್ತಿಯೇ ಶ್ರೀ ಸ. ಪ. ಗಾಂವಕರ.

ಇಂದು ೮೪ ವಯಸ್ಸನ್ನು ಮುಟ್ಟಿದ ಶ್ರೀ ಗಾಂವಕರರು ಉದಾರಿಗಳು, ಕಟ್ಟಾ ದೇಶಭಕ್ತರ; ಭಾವಜೀವಿಗಳು. ಇವರಿಗೆ ಜನ್ಮನೀಡಿದ ಪುಣ್ಯ ಕುಮಟ ತಾಲೂಕಿಗೆ ತೊರ್ಕೆ ಗ್ರಾಮದ ಪಾಲಿಗೆ. ಹುಟ್ಟೂರಲ್ಲಿ ಪ್ರಾಥಮಿಕ ಶಿಕ್ಷಣ, ಅನಂತರ ಧಾರವಾಡದಲ್ಲಿ ಶಿಕ್ಷಕ ತಂಬೇತಿ. ಶಿಕ್ಷಕರಾದ ಮೇಲೆ ವಿವಾಹಿತರಾಗಿ ಪತ್ನಿಯನ್ನೂ ಶಿಕ್ಷಿತೆಯಾಗಿಸಿದ ಉದಾರರು ಶ್ರೀ ಗಾಂವಕರರು. ಆದರೆ, ಶ್ರೀ ಗಾಂವಕರರ ಕಾರ್ಯಕಲಾಪಗಳಲ್ಲಿ ಬೆಂಗೋಲಾಗಿ ನಿಲ್ಲಬೇಕಾಗಿ ಬಂದದ್ದರಿಂದ ಶ್ರೀಮತಿಯವರು ಶಿಕ್ಷಿಕೆಯಾಗಿ ಮುಂದುವರಿಯಲಿಲ್ಲ. ಶ್ರೀ ಗಾಂವಕರರು ವೃತ್ತಿಯೊಡನೆಯೇ ವಿದ್ಯಾಭ್ಯಾಸವನ್ನು ಮುಂದುವರಿಸಿ ತಮ್ಮ ೪೦ನೆಯ ವಯಸ್ಸಿನಲ್ಲಿ ಬಿ. ಎ. ಪದವೀಧರರಾದರು. ಮುಂದೆ ಹುಬ್ಬಳ್ಳಿಯ ಸ್ಕೂಲ್ ಬೋರ್ಡಿನ ಅಧ್ಯಕ್ಷರಾಗಿ ೧೩ ವರ್ಷ ಸೇವೆ ಸಲ್ಲಿಸಿದರು. ಈ ವೇಳೆಯಲ್ಲಿ ಅವರಿಗೆ ವಿಶಾಲ ಜಗತ್ತಿನ ಪರಿಚಯವಾಯ್ತು. ಕವಿ—ಬರಹಗಾರರ ಸಂಪರ್ಕದಿಂದ ಇವರಲ್ಲೂ ಕಾವ್ಯ ಪ್ರತಿಭೆ ಒಸರತೊಡಗಿತು. ಶ್ರೀ ಗಾಂವಕರರು ಕೆಲವೇ ಕವನಗಳನ್ನು ಬರೆದಿರುವರಾದರೂ ಅವರ ಮಾರ್ಗದರ್ಶನದಲ್ಲಿ ಅನೇಕರು ಬರಹಗಾರರಾದರು. ಅರ್ಪಣ ಸಮಾಜ ಕಾರ್ಯಕರ್ತರಾಗಿ ಸಮಾಜ ಬೆಳವಣಿಗೆಗೆ ದಿಗ್ದರ್ಶಕರಾದರು. ರಾಷ್ಟ್ರೀಯತೆಯೊಳ್ಳೊ ದುಮುಕಿ ೧೯೩೦ರಲ್ಲಿ ಉಗ್ರ ಚಳುವಳಿಯ ಅಧ್ವರ್ಯುವಾಗಿ ಹಿಂಸೆ ಸೆರೆಮನೆಯನ್ನೂ ಕಂಡರು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ಅವರು ಕಾಂಗ್ರೆಸ್ ಪಕ್ಷದ ಪ್ರಬಲ ಸಮರ್ಥಕರು.

೧೯೬೭—೬೮ರಲ್ಲಿ ಮುಂಬಯಿಯಲ್ಲಿ ಶ್ರೀ ಗಾಂವಕರರು ಉಪಮಂತ್ರಿಯಾಗುವ ಭಾಗ್ಯವನ್ನೂ ಪಡೆದಿದ್ದರು. ೧೯೫೩ರಲ್ಲಿ ಸಂಪೂರ್ಣ ನಿವೃತ್ತರಾಗಿ ಅಂಕೋಲೆಯ ವೃದ್ಧ ಪಿತಾಮಹರಾಗಿ ಉಳಿದಿದ್ದಾರೆ. ಶ್ರೀ ಗಾಂವಕರರ ಸೇವಾ ಜೀವನವನ್ನು ಜನಜನಕ್ಕೂ ಮನವರಿಕೆ ಮಾಡಲು ಅವರ ಎಂಬತ್ತನೆಯ ಹುಟ್ಟುಹಬ್ಬವನ್ನು ಅಂಕೋಲೆಯಲ್ಲಿ ಮೊನ್ನೆ ಫೆಬ್ರವರಿ ೨೦ರಂದು ಆಚರಿಸಲಾಯಿತು. ಈ ಅಂಕೋಲೆಯ ಭೀಷ್ಮನಿಗೆ ಆದರದ ಕೃತಜ್ಞತೆ-ಗೌರವಗಳನ್ನು ಅರ್ಪಿಸಲಾಯಿತು.

ಶ್ರೀ ಗಾಂವಕರರು ಸಲ್ಲಿಸಿದ ಸೇವೆ ಬಹುಮುಖಿ. ಅವರೊಂದು ವ್ಯಕ್ತಿಯಾಗಿದ್ದದ್ದರೆ ಅಂತಹ ಸೇವೆ ನಡೆಸುತ್ತಿರಲಿಲ್ಲ, ಅವರೊಂದು ಅಪೂರ್ವ ಶಕ್ತಿಯಾಗಿ

ಶ್ರೀ ಪೈಯವರಿಂದ ಅಧಿಕಾರ ಸ್ವೀಕಾರ

ಮೊನ್ನೆಮೊನ್ನೆಯ ವರೆಗೂ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ನರಾಗಿದ್ದ ೪೮ ವಯಸ್ಸಿನ ಶ್ರೀ ಟಿ. ಎ. ಪೈ ಅವರು ಜೀವವಿಮಾ ಕಾರ್ಪೋರೇಶನ್ನಿನ ಚೇರ್‌ಮನ್ನರಾಗಿ ಮಾರ್ಚ್ ೨ರಂದು ಅಧಿಕಾರ ವಹಿಸಿದರು. ಐ. ಸಿ. ಎಸ್. ಶ್ರೇಣಿಗೆ ಹೊರತಾದವರಲ್ಲಿ ಈ ಪದವಿಯನ್ನು ಏರಿದವರಲ್ಲಿ ಶ್ರೀ ಪೈಯವರೇ ಮೊತ್ತಮೊದಲಿಗರು.

ಸಿಡೆನ್ಹ್ಯಾಮ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ಶ್ರೀ ಪೈಯವರು ಪಶ್ಚಿಮ ಜರ್ಮನಿಯಲ್ಲಿ ನಡೆದ ಇಂಟರ್‌ನೇಶನಲ್ ಸಮ್ಮರ್ ಸ್ಕೂಲ್ ಆಫ್ ಬ್ಯಾಂಕಿಂಗಿಗೆ ಭಾರತೀಯ ಪ್ರತಿನಿಧಿಯಾಗಿದ್ದರು.

ಶ್ರೀ ಪೈಯವರು ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರರಾಗಿ ಸೇರಿ, ಮುಂದೆ ಅದರ ಚೇರ್‌ಮನ್ನರಾಗಿ, ಬ್ಯಾಂಕಿನೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಅವರ ನಾಯಕತ್ವದಲ್ಲಿ ಬ್ಯಾಂಕು ಹಲವಾರು ದಿಟ್ಟ ಹೆಜ್ಜೆಗಳನ್ನಿಟ್ಟುದಲ್ಲದೆ ತೀವ್ರ ಬೆಳವಣಿಗೆಯನ್ನೂ ಹೊಂದಿತು. ರೂ. ೮ ಸಾವಿರದ ಮೂಲ ಬಂಡವಾಳದಿಂದ ಆರಂಭವಾದ ಬ್ಯಾಂಕು ಇಂದು ೩೩೫ ಶಾಖೆಗಳನ್ನು ಪಡೆದಿದೆ. ಇದರ ಸಂಪನ್ಮೂಲಗಳು ೧೫೦ ಕೋಟಿ ರೂಪಾಯಿಗಳನ್ನು ಮೀರಿದೆ. ಹಲವಾರು ರಂಗಗಳಲ್ಲಿ ಬ್ಯಾಂಕು "ಪ್ರಥಮ"ವೆನಿಸಿಕೊಂಡಿದೆ. ಅಲ್ಪಾದಾಯ ಮಂದಿಗರಿಗೂ ಮಕ್ಕಳಿಗೂ ಉಳಿತಾಯ ಸಾಧನವಾದ "ಪಿಗ್ಮಿ"ಯು ಇವುಗಳಲ್ಲಿ ಒಂದು. ಬ್ಯಾಂಕಿನಲ್ಲಿ ಈ ಖಾತೆಯು ಸುಮಾರು ೧ ಕೋಟಿ ರೂಪಾಯಿಗಳಿವೆ. ೧೯೬೯ರಲ್ಲೇ ಕೃಷಿರಂಗಕ್ಕೆ ನೆರವು ನೀಡಲು ಮುಂದಾಗಿ ಈ ದಿಸೆಯಲ್ಲೂ ಮೊತ್ತಮೊದಲನೆಯ ಸ್ಥಾನವನ್ನು ಬ್ಯಾಂಕು ಪಡೆದಿದೆ.

ತಮ್ಮ ೩೭ನೆಯ ವಯಸ್ಸಿನಲ್ಲೇ ಮದ್ರಾಸು ವಿಧಾನ ಸಭೆಗೆ ಆಯ್ಕೆಯಾದರು ಶ್ರೀ ಪೈ. ಭಾರತದ ಆಹಾರ ಧಾನ್ಯ ಕಾರ್ಪೋರೇಶನ್ನಿನ ಪ್ರಥಮ ಗೌರವ ಅಧ್ಯಕ್ಷರಾಗಿದ್ದ ಶ್ರೀ ಪೈ ನೇಶನಲ್ ಕ್ರೆಡಿಟ್ ಕೌನ್ಸಿಲಿನ ಸದಸ್ಯರೂ ಆಗಿದ್ದಾರೆ.

೦ ೦ ೦

ತನ್ನ ಹೊಸ ಅಧಿಕಾರವನ್ನು ವಹಿಸಿಕೊಂಡ ಬಳಿಕ ಜೀವವಿಮಾ ಕಾರ್ಪೋರೇಶನ್ನಿನ ನೌಕರರಿಗೆ ಶ್ರೀ ಪೈ ಒಂದು ಸಂದೇಶ ನೀಡಿದರು:

"ಜೀವವಿಮಾ ಕಾರ್ಪೋರೇಶನ್ನಿನ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ಪ್ರಾಸಂಗಿಕ ಕಾಲದಲ್ಲಿ ಕಾರ್ಪೋರೇಶನ್ನಿನ ಎಲ್ಲ ವರ್ಗದ ನೌಕರರೂ ಯಾವುದೇ ರೀತಿಯ ಚಳುವಳಿಯನ್ನು ಕೆಲಕಾಲದ ವರೆಗಾದರೂ ನಿಲ್ಲಿಸಬೇಕೆಂದು ವಿನಂತಿಸುತ್ತೇನೆ. ಇದರಿಂದ ಅವರ ಸಮಸ್ಯೆಗಳನ್ನು ಪರಿಶೀಲಿಸಲು ಆಡಳಿತ ಮತ್ತು ನೌಕರರ ನಡುವಣ ಸಂಬಂಧ ಕೆಡಿಸಬಹುದಾದ ಸಮಸ್ಯೆಗಳಲ್ಲಿ ಕೆಲವನ್ನಾದರೂ ಒಂದಾಗಿ ಬಿಡಿಸಲು ಅವಕಾಶ ದೊರೆಯುವುದು. ದೇಶದ ಮತ್ತು ಪಾಲಿಸಿದಾರರ ಸೇವೆ ಮಾಡುವುದೇ ನಮ್ಮೆಲ್ಲರ ಏಕೈಕ ಗುರಿ. ಈ ನಿಲೆಯಲ್ಲಿ ಪರಸ್ಪರ ತಿಳುವಳಿಕೆ ಮತ್ತು ಸದ್ಭಾವನೆಗಳಿಂದ ಎಲ್ಲ ಸಮಸ್ಯೆಗಳನ್ನೂ ಸಮಾಧಾನಕರವಾಗಿ ಬಿಡಿಸಬಹುದೆಂದು ತಿಳಿಯುತ್ತೇನೆ."

ಶ್ರೀ ಪೈಯವರ ಮನವಿಯನ್ನನುಸರಿಸಿ ನೌಕರರು ಪೂರ್ವನಿರ್ಧಾರಿತ "ಧರಣ"ವನ್ನು ನಿಲ್ಲಿಸಿದರೆಂಬುದು ಗಣನೀಯ.

ದಕ್ಷಿಣ ಕನ್ನಡ ಜಿಲ್ಲೆಯ ಪವಿತ್ರ ಕ್ಷೇತ್ರ ಶ್ರೀ ಕಟೀಲು

ದುರ್ಗಾಪರಮೇಶ್ವರೀ ಅಮ್ಮನವರ ಸಾನಿಧ್ಯ: ಇಲ್ಲಿಯ ಶ್ರೀ ದುರ್ಗಾಪರಮೇಶ್ವರೀ ಅಮ್ಮ ಜನರ ಅಧಿದೇವತೆ. ಈ ಅಮ್ಮನವರ ದೇವಸ್ಥಾನ ಬಹಳ ಪುರಾತನ ಕಾಲದಿಂದಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲೆಲ್ಲ ಪ್ರಸಿದ್ಧಿ ಪಡೆದಿದೆ. ಪ್ರಪಂಚದ ಇನ್ನಾವ ಸಂಸ್ಕೃತಿಯೂ ದೇವರಿಗೆ ಸ್ತ್ರೀತ್ವವನ್ನು ಕಲ್ಪಿಸಿ ಕೊಟ್ಟಿಲ್ಲ. ಆದರೆ ನಮ್ಮ ಹಿಂದೂ ಸಂಸ್ಕೃತಿ ಈ ರೀತಿ ಕಲ್ಪಿಸಿ ಕೊಟ್ಟಿದೆ. 'ಪಿತೃದೇವೋ ಭವ' ಎನ್ನುವುದರ ಜೊತೆಗನೇ "ಮಾತೃದೇವೋ ಭವ" ಎನ್ನುವ ಸೊಲ್ಲು ನಮ್ಮ ವೈಶಿಷ್ಟ್ಯ. ಹಾಗೆಯೇ ಕಟೀಲಿನ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರು ಇಲ್ಲಿ ಲಿಂಗ ರೂಪದಲ್ಲಿ ಉದ್ಭವವಾದರು. ಅಸಂಖ್ಯಾತ ಮಂದಿಯ ಭಕ್ತಿ-ಮೆಚ್ಚುಗೆಗೆ ಪಾತ್ರರಾದರು. ಈ ಅಮ್ಮ ಕರುಣಾಮಯಿ, ದೇಹೀ ಅಂದವರನ್ನು ಹೊಟ್ಟೆಯ ಮಕ್ಕಳಂತೆಯೇ ಮುದ್ದಾಡಬಲ್ಲರು. ಹಾಗೆಯೇ ಈ ಅಮ್ಮನ ಭಕ್ತವೃಂದ ಏಳಿಗೆಗೆ ಸಿಗದಿದ್ದಾರೆ. ಸುಖ ಸೌಖ್ಯ, ಶಾಂತಿ ಈ ಅಮ್ಮ ಆವಾಹಿತರಾಗಿದ್ದಾರೆ.

ಬ್ರಹ್ಮಕಲಶೋತ್ಸವ: ಹನ್ನೆರಡು ವರ್ಷಕ್ಕೊಮ್ಮೆ ಪಾವಿತ್ರ್ಯತೆಯ ದೃಷ್ಟಿಯಿಂದ ದೇವಾಲಯಗಳಲ್ಲಿ ಬ್ರಹ್ಮಕಲಶೋತ್ಸವವು ನೆರವೇರ ಬೇಕಾದುದು ಅನಿವಾರ್ಯ. ಈ ಮೊದಲೇ ನೆರವೇರಬೇಕಿದ್ದ ಇಲ್ಲಿಯ ಬ್ರಹ್ಮಕಲಶೋತ್ಸವವು ಜೀರ್ಣೋದ್ಧಾರದ ಕಾರ್ಯ ಇದೀಗ ಪೂರ್ತಿಗೊಳ್ಳುತ್ತಲಿರುವದರಿಂದ ಈ ಮಾರ್ಚ್ ತಿಂಗಳ ತಾ ೨ರಂದು ಸಾಂಗೋಪಾಂಗ ಯಶಸ್ವಿಯಾಗಿ ನೆರವೇರಿತು. ಈ ಪೂರ್ವ ಭಾವಿಯಾಗಿ ಈ ಕಳೆದ ೨–೩ ತಿಂಗಳ ಹಿಂದೆ ಮತ್ತೆ ಹಲವು ಕಾರ್ಯಗಳನ್ನು ಕೈಗೊಂಡಿರುವುದು ಮಾತ್ರ ಪೂರ್ಣ.

ಮಹೋತ್ಸವದ ವೈಭವ: ಈ ತಿಂಗಳ ತಾ. ೨೦ರಂದು ಅಂಕುರಾರೋಪಣೆಯಿಂದ ಮೊದಲ್ಗೊಂಡು ತಾ. 10 ರಂದಿನ ನಾಗ ಮಂಡಲ ಸಹಿತ ಜರಗಿದ ತಾ. ೨ರ ಬ್ರಹ್ಮಕಲಶೋತ್ಸವಕ್ಕಾಗಿ ಕೊಡುಗೈಯ ನೆರವನ್ನಿತ್ತ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಹೆಚ್ಚಿನ ಭಕ್ತವೃಂದ ಭಕ್ತಿಯಿಂದ ಪಾಲ್ಗೊಂಡಿದೆಯೆಂಬುದು ಗಮನಾರ್ಹ. ಬ್ರಹ್ಮಕಲಶೋತ್ಸವಾಂಗವಾಗಿ ತಾ. ೨ರಿಂದ ತೊಡಗಿ ಸಾಯಂಕಾಲದ ೨ ದಿನಗಳ ಧರ್ಮ ಸಮ್ಮೇಳನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ವಿಶೇಷ ವ್ಯವಸ್ಥೆಯನ್ನು ಕೈಗೊಳ್ಳಲಾಗಿತ್ತು. ತಾ. ೨ರಂದಿನ ಬ್ರಹ್ಮಕಲಶೋತ್ಸವದ ದಿನವೇ ಸುಮಾರು ೪೦-೫೦ ಸಹಸ್ರ ಭಕ್ತರಿಗೆ ಅನ್ನ ಸಂತರ್ಪಣೆಯು ಕುಂದಿಲ್ಲದ ಸದಾಲೋಚನೆಯಿಂದ ಅನುದಿನವೂ ಅಸಂಖ್ಯಾತರ ಸಮಾರಾಧನೆಗಾಗಿ ವ್ಯವಸ್ಥೆ ಕೈಗೊಳ್ಳಲಾಗಿತ್ತು.

ಪೌರಾಣಿಕವಾಗಿಯೂ ವಿಶಿಷ್ಟವಾದ ಪವಿತ್ರತೆಯಿಂದ ಪ್ರೇಕ್ಷಣಾರ್ಹವಾದ ಶ್ರೀ ದೇವಿಯ ಪಾವನ ಸಂದರ್ಶನದಿಂದ ಈ ಸದವಕಾಶದಲ್ಲಿ ಭಕ್ತವೃಂದವೆಲ್ಲವೂ ಕೃತಾರ್ಥವಾಗಿದೆ ಎನ್ನಬಹುದು.

ವಿದ್ಯಾದಾಯಿನೀ ಸಂಸ್ಥೆ ಮತ್ತು ಶಾಲೆಯ ಸುವರ್ಣ ಮಹೋತ್ಸವ

ಸುರತ್ಕಲ್ಲು, ಫೆ. ೨೮: ವಿದ್ಯಾದಾಯಿನೀ ಸಂಘ ಹಾಗೂ ಶಾಲೆಯ ಸುವರ್ಣ ಮಹೋತ್ಸವವೂ, ವಿದ್ಯಾದಾಯಿನೀ ಹೈಸ್ಕೂಲಿನ ರಜತ ಮಹೋತ್ಸವವೂ ಸಂಯುಕ್ತವಾಗಿ ತಾ. ೨೮ರ ಸಂಜೆ "ವಿದ್ಯಾದಾಯಿನೀ ಕಲಾ ಮಂದಿರ"ದಲ್ಲಿ ಜಿಲ್ಲಾಧಿಕಾರಿ ಶ್ರೀ ಟಿ. ಜೆ. ರಾಮಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಈ ಸಂಸ್ಥೆಗೆ ಉದಾರ ದಾನವಿತ್ತವರ ತೈಲ ಚಿತ್ರಗಳ ಅನಾವರಣವನ್ನು ಶ್ರೀ ಕೆ. ಸೂರ್ಯನಾರಾಯಣ ಅಡಿಗ ಅವರು ನೆರವೇರಿಸಿದರು. ಸ್ಮೃತಿ ಸಂಪುಟದ ಬಿಡುಗಡೆಯನ್ನು ಶ್ರೀ ಕೆ. ಎಸ್. ಶ್ರೀಧರ ಶೆಟ್ಟಿಯವರು ನೆರಗಿಸಿದರು. ಶಾಲೆಯ ಪ್ರಥಮ ವಿದ್ಯಾರ್ಥಿಯಾದ ಮೊದಲ್ಗೊಂಡು ಇದು ವರೆಗೆ ಈ ಸಂಸ್ಥೆ ಬೆಳೆದ ರೀತಿಯನ್ನು ಶ್ರೀ ವಾಸುದೇವರಾಯರು ಸ್ವಾಗತ ಭಾಷಣದಲ್ಲಿ ಸೂಚಿಸಿದರು. ಉತ್ಸವದ ವರದಿಯನ್ನು ಶ್ರೀ ಬಿ. ವಿ. ಕೃಷ್ಣಯ್ಯನವರು ವಾಚಿಸಿದರು. ಸಂದೇಶಗಳನ್ನು ಶ್ರೀ ಎಂ. ಶಂಕರನಾರಾಯಣಯ್ಯ ಓದಿದರು. ಸುವರ್ಣ ಮಹೋತ್ಸವದ ಪರವಾಗಿ ಗುರುಪೂಜೆಯಾಗಿ 1916ರಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ನಾರಾಯಣರಾವ್ ಹಾಗೂ ಅಧ್ಯಾಪಕರಾಗಿದ್ದ ಶ್ರೀ ಪಿ. ಬಾಬು ಅವರಿಗೆ ಉಡುಗೊರೆಯಿತ್ತು ಸತ್ಕರಿಸಲಾಯಿತು. ರಜತ ಮಹೋತ್ಸವದ ಅಂಗವಾಗಿ ಪರೀಕ್ಷೆಗಳಲ್ಲಿ ಪ್ರತಿವರ್ಷ ಉನ್ನತ ಶ್ರೇಣಿಯನ್ನು ಪಡೆದ ಹಳೆಯ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಪುಷ್ಪಗುಚ್ಛ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗಿತ್ತು.

ಶ್ರೀ ಪಿ. ಶ್ರೀನಿವಾಸರಾಯರು ಧನ್ಯವಾದ ಸೂಚಿಸಿದರು. ವಿದ್ಯಾದಾಯಿನೀ ಬಳಗದವರು "ವಿಜಯ ದುಂದುಭಿ" ಎಂಬ ಚಾರಿತ್ರಿಕ ನಾಟಕ ಅಭಿನಯಿಸಿದರು.

ಕೋಟಿ ಚೆನ್ನಯ್ಯ–ಬೈದೇರುಗಳ ಉತ್ಸವ

ಸುಳ್ಯ ತಾಲೂಕಿನ ಬೈದೇರುಗಳ ಆದಿ ಸ್ಥಳ ಎಣ್ಮೂರು ಬೀಡಿನ ಪೂರ್ವ ಪದ್ಧತಿಯಂತೆ ತಾ. ೨೦-೪-೭೦ರಿಂದ ತಾ. ೨೨-೪-೭೦ರ ವರೆಗೆ ಕೋಟಿ ಚೆನ್ನಯ್ಯ-ಬೈದೇರುಗಳ ಉತ್ಸವವು ಜರಗಲಿರುವುದು. ಈ ಸಂಬಂಧ ಸರ್ವರೂ ಬಂದು ಸಹಕರಿಸಿ, ಗಂಧ ಪ್ರಸಾದವನ್ನು ಸ್ವೀಕರಿಸಬೇಕಾಗಿ ಕಟ್ಟ ಬೀಡಿನ ಪಟೇಲ್ ಶ್ರೀ ಕೆ. ಬಿ. ವಿಠಲ್ ರೈ ಅವರು ಅಪೇಕ್ಷಿಸುತ್ತಾರೆ.

ಡಾ॥ ಮೋಹನ್‌ದಾಸ್ ಪೈ ಅವರ ಕೊಲಂಬೋ ಪ್ರಯಾಣ

ಉಡುಪಿಯ ಪ್ರಸಿದ್ಧ ಡಾಕ್ಟರ್, ಹಾಗೂ ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ನಿನ ಉಡುಪಿ ಶಾಖೆಯ ಕಾರ್ಯದರ್ಶಿ ಡಾ| ಕೆ. ಮೋಹನ್‌ದಾಸ್ ಪೈ ಅವರು ಕೊಲಂಬೋದಲ್ಲಿ ನಡೆಯುವ ಸಿಲೋನ್ ಮೆಡಿಕಲ್ ಅಸೋಸಿಯೇಶನ್ನಿನ ೮೩ನೇ ಅಧಿವೇಶನದಲ್ಲಿ ಭಾಗವಹಿಸಲು ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ನಿನ ಪ್ರತಿನಿಧಿ ನಿಯೋಗದ ನಾಯಕರಾಗಿ ಪ್ರಯಾಣ ಬೆಳೆಸಲಿದ್ದಾರೆ. ಹತ್ತು ಮಂದಿ ಡಾಕ್ಟರರನ್ನೊಳಗೊಂಡ ಈ ನಿಯೋಗವು ತಾ. 17-3-70ರಂದು ಹೊರಟು ತಾ. 26-3-70ರಂದು ಹಿಂದೆ ಬರುವುದೆನ್ನಲಾಗಿದೆ.

ಹೈಸ್ಕೂಲುಗಳಿಗೆ ನವಯುಗ

ರಾಜ್ಯದ ಡಿ. ಪಿ. ಐ. ಯವರು, ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ. ಮೆನೇಜರ್, ನವಯುಗ, ಉಡುಪಿ.

ಕಲಾಕೇಂದ್ರದ ಮತ್ತೊಂದು ಸಾಹಸ

ಚಕ್ರವ್ಯೂಹ

ಫೆಬ್ರವರಿ ತಾ. 15ರಂದು ಮುಂಬಯಿಯ ಕಲಾಕೇಂದ್ರವು ಶ್ರೀ ಸದಾನಂದ ಸುವರ್ಣರ "ಚಕ್ರವ್ಯೂಹ" ನಾಟಕದೊಂದಿಗೆ ತನ್ನ ಹೊಸ ವರ್ಷದ ಕಾರ್ಯಕ್ರಮವನ್ನು ಆರಂಭಿಸಿತು.

"ಟ್ರ್ಯಾಪ್ ಫಾರ್ ಎ ಲೋನ್ಲಿ ಮ್ಯಾನ್" ಎಂಬ ಫ್ರೆಂಚ್ ನಾಟಕವನ್ನು ಆಧರಿಸಿ ಶ್ರೀ ಸದಾನಂದ ಸುವರ್ಣ ಬರೆದ ಕೃತಿಯನ್ನು ಅವರೇ ದಿಗ್ದರ್ಶಿಸಿದರು.

ಅನಾಥ ಯುವಕನಾದ ದಿವಾಕರನನ್ನು ಟೆನಿಸ್ ಕ್ಲಬ್ಬಿನಲ್ಲಿ ಭೆಟ್ಟಿಯಾದ ಶ್ರೀಮಂತ ಯುವತಿ ವಿಲಾಸಿನಿ ಮದುವೆಯಾಗುತ್ತಾಳೆ. ಹನಿಮೂನಿಗೆಂದು ಪಂಚಗನಿಗೆ ಬಂದ ಕೆಲವೇ ದಿನಗಳಲ್ಲಿ ವಿಲಾಸಿನಿ ಕಾಣೆಯಾಗುತ್ತಾಳೆ. ದಿವಾಕರ ಪೋಲೀಸರಿಗೆ ಕಂಪ್ಲೇಂಟ್ ಕೊಡುತ್ತಾನೆ. ಸಿ.ಐ.ಡಿ. ಇನ್ಸ್‌ಪೆಕ್ಟರ್ ತನಿಖೆ ನಡೆಸುತ್ತಿದ್ದಾಗಲೇ ಗುರುಕುಲದ ಸ್ವಾಮೀಜೀ ವಿಲಾಸಿನಿಯನ್ನು ಕರೆತರುತ್ತಾರೆ. ಆದರೆ ದಿವಾಕರನು ಅದು ವಿಲಾಸಿನಿಯಲ್ಲ ಎಂದು ಪಟ್ಟು ಹಿಡಿಯುತ್ತಾನೆ. ತಾನು ವಿಲಾಸಿನಿ ಹೌದೆಂಬ ಬಗ್ಗೆ ಆ ಯುವತಿ ಎಲ್ಲ ವಿವರಗಳನ್ನು ಸುಲಲಿತವಾಗಿ ಒಪ್ಪಿಸಿದರೂ ದಿವಾಕರ ಒಪ್ಪುವುದಿಲ್ಲ. ಸಾಕ್ಷಿದಾರಳಾಗಿ ಬಂದ ನರ್ಸ್‌ರವೂ ಕೂಡಾ ಇವಳೇ ಶ್ರೀಮತಿ ದಿವಾಕರ ಅನ್ನುತ್ತಾಳೆ. ಆದರೆ ದಿವಾಕರನ ಮದುವೆ ಸಂದರ್ಭದಲ್ಲಿ ರಿಜಿಸ್ಟ್ರೀ ಆಫೀಸಿನಲ್ಲಿ ಸಾಕ್ಷಿಯಾಗಿದ್ದ ಕಂಬದ ಕೋಣೆಯನ್ನು ಮಾತ್ರ ವಿಲಾಸಿನಿ ಮತ್ತು ಸ್ವಾಮೀಜಿ ಕೊಂದು ಹಾಕುವರು. ಹೀಗೆ ಕತೆ ಸುತ್ತುಸುತ್ತಾಗಿ ಗಹನವಾಗುತ್ತಾ ಹೋಗಿ ಕ್ಷಣಕ್ಷಣಕ್ಕೂ ಪ್ರೇಕ್ಷಕರಲ್ಲಿ ಕುತೂಹಲವನ್ನು ಉಂಟುಮಾಡುತ್ತದೆ.

ಆದರೆ ಮೂಲತಃ ನಿಜ ವಿಲಾಸಿನಿಯನ್ನು ದಿವಾಕರನೇ ಕೊಂದನೆಂದೂ ವಿಲಾಸಿನಿ–ಸ್ವಾಮೀಜೀಗಳಿಬ್ಬರೂ ಪೋಲೀಸರೇ ಎಂದೂ ತಿಳಿದಾಗ ಜನ ದಿಗ್ಭ್ರಮೆಗೊಳ್ಳುವರು.

ಕೊಲೆ ಪಾತಕಿಯ ಸಂಶೋಧನೆಗಾಗಿಯೇ 'ಚಕ್ರವ್ಯೂಹ'ದ ರಚನೆಯಾಯಿತೆಂದು ತಿಳಿದಾಗ ಪ್ರೇಕ್ಷಕ ಚಕಿತನಾಗುತ್ತಾನೆ.

ಕುಶಲ ಅಭಿನಯದಿಂದಾಗಿ ಈ ನಾಟಕವು ಕೊನೆಯ ತನಕವೂ ಜನರನ್ನು ಕುತೂಹಲದಲ್ಲಿ ಬಂಧಿಸಿಡಲು ಸಮರ್ಥವಾಯಿತು. ದಿವಾಕರನಾಗಿ ಸದಾನಂದ ಸುವರ್ಣ ಮತ್ತು ವಿಲಾಸಿನಿಯಾಗಿ ಲತಾ ಕುಲಕರ್ಣಿ ನೀಡಿದ ಅಭಿನಯ ಸರ್ವಾಂಗ ಸುಂದರವಾದುದು. ತೀರಾ ಕ್ಲಿಷ್ಟಕರವಾದ ಈ ಪಾತ್ರಗಳನ್ನು ಸಮರ್ಪಕವಾದ ಅಭಿನಯದಿಂದ ನಾಟಕಕ್ಕೇ ಕಳೆಗಟ್ಟುವಂತೆ ಅಭಿನಯಿಸಿದ ಶ್ರೇಯ ಈ ಇಬ್ಬರು ಕಲಾವಿದರಿಗೆ ಸಲ್ಲಬೇಕು. ಕಂಬದ ಕೋಣೆ ಅಪ್ಪಣ್ಣ, ಆಗ (ಹಿರಿಯ ನಟ—ದಿಗ್ದರ್ಶಕ) ಕೆ. ಜೆ. ರಾವ್ ನೀಡಿದ ಅಭಿನಯ ತೀರಾ ಮನೋಜ್ಞವಾಗಿತ್ತು. ಆ ಚಿಕ್ಕ ಪಾತ್ರದಲ್ಲಿ ಕೂಡಾ ಕೆ. ಜೆ. ಜೀವಕಳೆ ತುಂಬಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ್ದು ಮಾತ್ರವಲ್ಲ ಪ್ರಭಾವೀ ಅಭಿನಯದಿಂದಾಗಿ ಕೆ. ಜೆ.ಯವರ 'ಕಂಬದಕೋಣೆ' ಪಾತ್ರ ಬಹು ಕಾಲ ಮುಂಬಯಿ ಕನ್ನಡಿಗರಿಗೆ ನವಿನೆನಪಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

ದಿವಾಕರನೊಂದಿಗೆ ಸಹಾನುಭೂತಿ ತೋರಿಸುತ್ತಲೇ ಆತನಿಂದ ವಿವರಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದ ಸಿ. ಐ. ಡಿ. ಇನ್ಸ್‌ಪೆಕ್ಟರ್ ಪಾತ್ರದಲ್ಲಿ ರಾಜು ಸಾಲಿಯಾನ್ ನೀಡಿದ ಅಭಿನಯ ಮಾರ್ಮಿಕವಾಗಿತ್ತು. ನಟ ಸ್ವಾಮೀಜಿಯಾಗಿ ಎಸ್. ಎಂ. ಶೆಟ್ಟಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ನರ್ಸ್‌ನ ಪಾತ್ರದಲ್ಲಿ ಕುಮಾರಿ ರೇಖಾ ನೀಡಿದ ಅಭಿನಯ ತೃಪ್ತಿಕರ.

ಉತ್ಸಾಹೀ ಕಲಾವಿದರನ್ನು ಒಂದೆಡೆ ಸೇರಿಸಿ ಉತ್ತಮ ನಾಟಕವನ್ನು ರಚಿಸಿ, ದಿಗ್ದರ್ಶಿಸಿ-ಅಭಿನಯಿಸಿದ ಸದಾನಂದ ಸುವರ್ಣ ಅಭಿನಂದನೀಯರು. ಉತ್ತಮ ಕಲಾವಿದರು ಜೊತೆಗೂಡಿದಾಗ ಉತ್ತಮ ಕೃತಿ ನಿರ್ಮಾಣವಾಗುತ್ತದೆ ಎನ್ನುವುದಕ್ಕೆ "ಚಕ್ರವ್ಯೂಹ" ಒಂದು ಸರಿಯಾದ ಉದಾಹರಣೆ ಎನಿಸಬಹುದು. ರಂಗ ವ್ಯವಸ್ಥೆ ಪ್ರಕಾಶ ಯೋಜನೆ ಎಲ್ಲವೂ ಸುಂದರವಾಗಿತ್ತು.

ಇದೇ ನಾಟಕವನ್ನು ತಾ. 17ರಂದು ಬಿರ್ಲಾ ಮಾತೋಶ್ರೀ ಸಭಾಗಾರದಲ್ಲಿ ಹೊಂದಿಟ್ಟು ಮೊಗವೀರ ಸಂಘದ ಸಹಾಯಾರ್ಥ ಆಡಲಾಯಿತು.

—ಸುಘೋಷ

ಗಾಂಧೀಜಿಯವರ ಜೀವನದಲ್ಲಿ ಬಾ ಅವರ ಪಾತ್ರ

(ಎರಡನೇ ಪುಟದಿಂದ)

ಹಾಗೂ ಪ್ಯಾರೇಲಾಲಜಿ ಅವರು ಬ್ಯಾಡ್ಮಿಂಟನ್ ಆಡುವುದನ್ನು ಆಸಕ್ತಿಯಿಂದ ನೋಡುತ್ತಿದ್ದರು. ಯಾರಾದರೂ ಉತ್ತಂತ್ರ ಮಾಡಿದರೆ ಅದನ್ನು ತಂಟೆಗೆ ತೆಗೆದುಕೊಳ್ಳುತ್ತಿದ್ದರು. ಬಾ ಮತ್ತು ಬಾಪು ಸಹ "ಪಿಂಗ್—ಪಾಂಗ್" ಆಡುತ್ತಿದ್ದರು. ಹೀಗೆ ಆಟವಾಡುತ್ತಿದ್ದಾಗ ಬಾಪು ಅವರು ಎಸೆದ ಚೆಂಡನ್ನು ಬಾ ಹಿಂತಿರುಗಿಸಲೇ ಇಲ್ಲ. ಆಗ ಎಲ್ಲರೂ ಮುಗುಳ್ನಕ್ಕರು. ಬಾ, ಆಗಾಗ್ಗೆ ಬಾಪು ಅವರೊಂದಿಗೆ ಈ ಆಟವಾಡುತ್ತಿದ್ದರು. ಮುಂದೆ ಕೆಲದಿನಗಳಲ್ಲಿ ಅಸ್ವಾಸ್ಥ್ಯವೂ ತೀವ್ರವಾಗಿ ಅವರು ಈ ಆಟವನ್ನು ಕೈಬಿಟ್ಟರು.

° ° °

ಬಾ ಮರಣ ಹೊಂದಲು ಇನ್ನು ಕೆಲವೇ ದಿವಸಗಳಿದ್ದವು. ಆಗ ಅವರು ಸದಾ ದೇವರನ್ನು ಪ್ರಾರ್ಥಿಸುತ್ತಿದ್ದರು. ಭಜನೆಗಳು "ರಾಮ ಧುನ್" ಭಕ್ತಿಪರವಶರಾಗಿ ಹಾಡುತ್ತಿದ್ದರು. "ದೇವರೇ, ನನ್ನ ಎಲ್ಲ ಅಪರಾಧಗಳನ್ನು ಮನ್ನಿಸಿ, ನನಗೆ ಆಶ್ರಯ ಕೊಡು" ಎಂದು ಬೇಡುತ್ತಿದ್ದರು.

ಬಾಪೂ ಕೇಳಿದರು "ಬಾ ಏನು ಚಿಂತೆ ಮಾಡುತ್ತಿರುವೆ? ದುಃಖಕ್ಕೆ ಕಾರಣ ಏನ?"

ಬಾ ಹೇಳುತ್ತಿದ್ದರು "ನಾನು ಸವಿಯಾಗಿದ್ದೇನೆ. ನೀವು ನನಗಾಗಿ ದುಃಖಿಸಬಾರದು. ನನಗೆ ಇಂತಹ ಸಾವು ಬಂದರೆ ನಿಜಕ್ಕೂ ಸಂತಸವಾಗುತ್ತದೆ" ಎಂದರು. ತ್ಯಾಗ ಜೀವನದ ಹಾಗೂ [illegible] ಸಾಕಾರ ಮೂರ್ತಿಯಾಗಿದ್ದ ಬಾ ಅವರು ಫೆಬ್ರವರಿ 22ರಂದು ಇಹಲೋಕ ಯಾತ್ರೆಯನ್ನು ಮುಗಿಸಿದರು.

—

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

NAVAYUGA 12—3—1970
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33,
Licensed to Post without Prepayment

ಪಾಲಿಗೆ ಬಂದುದೇ ಪಂಚಾಮೃತ

"ಬಡವನಿಗೆ ಹೆಚ್ಚು ಮಕ್ಕಳಾದರೆ ತುಂಬ ಕಷ್ಟ. ಇಂದಿನ ಕಾಲದಲ್ಲಿ ನಮ್ಮ ಜನರು ಬುದ್ಧಿ ಉಪಯೋಗಿಸದೆ ವರ್ಷಂಪ್ರತಿ ಮಕ್ಕಳನ್ನು ಪಡೆಯುತ್ತಾ ಬಂದರೆ ಗತಿ ಏನು? ಒಂದೇ ಮಗು ಸಾಕು. ಏನಾದರೂ ಅನಾಹುತವಾಗದಂತೆ ಇನ್ನೊಂದಿದ್ದರೆ ಲೇಸು. ಗಂಡು ಮಗುವೇ ಬೇಕೆಂದಿಲ್ಲ. ಸಂಬಂಧಿಕರಲ್ಲಿಂದ ಒಂದು ಗಂಡುಮಗು ತಂದು ಸಾಕಬಹುದು. ಅಂತೂ ಹೆಚ್ಚು ಮಕ್ಕಳು ಬೇಡವೇ ಬೇಡ" ಎಂದವರು ಶ್ರೀ ವೀರೇಗೌಡರು. ಇವರು ಮಂಡ್ಯ ಜಿಲ್ಲೆಯ ಕೀಲಾರ ಹಳ್ಳಿಯವರು.

ವೀರೇಗೌಡರ ತಂದೆಗೆ ತಾವು ನಾಲ್ಕು ಮಂದಿ ಮಕ್ಕಳು. ಎರಡು ಗಂಡು, ಎರಡು ಹೆಣ್ಣು. ಇವರ ತಂದೆಯ ಕಾಲದಲ್ಲಿ ಅಂದರೆ ಸುಮಾರು 37 ವರುಷದ ಹಿಂದೆ ಇದ್ದ ಭೂಮಿ ಸುಮಾರು ಒಂಭತ್ತು ಎಕರೆ. ಅದು ಕೂಡ ಬೆಟ್ಟು ಭೂಮಿ. ಮಳೆ ಬಂದರೆ ಬೆಳೆ, ಇಲ್ಲವಾದರೆ ಬರ. ಇದರಿಂದ ಕಷ್ಟದ ಜೀವನ. ಮದುವೆ, ಮುಂಜಿ ಆಪತ್ತು ಅನುಬಾರ ಎಲ್ಲದಕ್ಕು ಸಾಲ. ಇದಕ್ಕಾಗಿ ಇದ್ದ ಭೂಮಿಯಲ್ಲಿ ಎಂಟು ಎಕರೆಯಷ್ಟು ಮಾರಾಟ. ಉಳಿದ ಭೂಮಿಯೇ ಜೀವನಕ್ಕೆ ಆಧಾರ. ಆದರಲ್ಲಿ ಅಣ್ಣ ತಮ್ಮಂದಿರಲ್ಲಿ ಮನಸ್ತಾಪ. ಭೂಮಿ ತುಂಡು ತುಂಡು. ಪಾಲಿಗೆ ಬಂದುದು ಹದಿಮೂರು ಕುಂಟೆ.

ಪಾಲಿಗೆ ಬಂದುದೇ ಪಂಚಾಮೃತ ಎಂದು ಶ್ರೀ ಗೌಡರು ತಮ್ಮ ಭೂಮಿಯನ್ನು ಚೆನ್ನಾಗಿ ಉತ್ತು ಬಿತ್ತಿದರು. ಅಲ್ಲಿ ನೀರಾವರಿ ಸೌಕರ್ಯ ಸ್ವಲ್ಪ ಸಾಕಷ್ಟು ದೊರೆಯಿತು. ಬೆಳೆ ಬರತೊಡಗಿತು. ಕೈಯಲ್ಲಿ ಬಿಡಿಕಾಸೂ ಓಡಾಡತೊಡಗಿತು.

"ಸುಮಾರು ಹನ್ನೆರಡು ವರ್ಷಗಳ ಹಿಂದೆ 5 ಎಕರೆ ಖರೀದಿ ಮಾಡಿದೆ. ಒಳ್ಳೆಯ ಗೊಬ್ಬರ ಹಾಕಿದೆ. ಚೆನ್ನಾಗಿ ಉತ್ತೆ. ಒಳ್ಳೆಯ ಫಸಲು; ಖರ್ಚು ಕಳೆದು ಅಲ್ಪಸ್ವಲ್ಪ ಉಳಿಯುತ್ತಿತ್ತು. ಅದನ್ನೇ ಒಟ್ಟು ಮಾಡಿ ಮೂರು ವರುಷಗಳ ಹಿಂದೆ ತಿರುಗಿ ಮೂರು ಎಕರೆ ಕೊಂಡೆ. ಕಳೆದ ವರ್ಷ ಇನ್ನೊಂದು ಎಕರೆ ಖರೀದಿ ಮಾಡಿದೆ.

ನೀವು ಗೊಬ್ಬರ ನಮ್ಮ ಊರಲ್ಲಿ ಪ್ರಚಾರಕ್ಕೆ ಬಂದ ಕೂಡಲೇ ಬಳಸತೊಡಗಿದ್ದೆ. ಮೊದಲು ನಾನು ನೀವು ಗೊಬ್ಬರ ಹಾಕಿದ್ದು ಒಂದೇ ಎಕರೆಗೆ. ಗ್ರಾಮಸೇವಕ ಹಾಗು ಕೃಷಿ ಇಲಾಖೆಯವರ ಸಲಹೆ ಕೇಳುತ್ತಿದ್ದೆ. ಆಕಾಶವಾಣಿಯಿಂದ ಗೊಬ್ಬರ, ಬೀಜ, ಬಿತ್ತನೆ, ಉಳುಮೆ ಇತ್ಯಾದಿಗಳ ಕುರಿತು ಆಗಾಗ ಕೇಳುತ್ತಿದ್ದೆ. ಇದರಂತೆ ಪ್ರಯೋಗ ಮಾಡಿ ನೋಡಿದೆ. ಮೊದಲಿಗಿಂತ ಬೆಳೆ ಇಮ್ಮಡಿಯಾಯಿತು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ಒಬ್ಬ ಬಿ.ಎಸ್‌ಸಿ ಪಾಸು ಮಾಡಿ, ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾನೆ. ಇನ್ನೊಬ್ಬ ಎಸ್.ಎಸ್.ಎಲ್.ಸಿ. ಆದವನು ಗದ್ದೆ ಹೊಲ ನೋಡಿಕೊಳ್ಳುತ್ತಿದ್ದಾನೆ. ಈ ವರ್ಷ ಒಂದೆಕರೆಯಲ್ಲಿ ಕಬ್ಬು ಹಾಕಿದ್ದೇನೆ. ಆ ಗದ್ದೆಗೆ ನೀವು ಗೊಬ್ಬರ ಹಾಕಿದ್ದೇನೆ" ಎಂದು ಗದ್ದೆಯ ಕಡೆಗೆ ನಡೆಯತೊಡಗಿದರು ಶ್ರೀ ಗೌಡರು.

ಕೀಲಾರದ ಜನಸಂಖ್ಯೆ 3886. ಇವರಲ್ಲಿ ಮೂರಕ್ಕಿಂತ ಹೆಚ್ಚು ಮಂದಿ ಮಕ್ಕಳಿರುವವರ ಸಂಖ್ಯೆ ಸುಮಾರು 600. ಸಾಮಾನ್ಯ ಹೆಚ್ಚು ಕಡಿಮೆ ಎಲ್ಲರೂ ರೈತರೆನ್ನಬಹುದು. ಭತ್ತ, ಕಬ್ಬು, ರಾಗಿ ಇಲ್ಲಿಯ ಮುಖ್ಯ ಬೆಳೆಗಳು. ಕೋಳಿ—ಕುರಿ ಸಾಕಣೆ ಇಲ್ಲಿಯವರ ಉಪವೃತ್ತಿ. ಇಲ್ಲಿ ಒಂದು ಹೈಸ್ಕೂಲಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇದು ಸುತ್ತಮುತ್ತಲ 31 ಹಳ್ಳಿಗಳಿಗೆ ಸೇವೆ ಸಲ್ಲಿಸುತ್ತಿದೆ. ತಿಂಗಳಿಗೆ ಸರಾಸರಿ ಏಳೆಂಟು ಗಂಡಸರು ಆಪರೇಷನ್ ಮಾಡಿಸಿಕೊಳ್ಳುತ್ತಾರೆ. ಇವರಲ್ಲಿ ಸಣ್ಣಯ್ಯನವರು ಒಬ್ಬರು. ಇವರಿಗೆ ಆರು ಮಕ್ಕಳು. ಈಗ ಮೂರು ವರ್ಷದಿಂದ ಮಕ್ಕಳಿಲ್ಲ. 'ಈಕೆಯ ಹೆಸರು ಪುಟ್ಟತಾಯಿ. ಇವಳೇ ಕೊನೆಯವಳು' ಎಂದರು ಸಣ್ಣಯ್ಯ.

ಐವತ್ತೊಂಬತ್ತರ ನರಸಿಂಹಯ್ಯನವರು ಇರುವ ಜಮೀನು ಎರಡೇ ಎಕರೆ. ನೀವು ಗೊಬ್ಬರ ಹಾಕಿ ಹೆಚ್ಚು ಬೆಳೆ ತೆಗೆಯಬೇಕೆಂಬ ಆಸೆ. ಯೂರಿಯಾ, ಪೊಟ್ಯಾಶ್ ಮಿಶ್ರಣ, ಉಪಯೋಗಿಸಿದ್ದಾರೆ. ಇದರಿಂದ ಫಸಲು ಹೆಚ್ಚುವುದೆಂದು ಅವರಿಗೆ ಖಚಿತ. ಹೀಗೆಯೇ ಇನ್ನು ಮುಂದೆ ಸಂತತಿ ಹೆಚ್ಚದೆಂದು ಅವರಿಗೆ ಖಚಿತವಾಗಿದೆ. ವೀರೇಗೌಡರ ಹೊಲದ ಪಕ್ಕದಲ್ಲೇ ರಸ್ತೆ ಸಾಗಿದೆ. ರಸ್ತೆಯ ಆಚೆ ಈಚೆ ಭತ್ತ, ಜೋಳ, ಕಬ್ಬು ಬೆಳೆದು ನಿಂತ ಹಸಿರು ಹಸಿರಾದ ಹೊಲಗಳು. ರಸ್ತೆಯಲ್ಲಿ ತನ್ನ ಮುದ್ದು ಮಗು ಕೆಂಪಮ್ಮನನ್ನು ಹೆಗಲ ಮೇಲೆ ಹೊತ್ತು ಬರುತ್ತಿದ್ದ ಲಕ್ಷ್ಮಮ್ಮನಿಗೆ ಇರುವುದು ಮುಕ್ಕಾಲು ಎಕರೆ ಭೂಮಿ. ಇದರಿಂದ ಸಂಸಾರ ರಥ ಸುಗಮವಾಗಿ ಸಾಗದು. ಅಲ್ಲಿ ಇಲ್ಲಿ ಬೇಸಾಯದ ಕಾಲದಲ್ಲಿ ಕೂಲಿ ಮಾಡಬೇಕು.

"ನನಗೆ ಕುಟುಂಬ ಯೋಜನೆಯ ವಿಚಾರ ಗೊತ್ತಿದೆ. ನನಗೆ ಇವಳೊಬ್ಬಳೇ ಸಾಕು. ಆದರೆ ನನ್ನಾತನಿಗೆ ಒಂದು ಗಂಡು ಮಗು ಬೇಕಂತೆ. ಗಂಡಾಗಲಿ, ಹೆಣ್ಣಾಗಲಿ ಎರಡೇ ಮಕ್ಕಳಿದ್ದರೆ ಸಾಕು" ಎನ್ನುತ್ತಾ ಲಕ್ಷ್ಮಮ್ಮ ಹಿಂದೆ ತಿರುಗಿ ತನ್ನ ಮನೆಯ ಕಡೆ ನೋಡಿ ನಸುನಕ್ಕು ಮುಂದೆ ಸಾಗಿದಳು.

ಸಂಗೀತದಿಂದ–ಸಮಗ್ರತೆಯ ಕಡೆಗೆ

(ಒಂದನೆಯ ಪುಟದಿಂದ)

ಭಾಷೆಗಳಲ್ಲಿ ಈ ಕಲೆಗೆ ಸಂಬಂಧಿಸಿದಂತೆ [illegible] ಪತ್ರಿಕೆಗಳು ಪ್ರಕಟವಾಗಬೇಕು [illegible]. ಈ ಕಲೆಗಳನ್ನು ಜನಪ್ರಿಯಗೊಳಿಸುವಲ್ಲಿ [illegible] ಪತ್ರಿಕೆಗಳು [illegible] ನಮ್ಮ ದೇಶದಲ್ಲಿ ಇನ್ನೂ ಪ್ರಗತಿ ಸಾಧಿಸಬೇಕಾಗಿದೆ. ನಮ್ಮ ಭಾಷಾ ಪತ್ರಿಕೆಗಳು ಕಲಾ ಕ್ಷೇತ್ರದ ಬಗ್ಗೆ ಹೆಚ್ಚಿನ ಒಲವನ್ನೂ ಆಸಕ್ತಿಯನ್ನೂ ತೋರಿಸಬೇಕು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಮನೆ-ಮದ್ದು

ಗೃಹವೈದ್ಯ — ರೂ.2 - 00
ಪ್ರತಿಯೊಬ್ಬರನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ
ರೂ. 1 · 50
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯೂದ ದಿನವಹಿ ಪತ್ರ
ಸಂಕಲನ — ಬೆಲೆ ರೂ. 1–50
ಟಪ್ಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯಿತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ. ದ. ಕ.

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 19—3—1970 ಸಂಪುಟ 49 ಸಂಚಿಕೆ 28

ಶಿವರಾತ್ರಿಯ ಶಿವೋಪಾಸಕ

ಸ್ವಾಮಿ ದಯಾನಂದ ಸರಸ್ವತಿ

ಲೇಖಕರು: ಪಂಡಿತ್ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಕಾಲಚಕ್ರದ ಪರಿಧಿಗೆ ಸಿಲುಕಿ ಅಂಧಕಾರದಿಂದ ಆವರಿಸಲ್ಪಟ್ಟ ವೈದಿಕ ವಾಙ್ಮಯವನ್ನು ಪುನರುದ್ಧರಿಸಿದ ಮಹಾಪುರುಷರಲ್ಲಿ ಮಹರ್ಷಿ ದಯಾನಂದ ಸರಸ್ವತಿಯವರನ್ನು ವಿದ್ವತ್ ಜಗತ್ತು ಮುಕ್ತ ಕಂಠದಿಂದ ಹೊಗಳುತ್ತಿದೆ. ಇಂದಿಗೆ ಜಗತ್ತಿನಲ್ಲಿ ಕಂಡು ಬರುತ್ತಿರುವ ಕ್ರಾಂತಿಕಾರಕ ಪರಿವರ್ತನೆಯ ಶ್ರೇಯಸ್ಸು ದಯಾನಂದರಿಗೆ ಸೇರಿದ್ದೆಂಬುದಾಗಿ ಒಂದು ಕಾಲದಲ್ಲಿ ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಾಗಿದ್ದ "ರಾಮ್ಸೆ ಮೆಕ್ಡೊನಾಲ್ಡ್"ರು ಹೇಳಿರುವುದನ್ನು ನಾವಿಲ್ಲಿ ಸ್ಮರಿಸಿಕೊಂಡರೆ ತಪ್ಪಾಗದು. ಪ್ರೊ। ಮೇಕ್ಸ್ ಮುಲ್ಲರ್‌ರಂತಹ ಪಾಶ್ಚಿಮಾತ್ಯ ತತ್ವಶಾಸ್ತ್ರಜ್ಞರು ಋಗ್ವೇದ ಭಾಷ್ಯವನ್ನು ಪಾಶ್ಚಾತ್ಯ ಜಗತ್ತಿಗೆ ಒದಗಿಸಿಕೊಟ್ಟು ಅಲ್ಲಿಯವರಲ್ಲಿ ಆಧ್ಯಾತ್ಮಿಕ ಜೀವನ ವಿಕಾಸವನ್ನುಂಟು ಮಾಡಿದ ಮಹಾನುಭಾವರು. ಇವರು ಸಹ ಸ್ವಾಮಿ ದಯಾನಂದರನ್ನು ಜಗತ್ತಿನ ಮಹಾನ್ ಪಥಪ್ರದರ್ಶಕರೆಂದು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುತ್ತಾರೆ.

ವೀರ ಪ್ರಸೂತಿ ಗುಜರಾಥ ಭೂಮಿಯಲ್ಲಿ ವಿಕ್ರಮ ಸಂವತ್ಸರ ೧೮೮೧ (ಕ್ರಿ.ಶ 1824)ರಲ್ಲಿ "ಮೂಲ ಶಂಕರ"ನೆಂಬ ಅಭಿಧಾನದಲ್ಲಿ ಜನಿಸಿ ಕೇವಲ ಹನ್ನೆರಡು ವರ್ಷ ತುಂಬುವುದರೊಳಗಾಗಿ ಯಜುರ್ವೇದ ಮಂತ್ರ ಸಂಪೂರ್ಣ ಕಂಠಸ್ಥ ಮಾಡಿ ಶಿವರಾತ್ರಿಯ ಜಾಗರಣದ ರಾತ್ರಿಯಲ್ಲಿ ಶಿವಲಿಂಗದ ಮೇಲೆ ಕ್ಷುದ್ರ ಜಂತು ಇಲಿಗಳ ಓಡಾಟದ ದೃಶ್ಯದಿಂದ ಉಂಟಾದ ಧರ್ಮ ಜಿಜ್ಞಾಸೆ, ಈಶ್ವರ ಸಾಕ್ಷಾತ್ಕಾರದ ವಿಧಿ ವಿಧಾನಗಳನ್ನರಿಯಲು ಅತಿ ಚಿಕ್ಕ ವಯಸ್ಸಿನಲ್ಲಿಯೇ ಲೌಕಿಕ ಜೀವನದ ಬಂಧನವನ್ನು ಕಡಿದೊಗೆದ ಮಹಾತೇಜಸ್ವಿಯೇ ಸ್ವಾಮಿ ದಯಾನಂದರು. ಮಾನವ ಜಗತ್ತಿಗೆ ವೇದಗಳ ಅಪೌರುಷೇಯ ಜ್ಞಾನದ ವಾಸ್ತವಿಕ ಅರ್ಥವನ್ನು ಪ್ರಕಾರಗೊಳಿಸಿರುವರು. ಇವರು, ತಾನು ಸಂಪಾದಿಸಬೇಕೆಂದಿದ್ದ ವೈದಿಕ ಜ್ಞಾನ ಭಂಡಾರದ ಪ್ರಾಪ್ತಿಗಾಗಿ ಎಡೆಬಿಡದೆ ಭರತ ಖಂಡದ ಅದ್ಯಂತ ಸಂಚರಿಸಿ, ಅಸಂಖ್ಯಾತ ಮೇಧಾವಿ, ಸಾಧು ಸಂತರ ಸಹವಾಸ, ಅನೇಕ ಸನ್ಯಾಸಿಗಳೊಡನೆ ಶಾಸ್ತ್ರ ವಿಚಾರ ವಿನಿಮಯಗಳಿಂದ ತೃಪ್ತರಾಗದೆ ಕಟ್ಟಕಡೆಗೆ ಮಥುರಾ ಪಟ್ಟಣಕ್ಕೆ ಬಂದು ಅಲ್ಲಿದ್ದ ಒಬ್ಬ ತಪೋಧನ ಪ್ರಜ್ಞಾಚಕ್ಷು (ಬಾಹ್ಯ ದೃಷ್ಟಿ ಹೀನರಾಗಿದ್ದರೂ ಜ್ಞಾನದೃಷ್ಟಿ ದೊರಕಿಸಿಕೊಂಡಿರುವ)ಗಳ ಶರಣುಹೋಗಿ ಅವರಿಂದ ವೈದಿಕ ವಾಙ್ಮಯದ ಸಮಸ್ತ ಜ್ಞಾನ ಭಂಡಾರವನ್ನು ಕರಗತ ಮಾಡಿಕೊಂಡರು. ಈ ರೀತಿ ಸ್ವಾಮಿ ದಯಾನಂದರಿಗೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಸಿ ನಾಲ್ಕು ವೇದಗಳ ಸಂಪೂರ್ಣ ಜ್ಞಾನ ಬೋಧೆಯನ್ನು ಕೊಟ್ಟು ಆಶೀರ್ವದಿಸಿ "ವತ್ಸ ದಯಾನಂದ ನಶಿಸಿ ಹೋಗುತ್ತಿರುವ ಪುರಾತನ ವೈದಿಕ ಧರ್ಮವನ್ನು ಪುನರುದ್ಧಾರ ಮಾಡಿ ಮಾನವ ಜಾತಿಯನ್ನು ಅಧೋಗತಿಯ ಮಡುವಿನಿಂದ ರಕ್ಷಣೆ ಮಾಡು ಇದೇ ನನಗೆ ನಿನ್ನಿಂದ ದೊರಕುವ ವಾಸ್ತವಿಕ ಗುರುದಕ್ಷಿಣೆ" ಎಂದು ಹೇಳಿದವರೇ ದಂಡೀ ಸನ್ಯಾಸಿ ವಿರಜಾನಂದ ಸರಸ್ವತಿಯವರು. ಈ ಗುರುಗಳ ಪವಿತ್ರವಾದ ಆಶೀರ್ವಾದ ಮತ್ತು ಅಪೂರ್ವ ಆದೇಶವನ್ನು ಶಿರಸಾವಹಿಸಿ ವೈದಿಕ ಧರ್ಮದ ಸಂಕೇತ "ಭಗವಾಧ್ವಜ"ವನ್ನು ಧರಿಸಿ ಓಂಕಾರ ನಿನಾದವನ್ನು ಮಾಡುತ್ತಾ ಸಮಗ್ರ ಆರ್ಯಾವರ್ತದಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜನೈತಿಕ ಕ್ರಾಂತಿಯ ಕಹಳೆಯನ್ನು ಮೊಳಗಿಸಿದರು.

ಹಿಂದೂ ಜನಾಂಗದಲ್ಲಿ ಆವರಿಸಿಕೊಂಡಿರುವ ಸಹಸ್ರಾರು ಅಂಧ ರೂಢಿಗಳನ್ನು, ಜಾತಿಭೇದಗಳನ್ನೂ ತಕ್ಕ ಪ್ರಬಲವಾದ ವಾಗ್ವೈಖರಿಯಿಂದ ಖಂಡಿಸಿ, ಮಾನವ ಸಮುದಾಯದಲ್ಲಿ ಅಜ್ಞಾನದ ಅಂಧಕಾರವನ್ನು ಹರಡುತ್ತಿದ್ದ ಸಂಪ್ರದಾಯವಾದಿಗಳನ್ನು ಶಾಸ್ತ್ರಾರ್ಥಗಳಿಂದ ಗೆದ್ದು ವೇದವೇ ಈಶ್ವರೀಯ ಜ್ಞಾನದ ಮೂಲ; ಇದರ ಅನುಕರಣೆಯಿಂದಲೇ ಜಗತ್ತು ಶಾಂತಿದಾಯಕವಾದ ಜೀವನ ಸುಖವನ್ನು ದೊರಕಿಸಿಕೊಳ್ಳಬಲ್ಲದೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು. ತನ್ನ ಮಾತೃಭಾಷೆ ಗುಜರಾಥಿಯಾಗಿದ್ದರೂ ಹಿಂದಿಯೇ ಭಾರತಕ್ಕೆ ರಾಷ್ಟ್ರಭಾಷೆಯಾಗಬೇಕೆಂಬುದನ್ನು ಸರ್ವ ಪ್ರಥಮ ಪ್ರತಿಪಾದಿಸಿದವರು ಸ್ವಾಮಿ ದಯಾನಂದರು. ವೇದಾಧ್ಯಯನದಿಂದ ವಂಚಿಸಲ್ಪಟ್ಟಿದ್ದ ಶೂದ್ರ ವರ್ಗಕ್ಕೆ ವೇದಾಧಿಕಾರವನ್ನು ಒದಗಿಸಿ ಕೊಟ್ಟು, ಸಂಪ್ರದಾಯವಾದಿಗಳ ರಾಕ್ಷಸೀಯ ಬಂಧನಕ್ಕೊಳಗಾಗಿದ್ದ ಅಸಂಖ್ಯಾತ ಬಾಲ ವಿಧವೆಯರಿಗೆ ಪುನರ್ವಿವಾಹದ ಮೂಲಕ ಜೀವನ ದಾನವನ್ನು ಕರುಣಿಸಿ ಮಾತೃತ್ವದ ಮಹಾನ್ ಸಂರಕ್ಷಕನೆಂದು ಹೇಳಲ್ಪಟ್ಟರು. ಅತಿ ಕಠೋರವಾದ ಅಸ್ಪೃಶ್ಯತೆಗೆ ಯಾವ ಶಾಸ್ತ್ರದ ಆಧಾರವೂ ಇಲ್ಲವೆಂಬುದನ್ನು ಪ್ರತಿಪಾದಿಸಿ ಅಸ್ಪೃಶ್ಯ ನಿವಾರಣೆಗೆ ಪ್ರಥಮ ಮಾರ್ಗದರ್ಶನ ಮಾಡಿ ದಲಿತೋದ್ಧಾರಕನೆಂಬ ಅಭಿದಾನಕ್ಕೆ ಪಾತ್ರರಾದವರು ಸ್ವಾಮಿ ದಯಾನಂದರು.

ತಾವು ಸನ್ಯಾಸಿಯಾಗಿದ್ದರೂ ಪಾರತಂತ್ರ್ಯದ ಬಂಧನದಲ್ಲಿ ಸಿಲುಕಿ ಬಳಲುತ್ತಿದ್ದ ಭಾರತ ದೇಶಕ್ಕೆ ಸ್ವಾತಂತ್ರ್ಯದ ಮೂಲ ಮಂತ್ರ "ಸ್ವರಾಜ್ಯ"ದ ಪ್ರಥಮ ಘೋಷಣೆ ಮಾಡಿ ರಾಜಕೀಯ ಕ್ರಾಂತಿಕಾರರನ್ನು ಸಿದ್ಧಗೊಳಿಸಿದ ಪ್ರಥಮ ಶ್ರೇಯಸ್ಸು ಮಹರ್ಷಿ ದಯಾನಂದರಿಗೆ ಸಲ್ಲುವುದು. ಇವರು "ಪ್ರೊಫೆಸರ್ ಲಾಲಾ ಹರ್ ದಯಾಲ್" "ಶ್ಯಾಮಜಿ ಕೃಷ್ಣ ವರ್ಮ" ಮೊದಲಾದ ಕ್ರಾಂತಿಕಾರಿಗಳನ್ನು ವಿದೇಶಗಳಿಗೆ ಕಳುಹಿಸಿಕೊಟ್ಟು ಅಲ್ಲಿ ವಾಸಿಸುತ್ತಿರುವ ಭಾರತೀಯರನ್ನು ರಾಜಕೀಯ ಕ್ರಾಂತಿಕಾರರನ್ನಾಗಿ ಸಂಘಟಿಸಿ ಆ ಮೂಲಕ ಭಾರತದಲ್ಲಿ ಬ್ರಿಟಿಷರ ವಿರುದ್ಧ ರಾಜನೈತಿಕ ಕ್ರಾಂತಿ ಸಮರಕ್ಕೆ ಅಸ್ತಿಭಾರವನ್ನು ಹಾಕಿದರು. ಎಷ್ಟೇ ಉತ್ತಮದಾಯಕವಾಗಿದ್ದರೂ ಭಾರತದೇಶದಲ್ಲಿ ವಿದೇಶೀಯರ ಆಳಿಕೆ ಎಂದಿಗೂ ಹಿತಕಾರಕವಲ್ಲವೆಂಬುದನ್ನು ಪ್ರಥಮತಃ ತಮ್ಮ ಜಗದ್ವಿಖ್ಯಾತ ಗ್ರಂಥ "ಸತ್ಯಾರ್ಥ ಪ್ರಕಾಶ"ದ ಮೂಲಕ ಜಗತ್ತಿಗೆ ಪ್ರಕಾಶ ಪಡಿಸಿದರು.

ಭಾರತದ ಭಾವೀ ಜನಾಂಗ ಶಕ್ತಿಶಾಲಿಗಳೂ, ತೇಜಸ್ವಿಗಳೂ, ಸ್ವಾವಲಂಬಿಗಳೂ ನೈತಿಕ ಜೀವನ ಪಥಗಾಮಿಗಳೂ ಮಾತ್ರವಲ್ಲ ಸಮಗ್ರ ಜಗತ್ತಿನಲ್ಲಿ ಅಭಿಮಾನಶಾಲಿಗಳೂ, ಮಹಾನ್ ದೇಶಭಕ್ತರೂ ಆಗಿ ಬಾಳಿ ಬದುಕುವ ಸಲುವಾಗಿ ದೇಶದಲ್ಲಿ ಪ್ರಾಚೀನ ಕಾಲದ "ಗುರುಕುಲ ರಕ್ಷಣ"ವನ್ನು ರೂಪಿಸಿ ಕೊಟ್ಟರು. ಮಾಥಪತಿಯ ವಾಸ್ತವಿಕ ತತ್ವಗಳನ್ನು ತಿಳಿದುಕೊಳ್ಳಲು ಏಕದೇವ ಆಧಾರ ಭಾಷೆ ಸಂಸ್ಕೃತದ ಮಹತ್ವವನ್ನು ಭಾರತಕ್ಕೆ ಮಾತ್ರವಲ್ಲ ಪಾಶ್ಚಿಮಾತ್ಯರಿಗೆ ಸಹ ಪುನಃ ತೋರಿಸಿಕೊಟ್ಟು, ಸ್ವಾಮಿ ದಯಾನಂದರು ದೇವವಾಣಿ ಸಂಸ್ಕೃತದ ಮಹಾನ್ ಪೋಷಕರೆಂದು ಪರಿಗಣಿಸಲ್ಪಟ್ಟರು.

ನಾನಾ ಪ್ರಕಾರದ ಅಪಾರ್ಥಗಳ ಮೂಲಕ ಕಳಂಕಿತವಾದ ವೇದಗಳಿಗೆ ನಿಜವಾದ ಭಾಷ್ಯ ಬರೆದು ದೇಶವಿದೇಶಗಳಲ್ಲಿ ವೇದ ಪ್ರಚಾರಕ್ಕೆ ಪ್ರಬಲವಾದ ಅಸ್ತಿವಾರವನ್ನು "ಆರ್ಯ ಸಮಾಜ" ವೆಂಬ ಸಂಸ್ಥೆಯ ಮೂಲಕ ಭದ್ರಗೊಳಿಸಿ ವೈದಿಕ ಧರ್ಮದ ಸರ್ವತೋಮುಖ ಪುನರುದ್ಧಾರಕ್ಕೆ ತನ್ನ ಉತ್ತರಾಧಿಕಾರಿ ಸಂಸ್ಥೆ 'ಆರ್ಯ ಸಮಾಜ"ವೆಂಬುದನ್ನು ವಿಶ್ವದಾದ್ಯಂತ ವಿಶದಗೊಳಿಸಿದರು. ಸಾಂಪ್ರದಾಯಿಕ ಬಂಧನ, ನಿರ್ಥಕವಾದ ಜಾತಿಭೇದ ಇನ್ನಿತರ ಸಾಮಾಜಿಕ ಅತ್ಯಾಚಾರಗಳನ್ನು ಸಹಿಸಲಾರದೆ ಕ್ರೈಸ್ತ ಮುಸಲ್ಮಾನ ಮೊದಲಾದ ಅವೈದಿಕ ಧರ್ಮ ಸಂಪ್ರದಾಯಗಳಿಗೆ ಶರಣು ಹೋಗಿ ಮತಾಂತರ ಹೊಂದಿದ ಅಸಂಖ್ಯಾತ ಜನತೆಯನ್ನು ಧರ್ಮಶಾಸ್ತ್ರ ವಿಧಿ ಪೂರ್ವಕ ಶುದ್ಧೀಕರಣಗೊಳಿಸಿ ಪುನಃ ಆರ್ಯ ಸಂಸ್ಕೃತಿಯ ಅನುಯಾಯಿಗಳಾಗುವಂತೆ ಮಾರ್ಗದರ್ಶನ ಮಾಡಿದ ಸ್ವಾಮಿ ದಯಾನಂದರು ಪತಿತಪಾವನರೆಂದು ಪ್ರಸಿದ್ಧಿ ಪಡೆದರು.

ಇಂತಹ ಜಾಜ್ವಲ್ಯ ಮಾನವಾದ ನಕ್ಷತ್ರದ ಪ್ರಖರ ಜ್ಯೋತಿ ಅಂಧ ರೂಢಿಗಳ ಆರಾಧಕರಿಗೆ ಸಹಿಸದಂತಾಯಿತು. ಸ್ವಾಮಿ ದಯಾನಂದರಿರುವಷ್ಟು ಕಾಲ ತಮ್ಮ ಸ್ವಾರ್ಥದ ಬೊಕ್ಕಸಕ್ಕೆ ಧಕ್ಕೆ ತಪ್ಪಿದ್ದಲ್ಲವೆಂದು ಪುರೋಹಿತ ವರ್ಗ ತಿಳಿದು ಇವರ ಅಂತ್ಯಕ್ಕಾಗಿ ಘೋರವಾದ ಒಳಸಂಚನ್ನು ರೂಪಿಸತೊಡಗಿತು. ಅನೇಕ ಬಾರಿ ವಿಷಪ್ರಯೋಗವಾಯಿತು ಆದರೆ ಬ್ರಹ್ಮಚರ್ಯದ ಬಲದಿಂದ ಅದು ವ್ಯರ್ಥವಾಯಿತು. ಸ್ವಾಮಿ ದಯಾನಂದರು ಒಂದೆಡೆಯಿಂದ ವೈದಿಕ ಧರ್ಮ ಪ್ರಚಾರವನ್ನು ಅತಿ ಬಿರುಸಿನಿಂದ ಮಾಡುತ್ತಿದ್ದಂತೆ ಮತ್ತೊಂದೆಡೆಯಿಂದ ಭರತ ಖಂಡದ ಸಮಸ್ತ ರಾಜ ಮಹಾರಾಜರುಗಳನ್ನೂ ಎಡೆಬಿಡದೆ ಸಂದರ್ಶಿಸಿ ಅವರಿಗೆಲ್ಲಾ ಭಾರತದ ಸನಾತನ ರಾಜ

(ಎಂಟನೇ ಪುಟ ನೋಡಿರಿ)

ಸೇವಾಗ್ರಾಮದ ಮಹಾಮಾತೆ

ಲೇಖಕರು : ಶ್ರೀ ಆರ್. ಆರ್. ದಿವಾಕರ್.

ಮಾತೃತ್ವ ಮುಖ್ಯ ಕಲ್ಪನೆಗಳ ಸಂಯೋಗ. ತಾಯಿ ಮಗುವನ್ನು ಕೇವಲ ಹೊರುವ ಹೆರುವ ಕೆಲಸವನ್ನಷ್ಟೇ ಮಾಡಳು. ಬಹುಶಃ ಹೊರುವ ಹೆರುವ ಕೆಲಸ ಪ್ರಾರಂಭದ ಕೆಲಸ. ಮೊಲೆಯೂಡಿ ಮಗುವಿನ ಪಾಲನೆ ಮಾಡುವ ಹೊಣೆ ತಾಯಿಯದು. ಮಗುವಿನ ಮುಂದಿನ ಭವಿಷ್ಯದ ಬೀಜಾಂಕುರದ ಅರ್ಪಣೆಯನ್ನೇ ತಾಯಿ ಮಾಡುವಳು.

ಹಿಂದೂ ದೇವತಾ ಕಲ್ಪನೆಗಳಲ್ಲಿ "ಸಪ್ತ ಮಾತೃಕೆ" ಸಂಪ್ರದಾಯದ ಬಳುವಳಿಯಾಗಿ ಉಳಿದು ಬಂದಿರುವ ಕಲ್ಪನೆ ಬದುಕಿನ ಏಳು ಸೃಷ್ಟ್ಯಾತ್ಮಕ ಶಕ್ತಿಗಳ ಪ್ರತಿರೂಪವೇ 'ಸಪ್ತ ಮಾತೃಕೆ'.

ಕ್ರಿಶ್ಚಿಯನ್ ಸಂಪ್ರದಾಯದ ಚಿತ್ರಗಳಲ್ಲಿ ತಾಯಿ ಮೇರಿ ಮತ್ತು ಅವಳ ಮಗುವಿನ ಚಿತ್ರ ಅತ್ಯಂತ ಆಕರ್ಷಣೀಯ. ಈ ಚಿತ್ರದಲ್ಲಿ ತಾಯಿ—ಮಗುವಿನ ನಡುವಿನ ನಿರಂತರ ಪ್ರೇಮ ಹಾಗು ಬಾಲ್ಯದಲ್ಲಿ ತಾಯ್ತನ ನೀಡುವ ಆತ್ಮೀಯ ಗಮನ—ಈ ಅಂಶಗಳು ಇದರಲ್ಲಿ ಸ್ಫುರಿಸುತ್ತಿವೆ. ಮಗುವು ತಾಯಿಯತ್ತ ನೋಡುತ್ತಿದೆ. ತಾಯಿ ಮಾತ್ರ ಮಗುವಿನಲ್ಲಿ ಅಂತಹ ಆತ್ಮವಿಶ್ವಾಸವನ್ನು ಕುದುರಿಸಬಲ್ಲಳು. ನಿತ್ಯಜೀವನದಲ್ಲಿ ತನ್ನ ಮುದ್ದು ಮಗುವನ್ನು ತಾಯಿ ಅತ್ಯಂತ ವಾತ್ಸಲ್ಯದಿಂದ ಬೆಳೆಸುತ್ತಿರುವ ದೃಶ್ಯ ಸಾಮಾನ್ಯವಾದದ್ದು. ತಾಯಿ ಶುದ್ಧ ಪ್ರೀತಿಯ ಶ್ರೇಷ್ಠ ಪ್ರತೀಕವಾಗಿದ್ದಾಳೆ. ನಿಸ್ವಾರ್ಥ ಸೇವೆ ಹಾಗು ಸದಾ ನಗುತ್ತ ಕಷ್ಟ ಸಹಿಸುವ ಗುಣ. ಇವುಗಳ ಮೂರ್ತಿವಂತ ಸ್ವರೂಪವೇ ತಾಯಿ. ತಾನು ಪ್ರೀತಿಸುವ ಮಗುವಿಗಾಗಿ ಯಾವ ತ್ಯಾಗಕ್ಕೂ ಅವಳು ಸದಾ ಸಿದ್ಧ.

ತಾಯಿಯ ಪಾತ್ರ

ತಾಯ್ತನ ಕಲ್ಪನೆಯ ಸಂಗಮ. ಆ ಸಂದರ್ಭದ ಕಾರ್ಯವೇ ಶ್ರೇಷ್ಠ ಸೃಷ್ಟ್ಯಾತ್ಮಕ ಕೆಲಸ. ಮಾನವ ವಂಶದ ನಿರಂತರ ಅಭಿವೃದ್ಧಿಯ ಮೂಲವೇ ಇದು. ಆದರೆ ತಾಯ್ತನದ ಕೆಲಸ ಇಲ್ಲಿಗೆ ಮಾತ್ರ ಸೀಮಿತವಲ್ಲ. ಅದು ಇಲ್ಲಿ ಪ್ರಾರಂಭವಾಗುವದು. ಮಗು ಗರ್ಭಸ್ಥವಾಗಿರುವುದಕ್ಕಿಂತ ಅದರ ಜನನದ ನಂತರ ತಾಯಿಯ ಹೊಣೆ ಇನ್ನೂ ಹೆಚ್ಚುವದು. ಮಗುವಿನ ಭಾವ, ಮನಸ್ಸುಗಳು ಆರೋಗ್ಯಕರವಾಗಿ ಪ್ರಗತಿಶೀಲವಾಗುವಾಗಿ ಇರುವಂತೆ ತಾಯಿ ಮಗುವನ್ನು ಬೆಳೆಸುವಳು. ನಿಜವಾಗಿ ಹೇಳಬೇಕೆಂದರೆ ತಾಯಿ ಜನ್ಮದಾತೆಯೂ ಅಹುದು, ಮಗುವಿನ ದೇಹ ಮನಸ್ಸುಗಳನ್ನು ಪೋಷಿಸುವ ದಾಯಿಯೂ ಅಹುದು. ಮಾತೆಯ ಪಾತ್ರ ಬೇರೆ, ಮಹಿಳೆಯ ಪಾತ್ರ ಬೇರೆ. ಮಹಿಳೆಯ ಪಾತ್ರ ಇನ್ನೂ ದೊಡ್ಡದು. ಮಹಿಳೆಯ ರೂಪದಲ್ಲಿ ಮಾತೆ ಇದ್ದಾಳೆ. ಆದರೆ ಮಾತೆಯ ಪಾತ್ರದಲ್ಲಿ ಮಹಿಳೆಯ ಎಲ್ಲ ಅಂಶಗಳು ಪ್ರಾಧಾನ್ಯ ಪಡೆಯುವದಿಲ್ಲ. ಮಗುವಿನ ಪೋಷಣೆ—ತಾಯ್ತನದ ಪಾತ್ರ ಇಲ್ಲದಿದ್ದರೆ ಮಹಿಳೆಯ ಮಹತ್ವವೇ ಕಡಿಮೆಯಾಗುವದು. ಮಾತೃತ್ವವಿಲ್ಲದ ಮಹಿಳೆಯು ಕೇವಲ ನಿಸರ್ಗದ ಲಾವಣ್ಯದ ನಿಧಿಯಾಗಿ ಉಳಿಯಬಹುದು. ಆದರೆ ಅವಳಲ್ಲಿ ಮಾತೃತ್ವದ ಅಂಶ ಒಡಮೂಡಿದಾಗ ಸೃಷ್ಟ್ಯಾತ್ಮಕ ಶಕ್ತಿಯ ಮಕುಟಮಣಿಯಾಗಿ ಅವಳು ಶೋಭಿಸುವಳು. ಜೀವನ ಮತ್ತು ಅದರ ವಿಕಾಸದ ಕೇಂದ್ರರೂಪವಾಗುವಳು.

ಮನುಷ್ಯನಲ್ಲಿ ಹೆಣ್ಣಿನ ಗುಣ

ಪ್ರತಿ ಪುರುಷನಲ್ಲಿಯೂ ಮಾನಿನಿಯ ಮಾರ್ದವತೆಯ ಅಂಶ ಇದ್ದೇ ಇರುತ್ತದೆ. ಅದರಂತೆ ಪ್ರತಿ ಮಹಿಳೆಯಲ್ಲಿಯೂ ಗಂಡಸುತನದ ಅಂಶ ಕಂಡು ಬರುತ್ತದೆ. ಇದು ನೈಸರ್ಗಿಕ ಗುಣ. ಕಾರ್ಯ ನಿರ್ವಾಹಕ ಶಕ್ತಿ ಮಾತ್ರ ಅವರನ್ನು ಬೇರ್ಪಡಿಸುತ್ತದೆ. ಚಿಕ್ಕ ಮಕ್ಕಳನ್ನು ಕಂಡರೆ ಸ್ತ್ರೀ ಪುರುಷರಿಬ್ಬರಿಗೂ ಕಕ್ಕುಲತೆ ಉಕ್ಕಿ ಬರುವದು ಸಹಜ. ಆದರೆ ಈ ಕಕ್ಕುಲತೆ ಸ್ತ್ರೀಯರಲ್ಲಿ ಪರಿಪೂರ್ಣ ಸ್ಥಿತಿಯನ್ನು ಮುಟ್ಟುತ್ತದೆ. ಚಿಕ್ಕ ಮಕ್ಕಳ ಮತ್ತು ರೋಗಿಗಳ ಶುಶ್ರೂಷೆ ಮಾಡಲು ಸ್ತ್ರೀ-ಪುರುಷರು ಉತ್ಸಾಹ ತೋರಿದರೂ ತಾಯಿಯಂತೆ ಮಮತೆ ತೋರಿ ಪಾಲನೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ.

ಗಾಂಧೀಜಿ

ಗಾಂಧೀಜಿಯವರಿಗೆ ಆಸಕ್ತರ ಶುಶ್ರೂಷೆಯ ಕೆಲಸವೆಂದರೆ ಹಿಗ್ಗು. ಸಿಮ್ಲಾದಲ್ಲಿ ಉನ್ನತ ಬ್ರಿಟಿಷ ಅಧಿಕಾರಿಗಳೊಂದಿಗೆ ಮಾತನಾಡುತ್ತಿದ್ದಾಗಲೂ ಸೇವಾಗ್ರಾಮದಲ್ಲಿ ತಾವು ಬಿಟ್ಟು ಬಂದಿದ್ದ ರೋಗಿಗಳ ಶುಶ್ರೂಷೆಯ ಬಗೆಗೆ ಚಿಂತಿಸುತ್ತಿದ್ದರು.

ತಾಯಿಯ ಹಿರಿಮೆ

"ಪಿತೃತ್ವ"ದಿಂದ ಪುರುಷನ ಅಂತಸ್ತು ಘನತೆಯ ಪರಾಕಾಷ್ಠೆ ಮುಟ್ಟಿದ್ದರೆ, ಮಾತೃತ್ವದ ಪದವಿಯಿಂದ ಮಾತೆ ಆ ಸ್ಥಾನರೂಪವನ್ನು ಪಡೆಯುತ್ತಾಳೆ. ಮಾತೃತ್ವವನ್ನು ಯಾರೂ ಹೊರಗಿನಿಂದ ಹೇರರು, ಕೃತ್ರಿಮವಾಗಿ ರೂಪಿಸರು. ಪ್ರಕೃತಿ ಸಹಜ ವಂಶಾಭಿವೃದ್ಧಿಯ ಒತ್ತಾಸೆ ಮಾಡಿ. ಸಾಮಾಜಿಕ ಮೌಲ್ಯಗಳಿಗೆ ಅನುಗುಣವಾಗಿ ಪ್ರತ್ಯೇಕತೆಯನ್ನು ಮನ್ನಿಸಬೇಕು. ಇತಿಹಾಸದ ಬಹುಶಃ ಪ್ರತಿಯೊಬ್ಬ ಮಹಾಪುರುಷನೂ ತನ್ನ ಏಳ್ಗೆ ತನ್ನ ತಾಯಿಯಿಂದ ಬಂದದ್ದು ಎಂದು ಹೇಳಿದ್ದಾನೆ, ತಾಯಿಗೆ ಅಪಾರ ಗೌರವ ಸಲ್ಲಿಸಿದ್ದಾನೆ. ಗಾಂಧೀಜಿಯವರು ಇಂಗ್ಲೆಂಡಿಗೆ ಅಭ್ಯಾಸಕ್ಕೆ ಹೋದಾಗ, ತಮ್ಮ ತಾಯಿಗೆ ಇತ್ತ ವಚನವನ್ನು ನಡೆಸಿಕೊಟ್ಟರು. "ನನ್ನ ತಾಯಿಗೆ ನಾನು ವಚನವಿತ್ತು, ಆ ವಚನ ಪರಿಪಾಲಿಸಿದ್ದರಿಂದಲೇ, ದೋಷಗಳು ನನಗೆ ತಟ್ಟದಂತೆ ಇರಲು ಸಾಧ್ಯವಾಯಿತು" ಎಂದು ಅವರು ಹೇಳಿದ್ದಾರೆ.

ಕಸ್ತೂರಬಾ

ಗಾಂಧೀ ಜನ್ಮ ಶತಾಬ್ದಿ ವರ್ಷದಲ್ಲಿ ಬಾ ಅವರ ಪುಣ್ಯ ಸ್ಮರಣೆ ಪ್ರಾಸಂಗಿಕ. ಬಾ ಅವರು ಬಾಪೂಜಿಯವರ ಧರ್ಮಪತ್ನಿ; ಬಾಪೂಜಿ ಅವರು ಮಹಾತ್ಮರಾಗಲು ಬಾ ಅವರ ಸೇವೆಯೂ ಕಾರಣ. ಮಾತೃತ್ವದ ಅಗ್ಗಳಿಕೆಯನ್ನು ಸಾರಲು ವರ್ಷದಲ್ಲಿ ಒಂದು ದಿನವನ್ನು ಆಚರಿಸುವಾಗ, ಬಾ ಅವರ ಮಾತೃತ್ವಕ್ಕೆ ನಾವು ತಲೆಬಾಗುತ್ತೇವೆ. ರಾಮಕೃಷ್ಣ ಪರಮಹಂಸರ ಪತ್ನಿ ಶಾರದಾಮಣಿ, ಅರವಿಂದಾಶ್ರಮದ ಪ್ರೇರಕಶಕ್ತಿ ದಯಾಮಾತಾ—ಇವರೆಲ್ಲರನ್ನು 'ತಾಯಿ' ಎಂಬ ಪೂಜ್ಯ ಹೆಸರಿನಿಂದ ಕರೆದಾಗ, ಸ್ತ್ರೀಯಲ್ಲಿನ ಮಹೋನ್ನತ ಸಾತ್ವಿಕ ಗುಣವೊಂದಕ್ಕೆ ಪೂರ್ಣ ಸ್ಥಾನವನ್ನು ನಾವು ನೀಡುತ್ತೇವೆ!

ಗ್ರಾಮ ಜೀವನದಲ್ಲಿ ಒಂದು ಅಪೂರ್ವ ಘಟನೆ!

ನರಸಿಂಹಗಢ್ ಮಧ್ಯಪ್ರದೇಶದ ರತ್ಲಂ ಜಿಲ್ಲೆಯ ಒಂದು ಪುಟ್ಟ ಹಳ್ಳಿ. ಇಡೀ ರಾಜ್ಯದಲ್ಲೇ ಕುಟುಂಬಯೋಜನಾ ಕಾರ್ಯಕ್ರಮದಲ್ಲಿ ನೂರಕ್ಕೆ ನೂರರಷ್ಟು ಯಶಸ್ಸು ಗಳಿಸಿದ ಶ್ರೇಯಸ್ಸು ಈ ಹಳ್ಳಿಯದು. ರತ್ಲಂನಿಂದ 40 ಕಿಲೋಮೀಟರ್ ದೂರದಲ್ಲಿರುವ ಈ ಹಳ್ಳಿ ಈಗ ಸೈಲಾನಾ ತಹಶೀಲಿಗೆ ಸೇರಿದೆ. ಸುಂದರವಾದ ಹಾಗೂ ಎಲ್ಲಾ ಹವಾಮಾನದಲ್ಲೂ ಸಂಚಾರಯೋಗ್ಯವಾದ ರಸ್ತೆಯೊಂದು ಈ ಹಳ್ಳಿ ಮತ್ತು ತಹಶೀಲಿನ ನಡುವೆ ಸಂಪರ್ಕ ಕಲ್ಪಿಸುತ್ತದೆ. ನಿರ್ಜನವಾದ ಹಳ್ಳಿಗಾಡಿನ ಶಿಲಾಮಯ ಪ್ರದೇಶವನ್ನು ಭೇದಿಸಿಕೊಂಡು ರಸ್ತೆ ಮುಂದೆ ಸಾಗುತ್ತದೆ. ಕೆಲವು ಕಡೆ ರಸ್ತೆಯ ಅಕ್ಕ-ಪಕ್ಕದಲ್ಲಿ ಹತ್ತಿಯ ಹೊಲಗಳು ದೃಷ್ಟಿಗೆ ಬೀಳುತ್ತವೆ. ಹತ್ತಿರದಲ್ಲೇ ಜನವಸತಿ ಇದೆ ಎಂಬುದನ್ನು ಇದರಿಂದ ಸುಲಭವಾಗಿ ಗುರುತಿಸಬಹುದು. ವಿಂಧ್ಯಾಚಲದ ಮಡಿಲಲ್ಲಿರುವ ಈ ಹಳ್ಳಿಯ ಜನರು ಒಂದೇ ಕುಟುಂಬದವರಾಗಿ ಜೀವಿಸುತ್ತಿದ್ದಾರೆ.

ಸೈಲಾನಾ ಅವರಿಗೆ ತೀರ ಹತ್ತಿರದ ಮಾರುಕಟ್ಟೆ. 1966ರಲ್ಲಿ ನರಸಿಂಹಗಢಕ್ಕೆ ಕುಟುಂಬ ಯೋಜನಾ ಸಂದೇಶ ಮೊತ್ತಮೊದಲು ಈ ನಗರದಿಂದಲೇ ಬಂದದ್ದು. ನರಸಿಂಹಗಢದ ಜನಸಂಖ್ಯೆ 311, ಸುಮಾರು 73 ಕುಟುಂಬಗಳಿವೆ. ಇವು ಜಾಟರು ಹಾಗೂ ಭಿಲ್ಲ ಕುಟುಂಬಗಳು. ಒಟ್ಟೊಟ್ಟಿಗೆ ಇರುವ ಈ ಕುಟುಂಬಗಳು ಜೀವನೋಪಾಯಕ್ಕಾಗಿ ಬೇಸಾಯವನ್ನೇ ಅವಲಂಬಿಸಿವೆ. ಬೆಳೆ ಬರಲು ಮಳೆ ಬೇಕು. ಕಾರಣ ವರ್ಷದಲ್ಲಿ ಅವರು ಒಂದೇ ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ನರಸಿಂಹಗಢದ ಗ್ರಾಮಸ್ಥರು ತಮ್ಮ ಕುಟುಂಬಗಳ ಪೋಷಣೆಗಾಗಿ ವರ್ಷವಿಡೀ ಶ್ರಮವಹಿಸಿ ದುಡಿಯಬೇಕಾಗುತ್ತದೆ. ಇಂತಹ ಕಷ್ಟನಷ್ಟಗಳ ಗುಂಪಿಗೆ ಡಾಕ್ಟರರ ನುಡಿಗಳು ಹೊಸ ದಾರಿಯನ್ನೇ ತೋರಿದವು. ಗ್ರಾಮಸ್ಥರ ಕಗ್ಗತ್ತಲಿನ ಬದುಕಿನಲ್ಲಿ ನವ ಜೀವನದ ಜ್ಯೋತಿ ಬೆಳಗಿತು.

ಹಳ್ಳಿಯ ಸರಪಂಚ ದಿತ್ಯಾಜಿ ಗ್ರಾಮಸ್ಥರ ಸಭೆಯಲ್ಲಿ ವಿಚಾರ ವಿನಿಮಯ ನಡೆಸಿದರು. ಮರುಕ್ಷಣದಲ್ಲೇ ಗ್ರಾಮಸ್ಥರ ಒಂದು ತಂಡ ಸಂತತಿ ನಿರೋಧ ಚಿಕಿತ್ಸಾ ಶಿಬಿರಕ್ಕೆ ಹೋಗಬೇಕೆಂದು ನಿರ್ಧರಿಸಿತು. ಈ ಶಿಬಿರವಾದರೂ ನರಸಿಂಹಗಢದಿಂದ ಎರಡು ಕಿಲೋಮೀಟರ್ ದೂರದಲ್ಲಿ, ಸರ್ವಾಮಾನಾ ಎಂಬ ಹಳ್ಳಿಯಲ್ಲಿ ನಡೆಯಲಿತ್ತು.

ಗಂಧರ್ವಸಿಂಗ್‌ನಿಗೆ 30ರ ಪ್ರಾಯ. ಸಂತತಿ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಈ ಶಿಬಿರಕ್ಕೆ ಬಂದ ಅವನಿಗೆ ಕೇವಲ ಎರಡು ಮಕ್ಕಳು. ಒಂದು ಹೆಣ್ಣು ಒಂದು ಗಂಡು. ಗಂಧರ್ವಸಿಂಗ್‌ನಿಗೆ ಸಹಜವಾಗಿಯೇ ಹೆಮ್ಮೆ ಏಕೆಂದರೆ ಇಡೀ ತಹಶೀಲಿನಲ್ಲಿ ಸಂತತಿ ನಿರೋಧ ಚಿಕಿತ್ಸೆ ಮಾಡಿಸಿಕೊಂಡವರಲ್ಲಿ ಅವನೇ ಮೊದಲಿಗ. ಅವನು ಹಳ್ಳಿಗೆ ಮರಳಿ ಬಂದಾಗ, ಅವನು ಹೊಸ ಮನುಷ್ಯನೇ ಆಗಿದ್ದ. ಉತ್ಸಾಹ ಅಧಿಕವಾಗಿತ್ತು. ಹಳ್ಳಿಗೆ ಬಂದವನೇ ಒಂಭತ್ತು ಜನ ಗ್ರಾಮಸ್ಥರ ಮನವೊಲಿಸಿ ಅವರನ್ನು ಶಸ್ತ್ರಚಿಕಿತ್ಸೆಗೆ ಸಜ್ಜುಗೊಳಿಸಿದ. ಅವನ ನಿಸ್ವಾರ್ಥ ಸೇವೆಯ ಫಲವಾಗಿ ಅವನ ಹಳ್ಳಿಯಿಂದ 14 ಜನ ಸಂತತಿ ನಿರೋಧ ಚಿಕಿತ್ಸೆ ಮಾಡಿಸಿಕೊಂಡರು. ನರಸಿಂಹಗಢದ ಭಿಲ್ಲ

([illegible] ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಫೋನ್ : 526
ಸಂಪುಟ ೪೯
ಸಂಚಿಕೆ ೨೮
VOL. 49
No. 28

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೯—೩—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಅಜಯ ಯಾರಿಗೆ?

ಪಶ್ಚಿಮ ಬಂಗಾಳದಲ್ಲಿ ನ್ಯಾಯ—ಕಾನೂನುಗಳೇ ಇಲ್ಲವೆಂದು ಅಲ್ಲಿನ ಮುಖ್ಯಮಂತ್ರಿಯೇ ದೂರಲಾರಂಭ ಮಾಡಿದ್ದು ನೂರಕ್ಕೆ ನೂರರಷ್ಟು ಸತ್ಯ. ಗೃಹಶಾಖೆಯ ಪೋಲೀಸ್ ವಿಭಾಗವನ್ನು ತನ್ನ ಕೈಗಳಲ್ಲಿಟ್ಟುಕೊಂಡ ಮಾರ್ಕ್ಸಿಸ್ಟ್ ಕಮ್ಯೂನಿಸ್ಟರು ತಮ್ಮದೇ ರಾಜ್ಯವನ್ನು ಅಲ್ಲಿ ಬಲಪಡಿಸಿ ಗೂಂಡಾಗಿರಿಯನ್ನು ನೆಲೆಗೊಳಿಸಿದ್ದಾರೆ. ಮುಖ್ಯಮಂತ್ರಿ ಅಜಯ್ ಕುಮಾರ ಮುಖರ್ಜಿಯವರು ಸರಕಾರ ಮತ್ತೊಮ್ಮೆ ರಚಿಸಿ ಒಂದು ವರ್ಷ ಕಾಲವನ್ನು ಸರಳವಾಗಿ ಕಳೆದಿದ್ದರೂ ಮುಂಚಿನಿಂದಿಳಿಯ ಬೇಕಾದರೆ, ಬಹಳ ತ್ರಾಸ ಪಟ್ಟರು ಇದೀಗ ಸಂಯುಕ್ತರಂಗವು ಅಧಿಕಾರದಲ್ಲಿ ಮುಂದುವರಿಯುವುದು ಅಸಾಧ್ಯಕರವಾಗಿ ಬಂದಿರುವುದರಿಂದ ತಾನು ರಾಜೀನಾಮೆ ನೀಡುವುದಾಗಿ ಕೊನೆಯ ನಿರ್ಧಾರದ ನುಡಿ ನುಡಿದಿದ್ದಾರೆ. ಹಾಗೇ ಇಷ್ಟರಲ್ಲೇ ನಡೆದಿದ್ದಾರೆ. ಇಲ್ಲಿಗೆ ಪಶ್ಚಿಮ ಬಂಗಾಳದ ಜನತೆಯ ಕಾಟದ ದಿನ ಒಂದಂಶ ಸಮಾಪ್ತಿಯಾಯಿತೆಂದು ಅರ್ಥ.

ಶ್ರೀ ಅಜಯ ಕುಮಾರರು ತನ್ನ ಅಧಿಕಾರದ ಕೊನೆಯ ದಿನಗಳಲ್ಲಿ ಅತೀವ ಜಿಗುಪ್ಸೆಗೊಂಡಿದ್ದರೆಂಬುದು ನಿರ್ವಿವಾದ. ಹಾಗಿದ್ದರೂ ಪೋಲೀಸ್ ವಿಭಾಗವನ್ನು ಮಾರ್ಕ್ಸಿಸ್ಟರು ತನಗೆ ಬಿಟ್ಟುಕೊಡುವುದಾದರೆ, ಅಧಿಕಾರದಲ್ಲಿ ಮುಂದುವರಿಯಲು ಅವರು ಸಿದ್ಧರಿದ್ದರೆಂದು ಹೇಳಬಹುದು. ಆದರೆ, ಆರಂಭದಿಂದಲೇ ಹೊಡೆದಾಟಕ್ಕೆ ಮೂಲಕಾರಣವಾದ ಈ 'ಪೋಲೀಸ್ ವಿಭಾಗ'ವನ್ನು ಮಾರ್ಕ್ಸಿಸ್ಟರೇಕೆ ಬಿಟ್ಟುಕೊಟ್ಟಾರು? ಪ್ರಧಾನಿ ಶ್ರೀಮತಿ ಗಾಂಧಿಯವರ ಬಳಿಗೂ ಅಜಯ್ ಹೋಗಿ ತನ್ನ ವಿಪನ್ನಾವಸ್ಥೆಗಾಗಿ ಮರುಗಿದರು. ಸದ್ಯವೇ ಚುನಾವಣೆಗಳನ್ನು ಎದುರಿಸಲು ಸಿದ್ಧರಿಲ್ಲದ ಶ್ರೀಮತಿಗಾಂಧಿ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗದ ಸರಕಾರವಿರುವುದರಲ್ಲೇ ತಮ್ಮ ಕ್ಷೇಮ ಕಂಡರು. ಆದುದರಿಂದ ಉಪ ಮುಖ್ಯಮಂತ್ರಿ ಬಸುವನ್ನು ಆಮಂತ್ರಿಸಿದರೆ 'ನೀವೇ ಇಲ್ಲಿ ಬನ್ನಿ' ಎಂಬ ಕಡಕ್ಕಿನ ಉತ್ತರ ಬಂತು. 'ಬಂಗಾಳದ ಸಮಸ್ಯೆಗಳಿಗೆ ದಿಲ್ಲಿಯಲ್ಲಿ ಪರಿಹಾರವಿಲ್ಲ' ಎಂಬ ನೀತಿ ಬೋಧೆಯೂ ಆಯಿತು. ಕೇರಳದಲ್ಲಿನ ಶ್ರೀ ನಂಬೂದರಿ ಸರಕಾರವನ್ನು ಉರುಳಿಸುವಲ್ಲಿಯೂ ಶ್ರೀ ಅಚ್ಯುತ ಮೆನನ್ನರ ನಾಯಕತ್ವದಲ್ಲಿ ಮಾರ್ಕ್ಸಿಸ್ಟೇತರ ಸರಕಾರ ಸ್ಥಾಪಿಸುವಲ್ಲಿಯೂ ಶ್ರೀಮತಿ ಗಾಂಧಿಯವರು ಪರೋಕ್ಷಾನುಭೂತಿ ತೋರಿಸಿದ್ದನ್ನು ಬಸು ಏಕೆ ಮರೆತಾರು? ಬಿಹಾರದಲ್ಲಿ ಬಹುಕಾಲದಿಂದ ಮನೆಮಾಡಿದ್ದ ರಾಷ್ಟ್ರಪತಿ ಆಳಿಕೆಯನ್ನು ದೂರಮಾಡಲು ಭಗೀರಥ ಪ್ರಯತ್ನ ನಡೆಸಿ ಯಶಗಳಿಸಿದ ಶ್ರೀಮತಿಯವರು ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಹೊರಿಸುವಲ್ಲಿ ಆಸಕ್ತಿ ವಹಿಸಿಲ್ಲ. ಅಲ್ಲಿನ ಆಡಳಿತ ಬರ್ಬರವಾದುದೆಂದು ಗೃಹಮಂತ್ರಿ ಚವನರು ಮರುಗಿದರೇ ಹೊರತು ಜನತೆಯ ಉದ್ಧಾರಕ್ಕೆ ಯಾವ ಕ್ರಮ ಕೈಕೊಳ್ಳಲೂ ಅವರು ಸಿದ್ಧರಿರಲಿಲ್ಲ. ಸದ್ಯ ಅಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಿದರೆ, ಶ್ರೀಮತಿ ಗಾಂಧಿಯವರು ಲೋಕಸಭೆಯಲ್ಲಿ ಭಾರಿ ವಿರೋಧವನ್ನೆದುರಿಸಬೇಕಾಗುವುದು. ಸದ್ಯ ಕಮ್ಯೂನಿಸ್ಟರ ಬೆಂಬಲದಿಂದ ಬದುಕಿರುವ ಅವರ ಸರಕಾರವು ಉರುಳಬೇಕಾಗಿಯೂ ಬರಬಹುದು. ಆದುದರಿಂದ ಅಲ್ಲಿ ಜನಪ್ರಿಯ ಸರಕಾರವೇ ಅಲ್ಲಿ ಉಳಿಯಬೇಕು ಎಂದು ಬಯಸುವುದರಲ್ಲಿ ಬಹಳ ಅರ್ಥವಿದೆ.

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಹೇರುವುದಕ್ಕೆ ಮೊದಲು ಅಲ್ಲಿ ಸರಕಾರ ರಚನೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಬೇಕಾಗುತ್ತದೆ. ಮಾರ್ಕ್ಸಿಸ್ಟರು ಅಲ್ಲಿ ಅಧಿಕ ಸದಸ್ಯ ಬಲ ಪಡೆದವರು. ಆದುದರಿಂದ ತಮ್ಮ ನಾಯಕತ್ವದಲ್ಲೇ ಅವರು ಹೊಸ ಸರಕಾರವನ್ನು ರಚಿಸುವ ಪ್ರಯತ್ನ ಮಾಡಬಹುದು. ಆದರೆ ಆರೆಸ್ಸೆಯೇ ಮೊದಲಾದ ಕೆಲವು ಚಿಲ್ಲರೆ ಪಕ್ಷಗಳು ಅದಕ್ಕೆ ಬೆಂಬಲ ನೀಡುವ ಸಾಧ್ಯತೆಗಳಿಲ್ಲ. ಹಾಗೆಯೇ ಇನ್ನೊಂದು ಸಿಂಹಪಕ್ಷ ಬಂಗ್ಲಾ ಕಾಂಗ್ರೆಸ್ಸು ವಿರೋಧ ಪಕ್ಷವಾಗಿಯೇ ಉಳಿಯ ಬಯಸುವುದರಿಂದ ಮಾರ್ಕ್ಸಿಸ್ಟರ ಬಹುಮತದಲ್ಲಿ ನಂಬಿಕೆ ಬರುವುದಿಲ್ಲ. ಮಾರ್ಕ್ಸಿಸ್ಟೇತರ ಸಂಯುಕ್ತ ರಂಗವೊಂದನ್ನು ಶ್ರೀ ಅಜಯ ಕುಮಾರ ಮುಖರ್ಜಿಯವರೇ ಸ್ಥಾಪಿಸುವ ಸಾಧ್ಯಾಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಒಂದು ವೇಳೆ ಇಂಡಿಕೇಟಿನ ಶ್ರೀ ಸಿದ್ಧಾರ್ಥ ಶಂಕರರೇ ಅವರು ಬಂಗ್ಲಾ ಕಾಂಗ್ರೆಸ್ ಬೆಂಬಲ ನೀಡುವುದಾದರೆ, ಸಂಯುಕ್ತ ರಂಗವನ್ನು ರಚಿಸಲು ಮುಂದಾದಾರು. ಪ್ರಧಾನಿಯ ಬಳಿ ಮುಖರ್ಜಿ ಮತ್ತು ರೇ ಯವರ ಮಾತುಕತೆಯಲ್ಲಿ ಈ ಸಂಭಾವನೆಗಳೂ ಪ್ರಸ್ತಾಪಿತವಾಗಿರಬಹುದು. ಮುಖ್ಯಮಂತ್ರಿಯವರು ರಾಷ್ಟ್ರಪತಿ ಆಳಿಕೆಗೆ ಸಲಹೆ ಮಾಡಿದ್ದರೂ ಅದನ್ನು ರಾಜ್ಯಪಾಲರು ಸ್ವೀಕರಿಸಬೇಕೆಂದಿಲ್ಲ. ಅದೇನಿದ್ದರೂ ಅಲ್ಲಿ ಪರ್ಯಾಯ ಸರಕಾರವೊಂದು ಸದ್ಯ ಸ್ಥಾಪನೆಗೊಂಡರೂ ಅದು ಕ್ಷಣಿಕ. ಪ್ರಧಾನಿಯ ಕೈವಾಡ ಇಲ್ಲಿ ಕಾಣ ಇದೆಯೆಂಬುದಕ್ಕೆ ನಿದರ್ಶನ ಮಾತ್ರ.

ಪ್ರಶಂಸಾರ್ಹ ಪಾಟೀಲರು

ಕಪಿನಿ ಮತ್ತು ಹೇಮಾವತಿ ನೀರಾವರಿ ಯೋಜನೆಗಳನ್ನು ನಿಲ್ಲಿಸಬೇಕೆಂದು ಕೇಂದ್ರ ನೀರಾವರಿ ಸಚಿವ ಡಾ| ಕೆ. ಎಲ್. ರಾವ್ ಪತ್ರ ಬರೆದದ್ದು ಕರ್ನಾಟಕದಲ್ಲಿ ಅವರ ಬಗ್ಗೆ ತೀವ್ರ ಪ್ರತಿಕ್ರಿಯೆಗೆ ಕಾರಣವಾಯಿತು. ಯೋಜನಾ ಆಯೋಗದಿಂದ ಅನುಮತಿ ದೊರೆಯುವರೆಗೆ ಅವನ್ನು ಮುಂದುವರಿಸಬಾರದೆಂದೂ ತಿಳಿಸಿತು. ಆದರೆ, ಕಪಿನಿ ಮತ್ತು ಹೇಮಾವತಿ ಯೋಜನೆಗಳು ಯೋಜನಾ ಆಯೋಗದಿಂದ ಮಂಜೂರಾಗಿಲ್ಲ; ಆದ್ದರಿಂದ ಅವಕ್ಕೆ ಕೇಂದ್ರ ಸರಕಾರದ ನೆರವು ದೊರೆಯುವುದಿಲ್ಲ. ರಾಜ್ಯ ಸರಕಾರವೇ ಸಂಪನ್ಮೂಲಗಳನ್ನು ಹೊಂದಿಕೊಂಡು ಇವನ್ನು ಮುಂದುವರಿಸುವ ಶಕ್ತಿಯನ್ನು ಹೊಂದಿದೆ. ಕೇಂದ್ರದ 'ಆದೇಶ'ವನ್ನು ಗಾಳಿಗೆ ತೂರಿದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ರಾಜ್ಯ ಸರಕಾರವು ಕಾವೇರಿ ಕೊಳ್ಳದ ಯೋಜನೆಗಳನ್ನು ಸರಕಾರವು ಎಂದೂ ನಿಲ್ಲಿಸುವುದಿಲ್ಲವೆಂದೂ ಎಲ್ಲಾ ಸರಿಯಾಗಿ ಮುಂದುವರಿದರೆ ಮುಂದಿನೆರಡು ವರ್ಷಗಳಲ್ಲೇ ಹೇಮಾವತಿ ಮತ್ತು ಕಪಿನಿ ಯೋಜನೆಗಳು ಪೂರ್ತಿಗೊಳ್ಳುವುವೆಂದೂ ಭರವಸೆಯನ್ನು ಜನತೆಗೆ ನೀಡಿದ್ದಾರೆ. ಇಂತಹ ದಿಟ್ಟತನದ ನಿಲುವು ತಳೆದ ಶ್ರೀ ಪಾಟೀಲರು ಪ್ರಶಂಸಾರ್ಹರು. ರಾಜ್ಯಗಳಿಗೆ ನ್ಯಾಯ ದೊರಕಿಸಿ ಕೊಡಬೇಕಾದ ಸ್ಥಾನದಲ್ಲಿರುವ ಕೇಂದ್ರ ಸರಕಾರವು ನ್ಯಾಯದೊಡನೆಯೂ ರಾಜ್ಯನೀತಿಯಕ್ಕೆ ತೊಡಗಿದ್ದು ವಿಚಿತ್ರ ವರ್ತನೆ. ಕೇಂದ್ರ—ರಾಜ್ಯಗಳ ನಡುವೆ ಸುಮಧುರ ಬಾಂಧವ್ಯ ಬಹುಕಾಲ ನಿಷ್ಪಕ್ಷವಾಗಿ ನಡೆದುಕೊಳ್ಳುತ್ತಿದ್ದೇನೆಂದು ಹೇಳಿಕೊಳ್ಳುವ ಶ್ರೀಮತಿ ಗಾಂಧಿಯವರು ಕರ್ನಾಟಕದ ಬಗೆಗೆ ವಿಶಿಷ್ಟ ರಾಜ್ಯನೀತಿ ಗತ್ತುಗಾರಿಕೆ ತೋರಿಸುತ್ತಿದ್ದಾರೆಂದು ಅನಿವಾರ್ಯವಾಗಿ ಹೇಳಲೇ ಬೇಕಾಗಿದೆ. ಇದರಿಂದ ಯಾರಿಗೆ ಕ್ಷೇಮ?

ಪುಸ್ತಕ ಪರಿಚಯ

ಕನ್ನಡದ ಕವಿರತ್ನಗಳು

ಲೇಖಕರು: ಶ್ರೀ ಭಾಸ್ಕರ ಪಡುಬಿದ್ರಿ
ಪ್ರಕಾಶಕರು: ಪ್ರೇಕ್ಷಕ ಪಬ್ಲಿಕೇಶನ್ಸ್, ೩೧, ಮಹಾವೀರ ಬಿಲ್ಡಿಂಗ್ ೧೧ ಹೋಮ್‌ಜಿ ಸ್ಟ್ರೀಟ್, ಮುಂಬಯಿ—೧.
ಪುಟಗಳು: ೧೩೯. ಬೆಲೆ: ರೂ. ೨-೦೦.

ಪಂಪ, ರನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ ವರ್ಣಿ ಮತ್ತು ಮುದ್ದಣರು ಕನ್ನಡ ಸಾಹಿತ್ಯದ ಧ್ರುವತಾರೆಗಳು, ಪ್ರಗತಿವಾದಿಗಳೂ ಹಾದು, ಆದಿಕವಿ ಪಂಪನ ಹಾದಿಯಲ್ಲೇ ಇನ್ನೂ ಒಂದು ಹೆಜ್ಜೆ ಮುಂದಿಟ್ಟವರು ರನ್ನ, ನಾಗಚಂದ್ರರು. ಹರಿಹರ—ರಾಘವಾಂಕರು ವಾರ್ಧಕಕ್ಕೆ ಹೊಸ ರೂಪವನ್ನೇ ಒದಗಿಸಿಕೊಟ್ಟ ಕ್ರಾಂತಿಕಾರಿ ಕವಿಗಳು. ಕುಮಾರವ್ಯಾಸ—ಲಕ್ಷ್ಮೀಶರು ಷಟ್ಪದಿಗೆ ಮಹಾಕಾವ್ಯದಲ್ಲಿ ಅನುಪಮ ಸ್ಥಾನನೀಡಿಯೂ ರತ್ನಾಕರನು ಸಾಂಗತ್ಯದಲ್ಲೇ ಮಹಾಕಾವ್ಯ ಬರೆದೂ ಜಾನಪದ ಛಂದಸ್ಸಿನ ಸ್ಥಾನಮಾನವನ್ನೆತ್ತರಿಸಿದವರು. ಮುದ್ದಣನು ಮಧ್ಯಯುಗದ ಕೊನೆಯಲ್ಲಿದ್ದು ಆಧುನಿಕಯುಗ ಕಾರ್ಯವನ್ನು ತೊಡಗಿಸಿದ ಉದ್ದಾಮನು. ಈ 'ನವರತ್ನ'ಗಳ, ಅವರ ಕೃತಿರತ್ನಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವ ಇನ್ನೊಂದು ಪ್ರಯತ್ನ ಶ್ರೀ ಪಡುಬಿದ್ರಿಯವರದು.

ಕನ್ನಡದಲ್ಲಿ ಕವಿ—ಕಾವ್ಯಗಳ ಬಗ್ಗೆ ಗ್ರಂಥಗಳು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬೆಳಕು ಕಾಣುತ್ತಿವೆ. ಕವಿ ಚರಿತ್ರೆ ಮತ್ತು ಸಾಹಿತ್ಯ ಚರಿತ್ರೆಗಳು ಪರಿಶೋಧನೆ—ಪರಿಶ್ರಮಗಳ ಫಲ. ಅವುಗಳಲ್ಲಿ ಸಾಧ್ಯವಾಗಿರುವ 'ಪರಿಚಯ'ವನ್ನು 'ಕೈಪಿಡಿ'ಯ ರೂಪದಲ್ಲಿ ಕನ್ನಡದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಂಗ್ರಹಿಸುವ ಕಾರ್ಯವನ್ನು ಇಲ್ಲಿ ಲೇಖಕರು ಮಾಡಿದ್ದಾರೆ. ಕನ್ನಡ ಕವಿರತ್ನಗಳ ಹೊಸ ಗುಣಗಳ ಸಂಶೋಧನೆಗಾಗಲೀ ಹೊಚ್ಚ ಹೊಸತನಗಳನ್ನು ಬೆಳಕಿಗೆ ತರುವುದಕ್ಕಾಗಲೀ ಈ ಕೃತಿ ಉದ್ದೇಶಿಸಿಲ್ಲ. 'ಕವಿ-ಕಾವ್ಯ' ವಿಚಾರವನ್ನು ದೀರ್ಘ ವಿಮರ್ಶ ದೃಷ್ಟಿಯಲ್ಲಿ ವಿವೇಚಿಸದೆ ಅವರು ನಿರ್ಮಿಸಿದ ರಸಘಟ್ಟಗಳ ಸವಿಯನ್ನು ಸವಿದು ಪರಿಶುದ್ಧ ಕಾವ್ಯಾನಂದದ—ಬ್ರಹ್ಮಾನಂದದ—ಸವಿಯನ್ನು ಸಹೃದಯರು ಪಡೆಯಲೆಂಬುದೇ ಈ ಸಾಹಿತ್ಯ ವಿದ್ಯಾರ್ಥಿಯ ಅಲ್ಪ ಪ್ರಯತ್ನ. ಇದರಲ್ಲಿ ಲೇಖಕರು ಸಾರ್ಥಕರಾಗಿದ್ದಾರೆ. ಪಂಪ, ಲಕ್ಷ್ಮೀಶ, ಮುದ್ದಣರ ಚಿತ್ರ ಸಂಗ್ರಹಿಸಿದಂತೆ ಉಳಿದವರದ್ದೂ ಸಂಗ್ರಹಿಸುವ ಪ್ರಯತ್ನ ಮಾಡಬಹುದಿತ್ತು. ಒಟ್ಟಿನಲ್ಲಿ ಉಪಾದೇಯವಾದ ಸಾಹಿತ್ಯಕ ಕೃತಿಯಿದು.

— ಗೋರಾ

ಕಾರ್ಕಳ IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I.A. III R.R.C. 39/68

ಸವರಿನಾ ಮುಕ್ಕರ್ ಬ್ಯ —ಅರ್ಜಿದಾರಳು;
ಮತ್ತು
ಬೆಂಗು ಯಾನೆ ಸಲ್ವದೋರ್ (ಮೃತ)
ಕೊಡಾ —ಎದ್ರಿರು

ಅಗ್ನೆಸ್ ಸಿ ಲೋಬೋ, ಲೋಸನ್ನ ಡಿ ಸೋಜನ ಹೆಂಡತಿ, ಉದ್ಯಾವರ ತಾಲೂಕು, ಕಿರ್ಮ ಬೆಟ್ಟು ಎಂಬಲ್ಲಿರುವವಳು.

ಜೋಸೆಫ್ ಲೋಬೋ, ಬೆಂಗು ಯಾನೆ ಸಲ್ವದೋರ್ ಲೋಬೋನ ಮಗ, C/o Mrs. Cycil Dias. Near Bandra Bazar, Bombay.50.

2 ಮತ್ತು 3ನೇ ಎದುರುಗಳಾದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ—

ಸದ್ರಿ ವ್ಯವಹಾರದಲ್ಲಿ ಮೃತ ಬೆಂಗು ಯಾನೆ ಸಲ್ವದೋರ್‌ರ ವಾರೀಸುದಾರರನ್ನಾಗಿ ನಿಮ್ಮನ್ನು ದಾಖಲೆಗೆ ಸೇರಿಸುವರೆ ಅರ್ಜಿದಾರಳು ಅರ್ಜಿ ಕೊಟ್ಟಿರುತ್ತಾಳೆ. ಸದ್ರಿ ವ್ಯವಹಾರವು ತಾ. 28.3.70ಕ್ಕೆ ಇಟ್ಟಿದೆ. ಆ ಬಾಬ್ತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಮೇಲಿನ ಕೋರ್ಟಿನಲ್ಲಿ ಉಪಸ್ಥಿತರಿರತಕ್ಕದ್ದು.

V.V. Upadhyaya
ಅರ್ಜಿದಾರಳ ಪರ ವಕೀಲರು
ಕಾರ್ಕಳ, ತಾ. 4.3.70.

ವ್ಯಕ್ತಿತ್ವಕ್ಕೇ ಬೆಂಕಿಹಚ್ಚಿದವರು

ಶ್ರೀ ಅವಕ್ರ

ಶ್ರೀ ದೇವರಾಜ ಅರಸ್ ಇಂಡಿಕೇಟ್ ಮಂಗಳಿಗೆಲ್ಲ ಮೈಸೂರಿನಲ್ಲಿ ಅರಸು. ಅದು ಆಪ್‍ಹಾಕ್ ಕವಿ ತಿಲಕರನ್ನೀವರ, ಮಹಾಜನ ವರದಿಯ ತಿರಸ್ಕಾರ-ಮರಾಠಿಗಳ ರಾಕ್ಷಸೀ ಕೃಷೆಗೆ ಶ್ರೀಮತಿ ಗಾಂಧಿಯವರ ಪುರಸ್ಕಾರದಿಂದ ಅರಸರ ಅರಸುಗಿರಿಗೆ ಸಂಚಕಾರ. 'ಒಂದು ಕರ್ನಾಟಕ ಮಾಡಿದ್ದರಿಂದಲೇ ಅನ್ಯಾಯವಾಯಿತು; ಎರಡು ಮಾಡಿ, ಮೂರೋ ನಾಲ್ಕೋ ಮಾಡಿ' ಎಂದು ಚಂಡಿ ಹಿಡಿಯುವವರ ಇಂಡಿಕೇಟ್ ಗಂಪು ಒಂದಾಗಿಡಿದ್ದರೆ, ಅದಕ್ಕೆ ಶ್ರೀ ನಿಜಲಿಂಗಪ್ಪನವರ ಮೇಲಿರುವ ವ್ಯಕ್ತಿಗತ ದ್ವೇಷವೊಂದೇ ಕಾರಣ. ಶ್ರೀ ನಿಜಲಿಂಗಪ್ಪನವರು ರಾಜ್ಯಕೀಯಕ್ಕೆ ದಾಪುಗಾಲಿರಿಸಿಕೊಂಡ ಅತ್ಯಮೂಲ್ಯ ನಿಧಿಯೆಂದರೆ, 'ಶ್ರೀಮತಿ ಇಂದಿರಾ ಗಾಂಧಿ ಮತ್ತವರ ಕೇಟ್ ಸದಸ್ಯರ ವ್ಯಕ್ತಿಗತ ದ್ವೇಷ ಮಾತ್ರ.

ಕರ್ನಾಟಕದಲ್ಲಿ ಇಂಡಿಕೇಟ್ ಅತ್ಯಂತ ದುರ್ಬಲವಿದೆ. ಇದಕ್ಕೆ ಶ್ರೀ ನಿಜಲಿಂಗಪ್ಪನವರ ಮೇಲೆ ವ್ಯಕ್ತಿಗತ ದ್ವೇಷವಿದ್ದವರು ಮಾತ್ರ ಸೇರಿದ್ದಾರೆ. ಆದ್ದರಿಂದ ತಮ್ಮ ಬೇರು ಬಲಪಡಿಸಲು, ಶ್ರೀ ನಿಜಲಿಂಗಪ್ಪನವರನ್ನ ಕೀಳು ಮಾಡಲು ದೇವರಾಜ ಅರಸ್ ಸದ್ಯ ಮತ್ತೊಂದು ಅವಕಾಶವನ್ನು ಕಂಡುಕೊಂಡರು. ಗಡಿ ವಿವಾದದ ಬಗ್ಗೆ ಮಹಾಜನ್ ವರದಿಯೇ ಕೊನೆಯದೆಂದು ತೀರ್ಮಾನವಾದರೆ, ಶಾಸಕರ ಪ್ರಯೋಗದ ಒಂದು ಕಂಡ ದೆಹಲಿ ಮುಟ್ಟಿ ಇಂದಿರಾ-ಚವಣ್ ಕಿವಿ ಚುಚ್ಚಬೇಕಾಯಿತು. ಪ್ರಾಯಃ ಶ್ರೀಮತಿ ಗಾಂಧಿಯವರ ಕಾಲ ಬರುವಾಗ ಕಡವಾಗಿ ದ್ದರೂ ತಾಬಹದು.

ಮಹಾಜನ ವರದಿಗೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಇಂಡಿಕೇಟ್ ತಳೆದಿದ್ದರೆ, ಅದಕ್ಕೆ ರಾಜ್ಯದಲ್ಲಿ ಘೋರ ಪರಿಣಾಮ ಬೀರುತ್ತದೆ. ಆದ್ದರಿಂದ ತನ್ನ ದಾರಿ ಬೇರೆ ಮಾರ್ಗ ಬರುವಂತೆ ನೋಡಿಕೊಳ್ಳಬೇಕೆಂದರೆ, ಮಹಾಜನ ವರದಿಯನ್ನು ಸಮರ್ಥಿಸಬೇಕು; ಜತೆಗೆ ನಿಜಲಿಂಗಪ್ಪನವರನ್ನ ಹಿಂದಿಕ್ಕಬೇಕು. ಮಹಾಜನ ಆಯೋಗ ನೇಮಕವಾದಾಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್ಸೆನ್ ಮುಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದು ನಿಜ. ಮಹಾಜನ ವರದಿಯ ಮೇಲೆ ನಿರ್ಣಯ ತೆಗೆದುಕೊಳ್ಳಬೇಕಾದವರು, ಇಂತಹ ಅಧಿಕಾರವುಳ್ಳವರು ಶ್ರೀಮತಿ ಗಾಂಧಿಯ ಬಳಿ ಇಂತಹ ಅರಸರು ಶ್ರೀ ಎಸ್ಸೆನ್ ಏನೂ ಮಾಡಲಿಲ್ಲವೆಂದು ದೂರುವುದಾದರೆ, ಅದು ಜಗಳಕ್ಕೆ ತರುವುದಕ್ಕಾಗಿ ಮಾತ್ರ. ಕವ್ಯಮಿಸ್ಸರ ಒಂದು ಬಣ ರಕ್ತವನ್ನೂ ಇನ್ನೊಂದು ಚೇಷ್ಟೆಯನ್ನೂ ನೋಡುತ್ತಿರುವುದಾದರೆ, ಇಂಡಿಕೇಟ್ ಇಂದಿರಾ ಗಾಂಧಿಯನ್ನೇ ನೋಡುತ್ತಿರುತ್ತದೆ. ಇಂತಹ ದುರ್ದೆಸೆ ದೇಶಕ್ಕೆ ತಟ್ಟಿರುವುದು ನಿಜಕ್ಕೂ ಶೋಚನೀಯ.

ಂ ಂ ಂ

ಅಜಯ ಮುಖರ್ಜಿಯವರಿಗೆ ಸ್ಥಾನದ ಮೇಲೆ ಮಮತೆ, ಶತ್ರುಗಳ ಮೇಲೆ ದ್ವೇಷ ಸಾಧಿಸುವ ಮೋಹ. ಅಂದಿನ ಕಾಂಗ್ರೆಸ್ ಶ್ರೀ ಮುಖರ್ಜಿಯವರನ್ನೂ ಅವರ ಸ್ವಾರ್ಥಪರರನ್ನೂ ಮನ್ನಿಸದ್ದರಿಂದ ಅಪಮಾನಿತರಾದ ಅವರು ಬಂಗಾಳ ಕಾಂಗ್ರೆಸ್ ಕಟ್ಟಿದರು. ಕಾಂಗ್ರೆಸ್‍ಗೆ ಎದುರು ನಿಂತರು. ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಸಂಗಾತಿಯನ್ನೂ ಕೂಡಿ ಗೆದ್ದು ಬಂದರು; ಮುಖ್ಯಮಂತ್ರಿಯಾಗಿ ಸಿಂಹಾಸನಾರೂಢರಾದರು; ತನ್ನ ಹಗೆತನ ಸಾಧಿಸಿ ಕೊಂಡರು. ಇದು ವರೆಗೆ ದ್ವೇಷ ಸಾಧನೆಯ ಭರದಲ್ಲಿ ತನಗಾಗುತ್ತಿದ್ದ ನೋವಿನ ಪರಿವೆಯೇ ಇರಲಿಲ್ಲ. ಮುಂದೆ ಅದಾಗ ತೊಡಗಿತು. ಅಂತೂ ಇಂತೂ ಕಂಟಕ ತೀರವಾಗಲೇ ಜನ ರಾಜ್ಯಪಾಲ ಧರ್ಮವೀರರು 'ಅಜಾಯ್ ಸರಕಾರ್ ಚಲ್ ಜಾಯ್' ಎಂದು ಶಿಫಾರಸು ಮಾಡಿದರು.

ಪರಿಣಾಮ ಮತ್ತು ಘೋರ ಕಾಂಗ್ರೆಸಿಗೆ ಮುಖವೆತ್ತಲಾಗದ ಅಪಮಾನ. ಚುನಾವಣೆಯಲ್ಲಿ ಅಜಯ್ ಜಯಕಾರ. ಜತೆಗೇ ಬಸು-ಮುಖರ್ಜಿ ಭಿನ್ನಮತ. ಗೃಹಖಾತೆ ವಿಭಜನೆ. ಅಜಯ್‍ಗೆ ಮುಖ್ಯಮಂತ್ರಿತನ, ಬಸುಗೆ ಪೋಲಿಸ್‍ತನ. ಅಂದಿನಿಂದ ಇಂದಿನ ವರೆಗೂ ಅಜಯ್‍ಗೆ ಗೆಲುವಿಲ್ಲ. ತನ್ನ ಸರಕಾರದ ಖಂಡನ, ಶಾಂತಿಗೆ ವಿರುದ್ಧ ಪ್ರದರ್ಶನ—ಸತ್ಯಾಗ್ರಹ—ಎಲ್ಲದಾರಿ ಬಂದ. ಇದೀಗ ಉಳಿದುದೊಂದು—ರಾಜಿನಾಮೆ. ಬಂಗ್ಲಾ ಕಾಂಗ್ರೆಸ್—ಮಾರ್ಕ್ಸಿಸ್ಟರ ವಿರಸ ಸರಸವೆಂದೂ ಆಗದು. ಆ ಕೈ—ಈ ಕೈ ಹೊಡೆದಾಡಿದರೆ ನೋವು ಯಾರಿಗೆ?

ಬಂಗಾಳಕ್ಕೆ ಏನು ಬಂತು? ಎರಡು ಬಾರಿ ಚುನಾವಣೆ ಬಂತು; ಸರಕಾರ ಎರಡಲ್ಲ, ಮೂರು ಬಂತು. ಮತ್ತೇನು ಬೇಕು? ಅರಾಜಕತೆ ಬಂತು ತಾಂಡವ—ಮಾನವಳ್ಳವರ ಮಾನಹಾನಿ, ವಿತ್ತ—ಜೀವಿತ ಹಾನಿ. 'ಕಾನೂನು ವ್ಯವಸ್ಥೆ ತಿಪ್ಪೆಗೆ. ಆದರೂ ಅಜಯ ಕಳಿತರು ತೆಪ್ಪಗೆ. ಬಂಗ್ಲಾ ಕಾಂಗ್ರೆಸ್ ಗಂಡು ಮಾರ್ಕ್ಸಿಸ್ಟ್ ಹೆಣ್ಣಿಗೆ ನೋಟೀಸು ಕೊಟ್ಟಿದ್ದಾನೆ- ಹೆಣ್ಣಿನ ನಡವಳಿಕೆ ಸುಧಾರಿಸದೆ ಹೋದರೆ ಜತೆಗೂಡಿ ಬಾಳುವುದು ಅಸಾಧ್ಯ. ಆದರೆ ಈ ಕೆಂಪು ಹೆಣ್ಣು ಅರಸಿನ ಹಚ್ಚುವುದುಂಟೆ? ಈಗ ಡೈವರ್ಸ್ ನೋಟೀಸು. ಆದರೆ, ವಧುವೇ ಅಪಸ್ವರ. ಇತರರ ಮಾತಿನ ಮಸಿಂಕಿ ಮಣಿಸು ಡೈವರ್ಸ್' ದಿನವನ್ನು ಮುಂದೂಡುವ ಸುಳಿವು. ಇದಕ್ಕೇನೆನ್ನಬೇಕು? ಅಜಯ್ ಬ್ರಹ್ಮಚಾರಿಗೆ ಬುದ್ಧಿ ಭ್ರಮಣೆಯೆನ್ನಬೇಕೆ? ಅದು ಅಸಾಧ್ಯ. ಅಧಿಕಾರದ ಮೇಲೆ ಮೋಹವೆನ್ನಬೇಕೆ? ಅಜಯ್ ಈಗ ಬಿಸಿ ತುಪ್ಪವನ್ನು ಬಾಯಿಗೆ ಸುರಿದುಕೊಂಡಿದ್ದಾನೆ. ತನ್ನ ವ್ಯಕ್ತಿತ್ವಕ್ಕೇ ಬೆಂಕಿಹಚ್ಚಿಕೊಂಡಿದ್ದರೆ ಈಗ ನೀರಿಗಿಳಿದು ಹರಿದಾಡಿದರೆ ಅದು ಅವರೇ ಕಂಡುಕೊಂಡ ದುರ್ಗತಿ.

ಂ ಂ ಂ ಂ

ನಮ್ಮ ದೇಶದಲ್ಲಿ ಏನ ಬೆಳೆಯದಿದ್ದರೂ ಜನಸಂಖ್ಯೆ ಬೆಳೆಯುತ್ತದೆ; ಜನತೆಯಲ್ಲಿ ಅಸಮತೆ ಬೆಳೆಯುತ್ತದೆ. ಜನಜನರಲ್ಲೂ ಅಸಮತೆ ಹೆಚ್ಚುತ್ತ ಹೋಗುವಂತೆ ರಾಜ್ಯರಾಜ್ಯಕ್ಕೂ ಅಸಮತೆ ಬೆಳೆದು ಹೆಚ್ಚುರವಾಗಿದೆ. ಇತ್ತೀಚೆಗೆ ಈ ರಾಜ್ಯ ಹಿಂದುಳಿಯುವುದರ ಪ್ರಶ್ನೆಯು ಮೇಲೆ ಅಧಿಕಾರಕ್ಕಾಗಿ ಹೋರಾಟ ನಡೆದದ್ದನ್ನ ಮರೆಯಲಾದೀತೆ? ಪ್ರಧಾನಿ ಪ್ರಸಂತೆ ಉತ್ತರ ಪ್ರದೇಶ. ಇದು ಹಿಂದುಳಿದ ರಾಜ್ಯಗಳಲ್ಲಿ ಪ್ರಾಯಃ ಪ್ರಪ್ರಥಮ. ಈ ಅಶಾಂತಿಗೆ ಮುಖ್ಯಮಂತ್ರಿಗಳೇ ಕಾರಣರೆಂದು ಪ್ರಧಾನಿಯವರೂ ಕೇಂದ್ರ ಸರಕಾರದ ಮಲತಾಯಿ ಧೋರಣೆಯೇ ಕಾರಣವೆಂದು ಮುಖ್ಯಮಂತ್ರಿಯವರೂ ಪರಸ್ಪರ ದೂರಿಕೊಂಡರು. ಸದ್ಯ ಶ್ರೀಮತಿ ಗಾಂಧಿ ಕಾಂಗ್ರೆಸ್‍ನ ನಾಯಕತ್ವದಲ್ಲಿನ ಸರಕಾರ ಅಲ್ಲಿರುವುದರಿಂದ ಈ ಅವಧಿಯಲ್ಲಾದರೂ ರಾಜ್ಯದ ಹಿಂದುಳಿಯುವಿಕೆಯನ್ನು ದೂರ ಮಾಡಲಾರರೆ? ಅದಂತೂ ಸಂದೇಹ. ಕಳೆದ ಹಲವು ವರ್ಷಗಳಿಂದಲೂ ಕೆಟ್ಟುಹೋದ ರಾಜ್ಯದ ಸ್ಥಿತಿಗತಿಗಳನ್ನು ಸರಿಪಡಿಸಲು ಇಂಡಿಕೇಟಿಗೆ ಜೀವಾವಧಿಯೂ ಸಾಲದು. ಆದ್ದರಿಂದ ಅಜೀವ ಇಂಡಿಕೇಟ್ ಕೇರ್ ಅನ್ನದೆ ಹೋದರೆ, ಉತ್ತರ ಪ್ರದೇಶೀಯರ ಬಣ್ಣ ಬೆಟ್ಟಕೆ ಸಂಗೀತವಿದ್ದೀತು.

ಪ್ರಾದೇಶಿಕ ಅಸಮತೆಯನ್ನು ಪರಿಶೀಲಿಸಿದ ಸಮಿತಿಯು ಏಳು ರಾಜ್ಯಗಳನ್ನು ಹಿಂದುಳಿದವೆಂದು ಸಾರಿದೆ. ಇವುಗಳಲ್ಲಿ ನಾಗಾರಾಜ್ಯ ಮತ್ತು ಜಮ್ಮು ಕಾಶ್ಮೀರಗಳ ವಿಶೇಷ ಸ್ಥಾನ ಮಾನಗಳನ್ನು ಹೊಂದಿರುವುವು. ಉತ್ತರ ಪ್ರದೇಶ, ಅಸ್ಸಾಮು, ಬಿಹಾರ, ಮಧ್ಯಪ್ರದೇಶ ಮತ್ತು ಅಂಧ್ರಪ್ರದೇಶಗಳು ಉಳಿದವು. ಈ ಪಟ್ಟಿಯಲ್ಲಿ ಕರ್ನಾಟಕದ ಹೆಸರಿಲ್ಲವಾದುದರಿಂದ ಇಲ್ಲಿ ಪ್ರಾದೇಶಿಕ ಅಸಮತೆಯಿಲ್ಲ, ಇದ್ದರೂ ಇದು ಅಪಾಯವೆಂಬ ಪ್ರಶಸ್ತಿ ರಾಜ್ಯ ಸರಕಾರಕ್ಕೆ ದೊರಕಿದೆ. ಹಳೆಯ ಮೈಸೂರಿಗೆ ಅನ್ಯಾಯವಾಗಿದೆಯೆಂದು ಗೋಗರೆವವರಿಗೆ ಯೋಜನಾ ಆಯೋಗದ ಈ ನಿರ್ಧಾರವೊಂದು ಉತ್ತರವಾಗದೆ?

ಪ್ರಾದೇಶಿಕ ಅಸಮತೆಯ ರಾಜ್ಯಗಳಲ್ಲಿ ಇಂಡಿಕೇಟ್ ಬೆಂಬಲಿತ ಸರಕಾರಗಳೇ ಇರುವುವು ಎಂಬುದನ್ನು ಮರೆಯಬಾರದು. ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವಂತೆಯೇ ರಾಜ್ಯಕೀಯವಾಗಿಯೂ ಇವು ಹಿಂದ ಳಿದಿರುವುದರಿಂದ ಇಂಡಿಕೇಟ್‍ಗೆ ಬೆಂಬಲ ನೀಡುತ್ತಿವೆಯೆನ್ನಬಹುದೆ? ಹಾಗಿದ್ದರೆ, ಪ್ರಧಾನಿ ಇಂದಿರಾಗಾಂಧಿಯವರು ಕೇಂದ್ರದ ಬೊಕ್ಕಸವನ್ನೇ ಅಲ್ಲಿ ಸುರಿಯುತ್ತಾರೆ, ರಾಜ್ಯಕೀಯವಾಗಿ ಹಿಂದುಳಿಯಿರಿ ಎಂದು ಉಪದೇಶಿಸುತ್ತಾರೆ. ——

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಅಣುಶಕ್ತಿ ಉತ್ಪಾದನೆಗೆ ನವಮಾರ್ಗದರ್ಶಕ— ಕಲ್ಪಾಕಂ

ಮದ್ರಾಸಿನ ಕಲ್ಪಾಕಂ ಸುಪ್ರಸಿದ್ಧ; ಅಲ್ಲಿ ಭಾರತದ ಅಣುಶಕ್ತಿ ಕಾರ್ಯಯೋಜನೆಯಿದೆ. ನಮ್ಮ ದೇಶದಲ್ಲಿ ಇನ್ನುಮುಂದೆ ಅಣು ವಿದ್ಯುತ್ ಶಕ್ತಿ ಉತ್ಪಾದನೆ ಯಾವ ರೀತಿ ನಡೆಯಬೇಕು ಎಂಬುದನ್ನು ಈ ಕಾರ್ಯಯೋಜನೆಯೇ ನಿರ್ಧರಿಸಲಿರುವುದರಿಂದ ಅದಕ್ಕೆ ಇನ್ನಷ್ಟು ಹೆಚ್ಚಿನ ಮಹತ್ವ. ಅಣುಶಕ್ತಿಯ ಉತ್ಪಾದನೆಗೆ ತಗಲುವ ವೆಚ್ಚವನ್ನು ಕಡಿಮೆಮಾಡಲು ಅನುಸರಿಸಬೇಕಾದ ಮಾರ್ಗೋಪಾಯಗಳನ್ನೂ ಈ ಕಾರ್ಯಯೋಜನೆ ತೋರಿಸಿಕೊಡುತ್ತದೆ. ಕಾರಣ ನಮ್ಮ ದೇಶದ ಮಟ್ಟಿಗೆ ಕಲ್ಪಾಕಂ ಕಾರ್ಯಯೋಜನೆ ವಿಶಿಷ್ಟ ಸ್ಥಾನ ಪಡೆದಿದೆ. ಈ ಕಾರ್ಯ-ಯೋಜನೆಯ ಅಧಿಕಾರಿಗಳ ಹೊಣೆಯೂ ಹೆಚ್ಚಿದೆ. ಅವರು ಹೊಸದಾದ ಹಾಗೂ ಹೆಚ್ಚು ಕ್ಲಿಷ್ಟವಾದ ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಅವರು ಒಂದು ಮಟ್ಟವನ್ನು ಕಾಪಾಡಿಕೊಂಡು ಬರಬೇಕಾಗಿದೆ. ತಾವು ಕೈಗೊಂಡ ಸಂಶೋಧನಾ ಕಾರ್ಯಗಳ ವಿವರಣೆಗಳನ್ನು ಅವರು ನಮೂದಿಸಬೇಕಾಗಿದೆ. ಸಾಧನ-ಸಾಮಗ್ರಿಗಳಾಗಲಿ ತಾಂತ್ರಿಕ ಉಪಕರಣಗಳಾಗಲಿ ವಿದೇಶವನ್ನು ಅವಲಂಬಿಸದೇ, ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳುವ ಬಗ್ಗೆ ಆದ್ಯ ಗಮನ ಕೊಡಬೇಕಾಗಿದೆ.

ಭಾರತದಲ್ಲಿ ಯುರೇನಿಯಂ ಹಾಗೂ ಥೋರಿಯಂ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿವೆ. ಇವು ಅಣು ವಿದ್ಯುತ್ ಶಕ್ತಿ ಉತ್ಪಾದನೆಗೆ ಅಗತ್ಯವಾದ ವಸ್ತುಗಳು. ನಮ್ಮ ದೇಶದಲ್ಲಿ ಈಗ ನೀರಿನಿಂದ ವಿದ್ಯುಚ್ಛಕ್ತಿ ಉತ್ಪಾದಿಸಲು ನಿರಂತರ ಯತ್ನಗಳು ನಡೆದಿವೆ.

ಕೈಗಾರಿಕೆಗಳು ಒಂದೇ ಸಮನೆ ಬೆಳೆಯುತ್ತಿದ್ದು, ವಿದ್ಯುಚ್ಛಕ್ತಿಗಾಗಿ ಬೇಡಿಕೆಯೂ ದಿನೇ ದಿನೇ ಹೆಚ್ಚುತ್ತಿದೆ. ಭಾರತ ಜಲ—ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲಿದೆ. ತೈಲ ಅಷ್ಟೇನೂ ದೊಡ್ಡ ಪ್ರಮಾಣದಲ್ಲಿ ಸಿಗುತ್ತಿಲ್ಲ; ಉರುವಲಿಗಾಗಿ ಬೇಕಾಗುವ ಕಲ್ಲಿದ್ದಲಿನ ಉತ್ಪಾದನೆಯೂ ಈಗಾಗಲೇ ಪರಮಾವಧಿಯ ಹಂತವನ್ನು ಮುಟ್ಟಿದೆ. ಈ ಹಿನ್ನೆಲೆಯಲ್ಲಿ, ಅಣುಶಕ್ತಿ ಉತ್ಪಾದನೆಯೇ ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಏಕೈಕ ಸಾಧನ.

ಅಣುಯುಗದ ದೂತರು

ಕೇಂದ್ರ ಸರ್ಕಾರದ ಅಣುಶಕ್ತಿ ಇಲಾಖೆ 1954ರಲ್ಲಿ ಅಸ್ತಿತ್ವಕ್ಕೆ ಬಂದಿತು. ಶಾಂತಿಯುತ ಉದ್ದೇಶಗಳಿಗಾಗಿ ಅಣುಶಕ್ತಿಯ ಬಳಕೆಯೇ ಅದರ ಏಕಮೇವ ಗುರಿ. ಈ ದಿಶೆಯಲ್ಲಿ ಅದು ತೀವ್ರವೇ ಕಾರ್ಯಪ್ರವೃತ್ತವಾಯಿತು. ಫಲಸ್ವರೂಪವಾಗಿ ಈಗ ನಮ್ಮ ದೇಶದಲ್ಲಿ ಮೂರು ಅಣುಶಕ್ತಿ ಕೇಂದ್ರಗಳು ಸ್ಥಾಪನೆಗೊಂಡಿವೆ. ಅಭಿವೃದ್ಧಿಯ ವಿವಿಧ ಹಂತಗಳಲ್ಲಿವೆ. ಮೊದಲ ಕೇಂದ್ರ ಮಹಾರಾಷ್ಟ್ರದ ತಾರಾಪುರದಲ್ಲಿದೆ. ಅಮೇರಿಕದ ಕಾರ್ಪೋರೇಷನ್ ಒಂದರ ಸಹಕಾರದಿಂದ ಸ್ಥಾಪಿಸಲಾಗಿರುವ ಈ ಅಣುಶಕ್ತಿ ಉತ್ಪಾದನಾ ಸಾಮರ್ಥ್ಯ 400 ಮೆಗಾವ್ಯಾಟ್‌ಗಳು. ಈ ಕೇಂದ್ರ ಈಗ ಪೂರ್ಣ ಪ್ರಮಾಣದಲ್ಲಿ ಉತ್ಪಾದನೆಯನ್ನು ಆರಂಭಿಸಿದೆ ಪ್ರಧಾನ ಮಂತ್ರಿಗಳು ಇದೇ ಜನವರಿ [illegible]ರಂದು ಈ ಕೇಂದ್ರವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು; ಎರಡನೆಯ ಅಣು ಶಕ್ತಿ ಕೇಂದ್ರವನ್ನು ಕೆನಡಾದ ನೆರವು ಪಡೆದು ರಾಜಸ್ಥಾನದ ರಾಣಾಪ್ರತಾಪ್ ಸಾಗರದಲ್ಲಿ ಸ್ಥಾಪಿಸಲಾಗುತ್ತಿದೆ. ಈ ಕೇಂದ್ರದ ಸಾಮರ್ಥ್ಯ 400 ಮೆಗಾವ್ಯಾಟ್‌ಗಳು. ಮೂರನೆಯ ಕೇಂದ್ರವೇ ಕಲ್ಪಾಕಂ ಅಣುಶಕ್ತಿ ಕೇಂದ್ರ. ತಾಂತ್ರಿಕ ನೆರವಿಗಾಗಿ ಯಾರನ್ನೂ ಅವಲಂಬಿಸದೇ ಈ ಕೇಂದ್ರ ನಿರ್ಮಾಣವಾಗುತ್ತಿದೆ. ಇದು ನಮಗೆಲ್ಲರಿಗೂ ಅಭಿಮಾನ.

ಅಣುಶಕ್ತಿ ಉತ್ಪಾದನಾ ಕೇಂದ್ರದ ರಿಯಾಕ್ಟರ್ ಆಕಾರದಲ್ಲಿ ಸಾಮಾನ್ಯವಾಗಿ ಥರ್ಮಲ್ ವಿದ್ಯುಚ್ಛಕ್ತಿ ಕೇಂದ್ರದ ಬಾಯ್ಲರನ್ನು ಹೋಲುತ್ತದೆ. ರಿಯಾಕ್ಟರ್ ನೋಡಲು ಹೀಗೆ ಕಂಡು ಬಂದರೂ ಹೆಚ್ಚು ಕ್ಲಿಷ್ಟವಾಗಿದೆ. ರಿಯಾಕ್ಟರ್‌ನ್ನು ಹೆಚ್ಚು ಕರಾರುವಾಕ್ಕಾಗಿ ಹಾಗೂ ಸುರಕ್ಷಿತವಾಗಿ ನಡೆಸಬೇಕಾಗುತ್ತದೆ. ಏಕೆಂದರೆ ರಿಯಾಕ್ಟರಿನಿಂದ ಉದ್ಭವಿಸುವ ಅಣುವಿಕಿರಣ ಕ್ರಿಯೆಯಿಂದ ರಿಯಾಕ್ಟರ್ ಕೇಂದ್ರದ ಸಿಬ್ಬಂದಿಗೂ ಸುತ್ತಮುತ್ತಲು ವಾಸವಾಗಿರುವ ಸಾರ್ವಜನಿಕರಿಗೂ ಅಪಾಯದ ಸಂಭವವಿರುತ್ತದೆ. ಕಾರಣ ಈ ಒಂದು ಅಂಶವನ್ನು ಲಕ್ಷ್ಯದಲ್ಲಿಟ್ಟುಕೊಂಡು, ರಿಯಾಕ್ಟರಿನ ನಿಯಂತ್ರಣದಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕಾಗುತ್ತದೆ.

ಥರ್ಮಲ್ ವಿದ್ಯುಚ್ಛಕ್ತಿ ಕೇಂದ್ರಗಳಲ್ಲಿ ಬಾಯ್ಲರುಗಳಿಗೆ ಎಣ್ಣೆ ಅಥವಾ ಕಲ್ಲಿದ್ದಲನ್ನು ನಿರಂತರವಾಗಿ ಪೂರೈಸಬೇಕಾಗುತ್ತದೆ. ಅದೇ ರೀತಿ ಅಣು ವಿದ್ಯುತ್ ಉತ್ಪಾದಿಸುವ ರಿಯಾಕ್ಟರಿಗೂ ಅಣುಶಕ್ತಿ ಇಂಧನವನ್ನು ಸದಾಕಾಲ ಒದಗಿಸಬೇಕಾಗುತ್ತದೆ. ಈ ಒಂದು ಕ್ರಿಯೆಯ ನಂತರ ಉಳಿಯುವ ಇಂಧನವನ್ನು ರಿಯಾಕ್ಟರಿನಿಂದ ಹೊರತೆಗೆಯಬೇಕಾಗುತ್ತದೆ. ಜ್ವಲನ ಕ್ರಿಯೆಯ ಬಳಿಕ ಉಳಿಯುವ ಇಂಧನದಿಂದ ಪ್ಲುಟೋನಿಯಂ ದೊರೆಯುತ್ತದೆ. ಪ್ಲುಟೋನಿಯಂ ಅತ್ಯಮೂಲ್ಯವಾದ ಅಣುಶಕ್ತಿಯ ಸಾಧನ. ಇದು ಫಾಸ್ಟ್ ಬ್ರೀಡರ್ ರಿಯಾಕ್ಟರುಗಳಿಗೆ ಅತ್ಯಾವಶ್ಯಕವಾಗಿದೆ. ಈ ರಿಯಾಕ್ಟರುಗಳು ಥೋರಿಯಂ ಬಳಸಲು ಸಮರ್ಥವಾಗಿವೆ. ಈ ಬಗೆಯ ರಿಯಾಕ್ಟರುಗಳು ಅಣು ಶಕ್ತಿ ಉತ್ಪಾದನಾ ಕಾರ್ಯಕ್ರಮದ ಪ್ರಾರಂಭಿಕ ಹಂತದಲ್ಲಿ ಅತ್ಯವಶ್ಯಕವಾಗಿವೆ.

ಪ್ರಗತಿ ಪಥದಲ್ಲಿ

ಅಣುಶಕ್ತಿ ಆಯೋಗದವರು ಕಲ್ಪಾಕಂ ಬಳಿಯಲ್ಲಿ ರಿಯಾಕ್ಟರ್ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಿದ್ದಾರೆ. ಈಗಾಗಲೇ ಸಿವಿಲ್ ಕೆಲಸ—ಕಾರ್ಯಗಳು ಆರಂಭವಾಗಿವೆ. ಭಾರತದ ಪಶ್ಚಿಮ ಕರಾವಳಿಯ ಮರಳಿನಲ್ಲಿ ವಿಶ್ವದಲ್ಲೇ ಅತಿದೊಡ್ಡ ಥೋರಿಯಂ ನಿಕ್ಷೇಪವಿದೆ. ಥೋರಿಯಂ ಉಪಯೋಗಿಸಿಕೊಂಡೇ ಅಣು ವಿದ್ಯುತ್ ತಯಾರಿಸುವುದು ನಮ್ಮ ದೇಶದ ದೀರ್ಘಾವಧಿ ಉದ್ದೇಶವಾಗಿದೆ.

ಈ ಕಾರ್ಯಕ್ರಮ ಮೂರು ಹಂತಗಳಲ್ಲಿ ನಡೆಯುವುದು. ಮೊದಲನೆಯ ಹಂತದಲ್ಲಿ ನೈಸರ್ಗಿಕವಾಗಿ ದೊರೆಯುವ ಯುರೇನಿಯಂ ಬೀಜವನ್ನು ಇಂಧನ ವಸ್ತುವಾಗಿ ಬಳಸುವ ರಿಯಾಕ್ಟರುಗಳಿರುವವು. ಅವು ಪ್ಲುಟೋನಿಯಂನ್ನು ಉತ್ಪಾದಿಸುವವು. ಎರಡನೆಯ ಹಂತದಲ್ಲಿ ಪ್ಲುಟೋನಿಯಂನ್ನು ಇಂಧನವನ್ನಾಗಿ ಬಳಸುವ ರಿಯಾಕ್ಟರುಗಳಿರುವವು. ಅವು ಯುರೇನಿಯಂ–233 ಉತ್ಪಾದಿಸುವವು. ಮೂರನೆಯ ಹಂತದಲ್ಲಿ ಬ್ರೀಡರ್ ರಿಯಾಕ್ಟರ್‌ಗಳಿರುವವು. ಅವು ಥೋರಿಯಂ ಯುರೇನಿಯಂ 233 ಚಕ್ರದ ಮೇಲೆ ಚಾಲೂ ಆಗುವವು.

ಕಲ್ಪಾಕಂನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರಿನ ಪ್ರೊಟೋಟೈಪ್, ಒಂದು ಪ್ರಾಯೋಗಿಕ ಘಟಕವಾಗಿದೆ. ಈ ಘಟಕದ ಉತ್ಪಾದನಾ ಸಾಮರ್ಥ್ಯ ಹತ್ತು ಮೆಗಾವ್ಯಾಟ್‌ಗಳಷ್ಟಿದೆ. ಈ ಘಟಕದ ಸ್ಥಾಪನೆ ಫಾಸ್ಟ್ ಬ್ರೀಡರ್ ರಿಯಾಕ್ಟರುಗಳ ತಂತ್ರವನ್ನು ಕರಗತ ಮಾಡಿಕೊಳ್ಳುವ ದಿಶೆಯಲ್ಲಿ ಒಂದು ಅತಿದೊಡ್ಡ ಹೆಜ್ಜೆಯೆಂದು ಹೇಳಬಹುದು. ಫ್ರಾನ್ಸ್, ಬ್ರಿಟನ್, ಅಮೇರಿಕಾ ಮತ್ತು ಸೋವಿಯತ್ ರಷ್ಯಾ ಮುಂತಾದ ರಾಷ್ಟ್ರಗಳಲ್ಲಿಯೂ ಇದೇ ರೀತಿಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತದೆ. ಆದರೆ ಈ ಎಲ್ಲ ದೇಶಗಳಲ್ಲಿ ಥೋರಿಯಂ ಬಳಕೆಗೆ ಅಷ್ಟೊಂದು ಪ್ರಾಧಾನ್ಯ ನೀಡುತ್ತಿಲ್ಲ. ನಮ್ಮ ದೇಶದಲ್ಲಿ ನಿರ್ಮಿಸಲಾಗುತ್ತಿರುವ ರಿಯಾಕ್ಟರುಗಳ ವಿನ್ಯಾಸ ಸಿದ್ಧಗೊಳಿಸುವಲ್ಲಿ, ಥೋರಿಯಂ ಮಹತ್ವಪೂರ್ಣ ಸ್ಥಾನ ಪಡೆದಿದೆ. ಕಲ್ಪಾಕಂ ರಿಯಾಕ್ಟರಿನ ವಿನ್ಯಾಸ ಹಾಗೂ ನಿರ್ಮಾಣ ಕಾರ್ಯವನ್ನು ಸ್ವತಃ ಭಾರತೀಯ ಇಂಜಿನಿಯರರು ಹಾಗೂ ವಿಜ್ಞಾನಿಗಳು ಕೈಗೊಂಡಿದ್ದಾರೆ. ಈ ಕಾರ್ಯಯೋಜನೆಗೆ 25 ಕೋಟಿ ರೂ. ವೆಚ್ಚ ತಗಲುವುದೆಂದು ಅಂದಾಜಿದೆ.

ಈ ದಾರಿ ಸಾಧನೆ ಮೊದಲ ಹಂತದಲ್ಲಿ ಪ್ರಯೋಗ ಪರಿಶೀಲನೆ ಇತ್ಯಾದಿ ಕಾರ್ಯಗಳನ್ನ, ಎರಡು ಭವ್ಯವಾದ ಇಂಜಿನಿಯರಿಂಗ್ ಭವನಗಳನ್ನು ನಿರ್ಮಿಸಲಾಗುತ್ತಿದೆ. ಈ ಭವನಗಳಲ್ಲೇ ವರ್ಕ್‌ಷಾಪ್, ಸ್ಟೋರ್ ಮತ್ತು ಆಫೀಸ್ ಸೌಕರ್ಯಗಳಿರುವವು.

ಇಂದು ಕಲ್ಪಾಕಂ ಜನನಿಬಿಡವಾದ ಸ್ಥಳವಾಗಿದೆ! ಎಲ್ಲರಿಗೂ ಕಾರ್ಯಚಟುವಟಿಕೆಗಳು ಕಣ್ಣಿಗೆ ಬೀಳುತ್ತವೆ. ಇಂಜಿನಿಯರುಗಳು, ತಂತ್ರಜ್ಞರು, ಹಾಗೂ ಕಾರ್ಮಿಕರು ಈ ಮಹಾ ಯೋಜನೆಯ ಯಶಸ್ಸಿಗಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ.

ಯಕ್ಷಗಾನ ಸಂಘದ ಉದ್ಘಾಟನೆ

ಬನ್ನಂಜೆ ವಾ. 8 ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯ ಉದ್ಘಾಟನೆಯು ಶ್ರೀ ಕೆ. ನಾರಾಯಣ ಶೆಟ್ರ ನೇತೃತ್ವದಲ್ಲಿ ದಿ. 6-3-70ರಂದು ಶ್ರೀ ಮಹಾಲಿಂಗೇಶ್ವರ ದೇವರ ದಿವ್ಯ ಸನ್ನಿಧಿಯಲ್ಲಿ ರಾಮಚಂದ್ರ ಭಟ್, ಬಿ.ಎ. ಯಲ್.ಯಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬಿ. ವಿಠಲಶೆಟ್ಟಿಗಾರರು ವರದಿ ವಾಚನ ಮಾಡಿದ ತರುವಾಯ ಕೆ. ನಾರಾಯಣ ಶೆಟ್ಟಿಯವರು ಸಂದೇಶವಾಚನಗೈದರು. ಯಕ್ಷಗಾನ ಮಂಡಳಿಯ ಅಧ್ಯಕ್ಷರಾಗಿ ಅಮ್ಮುಂಜೆ ನಾಗೇಶನಾಯಕ್, ಉಪಾಧ್ಯಕ್ಷರಾಗಿ ಬಿ. ನಾಗೇಶ ಪ್ರಭು, ಕಾರ್ಯದರ್ಶಿಯಾಗಿ ಬಿ. ನಾರಾಯಣ ಶೇರಿಗಾರ, ಉಪಕಾರ್ಯದರ್ಶಿಯಾಗಿ ಬಿ. ವಿಠಲ ಶೆಟ್ಟಿಗಾರ್, ಕೋಶಾಧಿಕಾರಿಯಾಗಿ ರಾಮದಾಸ ರಾವ್ ಸರ್ವಾನುಮತದಿಂದ ಆರಿಸಲ್ಪಟ್ಟರು. ನಂತರ ದ್ರೌಪದಿ ಪ್ರತಾಪವೆಂಬ ಯಕ್ಷಗಾನ ಬಯಲಾಟವು ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ತೊಟ್ಟಂ ರಮಾನಾಥ ಪೈ, ಸೋಮಯ್ಯ ಆಚಾರಿ ಮೃದಂಗ; ಎಸ್. ಗೋವರ್ಧನ ರಾವ್ ಚಂಡೆ, ವೆಂಕಟಾಚಲ ರಾವ್, ಶಂಭು ಶೆಟ್ಟಿಗಾರ್, ಮತ್ತು ಗಣಾನನ ಯಕ್ಷಗಾನ ಮಂಡಳಿಯ ಕಲಾವಿದರಿಂದ ಜರಗಿದ ಬಳಿಕ ಕೆ. ನಾರಾಯಣ ಶೆಟ್ಟಿಯವರು ಧನ್ಯವಾದವಿತ್ತರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN **NAVAYUGA WEEKLY**

ಕಿರುಗತೆ

ಹೀನರೆಂದು ತಿಳಿದುಕೊಳ್ಳುವುದು ಮಹಾಪರಾಧ

ಕೆಲವರು ತಮ್ಮ ಬಡತನ, ಹೀನಸ್ಥಿತಿಗಳಿಗೆ ತಮ್ಮ ಅದೃಷ್ಟವೇ ಕಾರಣವೆಂದೂ ಆ ವಿಷಯದಲ್ಲಿ ತಾವು ಅಸ್ವತಂತ್ರರೆಂದೂ ಪರಿಭಾವಿಸಿರುವರು. ಇದೊಂದು ಅವರ ದೊಡ್ಡ ಪ್ರಮಾದವೆಂದೇ ಹೇಳಬೇಕು. ಪ್ರತಿಯೊಬ್ಬನು ತನ್ನ ಸ್ವಭಾವವನ್ನು ಚರಿತ್ರವನ್ನು ತನ್ನ ಆತ್ಮಬಲದಿಂದ ರೂಪಿಸಿಕೊಳ್ಳಬಲ್ಲನೆಂದು ಮನೋವಿಜ್ಞಾನ ಶಾಸ್ತ್ರವು ಸಾರಿ ಹೇಳುತ್ತಿದೆ. ಆಂದಮೇಲೆ ಮನುಷ್ಯನು ತನ್ನ ಕುತ್ಸಿತ ವಿಚಾರ ಪ್ರವಾಹದಲ್ಲಿ ಹರಿದು ಹೋಗದೆ ಅದರಿಂದ ಪಾರಾಗಲು ಪೌರುಷವನ್ನು ಉಪಯೋಗಿಸಬೇಕಾಗುವದು. ಕುತ್ಸಿತ ಕಲ್ಪನೆಗಳೇ ಮೆಲ್ಲಮೆಲ್ಲನೆ ಮಾನಸಿಕ ರೋಗ ರೂಪವನ್ನು ತಾಳಿ ಮನುಷ್ಯನನ್ನು ತೀರ ಕೆಳಮಟ್ಟಕ್ಕೆ ಎಳೆದುಕೊಂಡು ಹೋಗುವವು

ಒಂದು ವೇಳೆ ಯಾರಾದರೂ ತನ್ನ ವಿಷಯದಲ್ಲಿ ಹೀನ ದೀನ ಭಾವವನ್ನು ವ್ಯಕ್ತಪಡಿಸಿದರೂ ಅವರ ಮಾತಿನಲ್ಲಿ ವಿಶ್ವಾಸ ತಾಳಕೂಡದು, ಅವರಿಗೆ ತನ್ನ ಆರಿಯ ಮಾತಿನಿಂದಲ್ಲ ತನ್ನ ಸಚ್ಚಾರಿತ್ರ್ಯದ ಮುಖಾಂತರ ಬುದ್ಧಿಯನ್ನು ಹೇಳಿ ಅವರ ಮುಖದಿಂದ ಪುನಃ ಅಂಥ ಕೀಳು ಮಾತುಗಳು ಹೊರಬೀಳದಂತೆ ಮಾಡಬೇಕು. ಒಮ್ಮೆ ಒಬ್ಬ ರಾಜನ ಹತ್ತಿರ ಒಬ್ಬ ವ್ಯಕ್ತಿಯು ಹೋಗಿ ಹೇಳಿದನಂತೆ—ಮಹಾರಾಜ ನಿಮ್ಮ ರಾಜ್ಯದಲ್ಲಿ ಒಬ್ಬ ವ್ಯಕ್ತಿ ಇದ್ದಾನೆ. ಅವನ ಮುಖವನ್ನು ಯಾರು ನೋಡುವರೋ ಅವರು ಆ ದಿವಸವೆಲ್ಲ ಊಟ ದೊರೆಯದೆ ಗೋಳಾಡಬೇಕಾಗುವದು.

ರಾಜ ಹೇಳಿದ—ನಿನ್ನ ಮಾತನ್ನು ನಾನು ಸ್ವತಃ ಪರೀಕ್ಷಿಸಿ ನೋಡಿ ಮುಂದಿನ ಕ್ರಮ ಕೈಕೊಳ್ಳುವೆ ಎಂದು. ರಾಜನು ತಾನು ವಿಚಾರಮಾಡಿದಂತೆ ಮರುದಿವ ಬೆಳಗಾಗೆದ್ದು ಆ ದುರ್ಭಾಗ್ಯನನ್ನು ನೋಡಿಯೇ ಬಿಟ್ಟ. ಸಂಯೋಗವಶದಿಂದ ಅಂದು ಮಹಾರಾಜನಿಗೆ ದಿನವೆಲ್ಲ ಊಟವಿಲ್ಲದೆ ಹಸಿದು ತಿರುಗಾಡುವ ಪ್ರಸಂಗ ಒದಗಿಬಂದಿತು. ಆಗ ರಾಜನು ನಿಜವಾಗಿ ಈ ವ್ಯಕ್ತಿಯು ಮಂದಭಾಗಿಯಾಗಿರುವನು. ನನ್ನ ರಾಜ್ಯದಲ್ಲಿ ಇಂತಹ ವ್ಯಕ್ತಿ ಇರಬಾರದು. ಇವನನ್ನು ಆದಷ್ಟು ಬೇಗ ನನ್ನ ರಾಜ್ಯದಿಂದ ಹೊರದಬ್ಬಬೇಕು. ಅಥವಾ ಇವನ ಅಸ್ತಿತ್ವವೇ ಇಲ್ಲದಂತೆ ಮಾಡಬೇಕು.

ರಾಜನು ಆ ವ್ಯಕ್ತಿಯನ್ನು ಕರೆಯಿಸಿ ಹೇಳುತ್ತಾನೆ - ನೀನು ನಿಜವಾಗಿಯೂ ದುರ್ಭಾಗ್ಯನು. ಇಂದು ಪ್ರಾತಃಕಾಲ ನಿನ್ನ ಮುಖವನ್ನು ನೋಡಿದ ನನಗೆ ಊಟವೇ ದೊರೆಯದಂತಾಯಿತು. ನೀನು ನನ್ನ ರಾಜ್ಯದಲ್ಲಿ ಎಷ್ಟು ಜನರಿಗೆ ಇನ್ನೇನೇನು ತೊಂದರೆಯನ್ನು ಕೊಡುತ್ತಿರಬೇಕಲ್ಲವೆ? ರಾಜನಾದ ನನಗೆ ಪ್ರಜರ ಹಿತವನ್ನು ನೋಡಬೇಕಾದ ಭಾರವಿರುವದು. ಅದಕ್ಕಾಗಿ ಇಂದು ನೀವು ನನ್ನ ಅಪ್ಪಣೆಯ ಮೇರೆಗೆ ಫಾಸಿ ಶಿಕ್ಷೆಗೆ ಗುರಿಯಾಗಬೇಕಾಗುವದು.

ವ್ಯಕ್ತಿಯು ರಾಜನ ಮಾತನ್ನು ಕೇಳಿ ಸ್ವಲ್ಪ ಹೊತ್ತು ಸುಮ್ಮನೆ ನಿಂತುಕೊಂಡ. ಆದರೆ ಅವನು ತನ್ನನ್ನು ತಾನೇ ಹೀನನೆಂದು, ದುರ್ಭಾಗ್ಯನೆಂದು ತಿಳಿದುಕೊಳ್ಳಲು ಸಿದ್ಧನಾಗಲಿಲ್ಲ.

ಅವನು ಧೈರ್ಯದಿಂದ ಹೇಳಿದ—ರಾಜನ್, ನಾನು ತುಚ್ಛನಲ್ಲ. ನೀವೂ ನಿಮ್ಮ ಮನಸ್ಸಿನಿಂದ ಈ ದುರ್ಭಾವನೆಯನ್ನು ತೆಗೆದುಹಾಕಿರಿ. ನನ್ನ ಮುಖವನ್ನು ನೋಡಿದರೆ ಊಟ ದೊರೆಯುವುದಿಲ್ಲವೆಂಬುದು ನನ್ನ ಮೇಲಿನ ಮಿಥ್ಯಾರೋಪವೆಂದೇ ನಾನು ಭಾವಿಸುವೆ. ನೀವು ನನ್ನ ಮುಖವನ್ನು ನೋಡಿದ್ದಕ್ಕಾಗಿ ನಿಮಗೆ ಊಟ ದೊರೆಯಲಿಲ್ಲವೆಂಬುವದೇ ನಿಜವಾದರೆ ನಿಮ್ಮ ಮುಖವನ್ನು ನೋಡಿದ ನನಗೆ ಮರಣದಂಡನೆಯೇ ಆಗುವದು ನಿಜವೆಂದೇ ಹೇಳಬೇಕಾಗುವದು. ಇದರ ಮೇಲಿಂದ ನನಗಿಂತ ನೀವೇ ತುಚ್ಛ ಅಭಾಗಿ ಎಂಬುವಲ್ಲಿ ಸಂದೇಹವೇ ಇರುವದಿಲ್ಲ ಎಂದ.

ರಾಜನು ವ್ಯಕ್ತಿಯ ಮಾತನ್ನು ಕೇಳಿದ ಕೂಡಲೇ ತನ್ನ ವಿಚಾರಗಳನ್ನೆಲ್ಲ ಬದಲಾಯಿಸಿಯೇ ಬಿಟ್ಟನು. ಅವನ ಮನಸ್ಸಿನ ಮೇಲೆ ಮುತ್ತಿದ ಸಂದೇಹದ ಕಾರ್ಮುಗಿಲುಗಳೆಲ್ಲ ಒಮ್ಮೆಲೆ ಹರಿದು ಹೋದವು.

ಆಗ ಅವನ ಹೃದಯದಲ್ಲಿ ಒಮ್ಮೆಲೆ ದಿವ್ಯ ಪ್ರಕಾಶವಾವರಿಸಿ ಯಾರನ್ನೂ ತುಚ್ಛವೆಂದು ತಿಳಿಯಬಾರದೆಂಬ ಬೋಧೆಯುಂಟಾಯಿತು. ತನ್ನನ್ನು ತಾನು ಹೀನನೆಂದು ತಿಳಿಯಬಾರದು ಎಂಬ ಆ ಬೋಧೆಯು ಆತನ ಜೀವನದ ಕಲ್ಯಾಣ ಮಾರ್ಗದರ್ಶಕವಾಯಿತು. ಈ ಬಗ್ಗೆ ಹೊಣೆಗಾರಿಕೆಯ ಸ್ಥಾನದಲ್ಲಿರುವ ತಾಯಿ ತಂದೆಗಳು, ಶಿಕ್ಷಕರು ತಮ್ಮ ಮಕ್ಕಳ ಹಾಗು ಶಿಷ್ಯರ ವಿಷಯದಲ್ಲಿ ನಡೆದು ಕೊಳ್ಳುವದನ್ನು ಕಲಿಯಬೇಕು. ಇಲ್ಲವಾದರೆ ಅವರ ಭವಿಷ್ಯ ಜೀವನದ ಬಗೆಗೆ ಯಾವ ಆಶೆಯನ್ನು ಮಾಡಬಾರದಾಗುವದು. ಕೋಮಲ ಮತಿಗಳಾದ ಸುಕುಮಾರರ ಹೃದಯದ ಮೇಲೆ ಅಲ್ಪವಯಸ್ಕರಾದ ಕಿಶೋರ ಕಿಶೋರಿಯರ ಮನದ ಮೇಲೆ ಹಾನಿಕಾರಕ ಪ್ರಭಾವ ಬೀಳದಂತೆ ಎಚ್ಚರವಹಿಸುವದು ಅನಿವಾರ್ಯವು.

ಶ್ರೀ ಕೃಷ್ಣಾಪುರ ಮಠದ ಪ್ರವೇಶೋತ್ಸವ

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ ತೀರ್ಥ ಶ್ರೀ ಪಾದಂಗಳವರು ಅಂಬಾಗಿಲು ಕುಂಜಾಲ ರಸ್ತೆಯ ರಾಜಕಟ್ಟೆಯಲ್ಲಿ ನೂತನವಾಗಿ ಕಟ್ಟಿಸಿದ ಮಠದ ಪ್ರವೇಶ ಸಮಾರಂಭವು ತಾ. 15 ರಂದು ವಿಜೃಂಭಣೆಯಿಂದ ನೆರವೇರಿತು. ಮುಂಚಿನ ರಾತ್ರಿ ವಾಸ್ತು ರಕ್ಷೋಘ್ನಾದಿ ಹೋಮಗಳು ನಡೆದವು. 15ನೆಯ ಪ್ರಾತಃಕಾಲ 6 ಗಂಟೆಗೆ ಶ್ರೀ ಮಠದ ಶ್ರೀ ನೃಸಿಂಹ ಶಾಲಿಗ್ರಾಮ ಹಾಗೂ ಶ್ರೀ ಕೃಷ್ಣದೇವರೊಡನೆ ವಿಧಿವತ್ತಾಗಿ ಮಠದ ಪ್ರವೇಶ ನೆರವೇರಿತು. ಪ್ರಾತಃಕಾಲ 9 ಗಂಟೆಗೆ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರು, ಕಾಣಿಯೂರು ಮಠದ ಶ್ರೀ ವಿದ್ಯಾವಾರಿಧಿ ತೀರ್ಥ ಶ್ರೀ ಪಾದಂಗಳವರು, ಶೀರೂರು ಮಠದ ಶ್ರೀ ಲಕ್ಷ್ಮೀಮನೋಜ್ಞ ತೀರ್ಥ ಶ್ರೀ ಪಾದಂಗಳವರು ಹಾಗೂ ಎಡನೀರು ಮಠದ ಶ್ರೀ ಕೇಶವಾನಂದ ಭಾರತಿ ಶ್ರೀ ಪಾದಂಗಳವರು, ಇವರುಗಳನ್ನು ನೂತನ ಮಠಕ್ಕೆ ಆದರ ಪೂರ್ವಕ ಬರಮಾಡಿಕೊಳ್ಳಲಾಯಿತು. ಮಧ್ಯಾಹ್ನ ಕೃಷ್ಣಾಪುರ, ಪುತ್ತಿಗೆ, ಶೀರೂರು, ಕಾಣಿಯೂರು ಮಠಗಳ ಪಟ್ಟದ ದೇವರುಗಳಿಗೆ ಸಂಭ್ರಮದ ಮಹಾಪೂಜೆ ಹಾಗೂ ಅನ್ನ ಸಂತರ್ಪಣೆ ನಡೆಯಿತು.

ಸಂಜೆ 4 ಗಂಟೆಯಿಂದ 6 ಗಂಟೆಯ ಅವಧಿಯಲ್ಲಿ ಮಠದ ಅಭಿಮಾನಿಗಳು ವಿಶೇಷ ಸಂಖ್ಯೆಯಲ್ಲಿ ಹೊಸ ಮಠಕ್ಕೆ ಬಂದು ದೇವರ ಮತ್ತು ಶ್ರೀ ಕೃಷ್ಣಾಪುರ ಮಠದ ಶ್ರೀಗಳವರ ದರ್ಶನ ಮಾಡಿ ಫಲಮಂತ್ರಾಕ್ಷತೆ ಪಡೆದರು. ರಾತ್ರಿ 'ಯಕ್ಷಗಾನ' ಬಯಲಾಟ ನಡೆಯಿತು.

ಹಳ್ಳಿಯ ನಿಸರ್ಗ ಸುಂದರ ಸ್ಥಳದಲ್ಲಿ ನಿರ್ಮಿಸಲಾದ ಈ ಹೊಸ ಮಠದಲ್ಲಿ ಮದುವೆ ಉಪನಯನ ಇತ್ಯಾದಿ ಶುಭ ಸಮಾರಂಭಗಳಿಗೆ ಬೇಕಾದ ಬಯಲು ಮಂಟಪದ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಶ್ರೀ ಮಠದ ಸುಮಾರು 400 ಎಕ್ರೆ ಕಾಡುಗುಡ್ಡದ ನಡುವೆ ಮಠವನ್ನು ನಿರ್ಮಿಸಲಾಗಿದ್ದು ಶ್ರೀರಾಶ್ರಯವಿರುವ ಸ್ಥಳದಲ್ಲಿ ಭತ್ತ, ಅಡಿಕೆ, ತೆಂಗು ಇತ್ಯಾದಿ ಕೃಷಿ ಕಾರ್ಯದ ಯೋಜನೆಯನ್ನು ಶ್ರೀ ಪಾದಂಗಳವರು ಇರಿಸಿಕೊಂಡಿದ್ದಾರೆ. ಕೆಲವೇ ವರ್ಷಗಳಲ್ಲಿ ಇದು ನಂದನವನವಾಗಿ ಮಾರ್ಪಟ್ಟು ಆಕರ್ಷಣೆಯ ಕೇಂದ್ರವಾಗದಿರದು. ಶ್ರೀ ಪಾದಂಗಳವರ ಮಾರ್ಗದರ್ಶನದಲ್ಲಿ ರಚಿಸಲಾದ ಈ ಕಟ್ಟಡದ ಮೇಲ್ವಿಚಾರಕರು ಕಂಟ್ರಾಕ್ಟರ್ ಉಪ್ಪೂರು ರಾಘವೇಂದ್ರರಾಯರಾಗಿದ್ದರು.

ಬೈಲೂರು ವಿಠ್ಠಲ ಶೆಟ್ರ ನಿಧನ

ಉಡುಪಿಯಲ್ಲಿ ಬಹುಹಿಂದಿನಿಂದಲೂ ಕಂಟ್ರಾಕ್ಟದಾರರಾಗಿದ್ದ ಶ್ರೀ ಬೈಲೂರು ವಿಠ್ಠಲ ಶೆಟ್ಟರು ತಾ. 5-8-70ರಂದು ನಿಧನ ಹೊಂದಿರುವರೆನ್ನಲು ವಿಷಾದವಾಗುತ್ತದೆ. ದಿವಂಗತರು ಸಾಹಸಿಗರೂ ಸತ್ಕಾರ್ಯೋದ್ಯೋಗಿಗಳೂ ಆಗಿ ಜನಪ್ರಿಯರಾಗಿದ್ದರು.

ದಿನಂಪ್ರತಿ 25 ಪೈಸೆಗಳ
ಬೀಜಾರೋಪಣ ಮಾಡಿರಿ.......



ಮತ್ತು ನಮ್ಮ
ಪಿಗ್ಮಿ ಠೇವಣಿ ಯೋಜನೆಯನ್ವಯ
ಏಳು ವರ್ಷಗಳ ನಂತರ
ರೂಪಾಯಿ 700/- ಪಡೆಯಿರಿ
ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗೆ ಪ್ರತಿಯೋರ್ವನ ಬ್ಯಾಂಕು
ಸಿಂಡಿಕೇಟ್ ಬ್ಯಾಂಕ್
ಪ್ರಧಾನ ಕಾರ್ಯಾಲಯ: ಮಣಿಪಾಲ.
ಶಾಖೆಗಳು :
366
ಕೆ. ಕೆ. ಪೈ
ಕಸ್ಟೋಡಿಯನ್

ಮೈಸೂರ್ ಸ್ಟೇಟ್ ಲಾಟರಿ
ಟಿಕೇಟುಗಳು
ಸಿಗುತ್ತವೆ
ವಿಚಾರಿಸಿರಿ
ರಾಜೇಂದ್ರ ಕುಮಾರ ಶೆಟ್ಟಿ ಕೆ.
ನವಯುಗ ಪ್ರೆಸ್, ಉಡುಪಿ

ಮನೆ-ಮದ್ದು
ಗೃಹವೈದ್ಯ — ರೂ.2 - 00
ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2-00
ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50
ಟಪ್ಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯಿತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

ಬಿಡಿಸಬಹುದಾದ ನಿರುದ್ಯೋಗಿ ಇಂಜಿನಿಯರುಗಳ ಸಮಸ್ಯೆ

ಕೇವಲ ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಸಾವಿರಾರು ಇಂಜಿನಿಯರುಗಳು ಹಾಗು ತಂತ್ರಜ್ಞರು ಕೆಲಸವಿಲ್ಲದೆ ಅಲೆಯುವಂತಾಗಿದೆ. ಎರಡು ಮೂರು ವರ್ಷಗಳ ಹಿಂದೆ ಇಂಜಿನಿಯರುಗಳಿಗೆ ಉದ್ಯೋಗಾವಕಾಶ ಹೆಚ್ಚು ಕಡಿಮೆ ಖಾತರಿ ಇತ್ತು, ಸಂಬಳವೂ ತುಲನಾತ್ಮಕವಾಗಿ ಚೆನ್ನಾಗಿಯೇ ದೊರೆಯುತ್ತಿತ್ತು. ಆದರೆ ನಮ್ಮ ದೇಶದ ಗಡಿಗಳ ಮೇಲೆ ನೆರೆ ರಾಷ್ಟ್ರಗಳ ಆಕ್ರಮಣ ಹಾಗು ಎರಡು ಭೀಕರ ಬರಗಾಲಗಳು ನಮ್ಮ ದೇಶದ ಅರ್ಥವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದವು. ಹೀಗಾಗಿ ಅಭಿವೃದ್ಧಿ ಯೋಜನೆಗಳ ವೆಚ್ಚದಲ್ಲಿ ಕಡಿತ, ಆರ್ಥಿಕ ವ್ಯವಸ್ಥೆಯಲ್ಲಿ ಹಿಂಜರಿತ ತಲೆದೋರಿದವು. ತತ್ಪರಿಣಾಮವಾಗಿ ಅನೇಕಾನೇಕ ಇಂಜಿನಿಯರುಗಳು ನಿರುದ್ಯೋಗಿಗಳಾಗಬೇಕಾಯಿತು. ಹೊಸ ಯೋಜನೆಗಳಲ್ಲಿ ತೊಡಗಿಸುವ ಹಣದ ಮೊತ್ತ ಕಡಿಮೆಯಾಯಿತು. ಉತ್ತಮ ಮೆಕ್ಸಿಕನ್ ಮತ್ತು ಅಧಿಕ ಇಳುವರಿ ಬೀಜಗಳ ಉಪಯೋಗದಿಂದ ದೇಶದಲ್ಲಿ ಆಹಾರಧಾನ್ಯ ಉತ್ಪತ್ತಿಯಲ್ಲಿ ಪ್ರಶಂಸನೀಯ ಏರಿಕೆಯಾಗಿದ್ದರೂ, ಕೈಗಾರಿಕೆಯಲ್ಲಿ ಪುನಶ್ಚೇತನ ನಿಧಾನವಾಗಿ ಮೂಡತೊಡಗಿದೆ. ಏನಿದ್ದರೂ ವರುಷಕ್ಕೆ ಸಾವಿರ ಸಂಖ್ಯೆಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಂದ ಹೊರಬರುವ ಇಂಜಿನಿಯರಿಂಗ್ ಪದವೀಧರರಿಗೆ ಸದ್ಯೋಭವಿಷ್ಯದಲ್ಲಿ ಉದ್ಯೋಗಾವಕಾಶ ಹೆಚ್ಚುವ ಸಂಭವ ಕಾಣುತ್ತಿಲ್ಲ. ಹೊಸ ಧೋರಣೆ ರೂಪಿಸಿ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು.

ಆತ್ಮನಾ ಆತ್ಮಾನಂ

ಇದುವರೆಗೂ ಇಂಜಿನಿಯರಿಂಗ್ ವಿದ್ಯೆಯಲ್ಲಿ ಪರಿಣತರಾದವರು ಸರಕಾರದ ಶಾಖೆಗಳಲ್ಲಿ ಅಥವಾ ದೊಡ್ಡ ದೊಡ್ಡ ಕಂಟ್ರಾಕ್ಟರ್ ಅಥವಾ ಕೈಗಾರಿಕೆಗಳಲ್ಲಿ ಕೆಲಸ ದೊರಕಿಸಲು ಪ್ರಯತ್ನಿಸುತ್ತಿದ್ದರು. ಕೈಗಾರಿಕಾ ಮಾಲೀಕರಿಗೆ ಅಥವಾ ಕಂಟ್ರಾಕ್ಟರರಿಗೆ ಹಣಕಾಸಿನ ಬೆಂಬಲವಿದ್ದಿರಬಹುದು, ಆದರೆ ನಿಶ್ಚಯವಾಗಿ ಬಹುತೇಕ ಕೈಗಾರಿಕಾ ಮಾಲೀಕರಿಗೆ ಅಥವಾ ಕಂಟ್ರಾಕ್ಟರರಿಗೆ ತಾಂತ್ರಿಕ ಕೌಶಲ್ಯದ ಜ್ಞಾನವಿಲ್ಲ. ತಾಂತ್ರಿಕ ಪರಿಣತಿಯನ್ನು ಹೊಂದಿದ ಇಂಜಿನಿಯರುಗಳು ತಮ್ಮ ಕೌಶಲ್ಯದ ಜೊತೆಗೆ ಆರ್ಥಿಕ ನೆರವನ್ನು ಹೊಂದುವ ತಂತ್ರವನ್ನೂ ಅಭ್ಯಸಿಸಿದರೆ, ಚಿಕ್ಕ ಪಟ್ಟ ಸ್ವಂತದ ಉದ್ಯೋಗ ಪ್ರಾರಂಭಿಸಿದರೆ, ಅವರು ಯಶಸ್ವೀ ಜೀವನ ಹೊಂದುವದು ಸುಲಭಸಾಧ್ಯ.

ಈ ವಿಷಯದಲ್ಲಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳೂ ಸರ್ಕಾರಿ ಸಂಸ್ಥೆಗಳೂ ಇಂಜಿನಿಯರಿಂಗ್ ಅಭ್ಯರ್ಥಿಗಳಿಗೆ ಹೊಸ ಉದ್ಯೋಗ ಸ್ಥಾಪಿಸಲು ಏನೆಲ್ಲ ನೆರವನ್ನು ಕೊಡಲು ಸಿದ್ಧವಾಗಿವೆ. ನಿಷ್ಣಾತ ಉದ್ಯೋಗಾಧಿಪತಿಯು ತಯಾರಿಸುವ ವಸ್ತುಗಳ ಗುಣಮಟ್ಟ ಹೆಚ್ಚಿರಲೂ, ಬೆಲೆ ಮಟ್ಟ ಕಡಿಮೆ ಇರಲೂ ಸಾಧ್ಯವಿದೆ.

ಬಿಡಿಭಾಗಗಳ ಕೊರತೆ

ರೈಲ್ವೆಗಳು ಮತ್ತು ಆಟೊಮೊಬೈಲ್ ಕೈಗಾರಿಕೆಗಳಿಗೆ ವರ್ಷಕ್ಕೆ ಅನೇಕ ಕೋಟಿ ರೂಪಾಯಿ ಮೌಲ್ಯದ ಬಿಡಿಭಾಗಗಳ ಅವಶ್ಯಕತೆಯಿದೆ. ಇಂಜಿನಿಯರಿಂಗ್ ಜ್ಞಾನ ಪಡೆದ ಕುಶಲಕರ್ಮಿಗಳು ಈ ರಂಗವನ್ನು ಪ್ರವೇಶಿಸಿ ಬಿಡಿಭಾಗಗಳ ತಯಾರಿಕಾಕ್ಷೇತ್ರದಲ್ಲಿ ಕ್ರಾಂತಿ ಸಾಧಿಸಬಹುದಾಗಿದೆ. ದೇಶದ ಅನೇಕ ದೊಡ್ಡ ಕೈಗಾರಿಕೆಗಳಿಗೆ ಅನುಬಂಧವಾಗಿ ಬಿಡಿಭಾಗಗಳ, ಚಿಕ್ಕ ಉಪಕರಣಗಳ ಅವಶ್ಯಕತೆ ಬಹಳ ಇದೆ. ರಸ್ತೆ, ಕಟ್ಟಡಗಳ ನಿರ್ಮಾಣ, ಕೆರೆ ಕಾಲುವೆ ರಚನೆಗಳಲ್ಲಿ ಕೋಟಿಗಟ್ಟಲೆ ಹಣ ತೊಡಗಿಸಲ್ಪಡುತ್ತಿದ್ದು, ಇಲ್ಲಿಯೂ ಇಂಜಿನಿಯರಿಂಗ್ ಅಭ್ಯರ್ಥಿಗಳು ಹೊಸ ಉದ್ಯೋಗಾವಕಾಶಗಳನ್ನು ಕಂಡು ಹಿಡಿಯಬಹುದು.

ಸರಕಾರವು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೇ ತಮ್ಮ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹ ನೀಡುತ್ತದೆ. ಸಹಕಾರಿ ತತ್ವದಲ್ಲಿ ಇಂತಹ ಉದ್ಯೋಗಗಳನ್ನೂ ಪ್ರಾರಂಭಿಸಬಹುದಾಗಿದೆ. ದಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡಿಪಾರ್ಟಮೆಂಟಿನವರು ಅಲ್ಪಾವಧಿಯ ವರ್ಗಗಳನ್ನು ನಡೆಸಿ ಚಿಕ್ಕ ಕೈಗಾರಿಕೆಗಳನ್ನು ಹೇಗೆ ಪ್ರಾರಂಭಿಸಬಹುದೆಂಬುದನ್ನು ತಿಳಿಸಿ ಕೊಡುತ್ತಿದ್ದಾರೆ. ಇಂತಹ ವರ್ಗಗಳನ್ನು ಇನ್ನೂ ಅಧಿಕ ಪ್ರಮಾಣದಲ್ಲಿ ಪ್ರಾರಂಭಿಸಬೇಕಾದುದು ಅತ್ಯವಶ್ಯ. ಕುಶಲಕರ್ಮಿಗಳನ್ನೇ ಹೆಚ್ಚಾಗಿ ಸಂಬಂಧಪಟ್ಟ ಕೈಗಾರಿಕೆಗಳು ಭರ್ತಿ ಮಾಡಿಕೊಂಡರೆ, ಉತ್ಪಾದಿತ ವಸ್ತುಗಳ ಗುಣಮಟ್ಟವೂ ಹೆಚ್ಚುವದು; ಇಂಜಿನಿಯರಿಂಗ್ ಜನರಿಗೆ ಉದ್ಯೋಗಾವಕಾಶದ ಸಾಧ್ಯತೆ ವ್ಯಾಪಕವಾಗುವದು.

ತಮ್ಮ ಕಾಲಮೇಲೆ ತಾವೇ ನಿಂತುಕೊಳ್ಳಲು ಇಂಜಿನಿಯರಿಂಗ್ ಪದವೀಧರರು ಪ್ರಯತ್ನಿಸಬೇಕು; ಅದಕ್ಕಾಗಿ ಸಾಹಸ ಮಾಡಬೇಕು. ಅವರ ಆರಂಭಶೂರತ್ವದ ಮೇಲೆ ಸರಕಾರದ ಪ್ರೋತ್ಸಾಹದ ಲಭ್ಯತೆ ಅವಲಂಬಿಸಿದೆ.

ಸದ್ಯಕ್ಕೆ ಸರಕಾರವು ಗ್ರಾಹಕವಸ್ತುಗಳ ಉತ್ಪಾದನೆಯನ್ನು ಅಧಿಕ ಪ್ರಮಾಣದಲ್ಲಿ ಚಿಕ್ಕ ಕೈಗಾರಿಕಾ ಘಟಕಗಳಿಗೇ ವಹಿಸಿ ಕೊಡಲು ಯೋಜಿಸಿದೆ. ಇಂತಹ ಸಂದರ್ಭವು ಉದ್ಯೋಗವನ್ನು ಅರಸುತ್ತಿರುವ ಇಂಜಿನಿಯರಿಂಗ್ ಒಂದು ವರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಗ್ರಾಮ ಜೀವನದಲ್ಲಿ ಒಂದು ಅಪೂರ್ವ ಘಟನೆ!

(ಎರಡನೇ ಪುಟದಿಂದ)

ಜನಾಂಗದ ಮುಖಂಡನೂ ಅವರಲ್ಲಿ ಒಬ್ಬ.

ಗಂಧರ್ವಸಿಂಗ್ ವಿಶ್ರಾಂತಿ ತೆಗೆದುಕೊಳ್ಳಲಿಲ್ಲ. ಅವನ ಈ ಉತ್ಸಾಹದ ಫಲವಾಗಿಯೇ ಇಡೀ ಹಳ್ಳಿ ಬದಲಾವಣೆಗೊಂಡಿತು. ಮೂರು ವರ್ಷಗಳ ಅವಧಿಯಲ್ಲಿ ಈ ಹಳ್ಳಿಯ ಶಸ್ತ್ರಚಿಕಿತ್ಸೆಗೆ ಯೋಗ್ಯರಾದ ಎಲ್ಲಾ ದಂಪತಿಗಳು ಅದನ್ನು ಮಾಡಿಸಿಕೊಂಡರು. ಹೀಗೆ ಕುಟುಂಬಯೋಜನಾ ಉದ್ದೇಶ ನೂರಕ್ಕೆ ನೂರರಷ್ಟು ಕೈಗೂಡಿತು.

ಈಗ ನರಸಿಂಹಗಢಕ್ಕೆ ಹೊಸ ರೂಪು ಬಂದಿದೆ. ಒಂದು ಪ್ರಾಥಮಿಕ ಶಾಲೆ, ಅಚ್ಚುಕಟ್ಟಾದ ಮನೆಗಳು; ಸೈಕಲ್‌ಗಳು ಇತ್ಯಾದಿ ಹೊಸ ಕಾಲದ ಸಂಕೇತಗಳನ್ನು ಅಲ್ಲಿ ಕಾಣಬಹುದು. ಗ್ರಾಮಸ್ಥರಿಗೆ ಈಗ ಸಂತೃಪ್ತಿ ಹಾಗೂ ಸಮಾಧಾನ ದೊರೆತಿದೆ.

NAVAYUGA 19—3—1970
Registered with the Registrar of News Papers for India under No. R. N. 3546/'57

REGD: No: B. G/ 178
LICENCE No: 33;
Licensed to Post without Prepayment

ದ್ರಾ.ಮು.ಕ.ದ ದ್ವಿಮುಖ

ಕೆಲವು ದಿನಗಳ ಹಿಂದೆ ಪಂಜಾಬಿನ ಮುಖ್ಯಮಂತ್ರಿ ಗುರ್ನಾಮ ಸಿಂಘರು (ಅಕಾಲಿದಳ) ತಮಿಳ್ನಾಡಿಗೆ ಬಂದಿದ್ದರು. ಅವರು ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ನಡೆದ ದ್ರಾ. ಮು. ಕ ದ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇನ್ನು ಮುಂದೆ ಈ ಎರಡು ಪಕ್ಷಗಳ ಒಂದು ರೀತಿಯ ಒಗ್ಗಟ್ಟಿಗೆ ಪ್ರಯತ್ನಿಸಿ ಕೇಂದ್ರದಲ್ಲಿ ಸೇರಿ ಇರುವಂತೆ ಪ್ರಯತ್ನಿಸಲಾಗುತ್ತದಲ್ಲದೆ, ಈ ಎರಡು ರಾಜ್ಯಗಳ ನಡುವೆ ಕೆಲವು ಕೊಡು—ತೆಗೆದುಕೊಳ್ಳುವ ರೀತಿಯಲ್ಲಿ ಸಂಬಂಧ ನಡೆಸಲಾಗುವದೆಂದು ಗುರ್ನಾಮ ಸಿಂಘರು ಹೇಳಿದ್ದರು. ಅವರು ಹೋದರು.

ತಮಿಳ್ನಾಡು ವಿಧಾನ ಸಭೆಯಲ್ಲಿ ಕಮ್ಯೂನಿಸ್ಟರ ಕ್ರೂರಕೃತ್ಯಗಳ ವಿಷಯ ವಾಗ್ವಾದ ನಡೆಯಿತು. ಆಗ ಮುಖ್ಯಮಂತ್ರಿ ಕರುಣಾನಿಧಿಯವರು, ಪಂಜಾಬಿನ ಚಂಡೀಘಡದಲ್ಲಿ ಕಮ್ಯೂನಿಸ್ಟರು ಧ್ವಂಸ ಕಾರ್ಯಗಳ ಕುರಿತು ಶಿಕ್ಷಣ ಪಡೆಯುತ್ತಿದ್ದಾರೆಂದು ಹೇಳಿದರು. ಈ ವಿಷಯ ಲೋಕ ಸಭೆಯಲ್ಲಿ ಬಂದಿದ್ದು ಹೆಚ್ಚಿನ ಮಾಹಿತಿಗಳನ್ನು ಒದಗಿಸಬೇಕೆಂದು ಗೃಹ ಮಂತ್ರಿ ಚವಾನರು ಹೇಳಿದ್ದಾರೆ. ನಾಶಕಾರ್ಯ ಪ್ರವೀಣ ಕಮ್ಯೂನಿಸ್ಟ್ ಖದೀಮರ ಬಂಧನ ತಮಿಳ್ನಾಡಿನ ಮದರಾಸ ನಗರದಲ್ಲಿ ನಡೆದಿರುವದು ಇಲ್ಲಿ ಉಲ್ಲೇಖನೀಯ.

ದ್ರಾ. ಮು. ಕ. ಮತ್ತು ಅಕಾಲಿಗಳ ನಡುವೆ ಕಮ್ಯೂನಿಸ್ಟರ ತಂಟೆಯ ಒಪ್ಪಂದವೂ ಆಗಿದೆ ಏನು? ದ್ರಾ.ಮು.ಕ., ಅಕಾಲಿ, ಕಮ್ಯೂನಿಸ್ಟರುಗಳು— ಈ ಮೂವರೂ ಒಂದಾಗುವುದು ಇಂದಿರಾ ಗಾಂಧಿಯ (ಕಾಂ) ಸುತ್ತಮುತ್ತ. [ಈ ಕೆಂಪು ಮುಳ್ಳಾಟವನ್ನು ಬೇರೆ ಯಾರು ಕಟ್ಟಿಕೊಂಡಾರು?]

ಇಂದಿರಾ ಗಾಂಧಿಯವರ ಕುರಿತು ಲೋಕ ಸಭೆಯಲ್ಲಿ ದ್ರಾ. ಮು. ಕ. ದ ಸದಸ್ಯ ಅಣ್ಣನ್‌ರವರು ಭಾವೋದ್ರೇಕದಿಂದ, ಪ್ರಾಮಾಣಿಕತೆಯಿಂದ [with emotion and candour] ಪ್ರಶಂಸಿಸುತ್ತ, ಮಿಸೆಸ್ ಇಂದಿರಾ ಗಾಂಧಿಯವರ ಕೈಗಳನ್ನು ಎಲ್ಲಾ ಪಕ್ಷಗಳೂ ಬಲಪಡಿಸಬೇಕೆಂದು ಹೇಳಿ, ಅಂತಹ ಪ್ರಧಾನಿಯವರನ್ನು ಪಡೆದಿರುವದಕ್ಕಾಗಿ ದೇಶವು ಹೆಮ್ಮೆಪಡಬೇಕೆಂದು ಹೇಳಿದರು. ಅದೇ ಉಸಿರಿನಲ್ಲಿ ಅವರು ಮುಂದರಿಯುತ್ತ, ಹಿಂದಿ ಹಚ್ಚಲು ಉಪಯೋಗವಾಗಿರುವ ನಿಧಿಯು ಶುದ್ಧ ವ್ಯರ್ಥವೆಂದು ತಿಳಿಯಪಡಿಸಿ, ಆ ಹಣವನ್ನು ಅಣೆಕಟ್ಟು ಕಟ್ಟಲು ಉಪಯೋಗಿಸಬಹುದಿತ್ತೆಂದು ಸಲಹೆಯಿತ್ತರು. ಇವು ಅವರ ನಿಷ್ಕಪಟ್ಟ ನುಡಿಗಳಂತೆ! ಇರಲೇ ಬೇಕು. ಬಡಜನರ ಹಣವನ್ನು ಶುದ್ಧ ವ್ಯರ್ಥಮಾಡುತ್ತಿರುವ ಪ್ರಧಾನಿಯವರನ್ನು ಪಡೆದಿರುವದಕ್ಕಾಗಿ ನಾವು ಅಭಿಮಾನ ಪಡದೆ ಇನ್ನಾರು ಅಭಿಮಾನ ಪಡುವದು? ಈ ರೀತಿ ಹಣ ಪೋಲು ಮಾಡಲು ಅವರ ಕೈಗಳನ್ನು ನಾವು ಬಲಪಡಿಸದೆ ಇನ್ನಾರು ಬಲಪಡಿಸುವದು? ಹಣ ಹಾಳುಮಾಡಲು ಕೈ ಬಲವಾಗಿರದಿದ್ದಲ್ಲಿ ಸಾಧ್ಯವೇನು? ಸಂಸತ್ತಿನಲ್ಲಿರುವ ದ್ರಾ.ಮು.ಕ.ದ ಸದಸ್ಯರೆಂಟು ಕೋರು ಕಾಂಗ್ರೆಸ್ಸಿನಿಂದ ಹೊರ ಹೋಗದಂತೆ ಈ ಹಣದಿಂದ ಅಣೆಕಟ್ಟನ್ನು ಕಟ್ಟಬಹುದು. ಎಂತಹ ನಿಷ್ಕಪಟ್ಟ! ತೆರೆದ ಹೃದಯ! ಬಿಚ್ಚು ನುಡಿಗಳು!

ಹೀಗಿದೆ ನಮ್ಮ ದೇಶದ ಇಂದಿನ ಸ್ಥಿತಿ. ದೇಶವನ್ನು ಹಾಳುಗೆಡವುತ್ತಿರುವ ಪ್ರಧಾನಿಯವರು ಕೇಂದ್ರದಲ್ಲಿ, ಅದನ್ನು ಅರಿತು ಅಭಿಮಾನಪಟ್ಟು ಅವರ ಕೈಗಳನ್ನು ಬಲಪಡಿಸುತ್ತಿರುವವರು, ಹಾಗೂ ದೇಶದ್ರೋಹಿಗಳನ್ನು ಬೆಳಸಿ, ತರಬೇತಿ ಕೊಡುತ್ತಿರುವ ಸರ್ಕಾರಗಳು ರಾಜ್ಯದಲ್ಲಿ. ಹಾಗಿರುವಾಗ ಶ್ರೀಸಾಮಾನ್ಯನ ಅವಸ್ಥೆ ಏನು? ಈಗ ಬಡಪಾಯಿ ಮಾಡುವದಾದರೂ ಏನು? ದ್ರಾ.ಮು.ಕ.ದ ದ್ವಿಮುಖವನ್ನು ನೋಡಬೇಕು ಅವನು, ಅಷ್ಟೇ.

— ಶಿವಶಂಕರ

ಸ್ವಾಮಿ ದಯಾನಂದ ಸರಸ್ವತಿ

(ಒಂದನೇ ಪುಟದಿಂದ)

ನೀತಿಯನ್ನು ಬೋಧಿಸಿ ಭಾರತ ದೇಶವನ್ನು ಬ್ರಿಟಿಷರ ಬಂಧನದಿಂದ ಬಿಡಿಸಲಿಕ್ಕೆ ಅನುಗುಣವಾಗುವಂತೆ ಸಮಸ್ತ ನರೇಶರ ಒಕ್ಕೂಟವನ್ನು ಸ್ಥಾಪಿಸಿ ಭರತ ಖಂಡದಲ್ಲಿ ರಾಜಕೀಯ ಕ್ರಾಂತಿಯ ಜ್ವಾಲೆಯನ್ನು ಪ್ರಸಾರಗೊಳಿಸಿದರು.

ಭೋಗವಾಯ ಜೀವನ ವಿಲಾಸದಲ್ಲಿ ಸಿಕ್ಕು ಮುಸಲ್ಮಾನ ವೇಶ್ಯೆಯೊಬ್ಬಳಲ್ಲಿ ಸಹವಾಸವಿರಿಸಿಕೊಂಡು ದುರಾಚಾರಮಯ ಜೀವನದ ಮಡುವಿನಲ್ಲಿ ಮುಳುಗಿಕೊಂಡಿದ್ದ ಜೋಧಪುರದ ನರೇಶ ಮಹಾರಾಜಾ ಯಶ್ವಂತ ಸಿಂಹರಲ್ಲಿ ಅಪೂರ್ವ ಜ್ಞಾನಬೋಧೆಯುಂಟುಮಾಡಿ ಅವರು ತನ್ನ ಪ್ರೇಯಸಿ 'ನನ್ಹೀಜಾನ್'ಳ ಸಹವಾಸಕ್ಕೆ ತಿಲಾಂಜಲಿಯಿತ್ತು ಪವಿತ್ರ ಜೀವನ ಪಥವನ್ನು ಅನುಸರಣೆ ಮಾಡುವ ಚರಿತ್ರಾರ್ಹ ಹಾಗೂ ಮಹಾನ್ ಪವಿತ್ರ ಕಾರ್ಯ ಸ್ವಾಮಿ ದಯಾನಂದರಿಂದ ಆಯಿತು. ಇದರಿಂದ ಕುಪಿತಳಾದ 'ನನ್ಹೀಜಾನ್' ವೇಶ್ಯೆ ಸ್ವಾಮಿ ದಯಾನಂದರ ಅಡಿಗೆಯವ 'ಜಗನ್ನಾಥ ಭಟ್ಟ'ನಲ್ಲಿ ದ್ರವ್ಯ ಲಾಲಸೆ ಪ್ರಚೋದಿಸಿ ಅವನ ಮೂಲಕ ಭಯಾನಕವಾದ ವಿಷ (ಗಾಜಿನ ಪುಡಿ)ವನ್ನು ಹಾಲಿನಲ್ಲಿ ಬೆರಸಿ ಸ್ವಾಮಿ ದಯಾನಂದರಿಗೆ ಪ್ರಯೋಗ ಮಾಡಿಸಿದಳು. ಇದು ತಿಳಿದ ಕೂಡಲೇ ಸ್ವಾಮಿ ದಯಾನಂದರು ಹೂ ಹಿಂಸೆಯ ಕಳವಳಕ್ಕೂ ಒಳಗಾಗದೆ "ಹೇ ಸರ್ವಶಕ್ತಿವಂತ ಪರಮಾತ್ಮ, ನಿನ್ನ ಇಚ್ಛೆ ಪೂರ್ಣವಾಗಿ ನೆರವೇರಲಿ" ಎಂದು ಹೇಳುತ್ತಾ ಘೋರವಾದ ಯಾತನೆಯನ್ನು ತನ್ನ ಅಖಂಡ ಬ್ರಹ್ಮಚರ್ಯದ ಬಲದಿಂದ ಸಹಿಸಿ ಕೊನೆತನಕವೂ ಮುಗುಳುನಗೆಯಿಂದಲೇ ಮಹಾಮೃತ್ಯುವನ್ನು ಜಯಿಸಿ ತನಗೆ ವಿಷ ಉಣಿಸಿದವನನ್ನು ಸಮೀಪ ಕರೆದು "ಭಗವಂತನ ಇಚ್ಛೆ ಹೀಗೆಯೇ ಇತ್ತು. ನೀನು ಮರುಗಬೇಡ; ಇಲ್ಲಿದ್ದರೆ ನಿನಗೆ ಉಳಿಗಾಲವಿಲ್ಲ; ನಾವು ಯಾರನ್ನೂ ಬಂಧನಕ್ಕೊಳಪಡಿಸಲಿಕ್ಕೆ ಬಂದವನಲ್ಲ; ಎಲ್ಲರನ್ನೂ ಬಂಧನದಿಂದ ಮುಕ್ತಗೊಳಿಸುವುದೇ ನನ್ನ ಉದ್ದೇಶ. ನೀನು ಈಗಲೇ ಭಾರತದಿಂದ ಹೊರಗೆ ನೇಪಾಳಕ್ಕೆ ಹೋಗಿ ಬದುಕಿಕೋ" ಎಂದು ಹೇಳಿ ಅತನಿಗೆ ದ್ರವ್ಯವನ್ನು ಕೊಟ್ಟು ಜೀವನದಾನ ಮಾಡಿದ ಮಹಾನ್ ದಯಾನಿಧಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಆದರ್ಶ ಬ್ರಹ್ಮಚಾರಿ ಮಹಾನ್ ವೇದಜ್ಞ ಸ್ವಾಮಿ ದಯಾನಂದ ಸರಸ್ವತಿಯವರು ಶಿವರಾತ್ರಿಯ ತನ್ನ ಜಾಗರಣವನ್ನು ಸಾರ್ಥಕಗೊಳಿಸಿ ವಿಕ್ರಮ ಶಕ ೧೯೪೦ ಕಾರ್ತಿಕ ಮಾಸ ವರಕ ಚತುರ್ದಶಿಯ ಸೂರ್ಯಾಸ್ತಮಾನಕ್ಕೆ ಸರಿಯಾಗಿ (ಕ್ರಿಸ್ತಶಕ ೧೮೮೩) ದೀಪಾವಳಿಯ ಮಹೋತ್ಸವದಂದು ದೇಶವೆಲ್ಲವೂ ದೀಪಗಳಿಂದ ಬೆಳಗುತ್ತಿರುವಾಗ ತನ್ನ ಜೀವನದ ಅಂತಿಮ ಜ್ಯೋತಿಯಿಂದ ದೀಪಾವಳಿಯ ದೀಪಗಳನ್ನು ಮತ್ತಷ್ಟು ಜ್ಯೋತಿರ್ಮಯವಾಗಿ ಬೆಳಗಿಸಿ ಮಹಾಪ್ರಸ್ಥಾನಗೈದು ವಿಶ್ವವಂದಿತರಾಗಿ ಇಂದಿಗೆ ೧೯೬ ವರ್ಷಗಳು ಉರುಳಿವೆ. ಸ್ವಾಮಿ ದಯಾನಂದರ ಕೀರ್ತಿ ಜ್ಯೋತಿಯು ಯುಗಯುಗಾಂತರವೂ ಬೆಳಗುತ್ತಿದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪುತ್ತೂರು
ಪ್ರಿನ್ಸಿಪಾಲ್ ಮುಂ. ಕೋರ್ಟಿನಲ್ಲಿ
S. C. 117/69

ಪುಷ್ಪದ ದ್ಯಾವಿ—ವಾದಿ
ಮತ್ತು
ಸುಬ್ಬಯ್ಯ ರೈ—ಪ್ರತಿವಾದಿ

ಪ್ರತಿವಾದಿ— ಸುಬ್ಬಯ್ಯ ರೈ, ತೀಲಪ್ಪ ಹೆಂಗ್ಸಿನ ಮಗ, ಪುತ್ತೂರು ತಾಲ್ಲೂಕು ಒಳಮೊಗ್ರು ಗ್ರಾಮದ ದುಗರಮೂಲೆ ಎಂಬಲ್ಲಿ. Post Kaikara. (S. K.) ಇವರಿಗೆ—

ವಾದಿಯು ದಾವಾ ಪ್ರೋ. ನೋಟಿನ ಅಪೇಕ್ಷು ವಸೂಲು ಬಗ್ಗೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 23.3.70ಕ್ಕೆ ಮುಂದೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದು ಯಾ ವಕೀಲ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದರೆ ಕೋರ್ಟಿನ ವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಲಾಗಿಯದೆ.

(By order of the Court)
Sd/- K. Raghunath Rai
Advocate for Plaintiff.
Puttur. S.K. 7-3-70.

Edited, Printed & Published by K. H. Shetty at the Navayuga Press, Udipi. S. India.

NAVAYUGA 26—3—1970 ಸಂಪುಟ 49 ಸಂಚಿಕೆ 29

ದ್ರಾ. ಮು. ಕ. ದ್ವೇಷಾಗ್ನಿಗೆ -ಕಾಮರಾಜರ ಕಾಷ್ಟ

ಲೇಖಕರು: ಶ್ರೀ ಶಿವಶಂಕರ,

ತಿರುಚಿನಾಪಳ್ಳಿಯಲ್ಲಿ ಆ ಜಿಲ್ಲೆಯ ದ್ರಾವಿಡ ಮುನ್ನೇಟ್ರ ಕಳಗಮಿನ ಸಮ್ಮೇಳನ ನಡೆದಾಗ, ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಅದರ ದುರ್ಲಾಭ ಪಡೆದು "ಸಿಂಡಿಕೇಟ್ ಕಾಂಗ್ರೆಸ್ಸು" ದ್ರಾ. ಮು. ಕ.ಕ್ಕೂ ತಮಿಳುನಾಡು ಸರಕಾರಕ್ಕೂ ತೊಂದರೆಯನ್ನು ಕೊಡಲಿರುವುದರ ಮೇಲೆ ಸರಕಾರವು ಎಚ್ಚರಿಕೆಯಿಂದ ಕಣ್ಣಿಡಬೇಕೆಂದು ಜನರಲ್ ಕೌನ್ಸಿಲಿನ ಸದಸ್ಯರು ಸರಕಾರವನ್ನು ಆಗ್ರಹಪಡಿಸಿರುತ್ತಾರೆ.

ಅದಕ್ಕೆ ಕಾರಣ ಇದ್ದೇ ಇದೆ. ಸಿಂಡಿಕೇಟ್ ಕಾಂಗ್ರೆಸ್ಸೆಂದರೆ ಮನಸ್ಸಿನೆದುರು ಬರುವದು ತಿರು ಕಾಮರಾಜರ ಆಕೃತಿ. ಶ್ರೀಯುತರನ್ನು 'ರಾಜ ರಚನಾಕಾರ' ರೆಂದು ಹೇಳುತ್ತಿದ್ದುದ್ದುಂಟು. ಆ ಕಾಲ ಕಳೆದು ಹೋಯಿತು. ಅದರಲ್ಲೂ ಅವರು ರಾಜನ ಬದಲು ರಾಣಿಯನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿದ್ದೇ ತಡ ಕಾಮರಾಜರು ಕಾಲು ಕೀಳಲೇಬೇಕಾಯಿತು. ಆಟ ನಡೆಯುದಿರುವದನ್ನು ಕಂಡ ಕಾಮರಾಜರು ಇನ್ನೊಂದಾಟವನ್ನಾಡುತ್ತಿದ್ದಾರೆ— ಅದುವೇ ತನ್ನ ವೈಯಕ್ತಿಕ ವೈರಿಯ ಮೇಲೆ ರಾಜಕೀಯ ರಣವನ್ನು ಘಂಬಿಸುವದಿದೆ. ಅಧಿಕಾರದ ಅಮಲಿನಲ್ಲಿರುವ ದ್ರಾ.ಮು.ಕ.ಕ್ಕೆ ಹಿಂದಿ ದ್ವೇಷದ ಚೇಳುಗಳಿಂದ ಕುಟುಕಿಸಿ ತಮಾಷೆ ನೋಡಬೇಕೆಂದಿದ್ದಾರೆ ಶ್ರೀಯುತರು. ದ್ರಾ.ಮು.ಕ.ವಾದರೋ ಬೀದಿ ಬೊಬ್ಬಾಟದಿಂದ ಅಧಿಕಾರದಾಸನದ ಮೇಲಕ್ಕೆ ಬಂದಿರುತ್ತದೆ. ಅಂದರೆ ಅವಿಷ್ಟಾದರೂ ಜವಾಬ್ದಾರಿಯ ಅರಿವು ಅದಕ್ಕಾಗಬೇಕು. ಆ ದೃಷ್ಟಿಯಿಂದ ದ್ರಾ.ಮು.ಕ. ಜನರಲ್ ಕೌನ್ಸಿಲ್ ಸರಕಾರಕ್ಕೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.

ಅದಕ್ಕೆ ಸಿಂಡಿಕೇಟ್ ಕಾಂಗ್ರೆಸ್ಸ್ ತಥಾ ಕಾಮರಾಜರು ಮಾಡಿರುವದಾದರೂ ಏನೆಂಬ ಪ್ರಶ್ನೆ ಬರಲು ಸಾಧ್ಯವಿದೆ. ಸೇಲಮಿನಲ್ಲಿ ಸಿಂಡಿಕೇಟ್ ಕಾಂಗ್ರೆಸ್ಸಿನ ಒಂದು ಸಮ್ಮೇಳನ ನಡೆಯಿತು. ಅಲ್ಲೇ ಅವರು ಸೇಲಂ ಜಿಲ್ಲಾ ರಾಷ್ಟ್ರೀಯ ವಿದ್ಯಾರ್ಥಿಗಳ ತಮಿಳು ಅಭಿವೃದ್ಧಿ ಸಮ್ಮೇಳನದ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಸಮ್ಮೇಳನಕ್ಕೆ ಸೇರಿಸಿಕೊಂಡಿದ್ದರು. ವಿದ್ಯಾರ್ಥಿ ಸಮ್ಮೇಳನಕ್ಕೆ ಆಹ್ವಾನವನ್ನಿತ್ತವರು ಮಿಸ್ಟರ್ ದಂಡಪಾಣಿ. ಅವರು ತಮ್ಮ ಭಾಷಣದಲ್ಲಿ ದ್ರಾ. ಮು. ಕ. ಕ್ಕೆ ಪ್ರಧಾನಿಯವರ ಬಳಿ ಇರುವ 'ಸಂಬಂಧ' ವನ್ನುಪಯೋಗಿಸಿಕೊಂಡು ದ್ರಾ.ಮು.ಕ. ಸರಕಾರ ಹಾಗೂ ಅದರ ಸಂಸತ್ತಿನ ಸದಸ್ಯರು ಸಂವಿಧಾನದಲ್ಲಿ ಸಂಯುಕ್ತ ರಾಜ್ಯಗಳ ಸರಕಾರೀ ಭಾಷೆಗೆ ಸಂಬಂಧಿಸಿರುವ ಹದಿನೇಳನೆಯ ಭಾಗವನ್ನು ತೆಗೆದು ಹಾಕುವಂತೆ ನೋಡಿಕೊಳ್ಳಬೇಕೆಂದು ಹೇಳಿದರು. ದ್ರಾ.ಮು.ಕ. ಅದಕ್ಕೆ ಮುಂದೆ ಬರದಿದ್ದಲ್ಲಿ ವಿದ್ಯಾರ್ಥಿ ಸಮ್ಮೇಳನವು ಹೋರಾಟ ನಡೆಸುವದಾಗಿ ಅವರೇ ಬೆದರಿಸಿರುವರಲ್ಲದೆ ವಿದ್ಯಾರ್ಥಿ ವರ್ಗವು ತಿರು ಕಾಮರಾಜರಿಗೆ ಸ್ವಾಮಿ ನಿಷ್ಠೆಯಿಂದಿದೆಂದೂ ತಮ್ಮ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸಿರುವರು. ಇಂತಹ ಹೋರಾಟ (ಪರೀಕ್ಷೆಯ ಸಮಯದಲ್ಲಿ) ದ್ರಾ. ಮು. ಕ.ಕ್ಕೇನೂ ಹೊಸದಲ್ಲ. ಆದಕ್ಕೀಗ ಅವರು ಅಂಜುವವರಲ್ಲ. ವಿದ್ಯಾರ್ಥಿರಂಗದಲ್ಲಿ ತಮ್ಮ ಹಿಂಬಾಲಕರ ಸಂಖ್ಯೆಯನ್ನು ಹೆಚ್ಚಿಸಲು ದ್ರಾ. ಮು. ಕ. ಮುತವರ್ಜಿಯಿಂದ ಮುಂದಕ್ಕೆ ಬಂದಿರುತ್ತದೆ. ಅವರ ಕಿವಿಗೆ ಕೇಳಿಸಿದ್ದು ತಿರು ಕಾಮರಾಜರ 'ನುಡಿಮುತ್ತುಗಳು'. ಅವರು ತಮ್ಮದೇ ಆದ ವಿಶಿಷ್ಟರೀತಿಯ ಭಾಷಣದಲ್ಲಿ ಹಿಂದಿಗೆ ಸರಕಾರೀ ಅಂತಸ್ತನ್ನಿತ್ತಿರುವ ಘಟನೆಯ ಅಂಶವನ್ನು ತೆಗೆದು ಹಾಕುವಂತೆ ಕೇಂದ್ರ ಸರಕಾರವನ್ನು ದ್ರಾ ಮು ಕ. ಸರಕಾರ ಒತ್ತಾಯಿಸಿ ನೋಡಲೆಂದು ಕರೆಯುತ್ತಿದ್ದರು. ದ್ರಾ.ಮು.ಕ.ಕ್ಕೆ ಇದೇ ಸರಿಯಾದ ಸಮಯ, ಪ್ರಧಾನಿ ಇಂದಿರಾ ಗಾಂಧಿಯವರು ಸಂಸತ್ತಿನಲ್ಲಿ ತಮ್ಮ ಉಳಿವಿಗಾಗಿ ದ್ರಾ. ಮು. ಕ. ದ ಇಪ್ಪತ್ತೈದು ಸದಸ್ಯರನ್ನು ನಂಬಿಕೊಂಡಿರುವ ಸಂದಿಗ್ಧ ಪರಿಸ್ಥಿತಿಯನ್ನುಪಯೋಗಿಸಿಕೊಳ್ಳಲೇ ಬೇಕು. ತಮ್ಮ ಹಿಂದಿ-ವಿರುದ್ಧ ನಿಲುವನ್ನು ಪ್ರಧಾನಿಯವರಿಂದ ಒಪ್ಪಿಸಿಕೊಳ್ಳಲೇ ಬೇಕೆಂದು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಹಾಗೂ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು ಅಲ್ಲಿ ಹೇಳಿದರು.

ಆದಕ್ಕೆ ದ್ರಾ. ಮು. ಕ ಬೆದರಬೇಕೇನು? ಅವರ ಅಂಜಿಕೆಗೆ ಕಾರಣ ಇದ್ದೇ ಇದೆ. ಅದರಲ್ಲಿ ಕಲ್ಪನ ಮತ್ತು ಯೂ ವಾಗಲಿ ಸ್ವಲ್ಪಸ್ವಲ್ಪಂತೆ ದ್ರಾ. ಮು. ಕ. ದ ಪಾಡೂ ಹಾಗೆಯೇ ಆಯಿತು. ಜನ್ಮತಃ ಅದು ಹಿಂದೀ-ವಿರೋಧಿ. ಅದರ ಸ್ಥಾಪಕ ತಿರು ಅಣ್ಣಾದುರೈಯವರು ತಾವು ನೆಹರೂ-ಹಿಂದಿಯನ್ನು ವಿರೋಧಿಸುವವರಾಗಿಯೂ, ಅಟಲ ಬಿಹಾರಿ ವಾಜಪೇಯಿ ಹಿಂದಿಯನ್ನು ಸ್ವೀಕರಿಸುವದಾಗಿಯೂ ಸಾರ್ವಜನಿಕ ಸಭೆಯಲ್ಲಿ ಸೂಚಿಸಿರುವರಾದರೂ ಆ ದ್ವೇಷಾಗ್ನಿಯನ್ನು ಕಾದಿಟ್ಟುವದರಿಂದಲೇ ತಮ್ಮ ಕಳಗಂ ಬಿಸಿಯಾಗಿರುವದೆಂಬುದನ್ನು ಅವರೆಂದೂ ಮರೆತಿರಲಿಲ್ಲ. ಅವರು ಕಾಲವಾಗಿರುವ ಜ್ಞಾಪಕಾರ್ಥವಾಗಿ (ಇಪ್ಪತ್ತೈದು ಮತಗಳನ್ನಿತ್ತು ಬೆಂಬಲಿಸಿರುವ ಉಪಕಾರ ಸ್ಮರಣಾರ್ಥವಾಗಿ) ದಿಲ್ಲಿ ಸರಕಾರವು ಅಂಚೆ ಚೀಟಿಯನ್ನು ಪ್ರಕಟಿಸಿತು. ತಿರು ಅಣ್ಣಾದುರೈಯವರ ಕಾಲದಲ್ಲಿ ತಮಿಳುನಾಡಿನಲ್ಲಿ ಅಂತಾರಾಷ್ಟ್ರೀಯ ತಮಿಳು ಸಮ್ಮೇಳನ ನಡೆದಾಗ ಭಾರತ ಸರಕಾರವು ತಮಿಳುನಾಡ ಸರಕಾರದ ಒಪ್ಪಿಗೆಯನ್ನು ಪಡೆದು ಒಂದು ಅಂಚೆ ಚೀಟನ್ನು ಪ್ರಕಟಿಸಿತು. ಆ ಸಮಾರಂಭದಲ್ಲಿ ಆಗಿನ ಮುಖ್ಯಮಂತ್ರಿ ತಿರು ಅಣ್ಣಾದುರೈಯವರು ಮದ್ರಾಸಿನಲ್ಲಿ ಭಾಗವಹಿಸಬೇಕಾಗಿತ್ತು. ಕೊನೆಯ ನಿಮಿಷದಲ್ಲಿ ನಡೆದದ್ದೇನ? ಅಂಚೆ ಚೀಟಿಯಲ್ಲಿ ಹಿಂದಿಯಲ್ಲಿ ಏನೋ ಬರೆದಿದೆಯೆಂಬ ಏಕಮೇವ ನೆವನವನ್ನು ಮುಂದಿಕ್ಕಿಟ್ಟು ತಿರು ಅಣ್ಣಾದುರೈಯವರು ಅದರಲ್ಲಿ ಭಾಗವಹಿಸಲಿಲ್ಲ. ಇದು ಅನ್ಯಾನ್ಯ ರಾಷ್ಟ್ರಗಳಿಂದ ಬಂದಿದ್ದವರಿಗೆ ಆಶ್ಚರ್ಯವನ್ನುಂಟುಮಾಡಿದ ವಿಷಯವಾಗಿತ್ತು. ಈಗ! ಅಂಚೆ ಚೀಟಿಯಲ್ಲಿ ಅಣ್ಣಾದುರೈಯವರ ಹೆಸರೂ ಹಿಂದಿಯಲ್ಲಿ (!) ಇದೆ. ಅಂದರೆ ದೇವನಾಗರಿ ಲಿಪಿಯಲ್ಲಿದೆ. ಅಲ್ಲದೆ ಮೊದಲ ದಿವಸ ಪ್ರಕಟಿಸಿರುವ ಕವರುಗಳನ್ನು ನೋಡಬೇಕು. ಎಲ್ಲೆಲ್ಲಿ ಹಿಂದಿಯೇ ಹಿಂದಿ. ತಿರು ಅಣ್ಣಾದುರೈಯವರ ಅನುಸಾರಕರು ಅದಕ್ಕೆ ಯಾವ ವಿರೋಧವನ್ನ ವ್ಯಕ್ತಪಡಿಸಲಿಲ್ಲ. ಮಾತ್ರವಲ್ಲ, ಭಾರೀ ಸಮಾರಂಭದಿಂದ ಅಂಚೆ ಚೀಟಿಯನ್ನು ಹಂಚಲಾಯಿತು. ಅಬ್ಬಾ! ಅದಕ್ಕೆ ನಗ್ಗಾಟವೇ! ಮುಖ್ಯಮಂತ್ರಿಯವರೇ ಮುಂದಕ್ಕಿರುವಾಗ ಹಿಂಬಾಲಕರ ವಿಷಯ ಕೇಳಬೇಕೇ? ಈ ರೀತಿ ಹಿಂದಿ ದ್ವೇಷಾಗ್ನಿಯ ಉದರದಿಂದ ಬಂದಿರುವ ದ್ರಾ. ಮು. ಕ.ವು ಅಣ್ಣಾದುರೈಯವರ ಸಮಾಧಿಯ ಮೇಲೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಇಪ್ಪತ್ತೈದು ಮತಗಳನ್ನಿತ್ತು ಹಿಂದಿಯನ್ನು ಬರಮಾಡಿಕೊಂಡಿತು.

ಅದಕ್ಕಿಂತ ಹಿಂದೆ ಇನ್ನೊಂದು ಘಟನೆ ನಡೆದಿರುತ್ತದೆ. ಎನ್.ಸಿ.ಸಿ.ಯ ಆಜ್ಞಾಪದಗಳು ಹಿಂದಿಯಲ್ಲಿವೆಯೆಂಬ ಕಾರಣದಿಂದಾಗಿ ತಮಿಳುನಾಡಿನಲ್ಲಿ ಎನ್. ಸಿ. ಸಿ. ನಿಲ್ಲಿಸಲಾಗಿತ್ತು. ಇತ್ತೀಚೆಗೆ ಕೇಂದ್ರ ಸರಕಾರಕ್ಕೂ ತಮಿಳುನಾಡು ಸರಕಾರಕ್ಕೂ ಒಂದು ಮಾತುಕತೆ ನಡೆದು ಪುನಃ ಎನ್. ಸಿ. ಸಿ. ಆರಂಭ ಆಗಿರುತ್ತದೆ. ಅವರ ನಡುವೆ ನಡೆದ ಒಪ್ಪಂದವೇನು? ಹಿಂದಿ ಶಬ್ದಗಳನ್ನು ಕೋಣೆಯೊಳಗೆ ಮಾತ್ರ ಉಪಯೋಗಿಸಬೇಕು ಮೈದಾನದಲ್ಲಿ ಆಂಗ್ಲ ಭಾಷೆಯಲ್ಲೇ ಕವಾಯತು ನಡೆಯಬೇಕು. ಅಂತೂ ಬಹಿರಂಗವಾಗಿ ಅಲ್ಲವಾದರೂ, ಹಿಂದಿನ ಬಾಗಿಲಿನಿಂದಲೋ, ಹೃದಯ ಶುದ್ಧದಿಂದಲೋ ಹಿಂದಿಯು ಆಜ್ಞೆ ತಮಿಳು ನಾಡಿಗೆ ಬಂತು. ಇದನ್ನು ದ್ರಾ. ಮು. ಕ. ಎದುರಿಸಲಿಲ್ಲ.

ಅದು ಮಾತ್ರವಲ್ಲ, ಶ್ರೀಮತಿ ಇಂದಿರಾಜಿಯವರು ರಾತ್ರಿ ಹಗಲೂ ತಮಿಳುನಾಡಿನ ಕುರಿತು ಯೋಚನೆ ಮಾಡುತ್ತಿದ್ದು ಆಗಾಗ (ರಾತ್ರಿ?) ಬಂದು ಹೋಗಲಾರಂಭಿಸಿದುದರಿಂದ ದ್ರಾ.ಮು.ಕ. ದವರು ಉತ್ತರದವರ ಮೇಲೆ ಬೆಂಕಿ ಕಾರುವದನ್ನೂ ಹಿಂದಿಯನ್ನು ಹೀಯಾಳಿಸುವದನ್ನು ನಿಲ್ಲಿಸಿರುವದನ್ನು ಗಮನಿಸಬಹುದು.

ಹೀಗೆ ಕ್ರಮಶಃ ಹಿಂದಿ ತಮಿಳುನಾಡಿನ ಸರಕಾರೀ ರಂಗದಲ್ಲಿ ಕಾಲಿಡುತ್ತಿರುವದನ್ನು ತಿರು ಕಾಮರಾಜರು ಕಂಡರು. ಹಿಂದೆ ಹಿಂದಿ ವಿರುದ್ಧ ದ್ವೇಷಾಗ್ನಿ ಭುಗಿಲ್ಲೆದ್ದಾಗ ತಿರು ಕಾಮರಾಜರದಕ್ಕೆ ಕಾಷ್ಟವನ್ನೊದಗಿಸಿದವನ್ನು ಕೊಬ್ಬನ್ನು ಸುರಿಯುವದನ್ನು ಇಷ್ಟು ಬೇಗನೆ ಹೆಚ್ಚಿನವರು ಮರೆತಿರಲಿಕ್ಕಿಲ್ಲ. ಅದು ಮರಸಲೇ

(ಎಂಟನೇ ಪುಟ ನೋಡಿರಿ)

ವಿದ್ಯುತ್ ಅಭಿವೃದ್ಧಿಯಲ್ಲಿ ಸಂಶೋಧನೆಯ ಪಾತ್ರ

ಲೇಖಕರು: ಪ್ರೊ ಸಿದ್ಧೇಶ್ವರ ಪ್ರಸಾದ್
ಕೇಂದ್ರ ನೀರಾವರಿ, ವಿದ್ಯುತ್ ಶಾಖೆ ಉಪಸಚಿವರು.

ಅಭಿವೃದ್ಧಿ ರಂಗದಲ್ಲಿ ಈ ದಶಕ ನಿರ್ಣಾಯಕ ಪಾತ್ರ ವಹಿಸುತ್ತದೆ. ಇದರಲ್ಲಿ ನೀರಾವರಿ ಮತ್ತು ವಿದ್ಯುತ್ತಿನ ಸಜೀವ ಪಾತ್ರವನ್ನು ಕಡೆಗಣಿಸುವಂತಿಲ್ಲ. ವಿದ್ಯುತ್ತನ್ನು ಅಲ್ಪ ವೆಚ್ಚದಲ್ಲಿ ತಯಾರಿಸಿ ಕೈಗಾರಿಕೆಗಳು ಮತ್ತು ದೂರದ ಗ್ರಾಮಪ್ರದೇಶಗಳಿಗೆ ಅಗತ್ಯವಾಗುವಷ್ಟು ಸರಬರಾಜು ಮಾಡುವುದರ ಮೇಲೆ ದೇಶದ ಆರ್ಥಿಕಾಭಿವೃದ್ಧಿ ಅವಲಂಬಿತವಾಗಿದೆ. ಇದೇ ರೀತಿ ಕೃಷಿ ಉತ್ಪಾದನೆ ತ್ವರಿತಗೊಳಿಸಬೇಕಾದರೆ ವಿವಿಧ ನೀರಾವರಿ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯ ವಿಸ್ತರಿಸಬೇಕಲ್ಲದೆ ಅಧಿಕ ಪ್ರಮಾಣದಲ್ಲಿ ಕೊಳವೆಬಾವಿಗಳು ಮತ್ತು ಪಂಪುಸೆಟ್‌ಗಳಿಗೆ ಹೆಚ್ಚು ವಿದ್ಯುತ್ ಸರಬರಾಜು ಮಾಡಬೇಕಾಗುತ್ತದೆ.

ವಿದ್ಯುಚ್ಛಕ್ತಿ ಮತ್ತು ನೀರಿನ ಪಾತ್ರಗಳು ಪರಸ್ಪರ ಪೂರಕವಾಗಿವೆ. ಜಲಪಾತದಿಂದ ಧುಮುಕುವ ನೀರನ್ನು ಜಲಚಕ್ರ ತಿರುಗಿಸಲು ಬಳಸಿಕೊಂಡು ಮನೆ, ಭೂಮಿ, ಕೈಗಾರಿಕೆಗಳಿಗೆ ವಿದ್ಯುತ್ ಸರಬರಾಜು ಮಾಡುವಂತೆ ಮಾಡಲಾಗುತ್ತದೆ. ನೀರಾವರಿಗಾಗಿ ಭೂಮಿಯ ಮೇಲಿರುವ ಮತ್ತು ಅಂತರ್ಗತ ಜಲವನ್ನು ಎತ್ತಲು, ಗೃಹ ಬಳಕೆ ಮತ್ತು ಕೈಗಾರಿಕಾ ನೀರು ಸರಬರಾಜಿಗಾಗಿ ವಿದ್ಯುತ್ ಬಳಸಲಾಗುತ್ತದೆ. ಆದ್ದರಿಂದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಯುಕ್ತ ಯೋಜನೆ ಅಗತ್ಯವಾಗುತ್ತದೆ.

ಆಧುನಿಕ ನಿರ್ಮಾಣ ತಂತ್ರ

ದೇಶದ ಗ್ರಾಮ ವಿದ್ಯುದೀಕರಣ ವಿಸ್ತರಣೆಗೆ ಯೋಜನೆ ರೂಪಿಸಲಾಗಿದೆ. ತೀವ್ರ ಬೇಸಾಯಕ್ಕೆ ಅಗತ್ಯವಾಗುವ ಪಂಪ್‌ಸೆಟ್‌ಗಳು, ಸಣ್ಣ ಪ್ರಮಾಣದ ಗ್ರಾಮೀಣ ಕೈಗಾರಿಕೆಗಳು, ನದಿ ಮತ್ತು ಬಾವಿಗಳಿಂದ ಎತ್ತುವ ನೀರಾವರಿ ಕಾರ್ಯಕ್ಕೆ ಹಾಗೂ ಮನೆ ಬೆಳಗಿಸಲು, ವಿದ್ಯುತ್ ವೈರ್‌ಗಳ ವಿಸ್ತರಣೆ ಅಗತ್ಯವಾಗುತ್ತದೆ. ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ವಿದ್ಯುತ್ ಪ್ರಸಾರ ಪದ್ಧತಿಗಳನ್ನು ಪರಮಾವಧಿ ಸೌಲಭ್ಯಕ್ಕಾಗಿ ಬಳಸಿಕೊಳ್ಳಬೇಕಾಗುತ್ತದೆ. ವಿದ್ಯುತ್ ಉತ್ಪಾದನೆ ಮತ್ತು ಹಂಚಿಕೆಯಲ್ಲಿ ದಕ್ಷತೆಯಿದ್ದರೆ ಗ್ರಾಹಕರಿಗೆ ನೀಡುವ ವಿದ್ಯುತ್ತಿನ ಬೆಲೆ ಮಿತವ್ಯಯವಾಗುತ್ತದೆ. ಹೆಚ್ಚು ವಿದ್ಯುತ್ತನ್ನು ಉಚಿತ ಬೆಲೆಗೆ ಉತ್ಪಾದಿಸಬೇಕಾಗಿದೆ. ಇದಕ್ಕೆ ನಿರ್ಮಾಣ ವೆಚ್ಚ ತಗ್ಗಿಸುವುದು ಅಗತ್ಯವಾದ್ದರಿಂದ ಮಿತವ್ಯಯಕಾರಿ ವಿನ್ಯಾಸಗಳು ಮತ್ತು ಆಧುನಿಕ ನಿರ್ಮಾಣ ತಂತ್ರಗಳನ್ನು ಅಳವಡಿಸಬೇಕಾಗುತ್ತದೆ.

ಅತ್ಯುನ್ನತ ವಿದ್ಯುತ್ ಪ್ರವಾಹ ನೊತ್ತವಿರುವ ಕಡೆಯಲ್ಲಿ ಮಿತವ್ಯಯದಿಂದ ವಿದ್ಯುತ್ ಅಭಿವೃದ್ಧಿ ಮಾಡಬೇಕಾಗಿದೆ. ಅತ್ಯುನ್ನತ ವೋಲ್ಟೇಜಿನ ವಿದ್ಯುತ್ ಪ್ರಸಾರವನ್ನು ಅವಲಂಬಿಸುವಿಕೆ ತೀವ್ರಗತಿಯಲ್ಲಿ ಮುಂದುವರಿಯುತ್ತಿದೆ. ಪ್ರಾದೇಶಿಕ ವಿದ್ಯುತ್ ಅಸಮತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಪ್ರಾದೇಶಿಕ ವಿದ್ಯುತ್‌ಜಾಲಗಳನ್ನು ಆರಂಭಿಸಲಾಗುತ್ತಿದೆ. ಪರಮಾವಧಿ ಪ್ರಯೋಜನ ಪಡೆಯಲೆಂದು ಈ ರೀತಿ ವಿದ್ಯುತ್ ಸರಬರಾಜಿನಲ್ಲಿ ಸಂಘಟನೆ ಏರ್ಪಡಿಸಲಾಗುತ್ತಿದೆ.

1961—1962ನೇ ವಾರ್ಷಿಕ ಸಾಲಿನಷ್ಟು ಹಿಂದೆಯೇ ವಿದ್ಯುತ್ ತಾಂತ್ರಿಕ ಶಾಸ್ತ್ರದ ಬಗ್ಗೆ ಮೂಲ ಸಂಶೋಧನೆ ಕಾರ್ಯ ಆರಂಭಿಸಲಾಯಿತು. ಈಗ ಏಳು ಸಂಶೋಧನಾ ಕೇಂದ್ರಗಳು ಈ ಕಾರ್ಯ ಕೈಗೊಂಡವು. ಈಗ 18 ಸಂಶೋಧನಾ ಕೇಂದ್ರಗಳು ಈ ಕಾರ್ಯದಲ್ಲಿ ನಿರತವಾಗಿರುವುದು ಸಂತಸದ ಸುದ್ದಿಯಾಗಿದೆ. ಒಂದು ಸಂಸ್ಥೆಯು ಸಂಶೋಧನೆ ವಿಜ್ಞಾನ ಪ್ರತಿಭಾ ಪ್ರದರ್ಶನಕ್ಕೆ ಅತಿ ಮಹತ್ವದ ಕಾಣಿಕೆ ಸಲ್ಲಿಸಲಾರದೆಂಬ ಅಂಶವನ್ನು ಮನಗಾಣಬೇಕಾಗಿದೆ. ಅನೇಕ ಸಂಶೋಧನ ಸಂಸ್ಥೆಗಳ ಸಂಘಟಿತ ಕಾರ್ಯ ಅಭಿವೃದ್ಧಿ ಕಾರ್ಯಕ್ರಮದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುತ್ತವೆ. ವಿಜ್ಞಾನಿಗಳು, ಕ್ಷೇತ್ರ ಹಾಗೂ ವಿನ್ಯಾಸ ರಚನಾ ಇಂಜಿನಿಯರುಗಳು ಜೊತೆಗೂಡಿ ಸಂಯುಕ್ತ ಸಂಶೋಧನಾ ಕಾರ್ಯಕ್ರಮ ರೂಪಿಸಲಾಗಿದೆ.

ವಿದ್ಯುತ್ ಸಂಶೋಧನಾ ಕಾರ್ಯ

ಕಳೆದ ಎರಡು ಯೋಜನೆಗಳ ಅವಧಿಯಲ್ಲಿ ಗ್ರಾಮ ವಿದ್ಯುದೀಕರಣ ಕಾರ್ಯ ಭರದಿಂದ ಸಾಗಿತು. ಆದರೆ 1969ನೇ ಇಸವಿ ಮಾರ್ಚಿ ಮಾಸಾಂತ್ಯದಲ್ಲಿ ಶೇಕಡ 13ರಷ್ಟು ಗ್ರಾಮಗಳಿಗೆ ಮಾತ್ರ ವಿದ್ಯುತ್ ಸೌಲಭ್ಯ ದೊರಕಿತ್ತು. ಸುಮಾರು ಏಳು ರಾಜ್ಯಗಳಲ್ಲಿ ವಿದ್ಯುದೀಕರಣ ಸೌಲಭ್ಯ ಪಡೆದಿರುವ ಗ್ರಾಮಗಳು ಶೇಕಡ 10 ಕ್ಕಿಂತಲೂ ಕಡಿಮೆಯಿವೆ. ಆಹಾರ ಉತ್ಪಾದನೆಯ ಸಂವರ್ಧನೆಗಾಗಿ ವಿದ್ಯುತ್ ಬಳಕೆಯ ಕಾರ್ಯ ತೀವ್ರ ಪ್ರಗತಿ ಸಾಧಿಸಿದೆ. 1969ನೇ ಇಸವಿ ಮಾರ್ಚಿ ಮಾಸಾಂತ್ಯದ ವರೆಗೆ ಸುಮಾರು 11 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸೌಲಭ್ಯ ವಿಸ್ತರಿಸಲಾಗಿತ್ತು. ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಯಪ್ರಗತಿ ಅದ್ಭುತವಾಗಿದೆ. ಇಂದು ಆಹಾರ ಉತ್ಪಾದನೆಯು ಏರಿಕೆ ಮತ್ತು ಗ್ರಾಮ ಅಭಿವೃದ್ಧಿಗಾಗಿ ರೈತರನ್ನು ಒತ್ತಾಯ ಮಾಡಬೇಕಾಗಿಲ್ಲ. ಇಂದು ರಾಜ್ಯ ವಿದ್ಯುತ್ ಮಂಡಳಿಗಳಲ್ಲಿ ಗ್ರಾಮಾಂತರ ಪ್ರದೇಶದಿಂದ ಬೇಸಾಯ ಮತ್ತು ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸಂಪರ್ಕ ಬೇಡ ಅರ್ಜಿಗಳ ಮಹಾಪೂರವೇ ಆರಂಭವಾಗಿದೆ. ರಾಜ್ಯ ವಿದ್ಯುತ್ ಮಂಡಳಿಗಳು ಆರ್ಥಿಕ ಸಂಪನ್ಮೂಲದ ಅಭಾವದಿಂದ ಅರ್ಧದಷ್ಟು ಬೇಡಿಕೆಗಳನ್ನು ಪೂರೈಸುತ್ತಿವೆ.

ಈ ಹಿನ್ನೆಲೆಯಲ್ಲಿ ವಿದ್ಯುತ್ ಸಂಶೋಧನಾ ಕಾರ್ಯವು ಗ್ರಾಮಾಂತರ ಪ್ರದೇಶಕ್ಕೆ ಸರಬರಾಜು ಮಾಡುವ ವಿದ್ಯುತ್ತಿನ ವೆಚ್ಚ ಕಡಿಮೆ ಮಾಡುವ ಬಗ್ಗೆ ತೀವ್ರತಮವಾಗಿ ಕೇಂದ್ರೀಕೃತವಾಗಬೇಕಾಗಿದೆ. ಅದೇ ರೀತಿ ಗ್ರಾಮಾಂತರ ಪ್ರದೇಶದ ವಿದ್ಯುತ್ ಸರಬರಾಜು ದೃಢವಾಗಿರುವಂತೆ ಸಂಶೋಧನೆ ಕೈಗೊಳ್ಳಬೇಕಾಗಿದೆ. ಗ್ರಾಮೀಣ ವಿದ್ಯುತ್ ಲೈನುಗಳು ಕಾರ್ಯವೆಸಗುವುದರಲ್ಲಿ ಸುಧಾರಣೆ ಮಾಡುವಂತೆ ನಮ್ಮ ಸಂಶೋಧನಾ ತಜ್ಞರು ತಮ್ಮ ಕಾರ್ಯ ಮುಂದುವರಿಸಬೇಕಾಗಿದೆ. ರೈತನು ಆಹಾರ ಉತ್ಪಾದನೆಗೆ ನಿರಂತರ ವಿದ್ಯುತ್ ಸರಬರಾಜನ್ನು ಅಪೇಕ್ಷಿಸುವುದರಿಂದ ಈ ಸಮಸ್ಯೆಗೆ ಗಮನಹರಿಸಬೇಕಾಗಿದೆ.

"ಪ್ರತಿ ಗ್ರಾಮಾಂತರ ಪ್ರದೇಶದ ಮನೆಯಲ್ಲೂ ವಿದ್ಯುತ್ ಸೌಲಭ್ಯವಿದ್ದರೆ ಗ್ರಾಮಸ್ಥರು ವಿದ್ಯುತ್ ಸೌಲಭ್ಯದಿಂದ ಉಪಕರಣ ಬಳಸಲು ನನ್ನ ಆಕ್ಷೇಪಣೆಯಿಲ್ಲ. ಅಂತಹ ಸನ್ನಿವೇಶದಲ್ಲಿ ಪ್ರತಿ ಗ್ರಾಮದಲ್ಲಿ ಹುಲ್ಲುಗಾವಲಿನಂತೆ ವಿದ್ಯುತ್ ಉತ್ಪಾದನಾ ಘಟಕಗಳಿರುತ್ತವೆ" ಎಂದು ಪೂಜ್ಯ ಮಹಾತ್ಮಜಿ ಈಗ 34 ವರ್ಷದ ಹಿಂದೆ ಬರೆದರು.

ವಿದ್ಯುತ್ತು ಗ್ರಾಮ ವಿಕಾಸದ ಮೂಲಶಕ್ತಿಯೆಂಬುದನ್ನು ಗಾಂಧೀಜಿ ಮನಗಂಡಿದ್ದರು. ದೇಶದ ತಾಂತ್ರಿಕ ಕ್ರಾಂತಿಯಲ್ಲಿ ಸಹಕಾರ ಚಟುವಟಿಕೆಯ ಪ್ರಾಮುಖ್ಯತೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ವಿಸ್ತರಣೆ ಮಾಡುವುದರಲ್ಲಿ ರಾಜ್ಯದ ಪಾತ್ರವನ್ನು ಗಾಂಧೀಜಿ ಅರಿತಿದ್ದರು.

("ಭಗೀರಥ"ದ ಕೃಪೆ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
O. S. 403/69

ಕೆ. ವೇಣುಗೋಪಾಲ ನಾಯಕ —ವಾದಿ
ಕೆ. ಅಬ್ದುಲ್ ಕರೀಂ ಬ್ಯಾರಿ, ಇಬ್ರಾಯಿ ಬ್ಯಾರಿ
ಮ.ಗ, ಕುಂತೂರು—ಪೆರಾಬೆ ಗ್ರಾಮ
—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟು ದುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ:—

ನೀವು ವಾದಿಯ ಅಂಗಡಿಯಲ್ಲಿ ವ್ಯಾಪಾರ ಮಾಡಿದ ಬಾಬ್ತು, ನಿಮ್ಮಿಂದ ಬರಬೇಕಾದ ಹಣಗಳನ್ನು ಕೇಳಿ ವಾದಿಯು ನಿಮ್ಮ ಮೇಲೆ ಮಾಡಿದ ಈ ದಾವೆಯನ್ನು ನಿಮ್ಮ ನೋಟೀಸಿನ ಬಗ್ಗೆ ತಾರೀಕು 30-3-70ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರ ಮಾಡಿ ಯುಕ್ತ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for plff.
Puttur, 16-3-70

ಅಮೃತಾಂಜನ
● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526
ಸಂಪುಟ ೪೯
ಸಂಚಿಕೆ ೨೯
VOL. 49
No. 29

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೬—೩—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶ್ರೀರಾಮ ಲೀಲೆ

ಇಂಡಿಕೇಟ್ ಕಾಂಗ್ರೆಸ್ಸಿನ ಅಧ್ಯಕ್ಷರೂ ಕೇಂದ್ರ ಆಹಾರ ಸಚಿವರೂ ಆಗಿರುವ ಶ್ರೀ ಜಗಜ್ಜೀವನ ರಾಮ್ ತನ್ನ ರಾಮ ಬಾಣ ಪ್ರಯೋಗಿಸಿ ಲೀಲೆ ತೋರಿಸಲು ಇಳಿದರು. ಸಿಂಡಿಕೇಟ್ ಕಾಂಗ್ರೆಸ್ ಸರಕಾರಗಳನ್ನು ಉರುಳಿಸುವುದು, ತಮ್ಮ ಕೃಪಾಪೋಷಿತ ಸರಕಾರಗಳನ್ನು ರಚಿಸುವುದು — ಈ ಉದ್ದೇಶಗಳಿಂದ ಅವರು ದೇಶದ ಸಂಚಾರಕ್ಕೆ ಹೊರಟರು. ಶ್ರೀ ಎಸ್ಸೆನ್‌ರ ಶಿಜ ರಾಜ್ಯ ಕರ್ನಾಟಕಕ್ಕೆ ಬಂದದ್ದು, ಇಲ್ಲಿನ ಭೂಸುಧಾರಣಾ ನೀತಿಯನ್ನು ಟೀಕಿಸಿ ಜನಮೆಚ್ಚುಗೆ ಪಡೆಯಲು ಹವಣಿಸಿದ್ದು, ವಿವರ ಕೇಳಿದಾಗ— ಹಿಂದಿನಿಂದ ತನ್ನ ಹೇಳಿಕೆಗಳನ್ನು ಪತ್ರಿಕೆಗಳು ಸರಿಯಾಗಿ ವರದಿ ಮಾಡಲಿಲ್ಲವೆಂದು ಸ್ಪಷ್ಟೀಕರಣ ನೀಡಿದ್ದು, ತನ್ಮೂಲಕ ಮಾತು ಕತ್ತರಿಸಿಕೊಂಡದ್ದು ಎಲ್ಲರಿಗೂ ಗೊತ್ತು. ಒರಿಸ್ಸಾದಲ್ಲಿನ ಸ್ವತಂತ್ರ- ಜನ ಕಾಂಗ್ರೆಸ್ ಸರಕಾರವನ್ನು ಉರುಳಿಸಲು ಅವರು ಮಾಡಿದ ಪ್ರಯತ್ನಗಳು ಕೊನೆಗಾಣ ಅಸಫಲಗೊಂಡದ್ದು ಮೊನ್ನೆ ಮೊನ್ನೆಯಂತೆ. ಇದೀಗ ಶ್ರೀಮಾನ್ ರಾಮರ ಗೃಧ್ರದೃಷ್ಟಿ ಅಹಮ್ಮದಾಬಾದದ ಮೇಲೆ ಬಿದ್ದಿದೆ. ಮುರಾರ್ಜಿ ಭಾಯಿಯವರ ರಾಜ್ಯದಲ್ಲಿ ಅವರು ಕೆಲವೊಂದು ಪಕ್ಷಾಂತರವನ್ನು ಮಾಡುವಲ್ಲಿ ಯಶಗಳಿಸಿದ್ದಾರೆ. ಇನ್ನೀಗ ಹತ್ತು ಜನ ಎಮ್ಮೆಲ್ಲೆಗಳು ಸಿಂಡಿಕೇಟ್ ತ್ಯಜಿಸಿದರೆ, ಶ್ರೀ ಹಿತೇಂದ್ರ ದೇಸಾಯಿಯವರ ಸರಕಾರ ಉರುಳಿದಂತೆಯೇ. ಶ್ರೀ ರಾಮರ ಪ್ರಯತ್ನಗಳು ಪ್ರಗತಿ ಮಾರ್ಗ ಭ್ರಮಣ ಮಾಡುವುದಕ್ಕೂ ಇದೇ ಉದ್ದೇಶ.

ಗುಜರಾತದಲ್ಲಿ ತಮ್ಮ ರಾಮಲೀಲೆ ತೋರಿಸ ಬೇಕೆಂದು ಉದ್ದೇಶಿಸಿದ್ದ ಶ್ರೀ ಜಗಜ್ಜೀವನ ರಾಮರೀಗ ಕಾಶ್ಮೀರದತ್ತ ಕಣ್ಣು ಮನಸ್ಸು ಕೊಡಬೇಕಾಗಿ ಬಂದಿದೆ. ಒಂದೆರಡು ವರ್ಷಗಳ ಹಿಂದೆಯೇ ಅಲ್ಲಿನ ಕಾಂಗ್ರೆಸ್‌ನಲ್ಲಿ ಎದ್ದಿದ್ದ ವಿವಾದವೀಗ ಉಲ್ಬಣಗೊಂಡಿದೆ. ಕಾಂಗ್ರೆಸ್ಸು ಪಕ್ಷದ ಅಧ್ಯಕ್ಷ ಶ್ರೀ ಮಿರ್ ಕಾಸೀಮರಿಗೂ ಮುಖ್ಯಮಂತ್ರಿ ಶ್ರೀ ಸಾದಿಕ್ ಅವರಿಗೂ ಎದ್ದಿದ್ದ ಭಿನ್ನಮತ ಈಗ ಹೆಮ್ಮರವಾಗಿದೆ. ಅಂದು ಇಡಿ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹಾಕಿದ್ದ ತೇಪೆ ಬಿಚ್ಚಿ ಹೋಯಿತು. ಕಾಶ್ಮೀರೀ ನಾಯಕರಿಬ್ಬರೂ ಇಂಡಿಕೇಟ್ ಬೆಂಬಲಿಗರಾದುದರಿಂದ ಈ ಜಗಳ ಬಿಡಿಸುವ ಕೆಲಸ ಮಾಡುವುದು ಶ್ರೀ ರಾಮರ ಪಾಲಿಗೆ ಬಂದಿದೆ. ಇದುವರೆಗೂ ಹಲವಾರು ಬಾರಿ ಬಿಚ್ಚಿ ಹರಿದು ಹೋದ ಕಾಶ್ಮೀರಿ ಶಾಲನ್ನು ಮತ್ತೂ ಮತ್ತೂ ಹೊಲಿಯುವುದೆಂದರೆ, ಗಣಪತಿಯು ಶಾಲನ್ನು ಸಿಂಪಿಗ ಹೊಲಿದಂತೆಯೇ. ಶ್ರೀ ಸಾದಿಕರ ನಾಯಕತ್ವ ತಮಗೆ ಬೇಡವೆಂದು ಶ್ರೀ ಮಿರ್ ಕಾಸಿಂ ಬೆಂಬಲಿಗರು, ೩೫ ಜನ ಎಮ್ಮೆಲ್ಲೆಗಳು ದೆಹಲಿಯಲ್ಲೇ ಡಂಗುರ ಬಾರಿಸಿದರು. "ಈ ಬಂಡುಗಾರರ ಮಾತುಗಳಿಗೆ ಬಲಿಯಾಗಬಾರದ; ತನ್ನ ನಾಯಕತ್ವ ಬದಲಾಗಬಾರದು" ಎಂದು ಶ್ರೀ ಸಾದಿಕ್ ತಮ್ಮ ಗಂಟೆ ಬಾರಿಸಿದರು. ಇವರಿಬ್ಬರ ವಿವಾದಗಳು ಪರಿಹಾರಗೊಳ್ಳುವ ಹಂತವನ್ನೀಗ ದಾಟಿವೆ. ಭಾರತೀಯ ಕಾಂಗ್ರೆಸ್ಸು ಎರಡು ತುಂಡುಗಳಾದಂತೆಯೇ ಕಾಶ್ಮೀರದ ಕಾಂಗ್ರೆಸ್ಸೂ ಎರಡು ಹೋಳಾದರೂ ಆಶ್ಚರ್ಯವಿಲ್ಲ. ಶ್ರೀಮತಿ ಗಾಂಧಿಯವರು ತಮ್ಮ ಸಿಂಹಾಸನವನ್ನು ಭದ್ರಪಡಿಸುತ್ತ ಹೋಗುತ್ತಿರುವಾಗ, ಕಾಶ್ಮೀರದೀ ಸಮಸ್ಯೆ ಒಂದು ಕೇಡು. ತಾನು ಕಾಂಗ್ರೆಸ್ ಪಕ್ಷದ ಆದೇಶಗಳನ್ನು ಧಿಕ್ಕರಿಸಿದಂತೆಯೇ ಅತ್ತ ಶ್ರೀ ಸಾದಿಕರಿಗೆ ಶ್ರೀ ಕಾಸೀಂ ಅವರನ್ನು ಧಿಕ್ಕರಿಸುವಂತೆ ಕಲಿಸಿ ನೀಡುವರೆ!

ಇದರ ನಡುವೆ ಇನ್ನೂ ಅತಿಗೆ ಕಲಿನೋವು. ರಾಜ್ಯಸಭೆ-ವಿಧಾನ ಪರಿಷತ್ತುಗಳಿಗೆ ದ್ವೈವಾರ್ಷಿಕ ಚುನಾವಣೆಗಳೀಗ ನಡೆಯಲಿವೆ. ಇವಕ್ಕೆ ತನ್ನ ಕಾಂಗ್ರೆಸ್ಸಿನ ಹುದ್ದರಿಗಳ ಆಯ್ಕೆಯೇನೋ ಆಗಿದೆ. ಆದರೆ, ಈ ಆಯ್ಕೆ ಯುವಜನರಿಗೆ ತೀವ್ರ ಅಸಮಾಧಾನವನ್ನುಂಟು ಮಾಡಿದೆ. 'ಪ್ರಗತಿಗಾಮಿತನ'ವನ್ನು ತೋರಿಸಿಲ್ಲವೆಂದವರೂ ದೂರಿದ್ದಾರೆ. ಇದಕ್ಕೆಲ್ಲಾ ಯಾರು ಹೊಣೆಯೆಂದು ಗಣನೆ ಹಾಕುವುದರಲ್ಲಿ ಸಾರ್ಥಕ್ಯವಿಲ್ಲ. ತಮ್ಮನ್ನು 'ಪ್ರಗತಿಗಾಮಿ'ಗಳೆಂದೂ ಉಳಿದವರನ್ನು 'ಪ್ರತಿಗಾಮಿ'ಗಳೆಂದೂ ಹೆಸರಿಸಿ ಜಗಳ ಕಾದವರು "ಪ್ರತಿಗಾಮಿ"ಗಳಿಗೂ ಹೀನಾಯವಾದ ನೀತಿಯನ್ನವಲಂಬಿಸುತ್ತ ಹೋಗುತ್ತಿರುವುದು ಸರ್ವವೇದ್ಯ. ದಿನ ದಿನಕ್ಕೂ ಪ್ರಕೃತಿ ಬದಲಾಗುತ್ತಿರುವುದರಿಂದ ಅದು ಪ್ರಗತಿಗಾಮಿ. ಕ್ಷಣ ಕ್ಷಣಕ್ಕೂ ಬಣ್ಣ ಬದಲಾಯಿಸುವುದೇ ಪ್ರಗತಿಗಾಮಿ ತನದ ಲಕ್ಷಣವಾದರೆ, ಇದು ಕಲಿಯುಗದಲ್ಲಿ ಹಳೆಯುವ ರಾದ ಶ್ರೀ ಜಗಜ್ಜೀವನ ರಾಮರಿಗೆಂತು ಕರೆಗತವಾಯಿತು? ಅವರ ಶ್ರೀ ರಾಮ ಲೀಲೆ ಕರಣ ಕಪಟತ್ವಕ್ಕಿಂತ ಬೇರೆಯಾಗಲಾರದು.

ಸುಬೋಧ ರಾಮರಾವ್

ಫಲಾಪೇಕ್ಷೆಯನ್ನು ಬಯಸದೆ, ಪರಿಣಾಮ ಗಳನ್ನು ಗಮನಿಸದೆ ಕರ್ತವ್ಯಪಥದಲ್ಲಿ ಸಾಗಿದ ವ್ಯಕ್ತಿ ಶ್ರೀ ಸುಬೋಧ ರಾಮರಾಯರು. ಅವರಿಗೆ ಕೀರ್ತಿಕಾಮನೆಗಳಲ್ಲಿ ಒಲವಿರಲಿಲ್ಲ; ಪ್ರಚಾರಾಡಂಬರದ ಪ್ರಲೋಭನವಿರಲಿಲ್ಲ. ಮನಸಾರೆ ದುಡಿದು, ಬಾಳಿ ಬದುಕಿ ಮತ್ತೆ ಸಂಚರಿಸ್ಸೈದಿದ ಅವರ ಹೆಸರು, ಅವರು ನಿರ್ಮಿಸಿದ ಕೃತಿಗಳು ಮಾತ್ರ ಅಜರಾಮರವಾಗದೆ ಉಳಿಯಲಿಲ್ಲ. ಸಾಧು ಸತ್ಪುರುಷರು, ವೀರ ಧೀರರು, ಸತಿ ಪತಿವ್ರತೆಯರು- ಮೊದಲಾದವರ ಸಚ್ಚರಿತ್ರೆಯನ್ನು ಸುಲಭ-ಸರಳ ಭಾಷೆ ಶೈಲಿಗಳಲ್ಲಿ ಕನ್ನಡಿಗರಿಗೆ ಒದಗಿಸಿದ ಅಪಾರ ಕೀರ್ತಿ ಅವರಿಗೆ ಸೇರಿದ್ದು. ಭಾರತೀಯ ಸಂಸ್ಕೃತಿ ಗಂಗೆಯನ್ನು ಪುಸ್ತಕ ಬಿಂದಿಗೆಗಳಲ್ಲಿ ತುಂಬಿ ಅದನ್ನು ಕರ್ನಾಟಕದ ಮನೆಮನೆಗೂ ಮುಟ್ಟಿಸಿ ತಾನೂ ನಾಡೂ ಧನ್ಯವಾಗುವಂತೆ ಮಾಡಿದ ಪುಣ್ಯಕಾರ್ಯ ಸಾಧಕರು ಅವರು. ಬಹಳ ಹಿಂದೆ ಸುಬೋಧ ಕುಸುಮಾಂಜಲೀ ಗ್ರಂಥಮಾಲೆಯಲ್ಲಿ ಅಚ್ಚಾಗಿ ಇಂದು ಅಪ್ರಾಪ್ಯವಾಗಿದ್ದ ಪುಸ್ತಕಗಳನ್ನು ಮರಳಿ ಅಚ್ಚಿನ ಮನೆ ಕಾಣಿಸತೊಡಗಿದ್ದನ್ನು ಇಲ್ಲಿ ನೆನಪಿಸಬಹುದು. ಈ ಕನ್ನಡದ ನಿಷ್ಠಾವಂತ ಸೇವಕರು, ಪ್ರಾಮಾಣಿಕ ಮನುಷ್ಯರು ವೃದ್ಧಾಪ್ಯದಿಂದ ನಮ್ಮನ್ನಗಲಿ ಹೋದರು. ಇದರಿಂದಲೂ ನಮ್ಮ ನಾಡು ಬಡವಾಗಲಿಲ್ಲವೆಂದರೇನೇ ಆಶ್ಚರ್ಯ.

ವಾರ್ಷಿಕ ಸಮಾರಂಭ

ಉಡುಪಿ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 19ರಂದು ಮ್ಯಾಜಿಸ್ಟ್ರೇಟ್ ಶ್ರೀ ಎಚ್. ಡಿ. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಂಚಾಲಕ ಡಾ| ಕೆ. ಕೆ. ಕಲ್ಕೂರರವರು ಪರಿಚಯ ಭಾಷಣ ಮಾಡಿ ಸ್ವಾಗತಿಸಿದರು. ನೃತ್ಯ, ಛದ್ಮವೇಶ ಸಂಗೀತ ಮೊದಲಾದ ಮನರಂಜನಾ ಕಾರ್ಯಕ್ರಮಗಳು ಬಳಿಕ ವಿದ್ಯಾರ್ಥಿಗಳ ಮತ್ತು ಸಭಿಕರ ಭಾಷಣಗಳಾದುವು. ಶ್ರೀ ಜಿ. ರಾಮಕೃಷ್ಣರಾಯರು, ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿ, ಜ್ಞಾನ ಸಂಪಾದಿಸಿ ಕರ್ತವ್ಯ ಶೀಲರಾಗಬೇಕೆಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಧರ್ಮ ಮತ್ತು ನ್ಯಾಯ ತತ್ವಗಳನ್ನು ಕಾರ್ಯಗತ ಮಾಡಿಕೊಂಡು ವಿದ್ಯಾರ್ಥಿಗಳು ತಮ್ಮ ಜೀವನವನ್ನು ಬೆಳಗಿಸಿ ಕೊಳ್ಳಬೇಕೆಂದೂ ಕಾನೂನು ಪರಿಪಾಲನೆ, ಕರ್ತವ್ಯಪಾಲನೆ, ಗುರುಭಕ್ತಿ, ಶ್ರದ್ಧೆ, ದೈವಭಕ್ತಿ ಉಳ್ಳವರಾಗಬೇಕೆಂದೂ ತಿಳಿಸಿದರು. ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಮಿಣಗುಡ್ಡೆ ಕಾವೇರಿ ಹೆಗ್ಗಡ್ತಿಯವರ ನಿಧನ.

ಉಡುಪಿ, ಮಾ. 19: ದಿವಂಗತ ವಕೀಲ್ ಕಟಪಾಡಿ ದೀಡು ಜಗನ್ನಾಥ ಬಲ್ಲಾಳರ ಧರ್ಮಪತ್ನಿ ಶ್ರೀಮತಿ ಮಿಣಗುಡ್ಡೆ ಹೊಸಮನೆ ಕಾವೇರಿ ಹೆಗ್ಗಡ್ತಿಯವರು ಬಹು ಕಾಲದ ಅಸೌಖ್ಯದ ಬಳಿಕ 73ನೇ ವಯಸ್ಸಿನಲ್ಲಿ ಇಂದು ನಿಧನರಾದರು.

ದಿ| ಹೆಗ್ಗಡ್ತಿಯವರು ಧರ್ಮಶ್ರದ್ಧೆಯುಳ್ಳವರೂ, ದೈವಿ ಭಕ್ತೆಯೂ ಆಗಿದ್ದರು. ಅವರು ತಮ್ಮ ಹಿಂದೆ ಅಪಾರ ಬಂಧುಗಳನ್ನು ಅಗಲಿ ಹೋಗಿದ್ದಾರೆ. ಹೈದರಾಬಾದಿನಲ್ಲಿ ಸರ್ವೇ ಆಫ್ ಇಂಡಿಯಾದಲ್ಲಿ ಸರ್ವೇಯರ್ ಆಗಿರುವ ಶ್ರೀ ವೈ. ಡಿ. ಹೆಗ್ಡೆ, ಗುಲ್ಬರ್ಗಾದಲ್ಲಿ ವ್ಯವಸಾಯ ಡೆಪ್ಯುಟಿ ಡೈರೆಕ್ಟರ್ ಆಗಿರುವ ಶ್ರೀ ವೈ. ವಿ. ಹೆಗ್ಡೆ, ಉಡುಪಿಯಲ್ಲಿ ಸರಕಾರೀ ಪ್ಲೀಡರ್ ಆಗಿರುವ ಶ್ರೀ ವೈ. ಸಿ. ಯಶ್. ಹೆಗ್ಡೆ ಅವರುಗಳು ದಿವಂಗತರ ಮಕ್ಕಳಾಗಿದ್ದಾರೆ.

ಬಂಟರ ಯಾನೆ ನಾಡವರ ಸಂಘ,
ದಕ್ಷಿಣ ಕನ್ನಡ, ಮಂಗಳೂರು.

ಮಹನೀಯರೇ,

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ತಾ. 29-3-1970ರಲ್ಲು ಆದಿತ್ಯವಾರ
ಶ್ರೀ ಕೆ. ಕೃಷ್ಣ ಶೆಟ್ಟಿ,
ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ (ನಿವೃತ್ತ ಮದ್ರಾಸು)
ಇವರ ಅಧ್ಯಕ್ಷತೆಯಲ್ಲಿ
ಬಂಟ್ವಾಳ ಧರ್ಮಸ್ಥಳ ಹೆಗ್ಗಡೆಯವರ ಭಂಡಸಾಲೆಯ ಮುತ್ತಯ ಮಾರ್ಗರ ಮಂಟಪದಲ್ಲಿ ಜರಗುವುದು.
ಆ ಪ್ರಯುಕ್ತ, ತಾವು ಆ ಸಭೆಗೆ ದಯಮಾಡಿ ಬರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಬಿ. ಮಂಜಯ ಹೆಗ್ಡೆ. ಅಧ್ಯಕ್ಷ
ಡಾ| ಕೆ. ಬಾಲಪ್ಪ ಶೆಟ್ಟಿ. ಕಾರ್ಯದರ್ಶಿ

ಸ್ವಾಗತ ಸಮಿತಿ, ಬಂಟ್ವಾಳ

ಬೆಳಿಗ್ಗೆ ಘಂಟೆ ೯ರಿಂದ ಪ್ರಾರಂಭವಾಗುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಭವನಗಳ ವರದಿ ವಾಚನ, ಶ್ರೀ ಅಣ್ಣಣ್ಣ ಶೆಟ್ಟಿ ಮತ್ತವರ ಸತಿ ರುಕ್ಮಿಣಿ ಶೆಟ್ಟಿಯವರ ಭಾವಚಿತ್ರ ಅನಾವರಣ, ಸಂಘದ ಹಿರಿಯ ಹಿತಚಿಂತಕರಾದ ಶ್ರೀ ಉಮ್ಮಣ್ಣ ಸೇಮಿತ, ಶ್ರೀ ಕೆ. ಸುಬ್ಬಣ್ಣ ಶೆಟ್ಟಿ ಇವರಿಗೆ ಸನ್ಮಾನ, ಸಂಘವನ್ನು ಬಲಪಡಿಸುವ ವಿಚಾರಗಳಿವೆ.

ಅಪರಾಹ್ನ ಘಂ. 3-30ರಿಂದ ಮಹಾಸಭೆ, ಸಂದೇಶ ವಾಚನ, ವರದಿ ವಾಚನ, ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಶ್ರೀಗಳಾದ ಕಯ್ಯಾರ ಕಿಞ್ಞಣ್ಣ ರೈ, ಕೆ. ಹೊನ್ನಯ್ಯ ಶೆಟ್ಟಿ, ಅಳಿಕೆ ರಾಮಯ್ಯ ರೈ, ದೇವಸ ರಾಮಣ್ಣ ಶೆಟ್ಟಿ ಇವರಿಗೆ ಮಾನಪತ್ರ ಸಮರ್ಪಣೆ, ಪ್ರತಿಗಳ ಮತ್ತು ಅಧ್ಯಕ್ಷರ ಭಾಷಣ ಮೊದಲಾದ ಕಾರ್ಯಕ್ರಮಗಳಿವೆ.

ವಜ್ರದ ಗಣಿಗಳಲ್ಲಿ ಅದೃಷ್ಟ ಪರೀಕ್ಷೆ

ಬರೆದವರು : ಶ್ರೀ ಭಗವಾನ್‌ಸಿಂಗ್.

ಭಾರತೀಯ ವಜ್ರಗಳ ಹೆಸರು ಮತ್ತೆ ಕೇಳಿಬರುತ್ತಿವೆ.

ವಜ್ರ ಅನರ್ಘ್ಯವಾದ ಹರಳು, ಅದರ ತೇಜಸ್ಸಿಗೆ ಸಾಟಿಯಿಲ್ಲ. ಸಾವಿರಾರು ವರ್ಷಗಳಿಂದ ಮನುಷ್ಯಕೋಟಿಯ ಹೃದಯವನ್ನೇ ಸೂರೆಗೊಂಡಿದೆ ಈ ವಜ್ರ. ಮನುಷ್ಯನ ಸ್ಥಾನಮಾನದ ವಿಶೇಷ ಸಂಜ್ಞೆಯಾಗಿ ಮೆರೆದಿದೆ ಈ ತೇಜಃಪುಂಜ. ಭಾರತದಲ್ಲಿ ಐದು ಸಾವಿರ ವರ್ಷಗಳಷ್ಟು ಹಿಂದೆಯೇ ವಜ್ರಗಳನ್ನು ಗಣಿಗಳಿಂದ ಹೊರತೆಗೆಯುವ ಕೆಲಸ ನಡೆದಿದ್ದು ಇತಿಹಾಸದ ಸಂಗತಿ. ಪ್ರಪಂಚದ ಮಹೋನ್ನತ ವಜ್ರಗಳಲ್ಲಿ ಕೆಲವನ್ನು ಭಾರತವೇ ನೀಡಿದೆ ಎಂಬುದು ಅಭಿಮಾನ. ಕೊಹಿನೂರ್, ದಿ ರೀಜೆಂಟ್, ಹೋಪ್ ಮತ್ತು ಅರ್ಲಾಫ್ ಮೊದಲಾದ ವಜ್ರಗಳು ದೊರೆತದ್ದು ದಕ್ಷಿಣ ಭಾರತದಲ್ಲಿಯೆ.

೧೮೭೦ರಲ್ಲಿ ಬ್ರೆಜಿಲ್ ವಿಶ್ವಮಾರುಕಟ್ಟೆಯನ್ನು ಪ್ರವೇಶಿಸುವವರೆಗೆ ಭಾರತದ ವಜ್ರಗಳಿಗೆ ಪ್ರತಿಸ್ಪರ್ಧಿ ಇರಲಿಲ್ಲ. ಮುಂದೆ ದಕ್ಷಿಣ ಆಫ್ರಿಕೆಯ ರಾಷ್ಟ್ರಗಳು ವಜ್ರ ಉತ್ಪತ್ತಿಯಲ್ಲಿ ಅಗ್ರಸ್ಥಾನ ಪಡೆದವು. ಕ್ರಮೇಣ ಭಾರತದ ವಜ್ರಗಳ ಮಾನ್ಯವು ಹಿಂದೆ ಬಿತ್ತು.

ಹಳೆಯ ವಿಧಾನಗಳು

ವಜ್ರದ ಗಣಿಗಳಲ್ಲಿ ಭಾರತೀಯರು ಹಳೆಯ ವಿಧಾನಗಳನ್ನೇ ಉಪಯೋಗಿಸಿದ್ದರಿಂದ, ದೊಡ್ಡ ಪ್ರಮಾಣದಲ್ಲಿ ವಜ್ರ ಉತ್ಪಾದಿಸುವ ದಕ್ಷಿಣ ಆಫ್ರಿಕೆಯ ರಾಷ್ಟ್ರಗಳೊಡನೆ ಪೈಪೋಟಿ ಮಾಡಲು ಅಸಮರ್ಥವಾಯಿತು. ಪುರಾತನ ಕಾಲದಲ್ಲಿ ಭಾರತದಲ್ಲಿ ವಜ್ರಗಳನ್ನು ಯಾವ ಹಂತದಲ್ಲಿ ಹುಡುಕುತ್ತಿದ್ದರು, ಎಂತಹ ಯಂತ್ರಗಳನ್ನು ಬಳಸುತ್ತಿದ್ದರು ಮತ್ತು ಹೇಗೆ ಮಾರಾಟ ಮಾಡುತ್ತಿದ್ದರು ಎಂಬ ವಿಷಯಗಳ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ಅಷ್ಟು ಇಷ್ಟು ಉಳಿದು ಬಂದಿರುವ ಇಂತಹ ಮಾಹಿತಿ ವಜ್ರಗಳ ಇತಿಹಾಸಕ್ಕೆ ರೋಮಾಂಚನದ ತೊಡಿಗೆ ತೊಡಿಸಿದೆ. ಒಂದಾನೊಂದು ಕಾಲದಲ್ಲಿ ವಜ್ರಗಳ ಉತ್ಪನ್ನ ನಡೆಯುತ್ತಿದ್ದ ಹಳ್ಳಿಗಳು ಇಂದು ಹಾಳಾಗಿ ಗತಕಾಲದ ಇತಿಹಾಸವನ್ನು ವೈಭವವನ್ನು ಅಸ್ಪಷ್ಟವಾಗಿ ತೋರಿಸುತ್ತಿವೆ. ಆದರೆ ಒಂದು ವಿಷಯ ಮಾತ್ರ ಸತ್ಯ. ನಮ್ಮ ಪೂರ್ವಿಕರು ವಜ್ರಗಣಿಯಲ್ಲಿ ಉಪಯೋಗಿಸುತ್ತಿದ್ದ ವಿಧಾನಗಳು ಉಚ್ಚಮಟ್ಟದ್ದು ಎನಿಸಿದ್ದವು. ಆ ಕಾಲಕ್ಕೆ ಸಾಧ್ಯವಿದ್ದ ಎಲ್ಲ ಸುಧಾರಿಸಿದ ಯಂತ್ರಗಳನ್ನೇ ಅವರು ಬಳಸಿದ್ದಾರೆ. ಭಾರತದ ವಜ್ರ ಉತ್ಪಾದಕರು ಬುದ್ಧಿಶಾಲಿಗಳು, ಕುಶಲ ಕರ್ಮಿಗಳು ಆಗಿದ್ದರೆಂಬುದು ನಿರ್ವಿವಾದ.

ಸಂಶೋಧನೆಗೆ ಪ್ರೋತ್ಸಾಹ

ಕೇವಲ ಕಳೆದ ದಶಕದಲ್ಲಿ ಭಾರತದಲ್ಲಿ ವಜ್ರಗಣಿಗಳ ಕಾರ್ಯಾರಂಭ ಹೆಚ್ಚು ಸುಸಜ್ಜಿತವಾಗಿ ಮತ್ತೆ ಪ್ರಾರಂಭವಾಯಿತು. ಮಧ್ಯ ಭಾರತದ ಪನ್ನಾ ವಜ್ರ ಪಟ್ಟಿಯಲ್ಲಿ ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೋರೇಷನ್ ತನ್ನ ಚಟುವಟಿಕೆ ಪ್ರಾರಂಭಿಸಿದಾಗ, ಅದು ಪ್ರಾರಂಭಿಕ ಕೆಲಸವನ್ನೂ ನಡೆಸಬೇಕಾಯಿತು. ಎಷ್ಟೋ ಸಲ ನಿರಾಶೆ ತಲೆದೋರಿತು. ವಜ್ರ ಸಂಶೋಧನೆಗೆ ಬಹಳಷ್ಟು ತಾಳ್ಮೆ ಬೇಕು. ಸಂಘಟಿತ ಸತತ ಕಾರ್ಯ ನಡೆಸಬೇಕು. ಪ್ರತಿಸಲವೂ 'ಕೋಹಿನೂರ್' ಅಥವಾ 'ಹೋಪ್'ನಂತಹ ಶ್ರೇಷ್ಠ ವಜ್ರಗಳು ದೊರೆಯಲಿಕ್ಕಿಲ್ಲ. ಅತ್ಯಾಧುನಿಕ ಯಂತ್ರಗಳ ಸಹಾಯ ಪಡೆದೂ "ಅದೃಷ್ಟ" ಎಂಬ ಸಂಗತಿಯನ್ನು ಮರೆಯುವಂತಿಲ್ಲ. ವಜ್ರದಗಣಿ ಉದ್ಯಮದಲ್ಲಿ ಪ್ರತಿಸಲವೂ ಲಾಭ ದೊರೆಯುತ್ತದೆ ಎಂದು ಹೇಳಲು ಬರುವುದಿಲ್ಲ. ಒಂದು ಶ್ರೇಷ್ಠ ವಜ್ರ ದೊರೆಯಬೇಕಾದರೆ, ಅಕ್ಷರಶಃ [illegible] ಸಾವಿರಾರು ಸಲ ಅತ್ತಿಂದಿತ್ತ ಜಾಲಿಸಬೇಕಾಗುತ್ತದೆ.

ಇಂದು ಭಾರತದಲ್ಲಿ ವಜ್ರಗಣಿಗಳಲ್ಲಿ ಮತ್ತೆ ಹುರುಪಿನ ಕೆಲಸ ಪ್ರಾರಂಭವಾಗಿದೆ. ಭಾರತೀಯ ವಜ್ರಗಳು ವಿಶ್ವದ ಮಾರುಕಟ್ಟೆಗೆ ಏರಿವೆ. ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೋರೇಷನ್ ವಜ್ರದ ಗಣಿಯ ಸಾಹಸಮಯ ಉದ್ಯಮವನ್ನು ಕೈಗೆತ್ತಿಕೊಂಡು, ವಜ್ರಗಳ ಉತ್ಪಾದನೆ ಮತ್ತು ಅವುಗಳ ಸಂಸ್ಕರಣದ ಬಗ್ಗೆ ವಿಶೇಷ ಆಸಕ್ತಿ ವಹಿಸಿದೆ.

ಪನ್ನಾ ವಜ್ರ ಕ್ಷೇತ್ರ

ರಾಮಖೇರಿಯಾ ಹಾಗೂ ಮಝ್‌ಗವಾನ್ ಎಂಬ ಸ್ಥಳಗಳಲ್ಲಿ ಎರಡು ಕೇಂದ್ರಗಳನ್ನು ಪ್ರಾರಂಭಿಸಿ ಪನ್ನಾ ವಜ್ರಕ್ಷೇತ್ರದ ಉತ್ಪನ್ನಕ್ಕೆ ಚಾಲನೆ ನೀಡಲಾಗಿದೆ. ವಜ್ರಗಳ ಉತ್ಪಾದನೆಗೆ ಅಳುಕುತ್ತಲೇ ಬಂಡವಾಳ ತೊಡಗಿಸಲಾಯಿತು. ಆಧುನಿಕ ತಾಂತ್ರಿಕ ಕೌಶಲ್ಯವನ್ನು ಬಳಸಲಾಯಿತು. ಬೇರೆ ಅಡಚಣೆಗಳನ್ನೂ ಎದುರಿಸಲಾಯಿತು. ಈಗ ಪನ್ನಾಕ್ಷೇತ್ರದಲ್ಲಿ ಲಾಭದಾಯಕ ಉದ್ಯಮ ಸಾಧ್ಯವಾದ ತೊಡಗಿದೆ. ಇಲ್ಲಿ ವರ್ಷಕ್ಕೆ ೨೪೦೦೦ ಕ್ಯಾರೆಟ್ ವಜ್ರಗಳನ್ನು ತೆಗೆಯಲು ಉದ್ದೇಶಿಸಲಾಗಿದೆ. ಇನ್ನೂ ಎರಡುಸಾವಿರ ಎಕರೆ ಕ್ಷೇತ್ರದಲ್ಲಿ ಈ ಉದ್ಯಮವನ್ನು ವಿಸ್ತರಿಸಲು ಯೋಜನೆಗಳನ್ನು ಸಿದ್ಧಪಡಿಸಲಾಗಿದೆ. ಈ ಉದ್ಯಮದಲ್ಲಿ ನಷ್ಟ ಸಂಭವನೀಯ, ಆದರೆ ಸಾಹಸಕ್ಕೆ ಪ್ರತಿಫಲವೂ ಇಲ್ಲದಿಲ್ಲ.

ಸಂಶೋಧನೆ

ವಜ್ರಗಳು ಜ್ವಾಲಾಮುಖಿಯ ಪ್ರವಾಹದಲ್ಲಿ ತೇಲಿ ಬಂದಿರಬಹುದು. ಕೆಲವು ಸಲ ಇಂತಹ ವಜ್ರದ ಕಣಗಳು ಕಲ್ಲು ಬಂಡೆಗಳ ಮಧ್ಯದಲ್ಲಿ ಸಿಕ್ಕಿರಬಹುದು. ಕೆಲವು ಸಲ ನದಿಗಳ ದಂಡೆಯಲ್ಲಿ ವಜ್ರಗಳು ದೊರೆಯುವದುಂಟು. ಪನ್ನಾ ವಜ್ರಕ್ಷೇತ್ರದಲ್ಲಿ ಹಾಗು ಕೃಷ್ಣಾನದಿಯ ಗುಂಟ ಭಾರತದಲ್ಲಿ ವಜ್ರಗಳ ನಿಕ್ಷೇಪವಿದ್ದದ್ದು ಕಂಡು ಬಂದಿದೆ. ಜ್ವಾಲಾಮುಖಿಯಿಂದ ರಚನೆಯಾಗಿ ಬಂದ ವಜ್ರಗಳನ್ನು ಗಣಿಗಳಲ್ಲಿ ಸಂಶೋಧಿಸುವ ಕೆಲಸ ಗಂಡಾಂತರಕಾರಿಯದ್ದು. ಪನ್ನಾಕ್ಷೇತ್ರದಲ್ಲಿ ಖಾಸಗಿಯವರಿಗೆ ವೈಯಕ್ತಿಕವಾಗಿ ಸ್ವಲ್ಪಸ್ವಲ್ಪ ಕ್ಷೇತ್ರವನ್ನು ವಜ್ರನಿಕ್ಷೇಪ ಸಂಶೋಧನೆಗೆಂದು ನೀಡಲಾಗಿದೆ. ಅವರು ಅಗೆದು ಅಗೆದು ವಜ್ರ ಸಂಶೋಧನೆ ಮಾಡುತ್ತಾರೆ. ಮಳೆಗಾಲದ ನಂತರ ಅಗೆಯುವ ಕೆಲಸ ಬಿರುಸಿನಿಂದ ಪ್ರಾರಂಭವಾಗುವದು. ಅತ್ಯಂತ ತಾಳ್ಮೆಯಿಂದ ಇವರು—ತಮ್ಮ ಕುಟುಂಬದ ಜನರೊಡನೆ ಕೆಲಸ ಮಾಡುವರು. ಒಂದು ವರ್ಷದವರೆಗೆ ಇವರಿಗೆ ಒಂದು ಕ್ಷೇತ್ರವನ್ನು—೨೦ ಅಡಿ ಉದ್ದ, ೨೦ ಅಡಿ ಆಳ—ಕೊಡಲಾಗುವದು. ಅದರಲ್ಲಿ ಅವರು ತಮ್ಮ ಅದೃಷ್ಟವನ್ನು ಕಂಡುಕೊಳ್ಳಬೇಕು.

ಗೋಲ್ಕೊಂಡಾ ಕ್ಷೇತ್ರ

ಗೋಲ್ಕೊಂಡಾ ಕ್ಷೇತ್ರವು ಐತಿಹಾಸಿಕ ಕಾಲದಿಂದಲೂ ವಜ್ರಕ್ಕಾಗಿ ಹೆಸರುವಾಸಿಯಾಗಿದೆ. ಈ ಕ್ಷೇತ್ರದಲ್ಲೀಗ ಎರಡು ಕಡೆಗಳಲ್ಲಿ ವಜ್ರ ಸಂಶೋಧನೆ ಕೇಂದ್ರಗಳನ್ನು ಶುರು ಮಾಡಲಾಗಿದೆ. ಭಾರತದ ನೋಬೆಲ್ ಪ್ರಶಸ್ತಿ ವಿಜೇತ ಡಾ| ಸಿ. ವಿ. ರಾಮನ್ ಅವರು ವಜ್ರಗಳ ಬಗ್ಗೆ ನಡೆಸಿದ ಸಂಶೋಧನೆಯ ನೆರವನ್ನು ಪಡೆದು ಕೃಷ್ಣಾನದಿಯ ದಂಡೆಗಳಲ್ಲಿ ವಜ್ರ ಸಂಶೋಧನೆಯನ್ನು ಕೈಕೊಳ್ಳಲಾಗಿದೆ. ಇಲ್ಲಿ ನಿರೀಕ್ಷಿತ ಜಯ ದೊರೆತರೆ, ವಿಜಯನಗರ ಸಾಮ್ರಾಜ್ಯದ ವೈಭವೋಪೇತ ದಿನಗಳು ಮರುಕಳಿಸಿ ಬರಬಹುದು, ಯಾರು ಬಲ್ಲರು? ಕೆಲವೇ ದಿನಗಳ ಹಿಂದೆ ಗೋಲ್ಕೊಂಡ ಪ್ರದೇಶದಲ್ಲಿ ೯೬ ಕ್ಯಾರೆಟ್ ರತ್ನ ದೊರಕಿದೆ! 'ರಾಮಲಕೋಟಾ' ಹಾಗು "ವಜ್ರ ಕರೂರ್" ಪ್ರದೇಶಗಳಲ್ಲಿ ಈ ಅನರ್ಘ್ಯ ರತ್ನಗಳ ಸಂಶೋಧನೆ ನಡೆಯುತ್ತಿದೆ. ಸಂಸ್ಕೃತದ 'ವಜ್ರಕರೂರ್' ಎಂಬ ಹೆಸರು ಅರ್ಥಪೂರ್ಣವಾಗಿದೆ!

ವಜ್ರದ ಬಹುವಿಧ ಉಪಯೋಗ

ಕೇವಲ ಅಮೂಲ್ಯ ಆಭರಣವಾಗಿ ಮಾ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¾% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದ್ವೈಫಲ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಶಿಕ್ಷಣದಿಂದ ರಾಷ್ಟ್ರೀಯ ಸಂಘಟನೆ

ದೇಶದ ಜನತೆಯಲ್ಲಿ ಏಕತಾಭಾವದ ಆದರ್ಶವನ್ನು ಬಲಪಡಿಸಲು ಶಿಕ್ಷಣವೇ ಅತ್ಯುತ್ತಮ ಮಾರ್ಗ. ಜೀವನ ರೂಪುಗೊಳಿಸುವ ವಯೋಮಿತಿಯಲ್ಲಿರುವ ಬಾಲಕ, ಬಾಲಕಿಯರ ಶಿಕ್ಷಣದಲ್ಲಿ ರಾಷ್ಟ್ರೀಯ ಸಂಘಟನೆ ತತ್ವವನ್ನು ರೂಢಿಸುವುದು ಅಗತ್ಯವಾಗಿದೆ.

ಭಾರತದಲ್ಲಿ ಭಾಷೆ, ಧರ್ಮಗಳ ವೈವಿಧ್ಯತೆಯಿದ್ದರೂ ಸಂಸ್ಕೃತಿಯ ಏಕಸೂತ್ರತೆಯಿರುವುದನ್ನು ಈ ಸನ್ನಿವೇಶದಲ್ಲಿ ಮನಗಾಣಬೇಕಾಗಿದೆ. ಭಾರತೀಯ ಇತಿಹಾಸದ ಪರಂಪರೆಯಲ್ಲಿ ಐಕ್ಯತೆಯ ಸೂತ್ರವಿದೆ. ಅದ್ದರಿಂದ ಜೀವನದ ಎಲ್ಲಾ ರಂಗಗಳ ಚಟುವಟಿಕೆಯಲ್ಲಿ ರಾಷ್ಟ್ರೀಯ ಸಂಘಟನೆಯ ಪ್ರಜ್ಞೆಯನ್ನು ಬಲಪಡಿಸಲು ಪ್ರತಿ ಭಾರತೀಯನೂ ಪ್ರಯತ್ನಿಸಬೇಕು. ಇದು ಪ್ರಥಮ ಕರ್ತವ್ಯ.

ಪ್ರತಿಸ್ಪರ್ಧೆಯೂ ಭಾರತೀಯನಂತೆ ಚಿಂತಿಸಿ ಕಾರ್ಯಶೀಲನಾಗದಿದ್ದರೆ ನೈಜ ರಾಷ್ಟ್ರೀಯ ಸಂಘಟನೆ ಸಾಧಿಸುವುದು ದುಸ್ಸಾಧ್ಯವಾಗುತ್ತದೆ. ಅಗೋಚರ ಭವಿತವ್ಯದ ಕವಲುದಾರಿಯಲ್ಲಿ ನಿಂತಿರುವಾಗ ಪ್ರತಿಭಾರತೀಯನೂ ತಾನು ದೇಶಕ್ಕಾಗಿ ದುಡಿಯುತ್ತಿರುವೆನೇ, ಹಾಗೂ ರಾಷ್ಟ್ರೀಯ ಸಂಘಟನೆ ಬಲಪಡಿಸಲು ಯತ್ನಿಸುತ್ತಿರುವೆನೇ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

"ನಮ್ಮ ಜನತೆಯ ಹಳೆಯ ದೌರ್ಬಲ್ಯವೊಂದಿದೆ. ನಾವು ಯಾವಾಗಲೂ ಏಕತಾ ಭಾವದಿಂದಿರಲಿಲ್ಲ. ನಾವು ಸ್ವತಂತ್ರ ಕಳೆದುಕೊಂಡ ಅನೇಕ ಪ್ರಾಚೀನ ಉದಾಹರಣೆಗಳಿವೆ" ಎಂದು ದಿವಂಗತ ಪ್ರಧಾನಿ ನೆಹರು ಸ್ವಾತಂತ್ರ್ಯನಂತರ ಹೇಳಿದ್ದರು. "ನಮ್ಮ ದೇಶ ಇಂದು ಜಾತೀಯತೆಯ ಭೂತವನ್ನು ಎದುರಿಸುತ್ತಿದೆ" ಎಂದು ಶ್ರೀಮತಿ ಇಂದಿರಾ ಗಾಂಧಿ ಹೇಳಿದ್ದಾರೆ.

ರಾಷ್ಟ್ರೀಯ ಪ್ರಜ್ಞೆ

ನಮ್ಮ ದೇಶ ಉಳಿಯಬೇಕಾದರೆ ರಾಷ್ಟ್ರೀಯ ಸಂಘಟನೆ ರೂಢಿಸಬೇಕಾಗಿರುವುದು ಅತ್ಯಗತ್ಯ. ಕೇವಲ ಔಪಚಾರಿಕ ರಾಷ್ಟ್ರೀಯತೆಯಿದ್ದರೆ ಸಾಲದು. ಅದರಲ್ಲಿ ರಾಷ್ಟ್ರೀಯತೆಯ ಸತ್ವವಿರುವುದಿಲ್ಲ. ಈ ವಿಷಯದಲ್ಲಿ ತಜ್ಞರಾದ ಡಾ. ಫ್ರೆಡರಿಕ್ ಹರ್ಟ್ಸ್ ಹೇಳುವಂತೆ ರಾಷ್ಟ್ರೀಯತೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಅಥವಾ ರಾಷ್ಟ್ರೀಯ ಅಂತಃಕರಣವಿರಬೇಕು. ಈ ಪ್ರಜ್ಞೆಯಿಲ್ಲದಿದ್ದರೆ ರಾಷ್ಟ್ರ ಅಸ್ತಿತ್ವದಲ್ಲಿರುವುದಿಲ್ಲ.

ರಾಷ್ಟ್ರೀಯ ಪ್ರಜ್ಞೆ ಮೂಡಿಸುವುದೇ ಇಂದಿನ ಶಿಕ್ಷಣದ ಮುಖ್ಯ ಹೊಣೆಯಾಗಿದೆ. ಈ ಹೊಣೆಯನ್ನು ದೇಶದ ಎಲ್ಲ ಶಿಕ್ಷಕರು ಉತ್ಸಾಹದಿಂದ, ಸಮರ್ಪಣ ಭಾವದಿಂದ ಹೊರಬೇಕಾಗಿದೆ. ಸ್ವಾತಂತ್ರ್ಯ ಗಳಿಕೆಗೆ ಹೋರಾಡಿದ ಉತ್ಸಾಹದಿಂದ ಈ ಗುರಿ ಸಾಧನೆಗಾಗಿ ಶ್ರಮಿಸಬೇಕಾಗಿದೆ.

ಮಾನವ ವ್ಯಕ್ತಿತ್ವವನ್ನು ಗೌರವಿಸುವುದನ್ನು ಕಲಿಯಬೇಕಾಗಿದೆ. ಅದು ಸಾಮಾಜಿಕ ಮತ್ತು ಜಾತೀಯ ನೀತಿಶಾಸ್ತ್ರದ ತಿರುಳಾಗಬೇಕಾಗಿದೆ. ಪ್ರಜಾತಂತ್ರವಾದಿಯಾದ, ಸಾಮಾಜಿಕ ವ್ಯವಸ್ಥೆಯುಳ್ಳ ದೇಶ ಸಮತಾ ಸಮಾಜದ ನೀತಿಮತ್ತೆಯನ್ನು ಅಭಿವೃದ್ಧಿಪಡಿಸಬೇಕು. ಶಿಕ್ಷಣ ಪ್ರಸಾರ ವ್ಯಾಪಕವಾದಂತೆ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ರೂಢಿಸಿ, ರಾಷ್ಟ್ರೀಯ ಸಂಘಟನೆಯನ್ನು ಬಲಪಡಿಸುತ್ತದೆ. ಈ ಪ್ರಜ್ಞೆ ಬಾಲಕ, ಬಾಲಕಿಯರ ಮನದಲ್ಲಿ ಬೆಳಗಿದರೆ ಅಸಹಿಷ್ಣುತಾ ಭಾವ ಕಣ್ಮರೆಯಾಗುತ್ತದೆ. ಆಗ ಯಾವೊಂದು ವರ್ಗದ ಜನವೂ ಹೊಣೆಗಾರಿಕೆಯಿಲ್ಲದೆ ಹಕ್ಕುಗಳಿಗಾಗಿ ಹೊಡೆದಾಡುವುದಿಲ್ಲ.

ದೇಶವು ವಿದೇಶೀ ಆಕ್ರಮಣಕಾರರನ್ನು ಎದುರಿಸಬೇಕಾದಾಗ, ಆಕ್ರಮಣಕಾರರ ವಿರುದ್ಧ ಜಯಗಳಿಸಬೇಕಾದಾಗ ಜನತೆ ಸಮಭುಜವಾಗಿ ನಿಲ್ಲುತ್ತಾರೆ. ಈ ದೇಶಪ್ರೇಮವನ್ನೇ, ಶೀಲಸ್ವಭಾವವನ್ನೇ ಶಿಕ್ಷಣದ ಮೂಲಕ ಬಲಪಡಿಸಬೇಕಾಗಿದೆ. ಬಲಿಷ್ಠ, ಸಮೃದ್ಧ ಭಾರತ ದೇಶವನ್ನು ನಿರ್ಮಾಣ ಮಾಡಲು ಪ್ರತಿ ಭಾರತೀಯನೂ ಈ ದಿಸೆಯಲ್ಲಿ ಕರ್ತವ್ಯನಿಷ್ಠನಾಗಬೇಕಾಗಿದೆ.

ಶಿರ್ವ ವಿದ್ಯಾವರ್ಧಕ ಸಂಘದ ನೂತನ ಆಡಳಿತ ಮಂಡಳಿ

ಇತ್ತೀಚೆಗೆ ಶಿರ್ವದ ಸಂಘದ ಮಹಾಸಭೆಯು ಶ್ರೀ ಟಿ. ಶಿವಾಜಿ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿದ್ದು, ವರದಿವಾಚನ, ಲೆಕ್ಕ ಪತ್ರಗಳ ಪರಿಶೀಲನೆ, ಕೆಲವು ನಿಬಂಧನೆಗಳ ತಿದ್ದುಪಡಿಗಳಾದ ಮೇಲೆ ಈ ಕೆಳಗಿನ ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿ ರಚಿಸಲ್ಪಟ್ಟಿತು.

ಶ್ರೀಗಳಾದ ಟಿ. ಶಿವಾಜಿ ಶೆಟ್ಟಿ (ಅಧ್ಯಕ್ಷ ಮತ್ತು ಶಾಲೆಗಳ ಕರೆಸ್ಪಾಂಡೆಂಟ್), ಎಸ್. ದುಗ್ಗಪ್ಪ ಹೆಗ್ಡೆ (ಉಪಾಧ್ಯಕ್ಷ), ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ), ಕೆ. ನಾರಾಯಣ ಶೆಟ್ಟಿ (ಉಪಕಾರ್ಯದರ್ಶಿ), ಬಿ. ಸುಬ್ಬಯ ಹೆಗ್ಡೆ (ಕೋಶಾಧಿಕಾರಿ), ಬಿ. ಜಯರಾಮ ಶೆಟ್ಟಿ, ಕೆ. ವಾಸು ಶೆಟ್ಟಿ, ಟಿ. ಸೀತಾರಾಮ ಶೆಟ್ಟಿ, ಎಸ್. ಹರಿಣಾಕ್ಷ ಹೆಗ್ಡೆ, ಬಿ. ಭಾಸ್ಕರ ಹೆಗ್ಡೆ, ಬಿ. ಭಾಸ್ಕರ ಶೆಟ್ಟಿ, ಎಮ್. ಲೋಕಯ್ಯ ಶೆಟ್ಟಿ, ಸತೀಶ ಹೆಗ್ಡೆ, ಎಸ್. ವಿಠಲ ಶೆಟ್ಟಿ, ಕೆ. ರಘುರಾಮ ಹೆಗ್ಡೆ ಮತ್ತು ಬಿ. ವಿಠಲದಾಸ ಹೆಗ್ಡೆ (ಸದಸ್ಯರು)

ರೆದಿದ್ದ ವಜ್ರ ಇಂದು ಆಧುನಿಕ ಕೈಗಾರಿಕೆಯ ಬಹುಮುಖ್ಯ ವಸ್ತುವೆನಿಸಿದೆ. ವಿಮಾನ, ಆಟೋಮೊಬೈಲ್, ಕನ್ನಡಿ, ಕ್ರೋನೋಮೀಟರ್; ಕೊರೆಯುವ ಸಲಕರಣೆಗಳು, ವಿದ್ಯುತ್ ಮೋಟರುಗಳು— ಮೊದಲಾದವುಗಳ ಒಂದು ಭಾಗವಾಗಿ ವಜ್ರಗಳನ್ನು ಉಪಯೋಗಿಸುತ್ತಿದ್ದಾರೆ. ಈ ಕ್ಷಣಕ್ಕೆ ವಜ್ರಗಳನ್ನೆಲ್ಲ ವಾಪಸು ಪಡೆದರೆ, ಈ ಕೈಗಾರಿಕೆಗಳು ಕೆಲದಿನಗಳವರೆಗಾದರು ತಮ್ಮ ಕೆಲಸವನ್ನು ನಿಲ್ಲಿಸಿ ಬಿಡಬೇಕಾಗುವದು. ಕೃತಕ ವಜ್ರಗಳನ್ನು ತಯಾರಿಸಲು ಬೇಕಾದಷ್ಟು ಸಂಶೋಧನೆ ನಡೆದಿದೆ.

ಆಂಧ್ರ ಪ್ರದೇಶದಲ್ಲಿ ವಜ್ರ ನಿಕ್ಷೇಪವನ್ನು ಪತ್ತೆ ಹಚ್ಚಲು ಸಂಶೋಧನ ಕಾರ್ಯ ನಡೆದಿದೆ, ಇಲ್ಲಿ ಒಂದು ವರ್ಷಕ್ಕೆ ಒಂದು ಲಕ್ಷ ಕ್ಯಾರೆಟ್ ವಜ್ರಗಳನ್ನು ತೆಗೆಯಲು ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಈಗಾಗಲೇ ಭಾರತದ ವಜ್ರಗಳ ಹೆಸರು ವಿಶ್ವದ ಮಾರುಕಟ್ಟೆಯಲ್ಲಿ ಕೇಳಿ ಬರುತ್ತಿದೆ, ಮುಂದಿನ ವರ್ಷಗಳಲ್ಲಿ ಈ ಹೆಸರು ಇನ್ನೂ ಹೆಚ್ಚಾಗಿ ಕೇಳಿಬರುವ ಸೂಚನೆ, ಸಾಧ್ಯತೆ ಇದೆ!



ಪುಸ್ತಕ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂ. ಪ.

ವೀರ ವೃಷಸೇನ: (ಅರ್ಥ ಸಹಿತ ಯಕ್ಷಗಾನ ನಾಟಕ)

ಲೇಖಕರ : ಶ್ರೀ ಕಾರ್ಕಳ ಶ್ರೀನಿವಾಸ ಉಡುಪ.

ಪ್ರಕಾಶಕರು: ಉಪಾಧ್ಯಾಯ ಎಂಡ್ ಕೊ; ೧೩-೮೪೬, ಗಣಪತಿ ದೇವಸ್ಥಾನ ರಸ್ತೆ, ಮಂಗಳೂರು-೧.

ಪುಟಗಳ ೨೪+೨೮. ಬೆಲೆ: ರೂ ೦-೦೦.

ಶಾಲೆಕಾಲೇಜುಗಳಲ್ಲಿ ಯಕ್ಷಗಾನ ನಾಟಕಗಳಿಗೆ ಅವಕಾಶ ಕೊಡಬೇಕೆಂದಿರುವವರಿಗೆ ಸೂಕ್ತ ಮಾರ್ಗದರ್ಶನದೊಂದಿಗೆ ಅಚ್ಚಾಗಿರುವ ಈ ಯಕ್ಷಗಾನ ನಾಟಕವೊಂದು ಉತ್ತಮ ಕೊಡುಗೆ. ಕರ್ಣನ ಪುತ್ರ ವೃಷಸೇನನು ಕರ್ಣಾವಸಾನಕ್ಕೆ ಪೂರ್ವಭಾವಿಯಾಗಿ ಕುರುಕ್ಷೇತ್ರಕ್ಕೆ ತೆರಳಿ ಅಲ್ಲಿ ಭೀಮಗರ್ವಭಂಗ ಮಾಡಿ ಅರ್ಜುನನ ಕೈಯಿಂದ ಗತಪ್ರಾಣನಾಗುವುದು ಇಲ್ಲಿನ ಕಥಾವಸ್ತು. ಭೀಮಗರ್ವಭಂಗದಲ್ಲೂ ಅರ್ಜುನನಿಗಾಗುವ ಸ್ವರ್ಗದ ಕರ್ಷದಲ್ಲೂ ಭಾಗವತ ಸಂಪ್ರದಾಯದಂತೆ ಶ್ರೀ ಕೃಷ್ಣನ ಸೂತ್ರಧಾರತ್ವ ಎದ್ದು ಕಾಣುತ್ತದೆ.

ಯಕ್ಷಗಾನದ ವಿವಿಧ ವಿಭಾಗಗಳಲ್ಲಿ ಪಳಗಿದ ಶ್ರೀ ಉಡುಪರ ಈ ಕೃತಿಯು ಉತ್ತಮವಾಗಿದೆ; ಉಪಕಾರಿಯೂ ಆಗಿದೆ. ಪದ್ಯಗಳಲ್ಲಿ ಇತರ ಯಕ್ಷಗಾನ ಕೃತಿಗಳ ಛಾಯೆ ಎದ್ದು ತೋರುವುದು ಸಹ್ಯವಾದರೂ ವಿದ್ಯಾರ್ಥಿಗಳಿಗುಪಯೋಗಿಯಾದ ಕೃತಿರಚನೆಯೇ ಇದರ ಉದ್ದೇಶವೆಂಬುದನ್ನು ಗಮನಿಸಬೇಕು. ೨೮ ಪುಟಗಳ ಈ ಚಿಕ್ಕ ಪೋರನಿಗೆ ಆರಂಭದ ೨೪ ಪುಟಗಳ ಸೂಚನೆ— ಇತ್ಯಾದಿ ಸ್ವಗತ ಪರಗತಗಳು ಭಾರವೆನಿಸುತ್ತವೆ. ಇಂದಿನ ವಿದ್ಯಾರ್ಥಿಗಳು ಅರ್ಥಯಿಸಿ ಹೇಳುವಷ್ಟು ಅರ್ಥ ಕೆಲವೆಡೆ ಸರಳವಾಗಿಲ್ಲವೆನಿಸುತ್ತದೆ.

ನಮ್ಮ ಪ್ರವಾಸ· ಬರೆದವರು: ಶ್ರೀ ಕೆ. ಕೊಟ್ರಗೌಡ.

ಪ್ರಕಾಶಕರ : ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿ ಬೊಮ್ಮನ ಹಳ್ಳಿ, ಬಳ್ಳಾರಿ ಜಿಲ್ಲೆ.

ಪುಟಗಳು: ೪೨. ಬೆಲೆ: ೦-೫೫.

ಶ್ರೀ ಕೆ. ಕೊಟ್ರಗೌಡರು ಮಾಡಿದ ಭಾರತಯಾತ್ರೆಯ ಸಂಕ್ಷಿಪ್ತ ಪ್ರವಾಸ ಕಥನವಿದು. ಸಾವಿರಾರು ಪುಟಗಳಷ್ಟು ಕಷ್ಟ ಓದಬಹುದಾಗಿದ್ದ ಈ ಕಥನವನ್ನು 'ದಿನಚರಿ' ಯಂತೆ ಚುಟುಕಿನಲ್ಲಿ ಸಂಗ್ರಹಿಸಿ ಇತರರಿಗೂ ಅನುಕೂಲಕ್ಕಾದಗುವಂತೆ ಲೇಖಕರು ಪ್ರಕಾಶ ಪಡಿಸಿದ್ದಾರೆ.

ಸೇವಾಗ್ರಾಮ, ಪೂನಾ, ಬೊಂಬಾಯಿ, ಜಬ್ಬಲಪುರ, ಅಲಹಬಾದ, ಆಗ್ರಾ, ಮಥುರಾ, ದೆಹಲಿ, ಚಂಡಿಗಡ, ಸಿಮ್ಲಾ, ಹರಿದ್ವಾರ, ಋಷಿಕೇಶ, ಬನಾರಸ್, ಸಾರನಾಥ, ಗಯಾ, ಬುದ್ಧಗಯಾ, ಕಲ್ಕತ್ತಾ, ಪುರಿ, ಮದ್ರಾಸ್, ತಿರುಪತಿ, ತಿರುವಣ್ಣಾಮಲೈ, ಪಾಂಡಿಚೇರಿ, ರಾಮೇಶ್ವರಂ ತಿರುಚಿ—ಗಳ ಯಾತ್ರೆ ಮತ್ತು ಅಲ್ಲಿ ನೋಡಬಹುದಾದ ಸ್ಥಳಗಳು, ವೈಶಿಷ್ಟ್ಯಗಳು, ಪ್ರವಾಸವೇಳೆಯ ಅನುಭವಗಳು—ಇವೆಲ್ಲವೂ ಸಂಗ್ರಹಿತವಾಗಿರುವ ಈ ಪುಸ್ತಕಕ್ಕೆ ರಾಜ್ಯದ ಶಿಕ್ಷಣೋಪಾಧ್ಯಾಯರು ಮುನ್ನುಡಿಯಿತ್ತಿದ್ದಾರೆ. 'ನಮ್ಮ ಪ್ರವಾಸ'ವು ಪ್ರವಾಸಿಗರಿಗೆ ಸಹಾಯಕವಾಗುವುದೆಂದು ಹೇಳಬಹುದು.

— ಗೋರಾ

ಶ್ರದ್ಧಾನಂದ ಸೇವಾಶ್ರಮದ ಹೊಸ ಕಟ್ಟಡದ ಉದ್ಘಾಟನೆ

ಮಂಗಳೂರಿನ ವಿವೇಕಾನಂದ ರಸ್ತೆಯಲ್ಲಿಯ ಬಸ್ತಿ ಕಂಪೌಂಡಿನಲ್ಲಿ ಹೊಸತಾಗಿ ಕಟ್ಟಿಸಿದ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. ೨೨ರಂದು ಜನರಲ್ ಕೆ. ಎಮ್. ಕಾರ್ಯಪ್ಪನವರಿಂದ ನೆರವೇರಿಸಲ್ಪಟ್ಟಿತು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ| ಕೆ. ನಾಗಪ್ಪ ಆಳ್ವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದ ಬಳಿಕ ಆಶ್ರಮದ ಆಡಳಿತ ಸಮಿತಿಯ ಅಧ್ಯಕ್ಷ ಡಾ| ಕೆ. ಬಾಳಪ್ಪ ಶೆಟ್ಟರು ಸ್ವಾಗತ ಭಾಷಣ ಗೈದರು. ಆಡಳಿತ ಮಂಡಳಿಯ ಸದಸ್ಯ ಶ್ರೀಮತಿ ರತ್ನಾ ಹೆಗ್ಡೆಯವರು ವರದಿ ಒಪ್ಪಿಸಿದರು.

ಜನರಲ್ ಕಾರ್ಯಪ್ಪನವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸೇವಾಶ್ರಮದ ಪ್ರಗತಿಯನ್ನು ಶ್ಲಾಘಿಸಿ, ಅದರ ಉಪಯುಕ್ತತೆಯನ್ನು ವಿವರಿಸಿ ಆಶ್ರಮವಾಸಿ ಮಕ್ಕಳಿಗೆ ಹಿತವಾದ ನೀಡಿದರು.

ಶ್ರೀ ಕೆ. ಎಸ್. ಎಸ್. ಅಡಿಗರು, ದಿ| ವಿ ಎಸ್. ಛಾಯಾಚಿತ್ರವನ್ನೂ, ಕವಿಗಳು ಶ್ರೀ ಎಂ. ಅಣ್ಣಪ್ಪ ಕಾಮತರು ದಿ| ಯು. ನಾರಾಯಣ ಪಲ್ಲರು ಛಾಯಾಚಿತ್ರವನ್ನೂ, ಡಾ| ಎಮ್ ಡಿ. ಅಡಪ್ಪರು ದಿ| ಶೇಟ್ ಜಮನಾದಾಸ್ ಗೋಕುಲ್ ದಾಸರ ಛಾಯಾಚಿತ್ರವನ್ನೂ ಅನಾವರಣ ಮಾಡಿ ದಿವಂಗತರುಗಳ ಗುಣಗಾನ ಮಾಡಿದರು. ಅಧ್ಯಕ್ಷ ಡಾ| ಆಳ್ವರು ಪೂರಕನಾದುದ್ದಾ ರಾಷ್ಟ್ರರಕ್ಷಣೆ ಮತ್ತು ಧರ್ಮ ರಕ್ಷಣೆ ದ್ವಾರಾ ಎಂದೂ ಪರೋಪಕಾರ ಮತ್ತು ಉಪಕಾರ ಸ್ಮರಣೆ ವಿಶಿಷ್ಟ ಗುಣಗಳೆಂದೂ ಹೇಳಿ ಆಶ್ರಮದ ಬೆಳವಣಿಗೆಯನ್ನು ಕೊಂಡಾಡಿದರು. ಕಾರ್ಯದರ್ಶಿ ಸ್ವಾಮಿ ಸದಾನಂದ ಸರಸ್ವತಿಯವರು ವಂದನೆಗಳನ್ನರ್ಪಿಸಿದರು.

In the Court of
3rd additional Munsiff
Puttur, S. Kanara

R. R. C 348/69

D N Srinivasa Rao ... applicant
D. N. Raghavendra Rao ...
Respondent

To
Sri D N Raghavendra Rao,
S/o Deshakodi Narasimhayya,
Markanje Village, Sullia Taluk.

Sir,

Please take notice that the above said application is posted for your appearance in the above Court on 1—4—1970 If you fail to appear on that day either through advocate or yourself you will be set as exparte

Be it known.
(By order)

Venkatramana B. N.
Advocate for applicant.

Puttur, 7—3—1970

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ನಿಮ್ಮದೇ ಆದ ಬ್ಯಾಂಕಿನ ಕುರಿತು
ತಿಳಿಸುವುದಕ್ಕಾಗಿ . . ..

ಸಿಂಡಿಕೇಟ್ ಬ್ಯಾಂಕ್!

ಸಿಂಡಿಕೇಟ್ ಬ್ಯಾಂಕು ಸಾರ್ವಜನಿಕರಿಂದ ಸತತ ಸಹಾಯವನ್ನು ಪಡೆದು ಯಾನಾಲೂ ಬಲವನ್ನೂ ಸ್ಫೂರ್ತಿಯನ್ನೂ ಪಡೆದಿದೆ ಜನತೆಯ ಒಳಿತಿಗಾಗಿ ಸಿದ್ಧಗೊಳಿಸಿದ ನಮ್ಮ ಹಲವಾರು ಯೋಜನೆಗಳ ಪ್ರಯೋಜನವನ್ನು ಪ್ರಾಸಂಗಿಕವಾಗಿ ಜನರಿಗೆ ತಿಳಿಸುವುದು ನಮ್ಮ ಪ್ರಯತ್ನವೂ ಆಗಿರುವುದು

ಇದನ್ನು ಗಮನದಲ್ಲಿಟ್ಟುಕೊಂಡು ನಾವು ಪ್ರಮುಖ ಕೇಂದ್ರಗಳಲ್ಲಿ ನಡೆಯುವ ಹಲವಾರು ಪ್ರದರ್ಶನಗಳಲ್ಲಿ ಮುತುವರ್ಜಿಯಿಂದ ಭಾಗವಹಿಸುತ್ತಾ ಇದ್ದೇವೆ ಜೀವನದ ಎಲ್ಲಾ ರಂಗದ ಜನರು ನಮ್ಮ ಪ್ರದರ್ಶನದ ಸ್ಟಾಲನ್ನು ಸಂದರ್ಶಿಸಿ ನಮ್ಮನ್ನು ಮತ್ತು ನಮ್ಮ ಯೋಜನೆಗಳನ್ನು ತಿಳಿಯುವರಿ ಆಸಕ್ತಿ ತೋರಿಸಿದುದು ನಮ್ಮಲ್ಲಿ ಸಂತಸವನ್ನುಂಟುಮಾಡಿದೆ

ಮಂಗಳೂರಿನಲ್ಲಿರುವ ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನದಲ್ಲಿರುವ ಸಿಂಡಿಕೇಟ್ ಬ್ಯಾಂಕಿನ ಸ್ಟಾಲು ನಿಮ್ಮೆಲ್ಲರನ್ನೂ ಸ್ವಾಗತಿಸುತ್ತದೆ

ಈಗ 366 ಶಾಖೆಗಳ ಮೂಲಕ ರಾಷ್ಟ್ರದ ಸೇವೆ ಗೈಯುತ್ತಿದೆ.

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗೆ ಪ್ರತಿಯೋರ್ವನ ಬ್ಯಾಂಕು

ಸಿಂಡಿಕೇಟ್ ಬ್ಯಾಂಕ್

(ಇಂಡಿಯಾ ಸರಕಾರದ ನಿರ್ವಹಣೆಗೊಳಪಟ್ಟದ್ದು)

ಪ್ರಧಾನ ಕಚೇರಿ :
ಮಣಿಪಾಲ

ಕೆ. ಕೆ. ಪೈ
ಕಸ್ಟೋಡಿಯನ್

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ರಾಜಕೀಯ ಅಭಿಪ್ರಾಯ

ಘನಸ್ಥಿಕೆಯಿಲ್ಲದ ಸುಗ್ರೀವಾಜ್ಞೆ

ದೇಶದ ಸರ್ವೋಚ್ಚ ನ್ಯಾಯಾಲಯವು ಬ್ಯಾಂಕ್ ರಾಷ್ಟ್ರೀಕರಣ ಕಾಯ್ದೆ ರಾಜ್ಯಾಂಗ ಬಾಹಿರವೆಂದು ಆದರಲ್ಲಿ ಕೇವಲ 14 ಬ್ಯಾಂಕುಗಳನ್ನು ಮಾತ್ರ ರಾಷ್ಟ್ರೀಕರಿಸಿ ಮಿಕ್ಕುಳಿದ ದೇಶಿ ವಿದೇಶಿ ಬ್ಯಾಂಕುಗಳನ್ನು ಬಿಟ್ಟಿದು ಪಕ್ಷಪಾತ ಮಾಡಿದಂತಾಗಿದೆಯೆಂದು ಆ ಕಾರಣದಿಂದ ಜುಲೈಯಲ್ಲಿ ಹೊರಡಿಸಿದ ಬ್ಯಾಂಕುಗಳ ರಾಷ್ಟ್ರೀಕರಣ ಸುಗ್ರೀವಾಜ್ಞೆಯನ್ನು ರದ್ದುಗೊಳಿಸಿದ ಕೆಲವೇ ದಿವಸಗಳಲ್ಲಿ ಭಾರತ ಸರ್ಕಾರ ತಿರುಗಿ ಅದೇ 14 ಬ್ಯಾಂಕುಗಳನ್ನು ಇನ್ನೊಂದು ಸುಗ್ರೀವಾಜ್ಞೆ ಮೂಲಕ ಪಾಲುದಾರರಿಗೆ ಅಧಿಕ ಪರಿಹಾರವನ್ನು ಕೊಟ್ಟು ಪುನಃ ರಾಷ್ಟ್ರೀಕರಿಸಿದ್ದು ನಾವೆಲ್ಲ ಅರಿತಿದ್ದೇವಷ್ಟೆ! ಆದರೆ ಉಚ್ಚ ನ್ಯಾಯಾಲಯದ ಘನತೆ ದೃಷ್ಟಿಯಿಂದ ಭಾರತ ಸರ್ಕಾರವು ಈ ನ್ಯಾಯಾಲಯದ ತೀರ್ಪನ್ನು ಕೆಲ ತಿದ್ದುಪಡಿಯೊಡನೆ ಮಜಾಮಾಡಿ ಪ್ರಾಮುಖ್ಯ ನೀತಿಯೆಡೆ ಕಣ್ಣೋಡಿಸದೆ ಮೊದಲ ಸೀಮಿತರೊಳಗೇನೆ ತನ್ನ ಆಜ್ಞೆಯನ್ನು ತಿರುಗಿ ಜಾರಿಗೆ ತಂದುದು ಸರಿಯಾಗಲಿಲ್ಲ. ಕಾರಣ ಈ ಸರ್ಕಾರವೆ ಅಪ್ರಾಮುಖ್ಯ ನ್ಯಾಯಾಸ್ಥಾನದ ತಿರುಳಿನ ತೀರ್ಪನ್ನು ಸಮಾಜವಾದದ ಹುರುಳಿಗಾಗಿ ಕೆಲವೇ ತಿದ್ದುಪಡಿಯೊಡನೆ ಹಳೆ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು ಇಂದಿರಾ ಸರ್ಕಾರದ ವಿಚಾರ ಬಾಹಿರ ಕೃತ್ಯ ಆಗಿರುತ್ತದೆ. ಇಂತು ಹಿರಿಯ ನ್ಯಾಯಾಲಯದ ತೀರ್ಪನ್ನು ಸರಕಾರ ತನ್ನ ಕಾರಣಕ್ಕಾಗಿ ತಿರಸ್ಕರಿಸಿ ತನ್ನದ್ದೆ ಧೋರಣೆಯನ್ನು ನ್ಯಾಯಾಲಯದ ದೃಷ್ಟಿಯಲ್ಲಿ ತಪ್ಪಾಗಿ ತೋರಿದರೂ ಜನತೆಯ ಮೇಲೆ ಹೇರಲು ಹೊರಟದ್ದು ಪ್ರಜಾಪ್ರಭುತ್ವ ರೀತಿಗೆ ಹೊರತಾಗಿದೆಯೆಂದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ಇರಲಿ ಸರ್ಕಾರಕ್ಕೆ ನಿಶ್ಚಿತ ಮಟ್ಟದಲ್ಲಿ ಇದೇ ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಿಸುವ ಅಗತ್ಯ ಏನಿತ್ತೆಂದು ಅರ್ಥವಾಗಲಿಲ್ಲ. ಒಂದೊಮ್ಮೆಗೆ ಸರ್ಕಾರಕ್ಕೆ ಬ್ಯಾಂಕ್ ರಾಷ್ಟ್ರೀಕರಣ ಆಗಲೇ ಬೇಕೆಂದಿದ್ದರೆ ಇಂತ. ಸುಗ್ರೀವಾಜ್ಞೆಯನ್ನು ಹೊರಡಿಸುವ ಬದಲು ಈ ಅವಾಂತರವಿಲ್ಲದೆ ಸಂಸತ್ತಿನ ಮೂಲಕವೇ ಇದನ್ನು ಊರ್ಜಿತಗೊಳಿಸಬಹುದಿತ್ತು. ಹೀಗೆ ಮಾಡಿದ್ದರೆ ಪಕ್ಷ ಪ್ರತಿಪಕ್ಷಗಳು ಸವಾಲೊಡ್ಡದೆ ಈ ವಿಧೇಯಕ ಪಾಸಾಗುವುದರಲ್ಲಿ ಒಂದಿಷ್ಟೂ ಸಂದೇಹವಿರಲಿಲ್ಲ. ಏಕೆಂದರೆ ಕೆಲವೆ ಪಕ್ಷಗಳು ಬಿಟ್ಟು ಸಂಸ್ಥಾ ಕಾಂಗ್ರೆಸ್ಸಿನಿಂದ ಹಿಡಿದು ಎಲ್ಲಾ ಪಕ್ಷಗಳು ಈ ಕಾಯ್ದೆಗೆ ಬೆಂಬಲವನ್ನು ಕೊಡುತ್ತಿದ್ದವು. ಇಂತಿರುವಾಗ ಭಾರತ ಸರ್ಕಾರ ನ್ಯಾಯಾಲಯದ ತೀರ್ಪನ್ನು ತೊಡೆದುದು ಯಾವ ನೆಲೆಯಲ್ಲೂ ಅರ್ಥವಾಗುವುದಿಲ್ಲ. ಇದು ನ್ಯಾಯಸ್ಥಾನಕ್ಕೆ ಅತಿ ಗೌರವ ಕೊಡುವ ಈ ದೇಶದ ಜನರಿಗೆ ಮೆಚ್ಚುಗೆಯಾಗಲಾರದು.

ಒಂದು ಪೆಟ್ಟಿಗೆ ಸರ್ಕಾರಕ್ಕೆ ಹಣದ್ದೆ ಅತಿ ತಾಪತ್ರಯವಿದ್ದು ಇದಿಲ್ಲದೆ ಪೇಚಾಗುವುದಿದ್ದರೆ ಈ ಆಜ್ಞೆಯೊಡನೆ ಮಿಕ್ಕುಳಿದ ಹಲಕೆಲವು ದೇಶಿ ಬ್ಯಾಂಕುಗಳನ್ನಾದರೂ ಸುಪ್ರೀಂಕೋರ್ಟಿನ ಘನಸ್ಥಿಕೆ ಉಳಿಸಲು ರಾಷ್ಟ್ರೀಕರಿಸಬೇಕಿತ್ತು. ಅದು ಬಿಟ್ಟು ಇಂದಿರಾರವರು ಕೋರ್ಟ್ ತಿರಸ್ಕರಿಸಿದ್ದನ್ನು ಆಚರಿಸುವ ಪರಿಯನ್ನು ನೋಡಿದಾಗ ಈ ಇಂಡಿಕೇಟ್ ಆಡಳಿತದಲ್ಲಿ ನ್ಯಾಯಾಂಗಕ್ಕೆ ಬೆಲೆಯಿಲ್ಲವೊ ಎಂದು ತಲೆ ಕೆರೆದುಕೊಳ್ಳುವಂತಾಗುತ್ತದೆ.

ಬ್ಯಾಂಕ್ ರಾಷ್ಟ್ರೀಕರಣವನ್ನು ಸರ್ಕಾರ ತಿರುಗಿ ಹಿರಿ ಉದ್ದೇಶವನ್ನಿಟ್ಟುಕೊಂಡು ಮಾಡಿದೆ. ಆದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಡಳಿತಗಾರರು ತೀರ್ಪಿನ ಚೌಕಟ್ಟಿನೊಳಗೆನೆ ಬೆಲೆ ಬರದಂತೆ ಸುಗ್ರೀವಾಜ್ಞೆ ಮಾಡಿದುದು ದೇಶ ವಿದೇಶದಲ್ಲಿ ನ್ಯಾಯಾಲಯದ ಘನಸ್ಥಿಕೆಯನ್ನು ಕುಗ್ಗಿಸುವಂಥ ಕೃತ್ಯವಾಗಿರುತ್ತದೆಯೆಂದರೆ ತಪ್ಪಾಗಲಿಕ್ಕಿಲ್ಲ. ಆಡಳಿತಗಾರರು ಆತ್ಮಸಮಾಧಾನಕ್ಕೋಸ್ಕರ ನ್ಯಾಯಾಲಯ ತೋರಿದ ಪರಿಹಾರ ಧನದ ಲೋಪದೋಷವನ್ನು ಹಾಲಿ ಆಜ್ಞೆಯಲ್ಲಿ ಸರಿಪಡಿಸಿದ್ದೇವೆ, ಇನ್ನೊಂದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನಬಹುದು. ಆದರೆ ಇಂತು ಮಾಡುವ ಬದಲು ಸರಕಾರ ಈ ಸುಗ್ರೀವಾಜ್ಞೆಯಲ್ಲೆ ಮಿಕ್ಕುಳಿದ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ್ದರೆ ಪಕ್ಷಪಾತದ ಆಪಾದನೆಯಿಂದ ಮುಕ್ತಿ ಹೊಂದುತ್ತಿತ್ತು.

ಇಂದಿರಾ ಸರ್ಕಾರವು ತನ್ನ ಹಠಸಾಧನೆಯನ್ನು ದೇಶ ವಿದೇಶಕ್ಕೆ ತೋರಿಸುವ ರೀತಿಯಲ್ಲಿ ಈ ರಾಷ್ಟ್ರೀಕರಣವನ್ನು ಮಾಡಿದುದು ತರವಲ್ಲವೆಂದು ಸೂಚಿಸ ಬಯಸುತ್ತೇನೆ.

ಬಿ. ಎಚ್. ಶಾಂತಾರಾಮ ಶೆಟ್ಟಿ,
ಬ್ರಹ್ಮಾವರ.

ಇದು ನಿಮಗೆ ಗೊತ್ತೆ?

ಟೆಲಿಗ್ರಾಂ ಕೊಡಲು ನೀವು ಪೋಸ್ಟ್ ಆಫೀಸಿಗೆ ಹೋಗುತ್ತೀರಿ. ನೀವು ಬರೆಯುವ ವಿಳಾಸದಲ್ಲಿ ಐದಕ್ಕಿಂತಲೂ ಹೆಚ್ಚು ಶಬ್ದಗಳಿರಬಹುದು. ವಿಚಾರ ಹೆಚ್ಚಾಗುವುದೆಂಬ ಚಿಂತೆ ಬೇಡ. ವಿಳಾಸದಲ್ಲಿ ಹೆಚ್ಚಿಗೆ ಐದು ಶಬ್ದಗಳಿಗೆ ನೀವು ಹೆಚ್ಚು ಹಣ ಕೊಡಬೇಕಾಗಿಲ್ಲ. ಅವುಗಳ ರವಾನೆ

ವಿಳಾಸದಲ್ಲಿ ಮಲಯ ಸಂಖ್ಯೆ ಬರೆಯಲು ಮರೆಯಬೇಡಿ. ಈ ಸಂಖ್ಯೆಗೂ ವೆಚ್ಚವಿಲ್ಲ.

ಪೂರ್ಣ ವಿಳಾಸ ಬರೆಯಿರಿ. ಅದರಿಂದ ಟೆಲಿಗ್ರಾಂ ಅತಿ ಶೀಘ್ರದಲ್ಲಿ ತಲುಪುತ್ತದೆ.

ಭಾರತೀಯ ಅಂಚೆ ಮತ್ತು ತಂತಿ ಇಲಾಖೆ

davp 63/692

ಪುತ್ತೂರು III ಎಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ

R. R. C. No. 408/1969

ಮಂಜ ವೆಂಕಟೇಶ್ವರ ಭಟ್ಟ — ಅರ್ಜಿದಾರ
ಯಂ. ಶಂಕರನಾರಾಯಣ ಮಯ್ಯ ಮತ್ತು ಇತರರು —ಎದ್ರಿಯರು

ನೋಟೀಸು

ಕೇರಳ ಸ್ಟೇಟಿನ ಕಾಸರಗೋಡು ತಾಲೂಕು, ಬಾಡೂರು ಗ್ರಾಮದ ಮೂಡಂಬೈಲು ಮನೆಯಲ್ಲಿರುವ ಸುಬ್ರಾಯ ಮಯ್ಯರ ಮಗ, ಶಿವರಾಮ ಮಯ್ಯರಿಗೆ ತಿಳಿಸುವುದೇನೆಂದರೆ—

ಅರ್ಜಿದಾರರು ನಿಮ್ಮ ಮತ್ತು ಇತರರ ಮೇಲೆ ಪುತ್ತೂರು III ಎಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ 1967-68ನೇ ವರ್ಷದ ಬಗ್ಗೆ ಬರಬೇಕಾಗಿದ್ದ ಗೇಣಿಯ ವಸೂಲಿ ಬಗ್ಗೆ ರೆಂಟ್ ಅರ್ಜಿ ನಂಬ್ರ 408/1969 ಎಂಬ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿಯು ತಾ. 8-4-1970ರಂದು ನಿಮ್ಮ ಹಾಜರಾತಿ ಬಗ್ಗೆ ಇದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ನೀವು ಹಾಜರಾಗಿ ನಿಮಗೇನಾದರೂ ಆಕ್ಷೇಪಗಳಿರುವುದಾದರೆ ಅಂಥಾ ಆಕ್ಷೇಪಗಳನ್ನು ಕೋರ್ಟಿಗೆ ಸಲ್ಲಿಸಬೇಕು. ಇದಕ್ಕೆ ತಪ್ಪಿದರೆ ನಿಮ್ಮನ್ನು [illegible] ಮಾಡಿ ವ್ಯವಹರಣೆಯು ಮುಂದುವರಿಯುವುದು. ತಿಳಿದಿರಲಿ.

(ಕೋರ್ಟಿನ ಹುಕುಂ ಪ್ರಕಾರ)

ಎ. ಪಿ. ಗೌರೀಶಂಕರ.
ಅರ್ಜಿದಾರರ ಎಡ್ವೋಕೇಟ್.

ಪುತ್ತೂರು, ದ. ಕ. 16.3.1970

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ.
ಬಾಲಕೋಟಿ, ಉಡುಪಿ, ದ. ಕ.

NAVAYUGA 26—3—1970
Registered with the Registrar
of News Papers for India
under No. R. N. 3540/'57

REGD: No: B. G. 176
LICENCE No: 33,
licensed to Post without Prepayment

ಸಾರಥಿ ನೋಡಿದ ಹಸಿರು ಬಾವುಟ

"ಟ್ಯಾಕ್ಸೀ..." ಎಂದು ಕರೆದೊಡನೆಯೇ ವಾಹನವೊಂದು ಎದುರು ಬಂದು ನಿಲ್ಲುತ್ತದೆ. ಅದರ ಸಾರಥಿ ಸ್ವರಣಸಿಂಗ್ ಸ್ನೇಹದ ನಗೆ ಚೆಲ್ಲುತ್ತಾನೆ. ಆ ನಗೆಯಿಂದ ಪ್ರೀತಿ ಆಕರ್ಷಿತರಾಗಿ ಅವನ ಪಕ್ಕದ ಆಸನದಲ್ಲೇ ಕೂಡುತ್ತೀರಿ. "ಈಗ ವ್ಯಾಪಾರ ಹೇಗಿದೆ?" ಎನ್ನುವ ಪ್ರಾರಂಭಿಕ ಮಾತು ಒಳ್ಳೆಯ ಹರಟೆಗೆ ಮುನ್ನುಡಿಯಾಗುತ್ತದೆ. "ನನ್ನ ವ್ಯಾಪಾರದ ಬಗ್ಗೆ ಏನೂ ದೂರುವಂತಿಲ್ಲ" ಎಂದು ಸ್ವರಣ್ ಸಿಂಗ್ ಉತ್ಸಾಹದಿಂದ ನುಡಿದು ರಸ್ತೆಗೆ ಅಡ್ಡಡ್ಡಲಾಗಿ ನುಗ್ಗುತ್ತಿರುವ ಸೈಕಲ್ ಸವಾರನನ್ನು ಎಚ್ಚರದಿಂದ ದಾಟಿಸಿಕೊಂಡು ವಾಹನವನ್ನು ಮುನ್ನಡೆಸುತ್ತಾನೆ. ನೀವು ನಿಮ್ಮ ಹಣವನ್ನು ನೀಡುವ ವೇಳೆಗೆ ಸರದಾರಜಿ ಸಾರಥಿಯು ಮುಂದಾಗಿಯೇ ತನ್ನ ಅದಮ್ಯ ಉತ್ಸಾಹದ ಕಾರಣವನ್ನು ನಿಮಗೆ ನಿರೂಪಿಸುತ್ತಾನೆ.

ಐವತ್ತೆರಡು ವರ್ಷದ ಸ್ವರಣಸಿಂಗ್ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಟ್ಯಾಕ್ಸಿ ಸಾರಥಿಯಾಗಿ ದುಡಿಯುತ್ತಿದ್ದಾನೆ. ಸಿಂಗ್ ನಡೆಸುತ್ತಿರುವ ಹೊಸ ವಾಹನ ಆತನಿಗೆ ಇತ್ತೀಚೆಗೆ ದೊರಕಿದ ಕಾಣಿಕೆ. ಅವನ ಬಳಿಯಿದ್ದ ಹಳೆಯ ವಾಹನವನ್ನು 1966ನೇ ಇಸವಿಯಲ್ಲಿ ಹತ್ತು ಸಾವಿರ ರೂಪಾಯಿಗೆ ಕೊಂಡಿದ್ದ. ಈ ಹಣದ ಅಲ್ಪಭಾಗವನ್ನು ಸ್ವರಣಸಿಂಗ್ ಸ್ನೇಹಿತರು, ಸಂಬಂಧಿಗಳಿಂದಲೂ, ಪರವಾನಾವಧಿ ಸಾಲವನ್ನು ಉಳಿತಾಯ ಸಹಕಾರ ಸಂಸ್ಥೆಯಿಂದಲೂ ಸಾಲವಾಗಿ ಪಡೆದಿದ್ದ. ಆದರೆ ಅವನ ದಿನದ ಆದಾಯ 40 ರೂಪಾಯಿಗಳಿಗಿಂತ ಕಡಿಮೆಯಿದ್ದುದರಿಂದ ಸಾಲ ಮರುಪಾವತಿ ಮಾಡುವುದು ಹಾಗೂ ಐದು ಸದಸ್ಯರ ಕುಟುಂಬ ನಿರ್ವಹಣೆ ಮಾಡುವುದು ಅತ್ಯಂತ ಕಷ್ಟವಾಯಿತು. ದಿಕ್ಕು ತೋರದೆ, ಅನ್ಯ ಮಾರ್ಗವಿಲ್ಲದೆ ಕಂಗಾಲಾದ ಸ್ವರಣಸಿಂಗ್ ಹಳೆಯ ಟ್ಯಾಕ್ಸಿಯನ್ನು ಮಾರಿಬಿಟ್ಟ. ಬಾಡಿಗೆ— ಮಾರಾಟ ಪದ್ಧತಿಯಂತೆ ಹೊಸ ವಾಹನ ಕೊಳ್ಳಬೇಕೆಂದು ಸ್ವರಣಸಿಂಗ್ ಸ್ನೇಹಿತ ಸೂಚಿಸಿದ. ಆದರೆ ಅದು ಸರದಾರಜೀಯ ಶಕ್ತಿಗೆ ಮೀರಿದುದಾಗಿತ್ತು. ಏಕೆಂದರೆ ಇಡೀ ಸಾಲದ ಮೊತ್ತದ ಮೇಲೆ ಶೇಕಡ 20ರಷ್ಟು ಬಡ್ಡಿಯನ್ನು ಮುಂಚೆಯೇ ಕೊಡಬೇಕಾಗಿತ್ತು. ಅಲ್ಲದೆ ಪ್ರತಿ ಮಾಸವೂ 400 ರೂಪಾಯಿಯನ್ನು ಸಾಲದ ಕಂತಿಗೆ ಕಟ್ಟಬೇಕಾಗಿತ್ತು. ಇದರಿಂದ ಸ್ವರಣಸಿಂಗ್ ನಿರಾಶೆಯಿಂದ ಕುಗ್ಗಿಹೋದ.

ಬ್ಯಾಂಕ್‌ಗಳ ರಾಷ್ಟ್ರೀಕರಣವಾಯಿತು. ತತ್ಫಲವಾಗಿ ಶ್ರೀಸಾಮಾನ್ಯನಿಗೂ ಸಹಾಯ ಮಾಡುವ ಯೋಜನೆಗಳನ್ನು ಆರಂಭಿಸಿರುವ ಸುದ್ದಿ ಹರಡಿತು. ಸ್ವರಣಸಿಂಗ್ ಕೂಡಲೇ ಬ್ಯಾಂಕೊಂದಕ್ಕೆ ಹೋಗಿ ವಿಚಾರಿಸಿದ. ಟ್ಯಾಕ್ಸಿಸ್ಟ್ಯಾಂಡ್ ಬಳಿಯೇ ಬ್ಯಾಂಕಿನ ಉಪಶಾಖೆಯೊಂದಿತ್ತು. ಸ್ವರಣಸಿಂಗ್ ಬರಿಗೈಯಿಂದ ಹಿಂದಿರುಗಿ ಬರಲಿಲ್ಲ. ಅವನಿಗೆ ಶೇಕಡ ಒಂಭತ್ತು ರೂಪಾಯಿ ಬಡ್ಡಿಯ ಮೇಲೆ ಸಾಲ ದೊರಕಿತು. ಇಂದು ಸ್ವರಣಸಿಂಗ್ ಹೊಸವಾಹನದ ಹೆಮ್ಮೆಯ ಸಾರಥಿಯಾಗಿದ್ದಾನೆ. ಅವನ ಬ್ಯಾಂಕಿಗೆ ತಿಂಗಳಿಗೆ 320 ರೂಪಾಯಿ ಸಾಲವನ್ನು ಕಟ್ಟುತ್ತಿದ್ದಾನೆ. ಮುಮ್ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಸಾಲ ಮರುಪಾವತಿ ಮಾಡುವ ಆಶೆಯಿಂದಿದ್ದಾನೆ. ಅವನಿಗೆ ಈಗ ಗೃಹಕೃತ್ಯದ ವೆಚ್ಚಕ್ಕೆ ಹಣ ಉಳಿಯುತ್ತಿದೆ. ಇಷ್ಟೆ ಸಾಲದೆಂಬಂತೆ ಸರದಾರಜಿ ಸಾಲ ತೆಗೆದುಕೊಂಡಿರುವ ಬ್ಯಾಂಕಿನಲ್ಲೇ ಉಳಿತಾಯ ಯೋಜನೆ ಆರಂಭಿಸಿದ್ದಾನೆ!

ಟ್ಯಾಕ್ಸಿಯ ಬಾಡಿಗೆ ಹಣವನ್ನು ನನ್ನಿಂದ ಪಡೆಯುತ್ತಿದ್ದಾಗ ಸಾರಥಿ ಸ್ವರಣ್ ಸಿಂಗ್, "ನನ್ನಂತೆಯೇ ಇತರರೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಾರೆ" ಎಂದು ಸಮಾರೋಪ ಮಾಡಿದ.

ಸರದಾರಜಿಯ ನುಡಿ ಸತ್ಯಸ್ಯ ಸತ್ಯ. ಶ್ರೀಸಾಮಾನ್ಯನ ಬೇಡಿಕೆಗಳನ್ನು ಪೂರೈಸುವ ಉದ್ದೇಶದಿಂದ ಬ್ಯಾಂಕ್‌ಗಳು ವಿವಿಧ ರೀತಿಯ ಸಹಾಯ ಯೋಜನೆಗಳು, ಹೊಸ ಯೋಜನೆಗಳನ್ನು ಆರಂಭಿಸಿವೆ. ಕಳೆದ ಸೆಪ್ಟೆಂಬರ್ ಮಾಸದಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಸಾರಥಿಗಳು ಸ್ವಂತ ವಾಹನ ಪಡೆಯುವ ಯೋಜನೆಯಲ್ಲಿ ಸಹಾಯ ಮಾಡಲು ಬ್ಯಾಂಕ್‌ಗಳು ಹೊಸ ಯೋಜನೆ ರೂಪಿಸಿವೆ. ದೆಹಲಿಯಲ್ಲಿರುವ ಬ್ಯಾಂಕಿನ ಶಾಖೆಯೊಂದು ಇದುವರೆಗೆ 45 ಆಟೋರಿಕ್ಷಾ ಚಾಲಕರಿಗೂ ಏಳು ಟ್ಯಾಕ್ಸಿ ಸಾರಥಿಗಳಿಗೂ ಸಹಾಯವೆಸಗಿದೆ. ಈ ಸಾರಥಿಗಳು 11 ಸಾವಿರ ರೂಪಾಯಿ ಮೊತ್ತದ 20 ಸಾಲದ ಕಂತುಗಳನ್ನು ಕಟ್ಟಬೇಕಾಗಿತ್ತು. ಪ್ರತಿಯೊಬ್ಬರೂ ತಪ್ಪದೇ ಸಾಲದ ಕಂತುಗಳನ್ನು ಸಕಾಲದಲ್ಲಿ ಕಟ್ಟಿದ್ದಾರೆ!

ನಿರುದ್ಯೋಗಿ ಶಿಕ್ಷಿತರು

(ಉಮಾಶಂಕರ ಜೋಶಿ)

ಸ್ವರಾಜ್ಯೋತ್ತರ ಶಿಕ್ಷಣ ಪ್ರಸಾರವು ಭರದಿಂದ ಬೆಳೆಯುತ್ತಲಿದೆ! ರಾಜಕೀಯ ಪಕ್ಷಗಳು ಶಿಕ್ಷಣದಲ್ಲಿ ತುಂಬಾ ಅಭಿರುಚಿ ವಹಿಸುತ್ತಲಿವೆ! ಆದರೆ ಇದರ ಪರಿಣಾಮದ ಜವಾಬುದಾರಿಯನ್ನು ತಿಳಿದುಕೊಳ್ಳದಿದ್ದರೆ ಅವರಿಗೆ ಮುಂದೆ ಅಪಾಯವಿದೆ. ಅಭಿಲಾಷೆ ಹುಟ್ಟಿಸುವದು ಆದರೆ ಅದನ್ನು ತೃಪ್ತಿಪಡಿಸಲು ಅವಕಾಶ ಒದಗಿಸದಿರುವದು ಹೀಗೆ ದೀರ್ಘಕಾಲ ನಡೆಯಲಾರದು.

ಶಿಕ್ಷಿತರೆಲ್ಲ ನೌಕರಿಯ ಬೆನ್ನು ಏಕೆ ಹತ್ತಬೇಕು? ಎಂದು ತಿರಸ್ಕಾರ ಮಾಡಿಬಿಟ್ಟರೂ ನಡೆಯದು. ಸ್ವರಾಜ್ಯೋತ್ತರ ಸರಕಾರಿ ನೌಕರಿಗಳ ಸಂಖ್ಯೆ ವಿಪರೀತ ಬೆಳೆದುಬಿಟ್ಟಿದೆ ಎಂಬುದೂ ನಿಜ. ಆದ್ದರಿಂದ ಶಿಕ್ಷಣ ಬೆಳೆಸುವ ಜತೆಯಲ್ಲಿಯೇ ಶಿಕ್ಷಿತರಿಗೆಲ್ಲ ನೌಕರಿ ಇಲ್ಲವೆ ಉದ್ಯೋಗ ಧಂದೆಗಳು ಸಿಗುವಂತೆ ನೋಡಿಕೊಳ್ಳುವದೂ ಅವಶ್ಯವಾಗಿದೆ!

ಮೊದಲನೇ ಯೋಜನೆಯ ಕೊನೆಗೆ ನಿರುದ್ಯೋಗಿ ಶಿಕ್ಷಿತ ಜನಸಂಖ್ಯೆ ೫ ಲಕ್ಷ ಇತ್ತು. ಎರಡನೇ ಯೋಜನೆಯ ಕೊನೆಗೆ ಅದು ೭೨ ಲಕ್ಷಕ್ಕೆ ಏರಿತು. ಮೂರನೆಯ ಯೋಜನೆಯ ಕೊನೆಗೆ ೯೬ ಲಕ್ಷಕ್ಕೆ ಮುಟ್ಟಿತು. ಪ್ರತಿ ವರ್ಷ ೪೦ ಲಕ್ಷ ಜನ ಸ್ನಾತಕರಾಗುತ್ತಾರೆ. ಆದರೆ ೧೦ ಲಕ್ಷ ಸ್ಥಳ ಮಾತ್ರ ತೆರವಾಗುತ್ತವೆ.

ಇದಕ್ಕೆ ಪರಿಹಾರವೇನು? ಶಿಕ್ಷಣವನ್ನು ಕಡಿಮೆ ಮಾಡಬೇಕೆಂದೇನೂ ಹೇಳಬಯಸುವದಿಲ್ಲ. ಆದರೆ ವಿದ್ಯಾರ್ಥಿಗಳ ಹಿತದ ದೃಷ್ಟಿಯಿಂದಲೇ ಶಿಕ್ಷಣದಲ್ಲಿ ಪರಿವರ್ತನೆ ಆಗಬೇಕಾದ್ದು ಅವಶ್ಯವಿದೆ. ಇಂದು ಬೌದ್ಧಿಕ ಧಂದೆಗಳ ಕಡೆಗೆ ಜನ ಓಡುತ್ತಿದ್ದಾರೆ! ಅದರ ಬದಲು ಶ್ರಮದ ಧಂದೆಗಳ ಕಡೆಗೆ ಆ ಓಘವನ್ನು ತಿರುಗಿಸಬೇಕು! ರಾಜಕೀಯ ಸಾಮಾಜಿಕ ಕ್ಷೇತ್ರದ ಪ್ರಮುಖರೆಲ್ಲರೂ ಸ್ವವರ್ತನೆಯಿಂದ ಅಂಥ ಉದಾಹರಣೆ ಹಾಕಿಕೊಡಬೇಕು. ಇಂದು ಅಮೇರಿಕೆಯಂಥ ಸಮೃದ್ಧ ದೇಶದಲ್ಲಿ ಶ್ರಮಕ್ಕೆ ಇರುವಷ್ಟು ಪ್ರತಿಷ್ಠೆ ಭಾರತದಂಥ ಬಡದೇಶದಲ್ಲಿ ಇಲ್ಲದಿರುವದು ದುರ್ದೈವ.

ಎರಡನೆಯದಾಗಿ ಹಳ್ಳಿ ಹಾಗೂ ಪಟ್ಟಣಗಳಲ್ಲೆಲ್ಲ ಉದ್ಯೋಗಧಂದೆಗಳು ನಡೆಯುವಂತೆ ಹಾಗೂ ಅವುಗಳ ಶಿಕ್ಷಣ ದೊರೆಯುವಂತೆ ಯೋಜನೆ ಮಾಡಿ, ಅದಕ್ಕೆ ಪ್ರಾಶಸ್ತ್ಯ ಕೊಟ್ಟು ಅಮಲಿನಲ್ಲಿ ತರಬೇಕು.

ಶಿಕ್ಷಣಕ್ಕೂ ಉದ್ಯೋಗಧಂದೆಗಳಿಗೂ ಶೀಘ್ರಾತಿಶೀಘ್ರ ಹೊಂದಾಣಿಕೆ ಮಾಡದೆ ಬಿಟ್ಟರೆ ದೇಶದ ಪರಿಸ್ಥಿತಿ ತುಂಬಾ ಬಿಕ್ಕಟ್ಟಿನದಾದೀತು. ಆದ್ದರಿಂದ ಉದ್ಯೋಗ ಧಂದೆಗಳಿಗೆ ಅವಕಾಶ ಹಾಗೂ ಅವುಗಳ ಶಿಕ್ಷಣದ ಅನುಕೂಲತೆ ಮಾಡಿಕೊಡುವದಲ್ಲದೆ ಬೌದ್ಧಿಕ ಹಾಗೂ ಶ್ರಮದ ಧಂದೆಗಳಲ್ಲಿ ಸಿಗುವ ಪ್ರತಿಫಲದಲ್ಲಿಯೂ ಹೆಚ್ಚಿನ ವ್ಯತ್ಯಾಸ ಉಳಿಯದಂತೆ ಮಾಡಲೇಬೇಕು.

ದ್ರಾ.ಮು.ಕ.ದ ದ್ವೇಷಾಗ್ನಿಗೆ ಕಾಮರಾಜರ ಕಾಷ್ಟ

(ಒಂದನೇ ಪುಟದಿಂದ)

ಬಾರದೆಂಬಂತೆ ತಿರು ಕಾಮರಾಜರು ವಿದ್ಯಾರ್ಥಿ ಸಮ್ಮೇಳನ ನಡೆಸಿ ಶ್ರೀಮತಿ ಇಂದಿರಾ ಗಾಂಧಿಯವರ ಮೇಲೆ ತಮ್ಮ ಹಗೆಯನ್ನು ತೀರಿಸಿಕೊಳ್ಳಲು ನೋಡುತ್ತಿದ್ದಾರೆ. ಇದರ ಪರಿಣಾಮ ಏನಾದೀತು? ಈ ವರ್ಷ ಡಿಶಂಬರ್ ಪರೀಕ್ಷೆ ಹಾಗೂ ಜನವರಿ [illegible] ಗಲಾಟೆ ಇಲ್ಲದೆ ನಡೆದಿರುತ್ತದೆ. ಹಿಂದೆ ಕೆಲ ವರ್ಷಗಳಿಂದ ಆ ನಡುವಿನ ಸಮಯ ಭಯಂಕರ ಗಲಾಟೆಯ, ರಾಜಕೀಯ ಹೋರಾಟದ ಸಮಯವಾಗಿರುತ್ತಿತ್ತು. ಇಂದೀಗ ದ್ರಾ.ಮು.ಕ.ದ ದ್ವೇಷಾಗ್ನಿಗೆ ಕಾಮರಾಜರು ಒದಗಿಸುತ್ತಿರುವ ಕಾಷ್ಠದಿಂದ ಗವರ್ನಮೆಂಟ್ ಪರೀಕ್ಷೆ ನಡೆಯದೆ ಹೋದರೂ ಆಶ್ಚರ್ಯ ಪಡಬೇಕಾಗಿಲ್ಲ. ಸೌರಮಾನ ಯುಗಾದಿಯನ್ನು ತಮಿಳು ಹೊಸ ವರ್ಷವೆಂದು ಹೇಳಲಾಗುತ್ತದೆ. ಕಾಮರಾಜರು ಹಚ್ಚುತ್ತಿರುವ ಕಿಚ್ಚು ಹಬ್ಬದ ಸಮಯ ಹೊಗೆಯಾಗಳೆದಿದ್ದೀತೇ? ಅದರಲ್ಲೂ ೧೯೭೨ರ ಚುನಾವಣೆಗೆ ಈಗಲೆ ಸಿದ್ಧತೆ ನಡೆಯುತ್ತಿರುವಾಗ! ಇವೆಲ್ಲಾ ಮುಂದಿನ 'ರಿ'ಗಳು.

Gram : VISHWA
Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 2—4—1970

ಸಂಪುಟ 49
ಸಂಚಿಕೆ 30

ಪೆಡಂಭೂತಗಳ ನಡುವೆ ಭಾಷೆ

ಲೇಖಕರು : ಶ್ರೀ ಶಿವಶಂಕರ

ಆಸನಾಧೀಶ ದ್ರಾ.ಮು.ಕ. ವು ಭಾಷಾ ಬಡಿದ ಟಿವನ್ನು ಬರಮಾಡಿಕೊಂಡೀತೇ? ಭಾಷಾ ಬಾಂಬ್ ಇರುವದು ಬೇರೆಯವರ ಮೇಲೆ ಹಾಕಲಿಕ್ಕೆ ತಾನೇ? ಅದನ್ನು ತಮ್ಮದೇ ಮೇಲೆ ಹಾಕಿಕೊಳ್ಳಲು ಅವರು ಸಿದ್ಧರಿದ್ದಾರೇನು? ಹಾಗಾದರೆ ತಿರು ಕಾಮರಾಜರು ಹಿಂದಿ ಹೆಸರಿನಲ್ಲಿ ನಡೆಸುತ್ತಿರುವ ರಾಜಕೀಯ ಕಾಮಕೇಳಿಯನ್ನು ಅವರು ಕಣ್ಣು ಮುಚ್ಚಿಕೊಂಡು ಸಹಿಸಿಯಾರೇ? ೧೯೭೧ರಲ್ಲಿ ಅವರೂ ಚುನಾವಣಾ ಚಾವಡಿಯಲ್ಲಿ ಕಾಲಿಡಬೇಕಲ್ಲವೇ? ಅದುದರಿಂದಲೇ ಅವರು ಕಾಮರಾಜರ ಭಸ್ಮಾಸುರನ ತಲೆಯ ಮೇಲೆ ಅವರ ಕೈಯೇ ಬೀಳುವಂತೆ ಪ್ರಯತ್ನಿಸುತ್ತಿದ್ದಾರೆ. ಅದನ್ನೇ ಅವರು ತಮ್ಮ ತಿರುಚಿನಾಪಳ್ಳಿಯ ಮಹತ್ವಪೂರ್ಣ ಅಧಿವೇಶನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಹಿಂದಿಗೆ ಸರಕಾರೀ ಭಾಷಾ ಅಂತಸ್ತು ಕೊಟ್ಟಿರುವ ಸಂವಿಧಾನದ ಭಾಗವನ್ನು ತೆಗೆದುಹಾಕುವಂತೆ ಕೇಂದ್ರವನ್ನು ದ್ರಾ.ಮು.ಕ. ಒತ್ತಾಯಿಸಬೇಕೆಂಬ ಕರೆಯನ್ನು ಕಾಮರಾಜರಿತ್ತಿರುವರು. ತಿರು ಕಾಮರಾಜರು ಸಾಧಾರಣ ಏನೂ ಇಲ್ಲದ ವ್ಯಕ್ತಿಯಲ್ಲ. ಅವರು ಸಂಸತ್ತಿನ ಸದಸ್ಯರಿದ್ದಾರೆ. ಅಲ್ಲದೆ ಅವರೂ ಒಂದು ನಮೂನೆಯ ಕಾಂಗ್ರೆಸ್ಸಿನ ಪ್ರಮುಖರಿದ್ದಾರೆ. ಹಾಗಿರುವದರಿಂದ ಅವರೊಂದು ಸವಾಲು ಹಾಕಿದಲ್ಲಿ ಎದುರು ಪಕ್ಷದವರು ಮರುಸವಾಲು ಹಾಕದೆ ಬಿಡುವದುಂಟೇ? ರಾಜಕೀಯದಲ್ಲಿ ಪಳಗಿರುವ, ಇಂದಿರೆಯನ್ನೇ ತನ್ನ ಇದಿರಿಗೆ ಬರಮಾಡಿಸಿಕೊಂಡಿರುವ ಕರುಣಾನಿಧಿ ಕಾಮರಾಜರಿಗೆ ಸವಾಲು ಹಾಕದೆ ಬಿಡುವದುಂಟೇ? ಭಾಷಾ ವಿಷಯದ ಮೇಲೆ ಹಳೆ ಕಾಂಗ್ರೆಸ್ಸಿನ ನಿಲುವೇನೆಂದು ಅವರು ತಿರು ಕಾಮರಾಜರಿಗೆ ಮರುಪ್ರಶ್ನೆ ಹಾಕಿದ್ದಾರೆ. ಸಂಸತ್ತಿನಲ್ಲಿ ಸಂವಿಧಾನದಿಂದ ಆ ಭಾಗವನ್ನು ಕಿತ್ತುಹಾಕುವಂತೆ ಕಾಮರಾಜರ ಕಾಂಗ್ರೆಸ್ಸು ಒಂದು ಗೊತ್ತುವಳಿಯನ್ನು ತರುತ್ತದೆಯೋ? ಅಥವಾ ದ್ರಾ.ಮು.ಕ. ತಂದಲ್ಲಿ ಅದಕ್ಕೆ ಕಾಮರಾಜರ ಕಾಂಗ್ರೆಸ್ಸು ಬೆಂಬಲವನ್ನೀಯುತ್ತದೆಯೋ? ಅದಕ್ಕೆ ತಿರು ಕಾಮರಾಜರಿಂದ ಉತ್ತರ ಬರಲೇ ಇಲ್ಲ. ತಿರು ಕರುಣಾನಿಧಿಯವರೂ ಬಿಡುವಂತಿಲ್ಲ. ಪುನಃ ಪುನಃ ಅವರು ಅದೇ ಪ್ರಶ್ನೆಯನ್ನು ಕೇಳಲಾರಂಭಿಸಿದರು. ಕಾಮರಾಜರ ಮೌನ ಕರುಣಾನಿಧಿಯವರ ಹಿಂದಿ ಹೋಳಿಗೆಗೆ ತುಪ್ಪವಾಯಿತು. ಓಡುತ್ತಿರುವ ನಾಯಿಯನ್ನು ಕಂಡ ಓಡಿಸಿಕೊಂಡು ಹೋಗುವ ನಾಯಿ ಇನ್ನೂ ಜೋರಾಗಿ ಓಡಿಸಿಕೊಂಡು ಹೋಗುವದಿಲ್ಲವೇ? ಪ್ರಚಲಿತ ಮುಖ್ಯಮಂತ್ರಿ ಕರುಣಾನಿಧಿಯವರು ಮಾಜಿ ಮುಖ್ಯಮಂತ್ರಿ ಕಾಮರಾಜರಿಗೆ ಬದಲೀಯಲು ಒಂದು ವಾರದ ಸಮಯ ಕೊಟ್ಟರು. ಹಳೆ ಕಾಂಗ್ರೆಸ್ ಘಟನೆಯ ಹದಿನೇಳನೆ ಭಾಗವನ್ನು ತೆಗೆದುಹಾಕುವ ಗೊತ್ತುವಳಿಯನ್ನು ತರುತ್ತದೆಯೋ ಎನ್ನುವದನ್ನು ಒಂದು ವಾರದೊಳಗೆ ತಿಳಿಸಬೇಕೆಂದು ಹೇಳಿದರು. ಕಾಮರಾಜರ ಕಾಂಗ್ರೆಸ್ಸು ಆ ಗೊತ್ತುವಳಿಯನ್ನು ತಂದಲ್ಲಿ ದ್ರಾ.ಮು.ಕ. ಅದಕ್ಕೆ ಬೆಂಬಲವನ್ನೀಯುತ್ತದೆಂದೂ ಧೈರ್ಯ ಹೇಳಿದರು. ಘಟನಾಬದ್ಧ ಹಾಗೂ ನ್ಯಾಯಾಲಯದ ನೆರವಿಂದಲೂ ಹಿಂದಿ ಹೇರಿಕೆಯನ್ನು ತಡೆಯಲಾಗದಿದ್ದಲ್ಲಿ ತಾವು ಅಧಿಕಾರದ ಆಸನದಿಂದ ಕೆಳಗಿಳಿಯುವದಾಗಿಯೂ ಅವರು ಹೇಳಿದರು.

ದ್ರಾ.ಮು.ಕ.ದ ಧುರೀಣ ಹಾಗೂ ಸಂಸತ್ತಿನ ಸದಸ್ಯ ತಿರು ಮನೋಹರನ್ ರವರೂ ತಿರು ಕರುಣಾನಿಧಿಯವರ ಮತಗಳನ್ನು ಅನುಮೋದಿಸುತ್ತ, ತಿರು ಕಾಮರಾಜರಿಗೆ ಇನ್ನೂ ಹೆಚ್ಚು ಸಮಯ ಅವಕಾಶ ಕೊಟ್ಟರು. ಪ್ರಚಲಿತ ಮುಖ್ಯಮಂತ್ರಿ ಕರುಣಾನಿಧಿಯವರು ಫೆಬ್ರವರಿ ದಿನಾಂಕ ಹನ್ನೊಂದರಂದು ಮಾಜಿ ಮುಖ್ಯಮಂತ್ರಿ ಕಾಮರಾಜರಿಗೆ ಒಂದು ವಾರದ ಕಾಲಾವಕಾಶ ಕೊಟ್ಟಿದ್ದರೂ ತಿರು ಕಾಮರಾಜರದಕ್ಕೆ ಪಾರ್ಕಲಾಂ (ನೋಡೋಣ)ವೆಂದು ಕೂಡಾ ಹೇಳದೆ ತಾವಾ ದಿಮ್ಮನೇ ಆಡುತ್ತಿದ್ದಾರೆ. ಅವಸ್ಯನೇ ಲೋಕಸಭಾಸದಸ್ಯ ತಿರು ಕಾಮರಾಜರಿಗೆ ಲೋಕಸಭಾಸದಸ್ಯ ಮನೋಹರನ್‌ರವರು ಮಾರ್ಚ ದಿನಾಂಕ ಒಂದರವರೆಗೆ ಅವಕಾಶ ಕೊಟ್ಟರು. ಮದ್ರಾಸು ಮಹಾನಗರದ ಕಡಲಕರೆಯಲ್ಲಿ ಘಟನೆಯ ಹದಿನೇಳನೆಯ ಭಾಗವನ್ನು ಸುಡಲು ಕಾಮರಾಜರಿಗೆ ಧೈರ್ಯವಿದೆಯೇ? ಅದಕ್ಕೆ ಮುಂದೆ ಬರಲೆಂದು ಮನೋಹರನ್ ಸವಾಲು ಹಾಕಿದ್ದಾರಲ್ಲದೆ, ಅದಕ್ಕಾಗುವ ಬೆಂಕಿಪೆಟ್ಟಿಗೆಯ ಖರ್ಚನ್ನು ದ್ರಾ.ಮು.ಕ.ದ ಮುಂದಾಳುಗಳು ವಹಿಸಿಕೊಳ್ಳುವರೆಂದು ಧೈರ್ಯ ಹೇಳಿದ್ದಾರೆ. ಕಾಮರಾಜರು ಸಂವಿಧಾನವನ್ನು ಸುಡಲು ಕಾಲು ಮುಂದಕ್ಕಿಡಬೇಕು! ದ್ರಾ.ಮು.ಕ. ಧುರೀಣರು ಅವರಿಗೆ ಅಲ್ಲಿ ಬೆಂಕಿ ಕೊಡಬೇಕು! ಘಟನೆಯ ಭಾಗಕ್ಕೆ ಬೆಂಕಿಕೊಟ್ಟು ಕೈ ಸುಟ್ಟುಕೊಂಡಿರುವ ದ್ರಾ.ಮು.ಕ.ವು ಬಾಲ ಕಳೆದುಕೊಂಡ ನರಿಯಂತೆ. ಕಾಮರಾಜರು ಕೈ ಸುಟ್ಟುಕೊಳ್ಳುವದನ್ನು ನೋಡಲು ಆಶಿಸುತ್ತಿದೆ. ಇದರಲ್ಲಿ ಕಾಮರಾಜರಿಂದ ಉತ್ತರವೇ ಇಲ್ಲ. ಈಗ ಕಾಮರಾಜರ ಬಣ್ಣವನ್ನು ಬಯಲಿಗೆಳೆಯದೆ ಬಿಡಲು ದ್ರಾ.ಮು.ಕ.ಕ್ಕೆ ಸಾಧ್ಯವೇನು? ಅದನ್ನೇ ಮನೋಹರನ್‌ರವರು ಮನೋಹರವಾಗಿ ಹೇಳಿದ್ದಾರೆ—ವಿದ್ಯಾರ್ಥಿಗಳು ಘಟನೆಯ ಹದಿನೇಳನೆಯ ಭಾಗವನ್ನು ಕಿತ್ತುಹಾಕುವ ನೆವನದಲ್ಲಿ ಗಲಭೆಯೆಬ್ಬಿಸುವಂತೆ ಅವರನ್ನು ಕಾಮರಾಜರು ಉದ್ರೇಕಿಸುತ್ತಿದ್ದಾರೆ, ಪ್ರೇರೇಪಿಸುತ್ತಿದ್ದಾರೆ. ಕಾಮರಾಜರು ಲೋಕಸಭಾ ಸದಸ್ಯರಿದ್ದಾರೆ. ಅವರು ಲೋಕಸಭೆಯಲ್ಲಿ ಆ ವಿಷಯವನ್ನೆತ್ತಬಹುದು. ಅದನ್ನು ಬಿಟ್ಟು ಹುಡುಗರನ್ನು ಹುರಿದುಂಬಿಸುತ್ತಿದ್ದಾರೆ! ಶಾಲಾ ಪಠ್ಯಪುಸ್ತಕಗಳಿಂದ ಶಾಲಾ ಹುಡುಗರು ಹಾಳೆಗಳನ್ನು ಹರಿದು ಸುಡುವದೇನು! ಹಾಗೆ ಸುಟ್ಟಲ್ಲಿ ಹಿಂದಿ ಹೊರಗೆ ಹೋಗಿ ಹೋಗುತ್ತದೇನು? ಇಲ್ಲ— ಹಗೆಯ ಹೊಗೆ ಬೇಕಾಗಿದೆ ಕಾಮರಾಜರಿಗೆ. ಅದನ್ನೇ ಅವರು ಪುನಃ ಪುನಃ ಒತ್ತಿ ಹೇಳುತ್ತಿದ್ದಾರೆ. ತಮ್ಮ ಸಂಸತ್ ಸ್ನೇಹಿತ ಮನೋಹರನ್‌ರವರ ಮಾತಿಗನುಸಾರವಾಗಿ ಅವರು ಮದ್ರಾಸು ಮಹಾನಗರದ ಕಡಲಕರೆಯತ್ತ ಕಾಲು ಹಾಕದೆ ವಿದ್ಯಾರ್ಥಿಗಳ ಮತ್ತೆ ಅವರು ಮದ್ರಾಸಿನಲ್ಲಿ ಮತ್ತೆ ದ್ವೇಷಾಗ್ನಿಯನ್ನು ಕಾರಿದ್ದಾರೆ. ಅವರು ಹೇಳುತ್ತಿರುವದಾದರೂ ಏನು? ದ್ರಾ.ಮು.ಕ.ಕ್ಕೂ (ಕರುಣಾನಿಧಿಗೆ?) ಇಂದಿರಾ ಗಾಂಧಿಗೂ ಒಳ್ಳೆಯದಿದೆ. ಘಟನೆಯ ಹದಿನೇಳನೆ ಭಾಗವನ್ನು ಹರಿದು ಹಾಕಲು ಆ ಒಳ್ಳೆಯತನವನ್ನು ಅವರು ಉಪಯೋಗಿಸಿಕೊಳ್ಳಬೇಕು. ಸರಿ. ಅವರೇನು ಮಾಡಲಿಕ್ಕಿದ್ದಾರೆ? ಅವರು ಗದ್ಯಾರೋ ಪಕ್ಷದ (ಉತ್ತರ) ಅವಲಕ್ಕಿ ಒದಗಿಸಿದ್ದಾರೆಂದು ಕಾಣುತ್ತದೆ. ತವರದನ್ನು ಚೆನ್ನಾಗಿ ಮೆಲ್ಲುತ್ತಿದ್ದಾರೋ, ಏನೋ!

ಕಾಮರಾಜರ ಈ ರಾಜಕೀಯ ಕಾಮದಾಟವನ್ನು ಕಂಡುಕೊಂಡ ದ್ರಾ.ಮು.ಕ. ರಾತ್ರಿ ಕಂಡ ಬಾವಿಯಲ್ಲಿ ಹಗಲಿನಲ್ಲೇ ಬೀಳುವದುಂಟೇ? ತಿರುಚಿನಾಪಳ್ಳಿಯಲ್ಲಿ ಮನೋಹರನ್‌ರವರು ಹಿಂದಿಯ ಕುರಿತು ಶ್ರೀಮತಿ ಇಂದಿರಾ ಗಾಂಧಿಯವರು ಎಚ್ಚರಿಕೆಯ ಸ್ಥಿತಿಯು ಬೇಕೆಂಬ ವಿಷಯವನ್ನೆತ್ತಿದಾಗ ದ್ರಾ.ಮು.ಕ.ದ ಅಧ್ಯಕ್ಷ ಕರುಣಾನಿಧಿಯವರು ಅದನ್ನು ತಳ್ಳಿಹಾಕಿದರು. ಬಂಗಾರದ ಮೊಟ್ಟೆಯನ್ನಿಡುತ್ತಿರುವ ಹೇಂಟೆಯ ಕತ್ತನ್ನು ಕೊಯ್ಯಲು ಕರುಣಾನಿಧಿ ಸಿದ್ಧರಿಲ್ಲ. ಅದು ಮೊಟ್ಟೆಯನ್ನಿಡುವವರೆಗೆ ಮಾತ್ರವೆಂಬುದನ್ನು ಕರುಣಾನಿಧಿಯವರ ಕರಣಿಯ ವಿಧಿಯ ಗಟ್ಟಿಗೆ ತ್ತಿರುವವರು ತಿಳಿದುಕೊಂಡಿದ್ದಾರೆ. ಅಂದರೆ ದ್ರಾ.ಮು.ಕ. ಹಿಂದಿ ಹಗೆಯನ್ನು ಕಳೆದುಕೊಂಡಿರುವದಿಲ್ಲ. ಅದುದರಿಂದಲೇ ಕರುಣಾನಿಧಿಯವರ ಘೋಷನಿಧಿಯಿಂದ ಹೊರಬಂದಿರುವ ಪಂಚ ಹೊಸ ಘೋಷಣೆಗಳಲ್ಲಿ "ನಾವೆಂದೆಂದೂ ಹಿಂದಿಯನ್ನೆದುರಿಸುತ್ತೇವೆ"ಎಂಬುದು ಒಂದು ಅಲ್ಲದೆ ಅಗ್ರಸ್ಥಾನವನ್ನು ಪಡೆದದ್ದು ಇದೆ.

ಇದನ್ನೇ ಇನ್ನೂ ಸ್ಪಷ್ಟವಾಗಿ ಕರುಣಾನಿಧಿಯವರು ಭಾರತೀಯರಿಗೆ ತಿಳಿಸಿದ್ದಾರೆ— ದ್ರಾ.ಮು.ಕ.ದ ಅಧಿಕಾರದಾಸನದಲ್ಲಿರುವ ವರೆಗೆ ಹಿಂದಿ ಸರಕಾರಿ ಭಾಷೆಯಾಗಲು ಸಾಧ್ಯವೇ ಇಲ್ಲ. ಈ ಎರಡು ಮಾತುಗಳ ಅರ್ಥವಾದರೂ ಏನು? ಹಿಂದಿ ವಿರೋಧಿ ಮನೋಭಾವನೆಯು ಬಂಡವಾಳದ ಮೇಲೆಯೇ ದ್ರಾ.ಮು.ಕ.ವು ರಾಜಕೀಯ ವ್ಯಾಪಾರವನ್ನು ನಡೆಸುತ್ತಿದೆ. ಹಿಂದಿ ಹಗೆಯೇ ಅದರ ಜೀವನಾಡಿ, ಹಾಗೂ ಉಸಿರು. ಅದು ನಿಂತಲ್ಲಿ ದ್ರಾ.ಮು.ಕ. ದಮ್ ಬಿ.ಟಿ. ಭಾರತದಲ್ಲಿ ಹಿಂದಿ ಸಂಪರ್ಕ ಭಾಷೆಯಾಗಿ ಬಂದಾಗ ದ್ರಾ.ಮು.ಕ. ದಂತಹ ಸಂಕುಚಿತ ಮನೋಭಾವನೆಯ ಪಕ್ಷಗಳು ಅಧಿಕಾರದಲ್ಲಿರಲು ಸಾಧ್ಯವಿರುವದಿಲ್ಲ. ಅಂದರೆ ಆಗ ಭಾರತೀಯರಲ್ಲಿ ಸ್ವದೇಶಿ ಮನೋಭಾವನೆ ಜಾಗೃತವಾಗ.

(ಎಂಟನೇ ಪುಟ ನೋಡಿರಿ)

ಠಣ್ ಠಣ್ ಢಕ್ ಢಕ್

"ಠಣ್ ಠಣ್, ಢಕ್ ಢಕ್" ಎಂದು ಶಬ್ದ ದೂರದಿಂದಲೇ ಕೇಳಿಸುತ್ತಿತ್ತು. ಸುತ್ತಲೂ ತಲೆಯೆತ್ತಿ ನಿಂತ ಗುಡ್ಡಗಳ ಸಾಲು, ಕಲ್ಲು ಬಂಡೆಗಳ ರಾಶಿ ಎಲ್ಲೆಲ್ಲೂ ಶಿಲಾಮಯ. ಗಿಡಮರಗಳ ಸುಳಿವಿಲ್ಲ. ಬೆಳಗಿನ ಬಿಸಿಲೂ ನಡುಹಗಲಿನ ಬಿಸಿಲಿನಷ್ಟೇ ಬಿಸಿ. ಎಲ್ಲಿ ನೋಡಿದರೂ ಕಲ್ಲು ಒಡೆದು ತೆಗೆದ ಕೆರೆಗಳಂತೆ ಕಾಣುವ ವಿಸ್ತಾರವಾದ ಗಣಿಗಳು. ಹೀಗೆ ಎಷ್ಟು ಅಗೆದರೂ ಎಷ್ಟು ತೆಗೆದರೂ ಮುಗಿಯದಷ್ಟು ಶಿಲೆಗಳ ರಾಶಿ. ಬಂಡೆಗಳ ರಾಶಿ. ಇದರಿಂದಲೇ ಈ ಪ್ರದೇಶ ಸಿಮೆಂಟ್ ಕಾರ್ಖಾನೆಗೆ ತಕ್ಕುದಾಯಿತು. ಹೆಸರೇನೋ ಮಧುಕರೆ. ಈ ಕರೆಗಳಲ್ಲಿರುವುದು ನೀರಲ್ಲ, ಒಡೆದ ಕಲ್ಲಿನ ರಾಶಿಗಳು. ಇವನ್ನು ಲಾರಿ ಗಾಡಿಗಳಿಗೆ ಹೊತ್ತು ಸುರಿಯುವ ಕೂಲಿಗಳು. ಈ ಕರೆಗಳ ಸಮೀಪದಲ್ಲೇ ರೈಲುದಾರಿ. ಇದರಲ್ಲಿ ಒಡೆದ ಕಲ್ಲುಗಳಿಗಾಗಿ ಬಾಯ್ದೆರೆದು ನಿಂತ ವ್ಯಾಗನುಗಳು. ಇವು ಸಿಮೆಂಟ್ ಕಾರ್ಖಾನೆಗೆ ಬೇಕಾದ ಕಲ್ಲುಗಳನ್ನು ಒಯ್ದು ಕೊಡುವುವು. ಆ ಮೇಲೆ ಈ ಕಲ್ಲುಗಳನ್ನು ಕಾರ್ಖಾನೆಯ ಕ್ರಶರ್ ಯಂತ್ರಗಳು ಪುಡಿ ಮಾಡುವುವು. ಧೂಳಿನಷ್ಟು ನಯವಾದ ಈ ಕಲ್ಲಿನ ಪುಡಿಯೇ ಸಿಮೆಂಟಿನ ಮೂಲವಸ್ತು.

ಮಧುಕರೆ ಕಾರ್ಖಾನೆ ತಮಿಳುನಾಡಿನಲ್ಲಿದೆ. ಕೊಯಂಬತ್ತೂರಿನಿಂದ ಇಲ್ಲಿಗೆ ಸುಮಾರು ೯ ಮೈಲಿ. ಸುಮಾರು ಎರಡು ಸಾವಿರ ಕೆಲಸಗಾರರು. ಕಲ್ಲಿನ ಗಣಿಗಳಲ್ಲಿ ಕಲ್ಲೊಡೆಯುವವರ ಕೆಲಸ ತುಂಬ ಕಠಿನವಾದ್ದು. ಇದಕ್ಕೆ ಒಳ್ಳೆಯ ಆರೋಗ್ಯ ದೇಹ, ಶಕ್ತಿ ಬೇಕು.

"ಠಣ್, ಠಣ್, ಢಕ್, ಢಕ್" ಎಂದು ಒತ್ತಿನಲ್ಲಿ ಕೇಳುತ್ತಿದ್ದ ಶಬ್ದ ಇಲ್ಲಿಯ ಕಾರ್ಮಿಕನಾಯಕ ಶ್ರೀ ಮುನಿಸ್ವಾಮಿ ಕಲ್ಲೊಡೆಯುವ ಶಬ್ದ. ಕಬ್ಬಿಣದ ಸುತ್ತಿಗೆಯನ್ನು ತನ್ನ ತಲೆಯಿಂದ ಮೂರು ನಾಲ್ಕಡಿ ಎತ್ತರಕ್ಕೆ ಎತ್ತಿ ಬಂಡೆಯ ಮೇಲೆ ಬಡಿದಾಗ ಎಂತಹ ಬಂಡೆಯೂ ಇಬ್ಭಾಗವಾಗ ಬೇಕು. ಇನ್ನೊಮ್ಮೆ ಬಡಿದಾಗ ಚೂರು ಚೂರಾಗ ಬೇಕು. ಇದು ಆತನ ಜಾಣ್ಮೆ, ಆತನ ಶಕ್ತಿ, ಆತನ ಯುಕ್ತಿ. ಇದಕ್ಕೆ ಕಾರಣವೇನು? ಮನುಷ್ಯನಿಗೆ ಚಿಂತೆಯೇ ಮುಪ್ಪು, ಸಂತೋಷವೇ ಯೌವನ. "ನನಗೆ ಹೆಚ್ಚಿನ ಯಾವ ಚಿಂತೆಯೂ ಇಲ್ಲ. ದಿನವಿಡೀ ದುಡಿಯುತ್ತೇನೆ. ದುಡಿದ ಒಂದು ವೇತನ ನನ್ನ ಚಿಕ್ಕ ಸಂಸಾರದ ಪೋಷಣೆಗೆ ಸಾಕಾಗುತ್ತದೆ. ಚಿಕ್ಕ ಸಂಸಾರ ಇದ್ದು ದೊಡ್ಡದಾದರೆ ಏನು ಮಾಡಲಿ? ಎಂದು ಚಿಂತಿಸುವ ಅವಕಾಶವೇ ಇಲ್ಲ. ಇದ್ದ ಇಬ್ಬರು ಮಕ್ಕಳನ್ನು ಓದಿಸಿ ಏನಾದರೂ ಒಳ್ಳೆಯ ಕೆಲಸಕ್ಕೆ ಸೇರುವಂತೆ ಮಾಡಿದರೆ ನಾನೇ ಪುಣ್ಯಶಾಲಿ" ಎನ್ನುತ್ತಾ ಮುನಿಸ್ವಾಮಿ ಸುತ್ತಿಗೆ ಎತ್ತಿದ.

"ಸುಮಾರು ಒಂದು ವರ್ಷವಾಯಿತು. ನನಗೆ ಈ ಕೆಂಪು ತ್ರಿಕೋಣದ ಗಾಡಿಯನ್ನು ಕಂಡಾಗಲೆಲ್ಲ ಸಹಿಸುತ್ತಿದ್ದಿಲ್ಲ. ಹುಟ್ಟಿಸಿದ ದೇವರು ಹುಲ್ಲು ಮೇಯಿಸನೆ, ದೇವರ ಇಚ್ಛೆಗೆ ಅಡ್ಡಿ ಬರುವ ಹಕ್ಕು ಇವರಿಗೆ ಕೊಟ್ಟವರಾರು? ಎಂದು ಎಷ್ಟೋ ಸಲ ನಮ್ಮ ಜನರ ಮುಂದೆ ಭಾಷಣ ಬಿಗಿಯುತ್ತಿದ್ದೆ" ಎನ್ನುತ್ತಾ ಒಡೆದ ಕಲ್ಲುಗಳನ್ನು ಮಗುಚಿ ಹಾಕಿದ.

"ಆ ಮೇಲೆ ನಿನ್ನ ಅಭಿಪ್ರಾಯ ಬದಲಾಗಲು ಕಾರಣವೇನು?"

ಕಾರಣವೂ ಇದೇ ಗಾಡಿ. ಒಮ್ಮೆ ನನ್ನನ್ನು ಬರಮಾಡಿಕೊಂಡು ಈ ಗಾಡಿಯಲ್ಲಿ ಬಂದವರೊಬ್ಬರು ಎಲ್ಲ ವಿವರಿಸಿದರು. ಕೆಲವು ಚಿತ್ರ ತೋರಿಸಿದರು. ಆಸ್ಪತ್ರೆಗೆ ಕರೆದು ಕೊಂಡು ಹೋಗಿ ಆಪರೇಶನ್ ಮಾಡುವುದನ್ನು ತೋರಿಸಿದರು. ನಿಜವಾಗಿ ಅವರು ಹೇಳುವುದೆಲ್ಲ ಸರಿ ಎಂದು ಕಂಡಿತು. ಅಂದೇ ನಾನೂ ಆಪರೇಶನ್ ಮಾಡಿಸಿಕೊಂಡೆ. ಸುಮಾರು ಒಂದುವರೆ ತಿಂಗಳು ಈ ಕೆಲಸ ಮಾಡಲಿಲ್ಲ. ಸಣ್ಣಪುಟ್ಟ ಕೆಲಸ ನೋಡಿ ಕೊಳ್ಳುತ್ತಿದ್ದೆ. ಈಗ ನಾನು ಸೊರಗಿದ್ದೇನೆಂದು ನೀವೇ ನೋಡಿ, ಎಂದು ಸುತ್ತಿಗೆಯಿಂದ ಬಂಡೆಯ ಮೇಲೆ ಬಡಿದ.

"ನಿನ್ನಿಂದಾಗಿ ಇನ್ನೆಷ್ಟು ಮಂದಿ ಪ್ರಯೋಜನ ಹೊಂದಿದ್ದಾರೆ?'

"ನಾನೇ ಸುಮಾರು ಎಂಭತ್ತು ಮಂದಿಯನ್ನು ಕರೆದುಕೊಂಡು ಹೋಗಿದ್ದೆ. ಇನ್ನು ಎಷ್ಟೋ ಮಂದಿ ಆಪರೇಶನ್ ಮಾಡಿಸಿಕೊಳ್ಳಲು ಒಪ್ಪಿದ್ದಾರೆ, ಆದರೆ ಕೆಲವರಿಗೆ ಏನಾಗುತ್ತದೋ ಎಂದು ಸ್ವಲ್ಪ ಭಯ.'

"ಭಯವೇಕೆ? ಏನಾದರೂ ತೊಂದರೆಯಾದರೆ ಒಡನೆಯೇ ಸಮೀಪದ ಆಸ್ಪತ್ರೆಗೆ ಹೋದರೆ ಎಲ್ಲ ಗುಣಪಡಿಸುತ್ತಾರೆ. ನಿಮ್ಮ ಮನೆಗೆ ಬೇಕಾದರೂ ಬಂದು ನೋಡಿ ಚಿಕಿತ್ಸೆ ಮಾಡುತ್ತಾರೆ. ಇಂದು ಲಕ್ಷಗಟ್ಟಲೆ ಜನ ನಮ್ಮ ದೇಶದಲ್ಲಿ ಆಪರೇಶನ್ ಮಾಡಿಸಿಕೊಳ್ಳುತ್ತಿದ್ದಾರೆ."

"ನನಗೂ ಹಾಗೆ ಕಾಣುತ್ತದೆ. ಭಯಕ್ಕೇನಿದೆ? ಡಾಕ್ಟರ್ ಎಲ್ಲ ನೋಡಿಕೊಳ್ಳುತ್ತಾರೆ. ನನಗಂತೂ ಯಾವ ಭಯವೂ ಇಲ್ಲ- ಬೇನೆಯೂ ಇಲ್ಲ. ಈ ನಡುಹಗಲಿನಲ್ಲಿಯೂ ಬಂಡೆ ಒಡೆಯುತ್ತಿದ್ದೇನೆ' ಎಂದ ಮುನಿಸ್ವಾಮಿ.

ನಾವೆಲ್ಲ ಕಾರ್ಖಾನೆಗೆ ಮುಟ್ಟುವಾಗ ಠಣ್ ಠಣ್, ಢಕ್ ಢಕ್— ಎಂದು ತಿರುಗಿ ಶಬ್ದ ಕೇಳುತ್ತಲೇ ಇತ್ತು.

ಸುಕುಮಾರನ್ ಸಾಧನೆ

ಕೇರಳದ ತಿರುವನಂತಪುರದ ಸುಕುಮಾರನ್‌ಗೆ ಗತಕಾಲದ ಸ್ಮರಣೆ ಮಾಡಿಕೊಳ್ಳಲು ವಿರಾಮವಿದೆ. ಕೇವಲ ಕೆಲವು ತಿಂಗಳ ಹಿಂದೆ ಸುಕುಮಾರನ್ ದಾರುಣ ಸ್ಥಿತಿಯಲ್ಲಿದ್ದ. ಅವನು ಹತ್ತು ವರ್ಷದ ಹಿಂದೆ ತಂದೆಯಿಂದ ಪಡೆದಿದ್ದ ಬೇಕರಿ ಮುಚ್ಚುವ ಸ್ಥಿತಿಯಲ್ಲಿತ್ತು. ಉತ್ತಮ ವ್ಯಾಪಾರದಿಂದ ಪ್ರಗತಿ ಸಾಧಿಸುತ್ತಿದ್ದ ಬೇಕರಿಯ ಇಂದಿನ ಪರಿಸ್ಥಿತಿಯನ್ನು ಕಂಡು ಸುಕುಮಾರನ ತಾಯಿಯು ಮಗನನ್ನು ದೂಷಿಸಿದರು; ಕೆಲವರು ಅವನನ್ನು ಮತಿಗೇಡಿಯೆಂದು ಜರೆದಿದ್ದರು:

"ನನ್ನ ತಂದೆ ಮರಣಗೊಂಡಾಗ ನನಗೆ ಇಪ್ಪತ್ತೈದು ವಯಸ್ಸು. ಕಾಲ ಮೀರಿ ಹೋಗುವ ವರೆಗೆ ಏನಾಗುತ್ತಿದೆಯೆಂಬುದರ ಅರಿವೇ ನನಗಿರಲಿಲ್ಲ. ಮನುಷ್ಯ ಹೀನಾಯ ಸ್ಥಿತಿಯಲ್ಲಿದ್ದಾಗ ಅವನ ಹಿಂದಿನ ಪಾಪಗಳೆಲ್ಲವೂ ಅವನನ್ನು ಕಾಡುತ್ತವೆ" ಎಂದು ಈಗ ಸುಕುಮಾರನ್ ಸ್ಮರಿಸಿಕೊಳ್ಳುತ್ತಾನೆ.

ಬೇಕರಿಯ ಸ್ಥಿತಿಯನ್ನು ಊರ್ಜಿತ ಮಾಡುವ ಉದ್ದೇಶದಿಂದ ಸಾಲವೆತ್ತಲು ಪ್ರಯತ್ನಿಸಿದ ಸುಕುಮಾರನ್ ವಿಫಲನಾದ. ಇದರಿಂದ ಕೈಚೆಲ್ಲಿದ ಸುಕುಮಾರನ್ ಬೇಕರಿಯನ್ನು ಸಿಕ್ಕಷ್ಟು ಬೆಲೆಗೆ ಮಾರಲು ಸಿದ್ಧನಾದ. ಆ ಸಮಯದಲ್ಲಿ ಅವನಿಗೆ ಬ್ಯಾಂಕ್‌ಗಳ ರಾಷ್ಟ್ರೀಕರಣದ ಸುದ್ದಿ ತಿಳಿದು ಬಂದಿತು. ಈ ಬ್ಯಾಂಕುಗಳು ಉತ್ಪಾದನಾಕಾರ್ಯಕ್ಕೆ ಸಾಲಕೊಡುವುವೆಂಬ ಮಾತು ಕೇಳಿದ. "ನಾನು ಪ್ರಾಮಾಣಿಕ ವ್ಯಕ್ತಿ ಎಂಬುದನ್ನು ಸಾಧಿಸಿ ತೋರಿಸಬಲ್ಲೆನಾದರೆ ಸಾಕು" ಎಂದು ನಿಟ್ಟುಸಿರಿಟ್ಟ ಸುಕುಮಾರನ್ ರಾಷ್ಟ್ರೀಕೃತ ಬ್ಯಾಂಕೊಂದಕ್ಕೆ ಮನವಿ ಸಲ್ಲಿಸಿದ. ಆಗ ಅವನು ಅನೇಕ ತೊಡಕಿನ ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಆದರೆ ಅವನು ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದ. ರಾಷ್ಟ್ರೀಕೃತ ಬ್ಯಾಂಕಿನಿಂದ ಉಚಿತ ಬಡ್ಡಿ ದರದಲ್ಲಿ ಸಾಲ ಪಡೆದ.

ಈಗ ಬೇಕರಿ ವ್ಯಾಪಾರ ಆರಂಭವಾಗಿದೆ. ಅಂಗಡಿಗೆ ನಾಮಫಲಕವಿಲ್ಲದಿದ್ದರೂ ಅದರಿಂದ ಗ್ರಾಹಕರನ್ನು ಆಕರ್ಷಿಸುವುದು ಸಾಧ್ಯವಾಗದಿದ್ದರೂ, ಸುಕುಮಾರನ್ ಬೇಕರಿಗೆ ದಿನಂಪ್ರತಿ 60 ರೂ. ಸರಾಸರಿ ವ್ಯಾಪಾರವಾಗುತ್ತದೆ.

ಸುಕುಮಾರನ್ ತನ್ನ ಸ್ವಾನುಭವವನ್ನು ಹೇಳುತ್ತಿರುವಾಗಲೇ ತನ್ನ ಸಹಾಯಕನಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದ. "ಹೌದು, ಈಗ ನನಗೆ ವಿವಾಹ ಮಾಡಿಕೊಳ್ಳುವ ಯೋಗ್ಯತೆ ಬಂದಿದೆ" ಎಂದು ಉತ್ಸಾಹದಿಂದ ಉದ್ಗರಿಸಿದ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮನೆ-ಮದ್ದು
ಗೃಹವೈದ್ಯ — ರೂ.2 - 00
ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2-00
ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರ
ಸಂಕಲನ — ಬೆಲೆ ರೂ. 1–50
ಟಪ್ಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

READ &
ADVERTISE IN
NAVAYUGA WEEKLY

ಫೋನ್: 526
ಸಂಪುಟ ೪೯
ಸಂಚಿಕೆ ೩೦
VOL. 49
No. 30

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨—೪—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ತಿರುಗಿ ದೊಂಬರಾಟ

ಒರಿಸ್ಸಾ ಮತ್ತು ಗುಜರಾತಗಳಲ್ಲಿನ ಸರಕಾರಗಳನ್ನು ಉರುಳಿಸಿ ತಮ್ಮವರ ಸರಕಾರ ರಚಿಸಲು ಶ್ರೀ ಜಗಜ್ಜೀವನ ರಾಮರು ಭುವನೇಶ್ವರಕ್ಕೂ ಅಹಮ್ಮದಾಬಾದಿಗೂ ಭೇಟಿ ನೀಡಿದರು. ಅಲ್ಲಿ ಒಲೆಯೂದತೊಡಗಿದರು. ಬೂದಿಯ ಕಣಗಳು ಹಾರತೊಡಗಿದ್ದನ್ನು ಕಂಡು ಅದರಡಿಯಲ್ಲಿ ಬೆಂಕಿಯಿದೆಯೆಂದು ಭಾವಿಸಿ ಮತ್ತೂ ಊದಿದರು. ಪಾಪ, ಊದಿ ಊದಿ ಬೂದಿ ಹಾರಿತು; ರಾಮ ಮುಖಕ್ಕೆ ಭಸ್ಮಲೇಪನವಾಯಿತು. ಮೊನ್ನೆ ಮೊನ್ನೆ ಬಜೆಟ್ಟಿನ ಬೇಡಿಕೆಗಳು ಮತಕ್ಕೆ ಬಿದ್ದಾಗ ಸಿಂಗದೇವರೂ ಹಿತೇಂದ್ರ ದೇಸಾಯಿಯರೂ ದೃಢವಾಗಿ ಬೇರುಬಿಟ್ಟಿದ್ದಾರೆಂಬುದು ವ್ಯಕ್ತವಾಯ್ತು. ಈ ಬೇರನ್ನು ಕೀಳಲು ರಾಮರು ಪರಶುವನ್ನೇ ತರಬೇಕಾದೀತು. ಇನ್ನಾದರೂ ಜಗಜ್ಜೀವನರಾಮರು ತಮಗಾಗದವರ ಸರಕಾರವುರುಳಿಸುವ ದುಸ್ಸಾಹಸದಲ್ಲಿ ಆಯುಷ್ಯ ಕಳೆಯದೆ ತಮ್ಮ ಪಕ್ಷ ಜನಾನುರಾಗಗಳಿಸಲು ಪ್ರಯತ್ನಿಸುವುದು ಅಗತ್ಯ.

ಪಶ್ಚಿಮ ಬಂಗಾಳದಲ್ಲಿ ಅಜಯ ಮುಖರ್ಜಿಯವರು ತಾವೇ ಸೋತು ರಾಜೀನಾಮೆ ನೀಡಲು ನಿರ್ಧರಿಸಿದಾಗ ಶ್ರೀ ಜಗಜ್ಜೀವನ ರಾಮರೂ ಹಲ್ಲು ಕಿರಿದರು. ಯಾರನ್ನಾದರೂ ಹೇಗಾದರೂ ಕೂಡಿಕೊಂಡು ಹೊಸ ಹೊಂದಿಕೆಯಾದೀತೇ ಎಂದವರು ಹವಣಿಸಿರಬೇಕು. ಆದರೆ, ಅದು ತೀರ ಅಸಾಧ್ಯವೆಂದು ಮನವರಿಕೆಯಾದ್ದರಿಂದ ಸುಮ್ಮನುಳಿದರು. ಅಲ್ಲಿ ರಾಜ್ಯಪಾಲ ಧಾವನ್ನರು ವಿಧಾನಸಭೆಯನ್ನು ಅಮಾನತಗೊಳಿಸಿ ರಾಷ್ಟ್ರಪತಿ ಆಳಿಕೆಗೆ ಶಿಫಾರಸು ಮಾಡಿದರು. ಕೆಲಸಮಯದಲ್ಲಾದರೂ ಒಂದಲ್ಲ ಒಂದು ಸರಕಾರ ರಚನೆಯಾಗ ಬಾರದೇಕೆ? ಬಿಹಾರದಲ್ಲಿ ಎಂಟು ತಿಂಗಳ ನಂತರ ಸಾಧ್ಯವಾದದ್ದು ಎಂಟು ವರ್ಷಗಳು ಸಂದರೂ ಬಂಗಾಳದಲ್ಲಿ ಅಸಾಧ್ಯವೆಂಬುದನ್ನ, ಧಾವನ್ನರು ಅರಿಯದೆ ಹೋದರೂ ಜಗಜೀವನರಾಮರು ಅರಿತಿದ್ದಾರೆ. ಅಲ್ಲಿ ಕೆಟ್ಟುಹೋದ ಶಾಂತಿ-ಸುವ್ಯವಸ್ಥೆಯನ್ನು ಮರುಸ್ಥಾಪಿಸುವ ನೆವದಲ್ಲಿ ಸುದೀರ್ಘಕಾಲ ರಾಷ್ಟ್ರಪತಿ ಆಳಿಕೆ ನಡೆಯಬಹುದು. ತಮ್ಮ ಬೇರೂರಲು ಇಂಡಿಕೇಟಿಗರಿಗೂ ಅವಕಾಶ ಬೇಕು ತಾನೆ? ಆದರೆ, ಮಾರ್ಕ್ಸಿಸ್ಟ್ ನಾಯಕ ಉಪಮುಖ್ಯಮಂತ್ರಿ ಅಧ್ವರ್ಯು ಜ್ಯೋತಿ ಬಾಸು ಮೇ ತಿಂಗಳೊಳಗೆ ಅಧ್ಯಕ್ಷರಾಳಿಕೆ ಹಿಂದೆಗೆಯದಿದ್ದರೆ ಚಳವಳ ಹೂಡುವ ಬೆದರಿಕೆ ಹಾಕಿದ್ದಾರೆ. ಇದಕ್ಕೆ ಇಂಡಿಕೇಟಿಗರು ಅಂಜುವುದಿಲ್ಲ; ಪ್ರತಿ ಚಳುವಳಿ ಹೂಡುವ ವ್ಯವಸ್ಥೆ ಮಾಡಿದರೆ ಸರಿ. ಖೇದದ ಸಂಗತಿಯೆಂದರೆ ಬಂಗಾಳವು ಗೊಂದಲ-ಗದ್ದಲಗಳ ರಾಜ್ಯವಾಗಿಯೇ ಮುಂದುವರಿಯುವುದಲ್ಲಾ ಎಂಬುದು.

ಬಂಗಾಳ ಸರಕಾರ ಪತನದ ಹಿಂದೆಯೇ ಪಂಜಾಬದ ಅಕಾಲಿ-ಜನಸಂಘಗಳ ಸಮ್ಮಿಶ್ರ ಸರಕಾರವೂ ಉರುಳಿ ಹೋದುದು ಅನಿರೀಕ್ಷಿತವೆಂದು ಕೆಲವರೆಂಬೋಣ. ಜಗಜ್ಜೀವನ ರಾಮರಿಗೆ ಜ್ಞಾನೋದಯವಾಗುವುದರೊಳಗೇ ಗುರ್ನಾಮ ಸಿಂಗರು ಉರುಳಿಯೇ ಹೋದರು. ತನಗೆ ಬಹುಮತವಿದೆಯೆಂದು ಹೇಳಿ ಒಂದೆರಡು ದಿನ ಕಳೆದರೂ ಕೊನೆಗೂ ಅವರು ಬಲಾತ್ಕಾರದಿಂದ ರಾಜೀನಾಮೆ ಕೊಡಬೇಕಾಯ್ತು. ಬಜೆಟ್ ಬೇಡಿಕೆಯ ವಿರುದ್ಧ ಅಕಾಲಿಗಳಲ್ಲಿ ಅಧಿಕ ಸಂಖ್ಯಾಕರು ಮತ ನೀಡಿದ್ದೇ ಅವರ ಪರಾಜಯಕ್ಕೆ ಕಾರಣ. ಸುದ್ದಿ ತಿಳಿದ ಜಗಜ್ಜೀವನರಾಮರು ತಮ್ಮ ಮೀಸೆ ಹೊಗಿಸುವ ಯತ್ನ ಮಾಡಿದರು. ಆದರೆ, ಅಕಾಲಿಗಳಲ್ಲಿ ಹೆಚ್ಚಿನವರು ಗುರ್ನಾಮ ಸಿಂಗರ ವಿರುದ್ಧ ನಿಂತದ್ದರಿಂದ ಅದು ಫಲಿಸುವುದು ಅಸಾಧ್ಯವಾಯಿತು. ಈಗ ಗುರ್ನಾಮ—ರಾಮ ಉದ್ದೇಶ್ಯ ಅಕಾಲಿನ ಪ್ರಕಾಶ ಸಿಂಗ್ ಬಾದಲ್ಲರ ಸರಕಾರ ಉರುಳಿಸಿ ಪರ್ಯಾಯ ಸರಕಾರ ಸ್ಥಾಪಿಸುವುದು. ಇದು ಪ್ರಾಯಃ ತುಸು ಕಷ್ಟ.

ಅಕಾಲಿದಳ ಒಡೆಯಲು ಸಂತಫತೇಸಿಂಗ-ಚನನ ಸಿಂಗರು ಕಾರಣರು. ಈ ಸಂತರಿಗೆ ತಮ್ಮ ಕೈ ಗೊಂಬೆಯೇ ಸರಕಾರದಲ್ಲಿರಬೇಕು. ಇದುವರೆಗೆ ಚಂಡೀಗಡ ಚಂಡೀಗಡವೆಂದು ಸಿಕ್ಖ ಮತೀಯರನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡ ಈ ಸಂತರ ಪ್ರಭಾವ ಗುರ್ನಾಮ ಸಿಂಗರು ಚಂಡೀಗಡವನ್ನು ಪಂಜಾಬಿಗೇ ಕೊಡಿಸುವಲ್ಲಿ ಸಫಲರಾದ್ದರಿಂದ ಕಡಿಮೆಯಾಯಿತು. ಶ್ರೀ ಸಿಂಗರು ದ್ರಾ.ಮು.ಕ. ದ ನಾಯಕರೊಡನೆ ಸಖ್ಯ ಬೆಳೆಸಿ ಭಾರತದ ರಾಜ್ಯಕೀಯದಲ್ಲಿ ಮೆರೆಯಲು ಹವಣಿಸಿದರು. ಇದನ್ನು ಸಹಿಸಲಾಗದ ಸಂತರು ತಮ್ಮ ಅನುಯಾಯಿಗಳನ್ನು ಛೂಬಿಟ್ಟರ. ಪಾಪ, ಗುರ್ನಾಮ ಸಿಂಗರನ್ನು ಮಂತ್ರಿಪದದಿಂದ ಮಾತ್ರವಲ್ಲ, ಅಕಾಲಿ ದಳದ ಪ್ರಾಥಮಿಕ ಸದಸ್ಯತನದಿಂದಲೂ ದೂರ ತಳ್ಳಿಬಿಟ್ಟರು. ಅಕಾಲಿದಳದಲ್ಲಿ ಇಬ್ಭಾಗವಾದುದು ದುರದೃಷ್ಟ. ಗುರ್ನಾಮ ಸಿಂಗರು ಪ್ರಕಾಶ ಸಿಂಗ್ ಬಾದಲ್‌ರವರ ಸರಕಾರದ ಸ್ಥಿರತೆಯನ್ನು ಶಂಕಿಸಿದರೂ ಅವರ ನಿರೀಕ್ಷೆ ನಿಜರಿಯೇ ಅದು ಪಂಜಾಬದಲ್ಲಿ ಆಳುವುದು. ಗುರ್ನಾಮ ಸಿಂಗರು ಜಗಜ್ಜೀವನ ರಾಮರ ಮರೆಹೋದಲ್ಲಿ, ಯಾವುದಾದರೊಂದು ರಾಜ್ಯದ ರಾಜ್ಯಪಾಲ ಪದವಿಯಾದರೂ ಗಿಟ್ಟಿಸಿಕೊಳ್ಳಬಹುದು. ಇಂಡಿಕೇಟನ್ನು ತುಸು ಬಲಪಡಿಸಲು ಈ ಕೊಡುಗೆ ಪ್ರಧಾನಿ ಗಾಂಧಿಗೆ ಸಹಾಯಕವಾಗಬಹುದು.

ಕಳೆದ ವರ್ಷ ಮಧ್ಯಾವಧಿ ಚುನಾವಣೆಗಳು ನಡೆದ ಬಳಿಕ ಬಿಹಾರ, ಉತ್ತರ ಪ್ರದೇಶ ಮತ್ತು ಪಂಜಾಬಗಳ ಸರಕಾರಗಳು ಉರುಳಿ ಪರ್ಯಾಯ ಸರಕಾರಗಳು ರಚಿತವಾದುವು. ಬಂಗಾಳದ ಕತೆ ಮಾತ್ರ ಭಿನ್ನ. ಆದರೆ, ರಚಿತವಾದ ಸರಕಾರಗಳ ದೊಂಬರಾಟ ಇನ್ನೂ ನಾಲ್ಕು ವರ್ಷಗಳ ಕಾಲ ಮುಂದುವರಿಯುವುದೆಂಬ ನಂಬಿಕೆಯಿಲ್ಲ. ಕಪ್ಪೆಗಳನ್ನು ತಕ್ಕಡಿಯಲ್ಲಿ ತೂಗಹೊರಟಂತಿವ ರಾಜ್ಯಕೀಯ ನಾಯಕರು ಕೆಲವರಾದರೆ, ಈ ಕಪ್ಪೆಗಳನ್ನು ಹಿಡಿದು ತಿನ್ನುವ ಬೆಕ್ಕುಗಳೂ ಕೆಲವಿವೆ. ಇಂಡಿಕೇಟ್-ಧ್ವಜ ಜಗಜ್ಜೀವನ ರಾಮರು ಹೊಂಚು ಹಾಕುತ್ತಿರುವುದು ಇದಕ್ಕೇ. ತಮ್ಮ ಅಧ್ಯಕ್ಷಾವಧಿಯ ಆರಂಭದಲ್ಲೇ ಮುಖಕ್ಕೆ ಟಾರು ಬಳಿದುಕೊಂಡ ಅವರು ಆಹಾರ ಖಾತೆಯನ್ನು ಉತ್ತಮವಾಗಿ ನಿರ್ವಹಿಸಿದರೆನ್ನುವುದಕ್ಕಿಂತ ಪ್ರಸ್ತುತ ಭಾರತೀಯರ ಮೇಲೆ ಕರ ಹೇರಿಸಿತು ಎನ್ನುವುದೇ ಸಮರ್ಪಕವಾದೀತು. ಶ್ರೀಮತಿ ಗಾಂಧಿಯವರ ಸೆರಗಿನ ನೆರಳಲ್ಲಿರುವ ಜನಕ ರಾಂಗೆ ಆಸರೆ. ಆದರೆ, ಈ ದಿಟ್ಟೆ ಯಾವ ಗಳಿಗೆಯಲ್ಲಿ ಸೆರಗೆಳೆದುಕೊಳ್ಳುವುದೆಂದು ಯಾರಿಗೆ ಗೊತ್ತು?

ಉತ್ಪ್ರೇಕ್ಷಿತ

ಆರೋಗ್ಯ ಖಾತೆಯ ಬೇಡಿಕೆಗಳ ಮೇಲೆ ಚರ್ಚೆ ಆರಂಭವಾದಾಗ ಯಥಾ ಪ್ರಕಾರ ಮಾಮೂಲಿ ಟೀಕೆ-ಟಿಪ್ಪಣಿ. ಆಸ್ಪತ್ರೆಗಳು ನರಕ ಸಮಾನ, ಅಲ್ಲಿನ ನೌಕರರು ಯಮದೂತ ಸಮಾನರು; ವಿನಯವಿಲ್ಲ, ಆದರವಿಲ್ಲ, ಸೇವಾಭಾವನೆಯಿಲ್ಲ. ಸಂಪೂರ್ಣ ಅಲಕ್ಷ್ಯ ಮತ್ತು ಬೇಜವಾಬ್ದಾರಿಯ ಕ್ರೀಡಾರಂಗ ಸರಕಾರಿ ಆಸ್ಪತ್ರೆ—ಎಂಬರ್ಥದ ಮಾತುಗಳು. ಔಷಧ ವೈದ್ಯರ ಅಭಾವವಂತೂ ಬಹು ದಿನದಿಂದಲೂ ನಡೆದು ಬಂದದ್ದೇ. ಸಚಿವ ವೈ. ರಾಮಕೃಷ್ಣ ತನ್ನ ಖಾತೆಯ ಮೇಲೆ ಬಂದ ಆರೋಪಗಳನ್ನು ಉತ್ಪ್ರೇಕ್ಷಿತವೆಂದು ಹೇಳಿದರೂ ಪ್ರತಿಭಟಿಸಲಿಲ್ಲ. ಕಾಲ್ಪನಿಕ ಉಪಮಾನವಿದ್ದಲ್ಲಿ ಉತ್ಪ್ರೇಕ್ಷಾಲಂಕಾರವಾಗುವುದು. ಉಪಮೇಯದ ಅಸ್ತಿತ್ವ ಮತ್ತು ಗುಣಧರ್ಮಗಳ ಬಗ್ಗೆ ಸಂದೇಹ ಅನಗತ್ಯ. ಆದರೆ, ಸರಕಾರಿ ಆಸ್ಪತ್ರೆಗಳಿಗೆ ನರಕದ ಅಲ್ಲಿನ ನೌಕರರಿಗೆ ಯಮದೂತರ ಉಪಮಾನ ಕಲ್ಪಿತವೇ ಸರಿ. ಪ್ರಾಯಃ ಆಸ್ಪತ್ರೆಗಳು ನರಕಕ್ಕೂ ಕಡೆಯಾಗಿರುವಾಗ ಅವಕ್ಕೆ ನರಕದ ಉಪಮಾನವಿತ್ತರೆ ಅದು ಕಲ್ಪಿತವೇ ಆಯ್ತು. ಜನರ ಪ್ರಾಣದೊಡನೆ ಚೆಂಡಾಡುವ ವೈದ್ಯಕೀಯ ಇಲಾಖೆಯಲ್ಲಿ ಸೇವಾ ಭಾವನೆಯಿರುವವರ ಅಭಾವವಿದೆ; ಸರಕಾರಿ ಸೊತ್ತು ಸೌಲಭ್ಯಗಳನ್ನು ತಮ್ಮ ಖಾಸಗಿ ವ್ಯವಹಾರಗಳಿಗೇ ಬಳಸುವ ಮನೋಭಾವ ತುಂಬಿ ತುಳುಕಾಡುತ್ತಿದೆ. ಸ್ವಾರ್ಥಲೋಲುಪ ರಾಜ್ಯಕಾರಣಿಗಳು ಸಮಾಜವನ್ನು ಅಧಃಪಾತಕ್ಕೆ ತಳ್ಳುತ್ತಾರೆ; ಆರೋಗ್ಯ ಇಲಾಖೆ ಪ್ರಾಣವನ್ನು ಹಣವನ್ನು ಪೋಲು ಮಾಡುತ್ತದೆ. ಈ ಪರಿಸ್ಥಿತಿ ತಪ್ಪಿದಂದೇ ನಮ್ಮ ಉದ್ಧಾರ ಸಾಧ್ಯ. ಟೀಕೆ ಟಿಪ್ಪಣಿ ಮಾಡುವವರು ಇದಕ್ಕೆ ಕ್ರಿಯಾತ್ಮಕ ಸಹಕಾರ ನೀಡಬೇಕು.

ಚಿತೆ- ಚಿಂತೆ

ತನಿಸಿಗಿಂತಲೂ ಮಿಗಿಲು ಮನಸಿಕಾಂತ ಮಾತ್ಯ
ಕಾಣದುರಿವುದು ಚಿಂತೆ ಅರಿಕಲಸಕ,
ಚಿತೆ-ಚಿಂತೆಯೊಳಗೆ ವ್ಯತ್ಯಾಸ ಬರೀ ಶೂನ್ಯ
ಚಿಂತೆಯನು ನಗುನಗುತ ನುಂಗಿದವ ಧನ್ಯ.

—'ದೇವಕಿನಂದ', ಮಿಜಾರ.

ಕೆ. ಕೆ. ಪೈ ಮತ್ತು ಮಧ್ವರಾಜರಿಗೆ ಸತ್ಕಾರ ಕೂಟ

ಮಲ್ಪೆಯ ಫಿಶರ್‌ಮೆನ್ಸ್ ಎಂಟರ್‌ಪ್ರೈಸಿನವರು, ಸಿಂಡಿಕೇಟ್ ಬ್ಯಾಂಕಿನ ನೂತನ ಕಸ್ಟೋಡಿಯನ್ ಶ್ರೀ ಕೆ.ಕೆ.ಪೈ, ಮೈಸೂರು ರಾಜ್ಯದಿಂದ 1969ರಲ್ಲಿ ಪರಮಾವಧಿ ನಿರ್ಯಾತಕ್ಕಾಗಿ ಕೊಡಲ್ಪಟ್ಟ ಶ್ರೇಷ್ಠ ನಿರ್ಯಾತಗಾರರ ಬಹುಮಾನ ಪಡೆದ ಶ್ರೀ ಮಲ್ಪೆ ಮಧ್ವರಾಜರನ್ನು ಸತ್ಕರಿಸಲು ಸತ್ಕಾರ ಕೂಟವೊಂದನ್ನು ಇತ್ತೀಚೆಗೆ ಏರ್ಪಡಿಸಿದ್ದರು. ಎಂಟರ್‌ಪ್ರೈಸ ಪಾಲುಗಾರರಲೊಬ್ಬರಾದ ಶ್ರೀ ಸಿ. ಪಿ. ಕರ್ಕೇರರು ಸ್ವಾಗತಿಸಿದರು. ಶ್ರೀ ಕೆ.ಕೆ. ಪೈಯವರು ಮಾತನಾಡುತ್ತಾ ಬ್ಯಾಂಕುಗಳಲ್ಲಿ ಜಿಲ್ಲೆಯ ಮತ್ಸ್ಯೋದ್ಯಮಕ್ಕೆ ಅಧಿಕವಾಗಿ ನೆರವಿತ್ತು ಸಹಕರಿಸಿದ ಬ್ಯಾಂಕುಗಳಲ್ಲಿ ಸಿಂಡಿಕೇಟ್ ಬ್ಯಾಂಕ್ ಅಗ್ರಸ್ಥಾನ ಪಡೆದು ಇತರ ಬ್ಯಾಂಕುಗಳಿಗೆ ಅನುಕರಣೀಯವಾಗಿದೆಯೆಂದು ಹೇಳಿದರು. ಅವರು ಮುಂದುವರಿಯುತ್ತಾ ಬ್ಯಾಂಕಿನ ಹಿಂದಿನ ಕಾರ್ಯಕಲಾಪಗಳಿಗೆ ಮುಂದೆಯೂ ಏನೊಂದೂ ಲೋಪದೋಷವಿಲ್ಲದೆ ಮುಂದುವರಿಯುವುದೆಂದೂ ಆಶ್ವಾಸನೆಯಿತ್ತರು. ಶ್ರೀ ಮಧ್ವರಾಜರು, ಶ್ರೀ ಟಿ. ಎ. ಪೈ, ಶ್ರೀ ಕೆ. ಕೆ. ಪೈ ತನಗೆ ಹಾಗೂ ಉದ್ಯಮಕ್ಕೆ ಇತ್ತ ನೆರವನ್ನು ಸ್ಮರಿಸಿ ಈಗಲೇ 'ಮಾದರಿ ಬ್ಯಾಂಕ್' ಎಂದು ಪ್ರಸಿದ್ಧಿ ಪಡೆದಿರುವ ಈ ಬ್ಯಾಂಕ್ ಮುಂದೆಯೂ ತನ್ನ ಸ್ಥಾನವನ್ನು ಉಳಿಸಿಕೊಳ್ಳಬೇಕೆಂದರು. ಎಂಟರ್‌ಪ್ರೈಸಿನ ಲೆಕ್ಕ ಪರಿಶೋಧಕರಾದ ಶ್ರೀ ಡಿ. ಸಿ. ಕೊಟ್ಯಾನ್‌ರವರು ಧನ್ಯವಾದವನ್ನಿತ್ತರು.

ನಮ್ಮಲ್ಲಿ ಜಾತೀಯತೆ ಇದೆಯೇ?

ಲೇಖಕರು:— ಶ್ರೀ ಕೊರಾಡಿ ಸದಾಶಿವ ಕಲ್ಕೂರ.

ಮಗು ಮಗುವಾಗಿದ್ದರೆ ಚೆಂದವಿತ್ತು. ಅದು ದೊಡ್ಡದಾಗುತ್ತಾ ಬಂದಂತೆ ಸಮಸ್ಯೆಗಳೂ ಹೆಚ್ಚುತ್ತಾ ಬರುತ್ತವೆ. ಹಲವು ಒಳ್ಳೆಯದರ ಜತೆಗೆ, ಕೆಲವು ಕೆಟ್ಟದೂ ಅದರ ನಡತೆಯಲ್ಲಿ ಕಾಲಿಕ್ಕುತ್ತವೆ. ಬೆಳೆಯಬೇಕಾದ್ದು ಸಹಜ ಧರ್ಮವೆಂದು ಪರಿಗ್ರಹಿಸಿದರೆ, ಕೆಟ್ಟುದನ್ನು ತಾಳ್ಮೆಯಿಂದ ವಿವೇಚಿಸಬೇಕಾದದ್ದೂ ಕರ್ತವ್ಯವಾಗುತ್ತದೆ. ನಮ್ಮ ಪಾರತಂತ್ರ್ಯದಲ್ಲಿದ್ದಾಗ ಯಾವುದರ ಗೊಡವೆಯೂ ಇದ್ದಿರಲಿಲ್ಲ. ಸ್ವತಂತ್ರರಾದ ಮರುದಿನದಿಂದ ನಮ್ಮ ರಾಷ್ಟ್ರಜೀವನದಲ್ಲಿ ನೂರಾರು ವಿಘ್ನ, ವಿಚ್ಛಿದ್ರಗಳು ನಮಗೆ ಕಂಡಿವೆ. ಹುಲ್ಲುಕಡ್ಡಿಗೆ ಭೂತಕನ್ನಡಿ ಹಿಡಿದು, ಕಾಸರಕನ ಮರವೆಂದು ಬೊಬ್ಬೆ ಇಟ್ಟಿದ್ದೇವೆ. ಅಂತಹದರಲ್ಲಿ ಜಾತೀಯತೆಯೂ ಒಂದು. ಬಾಲ್ಯದಲ್ಲಿ ಕನಸು ಕಂಡಾಗ ಕೆಲವೊಮ್ಮೆ ಆ ಕನಸ ನೈಜವೆಂದೇ ಕಾಣುತ್ತಿತ್ತು. ಕನಸಿನಲ್ಲಿ ಒಬ್ಬ ಸತ್ತರೆ ಆ ದುಃಖದಾಘಾತ ಸಂವೇದಿಯಾದ ಮನಸ್ಸಿಗೆ ತಟ್ಟುತ್ತಿತ್ತು. ಜಾತೀಯತೆ ಅದರ ಪ್ರಚಂಡ ಹಾವಳಿ ಒಂದು ಕೆಟ್ಟ ಕನಸು.

ಜಾತಿ ಎಂಬುದು ಒಂದು ವಿಂಗಡನೆ. ಹಣ್ಣಿನ ಅಂಗಡಿಯಲ್ಲಿ ನೂರಾರು ಬಗೆಯ ಹಣ್ಣುಗಳ ಭಿನ್ನತೆಗಳನ್ನು ನಿರ್ದೇಶಿಸುವುದಕ್ಕೆ ಒಂದೊಂದು ಹೆಸರು, ಒಂದೊಂದರ ಒಂದೊಂದು ಗುಂಪು; ಒಂದೊಂದು ಜಾತಿ. ಬೇರೆ ಬೇರೆಯಾಗಿಯೂ ಅವು ಶೋಭಿಸುತ್ತವೆ. ತಮ್ಮ ರುಚಿಯನ್ನು ಕೆಡಿಸಿಕೊಂಡಿಲ್ಲ. ಮಾನವನಲ್ಲೂ ಅಂತೆಯೇ ಉದ್ಯೋಗ-ವರ್ಣಗಳಿಂದ ಒಂದೊಂದು "ಸರ್ ನೇಮ್" ದತ್ತವಾಗಿ ದೊರೆತಿದೆ. ಇದನ್ನೇ ಹಿಡಿದು ಮನುಷ್ಯ ಕುಲ ಬಾಳುತ್ತಾ ಬಂದಿದೆ. ಸಂಬಂಧ ಬೆಳೆಯುತ್ತಿದೆ. ಸಂತಾನ ಸೃಷ್ಟಿಸುತ್ತದೆ. ಪಡೆದು ಬಂದ ದಾರಿಯಲ್ಲಿ ಜೀವಾಳವಿದೆ, ಎಂದು ಹೆದರಿಸಿದ್ದಾರೆ. ಈ ಭಯ ಇನ್ನೊಬ್ಬರ ದಾರಿಯಲ್ಲಿ ಒಬ್ಬರೇ ಹೋಗುವುದಕ್ಕೆ ಕರುಳಲ್ಲಿ ಏನೋ ಛಳಿ ಹುಟ್ಟಿಸಿದೆ. ಈ ಜಾತಿಗಳಿಗೂ ದೇವರಿಗೂ ಒಂದು ರೀತಿಯ ಗಂಟು. ದೇವರನ್ನೇ ನಮ್ಮ ಸಮಾಜದಿಂದ ತೆಗೆದಾಗ ಜಾತಿ ಶೂನ್ಯವಾದೀತೆ? ಜಾತಿಯನ್ನೇ ತೆಗೆದಾಗ ದೇವರು ಶೂನ್ಯವಾದಾನೆಯೆ? ಮನುಷ್ಯನ ಸ್ವಭಾವದಲ್ಲಿ ವ್ಯತ್ಯಾಸವಿದ್ದಷ್ಟು ಕಾಲ ಹಲವು ಜಾತಿ ಈ ನೆಲದಲ್ಲಿ ಬದುಕಿಕೊಂಡು ಇರುತ್ತವೆ. ಎಲ್ಲರ ಸ್ವಭಾವ ಒಂದೇ ಆಗುವುದು ಯಾವಾಗ? ಪ್ರಾಯಶಃ ಯಾವ 'ಇಸಮ್'ಗೂ ಸಾಧಿಸಲಾಗದ ಕಾರ್ಯಕ್ರಮವದು. ರಾಗ ದ್ವೇಷ, ಆಸೆ, ಆಕಾಂಕ್ಷೆ-ಮುಂತಾದ ಚಿತ್ತವೃತ್ತಿಗಳನ್ನೇ ನಮ್ಮ ಲಕ್ಷ್ಯದಲ್ಲಿರಿಸಿಕೊಂಡಾಗ ಮನುಷ್ಯ ಜಾತಿ ಹಲವಿಲ್ಲ. ಒಂದೇ ಎನ್ನುವುದು ಭಾಸವಾಗುತ್ತದೆ. ನಮ್ಮೆಲ್ಲರ ಮನವೊಪ್ಪಿ ನಾವು ಅಂಗೀಕರಿಸಿದ ನಿರ್ಣಯ—ಭಾರತವು ಪವಿತ್ರ ದೇಶ. ಬಾಯಲ್ಲಿ ಅಮೇರಿಕಾ-ಜಪಾನ್‌ಗಳನ್ನು ಹಾಡಿ ಮೆಚ್ಚಿ ಕೊಂಡಾಡಿದರೂ—ಅಂತರಾತ್ಮ ಖಂಡಿತಾ ಹಾಗೆ ಹೇಳುವುದಿಲ್ಲ. ಇಲ್ಲಿ ಹುಟ್ಟಿ ಬೆಳೆದ ವೇದೋಪನಿಷತ್ತುಗಳು, ದೇವದೇವಿಯರು ಒಂದಲ್ಲ ಒಂದು ರೀತಿಯಿಂದ ನಮ್ಮ ಮೇಲೆ ಪ್ರಭಾವ ಬೀರಿವೆ. ಒಬ್ಬಾತ 'ಬೊಬ್ಬರ್ಯ'ನನ್ನೇ ಪೂಜಿಸಲಿ, ಮತ್ತೊಬ್ಬ ಮಹೇಶನನ್ನೇ ಪೂಜಿಸಲಿ-ಇಬ್ಬರೂ ದೇವರೊಬ್ಬನೇ ಎನ್ನುತ್ತಾರೆ. ಇದನ್ನೇ ಬಲ್ಲವರು 'ವಿಶ್ವಾತ್ಮವಾದ' ಎಂಬ ದೊಡ್ಡ ಹೆಸರಿನಿಂದ ಕರೆದಿರಬೇಕು. ನಮ್ಮ ಸಂವಿಧಾನ "ಧರ್ಮನಿರಪೇಕ್ಷತೆ"ಯನ್ನು ನೀಡಿದೆ. ಈ ಸಂವಿಧಾನ ಹುಟ್ಟಿದ ಆ ಬಳಿಕ ಹುಟ್ಟಿದುದೇ ಪ್ರತಿ ಜಾತಿಯ ಅಭ್ಯುದಯಕಾರಕ ಸಂಘಗಳು. ಅಂಶಿಕವಾಗಿ ಸ್ಪರ್ಧಾಭಾವದಿಂದ ಪ್ರತಿ ಜಾತಿ ಬೆಳೆಯಬೇಕು ಎಂದಾಯಿತು. ಇದರಲ್ಲಿ ಗುರಿಯಾದದ್ದು 'ಮಾನವಜನ್ಮ'. ನಮ್ಮ ಎಲ್ಲಾ ಸಮಸ್ಯೆಗೆ ಮೂಲ ಇಲ್ಲಿದೆ. ಯಾವುದೋ ಕೆಲವು ಮತದವರನ್ನು ಅಲ್ಪಸಂಖ್ಯಾಕರು ಎಂದು ಹೆಸರಿಸಿದೆವು. ಕೌರವ ಪಾಂಡವರು ಪರಸ್ಪರರಲ್ಲಿ ಭಯದಿಂದಲೇ ಬಾಳ ಕೊನೆಗೊಮ್ಮೆ ಏಕೆ ಹಲವು ಬಾರಿ ಹೊಡೆದಾಡಿಕೊಂಡರು. ಪಾಂಡವರು ಬದುಕಿದ್ದರಿಂದ ಸತ್ಯ ಅವರ ಪಾಲಿಗಿತ್ತು ಎಂದು ಗುರುತಿಸಿದೆವು. ಹಿಂದೂ-ಮುಸ್ಲಿಮ ಐಕ್ಯತೆಗೆ ಕಬೀರನಿಂದ-ಗಾಂಧೀಜೀ ತನಕ ಪ್ರಯತ್ನ ಸಾಗಿಬಂದಿದೆ. ಪರಸ್ಪರರಲ್ಲಿ ಭಯ ನಿರ್ಮೂಲ ಆಗಿಲ್ಲ.

ಜಾತೀಯ ಪಟ್ಟಿಯನ್ನೆಲ್ಲಾ ಬೆಲೂನ್ ಮಾಡಿ ಗಾಳಿಯೂದಿ ಜೀವದಾನ ಮಾಡಿ ಗಾಳಿಗೆ ಬಿಡುತ್ತಿದ್ದಾರೆ. ಹಿಂದೂ ಹಬ್ಬದಲ್ಲಿ ಮುಸ್ಲಿಮ್ ಸಿಡಿಮದ್ದು ಸುಡುತ್ತಾನೆ. ಮುಸ್ಲಿಮ್ ಹಬ್ಬದಲ್ಲಿ ಹಿಂದೂ ಹುಲಿವೇಷ ಧರಿಸುತ್ತಾನೆ. ಯಾವುದೇ ಮತದ ಸಾಮಾನ್ಯ ಪ್ರಜೆಗೆ ಮಾನಸಿಕ ಗೊಂದಲವಿಲ್ಲ. ಇವರನ್ನೇ ಎತ್ತಿಕಟ್ಟಿ ಅಸ್ತ್ರವಾಗಿ ಬಳಸುವ ಬುದ್ಧಿವಂತ ತಿಳಿಗೇಡಿಗಳ, ಮಾನವೀಯತೆ ಅರಿಯದ, ದುರ್ಲಭದಲ್ಲೇ ಬದುಕುತ್ತಿರುವ ಒಂದು ಪಂಗಡವಿದೆ. ಜನಸಾಮಾನ್ಯನಿಗೆ ಬೇಕಾದುದು ಬದುಕು. ಈ ಸಾವಿರ ಮಂದಿ ಕೋಟಿ ಕೋಟಿಯ ಬದುಕಿಗೆ ಮಾರಕರು. ಇಂದು ಮತ ಮತಗಳಲ್ಲಿರುವ ವೈಷಮ್ಯಭಾವಗಳನ್ನು "ಜಾತೀಯತೆ" ಎನ್ನಲಾಗುತ್ತಿದೆ. ಈ ವೈಷಮ್ಯವನ್ನು ತಪ್ಪಿಸಲಾಗುವುದಕ್ಕೆ ಪ್ರಯತ್ನ ಸಾಗುತ್ತಾ ಬಂದಿದೆ. ಈ ದೇಶ ಒಂದು ಸಂತೆ ಎಂಬಂತೆ ಚರಿತ್ರೆಯಲ್ಲಿ ಸಿದ್ಧವಾಗಿದೆ. ಸಂತೆ ಯಾರ ಹುಟ್ಟೂರೂ ಅಲ್ಲ. ಅಲ್ಲಿಗೆ ಸಾವಿರಾರು ಮಂದಿ ಬಂದು ಗದ್ದಲ ಮಾಡಿ, ಕೊನೆಗೊಮ್ಮೆ ಚದುರಿದವರು. ಈ ಚರಿತ್ರೆ ನಮ್ಮ ಅಜ್ಞಾನವನ್ನು ಬೆಳೆಸಿದೆ. ಬಂದವರೆಲ್ಲ ಇದ್ದವರನ್ನು ಹೊರಡಿಸುವ ಯತ್ನ ಮಾಡಿದರು. ಮೊದಲಿನಿಂದಲೇ ವಾಸ್ತವ್ಯದಲ್ಲಿದ್ದ "ಹಿಂದೂ" ಎಂಬ ಜನಾಂಗ ಎಲ್ಲರ ಪೆಟ್ಟನ್ನೂ ತಿಂದು ಬದುಕಿದೆ. ಈ "ಜಾತ್ಯಾತೀತ" ಎಂಬ ಸೋಗು ಇದರ ಶಕ್ತಿಗೆ ಕೊಟ್ಟ ನೇಣು.

ಜಾತಿಯನ್ನೇನೋ ಬದಿಗೊತ್ತೋಣ. ಇತ್ತೀಚೆ ಹಬ್ಬಿದ ಹೊಸ ಜಾತಿಯನ್ನೇನು ಮಾಡೋಣ? ವಿಪ್ಲವಕಾರಿಗಳು ಇವು ಮಾಡಿದಷ್ಟು ಕೋಲಾಹಲವನ್ನು ಹಳೇ ಜಾತಿಗಳು ಮಾಡಿಲ್ಲ. ಮನಸ್ಸಿನ ಸ್ಥಿರತೆಯನ್ನು ಕೆಡಿಸಿ, ಯಾವ ಕೆಲಸಕ್ಕೂ ಬಲವು ಕೊಡದಂತಹ ಮೈಗಳ್ಳತನವನ್ನು ಬೆಳೆಸಿ, ಕೇವಲ ನಾಲಗೆಯ ಸತ್ವವನ್ನು ಬೆಳೆಸಬಲ್ಲಂತಹ ಜಾತಿ ಇವುಗಳು. ರಾಜಕೀಯ ಪಕ್ಷ ಪಂಗಡಗಳು. ಒಬ್ಬ ಮನುಷ್ಯನನ್ನು ಎಳೆ ಎಳೆ ಬಿಡಿಸೋಣ. ವೈದ್ಯರು ದೇಹವನ್ನು ಬಿಡಿಸಿ-ಕಬ್ಬಿಣ ಕ್ಯಾಲ್ಸಿಯಮ್—ವರ್ಗೀಕರಿಸಿದಂತೆ ಒಬ್ಬಾತ ವ್ಯಕ್ತಿ ಉದ್ಯೋಗದಲ್ಲಿ ಪತ್ರಿಕಾ ಸಂಪಾದಕ, ಜಾತಿ ಬ್ರಾಹ್ಮಣ, ಕಮ್ಯೂನಿಷ್ಟ್ ಸಂಘದ ಸದಸ್ಯ, ಆವನೂರ ಭಜನಾ ಸಂಘದ ಸದಸ್ಯ ಹೀಗೆ ಹಲವಾರು—ಇವನ ಮನಸ್ಸು ಎಷ್ಟು ಭಿನ್ನ ಗತಿಯಿಂದ ಸಂಚಾರ ಬೇಕಾಗುತ್ತದೆ! ಇದರಿಂದ ನಮಗೆ ಸಿಕ್ಕಿದಂತಹ ಲಾಭಾಂಶವೇನು? ರಾಷ್ಟ್ರ ಜೀವನದ ಅದೇ ಚಿಕ್ಕ ಘಟಕ ಒಂದು ವ್ಯಕ್ತಿ. ಅದೂ ಹೊಣದ ಕಣ್ಣಿನಂತೆ ನೂರಾರು ಚೂರು. ಈ ಚೂರನ್ನು ಕಲೆ ಹಾಕುವ ಕಲಾಗಾರಿಕೆ ನಡೆಯಬೇಕಾಗಿದೆ. ಅದು ಯಾರಿಂದ ಸಾಧ್ಯ? ಒಂದು ರಾಷ್ಟ್ರಜೀವನವೆಂದರೆ ಕೌಟುಂಬಿಕ ಜೀವನದ ದೊಡ್ಡ ಮಾದರಿ. ಕುಟುಂಬದಲ್ಲಿ ಪ್ರತ್ಯೇಕತೆಗೆ ಎಡೆಯಿಲ್ಲ. ಇಂದು ಉದಯವಾದ ಮಹಿಳಾ ಸಮಾಜ, ಮುಂತಾದ ಸಂಸ್ಥೆಗಳಿಂದ ಜತೆ ಜೀವನದ ನೂರಾರು ಸಮಸ್ಯೆಗೆ ನಾಂದಿಯಾಗಿವೆ. ಪ್ರಕೃತಿಧರ್ಮಕ್ಕೆ ವಿರುದ್ಧಗತಿಯಿಂದ ಸಾಗುತ್ತಿವೆ. ಇವು ಜೀವನದ ಆ ಸಾರಶಕ್ತಿಯನ್ನು ಕುಗ್ಗಿಸುತ್ತಿವೆ. ಕಾಲಕ್ರಮೇಣ ಈ ಅಂತರಿಕ ಹೊಯ್ದಾಟಗಳು ಜೀವನವನ್ನು ಹೊರೆ ಮಾಡುತ್ತವೆ. ಪ್ರಚಲಿತ ಸ್ಥಿತಿಯಂತೆ—ಯಾವುದೇ ಒಂದು ಊರನ್ನು ಹಿತದಿಂದ ಬೆಂಬಲಿಸುವ ಹತ್ತು ಮಂದಿ ದೊರೆಯುವುದು ಕಷ್ಟವಾಗುತ್ತಿದೆ.

ನಮ್ಮ ದೇಶದಲ್ಲಿ ಹುಟ್ಟಿದಂತಹ ವರ್ಣಾಶ್ರಮ ಜೀವನವು ದೋಷಪೂರ್ಣವೆಂದು ಹೇಳಲಾಗುವುದಿಲ್ಲ. ಇವು ಗುಣ—ಕರ್ಮಗಳನ್ನು ಆಧರಿಸಿವೆ. ಈ ಜೀವನ ಕ್ರಮವು ಸಹಸ್ರಾರು ವರ್ಷದಿಂದ ನಡೆದು ಬಂದಿದೆ. ಹೀಗೆ ಸಾಗಿಬಂದ ಸಮುದಾಯ ಜೀವನದಲ್ಲಿ ಅನೇಕಾನೇಕ ತಪ್ಪುಗಳು, ಅಶ್ಲೀಲಗಳು, ವಿರೋಧಾಭಾಸಗಳು ಉಂಟಾಗಿರುವುವು. ಒಂದು ಕಾಲದಲ್ಲಿ ಹಿಂದೂ ಮತವು ಅನ್ಯಮತಗಳ ಮೇಲೆ ಪ್ರಭಾವ ಬೀರುವಷ್ಟು ಪ್ರಭಾವಶಾಲಿಯಾಗಿತ್ತು. ಇಂದಿಗೂ ಇದರ ಉದಾತ್ತ ತತ್ವಗಳು ಅನ್ಯದೇಶೀಯರನ್ನು ಆಕರ್ಷಿಸುತ್ತಿವೆ. ಅನ್ಯಮತೀಯರನ್ನು ಆಕರ್ಷಿಸುತ್ತಿದೆ. ಕಾಲಕ್ರಮದಲ್ಲಿ ಪರದೇಶದಿಂದ ಬಂದ ಮತಗಳೂ ಇದರ ಮೇಲೆ ಪ್ರಭಾವ ಬೀರಿವೆ. ಇಂದಿನ ಪ್ರಪಂಚದ ಯಾವತ್ತೂ ವ್ಯಕ್ತಿಗಳ ಮೇಲೆ ಮತಧರ್ಮಗಳಿಂದ ಮಿಗಿಲಾಗಿ ವಿಜ್ಞಾನದ ಪ್ರಭಾವ ಬಿದ್ದಿದೆ. ಮಾನವ ಜೀವನ ಒಂದು ಕಲಸು ಮೇಲೋಗರ. ಇದರಲ್ಲಿ ಇದರ ಪೂರ್ವಸ್ವರೂಪವನ್ನು ಗುರುತಿಸುವ, ಶೋಧಿಸುವ, ಜಿಜ್ಞಾಸೆ—ನಡೆಸುವ ಹವ್ಯಾಸವು ಸುಲಭವೂ ಅಲ್ಲ. ಶ್ರೇಯೋದಾಯಕವೂ ಅಲ್ಲ. ಮನೀಷಿಗಳೆನ್ನಿ —ವಿಚಾರಿಗಳೆನ್ನಿ —ಅವರು ಯಾರೇ ಇದ್ದಿರಲಿ—ಅವರ ಗಣನೆಯಂತೆ ಮೂರು ವರ್ಗದ ಜನ ಜಗತ್ತಿನ ಎಲ್ಲಾ ಕಡೆ—ಎಲ್ಲಾ ಜಾತಿಗಳಲ್ಲೂ, ಎಲ್ಲಾ ಮತಗಳಲ್ಲೂ ದೊರೆಯುತ್ತಾರೆ. ಸತ್ವಗುಣವುಳ್ಳವರು, ರಾಜಸಿಗಳು, ಮತ್ತು ತಾಮಸಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ನಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಸರ್ವತೋಮುಖ ಏಳಿಗೆಗೆ
ಸಮಾಜ ಕಲ್ಯಾಣ

ಸಮಾಜಕಲ್ಯಾಣ ದಿನಾಚರಣೆಯ ಅಂಗವಾಗಿ ರಾಜ್ಯ ಸರಕಾರದ ಸಮಾಜಕಲ್ಯಾಣ ಇಲಾಖೆಯ ಉಪಮಂತ್ರಿಗಳಾದ ಶ್ರೀಮತಿ ಬಸವರಾಜೇಶ್ವರಿ ಅವರು ಇದೇ ದಿನಾಂಕ 20ರಂದು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಪ್ರಸಾರ ಭಾಷಣವನ್ನು ಮಾಡಿದರು. ಅವರ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮಲ್ಲಿ ಮಕ್ಕಳ ದಿನಾಚರಣೆ, ಮಹಿಳೆಯರ ದಿನಾಚರಣೆ, ಪ್ರಾಣಿ ಹಿಂಸಾ ನಿವಾರಣಾ ದಿನಾಚರಣೆ ಮುಂತಾದ ಅನೇಕ ದಿನಾಚರಣೆಗಳನ್ನು ಆಚರಿಸುತ್ತೇವೆ. ಅಂದಮೇಲೆ ಮಾನವ ಜೀವಿಗಳಾದ ನಾವು ಸಮಾಜದ ಹಿತರಕ್ಷಣೆಯ ಸಾಧನೆಗಾಗಿ, ಸಮಾಜ ಕಲ್ಯಾಣದ ಕುರುಹಾಗಿ ಸಮಾಜ ಕಲ್ಯಾಣ ದಿನಾಚರಣೆ—ಎಂದು ಒಂದು ದಿನವನ್ನು ಆಚರಿಸುವುದು ಅತ್ಯಗತ್ಯ.

ಒಂದು ರಾಷ್ಟ್ರದ ಭದ್ರತೆಯು ಸಮಾಜದ ತಳಹದಿಯನ್ನು ಒಳಗೊಂಡಿದೆ. ಸಮಾಜದ ಏಳಿಗೆಗನುಸಾರವಾಗಿ ರಾಷ್ಟ್ರ ಪ್ರಗತಿ ಹೊಂದಿರುವುದು. ಈ ದೃಷ್ಟಿಯಿಂದ ನಿವಾರಣೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಅತಿ ಅಗತ್ಯ.

ಅನೇಕ ವರ್ಷಗಳ ಕಾಲ ಪರಕೀಯರ ಆಳ್ವಿಕೆಗೊಳಗಾದ ಭಾರತವು ಪೂಜ್ಯ ಮಹಾತ್ಮಾ ಗಾಂಧೀಜಿಯವರ ಒಂದು ಗ್ರಾಮ ತತ್ವದಲ್ಲಿ ಸ್ವಾತಂತ್ರ್ಯವನ್ನು ಗಳಿಸಿತು ಮಾತ್ರವಲ್ಲ. ಸಮಾಜವಾದಿ ಸಮಾಜ ರಚನೆಯ ಕಾರ್ಯಕ್ರಮಗಳನ್ನು ಅದನ್ನು ಜಾಗೃತ ಕಾರ್ಯಾಚರಣೆಗೆ ತರುವುದಕ್ಕಾಗಿ ಕೇಂದ್ರ ಹಾಗೂ ರಾಜ್ಯಮಟ್ಟದಲ್ಲಿ ಪ್ರಜಾಸತ್ತಾತ್ಮಕವಾದ ಸರಕಾರಗಳು ಕೆಲಸ ಮಾಡಲು ಆರಂಭಿಸಿದವು.

ಸ್ವಾತಂತ್ರ್ಯಾನಂತರದ ಈ 23 ವರ್ಷಗಳ ಅವಧಿಯಲ್ಲಿ ಎಷ್ಟರ ಮಟ್ಟಿಗೆ ಸಮಾಜದಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಲು ಸಾಧ್ಯವಾಗಿದೆ. ಇನ್ನೂ ಮಾಡತಕ್ಕ ಕಾರ್ಯಗಳೇನಿವೆ, ಅವನ್ನು ಯಾವ ರೀತಿಯಲ್ಲಿ ಕೈಗೊಳ್ಳಬೇಕು ಎಂಬುದನ್ನು ವಿಮರ್ಶಿಸುವುದೇ ಇಂದು ಈ ಸಮಾಜ ಕಲ್ಯಾಣ ದಿನಾಚರಣೆಯ ಮೂಲೋದ್ದೇಶ.

ಪಾಶ್ಚಾತ್ಯ ದೇಶಗಳಲ್ಲಿ ಇಲ್ಲದೆಯಿರುವ ಒಂದು ಪ್ರಾಚೀನ ಸಂಸ್ಕೃತಿಯು ನಮ್ಮ ಸಮಾಜದ ಬುನಾದಿಯಾಗಿರುವುದು. ಆದರೆ ಕಾಲಕ್ರಮೇಣ ಪರದೇಶಗಳ ಸಂಸ್ಕೃತಿಯ ಆಗಮನದಿಂದ ನಮ್ಮ ಸಂಸ್ಕೃತಿಗೆ ಒಳ್ಳೆಯ ವಿಚಾರಗಳನ್ನು ಒದಗಿಸಿತಾದರೂ ಜಾತಿ ಕೋಮುಗಳನ್ನೊಳಗೊಂಡ ಸಮಾಜವು ತಲೆ ಎತ್ತಿತ್ತು. ಸಮಾಜದಿಂದ ದೂರಮಾಡಲ್ಪಟ್ಟ, ಹರಿಜನ ಗಿರಿಜನರ ಪಾಡು ಬಹಳ ಶೋಚನೀಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ರಾಷ್ಟ್ರದ ಪ್ರಗತಿಗಾಗಿ ಪಂಚವಾರ್ಷಿಕ ಯೋಜನೆಗಳು ಕಾರ್ಯಾಚರಣೆಗೆ ಬಂದವು. ಮೊದಲೆರಡು ಯೋಜನೆಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರಕದಿದ್ದರೂ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಹಾಗೂ ಮಕ್ಕಳ ಹಿತಚಿಂತನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಒಳಗೊಂಡ ಒಂದು ಯೋಜನೆ ಕಾರ್ಯಾಚರಣೆಗೆ ಬಂದಿತು. ಕೇಂದ್ರದಲ್ಲಿ ಕೇಂದ್ರ ಸಮಾಜ ಕಲ್ಯಾಣ ಸಲಹಾ ಮಂಡಲಿಯು ಮಹಿಳೆಯರ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಯೋಜನೆಗಳು ಆರಂಭವಾದುವು. ಅಂತೆಯೇ ರಾಜ್ಯಮಟ್ಟದಲ್ಲೂ ರಾಜ್ಯ ಸಮಾಜಕಲ್ಯಾಣ ಸಲಹಾ ಮಂಡಲಿಗಳನ್ನು ಸ್ಥಾಪಿಸಲಾಯಿತು. ಮುಖ್ಯವಾಗಿ ಖಾಸಗೀ ಕ್ಷೇತ್ರದಲ್ಲಿ, ಮಕ್ಕಳ ಹಾಗೂ ಮಹಿಳೆಯರ ಹಿತರಕ್ಷಣೆಗಾಗಿ ದುಡಿಯುವ ಅನೇಕ ಮಹಿಳಾ ಸಮಾಜಗಳಿಗೆ ಸಹಾಯ ಧನಸಹಾಯ ನೀಡುವುದಲ್ಲದೆ, ಕಾರ್ಯನಿರತ ಮಹಿಳೆಯರಿಗಾಗಿ ವಸತಿ ಗೃಹಗಳನ್ನು ಸ್ಥಾಪಿಸಲು ಅವಕಾಶವನ್ನು ಕಲ್ಪಿಸುವಂತಾಯಿತು. ವಿಧವೆಯರು ಹಾಗೂ ಸಮಾಜದ ಪರಿತ್ಯಕ್ತ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಕ್ಷಿಪ್ತ ಶಿಬಿರ ಕೇಂದ್ರಗಳನ್ನು ಅಲ್ಲಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ ಬಡಕುಟುಂಬಗಳ ಮಕ್ಕಳಿಗಾಗಿ ರಜಾಕಾಲದಲ್ಲಿ ಬೇರೆ ಬೇರೆ ಊರುಗಳನ್ನು ಸಂದರ್ಶಿಸಲು ಅನುಕೂಲವಾಗುವಂತೆ ವಿರಾಮಕೇಂದ್ರಗಳನ್ನು ಒದಗಿಸಿಕೊಟ್ಟಿದೆ. ಹೀಗೆ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಲಿಯು, ಮಕ್ಕಳ ಹಾಗೂ ಮಹಿಳೆಯರ ಹಿತರಕ್ಷಣೆಗಾಗಿ ಎಡೆಬಿಡದ ಕಾರ್ಯಕ್ರಮಗಳನ್ನು ಕೈಕೊಂಡು ಖಾಸಗೀ ಸಂಸ್ಥೆಗಳಿಗೆ ಮತ್ತು ಸಮಾಜ ಕಲ್ಯಾಣ ಕೆಲಸಗಾರರಿಗೆ ಸಾಕಷ್ಟು ಉತ್ತೇಜನ ನೀಡಿದೆ.

ಆದರೆ ಹಿಂದುಳಿದ ಹರಿಜನ ಗಿರಿಜನರ ಕಲ್ಯಾಣಕ್ಕಾಗಿ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯು ಪ್ರತ್ಯೇಕ ಯೋಜನೆಗಳನ್ನು ಪ್ರತಿ ಪಂಚವಾರ್ಷಿಕ ಯೋಜನೆಯಲ್ಲೂ ಕಾರ್ಯರೂಪಕ್ಕೆ ತಂದಿತು. ರಾಜ್ಯದ ಸುಮಾರು ಎರಡು ಕೋಟಿ ಜನಸಂಖ್ಯೆಯಲ್ಲಿ ಸುಮಾರು 31 ಲಕ್ಷಕ್ಕೂ ಮಿಕ್ಕಿ ಹರಿಜನ ಗಿರಿಜನರಿದ್ದಾರೆ. ಇವರು ಸಮಾಜದಲ್ಲಿ ಬಹಳ ಹಿಂದುಳಿದವರು. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವುದರ ಜೊತೆಗೆ ವಿದ್ಯಾಭ್ಯಾಸದಲ್ಲೂ ಹೆಚ್ಚಿನ ಅವಕಾಶವಿಲ್ಲದೆ ಹಿಂದುಳಿದಿರುವುದರಿಂದ ಅವರಿಗೆ ಸಮಾಜದಲ್ಲಿ ಸಲ್ಲಬೇಕಾದ ಸ್ಥಾನಮಾನಗಳು ಇನ್ನೂ ಸಂದಿಲ್ಲ. ಈ ದೃಷ್ಟಿಯಿಂದ ಸಮಾಜಕಲ್ಯಾಣ ಇಲಾಖೆಯು ಅವರ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ವಿವಿಧ ಯೋಜನೆಗಳನ್ನು ಕೈಗೊಂಡಿದೆ. ವಿದ್ಯಾಭ್ಯಾಸವೇ ಎಲ್ಲಾ ಪ್ರಗತಿಗೆ ಕಾರಣ ಎಂಬುದನ್ನು ಚೆನ್ನಾಗಿ ಮನಗಂಡು ಯೋಜನೆಯ ಹೆಚ್ಚು ಹಣವನ್ನು ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಾಗಿದೆ. ತಂದೆ ತಾಯಿಗಳಿಬ್ಬರೂ ಉದ್ಯೋಗ ನಿರತರಾಗಿರುವಂತಹ ಸಂದರ್ಭಗಳಲ್ಲಿ ಅವರ ಮಕ್ಕಳ ಪಾಲನೆ ಪೋಷಣೆಗಾಗಿ ಶಿಶುವಿಹಾರಗಳನ್ನೂ, ಕಾಡಿನಲ್ಲಿ ವಾಸ ಮಾಡುವ ಗಿರಿಜನರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆಶ್ರಮ ಶಾಲೆಗಳನ್ನೂ ವಸತಿ ಗೃಹಗಳನ್ನೂ ಕೈಗಾರಿಕಾ ತರಬೇತಿ ಕೇಂದ್ರಗಳನ್ನೂ ಉನ್ನತ ಶಿಕ್ಷಣಕ್ಕಾಗಿ ವ್ಯಾಸಂಗ ವೇತನಗಳನ್ನೂ ಕೊಡುವುದಲ್ಲದೆ, ವಾಸದ ಮನೆಗಳನ್ನು, ಕುಡಿಯುವ ನೀರಿನ ಬಾವಿಗಳನ್ನೂ ಒದಗಿಸಿ ಗಿರಿಜನರ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಆಚರಣೆಗೆ ಬಂದರೂ, ಇನ್ನೂ ಆಗಬೇಕಾದ ಕೆಲಸಗಳು ಬಹಳ ಇವೆ. ಕೇಂದ್ರ ಮಟ್ಟದಲ್ಲಾಗಲಿ, ರಾಜ್ಯ ಮಟ್ಟದಲ್ಲಾಗಲಿ ಸರಕಾರಕ್ಕೆ ಹಣದ ಅವಕಾಶಗಳು ಸೀಮಿತವಾಗಿರುವುದರಿಂದ ಹೆಚ್ಚಿನ ಕಾರ್ಯಕ್ರಮಗಳು ಖಾಸಗೀ ಸಂಸ್ಥೆ ಹಾಗೂ ಸಮಾಜ ಕಲ್ಯಾಣ ಕಾರ್ಯಕರ್ತರಿಂದ ಆಗಬೇಕಾಗಿದೆ. ಸರಕಾರ ಹಾಗು ಸಾರ್ವಜನಿಕ ಖಾಸಗೀ ಸಂಸ್ಥೆಗಳು ಪರಸ್ಪರ ಸಹಕಾರದಿಂದ ಈ ಒಂದು ಸಮಾಜ ಕಲ್ಯಾಣ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತಂದರೆ ಸಮಾಜದಲ್ಲಿ ಅಗಾಧವಾಗಿರುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ. ಅಂತಹ ಧ್ಯೇಯ ಸಾಧನೆಗಾಗಿ ಈ "ಸಮಾಜ ಕಲ್ಯಾಣ ದಿನಾಚರಣೆಯಂದು" ನಾವೆಲ್ಲರೂ ಮತ್ತೊಮ್ಮೆ ಪಣ ತೊಟ್ಟು ಕಾರ್ಯೋನ್ಮುಖರಾಗಬೇಕು.

ಬೆಳ್ತಂಗಡಿ ಮುನ್ಸಿಫ್ ಕಮ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

R. R. C. 630/69

ಬಿ. ಕೆ. ಲಕ್ಷ್ಮೀನಾರಾಯಣ ರಾವ್ —ಅರ್ಜಿದಾರ

ಮುಮ್ಮದೆ ಬ್ಯಾರಿ ಸಹಾ —ಯೆದ್ರಿರು

ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿರುವ ಜನಾಬ್ ಮುಮ್ಮದೆ ಬ್ಯಾರಿಗಳ ಹೆಂಡ್ತಿ—4 ನೇ ಎದ್ರಿ ಅಜ್ಜಮ್ಮ ಬ್ಯಾರ್ತಿ ಮತ್ತು ಮೈನರ್ ಮಕ್ಕಳು 7 ನೇ ಎದ್ರಿ—ಮರಿಯಮ್ಮ ಮತ್ತು 8 ನೇ ಎದ್ರಿ—ಬೀಪಾತುಮ್ಮ, ಗಾರ್ಡಿಯನ್ ತಾಯಿ 4 ನೇ ಎದ್ರಿ—ಅಜ್ಜಮ್ಮ ಬ್ಯಾರ್ತಿಯವರಿಗೆ ಕೂಡಾ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ಕೇಸಿನ ಅರ್ಜಿಯು ನಿಮ್ಮ ಹಾಜರಾತಿಗೆ ತಾ. 28-6-'70ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದ ದಿವಸ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಅರ್ಜಿಯನ್ನು ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

ಬಿ. ಕೆ. ಸೂರ್ಯನಾರಾಯಣ ರಾವ್

ಎಡ್ವೋಕೇಟ್.

ಬೆಳ್ತಂಗಡಿ, 24-3-'70.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇರುವವರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ಮುದ್ದಣ

"ಭಗವದ್ಭಕ್ತಿಗೆ ಪರ್ವದೇ ಪರಣಿ"
ತಾನನುಭವಿಸಿ ಮ ಬವಣೆಯನೆಲ್ಲ
ಭಗವಂತನಿಗೆ ತೋರಿ
ಮೆರೆಯುಲು
ಮೂರು ಮಹಾ ಕಾವ್ಯಗಳನ್ನು ರಚಿಸಿದೆ
'ರಾಮ! ರಾಮ! ರಾಮ!'
ಬಡತನದ ಕಡು ಅವಸ್ಥೆಯ ನಡುವೆ
ಎದೆಗೆಡದೆ ಬಿಡದೆ ಬರೆದೆ
ನಂದಳಿಕೆಯ ಲಕ್ಷ್ಮೀನಾರಾಯಣಯ್ಯ
'ಮುದ್ದಣ'ನಾದೆ
"ಚಕ್ರಧಾರಿ"ಯಾದೆ.
ಅರಾಮ ನಿನಗಾಗಲಿಲ್ಲ.
"ಎಳೆವೆಂ[illegible]ಸ್ಯೆಯೆಳಸದ ಕಬ್ಬಿಗರ
ಬಾಳ್ಕೆಯೆ ದೂಷ್ಯಂ"
ಎಂದೆ;
ಮನೋರಮೆಯ ಕೂಡಿ,
ಮತ್ತೆ ಸರಸವಾಡಿ
ನವನವ ತೋರಿಗೆಗೊಂಡೆ,
ಉದಗೊರೆ ಪಡೆದೆ,
ಕನ್ನಡಕ್ಕೆ ಕನವಾಲಕ್ಷಿತ್ತ ಪೊರೆದೆ;
ತಾನು ಕ್ಷಯಕ್ಕೆ ತುತ್ತಾದೆ.
ಕುಸ್ತಿ ಮಲ್ಲರನ್ನಾಗಿಸ್ದೆ;
ಕ್ರಿಶ್ಚನ್ ಕಾಲೇಜಿನ
ಬಡ ಕನ್ನಡ ಪಂಡಿತನಾಗಿಯೂ,
ಬಾಳೆಲ್ಲ ತುತ್ತಿತ್ತೂಡಿದೆ;
ಎಳೆವರೆಯದಲೆ ಅಸ್ತನಾದೆ;
ಆರಾಮ ನಿನಗಾಗಲಿಲ್ಲ.
ರಾಮ! ರಾಮ! ರಾಮ!
ನಮಗಾತುದುಃಖ; ನೀನಮರನಾದೆ.
ನಮ್ಮ ಮುದ್ದಿನ ಮುದ್ದಣನಾದೆ.
—ರತ್ನಾಕರ ಶೆಟ್ಟಿ, ಮುಂಬಾಯಿ.

ಬೆಳ್ತಂಗಡಿ ಮುನ್ಸಿಫ್ ಕಮ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

R. R. C. 517/69.

ಬಿ. ಕೆ. ಲಕ್ಷ್ಮೀನಾರಾಯಣರಾವ್—ಅರ್ಜಿದಾರ

ಮುಮ್ಮದೆ ಬ್ಯಾರಿ ಸಹಾ—ಯೆದ್ರಿರು.

ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿರುವ ಜನಾಬ್ ಮುಮ್ಮದೆ ಬ್ಯಾರಿಗಳ ಹೆಂಡ್ತಿ 4 ನೇ ಎದ್ರಿ—ಅಜ್ಜಮ್ಮ ಬ್ಯಾರ್ತಿ ಮತ್ತು ಮೈನರ್ ಮಕ್ಕಳು 7 ನೇ ಎದ್ರಿ—ಮರಿಯಮ್ಮ ಮತ್ತು 8 ನೇ ಎದ್ರಿ—ಬೀಪಾತುಮ್ಮ, ಗಾರ್ಡಿಯನ್ ತಾಯಿ 4 ನೇ ಎದ್ರಿ—ಅಜ್ಜಮ್ಮ ಬ್ಯಾರ್ತಿಯವರಿಗೆ ಕೂಡಾ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ಕೇಸಿನ ಅರ್ಜಿಯು ನಿಮ್ಮ ಹಾಜರಾತಿಗೆ ತಾ. 24-6-'70ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದ ದಿವಸ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಅರ್ಜಿಯನ್ನು ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

ಬಿ. ಕೆ. ಸೂರ್ಯನಾರಾಯಣ ರಾವ್

ಅರ್ಜಿದಾರರ ಪರ ವಕೀಲರು,

ಬೆಳ್ತಂಗಡಿ, 26-3-'70.

ಎಮ್ಮೆಲ್ಲೆಯ ಕೀಮತ್ತು ಏರುತ್ತಿದೆ

ಒರಿಸ್ಸಾ ರಾಜ್ಯದಲ್ಲಿನ ಸ್ವತಂತ್ರ—ಜನಕಾಂಗ್ರೆಸ್ ದಾಂಪತ್ಯದಲ್ಲಿ ವಿರಸವನ್ನು ತರಲು ಅಶಕ್ತರಾದ ಇಂಡಿಕೇಟರು ವಿರೋಧ—ಗುಂಪುಗಳನ್ನಾದರೂ ಬಳಸುವಂತೆ ಮಾಡುವ ತರಾತುರಿ ನಡೆಸಿದರು. ಶ್ರೀ ಜಗಜ್ಜೀವನ ರಾಮರ ಪುಂಗಿಯುವಿಂದ ಯಾವ ಹಾವೂ ತಲೆಯಾಡಿಸಲಿಲ್ಲ. ಭುವನೇಶ್ವರದಿಂದ ಅಹಮದಾಬಾದಕ್ಕೆ ಹಾರಿ ಬಂದ ಈ ಹಾವಾಡಿಗ ಅಲ್ಲಿ ಸ್ವತಂತ್ರಪಕ್ಷದೊಡನೆ ಸರಸವಾಡುವ ಮಾತಾಡಿದರು. ಈಗ, ಅಹಮದಾಬಾದವು ಮುಂಬಯಿಯ ಶೇರು ಪೇಟೆಯ ಅವತಾರ. ತಾತಾ ಡಿಫರ್ಡ್ ಶೇರುಗಳಿಗೆ ದ್ವಿತೀಯ ಲೋಕ ಸಮರದ ವೇಳೆ ಏಕ್‌ದಂ ಧಳಕವಾದಂತೆ ಗುಜರಾತದ ಎಮ್ಮೆಲ್ಲೆಗಳ ಕೀಮತ್ತು ಲಕ್ಷರೂಪಾಯಿಗಳಿಗೂ ಮುಟ್ಟಿದೆ. ಸಿಂಡಿಕೇಟ್ ಹೇಂಟಿ ತನ್ನ ಮರಿಗಳನ್ನು ಇಂಡಿಕೇಟ್ ಗಿಡುಗನಿಂದ ಪಾರು ಮಾಡುವುದು ಹೇಗೆಂದು ತಲೆ ಕೆಡಿಸಿಕೊಂಡಿದೆ. ಭುವನೇಶ್ವರದಲ್ಲಿ ಸಿಕ್ಕದವರು ಇಂಡಿಕೇಟಿಗರಿಗೆ ಅಹಮದಾಬಾದದಲ್ಲಿ ಸಿಕ್ಕುತ್ತಾರೆ. ಇದು ಪ್ರಗತಿಗಾಮಿತನವಲ್ಲವೆ ಮತ್ತೇನು?

ಶ್ರೀ ಜಗಜ್ಜೀವನರಾಮರ ಈ ಸಪ್ತಸ್ವರದ ಪುಂಗಿಯಿಂದ ಎರಡನೇ ಸ್ವರ ಹೊರಟದ್ದೇ ತಡ ತಮ್ಮನ್ನು ಪ್ರಗತಿಗಾಮಿಗಳೆಂದುಕೊಳ್ಳುವ ಚಂದ್ರಶೇಖರಾದಿಗಳಿಗೆ ದಿಗ್ಭ್ರಮೆ! ಸ್ವತಂತ್ರ ಪಕ್ಷ-ಜನಸಂಘದ ಕೊಡವೆ ಕಾಂಗ್ರೆಸ್ ಹುದ್ದರಿಗೆ ಮತಯಾಚಿಸಿದ ಮಹಾತ್ಮ ಎಸ್ಸೆನ್ನರು ಪ್ರತಿಗಾಮಿಯಾಗಿ ಹೋದಾಗ, ಸ್ವತಂತ್ರ ಪಕ್ಷದೊಡನೆ ಕೂಡಿ ಪರ್ಯಾಯ ಸರಕಾರ ರಚಿಸುವ ಜೊಂಡು ಹಾಡುವ ಜಗರಾಂರನ್ನು 'ಪ್ರಗಾಮಿ' ಎಂದೇ ಕರೆಯಬೇಕಾದೀತು! ಇದು ಇಂಡಿಕೇಟಿನಿಂದ 'ಚಂಡಿಕೇಟ್' ಸಿಡಿದು ಹೋಗುವುದರ ಮುನ್ಸೂಚನೆಯೆ? ರಾಜ್ಯ ಸಭೆಗಳ ದ್ವೈವಾರ್ಷಿಕ ಚುನಾವಣೆಗಳ ವೇಳೆಯು ಶಾವು ಮುಗಿದರೂ ಮುಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲು ಪ್ರಗತಿಗಾಮಿಗಳಾರು ಎಂಬ ಲಕ್ಷ ಪ್ರಶ್ನೆಗೆ ಶ್ರೀಮತಿ ಇಂದಿರಾಗಾಂಧಿ ನೇರ ಉತ್ತರ ಕೊಟ್ಟೇ ತೀರ ಬೇಕಾಗುತ್ತದೆ. ಅಗ್ರ ಸುಂದೋಪಸುಂದರನ್ನು ವಂಚಿಸಿದ ತಿಲೋತ್ತಮೆಯಂತೆ ಅತಿ ಕಮ್ಯೂನಿಷ್ಟರ-ಡಿಎಂಕೆಯ ನಾಯಕತ್ವ ವಹಿಸಲು ಮುಂದಾಗಲಾರರೆಂದು ಈಗಲೇ ಹೇಳಲಾಗದು. ಏಕೆಂದರೆ, ಶ್ರೀಮತಿಯವರು ಪ್ರಗತಿಶೀಲರಲ್ಲಿ ಪ್ರಗತಿಶೀಲರು.

ಬಂಗಾಲದಲ್ಲಿ ಅಜಯ್ ಮುಖರ್ಜಿಯವರ ರಾಜಿನಾಮೆ. ಮಾರ್ಕ್ಸಿಸ್ಟರ ನಾಯಕ ಜ್ಯೋತಿ ಬಾಸುವಿಗೆ ರಾಜ್ಯಪಾಲ ಧಾವನ್ನರ ಆಮಂತ್ರಣ. ಪರ್ಯಾಯ ಸರಕಾರ ರಚನೆ ಸಾಧ್ಯವೆ? — ಸವಾಲು. ಸಿದ್ಧ ಉತ್ತರ - ಸಾಧ್ಯ. ನಿಮ್ಮ ಬಹುಮತವನ್ನು ರುಜುವಾತುಗೊಳಿಸಿ— ಊಹೂಂ. ವಿಧಾನ ಸಭೆಯಲ್ಲಲ್ಲದೆ ಇಲ್ಲಿ ಅಸಾಧ್ಯ—ಹಾಗಾದರೆ, ರಾಷ್ಟ್ರಪತಿ ಆಡಳಿತ ಹೇರಲೇ ಬೇಕಾಗುತ್ತದೆ.— ಹೇರಿ, ಮತ್ತೆ ನೋಡಿ....

ಧಾವನ್ನರಿಗಾಗಿ ಚವಣರು ಲೋಕಸಭೆಯಲ್ಲಿ ಕ್ಷಮಾಪಣೆ ಬೇಡಿದರು. ಬಂಗಾಳದಲ್ಲಿ ಹಾಗಾದದ್ದರಿಂದ ಸಮಾಧಾನ— ಇಂಡಿಕೇಟಿಗೆ ಯಾಕೆ? ಅದು ಹಾಗೇ ಆದದ್ದರಿಂದ ಕೇರಳದಲ್ಲಿ ಅಚ್ಯುತ ಮೆನನ್ನರ ತುಂಡುರಂಗದ ಸರಕಾರಕ್ಕೆ ಇಂಡಿಕೇಟಿನ ಬೆಂಬಲ. ಅದೂ ಬದುಕಿಕೊಂಡಿತ್ತು. ಇದೂ ಸಮಾಧಾನ ಯಾಕೆ? ಇದು ಹೀಗೆಯೇ ನಡೆದದ್ದರಿಂದ, ಬಿಹಾರ— ಉತ್ತರ ಪ್ರದೇಶಗಳ ರಾಜ್ಯಪಾಲರುಗಳಿಗೆ ಇಂಡಿಕೇಟಿನ ಬಗ್ಗೆ ಪಕ್ಷಪಾತ. ಅದ್ದರಿಂದಲೇ ಅವರು ನಿಮ್ಮ ಬಲವೆಷ್ಟು ರುಜುಮಾಡಿ ಎನಲಿಲ್ಲ. ಅದರೆ, ಧಾವನ್ನರಿಗೆ ಯಾರ ಮೇಲೂ ನಂಬಿಗೆಯಿಲ್ಲ. ಹಾಗಿದ್ದರೂ ಅವರು ಮಾರ್ಕ್ಸಿಸ್ಟ್ ಪರರೆಂಬ ಟೀಕೆ ಲೋಕಸಭೆಯಲ್ಲಿ. ಒಳ್ಳೆಯ ರಾಜ್ಯಪಾಲರ ಲಿಸ್ಟಿನಲ್ಲಿ ಅವರದ್ದೇ ಮೊದಲ ಹೆಸರು.

ಕೇರಳದ ತುಂಡುರಂಗದ ಅಚ್ಯುತ ಮೆನನ್ನರು ಒಮ್ಮೆಗೆ ಬಚಾವಾದರು. ಅವರು ಅಚ್ಯುತರಲ್ಲವೆಂಬ ಮುನ್ನೆಚ್ಚರಿಕೆ ಆರ್. ಎಸ್. ಪಿ. ನೀಡಿದೆ. ಕಾಂಗ್ರೆಸ್ಸಿನ ಎರಡು ಬಣಗಳಲ್ಲಿ ಯಾವುದಾದರೊಂದರ ಬೆಂಬಲದಿಂದ ಅಚ್ಯುತ ಮೇನನ್ ಅಚ್ಯುತರಾಗುವುದಾದರೆ ಅವರು ಪದಚ್ಯುತರಾಗಲೇಬೇಕು. ಆ ಬೆದರಿಕೆಯ ಬಲವುಳ್ಳ ಆರೆಸ್ಪಿಗಳ ತಲೆಯಲ್ಲೇನಿದೆಯೆಂಬುದು ಅವೇದ್ಯ; ಅದರೆ, ಅದರ ದಿಟ್ಟತನವಲ್ಲ ಕುಚೋದ್ಯ. ಇಂಡಿಕೇಟಿನಂತೆ ಅದರ ನೀತಿ ಒಂದು ಕಣ್ಣಿಗೆ ಎಣ್ಣೆ, ಇನ್ನೊಂದಕ್ಕೆ ಬೆಣ್ಣೆಯಲ್ಲ. ಆರೆಸ್ಪಿಗಿರುವ ರಾಷ್ಟ್ರೀಯ ನೀತಿ ಇಂಡಿಕೇಟಿಗಿಲ್ಲ.

ತಮಿಳು ನಾಡಿನಿಂದ ರಾಜ್ಯ ಸಭೆಗೆ ಸ್ಪರ್ಧಿಸುವ ಮಾಜಿ ಮಂತ್ರಿ ಅಧ್ಯಕ್ಷ ಸುಬ್ರಹ್ಮಣ್ಯಂಗೆ ಕೇಂದ್ರದಲ್ಲಿ ಮಂತ್ರಿ ಪಟ್ಟ ಎಂದೋ ತೆರವು. ಎಂಪಿ ಪದ ವಂಚಿತರಾದ ಅವರಿಗೆ ಅವಕಾಶವೀಗ ಸಿಕ್ಕಿತು. ಅದಕ್ಕೆಂದೇ ಲೋಕ ಸಭೆಯ ಆಸೆ ಬಿಟ್ಟು ದೀರ್ಘಾವಧಿ ನಿಷ್ಕಂಟಕವಾಗಿರಲು ರಾಜ್ಯ ಸಭೆಯನ್ನೇ ಆರಿಸಿಕೊಂಡರು. ಪಾಪ ಅಲ್ಲಿ ನಂಬಿದ ಡಿಎಂಕೆ ಕೈಕೊಟ್ಟಿತು. ಅದುದರಿಂದ ಯಾರ್ಯಾರ ಮುಂದೆಯೋ ಕೈಯೊಡ್ಡ ಬೇಕಾಯಿತು. ಪ್ರಸವಾ ಪಕ್ಷದ ಪಾಲ್ಯಾರು ಮತಗಳಿಗಾಗಿ ಇಂಡಿಕೇಟು ಮಹಾರಾಷ್ಟ್ರದ ನೂರಾರು ಮತಗಳನ್ನು ಶ್ರೀ ಗೋರೆಯವರಿಗೆ ದಾನಮಾಡಲು ಮುಂದೆ ಬಂತು. ಶ್ರೀ ಸಿ. ಸು. ಗೆಲ್ಲುತ್ತಾರೆಯೋ ಇಲ್ಲವೋ ಈಗಲೇ ಹೇಳಲಾಗದು; ಆದರೆ, ಇಂಡಿಕೇಟಿನ ನೀತಿಯು ದಿವಾಳಿಕೋರತನ ಮಾತ್ರ ಬಟ್ಟಬಯಲಾಯಿತು.

ಕರ್ನಾಟಕದ ಇಂಡಿಕೇಟ್ ಘಟಕದ ಅಧ್ಯಕ್ಷರು ಎಂ. ವಿ. ಕೃಷ್ಣಪ್ಪನವರು ಕರ್ನಾಟಕ ವಿಭಜನೆಯ ಮಾತುಗಳನ್ನು ಬಹಳವಾಗಿ ಮಾತುತಿದ್ದವರು. ಮುಂಬಯಿಯಲ್ಲಿ ಮರಾಠಿಗಳಿಗೆ ಬೆಳಗಾಂವಿಯನ್ನು ದಾನ ಮಾಡಲು ತುರಾತುರಿ ತೋರಿಸಿದ್ದರೆಂದು ಹೇಳಲಾದ ದಾಖಲೆಯರು. ಆದರೆ, ಇದೀಗ ಅವರ ರಾಗ ಬದಲಾಗಿದೆ. ತನ್ನನ್ನು ಸಮಗ್ರತಾವಾದಿಯೆಂದು ಅವರೇ ಹೇಳಿಕೊಂಡಿದ್ದಾರೆ. ಇಂದಿರಮ್ಮ ನಿಘಂಟುವಿನ 'ಪ್ರಗತಿ' ಮತ್ತು ಕೃಷ್ಣಪ್ಪ ಡಿಕ್ಷನರಿಯ 'ಸಮಗ್ರತೆ'ಗಳಿಗೆ ಯಾವ ಯಾವ ಅರ್ಥಕೊಡಲಾಗಿದೆಯೆಂಬುದು ಅಸ್ಪಷ್ಟವಿದೆ. ಎರಡಾಗ ಬೇಕು ಎಂದು ಗುಂಡು ಹಾರಿಸುತ್ತಿದ್ದ ಮಹಾಶಯರೀಗ ಒಂದೇ ಎಂದು ಹಾಡತೊಡಗಿದರೆ, ಇದರಲ್ಲಿ ಏನೋ ವಿಶೇಷವಿದ್ದೇ ಇರಬೇಕು. ಬೆಕ್ಕು ಸನ್ಯಾಸಿಯಾದ ಕತೆಗೂ ಕೃಷ್ಣಪ್ಪ ಸಮಗ್ರತಾವಾದಿಯಾದುದಕ್ಕೂ ಚುನಾವಣೆಯ ನಂಟುತನದ ಸಂಬಂಧವಿದೆಯೆಂದರೂ ತಪ್ಪಾಗದು. ಪ್ರಧಾನಿ ಇಂದಿರಾ ಗಾಂಧಿ, ಕೇಂದ್ರದ ಗೃಹಮಂತ್ರಿ ಚವಣ, ನೀರಾವರಿ ಸಚಿವ ಡಾ| ಕೆ. ಎಲ್. ರಾವ್ ಇವರ ಸಧ್ಯದ ಗಂಭೀರ ಮೌನಕ್ಕೆ ದ್ವೈವಾರ್ಷಿಕ ಚುನಾವಣೆಯೇ ಪ್ರೇರಕ ದೈವ. ಅದು ಮುಗಿದಾಗ, ತನ್ನ ಬಾಲವೆಷ್ಟು ಉದ್ದವಾಯಿತು, ಅಥವಾ ಗಿಡ್ಡವಾಯಿತು, ಎಂದು ಇಂಡಿಕೇಟ್ ಹಾವು ನೋಡಿಕೊಳ್ಳುತ್ತದೆ. ಪ್ರಗತಿವಾದದ ಗಾಳಿ ಸೇವಿಸಿದ ಶ್ರೀಮತಿ ಗಾಂಧಿಯವರು ಈ ಬಾಲ ತಮ್ಮ ಸೆರಗಿಗಿಂತಲೂ ಉದ್ದವಾಗುವುದೆಂದು ನಂಬಿದ್ದಾರೆ. ಪಾಪ, ಏನಾಗುವುದೋ ಕಾದು ನೋಡಬೇಕಷ್ಟೆ! ಪ್ರಗತಿವಾದಿ ಲಲನೆಯರ ಸೆರಗು ದಿನದಿನಕ್ಕೂ ಗಿಡ್ಡವಾಗುತ್ತ ಜರುತ್ತಿರುವುದನ್ನ ಗಾಂಪನೂ ಕಣ್ಣಿಟ್ಟು ನೋಡುತ್ತಿರುತ್ತಾನೆ.

ಭಾರತದ ಬಿಳಿಯ ಹುಲಿ—ದಲೀಪ್

ಎಕ್ಸ್‌ಪೋ—70 ವಿಶೇಷ ಆಕರ್ಷಣೆ

ಈಗ ಬಿಳಿಯ ಹುಲಿ "ದಲೀಪ್", ಎಕ್ಸ್‌ಪೋ-70 ಪ್ರದರ್ಶನದ ಒಂದು ವಿಶೇಷ ಆಕರ್ಷಣೆಯಾಗಿದೆ. ಹಿಮದ ಬಣ್ಣವನ್ನೇ ಹೋಲುವ ಮೈಬಣ್ಣವುಳ್ಳ ಈ ಹುಲಿ ಗಾಂಭೀರ್ಯದಿಂದ ಕೂಡಿದ ಒಂದು ಅಪೂರ್ವ ಪ್ರಾಣಿಯಾಗಿದೆ.

ವಿಶ್ವದಲ್ಲಿ ಬದುಕಿರುವ ಬಿಳಿಯ ಹುಲಿಗಳ ಸಂಖ್ಯೆ 33. ಈ ಪೈಕಿ 25 ಭಾರತದಲ್ಲೇ ಇವೆ. ಮೊದಲ ಬಿಳಿಯ ಹುಲಿ ಮಧ್ಯಭಾರತದ ರೇವಾಸಂಸ್ಥಾನದ ಮಾಜಿ ದೊರೆಗಳು ನೀಡಿದ ಕೊಡುಗೆ. ಈ ಬಿಳಿಯ ಹುಲಿಯ ಮೈಮೇಲೆ ತಿಳಿಕಪ್ಪಿನ ಅಥವಾ ಬೂದು ಬಣ್ಣದ ಪಟ್ಟೆಗಳಿವೆ. ಕಣ್ಣುಬಣ್ಣವೂ ಅಷ್ಟೇ ಎದ್ದುಕಾಣುವಂತಹುದು ನಸುಗೆಂಪು ಬಣ್ಣದ ಪಾದಗಳು ನೋಡಲು ಅಂದವಾಗಿವೆ.

ಸಾಮಾನ್ಯವಾಗಿ ಬಿಳಿಯ ಹುಲಿಗಳು ಆಕಾರದಲ್ಲಿ ದೊಡ್ಡವು. ಭುಜಗಳ ಎತ್ತರದಂತೆ ಉದ್ದಳತೆ, ತಲೆ, ದೇಹದ ಚರ್ಮ ಹಾಗೂ ಒಟ್ಟು ವಜನ ಇವೆಲ್ಲ ವಿಷಯಗಳಲ್ಲಿ ಬಿಳಿಯ ಹುಲಿ ಇತರ ಹುಲಿಗಳಿಗಿಂತ ಭಿನ್ನವಾಗಿವೆ. ಬಿಳಿಯ ಹುಲಿಯು ಮರಿ ಜನಿಸಿದಾಗ ಅದು 0-53 ಮೀಟರುಗಳಷ್ಟು ಉದ್ದವಾಗಿರುತ್ತವೆ. ಸಾಧಾರಣ ಬಣ್ಣದ ಇತರ ಹುಲಿ ಮರಿಗಳ ಉದ್ದಳತೆ 0-50 ಮೀಟರ್ ಇರುತ್ತದೆ. ಭುಜದ ಅಳತೆ ಹಾಗೂ ತೂಕ ಇವೆಲ್ಲವುಗಳಲ್ಲಿ ಬಿಳಿಯ ಹುಲಿಮರಿ ಇತರ ಹುಲಿ ಮರಿಗಳಿಗಿಂತ ಭಿನ್ನವಾಗಿದೆ.

ಬಿಳಿಯ ಹುಲಿಗಳ ಪೋಷಕರ ಅಂತರಾಷ್ಟ್ರೀಯ ಸಂಘವೊಂದಿದೆ. ಬಿಳಿಯ ಹುಲಿಗಳ ಒಡೆಯರು ಅಥವಾ ಅವುಗಳ ಪೋಷಕರು ಈ ಸಂಘದ ಸದಸ್ಯರಾಗಿದ್ದಾರೆ. ಬಿಳಿ ಹುಲಿಗಳ ತಳಿ ಅಭಿವೃದ್ಧಿ ಕ್ರಮದಲ್ಲಿ ಈ ಸಂಘ ಸಮನ್ವಯ ಸಾಧಿಸುತ್ತದೆ.

ಭಾರತದಲ್ಲಿ ಈಗ 25 ಬಿಳಿ ಹುಲಿಗಳು ಬದುಕಿವೆ ಎಂದು ಈ ಹಿಂದೆ ಹೇಳಿದೆಯಷ್ಟೆ. ಈ ಪೈಕಿ ಎರಡು ಗಂಡು ಹುಲಿಗಳು, ಒಂದರ ಹೆಸರು ನೀಲಾದ್ರಿ ಇನ್ನೊಂದರ ಹೆಸರು ಹಿಮಾದ್ರಿ. ಒಂದು ಹೆಣ್ಣು ಹುಲಿ ಚಾಂದನಿ ಹಾಗೂ ಅದರ ಮೂರು ಮರಿಗಳು ಇವಿಷ್ಟು ಕಲಕತ್ತಾದ ಆಲೀಪುರ್ ಪ್ರಾಣಿಸಂಗ್ರಹಾಲಯದಲ್ಲಿವೆ ಇನ್ನು ಮೂರು ಜೋಡಿ ಹುಲಿಗಳು ರೇವಾ ಸಂಸ್ಥಾನದ ಮಾಜಿ ಸಂಸ್ಥಾನಿಕರ ಬಳಿಯಲ್ಲಿವೆ. ಇತರ ಹನ್ನೊಂದು ಬಿಳಿ ಹುಲಿಗಳು ದೆಹಲಿಯ ಪ್ರಾಣಿ ಸಂಗ್ರಹಾಲಯದಲ್ಲಿವೆ.

ಭಾರತವನ್ನು ಬಿಟ್ಟರೆ, ವಿಶ್ವದ ನಾನಾ ರಾಷ್ಟ್ರಗಳಲ್ಲಿರುವ 8 ಬಿಳಿಯ ಹುಲಿಗಳ ಪೈಕಿ ಆರು ಹುಲಿಗಳು ಬ್ರಿಸ್ಟಲ್ ಪ್ರಾಣಿ ಸಂಗ್ರಹಾಲಯದಲ್ಲಿವೆ. ಜೋಡಿ ಹುಲಿಗಳಾದ ಚಂಪಾ-ಚಮೇಲಿ ಹಾಗೂ ಅವುಗಳ ನಾಲ್ಕು ಮರಿಗಳೇ ಈ ಆರು ಹುಲಿಗಳು. ಇನ್ನೊಂದು ಹೆಣ್ಣು ಹುಲಿ "ಮೋಹಿನಿ" ವಾಷಿಂಗ್ಟನ್ನಿನ ರಾಷ್ಟ್ರೀಯ ಪ್ರಾಣಿ ಸಂಗ್ರಹಾಲಯದಲ್ಲಿದೆ. ಇನ್ನೊಂದು ಮಿಯಾಮಿಯಲ್ಲಿದೆ.

ಎಲ್ಲಾ ಬಿಳಿ ಹುಲಿಗಳಿಗೂ ಬಹುತೇಕ ಹೆಸರುಗಳನ್ನಿಡಲಾಗಿದೆ. ಅಲ್ಲದೇ ಅವುಗಳ ವಂಶದ ವಿವರಗಳನ್ನು ಬರೆದಿಡಲಾಗಿದೆ. ಈ ಹುಲಿಗಳಿಗೆ ಭಾರತೀಯ ಹೆಸರುಗಳನ್ನಿಡಲಾಗಿದೆ.

ಜಪಾನಿಗೆ ಎಕ್ಸ್‌ಪೋ-70 ಪ್ರದರ್ಶನದಲ್ಲಿ ಭಾಗವಹಿಸಲು ತೆರಳಿರುವ ನಮ್ಮ ಬಿಳಿ ಹುಲಿ "ದಲೀಪ್" 1965ರ ಡಿಸೆಂಬರ್ ತಿಂಗಳಲ್ಲಿ ಜನಿಸಿದೆ. ಅದರ ತಂದೆ ತಾಯಿಗಳು ರಾಜಾ ಮತ್ತು ರಾಣಿ. ಈ ಜೋಡಿ ದೆಹಲಿ ಪ್ರಾಣಿಸಂಗ್ರಹಾಲಯದಲ್ಲಿ ಅತ್ಯಂತ ಜನಪ್ರಿಯವಾಗಿದೆ. "ದಲೀಪ್"ನ ತೂಕ 173 ಕಿಲೋಗ್ರಾಂ. ಉದ್ದ 260 ಸೆಂಟಿಮೀಟರ್. ಭುಜದ ಎತ್ತರ 92 ಸೆಂಟಿಮೀಟರ್‌ಗಳು. ಬಿಳಿಯ ಹುಲಿ ಅತ್ಯಂತ ಸೂಕ್ಷ್ಮ ಬುದ್ಧಿಯ ಪ್ರಾಣಿ. ಎಕ್ಸ್‌ಪೋ– ಪ್ರದರ್ಶನದಲ್ಲಿ ಈ ಹುಲಿಗಾಗಿಯೇ ಪ್ರತ್ಯೇಕ ಪಂಜರವೊಂದನ್ನು ನಿರ್ಮಿಸಲಾಗಿದೆ. ಈ ಪಂಜರದಲ್ಲಿ, ಏರ್‌ಕಂಡೀಷನ್ ವ್ಯವಸ್ಥೆಯಿದೆ.

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಬಾಲಾಕೋಟೆ, ಉಡುಪಿ, ದ. ಕ.

ಗಳು, ಸಂಕಥರ್ಮಗಳಿಂದ ಇವರಿಗೆ ಅಷ್ಟಿಷ್ಟು ಪ್ರಯೋಜನವಾಗ ಬಹುದೋ ಏನೋ. ಮನುಷ್ಯನದು ಒಂದು ಪ್ರಾಣಿ. ಪ್ರಾಣಿಗಳಲ್ಲೆಲ್ಲ ಶ್ರೇಷ್ಠ ಆತನಿರ ಬಹುದು. ಮಾನವೀಯ ಹೃದಯವಂತಿಕೆ ಆತನಲ್ಲಿ ನೆಲೆಸಿದರೆ, ಆ ಜೀವಿತಕ್ಕೊಂದು ಅಭಿವ್ಯಕ್ತಿ ಬರುತ್ತದೆ. ದಿವ್ಯವನ್ನು ಪಡೆದಾತನು ಆಸ್ತಿಕನಾದರೇನು? ನಾಸ್ತಿಕನಾದರೇನು?

ಹಲವು ನಂಬಿಕೆಗಳು, ಆಶೋತ್ತರಗಳ ಜಾತಿಯನ್ನು ಆಧರಿಸಿವೆ. ಆ ನಂಬಿಕೆಯಿಂದಲೇ ಅವು ತಮ್ಮ ಬದುಕನ್ನು ನೂಕುತ್ತಿವೆ. ಜಾತಿಯೊಂದು ಸಂಘಟನೆ, ಒಂದು ಸಾಂಬಂಧಿಕ ಸಂಸ್ಥೆ. ಈ ಜಾತೀಯತೆಗೂ, ರಾಜಕೀಯಕ್ಕೂ ಸ್ಪರ್ಶ ಆದಾಗ ಹಾಲಾಹಲ ಹುಟ್ಟುತ್ತದೆ. ಜಾತಿ ಎಂಬ ದೈತ್ಯದ ಉರುಬಿಗೆ ಚುನಾವಣೆಯಲ್ಲಿ ಜೀವ ಬರುತ್ತದೆ. ಯಾರು ನಮ್ಮ ಜನಗಳ ಪವಿತ್ರಾತ್ಮರೋ, ಯಾರು ವೇದಿಕೆ ಏರ್ಪಡಿಸಿದರೆ ಮೈಕಕ್ಕೆ ಜೋತು ಬಿದ್ದು 'ಜಾತೀಯತೆಯನ್ನು ನಿರ್ಮೂಲ ಮಾಡಿರಿ' ಎಂದು ಬೊಬ್ಬೆ ಇಡುವರೋ—ಅಂತಹ ಮುತ್ಸದ್ದಿಗಳು—ಈ ಒಳಒಳ ಜಾಡನ್ನು ಬೆಸೆದು ಹತ್ತುತ್ತರು. ರಂಗಸ್ಥಳದಲ್ಲಿ ಒಂದು ಮಾತು; ನೇಪಥ್ಯದಲ್ಲಿ ಮತ್ತೊಂದು ಮಾತು. ಇದರಿಂದಲೇ ಜೀರ್ಣ ಶೀರ್ಣವಾದ ಹೊಲಸೆಲ್ಲಾ ಹೊಸ ನಾತ ಪಡೆಯುತ್ತದೆ.

ಈ ದೇಶದಲ್ಲಿ ಒಬ್ಬೊಬ್ಬ ಮತ ಸುಧಾರಕ ಹುಟ್ಟಿದಾಗ ಒಂದೊಂದು ಹೊಸ ಪಂಗಡ ಹುಟ್ಟುತ್ತಾ ಬಂದಿದೆ, ಇದ್ದ ಸ್ಥಿತಿಯಲ್ಲೇ ಅವುಗಳ ಉದ್ಧಾರ ನಡೆದಿಲ್ಲ. ಬುದ್ಧಿವಂತರೆಂಬ ಜ್ಞಾನಿಗಳೆಲ್ಲರೂ ಶಬ್ದ ಶಬ್ದಕ್ಕೆ ವ್ಯಾಖ್ಯಾನ ಮಾಡುತ್ತಾ ಸಮಷ್ಟಿ ಜೀವನವನ್ನು ಛಿನ್ನ ಭಿನ್ನ ಮಾಡುತ್ತಾ ಬಂದಿದ್ದಾರೆ. ಇಂದು ಜೀವನದ ಮೌಲ್ಯಮಾಪನ ನಡೆಸಿದರೆ ಹಳೇ ಜೀವನವು ತನ್ನ ಮೌಲ್ಯವನ್ನು ಕಳೆಕೊಂಡಿದೆ. ಈ ನಮ್ಮ ನಾಶ್ಯಕ್ಕೆ ಹೊಸ ಮೌಲ್ಯ ದೊರಕಿಲ್ಲ. ಇದೊಂದು ಸಂಧಿಕಾಲ, ಸಂಕ್ರಮಣಕಾಲ, ಪೂರ್ವ ಪಶ್ಚಿಮದ ಸಂಸ್ಕೃತಿಗಳು ಬೆರಕೆಯಾಗುವ ಕಾಲ. ಇಂತಹ ಸಂಧಿಗ್ಧತೆಯಲ್ಲಿ ಏನೇನೋ ಹಳೆಯ ಮತಗಳನ್ನೆತ್ತಿ, ಮನಸ್ಸನ್ನು ಕದಡಿಸುವುದು ವಾತಾವರಣವನ್ನು ಪ್ರಕ್ಷುಬ್ಧಗೊಳಿಸಿದಂತೆಯೇ ಸರಿ 'ಅದ್ವೈತ'ವೆಂಬ ಮಹಾ ವೇದಾಂತವನ್ನೇ ಜಗತ್ತಿಗೆ ನೀಡಿದ ಎಲ್ಲರೂ ಒಂದೇ ಎಂಬ ಕೂಗನ್ನು ಮೊತ್ತ ಮೊದಲಿಗೆ ಮೊಳಗಿದ ವಿಶ್ವವಿಖ್ಯಾತರಾದ ಆದಿಶಂಕರರನ್ನೂ ಹಳಿದು ಹಿಂದೂ ಧರ್ಮ ಉದ್ಧಾರ ಮಾಡುವವರಿದ್ದಾರೆ. ನಾವು ದಾರಿದ್ರ್ಯರು. ಒಂದು ಹಿಡಿ ಅನ್ನ, ಒಂದು ಮೊಳ ಬಟ್ಟೆಗೆ ನಾವು ಪ್ರಪಂಚದ ಯಾವ ಚಿಕ್ಕ ರಾಷ್ಟ್ರದಲ್ಲೂ ಸಾಲ ಬೇಡುತ್ತಿದ್ದೇವೆ. ನಾವು ನಮಗೇ ಹೊರೆಯಾಗುತ್ತಿದ್ದೇವೆ. ಮಾನವನ ಜೀವನದಲ್ಲಿ ಜಾತಿ ಮತಗಳಿಗೆ ಸ್ಥಾನವಿದೆಯೇ? ಇಲ್ಲವೆನ್ನಲಾಗದು. ಇದೆಯೆಂದು ಜೋತಾಡಲಾಗದು. ಇದೊಂದು ಸಾಧನ ಮಾತ್ರ. ಈ ಸಾಧನವನ್ನು ಬಳಸುವಲ್ಲಿ ವ್ಯಕ್ತಿಯು ಸುಸಂಸ್ಕೃತನೂ ಸಭ್ಯನೂ ಆಗಿ ವರ್ತಿಸಬೇಕು. ಸಮಾಜದಲ್ಲಿ ಒಂದು ತಿಂಪಡೆಯು, ಹಂಗಣೆಯು ಮಾಡಿದೆ. "ಅತ ಜಾತಿ ಬಿಟ್ಟವನು; ಅತ ಜಾತಿ ಕೆಟ್ಟವನು." ಇನ್ನು ಮುಂದಿನ ಸಮಾಜದಲ್ಲಿ ಮಾನವೀಯತೆ ಊರ್ಜಿತದಲ್ಲಿರ ಬೇಕಿದ್ದರೆ—ಬಿಟ್ಟವರು, ಕೆಟ್ಟವರೇ ಆಗಬೇಕು. ಮನುಷ್ಯನು ಗುಣವನ್ನು ಗ್ರಹಿಸುವುದನ್ನು ಬೆಳೆಯಬೇಕು. "ಗುಣಾಃ ಪೂಜಾ ಸ್ಥಾನಮ್." ಆಗ ಜಾತ್ಯತೀತ ಎಂಬ ಪದಕ್ಕೆ ಮೌಲ್ಯ ತನ್ನಿಂದ ತಾನೇ ಬರುತ್ತದೆ.

ಜಾತ್ಯತೀತ ಎಂಬ ಹೆಸರಿನಿಂದ ಇಂದು ಸದಾಚಾರಗಳು ನಾಶವಾಗುತ್ತಿವೆ. ಇದರ ಉಪಯೋಗ ಪಡೆದು ತಾನೇ ದೇವರೆಂದು ಸಾರುವ ಸನ್ಯಾಸಿಗಳ ಸೃಷ್ಟಿಯೂ ಆಗುತ್ತಿದೆ. ಮಾನವ ಜೀವನದ ಆಸ್ತಿವಾರ ಶಿಥಿಲವಾಗುತ್ತಿದೆ.

ಜೀವನವೊಂದೇ "ಸಾಧ್ಯ". ತನ್ನಿಂದ ಅನ್ಯರಿಗೆ ನೋವಾಗದಂತಹ ಪವಿತ್ರ ಜೀವನ; ಇದು ಧರ್ಮದಿಂದ ಪರಿವೇಷ್ಟಿತಗೊಂಡುದು. ಜಾತಿ ಮತಗಳು ಅಶಾಶ್ವತವಾದವುಗಳು, ಧರ್ಮ ಶಾಶ್ವತ. ಈ ನೆಲದಲ್ಲಿ ಹುಟ್ಟಿದ ಲೋಕಾನುಕಂಪಹೃದಯಿಗಳೆಲ್ಲರ ಹಿತಚಿಂತನೆ ಸಮಗ್ರ ಜೀವಿಗಳ ಮೇಲೆ ಇತ್ತು. ಅವರೆಲ್ಲರ ಆ ಚಿಂತನೆ "ಧರ್ಮ", ಅದಕ್ಕೆ ವಂಚಿತರಾಗದೇ ತಮ್ಮ ಜೀವನವನ್ನು ನಡೆಯಿಸ ಬಲ್ಲವನನ್ನು ಅದು ಕಾಪಾಡುತ್ತದೆಂದು ಹಿರಿಯರ ಅನುಭವ. ಈ ಅನುಭವದಲ್ಲಿ ನಾವೂ ಪಾಲುಗಾರರಾಗ ಬಹುದು. ಈ ನೆಲೆಯಲ್ಲಿ ನಾವು ನಮ್ಮ ವಿವೇಚನೆಯನ್ನು ಬೆಳೆಯಬಿಟ್ಟಾಗ ಭಾರತದಲ್ಲಿ ಜಾತೀಯತೆಯೆಂಬುದು ಕೇವಲ ಕಾಲ್ಪನಿಕವಾದ ಒಂದು ವ್ಯವಹಾರ. ಕಲ್ಪನೆಯಲ್ಲೇ ಸುಖವನ್ನು ಕಾಣುವ ಜನಕ್ಕೆ ಇದೊಂದು ಹಗರಣ. ವಾಸ್ತವಿಕತೆಯಲ್ಲಿ ಜೀವನವನ್ನು ಕಾಣುವವನಿಗೆ, ಅನುಭವಿಸುವವನಿಗೆ ಇದೊಂದು ಹಾಸ್ಯಾಸ್ಪದ ಸಂಗತಿ.

'ತಮಸೋಮಾ ಜ್ಯೋತಿರ್ಗಮಯ'

ಪುಸ್ತಕ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂ. ಪ.

ಚಂದ್ರಹಾಸ ಚರಿತೆ:
(ಯಕ್ಷಗಾನ ಪ್ರಬಂಧ)
ಲೇಖಕ: ಮೂಲಿಕೆಯ ಮಟ್ಟಿ ವಾಸುದೇವ ಪ್ರಭು
ಪ್ರಕಾಶಕ: ಶ್ರೀ ಕೆ. ವೆಂಕಟರಾಯಾಚಾರ್ಯ, ವಿಜಯ ಸಾಹಿತ್ಯಮಾಲೆ, ಪುರಕ್ಕಲ್ಲು (ದ.ಕ.)
ಪುಟಗಳು: 30 ಬೆಲೆ: ರೂ. 0-50.

ಗತನೇಯ ಶತಮಾನದಲ್ಲಿದ್ದ ಮೂಲಿಕೆಯ ಮಟ್ಟಿ ವಾಸುದೇವ ಪ್ರಭು ಬರೆದಿದ್ದ ಬಿಲ್ಲ ಹಬ್ಬ ಮತ್ತು ಸಮುದ್ರ ಮಥನವೆಂಬ ಪ್ರಸಂಗಗಳು ಈಗಾಗಲೇ ಅಚ್ಚಾಗಿವೆ. ಆತನ ಮೂರನೆಯ ಕೃತಿ ಚಂದ್ರಹಾಸ ಚರಿತ್ರೆಯನ್ನು ಶ್ರೀ ವೆಂಕಟ್ರಾಯಾಚಾರ್ಯರು ಸಂಶೋಧಿಸಿ ಇದೀಗ ಅಚ್ಚು ಹಾಕಿಸಿದ್ದಾರೆ. ಜೈಮಿನಿ ಭಾರತದ ಆಧಾರದ ಮೇಲೆಯೇ ಕನ್ನಡದ ಚಂದ್ರಹಾಸ ಚರಿತ್ರೆಯು ನಿಂತಿರುವುದರಿಂದ ಈ ಕೃತಿಯ ಹೆಜ್ಜೆ ಹೆಜ್ಜೆಯಲ್ಲೂ ಕನ್ನಡ ಜೈಮಿನಿ ಭಾರತದ ಪ್ರಭಾವವನ್ನು ಕಂಡರೆ ವಿಸ್ಮಯವಿಲ್ಲ.

ಕವಿಯ ಕವಿತಾ ಪ್ರೌಢಿಗಿದೊಂದು ಉದಾಹರಣೆ:

ಉದಯದೊಳು ದುರ್ಗಾಂಬೆ ಪದವ
ಪೂಜಿಸ ವಿಪ್ರ|ಮುಖದಿ ಬರೆಗುಡಿಯ
ದ್ವಾರದಿ ಬಿದ್ದು ಲಯವಾದ | ಮದನ
ಗುರುತವನರಿತು ಬೆದರಿ ಓಡುತ ಬಂ
ದು ವಿಧುಹಾಸ ಭೂಪಗೆಂದ ||

—ಸರಳವಾದ ಭಾಷೆ, ಸುಂದರವಾದ ಶಯ್ಯೆಗಳಿಂದ ಇದು ಉತ್ತಮ ಸಾಹಿತ್ಯಕ್ಕೊಂದು ನಿದರ್ಶನ.

ಯಕ್ಷಗಾನ ಪ್ರಬಂಧಗಳ ಸಾರ್ಥಕ್ಯ ರಂಗಸ್ಥಳದಲ್ಲಾಗಬೇಕು. ಚಂದ್ರಹಾಸ ಚರಿತೆಯನ್ನು ಕಲಾವಿದರು ಅಳವಡಿಸಿಕೊಳ್ಳಬಹುದು. "ಗೊಂಬೆಯಾಟಕ್ಕಾಗಿ ಬರೆಸಿ ಇಟ್ಟುಕೊಂಡ ಪ್ರತಿಯಿದು" ಎಂದು ಪ್ರಕಾಶಕರು ಹೇಳಿದ್ದಾರೆ. ಆದ್ದರಿಂದ ಗೊಂಬೆಯಾಟಕ್ಕೂ ಈ ಪ್ರಸಂಗವನ್ನು ಬಳಸಬಹುದೆನ್ನಿಸುತ್ತದೆ. ಅಜ್ಞಾತ ಕೃತಿಯನ್ನು ಬೆಳಕಿಗೆ ತಂದ ಪ್ರಕಾಶಕರ ಶ್ರಮ ಸಾರ್ಥಕವಾಗಬೇಕಾದರೆ, ಅದನ್ನು ಕೊಂಡು ಬಳಸಬೇಕು. ಲೇಖಕರ ಬಗ್ಗೆ ಸ್ವಲ್ಪ ಪರಿಚಯದ ಮಾತು ಇರುತ್ತಿದ್ದರೆ, ಕೃತಿಯ ಉಪಯುಕ್ತತೆ ಇನ್ನೂ ಹೆಚ್ಚುತ್ತಿತ್ತು. ●



ರಾಜಕೀಯ ಪ್ಲಾಸ್ಟಿಕ್ ಸರ್ಜರಿ

ಬೆಳಗಾಂವಿಯ ಒಂದು ಭಾಗವನ್ನಾದರೂ ಮರಾಠಿಗರಿಗೆ ಬಳುವಳಿ ನೀಡಬೇಕೆಂದು ಪ್ರಧಾನಿ ಇಂದಿರಾ ಗಾಂಧಿಯವರ ಹೆಬ್ಬಯಕೆ. ಎಸ್ಸೆಸ್ ವತ್ತು ಸಿಂಡಿಕೇಟಿನೊಡನಾದ ಹೋರಾಟದಲ್ಲಿ ತನಗೆ ಅಖಂಡ ಬೆಂಬಲ ನೀಡಿದ್ದ ಮುಖ್ಯಮಂತ್ರಿ ಶ್ರೀ ವಿ. ಪಿ. ನಾಯ್ಕರಿಗೆ ಇದವರ ಕಾಣಿಕೆ. ರಾಜಕೀಯ ಕಾಣಿಕೆಯನ್ನು ವಿರೋಧಿಸಲು, ಬೆಳಗಾಂವಿಯನ್ನು ಕರ್ನಾಟಕದಲ್ಲೇ ಉಳಿಸಬೇಕು, ಮಹಾಜನ ಆಯೋಗದ ವರದಿಯನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರಬೇಕು ಎಂದು ಕೇಳಿಕೊಳ್ಳಲು ಶಾಸಕರ ನಿಯೋಗಗಳ ದೆಹಲಿ ಯಾತ್ರೆ—ಅಲ್ಲಿ ಕನ್ನಡ ಚಳುವಳಿಗಾರ ನಾಯಕ ಶ್ರೀ ವಾಟಾಳರ ಗಂಭೀರ ಎಚ್ಚರಿಕೆ—ತಾವೂ ತಮ್ಮ ನಾಡವರೂ ಪುಂಡಾಟಿಕೆಯಲ್ಲಿ ಕಡಿಮೆಯಿಲ್ಲವೆನ್ನುವ ಧಾಟಿ—ಪುಂಡಾಟಿಕೆಯ ಮುಂದೆ ತಲೆಬಾಗುವುದೇ ಇಂದಿನ ಸರ್ವಸಾಮಾನ್ಯ ನೀತಿ.

ಇದಕ್ಕಾಗಿಯೇ ಬೆಂಗಳೂರು ಬಂದ್. ಇದುವರೆಗಿನ ಹಲವು ಬಂದ್‌ಗಳಲ್ಲಿ ಅತ್ಯಂತ ಯಶಸ್ವಿಯಾದದ್ದು ಇಂದಿನ ಬಂದ್. ಕನ್ನಡಿಗರು ಕರ್ನಾಟಕ ಭುವನೇಶ್ವರಿಯ ಪ್ರೀತ್ಯರ್ಥವಾಗಿ ಬಂದ್ ಆಚರಿಸಿದರು. ಅಧಿಕ ಸಂಖ್ಯಾಕರಾಗಿರುವ ಕನ್ನಡಿಗೇತರರು ಪುಂಡಾಟಿಕೆಗೆ ಹೆದರಿಯೇ ಬಂದ್‌ನಲ್ಲಿ ಅಮೂಲ್ಯ ಪಾತ್ರವಹಿಸಿದರು. ಮೊದಲಿನಂತೆ ಗಾಜಿನ ಬಾಗಿಲು—ಕಿಟಕಿಗಳಿಗೆ ಮುರಿತ, ಸಂಚಾರ ವ್ಯವಸ್ಥೆಗೆ ಕುಸಿತ, ಕಲ್ಲುಗಳ ಎಸೆತ, ವಿದ್ಯಾರ್ಥಿಗಳ ಕುಣಿತ ಇತ್ಯಾದಿ ಇತ್ಯಾದಿ.. ಅಶ್ರುವಾಯು ಪ್ರಯೋಗ. ಲಾಠಿಪ್ರಹಾರ — ಭುವನೇಶ್ವರಿಗೆ ತೃಪ್ತಿಯಾಯಿತೋ ಇಲ್ಲವೋ ಕನ್ನಡಿಗರಿಗೆ ತೃಪ್ತಿ ತಂದಿತು. ಶ್ರೀಮತಿ ಗಾಂಧಿಯವರ ಕಿವಿಗೆ ಈ ಪುಂಡಾಟಿಕೆಯ ವರದಿ ಸ್ವಲ್ಪವೊಂದು ಹೋದರೂ ಹೋಗಬಹುದು; ಪೋಲೀಸ್ ಇಲಾಖೆಗೆ ಮಾತ್ರ ಘೋರದಲ್ಲಿ ಘೋರ.

ಪೋಲೀಸ್ ಇಲಾಖೆಗೆ ಎಂದ ತಕ್ಷಣ, ಆ ಶಾಖೆಯ ಮೇಲೆ ಇತ್ತೀಚೆಗೆ ಹೇರಲಾದ ಆರೋಪಗಳ ಮಾಲೆ ಮುಂದೆ ಕಾಣುತ್ತದೆ. ಶಿವಮೊಗ್ಗೆಯಲ್ಲಿ ದಂಪತಿಗಳನ್ನು ಬಲಾತ್ಕಾರವಾಗಿ ಸೆರೆಹಿಡಿದು ಅಮಾನುಷವಾಗಿ ಪೀಡಿಸಲಾಯಿತು. ಬೆಂಗಳೂರಿನ ಬಳಿ ಯುವಕನೊಬ್ಬನನ್ನು ತಲೆ ಬೋಳಿಸಿ ಅಪಮಾನ ಮಾಡಲಾಯಿತು. ಮಂಡ್ಯದಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರನ್ನು ಹೊಡೆಯಲೆತ್ನಿಸಿದರು....

ಸೂಸವಂತರು ಬಾಳುವುದಕ್ಕೆ ಅಶಕ್ಯವಾಗುವಷ್ಟು ವಾತಾವರಣ ಕಲುಷಿತ. ಪ್ರಾಮಾಣಿಕರು ತಮ್ಮ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡುವುದಕ್ಕೇ ಆತಂಕ. ಬಂದಿರುವ ಸ್ವಾತಂತ್ರ್ಯದ ಸವಿಯನ್ನು ಉಣ್ಣುವುದಕ್ಕೂ ತಡೆ. ಇದು ಈ ರೀತಿಯಾಗೇ ನಡೆದರೆ, ದೇಶದ ರಕ್ಷಣೆಯೆನ್ನುವುದು ಎಲ್ಲಿರಬೇಕು? ಎಲ್ಲೆಡೆಯೂ ಪುಂಡಾಟಿಕೆ — ಅತ್ಯಾಚಾರದ ಕೇ ಪಣೆ ಮಾಡಿದರೆ ಜನತೆ ಹೇಗೆ ಬದುಕಬೇಕು?

ಇದು ಭವಿಷ್ಯದ ಚಿಂತೆ. ಶ್ರೀ ವೀರೇಂದ್ರ ಪಾಟೀಲರು ತೀವ್ರವೇ ಗಮನ ಕೊಡಬೇಕಾದ ಮತ್ತೊಂದು ಭಾರೀ ಚಿಂತೆ ಬೆಳಗಾಂವಿಯನ್ನು ಕನ್ನಡಿಗರು ಬಿಗಿಹಿಡಿಯುವುದಾದರೆ, ಕಾರವಾರವನ್ನು ನಮಗೆ ಕೊಡಿ, ಪ್ಲಾಸ್ಟಿಕ್ ಸರ್ಜರಿ ಮಾಡಿ ಎಂದು ಮರಾಠಿಗರು ಕೇಳುತಿದ್ದಾರಂತೆ. ಕಾರವಾರ-ಸೂಪಾ-ಹಳಿಯಾಳಗಳ ಭಾಗಗಳನ್ನು ನುಂಗಿದರೆ, ಗೋವಾ ಕಬಳಿಸಲು ಯಾವ ಆಪತ್ತುಗಳೂ ಇಲ್ಲ ಎಂದವರ ಅನಿಸಿಕೆ. ಶ್ರೀಮತಿ ಗಾಂಧಿಯವರು ಇದಕ್ಕೆ ಗಂಭೀರ ಮೌನ. ಇದರ ಹಿಂದೆ ಬಲು ದೊಡ್ಡ ಆಟಂಬಾಂಬು ಸಿಡಿಯಲಿದೆ; ಅನುವಾಗಿರನುವಾಗಿರೆಂದು ಕಾರವಾರಿಗಳು ಬೆಂಗಳೂರಲ್ಲಿ ಕರೆ ನೀಡಿದ್ದಾರೆ.

ಗಡಿ ವಿವಾದದ ಬಗ್ಗೆ ರಾಜ್ಯ ಸರಕಾರದ ನೀತಿ ಹಾಲಿನಷ್ಟು ಬೆಳ್ಳಗೆ. ಸೂರ್ಯ ಪ್ರಕಾಶದಷ್ಟು ಸ್ಪಷ್ಟ. ಆಯೋಗದ ವರದಿಗೇ ಅದರ ಪುರಸ್ಕಾರ. ಇದಕ್ಕೆ ವ್ಯತಿರಿಕ್ತವಾದ ಯಾವುದೇ ನೀತಿ ರಾಜಕೀಯ ಪ್ರೇರಿತ; ಅದು ನಮಗೆ ಅನಪೇಕ್ಷಿತ; ಉಪೇಕ್ಷಿತ.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ಬಂಟವಾಳ, ೨೯, ದ.ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ೬೨ನೇ ವಾರ್ಷಿಕ ಮಹಾಸಭೆಯು ಬಂಟ್ವಾಳದಲ್ಲಿ ಧರ್ಮಸ್ಥಳ ಹೆಗ್ಗಡೆಯವರ ಬಂಧುಶಾಲೆಯ ಹೊರಾಂಗಣದಲ್ಲಿ ಸುಸಜ್ಜಿತವಾಗಿ ವ್ಯವಸ್ಥೆಗೊಳಿಸಲಾದ ಮುತ್ತಯ್ಯ ಮೂಲ್ಯರ ಮಂಟಪದಲ್ಲಿ ವಿಜೃಂಭಣೆಯಿಂದ ಮದ್ರಾಸಿನ ನಿವೃತ್ತ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಮುಡೂರು ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಬೆಳಿಗ್ಗೆ ನಡೆದ ಸಭೆಯಲ್ಲಿ ಪ್ರತಿನಿಧಿಗಳ ಪರಸ್ಪರ ಪರಿಚಯ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ವರದಿ ವಾಚನಗಳಾದುವು. ಅನಂತರ ಶ್ರೀ ಸಿಂಹಾಮೂರು ಅಚ್ಚಣ್ಣ ಶೆಟ್ಟರ ಮತ್ತು ಅವರ ಪತ್ನಿ ರುಕ್ಮಿಣಿ ಶೆಡ್ತಿಯವರ ಭಾವಚಿತ್ರಗಳನ್ನು ಅಧ್ಯಕ್ಷರು ಅನಾವರಣಗೈದರು. ಶ್ರೀ ಬಾಳಪ್ಪ ಶೆಟ್ಟರು ಬೊಂಬಾಯಿಯ ಪ್ರಸಿದ್ಧ ಹೊಟೇಲ್ ಉದ್ದಿಮೆದಾರರಾದ ಉಡುಪಿ ಶ್ರೀ ಕೃಷ್ಣ ಕುಂಜದ ಶ್ರೀ ಎಸ್. ಕೃಷ್ಣ ಶೆಟ್ಟರು ಸಂಘಕ್ಕೆ ಕೊಟ್ಟ ಉದಾರ ದೇಣಿಗೆ ಮತ್ತು ಭಾವಚಿತ್ರ ಅನಾವರಣ ಮಾಡಲಾದ ಅವರ ತಂದೆ ತಾಯಿಗಳ ಭಕ್ತಿ ಶ್ರದ್ಧೆಯನ್ನು ಕೊಂಡಾಡಿದರು.

ಸಂಘದ ಹಿತಚಿಂತಕರು, ಸಂಘದ ಬೆಳವಣಿಗೆಗೆ ನೆರವಾದವರೂ ಆದ ನಿವೃತ್ತ ಸುಪರಿಂಟೆಂಡೆಂಟ್ ಉಮ್ಮಣ್ಣ ಸೇಣಿಯರನ್ನೂ ಜಿಲ್ಲಾ ರಿಜಿಸ್ಟ್ರಾರ್ ಶ್ರೀ ಕೊಡಮಾಣ ಸಾಬ್ಬಣ್ಣ ಪಕ್ಕಳರನ್ನೂ ಮಾನಪತ್ರವಿತ್ತು ಗೌರವಿಸಲಾಯಿತು. ಸ್ವಾಗತ ಸಮಿತಿಯ ಕಾರ್ಯಕರ್ತರು ಶ್ರೀ ಎ. ಲಕ್ಷ್ಮೀನಾರಾಯಣ ಆಳ್ವರು ಓದಿದ ಮಾನಪತ್ರಗಳನ್ನು ಅಧ್ಯಕ್ಷರ ಮೂಲಕ ಕೊಡಲಾಯಿತು. ಸನ್ಮಾನಿತರು ತಮಗಿತ್ತ ಸನ್ಮಾನಕ್ಕೆ ಕೃತಜ್ಞತೆ ಸೂಚಿಸಿ ಸಂಘ ಇನ್ನೂ ಬೆಳೆದು ಬರಲೆಂದು ಹಾರೈಸಿದರು. ಅನಂತರ ಸಿ. ಎಸ್. ತಿಮ್ಮಪ್ಪ ಶೆಟ್ಟರ ಸ್ವರ್ಣ ಪದಕವನ್ನು ಉತ್ತಮ ಸಮಾಜ ಸೇವಿಕೆ ಶ್ರೀಮತಿ ಇಪೂರ್ನಿ ಆನಂದ ಶೆಟ್ಟಿಯವರಿಗೆ ಕೊಡಲಾಯಿತು. ದಿ| ಎ. ಬಿ. ಶೆಟ್ಟಿ ಸ್ಮಾರಕ ನಿಧಿಯ ಬಡ್ಡಿಯಿಂದ ಪ್ರತಿ ವಿದ್ಯಾರ್ಥಿ ಭವನ ಕನ್ಯಾ ಲೈಬ್ರೇರಿ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಬಳಿಕ ವಿವಿಧ ಹಂತಗಳಲ್ಲಿ ಸಂಘವನ್ನು ಬಲಪಡಿಸುವ ಕುರಿತು ವಿಚಾರ ವಿಮರ್ಶೆ ನಡೆಯಿತು. ಇವರಲ್ಲಿ ಶ್ರೀಗಳಾದ ಸಿ. ಎಸ್. ತಿಮ್ಮಪ್ಪ ಶೆಟ್ಟಿ, ಯಡ್ತರೆ ಮಂಜಯ್ಯ ಶೆಟ್ಟಿ, ಕೆ. ಸುಂದರರಾಮ ಶೆಟ್ಟಿ, ಬಿ. ಸುಬ್ಬಯ್ಯ ಹೆಗ್ಡೆ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಡಾ| ರಾಮಕೃಷ್ಣ ಮಲ್ಲಿ, ಡಾ| ಬಾಳಪ್ಪ ಶೆಟ್ಟಿ, ಬಿ. ಮಂಜಯ್ಯ ಹೆಗ್ಡೆ, ಜಿ. ಕುಶಲ ಹೆಗ್ಡೆ ಮೊದಲಾದವರು ಭಾಗವಹಿಸಿದ್ದರು.

ಭೋಜನವಾದ ನಂತರ ಮಧ್ಯಾಹ್ನ ಸಮಾವೇಶಗೊಂಡ ಮಹಾಸಭೆಯಲ್ಲಿ ಸಂಘದ ಕಾರ್ಯದರ್ಶಿ ಡಾ| ಕೆ. ಬಾಳಪ್ಪ ಶೆಟ್ಟರೂ, ಸ್ವಾಗತ ಸಮಿತಿಯ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಸಂದೇಶಗಳನ್ನು ಓದಿದರು. ಡಾ| ಬಾಳಪ್ಪ ಶೆಟ್ಟರು ಸಂಘದ ವರದಿಯನ್ನು ಓದಿದ ಬಳಿಕ ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧರಾದವರಿಗೆ ಮಾನಪತ್ರ ಸಮರ್ಪಿಸಿ ಗೌರವಿಸಲಾಯಿತು. ಆದರ್ಶ ಅಧ್ಯಾಪಕ ಎಂದು ರಾಷ್ಟ್ರ ಪ್ರಶಸ್ತಿ ವಿಜೇತ ಶ್ರೀ ಕೈಯೂರ ಕಿಞ್ಞಣ್ಣ ರೈ, ಹಿರಿಯ ಪತ್ರಿಕೋದ್ಯೋಗಿ ಎಂದು ಶ್ರೀ ಕೆ. ಚೆನ್ನಯ್ಯ ಶೆಟ್ಟಿ, ಪ್ರಸಿದ್ಧ ಯಕ್ಷಗಾನ ಕಲಾವಿದನೆಂದು ಶ್ರೀ ಅಳಿಕೆ ರಾಮಯ್ಯ ರೈ, ಹೆಸರಾಂತ ಹಾಸ್ಯಗಾರನೆಂದು ಪೇವಸ ರಾಮಣ್ಣ ಶೆಟ್ಟಿ ಇವರಿಗೆ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಓದಿದ ಮಾನಪತ್ರಗಳನ್ನು ಅಧ್ಯಕ್ಷರ ಕೈಯಿಂದ ಕೊಡಿಸಲಾಯಿತು. ಮಾನಪತ್ರ ಸಮರ್ಪಿತರು ತಮಗಿತ್ತ ಸತ್ಕಾರಗಳಿಗೆ ಆಭಾರ ವ್ಯಕ್ತಪಡಿಸಿ ಉತ್ತರಿಸಿದರು. ಕಾರ್ಯಕಾರಿ ಸಮಿತಿಗೆ ಹುಸಿ ಬಿಸಿ ವಾತಾವರಣದಲ್ಲಿ ಸದಸ್ಯರ ಆಯ್ಕೆ ನಡೆಯಿತು. ಅಧ್ಯಕ್ಷ ಶ್ರೀ ಎಂ. ಕೃಷ್ಣ ಶೆಟ್ಟರು ಭಾಷಣ ಮಾಡುತ್ತಾ ಸಂಘವು ಸ್ಥಾಪನೆಯಾದ ಗುರಿ, ಸ್ಥಾಪಕರ ದೂರದೃಷ್ಟಿ, ಅದು ಸಾಧಿಸಿದ ಹಾಗೂ ಸಾಧಿಸಬೇಕಾದ ಕಾರ್ಯ, ಸಮಾಜ ಬಂಧುಗಳ ಸಂಘಟನೆ, ಸಮಾಜದ ಎಲ್ಲಾ ದ ಸುಧಾರಣೆ ಮೊದಲಾದುವನ್ನು ವಿವರಿಸಿ ಸರ್ವರೂ ಬೇಧ ಭಾವಗಳನ್ನು ಮರೆತು ಕೂಡಿನಡೆಯುವ ಮನೋಭಾವ ಉಂಟಾಗಲಿ ಎಂದು ಹಾರೈಸಿದರು. (ಅಧ್ಯಕ್ಷರ ಭಾಷಣ ಬರುವ ವಾರ ಪ್ರಕಟವಾಗುವುದು ಸಂ.ನ.)

ಕೊನೆಯಲ್ಲಿ ಸಿ. ಎಸ್. ತಿಮ್ಮಪ್ಪ ಶೆಟ್ಟರೂ ಏರ್ಯ ಲಕ್ಷ್ಮೀನಾರಾಯಣ ಆಳ್ವರೂ ಧನ್ಯವಾದಗಳನ್ನರ್ಪಿಸಿದರು. ಬಳಿಕ, ಪ್ರಸಿದ್ಧ ಯಕ್ಷಗಾನ ಪಟುಗಳಿಂದ ತಾಳಮದ್ದಳೆ ನಡೆಯಿತು.

ಶ್ರೀ ಲಕ್ಷ್ಮೀಗಣೇಶ್ ಆಟೋವರ್ಕ್ಸ್‌ನ ಉದ್ಘಾಟನೆ

ಉಡುಪಿಯ ಕುಂಜಿಬೆಟ್ಟಿನಲ್ಲಿ ಶ್ರೀ ಟಿ. ಶೇಷಗಿರಿ ರಾವ್‌ರವರಿಂದ ಸ್ಥಾಪಿತವಾದ ಶ್ರೀ ಲಕ್ಷ್ಮೀಗಣೇಶ್ ವರ್ಕ್‌ಶಾಪ್, ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ನಗರಸಭಾಪತಿ ಡಾ| ವಿ. ಎಸ್. ಆಚಾರ್ಯರಿಂದ ತಾ. ೨೯-೩-೭೦ರಂದು ಉದ್ಘಾಟಿಸಲ್ಪಟ್ಟಿತು. ಡಾ| ಆಚಾರ್ಯರು ಉಡುಪಿಯಂತಹ ಪಟ್ಟಣದಲ್ಲಿರುವ ಹೆಚ್ಚು ವಾಹನಗಳ ನಿರ್ವಹಣೆಗಾಗಿ ತೆರೆಯಲ್ಪಟ್ಟ ಈ ಸುಸಜ್ಜಿತ ವರ್ಕ್‌ಶಾಪ್ ಸಂದರ್ಭೋಚಿತ ಅವಶ್ಯಕತೆಯಾಗಿದ್ದು ಹೆಮ್ಮೆಯ ವಿಷಯವೆಂದರು. ಶ್ರೀ ಶ್ರೀಪತಿ ರಾವ್ ಅಗರ್‌ರವರು "ಸ್ವಿಚ್ ಆನ್" ಮಾಡಿ ಸಂಸ್ಥೆಗೆ ಯಶಸ್ಸನ್ನು ಕೋರಿದರು. ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಪ್ರೊ| ಬಿ. ವಿ. ಕೃಷ್ಣಮೂರ್ತಿಯವರು ಈ ಸಂಸ್ಥೆ ಉತ್ತಮ, ಸಮರ್ಥ ಸಿಬ್ಬಂದಿಗಳೊಡನೆ ಅತ್ಯಾಧುನಿಕ ರೀತಿಯಲ್ಲಿ ಮುಂದುವರಿಯಬೇಕೆಂದು ಹಾರೈಸಿದರು. ಇವರ ಅಭಿಪ್ರಾಯವನ್ನು ಡಾ| ಟಿ. ಎಂ. ಎ. ಪೈಯವರು ಸಮರ್ಥಿಸಿ ಸಂಸ್ಥೆಗೆ ಶುಭಕೋರಿದರು. ಆರಂಭದಲ್ಲಿ ಶ್ರೀ ಗಜೇಂದ್ರನಾಥ ನಾನಾಲಾಲ್ ಪಾಂಡ್ಯರವರು ಸ್ವಾಗತಿಸಿದರು. ಮಾಲಕ ಶ್ರೀ ಟಿ. ಶೇಷಗಿರಿ ರಾವ್‌ರವರು ಧನ್ಯವಾದವಿತ್ತರು. 'ರಂಗಭೂಮಿ'ಯವರಿಂದ ಸಂಗೀತ ಕಾರ್ಯಕ್ರಮವು ಏರ್ಪಟ್ಟಿತ್ತು.

SYNDICATE BANK

OPENED

SIX BRANCHES IN MYSORE STATE
AND ONE IN ANDHRA PRADESH
ON 30-3-1970

at the following places:

MUNIRABAD (Raichur Dist.)	**KUMSI** (Shimoga Dist.)
HUKERI Belgaum Dist.)	**TALIKOTE** (Bijapur Dist.)
MALLAPURAM DAM SITE (Bellary Dist.)	**KITTUR** (Belgaum Dist.)

CHITTOOR
(Andhra Pradesh)

One more Branch will be opened at
KADUGONDANAHALLI in Bangalore District
on 2-4-1970

Every One's Bank for Every Banking Need

SYNDICATE BANK

(A Government of India Undertaking)

Head Office
MANIPAL

K. K. Pai
Custodian

ನಿಸ್ವಾರ್ಥಿ ವೈದ್ಯ

ಶ್ರೀ ಹೆರ್ಗ ವಿಠಲ ಶೆಟ್ಟಿ

ಲೇಖಕರು :

ಶ್ರೀ ಯು. ಸಖಾರಾಮ್, ಮುಖ್ಯೋಪಾಧ್ಯಾಯ, ನೀರೆಹೆದ್ದಾರಿ.

ಸುಖವನ್ನು ಸಾರಿ ಹೇಳುವಾಗ ಸಂತೋಷಪಡದೇ, ದುಃಖವನ್ನು ತೋಡಿಕೊಳ್ಳುವಾಗ ದೀನನಾಗದೇ, ಇನ್ನೊಬ್ಬರ ದುಃಖವನ್ನು ಕಂಡಾಗ ಆನಂದ ಪಡದೇ ಪರರ ಸುಖವನ್ನು ಕಂಡು ಮತ್ಸರಪಡದೇ, ಕಾಯಕವೇ ಕೈಲಾಸ, ದೇಶ ಸೇವೆಯೇ ಈಶ ಸೇವೆ, ಜನತಾ ಸೇವೆಯೇ ಜನಾರ್ದನಸೇವೆ ಎಂಬ ನುಡಿಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಮಾಡುವ ಕೆಲಸಗಳನ್ನು ಶ್ರದ್ಧೆ ಆಸಕ್ತಿಯಿಂದ ಮಾಡಿ, ಪರರಿಗೊದಗಿದ ಆಪತ್ತು ತನ್ನ ಆಪತ್ತೆಂದೆಣಿಸಿ, ದಾನಗಳಲ್ಲಿ ಮಹತ್ತಾದ ವಿದ್ಯಾದಾನವನ್ನು ನೀಡುವ ಅಧ್ಯಾಪನ ವೃತ್ತಿಯನ್ನು ತನ್ನ ಮುಖ್ಯ ಉದ್ಯೋಗವಾಗಿಟ್ಟುಕೊಂಡು, ಜತೆಯಲ್ಲಿ ಆಯುರ್ವೇದ ರೀತ್ಯಾ ಔಷಧಗಳನ್ನು ಬಡ ಜನತೆಗೆ ನೀಡಿ ಸುಮಾರು 25 ವರ್ಷಗಳ ಮೂಕಸೇವೆ ಸಲ್ಲಿಸಿ ಅಧ್ಯಾಪನದಲ್ಲೂ ಮಾನಸಿಕ ದೌರ್ಬಲ್ಯಗಳಲ್ಲಿ ಬಳಲುವ ರೋಗಿಗಳನ್ನು ಗುಣಪಡಿಸುವುದರಲ್ಲೂ, ಎತ್ತಿದ ಕೈ, ಸಾಹಸಿ ಎನಿಸಿದ ಮಹಾನ್ ವ್ಯಕ್ತಿ ಕೊರಂಗ್ರಪಾಡಿ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ಹೆರ್ಗ ಶ್ರೀ ವಿಠಲ ಶೆಟ್ಟರು ಸರ್ವ ಸಾಮಾನ್ಯ ಉಡುಪಿ ವಲಯದಲ್ಲಿ ಎಲ್ಲರ ಚಿರಪರಿಚಿತರು.

ಮಾನವನ ಮಾನಸಿಕ ದೌರ್ಬಲ್ಯವೇ ಸಂಶಯ, ಭಯ, ಚಿತ್ತಭ್ರಮಣೆ ಮುಂತಾಗಿ ಮಾನಸಿಕ ರೋಗದ ಮೂಲವಾಗುವುದು. ಈ ದೌರ್ಬಲ್ಯವು ಪುರುಷ ವರ್ಗಕ್ಕಿಂತಲೂ ಸ್ತ್ರೀ ವರ್ಗಕ್ಕೆ ಅಧಿಕ. ಸ್ತ್ರೀಯರಿಗೆ ಹೆರಿಗೆಯಾದ ಬಳಿಕ ಒಂದೆರಡು ತಿಂಗಳು ಕಾಲ ಶಾರೀರಿಕ ಹಾಗೂ ಮಾನಸಿಕ ದೌರ್ಬಲ್ಯವಿರುತ್ತದೆ. ಆ ಅವಧಿಯಲ್ಲಿ ವ್ಯಕ್ತಿಯ ಮನಸ್ಸು ಬಹಳ ಕೋಮಲ. ಆ ವೇಳೆ ಮನಸ್ಸಿನ ಮೇಲೆ ಯಾವುದೇ ಚಿಕ್ಕ ಆಘಾತವಾದರೆ ಅದು ಮುಂದೆ ಸೂತಕವಾಯು ಯಾ ಚಿತ್ತಭ್ರಮಣೆಯ ರೂಪ ತಾಳುವುದು. ಸ್ತ್ರೀಯರ ಸೂತಕ ವಾಯು ಚಿತ್ತಭ್ರಮಣೆಗೆ ಇನ್ನೂ ಅನೇಕಾನೇಕ ಕಾರಣಗಳಿವೆ.

ಕಳೆದ ಮೂರು ವರ್ಷಗಳ ಹಿಂದಿನ ಮಾತು. ನಾಲ್ಕನೇ ಹೆರಿಗೆಯಲ್ಲಿ ಪ್ರಾರಂಭವಾದ ನನ್ನ ಪತ್ನಿಯ ಸೂತಕವಾಯು ದೋಷಕ್ಕೆ ಉನ್ನತ ಪದವೀಧರ ಆಲೋಪತಿ ವೈದ್ಯರಿಂದ ಎರಡು ಮೂರು ತಿಂಗಳ ಕಾಲ ಔಷಧೋಪಚಾರ ನಡೆಸಿದೆ. ಫಲಕಾರಿಯಾಗಲಿಲ್ಲ. ದಿನೇ ದಿನೇ ಸ್ಥಿತಿ ಕಠಿಣವಾಗುತ್ತಿರಲು ನನ್ನ ಹಿತೈಷಿ ಹಿರಿಯ ಶ್ರೀ ಅಂಗಡಿ ಅನಂತಯ್ಯನವರ ಸಲಹೆಯ ಮೇರೆಗೆ ಇಂಗ್ಲೀಷ್ ಔಷಧ ನಿಲ್ಲಿಸಿದೆನು. ಕೊರಂಗ್ರಪಾಡಿಯಲ್ಲಿ ವಾಸ್ತವ್ಯವಾಗಿದ್ದ ಶ್ರೀ ಹೆರ್ಗ ವಿಠಲ ಮಾಸ್ತರನ್ನು ಕಂಡು ಅವರ ಸಲಹೆ ಪಡೆಯಲು ಅವರಲ್ಲಿಗೆ ಹೋದೆನು.

ಗಂಭೀರದ ವ್ಯಕ್ತಿ ಸೌಜನ್ಯದ ಮೂರ್ತಿ ನನ್ನನ್ನು ಬರ ಮಾಡಿ ಕೊಂಡರು. ನನ್ನಂತೆ ಆಪತ್ತಿನಲ್ಲಿ ಸಿಲುಕಿರುವ ಅದೆಷ್ಟೋ ವ್ಯಕ್ತಿಗಳು ಅವರ ಸಲಹೆ ಸೂಚನೆಗಾಗಿ ಕಾಯುತ್ತಿದ್ದರು. ನನಗೊದಗಿದ ಆಪತ್ತಿನ ಕುರಿತು ಆಮೂಲಾಗ್ರವಾಗಿ ವಿಚಾರಿಸಿ ತಿಳಿದುಕೊಂಡರು. ನನ್ನ ಜತೆಯಲ್ಲಿಯೇ ನನ್ನ ಮನೆಗೆ ಬಂದರು. ರೋಗಿಯೊಡನೆ ಸಂಭಾಷಣೆ ನಡೆಸಿದರು. ರೋಗಿಯ ಮನಸ್ಸಿಗೆ ಧೈರ್ಯ ತುಂಬಿದರು. ಸೂಕ್ತ ಸಲಹೆಗಳನ್ನು ನೀಡಿದರು. ಗಿಡಮೂಲಿಕಾ ರೀತ್ಯಾ ಔಷಧೋಪಚಾರ ನಡೆಸಿದರು. ಮಹಾನುಭಾವನ ಹಸ್ತದ ಗುಣವೋ ಅವರ ಔಷಧ ಶಕ್ತಿಯ ಪ್ರಭಾವವೋ, ಬರೇ ಒಂದು ತಿಂಗಳ ಔಷಧ ಪ್ರಯೋಗದಿಂದ ಕಾಹಿಲೆಯು ನೂರಕ್ಕೆ ತೊಂಭತ್ತರಷ್ಟು ಗುಣಮುಖವಾಯ್ತು. ಬಳಿಕ ಒಂದು ತಿಂಗಳ ಪ್ರಯೋಗದಿಂದ ರೋಗಿಯು ಪೂರ್ಣ ಗುಣಮುಖಳಾದಳು. ಶ್ರೀ ಶೆಟ್ಟರು ತನ್ನಲ್ಲಿ ಶಕ್ತಿ ಸಾಮರ್ಥ್ಯವಿದೆ ಎಂದು ತೋರಿಸಿಕೊಳ್ಳುವವರಲ್ಲ. ಈ ಉದ್ಯೋಗವನ್ನು ಯಾವ ಪ್ರತಿಫಲಾಪೇಕ್ಷೆಯಿಂದಲೂ ಮಾಡುತ್ತಿಲ್ಲ. ಔಷಧಗಳ ತಯಾರಿ ಪ್ರಯಾಣದ ಖರ್ಚು ತನ್ನಲ್ಲಿಗೆ ಬಂದು ಹೋಗುವ ವ್ಯಕ್ತಿಗಳ ಉಪಚಾರ ಹೀಗೆ ಅದೆಷ್ಟೋ ಹಣ ಅವರ ಕೈಯಿಂದಲೇ ಖರ್ಚಾಗುತ್ತಿದೆ.

ಶ್ರೀಯುತ ಶೆಟ್ಟರು ಉಡುಪಿ ತಾಲೂಕಿನ ಹೆರ್ಗ ಗ್ರಾಮ. ಉದ್ಯೋಗದಲ್ಲಿ ಅಧ್ಯಾಪಕರಾದ ಪ್ರಯುಕ್ತ ಸ್ಯಾಬರಕಟ್ಟೆ, ಹಿರಿಯಡಕ, ಬಡಗುಬೆಟ್ಟು, ಹೆರ್ಗ, ಮಣಿಪುರ, ಕೊರಂಗ್ರಪಾಡಿ ಮುಂತಾದ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ದುಡಿದುದರಿಂದ ಈ ಊರ ಜನರಿಗೆ ಪರಿಚಿತರಾಗಿದ್ದಾರೆ. ಈ ಊರಿನ ಇಂದಿನ ಹೆಚ್ಚಿನ ಯುವಕ ವರ್ಗದವರಿಗೆ ಗುರುಗಳೆನಿಸಿಕೊಂಡಿರುತ್ತಾರೆ. 1964ನೇ ಇಸವಿಯಲ್ಲಿ ಕೊರಂಗ್ರಪಾಡಿ ಜಿಲ್ಲಾ ಬೋರ್ಡು ಶಾಲೆಯಿಂದ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರು. ಸದ್ಯ ಈಗ ಅವರು ಉಡುಪಿ ಬೈಲೂರು ಕೊಳಂಬೆ ರೋಡಿನಲ್ಲಿ ತನ್ನ ಸ್ವಂತ ಮನೆಯಲ್ಲಿ ಕುಟುಂಬದೊಂದಿಗೆ ವಾಸಿಸಿಕೊಂಡಿರುತ್ತಾರೆ. ಇನ್ನು ಕೆಲವೇ ತಿಂಗಳುಗಳಲ್ಲಿ ತನ್ನ ವಾಸ್ತವ್ಯವನ್ನು ಉಡುಪಿ ತಾಲೂಕಿನ ನಂಬ್ರ 33ನೇ ಶಿರೂರು ಗ್ರಾಮಕ್ಕೆ ಬದಲಾಯಿಸುವ ಅಪೇಕ್ಷೆಯಿದೆಯಂತೆ.

ಶ್ರೀಯುತರು ಮಾನಸಿಕ ರೋಗಗಳಿಗಲ್ಲದೇ ಅರಸಿನ ಮಂಡಿಗೆ, ಪಿತ್ತಕಾಮಿಲೆ, ಉನ್ಮಾದ, ಎಕ್ಸಿಮಾ ಮುಂತಾದ ರೋಗಗಳಿಗೂ ಔಷಧ ನೀಡುತ್ತಿದ್ದಾರೆ.

ಉತ್ತರ ಕರ್ನಾಟಕದ ಓರ್ವ ಯುವಕ ತನ್ನ ಸರ್ವಾಂಗಗಳಲ್ಲಿ ವ್ಯಾಪಿಸಿಕೊಂಡಿದ್ದ ಎಕ್ಸಿಮಾ ಕಾಹಿಲೆಯ ಬಗ್ಗೆ ಉಡುಪಿಗೆ ಬಂದು ಇಂಗ್ಲೀಷ್ ವೈದ್ಯರಿಂದ ಔಷಧ ಪ್ರಯೋಗ ಪಡೆಯುತ್ತಿರಲು ದಿನೇ ದಿನೇ ಕಾಹಿಲೆಯು ಪ್ರಕೋಪಕ್ಕೆ ಮುಟ್ಟುತ್ತಿರುವಾಗ ಕಾರಣಾಂತರಗಳಿಂದ ಆ ರೋಗಿಗೆ ಶ್ರೀಯುತರ ಸಂಪರ್ಕ ದೊರೆತ. ಶ್ರೀಯುತರು ತನ್ನ ಔಷಧ ಪ್ರಯೋಗದಿಂದ ಆತನ ರೋಗವನ್ನು ಸಂಪೂರ್ಣ ಗುಣ ಪಡಿಸಿದರು. ಆ ರೋಗಿಯು ರೋಗದಿಂದ ಪೂರ್ಣ ಮುಕ್ತನಾಗಿ ತನ್ನ ಊರಿಗೆ ತೆರಳಿ ಉದ್ಯೋಗಕ್ಕೆ ಸೇರಿ, ಬಳಿಕ ಒಂದು ವರ್ಷದ ಮೇಲೆ ಪ್ರತಿಫಲವೆಂದು ಹಣ ನೀಡಲು ಬಂದಾಗ ಅದನ್ನು ನಿರಾಕರಿಸಿದ ವ್ಯಕ್ತಿ ಇವರು. ಇದು ನನ್ನ ಸಮಕ್ಷಮ ನಡೆದ ಸತ್ಯ ಸಂಗತಿ. ಈ ಗಣ್ಯ ವ್ಯಕ್ತಿಯು ಚಿರಕಾಲ ಬಾಳಲಿ. ಅವರಿಂದ ಸೇವೆ ಪಡೆಯುವ ಭಾಗ್ಯ ಸಮಾಜಕ್ಕೆ ಒದಗಿಬರಲಿ. ಪರಮಾತ್ಮನು ಶ್ರೀಯುತರಿಗೆ ಆಯುರಾರೋಗ್ಯ ಸುಖ ಸಂಪತ್ತು ನೀಡಲಿ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದ್ವೈಫಲ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

NAVAYUGA 2—4—1970
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33,
Licensed to Post without Prepayment

ಪರಪುಷ್ಟ ಜನಾಂಗವಿರಬಾರದು

ಹಿಂದುಳಿದ ವರ್ಗಗಳ ಸ್ಥಿತಿ ಚಿಂತಾಜನಕ. ಪರಿಶಿಷ್ಟ ಜನಾಂಗಗಳ ಬದುಕು ಮತ್ತಷ್ಟು ಕರುಣಾಜನಕ. ಇದಕ್ಕೆ ಹೊಣೆಗಾರರಾರು ಎಂಬ ಪ್ರಶ್ನೆಗೆ ಉತ್ತರಕಂಡು ಬೇಡ. ಈ ದುರವಸ್ಥೆಯಿಂದ ಅವರನ್ನು ಹೇಗೆ ಎತ್ತಬೇಕು ಎಂಬುದರ ಬಗ್ಗೆ ಚಿಂತನೆ, ವಿವೇಚನೆ ಅಗತ್ಯ. ರೋಗ ಬಂದ ವೇಳೆ ಸೂಕ್ತ ಔಷಧೋಪಚಾರವೇ ಬೇಕು.

ವಿಧಾನ ಸಭೆಯಲ್ಲಿ ಹರಿಜನೋದ್ಧಾರದ ಮಾತು ಬಂತು. ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ಬಾಯಿಂದ ಕೆಂಡ ಉದುರಿ ಬಂತು. ಹಿಂದೂ ಮತದಲ್ಲಿ ಹರಿಜನರು ಸಾಮಾಜಿಕವಾಗಿ ಮುಂದೆ ಬರಲು ಅವಕಾಶವೇ ಇಲ್ಲವೆಂಬ ಕೊರಗು; ಇದರಿಂದ ಹರಿಜನರೆಲ್ಲರೂ ಹಿಂದೂ ಮತ ತ್ಯಜಿಸಿ ಬೇರೊಂದು ಮತವನ್ನು ಸ್ವೀಕರಿಸ ಬೇಕಾಗಬಹುದು ಎಂಬ ಗುಡುಗು. ಲಿಂಗಾಯತ ಮಠಾಧಿಪತಿ ಬ್ಬರ ನೇತೃತ್ವದ ವಿದ್ಯಾರ್ಥಿ ನಿಲಯ. ಅದಕ್ಕೆ ಸರಕಾರದ ಧನಸಹಾಯ. ಇದರಲ್ಲೂ ಹರಿಜನರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಹೀಗಿದೆ ಹರಿಜನೋದ್ಧಾರದ ವ್ಯವಸ್ಥೆ!

ಹರಿಜನೋದ್ಧಾರದ, ದೀನದಲಿತರನ್ನು ಮೇಲೆತ್ತುವ ಮಾತು ಇಂದು ನಿನ್ನೆಯದಲ್ಲ. 'ಬೌದ್ಧ ಮತ'ದ ಉದಯದಲ್ಲಿಯೂ ಈ ಉದ್ದೇಶ್ಯವಿತ್ತು. ಬಸವಣ್ಣನವರು ಇವರ ಉದ್ಧಾರಕ್ಕೆಂದೇ ಸೊಂಟ ಕಟ್ಟಿದವರು. ಅನಂತರವೂ ಕೆಲವೊಂದು ಮಹಾತ್ಮರು ದುಡಿದರು. ಮಹಾತ್ಮಾ ಗಾಂಧಿಯವರೇನು ಕಡಿಮೆ? ಆದರೂ ಸಮಾಜ ಒಂದು ಸಮಾಜವಾಗಲಿಲ್ಲ; ಸದ್ಯೋಭವಿಷ್ಯದಲ್ಲಿ ಒಂದಾಗುವ ಲಕ್ಷಣಗಳೂ ಇಲ್ಲ.

ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ನಾವು ಟೀಕಿಸುತ್ತೇವೆ; ಅದನ್ನು ಬಹಿಷ್ಕರಿಸುವಲ್ಲಿ ಪ್ರೋತ್ಸಾಹ ನೀಡುತ್ತೇವೆ. ನಮ್ಮ ಹಳ್ಳಿ ಹಳ್ಳಿಗಳಲ್ಲೂ ಈ ಭೇದ ನೀತಿಯನ್ನು ಚಾಚೂ ತಪ್ಪದೆ ಅವಸ್ಥಾನಕ್ಕೆ ತರುತ್ತೇವೆ—ದಕ್ಷಿಣ ಆಫ್ರಿಕೆಗೆ ಬುದ್ಧಿ ಹೇಳುತ್ತೇವೆ. ಮನೆಯಲ್ಲಿ ಸತ್ತ ಹೆಗ್ಗಣವನ್ನು ಇಟ್ಟುಕೊಂಡು, ಬೇರೆಯವರ ಗೂಳಿನ ಹೊಲಬು ತೋರಿಸುತ್ತೇವೆ. ಮಾತು ತುಸು ದೊಡ್ಡದೆನಿಸಿದರೂ ಸತ್ಯಾಂಶ ಇರುವೆಗಷ್ಟಾದರೂ ಇದೆ.

ದೀನ ದಲಿತೋದ್ಧಾರದ ಹೆಸರಲ್ಲಿ ಸರಕಾರಿ ಬೊಕ್ಕಸದಿಂದ ಕೋಟ್ಯಂತರ ರೂಪಾಯಿಗಳು ವೆಚ್ಚವಾಗುತ್ತಿವೆ. ಸ್ವಾತಂತ್ರ್ಯೋತ್ತರ ಕಾಲದಿಂದ ವೆಚ್ಚವಾದ ಹಣದ ಮೊತ್ತವನ್ನು ಅವಲೋಕಿಸಿದರೆ, ಅವರ ಉದ್ಧಾರ ಕಾರ್ಯವಾಗಲಿಲ್ಲವೆನ್ನುವುದು ಹೇಗೆ? ಆದರೆ, ಈ ಹಣದ ವೆಚ್ಚವಾಗುವುದು ಹೇಗೆ? ಇಲ್ಲೇ ಜಾರಿಕೆ–ಹಾರಿಕೆ.

ಹರಿಜನ ವಿದ್ಯಾರ್ಥಿಗಳಿಗೆ ಉಳಿದ ವಿದ್ಯಾರ್ಥಿಗಳಂತೆಯೇ ಹೈಸ್ಕೂಲಿನ ವರೆಗೆ ಉಚಿತ ಶಿಕ್ಷಣದ ಮೇಲೆ ಸ್ಪೆಶಲ್ ಫೀಸು ಮಾಫಿ. ಅನುತ್ತೀರ್ಣರಾದರೆ, ಉಚಿತ ಶಿಕ್ಷಣ ರದ್ದಾಗುವುದಾದರೂ ಹರಿಜನರಿಗೆ ರಿಯಾಯಿತಿ. ಇದರ ಮೇಲೆ ಹೈಸ್ಕೂಲು ವಿದ್ಯಾರ್ಥಿಗೆ ರೂ. ೭೫|– ವಾರ್ಷಿಕ ಛಾತ್ರವೃತ್ತಿ. ಈ ಹಣವನ್ನು ವಿದ್ಯಾರ್ಥಿಯ ಹೆಸರಿನಲ್ಲಿ ಆತನ ಹೆತ್ತವರು ಪಡೆಯುತ್ತಾರೆ. ಹೆತ್ತವರೇನು ಮಾಡುತ್ತಾರೆ? ಹೆಂಡ — ಶರಾಬುಗಳ ಪಡಂಗುಗಳಿಗೆ ಸುರಿಯುತ್ತಾರೆ. "ಹೆಂಡವನ್ನು ಕುಡಿಯುವ ಜಾತಿ ಧರ್ಮದು" ಎಂದು ಹೇಳುವುದರಲ್ಲೇ ಬ್ರಹ್ಮಾನಂದ ಹೊಂದುವ ಮನೋವೃತ್ತಿಯನ್ನು ತಿದ್ದಲು ಯಾವ ಕ್ರಮ ಕೈಕೊಂಡಿದ್ದೇವೆ?

ಹರಿಜನರಿಗಾಗಿ ಪ್ರತ್ಯೇಕ ಉಚಿತ ವಿದ್ಯಾರ್ಥಿನಿಲಯಗಳನ್ನು ನಾವು ತೆರೆದು ಪ್ರತ್ಯೇಕತೆಗೆ ದೊಡ್ಡ ಅವಕಾಶ ಮಾಡಿಕೊಟ್ಟಿದ್ದೇವೆ. ಇಲ್ಲಿ ನಡೆಯುವ ವೆಚ್ಚ ಪರ್ವತವಾದರೂ ನಿಲಯವಾಸಿಗಳಿಗೆ ದೊರೆಯುತ್ತಿರುವುದು ತೃಣಮಾತ್ರ. ಪರಿಶಿಷ್ಟ ಜನಾಂಗಕ್ಕೆ ಸೇರಿದವರು ಮಾತ್ರ ಇಲ್ಲಿರುವುದರಿಂದ ಅವರು ಸಾಮಾಜಿಕವಾಗಿ ಹಿಂದುಳಿದೇ ಉಳಿಯುತ್ತಾರೆ. "ನಿಲಯ ವಾಸಿ"ಗಳ ಮೇಲ್ವಿಚಾರಣೆಯಲ್ಲಿ ಸಮರ್ಪಕವಾಗಿ ಹಿಂದುಳಿಯುವಿಕೆ ಗೋಚರವಾಗುತ್ತದೆ. ಶಾಲೆಗೆ ಹೋದರೆ ಹೋದರು, ಇಲ್ಲವಾದರೆ ಇಲ್ಲ ಎಂಬ ದುರವಸ್ಥೆ.

ಇದು ಉದಾಹರಣೆ ಮಾತ್ರ. ಹೆಚ್ಚಿನ ಹರಿಜನರಲ್ಲಿ ತಾವು ಮುಂದೆ ಬರಬೇಕು ಎಂಬ ಇರಾದೆಯೇ ಇಲ್ಲ. (ಬಂದರೆ ಒದಗುತ್ತಿರುವ ಸೌಲಭ್ಯ ಕೊನೆಗೊಂಡೀತೆಂಬ ಭಯವಿದಕ್ಕೆ ಕಾರಣವಲ್ಲ) ಇದ್ದವರಾದರೂ ಪರಪುಷ್ಟರಾಗೇ ಬೆಳೆಯಬೇಕೆಂಬ ಮನೋಧರ್ಮವುಳ್ಳವರು. ಆದರೆ, ಇಟ್ಟುಕೊಟ್ಟ ಬುತ್ತಿ ಎಲ್ಲಿ ವರೆಗೆ ಸಾಕು? ಎಂಬುದರ ತತ್ವ ಅವರಿಗೆ ಅಗೋಚರ. ಸರಕಾರವೂ ಹರಿಜನೋದ್ಧಾರದ ಬಗ್ಗೆ ಉದ್ದುದ್ದ ಮಾತಾಡುವವರೂ ಮಾಡಬೇಕಾದ ಕೆಲಸವಿದು. ಮಾನಸಿಕ ದಾಸ್ಯವನ್ನು ನೀಗದೆ ಅವರಿಂದೂ ಉದ್ಧಾರವಾಗುವುದಿಲ್ಲ.

ಹಿಂದೂ ಮತದಲ್ಲಿ ಸಾರವಿಲ್ಲ; ಆದರಲ್ಲಿ ಉನ್ನತಿಯಿಲ್ಲವೆಂದು ಹಲವರು ಕ್ರೈಸ್ತ–ಇಸ್ಲಾಂ ಮತಗಳನ್ನು ಸ್ವೀಕರಿಸಿದ ಉದಾಹರಣೆಗಳಿವೆ. ಆದರೆ, ತಮ್ಮ ಹೊಸ ಮತದಲ್ಲೂ ಅವರು ತೃಪ್ತಿಪಡಲಿಲ್ಲ. ಸುಖ, ತೃಪ್ತಿಗಳು ಒಂದು ಮತದ ಗುತ್ತಿಗೆಯಲ್ಲ. ಮತಾಂತರ ಮಾನಸಿಕ ದೌರ್ಬಲ್ಯದ ಒಂದು ಕೃತಿ. ಹರಿಜನರು ಹಿಂದೆಯೂ ಇಂದೂ ಮುಂದೆಯೂ ಹಿಂದುಗಳು. ಇವರು ಇಂದು ಹಿಂದುಳಿದರು. ಇದಕ್ಕೆ ಸಮಾಜ ಮಾತ್ರವೇ ಕಾರಣವಲ್ಲ; ಅವರೂ ಅಷ್ಟೇ ಕಾರಣರು. ಕುದುರೆಯನ್ನು ಹಳ್ಳಿನತ್ತ ಬಲಾತ್ಕಾರವಾಗಿ ಒಯ್ಯಬಹುದು; ಆದರೆ ಅದು ಹುಲ್ಲು ತಿನ್ನುವಂತೆ ಮಾಡುವುದು ಹೇಗೆ ಸಾಧ್ಯ? ನಾವು ಯಾರ ಹಾಗೆ ಆಗಬೇಕೆಂದು ಬಯಸುತ್ತೇವೆಯೋ ಅವರನ್ನು ಅನುಕರಿಸುತ್ತ ಬರಬೇಕು. ಹರಿಜನರಾದರೂ ಸಾಮಾಜಿಕ ಸಮಾನತೆ ಪಡೆಯಲು ಸ್ವಶಕ್ತಿ–ಆತ್ಮಬಲಗಳನ್ನು ಹೆಚ್ಚಿಸಿಕೊಳ್ಳಬೇಕು. ಯೋಗ್ಯತೆಯನ್ನು ಎತ್ತರಿಸಿ ಕೊಳ್ಳಬೇಕು. ಇದು ಒಮ್ಮೆಗೇ ಸಾಧ್ಯವಾಗುವುದೆಂದು ಹೇಳಲಾಗದು. ಆದರೆ, ಮಾನಸಿಕ ದಾಸ್ಯ ಮತ್ತು ಪರಪುಷ್ಟ ಜೀವನಧರ್ಮ ಇರುವವರೆಗೆ ಯಾವ ಸಮಾಜವೂ ಉನ್ನತವಾಗದು. 'ಮತಾಂತರ ಹೊಂದಿಯಾದರೂ ಸ್ಥಾನಮಾನ ಗಳಿಸೇವು' ಎಂಬ ಎಚ್ಚರಿಕೆಯ ಮಾತು 'ನಾನು ರೂಪಾಯಿ ಕೊಡ, ಇಲ್ಲ ಜೀವ ಕಳೆದುಕೊಂಡೇನು' ಎಂಬ ಬಾಲಿಶ ಹುಡುಗಾಟವನ್ನಷ್ಟೇ ತೋರಿಸುತ್ತದೆ. ಇದು ಬುದ್ಧಿವಂತಿಕೆಯೂ ಅಲ್ಲ; ವ್ಯವಹಾರ್ಯವೂ ಅಲ್ಲ. ಮಾತು ಕೆಂಡದಂತಿದ್ದರೂ ಅದು ಬರಿಯ ಬೂದಿಯಾದ್ದು!

ಪೆಡಂಭೂತಗಳ ನಡುವೆ ಭಾಷೆ

(ಒಂದನೇ ಪುಟದಿಂದ)

ತ್ತದೆ. ನಾವೆಲ್ಲರೂ ಭಾರತ ಮಾತೆಯ ಮಕ್ಕಳೆಂಬುದನ್ನು ಎಲ್ಲರೂ ಅರಿತುಕೊಳ್ಳುತ್ತಾರೆ. ಆ ಸ್ಥಿತಿ ಬಂದಾಗ ದ್ರಾವಿಡ ಕಳಗಂ, ದ್ರಾವಿಡ ಮುನ್ನೇಟ್ರ ಕಳಗಂ, ತಮಿಳು ಅರಸು ಕಳಗಂ, ಕನ್ನಡ ಸೇನೆ, ಶಿವಸೇನೆ, ಅಕಾಲಿ ದಳ ವಗೈರೆಗಳಿರಲು ಸಾಧ್ಯವೇ ಇರುವದಿಲ್ಲ; ಮತ್ತೆ ಕಮ್ಯೂನಿಸ್ಟ್ ಪಕ್ಷಗಳು, ಮಿಝೋ, ನಾಗಾ, ಮುಸ್ಲಿಂಲೀಗು ಮುಂತಾದ ರಾಷ್ಟ್ರ ವಿರೋಧಿ ದುಃಶಕ್ತಿಗಳಿಗೆ ಆಸರೆಯೇ ಇಲ್ಲದೆ ಹೋಗುತ್ತದೆ. ದ್ರಾ.ಮು.ಕ.ದ ದ್ವೇಷಾಗ್ನಿಗೆ ರಾಮಗೋಪಾಲರಿಗೆ ರಾಷ್ಟ್ರವನ್ನೊಡೆಯುವ [illegible] ಕೆಲಸ ನಿಂತು ಹೋಗುತ್ತದೆ. [illegible] ಇದಕ್ಕೆ ಈ ರಾಜಕೀಯ ಬಂದೆ [illegible] [illegible] ದೇಶ [illegible]?

[illegible] ಕಣ್ಣಪ್ಪ ತನ್ನದೇ ಆದ ರೀತಿ [illegible] ಪೂಜೆ ಮಾಡಿದ. ಅವನ ಅನನ್ಯ ಭಕ್ತಿಗೆ ಶಂಕರ ಮೆಚ್ಚಿದ. ಶಿವಲಿಂಗಕ್ಕೆ ತನ್ನ ಕಣ್ಣುಗಳನ್ನೇ ಕಿತ್ತು ಕೊಟ್ಟ ಕಣ್ಣಪ್ಪ. ಅವನ ಕಣ್ರದೃಷ್ಟಿಯನ್ನು ಕಿತ್ತೆಸೆಗದೆ ಬಿಟ್ಟು ದಯಾಪೂರ್ಣ ದೃಷ್ಟಿಯಿತ್ತನು ಪರಮೇಶ್ವರನು. ಅಂತೆಯೇ ಭಾಷಾಂಧರ, ಮತಾಂಧರ, ಅಧಿಕಾರ ಲಾಲಸಿಗಳ ದರ್ಪಶೂನ್ಯ ದೃಷ್ಟಿಯನ್ನು ಕಿತ್ತೆಸೆದು ರಾಷ್ಟ್ರಭಕ್ತಿಯ ದಯಾಪೂರ್ಣ ದೃಷ್ಟಿಯನ್ನು ಈಗ ಶಕ್ತಿಮಾನ್ ಪ್ರಭುವು ದಯಪಾಲಿಸಬೇಕು.

Gram: VISHWA Tel: 20111

When at Bangalore
Stay at

HOTEL NATARAJA

Restaurant, Boarding & Lodging.
107 Police Road. City Market.
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗವ್ಯ	2—00
ಪುಷ್ಪವನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 9-4-1970 ಸಂಪುಟ 49 ಸಂಚಿಕೆ 31

ಹಳೆ-ಹೊಸ ಕಾಂಗ್ರೆಸ್‌ಗಳ ನಡುವೆ ಹಿಂದಿ

ಲೇಖಕರು: ಶ್ರೀ ಶಿವಶಂಕರ

[illegible] ಕಾಂಗ್ರೆಸ್ಸಿನ ಎರಡು ಹೋಳು(ಗ)ಗಳನ್ನು ಇಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ. ಒಂದನ್ನು ಹಳೆ ಕಾಂಗ್ರೆಸ್ಸೆಂದಲ್ಲ, ಇನ್ನೊಂದನ್ನು ಹೊಸ ಕಾಂಗ್ರೆಸ್ಸೆನ್ನಲೇ ಬೇಕು. ಯಾವುದನ್ನು ಹಳತು, ಯಾವುದನ್ನು ಹೊಸತೆಂದು ಕರೆಯುವದು? ದಾಂಪತ್ಯ ವಿಚ್ಛೇದನ ಇಂದೇನೂ ವಿಷಾದನೀಯವಾಗಿ ಇರುವದಿಲ್ಲ, ವಿನೋದದಾಯಕವೇ ಇದೆ. ಆದರೆ ಅಲ್ಲಿ ಹೆಸರಿನ ಸಮಸ್ಯೆಯೇ ಬರುವದಿಲ್ಲ. ರಾಜಕೀಯ ವಿಚ್ಛೇದನವೂ ಹಾಗೆಯೇ ಆದರೇಕೆ? ಕಮ್ಯೂನಿಸ್ಟ್ ಪಾರ್ಟಿ ನಮಗೆ ದಾರಿ ತೋರಿಸಿದೆ. ಕಾಂಗ್ರೆಸ್ಸೇಕೆ ಅದನ್ನು ಅನುಸರಿಸುವದಿಲ್ಲ? ಒಳಗಿನ ಗುಟ್ಟು ಶಿವನೇ ಬಲ್ಲ. ನಿಜಲಿಂಗಪ್ಪನವರೂ ಇಂದಿರಮ್ಮನವರೂ ನಿಜವಾಗಿ ಮುಖ ತಿರುಗಿಸಿಕೊಂಡೊಡನೆ ಆ ರೀತಿ ವರ್ತಿಸಿಕೊಳ್ಳಬೇಕಾಗಿತ್ತು. ಅದರಲ್ಲೂ ಇಂದಿರಮ್ಮನವರ ಇದಿರಿನಲ್ಲೇ ಸಂಪ್ರದಾಯ ವಿರೋಧಿ ಸುಭದ್ರಾ ಜೋಷಿ ಸುಭದ್ರವಾಗಿರುವಾಗ, ಇಂದಿರಾಜೀಯವರು ಕಾಂಗ್ರೆಸ್ಸ್ ಹೆಸರಿಗೆ ಅಂಟಿಕೊಳ್ಳುವ ಸಂಪ್ರದಾಯಕ್ಕೆ ಅದೇಕೆ ಶರಣು ಹೋಗುತ್ತಿದ್ದಾರೋ ಏನೋ ಇರಲಿ. ವಿಚ್ಛೇದನ ನಡೆದು ಹೋಯಿತು. ಇದರ ನಡುವೆ ಈಗ ಭಾಷಾ ಸಮಸ್ಯೆಯ ಶಿಶು ಬಿದ್ದಾಡುತ್ತಿದೆ.

ಕಾಮರಾಜರು ಸಂಸತ್ ಸದಸ್ಯರಾದಲ್ಲಿ ಮಂತ್ರಿಗಳಾಗಿಯೇ ಬಿಡುತ್ತಾರೆಂದು ಚುನಾವಣಾ ಸಮಯದಲ್ಲಿ ಹೇಳಲಾಗಿತ್ತು. ಕಾಮರಾಜರು ಲೋಕಸಭಾ ಸದಸ್ಯರೇನೋ ಆದರು. ಆದರೆ ಅದರಿಂದ ಕಾಂಗ್ರೆಸ್ಸ್ ಲೋಕಸಭೆಯನ್ನು ಒಡೆಯಿತು. ಕಾಮರಾಜರ ಕಾಮನೆ ಕೈಗೂಡಲಿಲ್ಲ. ಅವರ ಅಧಿಕಾರ ಲಾಲಸೆಯ ರಾಜಕೀಯ ಕಾಮಾಗ್ನಿ ಕಾಂಗ್ರೆಸ್ಸನ್ನು ಬಲಿತೆಗೆದುಕೊಂಡಿತು. ಬಿರುಕಿನಲ್ಲಿ ಬಿದ್ದು ನಿಜವಾಗಿ ಜಗ್ಗಿಹೋದದ್ದು ನಿಜಲಿಂಗಪ್ಪನವರಾದರೂ ಅದಕ್ಕೆ ಕಾರಣ ತಿರು ಕಾಮರಾಜರೇ ಇದ್ದಾರೆ. ಅವರೇನೇ ಬಹಳ ಸುಲಭವಾಗಿ ನಿಜಲಿಂಗಪ್ಪ, ಸಂಜೀವ ರೆಡ್ಡಿ, ಅತುಲ್ಯ ಘೋಷ, ಸದೋಬಾ ಪಾಟೀಲರ ಬಲದಿಂದ ಇಂದಿರೆಯನ್ನು ದೂರಕ್ಕೆಸೆದು ಬಿಡಬಹುದೆಂದು ಭಾವಿಸಿಕೊಂಡಿದ್ದರು. ಹೇಗೇನೋ ಕಾಮರಾಜ! ಆದರೆ ಕಣ್ಣೆದುರು ದಿನಂದಿನ ಜೀವನದಲ್ಲಿ ನಡೆಯುತ್ತಿರುವ ವಿಷಯಗಳನ್ನವರು ಭ್ರಾಂತಿಯಲ್ಲಿ ಮರೆತೇ ಬಿಟ್ಟರು. ಒಂದು ಪ್ರದರ್ಶನಾಲಯದೊಳಗೆ ಭಾರೀ ಜನರನ್ನು ಕೂಡಿಹಾಕಿ ಎರಡು ದ್ವಾರದ ಮೂಲಕ ಒಂದು ಗಂಡು ಒಂದು ಹೆಣ್ಣನ್ನು ಹೊರಗೆ ಬಿಡೋಣ. ಅನಂತರ ಎಲ್ಲರನ್ನೂ ಹೊರಗೆ ಕಳುಹಿಸಿದಲ್ಲಿ ಯಾರ ಹಿಂದುಗಡೆ ಹೆಚ್ಚು ಜನ ಹೋದಾರು? ರಾಜಕೀಯ ಇದಕ್ಕೆ ಅಪವಾದವೇನು?

ಸುಖಸಾಧನಗಳನ್ನೇ ಧ್ಯಾನಿಸುತ್ತಿರುವವನಿಗೆ ಅವುಗಳಲ್ಲಿ ಪ್ರೀತಿ ಹುಟ್ಟುತ್ತದೆ. ಪ್ರೀತಿಯಿಂದ ಕಾಮನೆ ಉಂಟಾಗುತ್ತದೆ. ಕಾಮದಿಂದ ಕ್ರೋಧ ಉದ್ಭವಿಸುತ್ತದೆ. ಕ್ರೋಧದಿಂದ ಭ್ರಾಂತಿ ಉಂಟಾಗುತ್ತದೆ. ಭ್ರಾಂತಿಯಿಂದ ಮರೆವು ಹೆಚ್ಚುತ್ತದೆ. ಮರೆವಿನಿಂದ ಬುದ್ಧಿನಾಶವಾಗುತ್ತದೆ. ಬುದ್ಧಿನಾಶವಾಗುವದರಿಂದ ಹಾಳಾಗಿ ಹೋಗುತ್ತಾನೆ. ಇದು ಗೀತೋಕ್ತಿ. ಗೀತೆ ಸಂಸ್ಕೃತ ಭಾಷೆಯಲ್ಲಿದೆ. ತಿರು ಕಾಮರಾಜರಿಗೆ ಅದು ಹಿಡಿಸುವುದಿಲ್ಲವೆಂದು ಕಾಣುತ್ತದೆ. ಇಲ್ಲದಿದ್ದಲ್ಲಿ ಅವರಿದನ್ನು ಅರಿತುಕೊಂಡು ಎಚ್ಚೆತ್ತಿದ್ದೇಳುತ್ತಿದ್ದರು. ಅಂತೂ ಗೀತೋಕ್ತಿಗೆ ತಿರು ಕಾಮರಾಜರು ಜೀವಂತ ಉದಾಹರಣೆಯಾಗಿ ನಿಂತಿದ್ದಾರೆ. ಅವರು ಗೀತೋಕ್ತಿ ನೂರಕ್ಕೆ ನೂರರಷ್ಟು ನಿಜವೆಂಬುದನ್ನು ಜಗತ್ತಿಗೆ ಸ್ಪಷ್ಟಪಡಿಸಲು ಬಹಳ ಹೆಣಗಾಡುತ್ತಿದ್ದಾರೆ.

ಎರಡು ಕಾಂಗ್ರೆಸ್ಸುಗಳ ನಡುವೆ ಭಾಷಾ ಶಿಶು ಬಿದ್ದುಕೊಂಡು ಬೊಬ್ಬಿಡುತ್ತಿದೆ. ಅದು ದ್ರಾ. ಮು. ಕ. ರೂಪದಲ್ಲಿ ದಕ್ಷಿಣದಲ್ಲಿ ಬಡಿದಾಡುತ್ತಿದೆ. ಅದನ್ನು ಇಂದಿರಮ್ಮನವರು ಸಂತೈಸಿದರು. ಕಾಮರಾಜರ ನಿಜಲಿಂಗಪ್ಪ ಮತ್ತು ಇಂದಿರಮ್ಮನವರು ಬೇರೆ ಬೇರೆಯಾಗಿರುವದರಿಂದ ತಿರು ಕಾಮರಾಜರು ಆ ಕೂಸನ್ನು ಚಿವುಟಿ ಕೂಗಿಸುತ್ತಿದ್ದಾರೆ. ತಾನು ಕಣ್ಣು ಮುಚ್ಚಿ ಹಾಲು ಕುಡಿದಲ್ಲಿ ಇತರರಿಗೆ ಗೊತ್ತಾಗುವುದಿಲ್ಲವೆಂದು ಬೆಕ್ಕು ಭ್ರಾಂತಿಯಲ್ಲಿರುತ್ತದಂತೆ. ಕಾಮರಾಜರ ಈ ಆಟವೂ ಅಷ್ಟೇ. ಅವರ ಆಟವನ್ನು ಇಂದಿರಮ್ಮನ ಪಕ್ಷದವರು ಅರಿತುಕೊಂಡಿದ್ದಾರೆ.

ತಮಿಳು ಅಭಿವೃದ್ಧಿ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ಒಂದುಗೂಡಿಸಿ ಕಾಮರಾಜರು ತಮ್ಮ ರಾಜಕೀಯ ಕಾಮಕೇಳಿಯನ್ನಾಡುತ್ತಿದ್ದಾರೆ. ಹಿಂದಿಯನ್ನು ದೂರಿಸುವದು ರಾಷ್ಟ್ರೀಯತೆಯ ಲಕ್ಷಣವೇನು? ಹಿಂದಿಯನ್ನು ದೂರಿಸುವದೆಂದರೆ ತಮಿಳನ್ನು ಅಭಿವೃದ್ಧಿಗೊಳಿಸುವದೆಂದು ಅರ್ಥವೇನು? ಅಂತೂ ವರ್ಷ [illegible] ನಿರೀಕ್ಷಿಸುತ್ತಿರುವಾಗ ಇಂದಿರಾಜೀಯವರ ಪ್ರಮುಖ ಕೇಂದ್ರ ಸರಕಾರಕ್ಕೆ ಸಂಚಕಾರ ತರಲು, ಹಾಗೂ ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಚುನಾವಣೆ ನಡೆಯುವಾಗ ಲಾಭ ಪಡೆದುಕೊಳ್ಳಲು ಹಿಂದಿ ಹಗೆಯ ಕೂಗನ್ನೆಬ್ಬಿಸುತ್ತಿದ್ದಾರೆ ಕಾಮರಾಜರು. ಅವರು ಈ ರೀತಿಯ ಆಟವನ್ನಾಡುವದು ತಮಿಳುನಾಡಿನಲ್ಲಿ. ಕಳೆದ ಸಲ ಭಾಷಾ ಬಡಬಾಗ್ನಿ ಭುಗಿಲೆದ್ದಾಗ ದಿಲ್ಲಿಯಿಂದ ಧಾವಿಸಿ ಕಟ್ಟಿ ಹೇಳದೆ ಓಡಿಬಂದವರಲ್ಲಿ ಆಗಿನ ಮಂತ್ರಿ ಸುಬ್ರಹ್ಮಣ್ಯಂರವರು ಪ್ರಮುಖರು. ಇಂದಿರಾ ಕಾಂಗ್ರೆಸ್ಸಿನಲ್ಲಿ ತಾತ್ಕಾಲಿಕ ಅಧ್ಯಕ್ಷರಾಗಿದ್ದು, ರಾಜ್ಯಸಭಾ ಚುನಾವಣೆಯತ್ತ ಕಣ್ಣಿಟ್ಟುಕೊಂಡು ಮಂತ್ರಿ ಪದವಿಗಾಗಿ ಸಿದ್ಧತೆ ನಡೆಸಿದವರು ಶ್ರೀಯುತರು. ಹಿಂದಿ ಹೇರಿಗೆಗೆ ಸರಿ ಊದಿದವರಲ್ಲಿ ಸಿ. ಸುಬ್ರಹ್ಮಣ್ಯಂರವರ ಹೆಸರು ಇರಲೇಬೇಕು. ಈಗ ಕಾಮರಾಜರು ಅದಕ್ಕೆ ಮುಂದೆ ಬಂದಾಗ ಸುಬ್ರಹ್ಮಣ್ಯಂ ಸುಮ್ಮಗುಳಿದಾರೆ? ರಾಜನಾದು ಇತ್ತರುವ ಹಗ್ಗಳಿಕೆ ಅವರದ್ದಲ್ಲವೇನು? ಅದನ್ನು ತಾವೇ ಬಂದ ಕೊಂಡ, ಕಾಮರಾಜರು ಅದರಲ್ಲಿ ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದರೆಂದೂ, ಉತ್ತರಕ್ಕೆ ಹೋದಾಗ ಹಿಂದಿಯನ್ನು ಹೊಗಳಿ ಮಾತಾಡುತ್ತಿದ್ದಾರೆ. ತಮಿಳ್ನಾಡಿಗೆ ಬಂದಾಗ ಹಿಂದಿಯನ್ನು ಹೀಗಳೆದು ಮಾತಾಡುತ್ತಿದ್ದಾರೆನ್ನುವ ಅನುಭವಪೂರ್ಣ ಅಭಿಪ್ರಾಯವನ್ನು ಜನತೆಯ ಮುಂದಿಕ್ಕಿದ್ದಾರೆ ಸಿ. ಸು. ಅವರಿಗಷ್ಟು ಕೋಪ ಬರಲು ಕಾರಣವೆಂದರೆ ಸೇಲಮ್ಮಿನಲ್ಲಿ ನಡೆದ ಪ್ರಾಂತ ಸಮ್ಮೇಳನದಲ್ಲಿ ಕಾಮರಾಜರು ಮಾತಾಡುತ್ತ, ಭಾಷಾ ಸಮಸ್ಯೆಯ ವಿಷಯದಲ್ಲಿ ಮಿಸೆಸ್ ಇಂದಿರಾ ಗಾಂಧಿಯವರು ತಮ್ಮ ಸರಕಾರದ ನಿಲುವೇನೆಂಬುದನ್ನು ಸ್ಪಷ್ಟಪಡಿಸಬೇಕೆಂದು ಹೇಳಿರುವದಿದೆ. ಕಾಮರಾಜರು ಕಾಲ ಕೆದರಿದರೆ ಇಂದಿರಾಜೀಯವರ ಫಲವು ಏನಾಗುತ್ತದೇನು? ಅವರ ಅಭಿಪ್ರಾಯ ಇಂತಹದ್ದೇ ಇದೆ. ಕಾಮರಾಜರ ಎದುರು ಪಕ್ಷದಲ್ಲಿರುವದರಿಂದ ಅವರ ಅಭಿಪ್ರಾಯವೇನೆಂಬುದನ್ನು ಅವರೇ ಸ್ಪಷ್ಟಪಡಿಸಬೇಕಾಗುತ್ತದೆಂದು ಸುಬ್ರಹ್ಮಣ್ಯಂ ಅವರು ಹೇಳಿದ್ದಾರೆ.

ಕಾಮರಾಜರಿಗೂ ಸುಬ್ರಹ್ಮಣ್ಯಂರವರಿಗೂ ಹಿಂದಿನ ದಿನದಲ್ಲಿ ಅಸ್ಪೃಶ್ಯತೆ. ಕಾಮರಾಜರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೇಲಂತೂ ಅದು ಜಾಡ್ಯವಾಗಿ ಹೋಯಿತು. ಈಗ ಅವರ ಬೇರೆ ಕಾಂಗ್ರೆಸ್ಸಿದೆಂದ ಮೇಲೆ ಹೇಳಬೇಕೆ? ಆದ್ದರಿಂದ ಸಿ. ಸುಬ್ರಹ್ಮಣ್ಯಂರವರು ಇಂದಿರಾ ಕಾಂಗ್ರೆಸ್ ಸಂಘದ ಅಧ್ಯಕ್ಷರಾಗಿ ಒಪ್ಪಿ ಇದ್ದರೂ ಕೂಡಾ ಇಂದಿರಾ ಕಾಂಗ್ರೆಸ್ಸಿನ ಮತಿಯಿಂದ ಮಾತಾಡಿದ್ದಾರೆಂದು ಮನಸ್ಸಿಗೆ ಹಚ್ಚಿಕೊಳ್ಳಲು ಸಾಧ್ಯವಾಗುವದಿಲ್ಲ. ಈ ವಿಷಯದಲ್ಲಿ ಇಂದಿರಾ ಕಾಂಗ್ರೆಸ್ಸಿನ ಈಗಿನ ಅಧ್ಯಕ್ಷರು ಏನು ಹೇಳುತ್ತಾರೆ?

ಇಂದಿರಾ ಗಾಂಧಿಯವರ ಹೊಸ ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರಾಗಿರುವ ಜಗಜೀವನರಾಮ್ ಬಂಗಳೂರಿನ ಗಾಜಿನ ಮನೆಯಲ್ಲಿ ಸೇರಿದವರಿಗೆ ಅವರಿಗೂ ಕಾಮರಾಜರಿಗೂ ಕಟಿಸಿಕ ಏನೂ ಇರಲಿಲ್ಲ. ಮದರಾಸಿನಲ್ಲಿ ಸಿಗದ ಇದುವಂತಹದ್ದು, ಬೆಂಗಳೂರಿನಲ್ಲಿ ಸಿಗುವಂತಹದ್ದು ಅದ್ಯಾವುದು. ಗಾಜಿನ ಮನೆಯೊಳಗಿದ್ದವರ ತಲೆಗೆ ಹೊಳೆಯಿತೋ ಗೊತ್ತಿಲ್ಲ. ಕಾಮರಾಜರು ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಜಗಜೀವನರಾಮರ ಗಂಟು ಬೀಳದೆ ಸಂಜೀವ ರೆಡ್ಡಿಯವರ ಹೆಸರ ಹೇಳಿದರು, ಅಷ್ಟೇ. ಬೇರೆ ನಿಷ್ಠೆ ಕ್ರೀಯ, ತಮ್ಮ ನಿಷ್ಠೆಯ ಕಾಂಗ್ರೆಸ್ಸಿನ ಅಧ್ಯಕ್ಷ

(ಎಂಟನೇ ಪುಟ ನೋಡಿರಿ)

ಕೃಷಿ-ಕೈಗಾರಿಕೆಗಳಲ್ಲಿ ತೊಡಗಿರಿ

ಈ ಮಹಾಸಭೆಗೆ ಅಧ್ಯಕ್ಷನಾಗಲು ನನ್ನನ್ನು ಕರೆದುದಕ್ಕೆ ಸಂಘದ ಅಧಿಕಾರ ವರ್ಗದವರಿಗೂ ಬಂಟ್ವಾಳ ತಾಲೂಕು ಸ್ವಾಗತ ಸಮಿತಿಯವರಿಗೂ ನಾನು ತುಂಬ ಕೃತಜ್ಞನಿದ್ದೇನೆ.

ಬಂಟರ ಯಾನೆ ನಾಡವರ ಸಂಘವು ನಮ್ಮ ಸಮಾಜದ ಉನ್ನತಿಗೋಸ್ಕರ ಸ್ಥಾಪಿತವಾಗಿ 62 ದೀರ್ಘ ಸಂವತ್ಸರಗಳು ಆದುವೆ. ಯಾವುದಾದರೂ ಒಂದು ಸಾರ್ವಜನಿಕ ಸಂಸ್ಥೆಯು 62 ವರ್ಷಗಳ ಕಾಲ ನಿಬಿಡವಾಗಿ ಶ್ರಮಿಸಿ ಜಯಪ್ರದವಾಗಿ ತನ್ನ ಗುರಿಗೊತ್ತುಗಳನ್ನು ಸಾಧಿಸಿಕೊಂಡು ಬಂದಿದೆ ಎಂದರೆ ಅದರ ತಳಹದಿಯು ಬಹು ದೃಢವಾಗಿ ರೂಪಗೊಂಡಿದೆಯೆಂದೂ ಅದರ ಕಾರ್ಯ ನಿರ್ವಹಣೆಯು ಅನುಪ್ರಿಯವಾದ ರೀತಿಯಲ್ಲಿ ನಡೆದುಕೊಂಡು ಬಂದಿರಬೇಕೆಂದೂ ಭಾಸವಾಗುವುದು. ಸಾಂಪತ್ತಿಕ ಕ್ಷೇತ್ರದಲ್ಲೂ ವಿದ್ಯಾಕ್ಷೇತ್ರದಲ್ಲೂ ಮುಂಚಿಗಿಂತ ಎಷ್ಟೋ ಹೆಚ್ಚು ಮುಂದೆ ಬಂದಿರುವ ನಮ್ಮ ಬಂಧುವರ್ಗದವರು ಮುಂದೆಯೂ ಉದಾರ ಭಾವದಿಂದ ಸಂಘಕ್ಕೆ ಸಹಾಯವನ್ನು ಕೊಡುವರೆಂಬುದು ನನ್ನ ದೃಢ ನಂಬಿಕೆ.

ಈ ಇಪ್ಪತ್ತನೆಯ ಆದ್ಯ ದಶಕದಲ್ಲಿ ನಮ್ಮ ಸಮಾಜವು ತನ್ನ ಶಕ್ತಿಯನ್ನು ತಾನೇ ಅರಿಯದೆ ಜಿಲ್ಲೆಯ ಬೇರೆಬೇರೆ ತಾಲೂಕುಗಳಲ್ಲಿ ಚಿಕ್ಕಬಿರಿದಿದ್ದಿತು. ಶ್ರೀಮಂತರ ಹಾಗು ಬುದ್ಧಿಶಾಲಿಗಳ ಅಭಾವವೇನೂ ಇರಲಿಲ್ಲದಿದ್ದರೂ ಮಂಗಳೂರು ತಾಲೂಕಿನ ಬಂಧುಗಳಿಗೆ ಕುಂದಾಪುರ ತಾಲೂಕಿನ ಬಾಂಧವರ ಪರಿಚಯ ವಿರಳ; ಉಡುಪಿ ತಾಲೂಕಿನ ಬಂಧುಗಳಿಗೆ ಪುತ್ತೂರು ತಾಲೂಕಿನ ಬಾಂಧವರ ತಿಳುವಳಿಕೆ ಬಹಳ ಕಡಿಮೆ ಎಂಬಂತಿತ್ತು. ಆಗಿನ ಕಾಲದಲ್ಲಿ ರಸ್ತೆಗಳ ಸೌಲಭ್ಯ, ಮೋಟಾರ್ ಬಂಡಿಗಳ ಚಲಾವಣೆಗಳು, ಮುಂತಾದುವು ಇಲ್ಲವಾಗಿದ್ದುದರಿಂದ ಒಂದು ತಾಲೂಕಿನವರು ಇನ್ನೊಂದು ತಾಲೂಕಿಗೆ ಪ್ರಯಾಣ ಬೆಳೆಸಿ ಪರಸ್ಪರ ಸಂಪರ್ಕ ಸೌಹಾರ್ದಗಳನ್ನು ಉಂಟುಮಾಡಿಕೊಳ್ಳುವ ಅನುಕೂಲ್ಯಗಳು ತೀರಾ ಕಡಿಮೆ ಆಗಿದ್ದುವು. ನಮ್ಮ ಸಂಘದ ಸ್ಥಾಪನೆಯ ಫಲವಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳ ಬಾಂಧವರೂ ಒಟ್ಟುಸೇರಿ, ಒಂದೇ ವೇದಿಕೆಯಿಂದ ಮಾತುಕತೆ ನಡೆಸಿ, ಒಗ್ಗಟ್ಟನ್ನು ಸಾಧಿಸಿದರೆನ್ನಬಹುದು. 'ಸಂಘೇ ಶಕ್ತಿ' ಎಂಬ ಜನವಾಡಿಕೆಯ ಮಹತ್ವವನ್ನೂ ಅರಿತವರಾದರು.

ನಮ್ಮ ಸಂಘವು ಎಲ್ಲಾ ತರದ ಪ್ರಗತಿಗೂ ವಿದ್ಯೆಯೇ ಮೂಲಕಾರಣವೆಂದೂ ಮೂಲಾಧಾರವೆಂದು ಮನಗಂಡು ವಿದ್ಯಾರ್ಜನೆಗೆ ದಾರಿ ಕಲ್ಪಿಸುವುದನ್ನೇ ಪ್ರಧಾನ ಧ್ಯೇಯವನ್ನಾಗಿ ಇಟ್ಟು ಕೊಂಡರು. ಶಾಲೆ, ಕಲಾಶಾಲೆಗಳನ್ನು ನಿರ್ಮಿಸುವ ಗೊಡವೆಯನ್ನು ಬಿಟ್ಟು ಬಿಟ್ಟು ಸ್ಥಾಪಿತವಾಗಿರುವ ಉನ್ನತಮಟ್ಟದ ಶಾಲೆಗಳಲ್ಲೂ ಕಲಾಶಾಲೆಗಳಲ್ಲೂ ನಮ್ಮ ಯುವಕರು ವಿದ್ಯಾರ್ಜನೆಯನ್ನು ಬಹು ಸಂಖ್ಯಾಕರಾಗಿ ಕೈಕೊಳ್ಳುವುದಕ್ಕೆ ಅನುಕೂಲವಾಗುವಂತೆ ಮೊದಲಾಗಿ ಮಂಗಳೂರಲ್ಲಿಯೂ ಅನಂತರ ಇತರ ತಾಲೂಕು ಕೇಂದ್ರಗಳಲ್ಲಿಯೂ ಸಕಲ ವಿಧದ ಸೌಲಭ್ಯಗಳನ್ನೊಳಗೊಂಡ ವಿದ್ಯಾರ್ಥಿ ಭವನಗಳನ್ನು ಸ್ಥಾಪಿಸುವುದಕ್ಕೆ ಕೈಹಚ್ಚಿದರು. ಬಡಬಲ್ಲಿಗರಾದ ವಿದ್ಯಾರ್ಥಿಗಳಿಗೆ ಸಹಾಯವನ್ನು ಒದಗಿಸುವುದಕ್ಕಾಗಿ ವಿದ್ಯಾರ್ಥಿ ಸಹಾಯ ನಿಧಿಯೊಂದನ್ನೂ ಏರ್ಪಡಿಸಿದರು. ಸ್ವಲ್ಪ ಸಮಯದಲ್ಲೇ ಮಂಗಳೂರಲ್ಲಿ ವಿದ್ಯಾರ್ಥಿ ಭವನವಲ್ಲದೆ ವಿದ್ಯಾರ್ಥಿನಿ ಭವನವೊಂದೂ ಅಸ್ತಿತ್ವಕ್ಕೆ ಬಂತು. ನಮ್ಮ ಜಿಲ್ಲೆಯ ಶಾಲೆ, ಕಲಾಶಾಲೆಗಳಲ್ಲಿ ಮಾತ್ರವಲ್ಲದೆ ಮೈಸೂರು ರಾಜ್ಯದ ಅನೇಕ ಪಟ್ಟಣಗಳಲ್ಲಿಯೂ, ಬೊಂಬಾಯಿ ಮದ್ರಾಸು ಮೊದಲಾದ ಸ್ಥಳಗಳಲ್ಲಿಯೂ ನಮ್ಮ ಯುವಕರು ಕಲಾಶಾಲೆಗಳನ್ನೂ ವೃತ್ತಿ ಕಲಾಶಾಲೆಗಳನ್ನು ಸೇರಿ ಉಚ್ಚ ವಿದ್ಯಾಭ್ಯಾಸವನ್ನು ಗಳಿಸುತ್ತಿದ್ದಾರೆ. ಇಷ್ಟೇ ಅಲ್ಲದೆ, ಅಮೇರಿಕಾ, ಇಂಗ್ಲೆಂಡ್, ಕೆನಡಾ ಮೊದಲಾದ ಅನೇಕ ವಿದೇಶಗಳಲ್ಲೂ ನಮ್ಮ ಯುವಜನರು ಹೆಚ್ಚಿನ ವ್ಯಾಸಂಗವನ್ನು ನಡೆಸುತ್ತಿದ್ದಾರೆ. ಈ ತೀವ್ರ ಕ್ರಾಂತಿಯೋ ಎಂಬಂತಿರುವ ಬೆಳವಣಿಗೆಯ ದೆಸೆಯಿಂದ ಅವಿದ್ಯಾವಂತರೂ, ಹಿಂದುಳಿದ ಗುಂಪಿನವರೂ ಎಂದು ಲೆಕ್ಕಿಸಲ್ಪಟ್ಟ ನಮ್ಮ ಸಮಾಜದವರು ಇಂದು ವಿದ್ಯಾವಂತರೆಂದೂ ಮುಂದುವರಿದ ಸಮಾಜದವರೆಂದೂ ಮಾರ್ಪಟ್ಟಿದ್ದಾರೆ.

ವಿದ್ಯೆಯು ಒಂದು ಗುರಿಯೂ ಸಾಧನವೂ ಆಗಿದೆ. ಅನೇಕ ವಿದ್ಯಾವಂತ ಯುವಕರಲ್ಲಿ ತಾವು ಯಾವ ವೃತ್ತಿಯನ್ನೂ ಕೈಗೊಂಡು ಜಯಶೀಲರಾಗಿ ನಡೆಯಿಸಬಹುದೆಂಬ ಧೈರ್ಯವೂ ಉತ್ಸಾಹವೂ ತಲೆದೋರಿದೆ. ಇದು ನಾವು ಗಳಿಸಿರುವ ಮಹತ್ತಾದ ಪ್ರಗತಿಯ ಸಂಕೇತ.

ವಿದ್ಯಾಭ್ಯಾಸವನ್ನು ಗಳಿಸಿದ ಮತ್ತು ಬಿ. ಎ. ಎಮ್. ಎ. ಮೊದಲಾದ ಪದವಿಗಳನ್ನು ಪಡೆದ ನಮ್ಮ ಸಮಾಜದವರು ವ್ಯವಸಾಯ ವೃತ್ತಿಯನ್ನೂ ತಮ್ಮ ಗ್ರಾಮಗಳನ್ನೂ ಬಿಟ್ಟು ಪಟ್ಟಣಗಳನ್ನು ಸೇರಿಕೊಂಡು ಗುಮಾಸ್ತ ಇತ್ಯಾದಿ "ಬಿಳಿ ಅಂಗಿಯ" ವೃತ್ತಿಗಳಿಗೆ ಶರಣು ಹೋಗುವರೋ ಎಂಬ ಭಯ ನನ್ನ ಹಿಂದಿನ ಭಾಷಣದಲ್ಲಿ ಇತ್ತು. ಆ ಭಯಕ್ಕೆ ಈಗ ಕಾರಣವಿಲ್ಲವಾಗಿದೆ. ಅನೇಕ ವಿದ್ಯಾವಂತರು ಗ್ರಾಮವಾಸಿಗಳಾಗಿದ್ದು ಅತಿ ಶ್ರದ್ಧೆಯಿಂದ ತಮ್ಮ ಸ್ವಂತ ವೃತ್ತಿ ವ್ಯವಸಾಯವನ್ನು ನಡೆಸುತ್ತಿದ್ದಾರೆ. ಅಷ್ಟೇ ಅಲ್ಲದೆ ಪಟ್ಟಣವಾಸಿಗಳಾಗಿರುವ ವಿದ್ಯಾವಂತರನೇಕರು ತಾವು ಕೈಗೊಂಡಿರುವ ವೃತ್ತಿಯೊಡನೆ, ಉಪವೃತ್ತಿಯೆಂಬಂತೆ ವಿಧ ವಿಧದ ವ್ಯವಸಾಯ ವೃತ್ತಿಗಳಲ್ಲೂ ಆಸಕ್ತರಾಗಿದ್ದಾರೆ. ಭತ್ತದ ಪೈರು ಬೆಳೆಯಿಸುವುದು ಎಂದಿನಂತೆ ಮುಖ್ಯವಾದ ವ್ಯವಸಾಯವಾದರೂ ಇದರೊಂದಿಗೆ ತೆಂಗು, ಅಡಿಕೆ, ವಿವಿಧ ಹಣ್ಣು ಹಂಪಲು, ಕಾಫಿ, ಚಾ ಮೊದಲಾದುವುಗಳನ್ನು ಬೆಳೆಯಿಸುವುದರಲ್ಲಿಯೂ ಶ್ರದ್ಧೆಗೊಂಡಿದ್ದಾರೆ. ವ್ಯವಸಾಯ, ಕೈಗಾರಿಕೆಗಳೆಂಬವು ನಮ್ಮ ಜನತೆಯ ಎರಡು ಕಣ್ಣುಗಳಂತಿವೆ. ಇವೆರಡರಿಂದ ನಮ್ಮ ಸಮಾಜದವರ ಹಾಗು ನಮ್ಮ ದೇಶದ ಸಾಂಪತ್ತಿಕ ಅಭಿವೃದ್ಧಿಗೆ ತುಂಬ ಸಹಾಯವಾಗುವುದು. ವಿದ್ಯಾವಂತರಾದ ವ್ಯವಸಾಯಿಗಳೂ ಇತರ ಗ್ರಾಮ ಪ್ರಮುಖರೂ ಸೇರಿ ಪ್ರತಿ ತಾಲೂಕಿನ ಮುಖ್ಯ ಕೇಂದ್ರಗಳಲ್ಲಿ ಸಹಕಾರ ಸಂಘಗಳನ್ನು ಏರ್ಪಡಿಸಿ, ಈ ಸಹಕಾರ ಸಂಸ್ಥೆಗಳು ಸಾಂಘಿಕವಾಗಿ ಬ್ಯಾಂಕುಗಳಿಂದ ಧನ ಸಹಾಯವನ್ನು ಪಡೆದು ಸುಕ್ಷೇಮ ತ್ವರಿತ ರೈತರಿಗೆ ಕೃತಕ ಗೊಬ್ಬರ, ಬೀಜ, ಸಂದ ಸಾಮಗ್ರಿ ಇತ್ಯಾದಿಗಳನ್ನು ಒದಗಿಸಿ ಕೊಡಲು ಮುಂದೆ ಬರಬೇಕೆಂದು ನನ್ನ ಸಲಹೆ. ಇದರಿಂದ ನಮ್ಮ ಗ್ರಾಮಗಳ ಆರ್ಥಿಕ ಸಮೃದ್ಧಿಯು ಬೆಳೆಯುವುದು ಮಾತ್ರವಲ್ಲದೆ ನಿರುದ್ಯೋಗದ ಸಮಸ್ಯೆಯೂ ಸುಧಾರಿತವಾಗುವುದು. ಗ್ರಾಮಗಳಲ್ಲಿ ಒಕ್ಕಟ್ಟು ಬೆಳೆಯುವುದು. ಒಗ್ಗಟ್ಟಿನಲ್ಲಿ ಬಲವಿದೆ.

ನಮ್ಮ ಸಮಾಜವು ಕಳೆದ 60 ವರ್ಷಗಳಲ್ಲಿ ಪಡೆದ ಪ್ರಗತಿಯನ್ನು ನಾನು ಪ್ರಶಂಸಿಸಿದೆನು. ನಮ್ಮ ಸಂಘದ ಉದ್ದೇಶಗಳೆಲ್ಲವೂ ನೆರವೇರಿದವು ಎಂದೂ ತಿಳಿಯಬಾರದು. ಇನ್ನೂ ಎತ್ತರದ ಶಿಖರವನ್ನು ಏರಲು ನಮ್ಮ ಯುವಕರು ಪ್ರಯತ್ನಿಸಬೇಕು. ಅಮೇರಿಕಾ, ರಷ್ಯಾ, ಇಂಗ್ಲೆಂಡ್, ಜಪಾನ್ ಮೊದಲಾದ ದೇಶಗಳ ಕಡೆ ನಮ್ಮ ದೃಷ್ಟಿಯು ಈ ಸಂದರ್ಭದಲ್ಲಿ ಸಹಜವಾಗಿಯೂ ಹರಿಯುವುದು. ಅವರ ವೈಜ್ಞಾನಿಕ, ಔದ್ಯೋಗಿಕ ಹಾಗು ಆರ್ಥಿಕ ಪ್ರಗತಿಯು ಪರ್ವತ ಪ್ರಮಾಣವಾಗಿರುವುದೆಂದೇ ಹೇಳಬಹುದು. ನಮ್ಮ ಭಾರತ ದೇಶವೂ ಅದರ ಒಂದು ಚಿಕ್ಕ ಅಂಗವಾದ ನಮ್ಮ ಸಮಾಜವೂ ಈ ವಿದೇಶಗಳ ಪ್ರಮಾಣವನ್ನು ಗಳಿಸಲು ಎಷ್ಟು ದಶವರ್ಷಗಳೋ, ಶತಮಾನಗಳೋ ಬೇಕಾಗಬಹುದೆಂದು ಹೇಳಲು ಅಸಾಧ್ಯ. ಜಯವೂ ಸೌಭಾಗ್ಯವೂ ಧೈರ್ಯಶಾಲಿಗಳನ್ನೇ ಹಿಂಬಾಲಿಸುತ್ತವೆ. ನಮ್ಮ ದೇಶದ ಜನರೂ ನಮ್ಮ ಸಮಾಜದವರೂ ಧೈರ್ಯದಿಂದ ಮತ್ತು ವಿವೇಕದಿಂದ ಹೆಜ್ಜೆ ಹೆಜ್ಜೆಯಾಗಿ ಉನ್ನತ ಪ್ರಗತಿಯ ಹಾದಿಯಲ್ಲಿ ಮುಂದುವರಿಯಲು ಯತ್ನಿಸಬೇಕು. ಸಹಸ್ರಾರು ನಮ್ಮ ತರುಣ ವಿದ್ಯಾರ್ಥಿಗಳು ಕೆಲವರು ಇಂಗ್ಲೀಷಿನಲ್ಲಿ 'ರಿಸರ್ಚ್' ಎಂಬ ವೈಜ್ಞಾನಿಕ ಸಂಶೋಧನಾ ಕೆಲಸದಲ್ಲಿ ತೊಡಗಬೇಕೆಂದು ಭಾವಿಸು ಇಲ್ಲಿ ಕೇಳಿಕೊಳ್ಳುತ್ತೇನೆ. ಸಂಶೋಧನೆಯು ವ್ಯಾವಸಾಯಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲೂ ನಡೆಸಲು ವಿಜ್ಞಾನದಲ್ಲಿ ಸಮರ್ಥರಾದ ನಮ್ಮ ಯುವಕರು ಹವಣಿಸಬೇಕು.

ಉಚ್ಚ ವಿದ್ಯಾಭ್ಯಾಸವನ್ನು ಪಡೆಯುವುದರಲ್ಲಿ ನಮ್ಮ ಸಮಾಜವು ಸವಿಸ್ತಾರದ ಪ್ರಗತಿಯನ್ನು ಹೊಂದಿರುವುದಾದರೂ ನಮ್ಮ ಜನತೆಯಲ್ಲಿ ನೂರಕ್ಕೆ ಸುಮಾರು 60 ಮಂದಿಯಷ್ಟು ಇನ್ನೂ ನಿರಕ್ಷರಕುಕ್ಷಿಗ

(೨೧ನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526
ಸಂಪುಟ ೪೯
ಸಂಚಿಕೆ ೩೧
VOL. 49
No. 31

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೯—೪—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಆತ್ಮಶೋಧದತ್ತ

ಕರ್ನಾಟಕದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ ಮತ್ತವರ ಸಚಿವ ಸಂಪುಟಕ್ಕೆ ಬೆಂಬಲ ಕಡಿಮೆಯಾಗುತ್ತಿದೆ ಎಂದು ಕೆಲವರು ಅಂದುಕೊಂಡರು. ಅವರ ಪಕ್ಷದ ಬಲ ಕುಂದಿದೆ ಎಂದು ಭಾವಿಸಿದರು ಹಲವರು. ಮುಂದಿನ ವರ್ಷದ ಬಜೆಟ್ಟನ್ನು ಈ ಸಂಪುಟ ಮಂಡಿಸುವುದು ಸಂದೇಹಾಸ್ಪದ ಎಂದು ಕೋಲುಮುಖ ಹಾಕಿದವರು ಮತ್ತೆ ಕೆಲವರು. ಇದಕ್ಕೆಲ್ಲ ಕಾರಣ ರಾಜ್ಯಸಭೆಗೆ ನಡೆದ ದ್ವೈವಾರ್ಷಿಕ ಚುನಾವಣೆಗಳ ಪರಿಣಾಮ. ತನ್ನ ಹಳೇ ಸ್ಥಾನಗಳನ್ನು ಸಂಸ್ಥಾ ಕಾಂಗ್ರೆಸ್ಸು ಉಳಿಸಿಕೊಂಡದ್ದು, ಉಪಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ಸಿನ ಸ್ಥಾನವೊಂದನ್ನು ಗಳಿಸಿದ್ದು ಎಲ್ಲ ನಿಜ. ಆದರೆ, ಅದು ಇನ್ನೂ ಹೆಚ್ಚಿನ ಒಂದು ಸ್ಥಾನ ಗಳಿಸುವ ಆಶೆಯಿಂದಿತ್ತು. ಸುಮಾರು ೨೦-೩೦ ಸದಸ್ಯರು 'ಪಕ್ಷಾಂತರ ಮತಾಂತರ' ಮಾಡಿದ್ದರಿಂದ ಅದು ಸಾಧ್ಯವಾಗಲಿಲ್ಲ. ಮತಗಣನೆ ನಡೆದಾಗ, ಎಲ್ಲ ತಿರುವು ಮುರುವು. ಇದರಿಂದಾಗಿ ಇಂಡಿಕೇಟಿನ ಅಧ್ಯಕ್ಷ ಶ್ರೀ ದೇವರಾಜ ಅರಸರಿಗೆ ಮಹಾನಂದ. ಶ್ರೀ ವೀರೇಂದ್ರ ಪಾಟೀಲರ ಸಂಪುಟವನ್ನು ಹೇಗಾದರೂ ಮಾಡಿ ಉರುಳಿಸುವ ಹಂಚಿಕೆ ಅವರ ಪಕ್ಷದ್ದು. ಆದರೆ, ಅವರ ಎಣಿಕೆ ನೆರವೇರುವ ಲಕ್ಷಣಗಳು [illegible] ದೂರ.

ಸಿಂಡಿಕೇಟಿನ ಪಕ್ಷೀಯ ಸಭೆಯಲ್ಲಿ ಹಲವಾರು ಸಂಗತಿಗಳು ವ್ಯಕ್ತವಾದುವು. ಅಲ್ಲಿ ಬಿಚ್ಚು ಮನಸ್ಸಿನ ಚರ್ಚೆ — ವಿಚಾರ ವಿನಿಮಯ ನಡೆಯಿತು. ಇದು ಅಗತ್ಯವಾದದ್ದು. "ತಮ್ಮ ಪ್ರತಿಕ್ರಿಯೆ ನಾಯಕತ್ವದಲ್ಲಿ ಅವಿಶ್ವಾಸ ಸೂಚಕವಲ್ಲ; ಅಭ್ಯರ್ಥಿಗಳ ಆಯ್ಕೆ—ಅವರಲ್ಲಿ ಮತಗಳ ಹಂಚಿಕೆಗಳು ಅಸಮಾಧಾನಕಾರಕವಿದ್ದುದರಿಂದ ಹಾಗೆ ಮಾಡಿದೆವು"—ಕೆಲವರ ಹೇಳಿಕೆ. 'ಆತ್ಮಸಾಕ್ಷಿ'ಯ ಇನ್ನೊಂದು ರೂಪವಿದು. ಪ್ರಧಾನಿ ಶ್ರೀಮತಿ ಗಾಂಧಿಯವರು ಮಾಡಿದ್ದು ಇದೇ ಬಗೆಯಲ್ಲಿ. ಶ್ರೀ ನೀಲಂ ಸಂಜೀವ ರೆಡ್ಡಿ[illegible]ಯ್ಕೆ ತನಗೆ ಅಪ್ರಿಯವಾದ್ದರಿಂದ 'ಆತ್ಮಸಾಕ್ಷಿ'ಯ ಮಂತ್ರ ಹಿಡಿದರು. ಆದರೆ, ಶ್ರೀಮತಿ ಗಾಂಧಿಗೆ ಪಕ್ಷದ ಕೆಲವು ವ್ಯಕ್ತಿಗಳ ಮೇಲೆ ಅಪೇಕ್ಷಿತ ವಿಶ್ವಾಸವಿತ್ತು. ಇಲ್ಲಿ ಅದು ಇಲ್ಲ. ಶ್ರೀ ವೀರೇಂದ್ರ ಪಾಟೀಲರೂ ಅಂದ ಸಂದರ್ಭವನ್ನು ಬಿಚ್ಚು ಮನಸ್ಸಿನಿಂದಲೇ ವಿವರಿಸಿದ್ದರಿಂದ ಸದಸ್ಯರಿಗೂ ಸಮಾಧಾನವಾಯಿತು. ಬಿರುಕು ಬರುವುದೆಂದು ನಿರೀಕ್ಷಿಸಿದ್ದ ಸಭೆ ಸಹಿಯಲ್ಲೇ ಕೊನೆಗೊಂಡಿತು. 'ಇದೇ ಕೊನೆಯಾಗಲಿ' ಎಂಬ ಅಹಿತ ಘಟನೆಗಳನ್ನು ಮರೆತು ಬಿಡಲು ಎಲ್ಲರೂ ಉದ್ಘೋಷಿಸಿದರು.

ಶ್ರೀ ವೀರೇಂದ್ರ ಪಾಟೀಲರ ನಾಯಕತ್ವ ಎಷ್ಟು ದೃಢವಾಗಿ ಬೇರುಬಿಟ್ಟಿದೆಯೆಂಬುದಕ್ಕೆ ಈ ಘಟನೆಯೊಂದು ಉದಾಹರಣೆ. ತಮ್ಮ ಸಂಪುಟವು ಬಂಡೆಗಲ್ಲಿನಂತೆ ದೃಢ; ಅದನ್ನು ವಿರೋಧೀ ಪಕ್ಷಗಳು ಅಲುಗಾಡಿಸಲಾರವು ಎಂದು ಹಲವು ಬಾರಿ ಪಾಟೀಲರೂ ಹೆಗ್ಡೆಯವರೂ ಹೇಳುತ್ತಲೇ ಬಂದಿದ್ದಾರೆ. ಆದರೆ, ಇಷ್ಟೆಲ್ಲ [illegible] ತಿಳಿಯುತ್ತಿದ್ದಂತೆ ಉಳಿದವರು. ಮೊನ್ನೆಯ ಚುನಾವಣೆಯು ಸಂಕರ ಶ್ರೀ ಪಾಟೀಲರಿಗೆ ಎಂ.ಎಲ್.ಎ.ಗಳ ಬೆಂಬಲ ಸೂತ್ರವೆಂದು ರಾಜ್ಯದ ಇಂಡಿಕೇಟ್ ಇಂದೀವರರು ಡಂಗುರ ಸಾರಿದರು. ಇದರ ಪ್ರತಿಧ್ವನಿ ದೆಹಲಿಯಲ್ಲೂ ಕೇಳಿತು. ಆದರೆ, ಅವರ ಕಲ್ಪನೆ ಕನಸಿನ ಮಂಡಿಗೆಯಾಯಿತು. ಶ್ರೀ ವೀರೇಂದ್ರ ಪಾಟೀಲರು ಎಳೆವಯಸ್ಸಿನವರಾದರೂ ಪಕ್ಷದ ಮೇಲೆ ಬಿಗಿ ಹಿಡಿತವುಳ್ಳವರು, ಆಡಳಿತದಲ್ಲಿ ತುಂಬ ಸಮರ್ಥರು, ಜಾಣರು ಎಂಬ ಭಾವನೆ ಎಲ್ಲರಲ್ಲೂ ಇದೆ. ಆದ್ದರಿಂದಲೇ ಅವರು ಸಮರ್ಥರೀತಿಯಲ್ಲಿ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಶ್ರೀ ದೇವರಾಜ ಅರಸ್, ಶ್ರೀ ಎಂ. [illegible] ಕೃಷ್ಣಪ್ಪನವರು ದ್ವೈವಾರ್ಷಿಕ ಚುನಾವಣೆಗಳ ಪರಿಣಾಮವಾಗಿ ಮುಖ ಹಿಡಿ ಹಾಕಬೇಕಾಯ್ತು. ಕರ್ನಾಟಕದಲ್ಲಿ ಕಾಂಗ್ರೆಸ್ಸನ್ನು ಕಟ್ಟಿದವರು, ಅದನ್ನು ಬೆಳೆಸಿದವರು, ಉಳಿಸಿಕೊಳ್ಳುತ್ತಿರುವವರು ಯಾರು ಎಂಬುದೀಗ ಶ್ರೀಮತಿ ಗಾಂಧಿಗೆ ಮನವರಿಕೆಯಾಗಿರಬೇಕು. ಸಂದರ್ಭ ಸಾಧಿಸಿಗೆ ಅಂಥವರನ್ನೇ ಊರಗೋಲು ಬೇಕಾಗುತ್ತದೆ ತಾನೆ?

ಸಿಂಡಿಕೇಟ್ ಸ್ಥಾವರಗಳು ಮೊನ್ನಿನ ಪಕ್ಷ ಸಭೆಯಲ್ಲಿ ಹಿಡಿದುಕೊಂಡ ರೀತಿ, ಮಾಡಿದ ವಿಚಾರ ವಿಮರ್ಶೆ, ತೆಗೆದುಕೊಂಡ ನಿರ್ಧಾರಗಳೆಲ್ಲವೂ ವಿವೇಚನಾಯುಕ್ತವಾದುವು. ಪಕ್ಷದ ಸಂಘಟನೆ ನೀತಿ-ರೀತಿಗಳನ್ನು ಪರಿಶೀಲಿಸಬೇಕೆಂಬುದನ್ನು ತೋರಿಸಿಕೊಡುವಂತಹುದು. [illegible] ಅಗತ್ಯವೆಂಬುದನ್ನು ಪ್ರತಿಬಿಂಬಿಸುವಂಥವು. ಪಕ್ಷಾಂತರ ಮತ ಹಿಡಿದವರ ಹಿನ್ನೆಲೆಯನ್ನು ಸ್ಪಷ್ಟವಾಗಿ ಬೆಳಕಿಗೆ ತಂದಂಥವು. ಜತೆಗೆ ಶ್ರೀ ಪಾಟೀಲರಿಗೆ ಅಕ್ಷಯ ಬಲವನ್ನೂ ನೀಡಿದಂಥವು. [illegible] ಪಕ್ಷಗಳಲ್ಲಿ ಅಭ್ಯರ್ಥಿಗಳ ಆಯ್ಕೆ, ಮತದಾನದ ಬಗ್ಗೆ ಭಿನ್ನಮತಗಳಿರುವುದು ಸಹಜ. ಅಂತಹದೇ ಅಸಮಾಧಾನ ಇನ್ನು ಮುಂದೆ ಮೂಡದಂತೆ ಕಾರ್ಯ ಪ್ರಣಾಳಿಯನ್ನು ರೂಪಿಸುವುದು ನಾಯಕರ ಕರ್ತವ್ಯ. ಶಾಸಕ-ಅನುಯಾಯಿಗಳಲ್ಲಿನ ಅಹಿತಕರ ಪ್ರಸಂಗಗಳು—ಪ್ರವೃತ್ತಿಗಳು ಪಕ್ಷೀಯ ಹಿತಕ್ಕೆ ಬಾಧಕವಾಗುತ್ತವೆ. "ಆತ್ಮಸಾಕ್ಷಿ"ಯಂತೆ ನಡೆಯುವುದಕ್ಕಿಂತ 'ಆತ್ಮಶೋಧ' ಮಾಡಿಕೊಳ್ಳುವುದು ರಾಜಕೀಯ ನಾಯಕರಿಗೆ ಶ್ರೇಯಸ್ಸು ತರುತ್ತದೆ. ಶ್ರೀ ವೀರೇಂದ್ರ ಪಾಟೀಲರೂ, ಅವರ ಅನುಯಾಯಿಗಳೂ ಇದನ್ನೇ ಮಾಡಿ, ವಿರೋಧಿ ಪಕ್ಷಗಳಿಗೆ ತೀವ್ರ ನಿರಾಸೆ ತಂದು ಬಡಿಸಿದ್ದಾರೆ.

ಮೂರ್ಖರಾದೆವು

ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು ತಮ್ಮ ಸಚಿವ ಸಂಪುಟವನ್ನು ಪುನರ್ಘಟಿಸುವರು ಎಂಬ ಮಾತೀಗ ಶ್ರೀ ಸಾಮಾನ್ಯನಿಗೆ ಹಳೆಯದಾಯಿತು. ಸುಮಾರು ಒಂದು ವರ್ಷದಿಂದಲೂ ಇದನ್ನು ಕೇಳಿ ಕೇಳಿ ರೋಸಿ ಹೋಯಿತು. ಆದರೆ ಎಂ.ಪಿ.ಗಳಿಗೆ ಹಾಗಾಗುವುದು ಸಾಧ್ಯವೆ? ರಾಜ್ಯ ಸಭೆಗೆ ನಡೆದ ದ್ವೈವಾರ್ಷಿಕ ಚುನಾವಣೆ [illegible] ಕೆಲವು ಮಂತ್ರಿಗಳ [illegible] ಹಾಕಿತ್ತು; ಕೆಲವರಿಗೆ [illegible] ಸಾರ್ವತ್ರಿಕ ಚುನಾವಣೆಗಳಿಗೆ ನಮ್ಮ ಎರಡು ವರ್ಷಗಳಿವೆ; [illegible] ಚುನಾವಣೆಗಳು ಮುಗಿದು ಪರಿಣಾಮಗಳು ಬಂದಿವೆ, ಬಜೆಟ್ ಅಧಿವೇಶನವೂ ಮುಕ್ತಾಯದ ಹಂತದಲ್ಲಿದೆ. ಶ್ರೀಮತಿ ಗಾಂಧಿಯವರು ಕಾದು ನೋಡುವ ತೀವ್ರ ಕಾತುರತೆ ಯಾವುದೂ ಇಲ್ಲವಾದ್ದರಿಂದ, ಮಂತ್ರಿ ಮಂಡಳ ಪುನಾರಚನೆಯ ಬಗ್ಗೆ ಪರ್ಯಾಲೋಚಿಸಲು ಇದಕ್ಕಿಂತ ಹೆಚ್ಚಿನ ಪ್ರಶಸ್ತ ಸಮಯವಿಲ್ಲ. ತಮಗೆಲ್ಲ ಕರೆಯೊಂದು ಬರುವುದೆಂದು ಇಂಡಿಕೇಟ್ ಎಂಪಿಗಳು ಕಾದಿಗಾಲಲ್ಲಿ ನಿಂತುಕೊಂಡಿದ್ದರು. ಬಂತು ಕರೆ, ಹೊರಟರವರು. ಪ್ರಧಾನಿಯು ಕೇಳಬಹುದಾದ ಪ್ರಶ್ನೆಗಳು, ಅವಕ್ಕೆ ತಾವು ನೀಡಬೇಕಾದ ಉತ್ತರಗಳನ್ನೇ ಮೆಲುಕು ಹಾಕುತ್ತ ಹೋದವರಿಗೆ ಪಾಪ, ವಿಶ್ವ ಮೂರ್ಖರ ದಿನದ ನೆನಪೊಂದು ಬಂದೀತೆ? ಮಂತ್ರಿಯಾಗಲು ಆಶೆಪಡುವವರ ಈ ದೇಶದಲ್ಲಿ ಮೂರ್ಖತನವೆನ್ನುವ ವರೆಗೆ ಇದು ಹೀಗೆ ನಡೆಯುತ್ತದೆ.

ಪರ್ಕಳದಲ್ಲಿ ಬ್ರಹ್ಮರಥೋತ್ಸವ

ಉಡುಪಿ ತಾಲೂಕು ಪರ್ಕಳದಲ್ಲಿರುವ ಶ್ರೀ ಮಹಾಲಿಂಗೇಶ್ವರ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಕಳೆದ ತಾ. ೨೧ ರಂದು ಧ್ವಜಾರೋಹಣವೂ ತಾ. ೨೩ ರಂದು ಬ್ರಹ್ಮರಥೋತ್ಸವವೂ, ತಾ. ೨೪ ರಂದು ಮುಂಜಾನೆ ಅವಭೃಥೋತ್ಸವ, ರಾತ್ರಿ ಹುಲಿ ಚಾಮುಂಡಿ ದೈವ ದರ್ಶನ ಹಾಗೂ ದೇವರ ಕಟ್ಟೆಯುತ್ಸವ ರವುಗೆಯೂ ಬಹಳ ವಿಜೃಂಭಣೆಯಿಂದ ನೆರವೇರಿತು.

ಪೌರ್ಣಮೋತ್ಸವ

ದ. ಕ. ಜಿಲ್ಲಾ ಮೊಗವೀರ ಮಹಾಜನ ಸಂಘದ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ವಾರ್ಷಿಕ ಪೌರ್ಣಮಿ ಮಹೋತ್ಸವವು ತಾ. 22-3-70 ರಂದು ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು.

ಕಾಲೇಜ್ ಯೂನಿಯನ್ನಿನ ಉದ್ಘಾಟನೆ

ಉಡುಪಿ ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಯೂನಿಯನ್ ಉದ್ಘಾಟನೆಯು ತಾ. ೮ ರಂದು ಪ್ರೊ| ವಿ. ಚಂದ್ರಶೇಖರ್, ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಇವರಿಂದ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾರಂಭವು ಉಪಹಾರದೊಂದಿಗೆ ಆರಂಭವಾಯಿತು.

ಕಾಲೇಜ್ ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದ ಬಳಿಕ ಯೂನಿಯನ್ ಜತೆ ಕಾರ್ಯದರ್ಶಿ ಶ್ರೀ ಟಿ. ಎ. ಕೃಷ್ಣರಾಜ್‌ರವರು ಅತಿಥಿಗಳಿಗೆ ಹಾರಾರ್ಪಣೆಗೈದರು. ಪ್ರಿನ್ಸಿಪಾಲ್ ಶ್ರೀ. ಸದಾಶಿವರಾಯರು ಅತಿಥಿಗಳವರಿಗೆ ಹಾರ್ದಿಕ ಸ್ವಾಗತವನ್ನು ಬಯಸುತ್ತಾ, ಕಾಲೇಜಿನ ಹಾಗೂ ಕಾಲೇಜ್ ಚಟುವಟಿಕೆಗಳ ಹಾಗೂ ಅತಿಥಿಗಳ ಪರಿಚಯ ಮಾಡಿದರು. ಯೂನಿಯನ್ನಿನ ಸೆಕ್ರೆಟರಿ ಶ್ರೀ ಎಂ. ರವೀಂದ್ರ ಶೆಟ್ಟಿಯವರು ಸಂದೇಶ ವಾಚನಗೈದರು. ಪ್ರೊ| ವಿ. ಚಂದ್ರಶೇಖರ್‌ರವರು ತನ್ನ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳು ಈ ಸಂಧ್ಯಾ ಕಾಲೇಜನ್ನು ಸೇರುವುದರ ಮೂಲಕ ತಮ್ಮ ಮುಂದಿನ ಭವಿಷ್ಯವನ್ನು ಉತ್ತಮವಾಗಿಸುವುದರ ಬಗ್ಗೆ ನಿರ್ಧರಿಸಿರುವುದನ್ನು ಶ್ಲಾಘಿಸಿದರು. ಅಲ್ಲದೆ ಈಗಿನ ಯುವಕರಲ್ಲಿರಬೇಕಾದ ಶಿಸ್ತು, ಸಂಯಮತೆ ಹಾಗೂ ಶಾಂತಿಯ ನಡವಳಿಕೆಗಳು ಸಂಧ್ಯಾ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಜಾಸ್ತಿಯಿದ್ದು ಅವರು ಬಾಕಿ ಉಳಿದ ಯುವ ಜನಾಂಗಕ್ಕೆ ಮಾದರಿಯಾಗಬೇಕೆಂದು ಹಾರೈಸಿದರು. ಪ್ರಿನ್ಸಿಪಾಲ್ ಅಡಿಗರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಯುವಕರಲ್ಲಿರಬೇಕಾದ ಗುರಿ ಮುಟ್ಟುವ ನಿರ್ಧಾರದ ಕುರಿತು ಮಾತಾಡಿ ಎಲ್ಲಾ ಯುವಕರು ತಮ್ಮ ಪ್ರತಿಯೊಂದು ಕೆಲಸದಲ್ಲೂ ಒಳ್ಳೆಯ ಆಸಕ್ತಿಯನ್ನು, ಉತ್ತಮ ನಡವಳಿಕೆಯಿಂದ ದೇಶದ ಆದರ್ಶ ಪ್ರಜೆಗಳಾಗಬೇಕೆಂದು ಆಶಿಸಿದರು.

ಯೂನಿಯನ್ ಪ್ರೆಸಿಡೆಂಟ್ ಶ್ರೀ ಕೆ. ಪಿ. ವಿಠಲ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು.

ವಕೀಲ್ ಶಾಂಬ ಶೆಟ್ಟರ ನಿಧನ

ಕಾರ್ಕಳದ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ ಪೆರೋಲಿ ಶಾಂಬಶೆಟ್ಟರು ತಾ. ೩ರಂದು ಕೋರ್ಟಿನಲ್ಲಿ ನ್ಯಾಯಪೀಠದೆದುರು ವ್ಯವಹರಿಸುತ್ತಿದ್ದಾಗಲೇ ಹೃದಯಾಘಾತದಿಂದ ಕುಸಿದು ಬಿದ್ದು ನಿಧನ ಹೊಂದಿದರೆಂಬುದು ವಿಷಾದಕರವಿಷಯ. ಮರಣದ ಸುದ್ದಿ ಕೇಳಿದೊಡನೆ ಅವರ ಅಸಂಖ್ಯ ಬಂಧು ಮಿತ್ರರೂ ಅಭಿಮಾನಿಗಳೂ ಅವರ ನಿವಾಸಕ್ಕೆ ಧಾವಿಸಿ ಬಂದು ಅವರ ಕೊನೆಯ ದರ್ಶನ ಪಡೆದರು. 1923 ರಲ್ಲಿ ವಕಾಲತು ಆರಂಭಿಸಿದ ದಿ| ಶೆಟ್ಟರು ವಕೀಲರೆನಿಸಿ ಗಣನೀಯ ವ್ಯಕ್ತಿಯಾಗಿ ಜನಪ್ರಿಯತೆಗಳಿಸಿದ್ದರು. ೮೦ರ ಹರೆಯದ ವಯಸ್ಸಿನಲ್ಲಿ ಮರಣ ಹೊಂದಿದ ಶೆಟ್ಟರು ತಮ್ಮ ಹಿಂದೆ ಪತ್ನಿ, [illegible] ಹೆಣ್ಣು, ಓರ್ವ ಗಂಡು ಮಕ್ಕಳನ್ನು ಅಗಲಿಹೋಗಿದ್ದಾರೆ.

ರಾಜಕೀಯ ಭೂಕಂಪಗಳು

ಗುಜರಾತದಲ್ಲಿ ಭೂಕಂಪವಾಗಿ ಮೂರು ವರ್ಷದ ಸುಮಾರಿಗೆ ತಲೆತಗೆದುಕೊಂಡಿತು. ಇದರಿಂದ ಮುಖ್ಯಮಂತ್ರಿ ಹಿತೇಂದ್ರ ದೇಸಾಯಿರಿಗೆ ಸಂತಾಪದ ಮೇಲೆ ಸಂತಾಪ ಸೂಚನೆಗಳು; ಗಲಿಬಿಲಿ. ಕಂಪನಾಂಕರ ಪಿಡುಗಿಗೆ ಗುರಿಯಾದ ಸಿಂಡಿಕೇಟಿಗೆ ಹೃತ್ಕಂಪ. ವಿಧಾನ ಸಭೆಯಲ್ಲಿ ಮೂಗುಳಿಯಿತೆಂದು ತಿಳಿದೊಡನೆಯೇ ಅವಿಶ್ವಾಸ ಗೊತ್ತುವಳಿ ಬರುವವರೆಗೆ ಸಭೆ ಮುಂದಕ್ಕೆ. ಇದೇ ರೀತಿ ಪಂಜಾಬಲ್ಲೂ ಅನ್ವಯ. ಮಾಜಿ ಮುಖ್ಯಮಂತ್ರಿ ಗುರ್ನಾಮ್ ಸಿಂಗರು ಅಕಾಲಿಗಳ ಹೊಸ ನಾಯಕ ಪ್ರಕಾಶಸಿಂಗ್ ಬಾದಲ್‌ರಿಗೆ ಬಹುಮತವಿಲ್ಲವೆಂದು ಬಾರಿಸಿದ ಗಂಟೆ - ಪ್ರತ್ಯೇಕ ಅಕಾಲಿಗಳ ವ್ಯೂಹವನ್ನು ಕಟ್ಟುವ ಹವಣಿಕೆ - ಇಂಡಿಕೇಟಾಧ್ಯಕ್ಷ ಜಗಜ್ಜೀವನ ರಾಮರ ಸಂಪೂರ್ಣ ಸಹಕಾರ - ಸರಕಾರ ರಚಿಸುವದಕ್ಕೆ - ಪ್ರತ್ಯೇಕ ದಳ ಕಟ್ಟುವುದಕ್ಕೆ. ಆದರೆ, ಎರಡು ಬಾರಿ ನಡೆದ ಮತ ಗಣನೆಯಲ್ಲೂ ಗುರ್ನಾಮ್‌ಗೆ ಸಿಕ್ಕಿದ್ದು ೪೪ ಮತಗಳು ಮಾತ್ರ. ಮತ್ತೆ ಮೂರು ದಿನಗಳ ಮುಖ್ಯಮಂತ್ರಿಗಳ ಮೇಲೆ ತಂದ ಅವಿಶ್ವಾಸ ಠರಾವು ಹಿಂದಕ್ಕೆ.

ಪ್ರತ್ಯೇಕ ಅಕಾಲಿ ದಳದ ರಚನೆಯು ಗುಡುಗು ಗುರ್ನಾಮ್‌ಸಿಂಗರ ಸಿಂಗ ಬಾಯಿಯಿಂದ ಹೊರಟಿದ್ದರಿಂದ ಸಂತ ಫತ್ತೇಸಿಂಗ ಪ್ರಭೃತಿಗಳಿಗೆ ತೀವ್ರ ಹೃತ್ಕಂಪನ. ಇದ ಕನಸಿನ ಮಂಡಿಗೆ ಎಂದರು ಅವರು. ಸಿಕ್ಖರಲ್ಲಿ ಒಗ್ಗಟ್ಟು ಇರಬೇಕೆಂದು ವಿಶ್ವಾಸ ವ್ಯಕ್ತ ಪಡಿಸಿದರವರು. ಬಾಳಿನಲ್ಲಿ ಹಾಗೆಂದರೂ ಎಲ್ಲಿಯಾದರೂ ಗುಡುಗುಡು ಇಲ್ಲವಾದೀತೆ? ಮತ - ಸಂಪ್ರದಾಯ - ಭಾಷೆ - ರಾಜ್ಯ ಮೊದಲಾದ ತೀರ ಸಂಕುಚಿತ ಭಾವನೆಗಳ ಜಾಲದಲ್ಲಿ ಪಂಜಾಬಿಗಳು ಇದುವರೆಗೂ ಬಂಧಿತರು. ಸಂತರು ಪಂಜಾಬಿಗಳ ಸ್ವತಂತ್ರಭಾವನೆಗಳಿಗೆ ಅಸ್ಪದ ಕೊಡರು. ಆದ್ದರಿಂದಲೇ ಅವರು ಹಲವಾರು ರಾಜಕೀಯ ಘಟನೆಗಳಿಗೆ ಹೇತುವಾದರು. ಆದರೆ, ಗುರ್ನಾಮ್ ಸಿಂಗರ ವ್ಯಕ್ತಿತ್ವದ ಬೆಳಕು ಹೊರಹರಿಯಿತು. ಅಭಿವ್ಯಕ್ತಿಯನ್ನು ದಮನ ಮಾಡಹೋದರೆ, ಸ್ಫೋಟನ ಹೇಗೆ ಮುಂದುವರಿಯಬೇಕು? ಆದರೆ, ಗುರ್ನಾಮ್ ಸಿಂಗರು ಒಂದು ರಾಜ್ಯಕ್ಕೆ ಸೇರಿದವರಲ್ಲ; ಅವರೊಂದು ದೇಶಕ್ಕೆ ಸೇರಿದವರು. ಪಂಜಾಬದಲ್ಲಿ ಸಂತರು ಅವರಿಗೆ ಸ್ಥಾನ ನೀಡರು. ಆದರೆ, ಅವರು ಎಲ್ಲಿದ್ದರೂ ಬೆಳೆ ತಂದುಕೊಂಡಾರು. ಪ್ರತಿ ಅಕಾಲಿದಳವನ್ನೂ ಕಟ್ಟಿಯಾರು.

ಬೆಕ್ಕೀಗಿಗೂ ಗುಣವಿಂದು ಭಾರತದ ರಾಜಕೀಯ ಪಕ್ಷಗಳಿಗೆ ಅಂಟಿದಂತಿದೆ. ಕೆಲಕಾಲ ಹಿಂದೆ ಕಮ್ಯೂನಿಸ್ಟ್ ಪಕ್ಷ ವಿಭಜನೆಗೊಂಡಾಗ ಎಲ್ಲರೂ ಮೂಗಿಗೆ ಬೆರಳೇರಿಸಿದ್ದರು. ವಿಭಜನೆಯಿಂದ ಆ ಪಕ್ಷ ಮಣ್ಣು ಮುಕ್ಕಿತೆಂದೇ ಕಮ್ಯೂನಿಸಂ ವಿರೋಧಿಗಳ ಭಾವನೆಯಿತ್ತು. ಆದರೆ, ಹಾಗೇನೂ ಸತ್ಯವಾಗಲಿಲ್ಲ. ಈ ವಿಭಜನೆ ರಷ್ಯ-ಚೀನಗಳ ತೀವ್ರ ರಾಜಕೀಯ ಭಿನ್ನಮತಗಳ ಪ್ರಭಾವವೆಂಬುದು ಮುಂದೆ ಮನವರಿಕೆಯಾಯ್ತು. ವಿದೇಶೀಯ ರಾಜ್ಯಕಾರಣ ನಮ್ಮ ದೇಶದ ರಾಜಕೀಯದಲ್ಲಿ ಎಂತಹ ಪಾತ್ರ ವಹಿಸುತ್ತದೆಂಬುದಕ್ಕೆ ಇದೊಂದೇ ಉದಾಹರಣೆ. ಮೊನ್ನೆ ಮೊನ್ನೆ ಕಾಂಗ್ರೆಸ್ಸ ಹೆಸರಿನಲ್ಲಿ ಹೋರಾಡಿ ಬೇರೆಬೇರೆಯಾದವು. ಪ್ರಧಾನಿ ಇಂದಿರಾ ಗಾಂಧಿ ಆತ್ಮಸಾಕ್ಷಿಯನ್ನ ಎತ್ತಿ ಹಿಡಿದು ಪಕ್ಷದ ಹಿತವನ್ನ ದೇಶಹಿತಕ್ಕಾಗಿ ತ್ಯಜಿಸಿ ಪಕ್ಷದ್ರೋಹಿಯೆನಿಸಿಕೊಂಡರು. ಅಕಾಲಿದಳವೂ ಎರಡಾಯಿತು. ಸಂಚರ ಸಂಖ್ಯೆ ಇನ್ನೊಂದು. ಕೇರಳದ ಅರ್ಥ ಸಚಿವ ಶ್ರೀ ಪನ್ನರ ಸುತ್ತ ಬೆಳೆದ ಸಿಕ್ಕಿನಿಂದಾಗಿ ಆರೆಸ್ಪಿಯೂ ವಿಭಜಿತವಾದಂತಾಯ್ತು. ಅಂದರೇನು? ಹೊಸ ಪಕ್ಷಗಳಿಗೆ ಜನ್ಮ ನೀಡಲು ಹುಡುಕುವ ಶ್ರಮ ವಹಿಸುವುದೂ ಈ ನೋವಾರಿಗಳಿಗೆ ಬೇಡವಾಯಿತೆ? ಅಥವಾ "ತಾವೇ ಸರಿ" ಎಂಬ ಆತ್ಮಸಾಕ್ಷಿ ಪ್ರೇರಿತರಾಗಿ ತಾವುಳಿಯಬೇಕು; ಅವರು ಹೋಗಬೇಕು ಎಂಬ ಭಾವದ್ಯೋತಕವೇ ಇದು!

ಗುರ್ನಾಮ್‌ಸಿಂಗರು ತಾವು ಇನ್ನೊಬ್ಬ ಇಂದಿರಾ ಗಾಂಧಿಯಾಗಬಹುದಾದ ಸಂದರ್ಭವನ್ನು ಕಳೆದುಕೊಂಡರು. ಆಕೆಯಂತೆಯೇ ಅವರ ಕೈಯಲ್ಲಿ ಅಧಿಕಾರವಿತ್ತು. ಆದರೆ ಆಕೆಯ ಬುದ್ಧಿಶಕ್ತಿ ಮಾತ್ರ ಇರಲಿಲ್ಲ. ಅಥವಾ ಇನ್ನೂ ಮುಂಗಳಾಯಿತಾಹಿಯಲ್ಲೇ ಸಂತಾನುಯಾಯಿಗಳು ಇದ್ದಾರೆ; ಅವರಲ್ಲಿ ಜಾಗೃತವಾಗಲು ಅವಕಾಶವೇ ಉಳಿಯಲಿಲ್ಲ. ಒಬ್ಬ ರಾಮ್, ಒಬ್ಬ ಸಿಕು ಮತ್ತೊಬ್ಬ ಅಲಿ ಇದ್ದದ್ದರಿಂದ ತಾನೇ ಇಂದಿರಾಗಾಂಧಿಯು ರೊಟ್ಟಿ ತುಪ್ಪಕ್ಕದ್ದಿದ್ದು? ಶ್ರೀ ಸಿಂಗರಿಗೆ ರಾಮನೂ ಇಲ್ಲ ಶ್ಯಾಮನೂ ಇಲ್ಲ. ಅವರು ಏಕೈಕರಾದರು. ಆದರೇನ? ಅವರೊಬ್ಬರೇ ಸದ್ಯ ಪ್ರತ್ಯೇಕ ಅಕಾಲಿದಳವೆನ್ನಲಡ್ಡಿಯಿಲ್ಲ.

ಪಕ್ಷಭ್ರಷ್ಟ ಸಿಂಗರಿಗೆ ಇಂಡಿಕೇಟಿನ ಭದ್ರಾಶ್ರಯ ಅಕಾಲಿಗಳಲ್ಲಿ ಬಿರುಕಬ್ಬಿಸುವುದು ಅವರಿಗೆ ಅಗತ್ಯ. ಸಂತರ ಮುಷ್ಟಿಯಲ್ಲಿ ಅವರು ಇರುವ ವರೆಗೆ ಇಂದಿರಾಗಾಂಧಿಗೆ ಒಂದಲ್ಲ ಒಂದು ಬಗೆಯ ಬೆದರಿಕೆ ತಪ್ಪಿದ್ದಲ್ಲ. ಅದ್ದರಿಂದ ಉರಿದ ಬದ್ನೆ ರಿಸುನೆಯುಕ್ತ ತನ್ನ ಕಾಲಕಟ್ಟಲು ಅವರು ಸದಾ ಸಿದ್ಧ. ದುರ್ಯೋಧನ ಕರ್ಣನಿಗೆ ಅಂಗಾಧಿಪತ್ಯವನ್ನೇ ನೀಡಿ ಆತನನ್ನ ಕುಲೀನನೆಂದೇ ಸಂಬೋಧಿಸಲಿಲ್ಲವೆ? ಈಗ ಇಂಡಿಕೇಟ್ ಗುರ್ನಾಮ್‌ಸಿಂಗರನ್ನ ಪ್ರತ್ಯೇಕ ಅಕಾಲಿದಳದ ಸರ್ವಸ್ವವೆಂದು ಮನ್ನಿಸಿದರೆ ಆಶ್ಚರ್ಯವಿಲ್ಲ.

ರಾಜ್ಯ ಸಭೆಗೆ ನಡೆದ ದ್ವೈವಾರ್ಷಿಕ ಚುನಾವಣೆಗಳಲ್ಲಿ ಸಿಂಡಿಕೇಟ್ ತನ್ನ ಬಲವನ್ನು ಗಟ್ಟಿಸಿಕೊಂಡಿದೆ—ಒಂದರಷ್ಟು. ಶ್ರೀಮತಿ ವಾಯಲೆಟ್ ಆಳ್ವರ ನಿಧನದಿಂದ ತೆರವಾದ ಸ್ಥಾನಕ್ಕೆ ಶ್ರೀ ಶೇರ್‌ಖಾನ್ ತನ್ನ ಇಂಡಿಕೇಟ್ ಪ್ರತಿಸ್ಪರ್ಧಿ ಶ್ರೀ ಪಾಟೀಲರನ್ನು ಸೋಲಿಸಿ ಗೆದ್ದುಬಂದು ಪಡೆಸಿದ ಬಲವಿದೆ. ನೇರ ಸ್ಪರ್ಧೆಯಿದ್ದುದರಿಂದ ಇದು ಪ್ರತಿಷ್ಠೆಯ ಚುನಾವಣೆಯಾಗಿತ್ತು. ಉಳಿದೆಲ್ಲವುಗಳಲ್ಲಿಯೂ ತನ್ನ ಹಿಂದಿನ ಸ್ಥಾನಗಳನ್ನು ಉಳಿಸಿಕೊಂಡಿದೆ. ಇದೇ ರಾಜ್ಯಕ್ಕೆ ಇಂಡಿಕೇಟ್ ತನ್ನ ಬಲವಿಳಿದುಕೊಂಡಿದ್ದು ಜನಸಂಘ-ಸ್ವತಂತ್ರಗಳು ಬಲವಾಗಿವೆ.

ತನ್ನ ಸೋಲಿಗೆ ಇಂಡಿಕೇಟು ವ್ಯಥಿತವಾಗುವುದು ಸಹಜ. ಆದರೆ, ಅದಕ್ಕೆ ಭಾರಿ ದುಃಖ ಸೂಚಿಸುವವರ ಪರಂಪರೆಯು! ಭಾವಿ ಮಂತ್ರಿಯಾಗಿದ್ದ ಮಾಜಿ ಮಂತ್ರಿ ಶ್ರೀ ಸಿಕು ಇ್ರಾರ ಬೆಂಬಲವೂ ಇಲ್ಲದೆ ಬರಿಯ "ಆತ್ಮಸಾಕ್ಷಿ"ಯುಳ್ಳವರ ಬೆಂಬಲ ನಿರೀಕ್ಷೆಯಿಂದ ರಾಜ್ಯ—ದೇಶ ಹಿತಾಯುತ ಚುನಾವಣೆಗೆ ನಿಂತರು—ಸೋತರು. 'ನನಗೆ ಮತ ನೀಡುತ್ತೇವೆಂದವರು ನೀಡಲಿಲ್ಲವೆಂಬ ತೋರುತ್ತದೆ' 'ರಾಜಕೀಯದಲ್ಲಿ ಇದೆಲ್ಲ ತೀರ ಸಹಜ'- ಇಂಡಿಕೇಟ್ ಅಜ—ಮಾಜಿ ಅಧ್ಯಕ್ಷರ ಪ್ರತಿಕ್ರಿಯೆ. ಸಿಕು ಚಾಜ ಪ್ರವೇಶವಿನ್ನೆಂತು? ಪ್ರಾಯಃ ಭಾವಿ ಚುನಾವಣೆಯಲ್ಲೇ.

ಬೆಂಗಳೂರಿನಿಂದ ಭಾರೀ ಸದ್ದಿ. ಸಿಂಡಿಕೇಟಿನ ಗಂಡುಭೂಮಿಯಲ್ಲೂ ಭೂಕಂಪನ ನಡೆದಿದೆ. ರಾಜ್ಯ ಸಭಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ನಿರೀಕ್ಷಿತ ಮತ ಸಿಗಲಿಲ್ಲ. ಇದಕ್ಕೇನು ಕಾರಣ? ಅಭ್ಯರ್ಥಿಗಳ ಆಯ್ಕೆ ಮಾತ್ರದಲ್ಲಿ ಕಂಡಿದ ಪ್ರಥಮ ಪ್ರಾಶಸ್ತ್ಯದ ಮತಗಳು ಅತೃಪ್ತಿಕರ—ಇದರ ಪರಿಣಾಮ. ಇರಬಹುದು. ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಾಗಪ್ಪ ಆಳ್ವರಿಂದ ರಾಜ್ಯ ಸಭಾಸದಸ್ಯರ. ಇದ ಕೆಲವರಿಗೆ ಅಸಮಾಧಾನವಂತೆ! ಅಂತೂ ಕರ್ನಾಟಕರಗೊಂಡವರ ಸಂಖ್ಯೆ ಅಂದಿಂದ ಇಲ್ಲಿನ ವರೆಗೂ ಹೋಗುತ್ತದಂತೆ! ಇವರ ಮೇಲೆ ಶಿಸ್ತಿನ ಕ್ರಮವೇರುಗಳು ವಿಸುವರೊಡಿರುವುದೆ? ಇಂಥ ಸ್ಥಿತಿ ರಾಜಕೀಯದಲ್ಲಿ ಬರಬಾರದು. ಪಕ್ಷೀಯ ಪದ್ಧತಿಯಲ್ಲಿ ಪಕ್ಷದ ನಿರ್ಣಯವನ್ನು ಗೌರವಿಸುವ ತ್ಯಾಗಬುದ್ಧಿ ಮೂಡದೆ ಹೋದರೆ ಸುಖವಿಲ್ಲ. ಇವಕ್ಕ ಅನುಕರಣೆಯೆನ್ನಿ ಅಂಧವಿಶ್ವಾಸವೆನ್ನಿ.

ರಾಜಕರಸ್ತೆಯಲ್ಲಿ ಎಲ್ಲರೂ ನಡೆಯುತ್ತಾರೆ; ನಾವೂ ನಡೆಯುತ್ತೇವೆ; ಇದು ಅಂಧಶ್ರದ್ಧೆಯಾಗದ. ಪಕ್ಷದ ಮುಂದೆ ವ್ಯಕ್ತಿ ತಾಳದ ಮುಂದೆ ತಿಲ ಇಂತಹ ನಿಷ್ಠೆ ಕಮ್ಯೂನಿಸ್ಟರಲ್ಲಿದೆ; ಆದುದರಿಂದಲೇ ಅವರು ವಿಭಜಿತರಾಗಿ ಬೀಳುತ್ತಾರೆ; ಆದರೆ ಮತ್ತೆ ಮತ್ತೆ ಏಳುತ್ತಿರುತ್ತಾರೆ. ಪಕ್ಷೀಯ ಸಂಘಟನೆಯನ್ನು ಅವರಿಂದ ಉಳಿದವರು ಕಲಿತುಕೊಳ್ಳಬೇಕು-ಸದ್ಯಕ್ಕೆ.

ಇಂಡಿಯಾದಲ್ಲಿ ರಾಜಕೀಯ ಭೂಕಂಪಗಳ ನಡುವೆ ಲಘು ಭೂಕಂಪ ಒಂದು ನಡೆಯಿತು. ಸಮೀಪ ಪ್ರಾಚ್ಯದ ಟರ್ಕಿಯಲ್ಲಿ ಭಾರೀ

Gram: VISHWA Tel: 20111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಖುದಾ ಭಕ್ಷ್ ಗ್ರಂಥ ಭಾಂಡಾರ

ಇಸ್ಲಾಂ ಸಾಹಿತ್ಯ ಕೃತಿಗಳ ಅಮೂಲ್ಯ ನಿಧಿ: ಅಧ್ಯಯನ ಪೀಠ

ಪಾಟ್ನಾದಲ್ಲಿರುವ ಓರಿಯಂಟಲ್ ಸಾರ್ವಜನಿಕ ಪುಸ್ತಕ ಭಂಡಾರ ಮುಸ್ಲಿಂ ಮತ್ತು ಪರ್ಶಿಯನ್ ಸಾಹಿತ್ಯ ಕೃತಿಗಳ ಮತ್ತು ಹಸ್ತಪ್ರತಿಗಳ ತವರೂರು. ಈ ಪುಸ್ತಕ ಭಂಡಾರ ಖುದಾಭಕ್ಷ್ ಪುಸ್ತಕ ಭಂಡಾರವೆಂದು ಜನಪ್ರಿಯವಾಗಿದೆ. ಪುಸ್ತಕಗಳನ್ನು ಸಂಗ್ರಹಿಸಿ ಭಂಡಾರ ಸ್ಥಾಪಿಸಬೇಕೆಂದು ಆಶಿಸಿದ್ದ ಛಪ್ರಾದ ಒಬ್ಬ ತಂದೆ ಮತ್ತು, ತಂದೆಯ ಈ ಬಯಕೆಯನ್ನು ಈಡೇರಿಸಿದ ಮಗ ಖುದಾಭಕ್ಷ್ ಈ ಇಬ್ಬರ ಹೆಬ್ಬಯಕೆ ಶ್ರಮಗಳೇ ಈ ಪುಸ್ತಕ ಭಂಡಾರ ಸ್ಥಾಪನೆಗೆ ಮುಖ್ಯ ಕಾರಣ. ಛಪ್ರಾದ ಸುಪ್ರಸಿದ್ಧ ವಕೀಲರಾಗಿದ್ದ ಮೊಹಮದ ಭಕ್ಷ ತನ್ನ ಆಜೀವತದ್ವಂಶ ಪುರಾತನ ಸಾಹಿತ್ಯದ ಹಸ್ತಪ್ರತಿಗಳನ್ನು ಸಂಗ್ರಹಿಸುವುದರಲ್ಲೇ ಕಳೆದರು. ಈತ ಮರಣ ಹೊಂದುವ ಕಾಲಕ್ಕೆ ಸುಮಾರು 1400 ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದರು. ತನ್ನ ಕೊನೆಯ ಕಾಲದಲ್ಲಿ ಈ ಹಸ್ತಪ್ರತಿಗಳನ್ನು ತನ್ನ ಮಗ ಖುದಾ ಭಕ್ಷಗೆ ಒಪ್ಪಿಸಿ ಆತನಿಗೆ ಸಾಧ್ಯವಾದಾಗ ಈ ಹಸ್ತಪ್ರತಿಗಳನ್ನು ಕೂಡಿಸಿ ಒಂದು ಪುಸ್ತಕ ಭಂಡಾರ ಸ್ಥಾಪಿಸಲು ಮಗನಿಗೆ ತಿಳಿಸಿದರು. ಮಹಮದ್ ಭಕ್ಷ ಮರಣಾನಂತರ ಈ ಹಸ್ತಪ್ರತಿಗಳನ್ನು ಬಂಕೀಪುರ (ಪಾಟ್ನಾ)ಗೆ ಕಳಿಸಲಾಯಿತು. ಪಂಡಿತರಿಗೆ ಮತ್ತು ಕವಿಗಳಿಗೆ ಪಾಟ್ನಾ ಮೊಗಲರ ಕಾಲದಿಂದಲೂ ಮೆಚ್ಚಿನ ನೆಲೆಯಾಗಿದೆ. ಪಾಟ್ನಾಗೆ ಈ ಪುಸ್ತಕ ಭಂಡಾರವನ್ನು ಸ್ಥಳಾಂತರಗೊಳಿಸಿದ ನಂತರ ಇದನ್ನು ಅಭಿವೃದ್ಧಿಗೊಳಿಸಲು, ದೊಡ್ಡದನ್ನಾಗಿ ಮಾಡುವುದರಲ್ಲಿ ಖುದಾ ಭಕ್ಷರವರು ಬಹಳವಾಗಿ ಶ್ರಮಿಸಿದರು. ಖುದಾ ಭಕ್ಷ ಅವರ ಬಗ್ಗೆ ಡಾ. ಸಚಿದಾನಂದ ಸಿನ್ಹ ಅವರು "ಬಿಹಾರದ ಕೆಲವು ಗಣ್ಯ ಸಮಕಾಲೀನರು" ಎಂಬ ತಮ್ಮ ಕೃತಿಯಲ್ಲಿ ಖುದಾಭಕ್ಷ್ ಅವರದು ಅಸಾಧಾರಣ ವ್ಯಕ್ತಿತ್ವ ಎಂದು ಬಣ್ಣಿಸಿದ್ದಾರೆ.

ಖುದಾಭಕ್ಷ್ ಅವರು ಛಪ್ರಾದಲ್ಲಿ 1842ರಲ್ಲಿ ಜನ್ಮತಾಳಿದರು. ಅವರ ವಿದ್ಯಾಭ್ಯಾಸ ಕಲ್ಕತ್ತಾದಲ್ಲಿ ನಡೆಯಿತು. ಅನೇಕ ಎಡರು ತೊಡರುಗಳನ್ನು ಎದುರಿಸಿದ ನಂತರ ಪಾಟ್ನಾದಲ್ಲಿ ಅವರು ಖಾಸಗಿ ವಕೀಲರಾದರು. ತಮ್ಮ ವಕೀಲ ವೃತ್ತಿಯಲ್ಲಿ ಹೆಚ್ಚು ಹೆಸರು ಗಳಿಸಿ ಕೊನೆಗೆ ನಿಜಾಂ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಭಕ್ಷ್ ಅವರ ನಿಸ್ವಾರ್ಥ ಸೇವೆಯಿಂದಾಗಿ ಅವರಿಗೆ 'ಖಾನ್ ಬಹಾದ್ದೂರ್' ಬಿರುದನ್ನು ನೀಡಲಾಯಿತು. ಇದೇ ಅಲ್ಲದೆ ಇಂಗ್ಲೀಷ್ ಸರಕಾರದವರು ಇವರಿಗೆ "ಚಾಂಪಿಯನ್‌ಶಿಪ್" ಗೌರವವನ್ನು ನೀಡಿದರು. ಸುಪ್ರಸಿದ್ಧ ಇತಿಹಾಸಕಾರನೂ ಮತ್ತು ಖುದಾಭಕ್ಷ್ ಅವರನ್ನು ಸ್ವಯಂ ಬಲ್ಲವರೂ ಆದ ಸರ್ ಜಾದುನಾಥ ಸಿರಕಾರ್ ಅವರು ತಮ್ಮ ಕೃತಿಯೊಂದರಲ್ಲಿ ಈ ರೀತಿ ಬರೆದಿದ್ದಾರೆ.

"........ ಖುದಾಭಕ್ಷ್ ಭಾರತದ ಸರ್ ಥಾಮಸ್ ಬಾಡ್ಲೆ. ಮುಂದಿನ ಜನಾಂಗದ ಸರ್ವ ಪಂಡಿತರು ಮತ್ತು ಓದುಗರೂ ಈ ಪುಸ್ತಕ ಭಂಡಾರವನ್ನು ಸ್ಥಾಪಿಸಿದುದಕ್ಕಾಗಿ ಭಕ್ಷ್ ಅವರನ್ನು ಸ್ಮರಿಸುತ್ತಾರೆ. ಇವರಿಗೆ ಖುದಾಭಕ್ಷ್ ಎಂಬುದು ಅನ್ವರ್ಥನಾಮ (ದೇವರ ಕೊಡಿಗೆ) ಎನ್ನುತ್ತಾರೆ.

ಖುದಾಭಕ್ಷ್ ಮುಸ್ಲಿಂ ಸಾಹಿತ್ಯ ಪ್ರೇಮಿ. ಅವರು ಸ್ಥಾಪಿಸಿದ ಈ ಪುಸ್ತಕ ಭಂಡಾರ ಅವರ ಪುಸ್ತಕ ಸಂಗ್ರಹ ಜಾಣ್ಮೆಗೆ ಜೀವಂತ ಸಾಕ್ಷಿಯಾಗಿದೆ. ಖುದಾಭಕ್ಷ್ ಪುಸ್ತಕ ಭಂಡಾರವನ್ನು 1891ರಲ್ಲಿ ಆಗ ಬಿಹಾರ್, ಬೆಂಗಾಲ್ ಮತ್ತು ಒರಿಸ್ಸಾಗಳ ಲೆಫ್ಟಿನೆಂಟ್ ಗವರ್ನರರಾಗಿದ್ದ ಸರ್ ಚಾರ್ಲ್ಸ್ ಇಲಿಯಟ್ ಅವರು ಉದ್ಘಾಟಿಸಿದರು. ಖುದಾಭಕ್ಷ್‌ರವರೇ ಈ ಪುಸ್ತಕ ಭಂಡಾರಕ್ಕೆ ತಮ್ಮ ಹೆಸರನ್ನು ಕೊಡಲಿಲ್ಲ. ಅವರು "ಓರಿಯಂಟಲ್ ಸಾರ್ವಜನಿಕ ಪುಸ್ತಕ ಭಂಡಾರವೆಂದು" ಹೆಸರಿಟ್ಟರು. ಆದರೆ ಇದನ್ನು ಜನ ಖುದಾಭಕ್ಷ್ ಲೈಬ್ರರಿ ಎಂದೇ ಕರೆದರು. ಈ ಪುಸ್ತಕ ಭಂಡಾರ ಭಾರತ ಹಾಗೂ ಹೊರದೇಶಗಳಲ್ಲಿ "ಖುದಾಭಕ್ಷ್ ಪುಸ್ತಕ ಭಂಡಾರ"ವೆಂದು ಹೆಸರುವಾಸಿಯಾಯಿತು. ಮೊಗಲ್ ಸಾಮ್ರಾಜ್ಯ ಪತನವಾದ ನಂತರ ದೆಹಲಿಯ ಮೊಗಲ್ ಪುಸ್ತಕ ಭಂಡಾರ ಕ್ಷೀಣಿಸಿತು. ಅಲ್ಲಿನ ಅನೇಕ ಅಮೂಲ್ಯ ಹಸ್ತಪ್ರತಿಗಳು ಭಕ್ಷ್ ಭಂಡಾರವನ್ನು ಸೇರಿದವು. ಪುಸ್ತಕ ಸಂಗ್ರಹಕಾರರಲ್ಲಿ ಪ್ರಮುಖವ ಹಮೀದ ಮಖಿ ಎಂಬುವರು ಸಿರಿಯಾ, ಅರೇಬಿಯಾ, ಈಜಿಪ್ಟ್ ಮತ್ತು ಇರಾನಗಳಿಂದ ಅಮೂಲ್ಯ ಹಸ್ತಪ್ರತಿಗಳನ್ನು ಶೇಖರಿಸಿದರು. ಹಸ್ತಪ್ರತಿಗಳಿಗೆ ಧಾರಾಳವಾಗಿ ಹಣಕೊಡುತ್ತಿದ್ದರಾದ ದರಿಂದ ಭಕ್ಷರ ಹೆಸರು ಹೊರದೇಶಗಳಲ್ಲೆಲ್ಲಾ ಹೆಚ್ಚು ಜನಪ್ರಿಯವಾಯಿತು.

ಖುದಾಭಕ್ಷ್ ಪುಸ್ತಕ ಭಂಡಾರದಲ್ಲಿ ಈಗ 4221 ಇಸ್ಲಾಂ ಮತ್ತು ಪರ್ಶಿಯನ್ ಹಸ್ತಪ್ರತಿಗಳಿವೆ. ಇದೂ ಅಲ್ಲದೆ ಉರ್ದು, ಟರ್ಕಿ, ಹಿಂದಿ ಮತ್ತು ಸಂಸ್ಕೃತ ಭಾಷೆಯ ಕೈಬರಹ ಪ್ರತಿಗಳನ್ನೂ ನೋಡಬಹುದು. ಜೊತೆಗೆ 200 ತಾಳೆಗರಿಗಳು ಮತ್ತು 700 ಸುಂದರವಾದ ಸೂಕ್ಷ್ಮ ವರ್ಣಚಿತ್ರಗಳು ಈ ಭಂಡಾರದಲ್ಲಿ ಸಂಗ್ರಹಿಸಲಾಗಿವೆ. ಈ ಪುಸ್ತಕ ಭಂಡಾರದ ಆರಂಭದಲ್ಲಿ ಸುಮಾರು 2,500 ಪುಸ್ತಕಗಳಿದ್ದವು. ಈಗ ಇಲ್ಲಿ ಮುಸ್ಲಿಂ ಮತಧರ್ಮಶಾಸ್ತ್ರ ತತ್ವಗಳು, ಸಾಹಿತ್ಯ, ನೀತಿಶಾಸ್ತ್ರ, ನ್ಯಾಯಶಾಸ್ತ್ರ, ಇತಿಹಾಸ, ಜೀವನಚರಿತ್ರ ಲೇಖನಗಳು, ವಿಜ್ಞಾನ ಇವೇ ಮೊದಲಾದುವನ್ನು ಕುರಿತ ಸುಮಾರು 52 000 ಪುಸ್ತಕಗಳು, ನಿಯತಕಾಲಿಕ ಪತ್ರಿಕೆಗಳು ಇವೆ. ಮಹಾತ್ಮಾ ಗಾಂಧಿ ಹಾಗೂ ಜವಾಹರಲಾಲ್ ನೆಹರು ಈ ಲೈಬ್ರರಿಗೆ ಭೇಟಿ ಕೊಟ್ಟಿದ್ದಾರೆ. ಪುಸ್ತಕ ಭಂಡಾರದ ವ್ಯವಸ್ಥೆ ಬಗ್ಗೆ ಪ್ರಶಂಸಿಸಿದ್ದಾರೆ. ಇದು ಭಾರತದ ಇತಿಹಾಸಕ್ಕೆ ಪುಷ್ಟಿಯನ್ನು ಕೊಡುವಂತಹುದು ಎಂದಿದ್ದಾರೆ.

ಗಂಗಾನದಿಯ ಸಮೀಪದಲ್ಲಿ ಬಹಳ ವಿಶಾಲವಾಗಿ ಖುದಾಭಕ್ಷ್‌ರವರು 75 000 ರೂ.ಗಳ ವೆಚ್ಚದಿಂದಾಗಿ ಪುಸ್ತಕ ಭಂಡಾರದ ಕಟ್ಟಡವನ್ನು ನಿರ್ಮಿಸಿದ್ದರು. 1934ರಲ್ಲಿ ಸಂಭವಿಸಿದ ಭೂಕಂಪನದಿಂದಾಗಿ ಪುಸ್ತಕ ಭಂಡಾರಕ್ಕೆ ಹೆಚ್ಚಿನ ನಷ್ಟ ಉಂಟಾಯಿತು, ನಂತರ ಈ ಕಟ್ಟಡವನ್ನು ಸರಿಪಡಿಸಲಾಯಿತು. ಈ ಪುಸ್ತಕ ಭಂಡಾರದ ಮೇಲಿನ ಜವಾಬ್ದಾರಿ ನೋಡಿಕೊಳ್ಳುವ ಸಲುವಾಗಿ 1962ರಲ್ಲಿ ಬಿಹಾರ ಸರಕಾರದವರು ಬಿಹಾರ ಗವರ್ನರರ ನಾಯಕತ್ವದಲ್ಲಿ ಒಂದು ಆಡಳಿತ ಮಂಡಳಿಯನ್ನು ರಚಿಸಿದ್ದಾರೆ. ಈ ಮಂಡಳಿಯಲ್ಲಿ ಭಾರತ ಸರಕಾರ ಹಾಗೂ ಬಿಹಾರ ಸರಕಾರದವರು ನೇಮಕ ಮಾಡುವ ಸದಸ್ಯರಿರುತ್ತಾರೆ. ಖುದಾ ಭಕ್ಷರ ಕುಟುಂಬದಲ್ಲಿ ಒಬ್ಬರು ಈ ಮಂಡಳಿಯಲ್ಲಿ ಪ್ರತಿನಿಧಿಯಾಗಿರುತ್ತಾರೆ. ಬಿಹಾರ್ ಸರಕಾರ ಈ ಪುಸ್ತಕ ಭಂಡಾರಕ್ಕೆ ವರ್ಷಕ್ಕೆ 50,000ರೂ.ಗಳ ಧನಸಹಾಯ ನೀಡುತ್ತಿದೆ. ಇದಕ್ಕೆ ಮೀರಿ ತಗಲುವ ವೆಚ್ಚವನ್ನು 1962ರಿಂದ ಈಚೆಗೆ ಭಾರತ ಸರ್ಕಾರ ನೀಡುತ್ತಿದೆ. ಈಗಾಗಲೆ ಒಂದು ಲಕ್ಷಕ್ಕೂ ಮೀರಿ ಹಣಕಾಸಿನ ನೆರವನ್ನು ಭಾರತ ಸರ್ಕಾರ ಈ ಪುಸ್ತಕ ಭಂಡಾರಕ್ಕೆ ನೀಡಿದೆ.

ಭೂಕಂಪ ನಡೆಯಿತು. ಸಾವಿರಗಟ್ಟಲೆ ಜನರ ಪ್ರಾಣ ಬಲಿತೆಗೆದುಕೊಂಡಿತು. ವಿತ್ತ—ಜೀವಿತ ಹಾನಿಯ ಸಂಪೂರ್ಣ ವಿವರಗಳನ್ನೂ ಬಂದಿಲ್ಲವಾದರೂ ಇದು ದೊಡ್ಡ ಭೂಕಂಪಗಳ ಸಾಲಿನಲ್ಲಿ ನಿಲ್ಲಬಲ್ಲುದು. ಟರ್ಕಿಯ ಜನರಿಗೊದಗಿದ ಈ ದುರವಸ್ಥೆಯಲ್ಲಿ ಜಾಗತಿಕ ಸಹಾನುಭೂತಿಯಿದೆ. ಪರರೊಡ್ಡವಕ್ಕೆ ಸದಾ ಕೈಚಾಚುತ್ತಿರುವ ನಾವು ಅದರಲ್ಲಿ ಧ್ವನಿಗೂಡಿಸುವುದನ್ನು ಬಿಟ್ಟು ಮತ್ತೇನು ಮಾಡಿಯೇವು?

ವಿದಾಯ ಸಮಾರಂಭ

ಉಡುಪಿ:— 23-8-70 ಮೋಡರ್ನ್ ಹಾ. ಎ. ಶಾಲಾ ಏಳನೆಯ ತರಗತಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಶಾಲಾ ಪರೀಕ್ಷಾಧಿಕಾರಿ ಶ್ರೀ ಶ್ರೀಪತಿ ರಾವ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ಅತಿಥಿಗಳನ್ನು ಸ್ವಾಗತಿಸಿ ಮಕ್ಕಳನ್ನು ಹರಸಿದರು. ಮಕ್ಕಳಲ್ಲಿ ಕುಮಾರಿ ಜೆ. ಪ್ರಫುಲ್ಲಾ ಮತ್ತು ದತ್ತಾತ್ರೇಯ ಶೆಣೈಯವರು ಶಾಲಾ ಜೀವನದಲ್ಲಿಯ ಅನುಭವಗಳನ್ನು ಸ್ಮರಿಸಿ ಗುರುವೃಂದದಿಂದ, ಸಹಪಾಠಿಗಳ ಪರವಾಗಿ ಆಶೀರ್ವಾದ ಬೇಡಿದರು. ಉಪಾಧ್ಯಾಯ ವೃಂದದಿಂದ ಶ್ರೀ ಕೆ. ಜನಾರ್ಧನ ರಾವ್ ಮತ್ತು ಶ್ರೀ ಕೆ. ರಮಾನಾಥರಾಯರು ಹರಸಿ ಹಿತವಚನಗಳನ್ನು ನುಡಿದರು. ಹಿರಿಯ ಪರೀಕ್ಷಾಧಿಕಾರಿ ಶ್ರೀ ಲಿಯೋ ಶಾಸ್ತ್ರರವರು ಮಕ್ಕಳು ಶಾಲೆಗೆ ಕೊಟ್ಟ ವಿಜ್ಞಾನ ಉಪಕರಣಗಳನ್ನು ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಿ ಆಶೀರ್ವದಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಶ್ರೀಪತಿರಾಯರು ಉಪಾಧ್ಯಾಯರ ನಿಸ್ವಾರ್ಥ ಸೇವೆ, ವಿದ್ಯಾರ್ಥಿಗಳ ಕರ್ತವ್ಯಗಳ ಕುರಿತು ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್ ಲಕ್ಷ್ಮೀನಾರಾಯಣ ಭಟ್ಟರು ಆಭಾರ ಮನ್ನಿಸಿದರು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರು 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಮನೆ-ಮದ್ದು
ಗೃಹವೈದ್ಯ — ರೂ.2 - 00
ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲೀಷ್
ಆಂಗ್ಲ ಸ್ವಯಂಬೋಧಿನಿ ರೂ.2.00
ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ವಿವಿಧ ಪತ್ರ
ಸಂಕಲನ — ಬೆಲೆ ರೂ. 1-50
ಟಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ ದ. ಕ.

ಮನೆದೀಪ ಉರಿಸೋಣ ಬಂದಾಸ

ಧಾರವಾಡ ಜಿಲ್ಲೆಯ ಮುಖ್ಯ ಪಟ್ಟಣದಿಂದ ಸುಮಾರು ೧೧ ಮೈಲಿ ದೂರ ಉಪ್ಪಿನ ಬೆಟಗೇರಿ. ಮೊರಬ, ತಿಮ್ಮಾಪುರ, ಕರಡಿಗುಡ್ಡ ಇವು ದಾರಿಯಲ್ಲಿ ಸಿಗುವ ಹಳ್ಳಿಗಳು.

ಉಪ್ಪಿನ ಬೆಟಗೇರಿಯಲ್ಲಿ ನೀರು ಸೌಳು—ಉಪ್ಪು. ಚಿಕ್ಕ ಬೆಟ್ಟದ ಮೇಲೆ ಕಟ್ಟಿದ ಮನೆಗಳ ಸಾಲು. ಇದರಿಂದ ಈ ಹಳ್ಳಿಗೆ ಉಪ್ಪಿನ ಬೆಟಗೇರಿ ಎಂದು ಹೆಸರು ಬಂದಿರಬೇಕು. ಇಲ್ಲಿಯ ಜನಸಂಖ್ಯೆ ಹೆಚ್ಚು ಕಡಿಮೆ ನೂರಕ್ಕೆ ಐವತ್ತು ಮಂದಿ ಮುಸ್ಲಿಮರು, ಉಳಿಕ್ಕವರು ಹಿಂದುಗಳು. ಜನರಲ್ಲಿ ಹೆಚ್ಚಿನವರ ಬೇಸಾಯಗಾರರು, ಅನೇಕರು ನೂಲುವವರು. ಹಲವರು ನೇಗಾರರು. ಖಾದಿಬಟ್ಟೆಗೆ ಉಪ್ಪಿನ ಬೆಟಗೇರಿ ಸುಪ್ರಸಿದ್ಧ ಇಳಿತ ದರದ ಖಾದಿಗೆ ದೆಹಲಿ ಇತ್ಯಾದಿ ಕಡೆಗಳಲ್ಲಿ ತುಂಬಾ ಗಿರಾಕಿ ಇದೆ. ಇಲ್ಲಿ ಖಾದಿ ಬಟ್ಟೆ ತಯಾರಿಸುವ ೫ ಮಗ್ಗಗಳು ನೂರೆಂಟು ಹೆಚ್ಚು ಮಗ್ಗಗಳಿವೆ. ಸುಮಾರು ... ಮಂದಿ ಮಹಿಳೆ ... ನೂ... ... ... ಸುಮಾರು ಸಾವಿರ ಮಂದಿ ಇಂತ ... ಗಾ ... ಉದ್ಯೋಗ ... ...

ಒಂದು ಕಾಲದಲ್ಲಿ ಉಪ್ಪಿನ ಬೆಟಗೇರಿ ವೇದಾಧ್ಯಯನದ ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಅನೇಕ ವೈದಿಕ ... ... ಇದ್ದರು. ... ... ಇವರೆಲ್ಲ ... ... ಊರುಗಳಿಗೆ ಹೋಗಿ ನಿಂತರು.

ಇಲ್ಲಿಯ ವಿಠ್ಠಲ ಮಂದಿರ ಈಗಲೂ ಇಲ್ಲಿಯ ಜನರ ಧಾರ್ಮಿಕ ಶ್ರದ್ಧೆಗೆ ಮೀಸಲಾಗಿದೆ. ಯುಗಾದಿಯಂದು ಇಲ್ಲಿ ಜರುಗುವ ಉತ್ಸವಕ್ಕೆ ಊರು— ಪರವೂರಿನ ನೂರಾರು ಮಂದಿ ಸೇರುತ್ತಾರೆ. ಅಲ್ಲದೆ ಇಲ್ಲಿ ಎಲ್ಲಮ್ಮನ ಗುಡಿ, ಕಲ್ಮೇಶ್ವರ ದಾಗು ಮಲ್ಲಿಕಾರ್ಜುನ ದೇವಾಲಯಗಳು ಇವೆ.

ಜತ್ತ, ... ಜೋಳ, ಇಲ್ಲಿಯ ಮುಖ್ಯ ಬೆಳೆಗಳು. ... ... ಭತ್ತ, ಕಬ್ಬು ಬೆಳೆಯುತ್ತಾರೆ. ... ...

ಇಲ್ಲಿ ವಿದ್ಯುಚ್ಛಕ್ತಿ ಇದೆ. ... ... ವಿದ್ಯಾಭ್ಯಾಸ ... ... ಇದೆ. ಇದರಲ್ಲಿ ... ಸುಮಾರು ... ... ಮಂದಿ ಮಕ್ಕಳಿದ್ದಾರೆ. ಜನರ ಆರೋಗ್ಯ ... ... ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ... ... ಜನರು ಭಯ ಪಡುವ ಕಾರಣವಿಲ್ಲ. ಆರೋಗ್ಯ ಸಹಾಯಕರು ... ... ಮನೆ ಮನೆಗೂ ಹೋಗಿ ಜನರ ಯೋಗಕ್ಷೇಮ ವಿಚಾರಿಸಿಕೊಂಡು ಬರುತ್ತಾರೆ.

ಪ್ರತಿ ಕುಟುಂಬದಲ್ಲಿಯೂ ಸರಾಸರಿ ಐದು—ಆರು ಮಕ್ಕಳಿದ್ದಾರೆ. ಮಕ್ಕಳು ಹೆಚ್ಚಿದಂತೆ ಇಲ್ಲಿಯ ಜನರ ಆದಾಯ ಹೆಚ್ಚಿಲ್ಲ. ಈಗಲೂ ಹೆಚ್ಚುತ್ತಿಲ್ಲ. ಇದರಿಂದ ಕುಟುಂಬ ಯೋಜನೆಯ ಬಗ್ಗೆ ಜನರಲ್ಲಿ ಆಸಕ್ತಿ ಇದೆ. ಓದು ಬರಹ ಬಲ್ಲವರಿಗೆ ಈ ವಿಚಾರ ಸಾಮಾನ್ಯವಾಗಿ ಮನದಟ್ಟಾಗಿದೆ. ಆದರೂ ಕುಟುಂಬ ಯೋಜನೆ ಮಾಡಿಸಿಕೊಳ್ಳಲು ಕಾರಣಾಂತರಗಳಿಂದ ಬಹಳಷ್ಟು ಇಲ್ಲಿಯ ಜನರು ಸಿದ್ಧರಾಗಿಲ್ಲ. ಮಹಿಳೆಯರಲ್ಲಿ ಇಂತಹ ಬಗ್ಗೆ ಆಸಕ್ತಿ ಇದೆ. ಸ್ಥಳೀಕ ಮುಖಂಡರು ಇಲ್ಲಿ ಕುಟುಂಬ ಯೋಜನೆಗೆ ತುಂಬ ಗಮನ ಕೊಡುತ್ತಿದ್ದಾರೆ.

ಉಪ್ಪಿನ ಬೆಟಗೇರಿ ಧಾರವಾಡ ತಾಲೂಕಿನಲ್ಲಿದೆ. ಧಾರವಾಡ ತಾಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷ ಶ್ರೀ ಎಸ್. ಜಿ. ದಂಡಣ್ಣವರ್, ಸದಸ್ಯ ಶ್ರೀ ರಾಯನಗೌಡ, ಉಪ್ಪಿನ ಬೆಟಗೇರಿ ಪಂಚಾಯತಿ ಅಧ್ಯಕ್ಷ ಶ್ರೀ ಚಿಕ್ಕನಗೌಡ ಕಲ್ಲೂರ್ ಇವರಂತಹ ಸ್ಥಳೀಕ ಧುರೀಣರು ತಾವೇ ಕುಟುಂಬ ಯೋಜನೆಗೆ ಮಾರ್ಗದರ್ಶಕರಾಗಿದ್ದಾರೆ. ಇದನ್ನೆಲ್ಲ ತಿಳಿದ ಮೇಲೆ ನಲ್ಲ ... ಕ್ಕಳ ಹಂಪೆ ... ಪಂಚಾಯತಿ ... ... ಅಬ್ದುಲ್ ... ... ಅಪರೇಶನ್ ... ... ಪ್ರಥಮ ... ... ಕುಟುಂಬ ಯೋಜನೆಗೆ ... ... ಇಲ್ಲ. ... ... ಸಾಕೆಂದು ... ... ನಗಂತೂ ಏನೂ ಇಲ್ಲ. ತನ್ನ ಮುದ್ದು ಮಗನನ್ನಾದರೂ ಓದಿಸಿ ಗಟ್ಟಿಗನನ್ನಾಗಿಸಬೇಕೆಂಬುದು ಈತನ ಹಿರಿಯಾಸೆ.

ಉಪ್ಪಿನ ಬೆಟಗೇರಿಯಲ್ಲಿ ಕುಟುಂಬ ಯೋಜನೆಯ ವಿಚಾರ ಇನ್ನೂ ಜನರಿಗೆ ಸಾಕಷ್ಟು ತಿಳಿದಿಲ್ಲ. ಕುಟುಂಬ ಯೋಜನಾ ಕೆಲಸಗಾರರು ಬಾಗಿಲಿಗೆ ಬಂದಾಗ "ಮನೆದೀಪ ಆರಿಸೋಣ್ ಬಂದಪ್ಪಾ" ಎಂದು ಕೆಲವರು ಹೇಳುವುದೇ ಇದಕ್ಕೆ ನಿದರ್ಶನ. ಕುಟುಂಬ ಯೋಜನೆ ಮನೆದೀಪ ಆರಿಸೋದಿಲ್ಲ ಮನೆದೀಪ ಉರಿಸುವಂತೆ ಮಾಡುತ್ತದೆ ಎಂಬುದು ಅವರಿಗೆ ತಿಳಿದಿಲ್ಲ. ಮಕ್ಕಳಾಗದ ದಂಪತಿಗಳನ್ನು ಪರೀಕ್ಷಿಸಿ ಅವರಿಗೆ ಮಕ್ಕಳಾಗುವಂತೆ ಚಿಕಿತ್ಸೆ ಮಾಡುವುದು ಈ ಯೋಜನೆಯಲ್ಲಿ ಸೇರಿದ ಒಂದು ಕೆಲಸ. ಇದು ಕೇವಲ ಜನನ ನಿಯಂತ್ರಣ ಯೋಜನೆಯಲ್ಲ. ಇದು ಕುಟುಂಬಕ್ಕೆ ಹಿತವನ್ನುಂಟುಮಾಡುವ ಕುಟುಂಬ ಕಲ್ಯಾಣ ಯೋಜನೆ.

"ಇದ ಇತಂ ... ... ಇಲ್ಲಿ ... ... ಭೇಟಿ ಮಾಡಿ ಈ ಯೋಜನೆ ವಿಚಾರ ... ... ನೋಡಿ ... ಮಂದಿ ಅರಿತಾರೆ ... ... ಜವಾಬ್ದಾರಿ ... ... ಈ ಯೋಜನೆಯ ಪ್ರಗತಿ ಅತ್ಯಲ್ಪ. ಇತರ ... ... ಜನರಲ್ಲಿ ಡಾಕ್ಟರರಷ್ಟು ವಿಶ್ವಾಸ ತುಂಬಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ಡಾಕ್ಟರ್ ವಿ. ಎಸ್. ನಾರಾಯಣ್. ಇವರಿಲ್ಲಿ ಈವರೆಗೆ ಸುಮಾರು ಎಂಟು ಸಾವಿರ ಮಂದಿಗೆ ಆಪರೇಶನ್ ಮಾಡಿದ್ದಾರಂತೆ.

ಉಪ್ಪಿನ ಬೆಟಗೇರಿಯಲ್ಲಿ ಕುಟುಂಬ ಯೋಜನೆಯ ಕಾರ್ಯಕ್ರಮ ಈಗ ಭರದಿಂದ ಸಾಗುತ್ತಿದೆ.

ಡಿಲ್ಲಿಯಿಂದ ಕಿತ್ತೂರ ವರೆಗೆ

ಸೇವೆ ಸಲ್ಲಿಸಲು ನಮಗೆ ಯಾವ ಊರೂ ಸಣ್ಣದಲ್ಲ

ಕಳೆದ ವರ್ಷವಷ್ಟೇ ನಾವು 101 ಶಾಖೆಗಳನ್ನು ತೆರೆದೆವು;
1970ರ ಪ್ರಥಮ ಮೂರು ತಿಂಗಳುಗಳಲ್ಲಿ ನಮ್ಮ ಶಾಖಾವಿಸ್ತರಣಾ ಯೋಜನೆಯಂತೆ 18 ಹೊಸ ಶಾಖೆಗಳನ್ನು ಆರಂಭಿಸಿದೆವು. ದೇಶದ ಚಾರಿತ್ರಿಕ ರಾಜಧಾನಿ ಡಿಲ್ಲಿಯೂ ಮೈಸೂರು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿನ ಚಾರಿತ್ರಿಕ ಪುಟ್ಟ ಹಳ್ಳಿ ಕಿತ್ತೂರೂ ಸೇರಿವೆ.

1970ರ ಮೊದಲ ಮೂರು ತಿಂಗಳಲ್ಲಿ ಈ 18 ಶಾಖೆಗಳು ತೆರೆದವು

1) ಡಿಲ್ಲಿ ಹೈದರ್‌ಪುರ್
2) ಡಿಲ್ಲಿ ಬವಾನ
3) ಡಿಲ್ಲಿ ನಂಗಲ್ರಾಯ
4) ನಾಗಪುರ ಗಾಂಧಿ ಬಾಗ್
5) ನ್ಯಾಡುಪೇಟ್ (ಆಂಧ್ರ ಪ್ರದೇಶ)
6) ಶಿರೂರು (ಮೈಸೂರು ರಾಜ್ಯ)
7) ನಾವುಂದ (ಮೈಸೂರು ರಾಜ್ಯ)
8) ಹರಿಹರಪುರ (ಮೈಸೂರು ರಾಜ್ಯ)
9) ಮುಲ್ಲಾಡಿಹಳ್ಳಿ (ಮೈಸೂರು ರಾಜ್ಯ)
10) ಬಲುಸ್ಸೆರಿ (ಕೇರಳ)
11) ಬನಸ್ವಾಡ (ಆಂಧ್ರ ಪ್ರದೇಶ)
12) ಮುನಿರಾಬಾದ್ (ಮೈಸೂರು ರಾಜ್ಯ)
13) ಕುಂಸಿ (ಮೈಸೂರು ರಾಜ್ಯ)
14) ಚಿತ್ತೂರು (ಆಂಧ್ರ ಪ್ರದೇಶ)
15) ಹುಕ್ಕೇರಿ (ಮೈಸೂರು ರಾಜ್ಯ)
16) ತಾಳಿಕೋಟೆ (ಮೈಸೂರು ರಾಜ್ಯ)
17) ಮಲ್ಲಪುರಂ ಡ್ಯಾಮ್ ಸೈಟ್ (ಮೈಸೂರು ರಾಜ್ಯ)
18) ಕಿತ್ತೂರು (ಮೈಸೂರು ರಾಜ್ಯ)

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ :
ಮಣಿಪಾಲ
(ಮೈಸೂರು ರಾಜ್ಯ)

ಕೆ. ಕೆ. ಪೈ
ಕಸ್ಟೋಡಿಯನ್

ಮಡಿಕೇರಿಯಲ್ಲಿ ಡಾ. ಮೋದಿಯವರ ಉಚಿತ ನೇತ್ರ ಶಿಬಿರ

ಮಡಿಕೇರಿಯ ನಗರಸಭಾ ಹೈಸ್ಕೂಲ್ ಆವರಣದಲ್ಲಿ ತಾ. 12-4-70ರಿಂದ ಆರಂಭವಾದ ಡಾ. ಎಂ. ಸಿ. ಮೋದಿಯವರು ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರು. ಈ ಶಿಬಿರಕ್ಕೆ ಬರುವವರೆಲ್ಲರೂ ಅವರೊಂದಿಗೆ ಹಾಸಿಗೆ, ವಸ್ತ್ರ, ಪಾತ್ರೆಗಳನ್ನು ತರಬೇಕಾಗಿದೆ. ಈ ಶಿಬಿರವು ಕೆನರಾ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ರಿಲೀಫ್ ಎಂಡ್ ವೆಲ್ಫೇರ್ ಸೊಸೈಟಿಯ ಜತೆ ನೇತೃತ್ವದಲ್ಲಿ ನಡೆಯಲ್ಪಡುವುದು.

ಕೆ. ವೆಂಕಟರಾಯಾಚಾರ್ಯರಿಗೆ ಸತ್ಕಾರ

ಸುರತ್ಕಲ್ಲು ಕೇಂದ್ರದ ಕುಳಾಯಿ ಗ್ರಾಮದ ಶ್ರೀ ವಿಷ್ಣುಮೂರ್ತಿ ದೇವಾಲಯದ ಈ ಬಾರಿ ಜಾತ್ರೆಯ ಸಂದರ್ಭದಲ್ಲಿ ಸಂಶೋಧಕರಾದ ಶ್ರೀ ಕೆ. ವೆಂಕಟರಾಯಾಚಾರ್ಯರಿಗೆ ಸನ್ಮಾನಿತರ ಮೂಲಕ ಸಸ್ತ್ರಿಗಳು 'ವಿದ್ಯಾ ಸ್ರುಷ' ವನ್ನು ಅರ್ಪಿಸಲಾಯಿತು. ಸಭಾಧ್ಯಕ್ಷತೆಯನ್ನು ಶ್ರೀ ಎಚ್. ದಾಮೋದರ ರಾಯರು ನಿರ್ವಹಿಸಿದ್ದರು. ಶ್ರೀ ಕೆ. ವಾಮನ ವಿದ್ವಾನ್, ಮತ್ತು ಶ್ರೀ ಎಂ. ಮುಕುಂದ ಪ್ರಭು ಅವರು ಅಭಿನಂದನ ಭಾಷಣದಲ್ಲಿ ಶ್ರೀ ಆಚಾರ್ಯರು ಲೇಖನ ಗ್ರಂಥ ಪ್ರಕಾಶನಗಳ ವಿಚಾರ ಸೂಚಿಸಿದರು. ಅಧ್ಯಕ್ಷರು, ಶ್ರೀ ವೆಂಕಟರಾಯಾಚಾರ್ಯರ ಬಾಲ್ಯದ ಘಟನೆಯನ್ನು ನೆನಪಿಸಿ ಆಶೀರ್ವದಿಸುವರು. ಶ್ರೀ ವೆಂಕಟರಾಯಾಚಾರ್ಯರು ತಾಳೆಗರಿ, ತಾಮ್ರ ಶಾಸನ ಮತ್ತು ಶಿಲಾಶಾಸನ ಹಾಗೂ ಸಾಹಿತ್ಯಗಳ ಸಂಗ್ರಹ ಪರಿಶೀಲನೆಗೆ ಜನತೆಗೆ ಕರೆಯಿತ್ತರು. ಶ್ರೀ ವಾಸುದೇವ ಹೆಬ್ಬಾರ್ ಸನ್ಮಾನಪತ್ರ ವಾಚಿಸಿದರು. ಶ್ರೀ ಪ್ರಭಾಕರ್ ಸಂದೇಶಗಳನ್ನು ವಾಚಿಸಿದರು. ದೇವರ ಪ್ರಸಾದ ತುಂಬಿದ ಸ್ಟೀಲ್ ಹರಿವಾಣವು ಕೊಡುಗೆಯಾಗಿ ಶ್ರೀ ಆಚಾರ್ಯರಿಗೆ ನೀಡಲಾಗಿತ್ತು.

ಪುತ್ತೂರು ಮು. ಕೋರ್ಟಿನಲ್ಲಿ

IA I OS 552/61 IA 308/67

ಅಪ್ಪಿಯಾನೆ ಶ್ರೀಮತಿ—ಅರ್ಜಿದಾರಳ್
ಶ್ರೀಮತಿ ಕೂಡಾ —ಎದ್ರಿರ್

ಎದ್ರಿರು— 2 ಚಂದ್ರಾವತಿ—ಶ್ರೀಮತಿಯ ಮಗಳು
5. ಸಾವಿತ್ರಿ, 6. ವಜ್ರ ಕುಮಾರ—ಚಂದ್ರಾವತಿಯ ಮಕ್ಕಳು
7. ಮ್ಯಾನರ ಅಣ್ಣಯ್ಯ—ಚಂದ್ರಾವತಿಯ ಮ್ಯಾನರ ಮಗ
8. ನಯನ ಕುಮಾರಿ 9. ತೇಜಪಾಲ 10. ಬೇಬಿ—ಮ್ಯಾನರರು ಸಾವಿತ್ರಿಯ ಮ್ಯಾನರ ಮಕ್ಕಳು

ಎಲ್ಲರೂ ಬಂಟ್ವಾಳ ತಾಲೂಕು ನಾವೂರು ಗ್ರಾಮಸ್ಥರು—

ಸದ್ರಿ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ಖಾಲಿನ ದಾವೆಯಲ್ಲಿ ಫೈನಲ್ ಡಿಕ್ರಿಗೂ ಮತ್ತು ರಿಸೀವರ ನೇಮಕ ಮಾಡಬೇಕಾಗಿಯೂ ಕೂಡಾ ಹಾಕಿದ ಅರ್ಜಿಗಳಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾ. 15-4-70ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಸೀನತೆಯಲ್ಲಿದ್ದ ಕ್ಷಿಪ್ರದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಯುಕ್ತ ಕಂಡಂತೆ ತೀರ್ಮಾನವಾಗುವುದು.

Sd/- M. Rammohan Rao
Advocate for petitioner.
Puttur. 4-4-70.

ಕೃಷಿ-ಕೈಗಾರಿಕೆಗಳಲ್ಲಿ ತೊಡಗಿರಿ

(ಎರಡನೇ ಪುಟದಿಂದ)

ಳಾಗಿರುವುದು ವಿಷಾದಕರ. ಅಲ್ಲದೆ ಹೆಣ್ಣು ಮಕ್ಕಳಲ್ಲಿ ನೂರಕ್ಕೆ ಸುಮಾರು 70 ಮಂದಿಯಷ್ಟು ಅಕ್ಷರ ಜ್ಞಾನವಿಲ್ಲದವರೆಂಬುದು ಇನ್ನಷ್ಟು ದುಃಖಕರ. ಗ್ರಾಮಗಳಲ್ಲಿ ಗಂಡು ಮಕ್ಕಳು ತಮಗೆ ಬೇಸಾಯ ಕೆಲಸದಲ್ಲಿ ಸಹಾಯ ಮಾಡಲಿಕ್ಕೆ ಮನೆಯಲ್ಲೇ ಇರಬೇಕೆಂಬ ಆಸೆ. ಹೆಣ್ಣು ಮಕ್ಕಳು ಮನೆಯ ಕೆಲಸಕ್ಕೆ ಅಗತ್ಯವೆಂಬ ಸಹಜವಾದ ಭಾವನೆಯಿಂದ ತಾಯಂದಿರು ಅವರನ್ನು ಶಾಲೆಗೆ ಕಳುಹಿಸಲು ಒಪ್ಪುವುದಿಲ್ಲ. ನಮ್ಮ ಗ್ರಾಮಗಳಲ್ಲಿರುವ ವಿದ್ಯಾವಂತ ಪ್ರಮುಖರು ಮಕ್ಕಳನ್ನು ಶಾಲೆಗೆ ಕಳುಹಿಸದ ಹೆತ್ತವರನ್ನು ಸ್ವತಃ ಕಂಡು ಮಾತಾಡಿ ಅವರ ಕಾರಣಗಳಿಗೆ ಯುಕ್ತವಾದ ಪರಿಹಾರಗಳನ್ನು ತೋರಿಸಿಕೊಟ್ಟು ಅಥವಾ ಕಲ್ಪಿಸಿಕೊಟ್ಟು ಪ್ರತಿ ಗ್ರಾಮದ ಎಲ್ಲಾ ಗಂಡು ಹಾಗೂ ಹೆಣ್ಣು ಮಕ್ಕಳು 10ನೇ ಕ್ಲಾಸು ವರೆಗಾದರೂ ಶಾಲೆಗೆ ಹೋಗುವಂತೆ ಯತ್ನಿಸಬೇಕೆಂದು ನಾನು ಆದರದಿಂದ ಕೇಳಿಕೊಳ್ಳುತ್ತೇನೆ.

ನಿರಕ್ಷರತ್ವವನ್ನು ಹೋಗಲಾಡಿಸುವ ಕುರಿತು ವಿಚಾರಿಸಿ ಹಾಗೆ ಪ್ರಮುಖರಾಗಿ ನಿರಕ್ಷರಕುಕ್ಷಿಗಳಾಗಿರುವವರ ಜ್ಞಾನಕ್ಕೆ ಬರುವುದು, ಅಕ್ಷರಜ್ಞಾನವೇ ಇಲ್ಲದ ನೂರಕ್ಕೆ 50 ಮಂದಿಯಲ್ಲಿ ಸುಮಾರು 30 ಮಂದಿಯಷ್ಟು ವಯಸ್ಕರಾಗಿರಬಹುದೆಂಬ ನನ್ನ ಅಭಿಪ್ರಾಯ. ಬರೇ ಓದುವುದು ಬರೆಯುವುದನ್ನಾದರೂ ಕಲಿಸುವ ಯತ್ನವನ್ನು ಸಂಘದ ನೇತೃತ್ವದಲ್ಲಿ ಎಂಬಂತೆ ನಾವು ಮಾಡುವುದು ಅಗತ್ಯವಾಗಿದೆ. ಓದು ಬರಹವಿಲ್ಲದ ಗ್ರಾಮದ ವಯಸ್ಕರಿಗೆ ಅಕ್ಷರಜ್ಞಾನವನ್ನು ನೀಡುವಂತೆ ಪ್ರೋತ್ಸಾಹ ಕೊಡಬಹುದು. ಈ ವಿಷಯದಲ್ಲಿ ಸಮಾಜ ಕಲ್ಯಾಣ ಶಾಖೆಯ ಗೌರವ ನಿರ್ವಾಹಕರ ಸಲಹೆಗಳನ್ನೂ ಸಹಾಯವನ್ನೂ ಪಡೆಯಬಹುದು.

ಕೆಲವು ಸಂವತ್ಸರಗಳ ಹಿಂದೆ ನಮ್ಮ ಸಮಾಜದ ಬಂಧುಗಳು ಮದುವೆಯೇ ಮೊದಲಾದ ಶುಭಶೋಭನಗಳಿಗಾಗಿ ಶಕ್ತಿ ಮೀರಿ ವೆಚ್ಚ ನಡೆಸಿ ಸಾಂಪತ್ತಿಕ ಸಂಕಟಗಳಿಗೆ ಗುರಿಯಾಗುತ್ತಿದ್ದರು. "ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು" ಎಂಬ ಗಾದೆಯುಂಟಾಯಿತು. ಇಂಥ ಅಲ್ಲಸಲ್ಲದ ದುರ್ವ್ಯಯಗಳನ್ನು ಹೋಗಲಾಡಿಸಿ ಶುಭಶೋಭನಗಳನ್ನು ಮಿತವ್ಯಯದಿಂದ ನಡೆಸಬೇಕೆಂದು ನಮ್ಮ ಸಂಘವು ಸಮಾಜ ಬಂಧುಗಳನ್ನು ವರ್ಷ ವರ್ಷವೂ ಕೇಳಿಕೊಂಡಿತು. ಫಲಯುಕ್ತವಾಗಿ ಪ್ರಕೃತ ಈ ದುರ್ವ್ಯಯವು ಬಹುಮಟ್ಟಿಗೆ ಕಡಿಮೆಯಾಗಿದೆ. ನಾವೆಲ್ಲರೂ ಮಿತವ್ಯಯದಿಂದ ನಮ್ಮ ವಿವಾಹ ಮಹೋತ್ಸವಗಳನ್ನು ನಡೆಸಿ ಬರಬೇಕೆಂದು ಎಲ್ಲರೂ ಪ್ರತಿಜ್ಞೆ ಮಾಡಿಕೊಳ್ಳಬೇಕು. ನಮ್ಮ ದೇಶದ ಆಹಾರದ ಅಭಾವ, ಸಾಂಪತ್ತಿಕ ದುಃಸ್ಥಿತಿ ಇವೂ ಇದನ್ನೇ ಸೂಚಿಸುತ್ತವೆ ಎಂಬುದನ್ನೂ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ.

ವಿಚಾರಿಸಿ ನೋಡಿದರೆ ಪ್ರಕೃತ ವಿವಾಹಗಳ ವೆಚ್ಚಕ್ಕಿಂತಲೂ ವರದಕ್ಷಿಣೆಯ ತೀವ್ರತೆಯೇ ಅತಿ ದಾರುಣವೂ ಅಸಹನೀಯವೂ ಆಗಿದೆ. ಈ ಹಾಳು ಪದ್ಧತಿಯನ್ನು ಪ್ರತಿಭಟಿಸಿ ಪ್ರಚಾರ ಮಾಡಿ ನಿರ್ಮೂಲಿಸುವುದಕ್ಕಾಗಿ ನಮ್ಮ ಸಂಘವೂ, ನಮ್ಮ ಪ್ರಮುಖರೂ ಕಳೆದ 62 ವರ್ಷಗಳಲ್ಲಿ ಪಟ್ಟ ಪ್ರಯತ್ನಗಳು ನಿಷ್ಪ್ರಯೋಜಕವಾದುದು ಶೋಚನೀಯ. ಅಷ್ಟೇ ಅಲ್ಲ, ರೋಗಿಯ ಆರೋಗ್ಯವು ಮತ್ತಷ್ಟು ಕೆಟ್ಟು ಹೋಗಿದೆ. ಅಂತೂ ನಮ್ಮ ಸಮಾಜದ ಮುಖಂಡರು ಇದರಿಂದ ನಿರಾಶರಾಗದೆ ಈ ಪದ್ಧತಿಯನ್ನು ತೊಲಗಿಸಲು ತಮ್ಮ ಉದಾಹರಣೆಯ ಮುಖಾಂತರವೂ ತಮ್ಮ ಬುದ್ಧಿವಾದಗಳ ಮೂಲಕವೂ, ಅಲ್ಲದೆ ತಮ್ಮ ಪ್ರಭಾವವನ್ನು ಉಪಯೋಗಿಸಿಯೂ ಪ್ರಯತ್ನಿಸಬೇಕೆಂಬುದು ನನ್ನ ವಿನಂತಿ.

ನಮ್ಮ ಸಮಾಜದ ಉನ್ನತಿಗಾಗಿ ನಾವು ನಡೆಸುತ್ತಿರುವ ಚಟುವಟಿಕೆಗಳು ಜಾತೀಯತೆಯ ಸಂಕುಚಿತ ಭಾವದಿಂದಲ್ಲವೆಂಬುದನ್ನು ಈ ಮುಂಚಿನ ಮಹಾಸಭೆಗಳ ಅಧ್ಯಕ್ಷ ಮಹಾಶಯರಲ್ಲಿ ಹಲವರು ವಿಶದವಾಗಿ ವಿವರಿಸಿದ್ದಾರೆ. ನಮ್ಮ ಸಂಘದ ಮುಖಂಡರೆಲ್ಲರೂ ಆರಂಭದಿಂದಲೂ ಜಾತೀಯತೆಯನ್ನು ತೊರೆದು ಎಲ್ಲಾ ಜನಾಂಗದವರನ್ನೂ ಸೋದರರನ್ನಾಗಿ ಸಹೋದರ ಭಾವದಿಂದಲೇ ಕಂಡು ಹಿಂದುಳಿದ ನಮ್ಮ ಸಮಾಜದವರನ್ನು ಪ್ರಗತಿಮಾರ್ಗಕ್ಕೆ ಹಚ್ಚುವ ಚಟುವಟಿಕೆಗಳನ್ನು ನಡೆಸಬೇಕೆಂದು ನಿರ್ಧರಿಸಿಕೊಂಡಿದ್ದರು. ನಮ್ಮ ಸಂಘದ ಸಂಸ್ಥಾಪನಾಚಾರ್ಯರಾಗಿದ್ದ ದಿ. ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ಟರವರು ಸರ್ವಜಾತಿಯವರನ್ನೂ ಮತಗಳನ್ನೂ ಸಮಾನವಾದ ಪ್ರೀತಿ ವಾತ್ಸಲ್ಯದಿಂದ ಕಂಡು ಅವರೆಲ್ಲರ ಹಿತವನ್ನು ಸಮ ಭಾವದಿಂದ ಸಾಧಿಸಿ ಎಲ್ಲರ ವಿಶ್ವಾಸಕ್ಕೂ ಅಭಿಮಾನಕ್ಕೂ ಪಾತ್ರರಾಗಿದ್ದುದು ಎಲ್ಲರಿಗೂ ತಿಳಿದ ವಿಷಯ. ಇದರಂತೆಯೇ ನಮ್ಮ ಸಮಾಜ ಬಂಧುಗಳೆಲ್ಲರ ಹೃದಯದಲ್ಲಿ ಇತರ ಸಮಾಜಿಕರ ಮೇಲೆ ಭ್ರಾತೃಭಾವವು ತುಂಬಿರುವುದು. ನಮ್ಮ ಭಾರತದೇಶದ ಸಕಲ ಜಾತಿ, ಮತ ಹಾಗೂ ಭಾಷಾಪಂಗಡಗಳು, ಒಂದೇ ಭಾರತೀಯ ಕುಟುಂಬವಾಗಿ ಮಾರ್ಪಡಲಿ. ಕೊನೆಯಲ್ಲಿ ಒಂದು ದಿನ ಈ ಜಗತ್ತಿನ ಸರ್ವ ಜನಾಂಗಗಳೂ ತಮ್ಮ ತಮ್ಮ ಭೇದ ಭಾವನೆಗಳನ್ನು ಮರೆತು ಎಲ್ಲಾ ಜನರೂ ಒಂದೇ ಮಾನವ ಕುಟುಂಬವಾಗಿ ಬಾಳಲಿ!

(ಬಂಟರ ಯಾನೆ ನಾಡವರ ಸಂಘದ 62ನೇ ಅಧಿವೇಶನದಲ್ಲಿ ಶ್ರೀ ಎನ್. ಕೃಷ್ಣಯ್ಯ ಶೆಟ್ಟರು ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶ).

ರಫ್ ಭಾಯಿ ನಡೆದ ದಾರಿ

ರಫ್‌ಭಾಯಿ ಜೀವನ ವೇದಾಂತ ಅವನ ಬಳಿಯಿರುವ ಕೃಷಿಭೂಮಿಯ ಆರ್ಥ ವ್ಯವಸ್ಥೆಯ ಬುನಾದಿಯ ಮೇಲೆ ನಿಂತಿದೆ. ಅವನ ಬಳಿಯಿರುವ ಏಳೆಕರೆ ಭೂಮಿ ಅವನ ವರಮಾನವನ್ನು ನಿರ್ಧರಿಸಿತು; ಆದ್ದರಿಂದ ರಫ್‌ಭಾಯಿ ತನ್ನ ಜೀವನ ಮತ್ತು ಕುಟುಂಬದ ನಿರ್ವಹಣ ಪಥ ಬದಲಾಯಿಸುವಂತಹ ಕೆಲವು ಮುಖ್ಯ ನಿರ್ಣಯಗಳನ್ನು ಮಾಡಬೇಕಾಯಿತು.

ರಫ್‌ಭಾಯಿ ಪಟೇಲ್ ಗುಜರಾತ್‌ನ ಬನಸ್ಕಾಂಠ ಜಿಲ್ಲೆಯ ಬನಸ್ಕಾಂಠ ಎಂಬ ಆದಿವಾಸಿ ಜನರ ಘಟಕದಲ್ಲಿ ಜೀವಿಸುತ್ತಿದ್ದಾನೆ. ಈತ ಹೊಸ ವಿಚಾರಗಳನ್ನೂ ವಿಧಾನಗಳನ್ನೂ ಅನುಸರಿಸಿ ಜೀವನದಲ್ಲಿ ಬದಲಾವಣೆ ಮಾಡಿಕೊಂಡಿದ್ದಾನೆ; ಈ ಬದಲಾವಣೆ ಆತನು ಜೀವಿಸುವ ಆದಿವಾಸಿ ಪ್ರದೇಶದಲ್ಲಿ ನಿಧಾನವಾಗಿ ಹರಡಿತು. ಪಟೇಲ್ ಪ್ರಾಥಮಿಕ ನಾಲ್ಕನೇ ತರಗತಿಯವರೆಗೆ ಮಾತ್ರ ಓದಿದ್ದರೂ ನಿರಂತರ ಜಾಗ್ರತೆಯಿಂದ ಬದಲಾವಣೆಗಳನ್ನು ಗಮನಿಸಿ ಅನುಕರಣಕ್ಕೆ ತಕ್ಕಂತೆ ಹೊಸ ವಿಚಾರಗಳನ್ನು ಗ್ರಹಿಸಿದ್ದಾನೆ.

ರಫ್‌ಭಾಯಿಯು ಕೃಷಿಭೂಮಿಯಿಂದ ಈಗಿನಿಗಿಂತ ಹೆಚ್ಚಿನ ಆದಾಯ ನಿರೀಕ್ಷಿಸುವಂತಿಲ್ಲ ಆತ ಮತ್ತು ಕುಟುಂಬದ ಸದಸ್ಯರು ತಮ್ಮೆಲ್ಲ ಶಕ್ತಿಯನ್ನು ಭೂಮಿಯಿಂದ ಹೆಚ್ಚು ಆದಾಯ ಪಡೆಯಲು ಶ್ರಮಿಸಿದರೂ ದುಡಿದರೂ ಹಾಗೂ ಖರ್ಚು ಮಾಡಿದ ಹಣಕ್ಕೆ ತಕ್ಕಂತೆ ಪ್ರತಿಫಲದೊರಕಲಿಲ್ಲ. ಒಂದು ದಿನ ಜಿಲ್ಲೆ ಮತ್ತು ಗ್ರಾಮಾಧಿಕಾರಿಗಳು ಹಾಗೂ ಕೆಲವು ಸರ್ಕಾರಿ ಸಭೆಯಲ್ಲಿ ಭಾಗವಹಿಸಿದ ಇವರಿಂದ ಪರಿಷ್ಕೃತ ಬೇಸಾಯ ವಿಧಾನಗಳು ಮತ್ತು ಸಂಕರ ಬಿತ್ತನೆ ಬೀಜ ಬಳಕೆಯ ವಿಧಾನ ಅದೃಷ್ಟವಶದಿಂದ ತಿಳಿದು ರಫ್‌ಭಾಯಿ ಕಾರ್ಯರೂಪಕ್ಕೆ ತರಲು ಸಾಹಸದಿಂದ ಕೈಗೊಂಡ ತಜ್ಞರ ಸಲಹೆಯಂತೆ ಬೇಸಾಯ ಕಾರ್ಯ ಕೈಗೊಂಡ. ಇದರಿಂದ ರಫ್‌ಭಾಯಿಯ ವರಮಾನ ಹೆಚ್ಚಿತು. ರಫ್‌ಭಾಯಿ ಭೂಮಿ ಸುಧಾರಣೆ ಹೊಂದಿ ಉತ್ತಮ ವರ್ಗದ ಅಧಿಕ ಫಸಲು ನೀಡಲಾರಂಭಿಸಿತು. ರಫ್‌ಭಾಯಿ ಪಟೇಲ್‌ಗೆ ಕೆಲವು ಸ್ಪರ್ಧೆಗಳಲ್ಲಿ ಬಹುಮಾನ ದೊರಕಿತು.

ರಫ್‌ಭಾಯಿಯ ವರಮಾನದಲ್ಲಿ ಏರಿಕೆಯಾದರೂ, ಅವನ ಜೀವನಮಟ್ಟ ಸ್ವಲ್ಪವೂ ಬದಲಾಗಲಿಲ್ಲ. ನಿರಂತರವಾಗಿ ಬೆಳೆಯುತ್ತಿರುವ ಕುಟುಂಬದಿಂದ ವರಮಾನದ ಏರಿಕೆ ಕಮರಿಹೋಗುತ್ತಿತ್ತು. ಈ ಹೊಸ ಸಮಸ್ಯೆಯಿಂದ ರಫ್‌ಭಾಯಿ ಮಾತಮಗ್ನನಾದ. ಜಿಲ್ಲೆ ಹಾಗೂ ಗ್ರಾಮಾಧಿಕಾರಿಗಳು ಸ್ಥಳೀಯ ಕಾರ್ಯಕರ್ತರೊಂದಿಗೆ ನಡೆಸಿದ ಸಭೆಯಿಂದ ಈ ಸಮಸ್ಯೆಯೂ ಪರಿಹಾರವಾಯಿತು. ಬೆಳೆಯುತ್ತಿರುವ ಕೃಷಿಭೂಮಿ ದೊಡ್ಡ ಕುಟುಂಬದ ಬೆಳೆಯುವ ಸಮಸ್ಯೆಯನ್ನು ಎಂದಿಗೂ ಪರಿಹರಿಸುವುದಿಲ್ಲವೆಂಬ ಅಂಶ ರಫ್‌ಭಾಯಿಯ ಜಾಣಬುದ್ಧಿಗೆ ಹೊಳೆಯಿತು. ರಫ್‌ಭಾಯಿಗೆ ಈಗಾಗಲೇ ಏಳು ಮಕ್ಕಳಿದ್ದರು. ಇದರಿಂದ ಅವನ ಜೀವನ ಸದಾ ಆರ್ಥಿಕ ಒತ್ತಡಕ್ಕೀಡಾಗಿತ್ತು. ಕುಟುಂಬ ಇನ್ನು ಬೆಳೆಯದಿರುವಂತೆ ಮಾಡುವುದೊಂದೇ ಏಕೈಕ ಮಾರ್ಗವಾಯಿತು.

ಈ ವಿಚಾರಧಾರೆಯಿಂದ ಪ್ರೇರೇಪಿತನಾದ ರಫ್‌ಭಾಯಿ ಸಂತತಿ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ. ಆತ ಇಷ್ಟಕ್ಕೇ ಸುಮ್ಮನಾಗದೆ ಆಗಲೇ ಮೂರು ಮಕ್ಕಳನ್ನು ಹೊಂದಿದ್ದ ತನ್ನ ತಮ್ಮನಿಗೂ, ಪುತ್ರನಾದ ಲಾಲಜಿಭಾಯಿ ಗೂ ಸಂತತಿನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ಮನವೊಲಿಸಿದ. ಕುಟುಂಬ ಯೋಜನೆಯ ಯಥಾರ್ಥತೆ ಮನ್ನಿಸಿಕೊಂಡ ರಫ್‌ಭಾಯಿ ಮಗಳ ಕುಟುಂಬಕ್ಕೂ ಸಂದೇಶ ಮುಟ್ಟಿಸಿದ.

ಈ ಹೊಸ ವಿಚಾರಧಾರೆಗಳ ಅನುಷ್ಠಾನದಿಂದ ಇಂದು ರಫ್‌ಭಾಯಿ ಸ್ಥಿತಿ ದೃಢವಾಗಿದೆ. ಸುಧಾರಿತ ಕೃಷಿಯ ಫಲವಾಗಿ ಅವನ ಜೀವನಮಟ್ಟ ಉತ್ತಮಗೊಂಡಿದೆ. ಈತ ತನ್ನ ಸುಖ ಸಂತಸದ ಗುಟ್ಟನ್ನು ಇತರರಿಗೆ ತಿಳಿಸಲು ಕಾತರನಾಗಿದ್ದಾನೆ, ರಫ್‌ಭಾಯಿ ಪಟೇಲ್ ಈಗಾಗಲೇ 22 ಜನರನ್ನು ಕುಟುಂಬಯೋಜನೆ ಬಗ್ಗೆ ಮನವೊಲಿಸಿದ್ದಾನೆ. ಅವರೆಲ್ಲರೂ ರಫ್‌ಭಾಯಿಯ ಸಲಹೆಗೆ ಕೃತಜ್ಞರಾಗಿದ್ದಾರೆ.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337 2 29687 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN **NAVAYUGA WEEKLY**

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ,

ಕಾಲುಕೋಟೆ, ಉಡುಪಿ, ದ. ಕ.

NAVAYUGA 9—4—1970
Registered with the Registrar of News Papers for India under No. R. N. 3546/'57

REGD. No. B. G 176
LICENCE No. 33,
Licensed to Post without Prepayment

ಹಳೆ–ಹೊಸ ಕಾಂಗ್ರೆಸ್‌ಗಳ ನಡುವೆ ಹಿಂದಿ

(ಒಂದನೇ ಪುಟದಿಂದ)

ಷ್ಟೇ ಅಲ್ಲ, ಕೇಂದ್ರದ ಮಂತ್ರಿಗಳಾಗಿದ್ದಾಗ, ಅದುದರಿಂದ ಅಭಿಪ್ರಾಯಕ್ಕೆ ಎರಡು ಬಾಲ ಅರ್ಥವಿಗೆ. ಅವರು ಬೇಕೆಂದು ಹೇಳುವ ವರೆಗೆ ಹಿಂದಿಯನ್ನು ಕೇಂದ್ರ ಸರಕಾರ ಹೇರುವದಿಲ್ಲವೆಂದು ಅವರು ಮಂತ್ರಿ ಸ್ಥಾನದಿಂದ ಮದ್ರಾಸಿಗೆ ಬಂದಾಗ ಹೇಳಿದವರು. ಶಾವ ರಾಜರ ಭಾಷಾ ಕಣ್ಣುಮುಚ್ಚಾಲೆಸು ಆರಿತು ಹೇಳುತ್ತ ಕಾಮರಾಜರಿಗೆ ದೇಶದ ಐಕ್ಯ ಬೇಕಾಗಿಲ್ಲವೆಂದು ಠಾಕ್ಷತ್ತೆಂದು ಹೊಸ ಕಾಂಗ್ರೆಸ್ಸಿನ ಹೊಸ ಅಧ್ಯಕ್ಷ ಸ್ಥಾನದಿಂದ ಮದ್ರಾಸಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಸಾರಿದವರು, ಪಕ್ಷದ ಐಕ್ಯಕ್ಕೆ ಸುರಂಗ ಇಟ್ಟವರು ರಾಷ್ಟ್ರದ ಐಕ್ಯಕ್ಕೆ ಸುರಂಗ ಇಡದೆ ಇರುವರೇ? ಅವರಿಗೆ ಬೇಕಾಗಿರುವ ಮೇಲ್ಮೈ—ಸ್ವಲಾಭ, ಅಷ್ಟೇ. ಅದು ಕೈಗೂಡಿದರೆ ಸರಿ. ಉತ್ತರ–ದಕ್ಷಿಣದ ನಡುವೆ (ಕಾಮರಾಜ — ನಿಜಲಿಂಗಪ್ಪ) ಬಿರುಕು ಮಾಡುವ ಇಂತಹ ಕೆಲಸ ಕ್ಕೆ ಕಾಮರಾಜರು [illegible] ಮಾಡಿಲ್ಲವೆಂದು ಅವರ ಶತ್ರುಗಳು ಶಕ್ತಿಯು ಪರಿಚಯ ಮಾಡಿಕೊಟ್ಟ [illegible]

ಇವರಲ್ಲಿ ಇಂದಿರಮ್ಮನವರ ಇಂಗಿತವೇನು? ಅವರಿಂದ ಅವರ ಭಾಷಣ ಭಾರತದ್ವೇಷವೆ ಆಗುವುದೇ ಇಲ್ಲ. ಅದು ಬೇಂಕೇ ಆಗಲಿ, ಮಕ್ಕಳಿಗೆ ವಿದ್ಯಾಭ್ಯಾಸವೇ ಆಗಲಿ, ವಸತಿಗೆ ಹೆಣ್ಣಾಗಲೀ, ಏನೇ ಆಗಲಿ. ಇಷ್ಟಲ್ಲ, ಯಾರಿ ಯಾರಾದರೂ ತಲೆ ಎತ್ತಿ ತೆಗೆದುಕೊಳ್ಳಲಿ, ಭಾರತೀಯ ರೀತಿಯಲ್ಲಿ ಹರಳು ಹಾಕುವದಾಗಲೀ, ತಲೆ ಬೋಳಿಸುವದಾಗಲೀ ಅವರಿಗೆ ಹಿಡಿಸುವದಿಲ್ಲ. ಭಾಷೆಯ ವಿಷಯದಲ್ಲಿ ಅಷ್ಟೇ, ಭಾರತದಲ್ಲಿ ಸಂಪರ್ಕ ಭಾಷೆಯಾಗಿ ಭಾರತೀಯ ಭಾಷೆ ಇರಬಾರದು. ಮತ್ತೆ ಯಾವದಿರಬೇಕು?—ಭಾರತದ ಪ್ರಧಾನಿ ಪಟ್ಟದಲ್ಲಿರುವ ತನಗೆ ಅದ್ಯಾವದೆಂಬುದನ್ನು ಅವರು ಸ್ಪಷ್ಟವಾಗಿ ಹೇಳಲಾರರು.

ನಿಜಲಿಂಗಪ್ಪನವರ ನಿಲುವು ಅಷ್ಟೆ. ಅವರೂ ಕೆಲವೊಮ್ಮೆ ಹಿಂದಿ ಹೇರಿಕೆಯ ಹಾಡು ಹೇಳುವದುಂಟು.

ಈ ರೀತಿ ಹಳೆ—ಹೊಸ ಕಾಂಗ್ರೆಸ್ಸುಗಳ ನಡುವೆ-ನಿಜಲಿಂಗಪ್ಪ—ಇಂದಿರಮ್ಮ ಕಾಂಗ್ರೆಸ್‌ಗಳ ನಡುವೆ—ಭಾಷಾ ಸಮಸ್ಯೆಯ ಶಿಶು ಹಿಂದಿ ಅಸ್ತಿತ್ವಕ್ಕಾಗಿ ಬಡಿದಾಡುತ್ತಿದೆ, ಅದನ್ನ ಚಪ್ಪರಿಸುವದು, ಎಳೆಯುವದು, ಮುದ್ದಿಸುವದು, ಗುದ್ದುವುದು, ಬರೆ ಎಳೆಯುವದು... ಹೀಗೆ ಎಲ್ಲಾ ನಡೆಯುತ್ತಿದೆ.

ಮೊಸರವಿಗಾದರೂ ಒಂದು ಕಡೇ ದಿನ ಎಂಬುದಿದೆ, ಇದಕ್ಕೆ ಮಾತ್ರ ಅದೂ ಇಲ್ಲವೆಂದು ತೋರುತ್ತದೆ. ಗಂಡ–ಹೆಂಡಿರ ಜಗಳದ ನಡುವೆ ಕೂಸು ಬಡವಾಯಿತಂತೆ. ಹಾಗೆ ಇ—ನಿ ಕಾಂಗ್ರೆಸ್ಸುಗಳ ನಡುವಣ ಜಗಳದಲ್ಲಿ ಭಾಷಾ ತಿಶು ಬಲಿಯಾಗಿದೆ. ಗಂಡ—ಹೆಂಡಿರ ಜಗಳವಾದರೇನು ...ಇ—ನಿ ಕಾಂಗ್ರೆಸ್‌ಗಳ ನಡುವಣ ಜಗಳ?

ಸಕಲ ಜಾತಿ ಪಂಥಗಳಲ್ಲಿ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಐಕ್ಯ ಸಾಧನೆ

(ವಿನೋಬಾ)

ಬೇರೆ ಬೇರೆ ಜಾತಿಗಳೂ, ಪಂಥಗಳೂ, ಆಯಾ ಕಾಲವೂನ ಪರಿಸ್ಥಿತಿಗನುಸರಿಸಿ ಅಸ್ತಿತ್ವದಲ್ಲಿ ಬಂದವು. ಆ ಕಾಲದಲ್ಲಿ ಆ ಪರಿಸ್ಥಿತಿಯಲ್ಲಿ ಅವುಗಳ ಆವಶ್ಯಕತೆಯೂ ಇತ್ತು. ಆ ಕಾಲದಲ್ಲಿ ಅವು ಮಾನವ ಮಾನವರಲ್ಲಿ, ಐಕ್ಯವನ್ನು ಸಾಧಿಸುವ ಕೆಲಸ ಮಾಡಿದವು. ಭಾರತದ ಉದಾಹರಣೆಯನ್ನೇ ತೆಗೆದುಕೊಳ್ಳುವಾ. ಒಂದು ಕಾಲದಲ್ಲಿ ಆಫ್ರಿಕೆಯಿಂದ ಕೆಲವು ಜನರು ಇಲ್ಲಿಗೆ ಬಂದರು. ಅವರನ್ನು ಸ್ವಾಗತಿಸುವ ಪ್ರೇರಣೆ ಆಗಿನ ಭಾರತೀಯರಿಗಾಯಿತು. ಅವರು ಆಫ್ರಿಕೆಯಿಂದ ಬಂದ ಜನರಿಗೆ ಹೇಳಿದರು, "ನೀವು ನಿಮ್ಮ ನಾವು ನಮ್ಮ ಸಂಪ್ರದಾಯಗಳನ್ನು ಅನುಸರಿಸುವ. ಈ ರೀತಿಯಾಗಿ ನಾವು ಸಹಜೀವನ ನಡೆಸುವ." ಈ ಉಪಾಯ ಯೋಜನೆಯಿಂದ ಎರಡು ಭಿನ್ನ ಭಿನ್ನ ಜೀವನ ಸಂಪ್ರದಾಯದ ಜನರಲ್ಲಿ ಸಹ ಅಸ್ತಿತ್ವವನ್ನು ಸಾಧಿಸಲಾಯಿತು. ಹೀಗೆ ಕೂಡಿ ಬಾಳುವ ಯೋಜನೆ ಸ್ವೀಕರಿಸದಿದ್ದರೆ, ಬೇರೆ ಮಾರ್ಗವೆಂದರೆ ಅವರನ್ನು ಗುಂಡು ಹಾಕಿ ಕೊಲ್ಲುವುದು. ಅಮೇರಿಕೆಯಲ್ಲಿ ಹೀಗೆಯೇ ಆಯಿತು. ಅಲ್ಲಿ ಹೊರಗಿನಿಂದ ಜನರು ನೆಲೆಸಲು ಬಂದರು, ಅವರು ಅಲ್ಲಿನ ಮೂಲ ನಿವಾಸಿಗಳನ್ನು ಗುಂಡು ಹಾಕಿ ಕೊಂದರು. ಆದರೆ ಭಾರತವು ಭಿನ್ನ ಭಿನ್ನ ಪರಂಪರೆಯ ಸಮಾಜಗಳಲ್ಲಿ ಸಹಜೀವನವನ್ನು ಸಾಧಿಸುವ ಉಪಾಯವನ್ನು ಕಲೆಯಿತು, ಕಂಡಿತು, ಮತ್ತು ಸಾಧಿಸಿತು. ಭಿನ್ನ ಭಿನ್ನ ಸಂಪ್ರದಾಯದವರು, ವಂಶದವರು ಹೀಗೆ ಒಟ್ಟಿಗೆ ಬಂದಾಗ, ಉಂಟಾಗುವ ಸಮಸ್ಯೆಯನ್ನು ಮೂರು ವಿಧದಿಂದ ಬಿಡಿಸಬಹುದು (೧) ಇನ್ನೊಂದು ಪರಂಪರೆಯವರನ್ನು ಕೊಂದು ಹಾಕುವದು (೨) ಇಲ್ಲವೆ ಬಲಾತ್ಕಾರದಿಂದ ಅವರಿಗೆ ನಮ್ಮ ಸಂಪ್ರದಾಯದಂತೆ ನಡೆಯುವಂತೆ ಮಾಡುವದು. (೩) ಅಥವಾ ಭಾರತವು ಸಾಧಿಸಿದ ಅವರಿಗೆ ಪ್ರತ್ಯೇಕವಾಗಿ ಇದು, ತಮ್ಮ ಸಂಪ್ರದಾಯದಂತೆ ನಡೆಯಲು ಅವಕಾಶ ಕೊಡುವ ಸಹಜೀವನ ಪದ್ಧತಿ. ಈ ಸಹ ಅಸ್ತಿತ್ವದ ಯೋಜನೆಗನುಸಾರವಾಗಿ, ಭಾರತದಲ್ಲಿ ಭಿನ್ನ ಭಿನ್ನ ಜಾತಿಗಳು ಅಸ್ತಿತ್ವದಲ್ಲಿ ಬಂದವು. ಆ ಕಾಲಕ್ಕೆ ಅವು ಮಹತ್ವದ ಕೆಲಸ ಮಾಡಿದವು. ಶಾಂತಿ ಸಹಜೀವನ ಸಾಧಿಸಿದವು. ಆದರೆ ಈಗ ಕಾಲ ಬದಲಾಗಿದೆ. ಈಗ ಈ ಜಾತಿಭೇದಗಳ ಉಪಯುಕ್ತತೆ ಉಳಿದಿಲ್ಲ. ಅವು ಕಾಲಗ್ರಸ್ತವಾಗಿವೆ. ಗಿಡವು ಇನ್ನೂ ಸಸಿಯಾಗಿರುವಾಗ ಅದಕ್ಕೆ ಬೇಲಿ ಆವಶ್ಯ. ಸಸಿಯು ಸಾಕಷ್ಟು ಬೆಳೆದನಂತರ ಬೇಲಿಯನ್ನು ಕಿತ್ತುಹಾಕದೆ ಹೋದರೆ, ಬೇಲಿಯೇ ಗಿಡದ ಬೆಳವಣಿಗೆಗೆ ಆತಂಕ ಒಡ್ಡುವದು. ಹೀಗೆ ಭಿನ್ನ ಭಿನ್ನ ಜಾತಿಯ ಹೆಸರಿನಿಂದ ನಮ್ಮ ನಮ್ಮೊಳಗೆ ಕಟ್ಟಿಕೊಂಡ ಗೋಡೆಗಳು ನಮ್ಮ ಏಳಿಗೆಗೆ ಘಾತಕವಾಗಿವೆ. ಹಿಂದೆ, ಈ ಜಾತಿಗಳ ಮೂಲಕ ಭಿನ್ನ ಭಿನ್ನ ಸಮಾಜಗಳಲ್ಲಿ ಪ್ರೇಮ ಜೀವನವು ಶಕ್ಯವಾಯಿತು, ಈಗ ಜಾತಿ ದ್ವೇಷವು ಬೆಳೆಯುತ್ತಿದೆ. ಭಿನ್ನ ಭಿನ್ನ ಧರ್ಮ ಪಂಥಗಳ ಸ್ಥಿತಿಯು ಸಹ ಇದೇ ಆಗಿದೆ. ಇಂದು ಇಡೀ ಜಗತ್ತು ಸಣ್ಣದಾಗಿದೆ. ರಾಷ್ಟ್ರ ರಾಷ್ಟ್ರಗಳು ಸಮೀಪ ಬಂದಿವೆ. ಸಂಪರ್ಕವು ನಿಕಟವಾಗಿದೆ; ಮೊದಲು ಧರ್ಮವು ಒಂದು ಸ್ಥಳದ ಜನರಲ್ಲಿ ಐಕ್ಯವನ್ನು ಸಾಧಿಸುವ ಕೆಲಸ ಮಾಡುತ್ತಿತ್ತು. ಆದರೆ ವಿಜ್ಞಾನದ ಪ್ರಗತಿಯಾದುದರಿಂದ, ಬೇರೆ ಬೇರೆ ದೇಶಗಳು ಜಾತಿಗಳು ಪರಸ್ಪರ ಸಮೀಪ ಬಂದಿವೆ. ಹೊಸ ಪರಿಸ್ಥಿತಿಯಲ್ಲಿ ಧರ್ಮಗಳು ಜನರಲ್ಲಿ ಐಕ್ಯವನ್ನುಂಟು ಮಾಡುವ ಬದಲು, ಅನೈಕ್ಯಕ್ಕೆ ಕಾರಣವಾಗಿವೆ. ಹಿಂದೂ, ಮುಸ್ಲಿಮ, ಸಿಖ, ಪಾರಸೀ ಮುಂತಾದ ಧರ್ಮದವರಲ್ಲಿ ಅವರವರ ಸಮಾಜದಲ್ಲಿಯೂ ಸಹ, ನಡೆದು ಬಂದಿರುವ ಕೆಲ ರೂಢಿಗಳು ಈಗಿನ ಕಾಲಮಾನಕ್ಕೆ ನಿರುಪಯೋಗಿಯಾಗಿಬಿಟ್ಟಿವೆ. ಹಿಂದಿನ ಕಾಲದಲ್ಲಿ ಅವು ಯೋಗ್ಯವಿದ್ದವು.

ಈ ಪರಿಸ್ಥಿತಿಯಲ್ಲಿ ಎಲ್ಲ ಧರ್ಮಗಳ ಬಗ್ಗೆ ನಮಗೆ 'ನ್ಯಾಯವೆನಿಸಬೇಕು'. ಆದರಲ್ಲಿಯ ಸಾರವನ್ನು ಸ್ವೀಕರಿಸಬೇಕು. ಒಂದು ಧರ್ಮದವರು ಇನ್ನೊಂದು ಧರ್ಮದಲ್ಲಿರುವ ಉತ್ತಮ ಅಂಶಗಳನ್ನು ಗ್ರಹಣ ಮಾಡಬೇಕು. ನೈತಿಕ, ಸದಾಚಾರ ಮತ್ತು ಆಧ್ಯಾತ್ಮನಿಷ್ಠೆ ಇವೇ ಸಕಲ ಧರ್ಮಗಳ ಸಾರಭೂತ ತತ್ವವು. ಆದುದರಿಂದ ಎಲ್ಲ ಧರ್ಮಗಳೂ ಸಮಾನ. ಸುಳ್ಳು, ಮೋಸ, ಕೊಲೆ ಸುಲಿಗೆ ಇವು ಯಾವ ಧರ್ಮಕ್ಕೂ ಮಾನ್ಯವಿಲ್ಲ. ಆದುದರಿಂದ ಧರ್ಮದ ಮುಖ್ಯ ತಿರುಳನ್ನು ಸಾರಭೂತ ತತ್ವವನ್ನು ಗ್ರಹಣ ಮಾಡಬೇಕು. ಐಕ್ಯದ ನೆಲೆ ಬಿತಬೇಕು. ಧರ್ಮದ ಮೇಲಿನ ಸಿಪ್ಪೆಯನ್ನು ಒಕ್ಕಣಿಸಬೇಕು. ಇದೇ ಅದರ ಉಪಾಯ. ಈ ಕಾರಣದಿಂದಲೇ ನಾನು ಎಲ್ಲ ಧರ್ಮಗಳ ಸಾರವನ್ನು ತೆಗೆದು ಜನರ ಮುಂದಿಟ್ಟಿರುವೆ. ಜನರು ಅದನ್ನ ಓದಿದರೆ, ಒಬ್ಬರಿಗೆ ಇನ್ನೊಬ್ಬರ ಧರ್ಮದ ಪರಿಚಯವಾಗುವದು.

ಅನುವಾದ—ತಿಮ್ಮಪ್ಪ ನಾಯಕ
(ಹಿಂದೀ ಭೂದಾನಯಜ್ಞ ದಿಂದ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಸಾತ್ವಿಕ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.
ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

Edited, Printed & Published by K. H. Shetty at the Navayuga Press, Udipi. S. India.

ನವಯುಗ

NAVAYUGA 16-4-1970 ಸಂಪುಟ 49 ಸಂಚಿಕೆ 32

ಅಯ್ಯೋ ಪಾಪ-ಹಿಂದಿ ವಿರೋಧ

ಇದೀಗ ಚಂದರಾಶಿಯಲ್ಲಿ ಭಗವಾನ ಭಾಸ್ಕರನು ತನ್ನ ಪ್ರಭೆಯನ್ನು ಪ್ರದರ್ಶಿಸಲು ಪ್ರಾರಂಭಿಸಿದ್ದಾನೆ, ಆದರೂ ಇಂದಿನ ವಾತಾವರಣ ಕಳೆದ ವರ್ಷದ [illegible]ದಂತಿಲ್ಲ. ಕಳೆದ ವರ್ಷದ ಬಿಸಿಲಿನಿಂದ ತಮಿಳುನಾಡು ತತ್ತರಿಸಿ ಹೋಗಿತ್ತು. ದ್ರಾ. ಮು. ಕ. ವಿಷವೃಕ್ಷ ಕೂಡಾ. ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಪ್ರಧಾನಿ ಪದವಿಯ ಸೆರಗನ್ನು ಹರಡಿ ಆ ವಿಷವೃಕ್ಷಕ್ಕೆ ನೆರಳನ್ನುಂಟುಮಾಡಿದರೂ, ಆ ವಿಷವೃಕ್ಷದ ಹಿಂದಿ ದ್ವೇಷದ ಕೊಂಬೆ ಪೂರ್ಣ ಒಣಗಿ ಹೋದಂತಿತ್ತು. ವೃಕ್ಷದ ಫಲದಿಂದ ತನ್ನ ಹೊಟ್ಟೆ ಹೊರೆದುಕೊಳ್ಳಬೇಕೆನ್ನುವ ಇಂದಿರಾಜೀ ಇಂಗಿತವನ್ನರಿತ ತಿರು ಕಾಮರಾಜರು ತಮ್ಮ ಚಾತುರ್ಯವನ್ನು ಪ್ರಕಟಿಸಲಾರಂಭಿಸಿದ್ದಾರೆ. ಹಿಂದಿ ಹಗೆಯ ಕೊಂಬೆಯತ್ತ ಅವರಿಂದ ತಮ್ಮ ರಾಜಕೀಯದ ಎಂಜಲನ್ನು ಉಗುಳುತ್ತಿದ್ದಾರೆ. ಅಧಿಕಾರದ ಫಲವನ್ನು ಅನುಭವಿಸುವುದರೊಂದಿಗೇನೇ ಅದಕ್ಕೆ ಪೂರಕವಾಗಿ ಇನ್ನೊಂದು ಕೆಲಸವೂ ಆಗಬೇಕು. ಆದಷ್ಟೇ ಕೊಂಬೆ ಚಿಗುರಿ ಬೆಳೆದು ಇಂದಿರಾಜಿಯವರ ಸೆರಗನ್ನು ಕೂಡ ಮಾಡಿ, ಹರಿದು ಬೆಳೆಯಬೇಕು. ಅಂದರೆ ಇಂದಿರಾಜೀಯವರ ಸೆರಗು ಹರಿದು ಚಿಂದಿಚಿಂದಿಯಾಗಿ ಹೋಗಬೇಕು. ಕೊಂಬೆಗೆ ಧಾರಾಳವಾದ ಮನಸ್ಸಿನಿಂದ ಉಗುಳುವಂತೆ (ಕೀರಿಟ ಇಡುವಂತೆ) ನಟಿಸಿ ಆ ವೃಕ್ಷಕ್ಕೂ, ಅದಕ್ಕೆ ಆಸರೆಯನ್ನೀಯುತ್ತಿರುವ ಅನಾವರಣ ಅಂಗನೆಯ ಮೇಲೂ ರಾಜಕೀಯ ಎಂಜಲನ್ನು ಉಗುಳುವದೇ ಅವರ ಕಾರ್ಯ ಚಾತುರ್ಯ. ಎಡೆಬಿಡದೆ ಕಾಮರಾಜರು ಉಗುಳುತ್ತ ಬಂದುದರಿಂದ ಒಣಗಿದ್ದ ಆ ಕೊಂಬೆ ಚಿಗುರೊಡೆಯುವಂತೆ ಕಂಡು ಬಂತು. ವಿಷವೃಕ್ಷ ಅಲುಗಾಡಿತು.

ದಿಲ್ಲಿಯಲ್ಲಿ ಸಂಕಲ್ಪಿತ ಸಭೆ ಸೇರಿದಾಗ ರಾಷ್ಟ್ರಾಧ್ಯಕ್ಷರು ಭಾಷಣ ಮಾಡಿದ ಮೇಲೆ, ಅದಕ್ಕೆ ತಿದ್ದುಪಡಿ ಸೂಚಿಸುವ ರೀತಿಯಲ್ಲಿ ಹಿಂದಿ ವಿರೋಧದ ಹಗೆ ಹೊಗೆಯಾಡಿತಲ್ಲಿ. ತಿದ್ದುಪಡಿ ಚರ್ಚೆಗೆ ಬಂದು ಇನ್ನೇನು ಬಲಪ್ರದರ್ಶನ ನಡೆಯಬೇಕು, ಅದಕ್ಕೆ ಸರಿಯಾಗಿ ಕೈಯೆತ್ತುವವರು ಕೇವಲ ಇಪ್ಪತ್ತೈದು ಸದಸ್ಯರು, ದ್ರಾ. ಮು. ಕ. ತಮಿಳುನಾಡಿನಲ್ಲಿ ಹಿಂದಿ ಹಗೆಯ ಹೊಗೆ ಉಗುಳುತ್ತಿದೆಯಾದರೂ ಅದರ ಸದಸ್ಯರು ಆದಾಗಲೇ ಕೆಲವರ್ಷಗಳಿಂದ ಆಗಾಗ ದಿಲ್ಲಿಗೆ ಹೋಗುತ್ತಿದ್ದು, ಲೋಕಸಭಾ ಭವನದ ಉಪಾಹಾರಗೃಹದ [illegible] ದ ಅವರೆಲ್ಲರೂ ಕೈಯೆತ್ತುವವರನ್ನಲ್ಲ ಇನ್ನು ಸಾಧ್ಯವೇ ಇಲ್ಲ. ಅವರೂ ಕೆಲ್ಲವಿಗೆ ಬೆದರಿ ವಿರೋಧಿಸದೆ ಇರುವಂತೆಯೂ ಇಲ್ಲ. ಈಗ ಅವರಿಗೆ ಉಭಯ ಸಂಕಟ. ಆದದರಿಂದ ಇಪ್ಪತ್ತೈದು ಸದಸ್ಯರಲ್ಲಿ ಹದಿನೈದು ಸದಸ್ಯರು ಅದು ಅಲ್ಲಿಗೆ ಹೋಗಲೇ ಇಲ್ಲ. ಅಂದರೆ ಕೇವಲ ಹತ್ತು ಮಂದಿ ಮಾತ್ರ ಅಂದ ಕೈಯೆತ್ತಿರವರು. ಉಳಿದವರ ಸ್ವತಂತ್ರ ಪಾರ್ಟಿಗೆ ಸೇರಿದವರಿದ್ದಾರೆ. ಕಾಮರಾಜರೂ ಅದರಲ್ಲಿ ಭಾಗವಹಿಸಲಿಲ್ಲ. "ಇದನ್ನು ಅಯ್ಯೋ ಪಾಪ" ವೆಂದು ಕರೆಳಿದಿನ ಶಂಕರ್ "ಪಾಕ್ಷಿಕ ಪತ್ರಿಕೆಯಲ್ಲಿ" ಬೃಹಸ್ಪತಿಯವರು ಸ್ವಾರಸ್ಯವಾಗಿ ಹಾಸ್ಯರೂಪದಲ್ಲಿ ವರ್ಣಿಸಿದ್ದಾರೆ. ಓದುಗರೂ 'ಬೃಹಸ್ಪತಿ'ಯೊಂದಿಗೆ 'ಅಯ್ಯೋ, ಪಾಪ' ಅನ್ನದಿರಲಾರರು.

ಸಂಸದ್ ಭವನದ ಬಾಗಿಲಲ್ಲಿ ಬೃಹಸ್ಪತಿ ನಿಂತುಕೊಂಡಿದ್ದರು. 'ಯಾರನ್ನು ಭೇಟಿಯಾಗಲೆಂದು' ಅವರು ಆಲೋಚಿಸಿಕೊಂಡಿದ್ದಾಗ 'ದೊಪ್ಪೆ'ಂದು ಅವರ ಕಾಲಡಿಯಲ್ಲಿ ಅದೇನೋ ಬಂದು ಬಿದ್ದಿತು. ಅದನ್ನು ಅವರು ಹಿಡಿದೆತ್ತಿ ನಿಲ್ಲಿಸಿದರು.

ಹಿಂದಿಯನ್ನು ವಿರೋಧಿಸಿ ದ್ರಾ.ಮು.ಕ. ವೀರರಿಂದ ಲೋಕಸಭಾ ಭವನದೊಳಗೆ ತೆಗೆದುಕೊಂಡು ಬರಲಾಗಿದ್ದ ತಿದ್ದುಪಡಿ ತೀರ್ಮಾನವಾಗಿತ್ತು ಅದು! ಆ ಹಿಂದಿ ವಿರೋಧ ತೀರ್ಮಾನದ ದೇಹವನ್ನು ಬೃಹಸ್ಪತಿಯವರು ನೋಡಿದರು. ಎಷ್ಟೊಂದು ಬಣ್ಣ ಕಳೆ ತಿವಿತಗಳು!

"ಹಿಂದಿ ವಿರೋಧವೇ! ನಿನಗೇನಾಗಿಬಿಟ್ಟಿತು? ಯಾಕೆ, ಈ 'ಗತಿ?' ಕೇಳಿದರು ಆ ಬೃಹಸ್ಪತಿ. ಹಿಂದಿ ವಿರೋಧವು ಬಿಕ್ಕುತ್ತ ಹೇಳಿತು— ನೋವು ತಳ್ಳುತ್ತಿ, ಎತ್ತಿ ಬೀಸಾಡಲ್ಪಟ್ಟೆನ.

'ಹಾಗಾದರೆ, ಅವರೆ ಈ ರೀತಿ ನಿನ್ನನ್ನು ಕಂಡ ಬಿಟ್ಟ ಶಕ್ತಿಯಿಂದ ತಿವಿದವರ್ಯಾರು?"

"ನನ್ನನ್ನು ಯಾರು ತಿವಿದಿಲ್ಲನೆಂದು ಕೇಳಿರಿ,'

'ಆ ರೀತಿ ಆದ್ದಾರೆ ಅಷ್ಟು ಜಗುಪ್ಸೆಯಿಂದ ಮಾತಾಡುತ್ತೀ? ತಮಿಳುನಾಡಿನಲ್ಲಿ ನಿನಗೆ ಚೆನ್ನಾಗಿ ಬೆಂಬಲವಿದೆ. ಅದನ್ನು ಮರೆತು ಬಿಡಬೇಡ."

"ತಮಿಳುನಾಡಿನಲ್ಲಿ ಬೆಂಬಲ ಕೊಡುವವರು ಇಲ್ಲಿಗೆ ಬಂದಲ್ಲಿ, ನನ್ನನ್ನು ಅತ್ತಕಡೆ ನೂಗಿ ಬಿಟ್ಟುಬಿಡುತ್ತಾರೆ.'

"ಈ ರೀತಿ ಮಾತಾಡ ಬೇಡ. ನೀನು ದ್ರಾ. ಮು. ಕ. ದ ಮುದ್ದು ಮಗುವಲ್ಲವೇ?'

'ಅದು ಆ ಕಾಲ, ನನ್ನನ್ನು ಗಮನಿಸಿಕೊಳ್ಳಲು ಆಗ ದ್ರಾ. ಮು. ಕ. ಲೋಕಸಭಾ ಸದಸ್ಯರಿದ್ದರು. ಈಗ ಹತ್ತು ಸದಸ್ಯರು ಮಾತ್ರ ಉಳಿದಿದ್ದಾರೆ.'

'ಬಾಕಿ ಹದಿನೈದು ಮಂದಿ ಎಲ್ಲಿ?'

"ಅವರುಗಳು ಕಾಮರಾಜರನ್ನು ಹುಡುಕಿಕೊಂಡು ಹೋಗಿದ್ದಾರೆಂದು ಒಬ್ಬ ಮಂತ್ರಿ ಹೇಳಿದ್ದಾರೆ."

"ಕಾಮರಾಜರಿಗೂ ನಿನಗೂ ಸಂಬಂಧ ಇಲ್ಲವಲ್ಲಾ?"

'ಅದು ಆ ಕಾಲ. ಈಗ ಅವರು ನನ್ನನ್ನು ದತ್ತು ತೆಗೆದುಕೊಳ್ಳುವದಾಗಿ ಹೇಳಿರುವರು."

"ಸರಿ! ಅವರೆಲ್ಲಿ?"

"ತೆಗೆದುಕೊಳ್ಳಲು ಅದು ಒಳ್ಳೆಯ ಮುಹೂರ್ತ. ಆದರೆ ಕಾಮರಾಜರೇ ಕಾಣೆ."

"ಸರಿ! ದ್ರಾ. ಮು. ಕ. ದ ಮುದ್ದು ಮಗುವಾಗಿರುವ ನಿನ್ನನ್ನು ದತ್ತು ತೆಗೆದುಕೊಳ್ಳುವದಾಗಿ ಕಾಮರಾಜ ಹೇಳಿರುವರು, ಅಷ್ಟು ಹಠ ಕೆಟ್ಟುಹೋಯಿತೆ. ದ್ರಾ. ಮು. ಕ. ದ ಅರ್ಧಭಾಗಕ್ಕಿಂತಲೂ ಅಧಿಕ ಮಂದಿ ಹೋಗಿ ಬಿಟ್ಟರೆಂದರೆ ಅರ್ಥ? ನಿನ್ನನ್ನು ಕಾಮರಾಜರಿಗೆ ದತ್ತುಕೊಟ್ಟುಬಿಡುವ ಅವರು ತೀರ್ಮಾನವನ್ನು ಕೈಬಿಟ್ಟರೇ?"

"ಅದನ್ನೇ ಅರಿತುಕೊಳ್ಳಲಿಕ್ಕಾಗಿರುವದಿಲ್ಲ."

'[illegible] ಕೆಲವರು ಒಡನೆ ಕೇಳಿತು [illegible]. [illegible] ಬೃಹಸ್ಪತಿಯು ಹಿಂದಿ ವಿರೋಧವನ್ನು [illegible] ತೀರ್ಮಾನವನ್ನು [illegible]

'ಈ ಕೇಸ್ ಬದುಕುವ ಆಶೆ ಇಲ್ಲ. ಒಡನೆ, ಈಗಲೇ ಬಹಳ ರಕ್ತದ ಅಗತ್ಯವಿದೆ' ಯೆಂದರು.

"ದ್ರಾ. ಮು. ಕ. ಗ್ರೂಪ್ (ಜಾತಿ) ರಕ್ತ ಮಾತ್ರ ನನ್ನ ರಕ್ತಕ್ಕೆ ಸೇರೀತೆ"ಂದು ಹಿಂದಿ ವಿರೋಧ ಗುಣುಗುಟ್ಟಿತು.

ಬೃಹಸ್ಪತಿಯವರು ಒಡನೆ ಅಲ್ಲಿಂದ ಹೊರಟರು. ಅವರು ಲೋಕಸಭೆಯಲ್ಲಿದ್ದ ದ್ರಾ. ಮು. ಕ. ಸದಸ್ಯರನ್ನು ಕಂಡರು.

"ಏನಿದು? ಹಿಂದಿ ವಿರೋಧವನ್ನು [illegible] ನ ಧೈರ್ಯವಾಗಿ ಬಿಟ್ಟು ಬಿಟ್ಟಿರಲ್ಲವೇ?" ಬೃಹಸ್ಪತಿ ಕೇಳಿದರು ದ್ರಾ. ಮು. ಕ. ಸದಸ್ಯರನ್ನು.

[illegible] ಹೇಳಿದ? ಬೇಡವಲ್ಲ ಬಿದ್ದುಕೊಂಡಿದ್ದ ಹಿಂದಿ ವಿರೋಧವನ್ನು ನಾವಲ್ಲವೇ ಲೋಕಸಭಾಭವನದೊಳಗೆ ತಂದುಕೊಂಡು ಬಂದವರು? [illegible] ಕೇಳಿದರು.

"ಸರಿ! ಅದನ್ನು ಖಂಡಿತವಾಗಿ ಎಸೆದು [illegible] ಕೂಡ ಹಿಡಿದು ಕೊಳ್ಳಲು ಹತ್ತು ಮಂದಿ ತಾನೇ ಇದ್ದಿರಿ? ಬಾಕಿ ಹದಿನೈದು ಎಲ್ಲಿ?"

"ಕಾಮರಾಜರನ್ನು ಹುಡುಕಿ ಕರೆದುಕೊಂಡು ಬರಲು ನಾವು ಕಳುಹಿಸಿದೆವು."

"ಏನು? ಈ ಹದಿನೈದು ಮಂದಿಗಿಂತ ಅವರೊಬ್ಬರ ಅಧಿಕ ಬಲಶಾಲಿ ಅನ್ನುವ ಅಭಿಪ್ರಾಯವೇ?"

"ಅದೆಲ್ಲಾ ಏನೂ ಇಲ್ಲ. ಕಾಮರಾಜರು ಹಿಂದಿ ವಿರೋಧವನ್ನು ತನ್ನ ಸ್ವಂತ ಮಗುವಿನ ಹಾಗೆಂದು ಮಾತಾಡಲಾರಂಭಿಸಿ [illegible] ಅವರೂ ಅಲ್ಲೇ ಇದ್ದು ಗಮನಿಸಿಕೊಳ್ಳಲೆಂದು ಹುಡುಕಿದೆವು.'

'ಕಾಮರಾಜರನ್ನು ಹುಡುಕಲು ಹದಿನೈದು ಮಂದಿ, ಮಂತ್ರಿಯವರನ್ನು ಹುಡುಕಲು ಹತ್ತು ಮಂದಿಯೆಂದು ಹೋಗಿಬಿಟ್ಟಲ್ಲಿ ಲೋಕಸಭೆಯೊಳಗೆ ನಿಮ್ಮ ತೀರ್ಮಾನಗಳ ಗತಿ ಏನು?"

"ನಮ್ಮ ತೀರ್ಮಾನಗಳನ್ನು ಗಮನಿಸಿಕೊಳ್ಳಲು [illegible] ಕಾಂಗ್ರೆಸ್ಸು [illegible]."

ಅದು ಹೇಗೆ?'

"ಇಂದಿರಾ ಕಾಂಗ್ರೆಸ್ಸಿನ ತೀರ್ಮಾನ [illegible] ನಾವು ಗಮನಿಸಿಕೊಳ್ಳುವದಿಲ್ಲವೇ? [illegible] ದೇ [illegible]'

"ಹಿಂದಿ ವಿರೋಧ ತೀರ್ಮಾನವನ್ನು ಇಂದಿರಾ ಕಾಂಗ್ರೆಸ್ಸ್ ಸೋಲಿಸಿಬಿಟ್ಟಿದೆಯಲ್ಲವೇ? [illegible]

(ಎಂಟನೇ ಪುಟ ನೋಡಿರಿ)

ಮುದ್ದಿನ ಮಗಳು, ಮೆಚ್ಚಿನ ರಾಜ್ಯ

ಬೂದಿಯೊಳಗಿನ ಕೆಂಡವನ್ನು ಪ್ರಧಾನಿ ಇಂದಿರಾಜಿ ಊದಿದಾಗ, ಇನ್ನೇನು, ಕರ್ನಾಟಕಕ್ಕೆ ಬೆಂಕಿ ಹಿಡಿಯಿತು ಎಂಬ ಭಾಸ, ಆದರೆ ಅದು ಇದೀಗ ಆಭಾಸ. ಕನ್ನಡಿಗರ ಸೋಲಿನ ಕರುಣೆ—ಒಲುಮೆಗಳು ಇದಕ್ಕೆ ಕಾರಣವಲ್ಲ; ಅವರ ಐಕ್ಯಗಾನವೇ ಶಕ್ತಿ. ಪರಿಣಾಮ ಸ್ಪಷ್ಟ. ಇನ್ನು ಕೆಲಕಾಲ, ಗೋಕಾಕ್, ಬಹುಕಾಲ ಇಂದಿರಾಜಿ 'ಗಡಿವಿವಾದ'ವನ್ನು ಎತ್ತುವುದಿಲ್ಲ. ಮುಂದಿನ ಚುನಾವಣೆಯೂ ಬಂತಾದುದರಿಂದ ಅವರಿಗಿದು ಬಿಸಿತುಪ್ಪ.

ಕಳೆದ ಸಾರ್ವತ್ರಿಕ ಚುನಾವಣೆಗಳಿಗೆ ಹಿಂದೆ ಮರಾಠಿಗರ ಪುಂಡಾಟಿಕೆ-ಮೊಂಡಾಟಿಕೆಗಳಿಗೆ ಶ್ರೀಮತಿ ಗಾಂಧಿ ಶರಣು. ಶಿವಸೇನೆಯ ಬಲಗುಂದಿಸಲು ತಾನು ಗೆದ್ದು ಬರಲು ಅವಿಭಾಜ್ಯ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಬೋರ್ಡು ಕಾಲಿಸಿ. ಮಹಾಜನ ಆಯೋಗದ ಬದಲು ಚುನಾವಣಾನಂತರವೇ ವರದಿ ನೀಡಲು ಇದಕ್ಕೆ ಆದೇಶ. ಅದರಿಂದಲೇ ಎರಡೂ ರಾಜ್ಯಗಳಲ್ಲಿ ತಮ್ಮ ಪ್ರತಿಷ್ಠೆ ಉಳಿಸಿ ಕಾಂಗ್ರೆಸ್ಸಿಗೆ ಮಹಾವಿಜಯ ಭೇರಿ. ಮಂದಿಯ ಸಮರ್ಪಣೆ, ಮರಾಠಿಗರಿಗೆ ಅಸಮಾಧಾನ—ರೋಷ, ಕನ್ನಡಿಗರಿಗೂ ಅಸಮಾಧಾನ—ಆದರೂ ಆಗಲೆಂಬ ಸಮ್ಮತಿ.

ಶ್ರೀಮತಿ ಇಂದಿರಾಗಾಂಧಿಯವರ ಪ್ರಧಾನಿ ಪದವಿಂದು ಹಲವು ಗಾಳಿಗಳಿಂದ ಅಲ್ಪಾವಧಿ ಮಧ್ಯಂತರ ಬೆಂಬಲವೇ ಅವರಿಗೆ ಬೇಗೋಲು. ಕಾಂಗ್ರೆಸ್ಸು ಹೋಳಾಗುವ ವೇಳೆ ಸಂಘಟಕರಾಗಿ ತೆರಳಿದ್ದ ಶ್ರೀ ಯಶವಂತರಾವ್ ಬಲವಂತರಾವ್ ಚವನರು ತನ್ನನ್ನು ಕೃಷ್ಣನೆಂದೂ ಇಂದಿರಮ್ಮನು ಮತ್ತು ಗಾಂಧಿಯನ್ನು ಪಾಂಡವರೆಂದೂ ಎಸ್ಸೆನ್ ರ ಶತ್ರುಪ್ರಿಯ ಸಮೂಹವನ್ನು ಕೌರವರೆಂದೂ ಕರೆದದ್ದು ಮಾತ್ರ ವಿರೋಧಾಭಾಸ. ಅವರ ಕೃಷ್ಣತನ ಮಾತ್ರ ಪ್ರಶಂಸಾರ್ಹ. ಈ ಕಾಂಗ್ರೆಸ್ ಕೃಷ್ಣ ಸದ್ಯ ಇಂದಿರಮ್ಮನ ಸೆರಗಿನ ಹಿಂದೆ ಇದ್ದಾನೆ. ಆದುದರಿಂದಲೇ ಅಲ್ಲಿಗೆ ಮರಾಠಿ ಎಂ. ಪಿ. ಗಳ ಭದ್ರರಕ್ಷೆ. ಈ ಕೃಷ್ಣ ಪ್ರೀತ್ಯರ್ಥವಾಗಿ ಇಂದಿರಮ್ಮ ಬೆಳಗಾಂವಿ—ಕಾರವಾರಗಳನ್ನು ಕರ್ನಾಟಕದಿಂದ ಕಿತ್ತುಕೊಡಬೇಕು. ಸಂರಕ್ಷಕನಿಗೆ ಸಂಭಾವನೆ ಬೇಡವೆ?

ಬೂದಿಯೂದಿ, ಕನ್ನಡಿಗರ ಮುಖಕ್ಕೆ ಮಸಿ ಬಳಿಯಲು ಇಂದಿರಮ್ಮನ ಆರಂಭ ಕ್ಕೇನೋ ವಿಷಯಗಳಿಗೆ, ದೊಂಡು ನಾಯಕರನ್ನು ಬಾಗಾದರೂ ಸಮಾಧಾನಗೊಳಿಸುವ ಇರಾದೆ. ರಾಜ್ಯಕೀಯ ಪುರುಷರಿಗೆ ಕೆಲವೊಂದು ದೊಡ್ಡ ಸಮಸ್ಯೆಗಳು ಬೇರೆ ಬೇಕು. ತಮ್ಮ ಅಧಿಕಾರಕ್ಕೆ ಅಡ್ಡಿ ಬಂದಾಗ, ಇವನ್ನು ವಿಷಮಕ್ಕೇರಿಸುವುದು ತನ್ಮೂಲಕ ಬೆಂಬಲವು ಗಳಿಸಿಕೊಳ್ಳುವುದ. ಅವರ ಪರಿಪಾಠ. ಆಂತರಿಕ ಸಮಸ್ಯೆಗಳಿಂದ ಜನ ಕ್ಷೋಭೆಗೊಂಡಾಗ, ಭಾರತ ದ್ವೇಷ ಜ್ವಾಲೆಯನ್ನು ಛೇಡಿಸುವುದು ಪಾಕ್ ನೀತಿ. ಹಾಗೆಯೇ ಬಜೆಟ್ ಅಧಿವೇಶನದೊಳಗೆ ಮಹಾರಾಷ್ಟ್ರಕ್ಕೆ ಬೆಳಗಾಂವಿ ಕೊಟ್ಟೇತೀರಬೇಕೆಂದು ತನ್ನ ಮೇಲೆ ಬೆದರಿಕೆ—ಗದರಿಕೆ ಬಂದಾಗ, ಪಾಪ, ಇಂದಿರಾಜಿಯೇನು ಮಾಡಬೇಕು?

ಬಜೆಟ್ ಅಧಿವೇಶನದಲ್ಲಿ ಶ್ರೀಮತೀಜಿಯವರು ಹಲವಾರು ವಿಜಯಗಳಿಸಿದರು. ರಾಜ್ಯಸಭೆಯಲ್ಲಿ ಅವರ ಬಲ ಕುಸಿದರೂ ಬೆಂಬಲ ಕುಸಿಯಲಿಲ್ಲ. ಆದುದರಿಂದ ಸದ್ಯ ಊದುವುದು ಅವರಿಗೆ ಸಾಕೆನಿಸಿತು. ನಳಿಗೆಯಲ್ಲಿ ಊದಿಗಾಳಿಗೇರಿಸಿದ ಸಾಬೂನಿನ ಗುಳ್ಳೆ ಕೆಲಕ್ಷಣ ಗಾಳಿಯಲ್ಲಿ ತೇಲಾಡಿ ಕೊಂಡೇ ಇರುತ್ತದೆ. ಮಂತ್ರಿ ಶ್ರೀಕೃಷ್ಣ ಪ್ರೀತ್ಯರ್ಥವಾಗಿಯೇ ಇಂದಿರಮ್ಮನ ಈ ನಾಟಕವೆಂಬುದು ಇದೀಗ ಸ್ಪಷ್ಟವಾಗಿದೆ.

ಮೊತುಮೊತಿಗೆ ಮರಾಠಿ ನಾಯಕರು ಆಯೋಗದ ವರದಿ ಬೇಡ; ಪಾಟೀಲರ ಗೋತ್ರ ತನ್ನ ಎನ್ನುತ್ತಾರೆ—ಬೆಳಗಾಂವಿ-ಕಾರವಾರಗಳನ್ನು ಮರಾಠಿ ಮಾಲೆಯಲ್ಲಿ ಪೋಣಿಸಿದರೆ. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳೂ ಇದಕ್ಕೆ ಒಪ್ಪಬೇಕು ಎಂಬುದ ಇಂದು ಇಂದಿರಾಜಿ ಮತ್ತು ಮಂತ್ರಿ ನಾಯಕ ಆಗ್ರಹದಿಂದ ಕನ್ನಡ ಎಸ್ಸೆನ್ನರ, ಒಪ್ಪಿದ ಮಹಾಜನರ, ಕೊಂಡು ಹಾಕಿದ ನಾಯಕರೇ ಗಪ್ಪಟ ಸ್ವರವನ್ನು ಅಪ್ಪಿಕೊಳ್ಳ ಹೊರಟಿದ್ದಾರೆ. ಇದಕ್ಕೆ ಪಾಟೀಲರು ಎಂದೂ ಕಳೆಬಾಗುವುದಿಲ್ಲ.

ಕೆಚ್ಚು ಒಂದು ಜಾತಿಗೆ ಅಥವಾ ರಾಜ್ಯಕ್ಕೇ ಸೀಮಿತವಾದುದಲ್ಲ. ಕೇಂದ್ರ ಸರಕಾರ ಪುಂಡ ಟೊಳಿಯ ಮುಂದೆ ತಲೆಬಾಗುವುದನ್ನೇ ನೀತಿಯೆಂದು ಮುಂದುವರಿಸಿದರೆ, ಅಂದೇ ದಿವಾಳಿಕೋರತನದ ಪ್ರದರ್ಶನಕ್ಕಾರಂಭ. ಕನ್ನಡ ಚಳುವಳಿಗಾರರು "ಬಿಸಿಯ ವಾತಾವರಣ" ನಿರ್ಮಿಸುವಲ್ಲಿ ತಾವೂ ಹಿಂದಿಲ್ಲವೆಂದು ಎಚ್ಚರಿಸಿ ಬಂದಂತೆ ನಡೆದರು, ಇಲ್ಲಿಯೂ ಬಂದ್—ಚಳುವಳಿ ನಡೆಯಿತು; ಇದರ ಬಿಸಿ ದಿಲ್ಲಿಗೂ ತಾಗಿತು. ಗಡಿ ವಿವಾದದ ಬಗ್ಗೆ ಹೊಸ ಸಲಹೆಯನ್ನೂ ಆಲೋಚಿಸಿಲ್ಲವೆಂದು ಶ್ರೀಮತೀಜಿಯವರು ಶ್ರೀಮದ್ಗಾಂಭೀರ್ಯಕನ್ನ ಮುಂದು ಉದ್ಗರಿಸಿದರು.

ಕನ್ನಡ ಶಾಸಕರ ನಿಯೋಗಗಳು ಜನಾಭಿಪ್ರಾಯ ಮೂಡಿಸಲು ಹೊರಟಿವೆ.

ರಾಷ್ಟ್ರವಿಭಕ್ತಿಯನ್ನು ಪ್ರತಿಬಿಂಬಿಸುವಲ್ಲಿ ಇವು ಸಮರ್ಥವಾಗಿವೆ. ಆದುದರಿಂದಲೇ ಕೇಂದ್ರ ಘಟಕರ್ವೂ ಹಿಡಿಮುಡಿ ಇನ್ನೊಂದು ಸಮಯಕ್ಕಾಗಿ ಹೆಂಚು ಹಾಕುತ್ತಿದೆ. ಶ್ರೀಮತಿ ಗಾಂಧಿಯವರು ಚಂಡೀಗಢವನ್ನು ಪಂಜಾಬಿಗೆ ಕೊಟ್ಟು ಸಂತರ ಪ್ರತಿಷ್ಠೆಯನ್ನು ಕಡಿಮೆಮಾಡಿ ಗುರ್ನಾಮ್ ಸಿಂಗರನ್ನು ಎತ್ತಿಕಟ್ಟಿದರು. ಇದರ ಸಂಕ್ಷುಬ್ಧರಿತ ಸಂತರು ಗುರ್ನಾಮ್ ಸಿಂಗರನ್ನೇ ನಿರ್ನಾಮ ಮಾಡಿದರು. ಮರಾಠಿಗಳ ಬೆಂಬಲವುಳಿಸಿಕೊಂಡು ಕನ್ನಡಿಗರ ಬೆಂಬಲಗಳಿಸುವ ಹೊಸ ಉಪಾಯವನ್ನು ಶ್ರೀಮತೀಜಿ ಅರಸುತ್ತಾರೆ. ಸ್ತ್ರೀಬುದ್ಧಿಗೆ ಉಪಾಯಗಳು ಬಹು ಬೇಗನೇ ಹೊಳೆಯುತ್ತವೆ; ಕೆಲವೊಮ್ಮೆ ಅವು ಪ್ರಳಯಾಂತಕವಾದುವುದೂ ಇದೆ.

ಇಂದು ರಾಷ್ಟ್ರಪತಿ ವಿ. ವಿ. ಗಿರಿ, ಅವರಿಗೆ ಕನ್ನಡದ ಶಿಷ್ಟಪ್ರಿಯ ಸಿಂಡಿಕೇಟಿಗರ ಬೆಂಬಲ ನೀಡಲಿಲ್ಲ. ಗಿರಿಯಂತಹ ಗಿರಿ ರಾಷ್ಟ್ರದ ಪೋರ್ನ್ನತ ಸಿಂಹಾಸನದಲ್ಲಿ ಕಳಿತ ವ್ಯಕ್ತಿಗಳ ದ್ವೇಷವನ್ನು ತೋರಿಸುತ್ತಾರೆಂದು ಯೂ ಎಲ್ಲೋ ಬಾರದು. ವಣನ ಗಿರಿಯ ಮರಿಗೆ ಶ್ರೀಮತಿ ಇಂದಿರಾ ಮುದ್ದಿನ ಮಗಳಾದ್ದಂತೆಯೇ ತಾನು ರಾಜ್ಯಪಾಲರಾಗಿದ್ದ ಕರ್ನಾಟಕ ಮೆಚ್ಚಿನ ರಾಜ್ಯವಾಗಬೇಕು. ರಾಜ್ಯಪಾಲ ಪದದಿಂದ ಉಪರಾಷ್ಟ್ರಪತಿ, ಅಲ್ಲಿಂದ ರಾಷ್ಟ್ರಪತಿ—ಹೀಗೆ ಉತ್ತರೋತ್ತರ ಉನ್ನತೋನ್ನತ ಹುದ್ದೆ ಅವರಿಗೆ ದೊರಕಿದ್ದು ಇಲ್ಲಿಂದಲೇ. ಈಗ ಉಪರಾಷ್ಟ್ರಪತಿಯಾಗಿರುವ ಶ್ರೀ ಜಿ. ಎಸ್. ಪಾಠಕರೂ ಆ ಸ್ಥಾನಕ್ಕೇರುವ ಮುಂಚೆ ಕನ್ನಡದ ರಾಜ್ಯಪಾಲರಿದ್ದರು. ಈ ಇಬ್ಬರು ಮಹನೀಯರಿಗೂ ಕರ್ನಾಟಕದ ಜನವು ನಡಾಳದ ಪರಿಚಯವಿದೆ. ವಿನಯಶೀಲರೂ ಸೌಜನ್ಯಪ್ರಿಯರೂ ಆದ ಕನ್ನಡಿಗರು ಸಮಯ ಬಂದರೆ ಸಿಡಿದು ನಿಲ್ಲಲೂ ಹಿಂಜರಿಯುವುದಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತು. ತನ್ನ ಮುದ್ದಿನ ಮಗಳ ಕಿವಿಯನ್ನು ಅವರು ಹಿಂಡಿದರೆ? ಅದ್ದರಿಂದಲೇ ಅವರು ಈಗ ಮತ್ತೆ ಗಂಭೀರ ಮೌನವ್ರತಧಾರಿಗಳಾದರೆ? ಕರ್ನಾಟಕ ವರ್ಷ ಕೆಲಕಾಲ ಸುಮ್ಮನಿದ್ದರೂ ಯಾವಾಗ ಜಾಗ್ರತವಾಗುವುದೆಂದು ಹೇಗೆ ಹೇಳಬಹುದು?

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದ್ವೈತಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಬೆಂಗಳೂರಿನಿಂದ ಜಕ್ಕೂರಿಗೆ

ಅಗಲವಾದ ರಸ್ತೆ. ಅಚ್ಚುಕಟ್ಟಾದ ಹೆಂಚುಕಟ್ಟಿ ಮನೆಗಳು, ರಂಗಮಂದಿರ, ಒತ್ತಿಗೆ ಯುವಕ ರೈತ ಸಂಘದ ಕಚೇರಿ, ಎಡಕ್ಕೆ ಪುಸ್ತಕ ಭಂಡಾರ—ವಾಚನಾಲಯ, ಬಾಲವಾಡಿ, ಪಂಚಾಯತಿ ಭವನ, ಮುಂದೆ ಸಾಗಿದರೆ ಅಶ್ವತ್ಥಕಟ್ಟೆ. ಕಟ್ಟೆಯ ಮೇಲೆ ನಾಗನ ಕಲ್ಲುಗಳು. ಹಳ್ಳಿಯ ಒಂದೆಡೆ ಮುನೇಶ್ವರ ದೇವಾಲಯ. ಸುತ್ತಮುತ್ತಲಲ್ಲಿ ಭತ್ತ, ರಾಗಿ, ಜೋಳ, ಬೆಳೆಯುವ ಹೊಲಗದ್ದೆಗಳು. ಒತ್ತಿನಲ್ಲೇ ಬೆಳೆಸಿದ ಗೋಧಿ ಬೆಳೆ. ಬಗೆಬಗೆಯ ತರಕಾರಿಗಳು. ಅಲ್ಲಿ ಇಲ್ಲಿ ಕುಡಿಯುವ ನೀರಿನ ಬಾವಿಗಳು.

ಹಳ್ಳಿಯ ಮನೆಗಳ ಸಾಲುಗಳನ್ನು ದಾಟಿ ಮುಂದೆ ಸಾಗಿದರೆ ರಸ್ತೆಯ ಅಕ್ಕಪಕ್ಕಗಳಲ್ಲಿ ತಂಗಿ ಳಿತ್ತಿರುವ ದ್ರಾಕ್ಷೆ ತೋಟಗಳು. ನೀರಿಗಾಗಿ ಅಗೆದ ಬಾವಿಗಳ ಪಕ್ಕದಲ್ಲಿ ಎದ್ದು ಕಾಣುವ ಮಣ್ಣಿನ ದಿಣ್ಣೆಗಳು. ಕಣ್ಣಿಗೆ ಹಬ್ಬವೀಯುವ ಹಸಿರು ಹಸಿರಾದ ಅವರೆಗಿಡಗಳ ಸಾಲುಗಳುಳ್ಳ ವಿಸ್ತಾರವಾದ ಹೊಲಗಳು. ಇವುಗಳ ಅಂಚಿನಲ್ಲಿ ಮೇಯುತ್ತಿರುವ ದಷ್ಟಪುಷ್ಟವಾದ ದನಕರುಗಳು. ಒಮ್ಮೊಮ್ಮೆ ಹೊಲಗಳಿಗೆ ದಾಳಿ ಇಟ್ಟು, ಅಲ್ಲಿ ಇಲ್ಲಿ ಬೆಳೆ ತಿಂದು ಹಾರಿ ಓಡುತ್ತಿರುವ ಆಡುಗಳು. ತಮ್ಮ ನಾಗರಿಕನೆಲ್ಲಿ ಎಂದು ಅತ್ತಿತ್ತ ನೋಡುತ್ತಾ ಮೆಲುಕಾಡುತ್ತಿರುವ ಕುರಿಮಂದೆಗಳು. ಇಂತಹ ನೋಟವನ್ನು ಕಾಣಬೇಕಾದರೆ ಜಕ್ಕೂರಿಗೆ ಹೋಗಿ ಬನ್ನಿ.

ಜಕ್ಕೂರಿಗೆ ಬೆಂಗಳೂರಿನಿಂದ ಏಳು ಮೈಲಿ ದೂರ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇಲ್ಲಿ ಇಷ್ಟು ಮನೆಗಳಿದ್ದಿಲ್ಲ. ಈಗ ಈ ಹಳ್ಳಿಯಲ್ಲಿರುವ ಮನೆಗಳು ಇನ್ನೂರು. ಜನಸಂಖ್ಯೆ ಸುಮಾರು ಎರಡು ಸಾವಿರ. ಇವರಲ್ಲಿ ಬೆಂಗಳೂರು ಉತ್ತರ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಜ್ಯೋತಿಗೌಡರೂ ಒಬ್ಬರು.

"ನಮ್ಮ ಹಳ್ಳಿಯವರೆಲ್ಲ ಕಷ್ಟಪಟ್ಟು ದುಡಿಯುವವರು. ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದರಲ್ಲಿ ಆಸಕ್ತಿಯುಳ್ಳವರು. ಏನಾದರೂ ಸುಧಾರಣೆ ಮಾಡೋಣ ಎಂದರೆ ತಾನು ಮುಂದು ತಾನು ಮುಂದು ಎಂದು ಉತ್ಸಾಹದಿಂದ ಮುಂದೆ ಬರುವವರು. ತಿಳಿದವರು ಹೇಳಿದರೆ ಅದರಂತೆ ನಡೆವ ಸಜ್ಜನರ, ಸಂಭಾವಿತರು. ಸಾಮಾನ್ಯ ಹೆಚ್ಚು ಕಡಿಮೆ ಎಲ್ಲರೂ ಮಧ್ಯಮ ವರ್ಗದವರು. ತಮ್ಮ ಹೊಲಗದ್ದೆಗಳಲ್ಲಿ ತಾವೇ ದುಡಿದ ಬಾಳನ್ನು ಹಸನಾಗಿಸಿಕೊಳ್ಳಲು ಸಿದ್ಧರಾದವರು. ಕೊಯ್ಲಿನ ಕಾಲದಲ್ಲಿ ಮಾತ್ರ ಕೂಲಿಯಾಳುಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವರು.

ಬೇಸಾಯ ಮಾತ್ರವಲ್ಲ, ನಮ್ಮ ಹಳ್ಳಿಗರು ಜಾನುವಾರು ಸಾಕಣೆ, ಕೋಳಿ ಸಾಕಣೆಗಳಲ್ಲೂ ತುಂಬ ಆಸಕ್ತಿ ಇದ್ದವರು. ಅವರಲ್ಲಿ ನಾವೂ ಒಬ್ಬ. ನಮ್ಮಲ್ಲಿ ಉತ್ತಮ ದನಗಳಿವೆ, ಎಂದು ದನದ ಕೊಟ್ಟಿಗೆ

(ಏಳನೇ ಪುಟ ನೋಡಿರಿ)

ಕಥಯಾಕ ಗಿಡ ಎಳ್ಳಾಗಿತ್ತು?

ಫೋನ್ : 526
ಸಂಪುಟ ೪೯
ಸಂಚಿಕೆ ೩೨
VOL. 49
No. 32

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೬—೪—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಏಕಪಕ್ಷೀಯ ನಿರ್ಧಾರ

ಹಿಂದಿನ ರಾಜ-ಮಹಾರಾಜರಿಗೆ ಕೊಡುತ್ತಿರುವ ರಾಜಧನ ಮತ್ತಿತರ ಸಾಂವಿಧಾನಿಕ ಸೌಲಭ್ಯಗಳ ರದ್ದತಿಗೆ ಅವುಗಳ ಮೊತ್ತ ಮತ್ತು ನಷ್ಟದ ಸಂಗತಿ ಅಷ್ಟು ಮುಖ್ಯವಲ್ಲ. ಸಮಾಜವಾದಿ ರಾಷ್ಟ್ರವನ್ನು ಕಟ್ಟಿಯೇ ತೀರುವೆವೆಂಬ ಆಡಳಿತಗಾರರ ಆಗ್ರಹವೇ ಕಾರಣ. ಸಮಾಜವಾದೀ ಸಮಾಜ ರಚನೆಯ ನಿರ್ಮಾಣಕಾರ್ಯದಲ್ಲಿ ಕೆಲವೇ ವ್ಯಕ್ತಿಗಳಿಗೆ ಇಂತಹ ಸೌಕರ್ಯವಿರುವುದು ಸಾಧುವಲ್ಲ. ಆದುದರಿಂದ ಇವನ್ನು ನಿಲ್ಲಿಸಲು ಶೀಘ್ರ ಕ್ರಮ ಕೈಕೊಳ್ಳಬೇಕೆಂಬುದು ಅಭಿಪ್ರಾಯ. ಕಾಂಗ್ರೆಸ್ಸಿನ ಗೊತ್ತುವಳಿ. ಇಂದಿನ ಆಡಳಿತ ಕಾಂಗ್ರೆಸ್ಸಿಗರೂ ಈ ಗೊತ್ತುವಳಿಗೆ ಜೋತು ಬಿದ್ದಿವೆ; ಇಂಡಿಕೇಟ್ ಅಧಿಕಾರಾರೂಢವಾದ್ದರಿಂದ ಇದನ್ನು ಸಾಧಿಸಿಯೇ ಬಿಡಬೇಕು. ಆಗ ಸಮಾಜವಾದ ಸ್ಥಾಪನೆ ಸಾಧ್ಯ ತೆಂದು ತಿಳಿದ ಕೊಂಡಿದೆ. ನಿಜವಾಗಿ ಶ್ರೀಸಾಧಾರಣರ ಉದ್ಧಾರ ಮಾಡುವಲ್ಲಿ ಅನಾಸಕ್ತರೂ ಅಶಕ್ತರೂ ಆದವರು ಶ್ರೀ ಅಸ ಧಾರಣರನ್ನಾದರೂ ಶ್ರೀಸಾಧಾರಣರನ್ನಾಗಿ ಮಾಡುವ ಇನ್ನೊಂದು ಬಗೆಯ ಕಮ್ಯೂನಿಜಂ ಇದು. ರಾಜಧನವಾಗಿ ನೀಡುವ ಸುಮಾರು ಐದುಕೋಟಿ ರೂಪಾಯಿಗಳನ್ನು ಕಿತ್ತುಕೊಂಡ ಮಾತ್ರಕ್ಕೆ ಆರ್ಥಿಕ ಸಮಾಜವಾದ ಸ್ಥಾಪನೆಯಾಗವುದಿಲ್ಲ.

ಸಮಾಜವಾದದ ಪ್ರತಿಪಾದಕರಾದ ಮಂತ್ರಿಮಹೋದಯರು ಅದ್ದೂರಿಯ ಐಶಿ-ಜೀವನಕ್ರಮಗಳನ್ನು ಸ ಧಾರಣೀಕರಣಗೊಳಿಸಬೇಕೆಂದು ಕರೆಬಂದಾಗ ಶ್ರೀಮತಿ ಇಂದಿರಾಗಾಂಧಿಯವರು ಒಪ್ಪಿದರು, ಅವಿಗೆ ಆ ವಾಹಿನೀಯಿಲ್ಲದ ವಾತಾವರಣದಲ್ಲೇ ಶ್ರೀ ಬೆಳಕಿ ಧಿಗೊಳ್ಳುವಂತೆ ಮಂತ್ರಿಗಳಿಗೇ 'ಜನಸಾಧಾರಣ ಸನ್ನಿವೇಶ'ಗಳಿಂದಲೇ ಕಾರ್ಯಶಕ್ತಿ ಮಾಡಬೇಕ ಎಂಬ ಅಭಿಮತ ಅವರದ್ದು. ಹಿಂದಿನ ರಾಜಮಹಾರಾಜರಲ್ಲಿ ಅನೇಕರು ಶ್ರೀಸಾಮಾನ್ಯರಿಗೆ ಅನತಿದೂರದಲ್ಲಿದ್ದರು; ಆದರೆ, ಇಂದಿನ ಶ್ರೀಸಾಮಾನ್ಯೋದ್ಧಾರಕರು ಅವರಿಂದ ದೂರದ ರೆಪ್ಪೋಡಿಯೇ ಉದ್ಧಾರಕರಾಗಲು ಹವಣಿಸುತ್ತಿದ್ದಾರೆಂದಂತಾಯಿತು. ಇದರ ಪರಿಣಾಮವನ್ನು ನೆನೆದಾಗ ಇಸೇಲ ಶ್ರೀಮತಿ ಇಂದಿರವ್ವ ನಾಡುವ ಗೋ[illegible]ವೇ ಎಂಬ ಭ್ರಾಂತಿಯೂ ಕಲೆದೋರುತ್ತದೆ.

ರಾಜಧನವು ಸಮಾಜವಾದಿ ರಾಷ್ಟ್ರಕ್ಕೆ ತೊಡಕಾಗುವುದಲ್ಲ. ಆದರೆ, ಅಂದಿನ ರಾಜ್ಯಕೀಯ ಸ್ಥಿತಿಗತಿಗಳಿಂದಾಗಿ ಭಾರತ ಸರಕಾರ ಮಾಡಿಕೊಂಡ ಒಡಂಬಡಿಕೆಗಳನ್ನು ಇಷ್ಟು ಒಮ್ಮಿಂದೊಮ್ಮೆಲೇ ಗಾಳಿಗೆ ತೂರಿಬಿಡಲು ಹಿಂದೆಗೆಯದಿರುವುದು ಯಾರಿಗೂ ಶ್ರೇಯಸ್ಕರವಲ್ಲ. ಈ ಹಿಂದಿನ ರಾಜರು ತಮ್ಮನ್ನು ಸಮಾಜಕ್ಕೆ ಹೊಂದಿಸಿಕೊಂಡು ಹೋಗಲು ಬಹಳಷ್ಟು ತ್ಯಾಗ ಮಾಡಿದ್ದಾರೆ. ಸಾಮ್ರಾಜ್ಯವನ್ನು ಸ್ವೇಚ್ಛೆಯಿಂದಲೇ, ಶ್ರೀಸಾಧಾರಣರ ಅಪೇಕ್ಷೆಯ ಮೇರೆಗೆ ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸುವ ಉದಾರತೆ ತೋರಿದ್ದಾರೆ; ಇದಕ್ಕಾಗಿ ಅವರಿಗೆ ಭಾರತ ಸರಕಾರ ನೀಡ ಬೇಕಾಗಿ ಒಪ್ಪಿಕೊಂಡ ರಾಜಧನದ ಮೊತ್ತ 'ರಾಜ್ಯ'ದ ಸಂಪತ್ತನ್ನು ಅವಲೋಕಿಸಿದಾಗ ಅಲ್ಪ. ಇಷ್ಟು ಮಾತ್ರವಲ್ಲ ಕಾಲಕಾಲದಲ್ಲಿ ತಮಗೆ ದೊರಕುತ್ತಿದ್ದ ರಾಜಧನದಲ್ಲಿ ಕಡಿತ ಮಾಡಿ ಕೊಂಡವರೂ ಇದ್ದಾರೆ. ಅಂದರೆ, 'ರಾಜ'ಗಳ ಒಪ್ಪಿಗೆಯ ಕರೆಯನ್ನು ಸಂಪೂರ್ಣ ಅಲ್ಲಗಳೆಯುವಷ್ಟು ಉದ್ಧಟತನವನ್ನು ಅವರೆಂದೂ ತೋರಿಸಲಿಲ್ಲವೆಂಬುದು ಸುವೇದ್ಯ. ಇದಕ್ಕೆ ಅಪವಾದವಿದ್ದರೂ ಅದು ಅಗಣ್ಯ.

ಶ್ರೀಮತಿ ಇಂದಿರಾ ಗಾಂಧಿಯವರು ರಾಜಧನ ಪದ್ಧತಿಯನ್ನು ನಿರ್ಮೂಲಿಸಿ ರಾಜ—ಮಹಾರಾಜರ ಸಭೆ ಕರೆದು ನಿರ್ಧಾರ ಘೋಷಿಸಿ, "ಹ್ಲೂಂ ಅನ್ನಿ" ಅಂದರು. ಇದಕ್ಕೆ ಹೆಸರ. ಪರ್ಯಾಲೋಚನಾ ಸಭೆ. ಆದರೆ, ಸರಕಾರ ಯಾವುದೇ ರೀತಿಯ ಪರ್ಯಾಲೋಚನೆಗೆ ಸಿದ್ಧವಿರಲಿಲ್ಲ; ಅದು ತನ್ನ ನಿರ್ಧಾರವನ್ನು ರಾಜ—ಮಹಾರಾಜರ ತಲೆಮೇಲೆ ಹೇರಲು ಬಯಸಿತ್ತು. ಆದುದರಿಂದ ಸಭೆ ಅಸಮಾಧಾನದಲ್ಲೇ ಪರ್ಯವಸಾನಗೊಂಡಿತು. ಏಕಪಕ್ಷೀಯ ನಿರ್ಧಾರವನ್ನು ಪ್ರಜಾಪ್ರಭುತ್ವದಲ್ಲಾದರೂ ಕೈಕೊಳ್ಳುವುದು ಸಾಧುವಲ್ಲ. [illegible] ಉಚ್ಚತಮ ನ್ಯಾಯಾಲಯದ ಅಭಿಪ್ರಾಯ [illegible] ಪಡೆದುಕೊಳ್ಳುವಂತೆ ಶ್ರೀಮತಿ ಗಾಂಧಿಯವರನ್ನು ಕೇಳಲಾಯಿತು. ಆದರೆ, ಶ್ರೀಮತಿಯವರದನ್ನು ಕಿವಿಗೇ [illegible] ಮಾತ್ರವಲ್ಲ ಸಂಪೂರ್ಣ ತಿರಸ್ಕರಿಸಿಬಿಟ್ಟರು. ಇದಕ್ಕೆ ಕಾರಣವಿಲ್ಲದಿಲ್ಲ. ಇತ್ತೀಚೆಗೆ ಶಾಸಕಾಂಗಕ್ಕೂ ನ್ಯಾಯಾಂಗಕ್ಕೂ ಬಹಳಷ್ಟು ಹೊಡೆದಾಟ ನಡೆಯುತ್ತಿದೆ. ನ್ಯಾಯಾಂಗದ ಮೇಲೆ ತನ್ನ ಕತ್ತಿಯೇಟು ಬೀಳಲು ಶಾಸಕಾಂಗ ಬಯಸುತ್ತಿದೆ. ಬ್ಯಾಂಕ್ ರಾಷ್ಟ್ರೀಕರಣದಲ್ಲಿ ಕೈಸುಟ್ಟುಕೊಂಡ ಶ್ರೀಮತಿಯವರು ನಂಗಿರುವ ಮೂಲಕವೇ ರಾಜಮಹಾರಾಜರ ಕಿರೀಟಪಹಾರ ಮಾಡಲು ಬಯಸುತ್ತಾರೆ.

ರಾಜಮಹಾರಾಜರ ಬಯಕೆಯಂತೆ ಈ ಸಂಬಂಧದಲ್ಲಿ ಉಚ್ಚತಮ ನ್ಯಾಯಾಲಯದ ಅಭಿಪ್ರಾಯವನ್ನು ಅಕೆ ಕೇಳಬಹುದಿತ್ತು. ಕಲಹ ಕೇಳಿದ ಮೇಲೆ ಅದರಂತೆ ನಡೆಯಲೇ ಬೇಕಾಗುತ್ತದೆ. ಇದನ್ನು ನಿರಾಕರಿಸುವುದೆಂದರೆ, ತನ್ನ ಏಕಪಕ್ಷೀಯ ನಿರ್ಧಾರವನ್ನು ಅವರ ಮೇಲೆ ಹೇರುವುದೆಂದೇ ಅರ್ಥ. ಇಲ್ಲಿ ಶ್ರೀಮತಿ ಗಾಂಧಿ ಜಾರಿಬಿದ್ದರು. ಈಗ ಆಳುವ ಕಾಂಗ್ರೆಸ್ ಶಾಸಕರಲ್ಲೇ ೪೬ ಮಂದಿ ರಾಜರ ಪರವಾಗಿ ಅಭಿಪ್ರಾಯ ನೀಡಿದ್ದಾರೆಂದು ಸುದ್ದಿ. ಶ್ರೀಮತಿ ಗಾಂಧಿಯವರ ತನ್ನ ಅನುಯಾಯಿಗಳ ಮೇಲೆ ತನ್ನ ಸರ್ವಾಧಿಕಾರವನ್ನು ಹೇರುತ್ತ ಮುಂದುವರಿದ ತನ್ನ ದ ರಿ ಸಿಮೆಂಟ್‌ವೆಂದು ತಿಳಿದರೆ ಇವರಿಗೊಂದು ಕೇಡು. ದಿನಗಳೆದಂತೆ ಈ ಗುಂಪು ಬೆಳೆಯುತ್ತ ಹೋಗಬಹುದು. ತಲೆಯಿರದ ಭಿನ್ನಮತ ಬಗೆಹರಿಯದೆ ಹೋದರೆ ಶ್ರೀರಾಮರ ಅಧ್ಯಕ್ಷಗಿರಿಗಾ ಇಂಡಿಕೇಟ್ ಕುಕ್ಕಡಿಗೆ ಬಾಲಗ್ರಹ ಹಿಡಿಯಲೂ ಬಹುದು. ಸಮಾಜವಾದ ಜಪಮಾತ ವುದು ಸುಲಭ; ಅದನ್ನು ಅನುಷ್ಠಾನಕ್ಕೆ ತರುವುದು ಪ್ರಯಾಸ. ಶ್ರೀಸಾಮಾನ್ಯರಲ್ಲಿನ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಅಸಮರ್ಥರಾದ ಆಕೆ ರಾಜರಿಗೆ ತಾವು ನೀಡುವ ಧನವನ್ನು ನಿರಾಕರಿಸಿ ಇದೇ ಸಮಾಜವಾದವೆನ್ನುತ್ತಾರೆ. ಸುಮಾರು ೫೦೦ ಜನರಿಗೆ ದೊರೆಯುವ ರಾಜಧನವನ್ನು ನಿಲ್ಲಿಸಿದ ಮಾತ್ರಕ್ಕೆ ೫೦ ಕೋಟಿ ಭಾರತೀಯರ ಅಸಮಾನತೆ ದೂರವಾಗ ವುದಲ್ಲ. ಶ್ರೀಮತಿಯವರು ಈ ಸಂಬಂಧದ ನ್ಯಾಯಾನ್ಯಾಯಗಳನ್ನು ಉಚ್ಚತಮ ನ್ಯಾಯಾಲಯದಿಂದ ತಿಳಿದುಕೊಂಡು ಮುಂದುವರಿದರೆ, ರಾಜಮಹಾರಾಜರಿಗೂ ತೃಪ್ತಿ; ಕಾರ್ಯಸಾಧನೆ ಯೂ ಆದೀತು.

ಮುಂಗನ್ಯಾಯ

ದೇವೊಂದರ ಬಗ್ಗೆ ಅಣ್ಣತಮ್ಮಂದಿರಲ್ಲಿ ವ್ಯಾಜ್ಯವೆದ್ದಾಗ ಹಿರಿಯ ಪಂಚಾಯಿತರು ಆದು ಅಣ್ಣನಿಗೂ ಸೇರಿದ್ದಲ್ಲ; ತಮ್ಮನಿಗೂ ಸೇರಿದ್ದಲ್ಲ; ಅದು ನಿಜವಾದ ಅಧಿಕಾರಿಣಿ "ಬೆಕ್ಕು" ಸಂಗಿ ಎಂದು ಜಜ್‌ಮೆಂಟ್ ನೀಡಿದರಂತೆ. ಒಂದ ಕತೆ ಹೇಳುತ್ತದೆ. ದನದ ಮಟ್ಟಿಗೆ ಇದು ಸರಿಯಾಗಿರಬಹುದು; ಆದರೆ ನೆಲದ ಮಟ್ಟಿಗೆ? ಬೆಳಗಾಂವಿ—ಕಾರವಾರಗಳನ್ನು ನಂಯೇ ತೀರಬೇಕ ಎಂಬುದು ಮರಾಠಿಗರ ರಾಷ್ಟ್ರಸೇಚ್ಛೆ, ಅವರ ಕೃಷಿಯನ್ನು ತಣಿಸುವುದ. ಶ್ರೀಮತಿ ಇಂದಿರಾ ಗಾಂಧಿಯವರು ಪ್ರಾಜ್ಞರೀತಿಯ ರಾಜಕಾರಣಿಗೆ ಅತ್ಯಗತ್ಯ. ಆದುದರಿಂದ ಬೆಳಗಾಂವಿ ವಿಭಜನೆಯ ಪ್ರಸ್ತಾಪ ಬಂತು; ಕಾರವಾರವನ್ನು ಕರ್ನಾಟಕದಿಂದ ಬಿಡಿಸುವ ಕಲಹವೂ ಅನಧಿಕೃತವಾಗಿ ಬಂತು. ಈಗ "ಎಸ್ಸೆಸ್ಪಿ' ಯೋ ಮತ್ತಾವುದೋ ಹೋರಾಟವೊಂದನ್ನು ಮುಂದಿಟ್ಟಿದ್ದಾರೆ. ವಿವಾದಗ್ರಸ್ತ ಪ್ರದೇಶಗಳನ್ನು ಕರ್ನಾಟಕದಲ್ಲೂ ಉಳಿಸಬೇಡಿ, ಮಹಾರಾಷ್ಟ್ರದಲ್ಲೂ ಉಳಿಯಗೊಡಬೇಡಿ; ಅವನ್ನು ಗೋವೆಗೆ ಸೇರಿಸಿ ಬಿಡಿ.

ಭಾರೀ ಭರೀ ನ್ಯಾಯ. ಗೋವೆಯ ಬಗ್ಗೆ ಮಹಾರಾಷ್ಟ್ರ—ಕರ್ನಾಟಕಗಳ ನಡುವೆ ವಿವಾದವಿದ್ದದ್ದನ್ನೂ ಕೊನೆಗದು ಜನಮತ ಸಂಗ್ರಹ ಮೂಲಕ ಕೇಂದ್ರಾಧೀನ ಪ್ರದೇಶವಾಗಿಯೇ ಉಳಿದುದನ್ನೂ ನೆನಪಿಸಿಕೊಳ್ಳಬೇಕು. ಹಾಗಿದ್ದರೂ ಮಹಾರಾಷ್ಟ್ರವು ಗೋವೆಯನ್ನು ನುಂಗುವ ಹವಣಿಕೆಯಲ್ಲೇ ಇರುವುದನ್ನು ಗಮನಿಸಬೇಕು. ಬೆಳಗಾಂವಿ—ಕಾರವಾರಗಳನ್ನು ಕರ್ನಾಟಕದಿಂದ ಬೇರ್ಪಡಿಸಿಯೇ ತೀರಬೇಕು; ತನಗೆ ದಕ್ಕದಿದ್ದರೆ ಹೇಗಾದರೂ ಚಿಂತಿಲ್ಲ; ಮುಂದೊಂದು ದಿನ ಗೋವೆಯನ್ನೇ ಭಕ್ಷಿಸಿ ಕೊಳ್ಳಬಹುದು ಎಂಬ ಮರಾಠಿಗರ ಈ ಮನೋಭಾವನೆ ಸಂಕುಚಿತ ಸ್ವಾರ್ಥಪ್ರೇರಿತ. ಕರ್ನಾಟಕಕ್ಕೆ ಬೇರೇ ಬೇರೆ ರೀತಿಯ ಅಪಾಯ ಪರಂಪರೆ ಬರುತ್ತಲೇ ಇವೆ. ಇವುಗಳನ್ನು ಕೆಚ್ಚೆದೆಯಿಂದ ಎದುರಿಸಲು ನಾವೆಲ್ಲರೂ ಒಂದಾಗಬೇಕು. ಮಹಾಜನ ಆಯೋಗದ ವರದಿಯನ್ನು ನಾವು ಒಪ್ಪಿದ್ದೇವೆ. ಆ ವರದಿಗೆ ವ್ಯತಿರಿಕ್ತವಾದ ಏನನ್ನೂ ಒಪ್ಪಿಕೊಳ್ಳಬಾರದು. ಇದರಿಂದ ನಮ್ಮ ನಿಲುವು ಅಚಲವಾಗಿಯೇ ಉಳಿಯುತ್ತದೆ. ಆಯೋಗದ ಮರ್ಯಾದೆ ಉಳಿಯುತ್ತದೆ.

ಗ್ರಾಮಾಂತರ ಜನಕ್ಕೆ ಕೆನರಾ ಬ್ಯಾಂಕ್ ಸೌಲಭ್ಯ

ತಾ. 11-4-70 ರಂದು ಮಣಿಪಾಲದಲ್ಲಿ ಜರಗಿದ ಕೃಷಿಕರ ಹಾಗೂ ಉದ್ಯಮಿಗಳ ಸಭೆಯೊಂದರಲ್ಲಿ ಕೆನರಾ ಬ್ಯಾಂಕಿನ ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಬಿ. ಬಿ. ಭಂಡಾರಿಯವರು ಮಾತನಾಡುತ್ತಾ ಕೆನರಾ ಬ್ಯಾಂಕು ದೇಶದಾದ್ಯಂತ 75 ಸಾವಿರಕ್ಕೂ ಮಿಕ್ಕಿದ ಕೃಷಿಕರಿಗೆ ಈಗಾಗಲೇ ಬ್ಯಾಂಕಿಂಗ್ ಸೌಕರ್ಯ ಒದಗಿಸುತ್ತದೆಂದೂ ಕೃಷಿಗಾಗಿ ರೂ. 16 ಕೋಟಿಗೂ ಮಿಕ್ಕಿ ಒದಗಿಸಿದೆಯೆಂದೂ ಗ್ರಾಮೀಣ ಜನತೆಗೆ ಇನ್ನೂ ಹೆಚ್ಚಿನ ಬ್ಯಾಂಕಿಂಗ್ ಸೌಲಭ್ಯ ಅಗತ್ಯವಿದೆಯೆಂದೂ ಹೇಳಿದರು.

ಸಭಾಧ್ಯಕ್ಷತೆ ವಹಿಸಿದ್ದ ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಯಾಂತ್ರಿಕ ದೋಣಿಗಳಿಗೆ ಬ್ಯಾಂಕಿನಿಂದ ಆರ್ಥಿಕ ಸೌಲಭ್ಯ ಕೊಡುವಾಗ ಸೇಕಡಾ 25ರ ಬದಲು ಸೇಕಡಾ 10ರಷ್ಟು ಮಾರ್ಜಿನ್‌ನೊಂದಿಗೆ ನೀಡಿದರೆ ಮೀನುಗಾರರಿಗೆ ಅಧಿಕ ಪ್ರಯೋಜನವಾಗುವುದೆಂದರು. ಪ್ರಾರಂಭದಲ್ಲಿ ಮಂಗಳೂರು ರೀಜನಲ್ ಶಾಖೆಯ ಮೆನೇಜರ್ ಶ್ರೀ [illegible]ರಾಯರು ಸ್ವಾಗತ ಬಯಸಿದರು. ಶ್ರೀ ವೈ. ಎಸ್. ಭಟ್ಟರು ಕೆನರಾ ಬ್ಯಾಂಕಿನ ಬೇರೆ ಬೇರೆ ಯೋಜನೆಗಳ ಮಾಹಿತಿ ನೀಡಿದರು. ಅಂತ್ಯದಲ್ಲಿ ಉಡುಪಿ ಶಾಖೆಯ ಮೆನೇಜರ್ ಶ್ರೀ ಎಂ. ಜೆ. ಹೆಗ್ಡೆಯವರು ವಂದನಾರ್ಪಣೆಗೈದರು.

ಬೆಕ್ಕಿಗೆ ಗಂಟೆ ಕಟ್ಟುವವರಾರು?

ಲೇಖಕರು: ಶ್ರೀ ಬಿ. ಪಿ. ಶಿವಾನಂದರಾವ್,

ಭಾರತದಂಥ ವಿಶಾಲ ಪ್ರಜಾರಾಜ್ಯದ ಒಂದು ವೇಳ್ಯೆಯನ್ನು ನೋಡಿದಾಗ ಭಾಸವಾಗುವುದು ಮತ್ತು ಇಲ್ಲಿ ಕಾಣಸಿಗುವುದು ಇಲ್ಲಿ ನಡೆದ ಚಾರಿತ್ರಿಕ ಘಟನೆಗಳ ಸಂಖ್ಯಾವಳಿಗಳು ಮತ್ತು ಅದರ ಪರಿಣಾಮ ವ್ಯವಸ್ಥೆಗಳು. ದೇಶದ ಸ್ವಾತಂತ್ರ್ಯಕ್ಕಾಗಿ ಆಂಗ್ಲರೊಡನೆ ಅವಿಶ್ರಾಂತ ಯುದ್ಧ—ಹೋರಾಟ-ಶ್ರಮಗಳ ಮೌಲ್ಯವನ್ನು ವಿವೇಚಿಸುವ ಕಾಲವೂ ಕೂಡ ಈಗ ಮಾಸಿಹೋಗುತ್ತಿರುವುದು ನಮ್ಮ ಚಿಂತನೆಯ ಚೌಕಟ್ಟಿನೊಳಗೆ ನಿಲುಕದಿರಲಾರದು. ಅದ್ವಿತೀಯವಾದ ನಮ್ಮ ಭಾರತೀಯ ಸಂಸ್ಕೃತಿ, ಇತಿಹಾಸಗಳ ಭವ್ಯ ಪರಂಪರೆಯಷ್ಟೇ ನಮ್ಮ 'ಆಸ್ತಿ' ಎಂತಾ ಎದೆ ತಟ್ಟಿಕೊಂಡರೆ ಸಾಕೆ?— ಅನ್ನುತ್ತಿದ್ದ. ನಾವು ನಮ್ಮನ್ನು [illegible] ದೇಶಕ್ಕಾಗಿ ಮುಡಿಪಿಟ್ಟ [illegible] ಒಗ್ಗಟ್ಟಿನಿಂದ ಆಂಗ್ಲರ ಜನೆ ಸೆಣಸಿ ಪಡೆದಾಗ ಭಾರತ [illegible] ಪಡೆದುಕೊಂಡಿದ್ದನ್ನು ಎಲ್ಲ ಪ್ರಜೆಗಳೂ ಬಲ್ಲರು. ಒಂದು ದೇಶದ ಸ್ವಾತಂತ್ರ್ಯದ ಇತಿಗಲ್ಲಾಗಿ ಸಲ್ಲಬೇಕಾದ ಕೆಲವು ಅಂಶಗಳನ್ನು ನಾವು ಗಮನಿಸಬೇಕು. ರಾಜಕೀಯ ಸಭ್ಯತೆ, ದಕ್ಷ ಆಡಳಿತ, ಸಂಸ್ಕೃತಿ ಸಂಕೇತವಾಗಿ ಉಳಿದಿರುವ ಕಲಾತ್ಮಕ ವಸ್ತು ವಿಶೇಷತೆಗಳು, ನಿಸರ್ಗದ ಸಂಪನ್ಮೂಲಗಳನ್ನು ಜಾಣ್ಮೆಯಿಂದ ಅವಶ್ಯವಾಗುವಂತೆ ಉಳಿಸಿ-ಬೆಳೆಸಿ-ಉಪಯೋಗಿಸಿಕೊಳ್ಳಬೇಕಾದ ಒಂದು ಉತ್ತಮ ಶಕ್ತಿಯ ಪ್ರಮುಖವಾಗಿದೆ. ಮಾಗಿಸಿದ್ದ ಐತಿಹಾಸಿಕ ಸುದೀರ್ಘ ಪರಂಪರೆಯುಳ್ಳ ಭಾರತಕ್ಕೆ ತನ್ನದೇ ಆದ ಭೌಗೋಳಿಕ ಸಂಪತ್ತನ್ನು ಕೂಡ ನೆನಪಿಸಿಕೊಳ್ಳಬೇಕು. ಖನಿಜ ಸಂಪತ್ತು, ಅರಣ್ಯ, ಶೈಲ, ವಿಜ್ಞಾನ, ಔದ್ಯೋಗಿಕ ಪ್ರಗತಿ, ಯಂತ್ರ, ವ್ಯವಸಾಯ ಮುಂತಾದುವುಗಳ ತಯಾರಿಕೆ, ಇವುಗಳ ಕ್ರಮಸಂಖ್ಯೆಯನ್ನು ಗಮನಿಸಿದಾಗ ಸ್ವಾತಂತ್ರ್ಯದ ಸಂದರ್ಭದಲ್ಲಿ ನಮ್ಮ ದೇಶದ ಸ್ಥಿತಿ ಹೇಗಿತ್ತು, ಎರಡು ದಶಕಗಳ ನಂತರ ಉಂಟಾದ ಪ್ರಗತಿ-ಬದಲಾವಣೆ ಕಂಡಾಗಲೂ ಕೂಡ ಶಿಟ್ಟುಸಿರು ಬಿಡಬೇಕಾಗಿದೆ. ಸೋಲು ಒಪ್ಪಬೇಕಾಗಿದೆ. ದೇಶದ ಆಂತರಿಕ ಸಹಸ್ರ—ಸಹಸ್ರ ಭೀಕರ ಸಮಸ್ಯೆಗಳನು ಚಿಂತಿಸುವ ಕಾಲವೀಗ ಸನ್ನಿಹಿತವಾಗಿದೆ. ಕೋಟ್ಯಂತರ ಹಣದ ವಿದೇಶಿ ಸಾಲ ತಲೆಯ ಮೇಲೆ ಕೂತು, ನಿಂತ ಕಾಲದ ಪರಿಸ್ಥಿತಿಯನ್ನು ವ್ಯವಹಾರ ಮೌಲ್ಯ, ಇವೆಲ್ಲ ಎತ್ತ ಸಾಗಿದೆ.... ಸಾಗುತಿವೆ ಎಂದು ಪರೀಕ್ಷೆ ಮಾಡಿಕೊಳ್ಳಬೇಕಾದ ಸಂದಿಗ್ಧತೆ ಎದುರು ಬಂದು ಬಿಟ್ಟಿವೆ. ಮೂರು ಪಂಚವಾರ್ಷಿಕ ಯೋಜನೆಗಳ ನಂತರ ನಿಂತ ಭಾರತ ಪ್ರಗತಿ ರೂಪ ಹೇಗೆ? ವಿದೇಶಿ ಸಾಲದಿಂದ ನವಭಾರತವಾಗುವುದರೊಂದಿಗೆ [illegible] ನಮ್ಮ ಯೋಜನೆಗಳು ನಿರೀಕ್ಷಿಸಿದಷ್ಟು ಪ್ರತಿಫಲ ನೀಡಿವೆಯೆ? 'ಇಲ್ಲ'—ಎಂತಲೇ ಉತ್ತರಿಸಬೇಕಾಗಿದೆ. ನಮ್ಮ ಸುಸಂಸ್ಕೃತಿಯು ಜಾಡಿನ ಹೆಸರಿನಲ್ಲಿ ಜನತೆಯಲ್ಲಿ ಬೆಳೆದ. ನಿಂತ ವಿಚಾರ್ಯಗಳು ನೂರೆಂಟು, ಮಾನವೀಯ ಮೌಲ್ಯಗಳನ್ನು ಮರೆತ ರಾಜಕಾರಣಿಗಳ ಲಜ್ಜೆಗೇಡು, ಆಡಳಿತ ದೋಷಗಳು ಇದರ ಬೆನ್ನ ಹಿಂದೆ ವಿರಾಟ್ರೂಪವಾಗಿ ಬೆಳೆದು ನಿಂತ ಜಾತೀಯತೆ, ಅಂಧಶ್ರದ್ಧೆ—ಅಧಿಕಾರ ಮೋಹ—ಇವುಗಳ ಒಟ್ಟು ಪ್ರತಿಫಲವೇ ನವಭಾರತದ ದುಃಸ್ಥಿತಿಗೆ ಜೀವಂತ ಸಾಕ್ಷಿಯಾಗಿದೆ. ಪ್ರಜಾರಾಜ್ಯದ ಪಯಣ ಎತ್ತ ಸಾಗಿದೆ ಎಂದರೆ ದೇಶದ ಅವನತಿಗೆ ಹಸಿವು —ದಾರಿದ್ರ್ಯವೇ ಮೂಲ ಎಂಬ ಉತ್ತರ ಕಾಲದು ಅನ್ನಿಸುತ್ತಿದೆ.

ಒಂದು ದೇಶದ ಪ್ರಗತಿಗೆ ಅಲ್ಲಿಯ ಜನ ವಿದ್ಯಾವಂತರಾದರೆ ಸಾಕೆ? ಜನರಲ್ಲಿ ಸಾತ್ವಿಕತೆಯಿಲ್ಲ. ಅಧಿಕಾರಕ್ಕಾಗಿ ಕಚ್ಚಾಟಗಳು ದಿನಂಪ್ರತಿ ನಡೆಯುತ್ತಿವೆ. ಯೋಜನೆಗೇ ಆಗಲಿ ಹಾಕಿದ ಬಂಡವಾಳದಷ್ಟು ಪ್ರತಿಫಲ ದೊರಕೀತೆಂಬುದೂ ಸಂಶಯಾಸ್ಪದವಾಗಿದೆ. ಆರ್ಥಿಕ ಕ್ಷೇತ್ರಗಳಲ್ಲಿ ಹಿಂದುಳಿದ ರಾಷ್ಟ್ರಗಳಲ್ಲಿ ಒಂದಾದ ಭಾರತಕ್ಕೆ ನೆರವು ನೀಡಲು ನೂರೆಂಟು ರಾಷ್ಟ್ರಗಳು ಕೈ ಮುಂದೆ ನೀಡಿದ್ದರೂ ಈ ಸೋಲಿಗೆ ಕಾರಣ ನಮ್ಮ ಬುದ್ಧಿವಿವೇಚನೆ, ಶಕ್ತಿಸಾಮರ್ಥ್ಯಗಳೇ. ಒಂದು ದೇಶದ ಅಳಿವು-ಉಳಿವು ಆ ರಾಜಕೀಯದ ಹಿನ್ನೆಲೆಯಲ್ಲಿ ಸ್ಪಷ್ಟಗೊಂಡು ನಿಂತ ಕೈಗೊಂಬೆ. ಗಾಂಧಿ, ತಿಲಕ್ ರಂಥ ಹಿರಿಯರ ಮಾರ್ಗದರ್ಶನದಲ್ಲಿ ನಮ್ಮ ಜನ ಎಷ್ಟರ ಮಟ್ಟಿಗೆ ನಡೆದು ಕೊಳ್ಳುತ್ತಿದ್ದರೆಂಬುದೂ ಪ್ರಶ್ನೆಯೇ ಆಗಿದೆ. ಒಂದು ಕಡೆ ಕೋಟಿಗಟ್ಟಲೆ ಹಣ ಚೆಲ್ಲಿ ಕಟ್ಟಿದ-ಕಟ್ಟುತ್ತಿರುವ ಯೋಜನೆಗಳು, ಅಣೆಕಟ್ಟುಗಳು, ವ್ಯವಸಾಯ ಸಂಸ್ಥೆ, ಔದ್ಯೋಗಿಕ ವಸ್ತುಗಳ ಒಟ್ಟು ಸೇಲು (ರಾಷ್ಟ್ರೀಯ ಮಾರು ಕಟ್ಟೆಗೆ ಹೋಲಿಸಿ) ಗಮನಿಸಿದರೆ ಭಾರತ ತನ್ನ ಹಕ್ಕಿನ ಅವಮೌಲ್ಯಕ್ಕೆ ಬಗ್ಗಬೇಕಾಯಿತು. ದೇಶ ಅಭಿವೃದ್ಧಿಯಲ್ಲಿ ಇದಾಗ ಹೇಗೆ ತೋರುತ್ತಿರುವ ಪಾಕಿಸ್ತಾನ್—ಚೀನಾದವರ ರಾಕ್ಷಸೀ ಕೃತ್ಯಗಳು ಮತ್ತು ಮುಖ್ಯವಾಗಿ ದ್ವಾಪರಿ ಆ ಮೂಕೀ ಬೀರಿ ಇತ್ತು. ವಂಶಪಾರಂಪರ್ಯದಿಂದ ಬೆಳೆದು ಬಂದು ನಿಂತಹಾಗೆ — ಮೂಢನಂಬಿಕೆಗಳು ರಾಷ್ಟ್ರ ಸಾಕಾರದಲ್ಲಿ ಚಲಾವಣೆಯಾಗುತ್ತಿರುವ ಕಳ್ಳ ನೋಟುಗಳ ಚಲಾವಣೆ, ವ್ಯಾಪಾರದಲ್ಲಿ ಕೃತಕ ಬರಗಾಲ ಸೃಷ್ಟಿಸಿ ಲಾಭಬಡುಕತನ, ವರ್ಷ—ವರ್ಷ ಉಂಟಾದುವ ಈ ಹೇಯಕೃತ್ಯವು ಅತೀವೃಷ್ಟಿ—ಅನಾವೃಷ್ಟಿಗಳಿಂದ ಉಂಟಾಗುವ ದುಷ್ಪರಿಣಾಮಕ್ಕಿಂತಾ ಹೇಯವಾದದ್ದಾಗಿದೆ ಎಂದ ಮೇಲೆ ಇಷ್ಟೆಲ್ಲಾ ನೀಚ ಕೃತ್ಯಗಳಿಗೆ ಯಾರು ಹೊಣೆ? ಅನ್ಯ ರಾಷ್ಟ್ರಗಳೊಡನೆ ಆಹಾರ ಸಾಮಗ್ರಿ, ಯಂತ್ರೋಪಕರಣಗಳನ್ನು ಕೈಚಾಚಿ ಸಾಲವಾಗಿ ತಂದಂಥದ್ದು ಕೂಡ ದೇಶದಲ್ಲಿ ಅದು ಸಕಾಲಿಕವಾಗಿ ಸಮರ್ಪಕವಾಗಿ ವಿತರಣೆ—ಉಪಯೋಗವಾಗುತ್ತಿಲ್ಲ ಅಂದ ಮೇಲೆ ಇದಕ್ಕಾದರೂ ಯಾರು ಜವಾಬ್ದಾರರು?

ಒಟ್ಟಿನಲ್ಲಿ ನಮ್ಮ ಪ್ರಜಾಪ್ರಭುತ್ವದ ಒಟ್ಟು ಪ್ರತಿಫಲದಲ್ಲಿ ಬಡಜನ, ಇಲ್ಲಿನೇ ಸೋಲನ್ನು ಎದುರಿಸುತ್ತಿದೆ. ಅನುಭವಿಸುತ್ತಿದೆ. ಲಂಚ—ರುಷುವತ್ತುಗಳಂತೂ ನಿರ್ಭಯವಾಗಿ ನಡೆಯುತ್ತಿವೆ. ಓಟಿನ ಗಳಿಕೆಯಲ್ಲಿ ನಡೆಯುವ ನಾಟಕ—ಕುತಂತ್ರಗಳು, ಅಧಿಕಾರದ ಮದದಿಂದ ಬಂಡವಾಳಶಾಹಿಗಳನ್ನೇ ಹಿಂಬಾಲಿಸಿ ರಾಷ್ಟ್ರದ ಐಕ್ಯತೆ— ಏಳಿಗೆಗೆ ಭಗ್ನ ತಂದು, ದೇಶಾಭಿಮಾನ ರಹಿತರಂತಾಗಿರುವ ನಮ್ಮ ಜನಗಳ ಚಿಂತನಶೀಲತೆ, ಸಂಶೀಲತಕ್ಕೆ ಇದೆಷ್ಟು ಸಾಗಿದೆ ಎಂಬುದನ್ನೇ ನೆನೆಸಿದರೆ ಹುಚ್ಚು ಹಿಡಿದಂತಾಗುತ್ತಿದೆ. ಬಂಡವಾಳಶಾಹಿ—ಕಾರ್ಮಿಕರಲ್ಲುಂಟಾಗುವ ಬಿಕ್ಕಟ್ಟು—ವೈಮನಸ್ಯ ದಬ್ಬಾಳಿಕೆಯ ಪರಿಣಾಮವು ಮುಷ್ಕರ—ಲಾಕ್‌ಔಟ್‌ಗಳಾಗಿ ಪರಿಸಮಾಪ್ತಿಯಾಗುತ್ತಿವೆ. ರಾಕೆಟ್ ವೇಗದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ನೋಡಿ ದಿಗ್ಭ್ರಮೆಯಾಗುತ್ತದೆ. ಆಹಾರದ ಪೂರೈಕೆ ಭೀಕರ ಸ್ಪಂದನ—ಸ್ವಸ್ಥವಾಗಿ ಬಿಟ್ಟಿದೆ. ನಿರುದ್ಯೋಗಿಗಳ ಕೂಗ ಪ್ರಶ್ನೆ ಮುಗಿಲು ಕೆಂಪಗೆ ಮೂಡುತ್ತಿದೆ.

ನಮ್ಮ ಪ್ರಗತಿಯ ಹಾದಿಯಲ್ಲಿ ಉಂಟಾಗುತ್ತಿರುವ ಕಷ್ಟ-ನಷ್ಟಗಳು ಅಸಂಖ್ಯಾತವಾಗಿವೆ. ಈ ಸಾಮಾಜಿಕ—ಬೌದ್ಧಿಕ ಸುಧಾರಣೆಯ ತಿದ್ದುಪಡಿಗೆ ಯಾರು ಬಂದರೂ ಸೈ ನಮ್ಮ ಸ್ಥಿತಿಗತಿಗಳ ಬುದ್ಧಿಮಟ್ಟಕ್ಕೆ ಇನ್ನೇನೂ ತೋಚದಾಗಿದೆ. ಓಟಿನ ಮೌಲ್ಯವೇ ತಿಳಿಯದ ನಮ್ಮ ಓಟಿಗೆ ಎಷ್ಟರ ಬೆಲೆ ಎಂತ ನಮ್ಮನ್ನು ನಾವೇ ಪ್ರಶ್ನಿಸಿಕೊಂಡಾಗಲೂ ಕೇವಲ ಹಂಚಿಕೆಗೆ ಮಾರಾಟವಾಗುತ್ತಿರುವ ಈ ಓಟುಗಳು ಹಾಕಿದರೂ ಸೈ ಬಿಟ್ಟರೂ ಸೈ. ಈ ಒಳಾಂತರ ನಾಟಕ ನಿಲ್ಲಲಾರದು ಅನ್ನಿಸಿ ನಾಚಿಕೆಯಾಗುತ್ತಿದೆ. ವ್ಯಕ್ತಿ ಮೌಲ್ಯಕ್ಕೆ ಚಿಂತಿಸದ ನಾವು ಆತನ ಜೇಬಿನ ಮೇಲೆ ನಮ್ಮ ಗುಣವಂತಿಕೆಯನ್ನು ಮಾರಿಕೊಳ್ಳುತ್ತಿದ್ದೇವೆ. ವಿಶಾಲ ಭೂಮಿಯಲ್ಲಿ ಇವತ್ತಿನ ರಾಜಕೀಯ ಕಚ್ಚಾಟ, ಅಧಿಕಾರ ವ್ಯಾಮೋಹ, ಜಾತೀಯತೆ, ಅಂಧಶ್ರದ್ಧೆ ಇವು ಎಲ್ಲಿಯ ವರೆಗೆ ಅಡಗುವುದಿಲ್ಲವೋ, ನಮ್ಮ ನೂರೆಂಟು ಯೋಜನೆಗಳಿಗಾಗಿ ನೀರಿನೋಪಾದಿಯಲ್ಲಿ ಹಣ ಚೆಲ್ಲಿದಾಗ್ಯೂ ಅದೇನು ಸಾರ್ಥಕತೆ? ಡಾ|| ಶಿವರಾಮ ಕಾರಂತರು ಅಂದಂತೆ ಇದು ರಾಮರಾಜ್ಯವಾಗುವ ಬದಲು ಹರಾಮ ರಾಜ್ಯವಾಗುತ್ತಿದೆ. ಯಾವ ಕ್ಷೇತ್ರದಲ್ಲೂ ಇಂದು ಪ್ರೀತಿ—ಸೌಹಾರ್ದತೆ — ಸಾಮರಸ್ಯ— [illegible] ವಿಲ್ಲ. ಈ ಜನತೆಗೆ ವಿದ್ಯಾವಂತರ ಕೊರತೆ ಇಲ್ಲ, ದಕ್ಷ ಆಡಳಿತಗಾರರ ಕೊರತೆಯೂ ಇಲ್ಲ, ನಿಸರ್ಗ ಸಂಪತ್ತಿನ ಕೊರತೆ ಎಲ್ಲಿ ನೋಡಿದರೂ ಇಲ್ಲ. ನಮ್ಮ ಜನಗಳ ಭಯಂಕರ [illegible] ತಾಳಿ ನಿಂತಿರುವ ಜಾತೀಯತೆ—ಅಧಿಕಾರ ವ್ಯಾಮೋಹ, ಹಣದ ದುರಾಸೆಯೇ ಮೂಲ ಕಾರಣವಾಗಿದೆ.

ಇದೇ ರೀತಿಯಲ್ಲಿ ಮುಕ್ಕೊಂದು ವಿನಾಶದ ಹಾದಿ ಹಿಡಿದದ್ದು ಕಾರ್ಮಿಕ—ವಿದ್ಯಾರ್ಥಿ ವರ್ಗದವರು ಎಷ್ಟರ ಮಟ್ಟಿಗೆ. ಈ ಸಂಘಗಳ ನೆಪದಲ್ಲಿ ರಾಷ್ಟ್ರಸಂಪತ್ತನ್ನು ನಾಶಮಾಡುವ ಯತ್ನಕ್ಕೆ ಕೈ ಹಾಕುವುದು ಒಂದು ಸಂಪನ್ನತೆಯ ಲಕ್ಷಣ ಅಂದುಕೊಂಡಿದ್ದಾರೆ. ಈ ರೀತಿಯ ಮಾ

ಶೇಷಭಾಗ ೧೩ –ನೆಯ ಪುಟದಲ್ಲಿ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 43/1970

ಮಹಾರಾಷ್ಟ್ರ ಏಜೆನ್ಸಿ ಕಾರ್ಪೊರೇಶನ್ ಲಿಮಿಟೆಡ್, ಉಡುಪಿ —ವಾದಿ

ಮತ್ತು

1. ಜೋಸೆಫ್ ಪಿಂಟೊ 2. ರೋಮನ್ ಕುಲ್ಲೆಸ್ಟ್ಯಾ 3. ಲಾರೆನ್ಸ್ ಡಿಸೋಜಾ —ಪ್ರತಿವಾದಿಗಳು

ಪ್ರತಿವಾದಿಗೆ

1ನೇ ಪ್ರತಿವಾದಿ ಜೋಸೆಫ್ ಪಿಂಟೊ, ಜಾನ್ ಪಿಂಟೋರ ಮಗ, ಉಡುಪಿ ತಾಲ್ಲೂಕು ಮೂಡುಬೆಟ್ಟು ಗ್ರಾಮದ ಕಟಪಾಡಿ.

3ನೇ ಪ್ರತಿವಾದಿ ಲಾರೆನ್ಸ್ ಡಿ ಸೋಜಾ, ಅಲ್ಫೋನ್ಸ್ ಡಿಸೋಜಾ ಮಗ, Managing clerk, M/s Daptary Ferriera Divan Solicitors, 131 Nagindas Master Road, Fort, Bombay [illegible] ಸಂಬಂಧ—

ವಾದಿ Hire Purchase agreement ಆಧಾರದ ಮೇಲೆ ಪ್ರತಿವಾದಿಯಿಂದ ಬರಬೇಕಾದ [illegible] ಮೊಬಲಗಿನ ದಾವೆಯು 1–3ನೇ ಪ್ರತಿವಾದಿಗೆ ಆಗತಕ್ಕ ಅಸ್ತಿಯ ನೋಟೀಸಿನ ಬಗ್ಗೆ ತಾ. 27-6-1970ಕ್ಕೆ ಮುಂದೂಡಲಾಗಿದೆ ಎಂಬ ಸಂಗತಿ 1–3ನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

B. Krishna Bhat

Advocate for Plaintiff

Udipi, 3-4-1970.

Gram : VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಬಡಜನರ ಉದ್ಧಾರಕ್ಕೆ

ಲಾಟರಿ ಸಮಾಜವಾದ

ಸಮಾಜವಾದ, ಬಡಜನರ ಉದ್ಧಾರ—ಇವು ಭಾರತೀಯ ರಾಜಕೀಯ ಪಕ್ಷಗಳ ಮೂಲ ಮಂತ್ರ. ಭೂಮಿಯ ಗುಣವನ್ನು ನೋಡಿ ಅದಕ್ಕೆ ತಕ್ಕಂತೆ ಬೀಜ ಬಿತ್ತುವಂತೆ ಸ್ವತಂತ್ರ ಭಾರತೀಯರ ಸಮಾಜವಾದಕ್ಕೆ ನೆಹರೂ ಅಭೇದ ಕಲ್ಪಿಸಿದ್ದಾರೆ. ಹಿಂದಿನ ಪ್ರಧಾನಮಂತ್ರಿ ಜವಾಹರಲಾಲರು ಸಮಾಜವಾದದ ಮಂಕು ಬೂದಿಯನ್ನು ಎರಚಿ ಅದರಲ್ಲಿ ಸಫಲರಾಗಿದ್ದಾರೆ.

ಅವಿಭಾಜ್ಯ ಕಾಂಗ್ರೆಸ್ಸು ಮೂರು ಚುನಾವಣೆಗಳಲ್ಲಿ ಜಯಭೇರಿ ಬಾರಿಸಲು ಸಮರ್ಥವಾದದ್ದು ಈ ಸಮಾಜವಾದ ಪಂಚಾಕ್ಷರೀ ಮಂತ್ರದಿಂದ. ಅದು ಅಧಿಕಾರದಲ್ಲಿ ಉಳಿದದ್ದು ಬಡಜನರ ಉದ್ಧಾರದ ಅಷ್ಟಾಕ್ಷರೀ ಮಂತ್ರ ಪುನಶ್ಚರಣದಿಂದ. ಈ ಮಂತ್ರೋಚ್ಚಾರಣೆಗೆ ಹಕ್ಕುದಾರರು ಯಾರು ಎಂಬುದರ ಜಿಜ್ಞಾಸೆಯುಂಟಾಗಿಯೇ ಕಾಂಗ್ರೆಸ್ಸು ಎರಡು ಹೋಳಾಯಿತು. ಈಗೀಗ ಎರಡೂ ಹೋಳುಗಳ ಉದ್ದೇಶ ಮತ್ತು ಹೋರಾಟ ಸಮಾಜವಾದ ಸ್ಥಾಪನೆಗಾಗಿ; ಬಡಜನರ ಉದ್ಧಾರಕ್ಕಾಗಿಯೇ.

ಕಮ್ಯುನಿಸ್ಟರ ಪಂಚಾಕ್ಷರೀ ಮಂತ್ರ ಸಮಾಜವಾದವೂ ನೆಹರೂ ಪಂಚಾಕ್ಷರೀಗೆ ಹತ್ತಿರವಾದದ್ದು. ತಮ್ಮ ಮಂತ್ರಗಳಿಗೆ ಶಾಖ—ಮೂನ—ದೇಶ—ವಾತಾವರಣಗಳಿಗೆ ಹೊಂದಿಕೊಳ್ಳುವಂತೆ ವ್ಯಾಖ್ಯಾನ ಬರೆಯುವುದು ಕಮ್ಯುನಿಸ್ಟರೀಗೆ ಸುಲಭ. ಕಾಂಗ್ರೆಸ್ಸು — ಕಮ್ಯುನಿಸ್ಟರ ನಡುವೆ ಈ ಮಂತ್ರಗಳ ಬಗ್ಗೆ ಬಹಳ ಹೋರಾಟ ನಡೆದದ್ದುಂಟು. ಶಕ್ತಿ—ಯುಕ್ತಿಗಳ ಏಟನ್ನು ಹೋರಿಗಳು ಎಷ್ಟರವರೆಗೆ ತಾಳಿಕೊಂಡಾವು?

ಪ್ರಕೃತ; ಆರೆಸ್ಸು, ಬಿಕೆಡಿ, ಬಂಡಗಾರ ಕಾಂಗ್ರೆಸ್ಸುಗಳು —ಹೀಗೆ ಕಾಂಗ್ರೆಸ್‌ನ ಸಣ್ಣ ಸಣ್ಣ ತುಂಡುಗಳೂ ಪಂಚಾಕ್ಷರೀ—ಅಷ್ಟಾಕ್ಷರೀ ಮಂತ್ರವನ್ನೇ ಜಪಿಸುತ್ತಿವೆ. ಮೊನ್ನೆ ಮೊನ್ನೆಯ ವರೆಗೆ ಬಂಡವಾಳಶಾಹಿಗಳ, ಪ್ರತಿಗಾಮಿಗಳ ಪಕ್ಷವೆಂದು ಟೀಕೆಗೆ ಗುರಿಯಾಗಿದ್ದ ಜನಸಂಘ—ಸ್ವತಂತ್ರ ಪಕ್ಷಗಳ ಉದ್ದೇಶವೂ ಇದೇ ಮಂತ್ರೋಚ್ಚಾರಕ್ಕೆ ತಿರುಗಿದೆ. ಎಲ್ಲ ಮಾರ್ಗಗಳು ರೋಮನ್ನು ಮುಟ್ಟುತ್ತವೆ; ಎಲ್ಲ ಪಕ್ಷಗಳೂ ಈ ಮಂತ್ರೋಚ್ಚಾರ ಮಾಡುತ್ತವೆ.

ಇತ್ತೀಚಿನ ವರೆಗೆ ಕಾಂಗ್ರೆಸ್ಸಿನಿಂದೇ ಅಧಿಕಾರದ ರುಚಿ ಕಂಡ ಪರಭಕ್ಷಕ ಹುಲಿಯೆನಿಸಿತ್ತು. ಇಂದು ಪರಿಸ್ಥಿತಿ ಬದಲಾಗಿದೆ. ಸರ್ವಸಾಮಾನ್ಯವಾಗಿ ಎಲ್ಲ ರಾಜಕೀಯ ಪಕ್ಷಗಳೂ ಒಂದಲ್ಲ ಒಂದು ರಾಜ್ಯದ ಸರಕಾರದಲ್ಲಿ ಪಾಲುಗೊಂಡು ಅದರ ರುಚಿ ನೋಡಿವೆ. ಒರಿಸ್ಸಾದಲ್ಲಿ ಸ್ವತಂತ್ರ ಪಕ್ಷ, ಬಂಗಾಳದಲ್ಲಿ ಮಾರ್ಕ್ಸಿಸ್ಟರು, ಬಿಹಾರದಲ್ಲಿ ಎಸ್ಸೆಸ್ಪಿ, ಪಂಜಾಬದಲ್ಲಿ ಜನಸಂಘ...ಹೀಗೆ ಅಧಿಕಾರ ಸ್ಥಾನಗಳಿಸಲು ಮಂತ್ರೋಚ್ಚಾರ ಮಾಡಿದವರು ಅಧಿಕಾರ ಬಂದ ಮೇಲೆ ಏನು ಮಾಡಿದರು? "ಸಮಾಜವಾದ" "ಬಡಜನರ ಉದ್ಧಾರ"ಗಳ ನೆಪದಲ್ಲಿ ಜನರ ವಂಚನೆ ಆದರು. ಇದನ್ನವರು ಇತರರನ್ನು ಬೊಟ್ಟು ಮಾಡಿ ತೋರಿಸತೊಡಗಿದರು.

ಸಮಾಜವಾದದ ಪ್ರಬಲ ಕೈವಾರಿ ಶ್ರೀಮತಿ ಇಂದಿರಾ ಗಾಂಧಿಯವರು ಈ ವಾಗ್ವಾದಗಳಿಗೆ ಬೆಂಗಾವಲಾಗಿ. ಹಿಂಬಾಲಕರಾಗಿ, ಪ್ರಚೋದನೆ ನೀಡುವವರ ನಾಗರೀಕರೆನಿಸಿಕೊಂಡ ಕೆಲವು ಶ್ರೀಮಂತರು, ರಾಜಕೀಯ ಪುಢಾರಿಗಳು, ಟೀಕಾಕಾರರು ಇತ್ಯಾದಿ. ಇಂಥವರ ಪೀಡನೆಗೆ ಬಲಿಯಾಗಿ ಪತಿಪತ್ನಿಯರಾದ ಸಂಸಾರಗಳೆಷ್ಟು? ಹಾಗಿದ್ದರೀ ಭಾಷ್ಯ, ಸಾಧನೆ, ಮಾನವೀಯತೆಗಳಿಲ್ಲಿ ಬೆಲೆ? ಇದಕ್ಕೆ ಹೊಣೆ ಯಾರು? ಪ್ರಚೋದನಾಕಾರರೆ? ಶ್ರೀಮಂತರೆ? ಅಧಿಕಾರ ವರ್ಗವೆ? ಅಥವಾ ಮಂಡಲಿಯೆ? ಅಥವಾ ಕಣ್ಣಿಂದ ನೋಡಿಯೂ ಸುಮ್ಮನಿರುವ ನಾವೆ? ಅದಲ್ಲವಾಗಲಿ, ಆರ್ಥಿಕ ಮಟ್ಟ ಬೆಳೆಯುವ ವ್ಯವಸ್ಥೆಯಲ್ಲೂ ರಾಷ್ಟ್ರಮಟ್ಟದಲ್ಲಿ ಒಂದು ಸರ್ವತೋಮುಖ ಸಾವಸ್ಥೆಯೇ ಕೆಟ್ಟು ಹೋಗಿ—ಕೆಲವರ ಕೈಗೊಂಬೆಯಾಗಿ ಬಿಟ್ಟಿದೆ ಎಂಬುದನ್ನು ನೆನೆಸಿ ನಾವು ಪರಕೀಯರಿದ್ದೂ ತಲೆ ತಗ್ಗಿಸಬೇಕಾಗಿದೆ. ನೈತಿಕ ಮಟ್ಟ ಹದಗೆಟ್ಟು ಹೋಗಿದೆ. ಅನ್ಯಾಯದ ವಿರುದ್ಧ ಹೋರಾಡುವ ಶಕ್ತಿಯನ್ನೇ ಕಳೆದುಕೊಂಡು "ನಾನು ಉಳಿದರೆ ಸಾಕು"—ಎಂಬ ಮನೋವೃತ್ತಿ ಎಲ್ಲರಿಗೆ ಮನೆಮಾಡಿ ನಿಲ್ಲುತ್ತಿದೆ. ಕರ್ತವ್ಯಶೂನ್ಯರಾದ ನಮ್ಮ ನಿಲುವು—ಕಾಲ ಪ್ರೀತಿ ಭಾಷ್ಯ ಸಾಧನೆ, ದೇಶದ ಉಳಿವು ಮರೆತು ಎಲ್ಲಿಯ ವರೆಗೆ ನಾವು ತಿಳಿದೂ ತಿಳಿದೂ ಬಾಳಬೇಕು, ಪ್ರಯತ್ನಶೀಲರಾದವರೋ ಅಲ್ಲಿಯ ವರೆಗೆ ನಾವು "ಬಡತನ"ದಲ್ಲೇ ಬದುಕಿ ರೋಗಿಷ್ಟ ತಿರೆ ಬಿನಂತಿ ಮಾಡಬೇಕಾಗುತ್ತದೆ. ಈ ಪರಿಸ್ಥಿತಿ ತಪ್ಪಲೇ ಬೇಕು.

ದ ರಾತ್ರಿ ಬೆಳಗಾಗುವುದರೊಳಗೆ ಶ್ರೀಮಂತರಾಗಲಾರರೆಂದು ಹಿಂದೆ ಬೇರೆಯವರು ಹೇಳಿದ್ದನ್ನೇ ಈಗ ತಾನೂ ಹೇಳತೊಡಗಿದ್ದಾರೆ. ಸಮಾಜವಾದದ ಗುರಿಯತ್ತ ಒಯ್ಯುವ ಆರ್ಥಿಕ ನೀತಿಯನ್ನವರು ರೂಪಿಸಿ ಕೊಟ್ಟಿದ್ದಾರೆ. ಹಿಂದಿನ ವಿತ್ತ ಸಚಿವರೂ ಮಾಡಿದ್ದು ಅದನ್ನೇ. ಆದರೆ, ಅದನ್ನು ಅವರು ಮಾಡಿದ್ದರಿಂದ ಅದು ಅಸಮಾಜವಾದಿತನ; ಇದನ್ನು ತಾನು ಮಾಡಿದ್ದರಿಂದ ಇದು ಸಮಾಜವಾದಿತನ.

'ಬಡಜನರ ಉದ್ಧಾರ'ವನ್ನು ಸಾಧಿಸುವಲ್ಲಿ ಕೇಂದ್ರ ಸರಕಾರಕ್ಕಿಂತಲೂ ರಾಜ್ಯಸರಕಾರಗಳು ಮಿತಿಮೀರಿ ಪ್ರಯತ್ನಿಸುತ್ತಿವೆ. ರಾಜ್ಯಗಳಲ್ಲಿರುವ ಸರಕಾರಗಳು "ಲಾಟರಿ" ಏರ್ಪಡಿಸಿ ಇದಕ್ಕೆ ಅವಕಾಶ ಮಾಡಿಕೊಟ್ಟಿವೆ. ಎರಡು ತಿಂಗಳಿಗೊಮ್ಮೆ, ತಿಂಗಳಿಗೊಮ್ಮೆ, ಪಕ್ಷಕ್ಕೊಮ್ಮೆ, ವಾರಕ್ಕೊಮ್ಮೆ, ದಿನಕ್ಕೊಮ್ಮೆ, ಹಗಲಿಗೊಮ್ಮೆ, ರಾತ್ರಿಗೊಮ್ಮೆ ಕ್ರಮಾಗತ ನೂರು ಲಾಟರಿ ಎತ್ತುವುದು ಬಡವರನ್ನು ಶ್ರೀಮಂತರಾಗಿಸುವುದೇ ಈ ಲಾಟರಿಯ ಎತ್ತುಗಡೆ. ಕೇವಲ ಒಂದು ಎರಡು ರೂಪಾಯಿಗಳ ಧಂಡನಾಶದಿಂದ ಲಕ್ಷಾಧೀಶರಾಗುವ ಈ "ಉದ್ಧಾರ ವಿಧಾನ" ಭಾರತದ ಬಡಜನತೆಗೆ ನಿಜಕ್ಕೂ ವರದಾನ. ಬಡಜನರ ಉದ್ಧಾರ ಇದರಿಂದ ಆಗದೆಂದು ಕೇಳಿದ್ದೇವೆ. ನಿತ್ಯವಾಗಲಾಗಿ, ಬ-ಟ್ ಪಾಲಿಶ್ ಮಾಡುವವನಿಗೆ, ಹಳ್ಳಿಗಾಡಿನವನಿಗೆ ಲಕ್ಷ ರೂಪಾಯಿಗಳ ಬಹುಮಾನ ಸಿಕ್ಕಿದ್ದೆಂದು ಕೇಳಿದ್ದೇವೆ. ಅವರ ಉದ್ಧಾರವಾಗಲಿಲ್ಲವೆ?

ರಾತ್ರಿ ಬೆಳಗಾಗುವುದರೊಳಗೆ ಕೆಲವರನ್ನು ಮಾತ್ರ ಶ್ರೀಮಂತರಾಗಿಸುವುದು ಸಮಾಜವಾದವಲ್ಲ, ಇದು ಪ್ರತಿಗಾಮಿತನವೆಂದು ಕೆಲವರು ದೂರುವುದುಂಟು. ಇದು ಸರಿಯೆಂದು ಮೇಲಿಗೆ ತೋರುತ್ತದೆ. ಇದಕ್ಕಾಗಿ 'ಲಾಟರಿ' ನಿಯಮಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿದರೆ ಹೇಗೆ?

ಲಕ್ಷ ರೂಪಾಯಿಯ ಬಹುಮಾನ ಪಡೆದವರು ಯಾವತ್ತೂ ಸತತ ಲಾಟರಿ ಟಿಕೇಟುಗಳನ್ನು ಕಡ್ಡಾಯವಾಗಿ ಕೊಂಡುಕೊಳ್ಳತಕ್ಕದ್ದು. ಇದರ ಪಾಲನ್ನು ಬಹುಮಾನದ ಹಣದಲ್ಲೇ ಮುರಿದುಕೊಳ್ಳಲಾಗುವುದು. ಹೀಗೆಯೇ ಇತರ ಬಹುಮಾನಗಳಿಗೂ ಕೆಲವು ಬಹುಮಾನ ಪಡೆಯಲು ಗರಿಷ್ಠ ಪರಿಮಿತಿಯನ್ನೂ ಗೊತ್ತುಮಾಡಬಹುದು.

ಒಂದು ಬಾರಿ ಒಂದು ಬಹುಮಾನ ಪಡೆದವರಿಗೆ ಮತ್ತೆ ಯಾವುದೇ ಬಹುಮಾನ ನೀಡಲಾಗದು. ಆದಷ್ಟು ಹೆಚ್ಚು ಜನರಿಗೆ ಬಹುಮಾನ ನೀಡಿ, ಕ್ರಮಿಕ ಗತಿಯಲ್ಲಿ ಸಮಾಜವಾದ ಸ್ಥಾಪಿಸುವುದೇ ಇದರ ಉದ್ದೇಶ.

ಪ್ರತಿಯೊಬ್ಬನೂ ಲಾಟರಿ ಟಿಕೇಟುಗಳನ್ನು ಕೊಂಡುಕೊಳ್ಳಲೇ ಬೇಕು. ಉದ್ಧಾರ ಲಕ್ಷ್ಮಿಯ ಆಗಮನಕ್ಕೆ ಬಾಗಿಲು ತೆರೆದಿಡುವುದೇ ಇದರ ಹಿಂದಿರುವ ಘನ ಉದ್ದೇಶ.

ಹೀಗೆ ಕೆಲವು ನಿಯಮಗಳನ್ನು ಮಾಡಿದರೆ, ಸಮಾಜವಾದವೂ ಬಡಜನರ ಉದ್ಧಾರವೂ ಕ್ಷಿಪ್ರಗತಿಯಲ್ಲೇ ಆಗುತ್ತದೆ. ಸರಕಾರದ ಇತರ ಇಲಾಖೆಗಳಿಗೆಲ್ಲ ರಜಾ ನೀಡಿ ಲಾಟರಿ ಇಲಾಖೆಯನ್ನೇ ಮುಖ್ಯ ಮಂತ್ರಿಯಿಂದ ನಡೆಸಬಹುದು. ಶ್ರೀಮಂತರಾಗಬೇಕೆಂಬ ಆಸೆ ಭಾರತೀಯರಲ್ಲಿ ಸಮಾಜವಾದವನ್ನು ತರಲು ಎರಡೇ ಮಾರ್ಗ ಒಂದು ಕ್ರಾಂತಿ; ಇಲ್ಲವೇ ಶಾಂತಿ ಲಾಟರಿ ಸಮಾಜವಾದ ಶಾಸನರೀತಿಯಿಂದ ಸ್ಥಾಪಿಸಲಾಗಬಹುದು. ಇದನ್ನು ಈ ಲಾಟರಿ ಸೂಚಿಸಿದೆ. ಅದಕ್ಕೆ ಲಾಟರಿ ಜೊತೆಗಿರಲಿ.

—ಗೋ

ಪುತ್ತೂರು IIIrd ಎಡಿಶನಲ್ ಮುನ್ಸೀಫ್ ಕೋರ್ಟ್

R. R. C. 70 5/69

S. ತಿಮ್ಮಪ್ಪ ಶೆಟ್ಟಿ —ಅರ್ಜಿದಾರ

ಮತ್ತು

ಬೇಮಪ್ಪ ಗೌಡ ಸಹಾ —ಎದುರು

R4. ದುಗ್ಗಮ್ಮ, W/o ನಾರ್ಣ ಗೌಡ ಪುತ್ತೂರು ತಾಲ್ಲೂಕು ಮುಣ್ಣಾಪುರ ಗ್ರಾಮದ ದಿರಂಬಾಡಿ ಎಂಬಲ್ಲಿ. Post ಸವಣೂರು (ದ. ಕ.)

R5. ವೆಂಕಪ್ಪ ಗೌಡ, S/o ನಾರ್ಣ ಗೌಡ, ಪುತ್ತೂರು ತಾಲ್ಲೂಕು, ಮುಣ್ಣಾಪುರ ಗ್ರಾಮದ ದಿರಂಬಾಡಿ ಎಂಬಲ್ಲಿ Post ಸವಣೂರು (ದ. ಕ.)

ಇವರಿಗೆ,

ಅರ್ಜಿದಾರನು ಗೇಣಿ ವಸೂಲು ಬಗ್ಗೆ ಮಾಡಿದ ಮೇಲಿನ ಅರ್ಜಿಯು ತಾ. 29-5-1970 ಕ್ಕೆ 4, 5ನೇ ಎದುರು ದಾರರ ಬಗ್ಗೆ ಇಟ್ಟಿರುತ್ತದೆ ಆ ದಿವಸ ಮುಂಚೆಯೂ ವಕೀಲರ ಮುಖಾಂತರವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತವೆಂದು ತೋರಿದ ತೀರ್ಮಾನ ನಿಮಗೆ ಈ ಮೂಲಕ ತಿಳಿಸಲಾಗಿಯದೆ

By order of Court

K. Raghunath Rai

Advocate for Peter.

Puttur, S. K. 8-4-70.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೋತ್ಸಾಹದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾರ್ಟಿಗಳ ಉಪಹಾರಕ್ಕೆ ಅಗ, ಸ್ನಾನ ಸಹಿತ ಏಕಮಾತ್ರ ಹೋಟೆಲ್

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ನವ ಯುಗ [illegible]

[illegible] ಸಿರಿ

ಸಾಹಿತ್ಯ ಚಂದಾ ರೂ. ೧೦.

ಗೇಹರಾಜ್ಯದಲ್ಲಿ

ನಾಲಗೆ ಹುಣ್ಣಾಗೋದುಂಟೆ?

'ಏನು, ನಾಳೆ ಉಗಾದಿ; ಬೇಗ ಏಳ್ಬೇಕು ಅನ್ನೋ ಪರಿವೇನೂ ಇಲ್ದೆ ಹೀಗೆಲ್ಲಾ ತಡಮಾಡಿ ಬಂದ್ರೆ...'

'ಅದೇನೋಡು, ಹೊಸ ವರ್ಷ ಆರಂಭ ವಾಗೋದಕ್ಕೆ ಮೊದ್ಲು ವರದಿ ವರ್ಷದ ಲೆಕ್ಕಾಚಾರ ಚುಕ್ತಾಮಾಡಬೇಡವೆ?'

'ಅಂದ್ರೆ ಅಂಗ್ಡಿ ಲೆಕ್ಕಾಚಾರವೆಲ್ಲಾ ಮುಗ್ಸಿಬಂದ್ರಾ, ?'

'ಅದೆಲ್ಲಾ ನೀವುಗಳಿಗೆ ಅರ್ಥ ವಾಗ್ದೆ ಬಂದದ್ದು ಮಾತ ಕತೆ ಲೆಕ್ಕಾಚಾರ..'

'ಸರಿಹೋಯ್ತು ಬಿಡಿ. ಅಂತೂ ಮಾತಾಡಿ ಮಾತಾಡಿ ನಾಲಿಗೆ ಹುಣ್ಣು ಎದ್ದೂ ಹುಮ್ಮಸಿರೋಲ್ಲ...'

'ಒಳ್ಳೆ ಸಂಶೋಧನೆಯಾಯ್ತಲ್ಲ..'

'ಏನು?'

'ಅಲ್ಲ, ತುಂಬ ಮಾತಾಡಿದ್ರೆ ನಾಲಗೆ ಯಲ್ಲಿ ಹುಣ್ಣಾಗುತ್ತೇಂತ...'

'ನೋಡಿ, ತುಂಬ ತಿಂದ್ರೆ ಹೊಟ್ಟೆ ಹುಣ್ಣಾಗುತ್ತೆ...'

'ಜೀರ್ಣಶಕ್ತಿ ಚೆನ್ನಾಗಿಲ್ಲದಿರೋರಿಗೆ.'

'ಅದ್ಯಾಕೆ, ಜೀರ್ಣಶಕ್ತಿ ಭಲೇ ಘಾಟಿ ಇರೋರಿಗೂ ಆಗುತ್ತೆ...'

'ಹ್ಞಾಂ ಆಗುತ್ತೆನ್ನೋಣ...'

'ತುಂಬ ನಡೆದು ಬಿಟ್ರೆ ಕಾಲು ನೋಯುತ್ತೆ...'

'ಅಂದ್ರೆ ನರ ಸಟೆದುಕೊಳ್ಳುತ್ತೆ...'

'ಮತ್ತೆ ಎಣ್ಣೆಬೆಣ್ಣೆ ಹಚ್ಚಿ ಕಾವು ಕೊಟ್ಟು...'

'ಉಪಚಾರ ಮಾಡಬೇಕು...'

'ತುಂಬ ಬೆಳಕನ್ನು ನೋಡಿದ್ರೆ ಕಣ್ಣು ನೋಯುತ್ತೆ...'

'ತುಂಬ ಯೋಚನೆ ಮಾಡಿದ್ರೆ ತಲೆ ನೋಯುತ್ತೆ...'

'ಹ್ಞಾಂ..ಹಾಗೇನೇ ತುಂಬ ಮಾತಾಡಿದ್ರೆ ನಾಲಿಗೆ ನೋಯಲೇಬೇಕು ತಾನೆ?'

'ಅದು ಸಾಧ್ಯವಿಲ್ಲಾಂದ್ರೆ..'

'ಯಾಕೆ? ಹೆಚ್ಚುಕೆಲಸ ಮಾಡುವುದರಿಂದ ಅಂಗಗಳು ಆಯಾಸಗೊಳ್ಳುತ್ತವೆ ಯಲ್ಲಾ?'

'ಹ್ಞಾಂ. ಒಪ್ಕೊಳ್ಳೋಣ.'

'ಅದ್ರಿಂದ್ಲೇ ಹೊಟ್ಟೆ, ಕಾಲು, ತಲೆ ಎಲ್ಲಾ ನೋಯೋದು ಆರಂಭವಾಗೋದು...'

'ಹಾಗೇಂತ್ಲೇ ಹೇಳಿ...'

'ಹಾಗೇನೇ ನಾಲಗೆನೂ..'

'ಇಲ್ಲಾಂದೆ...'

'ಯಾಕೆ?'

'ನೋಡು ನಾಲಗೆಗೆ ಎಲುಬಿಲ್ಲದಿದ್ದರಿಂದ ಅದಕ್ಕೆ ನೋವಿನ ಅರಿವಾಗೋದಿಲ್ಲ. ಅದರಲ್ಲಿನ ನರ-ನಾಡಿಗಳೋ, ರಬ್ಬರಿಗಿಂತಲೂ ಚುರುಕು. ಅದ್ರಮೇಲೆ ನೋಡು, ಎಷ್ಟು ಕೆಲಸ ಮಾಡಿದರೂ ಹೊರಗಿನ ಗಾಳಿ ಅದನ್ನು ತಂಪಾಗೇ ಇಡುತ್ತದೆ... ಹೇಳ್ತಾರಲ್ಲಾ, ತಂಗಾಳಿ ಹೊಸಜೀವನ ಕೊಡುತ್ತದೇಂತ...'

'ನಿಮ್ಮದು ಒಳ್ಳೇ ತಮಾಷೆ...'

'ತಮಾಷೆಯಲ್ಲೇ ಇದು...'

'ಮತ್ತೆ.'

'ಹೀಗಲ್ಲ ಅಂತ ಸಿದ್ಧವಾಗೋವರಿಗೂ ನೂರಕ್ಕೆ ನೂರು ಸತ್ಯ...'

'ಹೌದ್ರಿ, ಕೇಳಿದ್ರಾ ಒಂದ್ಸಮಾಚಾರ?'

'ಏನು?'

'ಅಲ್ಲ, ಹೀಗೆಲ್ಲಾ ಆದ್ರೆ ಹೇಗೇಂತ?'

'ಏನಮ್ಮಾ ಅದು?'

'ನೋಡಿ, ಸಂತತಿ ನಿಯಂತ್ರಣ...'

'ಹೌದು, ಬೇರೆ-ಗಿರೋರಿಗೆ ಮಾಡ್ತಾರೆ.' ನವ ಗಾಬರಿ ಚೀಕೆ?'

'ಹಾಗಲ್ರಿ. ಶಸ್ತ್ರ ಚಿಕಿತ್ಸೆ ಮಾಡಿಸಿದವರಿಗೆ ಕ್ಯಾನ್ಸರ್ ರೋಗ ಬರೋ ಸಂಭವವುಂಟಂತೆ.'

'ಯಾರೋ ಕುಟುಂಬ ಯೋಜನೆಗೆ ಪ್ರತಿಕ್ರಿಯಾವಾದಿಗಳ ಅಪಪ್ರಚಾರವಿರಬಹುದು...'

'ಅಲ್ರಿ, ಯಾವುದೋ ಪತ್ರಿಕೆಯಲ್ಲಿ ಬಂದಿದೆಯಂತೆ.'

'ಅದೇ ಅಂದದಲ್ಲ, ಕುಟುಂಬಯೋಜನೆಯನ್ನ ಒಪ್ಪದವರು...'

'ಹಾಗಾದ್ರೆ ಅದೇ ಅಂತೀರಲ್ಲಾ ನೀವು?'

'ಅಲ್ವೆ ಮತ್ತೇನನ್ನ ಬೇಕು?'

'ಇದನ್ನು ಸತ್ಯಾಂಶ ನೀವು ನಂಬೋದಿಲ್ಲ...'

'ಇದ್ದರೂ ಇರಬಹುದು. ನೋಡು, ಪೆನಿಸಿಲಿನ್ ಸಂಜೀವಿನಿಯೆಂದು ಬಹುಕಾಲ ಮೆರೆದಾಡಿತು. ಆದರೆ, ಕೆಲವರಲ್ಲಿ ಅದು ಪ್ರತಿಕ್ರಿಯೆಮಾಡುತ್ತದೆಂಬುದೂ ಕ್ರಮೇಣ ಬೆಳಕಿಗೆ ಬಂತು. ಇಂತಹ ಪ್ರತಿಕ್ರಿಯಾವಾದಿಗಳಿಗೆ ಪೆನ್ಸಿಲಿನ್ ಚುಚ್ಚಿದರೆ, ಅದೇ ಅವರ ಮೃತ್ಯುವಿಗೂ ಕಾರಣವಾಗಬಹುದು...'

'ಅಂದ್ರೆ, ಸಂತತಿ ನಿರೋಧ ಶಸ್ತ್ರಕ್ರಿಯೆಯನ್ನು ಒಪ್ಪದ ಜೀವಕಣಗಳೂ ಇವೆ ಅಂದ ಹಾಗಾಯ್ತು...'

'ಅಲ್ಲಾಂತ ಹೇಗೆ ಹೇಳೋದು?'

'ಹಾಗಾದ್ರೆ ಇನ್ನ ಮುಂದೆ..'

'ಕ್ಯಾನ್ಸರ್ ಬರುವ ಸಂಭವವಿರುವುದು ದೃಢವಾದರೆ, ಅದ ಬಾರದಂತೆ ತಡೆಯಬೇಕಾಗುವುದು...'

'ಅಲ್ಲ. ಗಣಪತಿಯನ್ನು ಮಾಡಹೋಗಿ ಏನಾಮಾಡಿದ ಹಾಗಾಯ್ತಲ್ಲಾ?'

'ಅದ ಹಾಗೇನೆ. ವಿಜ್ಞಾನ ಎಂಬುದರ ಕತೆಯೇ ಅದು. ಒಂದು ಹುಡುಕಿದಾಗ ನೂರು ಮುಂದೆ ಬರುತ್ತವೆ.'

'ಅವೆಲ್ಲವನ್ನೂ ಮೈಗೆ ಹಚ್ಚಿಕೊಂಡು ಯಾಕೆ ತಲೆಬಿಸಿ ಮಾಡಿಕೊಳ್ಳಬೇಕೆಂದು ನಮ್ಮ ದೇಶಜರು ಕುಟೀಮನುಷ್ಯರಾಗುವುದರಲ್ಲೇ ಸಂತೋಷ ಪಡುತ್ತಾರೆ....'

'ಅಬ್ಬಾ, ಏನು ಘಾಟೀಂತ?'

'ಅಂದ್ರೆ?'

'ಘಾಟಿ ಅಂದ್ರೆ ಗೊತ್ತಿಲ್ವೆ?'

'ಅದು ಗೊತ್ತು, ಹೂರೂಂತ?'

'ಯಾರ್ಯಾರ ಕತೆ ನಮಗ್ಯಾಕೆ?'

'ನಾಳೆ ಬಿಡೀಂದ್ರೆ....'

'ಆಶ್ಚರ್ಯ, ಏನಾಯ್ತು ಗ?'

'ನೋಡಿ ಗಡಿಯಾರ ಹನ್ನೆರಡು ಬಡಿತು.'

'ಬಡೀಲಿ.'

'ನಾಳೆ ಉಗಾದಿ. ಬೇಗನೇ ಏಳಬೇಕು.'

'ಅದೆಲ್ಲ ಇದ್ದದ್ದೇ ಅನ್ನು.'

'ಉಗಾದಿ ದಿನ ತಡಯಾದ್ರೆ ಮತ್ತೆ ಇಡೀವರ್ಷ ತಡವಾಗೇ ಏಳೋದಂತೆ.'

'ಇದೊಳ್ಳೇ ಧೋಷಾಯ್ತು ಬಿಡು.'

'ಯಾಕೆ?'

'ಅಲ್ವೆ, ಉಗಾದಿ ದಿನ ಹೊಸ ಬಟ್ಟೆ ಉಡೇವೆ; ಪರವಾನ್ನ ಮಗ್ಗಿಗ್ಗಾ ತಿಂತೇವೆ, ಅಂದೆ, ಪ್ರತಿನಿತ್ಯಾನೂ ಹೊಸ ಸೀರೆ ಉಡೋ ಪರವಾನ್ನ ಮಾರಿಯೋ ಯೋಗ ಬರುತ್ತೇನೆ?'

'ನೋಡಿ ಇವಗೆ ಮಾತಾಡಿ ಮಾತಾಡಿ ನಾಲಿಗೆ ಹುಣ್ಣಾಗದಿದ್ರೂ ನಂಗೆ ಅದನ್ನ ಕೇಳಿಕೇಳಿ ಕಿವಿಯೊಳಗೆ ಕೀವು ಹೊಸ್ಕೊಂಡಂಗಿದೆ. ಅದ್ರಿಂದ ದಯ ಬಿಟ್ಟು....'

'ಸುಮ್ಮನೆ ಮಲಕ್ಕೊಳ್ಳಿ....'

'ನಾನು ಅದನ್ನೇ ಅಂದದ್ದು ....'

'ನಾವೂ ಇದನ್ನೇ ಬಯಸೋದು....'

'ಶರ್...ಸಾಕೊಂದ್ರೆ....'

—ಗೋರಾ

ಮಂಗಳೂರಲ್ಲಿ ನಗರ ಸಭಾಪತಿಗಳ ಸಮ್ಮೇಳನ

ತಾ. 11.4.70 ರಂದು ಮೈಸೂರು ರಾಜ್ಯದ ನಗರ ಸಭಾಧಿಪತಿಗಳ ಮತ್ತು ಉಪಸಭಾಧಿಪತಿಗಳ ದ್ವಿತೀಯ ಸಮ್ಮೇಳನವನ್ನು ಮಂಗಳೂರು ಪುರಭವನದಲ್ಲಿ ವಿಧಾನ ಪರಿಷತ್ ಅಧ್ಯಕ್ಷ ಶ್ರೀ ಕೆ.ಕೆ. ಶೆಟ್ಟರು ಉದ್ಘಾಟಿಸುತ್ತಾ ಕಳೆದ 22 ವರ್ಷಗಳಲ್ಲಿ ಪ್ರಜೆಗಳ ದಾರಿರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಸಾರ್ಥಕತೆ ಪಡೆಯದಂತಾಯಿತೆಂದೂ ನಾವು ಮೈಸೂರಿಗೆ ಸೇರಿದ ಬಳಿಕ ಸ್ವತಂತ್ರ, ಹೊಣೆಗಾರಿಕೆಯ ಕಾರ್ಯಾವಕಾಶ ಕುಂಠಿತವಾಗಿದೆಯೆಂದೂ ಮುನಿಸಿಪಲ್ ಕಾನೂನು ಬದಲಾಗಿ ಸ್ಥಳೀಯ ಸಂಸ್ಥೆಗಳು ಜನತೆಯ ಸೇವೆ ಸಲ್ಲಿಸುವ ಸಂಸ್ಥೆಗಳಾಗಿ ಬೆಳೆಯಬೇಕಾಗುವಂತಾಗಲೆಂದೂ ಹೇಳಿದರು.

ಸಭಾಧ್ಯಕ್ಷತೆ ವಹಿಸಿದ್ದ ಆರೋಗ್ಯ ಸಚಿವ ಶ್ರೀ ಬಿ. ವಿಠ್ಠಲದಾಸ ಶೆಟ್ಟರು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಪಟ್ಟಣಗಳ ಅಭಿವೃದ್ಧಿಗೆ ರೂ. 6 ಕೋಟಿ ವಿಂಗಡಿಸಲಾಗಿದೆಯೆಂದೂ ಪ್ರಜಾಪ್ರಭುತ್ವದ ಸಾರ್ಥಕತೆಗೆ ಎಲ್ಲಾ ನಾಗರಿಕರೂ ಜವಾಬ್ದಾರರೆಂದೂ ಹೇಳಿದರು. ಆರಂಭದಲ್ಲಿ ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ವಾಮನ ಕೊಡಿಯಾಲ್ ಬೈಲ್ ಅವರು ಸ್ವಾಗತ ಭಾಷಣ ಮಾಡಿದರು. ಸಮ್ಮೇಳನದ ಸಮಯದಲ್ಲಿ ಪ್ರಕಟಿಸಿದ ಸಂಸ್ಮರಣ ಸಂಚಿಕೆಯನ್ನು ಶ್ರೀ ಕೆ. ಸೂರ್ಯನಾರಾಯಣ ಅಡಿಗ ಎಂ ಎಲ್ ಸಿ ಅವರು ಬಿಡುಗಡೆಗೊಳಿಸಿ ನಗರ ಸಭೆಗಳು ಹೇಗೆ ಇರಬೇಕೆಂದು ವಿವರಿಸಿದರು.

ಮರುದಿನ ಶ್ರೀ ಜಿ. ಸೋಮಶೇಖರಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಬಹಿರಂಗ ಅಧಿವೇಶನ ಜರಗಿ ಠರಾವುಗಳು-ದವು. ಸಭೆಯಲ್ಲಿ ಶ್ರೀ ಮಾಲೆಲ್ ಶ್ರೀನಿವಾಸ ನಾಯಕ್ ಎಂ ಎಲ್ ಎ, ಶ್ರೀ ಕೆ. ವಿಶ್ವನಾಥ ಕಾಮತ್ ಇವರು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುನ್ಸಿಪಲ್ ಕಾನೂನನ್ನು ಬದಲಾಯಿಸುವ ಆವಶ್ಯಕತೆಯನ್ನು ವಿವರಿಸಿದರು. ದಾವಣಗೆರೆಯ ಶ್ರೀ ಕೇಶವ ಮೂರ್ತಿಯವರೂ ಶ್ರೀ ಆತ್ಮಾನಂದ ಶೆಟ್ಟರೂ ಧನ್ಯವಾದವನ್ನು ಅರ್ಪಿಸಿದರು.

ನಮ್ಮೊಡನೆ ಆರು ವರ್ಷಗಳ ಮೇಲಿನ ನಿರಖು ಠೇವಣಾತಿಗಳ ಮೇಲೆ

7%

ಬಡ್ಡಿಯನ್ನು ನೀವೀಗ ಸಂಪಾದಿಸಬಹುದು.

++++++

ಎರಡು ವರ್ಷ ಮತ್ತು ಮಿಕ್ಕಿದ ಅವಧಿಯ ನಿರಖು ಠೇವಣಾತಿಗಳ ಮೇಲೆ 1—4—1970ರಿಂದ ಈ ಕೆಳಗಿನ ಹೆಚ್ಚಿಸಿದ ಬಡ್ಡಿ ದರಗಳನ್ನು ಸಹ ಕೊಡಲಾಗುವುದು.

6% ಎರಡು ವರ್ಷಗಳಿಗೆ ಮಿಕ್ಕಿದ ಮೂರು ವರ್ಷದ ಅವಧಿ ವರೆಗೆ

6½% 3 ವರ್ಷಕ್ಕೆ ಮಿಕ್ಕಿ ಐದು ವರ್ಷದ ಅವಧಿ ವರೆಗೆ

6¾% ಐದು ವರ್ಷಕ್ಕೆ ಮಿಕ್ಕಿ 6 ವರ್ಷಗಳ ವರೆಗೆ

FAITHFUL SB

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ : ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ ಕಸ್ಟೋಡಿಯನ್

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಒಡೆದು ಆಳುವದು ರಾಜನೀತಿ ಕೂಡಿ ಬಾಳುವದು ಲೋಕನೀತಿ

(ವಾ. ಅ. ಹೊದಿಕೆ)

ಇಂದು ಎಲ್ಲ ಕಡೆಗಳಲ್ಲಿಯೂ ಭಾಷೆ, ಪ್ರಾಂತ, ಜಾತಿ, ವರ್ಗ, ಪಕ್ಷ ಸಂಘರ್ಷಣೆಗಳು ಉಲ್ಬಣಗೊಳ್ಳುತ್ತಲಿವೆ. ಗಡಿಸೀಮೆ ಹಾಗೂ ಬೆಳಗಾಂವಿಯ ಹೆಸರಿನಲ್ಲಿ ಕರ್ನಾಟಕದಲ್ಲಿಯೂ ಇಂದು ಹೋಮ ಕುಂಡವು ಉರಿದೇಳುವಂತೆ ತೋರುತ್ತದೆ.

ಅನೇಕ ಭಾಷೆ, ಪ್ರಾಂತ, ಜಾತಿ, ಧರ್ಮ ಸಂಪ್ರದಾಯ, ವರ್ಗ ಪಕ್ಷಗಳಲ್ಲಿ ಸಮನ್ವಯ ಸಾಧಿಸಿ ಸದ್ಭಾವದೊಂದಿಗೆ ಸಹಜೀವನ ನಡೆಸಿದ ಉಜ್ವಲ ಕೀರ್ತಿ ಭಾರತೀಯ ಸಮಾಜದ್ದು. ಜಗತ್ತಿನಲ್ಲಿ ಎಷ್ಟೋ ಅಲ್ಲೋಲಕಲ್ಲೋಲ ನಡೆಯುತ್ತಲಿರುವಾಗಲೂ ಶಾಂತಿ ಮಂತ್ರ ಜಪಿಸುತ್ತ ವಿಶ್ವಬಂಧುತ್ವದ ಕನಸನ್ನೇ ಕಾಣುತ್ತ ಬಂದಿದೆ ನಮ್ಮ ಸಮಾಜ. ಹೀಗೆಂದೇ ಖಂಡಪ್ರಾಯವಾಗಿರುವ ಭಾರತವು ಒಂದು ದೇಶ, ಒಂದು ರಾಷ್ಟ್ರ ಎಂದು ತಲೆ ಎತ್ತಿ ನಿಂತಿದೆ.

ಇದ ಜನಸಾಮಾನ್ಯರ ಮಾತಾಯಿತು, ತತ್ವದರ್ಶಿಗಳ ಮಾತಾಯಿತು. ಆದರೆ ಭಾರತದಲ್ಲಿಯೂ ರಾಜ್ಯಕ್ರಾಂತಿಗಳು ಎಷ್ಟೋ ಆಗಿವೆ. ಎಷ್ಟೋ ರಾಜವಂಶಗಳು ಹೋಗಿವೆ. ಎಷ್ಟೋ ರಾಜವಂಶಗಳು ಬಂದಿವೆ. ಆದರೂ ಇವೆಲ್ಲವೂ ಸಮುದ್ರದ ಮೇಲಿನ ತೆರೆಗಳ ಅಬ್ಬರದಂತೆ ಕ್ಷಣಿಕ ಮಾತ್ರ. ಜನತಾ ಸಮುದ್ರವು ಅದಾವುದನ್ನೂ ಗಮನಿಸಿಯೇ ಇಲ್ಲ.

ಒಟ್ಟಿಗೆ ಭಾಷೆ, ಪ್ರಾಂತ, ಜಾತಿ, ವರ್ಗ, ಪಕ್ಷ ಮೊದಲಾದ ಹೆಸರಿನಲ್ಲಿ ಪ್ರಜೆಗಳಲ್ಲಿ ಒಡಕು ಹುಟ್ಟಿಸಿ ಉತ್ಪಾತ ಎಬ್ಬಿಸುವವರು ರಾಜರು-ಆಳರಸರು. ಇಂದು ಪ್ರಜಾರಾಜ್ಯವಾಗಿರುವದರಿಂದ ಅಂಥ ರಾಜ್ಯವಾಗಿರುವದರಿಂದ ಅಂಥ ರಾಜವಂಶಗಳ ಆಳರಸರಾಗ ಬಯಸುವವರ ಮತ್ತು ಅದಕ್ಕಾಗಿ ಸ್ಪರ್ಧೆಯ ಕಣಕ್ಕೆ ಇಳಿಯುತ್ತಲಿರುವವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ. ಇದರಿಂದಾಗಿ ಕಲಹ, ಕೋಲಾಹಲ, ಗರ್ಜನೆ, ಘೋಷಣೆ, ಉತ್ಪಾತ ವಿಧ್ವಂಸ, ಸಂಪು, ಹರತಾಳ, ಬಂದ್, ಅಗ್ನಿಕಾಂಡ ಮೊದಲಾದವುಗಳ ತೀವ್ರತೆಯೂ ಪ್ರಮಾಣವೂ ದಿನದಿನಕ್ಕೆ ಹೆಚ್ಚುತ್ತಲಿದೆ.

ಇಂದು ರಾಜಕಾರಣಕ್ಕೇ ಪ್ರತಿಷ್ಠೆ ಕೊಡಲಾಗುತ್ತಲಿದೆ, ರಾಜಕಾರಣಿಗಳೇ ಪ್ರತಿಷ್ಠಿತರೆನಿಸಿಕೊಳ್ಳುತ್ತಿದ್ದಾರೆ. ಅಧಿಕಾರದ ಕೇಂದ್ರೀಕರಣವಾಗುತ್ತಲಿದೆ, ಸಮಾಜದ ಅಂಗಾಂಗಗಳೆಲ್ಲ, ಇಡೀ ಸಮಾಜಜೀವನವೇ ರಾಜಕಾರಣಿಗಳ ಕ್ರೀಡಾಕ್ಷೇತ್ರವಾಗುತ್ತಲಿದೆ. ಮತ್ತು ಪ್ರಜೆಗಳೆಲ್ಲ ನಿಷ್ಕ್ರಿಯ ಪ್ರೇಕ್ಷಕರಾಗುತ್ತಲಿದ್ದಾರೆ.

ಇದು ಪ್ರಜಾರಾಜ್ಯದ ಮೂಲಸಿದ್ಧಾಂತಕ್ಕೇ ಸರಿ ವಿರುದ್ಧವಾಗಿದೆ. ಲೋಕರಾಜ್ಯದ ಘನವಾದ ಉದ್ದೇಶವನ್ನೇ ವಿಫಲಗೊಳಿಸುವಂತಹದಾಗಿದೆ.

ಇಂದು ಕೇಂದ್ರೀಕೃತ ಹಾಗೂ ಇಡೀ ಸಮಾಜ ಜೀವನವನ್ನು ನಿಯಂತ್ರಿಸುವ ಶಕ್ತಿಯು ರಾಜಕಾರಣಿಗಳ ಕೈಗೆ ಬಂದದ್ದು–ಕೋತಿಯ ಕೈಯಲ್ಲಿ ಉರಿಯುವ ಕೊಳ್ಳಿಯನ್ನು ಕೊಟ್ಟಂತಾಗಿದೆ. ರಾಜಕಾರಣಿಗಳು ಇಡೀ ಸಮಾಜ ಜೀವನವನ್ನು ಸಂಘಟಿಸುವ ಘೋಷಣೆ ಮಾಡುತ್ತಾರೆ. ಅದರೆ ಅವನ್ನು ಪೂರೈಸುವದು-ಎಲ್ಲ ಜನರಿಗೆ ಅನ್ನ, ವಸ್ತ್ರ, ವಸತಿ, ಉದ್ಯೋಗ, ಶಿಕ್ಷಣ, ರಕ್ಷಣ, ಔಷಧೋಪಚಾರ ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವದು–ಅವರಿಗೆ ನುಂಗಲಾಗದ ತುತ್ತಾಗಿದೆ. ಅಂತಲೇ ಅವರು ಗಡಿಸೀಮೆ ಮೊದಲಾದ ಚಿಕ್ಕ ಪುಟ್ಟ ವಿಷಯಗಳಿಗೇ ಮಹತ್ವ ಕೊಟ್ಟು, ಕಡ್ಡಿಯನ್ನು ಗುಡ್ಡವನ್ನಾಗಿ ಮಾಡಿ, ಅದೇ ಜೀವನ ಮರಣದ ಪ್ರಶ್ನೆ ಎಂದು ಸಾರಿ, ಅಕಾಂಡ ತಾಂಡವ ಮಾಡುತ್ತಾರೆ. ಮತ್ತು ಅಜ್ಞ ಜನರು ಅದಕ್ಕೆ ಮರುಳಾಗುತ್ತಾರೆ.

ರಾಜ್ಯವನ್ನು ನಿಯಂತ್ರಿತವಾಗಿ ಆಳಲಾಗದ ಪರಿಸ್ಥಿತಿ ಬಂದಾಗ ಸ್ವತಂತ್ರ ರಾಷ್ಟ್ರಗಳು, ಪರರಾಷ್ಟ್ರಗಳು ಆಕ್ರಮಣ ಮಾಡಲು ಸಿದ್ಧತೆ ನಡೆಸಿವೆ ಎಂಬ ಹುಯಿಲು ಎಬ್ಬಿಸಿ, ತಮ್ಮ ಪ್ರಜೆಗಳ ಲಕ್ಷ್ಯವನ್ನು ಅತ್ತ ಹೊರಳಿಸುತ್ತವೆ. ಅದೇ ಪ್ರಕಾರ ನಮ್ಮಲ್ಲಿಯ ಪ್ರಾಂತೀಯ ರಾಜ್ಯಗಳು ಪರಪ್ರಾಂತಗಳ ಆಕ್ರಮಣದ ಹುಯಿಲು ಎಬ್ಬಿಸಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹೆಣಗುತ್ತವೆ.

ಇವೆಲ್ಲ ರಾಜಕಾರಣಿಗಳ ಕಾರಸ್ಥಾನಗಳೇ ಹೊರತು ಪ್ರಜೆಗಳ ದೈನಂದಿನ ಜೀವನಕ್ಕೆ ಇವು ಸಂಬಂಧಪಟ್ಟವುಗಳಲ್ಲ. ಅನ್ನ, ವಸ್ತ್ರ, ಉದ್ಯೋಗ ಮೊದಲಾದ ಜನಸಾಮಾನ್ಯರ ಸಮಸ್ಯೆಗಳ ಮೇಲೆ ಎಲ್ಲ ರಾಜ್ಯಗಳ ಲಕ್ಷ್ಯವನ್ನು ಕೇಂದ್ರೀಕರಿಸಿ ದುಡಿದಿದ್ದರೆ, ದೇಶದಲ್ಲಿ ಒಗ್ಗಟ್ಟು ಬಂಧು ಭಾವ, ಪುರುಷಾರ್ಥ ಬೆಳೆಯುವಂತಾಗುತ್ತಿತ್ತು. ಮತ್ತು ಅದರ ನೆರಳಲ್ಲಿ ಇನ್ನಿತರ ಚಿಕ್ಕಪುಟ್ಟ ಸಮಸ್ಯೆಗಳು ಅನಾಯಾಸವಾಗಿ ಬಗೆಹರಿಯುತ್ತಿದ್ದವು.

ಅದರೆ ಇಂದು ನಡೆಸಲಾಗುತ್ತಿರುವ ಸಂಪು, ಹರತಾಳ, ಬಂದ್ ಚಳವಳಿಗಳಿಂದಾಗಿ ಉತ್ಪಾದನೆಯು ತಡೆದು ಅದರಿಂದ ಬೆಲೆಗಳು ಇನ್ನಿಷ್ಟು ಹೆಚ್ಚುತ್ತವೆ. ಬಡಬಗ್ಗರಿಗೆ ಜೀವನಾವಶ್ಯಕ ವಸ್ತುಗಳೇ ದೊರೆಯದಂತಾಗುತ್ತವೆ. ಶಾಲಾ, ಕಾಲೇಜುಗಳು ಮೊದಲಾದವು ಬಂದಾಗುತ್ತವೆ. ಉತ್ಪಾತ, ವಿಧ್ವಂಸ ಅಗ್ನಿಕಾಂಡಗಳಿಂದಾಗಿ ಬಡ ರಾಷ್ಟ್ರದ ಸಂಪತ್ತು ನಷ್ಟವಾಗುತ್ತದೆ. ಮೇಲಾಗಿ ಅದಕ್ಕಾಗಿ ಜನತೆಯೇ ಹೆಚ್ಚಿನ ಕರಗಳನ್ನು ತೆರಬೇಕಾಗಿ ಬರುತ್ತದೆ.

ಇದೆಲ್ಲ ಲೆಕ್ಕ ಹಾಕಿದರೆ ಸಾಮಾನ್ಯ ಜನತೆಯ ಕಷ್ಟ ನಷ್ಟಗಳನ್ನು ಹೆಚ್ಚಿಸಲಿಕ್ಕೇ ಇಂಥ ಚಳವಳಿಯು ಕಾರಣವಾಗುತ್ತಲಿದೆ ಎಂಬುದು ಸುಸ್ಪಷ್ಟವಿದೆ. ಗ್ರಾಮಾಂತರದ ಜನರು ಇದರಲ್ಲಿ ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂಬುದೂ ಇದ್ದುದರಲ್ಲೊಂದು ಸಮಾಧಾನದ ಸಂಗತಿ.

ಚಿಕ್ಕಪುಟ್ಟ ಹಳ್ಳಿಗಿಂತ ಮುಂಬಯಿ, ಚಂದಿಗಡ, ಬೆಳಗಾಂವಿ ಮೊದಲಾದ ಕೇಂದ್ರೀಕೃತ ಶಹರಗಳ ಬಗ್ಗೆ ಮತ್ತು ಶಹರಗಳಲ್ಲಿಯೇ ಇಂಥ ಆಂದೋಲನಗಳು ಪ್ರಾರಂಭವಾಗಿ ನಡೆಯುತ್ತವೆ ಎಂಬುದೂ ಗಮನಾರ್ಹ. ಶಹರಗಳಿಂದ ಗ್ರಾಮಾಂತರ ಪ್ರದೇಶದ ಶೋಷಣೆಯೇ ಹೆಚ್ಚಾಗಿ ನಡೆಯುತ್ತದೆ ಎಂಬುದೂ ನಿರ್ವಿವಾದ. ಇಂಥ ಪ್ರಸಂಗದಲ್ಲಿ ಗ್ರಾಮಾಂತರ ಪ್ರದೇಶಗಳು ಶಹರಗಳ ಶೋಷಣದ ಉರುಳಿನಿಂದಲೂ, ರಾಜಕಾರಣಿಗಳ ಮಾಯಾಜಾಲದೊಳಗಿಂದಲೂ ಮುಕ್ತಿ ಪಡೆಯುವ ದೃಷ್ಟಿಯಿಂದ, ಗ್ರಾಮಸ್ವರಾಜ್ಯವನ್ನೇ ಬಲಪಡಿಸಿಕೊಳ್ಳುತ್ತ, ಗ್ರಾಮಸ್ವಾಯತ್ತತೆ ಸಾಧಿಸಿಕೊಳ್ಳುವದರಲ್ಲಿ ತಮ್ಮ ಶಕ್ತಿ ಸರ್ವಸ್ವವನ್ನು ವಿನಿಯೋಗಿಸುವದು ಅವಶ್ಯವಿರುತ್ತದೆ.

ಒಟ್ಟಿಗೆ ಸೀಮಾ ಪ್ರಶ್ನೆಯಂಥ ಚಿಕ್ಕಪುಟ್ಟ ಸಂಗತಿಗಳ ಬಗ್ಗೆ ತಲೆ ಕೆಡಿಸಿಕೊಂಡು ರಾಷ್ಟ್ರೀಯ ಭಾವೈಕ್ಯತೆಗೆ ಎಳ್ಳಷ್ಟು ಬಾಧೆ ತಟ್ಟದಂತೆ ನೋಡಿಕೊಳ್ಳುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಬೆಂಗಳೂರಿನಿಂದ ಜಕ್ಕೂರಿಗೆ

(ಎರಡನೇ ಪುಟದಿಂದ)

ಯ ಕಡೆಗೆ ನಡೆದು "ನೋಡಿ ಇದಕ್ಕೆ 2500 ರೂ. ಬೆಲೆ ಕೊಡುತ್ತೇವೆಂದರೂ ನಾನು ಕೊಡಲಿಲ್ಲ. ದಿನಕ್ಕೆ 14 ಲೀಟರ್ ಹಾಲು ಕೊಡುತ್ತಿದ್ದ ಈ ಹಸುವನ್ನ ಕರುವಾಗಿದ್ದಾಗ ಐನೂರು ರೂಪಾಯಿಗೆ ಕೊಂಡಿದೆ. ಇದು ಜರ್ಸಿ ಜಾತಿಯದ್ದು. ನಾನು ಉತ್ತಮ ಜಾತಿಯ ಕೋಳಿಗಳನ್ನು ಸಾಕುತ್ತೇನೆ.... .."

ಇದರ ಸಾರ ಎಂದರೆ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಹಿಂದೆ ಮುಂದೆ ನೋಡುವವರೇ ಹೆಚ್ಚು. ಅದರಲ್ಲೂ ಹಳ್ಳಿಗಳಲ್ಲಿ ಯಾವುದಾದರೂ ಹೊಸ ಪ್ರಯೋಗ ನಡೆಸಲು ಇನ್ನೂ ಕಷ್ಟ. ಅಂದರೆ ಹಳ್ಳಿಗರು ಸುಧಾರಣೆ ಬೇಡ ಎನ್ನುವವರೆಂದಲ್ಲ, ಅವರಿಗೆ ಸರಿಯಾದ ತಿಳುವಳಿಕೆ ದೊರೆತಿಲ್ಲ ಎನ್ನಬೇಕು. ಚೆನ್ನಾಗಿ ವಿವರಿಸಿ ಸಾಧಕ—ಬಾಧಕಗಳನ್ನು ತಿಳಿಸಿದರೆ ನಮ್ಮ ಹಳ್ಳಿಗರು ಖಂಡಿತ ಉತ್ಸಾಹದಿಂದ ಕೃತಜ್ಞತಾಪೂರ್ವಕವಾಗಿ ಮುಂದೆ ಬರುತ್ತಾರೆ. ಉದಾಹರಣೆಗೆ ಕುಟುಂಬಯೋಜನೆ. ಇದು ನಮ್ಮಲ್ಲಿ ಆರಂಭವಾಗಿ ಆರೇಳು ವರ್ಷಗಳಾಗಿರಬೇಕು. ಆರಂಭದಲ್ಲಿ ಜನರಿಗೆ ಅಷ್ಟು ಆಸಕ್ತಿ ಇದ್ದಿಲ್ಲ. ಬರಬರುತ್ತ ಇದು ಜನತೆಗಾಗಿ ಸರಕಾರ ಕೈಗೊಂಡ ಕಾರ್ಯವೆಂದು ಹಳ್ಳಿಗರಿಗೆ ಮುಂದಟ್ಟಾಗತೊಡಗಿದೆ. ಯಾರಾದರೂ ಆಪರೇಶನ್ ಮಾಡಿಸಿಕೊಂಡು ಅವರಿಗೆ ಯಾವ ತೊಂದರೆಯೂ ಇಲ್ಲವೆಂದಾದರೆ ಅನೇಕರು ಸಿದ್ಧರಾಗುತ್ತಾರೆ. ಹಳ್ಳಿಗಳಲ್ಲಿ ಈ ಸುದ್ದಿ ಹಬ್ಬುವುದು ಪೇಟೆ ಪಟ್ಟಣಗಳಿಗಿಂತ ಬೇಗ. ಬಾವಿಕಟ್ಟೆ, ಹೊಲ, ದೇವರಗುಡಿ, ಪಂಚಾಯತಿ ಎಂದು ದಿನವೂ ಜನಸೇರುವಲ್ಲಿ ಸುದ್ದಿ ಒಬ್ಬರಿಂದೊಬ್ಬರಿಗೆ ಮಿಂಚಿನಂತೆ ಹಬ್ಬುತ್ತದೆ. ಹಳ್ಳಿಗೆ ಯಾರೇ ಬರಲಿ, ಹಳ್ಳಿಯಿಂದ ಯಾರೇ ಹೋಗಲಿ ಅದು ಹೆಚ್ಚು ಕಡಿಮೆ ಎಲ್ಲರಿಗೂ ಗೊತ್ತು.

ಸರಕಾರದ ಕೆಲಸದಲ್ಲಿ ನಮ್ಮದೂ ಜವಾಬ್ದಾರಿ ಇದೆ. ನಾವು ನಮ್ಮ ಕರ್ತವ್ಯವೆಂದು ಇಂತಹ ಸಂಗತಿಗಳಲ್ಲಿ ಆಸಕ್ತಿ ವಹಿಸಬೇಕು. ನಮ್ಮ ಹಳ್ಳಿಯಲ್ಲಿಯೂ 25 ಮಂದಿ ಗಂಡಸರು, ಮೂರು ಮಂದಿ ಹೆಂಗಸರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಸುಖಿಯಾಗಿದ್ದಾರೆ. ನನ್ನ ತಂಗಿ ಸರೋಜ ಯಲಹಂಕಕ್ಕೆ ಶಸ್ತ್ರಚಿಕಿತ್ಸೆಗಾಗಿ ಹೋಗಿದ್ದಾಳೆ. ಅವಳಿಗೆ ಮೂರು ಮಕ್ಕಳು" ಎಂದು ಹೇಳುತ್ತಾ ಅಂಗಳಕ್ಕಿಳಿದು—"ನೋಡಿ ಇದು ನಾನ ಬೆಳೆಸಿದ ಹೈಬ್ರಿಡ್ ಜೋಳ" ಎಂದು ಜೋಳದ ತೆನೆಗಳನ್ನು ತೋರಿಸಿದರು ಶ್ರೀ ಬೈರೆಗೌಡರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337 / 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN NAVAYUGA WEEKLY

ಅಮೃತಾಂಜನ

● ತಲೆ ನೋವು ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

NAVAYUGA 16-4-1970
Registered with the Registrar
of News Papers for India
under No. R. N. 3546/'57

REGD. No. B. G 176
LICENCE No. 33,
Licensed to Post without Prepayment

ಅಯ್ಯೋ ಪಾಪ—ಹಿಂದಿ ವಿರೋಧ

(ಒಂದನೇ ಪುಟದಿಂದ)

ನ್ನು ನೀವು ಬೆಂಬಲಿಸುವದು ಅದೆಂತು ನ್ಯಾಯವಾದೀತು?"

"ನ್ಯಾಯ ಬೇರೆ, ರಾಜಕೀಯ ಬೇರೆ" ಎಂದು ಹೇಳಿ ಮಾತನ್ನು ಮುಗಿಸಿದರು ಲೋಕಸಭಾ ಭವನದೊಳಗಿದ್ದ ದ್ರಾ. ಮು. ಕ. ಸದಸ್ಯರು.

ಬೃಹಸ್ಪತಿಯವರು ಅವರನ್ನು ಬೀಳ್ಕೊಟ್ಟು ನೇರ ಇಂದಿರಾ ಕಾಂಗ್ರೆಸ್ಸಿಗರ ಬಳಿ ಧಾವಿಸಿದರು.

"ಹಿಂದಿ ವಿರೋಧವನ್ನು ನಿಮ್ಮ ಪಕ್ಷವು [illegible] ಇಲ್ಲವೇ? ಇನ್ನು [illegible] ದ್ರಾ. ಮು. ಕ. ದ ಬೆಂಬಲ ಸಿಕ್ಕೀತೇ? ಬೃಹಸ್ಪತಿ ಕೇಳಿ [illegible].

[illegible] "[illegible] ಸಿಕ್ಕೀತೆ."

"[illegible] ನಿಶ್ಚಯವಾಗಿ [illegible]?"

"ದ್ರಾ. ಮು. ಕ. ದವರೇ [illegible] ಹಿಂದಿ ವಿರೋಧ ಶೀಘ್ರಾನ ಬಂದಾಗ [illegible] ಇಲ್ಲ. ಆದರಿಂದಲೇ ಅವರಿಗೆ [illegible] ಆಗುವದಿಲ್ಲವೇ?"

"ನಿಮಗೇನ ಗೊತ್ತು? ಅವರಿಗೇ ಆಶ್ಚರ್ಯ ಇಲ್ಲ! ಹದಿನೈದು [illegible] ರಾಜರನ್ನು ಹುಡುಕಿಕೊಂಡು ಹೋದುದಾಗಿ ತಮಿಳ್ನಾಡಿನ ಮುಖ್ಯಮಂತ್ರಿಯವರು ಹೇಳಿರುವದು ನಿಮಗೆ ಗೊತ್ತಿಲ್ಲವೇ?"

"ಇಂದಿರಾ ಗಾಂಧಿ ಘಗಾಡಿದರು, ಅದನ್ನು ನೀವು [illegible] ತೆಗೆದುಕೊಂಡ ಬಿಟ್ಟಿರಾ? ಮುಖ್ಯಮಂತ್ರಿಯವರು ಅದನ್ನು ನಗಾಡುತ್ತ ಮಾಡಿದರು. ಅದು ಹಾಸ್ಯವೂ [illegible] ಅಷ್ಟೇ ತಾನೇ!"

"ಹಾಸ್ಯವಾ ಕೇ? ಹಿಂದಿ ವಿರೋಧ ಹಾಸ್ಯವಾಗಿಬಿಟ್ಟಿತೇ? ಅಂದು [illegible] ನ್ನು [illegible] ಗಟ್ಟಳೆ [illegible] ದ ವಿಷಯವಾಗಿ ಬಿಟ್ಟಿತೆಂಬುದು ತಾನೇ ಅದಕ್ಕೆ ಅರ್ಥ?"

'ಎಲ್ಲಾ ಹಾಸ್ಯವಾತುಗಳೇ. ನಾನು [illegible] ಕೋಟೆನ್ನೇ ಹಾಸ್ಯದ ವಿಷಯವನ್ನಾಗಿ ಮಾಡಲು ಪ್ರಯತ್ನಿಸಿಕೊಂಡಿದ್ದೇನೆ. ಗೊತ್ತೇ ನಿಮಗೆ?' ಇಂದಿರಾ [illegible] ಆಡಿದರು.

ಬೃಹಸ್ಪತಿ ಅವರಿಗೆ ನಮಸ್ಕರಿಸಿ ಅಲ್ಲಿಂದ ನೇರ ಸಿಂಡಿಕೇಟಿಗೆ (ಎಂದರಾಸಿಗೆ) ಬಂದು [illegible] ಅವರನ್ನು ಭೇಟಿಯಾದರು.

"[illegible] ಹಿಂದಿ ವಿರುದ್ಧ ಶೀಘ್ರಾನ ಬಂದಾಗ ಬೆಂಬಲವೀಯುವದಾಗಿ ಹೇಳಿಬಿಟ್ಟು ಎಲ್ಲಿಗೆ ಹೋಗಿಬಿಟ್ಟಿರಿ? ಹದಿನೈದು ಲೋಕಸಭಾ ಸದಸ್ಯರು ನಿಮ್ಮನ್ನು ಹುಡುಕಿಕೊಂಡು ಹೋಗಬೇಕಾಗಿ ಬಂತು. ನಿಮಗದು ಗೊತ್ತೇ?"

'ನಾವು ಮ.ಂ.ಕ.ನ್ನು ಹುಡುಕಿಕೊಂಡು ಹೋಗಿದ್ದೆ.'

'ಮು. ಕ.ರನ್ನೇ? ಅವರು ತಮಿಳ್ನಾಡಿನಲ್ಲಿ ತಾನೇ ಇರುವದು?'

ತಮಿಳ್ನಾಡಿನ ಮುಖ್ಯಮಂತ್ರಿ ಮು. ಕ. ರ. ಕುರಿತು ಹೇಳಿಲ್ಲ. ದ್ರಾ. ಮು. ಕ. ದ ೨೫ ಲೋಕಸಭಾ ಸದಸ್ಯರಲ್ಲಿ ಹತ್ತು ಮಂದಿ ಮಾತ್ರ ಹಿಂದಿ ವಿರೋಧ ಶೀಘ್ರಾನ ಚರ್ಚೆಗೆ ಬಂದಾಗ [illegible] ಹದಿನೈದ [illegible] ಎಲ್ಲಿ [illegible] ದ್ರಾ. ಮು. ಕ.ದಲ್ಲಿ ದ್ರಾವಿಡ [illegible] ನಾಪತ್ತೆ [illegible] ಬಿಟ್ಟೆನು.'

ಚೆನ್ನಾಗಿ ಇದೆ ಇದು. ಪಾಪ, ಹಿಂದಿ ವಿರೋಧ! ನಿಮ್ಮನ್ನು ಕೇಳಿದಲ್ಲಿ ಅವರನ್ನು ಹುಡುಕಿಕೊಂಡು ಹೋಗಿರುವದಾಗಿ ಹೇಳುತ್ತೀರಿ. ಅವರನ್ನು ಕೇಳಿದ್ದ ನಿಮ್ಮನ್ನು ಹುಡುಕಿಕೊಂಡು ಹೋದುದಾಗಿ ಅನ್ನುತ್ತಾರೆ. ಒಬ್ಬರನ್ನೊಬ್ಬರು ಹುಡುಕಿಕೊಂಡು [illegible] ಲೇನು. ನಿಮಗೆ ಜನರು [illegible] ಮಾಡುವದ? ಕೊನೆಯಲ್ಲಿ ಹಿಂದಿ ವಿರೋಧ, ಪಾಪ, ಈಗ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದೆ. ಈ ರೀತಿ ಎಲ್ಲರೂ ಹಿಂದಿ ವಿರೋಧವನ್ನು ಬೀದಿಗೆಳೆದು ಎಸೆದು ಬಿಟ್ಟಿರಲ್ಲಾ?" ಬೃಹಸ್ಪತಿ ಭಾಷಣವಿತ್ತರು.

ಆಗ ಓರ್ವ ತಂತಿ ಪೇದೆ ಅವರಿದ್ದಲ್ಲಿಗೆ ಬಂದು ಒಂದು ತಂತಿಯನ್ನಿತ್ತನು. ಬೃಹಸ್ಪತಿ ಅವಸರ—ಅವಸರವಾಗಿ ಅದನ್ನು ತೆರೆದು ನೋಡಿದರು. ದಿಲ್ಲಿ ಆಸ್ಪತ್ರೆಯಿಂದ ಡಾಕ್ಟರು ಆ ತಂತಿಯನ್ನು ಕಳುಹಿಸಿದ್ದರು. ತಂತಿಯ ಒಕ್ಕಣೆ:—ಹಿಂದಿ ವಿರುದ್ಧ ಸತ್ತುಹೋಯಿತು.

ಬೃಹಸ್ಪತಿ [illegible] ಅಲ್ಲೇ ನಿಂತರೆಂದು ಅವರು ತಮ್ಮ 'ಅವ [illegible]' [illegible] ಪಕ್ಷ [illegible] ಳ್ನಾಡಿನ ಜನಪ್ರಿಯ [illegible] ದ್ರಾ. ಮು. ಕ ದ ಹಿಂದಿ ವಿರೋಧ [illegible] ಗೇಲಿ [illegible] ದರ್ಶನ

[illegible] ರಾಜಕೀಯದ ಕಾಲ ಆದಾಗಲೇ ಮುಗಿದು ಹೋಗಿರುತ್ತದೆ. ಒಂದೆಡೆ ಶ್ರೀಮತಿ ಇಂದಿರಾ ಗಾಂಧಿಯವರು ರಾಜಕೀಯಾಗಸದಲ್ಲಿ ಹಾರಾಡುತ್ತಿರುವದನ್ನು ಇನ್ನೊಂದೆಡೆ ದ್ರಾ. ಮು. ಕ. ಹಾರಾಡುತ್ತಿರುವದನ್ನು ಕಂಡು, ಆ ಹಳೆಯ ಹೊಟ್ಟೆಕಿಚ್ಚು ಪಡದೆ ಇನ್ನೇನು ಪಡಲು ಸಾಧ್ಯ.

— ಶಿವಶಂಕರ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರಶಸ್ತವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಉಲ್ಲಾಸ

ಉಲ್ಲಾಸವೇ ಬಾಳಿನ ಬಲ; ಉಲ್ಲಾಸವೇ ಉಳಿವಿನ ನೆಲೆ. All expansion is life; all contraction is death ಎಂದರೆ ಹಿಗ್ಗು ಬಾಳಿನ ಗುಣ; ಕುಗ್ಗು ಸಾವಿನ ಗುಣ, ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ ಮತ್ತೆ ಹಿಗ್ಗೇ ಉಲ್ಲಾಸದ ಬೇರು. ಉಲ್ಲಾಸದ ಹೂವು ಒಳಗಿನ ಹಿಗ್ಗಿನ ಸಾರದಿಂದ ಅರಳುತ್ತದೆ. ಉಲ್ಲಾಸದ ಬೆಳೆ ಬೇಕಾದರೆ ಎದೆಯಲ್ಲಿ ಹಿಗ್ಗಿನ ಉಳುಮೆ ಆಗಬೇಕು.

ಹಿಗ್ಗು [illegible] ಬರದ ನಿಜ; ಆದರೆ [illegible] (ತೃಪ್ತಿ) [illegible] ಯಲ್ಲವೆಂಬುದೂ ನಿಜ. [illegible] ಬಂದರೆ [illegible] ಮಾಡುವುದು. ಆದರೆ [illegible] ದೆಲ್ಲ [illegible] ನಮ್ಮ ಒಡೆತನದಲ್ಲ, ಅದರಲ್ಲಿ ಸಿಹಿಯೂ [illegible].

ಮತ್ತೆ ಸಿಹಿಯಿಂದ ಸಂತಸಗೊಂಡು ಕಹಿ ಬಂದೊಡನೆ ಸಂಕಟಪಡಿಸಿದರೆ; ಹಿಗ್ಗಿನ ಹಾದು ಹರಿತವಿದು ಹೋಗದೇ! [illegible] ಸ್ವಾಗತಿಸುತ್ತ [illegible] ಎದೆ [illegible] ಸಾಗಿದರೆ ಹಿಗ್ಗಿನ ಬಗ್ಗೆ [illegible]. ಉಲ್ಲಾಸದ ಹೊಸ ಬಿಸಿಲು ಹಿಗ್ಗಿನ ಹಗಲೊಡೆಯನಿಂದ ಅರಳುವುದೆಂದಾದರೆ, ಹಿಗ್ಗು ಬೇಕು—ಬೇಡಗಳ ತೂಕದಿಂದ, ಸಿಹಿ ಕಹಿಗಳ ಸಮಾನ ಅನುಭವದಿಂದ ಫಲಿಸಿದ ತಣಿವಿನಿಂದ ತಲೆದೋರುವುದು.

ಇದಕ್ಕೊಂದು ತಿರುಗು—ದಾರಿಯೂ ಉಂಟು. ಅದೆಂದರೆ ಒಳಗೆ ತಣಿವಿರಲಿ ದಣಿವಿರಲಿ, ಹಿಗ್ಗಿರಲಿ, ಕುಗ್ಗಿರಲಿ, ಮೊಗದಲ್ಲಿ ಉಲ್ಲಾಸದ ಮುಗುಳುನಗೆ ಮಿನುಗುತಿರಲಿ, ಎದೆಯಲ್ಲಿ ಹಿಗ್ಗು ಗರುಗೆದರುವುದು; ತಣಿವೂ ನೆಲೆಯೂರುವುದು.

ಉಲ್ಲಾಸದ ಬೆಳದಿಂಗಳನ್ನೇ ಬೀರುವ ಹರುಷದ ಚಂದ್ರನನ್ನೇ ಹರಿಯಿಸಿ, ಬೇಸ್ಗೆ, ಬವಣೆ, ಬಡತನಗಳ ಬೇಗೆಯಿಂದ ಬಳಲಿದ ಮಂದಿಯು ಬಾಳಿಗರ ಬದುಕನ್ನು, ನಿಮ್ಮ ಬಿಸಿಯುಸಿರಿನಿಂದ ಬಸ್ಟಡಿಸಬೇಡಿ. ಆದರೆ ಅವರಿಗಾಗಿ ಎಂದಿಗೂ ನಿಮ್ಮ ನಗೆಯಿಂದ ಉಲ್ಲಾಸವನ್ನು ನೈಗಡಿಸಿರಿ; [illegible] ಹಿಗ್ಗಿನ [illegible] ವುಗಳನ್ನೂ ಸೃಗೂಡಿಸಿರಿ.

— ತಾರಾದಾಸ

(ದೀಪಾವಳಿ)

ಮಿತ ಕುಟುಂಬ ಯೋಜನೆಗೆ
ಮಿತ ಸಂತತಿ
ಬೆಲೆ 0-75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ
ಕಾಲೇಜುರೋಡ್, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 23—4—1970 ಸಂಪುಟ 49 ಸಂಚಿಕೆ 33

ಸರ್ವಾಧಿಕಾರದ ಗಾರುಡಿ

ರಾಜ್ಯಕೀಯ ಪಕ್ಷಕ್ಕೊಬ್ಬ ಅಧ್ಯಕ್ಷ. ಅವನ ಅಧಿಕಾರವೇನು ಎಂಬುದರ ಬಗ್ಗೆಯದು ಭಿನ್ನಮತ. ಈ ಘರ್ಷಣೆಯಿಂದ ಉಂಟಾದುದು ಕಾಂಗ್ರೆಸ್ ವಿಭಜನೆ. ಪ್ರಧಾನಮಂತ್ರಿ—ಕಾಂಗ್ರೆಸ್ ಅಧ್ಯಕ್ಷರ ಅಧಿಕಾರ ವಿಭಜನೆಯ ಬಗ್ಗೆ ಹಿಂದಿನಿಂದಲೂ ಹೊಂದಾಣಿಕೆಯ ಅಭಾವ. ಪ್ರಧಾನಿಯು ದೇಶವನ್ನು ಆಳುವವನು; ಅಧಿಕಾರಿ. ಜನತೆಗೆ ನೇರ ಹೊಣೆಯುಳ್ಳವನು. ಆದುದರಿಂದ ತಾನೇ ಹೆಚ್ಚು ಎಂಬುದು ಶ್ರೀಮತಿ ಇಂದಿರಮ್ಮನ ಆತ್ಮಸಾಕ್ಷಿಯ ವಿಧಿತ. ಆದುದರಿಂದಲೇ ಬೇಕೇ ಬೇಕು ಆಕೆಗೆ ಪಕ್ಷದ ಮೇಲೆ ಹಿಡಿತ. ಆ ಲಗಾಮು ಬೇರೆಯವರು ಹಿಡಿಯುವುದಾದರೆ, ಆಕೆಗೆ ಭಾರೀ ತಲೆ ಸಿಡಿತ.

ಪ್ರಧಾನ ಮಂತ್ರಿಯು ಒಂದು ರಾಜ್ಯಕೀಯ ಪಕ್ಷಕ್ಕೆ ಸೇರಿದವನು. ಆದುದರಿಂದ ಪಕ್ಷದ ಕಾರ್ಯಕ್ರಮಗಳನ್ನು ಆತ ಸಕ್ರಿಯವಾಗಿ ಕೈಕೊಳ್ಳುವುದು ತಪ್ಪಲ್ಲ— ಇದಕ್ಕೆ ನ್ಯಾಯವೇತ್ತರ ಮನ್ನಣೆ. ಇದಕ್ಕೆ ಹೊರತಾಗಿ ಅಧ್ಯಕ್ಷರನ್ನೂ ವಿರೋಧಿ ಪ್ರಧಾನಿ ಪಕ್ಷೀಯ ಕಸರತ್ತು ಮಾಡಹೊರಟಿರುವುದು ನಮ್ಮ ದೇಶಕ್ಕೆ ಜವಾಹರಲಾಲರು ತಂದೊಡ್ಡಿದ ದೌರ್ಭಾಗ್ಯ. ಅವರ ವ್ಯಕ್ತಿಗತ—ಸಾಮಾಜಿಕ ಪ್ರತಿಷ್ಠೆ-ಗೌರವ, ಸೇವಾದೀಕ್ಷೆಗಳು ಪ್ರಶ್ನಾತೀತ. ಅವರ ಕಾಲದಲ್ಲಿ ಗಪ್ಪೆಂದು ಕುಳಿತ ಮಾತ್ರಕ್ಕೆ ಅದೇ ಸಂಪ್ರದಾಯವಾಗಿ ಉಳಿಯಬೇಕೆಂಬುದು ಪ್ರಗತಿಗಾಮಿತನವಲ್ಲ. ರಾಜ್ಯಕೀಯ ನೀತಿ ಘಟನಾವಳಿಗಳೆಲ್ಲ ಕಾಲಮಾನಕ್ಕನುಸಾರ ಪ್ರಗತಿಯಾಗುವುದು ಅನಿವಾರ್ಯ. ಇಲ್ಲದೆ ಹೋದರೆ, ಸಂಪ್ರದಾಯವಾದವನ್ನೇ ಪ್ರಗತಿಯೆಂದು ಕರೆಯುವುದಾದರೆ, ಅಜೀವ ಗೊಂಬೆಯಾಟವನ್ನಾಡಿದಂತೆ.

ಶ್ರೀಮತಿ ಇಂದಿರಾ ಗಾಂಧಿಯವರ ಆತ್ಮಸಾಕ್ಷಿಪರ—ಇಂಡಿಕೇಟ್ ಕಾಂಗ್ರೆಸ್‌ನ ಪ್ರಚಲಿತ ಅಧ್ಯಕ್ಷ ಶ್ರೀ ಜಗಜ್ಜೀವನ ರಾಮ್, ಹಾಯ್ ರಾಮ್ ಎನ್ನುವಂತಹ ಪರಿಸ್ಥಿತಿ. ಇದು ಅವರ ಅಧಿದೇವತೆ ಇಂದಿರಮ್ಮನ ನಿರ್ಮಿತಿ. ಕೆಲವು ಕಾಂಗ್ರೆಸ್ಸೇತರ ಸರಕಾರಗಳನ್ನು ಉರುಳಿಸಲು ಸ್ಕೀಮು ಹಾಕುತ್ತಿರುವುದು ಶ್ರೀ ರಾಮರ ಪರಿವಾರ. ಆದರೆ, ಇದನ್ನು ಅವರಿಗೆ ಕಲಿಸಿಕೊಟ್ಟ ಗುರು ಅವರ ಅಧಿದೇವಿ — ಶ್ರೀಮತಿ ಗಾಂಧಿ. ಉತ್ತರ ಪ್ರದೇಶದಲ್ಲಿ ಸಿಂಡಿಕೇಟಿನ ಗುಪ್ತ ಸರಕಾರವನ್ನು ಉರುಳಿಸಲು ಆಕೆ ಆಡಿದ ಅಪಂತ ದೊಂಬರಾಟ ಅವರ್ಣನೀಯ. ಇಂದಿರಾಜಿ ಸರಿಗೆಯ ಮೇಲೆ ನಡೆದು ಕೆಳಗಿಳಿದರು; ಆದರೆ, ರಾಂ ಮಾತ್ರ ಮೀಸೆ ಹುರಿಸಿಕೊಂಡರು, ಒರಿಸ್ಸಾದಲ್ಲಿ, ಗುಜರಾತದಲ್ಲಿ, ಪಂಜಾಬದಲ್ಲಿ.

ಇದೀಗ ಹೊಸದೊಂದು ಸಂಗತಿಗೆ ಶ್ರೀಮತಿ ಗಾಂಧಿ ಕೈ ಹಾಕಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿ.ಕೆ.ಡಿ.ಯ ಶ್ರೀ ಚರಣಸಿಂಗರನ್ನು ಎರಡನೆ ಬಾರಿಗೆ ಆಕೆ ಮುಖ್ಯಮಂತ್ರಿಯಾಗಿ ಮಾಡಿದ್ದಾರೆ. ಆದರೆ, ಚರಣಸಿಂಗರು ಶ್ರೀಮತಿಯೆಣಿಸಿದಷ್ಟು ಬುದ್ಧಿಗೇಡಿಗಳಲ್ಲ. ಬಿಹಾರದಲ್ಲಿ, ಬಂಗಾಳದಲ್ಲಿ ಸರಕಾರದಿಂದ ಹೊರಗಿದ್ದುಕೊಂಡೇ ಬೆಂಬಲ ನೀಡುತ್ತೇವೆಂದು ನಂಬಿಸಿ ಏಕ್ ದಿನ್ ಕಾ ಸುಲ್ತಾನರನ್ನು ನಿರ್ಮಿಸಿ ಉರುಳಿಸಿದ್ದ ಆಕೆಯ ಗಾರುಡಿ ಅವರಿಗೆ ಚೆನ್ನಾಗಿ ಪರಿಚಿತ. ಆದುದರಿಂದಲೇ ಸರಕಾರ ಸೇರಿಕೊಳ್ಳಲು ಕರೆ. ಇಂದಿರಮ್ಮನಿಂದಲೂ ಸಮ್ಮತಿ. ಶುಭ ದಿನದಂದು ಮುಹೂರ್ತ ನೋಡಿ ಸರಕಾರದಲ್ಲಿ ಪಾಲು. ಜ್ಯೋತಿಷ್ಯ ನಿತ್ಯ ಪ್ರಗತಿಗಾಮಿ ಅವರಿಗೆ. ಜತೆಗೇ ಬಿ.ಕೆ.ಡಿ.ಯನ್ನು ಇಂಡಿಕೇಟಿನಲ್ಲಿ ವಿಲೀನಗೊಳಿಸುವ ಬಗ್ಗೆ ಅಸ್ತು ಮಾತುಕತೆ.

ಅಧ್ಯಕ್ಷ ಜಗಜ್ಜೀವನರಾಮರಿಗೆ, ಅವರ ಪಾರ್ಲಿಮೆಂಟರಿ ಬೋರ್ಡಿಗೆ ಇವೆಲ್ಲ ಸಮಾಚಾರ ತಿಳಿದಿದೆಯೆಂದು ಹೇಳುವಂತಿಲ್ಲ. ಶ್ರೀ ಚರಣ ಸಿಂಗ್— ಶ್ರೀಮತಿ ಗಾಂಧಿಯವರ ನಡುವೆ ಯಾವ ಧಾಟಿಯ ಮಾತುಕತೆ ನಡೆಯಿತು. ಇಂಡಿಕೇಟಿಗರಿಗೆ ಅಪರಿಚಿತ. ಇಂಡಿಕೇಟಿನ ಬೆನ್ನೆಲುಬು ಯುವತುರುಕರಿಗೆ ಅವೆಲ್ಲ ಅನಗತ್ಯ. ಶ್ರೀ ರಾಮರು ಅಜ್ಞಾತರೂ ಶ್ರೀಮತಿ ಗಾಂಧಿ ಆಜ್ಞೆಯಾಗಲಿವಾದಷ್ಟೇ. ಸರಕಾರದ ಮುಖ್ಯಸ್ಥೆಯಾಗಿಯೇ ತೃಪ್ತಿಹೊಂದದ ಆಕೆ ಪಕ್ಷದ ಸರ್ವಾಧಿಕಾರವನ್ನೂ ಹೊಂದಲು ಬಯಸಿದ್ದಾರೆ. ಇದಕ್ಕೆ ಒಪ್ಪದವರಿಂದ ಆಕೆ ಸಿಟ್ಟಿಗೆದ್ದು ನಿಂತಿದ್ದಾರೆ—'ಪ್ರಗತಿ'ಯ ಮುಖವಾಡ ಧರಿಸಿದ್ದಾರೆ. ಸಿಂಹಚರ್ಮವನ್ನು ಹೊದ್ದ ಕತ್ತೆ ಅದೆಷ್ಟು ಸಮಯ ಜನರನ್ನು ವಂಚಿಸೀತು? ಪ್ರಗತಿಯ ಮುಖವಾಡದ ಒಂದೊಂದೇ ನೂಲು ತುಂಡರಿಸಿ ಹೋಗುತ್ತ ಬರುತ್ತಿದೆ. ಆಗ, ಆಕೆಯನ್ನೇ ಅಧಿದೇವಿಯೆಂದು ತಿಳಿದು 'ಚರಣಕಮಲ ಬಂದೌ ಇಂದಿರಾ ಜಿ' ಎನ್ನುವವರಿಗೂ ಪಶ್ಚಾತ್ತಾಪವಾಗುತ್ತದೆ. ಶ್ರೀ ಜಗಜ್ಜೀವನ ರಾಮರಿಗೆ ಕಾಂಗ್ರೆಸ್ ಅಧ್ಯಕ್ಷಗಿರಿಯ ಅಧಿಕಾರ ಬೇಡ. ಆಹಾರ ಖಾತೆಯ ಮಂತ್ರಿಯಾಗಿದ್ದುಕೊಂಡೇ ಅವರು ಪೂರ್ಣ ತೃಪ್ತ; ಖಾತೆರಹಿತ ಮಂತ್ರಿಪದವಿ ಸಿಕ್ಕಿದರೆ ಅದರಿಂದವರಿಗೆ ಪರಿಪೂರ್ಣ ತೃಪ್ತಿ. ಆದುದರಿಂದಲೇ 'ಅಧ್ಯಕ್ಷಗಿರಿ'ಯನ್ನು ತಾನಿಟ್ಟುಕೊಂಡು 'ಪವರ್ ಆಫ್ ಅಟರ್ನಿ'ಯನ್ನು ಶ್ರೀಮತಿ ಗಾಂಧಿಯವರ ಹೆಸರಿಗೆ ಅನಧಿಕೃತವಾಗಿ ಕೊಟ್ಟಿದ್ದಾರೆ.

ಶ್ರೀಮತಿ ಇಂದಿರಾ ಗಾಂಧಿಯವರು ಜವಾಹರಲಾಲರ ಏಕಮಾತ್ರ ಪುತ್ರಿ. ಜವಾಹರಲಾಲರ ದೇಶನಿಷ್ಠೆ, ದೇಶಪ್ರೇಮ, ಜನಹಿತಚಿಂತನೆ ಮೊದಲಾದ ಉತ್ಕೃಷ್ಟ ಗುಣಗಳು ಆಕೆಯಲ್ಲಿ ರಕ್ತಗತವಾಗದೆ ಹೋದರೂ ಆಕೆ ದೇಶಸೇವಕರ ತಲೆಮಾರಿನಲ್ಲೇ ಹುಟ್ಟಿಬಂದವರು. ಕೋಣವು ತನ್ನಲ್ಲಿಗೆ ಬಾರದೆ ಹೋದರೆ ತಾನೇ ಕೋಣನಲ್ಲಿಗೆ ಹೋಗುವಷ್ಟು ತ್ಯಾಗಶೀಲರು. ಪಾಪ, ಆಕೆಯ ಕೈಯಲ್ಲಿರುವ ವಿಷಮಿಶ್ರಿತ ಹಾಡಿನ ಮೋಡಿ ಕೋಣಕ್ಕೆಂತು ಅರಿವಾಗಬೇಕು?

ಶ್ರೀಮತಿ ಗಾಂಧಿಯವರ ಗಾರುಡಿ ಸಂಪುಟದ ಇತರ ಸಚಿವರನ್ನು ಹತಪ್ರಭರನ್ನಾಗಿ ಮಾಡಿದೆ. ಶ್ರೀ ಜಗಜ್ಜೀವನ ರಾಮರಾದರೂ ತನ್ನ ಸ್ವಯಂ ಪ್ರಭೆಯನ್ನು ಕಳೆದುಕೊಂಡು ಮಂತ್ರಿ ಪದವಿಯ ಆಸೆಯಿಂದಲೇ ಇಂಡಿಕೇಟಿಗರಾಗಿದ್ದಾರೆ; ಅವರ ಅಧ್ಯಕ್ಷಗಿರಿಯನ್ನು ಹೊತ್ತು ಹರಕೆ ಸಂದಾಯ ಮಾಡುತ್ತಿದ್ದಾರೆ. ಕೇಂದ್ರದ ಬಲಿಷ್ಠ ಹುಲಿಗಳಲ್ಲಿ ಒಬ್ಬರಾದ ಶ್ರೀ ವೈ. ಬಿ. ಚವನರು ಸಂಪೂರ್ಣ ಮ್ಲಾನವದನರಾಗಿದ್ದಾರೆ. ಅವರ ಸ್ಥಾನಮಾನ ಎಲ್ಲ ಇಳಿದು ಹೋಗಿದೆ. ಅವರಿಂದು ಇಂಡಿಕೇಟಿನ ಪಾಂಡವರಿಂದಲೂ ಸಿಂಡಿಕೇಟಿನ ಕೌರವರಿಂದಲೂ ತನ್ನನ್ನು ಕೃಷ್ಣನೆಂದೂ ಕರೆದುಕೊಳ್ಳುವುದರಲ್ಲೇ ತೃಪ್ತರಾಗಿದ್ದಾರೆ. ಹಾಗಾದರೂ ಶ್ರೀಮತೀಜಿ ತನ್ನನ್ನು ಸನ್ಯಾಸಿನಿ ಎಂಬ ಇರಾದೆಯಿದ್ದರೂ ಇರಬಹುದು. ಒಂದೊಮ್ಮೆ ತಾನೇ ಹೊರದಬ್ಬಿದ ಶ್ರೀ ಗುಲ್ಜಾರಿಲಾಲ ನಂದಾರನ್ನು ಇಂದಿರಾಜಿ ಮತ್ತೆ ಒಳತಂದರು. ಅವರೂ ಇಂದಿರಾ ಪ್ರಶಂಸೆಯಲ್ಲೇ ತಲ್ಲೀನರಾಗಿದ್ದಾರೆ—ಮುಂದಿನ ಚುನಾವಣೆಗಳ ದೂರದೃಷ್ಟಿಯಿರಬಹುದು.

ಕೇಂದ್ರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯೊಬ್ಬರದ್ದೇ ಸಾರ್ವಭೌಮತ್ವ. ಉಳಿದ ಕ್ಯಾಬಿನೆಟ್-ಸ್ಟೇಟ್-ಡೆಪ್ಯುಟಿ ಮಂತ್ರಿಗಳು, ಪಾರ್ಲಿಮೆಂಟರಿ ಸೆಕ್ರೆಟರಿಗಳು ಎಲ್ಲರೂ ಮಿನುಗು ತಾರೆಗಳು. ಇಂದಿರಾ ಬೆಳಕು ಬೀರಿದರೆ, ಮಿನುಗುತ್ತವೆ; ಇಲ್ಲವೆಂದಾದರೆ, ಉದುರುತ್ತವೆ. 'ಆತ್ಮಸಾಕ್ಷಿ'ಯಂತೆ ಮತ ನೀಡಿರೆಂದು ಕರೆ ನೀಡಿದಾಗ ಆಕೆ ತನ್ನ 'ಆತ್ಮಸಾಕ್ಷಿ'ಯನ್ನೇ ಉಲ್ಲೇಖಿಸಿರಬೇಕು. ಆದುದರಿಂದಲೇ ಪಾರ್ಲಿಮೆಂಟ್ ವ್ಯವಹಾರಗಳ ಸಚಿವ ಶ್ರೀ ರಘುರಾಮಯ್ಯ "ನಾನು ಇಂದಿರಾ ಪಕ್ಷ" ಎಂದು ಹೇಳಿಕೊಂಡಿದ್ದಾರೆ. 'ಇಂದಿರಾ ಗಾಂಧಿಯವರಲ್ಲಿ ವಿಶ್ವಾಸವಿಡಬೇಕು." ಎಂದು ಮಂತ್ರಿ ಶ್ರೀ ಕೆ. ಕೆ. ಷಾ ಮತದಾರರಿಗಾಗಿ ಬುದ್ಧಿ ಹೇಳಿದ್ದಾರೆ; ಇಂದಿರಾ ಇಟ್ಟ ಹೆಜ್ಜೆ ನ್ಯಾಯಮಾರ್ಗ ಎಂದು ನ್ಯಾಯಾಂಗದ ಗೋವಿಂದ ಮೆನನ್ ಉದ್ಘೋಷಿಸಿದ್ದಾರೆ.

ಹೀಗಿದ್ದರೂ ಯುವತುರುಕರಿಗೆ ಅಸಮಾಧಾನ. ಅವರ "ಪ್ರಗತಿ"ಗೆ ನಾಲ್ಕು ಕಾಲು; ಇಂದಿರಾ ತನ್ನ ಪ್ರಗತಿಗೆ ಸಾವಿರ ಕಾಲುಗಳಿಂದ ನಂಬಿಸಿ ಒಳಗೆ ಮಾಡಿಕೊಂಡಿದ್ದಾರೆ. ನಾಲ್ಕು ಕಾಲಿನ ಮೊಲ ಸಹಸ್ರಪದಿಗಿಂತ ವೇಗ ಓಡುವುದೆಂಬ ಸತ್ಯವನ್ನು ಇಂದಿರಾಜಿ ಅದುಮಿ ಹಿಡಿದಿದ್ದಾರೆ. ಯುವತುರುಕರು ಆಕೆಯ 'ಹೊಸ ಪ್ರಯೋಗ'ದ ಮಂತ್ರ ಬೂದಿಯಿಂದ ಮೈಮರೆತಿದ್ದಾರೆ. ಆದರೆ, ಶ್ರೀಕೃಷ್ಣನ ಗಾರುಡಿಗೂ ಕೊನೆಯೊಂದಿತ್ತು; ಶ್ರೀಮತಿ ಇಂದಿರಾ ಗಾಂಧಿಯವರ ಗಾರುಡಿಗೊಂದು ಕೊನೆಯಿಲ್ಲವಾದೀತೇ? ಮುಖವಾಡ ಹರಿದು ಚಿಂದಿಯಾಗುತ್ತದೆ; ಶ್ರೀಮತಿಯವರ ನಿಜಸ್ವರೂಪ ಬಯಲಾಗುತ್ತದೆ. ನಮ್ಮ ಜನ ಇದನ್ನು ಎಷ್ಟು ಬೇಗ ಅರಿತು ಕಾರ್ಯತತ್ಪರರಾಗುತ್ತಾರೋ ಅಷ್ಟು ಬೇಗ ದೇಶ ಒಳ್ಳೆಯದಾಗುತ್ತದೆ; ಇಲ್ಲ, ಸರ್ವಾಧಿಕಾರದ ಗಾರುಡಿ ದೇಶವ್ಯಾಪಿಯಾಗುತ್ತದೆ.

ಅಂಧಶ್ರದ್ಧೆಯಿಂದಲೂ ಲಾಭ

ಪುರಾಣವೆಂಬುದು ಬ್ರಾಹ್ಮಣ ವರ್ಣಕ್ಕೆ ಮಾತ್ರ ಸೇರಿದ ಸಂಪತ್ತು ಎಂಬ ತಿಳುವಳಿಕೆ ಮಾಡಿದರೆ, ಅದು ಸಂಪೂರ್ಣ ಭ್ರಮಾತ್ಮಕವೆಂದೆ ಹೇಳಬೇಕು. ಧಾರ್ಮಿಕ ಅನುಷ್ಠಾನಗಳ ಮೇಲೆ ಕಾರಣಾಂತರಗಳಿಂದ ಅಡೆತಡೆಗಳು ಉಂಟಾಗುವುದುಂಟು. ಈ ರೀತಿ ಅಡೆತಡೆಗಳಿಂದ ತಂತಮ್ಮ ಧಾರ್ಮಿಕ ಅನುಷ್ಠಾನಗಳನ್ನು ನಡೆಸಲಾರದವರ ಉಪಯೋಗಾರ್ಥವಾಗಿಯೇ ಪುರಾಣಗಳ ಸೃಷ್ಟಿಯಾಯಿತು. ಇದನ್ನು ಭಾಗವತ (೧-೪-೨೫), ಶಾಂಖಾಯನ ಬ್ರಾಹ್ಮಣ (೨೭-೪) ಮತ್ತು ಮೀಮಾಂಸಾ ದರ್ಶನ (೧-೬-೧೧, ೨೬, ೬-೧-೪೫)ಗಳು ಸಮರ್ಥಿಸುತ್ತವೆ.

ಪುರಾಣಗಳಲ್ಲಿನ ವಿವಿಧ ಕಥೆಗಳ ಬಗ್ಗೆ ಕುರುಡು ಶ್ರದ್ಧೆಯೂ ತನ್ನ ತರ್ಕ ಸಮ್ಮತವಾದ ಬುದ್ಧಿಯನ್ನು ಒತ್ತೆಯಿಡುವುದಿಲ್ಲ. ಪುರಾಣಕಾರನು ಜನತೆಗೆ ಶಿಕ್ಷಣ ನೀಡುವುದಕ್ಕಾಗಿ ಪುರಾಣಗಳಲ್ಲಿ ಕಥೆಯನ್ನು ಹೇಳಿದ್ದಾನೆ—ಇಷ್ಟು ಮಾತ್ರ ಅವನು ತಿಳಿದುಕೊಳ್ಳುತ್ತಾನೆ. ಜಲಂಧರನ ಕಥೆಯನ್ನು ಶ್ರದ್ಧೆಯಿಂದ ಓದುತ್ತಾನೆ. "ಪತಿವ್ರತಾ ಶಿರೋಮಣಿಯ ಪತಿಯು ಕೂದಲು. ಆ ಬಾಗಾ ತಿನುವುದಕ್ಕಾದರೂ ಸರ್ವಶಕ್ತ ಭಗವಂತನೂ ಅಸಮರ್ಥನಾಗುತ್ತಾನೆ. ಆದುದರಿಂದ ಸ್ತ್ರೀಯರು ಪತಿವ್ರತಾ ಧರ್ಮವನ್ನು ಚಾಚೂ ತಪ್ಪದೆ ಆಚರಿಸಬೇಕೆಂದು ತಿಳಿಯುತ್ತಾನೆ. "ಯಾವಾದರೂ ವಿವಾದವೂ ಬಾಳುವನ್ನು ಚರಿಸಬಾರದು; ಏಕೆಂದರೆ, ಪಾಪಕ್ಕೆ ಲಭ್ಯವಾಗುವ ಶಿಕ್ಷೆಯನ್ನು ಶ್ರೀಮನ್ನಾರಾಯಣನೂ ಅನುಭವಿಸಬೇಕಾಗಿ ಬಂದಾಗ ಮಿಕ್ಕ ಪರರ ಪಾಡೇನು?" ಇದಕ್ಕೆ ಹೊರತಾಗಿ ಜಲಂಧರನ ಕಥೆಯು ಯಾರಿಗೆ ಏನನ್ನು ಕಲಿಸುತ್ತದೆ ಎಂಬತ್ತ ಯಾರ ಗಮನವೂ ಹರಿಯುವುದಿಲ್ಲ. ಹೀಗೆಯೇ "ತೃಷ್ಣೆಗೆ ಕೊನೆಯೆಂಬುದಿಲ್ಲ"ವೆಂಬುದನ್ನು ಯಯಾತಿಯ ಕಥೆಯಿಂದ ಅರಿತುಕೊಳ್ಳುತ್ತಾನೆ. ಯಯಾತಿಯು ಸಾವಿರ ವರ್ಷಗಳ ಕಾಲ ಯುವಕನಾಗಿಯೇ ಹೇಗಿದ್ದ? ಒಬ್ಬರ ಯೌವನವನ್ನು ಇನ್ನೊಬ್ಬರಿಗೆ ಕೊಡುವುದು ಹೇಗೆ ಸಾಧ್ಯ? ಈ ಮೊದಲಾದ ತರ್ಕಗಳು ಅವನ ಬುದ್ಧಿಗೆ ಹೊಳೆಯುವುದಿಲ್ಲ. ಅವನು ಸಾರ್ಥಕವೆಂದೇ ಅದ ನಂಬುತ್ತಾನೆ.

ಇಂತಹ ನಂಬಿಕೆಯನ್ನು ಅಂಧಶ್ರದ್ಧೆಯೆಂದು ಕರೆಯುವುದುಂಟು. ಈ ಬಗೆಯ ಅಂಧಶ್ರದ್ಧೆಯಿಂದಲೂ ಲಾಭವಿದೆ; ಯಾರಿಗೂ ಇದರಿಂದ ಹಾನಿ ತಟ್ಟುವುದಿಲ್ಲ. ಏಕೆಂದರೆ, ಅಂಧಶ್ರದ್ಧಾಳುಗಳು ಪೌರಾಣಿಕ ಕಥೆಗಳನ್ನು ಶ್ರದ್ಧಾ ಹಿತ ಕೇಳುತ್ತಾ; ಅದರಿಂದ ಶಿಕ್ಷಣ ಪಡೆಯುತ್ತಾರೆ; ದುರಾಚಾರ, ಅತ್ಯಾಚಾರ, ಅನಾಚಾರಗಳಿಂದ ದೂರವುಳಿಯುತ್ತಾರೆ. ಈ ಅಂಧಶ್ರದ್ಧೆಯಿಂದಾಗಿಯೇ ಪುರಾಣಗಳ ಬಗ್ಗೆ ಅಧಿಕ ಕಾಲದಲ್ಲಿ ಅವಿಶ್ವಾಸ—ಅಶ್ರದ್ಧೆಗಳು ಮೂಡಿವೆ. ಆದರೆ ಪುರಾಣವು ಬರಿಯ ಅಂಧವಿಶ್ವಾಸವನ್ನೇ ಬೆಳೆಸುತ್ತದೆ; ವೈಜ್ಞಾನಿಕ ಪರೀಕ್ಷೆಗಳಿಗೆ ಅವನ್ನು ಗುರಿಮಾಡಿದರೆ, ಸತ್ವಹೀನವಾಗುತ್ತವೆ" ಎಂಬ ಅಭಿಪ್ರಾಯಕ್ಕೆ ಬರುವುದು ಮಾತ್ರ ಮೂರ್ಖತನ.

ಪುರಾಣಗಳೆಂದೂ ತರ್ಕಕ್ಕೆ ಹೆದರುವುದಿಲ್ಲ ತಮ್ಮ ಪ್ರಕ್ರಿಯೆಗಳ ಆಳವರಿಯದೆ ತಮ್ಮ ಮೇಲೆ ಆಕ್ಷೇಪ ಹೇಳುವ ಅತ್ಯಾಧುನಿಕ ನಾಗರಿಕನ ಮೂರ್ಖತನಕ್ಕೆ ಮಾತ್ರ ಅವು ಅಂಜುತ್ತವೆ. ಪುರಾಣಗಳಲ್ಲಿ ಬಹಳಷ್ಟು ಅಂಶಗಳಿವೆ. ಅವು ಆರ್ಯ ಸಂಸ್ಕೃತಿಯ ಆಕರಗಳು; ಭಾರತೀಯ ವಿದ್ಯೆಗಳ ವಿಶ್ವಕೋಶಗಳು. ಅವುಗಳು ನಮ್ಮ ಪೂರ್ವಜರ ಅಸಂಖ್ಯಾತ, ಉತ್ತಮೋತ್ತಮ ಅನುಭೂತಿಗಳನ್ನು ಸುರಕ್ಷಿತವಾಗಿಟ್ಟಿವೆ. ಈ ಅನುಭೂತಿ ಕೋಶಗಳು ನಮ್ಮ ಅನೇಕಾನೇಕ ಯುಗಗಳಿಂದ ಗಳಿಸಿದ ಗಂಟು ಅಥವಾ ಗುಪ್ತಧನ. ಭಾರತೀಯ ಇತಿಹಾಸದ ಅವು ಪಥಪ್ರದರ್ಶಕ ದೀಪಸ್ತಂಭಗಳು. ಇತಿಹಾಸ ಇನ್ನೂ ಅಂಧಕಾರ ಯುಗ ವೆಂದು ಕರೆಯುವ ಪ್ರಾಗೈತಿಹಾಸಿಕ ಕಾಲದ ಉದಾತ್ತ ಕ್ರಿಯಾಶೀಲ ಶ್ರೇಷ್ಠ ಸಾಹಿತ್ಯಕಾರರ ಸೃಷ್ಟಿ ಇಂದಿನ ಅವರಿಗೆ ಕಾಣುವುದು ಕಷ್ಟಲೇಶವಿಲ್ಲ. ಅವರ ಪುರಾಣಗಳ ಪ್ರಕಾಶದಲ್ಲೇ ಮುಂದುವರಿದು ಭಾರತೀಯ ರಾಜವಂಶಗಳ ಶೋಧನೆ ಮಾಡಬೇಕಾಗುತ್ತದೆ. ಅವರು ಪುರಾಣೋಕ್ತ ಶಂಕೋತ್ಪಾದಕ ವೃತ್ತಾಂತಗಳನ್ನು ಮಟ್ಟುವುದಿಲ್ಲ. ತಮ್ಮ ಇತಿಹಾಸದಲ್ಲಿ ಸೇರಿಸಿಕೊಳ್ಳಬಹುದಾದ ಅಂಶವನ್ನಷ್ಟೆ ಗ್ರಹಿಸುತ್ತಾರೆ. ಅವರ ಇತಿಹಾಸದಲ್ಲಿ ಸಂದೇಹಾಕಾಂಕ್ಷೆ ಜಿಜ್ಞಾಸೆಗಳಿಗೆ ಅವಕಾಶವೇ ಇಲ್ಲ.

—ಗೋ

ಸಮತೆಯು ಕರುಣಾ ಪ್ರೇರಿತವಿರಬೇಕು

(ವಿನೋಬಾ)

ಕರುಣೆಯ ಪ್ರೇರಣೆಯಿಂದಲೇ ಸಮಾಜದಲ್ಲಿ ಸಾಮ್ಯವು ಸಮನ್ವಯವು ಸ್ಥಾಪಿತವಾಗಲಿಕ್ಕೆಬೇಕು. ಹಾಗಾದರೇನೇ ಅದು ಸಾಮ್ಯಯೋಗವಾಗಿ ಫಲಿಸುವದು. ಅರ್ಥಾತ್ ಅಂಥ ಸಮತೆಯು ಹೃದಯದಿಂದ ಉತ್ಪನ್ನವಾಗುವದು. ಅದಿಲ್ಲದೇ ಕೇವಲ ಯಾಂತ್ರಿಕ ಪದ್ಧತಿಯಿಂದ ಸಾಧಿಸಲಾದ ಸಮತೆಯು, ಅಥವಾ ಸಾಮ್ಯವು ಕೇವಲ ಸ್ಥೂಲ ಸಾಮ್ಯವಾಗುವದು. ಅದರಲ್ಲಿ ಅತ್ಮವಿರಲಾರದು. ಅಂದವೇಲೆ ಅದ ವಸ್ತುತಃ ಸಮತೆಯಿರಲಾರದು. ಕರುಣೆಯಿಂದ ಪ್ರೇರಿತವಾಗದ ಸಮತೆಯಲ್ಲಿ ವೈಷಮ್ಯಗಳೂ, ಕಲಹಗಳೂ ತಲೆ ಎತ್ತುವವು.

ಸಾಮ್ಯಯೋಗವನ್ನು ಸಾಧಿಸುವ ಒಂದು ವ್ಯಾವಹಾರಿಕ ಪ್ರಕ್ರಿಯೆಯನ್ನು ಲೋಕಕ್ಕೆ ಬುದ್ಧ ಮತ್ತು ಮಹಾವೀರ ಅವರು ನಮಗೆ ತೋರಿಸಿ ಕೊಟ್ಟಿದ್ದಾರೆ. ಬಾವಿಯಿಂದ ಒಂದು ಕೊಡ ನೀರು ತೆಗೆದರೆ, ನೀರಿನಲ್ಲಿ ಕೊಡದ ಆಕಾರದಷ್ಟು ತಗ್ಗು ಬೀಳ ಎದಿಲ್ಲ. ಆದರೆ ಇಡೀ ನೀರಿನ ಮಟ್ಟವೇ ಅಷ್ಟು ಕೆಳಗೆ ಹೋಗುತ್ತದೆ. ಯಾಕೆಂದರೆ ಜಲಾಶಯದ ನಾಲ್ಕು ದಿಕ್ಕಿನಿಂದ ನೀರಿನ ಬಿಂದುಗಳು, ಹೊಂದವಷ್ಟು ತುಂಬಲು ಓಡುತ್ತವೆ. ಆದರೆ ಅದೇ ಅಕ್ಕಿಯ ರಾಶಿಯಿಂದ ಒಂದು ಸೇರು ಅಕ್ಕಿ ತೆಗೆದರೆ, ಆ ರಾಶಿಯಲ್ಲಿ ಅಷ್ಟು ಪ್ರಮಾಣದಿಂದ ತಗ್ಗು ಬೀಳುತ್ತದೆ. ಕೇವಲ ಮೂರ ನಾಲ್ಕು ಅಕ್ಕಿಕಾಳುಗಳು ಉದಾರವೃತ್ತಿ ತಳೆದು ಆ ತಗ್ಗನ್ನು ತುಂಬಲು ಸ ಸತತ ಬರುತ್ತವೆ. ರಾಳಗಳು, ತಮ್ಮ ತಮ್ಮ ಕ್ಕೆ ಅಂಟಿಕೊಂಡ ಕೂತಬಿಡುತ್ತವೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ನೀರಿನ ಕಣಗಳಲ್ಲಿ ಪರಸ್ಪರ ಪ್ರೇಮ, ಸ್ನೇಹಭಾವ ಇರುವುದರಿಂದಲೇ ಸಮತೆಯನ್ನು ಸ್ಥಾಪಿಸುವ ಸಾಮರ್ಥ್ಯವು ಹೀಗೆ ಬಂದಿರುತ್ತದೆ. ಈ ಪ್ರಕಾರ ಕರುಣಾವೃತ್ತಿಯು ಪ್ರೇರಿತವೇ ಸಮಾಜದಲ್ಲಿ ಸಮತಾಯೋಗವು ಸಾಮ್ಯಯೋಗವು ಸ್ಥಾಪಿತವಾಗುವುದು.

ಈಗಿನ ದಿವಸಗಳಲ್ಲಿ ಅರ್ಥಶಾಸ್ತ್ರಗಳು, ಸಾಮ್ಯವಾದಿಗಳು, ಮಂಡಳದವರು, ಕೃತಿಮ ಹಾಗೂ ಯಾಂತ್ರಿಕ ಪದ್ಧತಿಯಿಂದ ಸಮತೆಯನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಅದರಿಂದ ಸಮತೆಯ ಬದಲಾಗಿ ವೈಷಮ್ಯವೇ ಉಂಟಾಗುತ್ತದೆ. ಈ ಪದ್ಧತಿಯಿಂದ ಮಾನಸಿಕ ವೈಷಮ್ಯವಂತೂ ಉಂಟಾಗೇ ಆಗುವುದ. ಬಾಹ್ಯ ವೈಶಿಷ್ಟ್ಯವೂ ಸಹ ಅಳಿಯಲಾರದು. ರಶಿಯಾದಲ್ಲಿ, ಸಾಮ್ಯವನ್ನು ಸ್ಥಾಪಿಸುವ ಪ್ರಯತ್ನ ಮಾಡಲಾಯಿತು. ಆದರೂ ಅಲ್ಲಿ ಜನರ ವೇತನದಲ್ಲಿ ೭೦ ಪಟ್ಟು ಅಂತರವಿದೆ ಎಂದ ಹೇಳಲಾಗುತ್ತದೆ. ಅವರ ಪ್ರಯತ್ನವು ಕರುಣಾ ಪ್ರೇರಿತವಿದ್ದಿಲ್ಲ. ಆದುದರಿಂದಲೇ ಸಮತೆಯ ಸ್ಥಾಪನೆ ಅಲ್ಲಿ ಆಗದ ಹೋಯಿತು. ಕರುಣೆಯಿಂದಲೇ ಸಮತೆಯು ಸ್ಥಾಪಿತವಾಗಬಲ್ಲದ. ಹೀಗೆಂಬು ಭಗವಾನ ಬುದ್ಧನು ನಮಗೆ ಪಾಠ ಕಲಿಸಿರುವನು.

ಹಾಗೆ ವಿಚಾರ ಮಾಡಿದರೆ, ನಮ್ಮ ಮೂಲ ಸಿದ್ಧಾಂತವಾದರೋ ಪಾರಮಾರ್ಥಿಕ ಸಮತೆಯೇ ಆಗಿಹದು. ಅದರ ತಳಹದಿಯ ಮೇಲೆ ಆರ್ಥಿಕ ಸಮಾನತೆಯನ್ನು ನಿರ್ಮಿಸುವದೇ ನಮ್ಮ ಕಾರ್ಯ ಪದ್ಧತಿ ಆಗಲಿಕ್ಕೆಬೇಕು. ಜಾತಿಭೇದದಂಥ ಸಣ್ಣದೊಡ್ಡ ಭೇದಗಳ ನಿವಾರಣೆ ಮಾಡದರೋ ಆರ್ಥಿಕ ಸಮತೆಯಿಂತಲೇ ಆಗುವದು. ಬಹುಶಃ ಊರ ದೇವಸ್ಥಾನದ ಮೇಲೆ ಊರ ಜನರ ನಿಷ್ಠೆಯಿರುವದು. ಇಂದಿನ ರೋಗ ಊರನ್ನೇ ಗ್ರಾಮದೇವತೆಯೆಂದು ಭಾವಿಸಿರಿ ಮತ್ತು ನಿಮ್ಮ ಸರ್ವಸ್ವವನ್ನು ಅದಕ್ಕೆ ಸಮರ್ಪಿಸಿರಿ ಹೀಗೆಂದು ನಾವು ಅವರ ಮೇಲೆ ಬಿಂಬಿಸಬೇಕಾಗುವದು. ಕೃಷ್ಣಪರಮಾತ್ಮನು ಇದನ್ನೇ ಮಾಡಿದನು ಆರ್ಥಿಕ ಸಮತೆಯು ಸೃಷ್ಟಿಯಿಟ್ಟುಕೊಂಡ, ಕಾರ್ಯ ಸಾಗಿಸಿದರೆ, ಧರ್ಮಗಳು ಸಹ ಪರಿಶುದ್ಧವಾದ ರೂಪ ಬರುವದು. ಇದರಿಂದ ವಿಧಾಯಕ ಮಾರ್ಗ. ಈ ಪದ್ಧತಿಯಿಂದ ಕಾರ್ಯ ನಡೆಸಿದರೆ; ಎಲ್ಲ ತೊಂದರೆಗಳೂ ದೂರಾಗುವವು. ಕಲಹಗಳು ಏಳಲಾರವು. ಮತ್ತು ವಿಚಾರದಲ್ಲಿಯೇ ಶಂಕರಾನೆಯಾಗಿ, ವಿಚಾರಕ್ಕೆ ಹೊಸ ಕೆಲವು ಬರುವವು.

(ಹಿಂದೀ ಭೂದಾನಯಜ್ಞದಿಂದ)

ಅನು.ವಾದ—ತಿಮ್ಮಪ್ಪ ನಾಯಕ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ & ADVERTISE IN NAVAYUGA WEEKLY

ಫೋನ್ : 526
ಸಂಪುಟ ೪೯
ಸಂಚಿಕೆ ೩೩
VOL. 49
No. 33

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೩—೪—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಿಳಂಬಿಸಿದ ನ್ಯಾಯ

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಎಂದೋ ಕೈಕೊಳ್ಳಬೇಕಾಗಿದ್ದ ನಿರ್ಧಾರವನ್ನು ಅನಪೇಕ್ಷಿತ ವಿಳಂಬದ ಮೇಲಾದರೂ ಕೈಕೊಂಡರಲ್ಲಾ ಎಂದು ಸಂತೋಷ. ಅಂದರೆ, ಮಹಾಜನ ಆಯೋಗದ ವರದಿಯನ್ನವರು ಮನ್ನಿಸಿದರೆಂದು ಅರ್ಥವಲ್ಲ; ಹೊಸಪೇಟೆಯ ಬಳಿ ಉಕ್ಕಿನ ಕಾರಖಾನೆಯೊಂದನ್ನು ಸ್ಥಾಪಿಸುವ ಸರಕಾರದ ನಿರ್ಧಾರವನ್ನು ಅವರು ಲೋಕಸಭೆಯಲ್ಲಿ ಘೋಷಿಸಿದ ಬಗ್ಗೆ ಈ ಸಂತೋಷ. ದಕ್ಷಿಣದ ರಾಜ್ಯಗಳಲ್ಲಿ ಒಂದು ಉಕ್ಕಿನ ಕಾರಖಾನೆ ಬಹಳ ಹಿಂದಿನ ಅವಶ್ಯಕತೆ. ತಜ್ಞರ ಸಮಿತಿಯೊಂದು ಹೊಸಪೇಟೆ, ಸೇಲಂ ಮತ್ತು ವಿಶಾಖಪಟ್ಟಣಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಿತ್ತು. ಅದಕ್ಕೆ ಗೆದ್ದಲು ಹಿಡಿಸಿರಲೂ ಬಹುದು. ಹೊಸಪೇಟೆಯ ಬಳಿ ಕಬ್ಬಿಣದ ಅನಂತ ನಿಕ್ಷೇಪವಿರುವುದು, ಮತ್ತಿತರ ವ್ಯಾವಹಾರಿಕ ಕಾರಣಗಳಿಗಿಂತ ಇದೇ ಉತ್ತಮ ಸ್ಥಳವೆಂದು ವರದಿಯ ಅಭಿಪ್ರಾಯವಿತ್ತು.

ನಮ್ಮ ದೇಶದಲ್ಲಿ ದೇಶಾಭಿಮಾನ ಮತ್ತು ನಿಸ್ವಾರ್ಥತೆಗಳಿಗಿಂತ ಪ್ರಾಂತಾಭಿಮಾನ ಮತ್ತು ಸ್ವಾರ್ಥಾಂಧತೆಗಳು ಬಿದಿರಮೆಳೆಯಾಗಿ ಬೆಳೆದಿವೆ. ಸರಕಾರದ ಅಧ್ವರ್ಯುಗಳು ನಾನಾತರದ ವೇಷಭೂಷಣ ಧರಿಸಿ ಕೃತಕ ದೇಶಾಭಿಮಾನ ಮತ್ತು ನಿಸ್ವಾರ್ಥತೆಯನ್ನು ಪ್ರದರ್ಶಿಸುವುದರಲ್ಲೇ ತಲ್ಲೀನರಿರುವಾಗ ಶ್ರೀ ಸಾಮಾನ್ಯನೇಕೆ ಹಿಂದುಳಿದಾನು? ಒಂದು ಪೆಟ್ಟಿಗೆಯಂಟಿಗೆ ನಾಲ್ಕಾರು ಕೈಗಳು ಮುಂದೆ ಬರುವಂತೆ ನ್ಯಾಯ—ಅನುಕೂಲ್ಯ—ಲಾಭ-ನಷ್ಟಗಳನ್ನು ಕಡೆಗಣಿಸಿ ಆಂಧ್ರಪ್ರದೇಶವೂ ತಮಿಳುನಾಡೂ ತಮಗೇ ಉಕ್ಕಿನ ಕಾರಖಾನೆ ಬೇಕೆಂದು ಕೂಗಿಕೊಂಡದ್ದು, ತತ್ಕಾರಣ ಸರಕಾರದ ನಿರ್ಣಯ ತಡೆನಿಂತದ್ದು ಸರ್ವವೇದ್ಯ. ಅದೇ ಸಮಯದಲ್ಲಿ ನಾಲ್ಕನೆಯ ಯೋಜನೆಯೂ ಮುಂದಕ್ಕೆ ದೂಡಲ್ಪಟ್ಟಿತು. ಈಗ ಮತ್ತೆ ಯೋಜನೆ ಆರಂಭವಾಗಿದೆ, ದೇಶಕ್ಕೆ ಉಕ್ಕಿನ ಅವಶ್ಯಕತೆ ಹೆಚ್ಚಾಗಿದೆ. ಅದರಿಂದ ಪ್ರಧಾನಿಯವರು ನಿರ್ಣಯಕ್ಕೆ ಬರಲೇ ಬೇಕಾಯಿತು. ಕರ್ನಾಟಕವು ಶ್ರೀಮತಿಯವರ ಕಾಂಗ್ರೆಸ್ಸಿಗೆ ಬೆಂಬಲ ನೀಡಲಿಲ್ಲ. ಇಲ್ಲಿರುವುದೂ ಸಿಂಡಿಕೇಟಿನ ಸರಕಾರ; ಅದರ ಗಂಡುಗಲ್ಲೆಂದರೂ ಸಲ್ಲುತ್ತದೆ. ಶ್ರೀಮತಿಯವರು ರಾಜ್ಯದ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಾರೆಂಬ ಬಗ್ಗೆ ಜನ ಆಡಿಕೊಳ್ಳುತ್ತಾರೆ. ತಾವು ಸಮಾಜವಾದಿ; ಯಾವ ರಾಜ್ಯಕ್ಕೂ ಅನ್ಯಾಯ ಮಾಡುವುದಿಲ್ಲವೆಂದು ಪ್ರಧಾನಿ ಹೇಳಿಕೊಳ್ಳುತ್ತಲೇ ಬಂದಿದ್ದಾರೆ. ತನ್ನ ನಿಲುವೆಯನ್ನು ಸಮರ್ಥಿಸಿಕೊಳ್ಳಲು, ಅತ್ತ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳನ್ನು ತೃಪ್ತಿಪಡಿಸಲು ಮೂರೂ ರಾಜ್ಯಗಳಲ್ಲಿ ಒಂದೊಂದು ಉಕ್ಕಿನ ಕಾರಖಾನೆ ತೆರೆಯಲು ಅವರು ನಿರ್ಧರಿಸಿದರು. ಸೇಲಂನಲ್ಲಿ ವಿಶೇಷ ಉಕ್ಕನ್ನು ಉಳಿದೆಡೆ ಮಿದು ಉಕ್ಕನ್ನೂ ತಯಾರಿಸಲಾಗುವುದು; ನಾಲ್ಕನೆಯ ಯೋಜನಾವಧಿಯಲ್ಲಿ ಆರಂಭವಾಗುವ ಈ ಕಾರಖಾನೆಗಳು ಉತ್ಪಾದನಾ ಹಂತವನ್ನು ತಲಪಬೇಕಾದರೆ ಐದನೆಯ ಯೋಜನೆ ಬರಬೇಕಷ್ಟೆ. ಈಗಾಗಲೇ ಉಕ್ಕಿನ ಪೂರೈಕೆಯು ಅತೃಪ್ತಿಕರವಿರುವಾಗ ಇನ್ನೂ ಐದಾರು ವರ್ಷಗಳಲ್ಲಿ ಅದು ಹದಗೆಡುವುದು ಅಸಂಭವವಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಈಗ ತಳೆದ ನಿಲುವನ್ನು ಅಂದೇ ತಳೆದಿದ್ದರೆ, ಉಕ್ಕಿನ ಹಗರಣಕ್ಕೆ ಅವಕಾಶವೇ ಇರುತ್ತಿರಲಿಲ್ಲ. ರಾಜ್ಯಕೀಯ ಒತ್ತಡಗಳು ದೇಶಾಭಿವೃದ್ಧಿಗೆ ಬಾಧಕವೂ ಆತಂಕಗಳೂ ಹೇಗಾಗುತ್ತವೆಂಬುದಕ್ಕೆ ಈ ಉದಾಹರಣೆಯೊಂದೇ ಸಾಕು.

ಶ್ರೀಮತಿ ಗಾಂಧಿಯವರ ಈ ನಿರ್ಧಾರವನ್ನು ಕನ್ನಡಿಗರು ಹೃತ್ಪೂರ್ವಕ ಸ್ವಾಗತಿಸುತ್ತಾರೆ; [illegible] ಕೃತಜ್ಞತೆ ಸಮರ್ಪಿಸುತ್ತಾರೆ. ಶ್ರೀಮತಿಯವರ ಉದಾರ ನಿರ್ಣಯ ಕೈಗೊಳ್ಳಲುಂಟಾಗಿದ್ದ ರಾಜ್ಯಕೀಯ ಪರಿಸ್ಥಿತಿಗಳೇನೇ ಇರಲಿ, ಇದು ತಜ್ಞರ ವರದಿಗೆ ಸಿಕ್ಕ ಮನ್ನಣೆಯೆಂದೇ ಅವರು ನಂಬಿದ್ದಾರೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಗೂ ಒಂದೊಂದು ಉಕ್ಕಿನ ಕಾರಖಾನೆ ನೀಡಿದ್ದಕ್ಕೆ ಅವರೇನೂ ಅಸೂಯೆ ಪಡುವುದಿಲ್ಲ. ದೇಶಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವ ಈ ಉಕ್ಕಿನ ಕಾರಖಾನೆಗಳೆಲ್ಲವೂ ಬೇಗನೇ ಆರಂಭವಾಗಿ ಉತ್ಪಾದನಾ ಹಂತವನ್ನು ಮುಟ್ಟಲೆಂದು ಹಾರೈಸುತ್ತಾರೆ.

ಮಹಾಜನ ವರದಿಯ ಬಗೆಗೂ ಹಲವಾರು ಅಭಿಪ್ರಾಯಗಳು ಕೇಳಿಬರುತ್ತಿವೆ. ಸದ್ಯ ಶ್ರೀಮತಿ ಗಾಂಧಿಯವರು ನಿರ್ವಿಕಾರ ಬುದ್ಧಿಯಿಂದ ಕೂಡಿರುವರೆಂದೂ ಉಭಯ ರಾಜ್ಯಗಳ ಮುಖ್ಯಮಂತ್ರಿಗಳೇ ಮಾತುಕತೆಗಳ ಮೂಲಕ ಒಂದು ನಿರ್ಧಾರಕ್ಕೆ ಬರಲಾಗದೆ ಎಂದವರು ಯೋಚಿಸುತ್ತಿದ್ದಾರೆಂದು ಶಾಸಕರ ಪಾಲ್ಕನೆಯ ನಿಯೋಗದ ನಾಯಕ ಇಂಡಿಕೇಟಿನ ನಾಯಕ ಶ್ರೀ ಸಿದ್ಧವೀರಪ್ಪನವರೆಂದಿದ್ದಾರೆ. ಮುಖ್ಯಮಂತ್ರಿಗಳು ನಿರ್ಧಾರಕ್ಕೆ ಬರಲಾಗದ್ದರಿಂದ ಶ್ರೀ ವಿ. ಪಿ. ನಾಯಕರ ಒತ್ತಾಯದಿಂದಲೇ ಮಹಾಜನ ಆಯೋಗ ರಚಿತವಾಯಿತೆಂಬ ಕಟುಸತ್ಯವನ್ನು ಅವರು ಇಷ್ಟು ಬೇಗನೇ ಮರೆತು ಬಿಟ್ಟಿದ್ದರೆ, ಅದು ಶೋಚನೀಯ. ಮೂರು ರಾಜ್ಯಗಳಿಗೂ ಉಕ್ಕಿನ ಕಾರಖಾನೆ ನೀಡಿದಂತೆ ಎರಡೂ ರಾಜ್ಯಗಳಿಗೆ ಬೆಳಗಾಂವಿ—ಕಾಸರಗೋಡುಗಳನ್ನು ನೀಡಲು ಪ್ರಧಾನಿ ಈಗ ಉತ್ಸುಕರಿದ್ದಂತಿಲ್ಲ. ಮಹಾಜನ ವರದಿಯನ್ನು ಮರಾಠರು ಒಪ್ಪುವಂತೆ ನೋಡುವುದೇ ಈ ಸಮಸ್ಯಾ ಪರಿಹಾರಕ್ಕೆ ಇರುವ ಏಕಮಾತ್ರ ವಿಧಾನ. ಉಕ್ಕಿನ ಕಾರಖಾನೆಯನ್ನು ನೀಡಿ ಕನ್ನಡಿಗರನ್ನು ಒಲಿಸಿಕೊಂಡು ಬೆಳಗಾಂವಿ ಕಿತ್ತುಕೊಳ್ಳುವ ಹೊಸ ರಾಜ್ಯಕೀಯ ತಂತ್ರಕ್ಕೆ ಪ್ರಧಾನಿಯವರು ಕೈಹಾಕುವ ಪ್ರಾಲೋಚನೆ ಮಾಡಲಾರರೆಂದು ಹಾರೈಸಬೇಕು.

ವಿಕ್ರಮತ್ರಯ

ಅಪೊಲೊ—೧೧ ಮತ್ತು ೧೨ರ ಖೇಚರರು ಚಂದ್ರಯಾನವನ್ನು ಯಶಸ್ವಿಯಾಗಿ ಪೂರಯಿಸಿ ಸುಸ್ಥಿತಿಯಿಂದ ಮರಳಿ ಬಂದಾಗ ಗಗನ ಯಾತ್ರೆಯಲ್ಲಿ ಯಾವ ಆತಂಕಗಳೂ ಕಂಡು ಬರಲಿಲ್ಲ. ಆದರೆ, ಅಪೊಲೋ—೧೩ ಯಾನದ ಉಡ್ಡಯನದ ಬಗ್ಗೆ ಅನಿಶ್ಚಿತತೆಯಿತ್ತು. "ಸಂಶಯಾತ್ಮಾ ವಿನಶ್ಯತಿ' ಯೆಂಬಂತೆ ಆರಂಭದ ಸಂದೇಹ ಕೊನೆಗೆ ಖೇಚರರ ಪ್ರಾಣಕ್ಕೇ ಸಂಚಕಾರ ತರುವಂತಿತ್ತು. ನಿರೀಕ್ಷೆಯಂತೆ ಈ ಮಾನವ ಖೇಚರರು ಚಂದ್ರಕಕ್ಷೆಯನ್ನು ತಲುಪಿದರೂ ಚಂದ್ರ ಭ್ರಮಣ ಮಾಡಿದರೂ ಚಂದ್ರನ ನೆಲದ ಮೇಲೆ ಇಳಿಯಲು ಅಸಮರ್ಥರಾದರು. ಯಾನದಲ್ಲಿ ವಿದ್ಯುಚ್ಛಕ್ತಿ ಮತ್ತು ಪ್ರಾಣವಾಯುಗಳ ಅಭಾವ ಅವರಿಗೆ ತಲೆದೋರಿತು. ಉಲ್ಕೆಯೊಂದು ಯಾನಕ್ಕೆ ಬಡಿದದ್ದರಿಂದ ವಿದ್ಯುತ್ ನಷ್ಟವಾಯಿತು. ಹಾಗಾಗಿ ಯಾನಗಳ ಜೀವರಕ್ಷಕಗಳಿಗಾಗಿ, ತಮ್ಮ ಜೀವ ರಕ್ಷಣೆಗಾಗಿ ಪ್ರಾಣಪಣವಿಟ್ಟು ಹೋರಾಡಿ ಕೊನೆಗೆ ಯಶಸ್ವಿಯಾದ ಈ ಖೇಚರತ್ರಯರೂ ವಿಕ್ರಮವನ್ನೇ ಸ್ಥಾಪಿಸಿದರು. ಅಪೊಲೊ—೧೧ರ ಖೇಚರರು ಮೊತ್ತಮೊದಲಿಗೆ ಚಂದ್ರನಲ್ಲಿ ಇಳಿದು ವಿಕ್ರಮ ಸಾಧಿಸಿದರು; ೧೨ರವರು ದೀರ್ಘಕಾಲ ಚಂದ್ರನ ಮೇಲೆ ಓಡಾಡಿ ವಿಕ್ರಮ ಸ್ಥಾಪಿಸಿದರು. ಈಗಿನವರು ಚೇತನ್ಯರಹಿತ ಸ್ಥಿತಿ ಮುಂದೆ ಬಂದಾಗಲೂ ಜೀವವನ್ನು ಉಳಿಸಿಕೊಂಡೇ ಧರೆಗೆ ಮರಳಿದರು. ಈ ವಿಕ್ರಮತ್ರಯವು ಆಕಾಶಯಾನದ ಆರಂಭದ ಮೂರು ಮೆಟ್ಟಿಲುಗಳು. ಧೀರ ಖೇಚರ ತ್ರಯರ ಸಾಹಸದ, ಧೈರ್ಯದ ಮುಂದೆ ಜಗತ್ತಿಗೆ ಜಗತ್ತೇ ತಲೆಬಾಗುತ್ತದೆ.

ತುಳುಕೂಟದ ಮನವಿ

ಕನ್ನಡ ಭಾಷಾರಂಗಕ್ಕೆ ತುಳು ಸಾಹಿತ್ಯ ಮತ್ತು ಸಂಸ್ಕೃತಿ ಕೊಡುವ ಭಾರಿ ಕೊಡುಗೆಯನ್ನು ಸ್ಮರಿಸುವುದರಿಂದ ತುಳು ಭಾಷಾ ಜನಾಂಗವು ಇಂದಿಗೂ ಉಳಿಸಿ ಕೊಂಡಿರುವ ತುಳು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಕಾರ್ಯಕ್ಕೆಂದು "ತುಳು ಕೂಟ" ಎಂಬ ಸಂಘ ಮತ್ತೊಮ್ಮೆ ತುಳು ಭಾಷಾಭಿಮಾನಿಗಳಿಂದ ತಲೆಯೆತ್ತಿದೆ. ಇದರ ಕಾರ್ಯಕಲಾಪಕ್ಕೆ ತುಳುಜನರ ಬೆಂಬಲ ಅನಿವಾರ್ಯವಾಗಿದೆ. ಅದುದರಿಂದ ನಿಮ್ಮೆಲ್ಲರ ಪ್ರೋತ್ಸಾಹವನ್ನು ನಾವು ಬಯಸುವ ಮೂಲಕ ಇದರ ಸದಸ್ಯತನಕ್ಕೆ ನಿಮ್ಮಲ್ಲಿ ಹೃತ್ಪೂರ್ವಕವಾಗಿ ನಾವು ವಿನಂತಿಸಿಕೊಳ್ಳುತ್ತೇವೆ.

ಕಾರ್ಯನಿರ್ವಾಹಕ ಸಮಿತಿ, ತುಳುಕೂಟ, ರೂಂ ನಂಬ್ರ 16, ಫೆರ್ನಾಂಡಿಸ್ ಬಿಲ್ಡಿಂಗ್ಸ್, ಕಂಕನಾಡಿ, ಮಂಗಳೂರು—2.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large Airy Rooms; Roof garden
Quiet, Calm Atmosphere
Personalised Service.

ಗೇಹರಾಜ್ಯದಲ್ಲಿ

ಪ್ರಾಣದೊಡ್ನೆ ಹಣಾನೂ ಎತ್ಕೊಳ್ಳಿ

“ಲೇ, ಕೇಳಿದ್ಯೇನೆ?”

“ಏನಪ್ಪಾ, ಅಂತಾದ್ದೀಗ ಬಂದಿರೋದು?”

“ಅಲ್ಲ, ಲಂಚಾಸುರನ ಹಾವಳಿ ನಮ್ಮ ದೇಶದಲ್ಲಿ ವಿಪರೀತ ತಿಳ್ಕೊಂಡಿದ್ರೆ...”

“ಅಯ್ಯೋ, ಅದು ಹೇಗಾಗುತ್ತೇರಿ?”

“ಮತ್ತೆ?”

“ಅಲ್ರಿ, ಶುಂಭ—ನಿಶುಂಭಾಸುರರು, ಸುಂದೋಪಸುಂದಾಸುರರು ಇ. ಇ.ಗಳು ತ್ರೈಲೋಕ್ಯಾಧಿಪತಿಗಳಾಗಿ ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡಿದರೆಂದ ಮೇಲೆ....”

“ಲಂಚಾಸುರನ ಕಾರ-ಬಾರು ನಮ್ದೇಶದಲ್ಲಿ ಮಾತ್ರವೇ ಹೇಗೀಳಿಯ ಬೇಕೂಂತ ಕೇಳ್ತೀರಾ?”

“ಅಲ್ವೆ ಮತ್ತೆ? ನಮ್ದೇಶಕ್ಕೇ ಆತನ ಆಧಿಪತ್ಯ ಸೀಮಿತವಿದ್ರೆ ಅವನನ್ನು ಯಾರು ಗಣನೆಗೆ ತಗೋತಾರೆ?”

“ಆದ್ರೂನೂ....”

“ಏನೂ?”

“ಅಲ್ಲ, ಅಂತಕನ ದೂತರಿಗೆ ಕಿಂಚಿತ್ತು ದಯೆವಿಲ್ಲ ಅಂತ ದಾಸರು ಹಾಡಿದ್ರೂ ಊಟ ಮುಗಿಸುವ ತನಕ ಪುರುಸೊತ್ತು ಕೊಡ್ತಾರಂತೆ.’

‘ಅಷ್ಟಾದ್ರೂ ದಯ ತೋರಿಸ್ತಾರಲ್ಲ!’

‘ಆದ್ರೆ, ಹರಿಶ್ಚಂದ್ರ ಪಾಪ, ತನ್ನ ಮಗನ ಹೆಣ ಸುಡುವುದಕ್ಕೆ ಅನುಮತಿ ಕೊಡಲಿಲ್ಲ....’

‘ಯಾಕೆ ಹಾಗಂತೀರಿ? ತನಗೆ ಸಲ್ಲಬೇಕಾದ್ದನ್ನ ಮಾಫಿ ಮಾಡಿದ; ಯಜಮಾನನಿಗೆ ಸಲ್ಲಬೇಕಾದ್ದನ್ನ ತೆರಲೇಬೇಕೆಂದು ಹಠಹಿಡಿದ ಸತ್ಯ ಪರಿಪಾಲನೆಗಾಗಿ...’

‘ಹ್ಞೂನ್ನು. ಆದ್ರೆ ಆಧುನಿಕ ಹರಿಶ್ಚಂದ್ರರು ಏನ ಮಾಡ್ತಾರೆ ಗೊತ್ತೆ?’

‘ಏನು?’

‘ನೋಡು, ಊರಿಗೊಂದು ಸುಡುಗಾಡು....’

‘ಸುಡ ಗಾಡಿಗೊಬ್ಬ ಸಿದ್ಧ....’

“ಸಾಕು ಬಿಡೆ, ಗಂಭೀರ ವಿಷಯ ಪ್ರತಿಪಾದಿಸೋಕೆ ಹೊರಟಾಗ....’

‘ಅಪರಾಧ. ನಿಮ್ಮ ಶಿವಪೂಜೆ ನಡುವೆ ನಾನ್ಯಾಕೆ ಕರಡಿ ಕರೀಬೇಕು?’

‘ಬಿಡಬೇಡ ಮತ್ತೆ; ಬೇಗ ಯಾಗಿ ಹೇಳ್ಲ....’

‘ಹೇಳ್ಕೊಂಡೇನ್ನಿ. ಈಗ ಬಂದು ವರ್ಸಿ.’

“ಊರಲ್ಲಿ ಯಾರ ಹೆಣ ಸುಡ್ಬೇಕಾದ್ರೂ ಆ ಸಿದ್ಧನಿಗೇ ಮೊರೆ ಹೋಗಬೇಕು.”

‘ಮತ್ತೆ ಸುಂಕವನ್ನ ಹೇಳಿದ್ದಾರಾ?’

“ಏನೂಂತ?”

‘ಅತ್ತೆಗೊಂದು ಕಾಲ; ಸೊತ್ತೆಗೊಂದು ಕಾಲಾಂತ....’

‘ಯಾರು?’

‘ಯಾರೂಂದ್ರೆ? ಒಂದಿನವೂ ನಮ್ಮಕೆಲಸಾಗಬೇಕಾದ್ರೆ ಸಿದ್ಧನಾದ್ರೇನು, ಬುದ್ಧನಾದ್ರೇನು, ನಾಯಿಬಾಲಾನೂ ಸಾಫ್ ಮಾಡಬೇಕಾದ್ದೇ....’

“ನೋಡು, ಮೊನ್ನೆ ನಮ್ಮ ಶೀನಾಚಾರಿ ಸತ್ನಲ್ಲ?”

“ಅಯ್ಯೋ, ಯಾಕೆ ಹಾಗ್ಹೇಳ್ತೀರಾ?”

“ಮತ್ತೇನು ಹುಟ್ಟಿದ ಅನ್ಬೇಕೆ?”

“ಪಾಪ, ನಾಲ್ಕು ವರ್ಷಗಳಿಂದ ನರಳಾಡಿ ನರಳಾಡಿ ಸತ್ತೆ ಹುಸೇನ್ನ....’

“ಅವನಿಗಲ್ಲ’

“ಮತ್ತೆ?’

“ಅವನ ಮನೇಯವ್ರಿಗೆ....’

“ಆಮೇಲೆ.... ಅಲ್ಲಾ, ಗಾಳಿಪಟ ಹಾರಿಸೋಕೆ ಹೋದವ್ರು ಆಕಾಶ ನೋಡ್ತಾನೇ ಕೂತುಬಿಟ್ರು....’

“ಹ್ಞಾಂ.... ಭಾರಿ ಮಾಟ ಕಾಣೇ ಶೀನು.... ಅಂತೂ ಶೀನಾಚಾರಿ ಸತ್ತ ಅಲ್ಲ, ದಿವಂಗತನಾದ. ಆದ್ರೆ, ಅವನ ಹೆಣ ಮಾತ್ರ ಭೂಶಯ್ಯೆಯಲ್ಲೇ ಉಳೀತು...”

‘ಹ್ಞಾಂ....’

“ಸಿದ್ಧನಿಗೆ ಸುದ್ದಿಗೊಡಲು ಸುಡ ಗಾಡಿಗೆ ಜನ ಓಡಿಸಿದ್ರು. ಪಾಪ, ಅತ ಆ ಮಧ್ಯರಾತ್ರೇನೂ ಪಡಸಾಲೆಯಲ್ಲಿ ಬಿದ್ಕೊಂಡಿದ್ದ....”

“ಹ್ಞಾಂ....”

“ಆತನನ್ನ ಕರೆಸ್ರಿ, ಇನ್ನೊಂದು ಕೊಡೂಂತ ಹತ್ತು ನಿಮಿಷ ಮಂತ್ರ ಉತ್ತರಿಸಿದ....’

‘ಅದೆಲ್ಲ ಇದ್ದದ್ದೇ ಅನ್ನಿ.... ಆ ರಾತ್ರೆಯಲ್ಲಿ ಅವನೊಬ್ಬನೇ ಸುಡುಗಾಡಲ್ಲಿ ಕಾದಿರೋಕೆ ಪಿಶಾಚಿಯೇನು?’

‘ಅದಕ್ಕೇ ಕುಡ್ಕೊಂಡು ಪಡಸಾಲೆಯಲ್ಲಿ ಬಿದ್ದಿರೋದು. ಅವನಿಗೆ ಸಂಗ್ತಿ ಗೊತ್ತಾಯ್ತು.”

“ತನ್ನನ್ನ ಕರ್ಸಿಕೊಂಡು ಮತ್ತ್ಯಾರು ಬರೋರನ್ನೋ ಗ್ಯಾರಂಟಿನಾದ್ರೂ ಇತ್ತಲ್ಲ?’

‘ನಂಗೊಬ್ಬನ್ಗೇ ಹೋಗೋಕೆ ಹೆದ್ರಿಕೆ. ನೀವು ಯಾರಾದ್ರೂ ಬರೋದಾದ್ರೆ ನೋಡೋಣ. ಇಲ್ಲ, ನಾಳೆ ಬನ್ನಿ ಅಂತ.”

“ಸರೀನ್ನಿ.”

“ಕೊನೆಗೆ ಅವನಿಗೆ ಖುಶೀ ಮಾಡಿ ಜತೆಯಲ್ಲೇ ಸುಡಗಾಡಿಗೆ ಹೋಗಿ ಕಾಷ್ಠ ಸಿದ್ಧಪಡಿಸಿದ್ರು...’

“ಯಾರು?”

“ಜತೇಲಿ ಹೋದವ್ರು....’

‘ಅವನೇನು ಮಾಡಿದ?’

“ಬೇಕಾದ್ಹಾಂಗೆ ಮಾಡ್ಕೊಳ್ಳಿ. ನಾನು ಒಸಿ ಇಲ್ಲೇ ಕೂರ್ತೀನಿ ಅಂತ ಅಂದ. ಕಾಷ್ಠ ರೆಡಿ ಮಾಡಿ ಸಿದ್ಧನನ್ನ ಕೂಗಿದ್ರೆ....’

‘ಪಾಪ, ನಿದ್ದೆ ಬಂದಿರಬಹುದು....’

“ಪಡಸಾಲೆ ಅಂಗಳದಲ್ಲಿ ಹೊರಳಾಡುತಿದ್ದ........ ಅಂತೂ ಶೀನಾಚಾರಿ ಹೆಣ ಹೋಯ್ತು ಸುಡುಗಾಡಿಗೆ, ಮುಂಜಾನೆ. ಸಿದ್ಧ ಹೆಣ ಒಳ್ಗೆ ಬಗ್ಬೇಕಾದ್ರೆ ನನ್ನ ದಕ್ಷಿಣೆ ಬರ್ಲೀಂತ ಅದ್ನ ಬರಬೇಕೆ?”

“ಅಲ್ರಿ, ಅವಂಗೆ ಸಂಬ್ಳ ಕೊಡ್ತಾರೆ. ಹೆಣ ಸುಡೋಕೆ ಗೊತ್ತು ಮಾಡಿದ ಹಣಾನ ತೆತ್ರೆ ಸರಿತಾನೆ?”

‘ಅದು ಸರಿ. ಆದ್ರೆ ಸಂಬ್ಳ ಕೊಡೋರು ಬಂದು ಹೆಣ ಸುಡೋದಿಲ್ಲ ನೋಡು. ಸಿದ್ಧ ಅಂತಾನೆ—ಎರಡು ಹೆಣ ಸುಡೋ ಕಟ್ಟಿಗೆ ಒಟ್ಟಿದ್ದೀನಿ – ಮಧ್ಯರಾತ್ರಿ ಕಾಲದಲ್ಲಿ ಕಾದು ಕೂತಿದ್ದೀನಿ....’

‘ಹೆಣ ಒಳ ಹೋಗಬೇಕಾದ್ರೆ ಸಿದ್ಧಂಗೆ ತೃಪ್ತಿಯಾಗ್ಬೇಕಾಯ್ತನ್ನಿ...”

‘ಅಷ್ಟೇ ಆದ್ರೆ ಪರ್ವಾಗಿಲ್ಲ....’

‘ಮತ್ತೆ?’

“ಹೆಣ ಕಾಷ್ಠದ ಮೇಲಿಟ್ಟು ಬೆಂಕಿಯಿಕ್ಕಿದ್ರಪ್ಪ. ಸರಿ ಹೊಗೋಣ, ನಂಗೆ ನಿದ್ದೆ ಬರ್ತದೆ. ರಾತ್ರಿಯಿಡಿ ಈ ನಾಯೋರ ದೆಸೆಯಿಂದ ನಿದ್ದೆಯಿಲ್ಲ ಅಂತ ಶುರು ಮಾಡಿದ...”

‘ಹ್ಞೂ, ಮತ್ತೆ ಹತ್ತು ಕೇಳೋಕೆ....”

“ಅದೂ ಕೇಳ್ತಾಯ್ತು... ಅಸ್ಥಿ ಸಂಚಯಕ್ಕೆ ಐದನೇ ದಿನ ಬರ್ತೀವಿ. ಅದುವರೆಗೆ... ಅಂತಂದ ತಕ್ಷಣ- ಅದೆಲ್ಲ ಆಗೋಲ್ಲ. ಹೆಣ ಬರುವಾಗ ಇಡೋಕಾಯ್ತು ಅಂದ.’

‘ಅದೂ ಹ್ಞೂನ್ನಿ...”

“ಅಲ್ಲ, ಸುಡೋಕೆ ಏಳೆಂಟು ಹೊಂಡ ಇವೆ ಅಂತಂದ್ರೆ ದಿನಕ್ಕೆ ಐದಾಗುತ್ತೆ; ಇಪ್ಪತ್ತೈದು ಕೊಟ್ರೆ ಐದ್ನೇ ದಿನ ಬನ್ನಿ ಅಂದ...’

‘ಹ್ಞಾಂ, ಇನ್ನೊಂದ್ಕೆ ಕತೆ.... ಹೆಣ ಸುಡ್ಬೇಕಾದ್ರೆ ಇಷ್ಟೆಲ್ಲ ರಾಮಾಯಣ ಇದ್ದೀರೆ ಸಾಯೋರು ಖಂಡಿತ ಸಾಯೋದಿಲ್ಲ....’

“ಯಮರಾಯನಿಗೆ ಈ ಗೋಳು ಗೊತ್ತಾದ್ರೆ ಪ್ರಾಣದೊಡನೆ ಹಣಾನೂ ಎತ್ತಿಕೊಂಡ ಹೋಗೋ ವ್ಯವಸ್ಥೆ ಮಾಡ್ತಿದ್ದ.......’

“ಲಂಚಾಸುರನ ಆಧಿಪತ್ಯ ಸುಡುಗಾಡಲ್ಲಿ ಭಾರಿ ಭದ್ರವಾಗಿದೆ ಅಂತಾಯ್ತು.’

‘ಶೋಕ ಸಂತಪ್ತರು ನೀಡುವ ಲಂಚ ಭಾರಿ ಮಜಾ ನೀಡುತ್ತೆ....”

“ನೀಡದುಂಟೆ, ಪಡಸಾಲೆಯಲ್ಲಿ...”

“ಅಲ್ವೆ, ಈಗ ನೋಡಿದ್ರೆ ಇಂತಹ ಖದೀಮರು ಜಗತ್ತಿನಾದ್ಯಂತವಿದ್ದಾರೆ...”

“ಅಂದ್ರೆ?’

‘ನೋಡು, ಸಮತಾವಾದದ ತವರೂರಾದ ಸೋವಿಯತ್ ರಶ್ಯದಲ್ಲೂ ಹೆಣ ಸುಡದಿರೆ ಮಾತ್ರ ಹಣಕ್ಕೆ ನೋಡ್ತಾಂತ ವರದಿ ಬಂದಿದೆ...”

‘ಅಲ್ರಿ, ಅಲ್ಲಿ ಎಲ್ಲಾನೂ ಸರಕಾರದ ಹತೋಟಿಯಲ್ಲೇ ಇರ್ತಾಗ...”

“ಸುಡ ಗಾಡು ಸಿದ್ಧ ಅಲ್ಲದ್ದು ತನ್ನ ಕರಾಮತ್ತು ಮಾಡ್ತಾನಂತೆ. ಶಿಷ್ಯ ಸಮತಾವಾದದ ಕಾನೂನು ಹಿಡಿದು ಕೂತ್ರೆ ಹೆಣಾನ ಸಮಾಧಿ ಮಾಡೋಕೆ ಬಸ್ಲ ನರಿನಾಯಿಗಳಿಗೆ ಹಂಚಿ ಕೊಡಬೇಕಾದೀತು....”

“ಇದು ನಿಜವಾಂದ್ರೆ....’

‘ಮತ್ತೆ ಸುಳ್ಳೇನು?’

“ಆ ಮಟ್ಟಿಗಾದ್ರೂ ನಾವು ಸಮತಾವಾದಿಗಳಂತಾಯ್ತು.”

‘ನಿನ್ನ ಇಂದಿರಮ್ಮನ ಸಮಾಜವಾದದಲ್ಲಿ ಸಮಾಜ ಒದ್ದಾಡಿಯೇ ಹೆಣವಾಗ್ಬೇಕು...”

‘ಸಾಕು ಬಿಡೀಂದ್ರೆ.... ಸೋವಿಯತ್ ಭೂಮಿಯಲ್ಲೂ ಲಂಚಾಸುರ ತಳವೂರಿದ್ದಾನೆ ಅಂದ ಮೇಲೆ....”

“ಪೂರಾ ಕಲಿಯುಗ ಬಂತೂಂತ....’

“ಯಾವ ಯುಗವಾದ್ರೆ ನಮಗೇನು? ಅಂತೂ ಬದುಕಿರೋವರ್ಗೆ ಬದುಕ್ಬೇಕು....”

‘ಆ ಮೇಲೆ?’

“ಆ ಮೇಲೇನ? ಸಾಯೋದು........ ಊರಿಗೆ ಅರಸನಾದ್ರೂ ತಾಯಿಗೆ ಮಗ ನಾಗಬೇಕು ತಾನೆ? ಹಾಗೇನೇ ಯಾವ ವಾದಿಯಾದ್ರೇನಂತೆ ಸುಡುಗಾಡ ಸಿದ್ಧನ ಆಶ್ರಯ ಬೇಕೇ ಬೇಕು...”

‘ಹ್ಞಾಂ....’

‘ಏನು ಹಾಗೆ ನೋಡ್ತೀರಿ!”

“ಮತ್ತೆ ಹೇಗೆ ನೋ...”

“ಸಾಕೂಂದ್ರೆ....”

‘ಅಯ್ಯಪ್ಪ, ಮತ್ತೆನ್ಯಾಕೋದು!’

‘ಏನೂ ಮಾಡ್ಬೇಡಿ; ಹೀಗೆ ಬನ್ನಿ...!

“ಹ್ಞಾಂ....”

—ಗೋರಾ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬಿರುವ “ವಿಜಯಾ ಬ್ಯಾಂಕ್”ನಲ್ಲಿ

ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

“ಜೀವನ–ನಿಧಿ”ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಶ್ರೀ

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು– ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,

ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

ಕರ್ತವ್ಯ ವಿಮುಖರಿಗೆ ಹೆಚ್ಚಿನ ಅಧಿಕಾರ

ಮಂಗಳೂರಿನಲ್ಲಿ ರಾಜ್ಯದ ಪುರಸಭೆಗಳ ಅಧ್ಯಕ್ಷ—ಉಪಾಧ್ಯಕ್ಷರ ಸಮ್ಮೇಳನ. ಹಿಂದೊಂದು ಬಾರಿ ಇಂತಹ ಸಮ್ಮೇಳನ ನಡೆದದ್ದು ಹೊಸಪೇಟೆಯಲ್ಲಿ. ಮುಂದಿನ ಬಾರಿ ದಾವಣಗೆರೆಯಲ್ಲಿ. ರಾಜ್ಯದ ಬೇರೆ ಬೇರೆಡೆಯ ಪುರಸಭೆಗಳ ಅಧ್ಯಕ್ಷ—ಉಪಾಧ್ಯಕ್ಷರು ಒಂದುಗೂಡಿದರು. ಹೊಸಪೇಟೆಯಲ್ಲಿ ಕೈಕೊಂಡ ನಿರ್ಣಯಗಳಿಗೆ ಮತ್ತೊಮ್ಮೆ ಜೀವದಾನ ಮಾಡಿದರು. ಉಭಯ ಕುಶಲೋಪರಿಯಾಡಿಕೊಂಡು ಮುಂದಿನ ವರ್ಷ ಮತ್ತೆ ಭೇಟಿಯಾಗುವ ಆಶಯ ವ್ಯಕ್ತಪಡಿಸಿ ಅಗಲಿದರು.

ಸಮ್ಮೇಳನದಲ್ಲಿ ಹಲವರು ಹಾಲಿಗಳೂ ಕೆಲವರು ಮಾಜಿಗಳೂ ಭಾಗವಹಿಸಿದ್ದರು. ಇವರೆಲ್ಲರ ಒಟ್ಟು ಅಭಿಪ್ರಾಯ—ಮೈಸೂರು ಪುರಸಭಾ ಶಾಸನವು ಚುನಾಯಿತ ಸದಸ್ಯರಿಗೆ ಯಾವ ಅಧಿಕಾರವನ್ನೂ ನೀಡುವುದಿಲ್ಲ. ಪುರಸಭಾಧಿಕಾರಿಗೆ ಸಲಹಾ ಸಮಿತಿಯಂತೆ ಇವರಿರುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ಭಾರೀ ದೂರದ ಮಾತು. ಆದುದರಿಂದ ಈ ಶಾಸನವನ್ನು ಹೆಚ್ಚು ಪ್ರಜಾತಂತ್ರವಾದಿಯಾಗಿಸಬೇಕು—ಅರ್ಥಾತ್ ನಗರಸಭಾಸದಸ್ಯರಿಗೆ ಹೆಚ್ಚಿನ ಅಧಿಕಾರವಿರಬೇಕು.

"ಬೇಕು" ಎಂಬುದು ಇಂದಿನ ಯುಗವಾಣಿ. "ಬೇಕು" ಎಂದು ಕೇಳುವುದಕ್ಕೆ ಮೊದಲು ಇರುವ ಅಧಿಕಾರಗಳನ್ನು ನಗರ ಪಾಲಕರು ಸಮರ್ಪಕವಾಗಿ ಉಪಯೋಗಿಸಿಕೊಂಡಿದ್ದಾರೆಯೆ? ಎಂಬ ಪ್ರಶ್ನೆ ಮುಂದೆ ಬರುತ್ತದೆ. ಯಾವ ಅಧಿಕಾರವಿಲ್ಲವಾದರೂ ಸಲಹೆ ನೀಡುವ ಅಧಿಕಾರವಾದರೂ ಇದೆಯೆಂಬುದು ಅವರೇ ಒಪ್ಪಿಕೊಳ್ಳುತ್ತಾರೆ. ಈ ಅಧಿಕಾರಗಳನ್ನು ಅವರು ನಿಭಾಯಿಸಿದ್ದಾರೆಯೆ? ಲಕ್ಷಾಂತರ ರೂಪಾಯಿಗಳ ತೆರಿಗೆ ಬಾಕಿ—ಕಟ್ಟಡಗಳಿಗೆ ಲೈಸನ್ಸ್ ನೀಡುವಲ್ಲಿ ಸುದೀರ್ಘ ವಿಳಂಬ—ಇವು ಮೊದಲಾದುವುಗಳಿಂದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸದೆ ಇದ್ದೀತೆ? ಇವನ್ನೆಲ್ಲಾ ಸರಿಪಡಿಸಲು ನಗರಸಭಾ ನೌಕರರ ಸಹಕಾರ ಬೇಕು. ಆದರೆ, ಚುನಾಯಿತ ಪ್ರತಿನಿಧಿಗಳು ನೌಕರರ ಮೇಲೆ ಉರಿ ಹಾಯುವುದನ್ನೇ ಮುಖ್ಯ ಕರ್ತವ್ಯವಾಗಿಟ್ಟುಕೊಂಡ ಉದಾಹರಣೆಗಳು ಅನೇಕವಿವೆ. ಇದರಿಂದ ನಗರಸಭೆಯ ಆಡಳಿತ ಚೆನ್ನಾಗಿ ನಡೆಯುವುದಿಲ್ಲ. ಹಲವೆಡೆ ಕುಸಿದುಬಿದ್ದ ಉದಾಹರಣೆಗಳೂ ಇವೆ. ಅಧಿಕಾರಕ್ಕಾಗಿ ಹಂಬಲಿಸುವವರು ತಮ್ಮ ಭಾದ್ಯತೆಯ ಕಡೆಗೂ ದೃಷ್ಟಿಹರಿಸದೆ ಹೋದರೆ, ಆಡಳಿತ ಸುಗಮವಾಗದು.

ನಗರಸಭಾಪತಿಯಾದಿಗಳಿಗೆ ವೇತನ—ಭತ್ತೆಗಳ ಪ್ರಶ್ನೆಯೊಂದು. ಜನಸೇವೆಯ ಭಾವನೆಯನ್ನು ದೂರವಿಸಲು ಈ ಆವಿಷ್ಕಾರವೊಂದು ಸಾಕು. ಪುರಪಿತೃಗಳು ಇಲ್ಲಿಯವರೆಗೂ ಇಳಿದರು ಎಂದಮೇಲೆ, ಅವರಿಗೆ ಅಧಿಕಾರ ಬೇಡ, ವೇತನ—ಭತ್ತೆ ಮಾತ್ರ ಬೇಕು ಎನಿಸುತ್ತದೆ. ಇದಕ್ಕೂ ಅವಕಾಶ ದೊರೆತರೆ, ಇನ್ನೂ ವೇತನಭತ್ತೆ ಭಕ್ತರ ಸೇನೆಗೆ ಬೃಹತ್ತುಕಡಿಯೊಂದು ಸೇರಿದಂತಾಗುವುದು. ಆರ್ಥಿಕವಾಗಿ ಹದಗೆಟ್ಟಿರುವ ನೂರಾರು ನಗರಸಭೆಗಳು ಈ ಆಘಾತವನ್ನು ಸಹಿಸುವುದು ಸಾಧ್ಯವೇನು?

○ ○ ○

ಭಾರತದ ಸ್ವಾತಂತ್ರ್ಯದೊಡನೆಯೇ ಹುಟ್ಟಿಬಂದ ಶಾಪದ ಕೂಸು ಗಡಿ ವಿವಾದ. ಆರಂಭದಲ್ಲಿ ಪಾಕಿಸ್ತಾನದೊಡನೆ ಮಾತ್ರವಿದ್ದ ಈ ವಿವಾದ ಕೆಂಪು ಚೀನಾದೊಡನೆಯೂ ತಲೆದೋರಿತು. ಕೆಂಪು ಚೀನಾ ಮತ್ತು ಪಾಕಿಸ್ತಾನಗಳು ಭಾರತದ ಮೇಲೆ ಆಕ್ರಮಣ ಮಾಡಿದ್ದನ್ನು ಇಷ್ಟು ಬೇಗನೇ ನಾವು ಮರೆತು ಬಿಟ್ಟಿಲ್ಲ. ಇದೀಗ ನೆರೆಯ ಬ್ರಹ್ಮದೇಶವೂ ನಮ್ಮ ಗಡಿ ನಗರವೊಂದರ ಮೇಲೆ ಕಣ್ಣಿಟ್ಟು, ಅದು ತನ್ನದೆಂದು ಹೇಳತೊಡಗಿದೆ.

ಇದು ನಡೆದದ್ದು ಹೀಗೆ: ಭಾರತ—ಬ್ರಹ್ಮದೇಶಗಳ ಅಂಗೀಕೃತ ಗಡಿಯಲ್ಲಿ ಮಣಿಪುರದಲ್ಲಿ ಲೋಚಾಕ್ ನದಿಗೆ ಹೊಂದಿಕೊಂಡು ಮೊರ್ಹೆ ಪಟ್ಟಣ. ಇದರ ಆಸುಪಾಸು ತೇಗದ ಬೆಳೆಗೆ ಸುಪ್ರಖ್ಯಾತ. ಈಗ ಬ್ರಹ್ಮದೇಶಕ್ಕೆ ಸೇರಿರುವ ಕಾಬೋ ಕಣಿವೆಯ ಪ್ರದೇಶ ಮೊದಲು ಮಣಿಪುರಕ್ಕೆ ಸೇರಿದ್ದು ಗಲಭೆಗಳಲ್ಲಿ ಬ್ರಹ್ಮಕ್ಕೆ ಹೋದದ್ದು. ಇದಕ್ಕೆ ಮಾಸಿಕ ಪರಿಹಾರ ಮಣಿಪುರದ ರಾಜರಿಗೆ ೧೯೪೭ರವರೆಗೂ ದೊರೆಯುತ್ತಿತ್ತು. ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ ನೀಡುವ ಶಾಸನದ ಚರ್ಚೆಯ ವೇಳೆ ಮಣಿಪುರದ ಮಹಾರಾಜರು ಈ ಕಣಿವೆಯ ಪ್ರದೇಶದ ಮೇಲೆ ತನ್ನ ಅಧಿಕಾರವಿರಬೇಕೆಂದು ತಿಳಿಸಿದ್ದರು. ಆದರೆ, ಪ್ರಯೋಜನವಾಗಲಿಲ್ಲ.

ಈಗ ಸಂಭವಿಸಿದ ವಿವಾದ ೩೦೦ ಗಜಗಳ ಪ್ರದೇಶಕ್ಕೆ. ಮೊರ್ಹೆ ನಗರದ ಮಟ್ಟಿಗೆ, ಭಾರತ–ಬ್ರಹ್ಮ ಗಡಿ ಗುರುತಿಸುವಾಗ, ಬ್ರಹ್ಮವು ಈ ನಗರದ ಮೇಲೆ ತನ್ನ ಅಧಿಕಾರವನ್ನು ಹೇರಿತು. ಮಣಿಪುರದ ಲೆ| ಗ| ಶ್ರೀ ಡಿ. ಆರ್. ಕೊಹ್ಲಿ ಆ ಜಾಗಟ್ಟಿನ ಸ್ಥಾನಕ್ಕೆ ಧಾವಿಸಿ, ಪರಿಸ್ಥಿತಿಯನ್ನು ಅಧ್ಯಯನ ನಡೆಸುತ್ತಿದ್ದಾರೆ. ಯಾವ ಅಧ್ಯಯನದಿಂದ ಏನುಪಯೋಗ? ಬ್ರಹ್ಮದೇಶದ ರಾಜ್ಯಕೀಯ ವಾತಾವರಣವೇ ಒಂದು ಒಗಟು. ಅದನ್ನು ಬಿಡಿಸುವುದು ಯಾರಿಂದಲೂ ಸಾಧ್ಯವಿಲ್ಲ.

ಕೆಂಪು ಚೀನಾದ ಹೆದರಿಕೆಯಿಂದ ಬ್ರಹ್ಮ ಮೈನವಿರದರಿಕೊಂಡಿದೆಯೆನ್ನುವವರು ಕೆಲವರು. ಜ| ನೇವಿನ್ನರು ಬ್ರಹ್ಮದೇಶವನ್ನು ಕೆಂಪು ಚೀನಕ್ಕೆ ಭಾರಿ ಹತ್ತಿರ ಒಯ್ಯುತ್ತಿದ್ದಾರೆ ಎನ್ನುವವರು ಮತ್ತೆ ಕೆಲವರು. ಚೀನಾ ದೇಶವು ಬ್ರಹ್ಮದೊಡನಿದ್ದ ಗಡಿ ವಿವಾದವನ್ನು ತೀರ್ಮಾನಿಸಿಕೊಂಡದ್ದು ಅಪೂರ್ವ ಘಟನೆ. ಇದರ ಹಿನ್ನೆಲೆ ಬ್ರಹ್ಮವನ್ನು ಭಾರತದ ಮೇಲೆ ಛೂಬಿಡುವುದೇ ಇರಬಹುದೆ? ಮೊರ್ಹೆ ನಗರದ ಮೇಲೆ ಈಗ ಬ್ರಹ್ಮ ಬೇಡುತ್ತಿರುವ ಅಧಿಕಾರ ಮುಂದೆ ವಿವಾದ ಪರಂಪರೆಗಳಿಗೆ ಅವಕಾಶವಾಗಬಹುದೆ?

ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಸ್ಥಾನವನ್ನೂ ಅಧಿಕಾರವನ್ನೂ ಬಲಪಡಿಸಲು ಬುದ್ಧಿವಂತ ರಾಜ್ಯಕಾರಣಿಗಳ ಮೇಲೆ ಯುಕ್ತಿಣೀ ಪ್ರಭಾವ ಬೀರಿ ನಿರ್ಣಯಗೊಳಿಸುವುದರಲ್ಲೇ ನಿರತರಿದ್ದಾರೆ. ಆದುದರಿಂದಲೇ ಅಂತಾರಾಜ್ಯ ಗಡಿ ವಿವಾದ—ಅಂತಾರಾಷ್ಟ್ರ ಗಡಿ ವಿವಾದಗಳು ದಿನೇದಿನೇ ಉಲ್ಬಣಗೊಳ್ಳುತ್ತಲೇ ಹೋಗುತ್ತಿವೆ. ಹೀಗೆಯೇ ನಡೆದರೆ ನಮ್ಮ ವಿವಾದಗಳನ್ನು ಬಗೆಹರಿಸಲು ದೇವರೇ ನೆರವಾಗಬೇಕು.

○ ○ ○

ಕಮ್ಯೂನಿಸ್ಟ್ ಆಕ್ರಮಣದ ವಿರುದ್ಧ ರಕ್ಷಣೆ ಮಾಡಿಕೊಳ್ಳಲು ಅಮೆರಿಕೆಯು ಕೆಲವೊಂದು ದೇಶಗಳಿಗೆ ಸೈನಿಕ ಸಹಾಯ ನೀಡಲು ಬಹಳ ಹಿಂದೆಯೇ ನಿರ್ಧರಿಸಿತ್ತು. ಇದರಂತೆ ಪಾಕಿಸ್ತಾನವು ಸಿಕ್ಕಿಬಿಕ್ಕ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡದ್ದು, ಅವನ್ನು ಕಮ್ಯೂನಿಸ್ಟ್ ಆಕ್ರಮಣಗಳಿಗೆ ಮಾತ್ರ ಬಳಸುವುದಾಗಿ ವಚನ ನೀಡಿ, ಭಾರತದ ಮೇಲೆ ಪ್ರಯೋಗಿಸಿ ವಚನಭ್ರಷ್ಟವಾದದ್ದು ಎಲ್ಲರಿಗೂ ಗೊತ್ತು. ಇದೀಗ ಅಮೆರಿಕೆ ತನ್ನ ಹಿಂದಿನ ಗೊತ್ತುವಳಿಯನ್ನು ಹಿಂದೆಗೆದುಕೊಳ್ಳುತ್ತದೆಯೆಂದು ಭಾರಿ ಸುದ್ದಿ.

ಕಮ್ಯೂನಿಸ್ಟ್ ವಿರೋಧಿ ರಾಷ್ಟ್ರಗಳು ತಮ್ಮ ಹಿತೈಷಿ ರಾಷ್ಟ್ರಗಳನ್ನು ಕಮ್ಯೂನಿಸ್ಟ್ ರಾಷ್ಟ್ರಗಳ ಆಕ್ರಮಣದಿಂದ ರಕ್ಷಿಸಲು ನೆರವಾಗುವುದು ಅಪರಾಧವೆನ್ನಿಸುವುದಿಲ್ಲ. ಆದರೆ, ಹೀಗೆ ನೀಡಲಾದ ನೆರವು ದುರುಪಯೋಗಗೊಂಡ ಉದಾಹರಣೆಗಳೇ ಹೆಚ್ಚು. ಪಾಕಿಸ್ತಾನದಂತೆ ಈ ನೆರವು ಪಡೆದ ದೇಶ ಬೇರೊಂದಿಲ್ಲ. ಅಂತೆಯೇ ಅದನ್ನು ದುರುಪಯೋಗಪಡಿಸಿಕೊಳ್ಳುವುದರಲ್ಲೂ ಅದೇ ಅಗ್ರಗಣ್ಯ. ಪಾಕಿಸ್ತಾನದ ಒಲವು ರಷ್ಯ—ಕೆಂಪು ಚೀನಾಗಳತ್ತ ಹರಿಯಿತು. ಪೇಶಾವರದ ಅಮೆರಿಕೆಯ ರಕ್ಷಣಾ ನೆಲೆಯ ಮುಂದುವರಿಕೆಗೆ ನಿರಾಕರಿಸಿತು. ಆದುದರಿಂದ ಅದಕ್ಕೆ ಈಗ ಪಾಕಿಸ್ತಾನದ ಮೇಲೆ ಹೆಚ್ಚಿನ ಆಸಕ್ತಿಯು ಉಳಿದಂತಿಲ್ಲ.

ಅಮೆರಿಕನ್ ಕಾಂಗ್ರೆಸ್ಸು ತನ್ನ ನಿರ್ಧಾರಕ್ಕೆ ಅಚಲವಾಗಿ ನಿಂತರೆ, ಮಧ್ಯಪ್ರಾಚ್ಯದ ಶಸ್ತ್ರಾಸ್ತ್ರಸಂಗ್ರಹಕ್ಕೊಂದು ಮಿತಿ ಬಂದೀತು. ಏಕೆಂದರೆ, ಎರಡು ಮುಖಗಳಲ್ಲಿ ಹರಿದು ಬರುತ್ತಿರುವ ಶಸ್ತ್ರಾಸ್ತ್ರಗಳ ಪ್ರವಾಹದ ಒಂದು ಧಾರೆ ಬತ್ತಿಹೋಗುತ್ತದೆ.

ಮನಸ್ಸಿನಲ್ಲಿಯ ವಿಷ

ಅಬ್ರಹಾಂ ಲಿಂಕನ್ ಇವರು ಅಮೇರಿಕೆಯ ಅಧ್ಯಕ್ಷರಾಗಿದ್ದರು. ಒಮ್ಮೆ ಒಬ್ಬ ಗೃಹಸ್ಥನು ಇನ್ನೊಬ್ಬರ ಮೇಲೆ ಸಿಟ್ಟಾಗಿ ಒಂದೇ ಸಮನೆ ಬೈಗಳ ಸುರಿಮಳೆ ಸುರಿಸುವದನ್ನು ಅವರು ಕಂಡರು. ಅವರು ಅವನ ಹತ್ತಿರಹೋಗಿ "ನಿನ್ನಷ್ಟಕ್ಕೇ ಎಷ್ಟು ಹೊತ್ತು ಹೀಗೆ ಬೈಯುತ್ತ ಕೂಡುತ್ತೀಯಿ? ಅದರ ಬದಲು ನಿನ್ನ ಸಿಟ್ಟನ್ನೆಲ್ಲ ಅವನಿಗೊಂದು ಕಾಗದದಲ್ಲಿ ಬರೆದು ಬಿಡು. ಅದರಿಂದ ನಿನ್ನ ಮನಸ್ಸಿಗೂ ಶಾಂತಿ ಸಿಗುವದು" ಎಂದು ಹೇಳಿದರು.

ಅವನಿಗೆ ಇದು ಸರಿ ಕಂಡಿತು. ಅವನು ತನ್ನ ಮನಸ್ಸಿನಲ್ಲಿಯ ವಿಷವೆಲ್ಲ ಒಟ್ಟುಗೂಡಿಸಿದ, ಮತ್ತು ಬಹು ಕಠೋರ ಶಬ್ದಗಳಲ್ಲಿ ತನ್ನ ಸಿಟ್ಟನ್ನೆಲ್ಲ ಬರೆದು ತೆಗೆದ. ಅಬ್ರಹಾಂ ಲಿಂಕನ್ ಈ ಪತ್ರ ಓದಿ "ಶಾಭಾಸ್, ನೀನಂತೂ ನಿನ್ನ ಪೂರಾ ಸೇಡು ತೀರಿಸಿಕೊಂಡು ಬಿಟ್ಟಿ. ನಿನ್ನ ಕಠೋರತೆಗೆ ಸರಿ ಜೋಡಿಯೇ ಇಲ್ಲ" ಎಂದರು. ತನ್ನ ಕಠೋರತೆಯ ಹೊಗಳಿಕೆ ಕೇಳಿ ಅವನಿಗೆ ಸಮಾಧಾನವಾಯಿತು. "ಈ ಪತ್ರವನ್ನು ಅವನಿಗೆ ಮುಟ್ಟಿಸುವದು ಹೇಗೆ" ಎಂದು ಅವನು ಕೇಳಿದ.

ಲಿಂಕನ್ ಅಂದರು "ಎಲೇ ಗೃಹಸ್ಥ! ಇದನ್ನು ಕಳಿಸುವ ಅವಶ್ಯಕತೆಯೇ ಇಲ್ಲ. ನಾವಂತೂ ಇಂಥ ಪತ್ರ ಎಂದೂ ಕಳಿಸಿಕೊಡುವದಿಲ್ಲ. ಈ ರೀತಿ ಪತ್ರ ಬರೆದು ಮನಸ್ಸಿನಲ್ಲಿಯ ವಿಷವೆಲ್ಲ ಕಾರಿಬಿಡುತ್ತೇವೆ. ಮತ್ತು ಅದನ್ನು ಬರೆದ ಕಾಗದವನ್ನು ಹರಿದು ಹಾಕುತ್ತೇವೆ. ಹೀಗೆ ಮಾಡುವದರಿಂದಲೇ ಮನಸ್ಸಿಗೆ ಶಾಂತಿ ಸಿಗುತ್ತದೆ" ಎಂದು

(ಲೋಕ ಜೀವನ) ಮುಕುಲಭಾಯಿ.

ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿ ತರುಣರ ಪ್ರಯೋಜನಕ್ಕಾಗಿ

ಸಿಂಡಿಕೇಟ್ ಬ್ಯಾಂಕಿನ ಹೊಸ ಯೋಜನೆ

ಮಣಿಪಾಲ, ಎಪ್ರಿಲ್ 11: ನಾಡಿನ ಆರ್ಥಿಕ ರಂಗವನ್ನು, ತನ್ನ ಹತ್ತು ಹಲವು ಉಪಯುಕ್ತಕರ ಯೋಜನೆಗಳಿಂದ ಪುನಶ್ಚೇತನಗೊಳಿಸಿದ ಸಿಂಡಿಕೇಟ್ ಬ್ಯಾಂಕು ಇದೀಗ ಜಿಲ್ಲೆಯ ನಿರುದ್ಯೋಗಿ ವಿದ್ಯಾವಂತರ ಪ್ರಯೋಜನಕ್ಕಾಗಿ ಹೊಸ ಕಾರ್ಯಕ್ರಮವೊಂದನ್ನು ರೂಪಿಸಿದೆ. ಈ ಕಾರ್ಯಕ್ರಮದ ಮೇರೆಗೆ ಜಿಲ್ಲೆಯ ವಿದ್ಯಾವಂತ ವರ್ಗದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ಪ್ರತ್ಯಕ್ಷವಾಗಿ ಅರಿತುಕೊಂಡು ಅದನ್ನು ಬಗೆಹರಿಸುವಲ್ಲಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿದೆ. ಈ ನಿಟ್ಟಿನಲ್ಲಿ ಬ್ಯಾಂಕು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತನ್ನ 74 ಶಾಖೆಗಳಿಗೆ ನಿರ್ದೇಶನವನ್ನು ನೀಡಿದ್ದು ಆ ಪ್ರಕಾರ ಪ್ರತಿ ಶಾಖೆಯು ತನ್ನ ವಲಯದಲ್ಲಿರುವ ನಿರುದ್ಯೋಗಿ ವಿದ್ಯಾವಂತ ಯುವಕರ ಸಮಸ್ಯೆಗಳನ್ನು ಅರಿತುಕೊಳ್ಳಲು ಯತ್ನಿಸುವುದು.

ಎಸ್. ಎಸ್. ಎಲ್. ಸಿ. ಮತ್ತು ಅದಕ್ಕಿಂತ ಹೆಚ್ಚಿನ ವ್ಯಾಸಂಗವನ್ನು ಪಡೆದಿರುವ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿರುವ ನಿರುದ್ಯೋಗಿ ಯುವಕರು, ತಮಗೆ ಸಮೀಪದಲ್ಲಿರುವ ಸಿಂಡಿಕೇಟ್ ಬ್ಯಾಂಕಿನ ಶಾಖೆಯನ್ನು ಇದೇ ಮೇ ದಿನಾಂಕ 4ರಿಂದ 9ರವರೆಗೆ ಸಂದರ್ಶಿಸಿ, ಶಾಖೆಯಲ್ಲಿ ನೀಡಲಾದ ಫಾರ್ಮಿನಲ್ಲಿ ತಮ್ಮ ವಿವರಗಳನ್ನು ನೀಡಬಹುದಾಗಿದೆ. ಹೀಗೆ ನೀಡಿದ ವಿವರಗಳನ್ನು ಪರಿಶೀಲಿಸಿ ಬ್ಯಾಂಕ್, ಅಂತಹ ನಿರುದ್ಯೋಗಿಗಳು ತಮ್ಮದೇ ಸ್ವಂತ ಉದ್ಯೋಗವನ್ನು ನಿರ್ವಹಿಸಲುಬೇಕಾದ ವಿಷಯ ಮಾಹಿತಿಯನ್ನೂ ಇನ್ನಿತರ ರೀತಿಯ ಮಾರ್ಗದರ್ಶನವನ್ನೂ ಆರ್ಥಿಕ ನೆರವಿನ ಜತೆಗೆ ನೀಡುವುದು. ಇದರಿಂದಾಗಿ ಒಂದೊಂದು ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಹೊಂದಿದ ವಿದ್ಯಾವಂತ ಯುವಕರು ಆಯಾ ಕ್ಷೇತ್ರದಲ್ಲಿ ಸ್ವಂತ ನೆಲೆಯಲ್ಲಿ ಬ್ಯಾಂಕಿನ ಆರ್ಥಿಕ ಸಹಾಯದಿಂದ ಉದ್ಯೋಗವನ್ನು ಗಳಿಸಲು ಅನುಕೂಲವಾಗುವುದು.

ಸಿಂಡಿಕೇಟ್ ಬ್ಯಾಂಕಿನ ಈ ನವೀನ ಯೋಜನೆಯು ಇಂದಿನ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಅತ್ಯಂತ ಪ್ರಯೋಜನಕಾರಿಯಾಗಿದ್ದು, ಜಿಲ್ಲೆಯ ಸಂಪತ್ತು ಸಂಪತ್ತಿನ ಪರಮಾವಧಿ ಉಪಯೋಗವನ್ನು ಪಡೆಯಲು ಇದರಿಂದ ಸಾಧ್ಯವಾಗುವುದು. ಉದ್ಯೋಗಕ್ಕಾಗಿ ಆಫೀಸು, ಕಚೇರಿಗಳನ್ನು ಅವಲಂಬಿಸಿರಬಹುದಾದ ವಿದ್ಯಾವಂತ ತರುಣರಿಗೆ, ಅವರ ಸುಪ್ತ ಪ್ರತಿಭೆ ಮತ್ತು ವಿಶಿಷ್ಟ ಅಭಿರುಚಿಯನ್ನು ಮನಗಾಣಿಸಿ, ಆ ಪ್ರತಿಭೆಯನ್ನು ಸ್ವತಂತ್ರ ಉದ್ಯೋಗ ನಿರ್ಮಾಣಕ್ಕೆ ಹೇಗೆ ಬಳಸಬಹುದು ಮತ್ತು ಅದನ್ನು ಬಳಸಲು ಬ್ಯಾಂಕು ಯಾವ ರೀತಿಯಲ್ಲಿ ನೆರವನ್ನು ನೀಡುವುದು ಎಂದು ತೋರಿಸಿಕೊಡುವುದು. ಇಂತಹ ಯೋಜನೆಯೊಂದು ನಾಡಿನಲ್ಲೇ ಮೊದಲನೆಯದಾಗಿದ್ದು, ನಿರುದ್ಯೋಗಿ ವಿದ್ಯಾವಂತರು ಈ ಯೋಜನೆಯಲ್ಲಿ ಸಾಕಷ್ಟು ಉತ್ಸಾಹ ತೋರಿದಲ್ಲಿ ಬ್ಯಾಂಕು, ರಾಷ್ಟ್ರೀಯ ಧ್ಯೇಯ ಧೋರಣೆಗಳನ್ನೂ, ಜನಪದದ ಆರ್ಥಿಕ—ಸಾಮಾಜಿಕ ಜೀವನವನ್ನು ಅರಳಿಸುವ ಗುರಿಯನ್ನು ಮುಟ್ಟುವುದೆಂದು ಹಾರೈಸಲಾಗಿದೆ.

ನಿವೃತ್ತರಾದ ರಾಮಯ್ಯ ರೈಯವರಿಗೆ ವಿದಾಯ ಸತ್ಕಾರ

ಉಡುಪಿ, ತಾ. 16, ಡೆಪ್ಯುಟಿ ಸುಪರಿಂಟೆಂಡೆಂಟ್ ಓಫ್ ಪೋಲೀಸ್ ಶ್ರೀ ಕೆ. ರಾಮಯ್ಯ ರೈಯವರು ತಾ. 14.4.70ರಂದು ತಮ್ಮ ಅಧಿಕಾರದಿಂದ ನಿವೃತ್ತರಾದರು. ಮಂಗಳೂರಿನ ಎ. ಎಸ್. ಪಿ. ಶ್ರೀ ಸಾಂಗ್ಲಿಯಾನ ಅವರು ಶ್ರೀ ರೈಯವರಿಂದ ತಾತ್ಕಾಲಿಕವಾಗಿ ಅಧಿಕಾರ ವಹಿಸಿ ಕೊಂಡಿರುವರು. ತಾ. 15ರಂದು ಶ್ರೀ ರೈಯವರಿಗೆ ಜಿಲ್ಲಾ ಎಸ್. ಪಿ. ಶ್ರೀ ಕೆ. ಬಾಲಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರ ನಡೆಯಿತು. ಸರ್ಕಲ್ ಇನ್ಸ್‌ಪೆಕ್ಟರ್ ಸಯ್ಯದ್ ಅಬ್ಬಾಸ್ ಹುಸೇನರು ಸ್ವಾಗತಿಸಿ ಶ್ರೀ ರೈಯವರ ದಕ್ಷತೆ, ಹಿರಿಯ ಗುಣಗಳನ್ನು ಪ್ರಶಂಸಿಸಿ ಅವರು ಸಹೋದ್ಯೋಗಿಗಳಿಗೂ ಕಿರಿಯ ಅಧಿಕಾರಿಗಳಿಗೂ ನೀಡುತ್ತಿದ್ದ ಮಾರ್ಗದರ್ಶನವನ್ನು ಸ್ಮರಿಸಿದರು. ಪಿ. ಡಬ್ಲ್ಯು. ಡಿ. ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಲಕ್ಷ್ಮಣ ಶೆಟ್ಟರು ಶ್ರೀ ರೈಯವರು ತಮ್ಮ ನಿಷ್ಪಕ್ಷಪಾತ ಮತ್ತು ಪ್ರಾಮಾಣಿಕತೆಗಳಿಂದ ಕಾರ್ಯನಿರ್ವಹಿಸಿ ಪೋಲೀಸ್ ಇಲಾಖೆಗೇನೇ ಕೀರ್ತಿ ತಂದಿದೆ ದಕ್ಷತೆಗಾಗಿ ಮೆಚ್ಚುಗೆ ಸೂಚಿಸಿ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ರೈಯವರ ಆದರ್ಶ ಗುಣಗಳನ್ನು ಕೊಂಡಾಡಿದರು.

ಶ್ರೀ ರೈಯವರು ತಮಗೆ ಕೊಟ್ಟ ಸತ್ಕಾರಕ್ಕಾಗಿ ವಂದನೆಗಳನ್ನು ಅರ್ಪಿಸುತ್ತಾ ದೇಶದ ಈಗಿನ ಅಸ್ಥಿರತೆಯಿಂದಾಗಿ ಪೋಲೀಸರು ಮುಂದೆ ದುರ್ದಿನಗಳನ್ನು ಎದುರಿಸಬೇಕಾಗಬಹುದೆಂದರಲ್ಲದೆ ಯಾವುದೇ ರಾಜಕೀಯ ಪಕ್ಷಗಳಿಗೆ ಬಲಿಯಾಗದೆ ತಾಳ್ಮೆಯಿಂದ ವರ್ತಿಸಿ ಒಳ್ಳೆಯ ನಡತೆಯನ್ನು ಬೆಳೆಸಿಕೊಳ್ಳಬೇಕೆಂದು ಕಿರಿಯ ಅಧಿಕಾರಿಗಳಿಗೆ ಸಲಹೆಯಿತ್ತರು. ಕುಂದಾಪುರದಲ್ಲಿಯೂ ಅಸಂಖ್ಯಾತ ನಲ್ಲಿಯೂ ರೈಯವರಿಗೆ ಸತ್ಕಾರ ಕೂಟಗಳು ಜರಗಿದವು.

ನಮ್ಮ ಜಿಲ್ಲೆಯವರೇ ಆದ ಶ್ರೀ ರೈಯವರ 30 ವರ್ಷಕ್ಕೂ ಮಿಕ್ಕಿ ಸೇವೆಸಲ್ಲಿಸಿದ ಹಿರಿಯ ಅಧಿಕಾರಿಗಳಲ್ಲೊಬ್ಬರಾಗಿದ್ದಾರೆ.

ಬ್ರಹ್ಮಾವರ ಪದ್ಮನಾಭ ಪೈಗಳ ನಿಧನ

ಬ್ರಹ್ಮಾವರದ ಪ್ರಮುಖ ವ್ಯಾಪಾರಿಗಳೂ ಸರಳ ಸಾಧು ಸ್ವಭಾವದ ಧರ್ಮನಿಷ್ಠರೂ ಜನಾದರಣೀಯ ಸಮಾಜ ಸೇವಾನಿರತರೂ ಆಗಿದ್ದ ಶ್ರೀ ಬ್ರಹ್ಮಾವರ ಪದ್ಮನಾಭ ಪೈಯವರು ತಾ. 13-4-70ನೇ ಮುಂಜಾನೆ ಹೃದಯಾಘಾತದಿಂದ 67ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಶ್ರೀ ಪೈಗಳು ಮರಣಕಾಲದ ವರೆಗೂ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಾಗಿ ಸರಳ ಮತ್ತು ಪ್ರಾಮಾಣಿಕ ಜೀವನ ನಡೆಸಿ ಜನಪ್ರಿಯರಾಗಿದ್ದರು. ಜನಸಾಮಾನ್ಯರೊಡನೆ ಕಲೆತು ಬೆರೆತು ಅವರ ಸುಖ ದುಃಖಗಳಲ್ಲಿ ಸಹಭಾಗಿಗಳಾಗಿ ಸಾಧ್ಯವಾದ ಸಹಾಯ ಮಾಡುವುದು ಶ್ರೀ ಪೈಗಳ ನೆಚ್ಚಿನ ಕೆಲಸವಾಗಿತ್ತು.

ಶ್ರೀ ಪೈಗಳು ಸ್ವತಃ ಚಿಕ್ಕಪ್ರಮಾಣದ ಉದ್ಯಮ ಸ್ಥಾಪಿಸಿ ಸತತ ಪರಿಶ್ರಮದಿಂದ ವಿಜಯಿಗಳಾಗಿದ್ದರಲ್ಲದೆ ಕೈಮಗ್ಗದ ಮತ್ತು ಸಣ್ಣ ಉದ್ಯಮಗಳಿಗೆ ವಿವಿಧ ರೀತಿಯಲ್ಲಿ ಸಹಕಾರ ನೀಡುತ್ತಿದ್ದರು. 1938ರಿಂದ ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರ್‌ರಾಗಿದ್ದು ಬ್ಯಾಂಕ್ ರಾಷ್ಟ್ರೀಕರಣವಾಗುವ ವರೆಗೂ ಬ್ಯಾಂಕಿನ ಸೇವೆಗೈಯುತ್ತಿದ್ದರು. ಅವರು ಹನುಮಾನ್ ಟ್ರಾನ್ಸ್‌ಪೋರ್ಟ್ ಮೊದಲಾದ ಸಂಸ್ಥೆಗಳಲ್ಲಿಯೂ ಡೈರೆಕ್ಟರ್‌ರಾಗಿದ್ದು ಸೇವೆಸಲ್ಲಿಸಿದ್ದರು.

ಬೆಂಗಳೂರಲ್ಲಿ ಮಂಗಳೂರು ಬೆನಿಫಿಟ್ ಚಿಟ್ ಫಂಡ್ ಶಾಖೆ

ತಾ. 10-4-70ರಂದು ಬೆಂಗಳೂರಿನ ಕೆ. ಜಿ. ಸಿ ಆಲಯಂ ಮೈನ್ ರೋಡಿನಲ್ಲಿರುವ ಕಾಫಿ ಕಟ್ಟಡದಲ್ಲಿ ಮಂಗಳೂರು ಬೆನಿಫಿಟ್ ಚಿಟ್‌ಫಂಡ್ ಪ್ರೈವೇಟ್ ಲಿ. ನ ಶಾಖೆಯೊಂದು ಶ್ರೀ ಟಿ. ಆರ್. ಶಾಮಣ್ಣ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಾಜ್ಯದ ದಿವಾನಗಾರಿಕಾ ಮಂತ್ರಿ ಶ್ರೀ. ಎಚ್. ಸಿ. ಲಿಂಗಾರೆಡ್ಡಿಯವರಿಂದ ಉದ್ಘಾಟಿಸಲ್ಪಟ್ಟಿತು.

ಸಹಾಯಾರ್ಥ ನಾಟಕ

ಉಡುಪಿ ತಾ. 16, ಉಡುಪಿ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಕೆನರಾ ಎಲಿಮೆಂಟರಿ ಶಾಲಾ ಕಟ್ಟಡದ ಸಹಾಯಾರ್ಥವಾಗಿ ಫಿಷರೀಸ್ ಫ್ಯಾಕ್ಟರಿ ರಂಗಮಂಟಪದಲ್ಲಿ ಶ್ರೀ ಕೆ. ಎನ್. ಟೈಲರ್ ಬಳಗದವರಿಂದ 'ಯಾನ್ ಸನ್ಯಾಸಿ ಆಪೆ' ಎಂಬ ತುಳು ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಶ್ರೀ ಮಧ್ವರಾಜರು ತುಳುನಾಡ ಸಂಸ್ಕೃತಿಯನ್ನು ಪ್ರಶಂಸಿಸಿ ಈ ನಾಟಕದ ನೈಜತೆಯನ್ನು ಶ್ಲಾಘಿಸಿದರು. ಈ ಕಟ್ಟಡಕ್ಕೆ ರೂ. 15 ಸಾವಿರವನ್ನು ಉಡುಪಿ ತಾಲೂಕು ಬೋರ್ಡ್ ಸಹಾಯ ಧನವಾಗಿ ಕೊಡಲಿರುವುದೆಂದೂ ಉಳಿದದನ್ನು ಸಾರ್ವಜನಿಕ ನೆಲೆಯಲ್ಲಿ ಕೂಡಿಸಬೇಕಾಗಿದೆಯೆಂದೂ ನುಡಿದರು.

'ಕ್ಯಾನ್ಸರ್' ಬಂದೊಡನೆ

ಕಾಲನ ದವಡೆ ಸೇರಲೇ ಬೇಕೆಂದಿಲ್ಲ

ಈ ರೋಗದ ಮುನ್ಸೂಚನೆಗಳನ್ನು ಗಮನಿಸಿ ಆರಂಭದಲ್ಲೆ ಚಿಕಿತ್ಸೆ ನಡೆಸಿದರೆ ಸಾವು ನೋವುಗಳಿಂದ ರಕ್ಷಿಸಬಹುದು.

ಈ ಏಳು ಸೂಚಕ ಲಕ್ಷಣಗಳನ್ನು ಅಲಕ್ಷಿಸಬೇಡಿರಿ

ಗುಣವಾಗದ ಯಾವುದೇ ಹುಣ್ಣು,
ದೇಹದ ಯಾವುದೇ ಭಾಗ ಕಟ್ಟಿ ಕಟ್ಟುವುದು,
ವಿಪರೀತ ಸ್ರಾವ,
ಮಚ್ಚೆಗಳಲ್ಲಿ ಆಗುವ ಬದಲಾವಣೆಗಳು,
ಯಾವಾಗಲೂ ಅಜೀರ್ಣ ಮತ್ತು ನುಂಗುವಾಗ ತೊಡಕು,
ಒರಟು ಸ್ವರ ಹಾಗೂ ಕೆಮ್ಮು,
ಮಲ ವಿಸರ್ಜನೆಯ ಅಭ್ಯಾಸದಲ್ಲಿ ಬದಲಾವಣೆ.

ಈ ಸೂಚನೆಗಳು ತಲೆದೋರಿದೊಡನೆ ಅದು 'ಕ್ಯಾನ್ಸರ್' ಎಂದರ್ಥವಲ್ಲ. ರೋಗದ ಸಾಧ್ಯತೆ ಅಲ್ಲಿದೆ. ಅದೇನೆಂಬುದನ್ನು ನಿಮ್ಮ ಬದಲು ನಿಮ್ಮ ಡಾಕ್ಟರರು ನಿರ್ಣಯಿಸಲಿ. ಏಕೆಂದರೆ ಉಲ್ಬಣಾವಸ್ಥೆಗೆ ತಲಪುವ ಮೊದಲು ಈ ರೋಗವನ್ನು ಗುಣಪಡಿಸ ಬಹುದಾಗಿದೆ.

ಹೆಚ್ಚಿನ ವಿವರಗಳಿಗೆ: ಕಾರ್ಯದರ್ಶಿ,
ಕ್ಯಾನ್ಸರ್ ಸೊಸೈಟಿ ಆಫ್ ಸೌತ್ ಕೆನರಾ,
ಮಣಿಪಾಲ.

ಇವರೊಂದಿಗೆ ಸಂಪರ್ಕ ಬೆಳೆಸಿರಿ, ಮತ್ತು ಈ ಸಂಸ್ಥೆಯು ಶೀಘ್ರದಲ್ಲಿ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ತೆರೆಯಲಿರುವ 'ಕ್ಯಾನ್ಸರ್ ಡಿಟೆಕ್ಷನ್ ಕ್ಲಿನಿಕ್' ಗಳೊಂದಿಗೆ ಸಹಕರಿಸಿರಿ.

++++++++

ಸ್ಥಳದಾನ ಮಾಡಿದವರು:

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ:
ಮಣಿಪಾಲ.

17—4—70ರಂದು
ಉಡುಪಿ ಸಂತೆಕಟ್ಟೆಯಲ್ಲಿ
ಪ್ರಾರಂಭವಾದ

ಹೊಟೇಲ್ 'ಚಿರಾಗ್'

ಹಾರ್ದಿಕ ಶುಭಾಶಯಗಳು

++++

ನವಯುಗ
ಉಡುಪಿ

ದಯಮಾಡಿ ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ.
ಕಾವುಕೋಟೆ, ಉಡುಪಿ, ದ. ಕ.

ಭಾರತದ ಕೈಮಗ್ಗ ಕೈಗಾರಿಕೆ

ಭಾರತದ ಕೈಮಗ್ಗ ಕೈಗಾರಿಕೆ ತನ್ನದೇ ಆದ ಸುದೀರ್ಘ ಪರಂಪರೆಯನ್ನು ಹೊಂದಿದ್ದು ದೇಶದ ಹಸ್ತಕೌಶಲ್ಯ ನೈಪುಣ್ಯತೆಗೆ ಜೀವಂತ ಸಾಕ್ಷಿಯಾಗಿದೆ. ನಮ್ಮ ಗೃಹಕೈಗಾರಿಕೆ ವಸ್ತ್ರಗಳು ಪ್ರಾಚೀನ ನಾಗರೀಕತೆಗಳಾದ ಬ್ಯಾಬಿಲೋನಿಯಾ, ಈಜಿಪ್ಟ್, ಗ್ರೀಕ್ ಮತ್ತು ರೋಂಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ್ದವು. ಈಗಲೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಗೃಹಕೈಗಾರಿಕಾ ವಸ್ತ್ರಗಳು ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುತ್ತಿದ್ದು ಹಿಂದಿನಷ್ಟೇ ಜನಪ್ರಿಯತೆಯನ್ನು ಗಳಿಸಿವೆ. ಮಹಾತ್ಮ ಗಾಂಧೀಜಿ ಅವರು ಹೇಳಿರುವಂತೆ ಕೈಮಗ್ಗ ಕೈಗಾರಿಕೆ ನಮ್ಮ ದೇಶದಲ್ಲಿ ಎರಡನೇ ಶ್ವಾಸಕೋಶದಂತಿದೆ. ಇತ್ತೀಚಿನ ದಿನಗಳಲ್ಲಿ ಈ ಕೈಗಾರಿಕೆಯಲ್ಲಿ ನವೀನ ಯಂತ್ರೋಪಕರಣಗಳನ್ನು ಹಾಗೂ ನವೀನ ವಿನ್ಯಾಸಗಳನ್ನು ಬಳಸಲಾಗುತ್ತಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಈ ಕೈಗಾರಿಕೆ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೈಮಗ್ಗ ಕೈಗಾರಿಕೆಯ ಅಭಿವೃದ್ಧಿ ಅಷ್ಟೇ ಅಲ್ಲದೆ ಈ ಕೈಗಾರಿಕೆಯ ಉತ್ಪಾದನಾ ವಸ್ತುಗಳ ಗುಣಮಟ್ಟವನ್ನು ಕಾಪಾಡುವುದು ಸ್ವದೇಶಿ ಮಾರುಕಟ್ಟೆಯನ್ನು ದೊರಕಿಸಿಕೊಡುವುದು ಈ ಕ್ರಮಗಳ ಮುಖ್ಯ ಗುರಿಯಾಗಿದೆ. ಕೈಮಗ್ಗ ಕೈಗಾರಿಕಾ ಅಭಿವೃದ್ಧಿ ದೃಷ್ಟಿಯಿಂದ ಅಖಿಲಭಾರತ ಕೈಮಗ್ಗ ಮಂಡಳಿಯನ್ನು ಸ್ಥಾಪಿಸಲಾಗಿದೆ. ಈ ಮಂಡಳಿ ಕೈಗೊಂಡ ಎಲ್ಲ ಕ್ರಮಗಳಿಂದಾಗಿ ಕೈಮಗ್ಗ ಬಟ್ಟೆಗಳ ಉತ್ಪಾದನಾ ಪ್ರಮಾಣ ಕಳೆದ ಹದಿನಾರು ವರ್ಷಗಳಲ್ಲಿ 1000 ದಶಲಕ್ಷ ಮೀಟರ್‌ಗಳಿಂದ 3200 ದಶಲಕ್ಷ ಮೀಟರ್‌ಗಳಿಗೆ ಏರಿದೆ. ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸ್ವಯಂಚಾಲಿತ ಯಂತ್ರಗಳ ಬಳಕೆ ತರಬೇತಿ ಸಾಲ ಹೊಸ ವಿನ್ಯಾಸಗಳನ್ನು ರೂಪಿಸುವುದು ಇವುಗಳ ಬಗ್ಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ.

ವಿದ್ಯುಚ್ಛಾಲಿತ ಮಗ್ಗಗಳು

ಕೈಮಗ್ಗ ಕೈಗಾರಿಕೆಗಳಲ್ಲಿ ವಿದ್ಯುತ್ ಚಾಲಿತ ಮಗ್ಗಗಳನ್ನು ಉಪಯೋಗಿಸುವುದರಿಂದಾಗಿ ಪ್ರಯೋಜನಗಳ ಬಗ್ಗೆ ಈಗ ಹೆಚ್ಚಿನ ಗಮನ ನೀಡಲಾಗುತ್ತಿದೆ. ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹತ್ತಿಬಟ್ಟೆ ಮತ್ತು ಇತರ ಕ್ಷೇತ್ರಗಳ 100,000 ಕ್ಕೂ ಹೆಚ್ಚಿನ ವಿದ್ಯುಚ್ಛಾಲಿತ ಮಗ್ಗಗಳನ್ನು ಬಳಸಲು ಉದ್ದೇಶಿಸಲಾಗಿದೆ. ಈ ನಾಲ್ಕನೇ ಯೋಜನೆಯಲ್ಲಿ ಕೈಮಗ್ಗಗಳು ವಿದ್ಯುಚ್ಛಾಲಿತ ಮಗ್ಗಗಳು ಹಾಗೂ ಮಾರ್ಗಗಳಲ್ಲಿ 5,000 ಕ್ಕೂ ಹೆಚ್ಚು ಮೀಟರುಗಳಷ್ಟು ಬಟ್ಟೆ ನೇಯಲು ಉತ್ಪಾದಿಸಲು ಯೋಜಿಸಲಾಗಿದೆ. ಈ ಕೈಗಾರಿಕೆ ಆರಂಭದಿಂದ ಸ್ಥಾಪಿತವಾಗಿಲ್ಲವಾದುದರಿಂದಾಗಿ ಈ ಕ್ಷೇತ್ರದಲ್ಲಿ ಸಹಕಾರಿ ಸಂಘಗಳಿಗೆ ಸ್ಪರ್ಧಾತ್ಮಕ ವ್ಯವಸ್ಥೆ ಮತ್ತು ಇತರ ಸೇವಾ ಸಂಸ್ಥೆಗಳಿಗಾಗಿ ಹೆಚ್ಚು ಕ್ರಮ ಕೈಗೊಳ್ಳಲಾಗುತ್ತಿದೆ. ನೇಯ್ಗೆಗಾರರ ಸಹಕಾರ ಸಂಘಗಳಿಗೆ ನೀಡಿದ ನೆರವಿನಿಂದಾಗಿ 1953ರಲ್ಲಿ 0·7 ದಶಲಕ್ಷ ಮೀಟರುಗಳಷ್ಟು ಇದ್ದ ಉತ್ಪಾದನೆ ನಾಲ್ಕನೆಯ ಯೋಜನೆಯ ಆರಂಭದ ವೇಳೆಗೆ 15 ದಶಲಕ್ಷ ಮೀಟರುಗಳಿಗೆ ಏರಿತು. ಕೈಮಗ್ಗ ಕೈಗಾರಿಕೆ ತಾಂತ್ರಿಕ ಅಭಿವೃದ್ಧಿ ಕಡೆಗೂ ಕಷ್ಟ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಹಕಾರ ಪದ್ಧತಿ ಮೂಲಕ ಮಗ್ಗಗಳ, ಅರ್ಧ ವಿದ್ಯುತ್‌ಚಾಲಿತ ಮಗ್ಗಗಳು, ಹತ್ತಿ ವಾಷಿಂಗ್ ಯಂತ್ರಗಳು, ಚಿತ್ರ ನೇಯ್ಗೆಯ ಮಗ್ಗಗಳು, ಮತ್ತಿತರ ನವೀನ ವಸ್ತುಗಳನ್ನು ಒದಗಿಸಿಕೊಡಲಾಗಿದೆ. ಈ ಕೈಗಾರಿಕೆಯಲ್ಲಿ ಉತ್ಪಾದಿಸುವ ವಸ್ತುಗಳು ಬೇರೆಬೇರೆ ದೇಶಗಳಲ್ಲಿ ಹೆಚ್ಚು ಹೆಚ್ಚು ಮಾರಾಟವಾಗುತ್ತಿವೆ.

ಹೊಸ ವಿಧಾನ ಮತ್ತು ವಿನ್ಯಾಸ

ಭಾರತ ಕುಶಲ ಕೈಮಗ್ಗದ ವಸ್ತ್ರಗಳು ತನ್ನದೇ ಸಾಂಪ್ರದಾಯಿಕ ವೈಶಿಷ್ಟ್ಯಗಳನ್ನು ಪಡೆದಿವೆ. ಸೌಂದರ್ಯದಲ್ಲಿ ಬಣ್ಣಗಳ ಅಂದ ಬಟ್ಟೆಯ ವರ್ಣ ಸಂಯೋಜನೆ, ಸುಂದರ ವಿನ್ಯಾಸ ಮತ್ತು ಕೈಕೌಶಲ್ಯ ವಸ್ತ್ರ ಕೈಗಾರಿಕೆಯಲ್ಲಿ ಸಾವು ಗಳಿಸಿರುವ ಅಮೂಲ್ಯ ನೈಪುಣ್ಯ ಇವು ನಮ್ಮ ಕೌಶಲ್ಯ ವಸ್ತುಗಳಿಗಿರುವ ಜನಪ್ರಿಯತೆಯ ಗುಟ್ಟು. ಹತ್ತಿ ಬಟ್ಟೆಗಳೇ ಅಲ್ಲದೆ ಉಣ್ಣೆಬಟ್ಟೆಗಳು, ರೇಷ್ಮೆ ಬಟ್ಟೆಗಳೂ ರೇಷ್ಮೆ ಜನಪ್ರಿಯತೆ ಪಡೆದಿವೆ. ರೇಷ್ಮೆ ಬಟ್ಟೆಗಳಲ್ಲಿ ಮಟ್ಕಾ, ಟಸರ್, ಎರಿ ಮತ್ತು ಮೂಗಾ ಎಂಬ ನಾಲ್ಕು ಬೇರೆಬೇರೆ ವಿಧಗಳಿವೆ. ಈ ವಿಧಗಳು ಭಾರತದಲ್ಲಿ ಮಾತ್ರ ದೊರೆಯುತ್ತವೆ. ಬನಾರಸ್ ಸೀರೆಗಳು, ಕಾಂಚೀಪುರಂ ರೇಷ್ಮೆ ಸೀರೆಗಳು ಮತ್ತು ಕಾಶ್ಮೀರ ಸೀರೆಗಳಲ್ಲಿ ಗೋಚರಿಸುವ ಹಸ್ತಕೌಶಲ್ಯ ನಿಪುಣತೆ ಪ್ರಶಂಸನೀಯ. ಸಿದ್ಧಪಡಿಸಿದ ಬಟ್ಟೆಗಳಿಗೂ ಹೊರದೇಶಗಳಲ್ಲಿ ಹೆಚ್ಚು ಬೇಡಿಕೆ ಇದೆ.

ಕೈಮಗ್ಗ ಬಟ್ಟೆಗಳ ರಫ್ತು

ಕೈಮಗ್ಗ ಬಟ್ಟೆಗಳನ್ನು ಹೊರದೇಶಗಳಿಗೆ ರಫ್ತು ಮಾಡುತ್ತಿರುವುದರಿಂದಾಗಿ ಭಾರತ ಹೆಚ್ಚು ಹೆಚ್ಚು ವಿದೇಶ ವಿನಿಮಯವನ್ನು ಗಳಿಸುತ್ತಿದೆ. 1968–69ರಲ್ಲಿ ಕೈಮಗ್ಗ ರೇಷ್ಮೆ ಬಟ್ಟೆ ಮತ್ತು ವಸ್ತ್ರಗಳಿಂದ ಸುಮಾರು 36 ದಶಲಕ್ಷ ರೂ.ಗಳಷ್ಟು ಮೌಲ್ಯದ ವಿದೇಶಿ ವಿನಿಮಯ ಗಳಿಸಿದ್ದೇವೆ. ಹೆಚ್ಚು ಬೆಲೆ ಬಾಳುವ ಕೈಮಗ್ಗದ ಪಂಚೆ, ಲುಂಗಿಗಳು, ಬಣ್ಣದ ಬೆಡ್‌ಶೀಟ್‌ಗಳು ಸೀರೆಗಳು ಮತ್ತು ಶರ್ಟ್ ಬಟ್ಟೆಗಳು ಈಗ ಹೆಚ್ಚು ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿರುವ ವಸ್ತುಗಳಾಗಿವೆ. ವಿಶ್ವದ ಎಲ್ಲ ರಾಷ್ಟ್ರಗಳೂ ಭಾರತದಿಂದ ಕೈಮಗ್ಗ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿವೆ ಎಂದರೆ ಅತಿಶಯೋಕ್ತಿಯಾಗಲಾರದು.

ಶೇಷಭಾಗ [illegible]

ಮರಿಯಮ್ ಬೀಬ್ ಮನ ಬದಲಾಯಿಸಿದಳು

ಕೈಲಾಸನಗರ ಅಂಕಲೇಶ್ವರ. ಅಲ್ಲಿಂದ ಕೊಂಚ ದೂರದ ಬಸ್‌ಸ್ಟಾಪ್ ಒಂದರಲ್ಲಿ ಮರಿಯಮ್ ಬೀಬ್ ನಿಂತಿದ್ದಳು. ಅವಳಿಗೆ ಕೊಂಚ ದೂರದಲ್ಲಿ ಅಶ್ರಫಭಾಯ್ ಬಸ್ಸಿಗಾಗಿ ಕಾಯುತ್ತಿದ್ದ. ಬಸ್ಸು ಬರುವ ದಾರಿಯನ್ನೊಮ್ಮೆ ನಿಟ್ಟಿಸಿ ನೋಡಿದ, ಮರುಕ್ಷಣ ಅವನ ಮುಖಭಾವ ಬದಲಿಸಿತು. ಅವನು ಏನನ್ನು? ಕಂಡು ಒಮ್ಮೆಲೆ ಆಶ್ಚರ್ಯ ಚಕಿತನಾದಂತಿತ್ತು. ಮುಸ್ಲಿಮಳಾದ ಮರಿಯಮ ಬೀಬ್‌ಳ ಈ ಚಿಹ್ನೆಯನ್ನು ಹೇಗೆ ಧರಿಸಿದಳು? ಅದು ನಮ್ಮ ಧರ್ಮಕ್ಕೆ ಸಮ್ಮತವಾದುದೇ? ಇವೇ ಮೊದಲಾದ ಹಲವು ಹನ್ನೊಂದು ಪ್ರಶ್ನೆಗಳು ಅವನ ತಲೆಯಲ್ಲಿ ಮಿಂಚಿ ಗೊಂದಲಕ್ಕೆ ಕಾರಣವಾದುವು. ಕುತೂಹಲವನ್ನು ತಡೆಯಲಾಗದೇ ಮರಿಯಮಬೀಬ್‌ಳನ್ನು ಈ ಬಗ್ಗೆ ಕೇಳಿಯೇ ಬಿಡಬೇಕೆಂದು ನಿರ್ಧರಿಸಿ ಅವಳ ಕಡೆಗೆ ನಡೆದ.

ಬೀಬ್, ನೀನು ಕೆಂಪು ತ್ರಿಕೋಣದ ಚಿಹ್ನೆಯನ್ನು ಧರಿಸುವುದೇ? ನೀನು ಕುಟುಂಬಯೋಜನಾ ಕಾರ್ಯಕರ್ತೆಳು ಯಾವಾಗಿನಿಂದ? ಕುಟುಂಬಯೋಜನೆ ನಮ್ಮ ಧರ್ಮಕ್ಕೆ ಸಮ್ಮತವಾದದ್ದೆ?

ಎಂತ ಒಂದೇ ಉಸಿರಿನಲ್ಲಿ ಪ್ರಶ್ನೆಗಳ ಮಾಲೆಯನ್ನು ಎಸೆದ.

ಬೀಬ್ ದೃಢ ನಿರ್ಧಾರದ ಸ್ವರದಲ್ಲಿ ಹೇಳಿದಳು:—

"ಕುಟುಂಬಯೋಜನೆ ನಮ್ಮ ಧರ್ಮಕ್ಕೆ ಏಕೆ ವಿರುದ್ಧವಲ್ಲ? ಅದು ಜನತಾ ಕಲ್ಯಾಣಕ್ಕಾಗಿಯೇ ರೂಪುಗೊಂಡ ಯೋಜನೆ. ಅಲ್ಲಾಹ ಮಕ್ಕಳಿಗೆ ಒಳ್ಳೆಯದನ್ನುಂಟುಮಾಡುವ ಯಾವುದೇ ವಿಷಯಕ್ಕೇ ಆಗಲಿ ಯಾವ ಧರ್ಮವೂ ವಿರೋಧಿಸಲಾಗದು.

"ಅಲ್ಲಾನ ವಾಣಿಯನ್ನು ಕೇಳಿದ್ದೀಯಾ. ಮನುಷ್ಯ ತನಗೆಷ್ಟು ಹೊರಲು ಸಾಧ್ಯವೋ ಅಷ್ಟು ಹೊರೆಯನ್ನು ಮಾತ್ರ ಹೊರಬೇಕು. ದುಂದುಗಾರನಾಗಬಾರದು ಎಂದು ಅವನು ಹೇಳಿಲ್ಲವೇ? ಆದ್ದರಿಂದ ಕುಟುಂಬ ನಮ್ಮ ಬೆಳವೂ ಹಿತಮಿತವಾಗಿರಬೇಕು.

ಮಕ್ಕಳು ದೇವರು ನೀಡಿರುವ ಅಮೂಲ್ಯ ಕೊಡುಗೆ. ಕಾರಣ ನಾವು ಅವರನ್ನು ಹೆಚ್ಚು ಕಾಳಜಿಯಿಂದ ಜೋಪಾನ ಮಾಡಬೇಕು. ಬಹಳ ಕೇಳ ಮಕ್ಕಳು ಭಾರವಾದ ಚಿನ್ನದ ಮುದ್ದೆಗಳಿದ್ದಂತೆ, ಅವುಗಳನ್ನು ಹೊರುವುದೂ ಭಾರ, ಬಿಟ್ಟು ಹೋಗುವಂತೆಯೂ ಇಲ್ಲ. ಇಂತಹ ಒಂದು ಸಂದಿಗ್ಧಕ್ಕೆ ಸಿಲುಕುತ್ತೀಯೆ" ಎಂದು ನುಡಿದಳು.

ಅಶ್ರಫಭಾಯ್‌ಗೆ ಈಗ ಎಳ್ಳಷ್ಟು ಸಂಶಯ ಉಳಿದಿಲ್ಲ. ಮರಿಯಮ್‌ಬೀಬ್‌ಳ ವ್ಯವಹಾರಜ್ಞಾನ ಅವನ ಮನಸ್ಸಿನಲ್ಲಿ ಅಡಗಿದ್ದ ಭೀತಿಯ ಭೂತವನ್ನು ಹೊಡೆದೋಡಿಸಿತು. ತನ್ನ ಸ್ವಹಿತವನ್ನು ಕುರಿತು ಮುಂದೆ ಬೀಬ್‌ಗೆ ಹೇಳಿದ. ಕುತೂಹಲದಿಂದ ... ಹೇಳ ತೊಡಗಿದ

"ಬೀಬ್ ನನಗೆ ಐದು ಮಕ್ಕಳು. ಇನ್ನು ಹೆಚ್ಚು ಮಕ್ಕಳಾಗುವುದು ನನಗೆ ಇಷ್ಟವಿಲ್ಲ. ನನ್ನ ಹೆಂಡತಿಯ ಆರೋಗ್ಯ ಚೆನ್ನಾಗಿಲ್ಲ. ಮಕ್ಕಳ ಲಾಲನೆ—ಪಾಲನೆ ಅವಳೊಬ್ಬಳೇ ಮಾಡಲಾರಳು. ನಮ್ಮ ಕುಟುಂಬ ಬೆಳೆಯುವುದಕ್ಕೆ ನಿರ್ಬಂಧ ಹಾಕಬೇಕೆಂದು ನಾನು ಸದಾ ಯೋಚಿಸುತ್ತೇನೆ. ಅದಕ್ಕಾಗಿ ಏನು ಮಾಡಬೇಕೆಂದು ನನಗೆ ಹೊಳೆಯುತ್ತಿಲ್ಲ.

ಈಗ ನನಗೆ ಮನದಟ್ಟಾಗಿದೆ. ಕುಟುಂಬಯೋಜನೆ ವೈಯುಕ್ತಿಕ ವ್ಯವಹಾರ. ನನಗಂತೂ ಅದು ಬೇಕೇಬೇಕು. ನನ್ನ ಹೆಂಡತಿ ಮತ್ತು ನಾನು ಇಬ್ಬರೂ ಸೇರಿ ಈ ಬಗ್ಗೆ ನಿರ್ಧರಿಸಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಶಸ್ತ್ರಚಿಕಿತ್ಸೆಗೆ ಸಿದ್ಧ.

ಬೀಬ್ ದಯವಿಟ್ಟು ನನ್ನ ಹೆಸರು ಬರೆದುಕೊಳ್ಳುವಿರಾ? ನೀವು ಯಾವಾಗೆಂದರೆ ಆವಾಗ ಕುಟುಂಬ ಯೋಜನಾ ಕೇಂದ್ರಕ್ಕೆ ಬಂದು ಚಿಕಿತ್ಸೆ ಮಾಡಿಸಿ ಕೊಳ್ಳುತ್ತೇನೆ... ಮರಿಯಮ್‌ಬೀಬ್ "ಹಾಗೇ ಆಗಲಿ" ಎಂದಳು. ಅಷ್ಟರಾಗಲೇ ಮುಂದುವರಿಯುತ್ತಿದ್ದಂತೆಯೇ ಬಸ್ ಬಂದಿತು. ಬೀಬ್ ಖುಷಿಯಿಂದ ಬಸ್ಸನ್ನೇರಿದಳು.

ಮಂಗಳವಾರ ಬೀಬ್ ಬಸ್‌ಸ್ಟಾಪಿನಲ್ಲಿ ಅರ್ಧಗಂಟೆ ಕಳೆದರೂ ಅದು ವ್ಯರ್ಥವಾಗಲಿಲ್ಲ. ಅಶ್ರಫಭಾಯ್ ... ಚಿಂತನೆಗಾಗಿ ಕಾಲ ವ್ಯಯವಾಗಿತ್ತು. ಸದುದ್ದೇಶ ಸಾಧನೆಗಾಗಿ ಇದೊಂದು ಅಪೂರ್ವ ಗಳಿಗೆ ...ವೆ?

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

NAVAYUGA 23-4-1970
Registered with the Registrar of News Papers for India under No. K. N. 3646/'57

REGD. No. B. G. 176
LICENCE No. 33
Licensed to Post without Prepayment

ನಿಸರ್ಗ ಸಿರಿಯ ನೆಲೆ—

ಕೊಲಂಬಿಯಾ

ಕೊಲಂಬಿಯಾ ದಕ್ಷಿಣ ಅಮೇರಿಕಾದ ವಾಯುವ್ಯ ಭಾಗದಲ್ಲಿರುವ ಪುಟ್ಟ ದೇಶ. ಇದರ ಒಟ್ಟು ಜನಸಂಖ್ಯೆ 19·2 ದಶಲಕ್ಷ, ಇದು 4 40,000ಗಳಷ್ಟು ಚದುರ ಮೈಲಿಗಳ ವಿಸ್ತೀರ್ಣವುಳ್ಳದಾಗಿದೆ. ಕರಿಬಿಯನ್ ಮತ್ತು ಪೆಸಿಫಿಕ್ ಸಮುದ್ರಗಳ ಅಂಚಿನಲ್ಲಿರುವುದರಿಂದ ಹಾಗೂ ಪನಾಮಾ ಕಾಲುವೆ ಈ ದೇಶದ ಅತಿಸಮೀಪ ಇರುವುದು, ಈ ಕಾರಣಗಳಿಂದ ಕೊಲಂಬಿಯಾ ಅಂತರರಾಷ್ಟ್ರೀಯ ಆರ್ಥಿಕ ಕ್ಷೇತ್ರದಲ್ಲಿ ಬಹು ಮಹತ್ವ ಸ್ಥಾನವನ್ನು ಗಳಿಸಿಕೊಂಡಿದೆ. ಮೆಸ್ಟಿಜೋ, ಯುರೋಪಿಯನರು, [illegible], ನೀಗ್ರೋ ಜನರು ಈ ದೇಶದಲ್ಲಿ ನೆಲೆಸಿದ್ದಾರೆ. ಸ್ಪ್ಯಾನಿಷ್ ದೇಶದ ರಾಷ್ಟ್ರಭಾಷೆ.

ಕೊಲಂಬಿಯಾ 1830ರಲ್ಲಿ ಗಣರಾಜ್ಯವಾಗಿ ಉದಯಿಸಿತು. 1951ರ ವರೆಗೆ ಅಂತರ್ಯುದ್ಧ ಈ ದೇಶದಲ್ಲಿ ನಡೆಯುತ್ತಲೇ ಇತ್ತು. 1951ರಲ್ಲಿ ಈ ದೇಶದ ಎರಡು ಪ್ರಮುಖ ರಾಜಕೀಯ ಪಕ್ಷಗಳು ಒಂದಾಗಿ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿತು. ಅಂದಿನಿಂದ ಇಲ್ಲಿ ರಾಜಕೀಯ ಸ್ಥಿರತೆ ನೆಲಸಿದೆ.

ಕೊಲಂಬಿಯಾದಲ್ಲಿ ಖನಿಜ ಮತ್ತು ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ. ಪೆಟ್ರೋಲಿಯಂ ಉತ್ಪಾದನೆಯಲ್ಲಿ ಇಡೀ ದಕ್ಷಿಣ ಅಮೇರಿಕಾದಲ್ಲಿಯೇ ಕೊಲಂಬಿಯಾ ಎರಡನೇ ಸ್ಥಾನ ಗಳಿಸಿದೆ. ಬಂಗಾರ ಮತ್ತು ಪಚ್ಚೆ-ರತ್ನಗಳ ಉತ್ಪಾದನೆಯಲ್ಲೂ ಇದು ಒಳ್ಳೇ ಹೆಸರು ಗಳಿಸಿದೆ. ಜಗತ್ತಿನಲ್ಲಿ ಪ್ಲಾಟಿನಂ ಲೋಹ ದೊರೆಯುವ ಕೆಲವೇ ಪ್ರದೇಶಗಳಲ್ಲಿ ಕೊಲಂಬಿಯಾವೂ ಒಂದಾಗಿದೆ. ಎಣ್ಣೆ, ಸಿಮೆಂಟ್, ಕಲ್ಲಿದ್ದಲು, ಉಪ್ಪು, ಸಿಲಿಕಾ, ಜಿಪ್ಸಮ್ ಖನಿಜಗಳಲ್ಲಿ ಈ ದೇಶ ಸ್ವಾವಲಂಬನೆ ಗಳಿಸಿದೆ. ಇಲ್ಲಿ ವರ್ಷದಲ್ಲಿ ಸುಮಾರು 10 ರಿಂದ 27 ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲು ಉತ್ಪಾದನೆಯಾಗುವುದೆಂದು ಅಂದಾಜು ಮಾಡಲಾಗಿದೆ.

ಎರಡನೆ ಮಹಾಯುದ್ಧಾನಂತರದ ಅವಧಿಯಲ್ಲಿ ಕೊಲಂಬಿಯಾ ಲ್ಯಾಟಿನ್ ಅಮೇರಿಕಾ ಹಾಗು ಇನ್ನಿತರ ರಾಷ್ಟ್ರಗಳಿಗಿಂತ ಹೆಚ್ಚು ಮುನ್ನಡೆದಿದೆ. ಕೊಲಂಬಿಯಾ ಸರ್ಕಾರ ಹಾಗು ಖಾಸಗಿ ಬಂಡವಾಳಗಾರರು ದೇಶದಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಕೈಕೊಂಡ ಕ್ರಮಗಳೇ ಈ ಅಭಿವೃದ್ಧಿಗೆ ಮುಖ್ಯ ಕಾರಣ. 1969ರಲ್ಲಿ ಜನವರಿ—ಮೇ ತಿಂಗಳ ಅವಧಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಪ್ರಮಾಣ ಶೇಕಡ 9ರಷ್ಟು ಹೆಚ್ಚಿದೆ. ಸಿಮೆಂಟ್ ಉತ್ಪಾದನೆಯೂ ರಫ್ತು ವ್ಯಾಪಾರ ಗಣನೀಯವಾಗಿ ಏರಿದೆ. ವಾಹನಗಳ ಉತ್ಪಾದನೆ 1970ರಲ್ಲಿ ದ್ವಿಗುಣಗೊಂಡಿದೆ. ಇನ್ನಿತರ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ ಕೊಲಂಬಿಯಾದ ವ್ಯಾಪಾರ ಸಮತೋಲನ ಅನೇಕ ವರ್ಷಗಳಿಂದ ಹೆಚ್ಚು ಅನುಕೂಲಕರವಾಗಿದೆ. ತನ್ನ ವಿದೇಶಿ ವ್ಯಾಪಾರದಿಂದಾಗಿ 1967ರಲ್ಲಿ ಇದು 13 ದಶಲಕ್ಷ ಡಾಲರ್‌ಗಳನ್ನು ಗಳಿಸಿತು. 1968ರಲ್ಲಿ ಈ ದೇಶದ 1200 ದಶಲಕ್ಷ ಡಾಲರ್‌ಗಳಷ್ಟು ಬೆಲೆ ಬಾಳುವ ವಸ್ತುಗಳನ್ನು ರಫ್ತು ಮಾಡಿದ್ದಿತ್ತು.

ಕಾಫಿ, ಪೆಟ್ರೋಲ್, ಬಾಳೆಹಣ್ಣು, ಸಕ್ಕರೆ ಮತ್ತು ತಯಾರಿಸಿದ ವಸ್ತುಗಳು ಕೊಲಂಬಿಯಾದಿಂದ ಹೊರದೇಶಗಳಿಗೆ ರಫ್ತಾಗುತ್ತಿರುವ ಮುಖ್ಯವಾದ ವಸ್ತುಗಳು. ಕೊಲಂಬಿಯಾ ವಿದೇಶಾಂಗ ವಾಣಿಜ್ಯದಲ್ಲಿ ಕಾಫಿ ಪ್ರಮುಖ ಸ್ಥಾನಗಳಿಸಿದೆ. ಇದು ಪ್ರತಿವರ್ಷ ಶೇಕಡ 70ರಷ್ಟು ವಿದೇಶಿ ವಿನಿಮಯ ಗಳಿಸಿ ಕೊಡುವುದು. ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ತಯಾರಿಸಿದ ವಸ್ತುಗಳು ರಫ್ತಾಗುತ್ತಿರುವುದು ಈ ದೇಶದ ಸಂಪದಭಿವೃದ್ಧಿಯ ಸಂಕೇತ. ಬಳಕೆ ವಸ್ತುಗಳ ಆಮದು ಪ್ರಮಾಣ 1966ರಲ್ಲಿ ಶೇಕಡ 6ರಷ್ಟು ಮಾತ್ರವಿತ್ತು. ಯಂತ್ರಗಳು, ವಾಹನಗಳಿಗೆ ಅಗತ್ಯವಾದ ವಸ್ತುಗಳು, ಕಟ್ಟಡ ನಿರ್ಮಾಣ ವಸ್ತುಗಳು, ಇವು ಕೊಲಂಬಿಯಾ ದೇಶ ಆಮದು ಮಾಡಿಕೊಳ್ಳುತ್ತಿರುವ ಕೆಲವು ವಸ್ತುಗಳು. ಕಚ್ಚಾವಸ್ತುಗಳನ್ನು ಈ ದೇಶ ಆಮದು ಮಾಡಿಕೊಳ್ಳುತ್ತಿದೆ.

ವಿನೋಬಾ ಸಾನ್ನಿಧ್ಯದಲ್ಲಿ

(ವಿ.ಎಂ.ಭಟ್ಟ)

ವಿನೋಬಾ ಹೇಳಿದರು— ನಾನು ಜನರ ಭೂಮಿಕೆಯ ಮೇಲೆಯೇ ಜನರಿಗೆ ಸಲಹೆ ಕೊಡುತ್ತೇನೆ. ಇಂದು ಶಿಕ್ಷಣವು ಸರಕಾರದ ಕೈಯಲ್ಲಿಯೇ ಇದೆ. ಆದ್ದರಿಂದ ಶಿಕ್ಷಣದ ಇನ್ನೊಂದು ಪ್ರಭಾವೀ ಸಾಧನವನ್ನು ವ್ಯಾಪಾರಿಗಳ ಕೈಗೆ ಬಿಡುವದು ಸರಿಯಲ್ಲ. ಸಿನೆಮಾ ಮತ್ತು ಶಿಕ್ಷಣ ಎರಡೂ ಜನತೆಯ ಕೈಯಲ್ಲೇ ಬಂದಾಗ ಸಿನೇಮಾಕ್ಕೆ ಏನು ಮಾಡಬೇಕೆಂಬ ಕುರಿತು ಬೇರೊಂದೇ ಸಲಹೆ ಕೊಟ್ಟೇನು.

ಇಂದು ಜನಸಂಖ್ಯೆ ಭಾರೀ ಬೆಳೆದಿದೆ. ಅದಕ್ಕೆ ವಿಜ್ಞಾನವೇ ಕಾರಣ. ವಿಜ್ಞಾನದಿಂದಾಗಿಯೇ ಬಾಲಮರಣ ಕಡಿಮೆಯಾಗಿದೆ ಮತ್ತು ಆಯುಷ್ಯವು ಹೆಚ್ಚಾಗಿದೆ. ಆದರೆ ಜನರು ಇಂದು ಮೊದಲಿಗಿಂತ ಹೆಚ್ಚು ಕಾಮುಕರಾಗಿದ್ದಾರೆ ಎನ್ನಬಹುದು. ಪ್ರಾಚೀನ ಕಾಲದಲ್ಲಿಯೇ ಜನರು ಹೆಚ್ಚು ಕಾಮುಕರಿರುತ್ತಿದ್ದರು. ಮಧ್ಯಂತರ ಕಾಲದಲ್ಲಿ ಹೆಚ್ಚು ಕ್ರೋಧಿಗಳಿರುತ್ತಿದ್ದರು. ಮತ್ತು ಇಂದಾದರೋ ಹೆಚ್ಚು ಲೋಭಿಗಳಾಗಿದ್ದಾರೆ.

ಆನಂದ ಪ್ರಾಪ್ತಿಯು ಮನುಷ್ಯನ ಧ್ಯೇಯವಲ್ಲ. ಆನಂದಶುದ್ಧಿಯೇ ಧ್ಯೇಯವಾಗಬೇಕು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಆನಂದಶುದ್ಧಿಯನ್ನು ಹುಡುಕುತ್ತ ಹೋಗುವದೇ ಮಾನವ ಜೀವನದ ಸಾಧನೆಯಾಗಬೇಕು.

ಆನಂದಶುದ್ಧಿಯಿಂದಾಗಿ ಮಾನವ ಸೇವೆಗೆ ನಾವು ಹೆಚ್ಚು ಪವಿತ್ರರಾಗುತ್ತೇವೆ. ಆನಂದಕ್ಕೂ ಸಹ ಮೋಹಿತರಾಗಬಾರದೆಂದು ಗೌಡಪಾದರು ಹೇಳಿದ್ದಾರೆ. ಧ್ಯಾನಸಮಾಧಿಯು ಸಹ ಒಂದು ಭೋಗವೇ. ಗುಲಾಬಜಾಮೂನ ತಿನ್ನುವದಕ್ಕಿಂತ ಧ್ಯಾನಸಮಾಧಿಯು ಹೆಚ್ಚು ಪರಿಶುದ್ಧವಾದ ಆನಂದವೆಂಬ ಮಾತು ಬೇರೆ. ಚರ್ಚೆಯು ಸಹ ಒಂದು ತರಹದ ಆನಂದಭೋಗ ಆಗಬಾರದು.

ಚಿತ್ರಮಿಲನಕ್ಕಾಗಿ ಹೈದರಾಬಾದಿನಿಂದ ಬಂದ ಬಿರದೀಚಂದ್ರರು ತುಂಬಾ ಉತ್ಸಾಹದಿಂದ ಸಾಹಿತ್ಯ ಪ್ರಚಾರ ಮಾಡುತ್ತಲಿದ್ದಾರೆ. ಅವರಿಗೆ ಸಂಬೋಧಿಸಿ ವಿನೋಬಾ ಹೇಳಿದರು, ನಿಮ್ಮ ಪತ್ರಿಕೆ ಪ್ರತಿಯೊಂದು ಊರಿಗೂ ಮುಟ್ಟುವಂತಾಗಬೇಕು. ಒಟ್ಟಿಗೆ ರಾಜ್ಯದಾನ ಮಾಡುತ್ತೀರಿ. ಆದರೆ ಅದೇ ಹೊತ್ತಿಗೆ ಪ್ರತಿಯೊಂದು ಊರಿಗೂ ನಿಮ್ಮ ಸಂದೇಶ ಮುಟ್ಟುತ್ತಿರಬೇಕೆಂತೆ ಏನು ವ್ಯವಸ್ಥೆ ಮಾಡುತ್ತೀರಿ? ಹಾಗೆ ವ್ಯವಸ್ಥೆ ಮಾಡಿಸಿದ್ದ ಕೆಲಸ ಹೇಗೆ ಮುನ್ನಡೆದೀತು? ಈ ವರ್ಷದ ಕೊನೆಯ ಒಳಗಂತೂ ಭಾರತದ ಬಹುಭಾಗವು ಗ್ರಾಮದಾನದಲ್ಲಿ ಬಂದುಬಿಡುವುದು. ಅಷ್ಟೆಲ್ಲ ಆಗಿಯೂ ಗ್ರಾಮಜನತೆಗೆ ಸಂದೇಶ ಮುಟ್ಟುತ್ತಿರುವ ವ್ಯವಸ್ಥೆಯಾಗದಿದ್ದರೆ ಸರಪಳಿಯ ಕೊಂಡಿಯೊಂದು ಮುರಿದಂತಾದೀತು. ಇಂದು ನೀವು ಲಕ್ಷಾಂತರ ಸಾಹಿತ್ಯಸೆಟ್ಟು ಮಾರಿದ್ದೀರಿ. ಆನಂದದ ಸಂಗತಿ. ಸಾವಿರದ ಮೇಲಿಂದ ಲಕ್ಷದ ಸಂಖ್ಯೆ ತಲಪುತ್ತಿರುವಿರೆಂಬುದೇ ಆನಂದ, ಕೋಟಿಯ ಮಾತಾಡುವದೂ ಅವಶ್ಯವಿದೆ. ವ್ಯಾಪಾರಸ್ಥರು ಸಾಹಿತ್ಯಪ್ರಚಾರ ಚೆನ್ನಾಗಿ ಮಾಡಿದರು. ಆದರೆ ಪತ್ರಿಕೆಯ ಕೆಲಸವೂ ಅವಶ್ಯವಾಗಿ ಆಗಲೇಬೇಕು.

(ಸಂಕಲನ— ವಾ. ಅ. ಜೋಡಿಕ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಸೇರುವ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಮನೆ-ಮದ್ದು
ಗೃಹವೈದ್ಯ — ರೂ.2 - 00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2.00

ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರ
ಸಂಕಲನ— ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯತಿ ಇದೆ.

ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 30—4—1970 ಸಂಪುಟ 49 ಸಂಚಿಕೆ 34

ರಾಜಕೀಯ ದ್ವೇಷಾಗ್ನಿಯಲ್ಲಿ ಸಿ. ಸು.

ಲೇಖಕರು: ಶ್ರೀ ಶಿವಶಂಕರ.

ಸ್ವೇಚ್ಛಾ ಮತದಾನದ ರಾಜಕೀಯ ದೀಪವನ್ನು ಕಂಡು ಸುಬ್ರಹ್ಮಣ್ಯಂ ಪತಂಗ ಅದನ್ನು ಚುಂಬಿಸಲು ಓಡಿಬಂತು, ಹಾರಿಬಂತು. ಬೆಳಕಿನಂತೆ ಕಂಡಲ್ಲಿ— ದುರ್ಗಕ್ಕೊ ಬೈಲಿಗೂ—ಅದು ಹಾರಾಡಿತು. ಕೊನೆಯಲ್ಲಿ ತಮಿಳುನಾಡಿನಲ್ಲಿ, ಅದರ ಹುಟ್ಟೂರಿನಲ್ಲಿ ಅದಕ್ಕೆ ದೀಪ ಕಂಡು ಬಂತು. ಅದಕ್ಕೆರಗಿತು.

ತಮಿಳುನಾಡಿನಲ್ಲಿ ಕಾಂಗ್ರೆಸ್ ಅಧಿಕಾರ ಪಥದಿಂದ ಕಾಲ ಜಾರಿ ಬಿದ್ದ ಮೇಲಾದರೂ ಅದಕ್ಕೆ ಬುದ್ಧಿ ಬರಬೇಕಾಗಿತ್ತು. ಪಕ್ಷದೊಳಗಿನ ಪೋಟಾ ಪೋಟಿಯೇ ಸೋಲಿನ ಕಾರಣವೆಂಬುದನ್ನು ಕಾಂಗ್ರೆಸ್ ಕಂಡುಕೊಳ್ಳಬೇಕಾಗಿತ್ತು. ಅದರ ಬದಲು ಕಾಮರಾಜರ ಕಾಂಗ್ರೆಸ್ಸು, ಸುಬ್ರಹ್ಮಣ್ಯಂರವರ ಕಾಂಗ್ರೆಸ್ಸೆಂದು ಇಬ್ಭಾಗವಾಗಿ ಬಿಟ್ಟಿತು. ಅಧಿಕಾರದ ಅಮಲಿನಲ್ಲಿ ಅದೇನು ಮಾಡಿಕೊಳ್ಳುತ್ತಿದ್ದಾರೆಂಬುದರ ಅರಿವು ಅವರಿಗಿನ್ನೂ ಆಗಿರುವುದಿಲ್ಲ. ಅದರ ಫಲವೇ ಈಗ ನಡೆದಿರುವ ರಾಜ್ಯಸಭೆಯ ಚುನಾವಣೆಯ ಫಲಿತಾಂಶ. ತಮಿಳುನಾಡಿನ ಕಾಂಗ್ರೆಸ್ಸಿನ ವಿಧಾನಸಭಾ ಸದಸ್ಯರೆಲ್ಲರು ಸೇರಿದರೂ ಇಬ್ಬರನ್ನು ರಾಜ್ಯಸಭೆಗೆ ಕಳುಹಿಸುವದು ಸ್ವಲ್ಪ ಕಷ್ಟವೇ ಸರಿ. ಅದರಲ್ಲೂ ಪಾಲಾದ ಮನೆ ಹಾಳಾದ ಮನೆಯೇ ಸರಿ. ಕಾಂಗ್ರೆಸ್ಸು ಇಬ್ಭಾಗವಾಗಲು ಕಾರಣ ಪುರುಷರಾಗಿದ್ದವರಲ್ಲಿ ಶ್ರೀ ಕಾಮರಾಜರು ಪ್ರಮುಖರು. ಶ್ರೀಮತಿ ಇಂದಿರಾಗಾಂಧಿ ಮಾತ್ರ ಅವರ ಬಳಿ ಪಂದ್ಯಕ್ಕೆ ಬರಬಹುದು. ಕಾಮರಾಜರ ಹುಟ್ಟೂರು ತಮಿಳುನಾಡೆಂದ ಮೇಲೆ ಅಲ್ಲಿ ಅವರಿಗೆ ವಿಧಾನಸಭೆಗೆ ಆರಿಸಿಕೊಂಡು (ಮಲಗಿಕೊಂಡೇ ಚುನಾಯಿಸಿಕೊಂಡು) ಬರಲು ಸಾಧ್ಯವಾಗದಿದ್ದರೂ ಪ್ರಯಾಸಪಟ್ಟು ಲೋಕಸಭೆಗೆ ಆರಿಸಿಕೊಂಡು ಹೋಗುವಷ್ಟು ಬೆಂಬಲ ಇರದಿರಲು ಇಂದು ಸಾಧ್ಯ ಇರುವದಿಲ್ಲ. ಗೆದ್ದ ಕಾಮರಾಜರು ರಾಜ್ಯಸಭೆಯಲ್ಲಿ ಕುಳಿತುಕೊಂಡಿರುವ ಸದಸ್ಯ ಆನಂದನ್‌ರವರನ್ನು ಆನಂದದಿಂದ ಆಯ್ಕೆ ಮಾಡಿ ಪುನರ್ ರಾಜ್ಯಸಭೆಗೆ ಅವರು ಆನಂದದಿಂದ ಹೋಗುವಂತೆ ದಾರಿ ಮಾಡಿಕೊಟ್ಟರು. ಆ ಗುಂಪಿನ ಬಳಿ ಮೀಸಲು ಮತಗಳಿದ್ದವು. ಕಾಂಗ್ರೆಸ್ಸಿನಲ್ಲಿ ಗಂಡಸರಿಗೂ ಹೆಣ್ಣುಗಳಿಗೂ ಬಡಿದಾಟವಿದ್ದರೂ ಅದು ಚುನಾವಣೆಯ ವರೆಗೆ ಮಾತ್ರ. ಇತರ ಮತದರ ಬದಲು ವೈಷಮ್ಯವಾಗಿಯೇ ಪರಿಣಮಿಸಿರುತ್ತದೆ. ಆದದರಿಂದ ಅವರ ಅಧಿಕವಿದ್ದ ಮತಗಳನ್ನು ಹೆಣ್ಣು ಕಾಂಗ್ರೆಸ್ಸಿನವರಿಗೆ ಕೊಡದ ಹೋಗಿಸವರಿಗೆ ಕೊಡಲೂ ಹಿಂಜರಿಯಲಿಲ್ಲ. ಹೆಣ್ಣು ಕಾಂಗ್ರೆಸ್ಸು ಎಂದರೆ ಇಂದಿರಾ ಕಾಂಗ್ರೆಸ್ಸಿನ ಪತಿಯಿಂದ ಸ್ವತಃ ಅದರ ತಾತ್ಕಾಲಿಕ ಅಧ್ಯಕ್ಷರಾಗಿದ್ದ ಸಿ. ಸುಬ್ರಹ್ಮಣ್ಯಂರವರೇ ಅಭ್ಯರ್ಥಿಯಾಗಿ ಚುನಾವಣೆಗೆ ಇಳಿದರು. ಸುಬ್ರಹ್ಮಣ್ಯಂರವರು ಮಧ್ಯಪ್ರದೇಶದಿಂದ ಲೋಕಸಭೆಗೆ ಹೋಗಲು ಚುನಾವಣೆಗೆ ನಿಲ್ಲಬಹುದಾಗಿತ್ತು. ಮಧ್ಯ ಪ್ರದೇಶದಿಂದ ಪ್ರ.ಸ.ಪಾ. ಹರಿವಿಷ್ಣು ಕಾಮತ್‌ರವರು ಲೋಕಸಭೆಗೆ ಹಿಂದೆ ಆರಿಸಲ್ಪಟ್ಟಿದ್ದರು. ಈಗ ಭಾ. ಜ. ಸಂ.ದ ಜಗನ್ನಾಥರಾವ್ ಜೋಶಿಯವರು ಅಲ್ಲಿಂದ ಲೋಕಸಭೆಗೆ ಹೋಗಿರುವರು. ಅದೇ ರೀತಿ ಅಲ್ಲಿಂದ ಬಂದು ಕರ್ನಾಟಕದಿಂದ ಲೋಕಸಭೆಗೆ ಹೋದವರೂ ಇದ್ದಾರೆ, ಅದೂ ಕಾಂಗ್ರೆಸ್ಸಿನಿಂದ. ಹಾಗಿದ್ದರೂ ಸುಬ್ರಹ್ಮಣ್ಯಂರವರೇಕೆ ಸುಮ್ಮನೆ ದಗಲು ವ್ಯಕ್ತಪಡಿಸುತ್ತಿದ್ದಾರೆ 'ಕುಂಬಳಕಾಯಿ ಕಳ್ಳ! ಕುಂಬಳಕಾಯಿ ಕಳ್ಳ!' ಬೊಬ್ಬೆ ಹಾಕಿದಾಗ ಭುಜ ಮುಟ್ಟಿಕೊಂಡರಂತೆ. ಹಾಗೇನೇ ಸುಬ್ರಹ್ಮಣ್ಯಂ ಅವರು ತಮ್ಮ ಭುಜವದಕ್ಕೆ ಶುಭ್ರವಾಗಿಲ್ಲವೆಂದು ಬಿಟ್ಟರು. ಹಿಂದೆ ಅವರೊಮ್ಮೆ ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ತಮಿಳುನಾಡಿನಲ್ಲಿ ಹಿಂದಿ ವಿರುದ್ಧ ಬೊಬ್ಬೆ ಎದ್ದಾಗ ಅವರು ಶೀಲ-ನಿಯಮಗಳಿಗೆ ತಿಲಾಂಜಲಿ ಇತ್ತು, ಮಂತ್ರಿ ಪದವಿ ಬಿಟ್ಟು ತಮಿಳುನಾಡಿಗೆ ಓಡಿ ಬಂದಿದ್ದರು. ಈ ರೀತಿ ಓಡುವಂಥವರನ್ನು ಜನರು ಪುನಃ ಆರಿಸುವರಂತೇ? ಅವರೇನೋ ಮಂತ್ರಿ ಪದವಿ ಶಾಶ್ವತವೆಂದು ನಂಬಿಕೊಂಡಿದ್ದರೇನೋ, ಏನೋ! ಆ ಕಳ್ಳ ಮನಸ್ಸು ಈಗ ಬಂದ ಅವರನ್ನು ದೂರಕ್ಕೋಡಿಸಿದೆ. ದುರ್ಗದಲ್ಲಿ ನಿಂತರೆ ತನ್ನ ಹಿಂದಿ ವಿರುದ್ಧ ಮನೋಭಾವನೆಯಿಂದಾಗಿ ಅಲ್ಲಿನ ಹಿಂದಿ ಪ್ರೇಮಿಗಳು ತನಗೆ ಮತದಾನ ಮಾಡಲಾರರೆಂಬುದು ಅವರ ದೃಢ ನಂಬಿಕೆ. ತಮಿಳುನಾಡಿನ ಜನರು ಅವರನ್ನು ಜರಿದು ಬಿಟ್ಟರು. ದುರ್ಗದಲ್ಲಿ ದಾಡುಕಲು ಅವರು ಸಿದ್ಧವಾಗಿಲ್ಲ. ಉಳಿದ ಉಪಾಯ ಹಿಂದಿನ ಬಾಗಿಲು. ಅದಕ್ಕಾಗಿ ಕಾಂಗ್ರೆಸ್ಸ ನಡೆಯಿತು. ಜಗಜೀವನರಾಮ್—ಇಂದಿರಾ ಕಾಂಗ್ರೆಸ್ಸ— ಹಿಂಬಾಲಕರಾಗಿ ತಮಿಳುನಾಡು ವಿಧಾನ ಸಭೆಯಲ್ಲಿರುವವರು ಕೇವಲ ಎಂಟು ಸದಸ್ಯರು. ಅದಕ್ಕಿಂತಲೂ ಕಡಿಮೆ ಸದಸ್ಯರಿರುವ ಪಕ್ಷಗಳೂ ತಮಿಳುನಾಡು ವಿಧಾನ ಸಭೆಯಲ್ಲಿ ಇವೆ. ಅಲ್ಲದೆ ದ್ರಾವಿಡ ಮುನ್ನೇಟ್ರ ಕಳಗಂನವರು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಾಗ ಇಂದಿರಾಜೀಯವರ ಅಭ್ಯರ್ಥಿಗೆ ಪೂರ್ಣ ಬೆಂಬಲ ಇತ್ತಿದ್ದರಲ್ಲದೆ, ಅಂದಿನಿಂದ ಮಧುರ ಬಾಂಧವ್ಯ ಬೆಳೆಯುತ್ತಿರುವಾಗ, ಸುಬ್ರಹ್ಮಣ್ಯಂರವರು ಇಂದಿರಾದೇವಿಯವರ ಅಭ್ಯರ್ಥಿಯಾಗಿ ನಿಲ್ಲುವಾಗ ದ್ರಾ. ಮು. ಕಂದವರು ಸುಮ್ಮಗೆ ಬಿಟ್ಟರೆಯೇ? ಎಷ್ಟಾದರೂ ಒಂದು ರೀತಿಯ ಮತದಾನ ಮಾಡುವ ಒಪ್ಪಂದ ಇದೆಯಲ್ಲವೇ? ಅದಕ್ಕಾ ಸಿದ್ಧತೆ ನಡೆಯಿತು. ಇತ್ತ ತನ್ನ ಕಾಲಮೇಲೆ ತಾವು ನಿಲ್ಲಲಾಗದೆ ಹಿಂದೆ ಮುಂದೆ ನೋಡುತ್ತಿದ್ದ ಪಕ್ಷಗಳವರನ್ನು ಕಂಡು ಒಲಿಸಿಕೊಳ್ಳಲಾಯಿತು. ಸುಬ್ರಹ್ಮಣ್ಯಂರವರು ಅರ್ಥಮಂತ್ರಿ ಆಹಾರಮಂತ್ರಿ ಮುಖ್ಯಮಂತ್ರಿ ಮಂತ್ರಿಯಾದುದಾಗಿದ್ದರೆಂಬುದು ಇಲ್ಲೀ ಜ್ಞಾಪಕಕ್ಕೆ ಬರುವದು. ಅವರು ಲೆಕ್ಕ ಹಾಕಿದರು- ತಾವೊಂದು ಎಂಟು—ಹತ್ತು ಸದಸ್ಯರು, ಫಾರ್ವರ್ಡ್ ಬ್ಲಾಕಿನ ಐವರು, ಪ್ರವಾದ ನಾಲ್ವರು ಬಲಕಮ್ಯೂನಿಸ್ಟರು ಮೂವರು, ಸ್ವೇಚ್ಛೆಗಳು ಮೂವರು ಮತ್ತು ಪ್ರ. ಸ. ಪಾ ಹಾಗೂ ರಿಪಬ್ಲಿಕನ್ ಪಕ್ಷಗಳ ಒಬ್ಬೊಬ್ಬರು ಅಂದರೆ ಒಟ್ಟಿಗೆ ಮೂವತ್ತು ಮತಗಳಾದರೂ ಸಿಕ್ಕಿಯಾವು. ಅವು ಸಿಗಬೇಕಾದರೆ ಕೊಡು-ಕೊಳ್ಳಬೇಕಲ್ಲವೇ ದ್ರಾ. ಮು. ಕಕ್ಕೆ ಇಂದಿರಾಜೀಯವರ ಕೊಡುಗೆ ಬೇಕಾದಷ್ಟಿದೆ. ಕೊಂಡದ್ದು ಗಿರಿಯವರಿಗಾಗಿ ಇಪ್ಪತ್ತನಾಲ್ಕು ಮತಗಳನ್ನು. ಬಾಂಧವ್ಯ ಬೆಳೆದಲ್ಲಿ ಕ್ರಮಶಃ ಕೊಡು-ಕೊಳ್ಳು ಮುಂದರಿದೀತು. ಫಾರ್ವರ್ಡ್ ಬ್ಲಾಕ್ ಆದಾಗಲೇ ಪುನಃ ಪ್ರತ್ಯೇಕವಾಗಿತ್ತು. ಸುಭಾಸ್ ಬಾಬೂರವರು ಇದ್ದಾರೆಯೇನೆಂಬುದನ್ನು ವಿಚಾರಿಸಬೇಕೆಂಬುದು ಫಾ.ಬ್ಲಾ.ದ ಒಂದು ಬೇಡಿಕೆ. ಅದಕ್ಕೊಪ್ಪಿ ಒಂದು ಸಮಿತಿಯನ್ನು ರಚಿಸಲಾಯಿತು. ಫಾ. ಬ್ಲಾ. 'ಉಪಕಾರ ಸ್ಮರಣೆ' ಮಾಡಬೇಡವೇ? ಪ್ರ.ಸ.ಪಾ.ಕ್ಕೆ ಒಂದಿಷ್ಟು ಸಲುಗೆ ತೋರಿಸಲೇ ಬೇಕು. ಪ್ರ.ಸ.ಪಾ.ದ ಪ್ರಚಾರ ಮಾಡಿದವರಲ್ಲಿ ಇಂದಿರಾ ಗಾಂಧಿಯವರ ತಂದೆ ಜವಾಹರಲಾಲ ನೆಹರೂರವರು ಪ್ರಮುಖರು. ತಂದೆ ಧಾರಾಳ ಮನಸ್ಸು ಮಾಡಿ ಆ ಪಕ್ಷದವರನ್ನು ಮಂತ್ರಿಗಳನ್ನಾಗಿ, ರಾಜ್ಯಪಾಲರನ್ನಾಗಿ ನೇಮಿಸಿಕೊಂಡಿರುವಾಗ ಮಗಳೂ ಅಷ್ಟಿಷ್ಟಾದರೂ ಮನಸ್ಸು ಮಾಡಬೇಕಲ್ಲವೇ? ಅದಕ್ಕಾಗಿ ಮಹಾರಾಷ್ಟ್ರದಲ್ಲಿ ತಾವು ಪ್ರ.ಸ.ಪಾ.ದ ಅಭ್ಯರ್ಥಿಗೆ ಮತದಾನ ಮಾಡಬೇಕು. ಅವರು ತಮಿಳುನಾಡಿನಲ್ಲಿ ತಮ್ಮ ಅಭ್ಯರ್ಥಿಗೆ ಮತದಾನ ಮಾಡಬೇಕು—ಒಪ್ಪಂದವಾಯಿತು. ಇನ್ನುಳಿದುದೆಲ್ಲಾ ಚಿಲ್ಲರೆ ತಾನೇ? ಅದಕ್ಕೊಂದಿಷ್ಟು ಚಿಲ್ಲರೆ—ಪಿಲ್ಲರೆ ಅಷ್ಟೇ. ಆದೇ ಚಿಲ್ಲರೆ-ಪಿಲ್ಲರೆ ಪಿಸುಮಾತು ಕಿವಿಮಾತು ಪ್ರಚಾರ ಪಡೆದು ಬೊಬ್ಬೆಯಾಗಿ ಬಿಟ್ಟಿತು. ಇವರಲ್ಲದೆ ಗಿರಿಯವರಿಗೆ ಬೆಂಬಲವಿತ್ತಿರುವ ಮಾರ್ಕ್ಸ್ ಕಮ್ಯೂನಿಸ್ಟರೂ ತಮಿಳುನಾಡಿನಲ್ಲಿ ಹತ್ತು ಮಂದಿ ಇದ್ದಾರೆ.

ಚಂದಾದಾರರಲ್ಲಿ ವಿನಂತಿ

"ನವಯುಗ"ದ ಚಂದಾ ಬಾಕಿ ಇಟ್ಟವರು ದಯಮಾಡಿ ತಮ್ಮ ಬಾಕಿ ಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅಂತೂ ಈ ತಿಂಗಳಾಂತ್ಯದೊಳಗೆ ಹಣ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ. ಅದನ್ನಾದರೂ ದಯಮಾಡಿ ಸ್ವೀಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್

ಪುರಾಣಗಳು ಇತಿಹಾಸಗಳಲ್ಲ

೧

ವಿಶ್ವಾಸವಿಲ್ಲದವರು ಅಥವಾ ಅವುಗಳ ಪ್ರಕ್ರಿಯೆಗಳನ್ನು ಅರ್ಥವಿಸಿಕೊಳ್ಳಲು ಅಶಕ್ತರಾದವರು ಪುರಾಣಗಳನ್ನು ಓದ ಹೋದಾಗ ಭಾರಿ ಗೊಂದಲವುಂಟಾಗುತ್ತದೆ. ಇತಿಹಾಸ ಮತ್ತು ಪುರಾಣಗಳು ಬೇರೆ ಬೇರೆ ವಿದ್ಯೆಗಳೆಂದು ಸಂಸ್ಕೃತ ವಾಙ್ಮಯದಲ್ಲಿ ಪರಿಗಣಿಸಲಾಗಿದೆ. ಈ ಸತ್ಯವನ್ನೂ ಅವರು ತಿಳಿದಿರುವುದಿಲ್ಲ. ಇತಿಹಾಸವು ಪುರಾಣವಲ್ಲ; ಪುರಾಣ ಇತಿಹಾಸವಾಗುವುದೂ ಸಾಧ್ಯವಿಲ್ಲ. ಪುರಾಣಗಳಲ್ಲಿ ವಂಶ ಮತ್ತು ವಂಶಾನುಚರಿತಗಳ ಇತಿಹಾಸದ ವರ್ಣನೆಯಿರುತ್ತವೆ, ಇವು ಪೌರಾಣಿಕ ವರ್ಣನೆಗಳಾದುದರಿಂದ ವಿಶುದ್ಧ ಮಾನವೇತಿಹಾಸವಾಗುವುದಿಲ್ಲ. ಸಾಮಾನ್ಯವಾಗಿ ಖಗೋಳದ ಗ್ರಹ-ನಕ್ಷತ್ರಗಳ ವರ್ಣನೆಗಳಿಂದಲೂ ಇವು ಕೂಡಿರುತ್ತವೆ. ಇದನ್ನು ತಿಳಿಯದೆ ಪುರಾಣಗಳನ್ನು ಓದುವವನು, ಅದನ್ನು ಮಾನವೇತಿಹಾಸವೆಂದೇ ತಿಳಿಯುವವನು ಬಹಳ ಗೊಂದಲಕ್ಕೆ ಬೀಳುತ್ತಾನೆ. "ಕಶ್ಯಪ ವಂಶ ಋಷಿಯಿಂದ ನಮ್ಮ ಸೂರ್ಯನ ಉತ್ಪತ್ತಿಯಾಯಿತು" (ಬ್ರಹ್ಮ ಪುರಾಣ ೧-೬-೧). ಅದನ್ನು ತ್ವಷ್ಟನೆಂಬ ಬ್ರಾಹ್ಮಣನು ಸಾನುವಿನ ಮೇಲಿಂದ ಹೊತ್ತು ತಾರಿಸಿ, ಆಗ ಸಹಸ್ರಾರು ಚೂರು ಚೂರಾಗಿ ಆ ಚೂರುಗಳು ಚಲ್ಲಾಪಿಲ್ಲಿಯಾಗುತ್ತ' (ಬ್ರಹ್ಮ ಪುರಾಣ...೧-೩೨-೮೧) ಎಂಬ ನೋಡಿದೊಡನೆಯೇ ಅವನ ಮನಸ್ಸು ಗೊಂದಲಿತವಾಗುತ್ತದೆ— 'ಇದು ಹೇಗೆ ಸಾಧ್ಯ? ಸೂರ್ಯನ್ನ ನೂರರಷ್ಟು ಸುಳ್ಳು; ಇದು ನಿಜಕ್ಕೂ ಅಸಂಭವ.'

ಪುರಾಣ ಪಾಠಕನು "ಅಗಸ್ತ್ಯ"ನ ಮೂಲಾರ್ಥವನ್ನು ಅರಿಯದೆ ಓದುತ್ತಾನೆ. ಅಗಸ್ತ್ಯನು ಒಂದೇ ಬಾರಿ ಸಮುದ್ರದ ನೀರೆಲ್ಲವನ್ನು ಕುಡಿದು ಬರಿದಾಗಿಸಿಬಿಟ್ಟನು." (ಸ್ಕಂದ ಪುರಾಣ—ಖಂಡ ೨-೪) ಅಥವಾ "ವಿಂಧ್ಯ ಪರ್ವತವು ದಿನೇ ದಿನೇ ಎತ್ತರೆತ್ತರಕ್ಕೆ ಬೆಳೆಯುತಿತ್ತು. ಅಗಸ್ತ್ಯ ಮುನಿಯು ಅದನ್ನು ದಾಟಿ ಮುಂದ ಹರಿದನು. 'ನಾನು ಮರಳಿ ಬರುವ ವರೆಗೆ ಬೆಳೆಯಬೇಡ' ಎಂಬ ಕಟ್ಟಾಜ್ಞೆಯನ್ನು ಮಾಡಿದನು. ಅಂದಿನಿಂದ ವಿಂಧ್ಯ ಪರ್ವತವು ಬೆಳೆಯುವುದನ್ನು ನಿಲ್ಲಿಸಿತು; ಅದು ಅಗಸ್ತ್ಯನ ಪುನರಾಗಮನವನ್ನೇ ನಿರೀಕ್ಷಿಸಿಕೊಂಡಿದೆ." (ಸ್ಕಂದ ಪುರಾಣ ೪—೧)— ಈ ಕಥೆಗಳು ಕಟ್ಟುಕಥೆಗಳಂತೆಯೇ ಅನಿಸದಿದ್ದಾವೆ? ಪ್ರಾಚೀನ ಸಂಸ್ಕೃತ ವಾಙ್ಮಯಗಳಿಂದ ಇತಿಹಾಸ ಮತ್ತು ಪುರಾಣಗಳು ಬೇರೆ ಬೇರೆ ವಿದ್ಯೆಗಳು ಎಂಬುದು ಸುಸ್ಪಷ್ಟ—ಇದನ್ನು ಈ ಕಥಾಪಾಠಕರು ಮನಸಿನಲ್ಲಿಟ್ಟುಕೊಳ್ಳಬೇಕು. ಶತಪಥ ಬ್ರಾಹ್ಮಣದ (೧೧-೫-೭-೯) "ಇತಿಹಾಸ ಪುರಾಣವಿತ್ಯಹರಹಃ ಸ್ವಾಧ್ಯಾಯಮಧೀತೇ ಮತ್ತು ಗೋಪಥ ಬ್ರಾಹ್ಮಣದ (೧-೧-೧೦) "ಇತಿಹಾಸ ಪುರಾಣಂ" ಮೊದಲಾದುವು ಇದನ್ನೇ ಸಮರ್ಥಿಸುತ್ತವೆ.

ಭೂಮಿಯ ಉತ್ಪತ್ತಿಯ ವಿಚಾರದಲ್ಲಿ ಅಥರ್ವ ವೇದ ಹೀಗೆ ಹೇಳುತ್ತದೆ....ಬಂದೆ ಇದು ಹೇಗಿತ್ತು, ವೈಜ್ಞಾನಿಕರು ಅದನ್ನು ಹೇಗೆ ತಿಳಿದಿದ್ದಾರೆ, ಎಂಬ ತತ್ತ್ವವನ್ನು ಅರಿತವನು ಪುರಾಣವಿದನೆನಿಸುತ್ತಾನೆ. (ಯೇ ತ ಆಸೀದ್ ಭೂಮಿಃ ಪೂರ್ವಾ ಯಾಮದ್ಧಾತಯ ಇದ್ವಿದುಃ| ಯೋ ವೈ ತಾಂ ವಿದ್ಯಾನ್ನಾಮಥಾ ಸಮನ್ಯೇತ ಪುರಾಣವಿತ್ ||— ಅಥರ್ವವೇದ ೧೧-೮-೭) ಪುರಾಣವೆಂದರೆ ಸೃಷ್ಟಿವಿದ್ಯೆಯೆಂಬುದು ಈ ಉಕ್ತಿಯಿಂದ ಸಿದ್ಧವಾಗುತ್ತದೆ. ಸರ್ವವೇದ ಭಾಷ್ಯಕಾರರಾದ ಶ್ರೀ ಸಾಯಣಾಚಾರ್ಯರೂ ವೇದಗಳಲ್ಲಿ ಬಂದಿರುವ "ಪುರಾಣ" ಶಬ್ದಕ್ಕೆ ಸೃಷ್ಟಿವಿದ್ಯೆಯೆಂಬ ಅರ್ಥವನ್ನೇ ನೀಡಿದ್ದಾರೆ. (ಋಗ್ವೇದದ ಭೂಮಿಕೆ ಮತ್ತು ಐತರೇಯ ಬ್ರಾಹ್ಮಣದ ಭೂಮಿಕೆಗಳಲ್ಲಿ ಶ್ರೀ ಸಾಯಣಾಚಾರ್ಯರು ಹೀಗೆ ಬರೆದಿದ್ದಾರೆ—ಇದಂ ವಾ ಅಗ್ರೇ ನೈವ ಕಿಂಚಿದಾಸೀದಿತ್ಯಾದಿ ಪ್ರತಿಪಾದಕಂ ಜಗತಃ ಪ್ರಾಗವಸ್ಥಾಮನೂದ್ಯ ಸರ್ಗಪ್ರತಿಪಾದಕಂ ವಾಕ್ಯಜಾತಂ ಪುರಾಣಂ). ದರ್ಶನ ಶಾಸ್ತ್ರದ ಮಹೋತ್ತಮ ವಿದ್ವಾಂಸ ಶ್ರೀ ಆದ್ಯ ಶಂಕರಾಚಾರ್ಯರ. ಉಪನಿಷತ್ತುಗಳಲ್ಲಿ ಬಂದಿರುವ ಪುರಾಣ ಶಬ್ದಕ್ಕೂ ಇದೇ ಭಾವವನ್ನು ಹೇಳಿದ್ದಾರೆ. (ಅರೇಽಸ್ಯ ಮಹತೋ ಭೂತಸ್ಯ ನಿಶ್ವಸಿತಮೇತತ್ ... ಪುರಾಣಂ—ಬೃಹದಾರಣ್ಯಕೋಪನಿಷತ್... ೨-೪-೧೦ ಇದರ ಶಂಕರ ಭಾಷ್ಯದಲ್ಲಿ—ಪುರಾಣ ಅಸದ್ ವಾ ಇದಮಗ್ರೇ ಆಸೀತ್ ಎಂದ ಬರೆದಿದೆ) ಪುರಾಣಗಳ ಮುಖ್ಯ ಪ್ರತಿಪಾದ್ಯ ವಿಷಯ ಸರ್ಗ ಅಂದರೆ, ಸೃಷ್ಟಿ. ಆದುದರಿಂದ ಸರ್ಗದ ವರ್ಣನೆಯಿಲ್ಲದ ಪುರಾಣಗಳೇ ಇಲ್ಲ. ಪ್ರತಿ ಪುರಾಣದಲ್ಲಿ ಸೃಷ್ಟಿಯ ವರ್ಣನೆಗಳು ಈ ಕೆಳಗಿನ ಶ್ಲೋಕಗಳಲ್ಲಿ ಇವೆ:

ಬ್ರಹ್ಮ —೧—೧
ಬ್ರಹ್ಮಾಂಡ ೧—೩
ಬ್ರಹ್ಮವೈವರ್ತ ೧—೩
ಪದ್ಮ ೧—೨
ನಾರದ ೧—೪೨
ವಿಷ್ಣು ೧—೨
ಮತ್ಸ್ಯ ೧೭೦
ಕೂರ್ಮ ೧-೪
ವರಾಹ ೨-೯
ವಾಮನ ೪೬
ಭಾಗವತ ೩-೪
ಗರುಡ ೧-೪
ಶಿವ ೨(೧)೧೫
ಲಿಂಗ ೧-೩
ಸ್ಕಂದ ೧(೩)೮
ಮಾರ್ಕಂಡೇಯ ೪೨—೪
ಭವಿಷ್ಯ ೧-೨
ಅಗ್ನಿ ೧೩
ವಾಯು ೧-೪
ದೇವೀ ಭಾಗವತ ೯—೧
ಹರಿವಂಶ ೧-೭
ಮಹಾಭಾರತ ೧-೮೨
ವಾಲ್ಮೀಕಿರಾಮಾಯಣ ೨-೪೩

ಪುರಾಣ ಮತ್ತು ಇತಿಹಾಸಗಳು ಭಿನ್ನ ಭಿನ್ನ ವಿದ್ಯೆಗಳಾದರೂ ಪುರಾಣಗಳ ವಂಶ-ವಂಶಾನುಚರಿತಗಳಲ್ಲಿ ಇತಿಹಾಸವಿದ್ದೇ ಇದೆ. ಪುರಾಣಗಳ ಪ್ರತಿಪಾದ್ಯ ವಿಷಯ ಸೃಷ್ಟಿ ನಿರೂಪಣೆಯಾದುದರಿಂದ ಅವುಗಳಲ್ಲಿ ಬರುವ ಮಾನವೀಯ ಇತಿಹಾಸವು ಗ್ರಹ-ನಕ್ಷತ್ರಗಳ ಇತಿಹಾಸದೊಡನೆ ಸಮ್ಮಿಶ್ರಿತವಾಗಿದೆ.

ಪ್ರಸಿದ್ಧ ಜ್ಯೋತಿಷಿ ವರಾಹಮಿಹಿರನು ಬೃಹತ್ಸಂಹಿತೆಯಲ್ಲಿ ಪೂರ್ವೇ ಭಾಗೇ ಭಗವಾನ್ ಮರೀಚಿರಪರೇ ಸ್ಥಿತೋ ವಸಿಷ್ಠೋಽಸ್ಮಾತ್ | ತಸ್ಯಾಂಗಿರಾಸ್ತತೋಽತ್ರಿಸ್ತಸ್ಯಾಸನ್ನಃ ಪುಲಸ್ತ್ಯಾಖ್ಯಃ|| ಪುಲಹಃ ಕ್ರತುರಿತಿ ಭಗವಾನಾಸನ್ನಾ ಅನುಕ್ರಮೇಣ ಪೂರ್ವಾದ್ಯಾತ್ ತತ್ರ ಸತಿಸಾಧ್ವೀ ನಿಯತಾರುಂಧತೀ ಸಾಧ್ವೀ|| (೧೩-೬) ಎಂದು ಮರೀಚಿ ಆದಿಗಳ ಸ್ಥಿತಿಯನ್ನು ಆಕಾಶದಲ್ಲಿ ಸುಸ್ಪಷ್ಟವಾಗಿ ಗುರುತಿಸಿದ್ದಾನೆ. ಇವರ ಹೆಸರುಗಳು ಪುರಾಣಗಳಲ್ಲೂ ಬಂದಿದ್ದು ಮಾನವ ಋಷಿಗಳಂತೆ ವರ್ಣಿಸಿ ಅನೇಕ ಕಥೆಗಳು ಇವರ ಜತೆಗೆ ಹೆಣೆದಿವೆ.

ಮರೀಚಿ-ಭಾಗವತ ೪-೧-೧೩, ಮಹಾಭಾರತ ೧-೬೩-೨, ವಸಿಷ್ಠ-ಭಾಗವತ ೬-೧೮-೬, ವಾಲ್ಮೀಕಿ ರಾಮಾಯಣ ೧-೧೦, ಅಂಗಿರಾ—ಭಾಗವತ ೬-೧೪-೧೪, ಮತ್ಸ್ಯ ೧೯೫, ಅತ್ರಿ ಭಾಗವತ ೩-೧೨-೨೪, ಮತ್ಸ್ಯ ೧೪೪, ಪುಲಸ್ತ್ಯ -ಭಾಗವತ ೩-೧೨-೨೪, ವಿಷ್ಣು ೧-೧೦, ಪುಲಹ -ಭಾಗವತ ೩-೧೨-೨೪, ಮಹಾಭಾರತ ೧-೬೬-೧೦, ಕ್ರತು— ಭಾಗವತ ೪-೧-೩೯, ವಿಷ್ಣು ೧ ೧೦.

ಪುರಾಣಗಳಲ್ಲಿ ಬರುವ ವಂಶವರ್ಣನೆಗಳಲ್ಲಿ ಜಡ— ಚೇತನಗಳ ಹೆಸರುಗಳು ಸೇರಿಕೊಂಡಿವೆ. ನಮ್ಮ ಸೂರ್ಯನಿಂದ ಶನಿಗ್ರಹ ಉತ್ಪನ್ನವಾಯಿತು —(ಪದ್ಮ ೫-೮, ಭಾಗವತ ೬-೬-೮, ಬ್ರಹ್ಮ೬, ವರಾಹ ೨, ವಿಷ್ಣು ೩-೨) ಇದು ಸಹಜ. ಆದರೆ, ಇದೇ ಸೂರ್ಯ ವಂಶದಲ್ಲಿ ಇಕ್ಷ್ವಾಕು (ವಾ. ರಾಮಾಯಣ ೭-೭೨, ಭಾಗವತ ೯-೬, ಹರಿವಂಶ ೧-೧೧), ರಘು (ಭಾಗವತ ೯-೧೦), ಜನಕ (ವಾಯು ೮೯, ವಾ. ರಾಮಾಯಣ ೧-೬೧, ಭಾಗವತ ೯-೨೩) ಮೊದಲಾದ ರಾಜರೂ ಜನ್ಮವೆತ್ತಿದರೆಂದು ಉಲ್ಲೇಖವಿದೆ. ಬೃಹಸ್ಪತಿಯೊಡನೆ ಸಂಘರ್ಷವಿರುವ ಹೂವುದೇ ಚಂದ್ರಗ್ರಹವಿಂದ (ಪದ್ಮ ೫ ೧೨ ಭಾಗವತ ೯-೧೪, ಬ್ರಹ್ಮ ೮, ಮತ್ಸ್ಯ ೨೩, ವಾಯು ೯) ಬೃಹಸ್ಪತಿಯ ಕ್ಷೇತ್ರದಲ್ಲಿ ಬುಧಗ್ರಹವು ಹುಟ್ಟುವುದು (ದೇವೀಭಾಗವತ ೧-೧೧, ಮಹಾಭಾರತ ೧-೧೧-೨೯) ಸ್ವಾಭಾವಿಕ. ಆದರೆ, ಅದೇ ಚಂದ್ರವಂಶದಲ್ಲಿ ಯದು (ಮತ್ಸ್ಯ ೪೩, ವಿಷ್ಣು ೪-೧೧), ಉಗ್ರಸೇನ (ಮಹಾಭಾರತ ೨-೨೩-೪) ಮತ್ತು ಪಾಂಡವ (ಮಹಾಭಾರತ ೨-೬೪-೬೪)ರೂ ಜನ್ಮ ಪಡೆಯುತ್ತಾರೆ!

—ಗೋ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಹೈಸ್ಕೂಲುಗಳಿಗೆ
ನವಯುಗ
ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.
ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

ಫೋನ್ : 526
ಸಂಪುಟ ೪೯
ಸಂಚಿಕೆ ೩೪
VOL. 49
No. 34

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೩೦—೪—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಅಯೋಗ್ಯರಿಗೆ ಶಾಸನಸೂತ್ರ

ಪಶ್ಚಿಮ ಬಂಗಾಳದಲ್ಲಿ ಹೇರಲಾದ ರಾಷ್ಟ್ರಪತಿ ಆಳಿಕೆಯನ್ನು ಶೀಘ್ರವೇ ಹಿಂದೆಗೆದುಕೊಂಡು, ಅಲ್ಲಿ ಮರುಚುನಾವಣೆಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ಮಾರ್ಕ್ಸಿಸ್ಟರ ಬೇಡಿಕೆ. ಅಂದರೆ, ಅವರು ತಾವು ಯಾರನ್ನಾದರೂ ಕೂಡಿಕೊಂಡು ಸರಕಾರ ರಚಿಸಲು ಸಿದ್ಧರಿಲ್ಲವೆಂಬುದು ಸ್ಪಷ್ಟ. ಬಂಗ್ಲಾ ಕಾಂಗ್ರೆಸ್ಸ್ ಈ ಬಗ್ಗೆ ಮುಂದೆ ಬರಬಹುದಾದರೂ ಛಿದ್ರವಿಚ್ಛಿದ್ರ ಪಕ್ಷಗಳನ್ನು ಅವಲಂಬಿಸಿ ಅಧಿಕಾರಕ್ಕೆ ಬರಲು ಈಗ ಅಜಯ್ ಮುಖರ್ಜಿಯವರೂ ತಯಾರಿಲ್ಲ. ಹಾಗಿರುವಾಗ ವಿಧಾನ ಸಭೆಯನ್ನು ಏಕೆ ವಿಸರ್ಜಿಸಬಾರದು? ಬಿಹಾರದಲ್ಲಿ ಆರೇಳು ತಿಂಗಳುಗಳು ಕಳೆದ ಬಳಿಕ ವಾತಾವರಣ ತಿಳಿಯಾಗಿ ಶ್ರೀ ದರೋಗಾ ಪ್ರಸಾದ ರಾಯರು ಸರಕಾರ ರಚಿಸಲು ಸಮರ್ಥರಾದರು. ಹಾಗೆಯೇ ಪಶ್ಚಿಮ ಬಂಗಾಳದಲ್ಲೂ ಸಾಧ್ಯವಾದೀತೆಂದು ರಾಜ್ಯಪಾಲರ ಊಹೆಯಿರಬಹುದು. ಆದರೆ, ಅವರ ಕನಸು ನನಸಾಗುವ ಸಾಧ್ಯತೆಯಿಲ್ಲ. ಇಂಡಿಕೇಟ್ ಬಣವನ್ನು ಕಾಲ ಅಲ್ಲಿ ವಿಧಾನ ಸಭಾಸದಸ್ಯರಿಗೆ ವೇತನ ಸಲ್ಲುತ್ತದೆ ಎಂಬುದು ಸುಸ್ಪಷ್ಟ.

ಮಧ್ಯಾವಧಿ ಚುನಾವಣೆ ನಡೆಸಲು ರಾಜ್ಯದ ವಾತಾವರಣ ತಿಳಿಯಾಗಿಲ್ಲವೆಂಬುದರಲ್ಲಿ ವಾದಕ್ಕೆ ನೂರು ಸಾಕ್ಷ್ಯವಿವೆ. ರಾಜ್ಯದಲ್ಲಿ ಜನತೆಯ ಒಂದು ಗುಂಪು ತನ್ನ ಕೈಗಳಿಗೇ ಕಾನೂನನ್ನು ತೆಗೆದುಕೊಂಡು ಮನಸ್ವಿಯಾಗಿ ವರ್ತಿಸಿದೆ. ಈ ಗುಂಪು ಹಿಂಸೆ— ಅತ್ಯಾಚಾರ— ಅನಾಚಾರ — ದುರಾಚಾರ — ಆಕ್ರಮಣ— ಕೊಲೆ—ಸುಲಿಗೆ ಮುಂತಾದುವುಗಳಲ್ಲಿ ಸದಾ ನಿರತವಾಗಿದೆ. ಮಾರ್ಕ್ಸಿಸ್ಟ್ ನಾಯಕ ಜ್ಯೋತಿ ಬಸು ಮುಖ್ಯಮಂತ್ರಿತ್ವವನ್ನಾದರೂ ತ್ಯಜಿಸಿದರು; ಪೋಲೀಸ್ ವಿಭಾಗವನ್ನು ಕೈಬಿಡಲಿಲ್ಲ. ಇದರ ಹಿನ್ನೆಲೆ ಇದೇ. ರಾಜ್ಯದಲ್ಲಿ ಕಾನೂನನ್ನು ಗುಂಪುಗಾರಿಕೆಯೇ ತೆಗೆದುಕೊಂಡರೆ, ಅದಕ್ಕೆ ಸರಕಾರದ ಬೆಂಬಲವೂ ಲಭ್ಯವಾದರೆ, ಇತರರು ಮರ್ಯಾದೆಯಿಂದ ತಲೆಯೆತ್ತುವುದೆಂತು? ರಾಷ್ಟ್ರಪತಿ ಆಳಿಕೆ ಘೋಷಿತವಾಗುವ ವೇಳೆಗಾಗಲೇ ಕೊಳ್ಳೆ ಉಚ್ಚಸ್ತರದಲ್ಲಿ ಕಾರ್ಯಾರಂಭ ಮಾಡಿತ್ತು; ಶ್ರೀ ಅಜಯ್ ಮುಖರ್ಜೀಯವರ ವಿಲಾಸಿನೀಗಿ —ಅಧಿಕಾರಲಾಲಸೆಗೆಂದಾಗಿ ಈ ಕೋಳಿಗಳು ಸೊಕ್ಕಿಬಿಟ್ಟವು. ಸಾಮಾನ್ಯವಾಗಿ ರಾಷ್ಟ್ರಪತಿ ಆಳಿಕೆ ಪ್ರಜಾತಂತ್ರಕ್ಕೆ ಮಾರಕವಾದರೂ ಪ್ರಜಾತಂತ್ರವು ಮಾಡಿರುವ ಅನ್ಯಾಯಗಳನ್ನು ಸರಿಪಡಿಸಲು ಇದು ಸಹಕಾರಿಯಾಗುತ್ತದೆ. ಮಾರ್ಕ್ಸಿಸ್ಟ್ ನಾಯಕರು ಹಬ್ಬಿದ್ದ, ಹರಡಿದ ಅರಾಜಕತೆ ಬಳ್ಳಿಯನ್ನು ಅದುಮಿ ಕಾನೂನು — ಶಾಂತಿಯನ್ನು ಪುನಸ್ಸ್ಥಾಪಿಸುವುದೇ ಬಂಗಾಳದ ದೊಡ್ಡ ಸಮಸ್ಯೆ. ಕೇಂದ್ರ ಗೃಹ ಮಂತ್ರಿ ಶ್ರೀ ಚವಣರು ರಾಜ್ಯದ ಪರಿಸ್ಥಿತಿ ಸುಧಾರಿಸುತ್ತಿದೆ ಎಂದು ಸಂಸತ್ತಿನಲ್ಲಿ ಹೇಳುತ್ತಿರುವಂತೆಯೇ ಕಲಕತ್ತೆಯ ಸೆಕ್ರಿಟೇರಿಯಟ್‌ನಲ್ಲಿ ಬಾಂಬು ಸಿಡಿಯಿತು— ಇದೆಂಥ ವಿರೋಧಾಭಾಸ! ಸರಕಾರಿ ಕಾರ್ಯಾಲಯದಲ್ಲೇ ಬಾಂಬು ಸಿಡಿಯುವಂತಹ ಮಟ್ಟಕ್ಕೆ ಅಲ್ಲಿನ ಆಡಳಿತ ಪಾದಾರ್ಪಣ ಮಾಡಿದೆಯೆಂದರೆ, ಕಾನೂನು ಮತ್ತು ಶಾಂತಿ ಶಬ್ದಗಳು ಸ್ವರ್ಗಸ್ಥವಾದವೆಂದೇ ಅರ್ಥ. ಈ ಬಾಂಬು ಸಣ್ಣದಿರಬಹುದು; ಹಿರಿದಾಯಿಯೂ ಆ ರಭಸವು; ದೀರ್ಘವೂ ಆಗಿರಬಹುದು; ಆದರೆ, ಇಂದು ತಲೆಗೂದಲಿಗೆ ಬಂದ ಕತ್ತಿ ನಾಳೆ ಕೊರಳಿಗೇ ಬಂದು ಬೀಳುವುದು ಸುಸ್ಪಷ್ಟ. ಪಶ್ಚಿಮ ಬಂಗಾಳದಲ್ಲಿ ಭೂಮಾಲೀಕರ ಮೇಲಿನ ಆಕ್ರಮಣ ನಿರಾತಂಕವಾಗಿ ಸಾಗುತ್ತಿದೆ; ನಕ್ಸಲೀಯರ ಕೀಟಲೆ ಲಂಗುಲಗಾಮಿಲ್ಲದೆ ಮುಂದುವರಿಯುತ್ತಿದೆ. ಜನಪ್ರಿಯ ಸರಕಾರವೇ ಸರಕಾರದ ನೀತಿಗಳ ವಿರುದ್ಧ ಪ್ರದರ್ಶನ ಏರ್ಪಡಿಸಿ ಜನತೆಗೆ ಮಾರ್ಗದರ್ಶನ ನೀಡಿದ್ದ ಮೇಲೆ ಜನವೇಕೆ ಸುಮ್ಮನೆ ಕುಳಿತಾರು? ಪಶ್ಚಿಮ ಬಂಗಾಳದ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆಯೆಂಬುದಕ್ಕೆ ಈ ಬಾಂಬು ಪ್ರಕರಣವೊಂದೇ ಉದಾಹರಣೆ ಸಾಕು. ಇಂದು ಸೆಕ್ರೆಟೇರಿಯಟ್‌ನ ಗೋಡೆಗಳ ಹೊರಗೆ ನಡೆಸಲಬಹುದಾದದ್ದು ನಾಳೆ ಅಮೂಲ್ಯ ಕಾಗದ ಪತ್ರಗಳ ಸಂರಕ್ಷಣಾಲಯದೊಳಗೇ ಘಟಿಸಬಹುದು. ಇಂದು ಪಶ್ಚಿಮ ಬಂಗಾಳಕ್ಕೆ ಮಾತ್ರ ಸೀಮಿತವಿರುವುದು ನಾಳೆ ಇಡೀ ದೇಶವ್ಯಾಪಿಯಾಗಬಹುದು. ಇದು ಆಡಳಿತಗಾರರಿಗೆ ಅಪಮಾನ ಮಾತ್ರವಲ್ಲ, ಶ್ರೀಸಾಮಾನ್ಯನಿಗೆ ಅಭದ್ರತೆ.

ನಕ್ಸಲೀಯರ ಚಟುವಟಿಕೆಗಳನ್ನು ಶಾಸನ ರೀತ್ಯಾ ತಡೆಯಬೇಕೆಂದು ಬೇಡಿಕೆ ಸಂಸತ್ತಿನಲ್ಲಿ ಬಂದಾಗ ಅದೊಂದು ರಾಜಕೀಯ ಪಕ್ಷವಲ್ಲವಾದ್ದರಿಂದ ಅಸಾಧ್ಯವೆಂದು ಮಂತ್ರಿ ಗೋವಿಂದ ಮೇನನ್‌ರ ಉತ್ತರ ಪ್ರೋತ್ಸಾಹಿಸಿತ್ತು. ಇಂಡಿಕೇಟಿನ ಕಾರ್ಯಕಾರಿಣಿಯಲ್ಲಿ ಶ್ರೀಮತಿ ಗಾಂಧಿಯವರು ಈ ಬಗ್ಗೆ ತೀವ್ರ ಸಮಾಲೋಚನೆಯ ಭರವಸೆ ನೀಡಿದ್ದಾರೆ. ಇದನ್ನು ತಡೆಗಟ್ಟುವುದು ಅನಿವಾರ್ಯವೆಂಬ ಅಭಿಪ್ರಾಯ ಅವರದ್ದು. ಆದರೆ, ಬರಿಯ ನಕ್ಸಲೀಯರಿಂದ ಮಾತ್ರ ಪಶ್ಚಿಮ ಬಂಗಾಳಕ್ಕೆ ಕುತ್ತು ಬಂದಿದೆಯೆಂದರೆ, ತಪ್ಪಾಗುತ್ತದೆ. ಜ್ಯೋತಿ ಬಾಬು ಗೃಹಮಂತ್ರಿಯಾಗಿದ್ದು, ಆಡಳಿತೆಯನ್ನು ಸಂಪೂರ್ಣ ಕೆಡಿಸಿ ಬಿಟ್ಟಿದ್ದಾರೆ; ಅರಾಜಕತೆ— ಅಭದ್ರತೆಗಳನ್ನು ನೆಲೆಗೊಳಿಸುವಲ್ಲಿ ಭಾಗಿಗಳಾಗಿದ್ದಾರೆ; ನಕ್ಸಲೀಯರು ಬೇರು ಬಿಡಲು ತಳ ಹಸನುಗೊಳಿಸಿದ್ದಾರೆ. ಅದರ ಮೇಲೆ ರಾಷ್ಟ್ರಪತಿ ಆಳಿಕೆ ಕೊನೆಗೊಳ್ಳಬೇಕೆಂಬ ಚಳುವಳಿ ಮತ್ತೆ ಆರಂಭ ಮಾಡಿದ್ದಾರೆ.

ವಿದೇಶ ನಿಷ್ಠ ಪಕ್ಷಗಳ ಚಟುವಟಿಕೆಗಳನ್ನು ಬಹಿಷ್ಕರಿಸುವುದು — ಉಗ್ರಧೋರಣೆಯನ್ನು ಅದಕ್ಕಾಗಿ ರೂಪಿಸುವುದು ಸದ್ಯ ಇಂದಿನ ಅವಶ್ಯಕತೆ. ದೇಶದ ಎಲ್ಲ ರಾಜ್ಯಗಳಲ್ಲಿಯೂ ಗೃಹ ಖಾತೆಯು ಬಲಹೀನವೂ ಸತ್ವಹೀನವೂ ತೇಜೋಹೀನವೂ ಆಗಿರುವುದಕ್ಕೆ ದಿನ ನಿತ್ಯವೆಂಬಂತೆ ನಿದರ್ಶನಗಳು ಸಿಗುತ್ತಿವೆ. ಕಾನೂನು ವ್ಯವಸ್ಥೆ ಶಿಥಿಲವಾಗುತ್ತಲೇ ಹೋದರೆ, ಜನ ಸ್ವೇಚ್ಛಾಪ್ರವೃತ್ತರಾದರೆ, ಶ್ರೀಸಾಮಾನ್ಯನಿಗೆ ರಕ್ಷಣೆಯೆಲ್ಲಿಂದ ಬರಬೇಕು? ಹಿಂಸಾಪ್ರಿಯರನ್ನು, ಆಕ್ರಮಣಶೀಲರನ್ನು ಬರಿದು ಮಾನವತೆಯಿಂದಲೇ ನೋಡುತ್ತ ಹೋದರೆ, ಆಡಳಿತದಲ್ಲಿ ಬಿಗುಹು ಬರಲಾರದು. ಪಶ್ಚಿಮ ಬಂಗಾಳದ ಕಾನೂನು ವ್ಯವಸ್ಥೆ ಸರಿಯಾಗಲು ಕನಿಷ್ಠ ಹತ್ತು ವರ್ಷಗಳಾದರೂ ಬೇಕು. ಆದರೆ, ಅಷ್ಟು ಸಮಯ ಚುನಾವಣೆ ಮುಂದೂಡಲಾಗುತ್ತದೆಯೆ? ಅಯೋಗ್ಯರ ಕೈಗಳಿಗೆ ಪ್ರಜಾತಂತ್ರವನ್ನು ನೀಡಿದರೆ ವಿನಾಶ ಬರುದು—ಎಂದು ಪ್ರಶ್ನಿಸುವವರು ಪಶ್ಚಿಮ ಬಂಗಾಳಕ್ಕೆ ಹೋಗಿ ನೋಡಿ ಬರಬೇಕು; ಅಷ್ಟು ಅನುಕೂಲವಿಲ್ಲವಾದರೆ, ಅಲ್ಲಿನ ದುರವಸ್ಥೆಗಳನ್ನು ಓದಿ, ಕೇಳಿ ತಿಳಿದು ಕೊಳ್ಳಬೇಕು. ಚಂಡಿ— ಚಾಮುಂಡಿಗೆ ನರಬಲಿಯೀಯುತ್ತಿದ್ದ ಬಂಗಾಳದಲ್ಲಿ ನಕ್ಸಲೀಯರು—ಮಾರ್ಕ್ಸಿಸ್ಟರು ನರಬಲಿ ತೆಗೆದುಕೊಳ್ಳದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ಶಕುನಿಯ ದಾಳ

ಯುವತುರುಕ್ಕರನ್ನು ಪ್ರಗತಿಯ ಹೆಸರಲ್ಲಿ ಮರುಳುಗೊಳಿಸಿ ಅವರ ಬೆಂಬಲದಿಂದ ಅಧಿಕ ಸಂಖ್ಯಾತ ಪಕ್ಷವಾಗಿರುವ ಇಂಡಿಕೇಟು ತುಂಬ ಇಕ್ಕಟ್ಟಿನಲ್ಲಿ ಸಿಲುಕಿದೆ. ಅವರು ಪ್ರಗತಿ ಲೇಬಲ್ ಹಚ್ಚಿಕೊಂಡ 'ಹಳೆಯ ಪ್ರತಿ' ಎಂಬುದೀಗ ಎಲ್ಲರಿಗೂ ಗೊತ್ತು. ಆವೇಶ, ಉದ್ವೇಗದ ಬಿಸಿರಕ್ತದಿಂದ ಯುವ ತುರುಕ್ಕರು ತಮ್ಮ ಗುಂಪಿನವರನ್ನು ಬಿಟ್ಟು ಉಳಿದವರೆಲ್ಲರನ್ನೂ ಟೀಕಿಸುತ್ತಾರೆ, ನಿಂದಿಸುತ್ತಾರೆ; ಪ್ರತಿಭಟಿಸುತ್ತಾರೆ. ಕೇಂದ್ರ ಕೈಗಾರಿಕಾ ಖಾತೆಯ ಉಪ ಸಚಿವ ಶ್ರೀ ಭಾನು ಪ್ರಕಾಶ ಸಿಂಗರ ಮಾತುಗಳಲ್ಲಿ "ಯುವ ತುರುಕ್ಕರು ನಾಲಿಗೆಯ ಲಂಗುಲಗಾಮುಗಳನ್ನು ಕಿತ್ತುಕೊಂಡೇ ಅರಚುತ್ತಾರೆ. ಅವರ ನಾಲಗೆಗೆ ಕಡಿವಾಣ ಹಾಕಸಿದ್ದರೆ, ಪಕ್ಷಕ್ಕೆ ಅವಸಾನ ಕಾಲ ಬಂದೀತು." ರಾಜಧನ ರದ್ದತಿಯ ಸಂಗತಿಯಲ್ಲಿ ಶ್ರೀ ಸಿಂಗರದ್ದು ಭಿನ್ನಾಭಿಪ್ರಾಯ. "ಪಕ್ಷದ ನೀತಿಯನ್ನು ಒಪ್ಪದವರು ಪಕ್ಷದ ಸದಸ್ಯರಾಗಿರಲು ಅನರ್ಹರು. ಅವರನ್ನು ಸಚಿವ ಸಂಪುಟದಿಂದ ಕಿತ್ತುಹಾಕಬೇಕು" ಎಂಬುದು ಯುವತುರುಕ್ಕರ ಆಂದೋಲ. ಶ್ರೀಮತಿ ಇಂದಿರಾಗಾಂಧಿಯವರ ಆತ್ಮಜ್ಯೋತಿಯ ನೆರಳಲ್ಲಿ ಸೃಷ್ಟಿಯಾದ ಈ 'ಪ್ರಗತಿ ಬ್ರಾಂಡ್' ಶ್ರೀ ಭಾನು ಪ್ರಕಾಶ ಸಿಂಗರನ್ನು ಪಕ್ಷದ ನೀತಿಗಳಿಗೆ ಕಟ್ಟುಬೀಳುವಂತೆ ಕಟ್ಟುಪಾಡು ಮಾಡಿ ಆತ್ಮಸಾಕ್ಷಿ ವಂಚಿತರಾಗಿಸುವುದು ನ್ಯಾಯವಾಗುವುದೆ? ನೀತಿ—ತತ್ವಗಳೆಲ್ಲ ತೀರ ಹಳೆಯ ಗೊಡ್ಡು ಆಚಾರಗಳು, ಅಂಧಶ್ರದ್ಧೆಗಳು, ಅವನ್ನು ಆಚರಿಸುವವರು, ಅವಕ್ಕೆ ಕಟ್ಟು ಬೀಳುವವರು ಪ್ರತಿಗಾಮಿಗಳೆಂದು ಶ್ರೀಮತಿ ಗಾಂಧಿ ಕೋಶ ಸಾರುವಾಗ, ಇಂಡಿಕೇಟಿಗರು ಆತ್ಮಕ್ಕೇಕೆ ತಮ್ಮನ್ನು ತಾವು ಬಿಗಿದುಕೊಳ್ಳಲು ಬಯಸುತ್ತಾರೆಯೋ! ಇದನ್ನೆಲ್ಲ ನೋಡಿಯೋ ಇಂಡಿಕೇಟ್ ಸಿಂಡಿಕೇಟ್ ಆಗುತ್ತಿದೆ ಎಂಬ ಮಾತು ಹುಟ್ಟಿದ್ದರೂ ಇರಬಹುದು. ಶಕುನಿಯ ದಾಳವನ್ನು ಮುಷ್ಟಿಯಲ್ಲಿಟ್ಟುಕೊಂಡ ಶ್ರೀಮತಿ ಗಾಂಧಿ ಇನ್ನೆಷ್ಟು ಕಾಲ ಅದನ್ನುರುಳಿಸುವರೆಂದು ನೋಡಬೇಕಷ್ಟೆ. ನಿಜರೂಪ ಬಯಲಾದಾಗ ಕಾಗೆ ಕಾಗೆಯೆ; ಕೋಗಿಲೆ ಕೋಗಿಲೆಯೇ.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ
O. S. No. 260/1969

ಸುಮನಾಜೆ ಅಪ್ಪು —ವಾದಿ
ರಣ್ಣಾಪತಿ ಶೆಟ್ಟಿ ಕೋಡು — ಪ್ರತಿವಾದಿಗಳು
೩ನೇ ಪ್ರತಿವಾದಿ—ಚಿತ್ತರಂಜನ ಶೆಟ್ಟಿ, ರಣ್ಣಾಪತಿ ಶೆಟ್ಟಿ ಮಗ
೪ನೇ ಪ್ರತಿವಾದಿ—ವಿಜಯಲಕ್ಷ್ಮಿ ಶೆಟ್ಟಿ, ರಣ್ಣಾಪತಿ ಶೆಟ್ಟಿ ಮಗಳು
—ಕಾರ್ಕಳ ತಾಲೂಕು ಪಾಲಡ್ಕ ಗ್ರಾಮದ ಮುಂಡದ್ಕ ಗುತ್ತು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

[illegible] ವಾದಿಗಳಿಗೆ ತಾರೀಕು 10-2-1966ರಲ್ಲಿ [illegible] ರೂಪಾಯಿ 3600.00ಕ್ಕೆ ಬರೆದುಕೊಟ್ಟ ಕೊಡತಕ್ಕ ದಸ್ತಾವೇಜಿನ ಬಾಬ್ತು ಬಡ್ಡಿ ಅಸಲು ಬಡ್ಡಿ ಸೇರಿ ರೂಪಾಯಿ 6673.00 ಕೇಳಿ ಪ್ರತಿವಾದಿಗಳ ಮೇಲೆ ದಾಖಲು ಮಾಡಿದ ಮೊಕದ್ದಮೆ ದಾವೆಯು ತಾ. 8-6-1970ಕ್ಕೆ ವಿಚಾರಣೆಯ ಬಗ್ಗೆ ಇಟ್ಟಿದೆ. ಆ ಕಾರಣ ನೀವುಗಳು ಆ [illegible] ತಾ. 8-6-1970ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

M. N. Pandi
ವಾದಿ ಪರ ಎಡ್ವೋಕೇಟ್.
Karkala, 20-4-1970.

ಮುಂಬಯಿಯ ಮೇಲೆ ಇಂದಿರಾ ಪುಷ್ಪವೃಷ್ಟಿ

ರಾಷ್ಟ್ರಪತಿಯಾಗಿ ಶ್ರೀ ವಿ. ವಿ. ಗಿರಿಯವರ ಆಯ್ಕೆಯ ಸಿಂಧುತ್ವ ಉಚ್ಚತಮ ನ್ಯಾಯಾಲಯದಲ್ಲಿ ಆಹ್ವಾನಿತ. ತತ್ಸಂಬಂಧ ಅನೇಕಾನೇಕ ನಾಯಕರ ಕೋರ್ಟ್ ಮೆಟ್ಟಿಲಾರೋಹಣ, ಸಾಕ್ಷ್ಯ ನೀಡೋಣ. ರಾಷ್ಟ್ರಪತಿ ಸನ್ಮಾನ್ಯ ಗಿರಿಯವರ ಸಾಕ್ಷ್ಯವೂ ಅನಿವಾರ್ಯ. ದೇಶದ ಪ್ರಥಮ ಪ್ರಜೆಯನ್ನು ನ್ಯಾಯಾಲಯದ ಕಟಪಂಜರದಲ್ಲಿ ನಿಲ್ಲಿಸುವುದು ಭಾರತದಲ್ಲಿ ಇದೇ ಮೊದಲಿಗೆ ಎಂಬ ಅಂಬೋಣ. ನ್ಯಾಯಮೂರ್ತಿಗಳು ರಾಷ್ಟ್ರಪತಿ ಭವನದಲ್ಲೇ ಅವರ ಸಾಕ್ಷ್ಯ ಪಡೆಯುವ ಏರ್ಪಾಡು ಮಾಡಲೊಪ್ಪಿದರೂ ಮಾನ್ಯ ಗಿರಿ ನಿರಾಕರಣೆ. ತನ್ನ ಅಧ್ಯಕ್ಷಗಿರಿಯಿಂದ ಕೆಳಗಿಳಿದು ನ್ಯಾಯಾಲಯದ ಮೆಟ್ಟಿಲೇರುವ ತವಕ. ಜಗತ್ತಿನ ಯಾವುದೇ ರಾಷ್ಟ್ರದಲ್ಲಿ ಇತ್ತೀಚಿನ ಶತಮಾನಗಳಲ್ಲಿ ಕಂಡರಿಯದ ವಿಶಿಷ್ಟ ಘಟನೆ.

ಶ್ರೀ ಗಿರಿಯವರು ತಮ್ಮನ್ನು ತಾವು ಸಮರ್ಥಿಸಿಕೊಂಡರು. ತಾನು ತನ್ನ ಆತ್ಮಸಾಕ್ಷಿಯಾಗಿ ಕೊನೆಯ ಗಳಿಗೆಯಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಿದ್ದಾಗಿಯೂ ಆತ್ಮಸಾಕ್ಷಿಗನುಸಾರ ಮತ ನೀಡಬೇಕೆಂದು ಕೇಳಿಕೊಂಡದ್ದಾಗಿಯೂ ಅಂದರು. ಡಾ| ಜಾಕೀರ್ ಹುಸೇನರ ನಿಧನಾನಂತರ ಕಾಂಗ್ರೆಸ್‌ನ ಎಸ್ಸೆನ್, ಪಾಟೀಲ್ ಮೊದಲಾದವರು ತನಗೇ ಬೆಂಬಲ ನೀಡಿದ್ದರಿಂದಲೂ ಕೊನೆಯ ಗಳಿಗೆಯಲ್ಲಿ ಶ್ರೀ ರೆಡ್ಡಿಯವರನ್ನು ಆರಿಸಿದರೆಂದೂ ಆಯ್ಕೆಯ ಕ್ರಮ ತಪ್ಪೆಂದು ತನಗನ್ನಿಸಿತೆಂದೂ ಹೇಳಿದರು. ತಾನು ಪ್ರಧಾನಿಯವರೊಡನಾಗಲಿ, ಇತರ ಸಚಿವರೊಡನಾಗಲೀ ವಿಚಾರಿಸಿ ನಾಮಪತ್ರ ಸಲ್ಲಿಸಲಿಲ್ಲವೆಂದೂ ಚುನಾವಣಾ ಪ್ರಚಾರಕ್ಕೆ ಅವರ ಸಹಾಯವನ್ನ ಪಡೆಯಲಿಲ್ಲವೆಂದೂ ತಾನು ಸ್ವತಂತ್ರ ಅಭ್ಯರ್ಥಿಯಾಗಿದ್ದು ತನ್ನ ಕುಟುಂಬದವರ ಸಹಕಾರವನ್ನಷ್ಟೇ ಪಡೆದಿದ್ದೆನೆಂದೂ ನುಡಿದರು.

ಅಂತೂ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಶ್ರೀ ಸಾಮಾನ್ಯನಂತೆ ನ್ಯಾಯಾಲಯದಲ್ಲಿ ಹಾಜರಾಗಿಯೇ ಸಾಕ್ಷ್ಯ ನೀಡಿದ ಈ ಘಟನೆ ನ್ಯಾಯಾಂಗದ ಶ್ರೇಷ್ಠತೆಗೊಂದು ನಿದರ್ಶನ, ಶ್ರೀ ಗಿರಿಯವರ ಸರಳ ಪ್ರವೃತ್ತಿಗೊಂದು ಪ್ರತೀಕ. ನ್ಯಾಯಾಲಯವು ಶ್ರೀ ಗಿರಿಯವರ ಆಯ್ಕೆಯನ್ನು ಎತ್ತಿ ಹಿಡಿಯಲಿ ಅಥವಾ ತಳ್ಳಿಬಿಡಲಿ, ನ್ಯಾಯಾಲಯದ ಮೆಟ್ಟಿಲೇರಿದ ಮೊತ್ತಮೊದಲ ರಾಷ್ಟ್ರಪತಿ ಎಂಬ ಹೆಸರನ್ನು ಮಾತ್ರ ಯಾರೂ ತಳ್ಳಿಹಾಕಲಾರರು.

○ ○ ○

ಇಂಡಿಕೇಟಾಧ್ಯಕ್ಷ ಆಹಾರ ಸಚಿವ ಜಗಜ್ಜೀವನರಾಮರು ಹುಡುಪೆ ತಪ್ಪಿದರೂ ಹೋಳಿಗೆ ಬಿಡ ಎಂಬ ಗಾದೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಗುಜರಾತದ ಹಿತೇಂದ್ರ ದೇಸಾಯಿಯವರ ಸಿಂಡಿಕೇಟ್ ಸರಕಾರವನ್ನು ಉರುಳಿಸಲು ಅವರು ತುಂಬ ಪ್ರಯತ್ನ ಮಾಡಿ ಅಸಫಲರಾಗಿ ದಿಕ್ಕಿಗೆ ಮರಳಿದ್ದರು. ಬಿತ್ತಿದ ಬೀಜ ವಾತಾವರಣ ಅನುಕೂಲವಾದೊಡನೆಯೇ ಮೊಳಕೆದೋರುವುದು ಸಹಜ. ಅಲ್ಲಿ ಹಣದ ಮಳೆ ಸುರಿಯಿತು. ಸ್ನೇಹಾಚಾರದ ಗಾಳಿ ಬೀಸಿತ; ಅಧಿಕಾರದ ಬಿಸಿಯೂ ತಾಗಿತ. ಅಂತೂ ಜನ ಸಿಂಡಿಕೇಟ್ ಎಮ್ಮೆಲ್ಲೆಗಳು ರಾಜೀಪತ್ರವನ್ನು ಬಹಳ ಪ್ರಯಾಸದಿಂದ ಬಂದೊದಗಿದ ವಿಘ್ನ ವಿದ್ದಾರಗಳನ್ನು ವಿಕ್ರಮದ ಸಾಹಸದಿಂದಲೇ ಎದುರಿಸಿ ಸಭಾಪತಿಗಳ ಮನೆಯಲ್ಲಿ ಕಾದ ಕುಳಿತು ಒಪ್ಪಿಸಿ ಧನ್ಯರಾದೆವೆಂದುಕೊಂಡರು. ಈ ಅರ್ವರಿಗೆ ಏಳನೆಯವರಾಗಿ ವಿರೋಧ ಪಕ್ಷದ ನಾಯಕ (ಸ್ವತಂತ್ರ ಪಕ್ಷ) ಜೈದೀಪ್ ಸಿಂಹಜಿಯವರೂ ಸಂರಕ್ಷಕರಾಗಿದ್ದರು. ೧೬೮ ಸದಸ್ಯರಿರುವ ವಿಧಾನ ಸಭೆಯಲ್ಲಿ ಸಿಂಡಿಕೇಟಿಗರು ೮೫.

ಇನ್ನೂ ಒಂದೆರಡು ಪಕ್ಷಾಂತರಗಳನ್ನು ಸಾಧಿಸುವಲ್ಲಿ ಸ್ವತಂತ್ರ ಪಕ್ಷವೂ ಇಂಡಿಕೇಟೂ ಯಶಗಳಿಸಿದರೆ, ಶ್ರೀ ಹಿತೇಂದ್ರರಿಗೆ ಅಹಿತ. ಈ ಕೊನೆಯ ಸಂರಕ್ಷಕ ಎಮ್ಮೆಲ್ಲೆಗಳ ಪಕ್ಷಾಂತರ ದಕ್ಷಿಣೆ ಲಕ್ಷದಿಂದ ದಶಲಕ್ಷಗಳಿಗೂ ಏರಬಹುದು. ತಮ್ಮದೇ ಸರಕಾರ ರಚನೆ ಮಾಡಿ ಬಳಿಕ ರಾಜ್ಯಕೋಶದ ಕೀಲಿಕೈ ಸಿಕ್ಕ ಮೇಲೆ ಇದನ್ನು 'ಚಕ್ರ'ಬಡ್ಡಿ ಸೇರಿಸಿಯೇ ಕೂಡಿಸಿಕೊಳ್ಳುವ ಸದವಕಾಶವಿರುವಾಗ, ಚಿಂತೆ ಯಾಕೆ?

ಗುಜರಾತದಲ್ಲಿ ಶ್ರೀ ಜಗಜ್ಜೀವನರಾಮರ ಬಂಟರು ಏಳ್ವರು. ಇವರು ಸ್ವತಂತ್ರರಾಗಿ ಏನೂ ಮಾಡಲಾರರು ಆದರೆ, ಸ್ವತಂತ್ರ ಪಕ್ಷವನ್ನು ಮುಂದೆ ಮಾಡಿ ಏನನ್ನೂ ಮಾಡಿಯಾರು. ಶ್ರೀ ಎಸ್ಸೆನ್ ಪ್ರತಿಗಾಮಿ ಪಕ್ಷಗಳಾದ ಜನಸಂಘ ಮತ್ತು ಸ್ವತಂತ್ರ ಪಕ್ಷಗಳೊಡನೆ ರಾಷ್ಟ್ರಪತಿ ಚುನಾವಣೆಯಲ್ಲಿ ಬೆಂಬಲ ಕೇಳಿದ್ದನ್ನು ಆರೋಪಿಸಿ ಆತ್ಮಸಾಕ್ಷಿಯನ್ನು ಬಿಗಿಹಿಡಿದ ಈ ಶ್ರೀರಾಮರು ಈಗ ಗುಜರಾತದಲ್ಲಿ ಆಡಿಸುವ ಕಬಡಿ ಕುಣಿತವು ಯಾವ ವಾದವೆಂಬುದು ಅಸ್ಪಷ್ಟ. ಇದನ್ನು ಕಂಡೂ ಕಂಡೂ ಶ್ರೀಮತಿ ಗಾಂಧಿ ಮೂಕ ಪ್ರೇಕ್ಷಕಿಯಾಗಿಯೇ ಇನ್ನೂ ಕುಳಿತಿರುವುದೇಕೋ ಅಜ್ಞಾತ. ಆಕೆಯ ಆತ್ಮಸಾಕ್ಷಿ— ಪ್ರಗತಿವಾದಗಳು ಆಮೆಯಂತೆ ನೆಲಹಿಡಿದಿವೆಯೆ?

○ ○ ○

ಸ್ವತಂತ್ರ ಪಕ್ಷಕ್ಕೀಗ ಉಭಯಸಂಕಟ. ಅತ್ತ ಸರಿದರೆ ದರಿ; ಇತ್ತ ಹಾರಿದರೆ ಏರಿ. ಗುಜರಾತದ ಶ್ರೀ ಸಿ. ಸಿ. ದೇಸಾಯರ ಪಕ್ಷದ ನೀತಿವಿರೋಧಿ ಧೋರಣೆಗಾಗಿ ಅವರನ್ನು ಕಿತ್ತುಹಾಕಲಾಯಿತು. ಆದರೆ, ಶ್ರೀ ದೇಸಾಯರೇನೂ ಸಾಮಾನ್ಯರಲ್ಲ. ತುಂಬ ಪ್ರಭಾವಿಗಳು, ರಾಜ್ಯಕೀಯ ರಕ್ತವನ್ನೇ ಕುಡಿದವರು ಮತ್ತೆ ಅದರಿಂದ ದೂರವಿರುವುದು ಸರ್ವಥಾ ಅಸಾಧ್ಯ. ಇದಕ್ಕೆ ಶ್ರೀ ನಂದಾ, ಶ್ರೀ ರಾಮ್, ಶ್ರೀ ಫಕ್ರುದ್ದೀನ್ ಮೊದಲಾದವರೇ ಪ್ರಬಲ ಸಾಕ್ಷಿ. ಅವರೆಷ್ಟೋ ಬಾರಿ ರಾಜಿನಾಮೆ ಕೊಡಬೇಕಾಯಿತು; ಹೊರಗೆ ನಿಂತು ಪಿತೂರಿಗೆ ತೊಡಗಿದ್ದರಿಂದ ಅವರನ್ನು ಒಳಗೆ ಕರೆಯುವುದು ಅನಿವಾರ್ಯವಾಗಿ ಪರಿಣಮಿಸಿತು.

ಶ್ರೀ ಸಿ. ಸಿ. ದೇಸಾಯರ ಉಚ್ಚಾಟನೆಯಿಂದ ಸ್ವತಂತ್ರ ಪಕ್ಷಕ್ಕೆ ಭಾರಿ ಕೇಡು ಎಂದು ವರ್ಣಿಸಲಾಯಿತು. ಗುಜರಾತದಲ್ಲಿ ಅವರು ಪ್ರತ್ಯೇಕ ಪಕ್ಷವೊಂದನ್ನು ಕಟ್ಟುವರೆಂದು ಪ್ರಚಾರ ಮಾಡಲಾಯಿತು. ಇದೆಲ್ಲದರ ಹಿನ್ನೆಲೆ ಸ್ಪಷ್ಟ. ಶ್ರೀ ಹಿತೇಂದ್ರ ದೇಸಾಯರನ್ನು ಉರುಳಿಸಿ ಇಂದಿರಾಜಿ ಕೃಪಾಪೋಷಿತ ಸರಕಾರ ರಚಿಸಲು ಜೈದೀಪಸಿಂಹರು ಉಗುರ ಮೇಲೆ ನಿಂತಿದ್ದಾರೆ. ಅದು ಕೇಸರಕ್ಕೆ ತಾಗಲೂ ಆರಂಭವಾಗಿದೆ. ಆದರೆ, ಬಾಯಿಗೆಟಕುವುದು ಮಾತ್ರ ಈಗ ಹೇಳಲಾಗದು. ಆದುದರಿಂದ ಪಕ್ಷವಿಭಾಗವಾಗುವುದನ್ನು ಹೇಗಾದರೂ ಮಾಡಿ ಅವರಿಗೆ ತಡೆಯಬೇಕು. ಅದಕ್ಕಾಗಿ ಶ್ರೀ ಸಿ. ಸಿ. ದೇಸಾಯರು ಪಕ್ಷದಲ್ಲೇ ಉಳಿಯಬೇಕು. ಸ್ವತಂತ್ರ ಪಕ್ಷವೂ ಈಗ ಪ್ರತಿಗಾಮಿಯಾಗತೊಡಗಿದ್ದರಿಂದ ಅದು ತನ್ನ ನಿರ್ಧಾರವನ್ನು ಪುನರ್ಪರಿಶೀಲಿಸಲೇ ಬೇಕು.

ಈ ಎಲ್ಲ ಘಟನೆಗಳ ಅಹಿತವುಣ್ಣಬೇಕಾದ್ದು ಸಿಂಡಿಕೇಟ್. ತನ್ನ ಅಭ್ಯರ್ಥಿ ಶ್ರೀ ರೆಡ್ಡಿ ಗೆಲ್ಲಬೇಕೆಂದು ಸ್ವತಂತ್ರ ಪಕ್ಷದ ಮುಂದೆ ಕೈಚಾಚಿದ್ದರಿಂದಲೇ ಸಿಂಡಿಕೇಟಿನ ಪ್ರಭುತ್ವಕ್ಕೆ ಕೇಡು ಬಂತು. ಆದರೂ ಬಂದ ಪ್ರಭುತ್ವ ಕೇಡನ್ನು ಸಹಿಸಿ, ತನ್ನ ಕೇಡಿಗರನ್ನು ಹಣ್ಣುಗಾಯಿ ನೀರುಗಾಯಿ ಮಾಡಬೇಕೆಂದು ಅದು ಆತುರದಿಂದಿರುವುದು ಸಹಜ. ಅದಕ್ಕೆಂದೇ ಒರಿಸ್ಸಾದ ಸಿಂಗದೇವ ಸರಕಾರವನ್ನು ಮೃತ್ಯುವಿನ ದವಡೆಯಿಂದ ಬದುಕಿಸಿತು. ಶ್ರೀ ಜಗಜ್ಜೀವನರಾಮರು ತೋಡಿದ್ದ ಖೆಡ್ಡಕ್ಕೆ ಶ್ರೀ ಅಶೋಕ ಮೆಹತಾ ಕಲ್ಲನ್ನು ತುಂಬಿಸಿ ಬಂದರು. ತಮಿಳುನಾಡಿನಲ್ಲಿಯೂ ರಾಜ್ಯಸಭಾ ಚುನಾವಣೆಯಲ್ಲಿ ಶ್ರೀ ಸಿ. ಸು. ಗೆಲ್ಲದಂತೆ ಮಾಡುವುದಕ್ಕಾದರೂ ಸ್ವತಂತ್ರ ಪಕ್ಷವನ್ನು ಗೆದ್ದುಬರುವಂತೆ ಮಾಡಿತು. ಗುಜರಾತದಲ್ಲಿ ಶ್ರೀರಾಮು ಲೀಲೆಗೆ ಆರಂಭವಾಗಲೇ ಅದು ಸ್ವತಂತ್ರ ಪಕ್ಷಕ್ಕೆ ಎಚ್ಚರಿಕೆ ನೀಡಿತು. ಆದರೆ, ಇದರಿಂದ ಯಾವ ಲಾಭವೂ ಆಗಲಿಲ್ಲ. ತನ್ನ ನೇತೃತ್ವದಲ್ಲಿರ ಒರಿಸ್ಸಾ ಸರಕಾರವನ್ನುರುಳಿಸಲು ಮನಮಾಡಿದ ಇಂಡಿಕೇಟಿನೊಡನೆ ಸರಸವಾಡಬೇಡಿರೆಂದು ಸ್ಪಷ್ಟವಾಗೇ ತಿಳಿಸಿತು. ಆದರೇನು? ಅಧಿಕಾರದ ಮೋಹ ಏನನ್ನೂ ಮಾಡಿಸುತ್ತದೆ.

ಇದನ್ನೆಲ್ಲ ಗಮನಿಸುವಾಗ, ನಮ್ಮಲ್ಲಿ ರಾಷ್ಟ್ರೀಯ ಪಕ್ಷಗಳೇ ಇಲ್ಲವೆನ್ನಬೇಕಾಗುತ್ತದೆ. ಕಾಲಬಂದಂತೆ ತೂರಿಕೊಳ್ಳುವ ನೀತಿಯು ಎಲ್ಲೆಲ್ಲೂ ಮನೆಮಾಡಿದೆ. ಕಾಂಗ್ರೆಸ್ಸು ತುಕ್ಕಡಿಯಾದ ಮೇಲೆ ತನ್ನ ರಾಷ್ಟ್ರೀಯ ನೀತಿಗೆ ತಿಲಾಂಜಲಿ ನೀಡಿದೆ. ಜನಸಂಘ, ಸ್ವತಂತ್ರ ಪಕ್ಷ, ಪ್ರಸವಾ ಮೊದಲಾದುವುಗಳ ವ್ಯಾಪ್ತಿ ಅಖಿಲ ಭಾರತೀಯವಿದ್ದರೂ ಅವೂ ಪ್ರಾದೇಶಿಕ ಆವಶ್ಯಕತೆಗಳ ಮುಂದೆ ತಲೆಬಾಗುತ್ತಿವೆ; ಏತತ್ಕಾರಣದಿಂದ ರಾಷ್ಟ್ರೀಯ ನೀತಿಗೆ ತಿಲಾಂಜಲಿ ನೀಡುವುದು ಅನಿವಾರ್ಯವೇ ಆಗಿದೆ. ಈ ಪ್ರಾದೇಶಿಕ ನೀತಿಯ ತಳಹದಿಯ ಮೇಲೆ ನಿಂತ ರಾಷ್ಟ್ರೀಯ ಪಕ್ಷಗಳು ಏಕಘಟಕರಾಷ್ಟ್ರ ಭಾರತವನ್ನು ಎತ್ತ ಒಯ್ಯುತ್ತವೆ? ತಮ್ಮ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Exc 26/1970 OS 146/65

ಸರಸ್ವತಿ ... ಅರ್ಜಿದಾರ

ತಿಮೋತಿ ಡಿ'ಸೋಜಾ ಲ್ಯಾನ್ಸಲೋಟ್ ಡಿ'ಸೋಜರ ಮಗ, ಬೆಳ್ತಂಗಡಿ ತಾಲ್ಲೂಕ್ಕಿನ ಗ್ರಾಮದ ಮುಂಡೇಲು —ಎದ್ರಿ.

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ,

ಮೇಲಿನ ಅಮಲ್ಜಾರಿಯಲ್ಲಿ ನಿಮ್ಮಿಂದ ಬರಬೇಕಾದ ಐವಜುಗಳ ಬಗ್ಗೆ ನಿಮಗೆ ಬೆಳ್ತಂಗಡಿ ಸ. ರಿ. ಆಫೀಸಿನ ನಂಬ್ರ 446/68-69ನೇ ಕ್ರಯಚೀಟು ಪ್ರಕಾರ ಬರತಕ್ಕ ಪ್ರತಿಫಲ ಬಾಕಿ ರೂ. 2000/-ನ್ನು ಜಪ್ತಿ ಪತ್ರಿ ರುಸ್ತುದಾಗಿಯೂ ನೀವು ಕೋರ್ಟಿನಿಂದ ಇನ್ನೊಂದು ಹುಕುಂ ಕೊಡುವ ತನಕ ಸದ್ರಿ ಐವಜನ್ನು ಪಡಕೊಳ್ಳಲು ಹಕ್ಕುಳ್ಳವರಲ್ಲವೆಂಬ ಪ್ರೊಹಿಬಿಟರಿ ಹುಕುಂ ಕೊಟ್ಟಿರುವುದರಿಂದ ಅದ್ಕೆ ನಿಮ್ಮ ಆಕ್ಷೇಪಣೆಗಳಿದ್ರೆ ತಾ. 1-6-70ನೇ ಹಗಲು 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂದು ಈ ಮೂಲಕ ತಿಳಿಸಲಾಗಿದೆ.

(Sd) B. Ishwara Bhat
Advocate for Petitioner

ಪುತ್ತೂರು, ತಾ. 21.4.70.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಅಧಿಕಾರದಾಹದ ತೃಪ್ತಿಗಾಗಿಯೇ ಅವು ಬದುಕುಳಿಯುವಷ್ಟವಾದರೆ, ಜನ ಒಂದಾಗಿ ಅದನ್ನು ವಿರೋಧಿಸ ಬೇಕು. ಆದರೆ, ಅತ್ಯಂತ ದುಃಖದ ಸಂಗತಿಯೆಂದರೆ, ದೇಶದ ಜನಜನದಲ್ಲೂ ಪ್ರಾದೇಶಿಕ ನಿಷ್ಠೆ ಮತ್ತು ಸ್ವಾರ್ಥಲಾಲಸೆ ಹಗಲಿಗೊಮ್ಮೆಡಿ ಇರುಳಿಗೆ ನಾಲ್ಮಡಿಯಂತೆ ಬೆಳೆದು ಬರುತ್ತಿದೆ!

○ ○ ○

ಯಾರು ಏನೇ ಹೇಳಿದರೂ ಬೆಳಗಾಂವಿಯನ್ನು ತುಕ್ಕಡಿ ಮಾಡುವ ಸಲಹೆ ದೆಹಲಿಯಿಂದ ದೂರ ಹೋಗಿಲ್ಲ. ಬೆಂಗಳೂರು ಏನೇ ಹೇಳಲಿ, ಎಷ್ಟೇ ಮುಗಲಿ, ಬೆಳಗಾಂವಿ ಬೊಬ್ಬಿರಿಯಲಿ, ಇತ್ತಗಳ ಅಬ್ಬರ ಕಡಿಮೆಯಾದಾಗ, ಮುಂಬಯಿ ಬಾಯಿ ತೆರೆದಿದೆ. ಬೆಂಗಳೂರಿನ ನಿಜಲಿಂಗಪ್ಪನವರಿಗೆ ಸಿಂಡಿಕೇಟಿನ ಬಲವೊಂದೇ; ಉಳಿದೆಲ್ಲ ಪಕ್ಷಗಳೂ ಮುಂಬಯಿಗೆ ಪರವಾಗಿವೆಯಂತೆ! ಪಾರ್ಲಿಮೆಂಟ್ ಸದಸ್ಯರಿಗೆ ತಪ್ಪು ಸುದ್ದಿಗಳನ್ನು ಕೊಡಿ, ವಿಪರೀತ ಕಲ್ಪನೆಯು ಮೂಡುವಂತೆ ಮಾಡುವಲ್ಲಿ ಮುಂಬಯಿ ಬಹಳಷ್ಟು ಹಿಂದೆಯೇ ಸಫಲವಾಗಿದೆ. ಅಂದು ಮೂಡಿದ್ದ ಚಿತ್ರ ಎಂಪಿಗಳ ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ ನಿಂತಿದೆ. ಅದನ್ನು ಅಳಿಸಲು ಬೆಂಗಳೂರು ಪ್ರಯತ್ನಿಸಿದರೂ ಮರುಕ್ಷಣವೇ ಮುಂಬಯಿ ಬೆಸೆಯುತ್ತದೆ.

ಪ್ರಧಾನಿ ನಿರ್ವಿಕಾರವಿರಬಹುದು. ಆದರೆ ತನ್ನ ಚುನಾವಣಾ ಅಧಿವೇಶನವನ್ನು ನಡೆಸಿಕೊಡಿಸಿದ ಮುಂಬಯಿಗೆ ಅವರು ಕೃತಜ್ಞರಾಗಿರಲೇಬೇಕು. ತನ್ನ ಪಕ್ಷದ, ಸರಕಾರದ, ಅಧಿಕಾರದ ಉಳಿವಿಗಾಗಿ ಅವರು ಮುಂಬಯಿಯ ಮೇಲೆ ಪುಷ್ಪವೃಷ್ಟಿಗರೆಯಲೇ ಬೇಕು. ಅದಕ್ಕಾಗಿ ಇಡಿಯ ಬೆಳಗಾಂವಿಯನ್ನಲ್ಲವಾದರೂ ಕಡಿಯನ್ನಾದರೂ ಅದರ ರಾಕ್ಷಸೀಕ್ಷುಧೆಗೆ ಬಲಿನೀಡಲೇ ಬೇಕು. ಆ ದಿನ ಈಗಲೇ ಬೇಕೆಂದು ಅವರು ಯೋಚಿಸುತ್ತಿದ್ದಾರೆ.

ಬರ್ಲಿನ್ ನಗರದ ವಿಭಜನೆ ಜಗತ್ತಿನ ರಾಜನೀತಿ ಮಾಡಿದ ಮಹಾಮೂರ್ಖತನವೆಂದು ಎಲ್ಲರೂ ಹೇಳುತ್ತಾರೆ. ವಿಭಜಿತ ಬರ್ಲಿನ್ ಮತ್ತೆ ಏಕೀಭವಗೊಳ್ಳಬೇಕೆಂದು ಹೇಳುವವರೂ ಇದ್ದಾರೆ. ಇದನ್ನು ತಿಳಿದೂ ತಿಳಿದೂ ಒಂದು ದೇಶದ ಎರಡು ರಾಜ್ಯಗಳಲ್ಲಿ ಒಂದು ನಗರವನ್ನು ಹಂಚಿಕೊಡುವ ಈ ವಿಭಜನ ನೀತಿಗೇನನ್ನ ಬೇಕು? ಪ್ರಧಾನಿಯವರು ಚಂಡೀಗಡವನ್ನೇಕೆ ತುಂಡರಿಸಲಿಲ್ಲ? ಮುಂಬಯಿ ನಗರದ ವಿಭಜನೆಯ ಪ್ರಶ್ನೆ ಬಂದಿದ್ದಾಗ ಮರಾಠಿಗರೇಕೆ ಉರುಳಿ ಬಿದ್ದರು? ಅಲ್ಲಿ ಅಸಂಗತವಾದದ್ದು ಇಲ್ಲಿ ಸಂಗತವಾಗುವುದೆ?

ರಾಷ್ಟ್ರೀಯದ ಒತ್ತಡದ ಮುಂದೆ ಮಣಿದು ಯದ್ವಾತದ್ವಾ ವರ್ತಿಸಿದರೆ, ಅದು ಯಾರಿಗೂ ಶ್ರೇಯಸ್ಕರವಾಗುವುದಿಲ್ಲ. ಪ್ರಧಾನಿಯವರು ಅಧಿಕಾರ ಮದದಿಂದ ಮುಂಬಯಿಯ ಮೇಲೆ ಅನುಗ್ರಹ ಮಾಡಲು ಯಾರದ್ದೂ ಆಕ್ಷೇಪವಿಲ್ಲ; ಆದರೆ, ಅದಕ್ಕಾಗಿ ಬೆಂಗಳೂರಿಗೆ ಅನ್ಯಾಯ ಮಾಡಲು ಅವರಿಗೆ ಜನತೆ ಅಧಿಕಾರ ಕೊಟ್ಟು ಒಪ್ಪಿಸಿಲ್ಲ.

ಕ್ಯಾನ್ಸರ್ ರೋಗ; ನಿವಾರಣಾ ಸಮಸ್ಯೆಗಳು

ಲೇಖಕರು: ಡಾ॥ ವಿ. ಕೆ. ದೊರೆಸ್ವಾಮಿ,
ಡೈರೆಕ್ಟರ್-ಜನರಲ್ ಆಫ್ ಹೆಲ್ತ್ ಸರ್ವೀಸಸ್.

ಕ್ಯಾನ್ಸರ್ ರೋಗ ಈಗ ಎಲ್ಲೆಲ್ಲೂ ಹರಡಿದೆ ಈ ರೋಗ ಹರಡುತ್ತಿರುವ ಸಮಸ್ಯೆಯನ್ನು ಕುರಿತು 1965ರಲ್ಲಿ ನಡೆದ 18ನೆಯ ವಿಶ್ವ ಆರೋಗ್ಯ ಸಮಿತಿಯಲ್ಲಿ ಚರ್ಚಿಸಲಾಯಿತು. ಈ ಕ್ಯಾನ್ಸರ್ ರೋಗ ನಿವಾರಣೆಯ ದೃಷ್ಟಿಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ಯಾನ್ಸರ್ ಸಂಶೋಧನೆಗಾಗಿ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಇದಾದ ನಂತರ ಕ್ಯಾನ್ಸರ್ ಸಂಬಂಧಪಟ್ಟ ಯೋಜನೆ, ಸಂಶೋಧನೆ, ಕಾರ್ಯಕ್ರಮಗಳನ್ನು ರೂಪಿಸುವುದು ಇವೇ ಮೊದಲಾದವುಗಳನ್ನು ಈ ನಿಯೋಗದವರೇ ನೋಡಿಕೊಳ್ಳುತ್ತಾ ಬಂದರು. ಕ್ಯಾನ್ಸರ್ ಸಾಂಕ್ರಾಮಿಕ ರೋಗವೇ ಅಲ್ಲವೇ ಎಂಬುದನ್ನು ಹಾಗೂ ಕ್ಯಾನ್ಸರ್ ಚಿಕಿತ್ಸೆ ಕುರಿತು ತರಬೇತಿ ನೀಡುವ ಹೊರೆಯನ್ನು ಈ ಸಂಸ್ಥೆಗೆ ಒಪ್ಪಿಸಲಾಯಿತು.

ಭಾರತದಲ್ಲಿ ಕ್ಯಾನ್ಸರ್ ಸಮಸ್ಯೆ

ಸದ್ಯದಲ್ಲಿ ನಮ್ಮ ದೇಶದಲ್ಲಿ ಕ್ಯಾನ್ಸರ್ ರೋಗ ಬಹಳಷ್ಟು ಪ್ರಮಾಣದಲ್ಲಿ ಕಂಡು ಬರುತ್ತಿದೆ. ಹೆಚ್ಚುತ್ತಿರುವ ಅನಾರೋಗ್ಯ ಪ್ರಮಾಣ ಬೆಳೆಯುತ್ತಿರುವ ಕೈಗಾರಿಕೆಗಳು, ಮತ್ತು ನಮ್ಮ ಪದ್ಧತಿಗಳು ಮತ್ತು ಜನಜೀವನದಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಗಳು ಈ ರೋಗ ಹೆಚ್ಚುತ್ತಿರುವುದಕ್ಕೆ ಮುಖ್ಯಕಾರಣಗಳು. ನಮ್ಮ ದೇಶದಲ್ಲಿ ಬಹುಕಾಲದಿಂದ ಕ್ಯಾನ್ಸರ್ ರೋಗದತ್ತ ಮಹತ್ವದ ಗಮನ ನೀಡಿರಲಿಲ್ಲ. ಅತಿ ಕ್ರೂರ ಹಾಗೂ ಅಂಟುಜಾಡ್ಯಗಳಾದ ಮಲೇರಿಯಾ, ಸಿಡುಬು, ಕ್ಷಯ ರೋಗಗಳು ಮತ್ತು ದೇಶದ ಪ್ರಗತಿಗೆ ಅಡಿಗಲ್ಲಾಗುವ ಕುಟುಂಬಯೋಜನೆ ಇವುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕ್ಯಾನ್ಸರ್ ಒಂದು ಉಪದ್ರವಷ್ಟೇ ಅಲ್ಲದೆ ಅಗೋಚರವಾಗಿ ಬೆಳೆವ ಭಯಂಕರ ರೋಗವಾಗಿ ಪರಿಣಮಿಸುವುದು ಹಾಗೂ ಇದು ಹೆಚ್ಚು ಕಳವಳವನ್ನು ಉಂಟುಮಾಡುವುದು. ಆದರೆ ನಮ್ಮೇನೂ ಈ ಬಗ್ಗೆ ಧೈರ್ಯವನ್ನು ತಾಳಬೇಕಿಲ್ಲ' ಈ ರೋಗವನ್ನು ಕುರಿತು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪರಿಣಾಮಕಾರಿ ಸಂಶೋಧನೆ ನಡೆದಿದೆ. ಅದು ಹಬ್ಬುವುದನ್ನು ಮತ್ತು ಬೆಳೆಯುವುದನ್ನು ತಡೆಯುವುದರ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಾರಂಭದಲ್ಲಿ ಅದನ್ನು ಗುರುತಿಸಿದ್ದೇ ಆದರೆ ಅಂತಹ ಸಂದರ್ಭಗಳಲ್ಲಿ ಯಶಸ್ಸು ಖಂಡಿತ. ಕೆಲವೊಂದು ಸಂದರ್ಭಗಳಲ್ಲಿ ಈ ರೋಗ ಹೆಚ್ಚು ಹರಡದೆ ಅದರ ಮೂಲ ಜಾಗದಲ್ಲಿಯೇ ಕೇಂದ್ರೀಕರಿಸುವುದು. ಹಾಗಾದರೆ ಈ ದಿಶೆಯಲ್ಲಿ ನಾವು ಉತ್ತಮ ಭವಿಷ್ಯವನ್ನು ಕಾಣಬಹುದ.

ಹಳೆಯ ರೋಗ

ಕಳೆದ ಎರಡು ದಶಕಗಳಿಂದ ದೇಶದಲ್ಲಿ ಹಲವಾರು ಕ್ಯಾನ್ಸರ್ ರೋಗಿಗಳನ್ನು ದಾಖಲೆ ಮಾಡಲಾಗಿದೆ. ಅಂದರೆ ಈ ರೋಗಿಗಳ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ ಎಂಬ ಅರ್ಥವಲ್ಲ. ಇದು ಪುರಾತನ ಕಾಲದಿಂದಲೂ ಬೆಳೆದು ಬರುತ್ತಿರುವ ರೋಗಗಳಲ್ಲಿ ಒಂದು.

ಇತ್ತೀಚೆಗೆ ನಮ್ಮ ಜನತೆಯಲ್ಲಿ ತಮ್ಮ ಸ್ವಂತ ಆರೋಗ್ಯದ ಬಗ್ಗೆ ತಿಳುವಳಿಕೆ ಹಾಗೂ ವೈದ್ಯಕೀಯ ನೆರವು ಇವು ಬೇಕಷ್ಟು ಪ್ರಮಾಣದಲ್ಲಿ ಸಿಗುತ್ತದೆ. ಆದ್ದರಿಂದ ಅವರು ಕ್ಯಾನ್ಸರ್ ರೋಗವನ್ನು ಅದರ ಪ್ರಾರಂಭದಲ್ಲಿಯೇ ಗುರುತು ಹಿಡಿದು ವಾಸಿ ಮಾಡಿಕೊಳ್ಳಲು ಸಾಧ್ಯವಾಗಿದೆ. ಸಾಮಾನ್ಯವಾಗಿ ಈ ರೋಗ 45ರಿಂದ ಹೆಚ್ಚು ವಯಸ್ಸಿನವರಿಗೆ ಬರುವುದು. ದೇಶದಲ್ಲಿ ಆರೋಗ್ಯ ಸುಧಾರಣೆ, ಪುಷ್ಟಿಕರ ಆಹಾರ ವಿತರಣೆ, ಮತ್ತು ಸಾಂಕ್ರಾಮಿಕ ರೋಗಗಳ ನಿರ್ಮೂಲನೆ ಇವುಗಳಿಂದಾಗಿ ದೇಶದಲ್ಲಿ ಈಗ ಆಯುಷ್ಯ ಪ್ರಮಾಣ 53 ವರ್ಷದವರೆಗೆ ಏರಿದೆ. ಇದರಿಂದಾಗಿ ಸದ್ಯದಲ್ಲಿ ಈ ಗುಂಪಿಗೆ ಸೇರಿದ ವ್ಯಕ್ತಿಗಳ ಸಂಖ್ಯೆ ನಮ್ಮಲ್ಲಿ ಬಹಳಷ್ಟು ಇದೆ. ಹೃದಯ, ರಕ್ತನಾಳಗಳು, ಜೀವದ್ರವ್ಯ ಪರಿಣಾಮದಿಂದಾಗಿ ಸಂಭವಿಸುವ ರೋಗಗಳು ಮತ್ತು ಕ್ಯಾನ್ಸರ್ ಇವು ಈ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಬರುವುದು.

ಸಮಸ್ಯೆಯ ಗಾತ್ರ

ಕ್ಯಾನ್ಸರ್ ರೋಗದಿಂದಾಗಿ ಪ್ರತಿ ವರ್ಷ ಸುಮಾರು 200,000 ಮಂದಿ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಸಾವಿನ ಪ್ರಮಾಣ ಗುರುತಿಸಲು ಕಳೆದ 15 ವರ್ಷಗಳಿಂದ ಪ್ರಯತ್ನಗಳನ್ನು ನಡೆಸಲಾಗಿದೆ. ಇತರ ರೋಗಗಳ ಗಾತ್ರವನ್ನು ಅರಿಯಬಹುದು. ಆದರೆ ಕ್ಯಾನ್ಸರ್ ವಿಷಯದಲ್ಲಿ ಅಷ್ಟೊಂದು ಸುಲಭವಲ್ಲ. ಪ್ರತಿಯೊಂದು 100,000 ಜನತೆಯಲ್ಲಿ 85ರಷ್ಟು ಮಂದಿ ಈ ಕಾಯಿಲೆಗೆ ಈಡಾಗುತ್ತಿದ್ದಾರೆ ಎಂಬುದಾಗಿ ಮುಂಬೈನಲ್ಲಿರುವ ಟಾಟಾ ಸ್ಮಾರಕ ಆಸ್ಪತ್ರೆ ಡೈರೆಕ್ಟರ್ ಜನರಲ್‌ರಾದ ಶ್ರೀ ಜೆ. ಸಿ. ಪೇ ಮಾಸ್ಟರ್ ಅವರು ಅಂದಾಜು ಮಾಡಿದ್ದಾರೆ.

ಕ್ಯಾನ್ಸರ್‌ನ ವಿವಿಧ ಬಗೆಗಳಲ್ಲಿ ಬಾಯಿ ಕ್ಯಾನ್ಸರ್ ಬಹಳ ಮಂದಿಗೆ ಬರುತ್ತದೆ. ಧೂಮಪಾನ, ಹೊಗೆಸೊಪ್ಪು ಸೇವನೆ ಇವುಗಳಿಂದಾಗಿ ಈ ಕಾಯಿಲೆ ಬರುವುದೆಂದು ವಿಜ್ಞಾನಿಗಳ ಅಭಿಪ್ರಾಯ. ನೂರರಲ್ಲಿ 50 2ರಷ್ಟು ಭಾಗ ಯೂಟೆರ್‌ಸ್‌ನ ಕಂಠದ ಬಳಿ, 32ರಷ್ಟು ಭಾಗ ಬಾಯಿ ಕ್ಯಾನ್ಸರ್, ಧ್ವನಿಪೆಟ್ಟಿಗೆಗೆ ಸಂಬಂಧಿಸಿದ ಕ್ಯಾನ್ಸರ್ 7 5ರಷ್ಟು ಹಾಗೂ ಇತರ ಬಗೆಯ ಕ್ಯಾನ್ಸರ್ 10 ಭಾಗವೆಂದು ಮದರಾಸಿನ ಕ್ಯಾನ್ಸರ್ ಸಂಸ್ಥೆಯು ತಿಳಿಸಿದೆ.

ಕ್ಯಾನ್ಸರ್ ನಿವಾರಣೆ ಮತ್ತು ಸಮಸ್ಯೆಗಳು

ದೇಶದಲ್ಲಿ ಕ್ಯಾನ್ಸರ್ ರೋಗನಿವಾರಣೆಯನ್ನು ಕೈಗೊಳ್ಳುವಾಗ ಅನೇಕ ಸಮಸ್ಯೆಗಳು ತಲೆದೋರುವವು. ಮೊದಲನೆಯದಾಗಿ ನಮ್ಮ ಜನತೆ ಆರ್ಥಿಕ ಮತ್ತು ಶಿಕ್ಷಣ ವಿಷಯಗಳಲ್ಲಿ ಇನ್ನೂ ಹಿಂದುಳಿದಿದ್ದಾರೆ, ಇದರಿಂದಾಗಿ ರೋಗವನ್ನು ಅವರು ಪ್ರಾರಂಭದಲ್ಲಿ ಕಂಡುಹಿಡಿಯುವ ಗೋಜಿಗೆ ಹೋಗುವುದಿಲ್ಲ. ಕೆಲವೊಂದು ಬಾರಿ ರೋಗಿ ತನ್ನ ಇಡೀ ಕುಟುಂಬದವರಿಗೆ ಅನ್ನದಾತನಂತಿರುತ್ತಾನೆ. ಅವ ಆಸ್ಪತ್ರೆಯಲ್ಲಿ ಸೇರಿದರೆ ಇಡೀ ಕುಟುಂಬಕ್ಕೆ ತೊಂದರೆ ಬರುವುದು. ಹೀಗಾಗಿ ಅವನು ರೋಗದ ಕಡೆ ಅಷ್ಟಾಗಿ ಲಕ್ಷ್ಯ ನೀಡುವುದಿಲ್ಲ. ಕ್ಯಾನ್ಸರ್ ಚಿಕಿತ್ಸಾಲಯಗಳು ನಮ್ಮ ನಾಡಿನಲ್ಲಿ ಇಲ್ಲ. ಬೇಕಾದಷ್ಟು ಪ್ರಮಾಣದಲ್ಲಿ ಸುಸಜ್ಜಿತ ಹಾಗೂ ಉತ್ತಮ ವೈದ್ಯಕೀಯ ನೆರವು ಇರುವ ಆರೋಗ್ಯ ಸಂಸ್ಥೆಗಳು ನಮ್ಮ ದೇಶದಲ್ಲಿ ಸ್ಥಾಪನೆಯಾಗಬೇಕು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337 / 2 29887 — Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಗೋಪರಾಜ್ಯದಲ್ಲಿ

ಎಪ್ರೀಲ್ ಕಳೀತೂಂದ್ರೆ...

"ಕಳೆದ ವರ್ಷ ಇಷ್ಟರಲ್ಲೇ ನಾಲ್ಕಾರು ಮಳೆ ಬಂದಿತ್ತು.'

"ಈ ವರ್ಷ ಒಂದು ಮಳೆ ಮಾತ್ರ ಬಂದು ಹೋಗಿದೆ...."

'ಹೀಗಾದ್ರೆ ಊರ್‍ನಲ್ಲಿ ಬೈಲ ಬದಿಯವರಿಗೇ ಕುಡಿಯೋಕೆ ನೀರಿಲ್ಲ....'

"ಅದಕ್ಕೇ ನೋಡು ಫವ್ಮ್ರಯೋಜನೆ?'

"ಏನದು?"

"ರೈತರು ಮಳೆ ನೀರನ್ನು ನಂಬಿ ಕೈಕಟ್ಟ ಕೂತಿರಬಾರ್ದು; ಜನರು ಬಾವಿನೀರನ್ನು ನಂಬಿರಬಾರ್ದು...."

"ಮತ್ತೆ...?"

'ನೋಡು, ರೈತರಿಗೆ ಅಣೆಕಟ್ಟುಗಳು ಸಿಕ್ಕಿ ಒದಗಿಸುತ್ತವೆ. ಬೃಹತ್ ಕಾಲುವೆಗಳು ಹೊಲಹೊಲಗಳಿಗೆ ನೀರು ಹರಿಸುತ್ತವೆ...."

'ಸರೀನ್ನಿ. ಅದೆಲ್ಲ ಜಯಲು ಸೀಮೆಯಲ್ಲಾಯ್ತು. ನಮ್ಮ ಕರಾವಳಿಯಲ್ಲಿ?"

'ಬಾವಿಬಾವಿಗೆ ಗರಿಕೆರಗೆ, ಹಳ್ಳಹಳ್ಳಕ್ಕೆ ಪಂಪುಸೆಟ್ಟು ರಾತ್ರಿಕಗಲು ಚಾಲನೆ. ಎಲ್ಲೆಲ್ಲೂ ಹಸಿರು ಕ್ರಾಂತಿ..."

"ಅದು ಸರೀರಿ. ಆದರೆ, ನಮ್ಮ ಬಾವಿಗಳಲ್ಲೇ ನೀರಿಲ್ಲಾಂತಾದ ಮೇಲೆ ಪಂಪು ಏನು ಮಾಡೀತು?'

'ಬಾವಿಯನ್ನು ತೋಡ ಬೇಕು. ಭೂ ಅಭಿವೃದ್ಧಿ ಬ್ಯಾಂಕು ಸಾಲ ಕೊಡುತ್ತದೆ.'

'ಇದೊಳ್ಳೇ ಕಥೆಯಾಯ್ತು..."

"ಯಾಕೆ?"

"ಅಲ್ಲ, ಮೊದ್ಲು ನಮ್ಮ ಊರಿನ ಸಾಹುಕಾರ ಮಾತ್ರ ರೈತನ ಪ್ರಾಣ ಹಿಂಡೋ ಯಮದೂತನಾಗಿದ್ದ. ಆದ್ರೆ ಈಗ, ಆ ಯಮ ದೂತನ ಕೈಯಿಂದ ಆ ಪ್ರಾಣವನ್ನು ಉಳಿಸಿ ಚಿತ್ರಹಿಂಸೆಯಿಂದ ಹೀರ ತ್ತವೆ ಹಲವಾರು ಕಣೆಗಳು...'

"ಎಷ್ಟೇ ಹಾಗನ್ನುತ್ತಿ?"

"ಮತ್ತೇನೆಂಥದ? ಕೋಣ–ಕೋರಿ–ನೇಗಿಲು ನೊರ, ಬೀಜ ಎಲ್ಲ ಕೊಳ್ಳಲು ಸಹಕಾರಿ ಸಂಘದಿಂದ ಸಾಲ, ಗೊಬ್ಬರ ಆದೂ ಸಾಲವೆ, ಪಂಪುಸೆಟ್ಟ ಕಡ, ಮತ್ತೆ ಅಕ್ಕನದ್ದು ಎನ ಆಯಿತು? ಎಲ್ಲ ಕಡ ತಂದದ್ದರಿಂದ ಆ ಎಲ್ಲಾ ಸಂಘಗಳ ಸಾಲ–ಬಡ್ಡಿ, ಸಂಘ ಭೂತಗಳಿಗೆ ಭೋಗವೆಲ್ಲ ನೀಡಿದ ಮೇಲೆ...."

'ರೈತನ ದೇಹದಲ್ಲಿ ರಕ್ತವೂ ಉಳಿಯುವುದಿಲ್ಲ ಅನ್ನುತ್ತೀಯ?'

"ಅಷ್ಟು ಮಾತ್ರವಲ್ಲ; ನೋಡಿ, ಹೊಳೆಗೆ ಕಟ್ಟ ಹಾಕಬಹುದ; ಬಾವಿ—ಕೆರೆ ತೋಡಿಸಿ ಕಂಪೂ ಇಡ ಬಹುದು. ಆದರೆ, ಭೂಮಿಯಲ್ಲಿ ಒಸರೇ ಇಲ್ಲವಾದರೆ, ಎಲ್ಲ ಹೊಣ್ಣಾನಿಗೆ ರಾಸಿ ಪೂಜೆ...'

"ಹಾಗಾದರೆ, ಇದೆಲ್ಲ ವ್ಯರ್ಥವೇ?"

"ಹಾಗಂತ ಯಾಕನ್ನೇಕು? ಮಳೆಯನ್ನ ಕಾಯಬೇಕಾಗಿಲ್ಲಾಂತ ಸ್ಥಿಮಂದದ್ದಕ್ಕೆ ಹೇಳಿದೆ. ನೋಡಿ, ಮಾನವನೇನೇ ಮಾಡಲಿ, ಪ್ರಕೃತಿಯ ಕರುಣೆ ಅತನ ಮೇಲೆ ಇದ್ದರೆ ಮಾತ್ರ ಪ್ರಯೋಜನ___"

'ಅಲ್ವೆ ಈಗೀಗ ಕೃತಕ ಮಳೆಯನ್ನೂ ಸುರಿಸ್ತಾರೆ....'

"ಶಾಮಮೇ, ಒಂದು ಹನಿ ಮಳೆ ನೀರಿಗೆ ರೂಪಾಯಿ ಬೆಲೆ ಬಿದ್ದೀತು. ಸಿನಿಮಾಗಳಲ್ಲಿ ಒಂದು ನಿಮಿಷ ಮಳೆ ಸಾಕಾಗುತ್ತೇಂತ ಹೊಲ ಗದ್ದೆಗಳಿಗೆ ಅದು ಸಾಕಾದೀತೆ?"

"ಹಣ್ಣಾಂ, ಅದೂ ಹೌದೂನ್ನು.'

'ಮತ್ತೆ ನೋಡಿ, ನಳ್ಳಿನೀರಿನ ಸಂಗತಿ. ನಮ್ಮೂರಿನ ಜನರು ನೀರು ಬರುವುದಕ್ಕೆ ಮೊದಲೇ ನೀರಿನ ತೆರಿಗೆ ಕೊಡುತ್ತಿದ್ದಾರೆ. ಕೆಲಸ ಎಂದೋ ಆರಂಭವಾದರೂ ಸದ್ಯ ಅಲ್ಲಲ್ಲಿ ಬಿದ್ದಿರುವ ಬಿಸಿಲಲ್ಲಿ ಬಿಸಿಯಾಗಿರುವ ನಳ್ಳಿಗಳನ್ನೇ ನೋಡ ಬೇಕು. ಅವುಗಳಲ್ಲಿ ನೀರು ಹರಿಯುವಾಗ ಹಾಕಿದ ನಳ್ಳಿ ತುಕ್ಕು ಹಿಡಿದು ಸೋರತೊಡಗುತ್ತವೆಯೋ ಏನೋ'

'ಸಾಕು ಮಾಡೆ. ತುಕ್ಕು ಹಿಡಿಯೋಕೆ ಅದೇನು ನಾವೂನ್ಯ ಕಬ್ಬಿಣಾಂತಂದೆಯ?"

"ಅಲ್ರಿ, ಹೀಗೆ ಮಾತಿಗಂದೆ. ಮತ್ತೆ ನೋಡಿ, ನಳ್ಳಿಗಳಲ್ಲಾದರೂ ಸರಿಯಾಗಿ ನೀರು ಸುರಿಯುತ್ತೆ ಅಂತ ಏನು ಗ್ಯಾರಂಟಿ? ಇಲೆಕ್ಟ್ರಿಸಿಟಿಯು ಸೀಟಿ ಊದದಯೇ ಹೊತ್ತು ಗೊತ್ತಿಲ್ಲದೆ ದಿನಾ ನೂರುಸಲ ಕಣ್ಣುಮುಚ್ಚಾಲೆ ಆಡೋದನ್ನು ನೆನೆವಾಗ, ಈ ನಳ್ಳಿನೀರಿನ ಕಥೆ ಭಾರೀ ಪಸಂದಾದೀತೆನಿಸುತ್ತೆ...."

"ನನಗೊಂದು ಸಂದೇಹ...."

"ಏನು?"

'ನಮ್ಮೂರ ಹೊಳೆಗಳೇ ಹೊಯ್ಗೆಯನ್ನು ಹೊತ್ತಿರುವಾಗ, ಇಡಿ ವರ್ಷ ನಳ್ಳಿಯಲ್ಲಿ ನೀರು ಹರಿದೀತೇ ಅಂತ....'

"ಅದ್ರಾ ಒಂದು ಸಂತೋಷ ರಾಜಮಾರ್ಗದ ಬಳಿ ಹಾಕಿದ ನಳ್ಳಿಗಳಲ್ಲಿ ಏನೂ ಹರಿದು ಬಂದರೂ ನಮ್ಮ ಕಡೆ ಹಾಕಿದ ಪೈಪುಗಳಲ್ಲಿ ಕಂಡಿತಕ್ಕೂ ಹರಿಯಲಾರದು...."

"ಅಲ್ವ, ಮೀನು ಅಂದ್ರೆ ಮರಿಗಳೂ ಇರಬಹುದು, ಬೆರಳುದ್ದದ ಮೀನುಗಳೂ....'

"ಅದೇನಿದೂ, ನಮ್ಮದು ಏರು ತಾನೆ? ಹರಿಯುವ ಫೋರ್ಸಿಗೆ ಅವೆಲ್ಲ ಕೆಳಗೆ ಇಳಿದು ಹೋಗುತ್ತವೆ. ಅಡ್ಡ ತಿರುಗಲಾರವು."

'ಯಾಕೆ ಅವಸರ, ಇನ್ನೂ ಒಂದೆರಡು ವರ್ಷ ಕಾದರೆ....'

'ಅದೇ ಈಗ ಬಂದಿರೋದು, ಎಪ್ರಿಲ್ ಕಳೀತೂಂತಾದಾಗ ನಳ್ಳಿ ನೀರಿನ ನೆನಪು ಬೇಡವೆಂದರೂ ಬರುತ್ತೆ. ಊರವರ ಮುಂದೆ ಕೊಡಪಾನ ನೀರಿಗಾಗಿ ಕ್ಯೂ ನಿಂತು ನಿಂತು ಸಾಕಾತ್ತು...'

"ಏನು ಮಾಡೋದು? ಎಲ್ಲಾ ಪಡಕೊಂಡು ಬಂದಿರೋದು...'

"ಹೌದ್ರಿ, ನಿಮ್ಮನ್ನು..."

"ಅಲ್ಲವೇ ಮತ್ತೆ...?"

—ಗೋರಾ.

ಸಿಂಡಿಕೇಟ್ ಬ್ಯಾಂಕ್

ಇವರು ತಮ್ಮ ಹೊಸ 16 ಶಾಖೆಗಳನ್ನು
ಈ ಕೆಳಗಿನ ಸ್ಥಳಗಳಲ್ಲಿ ಎಪ್ರಿಲ್ 25, 1970 ರಂದು
ತೆರೆಯಲಿರುವರು.

ವಿಸ್ಸಣ್ಣ ಪೇಟೆ ಕೃಷ್ಣ ಜಿಲ್ಲೆ, ಆಂಧ್ರ ಪ್ರದೇಶ	ರಾಪೂರ್ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ
ಕೊಂಡಪಳ್ಳಿ ಕೃಷ್ಣ ಜಿಲ್ಲೆ, ಆಂಧ್ರ ಪ್ರದೇಶ	ಉದಯಗಿರಿ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ
ಕೋಟ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ಸಿರಿವೆಲ್ ಕರ್ನೂಲು ಜಿಲ್ಲೆ, ಆಂಧ್ರ ಪ್ರದೇಶ
ವಿದವಲೂರ್ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ಡೊಮಕೊಂಡ ನಿಜಾಮಾಬಾದ್ ಜಿಲ್ಲೆ, ಆಂಧ್ರಪ್ರದೇಶ
ಪೊದಲಕೂರ್ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ಮುಂಡರ್ಗಿ ಧಾರವಾಡ ಜಿಲ್ಲೆ, ಮೈಸೂರು ರಾಜ್ಯ
ತಾಡ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ನವಲಗುಂದ ಧಾರವಾಡ ಜಿಲ್ಲೆ, ಮೈಸೂರು ರಾಜ್ಯ
ಅಲ್ಲೂರ್ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ಹೋಲಿ–ಬೆಸ್ಸೀನ್ ಥಾನಾ ಜಿಲ್ಲೆ, ಮಹಾರಾಷ್ಟ್ರ
ಅತ್ಮಾಕೂರ್ ನೆಲ್ಲೂರು ಜಿಲ್ಲೆ, ಆಂಧ್ರ ಪ್ರದೇಶ	ಚಲಾಡ್ ಕಣ್ಣಾನೂರು ಜಿಲ್ಲೆ, ಕೇರಳ

ನಮ್ಮ ಮತ್ತೊಂದು ಹೊಸ ಶಾಖೆಯು
ಕೇರಳದ ಪಾಲ್ಘಾಟ್ ಜಿಲ್ಲೆಯ ಪಡಗಿರಿ—
ನೆಲ್ಲಿಯಂಪತಿ ಹಿಲ್ಸ್ ಎಂಬಲ್ಲಿ ಎಪ್ರಿಲ್ 21,
1970ರಂದು ತೆರೆಯಲ್ಪಟ್ಟಿತು.

ಮೇಲಿನ 17 ಶಾಖೆಗಳ ಹೆಚ್ಚುವರಿಯಿಂದ ಸಿಂಡಿಕೇಟ್
ಬ್ಯಾಂಕಿನ ಒಟ್ಟು ಶಾಖೆಗಳ ಸಂಖ್ಯೆ 391ಕ್ಕೆ ಏರಿತು.

FAITHFUL

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ :
ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ
ಕಸ್ಟೋಡಿಯನ್

ಗುರುಪಟ್ಟದ ವಜ್ರೋತ್ಸವ

ಕಲ್ಯಾಣಪುರ: ಸ್ಥಳೀಯ ಮಿಲಾಗ್ರಿಸ್ ಇಗರ್ಜಿಯ ಪ್ರಧಾನ ಗುರುಗಳಾದ ವೆ. ರೆವೆರೆಂಡ್ ಫಾದರ್ ಮೊನ್ಸಿಂಜರ್ ಡಿ. ಜೆ. ಡಿ'ಸೋಜಾರವರ ಗುರು ಪಟ್ಟದ 60ನೇ ವರ್ಷದ ವಜ್ರೋತ್ಸವವು ತಾ. 21.4.1970 ರಂದು ಬಹು ವಿಜೃಂಭಣೆಯಿಂದ ಮಂಗಳೂರಿನ ಬಿಷಪರಾದ ಡಾ. ಬಾಜಿಲ್ ಎಸ್. ಡಿ'ಸೋಜಾರವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಮೊನ್ಸಿಂಜರ್ ಡಿ. ಜೆ. ಡಿ'ಸೋಜಾರವರು ದಿವ್ಯ ಪೂಜೆಯನ್ನು ದೇವರಿಗೆ ಸಮರ್ಪಿಸಿದರು. ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಕಲ್ಯಾಣಪುರ ಮಿಲಾಗ್ರಿಸ್ ಇಗರ್ಜಿಯ 10 ಸಮಾಜಗಳ ಪರವಾಗಿ ಒಂದು ಮಾನಪತ್ರವನ್ನು ಅವರಿಗೆ ಅರ್ಪಿಸಲಾಯಿತು. ಈ ಮಾನಪತ್ರದಲ್ಲಿ ಕಳೆದ 60 ವರ್ಷಗಳಲ್ಲಿ ಅವರ ಸಾಧನೆಗಳ ಪರಿಚಯ ಮಾಡಿಕೊಡಲಾಗಿತ್ತು. ಧಾರ್ಮಿಕ ಕ್ಷೇತ್ರ, ವಿದ್ಯಾ ಕ್ಷೇತ್ರದಲ್ಲಿ ಇವರು ಹಲವಾರು ಇಗರ್ಜಿ ಮತ್ತು ಹಲವಾರು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

ಬಾರ್ಕೂರು ಇಗರ್ಜಿಯ ಗುರುಗಳಾದ ರೆವೆರೆಂಡ್ ಫಾದರ್ ರುಜಾರಿಯೋರವರೂ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಪಿ. ಗುರುರಾಜ ಭಟ್ಟರವರೂ ಎಡ್ವೋಕೇಟ್ ಶಿರ್ವಾಡಿ ವಿಲಿಯಂ ಪಿಂಟೋರವರೂ ಅತಿಥಿಗಳ ಗುಣಗಾನ ಮಾಡಿದರು.

ಮೊನ್ಸಿಂಜರ್ ಡಿ. ಜೆ. ಡಿ'ಸೋಜಾರು ತಮ್ಮ ಭಾಷಣದಲ್ಲಿ "ನಾನು ದೇವರಿಚ್ಛೆಯನ್ನು ಪಾಲಿಸುವುದರಲ್ಲಿ ಒಂದು ಸಾಧನವಷ್ಟೆ. ನನ್ನದೇ ಆದ ಶಕ್ತಿ ಸಾಮರ್ಥ್ಯಗಳಿಂದ ಸಾಧಿಸಿದ ಮಹತ್ಕಾರ್ಯಗಳು ನನ್ನ ಪಾಲಿಗಿವೆ ಎನ್ನುವ ಅಹಂಕಾರ ಹಾಗೂ ಸಿದ್ಧಾಂತ ನನಗಿಲ್ಲ. ಸಮಾಜದ ಎಲ್ಲಾ ವರ್ಗದ ಜನರು ನನಗೆ ಸಂಪೂರ್ಣ ಸಹಾಯ, ಸಹಾನುಭೂತಿಗಳನ್ನು ಕೊಟ್ಟುದರಿಂದ ಈ ಕೆಲಸ ಮಾಡಲು ಸಾಧ್ಯವಾಗಿದೆ. ನನ್ನನ್ನು ಸತ್ಕರಿಸಿ ಇಂತಹ ದೊಡ್ಡ ಸಮಾರಂಭ ಮಾಡಬೇಕಾಗಿರಲಿಲ್ಲ. ಆದರೂ ನೀವು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಗಳಿಗೆ ಚಿರಋಣಿ" ಎಂದರು.

ಅಧ್ಯಕ್ಷ ಸ್ಥಾನದಿಂದ ಮಂಗಳೂರಿನ ಪೂಜ್ಯ ಬಿಷಪರಾದ ಡಾ| ಬಾಜಿಲ್ ಡಿ. ಸೋಜಾರವರು ಮಾತನಾಡುತ್ತಾ "ಮೊನ್ಸಿಂಜರ್ ಡಿ. ಸೋಜಾರ ಜೀವನದ ಯಶಸ್ಸಿನ ಗುಟ್ಟು ಪ್ರಾರ್ಥನೆ ಮತ್ತು ಅವರ ವಿನಯ ಸರಳ ಸ್ವಭಾವ, ದೇವರ ಮೇಲೆ ಅಚಲವಾದ ಭಕ್ತಿಯಿದ್ದು ತಾನು ಮಾಡಬೇಕಾದ ಎಲ್ಲಾ ಧಾರ್ಮಿಕ ಚಟುವಟಿಕೆಗಳನ್ನು ನಿಷ್ಠೆಯಿಂದ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಪರಮಾತ್ಮ ಸಾಮಾಜಿಕ ಸೇವೆಮಾಡಲು ಒಳ್ಳೆಯ ಆರೋಗ್ಯ ಕೊಟ್ಟು ಅವರು ಸಾಯುವಾಗಲೇ" ಎಂದರು. ಕೊನೆಯಲ್ಲಿ ಶ್ರೀ ಜೆ. ಪಿ. ಡಿ. ಸೋಜಾರವರು ಧನ್ಯವಾದ ಸಮರ್ಪಿಸಿದರು.

ಸಾಯಂಕಾಲ ಕಲ್ಯಾಣಪುರ ಯುವಕವೃಂದದವರು "ಗುಪಿತ್ ಸತ್" ಎಂಬ ಕೊಂಕಣಿ ನಾಟಕವನ್ನು ಆಡಿ ತೋರಿಸಿದರು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಎಲ್. ಐ. ಸಿ. ಯ ಆಶೋತ್ತರಗಳು

ಶ್ರೀ ಟಿ. ಎ. ಪೈ ಭಾಷಣ

ಎಲ್. ಐ. ಸಿ.ಯ ಅಧ್ಯಕ್ಷ ಶ್ರೀ ಟಿ. ಎ. ಪೈ ಅವರು ಉಡುಪಿಯ ವಿಮಾ ನೌಕರರನ್ನು ಉದ್ದೇಶಿಸಿ ಮಾತನಾಡಿ, ಎಲ್ಐಸಿಯ ಆಕಾಶ ಮಟ್ಟವಂತಹ ಆಶೋತ್ತರಗಳ ಪೂರ್ತಿಕೆಗಾಗಿ, ನೌಕರ ವರ್ಗದ ಸಂಪೂರ್ಣ ಸಹಕಾರವನ್ನು ಬಯಸಿದರು. ಬುದ್ಧಿಶಕ್ತಿ, ಪ್ರಯೋಗ, ಕರ್ತವ್ಯನಿಷ್ಠೆ ಹಾಗೂ ಸೇವಾತತ್ಪರತೆಗಳ ಅನಿವಾರ್ಯತೆಯನ್ನು ಅವರು ಪದೇ ಪದೇ ಒತ್ತಿ ಹೇಳಿದರು.



"ಜಗತ್ತಿನಲ್ಲಿ ಶಾಂತಿ ಸ್ಥಾಪಿತವಾಗಬೇಕಾದರೆ, ಮಾನವನ ಹೃದಯದಲ್ಲಿ ಮೊದಲು ಶಾಂತಿ ನೆಲೆಯಾಗಬೇಕು. ಎಲ್ಐಸಿಯು ಎಲ್ಲಾ ವಿಭಾಗಗಳಲ್ಲಿಯೂ ಇಂದು ಕಾಣಿಸಿಕೊಂಡಿರುವ ತೀವ್ರ ಅತೃಪ್ತಿ ದೂರವಾಗಬೇಕಾದರೆ, ಅದರ ನೌಕರರು ಮೊದಲಿಗೆ ತೃಪ್ತರಾಗಿರಬೇಕು. ಎಲ್ಐಸಿಯೂ ತನ್ನ ನೌಕರರ ಹಿತಚಿಂತನೆಯನ್ನಷ್ಟೇ ಮಾಡಿ ಸುಮ್ಮನಿರುವುದು ಸಾಧ್ಯವಿಲ್ಲ; ಇದರಿಂದ ಪೂರೈಸಬೇಕಾದ ಹತ್ತಾರು ಸಾಮಾಜಿಕ ಉದ್ದೇಶಗಳಿವೆಯೆಂಬುದನ್ನು ನೌಕರರು ಮರೆಯಬಾರದು.

'೧೦೦೦ ಕೋಟಿ ರೂ. ವ್ಯವಹಾರವನ್ನು ಪೂರೈಸಬೇಕೆಂದು ಎಲ್ಐಸಿ ಐದು ವರ್ಷ ಹಿಂದೆಯೇ ನಿರ್ಧರಿಸಿದ್ದರೂ ಅದನ್ನು ಈ ವರ್ಷವಷ್ಟೇ ಮುಟ್ಟುವುದು ಸಾಧ್ಯವಾಯ್ತು. ಇದಕ್ಕಿರುವ ಹಲವು ಕಾರಣಗಳಲ್ಲಿ ನೌಕರರು ಸಂಸ್ಥೆಯ ಉದ್ದೇಶವನ್ನು ಮರೆತದ್ದು ತಂತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ತಪ್ಪಿದ್ದು ಪ್ರಮುಖ. ಗಣಕೀಕರಣವನ್ನು ವಿರೋಧಿಸುವ ನೌಕರರು ತಾವೇ ಯಂತ್ರಗಳಂತೆ ಕೆಲಸ ಮಾಡುವುದು ಸರಿಯಲ್ಲ.

ಇಂದು ಆಫೀಸಿನ ಕೆಲಸಕ್ಕೆ ಅಡ್ಡಿಯಾಗದಂತೆ ಯಾವ ನೌಕರನೂ ಖಾಸಗಿಯಾಗಿ ತನ್ನ ಶಿಕ್ಷಣವನ್ನು ಮುಂದುವರಿಸಬಹುದು. 'ಪ್ರಮೋಶನ್'ಗೆ ಹೆಚ್ಚಿನ ಅವಕಾಶವಿದೆ. ಎಲ್ಐಸಿಯು ಕ್ರಿಯಾಶಕ್ತಿಯನ್ನು ಹೆಚ್ಚಿಸಲು ಡಿವಿಜನಲ್ ಆಫೀಸುಗಳಿಗೆ ಹೆಚ್ಚಿನ ಅಧಿಕಾರ ನೀಡುವ ಬ್ರಾಂಚುಗಳು ಯೋಗ್ಯ ಸೇವೆ ಸಲ್ಲಿಸಲು ಅನುಕೂಲತೆಯೊದಗಿಸುವ ಯೋಜನೆಯೊಂದು ಪರಿಶೀಲನೆಯಲ್ಲಿದೆ. ಇದರಿಂದ ಅಧಿಕಾರಿಗಳೂ ನೌಕರರೂ ತಮ್ಮ ಕರ್ತವ್ಯಗಳನ್ನು ಹೆಚ್ಚು ದಕ್ಷತೆಯಿಂದ, ತಮ್ಮ ಬುದ್ಧಿಶಕ್ತಿಯ ಪರಿಪೂರ್ಣ ಉಪಯೋಗದಿಂದ ನಿರ್ವಹಿಸಬಹುದು. ನೀವೆಲ್ಲರೂ ಬುದ್ಧಿಪೂರ್ವಕವಾಗಿ ಎಲ್ಐಸಿಯ ಬೆಳವಣಿಗೆಯನ್ನು ಚಿಂತಿಸಿರಿ. ಸಂಸ್ಥೆಯು ಹೇಗೆ ಜನತೆಗೆ ಉಪಯುಕ್ತ ಸೇವೆ ಸಲ್ಲಿಸಬಹುದೆಂದು ಆಲೋಚಿಸಿರಿ. ದುಡಿಮೆಯಲ್ಲಿ ಕ್ರಿಯಾಶಕ್ತಿ ತುಂಬಿರಲಿ. ಸಾರ್ವಜನಿಕ ಹಿತೇಚ್ಛೆಯನ್ನು ನಾವು ಮೊದಲು ಸಾಧಿಸೋಣ.

ಎಲ್ಐಸಿಯು ತನ್ನ ಪಾಲಿಸಿದಾರರನ್ನು ಮರೆಯುವಂತಿಲ್ಲ. ಇತರ ವರ್ಗದವರ ಆಕಾಂಕ್ಷೆಗಳನ್ನೂ ಅಲಕ್ಷಿಸುವಂತಿಲ್ಲ. ನಿಮ್ಮನ್ನು ಕಡೆಗಣಿಸುವಂತಿಲ್ಲ. ಇದಕ್ಕಾಗಿ ಒಂದು ಸಾಮೂಹಿಕ ಪ್ರಯತ್ನ ಸಾಗಬೇಕು. ಜೀವವಿಮೆಯ ರಕ್ಷಣೆ ಅತಿ ಹೆಚ್ಚಿನ ಜನರಿಗೆ ಮುಟ್ಟಬೇಕು. ಅದರ ಸಂಪನ್ಮೂಲವು ಸಾಮಾಜಿಕ ಹಿತಾಭಿವೃದ್ಧಿಗೆ ದೊರೆಯಬೇಕು. ಹೊಸ ಹೊಸ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕು. ನೀವು ನಿಮ್ಮ ಕೆಲಸವನ್ನು ತೃಪ್ತಿಯಿಂದ ಮಾಡಿರಿ. ಜವಾಬ್ದಾರಿಯಿಂದ ಮಾಡಿಕೊಳ್ಳುವ ಪ್ರಯತ್ನ ನಿಮ್ಮದಾಗಬೇಕು. ಆಗ ಮಾತ್ರ ಮಾನವ ಸಹವಾಸವೂ ಒಪ್ಪಾಗುವುದೂ ಮಾನವ ಶಕ್ತಿಗೆ ಬಾಹಿರವಾದದ್ದಲ್ಲ.

ನಿಮ್ಮ "ಚಾರ್ಟರ್ ಆಫ್ ಡಿಮಾಂಡ್ಸ್" ನಿಮ್ಮ ಗುರಿಯಾಗಿರಲಿ, ಆದರೆ ಅದನ್ನು ಇಂದೇ ಮುಟ್ಟಬೇಕೆಂಬ ಹಠ ತ್ಯಾಗಿಸಿ, ಮಾತ್ರ ಇಟ್ಟುಕೊಳ್ಳಿರಿ. ಕರ್ತವ್ಯಚ್ಯುತರಾಗಿ ಎಲ್. ಐ. ಸಿ. ಯ ಬೆಳವಣಿಗೆಗೆ ಹಾನಿ ತಂದು ಅದರ ಸಾಮಾಜಿಕ ಆಶೋತ್ತರಗಳಿಗೆ ಅಡ್ಡಿಯಾಗಬೇಡಿರಿ."

ಇಂಡಿಕೇಟಿಗೆ ಮಂದವ್ಯಾಧಿ

ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಒಡೆದುದಕ್ಕೆ ಯಾವುದೇ ಕಾರಣ ಹೇಳಲಿ, ಹೇಳುತ್ತಲೇ ಇರಲಿ, ಆದರೆ, ಮೂಲಕಾರಣ "ಅಧಿಕಾರದ ಮೋಹ" ವೆಂಬುದೀಗ ಸ್ಪಷ್ಟವಾಗಿದೆ. ಯಾವುದೇ ರಾಜ್ಯಕೀಯ ನೀತಿ—ನಿಲುಮೆಗಳಲ್ಲಿನ ಭಿನ್ನತೆಯು ಈ ಸ್ಫೋಟಕ್ಕೆ ಹೇತುವಲ್ಲವೆಂಬುದನ್ನು ಪ್ರಧಾನಿಯ ಪ್ರಬಲ ಸಮರ್ಥಕರಾದ ಯಶವಂತ ಚವ್ಹಾಣರೇ ಹೇಳತೊಡಗಿದ್ದಾರೆ. ಅಂದರೆ, ಇಂಡಿಕೇಟೂ ಸಿಂಡಿಕೇಟಾಗುತ್ತ ಬರುತ್ತಿದೆ, ಆದುದರಿಂದ ಹೊಸ ಚಾಂಡಿಕೇಟ ಒಂದು ತಲೆ ಎತ್ತಬಹುದು ಎಂಬ ಬೆದರಿಕೆ ಅಥವಾ ಎಚ್ಚರಿಕೆ!

ಇತ್ತೀಚೆಗೆ ನಜಫಗಢದಲ್ಲಿ ಸೇರಿದ್ದ ಸಿಂಡಿಕೇಟಿನ ಕಾರ್ಯಕಾರಿ ಸಮಿತಿಯ ಸಭೆಯ ಕಾರ್ಯಕಲಾಪಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಕಾರ್ಯಕಾರಿ ಸಮಿತಿಯ ಸಭೆಯನ್ನು ಮೂರು ತಿಂಗಳ ಅವಧಿಯ ನಂತರವೇ ಕರೆಯಲಾಯಿತು. (ಏಕೆನ್ನು ತರ? ನೀವು ಸರ್ವಾಧಿಕಾರಿಗಳೇ? ಎಂಬ ಧಾಟಿ) ಸಭೆ ಸೇರುವುದಕ್ಕೆ ಕೆಲವೇ ತಾಸು ಮೊದಲು ಸಭಾ ವಿಷಯಗಳ ಪಟ್ಟಿಯನ್ನು ಕೊಡಲಾಯಿತು. (ನಿಮ್ಮದೇ ಕಾರುಬಾರಾಯಿತ)

ಪ್ರಧಾನ ಕಾರ್ಯದರ್ಶಿ ಬಹುಗುಣರಿಂದ ಇದರ ನಿರಾಕರಣ. ಇದಕ್ಕೆ ತಾವು ಹೊಣೆಗಾರರಲ್ಲ, ಸೇವಾದಳ ಸಮಿತಿಯ ಯುವತುರ್ಕ ಚಂದ್ರಜಿತ್ ಯಾದವ್ ಅವರ ನಿಷ್ಕ್ರಿಯತೆಗಳೇ ಕಾರಣ.

ತನ್ನ ಸೇವಾದಳದ ಬಗ್ಗೆ ಬರಿಯ ಹತ್ತು ದಿನಗಳಿಗೆ ಮೊದಲೇ ಗೊತ್ತು, ತಾನೆಂತು ಇದಕ್ಕೆ ಹೊಣೆಗಾರನೆಂದು ಶ್ರೀ ಯಾದವ್‌ರ ಸಂಧಾನ.

ತನ್ನ ಹಸ್ತದ ಜನಬಲವನ್ನು ನೆಚ್ಚಿ, ಪರಸ್ಪರ ಆರೋಪ ಪ್ರತ್ಯಾರೋಪ ಮಸ್ತರಾದ ದೊಂಬರು ಶ್ರೀಮತಿಗಾಂಧಿಗೆ ದಿಗಿಲೇ ದಿಗಿಲು. ಪಕ್ಷದ ಮುಂದಗತಿಯು ತನಗೆ ಸಮಸ್ಯೆಯಾಗಿದೆ ಟೀಕೆ—ಪ್ರತಿಟೀಕೆಗಳು ಬೇಡ—ಎಂಬ ಸಮಾಧಾನ

ಪಕ್ಷದ ಬಗ್ಗೆ ಜನತೆಗೆ ತೀವ್ರ ನಿರಾಶೆ (ಜನತೆ = ಅನುಯಾಯಿ ಸ್ವರು + ಅಧಿಕಾರ ಲಾಲಸಿಗಳು?) ಮುಂಬಯಿ ಸಾ ಇತಿಹಾಸ ಪ್ರಸಿದ್ಧ ಅಧಿವೇಶನದ ಗೊತ್ತುವಳಿಗಳು ಗಾಳಿಪಟ, ಉತ್ತರ ಪ್ರದೇಶದಲ್ಲಿ ಬಿಕೆಡಿಯೊಡನೆ ಕೈಮಿಲಾಯಿಸುವಲ್ಲಿ ಸರ್ವಾಧಿಕಾರದ ಪ್ರಯೋಗ, ರಾಜ್ಯಸಭಾ ಅಭ್ಯರ್ಥಿಗಳ ಆಯ್ಕೆಯಿಂದ ಪಕ್ಷಕ್ಕೆ ಅಪಯೋಗ … …

ಶ್ರೀ ಸಿಕು ಅವರಿಂದ ಸಮೂಹ ನಾಯಕತ್ವದ ಬಗ್ಗೆ ಸೂಚನೆ. ಮುಂದಿನ ನಾಯಕರಿಂದ ಅದರ ನಿರಾಕರಣೆ: ಪ್ರಾಯಶಃ ಇಬ್ಬರೇ—ಪ್ರಧಾನಿ ಮತ್ತು ಪಕ್ಷದ ಅಧ್ಯಕ್ಷ. ಬೆಂಗಳೂರಿನಲ್ಲಿ ೧೯೬೯ರ ಪರಿಸ್ಥಿತಿ ಅಳಿಸಿ ಹಾಕಿ ಮುಂದುವರಿಯಬೇಕೆಂದು ಸಿದ್ಧಾಂತಾರ್ಥ ಶಂಕರರೇ "ದಕ್ಷಿಣದಿಂದ ಉಗ್ರ ಕಟು ಟೀಕೆ" ಇನ್ನೂ ಹಲವು ಸಂಗತಿ—ಉಪಸಂಗತಿಗಳು.

ಕೊನೆಗಾದುದೇನ?

ಆಸ್ತಿ ಹಕ್ಕಿನ ರದ್ದತಿ ಮಾಡಲು ತನ್ನ ಪಕ್ಷ ನಿರ್ಧರಿಸಿಲ್ಲವೆಂದು ಜನತೆಗೆ ಪ್ರಧಾನಿಯಿಂದ ಆಶ್ವಾಸನೆ. ರಾಜ್ಯಾಂಗವಿಧಾನಕ್ಕೆ ಅಂಟಿದ ಮಂದವ್ಯಾಧಿ ನಿವಾರಣೆಗೆ ಮೂವರು — ಇಲ್ಲವೇ ಐವರು ಪಂಡಿತರ ಸಮಿತಿ ನೇಮಿಸುವ ಭರವಸೆ. ಪಕ್ಷದ ಬಲ ಸಂವರ್ಧನೆಯ ಬಗ್ಗೆ ಕಳಕಳಿಯ ವಿನಂತಿ. ಅನ್ಯ ಪಕ್ಷೀಯ ಸರಕಾರಗಳನ್ನು ಉರುಳಿಸುವಲ್ಲಿ ಶಕ್ತಿ ಕಳೆದುಕೊಳ್ಳದೆ ಸ್ವಪಕ್ಷವನ್ನು ಬಲಪಡಿಸಲು ಕಳಕಳಿಯ ಕರೆ (ಶ್ರೀ ರಾಮನಿಗೇ ಇರಬೇಕು)

ಅಂದರೇನು? ಅಂದು ಮಾಡಿದ್ದನ್ನು ಮಾಡದಿದ್ದಷ್ಟೂ ಇಂದೂ ಮಾತ್ರ ಅಂದು ಟೀಕಾಕಾರರ ಬಲ ಕಡಿಮೆಯಿತ್ತು; ಇಂದು ಅವರದ್ದೇ ಸಂಖ್ಯಾಬಲ. ಅಧಿಕಾರ ಲೋಭದಿಂದ ಬೀಸಿದ ಇಂದಿರಾ ಬಿರುಗಾಳಿ ಶ್ರೀಮತಿ ಇಂದಿರಾಗಾಂಧಿಯವರ ಅಧಿಕಾರಕ್ಕೇ ಸಂಚಕಾರ ಬಹುದು. ಆಗ ಶ್ರೀರಾಮ — ಆಲಿಗಳ ಕತೆಯೇ ಖಾದೀತೆ?

Gram VISHWA Tel 29111

When at Bangalore
Stay at

HOTEL NATARAJA

Restaurant Boarding & Lodging.

107 Police Road, City Market

BANGALORE-2

Centrally situated, delicious food,
Comfortable rooms, Courteous service

Attached bath rooms with running hot and cold water
Telephone attached rooms

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ.
ಕಾಲುಕೋಟೆ, ಉಡುಪಿ, ದ. ಕ.

NAVAYUGA 30—4—1970
Registered with the Registrar of News Papers for India under No. R. N. 3546/'57

REGD. No. B. G/ 176
LICENCE No. 33,
Licensed to Post without Prepayment

ಗಗನ ಖಗೋಳ ವಿಜ್ಞಾನ

ಲೇಖಕರು : ಶ್ರೀ ಡಬ್ಲ್ಯು. ಎ. ಸ್ವಾರ್ಟ್‌ವರ್ತ್

"ಖಗೋಳ ವಿಜ್ಞಾನದ ಮುನ್ನಡೆಗೆ ಗಗನ ಕಾರ್ಯಕ್ರಮದಿಂದ, ವಿಜ್ಞಾನದ ಇನ್ನಾವುದೇ ಶಾಖೆಗಿಂತಲೂ ಅತ್ಯಧಿಕ ಪ್ರಯೋಜನಗಳಿವೆ."

19 ಮಂದಿ ಅಮೇರಿಕದ ಪ್ರಮುಖ ಖಗೋಳ ಶಾಸ್ತ್ರಜ್ಞರ ಮಂಡಳಿಯು ಇತ್ತೀಚೆಗೆ, ಜಟಿಲವಾದ ಗಗನ ಖಗೋಳ ವಿಜ್ಞಾನದ ವಿಶಾಲ ಶ್ರೇಣಿಯ ಕಾರ್ಯಕ್ರಮಗಳ ಬಗೆಗೆ ಶಿಫಾರಸುಗಳನ್ನು ಮಾಡುತ್ತಾ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇಂಥ ಕಾರ್ಯಕ್ರಮವು, ಅನ್ಯಥಾ ಲಭ್ಯವಾಗದಿರುವಂಥ "ನೂತನ ಹಾಗೂ ಮೂಲಭೂತ ವೈಜ್ಞಾನಿಕ ತಿಳುವಳಿಕೆಯ ಅಪಾರ ಸಂಚಯವನ್ನೊದಗಿಸುವುದು" ಎಂದು ಈ ತಂಡ ವಿಶ್ವಾಸ ವ್ಯಕ್ತಪಡಿಸಿದೆ.

ಇದಕ್ಕೆ ಮುಖ್ಯ ಕಾರಣ, ಭೂ ಕೇಂದ್ರಗಳಲ್ಲಿರುವ ಖಗೋಳ ವಿಜ್ಞಾನಿಗಳು ವಿಶ್ವವನ್ನು ವಾತಾವರಣದ ಎರಡು ಕಿಂಡಿಗಳ, ಮಬ್ಬಾದ "ಕಿಟಕಿ"ಗಳಿಂದ— ಗೋಚರ ಬೆಳಕು ಮತ್ತು ಹ್ರಸ್ವ ರೇಡಿಯೋ ಅಲೆಗಳು — ಅಧ್ಯಯನ ಮಾಡಬೇಕಾಗಿದೆ. ಗಗನದಲ್ಲಿ ಈ ಕಾರ್ಯನಿರ್ವಹಿಸಲು ಖಗೋಳ ವೈಜ್ಞಾನಿಕ ಉಪಕರಣಗಳು ಇಡಿ ವಿದ್ಯುತ್ಕಾಂತೀಯ ವರ್ಣಪಟಲವನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಬಲ್ಲವು.

ಅನೇಕ ವರ್ಷಗಳಿಂದ ಬಲೂನ್‌ಗಳು ಮತ್ತು ರಾಕೆಟ್‌ಗಳು ವಾತಾವರಣ ಕವಚದಿಂದ ತಪ್ಪಿಸಿಕೊಳ್ಳಲು ಪರಿಮಿತ ಜ್ಞಾನವನ್ನು ಒದಗಿಸಿವೆಯಾದರೂ, 1960ನೆಯ ದಶಕದಲ್ಲಿ ವಿಶೇಷ ಉಪಗ್ರಹಗಳ ಉಡಾವಣೆಯೊಂದಿಗೆ ಗಗನ ಖಗೋಳ ವಿಜ್ಞಾನವು ವಾಸ್ತವವಾಗಿ ಅಸ್ತಿತ್ವಕ್ಕೆ ಬಂತು. ಈ ಪ್ರಾರಂಭಿಕಗಳು ಈಗಾಗಲೇ ಗಣನೀಯ ಪ್ರಮಾಣದಲ್ಲಿ ವೈಜ್ಞಾನಿಕ ಮಾಹಿತಿಗಳನ್ನೊದಗಿಸಿವೆ ಮತ್ತು ಖಗೋಳಜ್ಞರು ಎಕ್ಸ್—ರೇ, ಗಾಮಾ, ಅಲ್ಟ್ರಾ ವಯೊಲೆಟ್, ಇನ್‌ಫ್ರಾರೆಡ್ ಮತ್ತು ಗೋಚರ ಬೆಳಕನ್ನೂ ಸೇರಿ ಎಲ್ಲ ರೇಡಿಯೋ ವಿಕಿರಣಗಳನ್ನು ಬಳಸಿ ಇನ್ನೂ ಹೊಸ ಕ್ಷೇತ್ರಗಳ ಅಧ್ಯಯನ ಮಾಡಲು ಕುತೂಹಲಿಗಳಾಗಿದ್ದಾರೆ.

ಗಗನ ಸಂಶೋಧನೆಗಳ ಫಲಿತಾಂಶವಾಗಿ "ಖಗೋಳ ವಿಜ್ಞಾನದ ಅತ್ಯಂತ ಮೂಲಭೂತ ಸಮಸ್ಯೆಗಳಿಗೂ ಪರಿಹಾರ ಕಂಡುಹಿಡಿಯಲು ಸಾಧ್ಯವಾಗುವುದು" ಎಂದು ತಜ್ಞರ ಮಂಡಳಿಯೊಂದು ಅಮೇರಿಕದ ರಾಷ್ಟ್ರೀಯ ವಾಯುಯಾನ ಮತ್ತು ಗಗನಾಡಳಿತ ಸಂಸ್ಥೆ (ನಾಸಾ)ಗೆ ಕಳಿಸಿದ 305 ಪುಟಗಳ ವರದಿಯಲ್ಲಿ ತಿಳಿಸಿದೆ.

ಈ ತಂಡವು, 1967ರಲ್ಲಿ ಏಜೆನ್ಸಿಯು 1970ನೆಯ ದಶಕಕ್ಕೆ ಒಂದು ಸಮಗ್ರ ಗಗನ ಖಗೋಳ ಕಾರ್ಯಕ್ರಮವನ್ನು ರೂಪಿಸುವ ಸಲುವಾಗಿ ರಚಿಸಿದ ನಾಸಾದ ಖಗೋಳ ವಿಜ್ಞಾನ ಕಾರ್ಯಕ್ರಮ ಮಂಡಳಿ.

ಕೈಗೊಳ್ಳಬೇಕಾಗಿರುವ ನಿರ್ದಿಷ್ಟ ಪ್ರಾಜೆಕ್ಟುಗಳು ಲಭ್ಯವಿರುವ ನಿಧಿಯನ್ನು ಅವಲಂಬಿಸುವುದು. ಮಂಡಳಿಯ ಮುಖ್ಯ ಸಲಹೆಗಳಲ್ಲಿ ಇವು ಕೆಲವು:

ಭೂಮಿಯಿಂದ ಪತ್ತೆಹಚ್ಚಲು ಸಾಧ್ಯವಾಗಬಹುದಾದ ಅತ್ಯಂತ ಕ್ಷೀಣ ನಕ್ಷತ್ರಗಳಿಗಿಂತ ನೂರು ಪಟ್ಟು ಹೆಚ್ಚು ಕ್ಷೀಣವಾದ ನಕ್ಷತ್ರಗಳನ್ನು ಪತ್ತೆ ಹಚ್ಚಬಲ್ಲ, ಕನಿಷ್ಠಪಕ್ಷ 120 ಅಂಗುಲಗಳ ವ್ಯಾಸವುಳ್ಳ ಕನ್ನಡಿಯಿರುವ ಒಂದು ದೊಡ್ಡ ಆಪ್ಟಿಕಲ್ ಟೆಲಿಸ್ಕೋಪು

ಈಗಿರುವುದಕ್ಕಿಂತ ಹೆಚ್ಚು ಪೆಲೋಡ್ ಸಾಮರ್ಥ್ಯವುಳ್ಳ ಸುಧಾರಿತ ಎಕ್ಸ್‌ಪ್ಲೋರರ್ — ಮಾದರಿಯ ಗಗನವಾಹನಗಳನ್ನು ಬಳಸಿ ಎಕ್ಸ್-ರೇ ಹಾಗೂ ಗಾಮಾ ಕಿರಣಗಳ ಅಧ್ಯಯನಗಳನ್ನು ಹೆಚ್ಚಿಸುವುದು.

ಗಗನವಾಹನಗಳ ಮೂಲಕ ಇನ್‌ಫ್ರಾರೆಡ್ ಖಗೋಳ ವೀಕ್ಷಣೆಗೆ ಸುಧಾರಿತ ಡಿಟೆಕ್ಟರ್‌ಗಳ ಮತ್ತು ಆಕ್ಸಿಲರಿ ಉಪಕರಣಗಳ ಅಭಿವೃದ್ಧಿ.

ವರ್ಣಪಟಲದ ಲಾಂಗ್‌ವೇವ್ ರೇಡಿಯೋ ಭಾಗದಲ್ಲಿ ಖಭೌತ ಕಾಯಗಳ ವೀಕ್ಷಣೆ. ಸಾಮಾನ್ಯವಾಗಿ ಈ ಕಾಯಗಳ ವೀಕ್ಷಣೆಗೆ ಗಗನದಲ್ಲಾಗಲೀ ಅಥವಾ ಚಂದ್ರನಲ್ಲಾಗಲೀ ಆರು ಮೈಲಿಗಳಷ್ಟು ವ್ಯಾಸವುಳ್ಳ ಪ್ರದೇಶದಲ್ಲಿ ವೈರ್ ಆಂಟೆನ್ನಾಗಳನ್ನು ನೆಲೆಗೊಳಿಸಬೇಕಾಗಿರಬಹುದು.

ಸೂರ್ಯನ ಅಧ್ಯಯನ ಮತ್ತು ಭೂಮಿಯ ಮೇಲೆ ಸೌರ ಕ್ರಿಯೆಗಳ ಸಂಕೀರ್ಣ ಪರಿಣಾಮಗಳ ಬಗೆಗೆ ಹೆಚ್ಚಿನ ವಿವರಪೂರ್ಣ ಅಧ್ಯಯನಕ್ಕೆ ಸುಧಾರಿತ ಸೌರ ಗಗನವಾಹನಗಳು.

—ಕಕ್ಷಾ ಸಂಚಾರಿ ಖಗೋಳ ವೇಧಶಾಲೆ (ಓಎಓ) ಮತ್ತು ಇತರ ಉಪಗ್ರಹಗಳ ಮೂಲಕ ಭೂ ಕಕ್ಷೆಯಿಂದ ಗ್ರಹಗಳ ನಿರಂತರ ವೀಕ್ಷಣೆ.

—ಎಕ್ಸ್‌ಪ್ಲೋರರ್ ಅಥವಾ ಪ್ಲಾನೆಟರೀ ಗಗನವಾಹನಗಳಲ್ಲಿ ವ್ಯವಸ್ಥೆಗೊಳಿಸಲಾದ ಖಗೋಳ ವೈಜ್ಞಾನಿಕ ಉಪಕರಣಗಳ ಮೂಲಕ ಗ್ರಹಾಂತರ ಮಾಧ್ಯಮ, ಕಾಸ್ಮಿಕ್ ಕಿರಣಗಳು, ಮತ್ತು ಕಾಂತಕ್ಷೇತ್ರದ ಅಧ್ಯಯನಗಳನ್ನು ಹೆಚ್ಚಿಸುವುದು.

ತನ್ನ ಕಾರ್ಯಕ್ರಮವನ್ನು "ವಿಶ್ವದ ಉಗಮ; ಸೂರ್ಯ ಮತ್ತು ಸೌರ ವ್ಯವಸ್ಥೆಯ ಅಂತಿಮ ಭವಿಷ್ಯವೂ ಸೇರಿ ನಕ್ಷತ್ರಗಳ ವಿಕಾಸ; ಇತರ ಗ್ರಹಗಳ ಅಸ್ತಿತ್ವ; ಇವುಗಳ ಪೈಕಿ ಕೆಲವು ಇತರ ಬೌದ್ಧಿಕ ಜೀವಿಗಳಿಗೆ ಆಶ್ರಯಕೊಡಬಲ್ಲವಿರಬಹುದು; ಮತ್ತು ಪ್ರಬಲ ತಾತ್ವಿಕ ಮಹತ್ವವುಳ್ಳ ಇತರ ಸಮಸ್ಯೆಗಳ ಬಗೆಗೆ ವೈಜ್ಞಾನಿಕ ಪ್ರಗತಿ ಸಾಧಿಸಲಾಗುವಂತೆ ರೂಪಿಸಲಾಗಿದೆ ಎಂದು ಖಗೋಳ ಕಾರ್ಯಕ್ರಮಗಳ ಮಂಡಳಿ ಹೇಳಿದೆ.

ವಿಶ್ವವು ಉಬ್ಬುತ್ತಿದೆ ಎಂದು ಬಹುತೇಕ ಖಗೋಳಜ್ಞರು ಒಪ್ಪುತ್ತಾರೆ. ಆದರೆ ಈ ಉಬ್ಬುವಿಕೆ ಯಾವ ಗತಿಯಲ್ಲಿ ಆಗುತ್ತಿದೆ ಎಂದು ಅವರು ನಿರ್ಧರಿಸಲು ಸಮರ್ಥರಾಗಿಲ್ಲ. ಪ್ರಸ್ತುತ ವೀಕ್ಷಿಸಲು ಸಾಧ್ಯವಿರುವ 6000 ಬೆಳಕಿನ ವರ್ಷಗಳಷ್ಟು ದೂರದಿಂದ ಆಚೆಯಿರುವ ಕ್ಷೀರಪಥಗಳ ಅಧ್ಯಯನದಿಂದ ಅಳತೆಗಳ ನಿಖರತೆಯನ್ನು ಹೆಚ್ಚಿಸಲು ಸಾಧ್ಯವಾಗುವುದು ಮತ್ತು ಪ್ರಾಯಶಃ ವಿಶ್ವವು ಪರಿಮಿತವೇ ಅಥವಾ ಅನಂತವೇ ಎಂಬ ಪ್ರಶ್ನೆಯನ್ನೂ ಬಗೆಹರಿಸಲು ಸಹಾಯಕವಾಗಬಹುದು.

ವಿಶ್ವದ ಬಗೆಗೆ ಇನ್ನೊಂದು ವೈಜ್ಞಾನಿಕ ಸಮಸ್ಯೆಯಿದೆ. ವಿಶ್ವದ ಒಟ್ಟು ದ್ರವ್ಯರಾಶಿಯ ಶೇಕಡ 90ರಿಂದ 99ರಷ್ಟು ಅಂಶವನ್ನು ಪತ್ತೆಹಚ್ಚಲಾಗಿಲ್ಲ ಎಂದು ಕೆಲವು ಸೈದ್ಧಾಂತಿಕರು ಊಹಿಸಿದ್ದಾರೆ. ವಿಶ್ವದ ಬಗೆಗೆ ಇನ್ನೂ ಹೆಚ್ಚು ಆಳವಾದ ಅನ್ವೇಷಣೆಗಳಿಂದ ಈ ಬಗೆಗೆ ವಿವರಣೆ ದೊರೆಯಬಹುದು.

ಪಲ್ಸಾರ್‌ಗಳಿಂದ ಆವರ್ತಕವಾಗಿ ವಿದ್ಯುತ್ ಹೊರಹೊಮ್ಮುತ್ತಿರುವುದಕ್ಕೆ ಕಾರಣವಾದ ಕ್ರಿಯೆಯ ಬಗೆಗೆ ವಿವರಣೆ ಪಡೆಯಲೂ ಗಗನ ವೀಕ್ಷಣೆಯಿಂದ ಸಾಧ್ಯವಾಗಬಹುದು. ಅನೇಕ ವಿಜ್ಞಾನಿಗಳು ಪಲ್ಸಾರ್‌ಗಳನ್ನು ಬಹಳ ಪುರಾತನ ನಕ್ಷತ್ರಗಳ ಅವಶೇಷಗಳೆಂದೂ ಅವು ಸ್ಫೋಟಗೊಂಡು ಈ ಹಂತಕ್ಕೆ ಬಂದಿರಬಹುದೆಂದೂ ಭಾವಿಸಿದ್ದಾರೆ.

ಕ್ಷೀರಪಥದ ಒಂದು ದೊಡ್ಡ ಅನಿಲ ಮೋಡದಂತಿರುವ ಕ್ರ್ಯಾಬ್ ನೆಬ್ಯುಲದಲ್ಲಿರುವ ಒಂದು ಪಲ್ಸಾರ್, ಅದು ಕೇವಲ ಆರು ಮೈಲಿಗಳಷ್ಟು ವ್ಯಾಸವುಳ್ಳದ್ದಾಗಿದೆಯಾದರೂ ಸೂರ್ಯನಿಗಿಂತ 100 ಪಾಲು ಹೆಚ್ಚು ವಿದ್ಯುತ್ತನ್ನು ಹೊರಸೂಸುತ್ತದೆ ಎಂದು ಅಂದಾಜು ಮಾಡಲಾಗಿದೆ.

ಇಂದು ಪ್ರತ್ಯೇಕವಾದ ಒಂದು ಹೊಸ ವಿದ್ಯುದುತ್ಪಾದನ ವಿಧಾನವೇ ಇರಬಹುದು ಎಂದು ಕೆಲವು ವಿಜ್ಞಾನಿಗಳ ನಂಬಿದ್ದಾರೆ. ಒಂದು ಬಾರಿ ಈ ವಿಧಾನ ಎಂತಹುದು ಎಂದು ತಿಳಿಯಿತೆಂದರೆ ಅದನ್ನು ವ್ಯಾವಹಾರಿಕ ಬಳಕೆಗಳಿಗೆ ಅಳವಡಿಸಲು ಸಾಧ್ಯವಾಗಬಹುದು.

ತರುಣರು ಯಾರು?

1) ಪುಸ್ತಕವನ್ನು ತೊರೆದು ಸಾಹಸದ ರಸ್ತೆ ಹಿಡಿಯುವವರು.

2) ಆರಾಮಿನ ಅಪೇಕ್ಷೆ ಬಿಟ್ಟು ಆಹ್ವಾನಗಳನ್ನು ಎದುರಿಸಿ, ಪರಿಶ್ರಮ ಮಾಡಲು ಮುಂದಾಗುವವರು.

3) ಜೀವನದ ಸಾಧನಗಳಿಗಿಂತ ಪ್ರಯೋಜನವನ್ನು ಹೆಚ್ಚಾಗಿ ಗಮನಿಸುವವರು.

4) ಹಳೆಯ ಸವಕಲು ದಾರಿಬಿಟ್ಟು, ಹೊಸ ಮಾರ್ಗ ಹುಡುಕುವವರು.

5) ಬರೀ ಘೋಷಣೆಗಳಿಗೆ ಮರುಳಾಗದೆ ಪ್ರತ್ಯಕ್ಷ ಕೆಲಸ ಮಾಡಹತ್ತುವವರು.

6) ವಿಧ್ವಂಸದ ಬೆನ್ನು ಹತ್ತದೆ ನವನಿರ್ಮಾಣದಲ್ಲಿ ತೊಡಗುವವರು.

7) ಸುವಿಚಾರಗಳನ್ನು ಸತ್‌ಕಾರ್ಯಗಳಲ್ಲಿ ತರಲು ಬಯಸುವವರು.

8) ನಿರಾಶೆಯ ಮಾತನಾಡದೆ ನಿತ್ಯ ನೂತನ ಸ್ವಪ್ನ ಕಾಣುವವರು.

9) ಹೊಸ ದೃಷ್ಟಿಯಿಂದ ಜಗತ್ತಿನ ಕಡೆಗೆ ನೋಡಿ, ಹೊಸ ಸೃಷ್ಟಿಯನ್ನು ನಿರ್ಮಿಸತೊಡಗುವವರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಯುಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 7 — 5 — 1970 ಸಂಪುಟ 49 ಸಂಚಿಕೆ 35

ಸುಬ್ರಹ್ಮಣ್ಯಂ ಸುಟ್ಟುಕೊಂಡರು

ಪ್ರತೀ ಶುಕ್ರವಾರ ತಮಿಳ್ನಾಡಿನ ಸ್ತ್ರೀಯರು ತಮ್ಮ ಮನೆಗಳನ್ನು ಬೆಳಗ್ಗೆ ಚೊಕ್ಕಟವಾಗಿ ತೊಳೆದು, ಸಾಯಂಕಾಲ ದೇವಸ್ಥಾನಕ್ಕೆ ಹೋಗುವದೊಂದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಾಡಿಕೆ. ದ್ರಾ.ಮು.ಕ.ದವರು ಅಧಿಕಾರ ಆಸನವನ್ನೇರಿ, ದೇವರನ್ನು ನಂಬುವವರು ಹುಚ್ಚರೆಂಬ ಫಲಕಗಳನ್ನು ಅನಾವರಣ ಮಾಡಿದ್ದು, ದಾರಿ ದೇವಸ್ಥಾನಗಳನ್ನು ಒಡೆದು ಗೋಪುರಗಳಿಗಂತೂ ಜೋರಾಗಿ ಗರ್ಜಿಸುತ್ತಿರುವಂತಾದರೂ, ಪೂಜಾ ಕೇಂದ್ರ ದೇವಸ್ಥಾನಗಳನ್ನು ಪ್ರದರ್ಶನಾಲಯ ಮಾಡಲು ಕಾನೂನು ಮಾಡುತ್ತಿರುವಂತಾದರೂ ವಾರದಲ್ಲಿ ಶುಕ್ರವಾರ ಒನ್ನು ಬಂದೇ ಬರುತ್ತದೆ. ಸ್ತ್ರೀಯರಂತೂ ಸಾಲು ಸಾಲಾಗಿ ದೇವಸ್ಥಾನಕ್ಕೆ ಹೋಗುತ್ತಲೇ ಇದ್ದಾರೆ. ಅವರಲ್ಲಿ ಅದ್ಯಾವ ವರದಾನ ಮಾಡಲು ದೇವರನ್ನು ಪ್ರತಿ ಶುಕ್ರವಾರ ಬೇಡುತ್ತಿದ್ದಾರೋ, ಏನೋ! ಸಿ. ಸುಬ್ರಹ್ಮಣ್ಯಂ ಅದನ್ನು ನೋಡಿದ್ದಾರೆ, ಆದರಲ್ಲಿ ಅವರಿಗೆ ಅಪಾರ ನಂಬಿಕೆಯೆಂದು ಕಾಣುತ್ತದೆ. ಅವರು ಚುನಾವಣೆಗೆ ಸಮೀಪದ ಶುಕ್ರವಾರವನ್ನು ಆರಿಸಿಕೊಂಡು ಮತದಾನದ ವರಪ್ರಸಾದವನ್ನು ಬೇಡಲು ವಿಧಾನ ಸಭೆಯ 'ದೇವತೆ'ಗಳಲ್ಲಿಗೆ ಹೋದರು, ಕೇಳಿದರು. ಆದರೆ ಅವರ ಶನಿ! ಮರು ದಿವಸ ಶನಿವಾರ ಅವರಿಗೆ ಶನಿಹಿಡಿದ ಚುನಾವಣೆ ನಡೆಯಿತು. ಮರುದಿನ ಆದಿತ್ಯವಾರ ಆದಿತ್ಯನೇನೋ ಬಂದನಾದರೂ ಅವರ ವಿಜಯದ ಭಾಸ್ಕರ ಬರಲೇ ಇಲ್ಲ. ಶುಕ್ರವಾರ ದೇವಸ್ಥಾನಕ್ಕೆ ಹೋಗುವವರು ಅದೆಂತು ಮಾತಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರಂತೆ ಸುಬ್ರಹ್ಮಣ್ಯಂರವರು ಸುಮ್ಮನೆ ಹಿಯ್ಯಾವದಲ್ಲೆ ಹೋದರೂ ನ್ಯಾಯವಿದೆಯೇ?

ತಮಿಳ್ನಾಡಿನ ವಿಧಾನ ಸಭೆಯಿಂದ ಆರು ಜನರನ್ನು ರಾಜ್ಯಸಭೆಗೆ ಕಳುಹಿಸಬೇಕಾಗಿತ್ತು. ಚುನಾವಣಾ ಕಣದಲ್ಲುಳಿದವರು ಏಳು ಮಂದಿ, ಯಾರಾದರೊಬ್ಬರು ದೊಡ್ಡ ಮನಸ್ಸು ಮಾಡಿ, ಮುಂದೆ ಮಂತ್ರಿಯಾಗಲಿರುವರೆಂಬುದು ಪ್ರಚಾರ ಮಾಡಲಾಗಿರುವ ಸುಬ್ರಹ್ಮಣ್ಯಂರವರಿಗಾಗಿ ಕಣದಿಂದ ಕಾಲ್ತೆಗೆಯಬಾರದಿತ್ತೇ? ಸುಬ್ರಹ್ಮಣ್ಯಂರವರ ಹಿಂದಗಡೆ ಎಂಟು-ಹತ್ತು ಸದಸ್ಯರಾದರೂ ಇದ್ದರು, ಮುಸ್ಲಿಂ ಲೀಗಿನ ಅಭ್ಯರ್ಥಿಯ ಹಿಂದಗಡೆ ಮೂವರು ಕೂಡಾ ಇರಲಿಲ್ಲ. ಆದರೂ ಅವರಿಗೆ ಧೈರ್ಯ. ತಮ್ಮ ದ್ರಾ.ಮು.ಕ.ದವರಿಗೆ ಮತ ... ಹಾಕಿಬಿಡುತ್ತೇವೆಂದು; ಆವು ರಾಜಕೀಯದ ಕೆಂಪು ಕೋಣಗಳೆಂಬುದು ಅವರಿಗೆ ಗೊತ್ತು. ಇದಿರಾಳಿ ಪ್ರಚಾರ ಮಾಡುತ್ತಿರುವ ಕುಟುಂಬ ಯೋಜನೆಯ ಕೆಂಪು ಮುಕ್ಕೋಣ ಅವರಿಗಾಗಿ ಇರದೆ ಇತರರಿಗಾಗಿ ಇರುವಂತೆ, ತಮಿಳ್ನಾಡಿನ ಈ ರಾಜಕೀಯ ಮುಕ್ಕೋಣ ಮುಸ್ಲಿಂ ಲೀಗಿಗಾಗಿ ಇರದೆ ದ್ರಾ.ಮು.ಕ.ಕ್ಕಾಗಿಯೇ ಇದೆ. ಇಲ್ಲದಿದ್ದಲ್ಲಿ ದಿಲ್ಲಿಯಲ್ಲಿ ಇಂದಿರಾಜೀಯವರ ಅಭ್ಯರ್ಥಿಯನ್ನು ಅಂತಸ್ತಿಗೇರಿಸಿದ ದ್ರಾ.ಮು.ಕ. ತಮಿಳ್ನಾಡಿನಲ್ಲಿ ಇಂದಿರಾಜೀಯವರ ಅಭ್ಯರ್ಥಿಯನ್ನು 'ಭಾವೀ ಮಂತ್ರಿ'ಯನ್ನು, ತಮ್ಮಂತೆ ಕಡು ಹಿಂದಿ ವಿರೋಧಿಯನ್ನು, ಸೇಲಂ ಉಕ್ಕಿನ ಕಾರ್ಖಾನೆಗಾಗಿ ಹೋರಾಡುತ್ತಿರುವವರನ್ನು ಅಡಿಗಿಳಿಸಿಬಿಡುತ್ತಿತ್ತೇ? ಮುಸ್ಲಿಂ ಲೀಗಿನ ಮುಕ್ಕೋಣಗಳ ಪ್ರಭಾವದಿಂದಾಗಿ ಸುಬ್ರಹ್ಮಣ್ಯಂರವರ ಗೆಲುವಿನ ಶಿಶು ಜನಿಸಲೇ ಇಲ್ಲ.

ಸುಬ್ರಹ್ಮಣ್ಯಂರವರ ಚುನಾವಣಾ ಫಲಿತಾಂಶ ತಿಳಿದೊಡನೆ ಅವರ ಕಾಂಗ್ರೆಸ್ಸಿನ ಅಧ್ಯಕ್ಷ ಜಗಜ್ಜೀವನ ರಾಮರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಮರೆಯಲೇ ಇಲ್ಲ. ಅದು ಮುಂಚಿತವಾಗಿಯೋ ಸಿದ್ಧವಾಗಿಯೋ ಇತ್ತೋ, ಏನೋ! ಸುಬ್ರಹ್ಮಣ್ಯಂರವರ ಸೋಲು ತನಗೆ ಆಶ್ಚರ್ಯದ ಸಮಾಚಾರವೆಂದು ಜಗಜ್ಜೀವನ ರಾಮರು. ಕೇವಲ ಇಬ್ಬರು ಇರುವ ಮುಸ್ಲಿಂ ಲೀಗಿನ ಅಭ್ಯರ್ಥಿ ಗೆದ್ದಾಗ, ಎಂಟು ಸದಸ್ಯರಿದ್ದ ಹೊಸ ಕಾಂಗ್ರೆಸ್ಸಿನ ಪ್ರಮುಖ ರಾಜಕೀಯ ಉದ್ಯಮಿ ಸೋಲುವದು 'ಪುಣ್ಯ' ನಂದಾನವಾ ... ಅವರಿಗೆ ಆಶ್ಚರ್ಯದ ಸಮಾಚಾರ ಆದರೂ ರಾಜಕೀಯ ದ್ಯೂತದಲ್ಲಿ ಎಲ್ಲಾ ನಡೆಯುತ್ತಿರುವಾಗ ಆಶ್ಚರ್ಯಪಡಲೇನಿದೆ? ಹತ್ತು ಸದಸ್ಯರಿಂದ ಮಾರ್ಕ್ಸ್ ಕಮ್ಯೂನಿಸ್ಟರು ಕಳೆಯದಿರಲು ಅವರೇನು ಮಾರ್ಕರೇ? ಅದು ರಾಜಕೀಯ ಚಾಣಾಕ್ಷತೆ. ಬೆಂಕಿಯಲ್ಲಿ ಬೆರಳು ಹಾಕಿ, ಸುಟ್ಟ ಮೇಲೆ ಆಶ್ಚರ್ಯ ವ್ಯಕ್ತಪಡಿಸುವದು ಆಶ್ಚರ್ಯವೇ ಅಹುದು. ಹಾಗಿದ್ದರೂ ಅವರು ಆಶ್ಚರ್ಯ ವ್ಯಕ್ತಪಡಿಸಲು ಕಾರಣ ಇದ್ದೇ ಇದೆಯೆನ್ನುವದನ್ನು ಅವರ ಮಾತುಗಳಿಂದ ತಿಳಿದುಕೊಳ್ಳಬಹುದು. ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ತಮ್ಮ ಅಭ್ಯರ್ಥಿಯನ್ನು ಹೇಗೆ ಗೆಲ್ಲಿಸಿದ್ದೇವೆಂಬುದನ್ನು ಅವರಿನ್ನೂ ಮರೆತಿರುವದಿಲ್ಲ. ಎಲ್ಲರೂ ಗಿರಿಯಾಗಲು ಸಾಧ್ಯವೇ ಇಲ್ಲ. ಗಿರಿಯವರಿಗೆ ವಾಗ್ದಾನಮಾಡಿದ್ದವರು ಮತದಾನ ಮಾಡಿದ್ದಾರೆ. ಆದರೆ ಸುಬ್ರಹ್ಮಣ್ಯಂರವರಿಗೆ ವಾಗ್ದಾನ ಮಾಡಿದವರು ಮತದಾನ ಮಾಡಲೇ ಇಲ್ಲ. ಅವರ ಶುಕ್ರವಾರದ ಪೂಜೆ ... ಫಲ ಶೂನ್ಯವಾಯಿತು. ಜಗಜ್ಜೀವನ ರಾಮರ ಆಶ್ಚರ್ಯದ ಕಾರಣವನ್ನು ತಿಳಿದುಕೊಂಡಿರುವ ರಾಜಕೀಯ ನರಿಯೆಂಬ ಬಿರುದಾಂಕಿತ ಚಕ್ರವರ್ತಿ ರಾಜಗೋಪಾಲಾಚಾರಿಯವರು 'ಧನ ಶಕ್ತಿಗೆ ಸೋಲುಂಟಾಯಿತೆಂ'ದು ಹೇಳಿರುವರಲ್ಲದೆ ತಮಗಾಗಿರುವ ಆನಂದವನ್ನೂ ವ್ಯಕ್ತಪಡಿಸಿರುವರು. ರಾಜಾಜಿಯವರ ಗರಡಿಯಲ್ಲೇ ಪಳಗಿರುವವರಲ್ಲವೇ ಸುಬ್ರಹ್ಮಣ್ಯಂರವರು. ರಾಜಾಜಿಯವರು ಧನಶಕ್ತಿಯ ಕುರಿತು ಹೇಳಿದಲ್ಲಿ ಶಿಷ್ಯರು ಇನ್ನೂ ಮುಂದರಿದು ಧನಬಲ ಮತ್ತು ಅಧಿಕಾರ ಅವರ ಅಪಜಯಕ್ಕೆ ಕಾರಣವೆಂದು ಹೇಳಿದರು. ಶುಕ್ರವಾರ ವರ ಬೇಡಿ ವಿಫಲರಾದವರು ಮಂಗಳವಾರ ಮತ್ತೆ ಸೇರಿ ಮಾತಾಡುವಂತೆ ಸುಬ್ರಹ್ಮಣ್ಯಂರವರು ಪತ್ರಿಕಾ ಪ್ರತಿನಿಧಿಗಳನ್ನು ಕರೆದು ತನ್ನ ಸೋಲಿಗೇನು ಕಾರಣವೆಂಬುದನ್ನು ವಿವರವಾಗಿ ಸಂಖ್ಯಾಬಲದಿಂದ ತಿಳಿಸಿದರು.

ಸ್ವತಂತ್ರ ಪಾರ್ಟಿ ಬಿಟ್ಟು ಬಾಲ ತಿರುಗಿ ಬಂದಿದ್ದನ್ನು ಕಂಡ ಮಾರಿಸ್ವಾಮಿಯವರು (ಸುಬ್ರಹ್ಮಣ್ಯಂರಿಂದಾಗಿ ಅವಸ್ಥೆಗೊಳಪಟ್ಟವರು) ರಾಜ್ಯಸಭೆಯಲ್ಲಿ ಹೊಸ ಕಾಂಗ್ರೆಸ್ಸಿನ ಹೊಸ ತಂತ್ರಗಳನ್ನು ಬಯಲಿಗೆಳೆದರು. ಸುಬ್ರಹ್ಮಣ್ಯಂರವರು ಇಪ್ಪತ್ತಮೂರು ಮತಗಳನ್ನು ಪಡೆಯಲು ಇಪ್ಪತ್ತು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಈ ಹಣವನ್ನು ಅವರು ಉದ್ಯಮಿಗಳಿಂದ ಶೇಖರಿಸಿದ್ದಾರೆ. ಮದ್ರಾಸಿನಲ್ಲಿ ಓರ್ವ ಉದ್ಯಮಿಯು ಮನೆಯಲ್ಲಿ ಚಹಾಕೂಟದಲ್ಲಿ ಸಿ. ಸುಬ್ರಹ್ಮಣ್ಯಂರವರು ಮಂತ್ರಿಗಳಾಗುವರೆಂದೂ ಅವರ ಗೆಲ್ಲಿಸಲು ಹಣ ಅಗತ್ಯವೆಂದು ತಿಳಿಸಿ, ಅಲ್ಲೇ ಒಟ್ಟುಮಾಡಲಾಯಿತು. ಅಷ್ಟೇ ಅಲ್ಲ, ತಮಿಳ್ನಾಡಿನ ಕೆಲ ವಿಧಾನಸಭಾ ಸದಸ್ಯರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಮದ್ಯಪಾನದಿಂದ ಸತ್ಕರಿಸಲಾಗಿದೆ. ಹೀಗೆ ಆಸೆ-ಆಮಿಷಗಳನ್ನು ತೋರಿ ಇಪ್ಪತ್ತಮೂರು ಮತಗಳನ್ನು ಪಡೆದುಕೊಳ್ಳಲಾಗಿದೆಯೆಂದು, ಅವುಗಳನ್ನು ಮಜುಗೊಳಿಸಲು ಸಿದ್ಧವೆಂದೂ ಸ್ಪಷ್ಟಪಡಿಸಿದರು. ರಾಜ್ಯಸಭೆಯಲ್ಲಿ ಸುಬ್ರಹ್ಮಣ್ಯಂರವರ ಹೊಸ ಕಾಂಗ್ರೆಸ್ಸಿನ ಸಂಪತ್ತಿಗೆ ಸವಾಲಾಗಿದೆ ಹೊರತೂ ಮೂವರು ತೋಂಡಿತ್ತು ಸದಸ್ಯರುವಂದವರಾದರೂ ಪೂರಿ ಸ್ವಾಮಿಯವರು ಮಾತನಾಡಿದಾಗ ಅದನ್ನಾರೂ ಅಲ್ಲಗಳೆಯಲೇ ಇಲ್ಲ. ಸಿದ್ಧಗೊಳಿಸವದಾಗಿ ಅವರು ಕರೆ ಇತ್ತಾಗ ಒಬ್ಬ ಕಾಂಗ್ರೆಸ್ಸಿಗನಾದರೂ ತನ್ನ ಕಾಲು ಮೇಲೆತ್ತಿ ನಿಲ್ಲಲೇ ಇಲ್ಲ. ಒಬ್ಬರ ಮುಖವನ್ನು ಇನ್ನೊಬ್ಬರು ನೋಡುತ್ತಾ ಇದ್ದರು.

ಮಂಗಳವಾರದ ಮಾತುಕತೆಯ ನರಮುಹಳೆಯರು ಶುಕ್ರವಾರ ಸೇರಿ ... ಡುವಂತೆ ಶುಕ್ರವಾರ ಸುಬ್ರಹ್ಮಣ್ಯಂರವರ ಮಾರಿಸ್ವಾಮಿಯವರ ಮಾತುಗಳನ್ನು ಅಲ್ಲಗಳೆದರು. ಆದರೆ ಅವರನ್ನು ಸಿದ್ಧಗೊಳಿಸಲು ಕರೆಯಲಿಲ್ಲ. ಅಲ್ಲಗಳೆಯುವದು ಶುಕ್ರವಾರ ಸೇರಿದವರ ಅಭ್ಯಾಸ. ಕ... ಕೊಡುವದು ಬಟ್ಟೆಗಳ ಅಭ್ಯಾಸ.

ತಮಿಳ್ನಾಡಿನ ಮಂತ್ರಿ ದ್ರಾ.ಮು.ಕ ಮುಖಂಡ ನೆಡುಂಚೆಳಿಯನ್‌ರವರು ಸುಬ್ರಹ್ಮಣ್ಯಂ ನಡೆದುಕೊಂಡಿರುವ ಕುರಿತು ಟೀಕಿಸಿದ್ದಾರೆ. ವಿಧಾನ ಸಭೆಯಲ್ಲಿ ಸ್ವತಂತ್ರ ಪಾರ್ಟಿಯವರು ಆ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್ಸಿಗರು ಅದನ್ನು ಬೇರೆ ಕಾರಣವನ್ನು ತಿಳಿಸಿ ಎದುರಿಸಿದ್ದಾರೆ ವಿನಃ ಆರೋಪಗಳನ್ನು ರದ್ದುಗೊಳಿಸಲು ಕರೆಕೊಟ್ಟಿಲ್ಲ.

ರಾಜಕೀಯ ರೇಷಾಗ್ನಿಯಲ್ಲಿ ಸುಬ್ರಹ್ಮಣ್ಯಂರವರು ಸುಟ್ಟುಕೊಂಡರು. ಶ್ರೀಸಾಮಾನ್ಯ ಈಗ ಚಿಂತಾಮಗ್ನನಾಗಿದ್ದಾನೆ. ಚುನಾವಣಾ ರಂಗ ಕೇವಲ ಧನಬಲ ಹಾಗೂ ಅಧಿಕಾರದಲ್ಲಿರುವವರ ಅರಸೊತ್ತಿಗೆಯೇನು? ಹಣದ ರಾಶಿ ಹಂಚಬೇಕು, ಬೆಂಬದ ಹೂರಿ ಹೊಸ ಬೇಕು, ಮತ್ತೆ ಏನು? ನವಕಾಂಗ್ರೆಸ್ಸಿನ ನವ-ನವೀನ ತಂತ್ರ ಹಾಗೂ ರಾಜಕೀಯದ ರಂಗಿಯಂತ ಪ್ರಾರಂಭವನ್ನು ಮೇಲಕ್ಕೆತ್ತಲು ಯಾವ ಕೂಪರ್ ಬಂದೀತು? ಜಗತ್...

(ಎಂಟನೇ ಪುಟ ನೋಡಿರಿ)

ಚತ್ವಾರಿ ಶೃಂಗಾ ತ್ರಯೋಸ್ಯ ಪಾದಾಃ

ಧ್ರುವ (ಭಾಗವತ ೪-೨೩), ಭೂಮಿ (ಭಾಗವತ ೧೦-೧೭), ಸೂರ್ಯ (ವಾಯು ೮೪), ಚಂದ್ರ (ಹರಿವಂಶ ೧-೨೫), ಮಂಗಲ (ವ್ರತರಾಜ ಪು. ೧೦೭), ಬುಧ (ವಾಯು ೯೦), ಬೃಹಸ್ಪತಿ (ಹರಿವಂಶ ೧-೨೫) ಶುಕ್ರ (ದೇವೀಭಾಗವತ ೧-೯), ಮತ್ತು ಶನಿ (ಭಾಗವತ ೬-೪೧) ಇವುಗಳೆಲ್ಲವೂ ಅಚೇತನಗಳೆಂದು ಎಲ್ಲರಿಗೂ ಗೊತ್ತು. ಪುರಾಣಗಳಲ್ಲಿ ಇವೆಲ್ಲವುಗಳನ್ನು ಸಚೇತನಗಳಂತೆ ವರ್ಣಿಸಿದ್ದಾರೆ. ಜಡಗಳನ್ನೂ ಚೇತನಗಳನ್ನು ಒಂದಾಗಿಸಿ ವರ್ಣಿಸುವುದು ಪುರಾಣಗಳಲ್ಲಿನ ವಿಶೇಷತೆಯೆಂದು ಹೇಳಬೇಕು. ಪುರಾಣಗಳ ಮಂತ್ರಾನುಚರಿತೆಗಳಲ್ಲಿ ಅಗ್ನಿ (ಮಹಾಭಾರತ-೩-೨೨೬-೩೦) ವಾಯು (ಮಹಾಭಾರತ-೧೩-೧೯೧) ಜಲ (ಮಹಾಭಾರತ—೨-೧೧-೨೦) ಮತ್ತು ಭೂಮಿ (ಭಾಗವತ-೧೦-೧೭)ಗಳು ಚೇತನಗಳಂತೆಯೇ ಮಾತು ತೆಗೂಡುತ್ತಿದ್ದರ ಉಲ್ಲೇಖಗಳಿವೆ. ಪುರಾಣಗಳಲ್ಲಿ ಜಡ ಹಿಮಾಲಯವೂ (ಬ್ರಹ್ಮಪುರಾಣ—೩೪) ಸಂತಾನಾಪೇಕ್ಷೆಯಿಂದ ತಪಸ್ಸು ಮಾಡಲು ಹೋಗುತ್ತದೆ. ಶ್ರೀ ರಾಮನಿಗೆ ಹೆದರಿ ಸಮುದ್ರವು (ವಾಲ್ಮೀಕಿ ರಾಮಾಯಣ ಯುದ್ಧಕಾಂಡ ೨೨-೨೩) ಶರೀರಧಾರಿಯಾಗಿ ಪ್ರತ್ಯಕ್ಷವಾಗಿ ಪ್ರಾರ್ಥಿಸಿಕೊಳ್ಳುತ್ತದೆ. ಆದುದರಿಂದ, ಪುರಾಣಗಳನ್ನೋದುವಾಗ ಅವುಗಳು ಮಾನವೇತಿಹಾಸದ ಸತ್ಯತೆಗಳೇ ಎಂದು ತಿಳಿಯಬಾರದು. ಅವುಗಳಲ್ಲಿ ಅಚೇತನ ಗ್ರಹ-ನಕ್ಷತ್ರಗಳ, ಚೇತನ ಮಾನವರ ಭಾವನೆಗಳಿಗೆ ಮಾನವೀಯ ರೂಪ ನೀಡಿದ ಅನೇಕ ಕಥೆಗಳಿವೆ. ಸತ್ಕರ್ಮ ಪ್ರವೃತ್ತಿ ಮತ್ತು ದುಷ್ಕರ್ಮ ವಿರಕ್ತಿಗಳನ್ನು ಉತ್ಪನ್ನ ಮಾಡುವುದೇ ಈ ಕಥೆಗಳ ಉದ್ದೇಶ. ಇವುಗಳು ಅದ್ಭುತವಾಗಿರುವುದುಂಟು, ರೋಚಕವೆನಿಸುವುದುಂಟು, ಕೆಲವೊಮ್ಮೆ ಭಯಾನಕರೂಪ ತಳೆಯುವುದೂ ಉಂಟು. ಈ ಶೈಲಿಯನ್ನು ಮೀಮಾಂಸಕರ ಅಭಿಪ್ರಾಯದಂತೆ ಅರ್ಥವಾದವೆನ್ನಬಹುದು; ಅಥವಾ ಸಾಹಿತ್ಯ ಭಾಷೆಯಲ್ಲಿ ಅಲಂಕಾರವೆನ್ನಬಹುದು; ಏನೇ ಇದ್ದರೂ ಈ ಬಗೆಯ ವರ್ಣನೆಯು ಅತ್ಯಂತ ಪ್ರಾಚೀನವಾದ ಪದ್ಧತಿಯೆಂಬುದನ್ನು ಅಲ್ಲಗಳೆಯಲು ಅಸಾಧ್ಯ.

ಋಗ್ವೇದದಲ್ಲೊಂದು ಉಲ್ಲೇಖವಿದೆ. 'ಚತ್ವಾರಿ ಶೃಂಗಾ ತ್ರಯೋಅಸ್ಯ ಪಾದಾಃ' (೪-೫೮-೩) ನಾಲ್ಕು ಕೊಂಬುಗಳು, ಇದಕ್ಕೆ ಮೂರು ಪಾದಗಳು ಎಂದು ಅದರ ಅರ್ಥ. ಗೋಪಥ ಬ್ರಾಹ್ಮಣದಲ್ಲಿಯೂ 'ಪರೋಕ್ಷಪ್ರಿಯಾ ಇವ ದೇವಾ ಭವಂತಿ ಪ್ರತ್ಯಕ್ಷದ್ವಿಷಃ' (೨-೧) ಎಂದು ಹೇಳಿ ಈ ಪದ್ಧತಿಯೇ ಶ್ರೇಷ್ಠವೆಂದು ಹೇಳಿ 'ಅಪಿವೋಭಯವಿಧಾ ಸ್ಯಾತ್' ಎಂದು ಹೇಳಿ ನಿರುಕ್ತವೂ (ದೈವತ ೭-೭-೧) ಈ ಶೈಲಿಯನ್ನು ಸಮರ್ಥಿಸಿದೆ. ಇದೇ ಪ್ರಾಚೀನ ಶೈಲಿಯನ್ನು ನಾವು ಪುರಾಣಗಳಲ್ಲಿಯೂ ಕಾಣಬಹುದು. ತನ್ನ ಕಥೆಗಳ ರಹಸ್ಯವನ್ನು ಉದ್ಘಾಟಿಸುವ ಸಲುವಾಗಿಯೇ ಪುರಾಣಕಾರರು ಕೆಲವೊಮ್ಮೆ ವ್ಯಾಖ್ಯಾನವನ್ನೂ ಬರೆಯುತ್ತಾರೆ.

ಭಾಗವತದಲ್ಲಿ ಪುರಂಜನನ ಕಥೆ ಬರುತ್ತದೆ. (೪-೨೫-೨೯) ಈ ಕಥೆಯನ್ನೋದುತ್ತ ಹೋದಂತೆ ಮೊದಮೊದಲಿಗೆ ಓರ್ವ ವಿಲಾಸಿ ರಾಜ-ರಾಣಿಯರ ಕಥೆಯೋದುತ್ತಿರುವಂತೆ ಭಾಸವಾಗುತ್ತದೆ. ಭಾಗವತಕಾರನು ೨೯ನೆಯ ಅಧ್ಯಾಯದಲ್ಲಿ ಈ ಕಥೆಯ ವ್ಯಾಖ್ಯಾನವನ್ನು ತಾನೇ ಮಾಡುತ್ತಾನೆ. ಇದನ್ನೋದಿದ ಮೇಲೆ ಪುರಂಜನನ ಕಥೆಯು ವಿಲಾಸೀ ರಾಜ-ರಾಣಿಯರ ಕಥೆಯಾಗಿ ಉಳಿಯುವುದಿಲ್ಲ. ಅದು ಆಧ್ಯಾತ್ಮವಾದದ ಶ್ರೇಷ್ಠಾತಿಶ್ರೇಷ್ಠ ಕಥೆಗಳಲ್ಲಿ ಒಂದಾಗಿ ಪರಿಣಮಿಸುವುದೆಂದು ಮನವರಿಕೆಯಾಗುವುದು. ಇದೇ ರೀತಿಯಲ್ಲಿ ಮಹಾಭಾರತದಲ್ಲಿ ಇಬ್ಬರು ಸ್ತ್ರೀಯರು ಲಡಿ ಹೊಡೆಯುತ್ತ ವಸ್ತ್ರ ನೇಯುವ ಕಥೆಯ ಅಂತರಾಳವನ್ನು ಮಹಾಭಾರತಕಾರನು ಉತ್ತಂಕನಿಗೆ ಗುರುಮುಖೇನ ತಿಳಿಸುವಾಗ ಅದು ಜ್ಯೋತಿಷ ವಿಜ್ಞಾನದ ಕಥೆಯಾಗುವುದು (೧-೩-೧೪೪, ೧-೩-೧೬೬)

ಪದ್ಮ ಪುರಾಣದಲ್ಲಿಯೂ ಇಂತಹುದೇ ಕಥೆಗಳಿವೆ. ಒಬ್ಬ ಯುವತಿ ಮಾತೆಗೆ ಇರ್ವರು ವೃದ್ಧ ಪುತ್ರರು ಜನಿಸಿದರೆಂದು ಒಂದರಲ್ಲಿ ಹೇಳಿದೆ. ಇದು ತೋರಿಕೆಗೆ ಸರ್ವಥಾ ಅಸಂಭಾವ್ಯವೆನಿಸುತ್ತದೆ. ಪುರಾಣಕಾರನು ಸ್ವತಃ ಇದಕ್ಕೆ ವ್ಯಾಖ್ಯಾನ ಮಾಡಿ ಕಥೆಯ ಮಥಿತಾರ್ಥ ಹೇಳಿದಾಗ ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ಸುಂದರ ಕಥೆಯಾಗಿ ಪರಿಣಮಿಸುತ್ತದೆ. (ಉತ್ತರಖಂಡ ೯೩) ಮಾನವನ ಭಾವನೆಗಳನ್ನು ಮಾನವೀಯ ರೂಪದಲ್ಲಿ ವರ್ಣಿಸಿದ ಒಂದು ಕಥೆ ಕೂರ್ಮ (೧-೮), ಪದ್ಮ (೧-೪), ಮಾರ್ಕಂಡೇಯ (೫-೫) ಪುರಾಣಗಳಲ್ಲಿ ಕಲ್ಕಿ (ಅಧ್ಯಾಯ ೧) ಉಪಪುರಾಣದಲ್ಲೂ ಸಮಾನ ರೀತಿಯಲ್ಲಿ ಕಂಡು ಬರುತ್ತದೆ.

ಅಧರ್ಮನಿಗೆ ಮಿಥ್ಯೆಯೆಂಬ ಹೆಂಡತಿಯಿದ್ದಳು. ಆಕೆಯಲ್ಲಿ ದಂಭನೆಂಬ ಪುತ್ರನೂ ಮಾಯೆಯೆಂಬ ಪುತ್ರಿಯೂ ಜನಿಸಿದರು. ದಂಭ—ಮಾಯೆಯರಲ್ಲಿ ಲೋಭನೆಂಬ ಗಂಡು ಮಗನೂ ನಿಕೃತಿ (ವಂಚನೆ)ಯೆಂಬ ಹೆಣ್ಣು ಮಗಳೂ ಹುಟ್ಟಿದರು. ಈ ಕಥೆ ಬಹಳ ದೊಡ್ಡದು. ಇದನ್ನು ಪುರಾಣಕಾರರು ಏಕೆ ಬರೆದರು? ಆಧುನಿಕ ಸಂಶೋಧಕರು ಅಣ್ಣ ತಂಗಿಯಲ್ಲಿ ವಿವಾಹವಾಗುವ ಪದ್ಧತಿ ಪುರಾಣಕಾಲದಲ್ಲೂ ಇತ್ತು ಎಂಬುದನ್ನು ಪ್ರತಿಪಾದಿಸ ಬೇಕೆಂದವರ ಉದ್ದೇಶವಲ್ಲ. ಪುರಾಣಕಾರರು ಅಧರ್ಮ ಮತ್ತು ಮಿಥ್ಯೆಗಳ ನಿಕಟ ಸಂಬಂಧವನ್ನು ಹೊರಗೆಡಹಿದ್ದಾರೆ. ಮಿಥ್ಯೆಯಿಂದಲೇ ದಂಭ ಮತ್ತು ಲೋಭಗಳು ಹುಟ್ಟುತ್ತವೆ. ಅವುಗಳ ಸಂಯೋಗದಿಂದಲೇ ಮನುಷ್ಯನಲ್ಲಿ ಲೋಭವು ತಲೆದೋರುವುದು. ಪರರನ್ನು ಪೀಡಿಸಲು, ಪರರ ಮೇಲೆ ಒತ್ತಡ ಹೇರಲು, ಹಿಂಸೆಗೆ ಗುರಿಮಾಡಲು ಈ ಮನೋಧರ್ಮವೇ ಮೂಲ. ಆಧುನಿಕ ಸಾಹಿತ್ಯ ಪ್ರಣಾಳಿಯ ಪ್ರತೀಕ ಪದ್ಧತಿ ಪುರಾಣಗಳಿಂದಲೇ ಆರಂಭವಾಗಿದೆಯೆನ್ನಬಹುದೆನಿಸುತ್ತದೆ.

ಕಶ್ಯಪನಿಂದ ಸೂರ್ಯೋತ್ಪತ್ತಿ (ಮಹಾಭಾರತ ೧-೬೬-೨೭) ಸೂರ್ಯನಿಂದ ಸ್ಫೋಟಗೊಂಡು ಬೆಳೆದ ಚಂದ್ರರುಗಳು (ಬ್ರಹ್ಮಪುರಾಣ ೧-೩೩-೧೧), ಅಗಸ್ತ್ಯನಿಂದ ಸಮುದ್ರೋದಕ ಪಾನ (ಮಹಾಭಾರತ ೩-೧೦೪, ಸ್ಕಂದ ಪುರಾಣ ೨-೪), ವಿಂಧ್ಯಾಚಲನ ಬೆಳವಣಿಗೆಯನ್ನು ಅಗಸ್ತ್ಯನು ತಡೆಹಿಡಿದುದು (ಸ್ಕಂದಕಾಶೀಖಂಡ ೪-೫, ದೇವೀ ಭಾಗವತ ೧೦-೭-೧೬) ಮೊದಲಾದವನ್ನು ಮಾನವನ ಇತಿಹಾಸವೆಂದು ತಿಳಿಯದೆ ಅವನ್ನು ಸೃಷ್ಟಿ ವಿಜ್ಞಾನವೆಂದು ತಿಳಿದು ಓದಿದರೆ, ಅಸಂಭಾವ್ಯವೆನಿಸುವುದಿಲ್ಲ. ಸೃಷ್ಟಿ ವಿಜ್ಞಾನದಂತೆ ಎಲ್ಲ ಗ್ರಹ—ನಕ್ಷತ್ರ ಪಿಂಡಾಂಶಗಳಿಂದ ನಿರ್ಮಿತವಾದವು.

—ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 364/69.

ಕೆಂಕನಾಜೆ ದಿನರಾಜ ಶೆಟ್ಟಿ — ವಾದಿ

ಮತ್ತು

ಭಾಸ್ಕರ ಶೆಟ್ಟಿ ಕೂಡಾ — ಪ್ರತಿವಾದಿಗಳು

ಇವರೊಳಗೆ

೨೬ನೇ ಪ್ರತಿವಾದಿ ಶ್ರೀಧರ ಆಳ್ವ, ಲಲಿತ ಅಣ್ಣ ಮಗ, C/o Patial Narayana Alva, Kavoor Village, Mangalore Tq 27ನೇ ಪ್ರತಿವಾದಿ ನಿರ್ಮಲ, ದೇವಕಿ ಶೆಟ್ಟಿ ಮಗಳು, C/o "Samadan", Pinto's lane, Mangalore—3. 29ನೇ ಪ್ರತಿವಾದಿ ರತ್ನ ಯಾನೆ ಬಿ.ಬಿ ಶೆಟ್ಟಿ, ರಾಜೀವ ಶೆಟ್ಟಿ ವಿಧವೆ ಮತ್ತು ಸದ್ರಿಯವರ ಮಕ್ಕಳು—30ನೇ ಪ್ರತಿವಾದಿ ಸುರೇಂದ್ರನಾಥ ಶೆಟ್ಟಿ, 31ನೇ ಅನಸೂಯ ಶೆಟ್ಟಿ, 32ನೇ ಆನಂದ ಶೆಟ್ಟಿ, 33ನೇ ನರೇಂದ್ರ ಶೆಟ್ಟಿ resides at Pump well, Kadri Road, Mangalore—3.

ಮೇಲೆ ಹೇಳಿದ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ಪ್ಲೈಂಟು ನಿವೃತ್ತಿ ಕೇಳಿ ನೀವು ಕೂಡಾ 33 ಜನರ ಮೇಲೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 4-5-70ಕ್ಕೆ ನಿಂಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಮೇಲಿನ ದಾವೆಯಲ್ಲಿ ವ್ಯವಹರಿಸುವುದಿದ್ದರೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde

Advocate for Pltf.

ತಾ. 21-4-70, ಉಡುಪಿ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ಮಿತ ಕುಟುಂಬ ಯೋಜನೆಗೆ
ಮಿತ ಸಂತತಿ
ಬೆಲೆ 0—75 ಪೈಸೆ ಮಾತ್ರ.
ನವಭಾರತ ಪುಸ್ತಕ ಭಂಡಾರ.
ಕಾಲುಕೋಟೆ, ಉಡುಪಿ, ದ. ಕ.

ಫೋನ್ : 526
ಸಂಪುಟ ೪೯
ಸಂಚಿಕೆ ೩೫
VOL. 49
No. 35

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೭—೫—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಬೂದಿಗೆ ತುಪ್ಪವೆರೆದರು

ಪ್ರಧಾನ ಮಂತ್ರಿ, ಶ್ರೀಮತಿ ಇಂದಿರಾ ಗಾಂಧಿಯವರು ಚಂಡೀಗಢ ಪಕ್ಷಿಗೆಂದು ಪರಿಹಾರ ಘೋಷಿಸಿ ಪಂಜಾಬಿಗಳಿಂದ ಶಹಭಾಸ್‌ಗಿರಿ ಪಡೆದರು; ಆದರೆ, ಇದರ ಹಿಂದೆ ಅವ್ಯಕ್ತ ಕೈವಾಡವಾಡಿದ್ದ ಮುಖ್ಯಮಂತ್ರಿ ಅಕಾಲಿದಳದ ಶ್ರೀ ಗುರ್ನಾಮ ಸಿಂಗರಿಗೆ, ಅಕಾಲಿಗಳು ಪಂಗನಾಮವನ್ನೇ ಹಾಕಿದರು. ಮುಖ್ಯಮಂತ್ರಿ ಪದವಿಯಿಂದಲೂ ಅಕಾಲಿದಳದ ಪ್ರಾಥಮಿಕ ಸದಸ್ಯತನದಿಂದಲೂ ಶ್ರೀ ಮಾಸ್ಟರ್ ಸಿಂಗರು ಕೈತೊಳೆದ ಕೊಳ್ಳಬೇಕಾಯಿತು. ನಿಜಕ್ಕೂ ಅಕಾಲಿಗಳು ಭಲೇ ಬುದ್ಧಿವಂತರು. ಚಂಡೀಗಢವನ್ನು ದಕ್ಕಿಸಿಕೊಳ್ಳುವುದಕ್ಕೆ ಅವರಿಗೆ ಗುರ್ನಾಮ ಸಿಂಗರ ಗದ್ದುಗೆ ಬೇಕಾಯ್ತು; ಅದು ಸಿದ್ಧಿಸಿದ ಬಳಿಕ ಅವರ ಹಂಗೇನ? ಮನೆಯಲ್ಲೇ ಸಾಗಣನನ್ನು ಸಾಕಲು ಸಂತರೂ ಅಕಾಲಿಗಳೂ ಒಪ್ಪಲಿಲ್ಲ. ಗುರ್ನಾಮರನ್ನು ನಾಮಾವಶೇಷ ಮಾಡಿದರು. ಪ್ರಧಾನಿ ತಾನು ಪಡೆದ ಶಹಭಾಸ್‌ಗಿರಿಯಿಂದ ಒಮ್ಮೆಗೇ ಉನ್ಮತ್ತರಾದರು. ಬೆಳಗಾಂವಿ ಒಡೆಯುವ ಬುರುಡೆ ಉರುಳಿಸಿದರು. ಆದರೆ, ಈ ಬುರುಡೆ ತನಗೇ ತಿರುಗುಬಾಣವಾಗಿ ಪರಿಣಮಿಸ ಹೊರಟಿತೆಂದು ಮನವರಿಕೆ ಮಾಡಿಕೊಂಡ ಈ ಛಲೇಬಾಜಿ ಅದನ್ನು ಅಲ್ಲಿಯೇ ಬಿಟ್ಟು (ಸದ್ಯಕ್ಕೆ) ತೆಲಂಗಾಣದತ್ತ ಲಕ್ಷ್ಯ ಹರಿಸಿದ್ದಾರೆ. ತೆಲಂಗಾಣ ಚಳುವಳಿಗಾರರ ನಾಯಕ ಡಾ| ಚೆನ್ನಾರೆಡ್ಡಿ ಮತ್ತವರಿಂದ ಆಕೆ ಕೆಲವು ವಿವರಣೆ ಕೇಳಿದ್ದಾರೆಂದು ಪತ್ರವರದಿ. ಪ್ರತ್ಯೇಕ ತೆಲಂಗಾಣ ರಾಜ್ಯವೇ ಬೇಕೆ, ಅಥವಾ ಆಂಧ್ರ ಪ್ರದೇಶದೊಳಗೊಂದು ತೆಲಂಗಾಣ ಮರಿರಾಜ್ಯ ಏರ್ಪಡಿಸಿದರೆ ಸಾಕೆ? ಎಂಬುದವರ ಪ್ರಶ್ನೆ. ಸಂಗತಿ ಅತ್ಯಂತ ರಹಸ್ಯವಾಗಿರುವುದರಿಂದ ತೆಲಂಗಾಣವಾದಿಗಳ ಸ್ಪಷ್ಟ ಉತ್ತರದ ವಿವರಗಳು ಇನ್ನೂ ಅಜ್ಞಾತ.

ಒಂದೊಮ್ಮೆ ತೀವ್ರ ವಿರೋಧಕ್ಕೆ ತೆರಳಿದ್ದ ತೆಲಂಗಾಣ ಚಳುವಳಿಯು ಈಗ ಮರ್ತಳಿದಿವೆ. ಹೈದರಾಬಾದ್- ಸಿಕಂದರಾಬಾದುಗಳಲ್ಲಿ ಹಿಂಸಾಚಾರವೆಬ್ಬಿಸಿದ್ದ, ಜನಜೀವನಗಳನ್ನು ಅಸ್ತವ್ಯಸ್ತಗೊಳಿಸಿ, ವಿದ್ಯಾರ್ಥಿಗಳಿಗೆ ದಾರುಣ ಪೆಟ್ಟು ನೀಡಿದ್ದ ಚಳುವಳಿ ಸರ್ವಥಾ ಹಿಡಿ ಮಡಚಿಟ್ಟು ತೆಪ್ಪಗಿದೆ. ತೆಲಂಗಾಣವು ಆಂಧ್ರಪ್ರದೇಶದಲ್ಲಿ ವಿಲೀನವಾಗುವುದಕ್ಕೆ ಮುಖ್ಯ ಕಾರಣರಾಗಿದ್ದವರು ಶ್ರೀ ವಿ. ಬಿ. ರಾಜು. ಇವರು ಮಂತ್ರಿಯಾಗಿರುವಾಗಲೂ ಆಂಧ್ರ-ತೆಲಂಗಾಣಗಳ ಐಕ್ಯಗಾನವನ್ನೇ ಹಾಡುತ್ತಿದ್ದವರು. ಯಾವ ಕಾಲಕ್ಕೂ ಈ ಗೋಷ್ಠದಲ್ಲಿ ಅವಕಾಶವೀಯುವುದಿಲ್ಲವೆಂದು ಘಂಟಾಘೋಷವಾಗಿ ಸಾರಿದವರು. ಡಾ| ಚೆನ್ನಾರೆಡ್ಡಿಯವರ ಸಂಸತ್ ಸದಸ್ಯತ್ವ ರದ್ದಾದುದರಿಂದ ಕೇಂದ್ರ ಸಚಿವ ಸಂಪುಟದಿಂದ ಹೊರಬಂದ ಬಳಿಕ ಅವರಿಗೆ ಮಾಡಲು ಉದ್ಯೋಗ ದೊರೆಯದ್ದರಿಂದಲೋ ಏನೋ, ತೆಲಂಗಾಣವಾದ ಜೀವ ತುಂಬಿ ಪುಷ್ಟಿಯಾಯಿತು. ಇವರ ಬೆಂಗೋಲಾಗಿ ಡಾ| ರಾಜು ಅವರೇ ನಿಂತರು 'ಜೈ ತೆಲಂಗಾಣ' ವೆಂದು ಉಗ್ಗಡಿಸಿಯೇ ಅವರು ತೃಪ್ತರಾಗದೆ ದೆಹಲಿ ಪ್ರವಾಸ ಮತ್ತು ಸ್ಮರಣ ಅಧ್ವರ್ಯುವಾದರು. ಈ ನಾಯಕ ಮಣಿಗಳ ಹಿರಿತನದಲ್ಲೇ ತೆಲಂಗಾಣದ ಜನ ಜೀವನ ಅಸ್ತವ್ಯಸ್ತವಾದದ್ದು. ಆದರೆ ಇಂದು ಪರಿಸ್ಥಿತಿ ತುಂಬ ಬದಲಾಗಿದೆ. ಪ್ರತ್ಯೇಕ ತೆಲಂಗಾಣ ಬೇಕೆಂಬವರ ಕೈಯಲ್ಲಿ ಬೆಲೆಯಿಲ್ಲದಂತಾಗಿದೆ. ಡಾ| ರೆಡ್ಡಿ ಮತ್ತು ಡಾ| ರಾಜು ರವರು ತಮ್ಮ ನಾಯಕತನಕ್ಕೆ ಸಂಭಾವ್ಯತನವನ್ನೊದಗಿಸುವಂತಹ ಪ್ರವೇಶವು ಒದಗದಿದ್ದರೂ, ಅವರಿಗೆ ಜನ ಬಲ ಹ್ರಾಸವಾಗುತ್ತಲೇ ಬಂದಿದೆ. ಚಳುವಳಿಯು ಯಾವುದೇ ಉದ್ದೇಶದಿಂದ ಪ್ರೇರಿತವಾಗಲಿ, ಹಿಂಸೆಗೆ—ದೊಂಬಿಗೊಳಗಾಗುವುದು ಜನತೆಯೆಂಬುದು ತೆಲಂಗಾಣವಾದಿಗಳಿಗೂ ತೆಲಂಗಾಣವಾಸಿಗಳಿಗೂ ಮನವರಿಕೆಯಾಗಿದೆ. ಆದುದರಿಂದ ಜನಸಾಧಾರಣರ ಪ್ರತ್ಯೇಕ ರಾಜ್ಯ ಬೇಡಿಕೆಯು ನುಣುಚಿಕೊಳ್ಳಲಿಲ್ಲವಾದರೂ, ಅದರ ಸ್ವರಮಾತ್ರ ತೀರ ಮಂದವಾಗಿದೆ. ಚಳುವಳಿಯಲ್ಲಿ ಜನರು ನಿರಾಸಕ್ತರಾಗಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಕೆಲ ಕಾಲ ಕಳೆಯಿತೆಂದರೆ, ತೆಲಂಗಾಣ ವಾದವು ತಾನಾಗಿಯೇ ಸತ್ತುಹೋಗುವ ಸಂಭಾವನೆಯಿದೆ.

ಜನರಲ್ಲಿ ನಿರಾಸಕ್ತಿ ಮೂಡುವುದಕ್ಕೆ ಆಂಧ್ರ ಪ್ರದೇಶ ಸರಕಾರದ ಕೆಲವು ಕಾರ್ಯಕ್ರಮಗಳೂ ಕಾರಣವೆನ್ನಬೇಕು. ಶ್ರೀ ರೆಡ್ಡಿ ಸರಕಾರವು ತೆಲಂಗಾಣವನ್ನು ಸಂಪೂರ್ಣ ನಿರ್ಲಕ್ಷ್ಯಿಸಿದೆಯೆಂಬ ಬಲವತ್ತರ ಆರೋಪವಿನ್ನು ಹೇಳುವಂತಿಲ್ಲ. ವಿದ್ಯುತ್ ಸರಬರಾಜು, ಸಣ್ಣ ನೀರಾವರಿ ಯೋಜನೆ, ಇತ್ಯಾದಿಗಳಿಗಾಗಿ ತೆಲಂಗಾಣದ ಒಂಭತ್ತು ಜಿಲ್ಲೆಗಳಲ್ಲಿ ಒಂಭತ್ತು ಕೋಟಿ ರೂಪಾಯಿಗಳ ವಿಶೇಷ ನಿಧಿಯೊಂದನ್ನು ಶ್ರೀ ರೆಡ್ಡಿಯವರು ಇಟ್ಟಿದ್ದಾರೆ. ಇದರ ಉಪಯೋಗ-ಲಾಭ ತೆಲಂಗಾಣ ಜನತೆ ಮರೆಯುವುದಿಲ್ಲ. ಇನ್ನು ಪಕ್ಷಪಾತದ ಮಾತೆತ್ತುವುದ ಸಾಮಾನ್ಯವಾಗಿ ಅಸಾಧ್ಯ. ಆದರೂ ಸರಕಾರಿ ನೌಕರಿಯ ವಿಚಾರ ಮಾತ್ರ ಸಮಸ್ಯೆಯಿದೆ. ಸರಕಾರಿ ನೌಕರರನ್ನು ತೆಲಂಗಾಣ ಆಂಧ್ರ ಎರಡು ವಿಭಾಗ ಮಾಡುವುದು ತನ್ಮೂಲಕ ತೆಲಂಗಾಣಕ್ಕೆ ಪ್ರಾಶಸ್ತ್ಯ ನೀಡಲು ಸರಕಾರ ಸಿದ್ಧವಿದ್ದರೂ ಇದನ್ನು ಕಾನೂನು ಒಪ್ಪುವುದಿಲ್ಲ. ಆದನ್ನು ಶಾಸನ ರೀತ್ಯಾ ಒಪ್ಪಿಗೆ ಪಡೆದಾದರೂ ಆಂಧ್ರದವರು ಅಸಂತುಷ್ಟರಾಗುತ್ತಾರೆ. ಹೀಗಾಗಿ, ತೆಲಂಗಾಣ ಚಳುವಳಿಯು ಹಿಂದೆ ಇಟ್ಟ ತಕರಾರು ಕಾರಣಗಳಲ್ಲಿ ನೌಕರಿ ಪ್ರಶ್ನೆಗೊಂದು ಉತ್ತರ ಬಾಕಿಯಾಗಿ ಉಳಿದುವೆಲ್ಲ ಉತ್ತರಿಸಲ್ಪಟ್ಟಿದ್ದು ಜನ ಸಂತೃಪ್ತವಾಗಿದೆ.

ಈ ವೇಳೆ ಇಲ್ಲಿ ಪ್ರಧಾನಿಯವರು ಪ್ರತ್ಯೇಕ ರಾಜ್ಯ ಬೇಕೋ, ಉಪರಾಜ್ಯದಿಂದಲೇ ತೃಪ್ತರೋ ಎಂದು ಡಾ| ರೆಡ್ಡಿಯವರನ್ನು ಕೇಳುವುದರ ಅರ್ಥವೇನು? ತೆಲಂಗಾಣ ವಾದವನ್ನು ಪುರಸ್ಕರಿಸುವುದೆ, ಅಥವಾ ಹಲವು ದಿನಗಳ ಬಳಿಕ ಮೂಡಿ ಬರುತ್ತಿರುವ ಶಾಂತಿ ಸೌಹಾರ್ದ ಮುಖಕ್ಕೆ ಮೋಡ ಬೀಳುವುದೆ? ಚಳವಳಿ ಉಗ್ರ ಸ್ವರೂಪಕ್ಕೆ ಹೋದಾಗ, ಚಳುವಳಿ ನಿಷ್ಕ್ರಿಯ; ನಿರ್ವಿಕಾರ ವಾತಾವರಣ ನಿರ್ಮಿತವಾಗಲಿ, ಮತ್ತೆ ಆಲೋಚಿಸೋಣವೆಂದಾಗ ಡಾ| ರೆಡ್ಡಿ—ರಾಜು ಏನು ಮಾಡಿದರು? ಉರಿಯುವ ಬೆಂಕಿಗೆ ತುಪ್ಪವೆರೆದು ಭುಗಿಲೆಬ್ಬಿಸಿದರು! ಈಗ ಇಂಧನವೂ ಕೊನೆಗೊಳ್ಳುವ ಸ್ಥಿತಿಯಿರುವಾಗ ಮಲಗಿದ ಹಾವನ್ನು ಬಡಿದೆಬ್ಬಿಸುವ ಮಾಡಲು ಕೆಲಸವೇ ಇಲ್ಲದ ಪರ್ಕಸೆ ಅನಾವಶ್ಯಕ. ಅನಾವಶ್ಯಕ ಬೂದಿಗೆ ತುಪ್ಪವೆರೆಯುವ ಪ್ರಧಾನಿಗಳು ದೇಶೋದ್ಧಾರದ ಇತರ ಕಾರ್ಯಗಳಿಗೆ ಮನಸ್ಸು ಹರಿಸಬೇಕು.

ಸತಿಪತಿಯರ ಒಟ್ಟು ಆದಾಯದ ಮೇಲೆ ಆದಾಯ ತೆರಿಗೆ ಹೊರಿಸುವ ಸೂಚನೆಗೆ ಪ್ರತಿಭಟನೆ,

ಮಂಗಳೂರು ದಿನಾಂಕ 28.4.70ರಲ್ಲು ಕೊಡಿಯಾಲಬೈಲ್ ಥಿಯೊಸೊಫಿಕಲ್ ಲಾಜ್‌ನಲ್ಲಿ ಭಗಿನಿ ಸಮಾಜ ಮತ್ತು ಮಹಿಳಾ ಸಮಾಜಗಳ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಭಾರತದ ಪ್ರಧಾನ ಮಂತ್ರಿಯವರು ಬಜೆಟ್ ಅಧಿವೇಶನದಲ್ಲಿ ಸತಿಪತಿಯರ ಜೊತೆ ಆದಾಯದ ಮೇಲೆ ಆದಾಯ ತೆರಿಗೆಯನ್ನು ಹೊರಿಸುವ ಕುರಿತು ಮಾಡಿದ ಭಾಷಣಕ್ಕೆ ವಿರೋಧ ವ್ಯಕ್ತಪಡಿಸಲಾಯಿತು.

ಶ್ರೀಮತಿ ಸುಶೀಲಾ ಜಿ. ಪಂಡಿತರು ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದಲ್ಲಿ ಈ ಕಾನೂನಿನನ್ವಯ ತೆರಿಗೆಯನ್ನು ಹೊರಿಸುವುದಾದರೆ ಮಧ್ಯಮ ವರ್ಗದ ಕುಟುಂಬಗಳಿಗೆ ಆಗಬಹುದಾದ ಕಷ್ಟಗಳನ್ನು ವಿವರಿಸಿದರು. ಅತಿಥಿಯಾಗಿ ಭಾಷಣ ಮಾಡಿದ ಎಡ್ವೊಕೇಟ್ ಶ್ರೀ ಮಾಧವರಾಯರು ವಿವಿಧ ಅಂಶಗಳಿಂದ ಆದಾಯ ಮತ್ತು ಸಂಪತ್ತು ತೆರಿಗೆಯನ್ನು ಹೊರಿಸುವುದರಿಂದ ಕಂಡೆ ಕಾಣಿ ಮತ್ತು ಅನ್ಯಾಯಸ್ಥ ಮಕ್ಕಳ ಒಟ್ಟು ಆದಾಯದ ಮೇಲೆ ಉಂಟಾಗ ಬಹುದಾದ ದುಷ್ಪರಿಣಾಮವನ್ನು ವಿವರವಾಗಿ ತಿಳಿಸಿದರು.

ಅನಂತರ ಪ್ರಧಾನ ಮಂತ್ರಿಯವರ ಈ ಸೂಚನೆಯನ್ನು ವಿರೋಧಿಸಿ ಸರ್ವಾನುಮತದ ನಿರ್ಣಯವೊಂದನ್ನು ಅಂಗೀಕರಿಸಲಾಯಿತು.

ಈ ನಿರ್ಣಯದಲ್ಲಿ ಪ್ರಧಾನ ಮಂತ್ರಿಯವರ ಈ ಸೂಚನೆಯನ್ನು ಮಧ್ಯಮ ವರ್ಗದ ಕುಟುಂಬಗಳ ಹಿತದೃಷ್ಟಿಯಿಂದ ಕೈ ಬಿಡಬೇಕೆಂದೂ ಹಾಗೆ ಮಾಡದೆ ಇದ್ದರೆ ಈ ತೆರಿಗೆಯಿಂದ ಅಂತಹ ಕುಟುಂಬಗಳು ಸಂಸಾರಕ್ಕೆ ಇಳಿಯ ಬಹುದೆಂದೂ, ಸ್ತ್ರೀಯರ ಸ್ವಾವಲಂಬಿ ಜೀವನಕ್ಕೆ ಧಕ್ಕೆ ತಗಲುವುದಲ್ಲದೆ ನ್ಯಾಯಬದ್ಧವಾದ ಮತ್ತು ನೈತಿಕ ದಾಂಪತ್ಯ ಜೀವನವನ್ನು ತೊರೆದು ಅನೈತಿಕ ಸ್ತ್ರೀ ಪುರುಷ ಸಂಬಂಧಕ್ಕೆ ಎಡೆಗೊಡುವುದೆಂದು ಅಭಿಪ್ರಾಯ ಪಟ್ಟ

(ಆರನೇ ಪುಟ ನೋಡಿ)

ವಿಕ್ಟರಿ ಫಾರ್ ವಿತ್ರಪ ಭೂಪ

ಕೆಂಪು ಚೀನಾ ಹಾರಿಸಿದ ಭೂ ಉಪಗ್ರಹ ಆಕಾಶದಲ್ಲಿ ಗಸ್ತು ತಿರುಗುತ್ತಿದೆ; ಇದರಿಂದ ನಿಲ್ಲಲಾರದಷ್ಟು ಹೆಚ್ಚು ಆತಂಕ ಭಾರತೀಯರಿಗೆ. ಚೀನಾ ಅದ್ಭುತ ಸಾಧನೆಯನ್ನು ಸಾಧಿಸಿತು. ಶತ್ರುವಿನಲ್ಲಿಯೂ ಇರುವ ಉತ್ತಮ ಗುಣಗಳನ್ನು ಮುಕ್ತಕಂಠದಿಂದ ಪ್ರಶಂಸಿಸುವುದು ನಮ್ಮ ಸಂಪ್ರದಾಯ, ಇದೀಗ ಸಂಪ್ರದಾಯ ವಿರೋಧಿ ಪ್ರಗತಿವಾದವೇ ಎಲ್ಲ ರಾಜಕೀಯ ಪಕ್ಷಗಳ ಉದ್ದೇಶಿತ ನೀತಿ. ಆದ್ದರಿಂದ ಲೋಕಸಭೆಯಲ್ಲಿ ಕೆಂಪು ಚೀನಾವನ್ನು ಅಭಿನಂದಿಸಲಾಗಲಿಲ್ಲ. ಸೂರ್ಯನೇ ಇಲ್ಲವೆಂದು ಗೂಗೆ ಹೇಳಿದರೂ ಅದರ ಹೇಳಿಕೆ ಎಂದೂ ನಿಜವಾಗದು. ಆದ್ದರಿಂದಲೇ ನಮಗೆಲ್ಲರಿಗೆ ದಿಗ್ಭ್ರಮೆ.

ಕೆಂಪು ಚೀನಾ ಅಣ್ವಸ್ತ್ರಗಳನ್ನು ಹೊಂದಿದೆ ಎಂಬ ವರದಿಯೂ ಇದೆ; ಈಗ ಗೂಢಚರ್ಯೆಗೆ ಅನುಕೂಲವೆನಿಸುವ ಭೂ—ಉಪಗ್ರಹಗಳ ಉಡ್ಡಾಣವನ್ನೂ ಅದು ಆರಂಭಿಸಿದಂತಾಯಿತು. ಮಾರಕಾಸ್ತ್ರ ನಿರ್ಮಾಣತತ್ಪರವಾಗಿ, ತಾನು ಟೀ [illegible] ಎಂದು ಹೇಳುವ ಹಚ್ಚ ಕೆಚ್ಚು ಕೆಂಪು ಚೀನಾ ಗಳಿಸುತ್ತ ಹೋಗುತ್ತಿದೆ. ನಾವೇನು ಮಾಡುತ್ತೇವೆ? [illegible] ಕಾರ್ಯಕ್ರಮಗಳಿಗೆ ಮಾತ್ರ ಬಳಸುವ ನಮ್ಮ ಪಕ್ಷದ ನೀತಿಯಿಂದ ಒಂದು [illegible] ಎಂದು ಪರಿದಿಲ್ಲ. [illegible] ಕೆಂಪು ಸೇನೆ ಜಮಾವಣೆ ಎಂಬ ವರದಿಗಳು ಬಂದಿರುವಾಗ, [illegible] ಪಾಕಿಸ್ತಾನ ಶಸ್ತ್ರಾಸ್ತ್ರಗಳನ್ನು ಜೇರಿಸುತ್ತಿದೆ ಎಂದು ತಿಳಿದಾಗ, ಅಣ್ವಸ್ತ್ರ [illegible] ನಾವು ಕಳೆದುಕೊಂಡು [illegible] ಆಗ, ನಮ್ಮ ಸರಕಾರ ದೇಶರಕ್ಷಣೆಯ ಬಗ್ಗೆ ಇನ್ನೂ ಅಮೆರಿಕ ದತ್ತಲೋ ರಷ್ಯ ದತ್ತಲೋ ನೋಡಿ ಕುಳಿತುಕೊಂಡಿದೆ.

ಕೆಂಪು ಚೀನಾವು ಭಾರತದ ಮೇಲೆ ಅಣ್ವಸ್ತ್ರದಾಳಿ ನಡೆಸಿದರೆ, ಅದರಿಂದ ರಕ್ಷಣೆಗೆ ಅಮೇರಿಕಾದಿಗಳು ಮುಂದೆ ಬರಬೇಕೆಂದು ಭಾರತದ ಬಯಕೆ. ಅವರು ಒಂದಿಷ್ಟು ಎಷ್ಟು ಇಲ್ಲ; ಬಂದೇವು ಎಂದಾರು.. ಅವರು ಬರುವಷ್ಟರೊಳಗೆ ಸಂಭಾವ್ಯ ಅನಾಹುತಗಳು ಸಂಭವಿಸಿಯೇ ಹೋದಾವು. ವಿದೇಶೀಯರ ಬಲದಿಂದ ಸ್ವದೇಶ ರಕ್ಷಿಸುವ ಈ ಬುದ್ಧಿ ಪ್ರಳಯಾಂತಕ. ಆದ್ದರಿಂದಲೇ ನಮ್ಮ ಅಣ್ವಸ್ತ್ರ ನೀತಿ—ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಆಮೂಲಾಗ್ರ ಬದಲಾವಣೆ ಬೇಕು ಎಂಬ ಬೇಡಿಕೆ ಸಂಸತ್ತಿನಲ್ಲಿ ಬಂತು. ಇದಕ್ಕೆ ಸೂಕ್ತವಾದ ಭರವಸೆಯನ್ನು ಸರಕಾರ ನೀಡದೆ ಹೋದರೂ ಜನವಾಣಿಯು ಪ್ರತಿಧ್ವನಿ ಅದಕ್ಕೆ ಕೇಳುವಂತಾಯ್ತು.

ಭಾರತ ಅಣ್ವಸ್ತ್ರ ತಯಾರಿಸಬಲ್ಲುದು ಎಂಬ ಘೋಷಣೆಗೆ ಕೆಲಕಾಲವಾಯಿತು. ಸರಕಾರ ಬಾಂಬು ತಯಾರಿಸಲು ಅನುಮತಿ ನೀಡಲಾರದು. ನಾವು ಅಣ್ವಸ್ತ್ರ ತಯಾರಿಸಬೇಕೆ? ನಮ್ಮ ಶತ್ರುಗಳು ಅಂತಹ ಮಾರಕಾಸ್ತ್ರ ಧಾರಿಗಳಾಗಿ ನಮ್ಮನ್ನು ಕಬಳಿಸಲು ಹಾತೊರೆಯುತ್ತಿರುವಾಗ, ಸ್ವರಕ್ಷಣೆಗಾಗಿಯಾದರೂ ತಯಾರಿಸಲೇ ಬೇಕು. ನಮ್ಮ ಅಣ್ವಸ್ತ್ರಗಳು ಪರರನ್ನು ಬಡಿಯಲಿಕ್ಕಲ್ಲ; ಬೆದರಿಸುವುದಕ್ಕಲ್ಲ; ನಮ್ಮನ್ನು ನಾವೇ ಸಂರಕ್ಷಿಸಿಕೊಳ್ಳಲು; ಸ್ವಶಕ್ತಿಯನ್ನು ಹೆಚ್ಚಿಸಿಕೊಳ್ಳಲು. ಇದಕ್ಕೆ ವಿಭಿನ್ನ ವಾದವೂ ಇಲ್ಲದಿಲ್ಲ. ಸ್ವರಕ್ಷಣೆಯ ಹೆಸರಲ್ಲಿ ಅಣ್ವಸ್ತ್ರ ಸಿದ್ಧಿಸಿಕೊಂಡರೆ, ಅದರಿಂದ ಮಾರಕ ಬುದ್ಧಿ ತಾನಾಗಿಯೇ ಬರುವುದು. ಮನೋವಿಜ್ಞಾನಿಗಳಲ್ಲಿ ದುರ್ಭಾವನೆ ಮೂಡುವುದು. ಆದುದರಿಂದ ನಮ್ಮ ಅಣು ಶಕ್ತಿ ಶಾಂತಿಯುತ ಕಾರ್ಯಕ್ರಮಗಳಿಗೆ ಮೀಸಲು.

ಪಂ. ನೆಹರೂರವರ ಪಂಚಶೀಲೋಪೇತ ವಿದೇಶನೀತಿಯು ಜಾಗತಿಕ ಪ್ರಶಂಸಿತ. ಆದರದು ಕೆಂಪು ಚೀನೀಯರಿಂದ ಸಂಪೂರ್ಣ ಉಪೇಕ್ಷಿತ. ಅವರ ಕೃತ್ಯ ವಿಶ್ವಾಸಘಾತಕವೆನ್ನಿ; ಮಿತ್ರದ್ರೋಹವೆನ್ನಿ. ತನ್ನಷ್ಟಕ್ಕೇ ಮಲಗಿದ ಬಾಲಸಿಂಹಕ್ಕೆ ಒದೆಯೆನ್ನಿ. ಆ ವಿದೇಶ ನೀತಿ ಗಾಳಿಪಟವಾಯ್ತು. ಆದರೂ ನಾವು ಇನ್ನೂ ಅದನ್ನೇ ಹಾರಿಸುತ್ತಿದ್ದೇವೆ. ಇದೇ ಜಾಡಿನಲ್ಲಿ ನಮ್ಮ ಅಣು ಶಕ್ತಿ ನೀತಿಯೂ ಮುಂದುವರಿಯುತ್ತದೆ. ಈ ನೀತಿ ಆಮೂಲಾಗ್ರ ಬದಲಾಗುವ ಕಾಲ ಸನ್ನಿಹಿತವೇ ಬಂದಿದೆ.

○ ○ ○

ರಾಷ್ಟ್ರಪತಿ ವಿ. ವಿ. ಗಿರಿಯವರಿಂದ ಭೂತಾನಕ್ಕೆ ಸೌಹಾರ್ದ ಚಿಟ್ಟಿ (ಭೂತಾನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸದಸ್ಯತ್ವ ಕೊಡಿಸಲು ಭಾರತ ಸರಕಾರದ ಒಪ್ಪಿಗೆ) ಭವ್ಯ—ಸೇವ್ಯ ಸ್ವಾಗತ. ಉಭಯ ಕುಶಲೋಪರಿ. ಪರಿಣಾಮವಾಗಿ ಭೂತಾನ— ಭಾರತ ಗಡಿಪ್ರದೇಶದ ಘಂಚೋಲಿಂಗ್‌ಗೆ ಕಾರು ಪ್ರಯಾಣ. ಪೂಜ್ಯ ಅತಿಥಿಗಳು ಆಸೀನರಾಗಿದ್ದ ಕಾರು ಬೆಟ್ಟದ ತಳದಲ್ಲಿ ಹಾದು ಹೋಗುತ್ತಲೇ ಭಾರೀ ಬಂಡೆಯೊಂದರ ಪತನ. ಅದರಡಿ ಸಿಕ್ಕಿಬಿದ್ದ ಕಾರಾಸೀನ ಪತ್ರಕರ್ತರೊಬ್ಬರ ನಿಧನ; ಮತ್ತೊಬ್ಬರ ಉಗ್ರ ಸ್ವರೂಪದ ಸ್ಪಂದನ. ಪ್ರಕೃತಿಯ ದುರಂತದಿಂದ ರಾಷ್ಟ್ರಪತಿ ಪಾರು; ಪತ್ರಕರ್ತರ ಸಾವು.

ಮೆಚ್ಚಿನ ಮಗಳು ಪ್ರಧಾನಿ ಶ್ರೀಮತಿ ಗಾಂಧಿಯವರಿಂದ ಸಂದೇಶ. ದುರಂತದಿಂದ ಬದುಕಿ ಬಂದುದಕ್ಕೆ ಅಪ್ರತಿಮ ಹರ್ಷ; ಸಮಾಧಾನದ ನಿಟ್ಟುಸಿರು. ಶ್ರೀ ವಿ. ವಿ. ಗಿರಿಯವರ ಮೇಲೆ ಕತ್ತಿ ಬಡೆಯಬಹುದಿತ್ತು; ಆದರೆ, ಪತ್ರಕರ್ತನಿಗಾಗಿ ಕಣ್ಣೀರು ಸುರಿಸಿದವರು ಕೆಲವೇ ಜನರು ರಾಜಕೀಯ ಪ್ರಧಾನವಾದ ಮೇಲೆ ಪುಢಾರಿಗಳಿಗೇ ಮಾನ—ಸನ್ಮಾನ; ಪತ್ರಕರ್ತರಿಗೆಲ್ಲಿಯ ಮಾನ?

ಶ್ರೀ ವಿ. ವಿ. ಗಿರಿಯವರು ರಾಷ್ಟ್ರಪತಿಯಾಗಿ ಆಯ್ಕೆಯಾದುದರ ಸಿಂಧುತ್ವದ ಆಹ್ವಾನ ಪ್ರಶ್ನೆ ಇದೀಗ ತಾನೇ ಇತ್ಯರ್ಥವಾಗಲಿದೆ. ಪ್ರಕೃತಿಯ ದುರಂತದ ದವಡೆಗೆ ಸಿಗದೇ ಪಾರಾಗಿ ಬಂದ ಶ್ರೀ ಗಿರಿಯವರು ನ್ಯಾಯಾಲಯದಲ್ಲೂ ಗೆದ್ದು ಬರುತ್ತಾರೆ ಎಂದು ಹಲವರು ನಂಬಿದ್ದಾರೆ. ಇದರ ಪೂರ್ವ ಸೂಚನೆಯೋ ಅದು ಎನ್ನುವವರೂ ಇದ್ದಾರೆ. ತಲೆಗೆ ಬಂದದ್ದು ಉಗುರಲ್ಲಿ ಹೋಯಿತು ಎಂಬುದು ಹಳೆಯ ಗಾದೆ. ಜೀವಕ್ಕೆ ಬಂದ ಅಪಾಯ ಸ್ಥಾನದಲ್ಲಿ ಹೋಯಿತು ಎಂದೂ ಏಕೆ ಆಗಬಾರದು ಎನ್ನುತ್ತಾರೆ ಪ್ರತಿಗಾಮಿಗಳು. ಇಷ್ಟು ದಿನ ತಾಳಿದವರಿಗೆ ನಾಲ್ಕು ದಿನ ಹೆಚ್ಚು ತಾಳಬಾರದೆ?

○ ○ ○

ಮುರಾರ್ಜಿ ಭಾಯಿ ರಾಜ್ಯ ಗುಜರಾತದಲ್ಲಿ ಎಸ್. ಎಸ್. ಪಿ. ಗಳ ಪ್ರಾಬಲ್ಯ ಲಕ್ಷ್ಯರೂಪಾಯಿಗಳಿಗೂ ಮಿಕ್ಕಿದೆ. ಹಿತೇಂದ್ರ ದೇಸಾಯರ ಬಹುಮತವನ್ನು ಕಬಳಿಸಲು ಇಂಡಿಕೇಟ್— ಸ್ವತಂತ್ರ ಪಕ್ಷಗಳ ಸಂಯುಕ್ತ ಪ್ರಯತ್ನ. ಅದು ಇದುವರೆಗೆ ವಿಫಲ. ಸಿಂಡಿಕೇಟಿಗರೇನು ಭಿನ್ನಾಭಿಪ್ರಾಯಗಳಲ್ಲವೆಂದು ಸ್ವತಂತ್ರ ಪಕ್ಷದ ಕೋವಿದರೇ ಹೇಳುತ್ತಾರೆ ಇದರ ಮೇಲೈ, ಶಾಸನಸಭೆಯನ್ನು ಕೂಡಲೇ ಕರೆಯಬೇಕೆಂಬ ತಿರುಬೊಬ್ಬೆ ಬೇರೆ.

ಹೊಸಪೇಟೆಗೆ ಉಕ್ಕಿನ ಕಾರಖಾನೆ ನೀಡಿದ್ದೇಕೆ? ಕರ್ನಾಟಕದ ನ್ಯಾಯವಾದಕ್ಕೆ ಪುರಸ್ಕಾರ ನೀಡಿದ್ದಲ್ಲ —ಎನ್ನುತ್ತಾರೆ ಎಸ್ಸೆಸ್ಪಿಯ ಶ್ರೀ ಮಧುಲಿಮಯೆ. ಹೊಸಪೇಟೆಗೂ ಒಂದು ಉಕ್ಕಿನ ಕಾರಖಾನೆ ನೀಡಿ ಕರ್ನಾಟಕದ ಬಗ್ಗೆ ತಾವು ಎಂದೂ ಪಕ್ಷಪಾತ ನೀತಿಯನುಸರಿಸುತ್ತೇವೆಂಬ ಸದ್ಭಾವನೆ ಮೂಡಿಸುವ ಏರಡನೆ ಪ್ರಯತ್ನವದು. ಅಂದರೆ, ಮೊದಲನೆಯದಾವುದೆಂದು ಕೇಳುತ್ತೀರಾ? ಬೆಳಗಾಂವಿ ಪ್ರಶ್ನೆಯಲ್ಲಿ ತಾನು ನಿರ್ವಿಕಾರ ಹೃದಯಿಂದ. ಹತ್ತಿರ ಬಂದವರಿಗೆಲ್ಲ ಹೇಳಿ, ಬೆಳಗಾಂವಿ ಸೀಳುವುದನ್ನು ಮುಂದಕ್ಕೆ ಹಾಕಿರುವುದು. ಇವೆಲ್ಲ ಯಾಕೆ? ಅಂದರೆ, ಕರ್ನಾಟಕದಲ್ಲಿ ಬಲವಾಗಿ ಬೇರೂರಿರುವ ಸಿಂಡಿಕೇಟ್ ಕಾಂಗ್ರೆಸ್ಸಿನ ತಾಯಿಬೇರು ಮುರಿಯಲು. ಶ್ರೀ ನಿಜಲಿಂಗಪ್ಪನವರ ಪ್ರಮುಖರಾದ ಶ್ರೀ ವೀರೇಂದ್ರ ಪಾಟೀಲರನ್ನು ತಮ್ಮ ಸೆರಗಿನೊಳಗೆ ಸೇರಿಕೊಳ್ಳುವಂತೆ ಮಾಡಲು.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಚತುರ್ಮುಖ ಪಾರ್ಟಿಗಳಲ್ಲಿ ಮೊದಲೆರಡನ್ನು ಜೋಡಿಸಿ ಕಟ್ಟಿಕೊಂಡರು. ಇನ್ನು ಮೂರನೆಯದನ್ನು ಬೆಳಗಾಂವಿ ಫೇಸಿಯೇ ತೀರಿಸಬಹುದು. ಆ ಮೂರನೆ [illegible] ದಿದ್ದರೆ, ತನ್ನ ಅಧಿಕಾರ ದಂಡ ಪ್ರಯೋಗಕ್ಕೂ ಹಿಂಜರಿಯಲಾರರು. ತನ್ನೇತರ ಮತ್ತು ತನ್ನ ಚೇಲೇತರ ಸರಕಾರಗಳನ್ನು ಉಂಭಕೊಣ ನೀತಿಯಿಂದಾದರೂ ಉರುಳಿಸುವುದೇ ಇಂಡಿಕೇಟಿನ ಧ್ಯೇಯೋದ್ದೇಶ. ಶ್ರೀಮತಿ ಗಾಂಧಿ ಅನ್ಯ ಸರಕಾರಗಳನ್ನು ಉರುಳಿಸಲು ಶಕ್ತಿಯುತ್ತ ಮಾಡಬೇಡಿರೆಂದು ನೀಡಿದ ಕರೆಯ ಅರ್ಥವೂ ಅದೇ. ಓದುವುದು ಶಾಸ್ತ್ರ ಇಕ್ಕುವುದು ಗಾಳವೆಂಬುದು ಪ್ರತಿ-ಪ್ರಗತಿವಾದಿಗಳೆಲ್ಲರಿಗೂ ಸಮವಾಗಿಯೇ ಅನ್ವಯಿಸುತ್ತದೆ.

○ ○ ○

ಬೆಳಗಾಂವಿ ವಿಭಜನೆಯ ಸಲಹೆ— ಅದಕ್ಕೆ ದೊರೆತ ಬೆಂಗಳೇನೇ ಇದ್ದರೂ ಪ್ರಧಾನಿ ಇಂದಿರಾ ಗಾಂಧಿಯವರು ಅದನ್ನು ತಳ್ಳಿ ಹಾಕಲಿಲ್ಲ. ಮರಾಠ ಬುದ್ಧಿವಂತರು ಇನ್ನೂ ಇಂಡಿಕೇಟ್‌ಗೇ ಬೆಂಬಲ ನೀಡುತ್ತಾರೆ; ವಿಧಾನಪರಿಷತ್ತಿಗೆ ನಡೆದ ದ್ವೈವಾರ್ಷಿಕ ಚುನಾವಣೆಗಳಲ್ಲೂ ಅವರು ಅಟ್ಟು ಇಂಡಿಕೇಟಿಗರತೆಯೇ ವರ್ತಿಸಿದರು— ಬೆಳಗಾಂವಿಯನ್ನು ತಮಗೇ ಆಕೆ ಕೊಡಿಸುತ್ತಾಳೆಂಬ ಅಂಧವಿಶ್ವಾಸ ಬಲವನ್ನೇ ನಂಬಿ ಅಧಿಕಾರ ಪೀಠಾರೂಢಳಾಗಿರುವ ಶ್ರೀಮತಿ ಗಾಂಧಿ ಸಮಸ್ಯಾ ಪರಿಹಾರದಲ್ಲಿ ಅನಾಸಕ್ತಳು ಎಂದು ಕೆಲವು ರಾಜಕಾರಣಿಗಳ ಆರೋಪ. ಬೆಳಗಾಂವಿಯನ್ನು ಕೊಡಿಸಿದರೂ ಉಳಿಸಿದರೂ ರಾಜಕೀಯ ಮಹತ್ವಾಕಾಂಕ್ಷೆಗೆ ನೀರು ಸುರಿಯುವುದು ಖಂಡಿತ.

ಒಂದರ ಹಿಂದೆ ಇನ್ನೊಂದು. ಬೆಳಗಾಂವಿ ಕತ್ತರಿಸುವ ಸಲಹೆ ಮೇಲಿನಿಂದ ಇಳಿದರೆ, ನಿಪ್ಪಾಣಿ ತುಂಡರಿಸುವ ಸಲಹೆ ಕೆಳಗಿನಿಂದ ಮೇಲೆ ಹೋಗಿದೆ. ಗಡಿ ಪ್ರದೇಶ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ದ ನಗರಗಳನ್ನೆಲ್ಲ ಬಲೀಕಾ‌ರ್‌ಗಳಾಗಿ ಪರಿವರ್ತಿಸುವ ಸಲಹೆಗನುಗುಣವಾಗೇ ಇರುವ ಈ ಸಲಹೆ ಮರಾಠಿಗರಿಗೆಂದಿಗೂ ಅಪಥ್ಯ. ಅದರ ಬದಲು ಕಾರವಾರ ವಿಭಜನೆಯನ್ನು ಅವರು ಅತ್ಯಾಸಕ್ತಿಯಾಗಿ ಒಪ್ಪುತ್ತಾರೆ.

ಆಸ್ಸಾಮ:—ನಾಗಾಲ್ಯಾಂಡುಗಳ ವಿಭಜನೆಯೂ ಹೀಗೂ ವಿವಾದ. ಇಲ್ಲಿಯೂ ಈ ವಿಭಜನಾ ನೀತಿಯನ್ನು ಅನುಸರಿಸಿದರೆ ಹೇಗೆ? ಮೊದಮೊದಲು ದೇಶವನ್ನು ನಾವು ರಾಜ್ಯಗಳಾಗಿ ವಿಭಜಿಸಿದೆವು; ಅನೇಲೆ ರಾಜ್ಯ ರಾಜ್ಯಗಳನ್ನೇ ರಾಜ್ಯ—ಉಪರಾಜ್ಯವಾಗಿ ವಿಭಜಿಸ ತೊಡಗಿದೆವು. ಮುಂದೆ ನಗರ-ನಗರಗಳನ್ನೂ ವಿಭಜಿಸಲು ಹೊರಟಾದ ವೆಂದರೆ, ನಮ್ಮ ಪ್ರಗತಿಯು ವೇಗವೆಷ್ಟೆಂಬುದು ಮನವರಿಕೆಯಾಗುತ್ತದೆ. ಗಡಿಪ್ರದೇಶದ ಜನರನ್ನು ಒಳಿ ಒಂದನ್ನು ಅತ್ತ ಒಂದನ್ನು ಇತ್ತ ದಹನ—ದಫನ ಮಾಡಲು ಒಪ್ಪಿಸಿಗೂ ಎಡ—ಬಲ ಭಾಗಗಳ ಬಗ್ಗೆ ಜೀವ ಹಣವಿತ್ತ ವ ಜನರ. ನಮ್ಮಲ್ಲಿದ್ದಾರೆ. ಇಂಥವರನ್ನು ಹೇಗೆ ಆಳಬೇಕೆಂದು ಶ್ರೀಮತಿ ಗಾಂಧಿಗೇ ಗೊತ್ತು. ಯಾರನ್ನು ಯಾವ ಕಾಲದಲ್ಲಿ ಹೇಗೆ ತನ್ನ ಸೆರಗಿನಾಶ್ರಯದಲ್ಲಿಡಬೇಕು; ಯಾವಾಗ ಕೊಡಹಿ ಎಸೆಯಬೇಕೆಂಬ ಬುದ್ಧಿವಂತಿಕೆ ಆಕೆಯಲ್ಲಿದೆ. ಅದರಿಂದಲೇ ಆಕೆಯಿಂದೀಗ ಪೀಠಾರೂಢೆಯಾಗಿ ಉಳಿದಿದ್ದಾಳೆ.

○ ○ ○

ರಾಜ್ಯದ ಹಿಂದೀ ಪ್ರಚಾರ ಸಂಸ್ಥೆಯೊಂದು ಆರು ವರ್ಷಗಳ ನಂತರ ತನ್ನ ರಜತ ಜಯಂತಿಯನ್ನು ಆಚರಿಸಿತು. ರಾಜ್ಯಪಾಲ—ಮುಖ್ಯಮಂತ್ರಿಗಳಿಬ್ಬರೂ ಇದರಲ್ಲಿ ಭಾಗವಹಿಸಿದ್ದರು. ರಾಜ್ಯಪಾಲರು ಹಿಂದೀ ಪರೀಕ್ಷೆಗಳಲ್ಲಿ "ಸೊನ್ನೆ ಸಿಕ್ಕಿದರೂ ಪಾಸು" ಸ್ಥಿತಿಯಲ್ಲಿರುವ ಹಿಂದಿಯನ್ನು ತುಸು ಉಚ್ಚ ಮಟ್ಟಕ್ಕೇರಿಸುವ ಸಲಹೆ ನೀಡಿದರು. ಮುಖ್ಯಮಂತ್ರಿಗಳು ಇದರಲ್ಲಿ ತಮ್ಮ ಉತ್ಸಾಹ ತೋರಿಸಿದರೂ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಸರಕಾರಕ್ಕೆ ವಿರೋಧಿ ಪ್ರದರ್ಶನಕಾರರ ಹೆದರಿಕೆ. ಇಂತಹ ಅಂಜುಗುಳಿ ಮುಖ್ಯಮಂತ್ರಿಯವರು ಹಿಂದೀ ಮಾಧ್ಯಮದ ವಿಶ್ವವಿದ್ಯಾಲಯ ಸ್ಥಾಪಿಸುವ ಕರೆ ನೀಡಿ ಎಷ್ಟು ಎದೆಗಾರಿಕೆ ತೋರಿಸಿದರು. ತಮ್ಮ ಕರೆಯು ಬಹುಮಂದಿಗೆ ಕೇಳಲಾರದೆಂದೋ, ಅಥವಾ ಕರೆಗೆ ಬಲೆಯಿಲ್ಲವೆಂದೋ ಅವರು ತಿಳಿದಿದ್ದರೋ ಏನೋ!

ನಮಗೆ ಬೇಕಾದದ್ದು ಹಿಂದಿ ಮಾಧ್ಯಮದ ವಿಶ್ವವಿದ್ಯಾಲಯವಲ್ಲ; ಕನ್ನಡ ಮಾಧ್ಯಮದ್ದು. ರಾಜ್ಯ ಭಾಷೆಯನ್ನು ಸರಕಾರಿ ಭಾಷೆಯಾಗಿ ಕಟ್ಟುನಿಟ್ಟಿನಿಂದ ಬಳಸಲಾರದ ಸರಕಾರ ಅಪೇಕ್ಷಿತ ಕರೆಗಳನ್ನು ನೀಡುವುದು ಸರಿಯೆ? ಶಾಲೆಗಳಲ್ಲಿ 'ಕಡ್ಡಾಯ ಬ್ರ್ಯಾಂಡಿನ'ಹಿಂದಿಯನ್ನು ಕಲಿಯಲೂ ಕಲಿಸಲೂ ಸಮರ್ಪಕವಾದ ಅವಕಾಶವಮಾಡಿಕೊಡದೆ ಅದನ್ನು ತ್ರಿಶಂಕು ಸ್ವರ್ಗದಲ್ಲಿ ಕೂಡ್ರಿಸಿದ ಸರಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ ಕರೆಕೊಡುವುದು ಹಾಸ್ಯಾಸ್ಪದ.

ರಾಜ್ಯಸರಕಾರ ಈಗಿನ ಸ್ಥಿತಿಯಲ್ಲೇ ತನ್ನ ನೀತಿಯನ್ನು ಮುಂದುವರಿಸಿದರೆ, ಅದು ಹಿಂದಿಯನ್ನು ಚಿತ್ರಹಿಂಸೆ ಮಾಡಿಯೇ ಕೊಂದು ಹಾಕುತ್ತದೆ. ಹಿಂದಿಯ ಮೇಲಿನ ಮೋಹ ಅದಕ್ಕೇ ಮಾರಕವಾಗಿ ಪರಿಣಮಿಸುತ್ತದೆ. ಆಗ, ಹಿಂದೀ ಭಾಷೀಯರೇ "ಹಿಂದಿ ಕಲಿಸಬೇಡಿ, ಅದರ ಗೋಣು ಮುರಿಯಬೇಡಿ"ಯೆಂದು ಚಳುವಳಿ ಹೂಡಿದರೂ ಹೂಡಬಹುದು ಅಂತಹ ಕರೆ ಅತ್ತಿಂದಲೇ ಬರಬೇಕೆಂದೇ ನಾವು ತ್ರಿಭಾಷಾಸೂತ್ರವನ್ನು ಅಪ್ಪಿಕೊಂಡಿರುವುದಾದರೆ ಪ್ರತಿಮಾತಿಲ್ಲ ಅದಲ್ಲವಾದರೆ, ತಮ್ಮ ಭಾಷಾ ನೀತಿಯನ್ನು ಇದಮಿತ್ಥಂಗೊಳಿಸುವ ಕಾಲವೀಗ ಸನ್ನಿಹಿತವಾಗಿದೆ, ದ್ವಿಭಾಷೆಯೇ ಇರಲಿ, ತ್ರಿಭಾಷೆಯೇ ಆಗಲಿ ಕಟ್ಟುನಿಟ್ಟಿನ ಅಧ್ಯಯನ- ಅಧ್ಯಾಪನ ವ್ಯವಸ್ಥೆ ಅಗತ್ಯ.

○ ○ ○

ಕೇಂದ್ರ ಲೋಕಸೇವಾ ಆಯೋಗದ ಅಭ್ಯರ್ಥಿಗಳ ಪರೀಕ್ಷೆಯಿಂದಾಗಿ ಪಂಡಿತವರ್ಗ ಗದ್ದಲ ಮಾಡಿರುವುದು ಕಡಿಮೆಯೇನಿಲ್ಲ. ಕೋ—ಆರ್ಡಿನೇಶನ್ ಕಮಿಟಿ ಶಿಕ್ಷಣ ಇಲಾಖೆಗಳು ಅತ್ಯಂತ ಸಮಾನ ಭಾಷಾ ತೋರಿಸಿದರೂ ಅರ್ಥಶಾಸ್ತ್ರವು ಅವರ ಮೇಲೆ ಮುತ್ತಿಗೆ ಹಾಕಿದೆ ಯೆಂದು ವರದಿ.

ಜನತೆಯರುವ ಕರವನ್ನು ಹಾಗೆಲ್ಲಪೋಲು ಮಾಡಲಾಗದೆಂದು ಅರ್ಥಶಾಸ್ತ್ರಜ್ಞರು ಕಾರ್ಯದರ್ಶಿಗಳು ಗುಡುಗಿದರೆಂದೂ ಹೇಳಲಾಗುತ್ತದೆ.

ಬ್ರಿಟಿಷ್ ಸರಕಾರದ ನೀತಿ ನಮ್ಮ ಅರ್ಥಶಾಸ್ತ್ರದ ಮೇಲೆ ತನ್ನ ಪ್ರಭಾವ ಬೀರಿದೆಯೆನ್ನ ಬೇಕು. ಇಂಗ್ಲಿಷ್ ಕಲಿತವರು ಮಾತ್ರ ಸಜ್ಜನರೆಂಬ ಈ ನೀತಿ ಸ್ವತಂತ್ರ ಭಾರತದಲ್ಲಿ ಇನ್ನೂ ಉಳಿದಿರುವುದು ನಮ್ಮ ದಾಸ್ಯದ ಪ್ರತೀಕ. ಸಮಾಜವಾದ ಕಾರ್ಯವೇಗದಿಂದ ಸಾಗುತ್ತಿರುವ ದೇಶದಲ್ಲಿ ಮಾಡುವ ಪರಿಭೇದ ಆಂಗ್ಲ ಶಂಖವೇ ತೀರ್ಥ ಎನ್ನುವ ಬಿಳಿ ಸ್ಫಟಿಕದ ನೀತಿ ವರ್ಣಭೇದವನ್ನು ವಿರೋಧಿಸುವ ನಾವು ದೇಶದ ಪ್ರಜಾಜನರ ಈ ಅನ್ಯಾಯವನ್ನು ಖಂಡಿಸ ಬೇಕಲ್ಲವೆ? ಕನ್ನಡ ರಾಜ್ಯದ ಜನ ಕನ್ನಡ ಕಲಿಯುವ ಪಂಡಿತವರ್ಗಕ್ಕೆ ತಮ್ಮ ತೆರಿಗೆಯ ಪಾಲು ನೀಡಬಾರದೆಂದ ಹೇಳುತ್ತದೆಯೆ?

ಈ ಅಪಮಾನವನ್ನು ಕನ್ನಡ ಪಂಡಿತವರ್ಗ ಸಹಿಸಿಕೊಳ್ಳಬೇಕೆ? ಕನ್ನಡ ಸಾಹಿತ್ಯ ಪರಿಷತ್ತು ಏನ ಮಾಡುತ್ತಿದೆ? ಕನ್ನಡ ಚಳುವಳಿಗಾರರು ಏನು ಮಾಡುತ್ತಾರೆ? ಹೆಚ್ಚಾಗಿ ಕನ್ನಡ ರಾಜ್ಯ ಜನತೆ ಇದನ್ನು ಸಹಿಸಿಕೊಂಡು ಕುಳಿತುಕೊಂಡಿದೆಯೇನ? ಕನ್ನಡ ರಾಜ್ಯದಲ್ಲಿ ಕನ್ನಡ ಪಂಡಿತವರ್ಗವನ್ನೇನ ಕಡೆಗಣಿಸುವ ಅರ್ಥಶಾಸ್ತ್ರ. ಈ ನೀತಿಯು ಉಳಿಯುವುದರಿಂದ ನಮಗೆ ಇಂಗ್ಲಿಷೂ ಇಲ್ಲ; ಕನ್ನಡವೂ ಇಲ್ಲವಾಗಿ ಬರಿಯ ಅರ್ಥವಾದವನ್ನೇ ಬಲವಾಗಿ ನಂಬಿದಂತಾಗುತ್ತದೆ.

ಇದು ಹೇಗೆ ಕರ್ನಾಟಕ ಮಾತೆ ಎಂದು ಹಾಡುವುದರ ಬದಲು 'ಏಕ್ಸರ್ ಫಾರ್' ಪಿತೃಪ ಭೂಪ' ಎನ್ನಬಹುದು.

ವ್ಯವಸಾಯ

ಮಿಶ್ರ ಬೆಳೆಗಳು

ಶ್ರೀ ಪಿ. ಕೆ. ಪೈ

ವ್ಯವಸಾಯದಿಂದ ಹೆಚ್ಚಿನ ಲಾಭ ಗಳಿಸಲು, ಬಂಡವಾಳ, ತಾಂತ್ರಿಕಜ್ಞಾನ, ವೈಯಕ್ತಿಕ ಮೇಲ್ವಿಚಾರಣೆಯ ಜತೆಗೆ, ಬೆಳೆ ಯೋಜನೆಗೆ ಬಹಳ ಪ್ರಾಮುಖ್ಯತೆಯಿದೆ. ನಮ್ಮ ಬಹುಪಾಲು ಕೃಷಿಕರು ಎರಡು ಮೂರು ವಿಧದ ಬೆಳೆಗಳನ್ನು ಮಾತ್ರ ಪ್ರತಿ ವರ್ಷವೂ ಬೆಳೆಯುವ ಸಂಪ್ರದಾಯ ಇಟ್ಟುಕೊಂಡಿರುತ್ತಾರೆ. ಉತ್ಪಾದನೆ ಹೆಚ್ಚಾದ ವರುಷಗಳಲ್ಲಿ, ಧಾರಣೆ ಕುಸಿದರೆ ಇದರಿಂದ ಸಾಮೂಹಿಕವಾಗಿ ತೊಂದರೆಯಾಗುತ್ತದೆ. ಕೆಲವೊಂದು ಬೆಳೆಗಳ ವಿಚಾರದಲ್ಲಿ ಈ ಅನುಭವ ಆಗಲೇ ಆಗಿಹೋಗಿದೆ. ಇದರಿಂದಾಗಿ ರೈತರ ಉತ್ಸಾಹ ಕುಗ್ಗುವುದು ಸ್ವಾಭಾವಿಕ.

ದಿನಜೀವನಕ್ಕೆ ಅಗತ್ಯವಿರುವ ಆಹಾರ ಧಾನ್ಯಗಳು, ತರಕಾರಿ ಹಣ್ಣುಹಂಪಲುಗಳು, ಸಾಂಬಾರು ಜಿನಸುಗಳ ಬೇಡಿಕೆಯನ್ನು ಪರಿಶೀಲಿಸಿದರೆ, ಇಂತಹ ಬೆಳೆಗಳಿಂದಲೂ ಸಹ ಉತ್ತಮ ಲಾಭಗಳಿಸಬಹುದೆನ್ನುವುದು ಮನವರಿಕೆಯಾಗದಿರದು. ಹೆಚ್ಚಿನ ಪ್ರದೇಶಗಳಲ್ಲಿ ಕೆಲವೇ ಪ್ರಮುಖ ವ್ಯವಸಾಯ ಉತ್ಪಾದನೆಗಳನ್ನು ಬಿಟ್ಟರೆ ಉಳಿದವುಗಳನ್ನೆಲ್ಲಾ ಹೊರ ಊರಿನಿಂದಲೇ ತರಿಸಿ ಮಾರುಕಟ್ಟೆಯಲ್ಲಿ ವಿಕ್ರಯಿಸುವ ಪದ್ಧತಿ ನಮ್ಮಲ್ಲಿ ಕಂಡುಬರುತ್ತಿದೆ. ಇದನ್ನು ತಪ್ಪಿಸಲು ಸಾಧ್ಯವಿರುವಷ್ಟು ಮಟ್ಟಿಗೆ ಬೆಳೆಗಳಲ್ಲಿ ವೈವಿಧ್ಯತೆಯನ್ನು ಸಾಧಿಸುವುದು ಅವಶ್ಯವೆನಿಸುತ್ತದೆ.

ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ಇಂದು ಬೆಳೆಸಲ್ಪಡುವ ಪ್ರತಿ ಬೆಳೆಗಳಲ್ಲಿಯೂ ಅನೇಕ ಶ್ರೇಷ್ಠ ತಳಿಗಳ ಉಗಮವಾಗಿದೆ. ವಿವಿಧ ಹವಾಮಾನ ಮತ್ತು ಭೂಗುಣಕ್ಕೆ ಹೊಂದಿಕೊಂಡು ಸುಭದ್ರವಾಗಿ ಬೆಳೆಯುವ ತಳಿಗಳ ಉತ್ಪಾದನೆಯಾಗಿದೆ. ಇದರಿಂದಾಗಿ ಋತುಮಾನ (Season) ಅಥವಾ ಹವಾಮಾನದಿಂದ ಆಗಬಹುದಾದ ತೊಂದರೆಗಳು ಬಹಳ ಮಟ್ಟಿಗೆ ಇಲ್ಲವಾಗಿದೆಯೆನ್ನಬಹುದು. ಹೆಚ್ಚುತ್ತಿರುವ ನೀರಾವರಿಯ ಅನುಕೂಲತೆ ಮತ್ತು ಆಧುನಿಕ ವಿಧಾನಗಳ ಅನುಷ್ಠಾನಗಳಿಂದ ನಮ್ಮ ನಮ್ಮ ಪ್ರದೇಶಗಳಿಗೆ ಯಾವ ತಳಿ ಸೂಕ್ತವಾದುದು ಎನ್ನುವುದನ್ನು ಮಾತ್ರ ನಾವು ನಿರ್ಧರಿಸಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಮಾರುಕಟ್ಟೆಯಲ್ಲಿ ಸದಾ ಬೇಡಿಕೆಯಿರುವ ತರಕಾರಿ, ಹಣ್ಣುಹಂಪಲು ಕೆಲವೊಂದು, ಸಾಂಬಾರು ಜಿನಸುಗಳನ್ನು ಮಿಶ್ರಬೆಳೆಗಳನ್ನಾಗಿ ಬೆಳೆಸಲು ಸಾಕಷ್ಟು ಅವಕಾಶವಿದೆ. ಜೀವನದ ಮಟ್ಟ ಏರಿದಂತೆ ಇವುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ. ದೈನಂದಿನ ಉಪಯೋಗಕ್ಕೆ ಅಗತ್ಯವಿರುವ ವಸ್ತುಗಳಾದುದರಿಂದ ಖಂಡಿತವಾದ ಮಾರುಕಟ್ಟೆ ದೊರೆಯಲೂ ಕಷ್ಟವಾಗಲಾರದು. ಇಂದು ನಮ್ಮ ಸಾರಿಗೆ ವ್ಯವಸ್ಥೆಯೂ ತುಂಬಾ ಅಭಿವೃದ್ಧಿ ಹೊಂದಿದ್ದು ಬೇಡಿಕೆಯಿರುವ ದೂರದ ಪ್ರದೇಶಗಳಿಗೆ ಇವುಗಳನ್ನು ಕಳುಹಿಸುವುದೂ ಸಮರ್ಪಕವಾಗಲಾರದು. ಈ ಎಲ್ಲಾ ಅನುಕೂಲತೆಗಳ ಸದುಪಯೋಗ ಮಾಡಿಕೊಂಡು ನಮ್ಮ ವ್ಯವಸಾಯ ಪದ್ಧತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾತ್ರ ತಂದುಕೊಳ್ಳಬೇಕಾಗುತ್ತದೆ. ಇದಕ್ಕೆ ಪೂರ್ವಭಾವಿ ಯೋಜನೆಯು ಅಗತ್ಯವಿದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಸಾಂಪ್ರದಾಯಿಕವಾಗಿ ಬೆಳೆಯುತ್ತಾ ಬಂದ ಪೈರನ್ನೇ ಬೆಳೆಯುವುದನ್ನು ಬಿಟ್ಟು ಬೇಡಿಕೆಗೆ ಅನುಗುಣವಾದ ಬೆಳೆಗಳನ್ನು ಬೆಳೆಯುವ ಪರಿಪಾಠವನ್ನಿಂದು ನಾವು ಬೆಳೆಸಿಕೊಳ್ಳಬೇಕಾಗಿದೆ. ಈ ಮಿಶ್ರ ಬೆಳೆಗಳಿಂದಾಗಿ, ಧಾರಣೆಯ ಅಸ್ಥಿರತೆಯೊ ತಗ್ಗುತ್ತದೆ. ಇಲ್ಲದೆ ಒಂದು ಧಾನ್ಯಕ್ಕೆ ಬೆಲೆ ಕಡಿಮೆಯಾದರೂ ಅದರಿಂದಾಗುವ ನಷ್ಟದ ಪರಿಮಾಣವೂ ಹೆಚ್ಚಾಗದೆ, ಇನ್ನೊಂದರಿಂದ ಅಧಿಕ ಲಾಭ ದೊರಕುವ ಸಾಧ್ಯತೆಯಿರುತ್ತದೆ. ಅದರಿಂದ ನಮ್ಮ ಸಾಗುವಳಿಯ ಯೋಜನೆಗಳಲ್ಲಿ, ಮಿಶ್ರ ಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ಅಗತ್ಯತೆ ಎಂದಿಗಿಂತ ಇಂದು ಹೆಚ್ಚಾಗಿದೆ. —ಕೃಷಿಲೋಕ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸ್ವತಂತ್ರ ಉದ್ಯೋಗಕ್ಕೆ ಉತ್ತೇಜನ

ಸಿಂಡಿಕೇಟ್ ಬ್ಯಾಂಕಿನ ವಿನೂತನ ಕಾರ್ಯಕ್ರಮ

ನಮ್ಮ ದೇಶದ ಬೃಹತ್ ಸಮಸ್ಯೆ— ನಿರುದ್ಯೋಗ—ಸುಶಿಕ್ಷಿತರ ನಿರುದ್ಯೋಗ. ಇದನ್ನು ಎಷ್ಟು ಬೇಗನೇ ನಾವು ಪರಿಹರಿಸಬಲ್ಲೆವೋ ಅಷ್ಟು ಶೀಘ್ರವಾಗಿ ದೇಶದ ಆರ್ಥಿಕ—ಸಾಮಾಜಿಕ ಸ್ಥಿತಿ-ಗತಿಗಳ ಸಮುನ್ನತಿ.

ನಿರುದ್ಯೋಗಿ ಸುಶಿಕ್ಷಿತರು ಇಂದು ಉದ್ಯೋಗ ಬೇಟೆಯಲ್ಲೇ ನಿರತರು. ಸ್ವಸಾಮರ್ಥ್ಯವಿರುವವರೂ ಪರರ ನೌಕರಿಯಲ್ಲೇ ಆತ್ಮತೃಪ್ತಿ ಹೊಂದುವ ಮನೋಗತಿಯವರು. ಸ್ವಾವಲಂಬಿಗಳಾಗಿ ಸ್ವಸಾಮರ್ಥ್ಯದ ಮೇಲೆ ಭರವಸೆಯಿಟ್ಟು ಸ್ವತಂತ್ರ ಉದ್ಯೋಗಕ್ಕೆ ತೊಡಗುವ ಕೆಚ್ಚು ನಮ್ಮ ಯುವಜನಾಂಗದಲ್ಲಿ ಸಾಮೂಹಿಕವಾಗಿ ಮೂಡಿಲ್ಲ. ಆದರೆ ಅವರಲ್ಲಿ ಸ್ವಶಕ್ತಿಯಿದೆ, ಸಾಮರ್ಥ್ಯವಿದೆ, ಪ್ರತಿಭೆಯೂ ಇದೆ. ಒಗ್ಗಟ್ಟುತನದಲ್ಲಿ ಹದವಿ ಮಾನಸಿಕ ಒತ್ತಡಕ್ಕೆ ಮಣಿದು ತಮ್ಮ ಭವಿಷ್ಯದಲ್ಲಿ ಜೀವ ತೇಯಲು ಅಂಜುತ್ತಾರೆ. ಈ ತರದ ದುರವಸ್ಥೆಗೆ ಹಲವಾರು ಕಾರಣಗಳು.

ಸೂಕ್ತ ಮಾರ್ಗದರ್ಶನ—ಕಲಿತ ಕಸುಬುಗಳು ಮತ್ತು ಅಗತ್ಯವಾದ ಆರ್ಥಿಕ ಸಹಾಯ ಲಭ್ಯವಾದರೆ, ನಮ್ಮ ಸುಶಿಕ್ಷಿತ ನಿರುದ್ಯೋಗಿಗಳಲ್ಲಿ ಹೆಚ್ಚಿನವರು ಸ್ವ-ಉದ್ಯೋಗನಿರತರಾಗುವುದು ಸಾಧ್ಯ. ಈ ಉದ್ದೇಶದಿಂದ ಸಿಂಡಿಕೇಟ್ ಬ್ಯಾಂಕು ಹೊಸ ಸಾಮಾಜಿಕ—ಆರ್ಥಿಕ ಪ್ರವರ್ತನ ಯೋಜನೆಯೊಂದನ್ನು ರೂಪಿಸಿದೆ.

ಎಸ್ ಎಸ್ ಎಲ್. ಸಿ. ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದು ನಿರುದ್ಯೋಗಿಗಳಾಗಿರುವ ದಕ್ಷಿಣ ಕನ್ನಡ ಜಿಲ್ಲೆಯವರು ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ ಯಾವುದಾದರೊಂದು ಕಡೆ ನಿರ್ದೇಶಿತ ಆವೇದನಾ ಪತ್ರ ತುಂಬಿಸಿ ಹೆಸರು ನೋಂದಾಯಿಸಿಕೊಳ್ಳಬಹುದು. ಬ್ಯಾಂಕು ಈ ಆವೇದನಾ ಪತ್ರಗಳನ್ನು ಪರಿಶೀಲಿಸುವುದು. ಸ್ವತಂತ್ರವಾಗಿ ಉದ್ಯೋಗ ಮಾಡಿಕೊಳ್ಳಲು ಅನುಕೂಲವಾಗಿ ಅವರಲ್ಲಿ ಒಬ್ಬೊಬ್ಬನಿಗೋ ನಾಲ್ಕಾರು ಜನರಿಗೆ ಸಾಮೂಹಿಕವಾಗಿಯೋ ಅವರವರ ಆಸಕ್ತಿ—ಅಭಿರುಚಿ—ಸಾಮರ್ಥ್ಯ—ಶಿಕ್ಷಣ ಮಟ್ಟ ಮೊದಲಾದ ಪ್ರಶ್ನೆಗಳ ಆಧಾರದ ಮೇಲೆ ಸಲಹೆ ನೀಡಬಹುದು, ಮಾರ್ಗದರ್ಶನ ಮಾಡಬಹುದು, ಆವಶ್ಯವೆನಿಸಿದರೆ, ಆರ್ಥಿಕವಾಗಿ ನೆರವು ಕೊಡಬಹುದು. ಈ ಸ್ವತಂತ್ರ ಉದ್ದಿಮೆ ಯಶಸ್ವಿಯಾಗುವಂತೆ ಬ್ಯಾಂಕು ಆಗಾಗ ಸಲಹೆ ನೀಡುತ್ತಲಿರುವುದು.

ಸಿಂಡಿಕೇಟ್ ಬ್ಯಾಂಕು ದೇಶದ ಆರ್ಥಿಕ ನವಚೇತನ ಯೋಜನೆಯಂತೆ ಮೊತ್ತಮೊದಲಿಗೆ ನಮ್ಮ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಆರಂಭಿಸಿದೆ. ಇದನ್ನು ಕ್ರಮೇಣ ಇತರತ್ರವೂ ವಿಸ್ತರಿಸಬಹುದು. ಈ ಹಿಂದೆಯೂ ಬ್ಯಾಂಕು ಸ್ವ-ಉದ್ಯೋಗಿಗಳಿಗೆ ಹೆಚ್ಚಿನ ಸಹಾಯ ಮಾಡಿದೆ, ಈಗ ಆ ಯೋಜನೆಯೇ ವಿಸ್ತೃತ ರೂಪ ತಾಳಿದೆ

ಈ ಯೋಜನೆಗೂ ಬ್ಯಾಂಕಿನಲ್ಲಿ ನೌಕರಿಗೂ ಯಾವ ಸಂಬಂಧವೂ ಇಲ್ಲ. ಇದು ಸ್ವತಂತ್ರ ಜೀವನ ಮಾರ್ಗವನ್ನನುಸರಿಸಲು ಬಯಸುವ ಯುವಕ—ಯುವತಿಯರಿಗೆ ಸೂಕ್ತ ಅವಕಾಶ ಕಲ್ಪಿಸುವ ಒಂದು ಪ್ರಯತ್ನ ಮಾತ್ರ.

ಇದೇ ತಿಂಗಳ ೪ ಮತ್ತು ೯ನೆ ತಾರೀಕುಗಳ ನಡುವೆ ಈ ಯೋಜನೆಯನ್ವಯ ಜಿಲ್ಲೆಯ ಎಲ್ಲ ಶಾಖೆಗಳು ಹೆಸರು ನೋಂದಾಯಿಸಿಕೊಳ್ಳುತ್ತವೆ. ಸುಶಿಕ್ಷಿತ ನಿರುದ್ಯೋಗಿಗಳು ಇದರ ಲಾಭವನ್ನು ಪಡೆದುಕೊಳ್ಳಬೇಕು.

— ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ಎಪ್ರಿಲ್ ೩ರಂದು ಕರೆದ ಪತ್ರಿಕಾ ಗೋಷ್ಠಿಯಲ್ಲಿ ಬ್ಯಾಂಕಿನ ಮೇಲಿನ ಹೊಸ ಯೋಜನೆಯನ್ನು ಬಹಿರಂಗ ಪಡಿಸಿ, ಇದಕ್ಕೆ ಸಾರ್ವಜನಿಕರ ಬೆಂಬಲವನ್ನು ಆಶಿಸಿ, ಇದು ಯಶಗಳಿಸುವ ನಂಬಿಕೆಯನ್ನು ವ್ಯಕ್ತ ಪಡಿಸಿದರು.

(ಮೂರನೇ ಪುಟದಿಂದ)

ಲಾಯಿತು. ಆದಾಯ ತೆರಿಗೆಯನ್ನು ವಸೂಲು ಮಾಡುವ ಉದ್ದೇಶದಿಂದ ಗೃಹಿಣಿಯರ ಒಟ್ಟು ಆದಾಯವನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಅಲ್ಪಾದಾಯವಿರುವ ಗಂಡಂದಿರ ಆದಾಯವನ್ನು ಹೆಚ್ಚಿಸಲು ಉದ್ಯೋಗಕ್ಕೆ ಸೇರಿರುವ ಪತ್ನಿಯರು ಗೃಹಕೃತ್ಯ ಹಾಗೂ ಹೊರಗೆ ಕೆಲಸ ಮಾಡಿ ತುಂಬಾ ಶ್ರಮಪಡಬೇಕಾಗುವುದೆಂದೂ ಸಭೆಯು ಅಭಿಪ್ರಾಯ ವ್ಯಕ್ತಪಡಿಸಿತು. ಶ್ರೀಮತಿ ಕಲ್ಯಾಣಿ ಶೆಟ್ಟಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಪರಿಶುದ್ಧ ಚರಿತ್ರ ರೂಪಿಸಿರಿ

ಶಿಕ್ಷಕರಿಗೆ ಡಾ| ಪೈಯವರ ಕರೆ

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ಸಂಸ್ಥಾಪಕದಿನವನ್ನು ಎಪ್ರಿಲ್ ೩ರಂದು ರಂಜಕ ಸಮಾರಂಭದಲ್ಲಿ ಆಚರಿಸಲಾಯಿತು. ಆ ದಿನ ಎಕೆಡೆಮಿಯ ಸಂಸ್ಥಾಪಕ ಪಿತೃ ಶ್ರೀ ಡಾ| ಟಿ. ಮಾಧವ ಪೈ ಅವರ ೭೩ನೆಯ ಹುಟ್ಟುಹಬ್ಬವೂ ಆಗಿತ್ತು. ಮಹಾತ್ಮಗಾಂಧಿ ಸ್ಮಾರಕ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಕು. ಶಿ. ಹರಿದಾಸ ಭಟ್ಟರು ಮುಖ್ಯ ಅತಿಥಿಗಳಾಗಿದ್ದರು. ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ ಅವರು ಸ್ವಾಗತ ಭಾಷಣ ಮಾಡುತ್ತ ಡಾ| ಪೈಯವರು ಪರಂಪರಾಪ್ರಾಪ್ತ ಸಂಕುಚಿತತೆಗಳನ್ನು ದೂರ ಮಾಡಿ ಹೊಸ ಸಾಮಾಜಿಕ ಧ್ಯೇಯೋದ್ದೇಶಗಳನ್ನು ರೂಪಿಸುವಲ್ಲಿ ಸಮರ್ಥರಾದ ಬಗ್ಗೆ ಸಂತೋಷ ವ್ಯಕ್ತ ಪಡಿಸಿದರು. ಪ್ರೊ| ಭಟ್ಟರು ಡಾ| ಪೈಯವರು ತಮ್ಮ ಬದುಕನ್ನು ಶಿಕ್ಷಣ ರಂಗಕ್ಕಾಗಿಯೇ ಸಮರ್ಪಿಸಿಕೊಂಡ ಸ್ವಯಂ ಸಂಸ್ಥೆಯಾದ, ಸಂಸ್ಥೆಗಳನ್ನು ಕಟ್ಟುವ, ಅವನ್ನು ಬೆಳೆಸುವ ಸರ್ವರಿಗೂ ಪ್ರೇರಕ ಶಕ್ತಿಯೂ ದ ಎಂಟೆದೆಯವರೆಂದು ವರ್ಣಿಸಿದರು. ಜನತೆಗೆ ಶಿಕ್ಷಣ ನೀಡುವಲ್ಲಿ ಮತ್ತು ಉದ್ಯೋಗಾವಕಾಶವೊದಗಿಸುವಲ್ಲಿ ಸ್ವಾವಲಂಬನೆಯ ಮಾರ್ಗದರ್ಶನ ಮಾಡುವಲ್ಲಿ ಪೈಯವರು ಜೀವ ತೇದರೆಂದರು.

ಶ್ರೀ ಟಿ. ಶ್ರೀಪತಿ ಆಚಾರ್ಯ, ಮತ್ತು ಶ್ರೀ ಕಬ್ಯಾಡಿ ಶ್ರೀನಿವಾಸ ಉಪಾಧ್ಯಾಯರು ಡಾ| ಪೈಯವರನ್ನು ಅಭಿನಂದಿಸಿದರು

ಡಾ| ಪೈಯವರು ಕೃತಜ್ಞತಾ ಭಾಷಣ ಮಾಡಿ ವ್ಯಕ್ತಿಗೆ ನಿಯಮಶೀಲತೆಯೊಡನೆ ಚಾರಿತ್ರ್ಯವೂ ಮುಖ್ಯ. ಚಾರಿತ್ರ್ಯ ಹೀನತೆ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಎಕೆಡೆಮಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಚಾರಿತ್ರ್ಯ ಪರಿಶುದ್ಧವಾಗುವಂತೆ ಶಿಕ್ಷಣ ನೀಡಬೇಕೆಂದರು. ಜೀವನವನ್ನು ಎದುರಿಸುವ ಕೆಚ್ಚೆದೆಯವರಿಗೆ ಮಾತ್ರ ಯಶಸ್ಸು, ಬದುಕಿನ ಹೋರಾಟಗಳನ್ನು ಎದುರಿಸಲು ನಾವು ಹಿಂದೆ ಮುಂದೆ ನೋಡಬಾರದು, ಹೆಂದಾಣಕೆಗೆ ಬದುಕಿನಲ್ಲಿ ಸಾಕಷ್ಟು ಅವಕಾಶವಿದೆ. ಶಾಂತಿ ಅನ್ವೇಷಣೆಯೇ ನಮ್ಮ ಗುರಿ. ನಾವು ಅಶಾಂತ ವಾತಾವರಣದಲ್ಲೇ ಕೊನೆಗಾಲ ಕಾಣುವಂತಾದರೂ ಮುಂದಿನ ಪೀಳಿಗೆಗಾದರೂ ಉತ್ತಮ ವಾತಾವರಣ ಕಲ್ಪಿಸಿ ಕೊಡಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು

ಕೃಷಿ ಅಭಿವೃದ್ಧಿಗೆ

ಉತ್ಸಾಹಿ ರೈತರಿಗೆ ಉತ್ತೇಜನ

ಮಣಿಪಾಲ, ಎ. ೨೫ 'ಬೇಸಾಯದಲ್ಲಿ ಸುಧಾರಣೆಗಳನ್ನು ಅಳವಡಿಸಿಕೊಂಡು ಲಾಭದಾಯಕವಾಗಿ ನಡೆಸುವ ಪ್ರಯತ್ನದಲ್ಲಿ ಅನೇಕ ಕೊರತೆಗಳಿದ್ದರೂ ನಮ್ಮ ಯುವಕರು ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯದ ಹೊಸತನವನ್ನು ಅಳವಡಿಸಿಕೊಳ್ಳಲು ಆಸಕ್ತಿ ತೋರಿಸುತ್ತಿರುವುದು ಸಂತೋಷಕರ" ಎಂದು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ. ಕೆ. ಕೆ. ಪೈಯವರು ಇಂದು ಇಲ್ಲಿ ಹೇಳಿದರು. ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನಿನವರು ಮುಂದಿನ ಬೆಳೆಯ ಕಾರ್ಯಕ್ರಮಗಳು ಪ್ರಾರಂಭವಾಗುವ ಮೊದಲು ಕೃಷಿಕ್ಷೇತ್ರದ ಇತ್ತೀಚಿನ ಸಂಶೋಧನೆ ಮತ್ತು ಜ್ಞಾನಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲು ಏರ್ಪಡಿಸಿದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಅವರು ಉದ್ಘಾಟಿಸುತ್ತಾ, ಭಾಗವಹಿಸಿದವರಲ್ಲಿ ರೈತ ಸಮಾಜದ ತರುಣರೇ ಹೆಚ್ಚಿನ ಸಂಖ್ಯೆಯಲ್ಲಿರುವುದರ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಕೃಷಿಯಲ್ಲಿ ಆಧುನಿಕ ಜ್ಞಾನ ಹೆಚ್ಚುತ್ತಿದೆ, ಆಹಾರದಲ್ಲಿ ನಾವು ಸ್ವಾವಲಂಬಿಗಳಾಗಬೇಕಾದರೆ ಕೃಷಿ ಪ್ರಧಾನ ಕಾರ್ಯಕ್ರಮಗಳನ್ನಿಟ್ಟುಕೊಳ್ಳದೆ ವಿಧಿಯಿಲ್ಲವೆಂದು ಸರಕಾರವು ತಿಳಿದುಕೊಂಡಿದೆ ಎಂದೂ ಕೃಷಿಕರಿಗೂ ಯುವಜನಾಂಗಕ್ಕೂ ಅಧಿಕ ನೆರವು ಮತ್ತು ಉತ್ತೇಜನಗಳನ್ನು ನೀಡುವಂತೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸರಕಾರ ತಿಳಿಸಿದೆ ಎಂದೂ ಯುವಕರಿಗೆ ಅವರವರ ಅಭಿರುಚಿಗಳಿಗೆ ತಕ್ಕಂತೆ ಉದ್ಯೋಗಾವಕಾಶಗಳು ದೊರೆಯುವಂತೆ ಮಾಡುವುದು ಅಗತ್ಯವೆಂದು ತನ್ನ ಬ್ಯಾಂಕು ತಿಳಿದುಕೊಂಡು ಅದರಂತೆ ಕಾರ್ಯಕ್ರಮ ರೂಪಿಸುತ್ತಿದೆ ಎಂದೂ ಹೇಳಿದರು.

ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಹಲವು ರೈತ ಪ್ರತಿನಿಧಿಗಳು ಭಾಗವಹಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಕೃಷಿಯ ಶಾಸ್ತ್ರೀಯ ವಿಧಾನಗಳ ಕುರಿತು ತಜ್ಞರಿಂದ ಉಪನ್ಯಾಸಗಳನ್ನೇರ್ಪಡಿಸಲಾಗಿತ್ತು.

ವಿದಾಯ ಸತ್ಕಾರ

ಉಡುಪಿ ಇಲ್ಲಿಂದ ಚಿತ್ರದುರ್ಗಕ್ಕೆ ವರ್ಗವಾಗಿ ಹೋಗುತ್ತಿರುವ ಶ್ರೀ ರಾಮಯ್ಯ, ಸಿವಿಲ್ ಜಡ್ಜರಿಗೂ, ಗುಲ್ಬರ್ಗಕ್ಕೆ ವರ್ಗವಾಗಿ ಹೋಗುತ್ತಿರುವ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಎಸ್. ಡಿ. ನಾಯಕರಿಗೂ ಇಲ್ಲಿಯ ಲಾ ಕಾಲೇಜಿನಲ್ಲಿ ಸಂಸ್ಥೆಯ ಜನರಲ್ ಮ್ಯಾನೇಜರ್ ಡಾ| ಕೆ. ಕೆ. ಕಲ್ಕೂರರು ಒಂದು ಸತ್ಕಾರ ಕೂಟ ಏರ್ಪಡಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಯಂ. ಗೋಪಾಲಕೃಷ್ಣ, ಪ್ರಿನ್ಸಿಪಾಲ್ ಮುಖ್ಯಸ್ಥರು ಆಗಮಿಸಿದ್ದರು.

ನಮ್ಮೊಡನೆ ಆರು ವರ್ಷಗಳ ಮೇಲಿನ
ನಿರಖು ಠೇವಣಾತಿಗಳ ಮೇಲೆ

7%

ಬಡ್ಡಿಯನ್ನು ನೀವೀಗ ಸಂಪಾದಿಸಬಹುದು.

ಎರಡು ವರ್ಷ ಮತ್ತು ಮಿಕ್ಕಿದ ಅವಧಿಯ ನಿರಖು ಠೇವಣಾತಿಗಳ ಮೇಲೆ 1—4—1970 ರಿಂದ ಈ ಕೆಳಗಿನ ಹೆಚ್ಚಿಸಿದ ಬಡ್ಡಿ ದರಗಳನ್ನು ಸಹ ಕೊಡಲಾಗುವುದು.

6% ಎರಡು ವರ್ಷಗಳಿಗೆ ಮಿಕ್ಕಿದ ಮೂರು ವರ್ಷದ ಅವಧಿ ವರೆಗೆ

6½% 3 ವರ್ಷಕ್ಕೆ ಮಿಕ್ಕಿ ಐದು ವರ್ಷದ ಅವಧಿ ವರೆಗೆ

6¾% ಐದು ವರ್ಷಕ್ಕೆ ಮಿಕ್ಕಿ 6 ವರ್ಷಗಳ ವರೆಗೆ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ : ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ ಕಸ್ಟೋಡಿಯನ್

ಕೇರಳದಲ್ಲಿ ಚೇರ ಸಾಮ್ರಾಜ್ಯದ ಅವಶೇಷಗಳ ಪತ್ತೆ?

ಭಾರತದ ಪ್ರಾಚೀನ ಶೋಧಕ ಇಲಾಖೆಯವರು ಕೇರಳದ ಕ್ರಾಂಗನೂರಿನ ಬಳಿ ಎರಡನೆಯ ಚೇರ ಸಾಮ್ರಾಜ್ಯದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಈಗ ಕ್ರಾಂಗನೂರು ಎಂದು ಹೆಸರು ಪಡೆದಿರುವ ಪಟ್ಟಣ ಹಿಂದೆ ಎರಡನೇ ಚೇರ ಸಾಮ್ರಾಜ್ಯದ ರಾಜಧಾನಿಯಾಗಿದ್ದಿತಲ್ಲದೆ, ಮಹೋದಯಪುರಂ ಎಂಬ ಹೆಸರಿನಿಂದ ಸುವಿಖ್ಯಾತವಾಗಿದ್ದಿತು. ಕ್ರಾಂಗನೂರಿನ ಸುತ್ತಮುತ್ತಲೂ ಕಂಡು ಬಂದಿರುವ ಅವಶೇಷಗಳು ಈ ನಗರದ ಗತ ವೈಭವವನ್ನು ಸಾರುತ್ತಿವೆ. ಕ್ರಾಂಗನೂರಿನ ಸುತ್ತಮುತ್ತಲೂ ತೆಂಗಿನ ತೋಟಗಳು ಹೆಚ್ಚಾಗಿ ಕಂಡು ಬರುತ್ತವೆ. ಇಲ್ಲಿನ ಪ್ರದೇಶವನ್ನು ಸಮತಟ್ಟಾಗಿ ಮಾಡಿದಾಗ ಪ್ರಾಚ್ಯ ವಸ್ತುಗಳಿರಬಹುದಾದ ಅನೇಕ ನಿವೇಶನಗಳು ನಷ್ಟಕ್ಕೀಡಾಗಿವೆ. ನಷ್ಟವಾಗದೇ ಹಾಗೆಯೇ ಉಳಿದಿರುವ ಕೆಲವೊಂದು ನಿವೇಶನಗಳಲ್ಲಿ ಅಂದರೆ ತಿರುಕ್ಕುಲಶೇಖರಪುರಂ; ಮತಿಲಕಂ ಮತ್ತು ಕರುಪದನ್ನು ಇದೇ ಮೊದಲಾದ ನಿವೇಶನಗಳಲ್ಲಿ ಅಗೆತದ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಕಾರ್ಯ ಸುಮಾರು ಆರು ವಾರಗಳ ಕಾಲ ನಡೆಯಿತು.

ತಿರುಕ್ಕುಲಶೇಖರಪುರಂ ನಿವೇಶನದ ಮೇಲಿನ ಸ್ತರದಲ್ಲಿ ದೊರೆತಿರುವ ಚೀನಿ ಮಣ್ಣಿನ ಪಾತ್ರೆಗಳು ಕ್ರಿ. ಶ. 10ನೆಯ ಶತಮಾನಕ್ಕೆ ಸೇರಿದವು. ಕ್ರಿ. ಶ. 10ರಿಂದ 12ನೆಯ ಶತಮಾನಗಳವರೆಗಿನ ಕಾಲದಲ್ಲಿ ಈ ಪಾತ್ರೆಗಳು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಬಳಕೆಯಲ್ಲಿದ್ದವು. ಕ್ರಾಂಗನೂರು ಹಿಂದೊಮ್ಮೆ ಪಶ್ಚಿಮ ಕರಾವಳಿಯಲ್ಲಿನ ಸುಪ್ರಸಿದ್ಧವಾದ ರೇವು ಪಟ್ಟಣವಾಗಿತ್ತು. ಈ ಮುಂಚೆ ಅಂದರೆ 1945—46ರಲ್ಲಿ ಕ್ರಾಂಗನೂರಿನ ಚೇರ್‌ಮನ್—ಪರಂಬು ಎಂಬಲ್ಲಿ ಕ್ರಿ. ಶ. 13-14ನೆಯ ಶತಮಾನಕ್ಕೆ ಸೇರಿದ ಅವಶೇಷಗಳು ಪತ್ತೆಯಾದವು. ಈಗ ಪತ್ತೆಯಾಗಿರುವ ಅವಶೇಷಗಳು ಕ್ರಿ. ಶ. 9—10ನೆಯ ಶತಮಾನದ ಕಾಲದವು.

ಇವುಗಳಲ್ಲಿ ಗಟ್ಟಿಮುಟ್ಟಾದ ಕೆಂಪು ಮಣ್ಣಿನ ಪಾತ್ರೆಗಳು ಉದ್ದವಾದ ಹಾಗೂ ಅಗಲವಾದ ಹೆಂಚುಗಳು ಮುಖ್ಯವಾಗಿವೆ. ಈ ಎಲ್ಲ ವಸ್ತುಗಳನ್ನೂ ಸ್ಥಾನಿಕ ಕುಂಬಾರರೇ ತಯಾರಿಸಿದ್ದರು. ಅಂದು ತಯಾರಿಸಿದ ಈ ವಸ್ತುಗಳು ಚೇರರ ಕಾಲದ ಕಲಾಪ್ರತಿಭೆಗೆ ಸಾಕ್ಷಿಯಾಗಿ ಉಳಿದಿವೆ. ಇವು ಏಷ್ಯದ ಇತರ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದವು.

ಚೋಳರ ನಾಣ್ಯಗಳು

ತ್ರಿಕಣಾ—ಮತಿಲಕಂ ಎಂಬ ಊರು ಇದು ಕ್ರಾಂಗನೂರಿನಿಂದ ಉತ್ತರಕ್ಕೆ ಐದು ಮೈಲಿಗಳ ದೂರದಲ್ಲಿದೆ. ಕ್ರಿಸ್ತಶಕ ಹನ್ನೊಂದನೆಯ ಶತಮಾನದ ಶಾಸನವೊಂದರಲ್ಲಿ ಈ ಸ್ಥಳವನ್ನು ತಿರುಕ್ಕುನಾಯ್ಯ ಎಂದು ಕರೆಯಲಾಗಿದೆ. ಸಂಗಮವಂಶದ ನಂತರದ ಸಾಹಿತ್ಯ ಕೃತಿಯೂ ಶಿಲಪ್ಪಧಿಕಾರಂನ ಕುನ್ನವಾಯಿಲ್, ಕೋಟ್ಟಯಂ ಇದೇ ಎಂದು ಕೆಲವರು ಊಹಿಸಿದ್ದಾರೆ, ಆ ಸ್ಥಳದಲ್ಲಿ ಈಗ ಪ್ರಾಚ್ಯವಸ್ತು ಶೋಧ ಕಾರ್ಯ ಸವಿಸ್ತಾರವಾಗಿ ನಡೆದಿದೆ. ಈ ಊರಿನ ನಡುವೆ ಎತ್ತರವಾದ ದಿಣ್ಣೆಯೊಂದಿದೆ. ಈ ದಿಣ್ಣೆಯಲ್ಲಿ ಪ್ರಾಚ್ಯವಸ್ತು ಶೋಧ ನಡೆದಾಗ ಕ್ರಿಸ್ತಶಕ 10ನೆಯ ಶತಮಾನದ ಕೆಲವು ಅವಶೇಷಗಳು ಕಂಡುಬಂದಿವೆ. ಕ್ರಿಸ್ತಶಕ 11ನೆಯ ಶತಮಾನದ ಆದಿಭಾಗಕ್ಕೆ ಸೇರಿದ ಎರಡು ಚೋಳ ನಾಣ್ಯಗಳ ಶೋಧ ಈ ಊಹೆಯನ್ನು ಬಲಪಡಿಸಿದೆ. ಈ ನಾಣ್ಯಗಳು ನಿವೇಶನದ ಮಧ್ಯಸ್ತರದಲ್ಲಿ ಹಾಗೂ ಕೆಳಗಿನ ಸ್ತರದಲ್ಲಿ ದೊರೆತಿವೆ. ಈ ಎರಡೂ ನಾಣ್ಯಗಳು ರಾಜರಾಜಚೋಳ ನಾಣ್ಯಗಳನ್ನು ಹೋಲುತ್ತವೆ. ಈ ನಾಣ್ಯಗಳ ಒಂದು ಮಗ್ಗುಲಲ್ಲಿ ನಿಂತಿರುವ ರಾಜನ ಚಿತ್ರವೂ ಇನ್ನೊಂದು ಮಗ್ಗುಲಲ್ಲಿ ಆಸೀನಳಾದ ದೇವತೆಯ ಚಿತ್ರವೂ ಇದೆ. ಚೋಳ ದೊರೆ—ರಾಜರಾಜ (ಕ್ರಿಸ್ತಶಕ 985—1014) ಹಾಗೂ ಅವರ ಮಗ ರಾಜೇಂದ್ರ (ಕ್ರಿ. ಶ. 1014) ಕಾಲದ ಶಾಸನಗಳಿಂದ ಆಗಿನ ಕಾಲದ ಕೆಲವು ಕವಿ ಕೃತಿಗಳಿಂದ ಈ ಇಬ್ಬರೂ ಚೋಳ ದೊರೆಗಳು ಚೇರ ಸಾಮ್ರಾಜ್ಯದ ರಾಜಧಾನಿಯಾದ ಮಹೋದಯಪುರಂ ಮೇಲೆಯೂ ತಮ್ಮ ಪ್ರಭುತ್ವವನ್ನು ಹೊಂದಿದ್ದರೆಂಬುದನ್ನು ಖಚಿತ ಪಡಿಸುತ್ತವೆ ಚೇರ್‌ಮನ ರಾಜಸಿಂಹ ಹಾಗೂ ಚೇರಮನ್ನಾರ್ ರಾಜರಾಜನ ಶಾಸನಗಳೂ, ಈ ಊಹೆಯನ್ನು ದೃಢಪಡಿಸಿವೆ.

ಮತಿಲಕಂ ಮಂದಿರ

ಪ್ರಾಚ್ಯ ವಸ್ತು ಶೋಧದ ಕಾಲಕ್ಕೆ ಈ ನಿವೇಶನದಲ್ಲಿ ಹಳೆಯ ಕಾಲದ ಕೆಂಪು ಮಣ್ಣಿನ ಕಟ್ಟಡವೊಂದು ಪತ್ತೆಯಾಗಿದೆ. ಇದು ಮತಿಲಕಂ ದೇವಾಲಯದ ಅವಶೇಷಗಳಾಗಿವೆ. ಮಣ್ಣಿನಿಂದ ತಯಾರಿಸಿದ ದೀಪದ ಬಟ್ಟಲುಗಳು, ಮನೆಯ ಹೆಂಚುಗಳು, ಮತ್ತು ತಾಮ್ರದ ಮೊಳೆಗಳು ಈ ಅಭಿಪ್ರಾಯಕ್ಕೆ ಪುಷ್ಟಿನೀಡಿವೆ.

ಮತಿಲಕಂ ನಿವೇಶನದ ತೀರ ದಕ್ಷಿಣದ ತುದಿಯಲ್ಲಿ ಅತ್ಯಂತ ಉದ್ದವಾದ ಭಾರೀಗೋಡೆಯಿರುವುದು ಪತ್ತೆಯಾಗಿದೆ. ಕೆಂಪು ಮಣ್ಣಿನ ಈ ಗೋಡೆಯನ್ನು ಪೂರ್ವ—ಪಶ್ಚಿಮವಾಗಿ ನಿರ್ಮಿಸಿರುವುದು ಕಂಡು ಬಂದಿದೆ. ದಕ್ಷಿಣೋತ್ತರವಾಗಿ ಕಟ್ಟಲಾಗಿರುವ ಇನ್ನೊಂದು ಭಾರೀಗೋಡೆಯ ಅವಶೇಷವೂ ಬೆಳಕಿಗೆ ಬಂದಿದೆ. ಮತಿಲಕಂ ಹಿಂದೊಮ್ಮೆ ಭಾರೀ ಗೋಡೆಗಳಿಂದ ಸುತ್ತುವರಿದ ಪಟ್ಟಣವಾಗಿದ್ದಿತೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕ್ರಾಂಗನೂರಿನ ಸುತ್ತಮುತ್ತಲೂ ದೊರೆತಿರುವ ಅವಶೇಷಗಳು ಭಾರತದ ಗತವೈಭವವನ್ನು ಸಾರುತ್ತವೆ

ಊಟದ ನಿಯಮಗಳು

ಊಟದ ಮೊದಲು ಕೈಕಾಲು ತೊಳೆದುಕೊಂಡು, ಗಂಧವನ್ನು ಧಾರಣೆ ಮಾಡಿ ನಿರ್ಮಾಲ್ಯ ಹೂ ತುಳಸಿಗಳನ್ನು ಧರಿಸಿ, ಮೈಮೇಲಿನ ಬಟ್ಟೆಯನ್ನು ತೆಗೆದಿಟ್ಟು, ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತು ಪ್ರಸನ್ನವಾದ ಮನಸ್ಸಿನಿಂದ ಊಟ ಮಾಡಬೇಕು.

ಉಣ್ಣುವ ಅನ್ನವು ರುಚಿಯಾಗಿರಬೇಕು, ಶುಚಿಯಾಗಿರಬೇಕು, ಆರೋಗ್ಯಕರವಾಗಿರಬೇಕು, ದೇವರಿಗೆ ನಿವೇದಿತವಾಗಿ ಪವಿತ್ರವಾಗಿರಬೇಕು. ಅದನ್ನು ಕೆಟ್ಟ ಜನರು ಬಡಿಸಬಾರದು. ಸಿಟ್ಟಿನಿಂದ ನೀಡಬಾರದು. ಉಣ್ಣುವ ಪಾತ್ರವು ಶುದ್ಧವೂ ಸ್ವಚ್ಛವೂ ಆಗಿರಬೇಕು. ಮತ್ತು ಉಣ್ಣುವ ಎಲೆ ಅಥವಾ ತಾಟನ್ನು ಬೇರೆ ಆಸನ (ಕುರ್ಚಿ ಟೇಬಲ್) ಮೇಲೆ ಇಟ್ಟು ಊಟ ಮಾಡಬಾರದು. ಹೊಲಸು ಸ್ಥಳದಲ್ಲಿ, ಅವೇಳೆಯಲ್ಲಿ, ಖಾಟಿಯಲ್ಲಿ, ಊಟ ಮಾಡಬಾರದು. ತಂಗಳನ್ನವನ್ನು ಉಣ್ಣಬಾರದು. ಹಣ್ಣು-ಕಾಯಿ, ಕಂದಮೂಲ, ಒಣಗಿದ ತರಕಾರಿ, ಮತ್ತು ಸಕ್ಕರೆ ಬೆಲ್ಲದ ಸಿಹಿ ಪಾಕದಲ್ಲಿ ಮಾಡಿದ ಪಕ್ವಾನ್ನ ಮುಂತಾದವುಗಳನ್ನು ಒಂದೆರಡು ದಿನ ಇಟ್ಟು ತಿಂದರೂ ಅವು ತಂಗಳೆನಿಸುವದಿಲ್ಲ. ಎಲೆಯಲ್ಲಿ ಜೇನು, ಮೊಸರು ತುಪ್ಪ, ಮತ್ತು ಅನ್ನ ಇವುಗಳನ್ನು ಬಿಟ್ಟು ಉಳಿದಂತೆ ಬೇಕಾದಷ್ಟೇ ಹಾಕಿಸಿಕೊಂಡು ಎಲ್ಲವನ್ನೂ ಉಂಡು ಏಳಬೇಕು. ಊಟಕ್ಕೆ ಕುಳಿತಾಗ ಸಿಟ್ಟಿಗೆ ಏಳಬಾರದು. ಮಾಡಿದ ಅಡಿಗೆಯನ್ನು ಬೈಯಬಾರದು. ಬಹಳ ಮಾತನ್ನು ಆಡಬಾರದು ಊಟದ ಪ್ರಾರಂಭದಲ್ಲಿ ಪಾಯಸ ಮೊದಲಾದ ಸಿಹಿ ರಸದ ನೀರು ಪದಾರ್ಥ (ದ್ರವ)ವನ್ನೂ, ನಡುವೆ ಉಪ್ಪು, ಖಾರ, ಹುಳಿ ವ್ಯಂಜನಗಳನ್ನೂ ಕೊನೆಗೆ ಮೊಸರು ಮಜ್ಜಿಗೆ ಮುಂತಾದ ದ್ರವಪದಾರ್ಥಗಳನ್ನೂ ಊಟ ಮಾಡಬೇಕು. ಅದರಿಂದ ಬಲ ಬಂದು ಆರೋಗ್ಯವು ಸುಧಾರಿಸುತ್ತದೆ. ನಿಷಿದ್ಧ ಪದಾರ್ಥಗಳನ್ನು ತಿನ್ನಬಾರದು.

(ವಿಷ್ಣು ಪುರಾಣ)

ಮನೆ-ಮದ್ದು
ಗೃಹವೈದ್ಯ — ರೂ.2-00

ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1-50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ
ರಖಂ ಪ್ರತಿಗಳಿಗೆ ರಿಯಾಯಿತಿ ಇದೆ.

ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

READ &
ADVERTISE IN
NAVAYUGA WEEKLY

NAVAYUGA 7—5—1970
istered with the Registrar
of News Papers for India
under No. R. N. 3546/'57

REGD. No. B. G/ 176
LICENCE No. 33,
Licensed to Post without Prepayment

ಪಾಪದ ತಂದೆ ಯಾರು?

ಪಂಡಿತ ಚಂದ್ರಶೇಖರ ಎಂಬ ಬ್ರಾಹ್ಮಣನು ಕಾಶಿಯಲ್ಲಿ ಬಹುಕಾಲ ಇದ್ದು ನ್ಯಾಯ ವೇದಾಂತ ವ್ಯಾಕರಣ ಶಾಸ್ತ್ರ ಪಂಡಿತನಾಗಿ ತನ್ನ ಊರಿಗೆ ಬಂದನು. ಅಲ್ಲಿ ಅವನ ಸತ್ಕಾರಕ್ಕಾಗಿ ಒಂದು ದೊಡ್ಡ ಸಭೆ ಸೇರಿಯಿತು. ಅದರಲ್ಲಿ ಒಬ್ಬ ಮುದುಕಿಯು ಎದ್ದು "ಪಂಡಿತರೇ, ಪಾಪದ ತಂದೆ ಯಾರು ?" ಎಂದು ಪ್ರಶ್ನೆ ಕೇಳಿದಳು.

ಪಂಡಿತನಿಗೆ ದಿಗ್ಭ್ರಮೆಯಾಯಿತು. ಅವನು ಓದಿದ ಯಾವ ಶಾಸ್ತ್ರದಲ್ಲಿಯೂ ಈ ಪ್ರಶ್ನೆಗೆ ಉತ್ತರವಿರಲಿಲ್ಲ. ಅವನು ನಿಜವಾದ ಜಿಜ್ಞಾಸು ವೃತ್ತಿಯವನು ಇದ್ದನು. ಆದುದರಿಂದ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ತಿಳಿದು ಕೊಂಡೇ ಬರಬೇಕೆಂದು ಅವನು ಊರು ಬಿಟ್ಟು ಹೊರಟನು. ದೇಶ ದೇಶ ತಿರುಗಾಡಿ ಅನೇಕ ಪಂಡಿತರನ್ನೂ ಅನುಭವಿಗಳನ್ನೂ ಈ ಪ್ರಶ್ನೆಯ ಬಗ್ಗೆ ವಿಚಾರಿಸಿದನು. ಆದರೆ ಎಲ್ಲಿಯೂ ಅವನಿಗೆ ಇದಕ್ಕೆ ಸರಿಯಾಗಿ ಉತ್ತರ ದೊರೆಯಲಿಲ್ಲ.

ದೇಶಭ್ರಮಣ ಮಾಡುತ್ತ ಕೊನೆಗೆ ಅವನು ಪೂನಾಕ್ಕೆ ಬಂದನು. ಪುಣೆ ನಗರದ ದಾಶಿವ ಪೇಟೆಯಲ್ಲಿ ವಿಲಾಸಿನಿ ಎಂಬ ವೇಶ್ಯೆ ಇದ್ದಳು. ಅವಳು ಆ ಪಂಡಿತನನ್ನು ಬರಮಾಡಿಕೊಂಡು ಅವನ ಚಿಂತೆಯೇನೆಂದು ವಿಚಾರಿಸಿದಳು. ಅದಕ್ಕೆ "ಪಂಡಿತನು ಪಾಪದ ತಂದೆ ಯಾರು? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದೇನೆ" ಎಂದು ಹೇಳಿದನು.

ಅದಕ್ಕೆ ಆ ವೇಶ್ಯೆಯು ತನ್ನ ಮನೆಯಲ್ಲಿ ತಾವು ಕೆಲದಿನಗಳವರೆಗೆ ಇದ್ದರೆ ನಾನು ತಮ್ಮ ಪ್ರಶ್ನೆಗೆ ಉತ್ತರ ಹೇಳುತ್ತೇನೆಂದು ತಿಳಿಸಿದಳು. ಅವನಿಗೆ ಬೇರೊಂದು ಮನೆಯನ್ನು ಕೊಟ್ಟು ಇರಲಿಕ್ಕೆ ಎಲ್ಲ ಸೌಕರ್ಯವನ್ನು ಒದಗಿಸಿದಳು. ಕರ್ಮಠನಾದ ಚಂದ್ರಶೇಖರ ದಿನಾಲು ತಾನೇ ಒಡ್ಡಿಯಿಂದ ನೀರು ತಂದು ಅಡಿಗೆ ಮಾಡಿಕೊಂಡು ಊಟಮಾಡುತ್ತಿದ್ದ.

ಮುಂದೆ ಒಂದು ದಿನ ಆ ವೇಶ್ಯೆಯು "ಸ್ವಾಮೀ, ನೀವು ಅಡಿಗೆಗೆ ಎಷ್ಟು ಕಷ್ಟ ಪಡುತ್ತೀರಿ. ನನ್ನ ಕೈಯಿಂದ ಉಂಡರೆ ಉತ್ತಮ ಪಕ್ವಾನ್ನಮಾಡಿ ಬಡಿಸುವೆ ಮತ್ತು ಪ್ರತಿದಿನವೂ ಒಂದು ಬಂಗಾರ ನಾಣ್ಯವನ್ನು ದಕ್ಷಿಣೆ ಕೊಡುತ್ತೇನೆ" ಎಂದು ಹೇಳಿದಳು. ಮೊದಮೊದಲು ಪಂಡಿತನಿಗೆ ವೇಶ್ಯೆಯ ಕೈಯಿಂದ ಹೇಗೆ ಉಣ್ಣುವದು ಎಂದು ಸಂಕೋಚವೆನಿಸಿತು. ಆದರೆ ಪಕ್ವಾನ್ನ ಹಾಗೂ ದಕ್ಷಿಣೆಯ ಆಶೆಯಿಂದ ಅವನ ಅವಳ ಕೈಯಿಂದ ಉಣ್ಣಲಿಕ್ಕೆ ಸಿದ್ಧನಾದ. ಅದರಂತೆ ಅವಳು ವಿವಿಧ ಪಕ್ವಾನ್ನಗಳನ್ನು ತಯಾರಿಸಿದಳು. ಅದರ ವಾಸನೆ ಬಂಗಾರ ನಾಣ್ಯದ ಆಶೆಯಿಂದ ಬ್ರಾಹ್ಮಣನ ಬಾಯಲ್ಲಿ ನೀರೇ ಬಿಟ್ಟಿತು.

ಬೆಳ್ಳಿಯ ತಾಟಿನಲ್ಲಿ ಪಕ್ವಾನ್ನ ಬಡಿಸಿ ಬ್ರಾಹ್ಮಣನ ಕೈಯಲ್ಲಿ ಎಲೆ ಅಡಿಕೆ ದಕ್ಷಿಣೆ ಕೊಟ್ಟು ಊಟಕ್ಕೆ ಕೂಡಲಿಕ್ಕೆ ಹೇಳಿದಳು. ಆಗ ಬ್ರಾಹ್ಮಣ ತಾಟಿನ ಮೇಲೆ ಬಂದ ಕೂಡಲೇ ವೇಶ್ಯೆ ಆ ತಾಟನ್ನು ಎತ್ತಿ "ಸ್ವಾಮಿ ತಾವು ಈ ಅನ್ನ ಉಂಡು ತಮ್ಮ ಕುಲವನ್ನು ಹಾಳುಮಾಡಿಕೊಳ್ಳಬೇಡಿರಿ. ನಾನು ತಮ್ಮ ಪ್ರಶ್ನೆಗೆ ಉತ್ತರ ಕೊಡಲಿಕ್ಕಾಗಿಯೇ ಇಷ್ಟೆಲ್ಲ ಮಾಡಿದ್ದೇನೆ. ನಿಮ್ಮನ್ನು ಕುಲಗೇಡಿಸುವ ವಿಚಾರ ನನಗಿಲ್ಲ.

ನಿಮ್ಮಂಥ ಕರ್ಮಠರ ಬ್ರಾಹ್ಮಣರು ಇಂದು ಪಕ್ವಾನ್ನ ಹಾಗೂ ಬಂಗಾರದ ನಾಣ್ಯದ ಲೋಭದಿಂದ ಇಂದು ನಿಮ್ಮ ಧರ್ಮ ಕರ್ಮ ಬಿಟ್ಟು ನನ್ನಂಥ ಪಾಪಿಯ ದುಷ್ಟ ಅನ್ನ ಉಣ್ಣುವ ಪ್ರಸಂಗಕ್ಕೆ ತಯಾರಾದಿರಿ. ಇದರಿಂದ ಲೋಭವೇ ಪಾಪಗಳ ತಂದೆ ಎಂದು ಸಿದ್ಧವಾಗುವುದಿಲ್ಲವೇ?" ಎಂದು ಹೇಳಿದಳು.

(ಸಂಗ್ರಹೀತ)

ಸುಬ್ರಹ್ಮಣ್ಯಂ ಮೈಸುಟ್ಟುಕೊಂಡರು

(ಒಂದನೇ ಪುಟದಿಂದ)

ನ್ನು ರಕ್ಷಿಸಲು ಸರ್ವಶಕ್ತಿಮಾನ್ ಪ್ರಭುವು ಕೂರ್ಮ ಅವತಾರವನ್ನು ಪಡೆದನಂತೆ. ಇಂದು ಕೂರ್ಮದ ಆಕಾರದಲ್ಲಿ ಬಂದರೆ? ಸುಸಂಘಟಿತ ರಾಷ್ಟ್ರೀಯ ಶಕ್ತಿ ಮಾತ್ರ ಅದನ್ನೆದುರಿಸೀತು.

ಸುಬ್ರಹ್ಮಣ್ಯಂರಂತಹ ಅಧಿಕಾರಾಕಾಂಕ್ಷಿ ಪತಂಗಗಳು ರಾಜಕೀಯ ರೋಷಾಗ್ನಿಯಲ್ಲಿ ಬಿದ್ದು ಸುಟ್ಟುಕೊಳ್ಳುತ್ತಿವೆ. ಅದರಿಂದ ಭಾರತೀಯ ಜನತೆ ಎಚ್ಚರಗೊಳ್ಳುತ್ತದೆ, ಕಣ್ತೆರೆಯುತ್ತದೆ.

—ಶಿವಶಂಕರ.

ಸ್ವಮೂತ್ರ ಚಿಕಿತ್ಸಾ ಪ್ರಚಾರದ ಬಗ್ಗೆ

ಡಾ। ಪರಾಗಜೀ ದೇಸಾಯಿ ಇವರ ಸತ್ಕಾರ ಸಮಾರಂಭ

ಗುಜರಾತದ ಬಲಸಾರದಲ್ಲಿಯ ಡಾಕ್ಟರ ಪರಾಗಜೀ ದೇಸಾಯಿ ಎಂ.ಬಿ.ಬಿ.ಎಸ್. ಇವರು ಬಲಸಾರದಲ್ಲಿಯ ಧರ್ಮಾರ್ಥ ಕಣ್ಣಿನ ದವಾಖಾನೆಯ ಚೀಫ್ ಮೆಡಿಕಲ್ ಆಫೀಸರರಾಗಿ ಸಮಾಜಸೇವೆ ಮಾಡುತ್ತ ಬಂದಿದ್ದಾರೆ. ಅದರಂತೆ ಬಲಸಾಡ ಜಿಲ್ಲಾ ಶಿವಾಂಬು ಚಿಕಿತ್ಸಾ ಮಂಡಳದ ಪ್ರಭಾವೀ ಪ್ರಚಾರಕ ಇದ್ದಾರೆ. ಬಲಸಾಡ ಮುನಸಿಪಾಲಿಟಿಯಲ್ಲಿಯ ಆಸ್ಪತ್ರೆಯಲ್ಲಿಯ ಶಿವಾಂಬು ಚಿಕಿತ್ಸಾ ವಾರ್ಡಿನ ಸಂಚಾಲಕರೂ ಇದ್ದಾರೆ. ಶಿವಾಂಬು ಚಿಕಿತ್ಸಾ ಮಂಡಳ ಮುಂಬಯಿಯ ವತಿಯಿಂದ ಎಲಫಿನ್‌ಸ್ಟನ್ ರೋಡಿನಲ್ಲಿ ನಡೆಯುತ್ತಲಿರುವ ಶಿವಾಂಬು ಚಿಕಿತ್ಸಾ ಕೇಂದ್ರದ ಸಲಹೆಗಾರರೂ ಇದ್ದಾರೆ.

ಡಾ. ದೇಸಾಯಿಯವರ ಸುದೀರ್ಘ ವೈದ್ಯಕೀಯ ಸೇವೆ ಮತ್ತು ವಿಶೇಷತಃ ನಿಸ್ಪೃಹವಾಗಿಯೂ, ನಿಸ್ಸಂಕೋಚವಾಗಿಯೂ ಅವರು ನಡೆಸುತ್ತಲಿರುವ ಶಿವಾಂಬು (ಸ್ವಮೂತ್ರ) ಚಿಕಿತ್ಸಾ ಪ್ರಚಾರವನ್ನು ಅನ್ವಯಿಸಿ, ಕಳೆದ ಮಾರ್ಚ ತಾ. ೧೪ ರಂದು, ಫೆಲೋಶಿಪ್ ಸ್ಕೂಲ ಹಾಲ ಮುಂಬಯಿಯಲ್ಲಿ, ಶ್ರೀ ಕೇ. ಕೇ. ಶಹಾ ಕೇಂದ್ರ (ಭಾರತ ಸರಕಾರದ) ಆರೋಗ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭ ನಡೆಯಿತು.

ಸಮಾರಂಭದ ಕಾಲದಲ್ಲಿ ಶ್ರೀ ಶಹಾ ಇವರು ಹೇಳಿದರು "ಪುರಾತನ ಕಾಲದಿಂದಲೂ ಮುದುಕಿಯರು ಮಕ್ಕಳ ರೋಗ ನಿವಾರಣೆಗೆ ಮೂತ್ರವನ್ನೇ ಉಪಯೋಗಿಸುತ್ತ ಬಂದಿದ್ದಾರೆ. ಗಾಯಗಳಿಗೂ, ನೋವುಗಳಿಗೂ ಅದನ್ನು ಉಪಯೋಗಿಸುತ್ತಲಿದ್ದಾರೆ. ಭಾರತೀಯ ಚಿಕಿತ್ಸಾ ಪದ್ಧತಿಗಳಲ್ಲಿ ಇದೂ ಒಂದು. ಇದರಲ್ಲಿ ವೈಜ್ಞಾನಿಕ ಸಂಶೋಧನೆ ಹಾಗೂ ಪರಿಶೀಲನೆ ನಡೆಸುವುದು ಅವಶ್ಯವಿದೆ. ಇಂದಿನ ಎಲೋಪಥಿ ಔಷಧ ಚಿಕಿತ್ಸೆಯು ತುಂಬಾ ಖರ್ಚಿನದು, ಬಡವರ ಹಾಗೂ ಮಧ್ಯಮ ವರ್ಗದವರ ಕೈಗೆ ನಿಲುಕದ್ದು ಆಗಿದೆ. ಅದರ ಮಾನದಿಂದ ಭಾರತೀಯ ಪದ್ಧತಿಗಳೂ ಮನೆಯ ಮದ್ದುಗಳೂ ಕಡಿಮೆ ಖರ್ಚಿನವು, ಹೆಚ್ಚು ಕಾರ್ಯಕ್ಷಮ ಹಾಗೂ ಅಪಾಯರಹಿತವಾಗಿದ್ದು ಬಹುಜನರಿಗೆ ಉಪಯುಕ್ತವಾಗಿವೆ. ಸ್ವಮೂತ್ರ ಚಿಕಿತ್ಸೆಯಿಂದ ಗುಣಹೊಂದಿರುವ ರೋಗಿಗಳನ್ನು ಪ್ರತ್ಯಕ್ಷ ನೋಡಬೇಕು. ಮತ್ತು ರೋಗಗ್ರಸ್ತ ಜನಕೋಟಿಗೆ ಈ ಚಿಕಿತ್ಸೆಯ ಲಾಭವು ದೊರೆಯುವಂತೆ ಮಾಡಲಿಕ್ಕೆ ಸರಕಾರವು ಯಾವ ರೀತಿಯಲ್ಲಿ ಸಹಾಯ ಮಾಡುವದು ಶಕ್ಯವಿದೆ ಎಂಬುದನ್ನು ಕಂಡುಕೊಳ್ಳಬೇಕು ಎಂಬುದೇ ಇಂದಿನ ಸಮಾರಂಭದಲ್ಲಿ ನಾನು ಭಾಗವಹಿಸಿದ್ದರ ಉದ್ದೇಶವಾಗಿದೆ" ಎಂದ.

ಅನಂತರ ಅವರು ಡಾ. ದೇಸಾಯಿಯವರಿಗೊಂದು ಶಾಲನ್ನು ಅರ್ಪಿಸಿದರು. ಮತ್ತು ಈ ಚಿಕಿತ್ಸಾ ಪದ್ಧತಿಯಿಂದ ಇನ್ನೂ ಹೆಚ್ಚಿನ ಜನಸೇವೆ ಮಾಡಲು ದೇವರು ಅವರಿಗೆ ದೀರ್ಘಾಯುವನ್ನು ಕೊಡಲೆಂದು ಪ್ರಾರ್ಥಿಸಿದರು.

ಆ ವೇಳೆ ಸ್ವಮೂತ್ರ ಚಿಕಿತ್ಸೆಯಿಂದ ಗುಣಪಟ್ಟಿರುವ ಕ್ಷಯ, ದಮ್ಮು, ಅಪಸ್ಮಾರ (ಮುಲರೋಗ) ಸ್ಥೂಲತೆ, ಚರ್ಮರೋಗ, ಕಣ್ಣಿನ ಗ್ಲುಕೋಮಾ, ಕಿಡ್ನಿ ಸ್ಟೋನ, ವಾತ ಮೊದಲಾದ ರೋಗಿಗಳನ್ನು ಶ್ರೀ ಶಹಾ ಇವರಿಗೂ ಕೂಡಿದ ಜನರಿಗೂ ತೋರಿಸಲಾಯಿತು.

ಕೊನೆಯಲ್ಲಿ ಡಾ. ದೇಸಾಯಿಯವರು ಎಲ್ಲರ ಉಪಕಾರವನ್ನೂ ಸ್ಮರಿಸುತ್ತ ಹೇಳಿದರು "ಇಂದು ಪ್ರಚಲಿತವಿರುವ ಯಾವತ್ತೂ ಚಿಕಿತ್ಸಾಪದ್ಧತಿಗಳ ಅಭ್ಯಾಸ ಮಾಡಿ ನೋಡಿದ ಮೇಲೆ ಶಿವಾಂಬು (ಸ್ವಮೂತ್ರ) ಚಿಕಿತ್ಸೆಯೇ ಎಲ್ಲಕ್ಕೂ ಉತ್ತಮವಾದದ್ದೂ, ಸರಳವಾದದ್ದೂ ಇರುತ್ತದೆ ಎಂಬುದಾಗಿ ನಾನು ಕಂಡುಕೊಂಡಿದ್ದೇನೆ. ಆದ್ದರಿಂದ ಇಪ್ಪತ್ತು ಹಾಸಿಗೆಗಳದಾದರೂ ಒಂದು ಶಿವಾಂಬು ಚಿಕಿತ್ಸಾ ಸಂಶೋಧನ ಕೇಂದ್ರವನ್ನು ತೆರೆದು, ರೋಗಪೀಡಿತ ಜನತೆಯ ಆಶೀರ್ವಾದ ಪಡೆಯಲು ಮುಂದೆ ಬನ್ನಿರಿ ಎಂಬುದಾಗಿ ಸರಕಾರಕ್ಕೂ ಮತ್ತು ಉದಾರ ಜನತೆಗೂ ನಾನು ವಿನಂತಿಸಿಕೊಳ್ಳುತ್ತೇನೆ" ಎಂದು.

(ಸ್ವಾ. ಆ. ಹೊದಿಕೆ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯವರ ಊಟಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 14 — 5 — 1970 ಸಂಪುಟ 49 ಸಂಚಿಕೆ 36

ಶಂಕರ ಜಯಂತಿ-

ಭಾರತ ಮಾತೆಯ ಜಯ ಜಯಕಾರ

ವಿಶ್ವವಂದ್ಯ ಭಾರತಮಾತೆಯು ಮುಖ ಕುಂದಿತ್ತು, ಮ್ಲಾನವಾಗಿತ್ತು. ಇಡೀ ಭೂಲೋಕಕ್ಕೆ ಬೋಧಿಸಿದ್ದ ಹಿಂದೂ ಧರ್ಮದ ಧ್ವಜವನ್ನು ಕೆಳಕ್ಕಿಳಿಸಲು ಆಗ ಪ್ರಯತ್ನ ನಡೆಯುತ್ತಿತ್ತು. ಅನ್ಯಮತ ಆಕರ್ಷಕವಾಗಿದ್ದ ಸಮಯವದು. ಹಿಂದೂವೆಂದರೆ ಹೀಗಳೆಯುತ್ತಿದ್ದ ಕಾಲವದು. ಆಗ ಪಾವನ ಭಾರತ ಮಾತೆಯ ಪವಿತ್ರ ಕಾಲಡಿಗೆ ಶಂಕರಾಚಾರ್ಯರು ವಂದಿಸಿ, ಆಶೀರ್ವಾದ ಪಡೆದುಕೊಂಡು ಶಕ್ತಿವಂತ ಪ್ರಭುವಿನ ಕಾರ್ಯಕ್ಕಾಗಿ ಕಟಿಬದ್ಧರಾದರು. ಭಾರತಾಂಬೆಯ ಗೌರವ ಧ್ವಜವನ್ನು ಮೇಲಕ್ಕೆತ್ತುವ, ಹಾರಾಡಿಸುವ ಕಂಟಕಮಯ ಪಥದಲ್ಲಿ ಸಾಗಿದರು. ಅದಕ್ಕೆ ಬೇಕಾದ ಜ್ಞಾನವನ್ನು ಪಡೆದರು. ಅವರ ಹೃದಯ ಹಣತೆಯಲ್ಲಿ ಧ್ಯೇಯ ನಿಷ್ಠೆಯ ದೀಪ ಸದಾ ಉರಿಯುತ್ತಿತ್ತು. ಧರ್ಮ ಸಂರಕ್ಷಣೆಗೆ ರಾಷ್ಟ್ರವನ್ನು ಪರಮ ವೈಭವಕ್ಕೇರಿಸಲು ಅವರು ದೇವಿ ಕನ್ಯಾಕುಮಾರಿಯ ಬಳಿ ಆಶೀರ್ವಾದ ಬೇಡಿದರು. ಪರಮೇಶ್ವರನನ್ನು ಕಾಣಲು ಹಿಮಾಲಯದ ಹಾದಿ ಹಿಡಿದರು. ಹಾಗೆ ರಾಷ್ಟ್ರವಿಡೀ ಸಂಚರಿಸಿದರು. ದುಷ್ಟ ಕೌರವರನ್ನು ನಾಶ ಮಾಡಲು ಅರ್ಜುನನಿಗೆ ಅಸ್ತ್ರವನ್ನು ಅನುಗ್ರಹಿಸಿದ್ದ ಪಶುಪತಿಯನ್ನು ಅವರು ಕಂಡರು. ಹಿಂದೂ ವಿರೋಧಿ ದುಃಶಕ್ತಿಗಳ ದಮನಕ್ಕಾಗಿ ತಮಗೆ ಜ್ಞಾನದ ಅಸ್ತ್ರವನ್ನು ಅನುಗ್ರಹಿಸಲು ಕೇಳಿಕೊಂಡರು. ಭಾರತವಿಡೀ ಸುತ್ತಾಡಿ ಭಗವಾ ಬಾವುಟವನ್ನು ಬಾನೆತ್ತರಕ್ಕೇರಿಸಿದರು. ಹಿಂದೂ ಧರ್ಮದ ಹಿರಿಮೆಯ ಅರಿವನ್ನು ಅವರೆಲ್ಲರಲ್ಲಿ ಉಂಟುಮಾಡಿದರು.

ಅದು ಅಂದು. ಇಂದು ಏನು ನಡೆಯುತ್ತಿದೆ? ಭಾರತಾಂಬೆಯು ವಿಚ್ಛೇದನ ನಡೆದಿರುತ್ತದೆ. ಭಗವಾ ಬಾವುಟವನ್ನು ಬೀದಿಗೆ ಬಿಸಾಡಲಾಗಿದೆ. ಹಿಂದೂ ಧರ್ಮವನ್ನು ಹೀಗಳೆಯಲಾಗುತ್ತಿದೆ. ಅದನ್ನು ಪ್ರತಿಯ ಲಕ್ಷ್ಯವನ್ನಲಾಗುತ್ತಿದೆ. ಪ್ರಭು ಶ್ರೀರಾಮಚಂದ್ರನು ಅವತಾರವೆತ್ತಿರುವ ಈ ಪವಿತ್ರ ಭೂಮಿಯಲ್ಲಿ ಶ್ರೀರಾಮ ನವಮಿ ಉತ್ಸವವನ್ನು ಕೊಂಡಾಡುವವರನ್ನು ಪ್ರತಿಗಾಮಿಗಳು, ಅಂಧ ಶ್ರದ್ಧೆಯವರು, ಜಾತೀಯವಾದಿಗಳು, ಹುಚ್ಚರೆನ್ನಲಾಗುತ್ತಿದೆ. ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನು ಜನ್ಮವೆತ್ತಿರುವ ಸ್ಥಳದಲ್ಲಿ ಇಂದೇನಿದೆ?— ಮಸೀದಿ! ಹಾಗಿರುವಾಗ ಶ್ರೀರಾಮ ನವಮಿ ಉತ್ಸವವನ್ನು ಆಚರಿಸಿ 'ಮುಸ್ಲಿಮ'ರ ಮನನೋಯಿಸಿಗೊಳಗಾಗಬೇಕೇನು? ಅವರು ಮುನಿದು ಬಿಟ್ಟಲ್ಲಿ ನಮ್ಮ ಸೆಕ್ಯೂಲರಿಸಂನ ಗತಿ ಏನು? 'ಸೆಕ್ಯೂಲರಿಸಮ್'ಗೆ ಭಂಗತರುವವರಿಗೆ ಸರಿಯಾದ ಶಿಕ್ಷೆ ಸಿಗಲೇಬೇಕಲ್ಲವೆ? ಅದುವೇ ಈಗ ಎಲ್ಲೆಲ್ಲೂ ನಡೆಯುತ್ತಿರುವದು. ಅಷ್ಟಿಷ್ಟು ಯಾರಾದರೂ "ಕಿರಿಗೇಡಿ"ಗಳು, "ಜಾತೀಯವಾದಿಗಳು", "ಶಾಂತಿಗೆ ಭಂಗತರುವವರು" ಶ್ರೀರಾಮನವಮಿ ನಿಮಿತ್ತ ಅಥವಾ ಸೇವನದಿಂದ ಮೆರವಣಿಗೆ, ಭಜನೆ ಇತ್ಯಾದಿ ಏನಾದರೂ ನಡೆಸಿದಲ್ಲಿ ಅದನ್ನು ಚಿವುರಿನಲ್ಲೇ ಚಿವುಟಿ ತೆಗೆಯಬೇಕು, ಕಣ್ಣುತಪ್ಪಿಸಿಕೊಂಡೂ ಬೆಳೆದಲ್ಲಿ ಕೊಡಲಿ ಏಟು ಹಾಕಿಯಾದರೂ ಅದನ್ನು ನಾಶಮಾಡಲೇಬೇಕು. ಹಾಗೆ 'ಮತೀಯ ವಾದಿಗಳು' ಮುಸ್ಲಿಂ ಮುನಿಸಿಗೊಳಗಾಗಿ ಪೆಟ್ಟು ತಿಂದಾಗ ಅವರಿಲ್ಲದರೂ "ಅಧಿಕ ಪ್ರಸಂಗ" ಮಾಡಿ ಶಾಂತಿಗೆ ಬರೆ ಎಳೆದಲ್ಲಿ ರಾಜಕಾರಣಿಗಳು ಒಡನೆ ಅದನ್ನು ಭಯಂಕರವಾಗಿ ಖಂಡಿಸಬೇಕು. ಇಲ್ಲದಿದ್ದಲ್ಲಿ ಅವರ ಪಕ್ಷಕ್ಕೆ ಜಾತೀಯತೆಯ ಅಥವಾ ಮತೀಯತೆಯ ಕೆಸರು ತಗಲಿಬಿಡುತ್ತದೆ.

ಇದನ್ನೇ ಹಿಂದೆ ಅಹಮ್ಮದಾಬಾದಿನ ಅಂತರಿ ಕರ್ಣಾವತಿಯ ಕರ್ಣ ಕಠೋರ ಕಥೆಯಲ್ಲೂ ಕಂಡದ್ದು. ಇದೀಗ ಬಿಹಾರಿನ ಭೀಕರ ಬಡಿದಾಟಕ್ಕೂ ಅದೇ ಅವಸ್ಥೆ. ಬಿಹಾರಿನ ಹಲವಾರೆಡೆಗಳಲ್ಲಿ 'ಸೆಕ್ಯೂಲರಿಸಂ ಪ್ರಸಾರಕರು' ಶ್ರೀರಾಮನವಮಿ ಉತ್ಸವವನ್ನು ತಡೆಗಟ್ಟಲು ಪ್ರಯತ್ನಿಸಿದಾಗ "ಕಿಡಿಗೇಡಿಗಳು", ಶಾಂತಿಗೆ ಭಂಗತರುವ ಮತೀಯವಾದಿಗಳು ಅದನ್ನು ಎದುರಿಸುವ ಹುಚ್ಚುತನ, ದಾರ್ಷ್ಟ್ಯ ತೋರಿಸಿದರು. ಮಂತ್ರಿಮಂಡಲ ಕಣ್ಣುಮುಚ್ಚಿಕೊಂಡು, ಬಾಯಿಮುಚ್ಚಿಕೊಂಡು, ಕಿವಿ ಮುಚ್ಚಿಕೊಂಡು ಕೂತುಕೊಳ್ಳಲು ಸಾಧ್ಯವೇನು? ಆದುದರಿಂದಲೇ ಅಹಮ್ಮದಾಬಾದ ಅಲ್ಲೋಲ ಕಲ್ಲೋಲವಾಗಿದ್ದಾಗ ಇಂದಿರಾಜೀಯ ಇಷ್ಟಕ್ಕನುಸಾರವಾಗಿ ಕೆಲ ಸಂಸದ್ ಸದಸ್ಯರು ಅಲ್ಲಿಗೆ ಧಾವಿಸಿ "ಮತೀಯವಾದಿ"ಗಳಿಗೆ ಛೀಮಾರಿ ಹಾಕಿ ಬಂದಿದ್ದಾರೆ.

ಬಿಹಾರಿಗೆ ಹೋಗಿದ್ದ ಜಂತರ 'ಸತ್ಯಶೋಧಕ' ವರ್ಗದ ಪೂರ್ಣ ವರದಿ ಪ್ರಕಟವಾಗಿರುವದಿಲ್ಲ. ಕೆಲ ವಿಷಯಗಳನ್ನು ಅವರು ಆಗಾಗಲೇ ಪತ್ರಿಕೆಗಳಿಗೆ ಕೊಟ್ಟಿದ್ದಾರೆ. ಹೊಸ ಕಾಂಗ್ರೆಸ್ಸಿಗೆ ಈ 'ಪ್ಲಾಟ್'ವೇನೂ ಹೊಸತಿರುವದಿಲ್ಲ. ಎಲ್ಲಾ ಅವ ಮೇಲೆ ಸ್ಥಳದಲ್ಲಿ ವಿಚಾರಣೆ ನಡೆಸಲು ಹೊಸ ಕಾಂಗ್ರೆಸ್ಸಿನ ಒಂದು ಹಳೆಯ ಗುಂಪು ಹೋಗಿತ್ತು, ಅದಕ್ಕೆ ರಣಧೀರ ಸಿಂಘ ಮುಂದಾಳತ್ವ ವಹಿಸಿಕೊಂಡಿದ್ದರು. ಅವರೊಡನೆ ಕಮ್ಯುನಿಸ್ಟ ಪಾರ್ಟಿಯ ಇಷಾಕ್ ಸಂಬಾಳಿ ಮತ್ತು ಜಮಾಯತ್ ಉಲ್ ಉಲೇಮಾ ಹಿಂದಿನ ಯಾತ್ರಿ ಕೂಡಾ ಹೋಗಿದ್ದರು. ಇಂದಿರಾಜೀಯ ಈ ತ್ರಿವರ್ಣ ಮಾರ್ಕ್ಯೋಜಕರಿತ್ತಿರುವ ವರದಿ ಅತಿವರ್ಣ ರಂಜಿತವಾಗಿಯೇ ಇರಬೇಕು. ಅದರ ಸ್ಯಾಂಪಲ್ ಮಾರುಕಟ್ಟೆಗೆ ಬಂದಿರುತ್ತದೆ. ಅಲ್ಲಿ ಗಲಾಟೆ ನಡೆದು ಹತ್ತು ದಿನಗಳಾದ ಮೇಲೆ ರಣಧೀರ ಸಿಂಗರ ಸಿಂಹನಾದ ಕೇಳಿ ಬಂತು.

ಬಿಹಾರಿನ ಭೀಕರ ದುರ್ಘಟನೆಗೆ ನಕ್ಸಲಬಾರಿಗಳು ಪಾಕಿಸ್ಥಾನೀ ಬ್ಯಾಂಡರಳೂ ಕಾರಣವೆನ್ನುವ ಸ್ವರ ಸಂಸದ್‌ನಲ್ಲೂ ಕೇಳಿ ಬಂದಿತ್ತು. ಇದನ್ನು ಅಲ್ಲಗಳೆದ ಧೀರರೇ ರಣಧೀರ ಸಿಂಘರು. ಲೋಕ ಸಭೆಯಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಉಮಾನಾಥರು ಸ್ವಾರಸ್ಯಕರವಾದ ಕಥೆಯನ್ನು ಹೇಳಿದ್ದಾರೆ ಶ್ರೀರಾಮನವಮಿಯುತ್ಸವದಲ್ಲಿ ಮುಸ್ಲಿಮರೂ ಉತ್ಸಾಹದಿಂದ ಎಂದಿನಂತೆ ಭಾಗವಹಿಸಿದ್ದರು. ಅಲ್ಲಿ ಭೀಕರ ಪರಿಸ್ಥಿತಿಯನ್ನುಂಟು ಮಾಡಲು ಜಾತೀಯವಾದಿ ಹಿಂದೂಗಳ, ಆ ರೀತಿ ಮಾಡಿದ್ದಾರೆ. ಅದರೂ ಮಸೀದಿಯೊಳಗೆ ಅಡಗಿಕೊಂಡಿದ್ದು ಮೆರವಣಿಗೆಯ ಮೇಲೆ ಗುಂಡು ಬಿಸಾಡಿದರೆಂದು ಅವರು ಗುಂಡು ಹಾರಿಸಲು ಸಿದ್ಧರಿಲ್ಲ.

ಕೇಂದ್ರದ ಗೃಹಮಂತ್ರಿ ಚವಾನರು ಬಿಹಾರಿನ ವಿಷಯ ಲೋಕ ಸಭೆಯಲ್ಲಿ ಹೇಳಿದಂತೆ ಅಲ್ಲಿಯ ರಾಜ್ಯ ಸರಕಾರವು ಸೂಕ್ತ ಎಚ್ಚರಿಕೆ ವಹಿಸಿತ್ತು. ಆದರೆ, ಮೆರವಣಿಗೆ ಇಕ್ಕಟ್ಟಿನ ಸ್ಥಳಕ್ಕೆ ಬಂದೊಡನೆ ಗುಂಡು ಹಾಕಲಾಗುತ್ತದೆನ್ನುವದನ್ನು ಅದು ಮುಂಚಿತವಾಗಿ ನಿರೀಕ್ಷಿಸಿದ ಕಾರಣ ದುರ್ಘಟನೆ ನಡೆಯಿತು. ಮೆರವಣಿಗೆಯಲ್ಲಿ ಮಹಿಳೆಯರೂ ಮಕ್ಕಳೂ ಇದ್ದ ಕಾರಣ ಆ ರೀತಿ ಆದೊಡನೆ ಅಲ್ಲಿದ್ದವರು ಜೀವ ಉಳಿಸಿಕೊಳ್ಳಲು ಸಿಕ್ಕಿಬಿಟ್ಟ ಓಡಿಹೋಗುವ ರಭಸದಲ್ಲಿ ಉತ್ಸವ ಮೂರ್ತಿಯನ್ನೂ ಬಿಟ್ಟು ಹೋಗಿದ್ದರು. ಅದಕ್ಕೆ ಪೆಟ್ಟಾಗಿದೆ. ಇದಕ್ಕೆ ಮುನ್ಸೂಚನೆಯಾಗಿ ಅಲ್ಲೇನೂ ಜಾತೀಯ ಎಳೆದಾಟ ಇದ್ದಿರಲಿಲ್ಲ. ಇದು ಎಪ್ರಿಲ್ ಇಪ್ಪತ್ತರಂದು.

ಇಂತಹ ಚವಾನರ ಮಾತು "ಸೆಕ್ಯೂಲರ್ ವಾದಿ"ಗಳಿಗೆ ರುಚಿಸಲಿಲ್ಲವೆಂದು ಕಾಣುತ್ತದೆ. ಒಡನೆ ಹೊಸ ಕಾಂಗ್ರೆಸ್ಸಿನ ಗುಂಪೊಂದು ರಣಧೀರ ಸಿಂಘರ ನೇತೃತ್ವದಲ್ಲಿ ಅಲ್ಲಿಗೆ ಹೋಯಿತು. ಅದರ ವರದಿಗೂ ಚವಾನರ ಮಾತಿಗೂ ಅಜಗಜಾಂತರವಿದೆ. ಆದರೆ ಉಮಾನಾಥ ಹಾಗೂ ಸಂಬಾಳಿಯವರ ಮಾತಿಗೆ ಸಾಮ್ಯವಿದೆ, ಎಲ್ಲಾ ಒಂದೇ ಪ್ರತಿ. ಎಪ್ರಿಲ್ ಇಪ್ಪತ್ತರಂದೇ ಲೋಕಸಭೆಯಲ್ಲಿ ಪ್ರಕಾಶವೀರ ಶಾಸ್ತ್ರಿಯವರು ಮಾತಾಡುವಾಗ ಬಿಹಾರಿನ ಭೀಕರ ಘಟನೆಗೆ ನಕ್ಸಲ್ ಬಾರಿಗಳು ಕಾರಣವೆಂದು ಹೇಳಿದರು. ಅದಕ್ಕೆ ರಣಧೀರ ಸಿಂಘರ ಗುಂಪು ಕೊಡುವ ಉತ್ತರವನ್ನಿತ್ತಿರುತ್ತದೆ! — ಬಿಹಾರಿನ ಘಟನೆಯ ಹಿಂದುಗಡೆ ಅನ್ಯರಾಷ್ಟ್ರಗಳ ಕೈವಾಡವಾಗಲೀ ನಕ್ಸಲೈಟರಾಗಲೀ ಇರುವದಿಲ್ಲವೆಂಬುದು ನನಗೆ ಮನವರಿಕೆ ಆಗಿರುತ್ತದೆಂದಿದ್ದಾರೆ ರಣಧೀರ ಸಿಂಘರು. ಯಾರು ಸತ್ಯ, ಯಾರು ಸಕ್ಕ ಇದರಲ್ಲಿ?

ಚವಾನರಿಗೇನೇ ರಣಧೀರ ಸಿಂಘರು ಸವಾಲಿತ್ತಿದ್ದಾರೆ. ಲೋಕ ಸಭೆಯಲ್ಲಿ ವಿವರಗಳನ್ನೀಯುವಾಗ ಗೃಹಮಂತ್ರಿ ಚವಾನರು ಸಪೂರ ಓಣಿಯಲ್ಲಿ ಮೆರವಣಿಗೆ ಹೋಗುತ್ತಿದ್ದಾಗ ಬಾಂಬು ಬಿಸಾಡಿದ್ದರಿಂದ ಅವ್ಯವಸ್ಥೆ ಅಲ್ಲದೆ ಗೊಂದಲ ಉಂಟಾಯಿತು

(ಮುಂದಿನ ಪುಟ ನೋಡಿ)

ಕೂದಲು ಉದುರುವಿಕೆ

ಪಂಡಿತ ಜಿ. ಪಿ. ಕಿಶನರಾಯ್

ಕೂದಲುದುರುವ ಕಾಯಿಲೆಯು ಈಗ ಭರದಿಂದ ಬೆಳೆಯುತ್ತಿರುವಂತೆ ತೋರುತ್ತಿದೆ. ಗಂಡಸರನೇಕರಿಗೆ ಆ ಕಾಯಿಲೆಯು ಹಿಂದಿನ ಕಾಲಕ್ಕೂ ಇರುತ್ತಿತ್ತು. ಆದರೀಗ ಹೆಂಗಸರೂ ಚಿಕ್ಕಮಕ್ಕಳೂ ಕೂಡ ಅದರ ದಾಳಿಗೆ ಗುರಿಯಾಗುತ್ತಿದ್ದಾರೆ.

ಕೂದಲು ಅದರಲ್ಲಿಯೂ ವಿಶೇಷವಾಗಿ ತಲೆಕೂದಲು ಉದುರುವ ಕಾಯಿಲೆಗೆ ಉಪಾಯವನ್ನು ತಿಳಿಸುವುದಕ್ಕಿಂತ ಮುಂಚೆ ಆ ವಿಷಯದ ಕೆಲವು ಭ್ರಮೆಗಳಿಂದ ಮುಕ್ತರಾಗಬೇಕು. ಉದಾಹರಣಾರ್ಥ ಬುದ್ಧಿಯ ಕೆಲಸವನ್ನು ಹೆಚ್ಚಾಗಿ ಮಾಡುವವರಿಗೆ ತಲೆಗೂದಲ ಉದುರುತ್ತವೆ (ತಲೆ ಬೋಳಾಗುತ್ತದೆ) ಎಂಬ ಅಭಿಪ್ರಾಯವು ತುಂಬ ಪ್ರಚುರವಾಗಿದೆ. ಆದರೆ ಪಂಡಿತ ಜಗನ್ನಾಥ, ವಿಜ್ಞಾನಿ ಐನ್‌ಸ್ಟೀನ್, ಸ್ವಾಮಿ ವಿವೇಕಾನಂದ ಮುಂತಾದ ಮೇಧಾವಿಗಳ ತಲೆ ಬೋಳಾಗಿಲ್ಲವೆಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಬಹುತೇಕ ಮಾನಸಿಕ ಕಾಲ ಕಾಲಕ್ಕೆ ಎಣ್ಣೆ ಮಜ್ಜನ ಮಾಡಲಾಗದ್ದಕ್ಕೆ ತಲೆ ಬೋಳಾಗುವುದು, ಎಂದು ಅನೇಕರು ನಂಬಿದ್ದಾರೆ. ಆದರೆ ಸಮಾಜದಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದರೆ ಎಣ್ಣೆ ಮಜ್ಜನದ ಚಟ ಕೂಲಿಯವರಲ್ಲಿ [illegible] ಬೋಳು ತಲೆ ಹೆಚ್ಚಾಗಿದೆಯೆಂದು ಲಕ್ಷ್ಯಕ್ಕೆ ಬಾರದಿರದು. ಇವೆಲ್ಲಕ್ಕಿಂತ ಹೆಂಗಸರಲ್ಲಿ ಮಕ್ಕಳಲ್ಲಿ ಸಹ ತಲೆಕೂದಲು ಉದುರುವವರ ಸಂಖ್ಯೆ ಅತ್ಯಲ್ಪವಾಗಿರಲು ಕಾರಣವೇನ, ಎಂಬುದನ್ನು ನಾವು ವಿಚಾರ ಮಾಡಬೇಕು.

ತಲೆಗೂದಲಿನ ಉದುರುವಿಕೆಯು ಬರಿ ತಲೆಗೆ ಸಂಬಂಧಿಸಿದ ತೊಂದರೆಯಾಗಿರದೆ ಅದರ ಬೇರುಗಳು ತನುಮನಗಳ ಆಳದಲ್ಲಿರುವವೆಂಬ ಸತ್ಯವನ್ನು ಅರಿಯಬೇಕು. ಆ ದೃಷ್ಟಿಯಿಂದ ಕೂದಲು ಉದುರಲು ಇರುವ ಕಾರಣಗಳ ಸಂಖ್ಯೆ ಬಹು ದೊಡ್ಡದಾಗಿದೆ. ಅದರಲ್ಲಿಯ ಕೆಲವು ಕಾರಣಗಳು ಅಥವಾ ಹೊಸ ಬಗೆಗಿನ ನಮಗೆ ಆಶ್ಚರ್ಯವನ್ನುಂಟು ಮಾಡಬಹುದು. ಈ ಕಾರಣಗಳನ್ನು ತಿಳಿದುಕೊಳ್ಳುವಾ.

ಕೆಲವರ ತಲೆಗೂದಲು ಪೂರ್ವ ವಯಸ್ಸಿನಲ್ಲಿಯೇ ಉದುರುವುದು ಆನುವಂಶಿಕತೆಯ ಫಲವಾಗಿರುವುದು. ಅದು ರೋಗವಾಗಿರದೆ ಪ್ರಕೃತಿಗುಣವಾಗಿರುವುದು, ಅದು ಚಿಕಿತ್ಸೆಯಿಂದ ಗುಣವಾಗದು.

ಭಯಯುಕ್ತವಾದ ಚಿಂತೆಯಿಂದ ರಕ್ತವು ವಿಷಮಯವಾಗಿ ಕೂದಲುಗಳು ಪುಷ್ಟಿರಹಿತವಾಗಿ ಉದುರಲಾರಂಭಿಸುವವು. ಅದರಲ್ಲಿ ಚಿಂತಾ ಪರಿಹಾರವೇ ಚಿಕಿತ್ಸೆಯ ಮೊದಲ ಹೆಜ್ಜೆಯಾಗಿದೆ.

ಚಹಾ, ಕಾಫಿ, ಬೀಡಿ, ಸಿಗರೇಟ್, ನಸ್ಯ, ಮದ್ಯಗಳ ಅತಿಯಾದ ಚಟದಿಂದಲೂ ರಕ್ತವು ಕೂದಲುಗಳಿಗೆ ಪೋಷಣೆ ಕೊಡಲು ಅಸಮರ್ಥವಾಗುವುದು. ಆ ಚಟಗಳನ್ನು ಸಂಪೂರ್ಣ ಬಿಡದೆ ತೈಲ, ಲೇಪನಗಳಿಂದ ಪ್ರಯೋಜನವಾಗದ.

ಆಹಾರದಲ್ಲಿಯ ಪೌಷ್ಟಿಕಾಂಶಗಳು ಶರೀರದ ವಿವಿಧ ಧಾತು, ವಸ್ತುಗಳಿಗೆ ಮುಟ್ಟಬೇಕಾದರೆ ದಿನಾಲು ಸರಿಯಾದ ವ್ಯಾಯಾಮದ ಅಗತ್ಯವಿದೆ. ಅದಿಲ್ಲದೆ ಕೇಶಪೋಷಕ ತೈಲಗಳಾಗಲಿ, ಆಹಾರಗಳಾಗಲಿ, ನಿಷ್ಪ್ರಯೋಜಕವಾಗಿವೆ.

ಕೆಲವು ಶಾರೀರಿಕ ರೋಗಗಳಿಂದ ಕೂದಲ ಉದುರುವವು. ಅವುಗಳಲ್ಲಿ ಚರ್ಮರೋಗಗಳೂ ವ್ಯಭಿಚಾರ ಜನ್ಯರೋಗಗಳೂ ನಿದ್ರಾನಾಶವೂ ಹೆಂಗಸರಲ್ಲಿ ಮುಟ್ಟಿನ ವಿಕಾರಗಳೂ ಮುಖ್ಯವಾಗಿವೆ. ಅವನ್ನು ಮೊದಲು ಕಳೆದ ಕೊಳ್ಳಬೇಕು.

ಜೀರ್ಣಕ್ರಿಯೆಯು ಆಹಾರದಲ್ಲಿಯ ಪೌಷ್ಟಿಕಾಂಶಗಳನ್ನು ಕೂದಲಿಗೆ ಕೊಡುವುದು; ಮಲವಿಸರ್ಜನವು ತೃಪ್ತಿಕರವಾಗಿದ್ದರೆ ಕೂದಲಿನ ಬಲವನ್ನು ಅಪಹರಿಸುವ ವಿಷಗಳು ಶರೀರದಿಂದ ಹೊರಬೀಳುವವು. ಆದ್ದರಿಂದ ಮೊದಲು ಮಲಬದ್ಧತೆ, ಅಜೀರ್ಣಗಳನ್ನು ನೈಸರ್ಗಿಕ ಉಪಾಯಗಳಿಂದ ಪರಿಹರಿಸಬೇಕು.

ರಕ್ತವನ್ನು ಕೆಡಿಸುವಂತೆ ಅತಿಯಾದ ಸಿಹಿ, ಉಪ್ಪು, ಖಾರ-ಹುಳಿಗಳನ್ನೂ ಕರಿದ ತಿನಿಸುಗಳನ್ನೂ ಸೇವಿಸುವುದು ಕೂದಲಿಗೆ ಅಪಾಯಕಾರಕವಾಗಿವೆ. ಕೂದಲಿಗೆ ಪುಷ್ಟಿ ಕೊಡುವ ಅಂಶಗಳು ಆಹಾರದಲ್ಲಿ ಇಲ್ಲದಿರುವುದೂ ಬೋಳು ತಲೆಗೆ ಕಾರಣವಾಗಿದೆ.

ದುಷ್ಟ ತೈಲ, ಔಷಧಗಳೂ ಕೂದಲನ್ನು ಉದುರಿಸುವವು. ಸಣ್ಣಪುಟ್ಟ ಕಾಯಿಲೆಗಳಿಗೆ ಪ್ರಚಂಡ ಆ್ಯಂಟಿಬಾಯೊಟಿಕ್ಸ್ ಉಪಯೋಗಿಸುವುದರಿಂದಲೂ, ಜಾಹಿರಾತಿನ ಅಪಾಯಕರ ಕೇಶತೈಲಗಳಿಂದಲೂ ಕೂದಲಿಗೆ ಗಂಡಾಂತರವಿದೆ! ([illegible])

ಯಶಸ್ವೀ ಸ್ವಮೂತ್ರ ಪ್ರಯೋಗ

[ರಾಮಚಂದ್ರ ನೀಲಕಂಠರಾವ ಸೊನ್ನ (ಬೀಳಗಿ) B. Sc. II
ಬಸವೇಶ್ವರ ಸಾಯನ್ಸ ಕಾಲೇಜ, ಬಾಗಲಕೋಟೆ

ನಾನು ಕೈಕೊಂಡ ಸ್ವಮೂತ್ರ ಚಿಕಿತ್ಸೆಯ ವಿವರಗಳನ್ನು ಬಹಿರಂಗ ಪಡಿಸಿ ತಮ್ಮೊಡನೆ ಈ ಮಹಾಕಾರ್ಯದಲ್ಲಿ ಸಹಕರಿಸಲು ನನಗೆ ತುಂಬಾ ಸಂತೋಷವೆನಿಸುತ್ತದೆ.

ಸಣ್ಣವನಿದ್ದಾಗ ನನಗೆ ಯಾವದೇ ತರಹದ ರೋಗಗಳಿದ್ದಿಲ್ಲ. ಮಾಧ್ಯಮಿಕ ಶಿಕ್ಷಣದಲ್ಲಿ ಕಾಲಿಟ್ಟಾಗ ಮಳೆಗಾಲದಲ್ಲಿ ನನಗೆ ಚಳಿಯಾದಂತೆ ಅನಿಸಿ ಕೆಮ್ಮು ಆರಂಭವಾಯಿತು. ಸ್ಥಳೀಯ ಡಾಕ್ಟರರಿಗೆ ತೋರಿಸಲು ಔಷಧ ಗುಳಿಗೆ ಕೊಟ್ಟರು. ಆದರಿಂದ ೮-೧೦ ದಿನ ಗುಣ ಎನಿಸಿ ತಿರುಗಿ ಮರುಕಳಿಸುತ್ತಿತ್ತು. ಹೀಗೆ ೨-೩ ವರ್ಷ ಅನುಭವಿಸಿ ಕಾಲೇಜ ಶಿಕ್ಷಣಕ್ಕೆ ಬಂದಾಗ ಇನ್ನೂ ಹೆಚ್ಚಾಯಿತು. ಕಫ ಬಿದ್ದು ನಿಶ್ಶಕ್ತನವೆನಿಸುತ್ತಿತ್ತು.

ಆಗ ಹುಬ್ಬಳ್ಳಿಯ ಡಾಕ್ಟರರಿಗೆ ತೋರಿಸಲಾಗಿ ಎಕ್ಸರೇ ತೆಗೆದು ಏನೂ ತೊಂದರೆ ಇಲ್ಲ ಅಂದರು. ಮತ್ತು ಔಷಧ ಬರೆದುಕೊಟ್ಟರು. ಆದರಿಂದ ಗುಣ ಕಂಡು ಬರಲಿಲ್ಲ. ಮುಂದೆ ವಿಜಾಪುರದಲ್ಲಿ ಒಬ್ಬ ಸರ್ಜನ್ನರಿಗೆ ತೋರಿಸಲಾಗಿ ಅವರೂ ಎಕ್ಸರೇ ತೆಗೆದ ಆಪರೇಶನ್ ಮಾಡಿಸಿಕೊಳ್ಳಲು ಹೇಳಿದರು.

ಅವರ ಸಲಹೆಯಂತೆ ೧ ವರ್ಷ ಕಾಲೇಜ ಬಿಡಲು ನಿರ್ಧರಿಸಿ ಮಿರಜದ ವಾನಲೆಸ್ ಚೆಸ್ಟ ಹಾಸ್ಪಿಟಲ್ಲಿಗೆ ಹೋದೆ. ಅಲ್ಲಿ ೧ ತಿಂಗಳ ಇದ್ದ ನಂತರ ಬಲಭಾಗದಲ್ಲಿಯ ಪುಪ್ಪುಸದ ಆಪರೇಶನ್ ಮಾಡಿದರು.

ಆದರಿಂದಲೂ ಗುಣ ಕಂಡು ಬರಲಿಲ್ಲ. ೬ ತಿಂಗಳ ತರುವಾಯ ತಿರುಗಿ ಅಲ್ಲಿಗೆ ಹೋದಾಗ ತಿರುಗಿ ಆಪರೇಶನ್ ಮಾಡಿ ೩ ಎಲುಬುಗಳನ್ನು ಒಳಗೆ ಅದುಮಿದರು. ಮುಂದೆ ೧ ವರ್ಷದ ಮೇಲೆ ಮತ್ತೆ ಅದೇ ರೀತಿ ರೋಗ ತೊಡಗಿತು.

ಇದರಿಂದ ಒಟ್ಟು ಜೀವನದಲ್ಲಿಯೇ ನಿರುತ್ಸಾಹ ಬಂದು ಒಂದು ತರಹದ ಜಿಗುಪ್ಸೆ ಉಂಟಾಗಹತ್ತಿತು. ಅಷ್ಟರಲ್ಲಿ ಬಾಗಲಕೋಟೆಯಲ್ಲಿ ಒಬ್ಬ ಪ್ರಸಿದ್ಧ ಆಯುರ್ವೇದ ಪಂಡಿತರ ಪರಿಚಯವಾಗಿ ೮ ತಿಂಗಳು ಅವರಿಂದ ಔಷಧ ತೆಗೆದುಕೊಂಡೆ. ಆದರಿಂದಲೂ ಗುಣಾಂಶ ಕಂಡು ಬರಲಿಲ್ಲ. ಇಷ್ಟರಲ್ಲಿ ೬-೭ ಸಾವಿರ ರೂಪಾಯಿ ಖರ್ಚು ಮಾಡಿದ್ದಾಗಿತ್ತು.

ಮುಂದೆ ನನ್ನ ಸಹಪಾಠಿಗಳಾದ ಪಂಚಾಕ್ಷರಿ ಗಣಾಚಾರಿಯಿಂದ ಸ್ವಮೂತ್ರ ಪ್ರಯೋಗದ ಪರಿಚಯವಾಯಿತು. ಮತ್ತು ಸ್ವಮೂತ್ರದ ಪ್ರಚಾರಕ್ಕೆ ಬಂದ ಫಕೀರಾನಂದ ಪಾಟೀಲರು "ಮಾನವಮೂತ್ರ" ಪುಸ್ತಕ ಕೊಟ್ಟು ತುಂಬಾ ತಿಳಿಸಿ ಹೇಳಿದರು.

ಅನಂತರ ನಾನು ಮೂತ್ರ ಮಾಲಿಶ ಆರಂಭಿಸಿ ೩ ದಿನಗಳ ನಂತರ ಮೂತ್ರಪಾನ ಆರಂಭಿಸಿದೆ. ಇದೇ ರೀತಿ ೩೦ ದಿನಗಳವರೆಗೆ ನಡೆಸಲು ಕಫ ಬಿದ್ದು ಆರಾಮ ಅನಿಸಹತ್ತಿತು. ಆದರೂ ನಡುವೆ ಹೇಗೆ ಬಂದಂತೆ ಅನಿಸುತ್ತಿತ್ತು. ಆಗ ಮಾನವ ಮೂತ್ರ ಪುಸ್ತಕವನ್ನು ಓದಿದೆನೆಂದರೆ ಮನಸ್ಸು ಪುನಃ ಗಟ್ಟಿಯಾಗುತ್ತಿತ್ತು.

ಹೀಗೆ ಸ್ವಲ್ಪ ಗುಣ ಎನಿಸಹತ್ತಿದಾಗ ಬರೀ ಮೂತ್ರ ಹಾಗೂ ಜಲಪಾನ ಮಾಡುತ್ತ ೩ ದಿನ ಉಪವಾಸ ಮಾಡಿದೆ. ಅದರಿಂದ ಸಂಪೂರ್ಣ ಗುಣ ಆಯಿತು. ಈಗ ನಾನು ಎಲ್ಲ ತೊಂದರೆಗಳಿಂದ ಪಾರಾಗಿದ್ದೇನೆ. ಏನಾದರೂ ತೊಂದರೆ ಅನಿಸಿದೊಡನೆ ಈ ಪ್ರಯೋಗ ಅನುಸರಿಸುತ್ತೇನೆ. ಈ ರೀತಿ ನನಗೊಂದು ಸಂಜೀವಿನಿ ಕೈಗೆ ಹತ್ತಿದಂತಾಗಿದೆ. ನನ್ನ ರೋಗ ನಿವಾರಣೆಯ ಪೂರ್ಣ ಶ್ರೇಯಸ್ಸು ಈ ಚಿಕಿತ್ಸೆಗೆ ಸಲ್ಲುತ್ತದೆ.

ಪುಸ್ತಕದಲ್ಲಿ ಹೇಳಿರುವಂತೆ ಸ್ವಮೂತ್ರ ಪ್ರಯೋಗದ ಕಾಲದಲ್ಲಿ ಸರಿಯಾಗಿ ಪಥ್ಯ ಪಾಲಿಸಿದರೆ ಪೂರ್ಣ ಗುಣಹೊಂದಲಿಕ್ಕೆ ಸಹಾಯವಾಗುತ್ತದೆ. ಇದರಂತೆ ನಾನು ಇತರರಿಗೂ ತಿಳಿಸಿಕೊಡುತ್ತಿರುತ್ತೇನೆ.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
ಸಂಪುಟ ೪೯
ಸಂಚಿಕೆ ೩೬
VOL. 49
No. 36

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೧೪—೫—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನಿಕ್ಸನ್ ನಿಲುವು

ಕಾಂಬೋಡಿಯದೊಳಕ್ಕೆ ನಿಕ್ಸನ್ನರು ಸಶಸ್ತ್ರ ಸೇನೆ ರವಾನಿಸಿ, ಕಾರ್ಯಾಚರಣೆಗಿಳಿಯುವಂತೆ ಆದೇಶ ನೀಡಿ, ಹೊಸ ಅಧ್ಯಾಯವೊಂದಕ್ಕೆ ಶ್ರೀಗಣೇಶ ಹಾಡಿದರು. ಕೆಂಪು ಚೀನಾದರ ಅಧ್ಯಕ್ಷ ಸಿಹನೂಕರನ್ನು ಗದ್ದುಗೆಯಿಂದ ಇಳಿಸಿದ ಮಂದವಾದಿ ಲಾನ್‌ನಾಲರ ಗದ್ದುಗೆಯನ್ನು ಭದ್ರಪಡಿಸಿ ಸ್ಥಿರಾಪಡಗೊಳಿಸುವುದೇ ನಿಕ್ಸನ್ ನಿರ್ಧಾರದ ಧ್ಯೇಯ ಹಿನ್ನೆಲೆ. ವಿಯತ್ನಾಮದಲ್ಲಿ ಇದೇ ರೀತಿಯಲ್ಲಿ ಅಂತರ್ಯುದ್ಧದಲ್ಲಿ ಪಾಲ್ಗೊಂಡ ಅಮೆರಿಕೆ ಇನ್ನೂ ಅಲ್ಲಿಂದ ಕಾಲು ಕಿತ್ತಿಲ್ಲ. ಸಾವಿರಾರು ಜನರ ವಿತ್ತ-ಜೀವಿತಗಳಿಗೆ ಮಾರಕವಾದ, ಜಾಗತಿಕ ಶಾಂತಿಗೆ ಭಂಗ ತಂದ ಅಮೆರಿಕೆಯ ಅಧ್ಯಕ್ಷರ ಪ್ರತಿಷ್ಠೆಯ ಹೋರಾಟವಾಗಿ ಪರಿಣಮಿಸಿದ ವಿಯತ್ನಾಮ ಸಮರವು ಒಂದು ರೀತಿಯಲ್ಲಿ ಮುಂದುವರಿಯುತ್ತಿದ್ದಂತೆಯೇ ಕಾಂಬೋಡಿಯಾ ಸಮರಾರಂಭವಾದದ್ದು ಅಮೆರಿಕೆಯ ದುರದೃಷ್ಟ, ಜಗತ್ತಿನ ದುರ್ವಿಧಿ.

ತನ್ನ ಕೈಗೊಂಬೆ ಸರಕಾರಗಳನ್ನು ಉಳಿಸುವುದು ರಾಜ್ಯದ ಅಗ್ರ ಹಿತೋದ್ದಿಷ್ಟತರ ಹುಟ್ಟು ಗುಣ. ಹಾಗಾಗಿ ಕಾಂಬೋಡಿಯಾದ ಅಂತರ್ಯುದ್ಧ ಅಥವಾ ಅಧಿಕಾರಕ್ಕಾಗಿ ನಡೆದ ಹೋರಾಟದಲ್ಲಿ ನಿಕ್ಸನ್ ಆಸಕ್ತರಾದರು. ತಮ್ಮ ಸೇನೆಯು ಅಧಿಕಕಾಲ ಹೋರಾಡುವುದಿಲ್ಲವೆಂದವರು ತಮ್ಮನ್ನು ಕಾಣುವಂದ ಕಾಂಗ್ರೆಸ್ ಸದಸ್ಯರಿಗೆ ಭರವಸೆ ನೀಡಿದ್ದಾರೆ. ಜೂನ್ ತಿಂಗಳೊಳಗೆ ಸೇನೆಯು ತನ್ನ ಕೆಲಸ ಮುಗಿಸಿ ಮರಳುವ ನಿರೀಕ್ಷೆ ಅವರದ್ದು. ಸೇನೆಯ ಕೆಲಸವೇನು? ಈಗ ಸಿಹನೂಕರ ಲಾನ್‌ನಾಲರ ಸೇನೆ-ಜನತೆಯ ನಡುವೆದ್ದಿರುವ ಯುದ್ಧದಲ್ಲಿ ಲಾನ್‌ನಾಲರ ತಲೆಯ ಮೇಲೆ ಕಿರೀಟವುಳಿಸುವುದು. ಆದರೆ, ಸದ್ಯದ ಪರಿಸ್ಥಿತಿಯನ್ನವಲೋಕಿಸುವಾಗ ಈ ಕಾರ್ಯ ಇಷ್ಟು ಬೇಗನೇ ಮುಗಿಯುವುದಿಲ್ಲ. ದೇಶ ಭ್ರಷ್ಟ ಸಿಹನೂಕರು ಪೀಕಿಂಗಿನಲ್ಲೇ ರಾಷ್ಟ್ರೀಯ ಸರಕಾರವೊಂದನ್ನು ರಚಿಸಿ ತಾನೇ ಕಾಂಬೋಡಿಯಾದ ಅಧ್ಯಕ್ಷರೆಂದು ಘೋಷಿಸಿಕೊಂಡಿದ್ದಾರೆ. ಇವರ ಸರಕಾರವನ್ನು ಕೆಂಪು ಚೀನಾದ ಕೆಲವು ದೇಶಗಳು ಮನ್ನಿಸಿವೆ. ಕಾಂಬೋಡಿಯಾದ ಲಾನ್‌ನಾಲರ ಸರಕಾರದೊಡನೆ ಸಂಬಂಧವನ್ನು ಕಡಿದುಕೊಂಡಿವೆ. ಕೆಂಪು ಚೀನಾದ ಅಧಿನಾಯಕರು ತಮ್ಮ ಪ್ರಧಾನ ಸೇನಾಪತಿ ಮತ್ತು ಸಿಹನೂಕರೊಡನೆ ರಹಸ್ಯ ಮಾತುಕತೆ ನಡೆಸುತ್ತಿದ್ದಾರೆಂಬುದರಿಂದ ಸಿಹನೂಕರ ಸಹಾಯಕ್ಕೆ ಮಾವೋ ಸರಕಾರ ಸದಾ ಸಿದ್ಧವೆಂಬುದು ನಿಸ್ಸಂದಿಗ್ಧ. ಅದು ಸೇನೆಯನ್ನು ಕಳಿಸುವುದಿಲ್ಲವಾದರೂ ಲಾನ್‌ನಾಲರ ವಿರುದ್ಧ ಹೋರಾಡಲು ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ನಿಃಶುಲ್ಕ ಸರಬರಾಜು ಮಾಡುತ್ತದೆ. ಹೀಗೆ ಹೋರಾಟ ಉಗ್ರವಾಗುವ ಲಕ್ಷಣಗಳೇ ಅತಿರೇಕವಿದೆ. ಬೇಗನೇ ಮುಗಿದು ಹೋಗಲಿದ್ದ ಕಾಂಬೋಡಿಯಾ ಅಂತರ್ಯುದ್ಧ ದೀರ್ಘಕಾಲ ಮುಂದುವರಿಯುವಂತೆ ಮಾಡಲೆಂದೇ ಅಮೆರಿಕನ್ ಚಂಚು ಪ್ರವೇಶವಾಯಿತೆನ್ನಬೇಕು.

ಆದರೆ, ನಿಕ್ಸನ್ನರು ತಮ್ಮ ಹಿಂದೆ ಬಲವಾದ ವಿರೋಧವನ್ನಿಟ್ಟುಕೊಂಡಿದ್ದಾರೆ. ಅಮೆರಿಕನ್ ಕಾಂಗ್ರೆಸಿನ ಸದಸ್ಯರ ಒಂದಂಶ ನಿಕ್ಸನ್ ನೀತಿಯನ್ನು ವಿರೋಧಿಸಿದೆ; ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಅಸಮಾಧಾನ ಪ್ರದರ್ಶನಗಳ ರೂಪದಲ್ಲಿದ್ದರಿಂದ, ಅವನ್ನು ಮುಚ್ಚಬೇಕಾಗಿ ಬಂತು. ಅಮೇರಿಕನ್ ಪ್ರಜೆಗಳಲ್ಲೂ ಈ ಹೋರಾಟದಲ್ಲಿ ಪಾಲು ಅಪೇಕ್ಷಣೀಯ, ಅಮೆರಿಕನ್ ಹಿತಕ್ಕೆ ಬಾಧಕವೆಂಬ ಭಾವನೆಯೂ ಮೂಡಿದೆ. ಆದರೂ ನಿಕ್ಸನ್ ಜನಕ್ಕೆ ವಿಶ್ವಾಸ ನೀಡುತ್ತಾರೆ. ಆದರೂ ಪ್ರಶ್ನೆಯೊಂದೇ- ಯಾರಿಗಾಗಿ ಯಾರು ವಿತ್ತ ಜೀವಿತಗಳನ್ನು ಪಣಕ್ಕೊಡ್ಡಬೇಕು? ಅಮೆರಿಕನ್ ಸೈನಿಕರೂ ಇದೇ ಪ್ರಶ್ನೆಯನ್ನು ಕೇಳುತ್ತಾರೆ. ಅವರು ನಿರುತ್ಸಾಹಿಗಳಾಗಿದ್ದಾರೆ. ಯಾವ ಅಮೆರಿಕನ್ನನಿಗೂ ಬೇಡವಾದ ಕಾಂಬೋಡಿಯಾದ ಸಮರದಲ್ಲಿ ತನ್ನ ಪಾಲನ್ನು ನಿಕ್ಸನ್ ತಕ್ಷಣ ಹಿಂದೆಗೆದುಕೊಳ್ಳಬೇಕು; ವಿದೇಶೀ ಶಕ್ತಿಗಳು ಅಲ್ಲಿಂದ ಹೊರ ನಡೆಯಬೇಕು. ಲಾನ್‌ನಾಲ್—ಸಿಹನೂಕರಲ್ಲಿ ಯಾರು ಬೇಕೆಂಬುದನ್ನು ಮಾತಿನಿಂದ, ತಪ್ಪಿದರೆ ಶಕ್ತಿಯಿಂದ ಕಾಂಬೋಡಿಯನ್ನರೇ ನಿರ್ಧರಿಸಿಕೊಳ್ಳಲಿ. ಇಲ್ಲವಾದರೆ, ಮತ್ತೊಂದು ವಿಯತ್ನಾಮ ಸೃಷ್ಟಿಯಾಗುತ್ತದೆ; ಜಾಗತಿಕ ಶಾಂತಿಯನ್ನು ಇನ್ನೂ ಕಲಕುತ್ತಿರುತ್ತದೆ.

ನಾಲ್ಕನೆಯ ಮಗು

ಕುಟುಂಬಯೋಜನೆ ಅಂಗೀಕೃತ ರಾಷ್ಟ್ರೀಯ ನೀತಿ. ಇದನ್ನು ಅನುಷ್ಠಾನಕ್ಕೆ ತರಲು ಯಾವುದೇ ವಿಧಾನವನ್ನಾದರೂ ಸರಕಾರ ಹಿಡಿಯುತ್ತದೆ ಎಂಬುದರಿಂದ ಇದರ ಅನಿವಾರ್ಯತೆಯ ಬಗ್ಗೆ ಅವರ ಕಳಕಳಿ ಮೆಚ್ಚಬೇಕಾದದ್ದೇ. ಹೊಟ್ಟೆ ತುಂಬುವಲ್ಲಿನ ಕಳಕಳಿಯಿಂದ ಕೋಳಿ-ಮೀನು ಇ. ಇ. ತಿನ್ನುವುದನ್ನು ಸಮಾಜ ವಿರೋಧಿಸುವುದಿಲ್ಲ; ಆದರೆ, ಮನುಷ್ಯನನ್ನೇ ನುಂಗಿದರೆ? ಹಿಂದಿನ ಕಾಲದ ರಾಕ್ಷಸರ ನೆನಪಾಗುತ್ತದೆ.

ಕುಟುಂಬ ಯೋಜನೆಗೆ ಎಲ್ಲಿಲ್ಲದ ಉತ್ತೇಜನ ನೀಡುವ ಹೊಸ ಮಾರ್ಗವೊಂದನ್ನು ರಾಜ್ಯ ಸರಕಾರ ಕಂಡುಕೊಂಡಿದೆ! ೧೯೭೦ರ ಜೂನ್ ೧ರ ನಂತರ ಒಟ್ಟು ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವ ಹೆತ್ತವರ ಮಕ್ಕಳಿಗೆ ಶಿಕ್ಷಣ ರಿಯಾಯತಿಯಿಲ್ಲ. ಇದರ ಉದ್ದೇಶ ಹೆತ್ತವರು ಮೂರೇ ಮಕ್ಕಳನ್ನು ಹೊಂದಿ ತೃಪ್ತಿಪಟ್ಟು ಕುಟುಂಬ ಯೋಜನೆಗೆ ಗುರಿಯಾಗಬೇಕು ಎಂಬುದು. ಈ ನಿಯಮವು ಜ್ಯಾರಿಯಲ್ಲಿ ಬರುವುದೆಂಬುದರ ಕಲ್ಪನೆಯೇ ಇಲ್ಲದೆ ಈಗ ನಾಲ್ಕನೆಯ ಬಸುರಲ್ಲಿರುವ ಮಗು ನಿಜಕ್ಕೂ ದುರದೃಷ್ಟಶಾಲಿ. ಈ ಮಗುವಿನ ಅದೃಷ್ಟದ ಬಾಗಿಲನ್ನು ಕೊನೆಯ ಗಳಿಗೆಯಲ್ಲಾದರೂ ಸರಕಾರ ತೆರೆದೀತು. ಆದರೆ, ಇನ್ನು ಐದು ವರ್ಷದ ನಂತರ, ತಾಯ್ತಂದೆಗಳಿಗೆ ನಾಲ್ಕನೆಯ ಮಗು ಹುಟ್ಟಿದ ಗಳಿಗೆಯಿಂದ ಆ ಹೆತ್ತವರ ಮಕ್ಕಳ ಶಿಕ್ಷಣ ರಿಯಾಯತಿ ಹೊರಟು ಹೋಗುತ್ತದೆ. ನಾಲ್ಕನೆಯ ಮಗು ತನ್ನ ಅಣ್ಣ ಅಕ್ಕಂದಿರ ಶಿಕ್ಷಣದ ಮುಂದೆ ಪರ್ವತವಾಗುತ್ತದೆ.

ಶಿಕ್ಷಣ ರಿಯಾಯತಿ ಇಲ್ಲವಾದಾಗ ಶಾಲಾ ಶುಲ್ಕಾದಿಗಳನ್ನು ಹೆತ್ತವರು ತೆರಬೇಕಾಗುತ್ತದೆ; ಇದು ಅಪ್ರತ್ಯಕ್ಷ ದಂಡ. ಕುಟುಂಬ ಯೋಜನೆಯ ವಿಜಯ ಸತಾಕೆಯೆಂದು ಸರಕಾರ ಹೇಳಬಹುದು. ನಾಲ್ಕನೆಯ ಮಗುವಾಗಿ ಹುಟ್ಟಿದ್ದರಲ್ಲಿ ತಾಯ್ತಂದೆಗಳ 'ಮಾಡಿರಬಹುದಾದ ಅಪರಾಧ'ದ ನೆಲೆಯಲ್ಲಿ ಅವರ ಮಕ್ಕಳ ಮೇಲೆ ಅಪ್ರತ್ಯಕ್ಷ ಗದಾಪ್ರಹಾರ ಮಾಡಿ ಅವರನ್ನು ಶಿಕ್ಷಣದಿಂದ ವಂಚಿತಗೊಳಿಸುವುದು ನ್ಯಾಯವಾದೀತೆ? ಉಚಿತ ಶಿಕ್ಷಣ ಬಡವರಿಗೆ ಬಂದಿರುವುದರಿಂದಲೇ ಬಡವರೆಲ್ಲ ಶಿಕ್ಷಣ ಪಡೆಯಲು ಮುಂದಾಗುತ್ತಿದ್ದಾರೆ. ಈ ರಿಯಾಯತಿ ಹೀಗೆಯೇ ರೀತಿಯಿಂದ ಹೊರಟು ಹೋಯಿತೆಂದರೆ, ಇವರೆಲ್ಲ ಶಾಲೆಗೆ ಹೋದಾರೆ? ತಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆಂಬ ಭಯದಿಂದ ಹೆತ್ತವರು ಕುಟುಂಬ ಯೋಜನೆಗೊಳಗಾಗುತ್ತಾರೆಂದು ನಂಬುವುದು ಮೂರ್ಖತನ. ನಾಳೆಯ ಭವಿಷ್ಯ-ಭರವಸೆಗಳೇ ನಶಿಸಿ ಹೋಗುತ್ತಿರುವ ನಮ್ಮ ಶ್ರೀಸಾಮಾನ್ಯ ಮಕ್ಕಳ ಶಿಕ್ಷಣದ ಬಗ್ಗೆ ತಲೆಗೆ ಹಚ್ಚಿಕೊಳ್ಳುವುದು ಅಸಂಭವ.

ವ್ಯಭಿಚಾರದಲ್ಲಿ ಹುಟ್ಟಿದ ಮಗುವನ್ನೂ ಉದ್ಧರಿಸಬೇಕೆನ್ನುವ ಉದಾರಿಗಳಾದ ನೀವು ನಾಲ್ಕನೆಯ ಮಗುವನ್ನು ಕುಟುಂಬ ಶಿಕ್ಷಣ ವಂಚಕನೆಂಬ ಹೆಸರಿಗೆ ಗುರಿಮಾಡುವುದು ವಿವೇಕಯುಕ್ತವಾದುದು, ಜನ ಚಳುವಳಿಯೇಳುತ್ತದೆ.

ತಾ. 5-5-70 ರಂದು
ನಮ್ಮ 6ನೇ ವರ್ಷದ
ಹುಟ್ಟು ಹಬ್ಬದ ಪ್ರಯುಕ್ತ ನಮ್ಮೆಲ್ಲ
ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ
ಹೃತ್ಪೂರ್ವಕ ವಂದನೆಗಳು
ಹೋಟೇಲ್ ಸತ್ಕಾರ್
(ಹೈಕ್ಲಾಸ್ ಬೋರ್ಡಿಂಗ್, ಲಾಡ್ಜಿಂಗ್ ಮತ್ತು ಉಪಾಹಾರ ಗೃಹ)
ನಂ. 9, ಮಿಶ್ಶನ್ ರಸ್ತೆ, ಸಿಟಿ ಕಾರ್ಪೊರೇಷನ್ ಆಫೀಸಿನ ಹಿಂದೆ
ಬೆಂಗಳೂರು-27.
ಫೋನ್: 29567 ಅಥವಾ 28337 ಟೆಲಿಗ್ರಾಂ: 'HOSTSATKAR'
ನಗರದ ಮಧ್ಯದಲ್ಲಿದೆ. ಬಸ್‌ಸ್ಟ್ಯಾಂಡ್, ಬ್ಯಾಂಕುಗಳು, ಕೋರ್ಟುಗಳು ಕಚೇರಿಗಳು ಮತ್ತು ವ್ಯಾಪಾರ ಸ್ಥಳಗಳಿಗೂ ಬಹಳ ಸಮೀಪದಲ್ಲಿದೆ. ಎಲ್ಲಾ ಸಿಂಗಲ್ ಮತ್ತು ಡಬ್ಬಲ್ ರೂಮುಗಳಿಗೆ ಬಾತ್‌ರೂಂ ಹೊಂದಿರುತ್ತವೆ. (24 ಗಂಟೆ ಬಿಸಿನೀರು ಸರಬರಾಜು ಉಂಟು.) ಟೆಲಿಫೋನ್ ಸಮೇತ ರೂಂಗಳು, ಕಾರ್ ಪಾರ್ಕಿಂಗ್ ವ್ಯವಸ್ಥೆ ಇದೆ. ರುಚಿ ರುಚಿಕರವಾದ ತಿಂಡಿ ತಿನಿಸುಗಳು, ಭೋಜನ, ಮಾಡರೇಟ್ ದರ, ಶೀಘ್ರ ಮತ್ತು ವಿನಯದ ಉಪಚಾರ.
ಪ್ರೊ: ಟಿ. ಸಂಜೀವ ಶೆಟ್ಟಿ ಎಂಡ್ ಸನ್ಸ್

ರಾವಣ ಅನಾಥರಿಗೆ
ಸರಕಾರಿ ವಿಶ್ವನಾಥನ ರಕ್ಷೆ

ಕಾಂಗ್ರೆಸ್ ವಿಭಜನಾ ಬಳಿಕ ರಾಜ್ಯ ಸಭೆ—ವಿಧಾನ ಪರಿಷತ್ತುಗಳಿಗೆ ದ್ವೈವಾರ್ಷಿಕ ಚುನಾವಣೆ. ಒಟ್ಟಿನಲ್ಲಿ ಇಂಡಿಕೇಟಿನ ಮುಖಭಂಗ; ಸಿಂಡಿಕೇಟಿನ ಗರ್ವಭಂಗ. ಅನಂತರ ಹಲವೆಡೆ ವಿಧಾನ ಸಭೆಗಳಿಗೆ ಉಪ ಚುನಾವಣೆಗಳು. ಕೇರಳದಲ್ಲಿ ಮಾರ್ಕ್ಸಿಸ್ಟರಿಗೆ ಮಸಿ; ಕರ್ನಾಟಕದಲ್ಲಿ ಸಿಂಡಿಕೇಟಿಗೆ ಕಹಿ.

ಕರ್ನಾಟಕ ಸಿಂಡಿಕೇಟಿನ ಗಂಡುನೆಲ. ಅದರ ಅಧ್ಯಕ್ಷ ಎಸ್ಸೆನ್ ಇಲ್ಲಿನ ಮಾಜಿ ಮುಖ್ಯ ಮಂತ್ರಿ; ಇಂದಿನ ಮುಖ್ಯಮಂತ್ರಿ ಪಾಟೀಲರ ರಾಜ್ಯಕೀಯ ಗುರು. ಹಾಗಾಗಿ ಕರ್ನಾಟಕದಲ್ಲಿ ಸಿಂಡಿಕೇಟು ಅಭೇದ್ಯವೆಂಬ ವಿಶ್ವಾಸ.

ಮತ್ತೊಬ್ಬ ಸಿಂಡಿಕೇಟಾಧ್ವರ್ಯು ಮುರಾರ್ಜಿ ಭಾಯಿಯವರ ಗುಜರಾತದಲ್ಲಾದರೂ ಸಿಂಡಿಕೇಟ್ ಕೋಟೆಯನ್ನು ಶ್ರೀರಾಮರ ಕಪಿಸೇನೆ ಮುರಿಯಬಹುದು; ಅರೇಳು ಕಲ್ಲುಗಳೀಗಾಗಲೇ ಉರುಳಿವೆ; ಇನ್ನೂ ಒಂದೆರಡುರುಳಿದರೆ, ಹಿತೇಂದ್ರ ದೇಸಾಯಿ ಧಸಕ್. ಅಂತಹ ಪ್ರಮೇಯ ವೀರೇಂದ್ರರಿಗಿಲ್ಲ— ಹಿಂದೆಯೂ ಇಲ್ಲ, ಇಂದೂ ಇಲ್ಲ. ಮುಂದೆ?

ಕಳೆದವಾರದಲ್ಲಿ ಮೂರು ಉಪಚುನಾವಣೆಗಳು ವಿಧಾನ ಸಭೆಗೆ ನಡೆದುವು. ಮೂರರಲ್ಲಿ ಎರಡಾದರೂ ತನಗೆ ಖಂಡಿತವೆಂದು ಸಿಂಡಿಕೇಟಿನ ಅಚಲ ಭರವಸೆ. ಆದರೆ, ಪರಿಣಾಮವೇನು ಬಂತು? ಬೆಂಗಳೂರಿನ ಶಿವಾಜಿನಗರದಲ್ಲಿ ನಿರುತ್ಸಾಹದ ಮತದಾನ ನಡೆದರೂ ಅತೀತ ಕಾಂಗ್ರೆಸ್ ವಿಜಯ ಪಡೆಯಿತು. ಹೊಸಪೇಟೆಯಲ್ಲಿ ಇಂಡಿಕೇಟು ಸೀಟು ಗಿಟ್ಟಿಸಿ ಕೊಂಡಿತು. ಹುನಗುಂದದಲ್ಲಿ ಪ್ರಧಾನಿ ಪರ ಗುಂಪು ಗೆದ್ದುಕೊಂಡಿತು. ಸಿಂಡಿಕೇಟು ಬಯಸಿದ್ದು ಮೂರರಲ್ಲಿ ಎರಡು; ಪಡೆದದ್ದು ಸೊನ್ನೆ.

ಮೂರು ಸ್ಥಾನಗಳನ್ನು ಕಳೆದು ಕೊಂಡುದರಿಂದ ವೀರೇಂದ್ರರ ವೀರ್ಯಕ್ಕೇನೂ ಕೊರತೆಯಾಗದು; ಆದರೆ, ದೇವರಾಜ ಅರಸರ ಅರಸುಗಿರಿಗೊಂದು ಬೆಲೆ ಬಂತು. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರೂ ಇಂಡಿಕೇಟಧ್ಯಕ್ಷ ಜಗಜ್ಜೀವನರಾಮರೂ ತಮಿಳುನಾಡಿನ ಸಿಕಂದರರೂ ದೇವರಾಜ ಅರಸರ ಜನಪ್ರಿಯತೆ, ಪ್ರಚಾರಪ್ರಣಾಳಿಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ೧೯೭೨ರ ಚುನಾವಣೆಯಲ್ಲಿ ಇಂಡಿಕೇಟು ಗೆದ್ದು ಬಂದರೆ, ದೇವರಾಜ ಅರಸರೇ ಕರ್ನಾಟಕದ ಅಕಿರೀಟ ಧಾರಿ ಮುಖ್ಯಮಂತ್ರಿಗಳು.

ಇದು ಏಕೆ ಹೀಗಾಯಿತು ಎಂದು ಸಿಂಡಿಕೇಟ್ ಯೋಚನೆ ಮಾಡ ಬೇಕಾದದ್ದು. ಉಕ್ಕಿನ ಕಾರಖಾನೆ ನೀಡಿ ಹೊಸಪೇಟೆಯನ್ನು ಪ್ರಧಾನಿ ಕಿತ್ತು ಕೊಂಡರೆನ್ನುವುದನ್ನು ಒಪ್ಪಬಹುದಾದರೂ ಶಿವಾಜಿನಗರ— ಹುನಗುಂದದಲ್ಲೇನು ದಾಢಿ ಬಡೆಯಿತು? ಜನತೆ ಸಿಂಡಿಕೇಟು—ಇಂಡಿಕೇಟುಗಳ ಬೆಲೆ ಗೊತ್ತಾಗಿಯೇ ಮತಚಲಾಯಿಸಿತೆಂದು ಗೆದ್ದವರು ಹೇಳಬಹುದು. ಮತದಾರರನ್ನು ಎಂದಿನವರೆಗೆ ಸಾಕ್ಷರ ಶಿಕ್ಷಿತರಾಗಿ ರಾಜ್ಯಕೀಯ ಗಾಳಿಯ ಲಾಭ ಹಾನಿಗಳನ್ನು ಅರಿತವರಾಗಿ ಮಾಡುವುದಿಲ್ಲವೋ ಅಂದಿನ ವರೆಗಿನ ಮಾತ ಕುರುಡು ಮತವೇ. ಇದು ದೊಡ್ಡ ಮೋಸವೂ ಹೌದು.

ಆದರೂ ಸಿಂಡಿಕೇಟ್ ಆತ್ಮ ಶೋಧನೆ ಮಾಡಿಕೊಳ್ಳಲು ಸದವಕಾಶವಿದು. ಕರ್ನಾಟಕದ ಆಡಳಿತಯಲ್ಲಿನ ಸತ್ತ ಹೆಗ್ಗಣಗಳನ್ನು ದೂರ ಮಾಡಲು ವೀರೇಂದ್ರ ಪಾಟೀಲರು ಸೊಂಟಕಟ್ಟ ಬೇಕ ; ಜನಹಿತದ ಬಗ್ಗೆ ಹಣ ಖರ್ಚು ಮಾಡಿದರೆ ಸಾಲದು; ಅದು ಸದುಪಯೋಗವೂ ಆಗ ಬೇಕು.

ಂ ಂ ಂ

ಕರ್ನಾಟಕ— ಮಹಾರಾಷ್ಟ್ರಗಳ ಸೀಮಾ ಪ್ರಶ್ನೆ ಓತಿಯಂತೆ ಬಣ್ಣ ಬದಲಿಸ ಹತ್ತಿದೆ. ರಾಜ್ಯದಿಂದ ತೆರಳಿದ ಶಾಸಕ ನಿಯೋಗಗಳು ಕಂಡು ಕೊಂಡ ಅನುಭವ ಒಂದೊಂದು; ಊಹಾಪೋಹ ನೂರಾರು. ಇಲ್ಲಿನ ನಿಯೋಗದವರು ತಮಗೆಲ್ಲ ರಾಜ್ಯಕೀಯ ನಾಯಕರು ಬೆಂಬಲ ನೀಡಿದರು ಎಂದು ಹೇಳಿದರೆ, ಸಂಸ್ಥಾ ಕಾಂಗ್ರೆಸ್ ಮಾತ್ರ ಕರ್ನಾಟಕದ ಹಿಂದೆ ಉಳಿದಲ್ಲವೆ ನಮ್ಮ ಪರವಾಗಿವೆಯೆಂದು ಮಹಾರಾಷ್ಟ್ರದ ಮುಖ್ಯಮಂತ್ರಿ ವಿ. ಪಿ. ನಾಯಕರು ಪುಗ್ಗ ಹಾರಿಸುತ್ತಾರೆ. ಬೆಳಗಾಂವಿ ವಿಭಜನೆ, ಕಾರವಾರ ದಾನ, ಪರಿಹಾರ ಧನ ಕೊಡಿಗೆ—ಎಂದು ಮುಂತಾಗಿ ನೂರಾರು ಬಗೆಯಲ್ಲಿ ಇತ್ಯರ್ಥದ ನಮೂನೆಯ ಮೇಲೆ ಊಹಾಪೋಹ ನಡೆಯುತ್ತಿದೆ.

ಕನ್ನಡಿಗರು ಮಹಾಜನ ವರದಿಯನ್ನೇ ದೃಢವಾಗಿ ಹಿಡಿದು ಕುಳಿತಿದ್ದಾರೆ. ಆತ ಕೇಂದ್ರ ಸರಕಾರವೂ ರುದ್ರ ಗಂಭೀರ ಗೃಹಮಂತ್ರಿ ಚವಣರು ಜಣಿಗೆ ತಟಸ್ಥನೆಂದು ಬೋರ್ಡು ಪ್ರಧಾನಿಯವರು ಇಬ್ಬರಿಗೂ ಆದಷ್ಟು ಕಡಿಮೆ ನೋವು ಮಾಡುವುದಾಗಿ ಆಶ್ವಾಸನ ನೀಡಿದ್ದಾರೆ. ಉಳಿದವರು ಅವಸರವಿಲ್ಲವೆಂದು ಹಾಡಿದ್ದಾರೆ. ಮರಾಠಿಗರ ಶಿವಸೇನೆಯ ನಾಯಕ ಬಾಲಠಾಕ್ರೆ ಮಾತ್ರ ಬೆಳಗಾಂವಿ—ಕಾರವಾರಗಳ ಬಗ್ಗೆ ಹೋರಾಡಲು ಕರೆ ನೀಡಿದ್ದಾರೆ. ಅವರು ಜನತೆಯನ್ನು ಹೊಡೆದಳಿಸ ಹೊರಟಿದ್ದಾರೆ.

ಈಗ ಮಾಡಿರುವ ಊಹಾಪೋಹಗಳ ಮೇಲೆ ಕೇಂದ್ರ ಸರಕಾರವು ಈ ಪ್ರಶ್ನೆಗೆ ಉತ್ತರ ನೀಡಲು ಅಷ್ಟೊಂದು ಉತ್ಸುಕವಿಲ್ಲ. ಈ ವಿಳಂಬ—ಕಾಲಹರಣ ನೀತಿಗೆ ರಾಜ್ಯಕೀಯ ಕಾರಣವಿದೆ. ಪ್ರಧಾನಿ ಇಂದಿರಾಗಾಂಧಿ ತನ್ನ ರೆಕ್ಕೆಯ ಬಲದಿಂದ ಇಂದು ಹಾರಾಡಲಾರಳು; ಆಕೆಯ ಪುಕ್ಕಗಳಿಗೆ ಸ್ವಬಲ ತುಂಬಿ ಬಂದಿಲ್ಲ. ಆದುದರಿಂದ ಬೆಳಗಾಂವಿ— ಕಾರವಾರಗಳನ್ನು ಕರ್ನಾಟಕದಲ್ಲೇ ಇರಗೊಳಿಸಿ ಮರಾಠಿಗಳ "ತುಂಬಿದ" ಬೆಂಬಲ ಕಳೆದು ಕೊಳ್ಳಲು ಆಕೆ ತಯಾರಿಲ್ಲ. ಕರ್ನಾಟಕದ ಜನತೆಯೂ ಇತ್ತೀಚೆಗೆ ಜಾಗೃತವಾಗುತ್ತ ಬಂದಿರುವುದರಿಂದ ಅನ್ಯಾಯಕ್ಕೆ ಒಳಗು ಮಾಡುವುದೂ ಕಷ್ಟವೇ. ಆದುದರಿಂದ ರಾಜ್ಯಕೀಯ ಕಾರಣಗಳಿಂದ ಆಕೆ ಮೂಕ ಪ್ರೇಕ್ಷಕರಾಗಿ ಕುಳಿತಿದ್ದಾರೆ.

೧೯೭೨ರಲ್ಲಿ ಮತ್ತೆ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಕರ್ನಾಟಕದ ಮೂರು ಉಪಚುನಾವಣೆಗಳೂ ಇಂಡಿಕೇಟಿನ ವಿಜಯ ಭೇರಿ ಬಾರಿಸಿದ್ದರಿಂದ ಪ್ರಧಾನಿಗೆ ತನ್ನ ಸೆರಗು ಹರಡಲು ಕರ್ನಾಟಕದಲ್ಲೂ ಅವಕಾಶವಿದೆಯೆಂಬ ವಿಶ್ವಾಸ ಮೂಡಿದೆ. ಆದುದರಿಂದ ೧೯೭೨ರಲ್ಲಾದರೂ ಸಿಂಡಿಕೇಟಿನಿಂದ ಅಧಿಕಾರ ಸೂತ್ರ ತಪ್ಪಿಸುವ ರಾಜ್ಯಕೀಯ ಉದ್ದೇಶ ಪ್ರೇರಕರಾದುದರಿಂದಲೇ ಅದಕ್ಕೆ ಮೊದಲು ಸಮಸ್ಯಾ ಪರಿಹಾರವಿಲ್ಲವೆಂದು ಹೇಳುತ್ತಾರೆ. ಆ ಮೋಣಕ್ಕೆಗೆ ಬೆಲ್ಲ ಸವರುವುದು ರಾಜ್ಯಕೀಯದಲ್ಲಿ ಬಹಳ ಸ್ವಾಭಾವಿಕ. ಆದರೂ ಒಂದು ಮಾತು. ಎಲ್ಲರನ್ನೂ ಎಲ್ಲ ಸಮಯದಲ್ಲೂ ವಂಚಿಸುವುದು ಸಾಕ್ಷಾತ್ ಭಗವಂತನಿಗೂ ಸಾಧ್ಯವಿಲ್ಲ; ಹಾಗಿರುವಾಗ ಶ್ರೀಮತಿ ಸಾಮೂನ್ಯ ಇಂದಿರಾಗಾಂಧಿಗೆ ಅಸಾಧ್ಯವಾದುದೂ ಲೋಕದಲ್ಲಿ ಏನಾದರೂ ಇರಲೇ ಬೇಕು.

ಂ ಂ ಂ

ಸತಿ—ಪತಿಯರಿಬ್ಬರ ಆದಾಯವನ್ನು ಒಂದಾಗಿ ಕೂಡಿಸಿ ಅದರ ಮೇಲೆ ಆದಾಯ ತೆರಿಗೆ ವಿಧಿಸುವ ಹೊಸ ಸೂತ್ರಕ್ಕೆ ಮಹಿಳೆಯರಿಂದ ತೀವ್ರ ವಿರೋಧ. ಇದು ಸಹಜ. ಯಾವುದೇ ಹೊಸಹಾದಿ ತುಳಿಯುವಾಗ ಪ್ರತಿಭಟನೆ ಅನಿವಾರ್ಯ. ಆದರೆ, ಸಹಜವಾಗಿ ನೋಡುವುದಾದರೆ, ಆದಾಯ ತೆರಿಗೆಗೆ ಈ ವಿಧಾನವೇ ಚೆನ್ನು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಡಿಯ ಕುಟುಂಬ (ತಂದೆ-ತಾಯಿ-ಮಕ್ಕಳು) ಒಟ್ಟು ಆದಾಯವನ್ನು ಗಣನೆಗೆ ತರುವುದೂ ಸಮಾಜವಾದಕ್ಕೆ ದೂರವಾಗದು.

ಒಬ್ಬ ತಂದೆ. ಅವನಿಗೆ ಏಳು ಜನ ಮಕ್ಕಳು. ತಂದೆಗೆ ಪೆನ್‌ಶನ್; ತಾಯಿಯ ಹೆಸರಲ್ಲಿ ಅಪಾರ ಆಸ್ತಿ, ಗಂಡುಮಕ್ಕಳಲ್ಲಿ ಆರು ಜನರು ಒಬ್ಬೊಬ್ಬರು ಎರಡೆರಡು ಸಾವಿರ ತಿಂಗಳಿಗೆ ಕಮಾಯಿ ಮಾಡುತ್ತಾರೆ. ಏಳನೆಯವನಿಗೆ ಶಿಕ್ಷಣ ಛಾತ್ರವೃತ್ತಿಗಾಗಿ ಸರಕಾರಕ್ಕೆ ಅರ್ಜಿ, ಬುದ್ಧಿವಂತ ಹುಡುಗ, ಪೆನ್‌ಶನ್‌ದಾರ ತಂದೆ ಹುಡುಗನಿಗೆ ಛಾತ್ರವೃತ್ತಿ ಗ್ಯಾರಂಟಿ.

ತಾಯಿಗೆ ಮಗನ ಶಿಕ್ಷಣ ಬೇಡ, ಅಣ್ಣಂದಿರಿಗೆ ತಮ್ಮನ ಶಿಕ್ಷಣ ಬೇಡ, ಸರಕಾರಕ್ಕೆ (ಶ್ರೀಸಾಮಾನ್ಯರಿಗೆ) ಮಾತ್ರ ಆ ಕುಬೇರ ಪುತ್ರ ಬೇಕು; ಆತನ ಶಿಕ್ಷಣಕ್ಕಾಗಿ ಜನತೆಯು ನೀಡಿದ ತೆರಿಗೆ ವೆಚ್ಚವಾಗಬೇಕು. ಇಂತಹ ಸಾಮಾಜಿಕ ಅನ್ಯಾಯ ನಿಲ್ಲಬೇಕು. ಸನಾಥರಾಗಿದ್ದೂ ಅನಾಥರೆಂದು ಹೇಳಿಕೊಳ್ಳುವ, ಸರಕಾರಿ ವಿಶ್ವನಾಥನ ನೆರವಿನಿಂದಲೇ ಬದುಕುವ ರಾವಣ ಅನಾಥರು ತುಂಬ ಇದ್ದಾರೆ. ಆದುದರಿಂದ ಆದಾಯವನ್ನು ಪರಿಗಣಿಸುವ ಸೂತ್ರದಲ್ಲಿ ಗಣನೀಯ ಬದಲಾವಣೆ ಆಗಲೇ ಬೇಕು. ಸತಿ-ಪತಿಯರ ಆದಾಯವನ್ನು ಒಂದಾಗಿ ಕೂಡಿಸುವುದೂ ಅಪರಾಧವಲ್ಲ; ಆದರೆ, ಇಬ್ಬರಿಗೂ ಮಕ್ಕಳ ಸಂಬಂಧ ನೀಡುವ ತೆರಿಗೆ ವಿನಾಯತಿ ಮಾತ್ರ ಅನ್ಯಾಯ.

ಂ ಂ ಂ

ಶ್ರೀಮತಿ ಇಂದಿರಾಗಾಂಧಿಯವರ ಸಚಿವ ಸಂಪುಟದಲ್ಲಿ ಪಾಪ ನಾಲ್ವರಿಗೆ ನೆಮ್ಮದಿಯೇ ಇಲ್ಲ. ಶ್ರೀ ಜಗಜ್ಜೀವನರಾಮರು ಒಂದೇ ದೋಣಿಯಲ್ಲಿ ಕಾಲಿಡಬೇಕೆಂದು ಯುವತುರ್ಕರು ಕಿಂತಲ್ಲಿ ಕೂತಲ್ಲಿ ಕರೆಕರೆ ಮಾಡುತ್ತಾರೆ. ಪಾಕಿಸ್ತಾನಿಗಳೂ ಚೀನೀಯರೂ ಸಂಚು ನಡೆಸಿ ಗಡಿಯುದ್ದಕ್ಕೂ ಅಶಾಂತ ವಾತಾವರಣ ನಿರ್ಮಿಸಿ ಸರ್ದಾರ ಸ್ವರ್ಣಸಿಂಗರಿಗೆ ಚಿಂತೆ ತರುತ್ತಾರೆ. ನಕ್ಸಲೀಯರು, ತೆಲಂಗಾಣ ಪ್ರಿಯರು, ಕನ್ನಡ ಚಳುವಳಿಗಾರರು, ಶಿವಸೇನೆ, ಭೀಮಸೇನೆ, ಕಪಿಸೇನೆ....ಹೀಗೆ ಅನಧಿಕೃತ ದೇಶವ್ಯಾಪೀ ಸೇನೆಗಳು ಚವಣರನ್ನು ನಿಷ್ಕ್ರಿಯಗೊಳಿಸಿವೆ. ಪಾಪ, ದಿನೇಶಸಿಂಹರು ಇಂದು ಭಾರೀ ಸೋಲುತಿದ್ದಾರೆ.

ಕಾಂಬೋಡಿಯಾದ ಪರಿಸ್ಥಿತಿ ತೀವ್ರ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಗೇಹರಾಜ್ಯದಲ್ಲಿ

ಕರೀಕುರೀ ಮೇಲೆ ಬಿಳೀಕುರೀ ಸವಾರಿ

"ಕೇಳಿದ್ಯೇನೆ?"

"ಏನು?"

"ಅಲ್ಲ, ನಮ್ಮ ದೇಶದ ಸಂವಿಧಾನವನ್ನು ಪುನಾರಚಿಸಬೇಕಂತೆ...'

"ಏನು ಬೇಕಾದರೂ ಮಾಡಿಕೊಳ್ಳಲಿ, ನಮಗೇನು?"

"ಅಯ್ಯೋ, ಇದು ಪ್ರಜಾಶಕ್ತಿ. ಅಷ್ಟು ಸುಲಭದಲ್ಲಿ ಬಿಡೋದಕ್ಕಾಗುತ್ಯೆ? ನಮ್ಮ ಈ ಬಗೆಯ ಉಪೇಕ್ಷೆಯನ್ನು ನೋಡಿಯೇ ಬಿಳಿಯರು ಅನ್ನುತಿದ್ದದ್ದು ಕರಿ ಕುರಿಗಳೇ ಅಂತ..."

"ಅಲ್ರಿ, ನಾವು ಕರಿ ಕುರಿಗಳಾದ್ರೆ ಅವ್ರು ಬಿಳೀ ಕುರಿಗಳಾದ್ರಲ್ಲ?"

'ಇಲ್ಲ ಇಲ್ಲ..."

"ಮತ್ತೆ ?"

"ಮತ್ತೆ ನೋಡು, ಬಿಳಿಯರ ಬೂಟು ಪಾಲಿಶ್ ಮಾಡೋ ಚೇಲಾರು, ಅವರ ಎಂಜಲಿನ ಭಿಕ್ಷುಕರು, ಬಟ್ಲರ್ ಇಂಗ್ಲಿಷರು ಎಲ್ಲ ಬಿಳಿ ಕುರಿಗಳು...."

"ಇದು ಸರಿ ಹೋಯ್ತು. ಅಲ್ಲ, ಬುದ್ಧಿ ಜೀವಿಗಳೆಲ್ಲ ಸೇರಿ ಸಂವಿಧಾನ ತಿದ್ದುಪಡಿ ಮಾಡ್ಬೇಕೊಂತ....'

'ಅಲ್ವೆ, ಬುದ್ಧಿಯಿಲ್ಲದವ್ರು ಯಾರೊಂತೆ?...."

'ಮತ್ಯಾರ್ಯಾಕೆ, ನಾನೇಂತ....'

'ನೋಡು, ನಿನ್ನ ಒಳಿತು ಕೆಡುಕು ಯಾವುದೂಂತ ಮನನಕ್ಕೆ ಮಾಡಿಕೊಳ್ಳೋ ತಾಕತ್ತು ಇಲ್ವೆ ನಿನ್ಗೆ?'

'ತಪ್ಪಾಯ್ತೂಂದ್ರೇನ್, ನೀವಿದ್ದೀರಲ್ಲಾ'

'ನೋಡು, ಈ ಬಗೆಯ ಪರಾವಲಂಬನೆಯೇ ನಮ್ಮ ವಿನಾಶದ ದಾರಿ ರಾತ್ರಿ ಪತಿವಾಗಾದ್ರೂ ದಾರಿ ಮೇಲೆ ಕಣ್ಣಿಡ್ಬೇಕೊಂತಲ್ಲ ಗೊತ್ತಿಲ್ವೇನೇ ನಿನಗೆ?'

'ಇಲ್ಲದುಂಟೆ!'

'ಹಾಗಿರುವಾಗ, ಬುದ್ಧಿಜೀವಿಗಳೇ ಎಲ್ರೂವೂ. ಅದ್ರೇನೂ ಹೇಳು, ಕೆಲವ್ರು ಪರಾವಲಂಬನದಲ್ಲೇ ಸುಖವೆಂಬ ಮಂಕು ಬೂದಿಯ ಪ್ರಭಾವಕ್ಕೆ ಗುರಿಯಾಗಿದ್ದಾರೆ. ಅದ್ರಿಂದ್ಲೇ ಈ ಪ್ರಶ್ನೆ'

'ಅಲ್ರಿ, ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಮಾಡಿ ಸಾಕಾಯ್ತೂಂತ ತೋರುತ್ತೆ.'

'ಹಾಗಲ್ವೆ, ಎಲ್ಲಕ್ಕಿಂತ ಮೊದಲು ಸಂವಿಧಾನ ಕೊಡಮಾಡಿದ ಆಸ್ತಿ ಮೇಲಿನ ಅಧಿಕಾರದ ಮೇಲೆ ಕಣ್ಣು...'

'ಅದೊಂದನ್ನು ಕಿತ್ತು ಬಿಟ್ರೆ, ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಎಲ್ಲ ಮೂಲೆಗೆ ತಳ್ಳಿದಂತೆ....'

'ಹ್ಞಾಂ. ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವ ಅಧಿಕಾರ ಯಾರಿಗೂ ಇಲ್ಲವೆಂದಾದುದರಿಂದ, ಅವನ್ನೇ ಕಿತ್ತುಹಾಕುವ ತಹತಹ...."

"ಅದಕ್ಕೆ ಜನ ಒಪ್ತೀತ್ತೆ?"

'ಜನ ಅಂದ್ರೆ ಯಾರು? ನಿನ್ನಂಥ ಪರಾವಲಂಬಿಗಳೇ ತಾನೆ?'

"ಛಿ, ನಾನು ಪರಾವಲಂಬಿಯೇನು?"

"ಪರಾವಲಂಬಿಯಲ್ಲಾಂತಾದ್ರೂ ಸ್ವಾವಲಂಬಿಯಲ್ಲ..."

"ಹಾಗೆ ಅನ್ನಿ ಮತ್ತೆ. ಇಂದಿನ ದಿನಗಳಲ್ಲಿ ಸ್ವಾವಲಂಬಿಗಳು ಯಾರೂ ಇಲ್ಲ."

'ಅದ್ರೂ ಮುಗ್ಧತೆಯ ದುರ್ಲಾಭ ಪಡೆಯಬಾರದ್ದು ನೋಡು...'

"ಹ್ಞಾಂ...."

"ಅದ್ರಿಂದ ಸಂವಿಧಾನದತ್ತ ಹಕ್ಕನ್ನು ಕಸಿದು ಕೊಳ್ಳುವುದರ ವಿರುದ್ಧ ಜನ ಜಾಗೃತವಾಗ್ಬೇಕು....'

"ಅವಶ್ಯ"

'ಅಮೇರಿಕೆಯು ದ್ವಿತೀಯ ಲೋಕ ಯುದ್ಧದಲ್ಲಿ ನಿರತವಾದಾಗ, ಇದ್ದಲಗನಿ ನೌಕರರು ಸಂಪು ಹೂಡಿದರು...'

"ಹ್ಞಾಂ...."

"ಅಧ್ಯಕ್ಷ ಟ್ರೂಮನ್ನರು ಸಂಪು ಕಾನೂನು ಬಾಹಿರವೆಂದು ಘೋಷಿಸ ಬಯಸಿದರು."

"ಹ್ಞಾಂ...'

"ಆದ್ರೆ ಜನ ಜಾಗೃತವಾಯ್ತು ವಿಚಾರ ವಿನಿಮಯದಿಂದಲೇ ಸಮಸ್ಯೆ ಇತ್ಯರ್ಥವಾಗಬೇಕು. ನೌಕರರ ಹಕ್ಕನ್ನು ಹತ್ತಿಕ್ಕಬಾರದೆಂದು ಒತ್ತಾಯ ಪಡಿಸಿತು'

"ಮತ್ತೆ?"

"ಜನವಾಣಿ ಮುಂದೆ ಟ್ರೂಮನ್ ಬಗ್ಗಿದರು."

'ಹಾಗಿರಬೇಕು ಮತ್ತೆ...."

'ಸಂವಿಧಾನದತ್ತ ಅಧಿಕಾರ ಕಿತ್ತುಕೊಳ್ಳುವ ಯಾವುದೇ ಪ್ರಯತ್ನವನ್ನು ಜನ ಒಂದಾಗಿ ವಿರೋಧಿಸಬೇಕು...'

"ಹೌದ್ರಿ, ನಾವೂ ಜಾಗೃತರಾಗ ಬೇಕು....'

"ಆಗದೇ ಸಾಧ್ಯವಿಲ್ಲಾನ್ನು. ಅದ್ರೂ ಇನ್ನೆಷ್ಟು ಕಾಲಬೇಕಾಗುತ್ತೊ!'

"ಓ, ಕಾದಷ್ಟು ದಿನ ಕಾಯು ಬೇಕಾಗಿಲ್ಲಾಂತಾರೆ....'

'ಯಾರು?"

'ಜೋಯಿಸ್ರು...."

"ಹ್ಞಾಂ...."

'ಹ್ಞಾಂ....'

—ಗೋರಾ.

ವಿಕೋಪಕ್ಕೆ ಹೋಗಿದೆ. ಮುಳುಗುತ್ತಿರುವ ಕಾಂಬೋಡಿಯಾವನ್ನು ಎತ್ತಲು ಅಮೇರಿಕೆಯು ಧಾವಿಸಿದ್ದೇ ಇದಕ್ಕೆ ಕಾರಣ. ಪಂಚಶೀಲ ಪ್ರೇರಿತವಾದ ಭಾರತದ ವಿದೇಶ ನೀತಿ ಶಾಂತಿಯನ್ನು ರಕ್ಷಿಸುವಲ್ಲಿ ನೆರವಾದ ಉದಾಹರಣೆಗಳು ಈ ದಶಕದಲ್ಲಿಲ್ಲ; ಆದರೂ ವಿಳಂಬವಾದಕ್ಕೆ ಒತ್ತಾಸೆಯನ್ನಾದರೂ ನೀಡಬಹುದಿತ್ತು; ಸಮುದ್ರದಲ್ಲಿ ಮುಳುಗುವವನಿಗೆ ವಿಳಂಬ ನೀತಿ ಹಿಡಿಸುವುದಿಲ್ಲ. ಹುಲ್ಲು ಕಡ್ಡಿಯಾದರೂ ಸರಿ, ಕೊಟ್ಟಲು ಬರುವ ವರೆಗೆ ಕಾಯದೆ ಅದನ್ನು ಬಿಗಿಯಾಗಿ ಹಿಡಿದು ಬದುಕ ಬಯಸುತ್ತಾನೆ. ಇದಕ್ಕೆ ಭಾರತ ಹೊರತಾಗಿದ್ದರೆ, ಅದು ಅಪರೂಪದ ಅಪವಾದ.

ಕಾಂಬೋಡಿಯಾದ ರಕ್ಷಣೆಗೆ ಅಧ್ಯಕ್ಷ ನಿಕ್ಸನ್‌ರು ಸೇನೆ ಕಳಿಸಲು ನಿರ್ಧಾರ ಮಾಡಿದರು; ವಿಯತ್‌ಕಾಂಗಿಗಳಿಗೆ ಕೆಂಪು ಚೀನಾದ ಬಲವತ್ತರ ನೆರವು ಹಿಂದಿನಿಂದಲೂ ಇದೆ. ಈಗೀಗ ಇಂಡೋನೇಶ್ಯ ಕೂಡಾ ಸಹಾಯ ನೀಡಲು ಮುಂದೆ ಬಂದಿದೆ. ಕಾಂಬೋಡಿಯಾದ ಪದಚ್ಯುತ ನಾಯಕ ಸಿಂಹನೂಕರಿಗೆ ಅದು ಆಶ್ರಯ ನೀಡಿದೆ. ಕಾಂಬೋಡಿಯಾದಲ್ಲಿರುವ ವಿದೇಶೀ ಸೇನೆ ಮತ್ತು ಶಸ್ತ್ರಾಸ್ತ್ರಗಳನು ಸಂಪೂರ್ಣ ಹೊರದಬ್ಬಿದ ಮೇಲೆ ತನ್ನ ಸೈನ್ಯ ಹಿಂದಿರುಗುವುದೆಂದೂ ಇದು ಕಾಂಬೋಡಿಯಾದ ಮೇಲೆ ದಾಳಿಯಲ್ಲವೆಂದೂ ನಿಕ್ಸನ್ ಸಮರ ನೀತಿ ಸಾರಿದೆ. ವಿದೇಶೀ ಸೇನೆಗಳಲ್ಲಿ ಅಮೇರಿಕನ್ ಸೇನೆ ಮಾತ್ರ ಬರುವುದಿಲ್ಲ!

ಭಾರತದ ವಿದೇಶ ಸಚಿವ ಸಿಂಗರೇನನ್ನುತ್ತಾರೆ? 'ಓಂ ಶಾಂತಿ ಶಾಂತಿ ಶಾಂತಿಃ! ವಿದೇಶೀ ಸೇನೆಗಳೇ, ಹಿಂದೆ ಸರಿಯಿರಿ!' - ಸಿಂಗರ ಸಿಂಹ ಧ್ವನಿ ಅದಕ್ಕೆ ಕೇಳೀತೆ? 'ಇದು ಬಹಳ ದುರ್ಬಲ ಸ್ವರದ ಸಂಗತಿ'—ಅಲ್ಲವೇ ಮತ್ತೆ? ಹಾಗೆ ಇಪ್ಪತ್ತು ವರ್ಷಗಳ ಹಿಂದೆ ಹೇಳುತ್ತಿದ್ದದ್ದು; ಇಂದು ಆಡುತ್ತಿರುವುದೂ ಇದನ್ನೇ. ಆದರೆ ಅಂದಿನ ಸ್ವರಕ್ಕೆ ತುಸು ಭಾರವಿತ್ತು; ಇಂದಿನದು ಗಾಳಿಯಷ್ಟು ಹಗುರ. ಇದೇ ನಮ್ಮ ಪ್ರಗತಿ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1

ತುಳು ಭಾಷಾ ಸಮ್ಮೇಳನ

ಮಂಗಳೂರಿನ ತುಳುಕೂಟದ ನೇತೃತ್ವದಲ್ಲಿ ತುಳು ಭಾಷಾ ಸಮ್ಮೇಳನವು ತಾ. 3 ರಂದು ಮಂಗಳೂರಲ್ಲಿ ನೆರವೇರಿತು.

ಸಮ್ಮೇಳನದ ಆರಂಭದಲ್ಲಿ ತುಳು ಭಾಷಾ ಸಂಬಂಧ ಗೋಷ್ಠಿಯೊಂದು ಏರ್ಪಟ್ಟಿತ್ತು. ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ ಪ್ರಾಚಾರ್ಯ ಡಾ| ಪಿ. ಗುರುರಾಜ ಭಟ್ಟರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಇದರಲ್ಲಿ ಶ್ರೀ ಎಂ. ರಾಘವೇಂದ್ರ ಪ್ರಭುಗಳು 'ತುಳುವರ ಭೂತಾರಾಧನೆ' ಶ್ರೀ ಎನ್. ಮಾರಪ್ಪ ಶೆಟ್ಟರು 'ತುಳುಭಾಷಾ ಮೂಲ', ಶ್ರೀ ಅಮೃತ ಸೋಮೇಶ್ವರರು 'ತುಳು ಪಾಡ್ದನ', ಶ್ರೀ ಕೆ. ಬಿ. ಭಂಡಾರಿಯವರು 'ತುಳು ಇತಿಹಾಸ' ಶ್ರೀ ಕೆ. ಎನ್. ಟೈಲರರು 'ತುಳು ನಾಟಕ' ಮತ್ತು ಶ್ರೀ ಪಿ. ಕೇಶವ [illegible]ರು 'ಹರಿಜನ ಮತ್ತು ಗಿರಿಜನ'ವೆಂಬ ನಿಬಂಧಗಳನ್ನು ಓದಿದರು.

ಅಧ್ಯಕ್ಷ ಡಾ| ಭಟ್ಟರು ಮಾತನಾಡುತ್ತ ತುಳುನಾಡಿನ ಬಗೆ ವಿಶೇಷ ಸಂಶೋಧನೆ ನಡೆಸಿ ಇಲ್ಲಿನ ಜನಜೀವನ-ಸಾಹಿತ್ಯ-ರಾಜ್ಯಕೀಯ ಇತಿಹಾಸವನ್ನು ನಿಖರವಾಗಿ ಬರೆಯುವಂತಾಗಬೇಕೆಂದು ಕರೆನೀಡಿ, ಈ ಸಾಧನೆಗೆ ತುಳುಕೂಟ ನೆರವಾಗಲೆಂದು ಹಾರಯಿಸಿದರು.

ಅನಂತರ ಉಡುಪಿಯ ಅದಮಾರು ಮಠಾಧೀಶ ಶ್ರೀ ಶ್ರೀ ವಿಬುಧೇಶ ತೀರ್ಥ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಮಹಾಸಮ್ಮೇಳನ ನಡೆಯಿತು. ಪ್ರೊ| ಕು. ಶಿ. ಹರಿದಾಸಭಟ್ಟ, ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಶ್ರೀ ಕೆ. ಆರ್. ಆಚಾರ್, ಮತ್ತು ಶ್ರೀ ವಿಟ್ಲ ಲಕ್ಷ್ಮೀನಾರಾಯಣ ಆಳ್ವರು ತುಳುವಿನ ಅಭಿವೃದ್ಧಿ ಲಿಪಿ ಸಾಹಿತ್ಯಗಳ ಬಗ್ಗೆ ಮಾತನಾಡಿದರು.

ಕಾಸರಗೋಡಿನ ಚಂದ್ರಗಿರಿ ಹೊಳೆಯಿಂದ ಉತ್ತರಭಾಗವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಸಿ, ಇಡಿಯ ಜಿಲ್ಲೆಗೆ ತುಳು ನಾಡೆಂದು ಪುನರ್ನಾಮಕರಣ ಮಾಡಬೇಕು, ತುಳು ಕಲಾವಿದರಿಗೆ ಸರಕಾರ ನೆರವು ನೀಡಬೇಕು, ಮಂಗಳೂರಲ್ಲಿ ಆಕಾಶವಾಣಿ ನಿಲಯ ಆರಂಭಿಸಬೇಕು, ತುಳು ಸಾಹಿತ್ಯಾಭಿವೃದ್ಧಿಗೆ ಸರಕಾರ ನೆರವು ನೀಡಬೇಕು; ತುಳು-ಕನ್ನಡ ನಿಘಂಟನ್ನು ಮೈಸೂರು ವಿಶ್ವವಿದ್ಯಾಲಯ ಮುದ್ರಿಸಬೇಕು ಎಂಬ-ಎಂದು ಅಂಗೀಕರಿಸಲಾದ ನಿರ್ಣಯಗಳಾದುವು.

ಅಧ್ಯಕ್ಷ ಶ್ರೀ ಸ್ವಾಮೀಜಿಯವರು ಭಾಷೆಯ ಪ್ರಶ್ನೆಯ ಮೇಲೆ ಹೊಡೆದಾಡುವುದು ಸಲ್ಲದೆಂದೂ ನಮ್ಮತನವನ್ನು ಬಿಟ್ಟುಕೊಡದೆ ಹೋಗುವಾಗ ಇತರರ 'ನಮ್ಮತನ'ಕ್ಕೆ ಭಂಗವಾಗದಂತೆ ಎಚ್ಚರಿಕೆ ವಹಿಸಬೇಕೆಂದೂ ತಿಳಿಸಿ ತುಳು ಪ್ರಾಚೀನ ಪ್ರಶಸ್ತ ಲಿಪಿ ಬದ್ಧ ಭಾಷೆಯೆಂದು ಸಮರ್ಥಿಸಿದರು.

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನ್ ಆಡಳಿತ ಮಂಡಳಿ ಸಭೆ

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನ್ನಿನ ಪ್ರಥಮ ಆಡಳಿತ ಮಂಡಳಿಯ ಸಭೆಯು ದಿನಾಂಕ 26-4-1970ರಂದು ಮಣಿಪಾಲದಲ್ಲಿ ಜರಗಿತು. ಪ್ರಚಲಿತ ವರ್ಷಕ್ಕೆ ಫೌಂಡೇಶನಿನ ಅಧ್ಯಕ್ಷರಾಗಿ ಶ್ರೀ ಕೆ. ಕೆ. ಪೈಯವರು ಅವಿರೋಧವಾಗಿ ಆಯ್ಕೆ ಯಾದರು. ಶ್ರೀ. ಎಚ್. ಎನ್. ಪೈಯವರು ಉಪಾಧ್ಯಕ್ಷ ಕೋಶಾಧಿಕಾರಿಯಾಗಿಯೂ ಶ್ರೀ ಕೆ. ಎನ್. ಉಡುಪರು ಕಾರ್ಯದರ್ಶಿಯಾಗಿಯೂ ಚುನಾಯಿತರಾದರು. ಶ್ರೀ. ಪಿ. ಸುಂದರ ರಾಯರನ್ನು ಗೌರವ ಕೃಷಿ ಪರಿಶೋಧಕರಾಗಿರುವಂತೆ ಕೇಳಿಕೊಳ್ಳಲು ನಿರ್ಧರಿಸಲಾಯಿತು.

ಚಾಲ್ತಿ ವರ್ಷದಲ್ಲಿ ಮಣಿಪಾಲದಲ್ಲಿ ಪ್ರಾಯೋಗಿಕ ಕೃಷಿಕ್ಷೇತ್ರವನ್ನು ನಡೆಸುವ [illegible], ಕೃಷಿ ಕ್ಷೇತ್ರ ಸಂದರ್ಶನ ಶಿಬಿರ, ಹಾಗೂ ಕೃಷಿಬೋಧಕ ಮಾಸಪತ್ರಿಕೆಗಳನ್ನು ನಡೆಸುವ ಬೇರೆ ಬೇರೆ ಸಂಸ್ಥೆಗಳಲ್ಲಿ ವ್ಯವಸಾಯದಲ್ಲಿ ತರಬೇತಿ ಪಡೆಯುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ನೀಡುವ ವಿಚಾರ ಸಂಕಿರಣಗಳನ್ನೇರ್ಪಡಿಸುವ ಮೊದಲಾದ ಕಾರ್ಯಕ್ರಮವು ಕೈಕೊಳ್ಳಲು ತೀರ್ಮಾನಿಸಲಾಯಿತು.

ಗ್ರಾಮಸಭೆ ಮತ್ತು ಗ್ರಾಮಯೋಜನೆ

(ವಾ. ಅ. ಹೊದಿಕೆ)

ಇಂದು ಮಾನವ ಸಮಾಜವು ವಿಸ್ತಾರ ಹೊಂದುತ್ತ ಹೋದಂತೆ ಅವ್ಯವಸ್ಥೆಯೂ ಬೆಳೆಯುತ್ತ ನಡೆದಿದೆ. ವಿಸ್ತಾರದ ಪ್ರಮಾಣದಲ್ಲಿ ವ್ಯವಸ್ಥೆಯೂ ಬೆಳೆಯುತ್ತಿದ್ದರೆ ಅರಾಜಕತೆ ತಪ್ಪಿದಲ್ಲ. ಹಿಂದೆ ಚಿಕ್ಕ ಸಮಾಜವಿದ್ದಾಗ ಇಡೀ ಊರು ಸ್ವಾಭಾವಿಕವಾಗಿಯೇ ಒಂದು ಕುಟುಂಬದಂತೆ ಇರುತ್ತಿತ್ತು. ಇಡೀ ಊರಿನ ಜನರು ಅವಶ್ಯಕತೆಗಳನ್ನು ಊರಿನೊಳಗೇ ಪೂರೈಸಿಕೊಳ್ಳಬೇಕಾಗುತ್ತಿತ್ತು. ಇದರಿಂದಾಗಿ ಜೀವನಾವಶ್ಯಕವಾದ ಎಲ್ಲ ಉದ್ಯೋಗಗಳೂ ಊರಲ್ಲೇ ನಡೆಯುತ್ತಿದ್ದವು. ಜೀವನಾವಶ್ಯಕ ವಸ್ತುಗಳೆಲ್ಲ ಊರಲ್ಲೇ ನಿರ್ಮಾಣವಾಗುತ್ತಿದ್ದವು. ಇದರಿಂದ ಎಲ್ಲರೊಡನೆ ನಿಕಟ ಸಂಪರ್ಕ ಬರುತ್ತಿತ್ತು. ಆತ್ಮೀಯ ಭಾವ ಇರುತ್ತಿತ್ತು. ಊರವರು ವಸ್ತುಗಳು ಉಪಭೋಗಕ್ಕಾಗಿ ತಯಾರಾಗುತ್ತಿದ್ದವೇ ಹೊರತು ಮಾರಾಟಕ್ಕಾಗಿ ಅಲ್ಲ. ಆಗ ವಸ್ತುಗಳ ಮಾರಾಟಕ್ಕಿಂತ ವಿನಿಮಯವೇ ಹೆಚ್ಚಾಗಿ ನಡೆಯುತ್ತಿತ್ತು. ಇಷ್ಟೇ ಅಲ್ಲ. ಮಾರಾಟ ಮಾಡುವದು ಕೀಳು ಎಂದೂ ತಿಳಿಯುತ್ತಿದ್ದರು.

ಆದರೆ ಸಮಾಜವು ಬೆಳೆದಂತೆ, ವಾಹನ ಸೌಕರ್ಯವು ಹೆಚ್ಚಿದಂತೆ ದೂರ ದೂರದ ಪ್ರದೇಶಗಳೊಂದಿಗೆ ಸಂಪರ್ಕ ಬರಹತ್ತಿತು. ಇದರಿಂದ ವ್ಯಾಪಾರ ವ್ಯವಹಾರ ಬೆಳೆಯಹತ್ತಿದವು. ದೂರ ದೂರದ ಸರಕುಗಳು ದೂರದೂರದ ಊರಲ್ಲಿ ಹೋಗಿ ಮಾರಾಟ ಆಗಹತ್ತಿದವು. ಜನರ ದೃಷ್ಟಿಯೂ ವಿಶಾಲ ಹೊಂದಿತು. ಹೆಚ್ಚೆಚ್ಚು ಜನರ ಹಾಗೂ ಹೆಚ್ಚೆಚ್ಚು ಊರುಗಳ ಪರಿಚಯವಾಗಹತ್ತಿತು. ಮತ್ತು ಇದೇ ಪ್ರಗತಿ ಹಾಗೂ ನಾಗರಿಕತೆ ಎಂದು ತಿಳಿಯಲ್ಪಡಹತ್ತಿತು ಮತ್ತು ಇಂದು ಇದೇ ಕ್ರಮವು ವೇಗಾತಿರೇಕದಿಂದ ಮುನ್ನಡೆಯುತ್ತಲಿದೆ.

ಆದರೆ ಈ ಪ್ರಗತಿ, ಈ ನಾಗರಿಕತೆ, ಈ ವ್ಯಾಪಾರ ವ್ಯವಹಾರಗಳ ವಿಸ್ತಾರದೊಂದಿಗೆ ಒಂದು ಸಂಗತಿ ಮಾತ್ರ ಲೋಪ ಹೊಂದಿತು - ಊರೊಳಗಿನ ತಮ್ಮ ನೆರೆಹೊರೆಯ ಜನರೊಡನೆ ಸಂಪರ್ಕ, ಆತ್ಮೀಯ ಭಾವ ಮತ್ತು ಪರಸ್ಪರಾವಲಂಬನ ಹೋಗಿಬಿಟ್ಟಿತು. ಮತ್ತು ಇಡೀ ಜೀವನವು ಒಂದು ವ್ಯಾಪಾರವಾಗಿ ಬಿಟ್ಟಿತು. ಕೌಟುಂಬಿಕ ದೃಷ್ಟಿ, ಆತ್ಮೀಯ ದೃಷ್ಟಿ, ಮಾನವೀಯ ದೃಷ್ಟಿ, ಜೀವನದೃಷ್ಟಿ ಹೋಗಿ ಎಲ್ಲವೂ ವ್ಯಾಪಾರದೃಷ್ಟಿ ಆಗಿ ಕುಳಿತಿತು:-

ಇದರಿಂದಾಗಿ ನಮ್ಮ ಸೌಕರ್ಯಗಳ ಬಗ್ಗೆ ನೆರೆಹೊರೆಯವರನ್ನೇ ಅವಲಂಬಿಸುವದು, ನೆರೆಹೊರೆಯವರ ಸುಖ ದುಃಖಗಳಲ್ಲಿ ಸಹಭಾಗಿಯಾಗುವದೂ ತಪ್ಪಿಹೋಯಿತು. ಸಮಾಜ ಬಂಧನಗಳೆಲ್ಲ ಶಿಥಿಲವಾದವು. ಸಮಾಜ ರಚನೆಯಲ್ಲಿಯ ಸರಳತೆ ಹೋಗಿ ಜಟಿಲತೆ ಬಂದುಬಿಟ್ಟಿತು. ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಂಡು ಹೇಗಾದರೂ ತಾನು ಒಬ್ಬ ಬದುಕಿಕೊಂಡರೆ ಸಾಕು ಎಂಬಂತೆ ಆಗಿ ಒಬ್ಬೊಬ್ಬರ ಮುಖಗಳು ಒಂದೊಂದು ದಿಕ್ಕಿಗೆ ಆದವು. ಜನರು ಸಮಾಜದಲ್ಲಿ ಇದ್ದೂ ಒಂಟಿಯಾಗ ಹತ್ತಿದರು.

ಇದರಿಂದ ಪ್ರತಿಯೊಬ್ಬರಿಗೂ ಇಂದು ತಾವು ಪ್ರವಾಹಪತಿತರ.- ಪ್ರವಾಹದೊಂದಿಗೆ ಕೊಚ್ಚಿಹೋಗುವವರು. ತಮ್ಮ ಸ್ವಯತ್ನ ತಮ್ಮ ಪರಾಕ್ರಮದಿಂದ ಏನೊಂದೂ ಪರಿವರ್ತನೆ ಮಾಡಲಿಕ್ಕೆ ಸಾಧ್ಯವಿಲ್ಲ. ಬಂದದ್ದಕ್ಕೆಲ್ಲ ತಲೆಗೊಡುತ್ತ ಹೋದರಾಯಿತು ಎಂದು ಅನಿಸುವಂತಾಗಿದೆ. ಅಸಹಾಯ ಭಾವನೆಯು ತುಂಬಿಹೋಗಿದೆ.

ಗ್ರಾಮಸಭೆಯನ್ನು ಕಟ್ಟಿಕೊಂಡು ಗ್ರಾಮಜನರೆಲ್ಲರೂ ಆತ್ಮೀಯ ಭಾವದಿಂದ ಒಟ್ಟುಗೂಡಿ ಎಲ್ಲರ ಹಿತದ ದೃಷ್ಟಿಯಿಂದ, ಸರ್ವೋದಯ ದೃಷ್ಟಿಯಿಂದ ವಿಚಾರಿಸಹತ್ತುವದೇ ಇದಕ್ಕೆ ಪರಿಹಾರೋಪಾಯ.

ಜೀವನಕ್ಕೆ ಅವಶ್ಯವಿರುವ ಧಂದೆಗಳೆಲ್ಲ ಊರಲ್ಲೇ ನಡೆಯುವಂತೆ ಆಗಬೇಕು. ಹೊರಗಿನ ಊರು ಹಾಗೂ ಶಹರಗಳ ಮೇಲೆ ಅವಲಂಬಿಸುವದು ಕಡಿಮೆಯಾಗಬೇಕು. ಊರಲ್ಲಿಯ ಪ್ರತಿಯೊಬ್ಬರಿಗೂ ಅನ್ನ, ವಸ್ತ್ರ, ವಸತಿ ಸೌಕರ್ಯ, ಶಿಕ್ಷಣ, ರಕ್ಷಣ ಹಾಗೂ ಉತ್ಪಾದಕ ಧಂದೆ ಸಿಗುವಂತಾಗಬೇಕು. ಊರಲ್ಲಿಯ ಎಲ್ಲ ಜನರ ಅವಶ್ಯಕತೆಗಳನ್ನೆಲ್ಲ ಪೂರೈಸಿದ ತರುವಾಯ ಮಿಕ್ಕಿ ಉಳಿದ ವಸ್ತುಗಳೇ ಮಾತ್ರ ಊರ ಹೊರಗೆ ಹೋಗಿ ಮಾರಾಟ ಆಗಬೇಕು. ಊರಲ್ಲಿ ಉತ್ಪಾದಿಸಲಿಕ್ಕೆ ಸಾಧ್ಯವಿರುವ ಯಾವದೇ ವಸ್ತುವನ್ನು ಊರಿನ ಹೊರಗಿನಿಂದ ತರಿಸಿಕೊಳ್ಳಬಾರದು.

ನಿತ್ಯಜೀವನಕ್ಕೆ ಉಪಯುಕ್ತವಾಗುವ ರೀತಿಯಲ್ಲಿಯೇ ಶಿಕ್ಷಣ ದೊರೆಯುವ ವ್ಯವಸ್ಥೆ ಆಗಬೇಕು. ಊರಲ್ಲಿಯ ಪ್ರತಿಯೊಂದು ಧಂದೆಯಲ್ಲಿಯೂ ಆಧುನಿಕ ವೈಜ್ಞಾನಿಕ ಸುಧಾರಣೆಗಳನ್ನು ಬಳಸಿಕೊಳ್ಳಬೇಕು. ಉತ್ಪಾದಕರಿಗೆಲ್ಲ ಅವಶ್ಯವಿರುವ ಕಚ್ಚಾ ಮಾಲಿನ ಪೂರೈಕೆ, ಅದರಿಗೆ ಅವಶ್ಯವಿರುವ ಶಿಕ್ಷಣದ ವ್ಯವಸ್ಥೆ, ಪ್ರತಿಯೊಂದ ಧಂದೆಗೂ ಸಮಾನ ಗೌರವ, ಸಮಾನ ಪ್ರಾಪ್ತಿ, ಹಾಗೂ ಸಂರಕ್ಷಣೆ, ಮತ್ತು ತಯಾರಾದ ವಸ್ತುಗಳ ಮಾರಾಟ, ಈ ಎಲ್ಲ ವ್ಯವಸ್ಥೆಯನ್ನು ಗ್ರಾಮಸಭೆಯೇ ಮಾಡಬೇಕು.

ಈ ದೃಷ್ಟಿಯಿಂದ ಊರಲ್ಲಿಯ ಇಂದಿನ ಪರಿಸ್ಥಿತಿಯ ಸೂಕ್ಷ್ಮ ನಿರೀಕ್ಷಣ ಹಾಗೂ ಅಧ್ಯಯನ ಮತ್ತು ಅದರ ಆಧಾರದಿಂದ ಗ್ರಾಮಯೋಜನೆ ತಯಾರಾಗಬೇಕು.

ಭಾರತವು ಹಳ್ಳಿಗಳ ದೇಶ. ಹಳ್ಳಿಗಳು ಸಮೃದ್ಧವಾದರೆಯೇ ದೇಶವು ಸಮೃದ್ಧವಾದೀತು.

ಇಂದಾದರೋ ಹಳ್ಳಿಗಳಲ್ಲಿ ಬೆಳೆದ ಧಾನ್ಯ, ಕಾಯಿಪಲ್ಯ, ಹಾಲುಹೈನ ಎಲ್ಲವೂ ಶಹರಗಳಿಗೆ ಹೋಗುತ್ತದೆ ಹಳ್ಳಿಗಳಲ್ಲಿಯ ಶ್ರಮಿಕರು, ಶ್ರೀಮಂತರು, ಕುಶಲ ಕೈಗಾರಿಕೆಯವರು, ವಿದ್ಯಾಬುದ್ಧಿ ಕಲಿತವರೆಲ್ಲ ಶಹರಗಳಿಗೆ ಸಾಗುತ್ತಾರೆ! ಹೀಗಾಗಿ ಹಳ್ಳಿಗಳೆಲ್ಲ ಬರಡಾಗಹತ್ತಿವೆ. ಹಳ್ಳಿಗಳಲ್ಲಿಯ ಒಕ್ಕಲತನ, ಹಾಗೂ ಗ್ರಾಮೋದ್ಯೋಗ ನಷ್ಟವಾಗಹತ್ತಿವೆ.

ಇದೆಲ್ಲ ವಿಚಾರ ಮಾಡಿ, ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ರೀತಿಯಲ್ಲಿಯೇ ಗ್ರಾಮಯೋಜನೆ ತಯಾರಿಸಬೇಕಾಗಿದೆ. ಪ್ರತಿಯೊಂದು ಗ್ರಾಮವೂ ತನ್ನಲ್ಲಿಯ ವಿಶಿಷ್ಟ ಪರಿಸ್ಥಿತಿಗೆ ಅನುಗುಣವಾದ ಗ್ರಾಮಯೋಜನೆಯನ್ನು ತಾನೇ ತಯಾರಿಸಿಕೊಳ್ಳಬೇಕಾಗಿದೆ. ಈ ಪ್ರಕಾರದ ಗ್ರಾಮಯೋಜನೆಗಳು ತಯಾರಾಗಿ ನಡೆಯಹತ್ತುವಂತೆ ಮಾಡುವದೂ, ಅವುಗಳಲ್ಲಿ ಸಮನ್ವಯ ಸಾಧಿಸುವದೂ, ಅವುಗಳಿಗೆ ಅವಶ್ಯವಿರುವ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುತ್ತ ಹೋಗುವದೂ ಇದೇ ನಿಜವಾದ ಭಾರತೀಯ ರಾಷ್ಟ್ರಯೋಜನೆಯಾದೀತು.

ಗಣಿತಕ್ಕೆ ಬೇಸಿಗೆ ಶಿಬಿರ

ಕರ್ನಾಟಕದ ಪ್ರೌಢಶಾಲೆಗಳ ಗಣಿತ ಅಧ್ಯಾಪಕರ ಬೇಸಿಗೆ ಶಿಬಿರವನ್ನು ಮೇ ೨ರಂದು ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜದಲ್ಲಿ ಆರಂಭಿಸಲಾಯಿತು. ಮೈಸೂರು ವಿಶ್ವವಿದ್ಯಾಲಯದ ಗಣಿತ ವಿಭಾಗದ ಅಧ್ಯಾಪಕ ಡಾ| ಎಸ್. ವಿ. ಕೇಶವ ಹೆಗ್ಡೆಯವರು ಇದನ್ನು ಉದ್ಘಾಟಿಸಿದರು. ಕಳೆದ ನಾಲ್ಕು ದಶಕಗಳಲ್ಲಾದ ಗಣಿತದ ಬೆಳವಣಿಗೆಯನ್ನು ಅವರು ವಿಶ್ಲೇಷಿಸಿ ಗಣಿತ ಬೋಧನೆಯ ವಿಧಾನದ ಬಗ್ಗೆ ತೀವ್ರ ಎಚ್ಚರಿಕೆ ಅವಶ್ಯವೆಂದು ಹೇಳಿ, ಆಧುನಿಕ ವಿಧಾನಗಳನ್ನು ವಿವರಿಸಿದರು.

ಮಣಿಪಾಲದ ಅಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಪದ್ಮಶ್ರೀ ಡಾ| ಟಿ. ಮಾಧವ ಪೈಯವರು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಿಗೆ ಹೊಸ ಹೊಸ ಜ್ಞಾನಗಂಗೆಯನ್ನು ಕುಡಿಸುವ ಇಂತಹ ಶಿಬಿರಗಳು ಅವಶ್ಯವೆಂದೂ ಗಣಿತದ ಆಧುನಿಕ ವಿಭಾಗವನ್ನು ಮುಂದಿಟ್ಟು ಮೊದಲು ಶಿಕ್ಷಕರು ವಿಶೇಷವಾಗಿ ಪ್ರಯತ್ನಿಸಬೇಕೆಂದೂ ಅವರೆಂದರು.

ಈ ಶಿಬಿರವು ಆರುವಾರಗಳ ಕಾಲ ನಡೆಯಲಿರುವುದು. ಮಹಾತ್ಮಾ ಗಾಂಧಿಸ್ಮಾರಕ ಕಾಲೇಜಿನ ಗಣಿತ ವಿಭಾಗದ ಅಧ್ಯಾಪಕ ಪ್ರೊ| ಬಿ. ಪಿ. ಆಚಾರ್ಯರು ಇದರ ನಿರ್ದೇಶಕರು. ಪ್ರೊ| ಯು. ಎಲ್. ಆಚಾರ್ಯ (ಉಡುಪಿ) ಪ್ರೊ| ಯು. ಎಸ್. ಉಪಾಧ್ಯ (ಮೂಡಬಿದ್ರಿ) ಪ್ರೊ| ಎ. ಎನ್. ಆಚಾರ್ಯರು (ಕುಂದಾಪುರ) ಇದರಲ್ಲಿ ಭಾಗವಹಿಸುವ ಇತರ ಪ್ರಾಧ್ಯಾಪಕರು. ಅಮೆರಿಕೆಯ ಸಾಲ್ಟ್ ಲೇಕ್ ವಿಶ್ವವಿದ್ಯಾಲಯದ ಗಣಿತಜ್ಞ ಡಾ| ಜಾನ್ ಐಲಿನ್‌ರು ಈ ಶಿಬಿರವನ್ನು ಉದ್ದೇಶಿಸಿ ಮಾತನಾಡುತ್ತಾರೆ.

ಯು. ಜಿ. ಸಿ., ನೇಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನಲ್ ರಿಸರ್ಚ್ ಎಂಡ್ ಟ್ರೇನಿಂಗ್, ನೇಶನಲ್ ಕೌನ್ಸಿಲ್ ಆಫ್ ಸೈನ್ಸ್ ಎಜ್ಯುಕೇಶನ್ ಮತ್ತು ಅಮೇರಿಕೆಯ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳು ಸಂಯುಕ್ತವಾಗಿ ಈ ಶಿಬಿರವನ್ನು ಸಂಘಟಿಸಿವೆ.

ಶ್ರೀ ನರಸಿಂಹ ಜಯಂತಿ ಮಹಾರಥೋತ್ಸವ

ಸುಬ್ರಹ್ಮಣ್ಯದ ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ಪರಂಪರೆಯಿಂದ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾರೀಖು 18-5-1970ರಿಂದ 19-5-70ರ ವರೆಗೆ ಜರಗಲಿರುವುದು. ಉತ್ಸವಗಳ ಸಮಯ ವೇದ ಉಪನಿಷತ್ತು ಭಾಷ್ಯಾದಿ ಪಾರಾಯಣಗಳೂ, ವಿದ್ವತ್ಸಭೆ ಹರಿಕಥಾ ಸಂಕೀರ್ತನಾ, ಸಂಗೀತಾದಿ ಕಾರ್ಯಕ್ರಮಗಳೂ ಜರಗುವುವು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮೈಸೂರು ರಾಜ್ಯದಲ್ಲಿ
ಸಿಂಡಿಕೇಟ್ ಬ್ಯಾಂಕಿನ
204
ಶಾಖೆಗಳು

++++

ಮೈಸೂರು ರಾಜ್ಯದ ಧಾರವಾಡ ಜಿಲ್ಲೆಯ
ಮುಂಡರಗಿ ಮತ್ತು **ನವಲಗುಂದ**
ಎಂಬಲ್ಲಿ ತನ್ನ ಹೊಸ ಎರಡು ಶಾಖೆಗಳ ತೆರೆಯೋಣದಿಂದ
ರಾಜ್ಯದಲ್ಲಿ ಸಿಂಡಿಕೇಟ್ ಬ್ಯಾಂಕಿನ ಶಾಖೆಗಳ ಸಂಖ್ಯೆ
204ಕ್ಕೆ ಏರಿತು

++++

ಮೈಸೂರು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಿಂಡಿಕೇಟ್ ಬ್ಯಾಂಕಿನ
ಶಾಖೆಗಳ ಸಂಖ್ಯೆ ಈ ಕೆಳಗಿನಂತಿವೆ.

ದಕ್ಷಿಣ ಕನ್ನಡ	74	ಗುಲ್ಬರ್ಗ	3
ಉತ್ತರ ಕನ್ನಡ	16	ರಾಯಚೂರು	9
ಶಿವಮೊಗ್ಗ	9	ಬಿದರೆ	2
ಕೊಡಗು	6	ಬೆಳಗಾಂವಿ	14
ಚಿಕ್ಕಮಗಳೂರು	6	ಧಾರವಾಡ	9
ಹಾಸನ	3	ಕೋಲಾರ್	1
ಚಿತ್ರದುರ್ಗ	3	ಮಂಡ್ಯ	1
ಬಳ್ಳಾರಿ	8	ಮೈಸೂರು	6
ಬಿಜಾಪುರ	10	ಬೆಂಗಳೂರು	21

++++++

ಬ್ಯಾಂಕಿನ ಶಾಖೆಯನ್ನು ತೆರೆಯಲು ನಮಗೆ ಯಾವ ಸ್ಥಳವೂ ಚಿಕ್ಕದಲ್ಲ

ಸಿಂಡಿಕೇಟ್ ಬ್ಯಾಂಕ್
ಪ್ರಧಾನ ಕಾರ್ಯಾಲಯ :
ಮಣಿಪಾಲ (ಮೈಸೂರು ರಾಜ್ಯ)

ಒಟ್ಟು ಶಾಖೆಗಳು :
391

ಕೆ. ಕೆ. ಪೈ
ಕಸ್ಟೋಡಿಯನ್

ತೃಪ್ತ ಸಮಾಜಕ್ಕೆ

ಸಂವಿಧಾನ ಚೌಕಟ್ಟಿನ ಭೂಸುಧಾರಣೆ

ನಮ್ಮ ಮೈಸೂರು ಸರಕಾರವು ಭೂಒಡೆಯರು ಕೃಷಿ ಮಾಡಲು ಗೇಣಿದಾರರಿಗೆ ಕೊಟ್ಟ ಜಮೀನನ್ನು ಹಿಂದಕ್ಕೆ ಪಡೆಯುವ ಬಗ್ಗೆ ನಿರ್ಬಂಧಗಳನ್ನು ಹೇರಲು ಮತ್ತು ಭೂಸುಧಾರಣೆ ಜಾರಿಗೆ ತರಲು ಇರುವ ಎಡರು ತೊಡರುಗಳನ್ನು ಪರಿಶೀಲಿಸಿ ಅದನ್ನು ತೊಡೆದು ಶೀಘ್ರ ಜಾರಿಗೆ ನಿರ್ಧರಿಸಿ ಸಂಬಂಧಪಟ್ಟ ಕಾರ್ಯ, ಯೋಜನೆಯಲ್ಲಿ ತೊಡಗಿರುವುದು ಸರ್ವಶ್ರುತ.

ಈ ಭೂಸುಧಾರಣಾ ಯೋಜನೆಯಲ್ಲಿ ಪಾರ್ಲಿಮೆಂಟರಿ ಪ್ರಜಾಸತ್ತೆಯ ಸತ್ತ್ವಾತ ಮೂಲಭೂತ ಹಕ್ಕಿಗೆ ಸಂಬಂಧಪಟ್ಟ ಘಟನಾತ್ಮಕ ಹಕ್ಕನ್ನು ಸರಕಾರ ವಿವೇಚಿಸಿದಂತಿಲ್ಲ. ಸ್ವಾತಂತ್ರ್ಯೋತ್ತರ ಸ್ವತಂತ್ರ ಭಾರತದ ಸಂವಿಧಾನ ಪೌರರಿಗೆ ಕೊಟ್ಟಂತಹ ಹಕ್ಕುಗಳನ್ನು ಅಂದರೆ ಆಸ್ತಿಯನ್ನು ಆರ್ಜಿಸುವ, ಉಳಿಸಿಕೊಳ್ಳುವ ಮತ್ತು ಹಸ್ತಾಂತರ ಮಾಡುವ ಮೂಲಭೂತ ಹಕ್ಕಿನ ಆಸ್ತಿ ಸ್ವಾತಂತ್ರ್ಯವನ್ನು ಕೊಟ್ಟಿದೆ. ನಮ್ಮ ಘನ ಮೈಸೂರು ಸರಕಾರವು ಭೂಸುಧಾರಣಾ ಯೋಜನೆಯಲ್ಲಿ ಈ ಘಟನಾದತ್ತ ಆಸ್ತಿಹಕ್ಕು ಪ್ರಶ್ನೆಯನ್ನು ಪರಿಶೀಲಿಸದೆ ಬರಿ ಸಮಾಜವಾದದ ಹೆಸರಿನಲ್ಲಿ ಒಂದೆತ್ತಿಗೆ ಬರೆ ಎಳೆಯುವ ನೀತಿಯನ್ನು ಅವಲಂಬಿಸಿರುವುದು ಯಾವ ನೆಲೆಯಲ್ಲಿ ಎಂದು ಅರ್ಥವಾಗುವುದಿಲ್ಲ. ಇಂದಿನ ದಿನಮಾನದ ಪರಿಸ್ಥಿತಿಯಲ್ಲಿ ಪ್ರಕೃತ ನೀತಿಯು ಕಾನೂನಾಗಿ, ಇಂದು ಉಳುವವನನ್ನೆ ಹೊಲದೊಡೆಯನನ್ನಾಗಿ ಮಾಡಿದರೆ ಭೂಒಡೆಯನ ಪರಿಸ್ಥಿತಿ ಇಕ್ಕಟ್ಟಿನದಾಗುತ್ತದೆ ಅಲ್ಲದೆ ಈ ಕಾನೂನಿನಿಂದ ಎಷ್ಟೋ ಜನ ಭೂಮಾಲೀಕರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ.

ಈ ತಲೆಮಾರಿನ ಎಷ್ಟೋ ಭೂಮಾಲಕರು ಆಸ್ತಿ ಒಡೆತನಕ್ಕೆ ಘಟನೆ ಕೊಟ್ಟ ಸ್ವಾತಂತ್ರ್ಯವನ್ನು ನಂಬಿ ವಿದ್ಯಾವಂತರಾಗಲಿ ಇಂದೆ ಉದ್ಯೋಗದ ದಾಂಧಲೆಯನ್ನು ಹಚ್ಚಿಕೊಳ್ಳದೆ ಭೂಉತ್ಪತ್ತಿಯ ಸರಿಸಮಾನ ಹಂಚಿಕೆಯ ವಂಬಳಿಯಿಂದ ಉದರ ನಿರ್ವಹಣೆಯನ್ನು ಮಾಡಿಕೊಂಡಿದ್ದರು. ಈ ಪರಿಸ್ಥಿತಿಯಲ್ಲಿ ನಿಮಗೇನು ಹೊಲವು ಬೇಡ ಹೊಲದ ಉತ್ಪತ್ತಿಯು ಬೇಡ ಎಂದರೆ ಅವನ ಸಾಗಬೇಕಾದದ್ದೂ ಏನು? ಉಣ್ಣಬೇಕಾದರೂ ಏನನ್ನು? ಭೂಸುಧಾರಣೆಗೆ ನಾವು ಎಲ್ಲ ರೀತಿಗಳಲ್ಲೂ ಈ ಶಾಸನವು ನಮಗೆ ಘಟನೆ ಕೊಟ್ಟ ಸ್ವಾತಂತ್ರ್ಯವನ್ನು ಕಸಿಯದ ರೀತಿಯಲ್ಲಿ ಇರಬೇಕು. ನಮ್ಮ ಸಂವಿಧಾನ ರಕ್ಷಕ ಉಚ್ಚ ನ್ಯಾಯಾಲಯವು ಸಹ ಎರಡು ಮೂರು ವರ್ಷಗಳ ಹಿಂದೆ ಭೂಸುಧಾರಣೆಯ ಲೋಪದೋಷದ ಬಗ್ಗೆ ಮಹತ್ವದ ತೀರ್ಪು ಕೊಟ್ಟದ್ದು ನಮ್ಮ ಸರಕಾರ ಮರೆತಿರಲಿಕ್ಕಿಲ್ಲವಷ್ಟೆ? ಈ ನೆಲೆಯಲ್ಲಿ ಯೋಜನಾ ಚೌಕಟ್ಟನ್ನು ತಯಾರಿಸಿದ್ದರೆ ತೃಪ್ತ ಸುಧಾರಣೆಗೊಂದು ಭದ್ರತೆ ಸಿಕ್ಕುತ್ತಿತ್ತು. ಆದ್ದರಿಂದ ಇನ್ನಾದರೂ ಸರಕಾರ ತೀರ್ಮಾನ ತಿದ್ದುಪಡಿಯನ್ನು ಮಾಡಿ ಎರಡು ಬಣದವರಿಗೂ ಅನ್ಯಾಯವಾಗದ ರೀತಿಯಲ್ಲಿ ಅಂದರೆ ಗೇಣಿದಾರನು 20 ವರ್ಷದವರೆಗೆ ಸರಕಾರಕ್ಕೆ ಗೇಣಿ ಕೊಡುವಂತೆ ಮಾಡಿ ಬದಲು ಈ ಇಪ್ಪತ್ತು ವರ್ಷ ಭೂಮಾಲೀಕರಿಗೇನೆ ಭೂಮಿಯ ಗೇಣಿಯನ್ನು ಕೊಟ್ಟು ತದನಂತರ ಅರ್ಥಾತ್ 20 ವರ್ಷದ ನಂತರ ಭೂಸ್ವಾಮ್ಯವನ್ನು ಗೇಣಿದಾರನು ಪಡೆಯುವಂತೆ ಮಾಡಲಿ ನಮಗೊಂದು ನೆಲೆಸಿಕ್ಕುವವರೆಗೆ, ಬೇಕಿದ್ದರೆ ಭೂಮಾಲೀಕನು ಅವನಿಂದ ಬಿಟ್ಟು ಹಾಕಿ ಮಾಡಿಸದೆ ಇರುವಂತೆ ಮಾಡಿ ಈ ಗೇಣಿಯನ್ನು ಸಹ ಕೋರ್ಟ್ ಮುಖಾಂತರವೆ ಕೊಡಲಿ. ಇದರಿಂದ ಈ ತಲೆಮಾರಿನ ಭೂಮಾಲೀಕರ ಮಕ್ಕಳಿಗಾದರೂ ವಿದ್ಯೆ ಕಲಿಯಲು ಆಸ್ಪದವಾಗುವುದಾದರೂ ಉದ್ಯೋಗವನ್ನು ಹಿಡಿದುಕೊಳ್ಳಲು ಅವಕಾಶವಾಗುತ್ತದೆ. ಅಲ್ಲದೆ ಈ ಕಾಲದಲ್ಲಿ ತಪ್ಪಿನ ತಲೆಮಾರಿನವರ ಜೀವನವು ಕೊನೆಗಾಣುವುದರಿಂದ ಇವರ ಹೊಟ್ಟೆ ಬಟ್ಟೆ ಪ್ರಶ್ನೆ ಏಳುವುದಿಲ್ಲ. ಒಂದೊಮ್ಮೆಗೆ ಸರಕಾರಕ್ಕೆ ಸಾಧ್ಯವಿಲ್ಲವೆಂದರೆ ಸರಕಾರ ಪ್ರಜೆಗಳ ಆಸ್ತಿಯನ್ನು ವಶಪಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಕೊಡಬೇಕಾದ ಪರಿಹಾರವನ್ನು ನಗದಾಗಿಯೇ ಕೊಟ್ಟು ಈ ಭೂಮಾಲೀಕರಿಗೆ ಬೇರೆ ಉದ್ಯಮಕ್ಕೆ ತೊಡಗಲು ಅನುವು ಮಾಡಿಕೊಡಲಿ. ಸರಕಾರ ಭೂಮಾಲೀಕನು ಬದುಕಿ ಬಾಳುವುದಕ್ಕಾಗಿ ಇಂತು ಮಾಡಿದರೆ ಸ್ವತಂತ್ರ ಭಾರತದ ಘಟನೆಯನ್ನು ನಂಬಿರುವ ಶ್ರೀಸಾಮಾನ್ಯನಿಗೆ ಅನ್ಯಾಯವಾಗುವುದಿಲ್ಲ. ಇಂತು ಬಿಟ್ಟು ಕೆಲವರನ್ನು ನಿರ್ಗತಿಕರನ್ನಾಗಿ ಮಾಡುವ ಹಾಲಿ ಭೂಸುಧಾರಣೆಯಿಂದ ಸಮಾಜ ತೃಪ್ತತೆ ಸಿಕ್ಕಲಿಕ್ಕಿಲ್ಲ. ನಮ್ಮ ಸಂವಿಧಾನ ಪ್ರಕಾರ ನ್ಯಾಯಕ್ಕೆ ಅನುಸಾರವಾಗಿಯೇ ಈಗ ಪರಿಹಾರವನ್ನು ಕೊಟ್ಟು ಆಸ್ತಿಯನ್ನು ವಶಪಡಿಸಿಕೊಳ್ಳಬೇಕು. ಅಂತೆಯೇ ಸಾವಿರಾರು ಭೂಕುಟುಂಬದ ವಿಷಯದಲ್ಲಿ ಸರಕಾರ ಸ್ವಲ್ಪ ಉದಾತ್ತತೆಯಿಂದ ವರ್ತಿಸಬೇಡವೆ?

ಆದ್ದರಿಂದ ಸಮಾಜ ತೃಪ್ತ ಭೂಸುಧಾರಣೆ ಸರಕಾರಕ್ಕೆ ಆಗಬೇಕೆಂದಿದ್ದರೆ ಇನ್ನಾದರೂ ಈ ವಿಷಯದಲ್ಲಿ ಸುಧಾರಿಸಿ ನಡೆಸುವುದು ಒಳ್ಳೆಯದೆಂದು ಹಾರೈಸುತ್ತೇನೆ.

—ಶ್ರೀ ಐ.ಎಚ್. ಶಾಂತಾರಾಮ ಶೆಟ್ಟಿ

ಶಾಂತಿ ಮಂತ್ರ

ಶಾಂತಿಯೇ ಬಾಳಿನ ಬೆನ್ನೆಲುಬು. ಶಾಂತಿಯೇ ಬಾಳಿಗೆ ಬಲ ಕೊಡುವುದು. "ಓಂ ಶಾಂತಿಃ ಶಾಂತಿಃ" ಎಂದು ಕೊನೆಯ ಮಂತ್ರಕ್ಕೆ "ಸಹನಾವವತು! ಸಹನೌಭುನಕ್ತು! ಸಹವೀರ್ಯಂ ಕರವಾವಹೈ" ಎಂಬುದು ಕೊನೆಯಾಗಿದೆ. ಜೊತೆ ಬಾಳುವೆಯ ಸಾಧನವಿಲ್ಲದೆ ಶಾಂತಿಯು ಸಿದ್ಧಿಯಾಗದು, ಎಂಬುದು ಆ ಮಂತ್ರದ ತಿರುಳಾಗಿದೆ.

ಬಾಳಿನಲ್ಲಿ ಬಡತನದ ಬೇಗೆ ಬಿಸಿಯು ಬರಹುದು; ಕಾಯಿಲೆಗಳ ಕಿಚ್ಚು ಸುಡಿಯಬಹುದು; ಹಗೆಗಳ ಬಾಣಗಳು ಹೆಡೆ ಬೀಸಬಹುದು, ನಾಳೆಯ ಕನಸಿಗೆ ಕತ್ತಲು ಮುಸುಕಬಹುದು; ಹೀಗೆ ಬಾಳು ಬೇಯುತ್ತಿದ್ದರೂ ಅದಕ್ಕೆ ಶಾಂತಿಯ ಶೀತಲೋದಕವನ್ನು ಸಿಂಪಡಿಸು.

ಮನವು ಕದಡದಿರಲಿ; ಬುದ್ಧಿಯು ತೂಕ ತಪ್ಪದಿರಲಿ; ಆತ್ಮನ ಆನಂದ ಅಡಗದಿರಲಿ ಇದೆಲ್ಲಕ್ಕೂ 'ಶಾಂತಿ ಮಂತ್ರ'ವೇ ಸಾಧನ.

ನಿರಪಾಯತೆಯು ಭಿಕ್ಷಾಯತೆಯು ಫಲವಾಗಿದೆ, ನೆರೆಹೊರೆಯವರೆಲ್ಲ ಶಿಷ್ಟವರಾದರೆ ಸಹಾಯವು ಸಾವಿರ ಕೈಗಳಿಂದ ಹರಿದು ಬರುವುದು. ನಿಸ್ಸಹಾಯಕತೆಯು ನಿರ್ಮೂಲವಾದರೆ ಶಾಂತಿಯು ತಾನೇ ನೆಲೆಗೊಳ್ಳುವುದು. ಮತ್ತೆ ಶಾಂತಿಯಿರುವ ಬಾಳು ಯಾವ ಬಿರುಗಾಳಿಗೂ ಬಗ್ಗದ ಬಂಡೆಯಾಗುವುದು.

ಆದ್ದರಿಂದಲೇ "ಓಂ ಶಾಂತಿಃ" ಎಂಬ ಅವಸ್ಥೆಯನ್ನು ಅರ್ಜಿಸಲು 'ಸಹನಾವವತು ಸಹನೌಭುನಕ್ತು' ಎಂಬ ಸಖ್ಯವನ್ನು ಉಪನಿಷತ್ತುಗಳು ಉಸಿರಿವೆ.

ನೆರೆಹೊರೆಯವರ ಪಲ್ಲಟಗಳು: ಅದರ ಅಷ್ಟಕ್ಕಾಗಿ ದೈನ್ಯ ಬೇಡ. ಪರತತ್ತ್ವವು ಸರ್ವಮಯವಾಗಿದೆ, ಎಂಬ ಪ್ರಜ್ಞೆಯೇ ಪರರನ್ನು ಪ್ರೇಮಿಸಲು ನಿಮ್ಮನ್ನು ಪ್ರೇರಿಸಲಿ. 'ಎಲ್ಲರಾಗು ಬಂಧು ಜನರಲಿ....ಇದು ಭಾಗ್ಯ ಇದು ಭಾಗ್ಯ' ಎಂದು ಪುರಂದರದಾಸರು ಹಾಡಿದ್ದಾರೆ. 'ನ ಚಾಭಾವಯತಃ ಶಾಂತಿಃ' ಎಂಬುದು ಗೀತೆಯ ನುಡಿ, ಎಂದರೆ ಸ್ವಪರದಲ್ಲೆಲ್ಲ ಪರತತ್ತ್ವವೇ ಪಸರಿಸಿದೆ ಎಂಬ ಪ್ರಜ್ಞೆಯಿಲ್ಲದವನಿಗೆ ಶಾಂತಿಯಿಲ್ಲ.

ಶಾಂತಿಯು ಬಾಳಿನ ಬೆನ್ನೆಲುಬು; ಮಹಾತ್ಮಾ ಸರ್ವಭೂತಾತ್ಮಾ ಎಂಬ ಪ್ರಜ್ಞೆಯೇ ಶಾಂತಿಯ ನೆಲೆಗಟ್ಟು.

— ತಾರಾದಾಸ

(ದೀಪಾರ್ಯ)

ಪ್ರಕಟಣೆ

ಉಡುಪಿ ಕಸಬೆಯಲ್ಲಿರುವ ಪಡುಪೇಟೆ ನರಸಿಂಹ ಉಪಾಧ್ಯಾಯರ ಮಗ ಶ್ರೀನಿವಾಸ ಉಪಾಧ್ಯಾಯನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ; ನನ್ನ ಅಣ್ಣ ವೆಂಕಟಕೃಷ್ಣ ಉಪಾಧ್ಯಾಯನು ಸಮುಚಿತ ಕಾರಣವಿಲ್ಲದೆ ನನಗೆ ಕಳೆದ 5 ವರ್ಷಗಳಿಂದ ನನಗೇನೂ ಕೊಡದೆ ನಮ್ಮ ಬಾಬು ಪಿತ್ರಾರ್ಜಿತ ಮತ್ತು ದಾಯಿತ್ರ ಹಕ್ಕಿನಿಂದ ನನಗೆ ಬಂದ ಸಿರಾಸ್ತಿಗಳ ಹುಟ್ಟುವಳಿಗಳನ್ನು ಅವನೊಬ್ಬನೇ ಉಪಯೋಗಿಸಿ ಬರುತ್ತಾನೆ. ಇದರಿಂದಾಗಿ ನನ್ನ ಜೀವನಕ್ಕೆ ತೊಂದರೆಯುಂಟಾಗಿದೆ. ಹೀಗಿರುವಲ್ಲಿ ನಮ್ಮ ಬಾಬುಗೇಣಿ ಮತ್ತು ಮೂಲಗೇಣಿ ಒಕ್ಕಲುಗಳು ನನ್ನ ಪಾಲಿನ ಎಲ್ಲಾ ಹುಟ್ಟುವಳಿಗಳನ್ನು ಕೊಟ್ಟು ರಶೀದಿ ಪಡೆಯಬೇಕಾಗಿ ಈ ಮೂಲಕ ತಿಳಿಯಪಡಿಸುತ್ತೇನೆ.

P. Shrinivasa Upadhya.

ಉಡುಪಿ, ತಾ. 4-5-1970.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service

ಮನೆ-ಮದ್ದು

ಗೃಹವೈದ್ಯ — ರೂ.2-00

ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1-50

ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ — ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ

ರಖಂ ಪ್ರತಿಗಳಿಗೆ ರಿಯಾಯತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಶಾಲುಕೋಟೆ, ಉಡುಪಿ ದ. ಕ.

NAVAYUGA 14—5—1970
Registered with the Registrar of News Papers for India under No. R. N. 3540/'57

REGD. No. B. G. 176
LICENCE No. 33.
Licensed to Post without Prepayment

ಆರಂಭಿಕ ಭೌಮ್ಯಾಗ್ನಿ — ಅಗಸ್ತ್ಯ

ಗ್ರಹ ನಕ್ಷತ್ರಗಳು ನೀಹಾರಿಕೆಗಳಿಂದಲೇ ಸೃಷ್ಟಿಯಾದವೆಂಬ ದೃಷ್ಟಿಯಿಂದ ಅಗಸ್ತ್ಯನಿಗೆ ಸಂಬಂಧಿಸಿದ ಕಥೆಗೆ ಈ ಅರ್ಥವನ್ನು ಕೊಡಬಹುದು: ನಮಗೆ ಆಕಾಶದಲ್ಲಿ ಗೋಚರವಾಗುವ ಸೂರ್ಯನು ಅಗಸ್ತ್ಯನೆಂಬ ಮಾನವನಿಗೆ ಹುಟ್ಟಿದವನಲ್ಲ. ಅಗಸ್ತ್ಯನೆಂಬ ಒಂದು ಬಹುದೊಡ್ಡದಾದ ನೀಹಾರಿಕೆಯಿಂದ ಹುಟ್ಟಿದವನು. ಆಗ, ಅಗಸ್ತ್ಯನಿಂದ ಸೂರ್ಯೋತ್ಪತ್ತಿಯು ಕಟ್ಟುಕತೆಯಾಗಿ ಉಳಿಯುವುದಿಲ್ಲ; ಒಂದು ಪರಮ ವೈಜ್ಞಾನಿಕ ಕಥೆಯಾಗುತ್ತದೆ.

ಸೂರ್ಯನು ಸಹಸ್ರಾನುಸಹಸ್ರ ಹೋಳುಗಳಾದ ಕಥೆಯನ್ನು ಹೀಗೆ ತಿಳಿಯಬಹುದು. ಸೂರ್ಯನು ನೀಹಾರಿಕೆಯ ರೂಪವನ್ನು ತ್ಯಜಿಸಿ, ಘನ ಘನವಾಗಿ ತನ್ನ ಹೊಸ ಕೇಂದ್ರದ ಮೇಲೆ ಸುತ್ತುವರಿಯುವ ಸಾಮರ್ಥ್ಯ ಪಡೆದ ಕಾಲದ ವರ್ಣನೆಯಿದು. ಆ ಅದ್ಭುತ ಅವಸ್ಥೆಯಲ್ಲಿ ಸುತ್ತುವಾಗ (ಬ್ರಹ್ಮಪುರಾಣ ೧-೩೨-೮೭) ಅನೇಕ ಹೋಳುಗಳಾಗಿ, ಅದರಿಂದ ಅವು ಪ್ರತ್ಯೇಕವಾಗಿ, ಭೂಮಿ, ಮಂಗಲ, ಬುಧ, ಬೃಹಸ್ಪತಿ, ಶುಕ್ರ, ಶನಿ ಮೊದಲಾದುವುಗಳು ರೂಪುಗೊಂಡುವು. ಈ ಗ್ರಹಗಳು ಇಂದಿಗೂ ಸೌರವ್ಯೂಹದಲ್ಲಿ ಪರಿಭ್ರಮಣಗೊಳ್ಳುತ್ತಿದ್ದು, ಮೇಲಿನ ಅರ್ಥಕ್ಕೆ ಜ್ವಲಂತ ಸಾಕ್ಷಿಯಾಗಿವೆ.

ಅಗಸ್ತ್ಯನು ಸಮುದ್ರಪಾನ ಮಾಡಿದನೆಂದು ಕೇಳಿದ್ದೇವೆ. ಈ ಕಥೆಗೂ ವೈಜ್ಞಾನಿಕ ಅರ್ಥವಿದೆ. ಇದು ಭೂಮಿಯ ಮೇಲಿನ ತಪ್ತದಶೆಯ ಅಗ್ನಿಯು ಶಾಂತವಾಗಿ ಅದು ಭೂಮಿಯು ಎರಡನೆಯ ಪದರು ವಿಕಲದಲ್ಲಿ ಕಟ್ಟಿಕೊಂಡ ಸಮಯದ ವರ್ಣನೆ. ಬೆಂಕಿಯು ಮೇಲ್ಭಾಗದಿಂದ ಅದೃಶ್ಯವಾದರೂ ಅದರ ಬಿಸಿ ಇನ್ನೂ ಆರಿರಲಿಲ್ಲ. ಋಗ್ವೇದವು ಹೇಳುವಂತೆ (೮-೮-೪೮-೧-೩) ಅದರ ಆಕಾಶದಲ್ಲಿ (ಮೇಲ್ಗಡೆ) ಈ ಸಮುದ್ರವಿತ್ತು. ಅಗಸ್ತ್ಯನೆಂಬ ಭೌಮ್ಯಾಗ್ನಿಯಿಂದ (ಪುಲಸ್ತ್ಯೋಜನಯತ್ಪತ್ನ್ಯಾಂ ಅಗಸ್ತ್ಯಂಚ ಹವಿರ್ಭುಜಮ್ (ಭಾಗವತ ೪-೧-೩೬) ಭೂಮಿಯು ಬಹಳವಾಗಿ ಕಾದುಕೊಂಡಿತ್ತು. ಮುಸಲಧಾರೆಯಾಗಿ ಆಕಾಶದಿಂದ ಮಳೆ ಭೂಮಿಯ ಮೇಲೆ ಸುರಿಯತೊಡಗಿತು. ಕಾದ ಕಾವಲಿಯ ಮೇಲೆ ಉದುರಿದ ನೀರ ಬಿಂದುಗಳಂತೆ ಆ ನೀರೆಲ್ಲವೂ ಬಿದ್ದಕೂಡಲೇ ಮಾಯವಾಯಿತು. ಇದೇ ಅಗಸ್ತ್ಯನಿಂದ ಸಮುದ್ರಪಾನದ ಅದ್ಭುತ ಕಥೆ. ಇದರಲ್ಲಿ ಭೂಮಿಯಲ್ಲಿನ ಅಗ್ನಿಯ ವರ್ಣನೆಯಿದೆಯಲ್ಲದೆ ಯಾವನೇ ಮನುಷ್ಯನು ಸಮುದ್ರಪಾನ ಮಾಡಿದ ಕಥೆಯಿಲ್ಲ. ಓರ್ವ ಮಾನವನು ಸಮುದ್ರದ ನೀರೆಲ್ಲವನ್ನೂ ಆಪೋಶನಮಾಡಿಬಿಟ್ಟನೆಂದು ಸತ್ಯವಾಗಿ ತಿಳಿದರೆ, ಅದು ಭ್ರಮಾತ್ಮಕವೇ ಸರಿ. ಸತ್ಯವನ್ನು ಅದ್ಭುತ ರಮ್ಯವಾಗಿ ಪುರಾಣಗಳಲ್ಲಿ ವರ್ಣಿಸಿದ್ದಾರೆನ್ನುವುದೇ ತರ್ಕಸಂಗತವಾದದ್ದು.

ಅಗಸ್ತ್ಯ ಮತ್ತು ವಿಂಧ್ಯ ಪರ್ವತ ಇವುಗಳಿಗೆ ಸಂಬಂಧಿಸಿದ ಕಥೆಯೂ ಅಷ್ಟೆ. ಇದು ಮೊದಲ ಕಥೆ ಘಟಿಸಿದ ಲಕ್ಷೋಪಲಕ್ಷ ವರ್ಷಗಳ ನಂತರಕ್ಕೆ ಹೊಂದಿಕೊಳ್ಳುತ್ತದೆ. ಅಗಸ್ತ್ಯ ಭೌಮ್ಯಾಗ್ನಿ ಭೂಮಿಯ ಮೂರನೆಯ ಸ್ತರ ನಿತಲಕ್ಕೆ ಇಳಿಯಿತು. (ಸ್ಕಂದ ಪುರಾಣ ೨-೪) ಅಲ್ಲಿ ಅದು ಧಗಧಗಿಸಿ ಉರಿಯುತ್ತಿತ್ತು. ಈ ಉರಿಗೆ ಭೂಮಿಯು ಒಳಗಿಂದೊಳಗೇ ಕುದಿಯುತ್ತಿತ್ತು. ಪದರು ತೆಳ್ಳಗಿರುವಲ್ಲಿ ಉರಿ ಭೂಮಿಯ ಮೇಲೂ ಸಿಡಿದು ಕಾಣಿಸಿಕೊಳ್ಳುತ್ತಿತ್ತು. ಅಲ್ಲಲ್ಲಿ ಪರ್ವತಗಳು ನಿರ್ಮಾಣಗೊಳ್ಳುತ್ತಿದ್ದುವು. ಅವು ದಿನೇ ದಿನೇ ಬೆಳೆಯುತ್ತಲೇ ಇದ್ದವು. ಅಗ್ನಿ ಪ್ರವಾಹದ ಬಲದಿಂದ ಈ ಅಗ್ನಿಪರ್ವತಗಳು ಎತ್ತರೆತ್ತರಕ್ಕೆ ಏರುತ್ತಿದ್ದುವು. ಭೂಗರ್ಭ ಶಾಸ್ತ್ರಜ್ಞರು ಅಗ್ನಿಪರ್ವತಗಳ ನಿರ್ಮಾಣವನ್ನು ಸಮರ್ಥಿಸುತ್ತಾರೆ. ಭೂಮಿಯೊಳಗಿನ ಕಾವು ಮಿತಿಮೀರಿದಾಗ ಜ್ವಾಲಾಮುಖಿಗಳು ಕಾಣಿಸಿಕೊಳ್ಳುವುದೂ ಇವು ಅತ್ಯಧಿಕ ಪ್ರಮಾಣದಲ್ಲಿ ಲಾವಾರಸವನ್ನು ಕಾರುವುದೂ ಇಂದಿಗೂ ನಡೆಯುತ್ತಿವೆ. "ಗಿರಿಃ ಪರ್ವತಃ ಸಮುದ್ಗೀರ್ಣೋ ಭವತಿ" (ನಿರುಕ್ತ ೧-೨೦-೫) ಅಂದರೆ, ಭೂಮಿಯ ಉಗುಳುವಿಕೆಯಿಂದ ಪರ್ವತಗಳಾಗುತ್ತವೆ. ಅಗಸ್ತ್ಯನ ಈ ಕಥೆಯಲ್ಲಿ ಈ ಭೌಮ್ಯಾಗ್ನಿಯು ನಿತಲದಿಂದಲೂ ಕೆಳಕ್ಕೆ (ದಕ್ಷಿಣ) ಸುತಲಕ್ಕೆ ಇಳಿಯಲು, ತತ್ಕಾರಣದಿಂದ ಜ್ವಾಲಾಮುಖಿಗಳ ಕಾವು ಕಡಿಮೆಯಾಗಿ ಪರ್ವತಗಳ ಬೆಳವಣಿಗೆ ನಿಂತುಬಿಟ್ಟಿರುವ ಘಟನೆ ಅಡಗಿದೆ.

ಇದನ್ನೇ ಪುರಾಣವು ಹೀಗೆ ಹೇಳುತ್ತದೆ: ಅಗಸ್ತ್ಯನು (ಅಗ್ನಿ) ಉತ್ತರದಿಂದ ದಕ್ಷಿಣಕ್ಕೆ ಹೋಗುವಾಗ, ವಿಂಧ್ಯ ಪರ್ವತವು ಎತ್ತರೆತ್ತರಕ್ಕೆ ಬೆಳೆಯುತ್ತ ಬಾಧಕವಾಯಿತು. ಅಗಸ್ತ್ಯನು ವಿಂಧ್ಯವನ್ನು ದಾಟಿ ದಕ್ಷಿಣಕ್ಕೆ ಹೋದಾಗ ನಾನು ಮರಳಿ ಬರುವವರೆಗೆ ಬೆಳೆಯುವುದನ್ನು ನಿಲ್ಲಿಸು, ಎಂದು ಕಟ್ಟಪ್ಪಣೆ ನೀಡಿದನು. ಅಂದರೆ ಭೂಮಿಯೊಳಗಿದ್ದ ಲಾವಾದಿಂದ ಏರುತ್ತ ಬೆಳೆಯುತ್ತಿದ್ದ ವಿಂಧ್ಯ, ಬೆಂಕಿಯು ಸುತಲಕ್ಕೆ ಇಳಿದುದರಿಂದ ಬೆಳವಣಿಗೆಯನ್ನು ನಿಲ್ಲಿಸಿತು. ಇನ್ನು ಅದು ಬೆಳೆಯಬೇಕಾದರೆ, ದಕ್ಷಿಣದಿಂದ ಅಗಸ್ತ್ಯನು ಮತ್ತೆ ಉತ್ತರಕ್ಕೆ ಬರಬೇಕು.

ಭೂಮಿಯ ಚಿತ್ರ ಬಿಡಿಸುವಾಗ ಮೇಲ್ಭಾಗವನ್ನು ಉತ್ತರವೆಂದೂ ಕೆಳಭಾಗವನ್ನು ದಕ್ಷಿಣವೆಂದೂ ಗುರುತಿಸುವುದು ಇಂದು ವಾಡಿಕೆ. ಇದೇ ಸಂಪ್ರದಾಯ ಪುರಾಣಕಾಲದಲ್ಲೂ ಇತ್ತು. ಆದುದರಿಂದಲೇ ಅಗಸ್ತ್ಯನು ಮೇಲ್ಸ್ತರದಿಂದ ಕೆಳಸ್ತರಕ್ಕೆ ಹೋದನೆಂಬುದಕ್ಕೆ ಬದಲಾಗಿ ಉತ್ತರದಿಂದ ದಕ್ಷಿಣಕ್ಕೆ ಹೋದನೆಂದು ಇಲ್ಲಿ ಹೇಳಿದ್ದು ಯುಕ್ತಿಸಂಗತವೇ ಆಗಿದೆ.

—ಗೋ.

ಶಂಕರ ಜಯಂತಿ —

(ಒಂದನೇ ಪುಟದಿಂದ)

ತೆಂದು ಹೇಳಿರುವದಕ್ಕೆ, ಅಲ್ಲಿ ಬಾಂಬು ಸ್ಫೋಟ ನಡೆದಿಲ್ಲವೆಂದೂ, ಮೆರವಣಿಗೆಯಲ್ಲಿ ಯಾವಾಗಲೂ ಇರುವಂತೆ ಅಂದೂ ಪಟಾಕಿಗಳಿದ್ದುವೆಂದೂ ರಣಧೀರ ಸಿಂಘರು ಮಾತಿನ ಪಟಾಕಿ ಹೊಡೆದಿದ್ದಾರೆ. ಇಲ್ಲಿ ಯಾರು ನಿಜ? ಲೋಕಸಭೆಯಲ್ಲಿ ಗೃಹಮಂತ್ರಿಯವರು ನೈಜ ವರದಿಯನ್ನೇಕೆ ಮಂಡಿಸಿರುವದಿಲ್ಲ? ಗೃಹಮಂತ್ರಿಯವರು ಸುಳ್ಳು ಹೇಳಿರುವದಾದಲ್ಲಿ ರಣಧೀರ ಸಿಂಘರೇ ಅತ್ತಕ್ಕೆ ಆಕ್ಷೇಪವೆತ್ತಬಾರದು? ರಣಧೀರ ಸಿಂಘರು ಮಾತು ಸುಳ್ಳಾದಲ್ಲಿ ಅವರ ಮೇಲೆತ್ತಲಿಕ್ಕೆ ಗೃಹಖಾತೆ ಕ್ರಮ ಕೈಗೊಳ್ಳಬಾರದು?.

ಮೆರವಣಿಗೆಯು ಸಪೂರ ಓಣಿಯಲ್ಲಿ ಹೋಗುತ್ತಿದ್ದಾಗ ಬಾಂಬು ಬಿಸಾಡಬೇಕಾದಲ್ಲಿ ಅದು ಪೂರ್ವ ನಿಯೋಜಿತವೇ ಇರಬೇಕು. ಇದೇ ಸಿಂಘರು ಆರಂಭದಲ್ಲಿ ಹೇಳಿದಂತೆ ರಾಮನವಮಿ ಉತ್ಸವದ ಸಮಯ ಗಲಾಟೆ ನಡೆಯುತ್ತದೆನ್ನುವ ವಿಷಯ ಮುಂಚೆಯೇ ಅಲ್ಲಿ ಎಲ್ಲರಿಗೂ ಗೊತ್ತಿತ್ತು. ಆಡಳಿತ ವರ್ಗಕ್ಕೂ ಅದು ಗೊತ್ತು ಇದಕ್ಕೊಂದು ಒಳ್ಳೆಯ ಉದಾಹರಣೆಯನ್ನು ಅವರು ಕೊಟ್ಟಿದ್ದಾರೆ. ಎಪ್ರಿಲ್ ಹನ್ನೆರಡರಂದು ಆ ಊರಿನಲ್ಲಿ ಸರಕಾರಕ್ಕೆ ಸಂಬಂಧಪಟ್ಟ ಒಂದು ಪರೀಕ್ಷೆ ನಡೆದಿತ್ತು. ಅಲ್ಲಿ ಪರೀಕ್ಷೆಗೆ ಕುಳಿತುಕೊಂಡಿದ್ದವರಿಗೆ ಕೇಳಿರುವ ಪ್ರಶ್ನೆಗಳಲ್ಲಿ ಒಂದು ಭವಿಷ್ಯಕ್ಕೆ— ಅದುವೇ ಮತೀಯ ಗಲಭೆಗೆ— ಸಂಬಂಧಪಟ್ಟದ್ದಾಗಿದೆ. ರಾಮನವಮಿ ಉತ್ಸವ ನಡೆಸಿದ್ದು ಎಪ್ರಿಲ್ ಹದಿನೈದರಂದು. ಪ್ರಶ್ನೆ ಕೇಳಿರುವವನಿಗೆ ಈ ವಿಷಯ ಹೇಗೆ ಗೊತ್ತು? ಪ್ರಶ್ನಾಪತ್ರಿಕೆ ಮುಂಚಿತವಾಗಿಯೇ ಸಿದ್ಧಗೊಳಿಸಿರಬೇಕು. ಅಂದರೆ ಹತ್ತಿಪ್ಪತ್ತು ದಿನಗಳಿಂದಾದರೂ ಆ ವಿಷಯ ಪ್ರಶ್ನಾಪತ್ರಿಕೆ ತಯಾರಿಸುವ ವ್ಯಕ್ತಿಗೆ ತಿಳಿದಿರಲೇಬೇಕು. ದಿನಾಂಕ ಹನ್ನೆರಡರ ನಂತರ ಇನ್ನೂ ಹೆಚ್ಚಿನವರಿಗೆ ಗೊತ್ತಾಗಿದೆನ್ನಬಹುದು. ಜನರಿಗೆ ಈ ವಿಷಯ ತಿಳಿದಿತ್ತೋ ಇಲ್ಲವೋ, ಅಂತೂ ಪ್ರಶ್ನಾಪತ್ರಿಕೆ ತಯಾರಿಸಿದ್ದ ವ್ಯಕ್ತಿಗೆ ಆ ವಿಷಯ ತಿಳಿದಿತ್ತೆಂದಾಯಿತು. ರಣಧೀರ ಸಿಂಘರ ಅಭಿಪ್ರಾಯದಂತೆ, ಇದನ್ನು ಪೂರ್ವನಿಯೋಜಿತ ಅಲ್ಲವೆಂದು ಹೇಳಲು ಹೇಗೆ ಸಾಧ್ಯ? ರಣಧೀರ ಸಿಂಘರು ಒಂದೇ ಉಸಿರಿನಲ್ಲಿ ಅದನ್ನೂ ಹೇಳುತ್ತಾರೆ, ಇದನ್ನೂ ಹೇಳುತ್ತಾರೆ!

ಹೊಸ ಕಾಂಗ್ರೆಸ್ಸಿಗರ ಕಮ್ಯೂನಿಸ್ಟರ ಹಾಗೂ ಮುಸ್ಲಿಂಲೀಗಿಗಳ ಮಾತಿನ ಅಭಿಪ್ರಾಯವೇನೆಂದರೆ ಭಾರತದಲ್ಲಿ ಶ್ರೀರಾಮ ಜಯಂತಿ ಉತ್ಸವ ಮುಂತಾದ ರಾಷ್ಟ್ರೀಯ ಅಂದರೆ ಹಿಂದೂ ಜೀವನಕ್ಕೆ ಸಂಬಂಧಪಟ್ಟ ಉತ್ಸವಗಳನ್ನಾಚರಿಸಬಾರದು. ಅವರು ಆಚರಿಸಿದರೆ ತಾನೆ ಮುಸ್ಲಿಮರಿಗೂ ಕಮ್ಯೂನಿಸ್ಟರಿಗೂ ಗಲಾಟೆ ಮಾಡಲು ಸಂದರ್ಭ ಸಿಗುವದು!

ಇದರಲ್ಲಿ ನಿಜವಾಗಿ ರಾಷ್ಟ್ರೀಯ ವಿಚಾರಧಾರೆಯಾವದಿದೆ? ಮರ್ಯಾದಾಪುರುಷೋತ್ತಮ ಪ್ರಭು ಶ್ರೀರಾಮಚಂದ್ರನನ್ನು ಅನುಸರಿಸುವದು ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಸರಿಯೇ? ಅಥವಾ ಮಹಮ್ಮದ್ ಮತ್ತು ಲೆನಿನ್‌ರ ಜನ್ಮೋತ್ಸವವನ್ನು ಆಚರಿಸುವದು ರಾಷ್ಟ್ರದ ಭದ್ರತೆಗೆ ಹಾಗೂ ಹಿತಕ್ಕೆ ಒಳ್ಳೆಯದೇ? ಹೊಸಕಾಂಗ್ರೆಸ್ಸಿಗರ, ಕಮ್ಯೂನಿಸ್ಟರುಗಳ ಹಾಗೂ ಮುಸ್ಲಿಂಲೀಗಿಗಳ ಅಭಿಪ್ರಾಯವಾದರೋ ಎರಡನೆಯದ್ದೇ ಇದೆ. ಈ ರಾಷ್ಟ್ರೀಯ, ರಾಷ್ಟ್ರವಿರೋಧಿ ವಿಚಾರವನ್ನು ಹತ್ತಿಕ್ಕಲು ಇಂದು ಮತ್ತೊಮ್ಮೆ ಶಂಕರನು ಅವತರಿಸಲಾರನೇ?

ಜಾತಿ, ಮತ, ಭಾಷೆ ಭೇದಗಳನ್ನು ತೊರೆದು ಭಾರತೀಯರೆಲ್ಲರೂ ಭಾರತಮಾತೆಯ ಜಯಜಯಕಾರದೊಂದಿಗೆ ಶಂಕರ ಜಯಂತಿಯನ್ನು ಆಚರಿಸಿದಾಗಲೇ ಭಾರತ ಪುನಃ ವಿಶ್ವಗುರು ಆಗುವದು. ಅದುವರೆಗೂ ಮಾತೆಯು ಮರುಗುವದೇ ಸರಿ.

— ಶಿವಶಂಕರ

Gram : VISHWA
Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 21—5—1970

ಸಂಪುಟ 49
ಸಂಚಿಕೆ 37

ಕಟ್ಟಲಾರೆವೆ ಒಕ್ಕಟ್ಟಿನ ಮನೆಯನ್ನು?

ಶಾಂತಿ-ಸಮೃದ್ಧಿಗಳ ನೆಲೆವೀಡನ್ನಾಗಿ ಪರಶುರಾಮನೊಂದು ಹೊಸ ಭೂಪ್ರದೇಶವನ್ನು ಸೃಷ್ಟಿಸಿದನಂತೆ. ಅಲ್ಲಿ ಅದಾವುದಕ್ಕೂ ಕೊರತೆಯೆಂಬುದಿಲ್ಲ. ಜಾತಿ-ಜಾತಿಗಳ ನಡುವೆ, ವರ್ಗ-ವರ್ಣಗಳ ಮಧ್ಯೆ ಬಡಿದಾಟ-ಹೊಡೆದಾಟವೆಂಬುದಿಲ್ಲ. ಅಲ್ಲಿ ಜನರು ಶಾಂತಿಯಿಂದ ಇದ್ದರು. ಅದಕ್ಕೆ ಪರಶುರಾಮ ಸೃಷ್ಟಿಯೆಂದೇ ಹೆಸರು. ಅವನು ಸೃಷ್ಟಿಸಿದ್ದರಿಂದ ಆ ಹೆಸರು ಬಂತು. ಅವನು ತನ್ನ ಪರಶುವನ್ನು (ಕೊಡಲಿಯನ್ನು) ಬೀಸಿ ಎಸೆದನಂತೆ; ಅದೆಲ್ಲಿ ಬಿತ್ತೋ ಅಲ್ಲಿಯವರೆಗಿದ್ದ ಸಮುದ್ರ ಹಿಂದಕ್ಕೆ ಹೋಯಿತು. ಹೊಸ ಭೂಪ್ರದೇಶ ಉಂಟಾಯಿತು. ಅಲ್ಲಿ ಜನರು ನೆಮ್ಮದಿಯಿಂದ ಇದ್ದರು. ಪರಶುರಾಮನು ತನ್ನ ಪರಶುವನ್ನು ಬಿಸಾಡಿದನೆಂದರೆ ತನ್ನ ಆಯುಧವನ್ನು ತೊರೆದು ಅಹಿಂಸಾವಾದಿಯಾಗಿ ಬಿಟ್ಟನೇನು? ಮನಸ್ಸಿನ ಬೇಗೆಯನ್ನು ತಾಳಲಾರದೆ ಆ ಭೂಪ್ರದೇಶಕ್ಕೆ ಬಂದ ಪರಶುರಾಮ ಅಹಿಂಸಾವಾದಿಯಾದನೇನು? ಅದು ಆ ಭೂಪ್ರದೇಶದ ಹಾಗೂ ಅಲ್ಲಿ ವಾಸಿಸುತ್ತಿದ್ದ ಜನರು ಅವನ ಮನಸ್ಸಿನ ಮೇಲೆ ಉಂಟು ಮಾಡಿದ ಪರಿಣಾಮವೇನು? ಅಥವಾ ಅಲ್ಲಿಯ ಜನರನ್ನು ಪರಶುರಾಮನು ಅಹಿಂಸಾವಾದಿಗಳನ್ನಾಗಿ ಮಾಡಿ ಹೊಸ ಸೃಷ್ಟಿಯನ್ನುಂಟು ಮಾಡಿದನೇನು? ಈ ಪ್ರಶ್ನೆಗೆ ಸರಿಯಾದ ಉತ್ತರ ಬರುವ ಬದಲು ಬೇರೆ ಪ್ರಶ್ನೆಗಳೇ ಬಂದಾವು. ಇಂದು ಆ ಪ್ರದೇಶದಲ್ಲಿರುವ ಜನರು ಅಷ್ಟೇನೂ ಹಿಂಸಾಪ್ರಿಯರಾಗಿರುವುದಿಲ್ಲ; ಶಾಂತವಾಗಿಯೇ ಇದ್ದಾರೆ. ಮಂಗಳೂರಿನಲ್ಲಿ ನಡೆದ ಒಂದು ಗಲಭೆಯನ್ನು ಬಿಟ್ಟಲ್ಲಿ ಅಂತಹ ಹೊಡೆದಾಟ ಇತ್ತೀಚೆಗೂ ಅಲ್ಲಿ ನಡೆದಿರುವುದಿಲ್ಲ. ಹಾಗಾದರೆ ನಿಜವಾಗಿ ಪರಶುರಾಮನು ಸಮುದ್ರ ಮಧ್ಯೆ ತನ್ನ ಪರಶುವನ್ನು ಬಿಸಾಡಿದ್ದು ಏತಕ್ಕೇನು? ಕೊಡಲಿ ಬಿದ್ದೊಡನೆ ಸಮುದ್ರದ ನೀರು ಹಿಂದಕ್ಕೆ ಹೋಗಿ ಬಿಟ್ಟಿತೇನು? ನೀರಿಗೂ ಕೊಡಲಿಗೂ ಸಂಬಂಧ ಇದೆ ಎನ್ನಲಾಗುತ್ತಿದೆ ಏನು? ಸಮುದ್ರಕ್ಕೂ ಪರಶುವಿಗೂ ಪರಸ್ಪರ ಸಂಬಂಧ ಇದೆಯೆಂದು ಯಾರೂ ಹೇಳಿರುವುದಿಲ್ಲ. ಮತ್ತೇಕೆ ಕಡಲು ಕಾಲ್ತೆಗೆಯಿತು? ಕೊಡಲಿ ಬಿದ್ದೊಡನೆ ಕಡಲು ಹಿಂದೋಡಿತೋ ಇಲ್ಲವೋ, ಅಂತೂ ಶ್ರಮಕ್ಕೆ, ನಿಷ್ಠೆಗೆ, ಬಲಕ್ಕೆ ಫಲ ಇದೆಯೆಂದಾಯಿತು. ಬಲಶಾಲಿ ರಾಷ್ಟ್ರ ಶಾಂತಿಯಿಂದ ಇರಬಹುದೆಂದಾಗುತ್ತದೆ. ಆ ಬಲಕ್ಕೆ ಒಗ್ಗಟ್ಟು, ಐಕ್ಯ ಅತ್ಯಗತ್ಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ನಮ್ಮ ಜನಕ್ಕೆ ಇಂದು ಅರ್ಥವಾಗುತ್ತದೇನು?

ಇಸ್ಲಾಮಿನ ಆಕ್ರಮಣ ಇಲ್ಲಿ ಹೇಗಾಯಿತು? ಬ್ರಿಟಿಷರಿಲ್ಲಿ ಬೀಡು ಬಿಟ್ಟಿರಲು ಹೇಗೆ ಸಾಧ್ಯವಾಗಿತ್ತು. ನಾವು ಜಗಳಾಡಿಕೊಳ್ಳುತ್ತಿದ್ದುದರಿಂದ, ಹಾಗೆ? ಮಹಮ್ಮದೀಯ ಆಕ್ರಮಣಗಾರರಿಗಾಗಲೀ, ಕ್ರಿಸ್ತೀಯ ಆಕ್ರಮಣಗಾರರಿಗಾಗಲೀ ಆಮಂತ್ರಣ ಇತ್ತವರು ಯಾರು?—ಸಹಾಯ ಮಾಡಿದವರ್ಯಾರು? ಮಹಾಶತ್ರುವೆಂದು ಕೈಜೋಡಿಸಿ ನಿಂತವರ್ಯಾರು? ಎಲ್ಲಾ ನಾವೇ? ಇದರ ಪೂರ್ಣ ಲಾಭ ಪಡೆದವರು ಆಂಗ್ಲೇಯರು. ಅದೆಷ್ಟು ವರ್ಷ ಸಂದರೂ ಇಲ್ಲಿಯ ಜನಗಳು ಒಂದಾಗಬಾರದೆಂದು ಅವರು ತಮ್ಮ ವಿಶಿಷ್ಟ ವಿದ್ಯಾಭ್ಯಾಸ ಪದ್ಧತಿ ಹಾಗೂ ಉದ್ಯೋಗ ಮೂಲಕ ತಮ್ಮ ಕೈಚಳಕವನ್ನು ತೋರಿಸಿ ಹೋದರು. ಬ್ರಿಟಿಷರ ಬಿಳಿತೊಗಲಿಗೆ ಮಾರುಹೋದ, ಬೂಟುಗಾಲಿಗೆ ಬೆದರಿದ ಭಾರತೀಯರು ಇಂಡಿಯನರಾಗಿ ಬಿಟ್ಟರು. ಇಂದೂ ಇಂಡಿಯನರನ್ನು ಭಾರತೀಯರನ್ನಾಗಿಸುವುದು ಕಷ್ಟದ ಕಾರ್ಯವೇ ಆಗಿ ಬಿಟ್ಟಿದೆ. ಅವರಿಗೆ ಬ್ರಿಟಿಷರ ಬೂಟುಗಾಲನ್ನು ನೆಕ್ಕುವುದರಿಂದ ಅದ್ಯಾವ ರೀತಿಯದ್ದೋ ಅಮಿತ ಆನಂದವಾಗುತ್ತದೆ. ಭಾರತೀಯರೆನ್ನಿಸಿಕೊಳ್ಳಲು ಬಹಳ ಸಂಕೋಚವಾಗುತ್ತದೆ.

ಅವರ ಬಡಿದಾಟದ ಬೆಂಕಿಗೆ ರಾಜಕೀಯ ಪಕ್ಷಗಳು ಗಣಿಯೆಣ್ಣೆಯನ್ನು ಸುರಿಯುತ್ತಿವೆ. ಅಬ್ಬಾ! ಭಾರತದಲ್ಲಿ ಅಷ್ಟು ರಾಜಕೀಯ ಪಕ್ಷಗಳು! ಒಂದು ಕಮ್ಯೂನಿಸ್ಟ್ ಪಾರ್ಟಿ ಇದ್ದದ್ದು ಇಂದು ವಿವಿಧ ರೀತಿಯ ಕಮ್ಯೂನಿಸ್ಟ್ ಪಾರ್ಟಿಗಳಾಗಿ ಬಿಟ್ಟಿವೆ. ಕಾಂಗ್ರೆಸ್ಸೂ ಹಾಗೇನೆ! ಮತದಾನಿಗಳಿಗೆ 'ಸಸ್ತ' ಆಗಿ ಬಿಟ್ಟಿದೆ. ಸೋಶಲಿಸ್ಟ್ ಪಾರ್ಟಿಗಳೂ ಅಲ್ಲಿ ಸೋತಿರುವುದಿಲ್ಲ. ಅತ್ತ ಕಾಂಗ್ರೆಸ್ಸಿನ ಗರ್ಭದಿಂದ ಬಂದಿರುವ ಬಂಗ್ಲಾ ಕಾಂಗ್ರೆಸ್ಸ್, ಕೇರಳ ಕಾಂಗ್ರೆಸ್ಸಾದಿಗಳು, ಜನತಾ ಪಕ್ಷ, ಸ್ವತಂತ್ರ ಪಾರ್ಟಿ... ಎಲ್ಲವೂ ಸ್ವತಂತ್ರವೇ ಸರಿ. ಅನ್ಯ ರಾಷ್ಟ್ರಗಳಾದರೋ ಇಲ್ಲಿಯ ಜನರಿಗೆ ಲೂಪು, ನಿರೋಧವನ್ನು ಹಂಚುತ್ತಿವೆಯಾದಲ್ಲಿ, ವಿಷ ವೃಕ್ಷದಂತಿರುವ ಈ ರಾಜಕೀಯ ಪಕ್ಷಗಳಿಗೆ ಅಂತಹ ಸಾಧನಗಳನ್ನು ಕೊಡುವುದರ ಬದಲು ಗೊಬ್ಬರ ಹಾಕಿ, ನೀರೆರೆದು ಪೋಷಿಸುತ್ತಿವೆ. ಈ ಪಕ್ಷೋಪಪಕ್ಷಗಳು ಉಂಟಾಗಿರುವುದಾದರೂ ಏತಕ್ಕೆ? ಜನಸೇವೆಗಾಗಿ ಏನು? ಅವುಗಳ ಗುರಿ ಜನತಾ ಸೇವೆಯೆಂದಾದಲ್ಲಿ ಮಾರಾಮಾರಿಗೆ ಆಸ್ಪದವೇ ಇಲ್ಲವೆಂದು ಹೇಳಿದ ಅಬ್ದುಲ್ ಗಫಾರ್ ಖಾನರು, ಅಧಿಕಾರದಾಹಿ ಅತೃಪ್ತ ರಾಜಕಾರಣಿಗಳು ಪಕ್ಷೋಪಪಕ್ಷಗಳನ್ನು ಕಟ್ಟಿಕೊಂಡು ಹೊಡೆದಾಡಿಕೊಳ್ಳುತ್ತಿದ್ದಾರೆಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ರಾಜಕೀಯ ಪಕ್ಷಗಳಿಲ್ಲದೇನೇ ಚುನಾವಣೆ ಸಾಧ್ಯ, ಹಾಗೆಯೇ ನಡೆಯಬೇಕೆಂದು ಜಯಪ್ರಕಾಶ ನಾರಾಯಣರು ನುಡಿಯುತ್ತಿದ್ದಾರೆ.

ಜನತಾಸೇವೆಯ ಮನೋಭಾವನೆ ಬೆಳೆ ಹೇಗೆ ಬಂದೀತ? ರಾಷ್ಟ್ರ ಅರಿವು ಇಲ್ಲದಿದ್ದಲ್ಲಿ ಹೇಗೆ ಬಂದೀತು? ರಾಷ್ಟ್ರದ ಸ್ಪಷ್ಟ ಚಿತ್ರ ಮನೋಪಟದ ಮೇಲೆ ಮೂಡಿದಾಗ, ನಾವೆಲ್ಲರೂ ಭಾರತ ಮಾತೆಯ ಮಕ್ಕಳೆಂಬ ಮನೋಭಾವನೆ ತಾನಾಗಿಯೇ ಬರಲು ಸಾಧ್ಯ. ಭಾವನೆ ಬಂದ ಮೇಲೆ ಬಡಿದಾಟಕ್ಕೆ ಆಸ್ಪದವೇ ಇರುವುದಿಲ್ಲ. ಇದರಿಂದ ಐಕ್ಯ ಸಾಧ್ಯ. ಐಕ್ಯ ಸಾಧ್ಯವಾದ ಮೇಲೆ ಆ ರಾಷ್ಟ್ರ ಪ್ರಗತಿಶೀಲ ಪ್ರಬಲ ಬಲಶಾಲೀ ರಾಷ್ಟ್ರವಾಗುವುದರಲ್ಲಿ ಸಂದೇಹವೇ ಇರುವುದಿಲ್ಲ. ಜಪಾನ್, ಜರ್ಮನಿ, ಇಸ್ರೇಲ್ ಅದಕ್ಕೆ ಜೀವಂತ ಉದಾಹರಣೆಗಳು. ಅದನ್ನು ಶ್ರೀ ಸಾಮಾನ್ಯನಿಗೂ, ಚಿಕ್ಕ ಮಕ್ಕಳಿಗೂ ತಿಳಿಸಲಿಕ್ಕಾಗಿ ಒಂದು ಕಥೆ: ಅದುವೇ ಪ್ರೀತಿಯ ಫಲ; ಒಗ್ಗಟ್ಟಿನ ಫಲ.

ಹಿಂದೊಮ್ಮೆ ಒಂದಾನೊಂದು ಊರಿನಲ್ಲಿ ಅಣ್ಣ-ತಮ್ಮಂದಿರಿಬ್ಬರಿದ್ದರು. ಅವರಿಗೆ ಅಪ್ಪ ಕಾಲವಾಗಿದ್ದನು. ಅವನು ಸಾಯುವಾಗ ಮಕ್ಕಳಿಗೆ ಒಂದು ಹಣ್ಣಿನ ತೋಟವನ್ನು ಬಿಟ್ಟು ಹೋಗಿದ್ದ. ಅದು ಅಷ್ಟೇನೂ ದೊಡ್ಡ ತೋಟವಲ್ಲ. ಆದರೂ ಒಳ್ಳೆಯ ತೋಟವಾಗಿತ್ತು. ಅದರಿಂದ ಬರುತ್ತಿದ್ದ ಫಲ ಅವರನ್ನು ಐಶ್ವರ್ಯವಂತರನ್ನಾಗಿಸದಿದ್ದರೂ ಅವರ ಹೊಟ್ಟೆ ಬಟ್ಟೆಗೇನೂ ಕಮ್ಮಿ ಮಾಡುತ್ತಿರಲಿಲ್ಲ. ತಂದೆ ತೀರಿ ಹೋದ ಮೇಲೂ ಅವರು ಒಂದಾಗಿದ್ದು ಕೂಡಿ ಶ್ರಮಿಸುತ್ತಿದ್ದರು. ಆ ತೋಟವನ್ನು ಪಾಲುಮಾಡಿಕೊಳ್ಳ ಕೂಡದೆಂದು ನಿಶ್ಚಯಿಸಿಕೊಂಡಿದ್ದರು.

ಹೀಗೆ ಕೆಲವು ವರ್ಷಗಳುರುಳಿದ ಮೇಲೆ ಅಣ್ಣನಿಗೆ ಮದುವೆ ಆಯಿತು. ಆಗ ಅವರು ಒಂದೇ ಮನೆಯಲ್ಲಿದ್ದರು ಕೂಡಾ ಒಂದಾಗಿ ದುಡಿದು ಬಂದ ಫಲವನ್ನು ಸರಿಸಮವಾಗಿ ಹಂಚಿಕೊಳ್ಳುತ್ತಿದ್ದರು. ಅವರವರ ಪಾಲು ಅವರವರಿಗೆ. ಅಣ್ಣನಿಗೆ ಎರಡು—ಒಂದು ಗಂಡು, ಇನ್ನೊಂದು ಹೆಣ್ಣು—ಮಕ್ಕಳಾದುವು. ತಮ್ಮ ಮದುವೆ ಮಾಡಿಕೊಳ್ಳಲೇ ಇಲ್ಲ. ಅವನು ಅಣ್ಣನ ಮಕ್ಕಳೊಂದಿಗೆ ಆಡುವುದರಲ್ಲಿ, ಮಾತಾಡುವುದರಲ್ಲೇ ಸಂತೋಷಪಡುತ್ತಿದ್ದ.

ಅಣ್ಣನಿಗೆ ಎರಡು ಮಕ್ಕಳಾದರೂ, ತಮ್ಮನು ಒಬ್ಬಂಟಿಗನಾಗಿದ್ದರೂ ಅವರು ಆಲಸಿಗಳಾಗಲಿಲ್ಲ. ಕೂಡಿ ದುಡಿಯುತ್ತಿದ್ದರು. ಬಂದ ಫಲವನ್ನು ಹಂಚಿಕೊಳ್ಳುತ್ತಿದ್ದರು. ಭೂಮಿತಾಯಿಯೂ ಅವರಿಗೆ ಪ್ರೋತ್ಸಾಹವನ್ನೀಯುತ್ತಿದ್ದಳು.

ಅದೊಂದು ಬುದ್ಧಪೂರ್ಣಿಮೆ. ಬೆಳದಿಂಗಳು ಹಾಲಿನಂತೆ ಚೆಲ್ಲಿತ್ತು. ಅಂದು ಎಂದಿನಂತೆ ಅವರುಂಡು ಮಲಗಿದ್ದರು. ತಮ್ಮನು ಮಲಗಿದಲ್ಲಿಂದಲೇ ವಿಶಾಲ ಆಕಾಶವನ್ನು ನೋಡಿದನು. ಅದೇಕೋ ಚಂದ್ರನು ತನ್ನನ್ನು ಕಂಡು ಹಾಸ್ಯಮಾಡುವಂತೆ ಅವನಿಗೆ ಕಂಡು ಬಂತು. "ನೋಡ! ನಾನು ಸರಿಸಮವಾಗಿ ಎಲ್ಲರಿಗೂ ಇಂಪಾದ ಬೆಳದಿಂಗಳನ್ನು ಹಂಚುತ್ತೇನೆ. ನೀನು ಮಾಡುತ್ತಿರುವುದಾದರೂ ಏನು? ಹಿಂದಿನಂತೆ ಇಂದೂ ಸರಿ ಅರ್ಧ ಪಾಲನ್ನು ಅಣ್ಣನ ಹತ್ತಿರ ತೆಗೆದುಕೊಳ್ಳುತ್ತಿರುವೆ, ಅವರೆಷ್ಟು ಮಂದಿ? ಅವರು ನಾಲ್ವರು—ನೀನು ಒಬ್ಬನು. ಹಾಗಿರುವಾಗ ಅರ್ಧ ಪಾಲು ಅನ್ಯಾಯ ಅಲ್ಲವೇನು? ಅಣ್ಣನಿಗೆ ಅ

(ಎಂಟನೇ ಪುಟ ನೋಡಿ)

ಸಾರಸ್ವತ ಸಮಾಜದ ಮೂಲಪುರುಷ

ಮಹಾಮಹರ್ಷಿ ಸಾರಸ್ವತ

ಹಿಂದೊಮ್ಮೆ ಇತಿಹಾಸ ಪೂರ್ವಕಾಲದಲ್ಲಿ ಒಂದು ಭೀಕರವಾದ ಕ್ಷಾಮವು ತಲೆದೋರಿತು. ಎಲ್ಲ ಕಡೆಗೂ ಮಳೆ ಬೆಳೆಗಳಿಲ್ಲದೆ ಜನರು ಉಪವಾಸ ಸಾಯಹತ್ತಿದರು. ಒಳ್ಳೊಳ್ಳೆಯ ಬ್ರಾಹ್ಮಣರೂ ವೇದಪಾರಂಗತರಾದ ಋಷಿ ಮಹರ್ಷಿಗಳೂ ಕೂಡ ಅನ್ನಕ್ಕಾಗಿ ದೇಶಬಿಟ್ಟು ಹೊರಡಬೇಕಾಯಿತು. ಮುಷ್ಟಿ ಕಾಳು, ಹಿಡಿಕೂಳಿಗಾಗಿ ಅವರು ಹಗಲು ರಾತ್ರಿ ತಿರುಗಬೇಕಾಯಿತು. ಅವರ ಓದು, ಬರಹ, ಅಧ್ಯಯನ, ಅಧ್ಯಾಪನ ಎಲ್ಲವೂ ನಿಂತು ಹೋಗುವ ಪ್ರಸಂಗ ಬಂದಿತು.

ಅವರೆಲ್ಲರೂ ಹೀಗೇ ಅಂಡಲೆಯುತ್ತ ಸರಸ್ವತೀ ನದಿಯ ದಂಡೆಗೆ ಬಂದರು. ಆ ನದಿಯಲ್ಲಿ ನೀರು ಮಡುಗಟ್ಟಿದ್ದರಿಂದ ಮೀನುಗಳು ವಿಶೇಷವಾಗಿದ್ದವು. ಅವನ್ನು ಕಂಡು ಸಾರಸ್ವತನೆಂಬ ಒಬ್ಬ ಮಹರ್ಷಿಗೆ ಒಂದು ವಿಚಾರ ಹೊಳೆದು ಅವನು ತನ್ನ ಮುನಿಮಿತ್ರರಿಗೆ ಹಿರಿಯ ತಪಸ್ವಿಗಳಿಗೂ ಹೇಳಿದನು. "ಪೂಜ್ಯರೇ, ನಾವು ಹೊಟ್ಟೆಗಾಗಿ ಹೀಗೇ ಕಾಡ, ನಾಡು, ಪಟ್ಟಣ, ಪರ್ವತ, ಗ್ರಾಮಗಳಲ್ಲಿ ಅಲೆದಾಡುತ್ತ ಆಹಾರವನ್ನು ಹುಡುಕುತ್ತ ನಡೆದರೆ ಈ ಬರಗಾಲದಲ್ಲಿ ಹೇಗಾದರೂ ಬದುಕಿ ಉಳಿಯಬಹುದು, ಆದರೆ ನಮ್ಮ ವಿದ್ಯೆ ಮಾತ್ರ ಬದುಕಿ ಉಳಿಯಲಾರದು. ನಾವು ಹನ್ನೆರಡು ವರ್ಷ ಶ್ರಮಪಟ್ಟು ಕಲಿತ ವೇದವಿದ್ಯೆ ಇಲ್ಲ ಮರೆತು ಹಾಳಾಗಿ ಹೋಗುವದು. ಆದ್ದರಿಂದ ನನಗೆ ಒಂದು ಯುಕ್ತಿ ಹೊಳೆದಿದೆ.

ನಾವು ಈ ಸರಸ್ವತೀ ನದಿಯ ತೀರದಲ್ಲಿಯೇ ಇದ್ದು ಬಿಡೋಣ. ಇದರಲ್ಲಿ ಮೀನುಗಳು ಸಮೃದ್ಧವಾಗಿ ಇರುತ್ತವೆ. ಆಪದ್ಧರ್ಮವೆಂದು ಮತ್ಸ್ಯಾಹಾರವನ್ನು ಸ್ವೀಕರಿಸಿ ನಾವು ಬದುಕೋಣ ಮತ್ತು ನಮ್ಮ ವಿದ್ಯೆಯನ್ನೂ ಉಳಿಸೋಣ."

ಅದನ್ನು ಕೇಳಿ ಮುನಿಗಳೆಲ್ಲರೂ ಅಸಹ್ಯಪಟ್ಟುಕೊಂಡರು. "ನಮ್ಮಂಥ ಶ್ರೇಷ್ಠ ಬ್ರಾಹ್ಮಣರೂ ಮೀನು ತಿಂದು ಉಪಜೀವಿಸುವುದೆ? ಛೀ ಅದೆಂದಿಗೂ ಸಾಧ್ಯವಿಲ್ಲ. ಹಸಿವೆಯಿಂದ ನಮ್ಮ ಪ್ರಾಣ ಹೋದರೂ ಚಿಂತೆ ಇಲ್ಲ. ನಾವು ಧರ್ಮವನ್ನು ಬಿಡಲಾರೆವು." ಎಂದೆಂದು ಅವರು ಮುಂದೆ ನಡೆದರು. ಮತ್ಸ್ಯಾಹಾರಿಯೆಂದು ಸಾರಸ್ವತನಿಗೆ ಅವರೆಲ್ಲರೂ ಕೂಡಿ ಬಹಿಷ್ಕಾರ ಹಾಕಿದರು.

ಆದರೆ ಸಾರಸ್ವತ ಮುನಿಯು ಮಾತ್ರ ಅಲ್ಲಿಯೇ ಒಂದು ಎಲೆಮನೆಯನ್ನು ಕಟ್ಟಿಕೊಂಡು ವೇದಗಳನ್ನು ಅಧ್ಯಯನ ಮಾಡುತ್ತ ನಿಂತುಕೊಂಡುಬಿಟ್ಟ. ಆಪದ್ಧರ್ಮವೆಂದು ಅವನು ಮೀನುಗಳನ್ನು ತಿಂದು ನಿರಂತರವೂ ಧ್ಯಾನ ಜಪ ಸ್ವಾಧ್ಯಾಯ ತಪಸ್ಸಿನಲ್ಲಿಯೇ ಆಸಕ್ತನಾಗಿರುತ್ತಿದ್ದ.

ಇತ್ತ ಸಾರಸ್ವತನನ್ನು ಬಿಟ್ಟು ಪ್ರಯಾಣ ಹೊರಟ ಬ್ರಾಹ್ಮಣರೆಲ್ಲರೂ ಹೊಟ್ಟೆಗಾಗಿ ದೇಶದೇಶ ಸುತ್ತುತ್ತಾ ನಡೆದರು. ಹನ್ನೆರಡು ವರ್ಷದ ಆ ಭೀಕರ ಬರಗಾಲದಲ್ಲಿ ಅವರು ಭಿಕ್ಷಾವೃತ್ತಿಯಿಂದ ಬದುಕಿ ಉಳಿಯುವುದೇ ಕಷ್ಟವಾಯಿತು. ಒಪ್ಪತ್ತು ಊಟ, ಒಪ್ಪತ್ತು ಉಪವಾಸ ಮಾಡಿ ಅವರು ಹೇಗೋ ಕಾಲ ಕಳೆದರು.

ಹನ್ನೆರಡು ವರ್ಷವಾದ ಬಳಿಕ ಮುಗಿಲು ಕಣ್ಣು ತೆರೆಯಿತು. ಎಲ್ಲ ಕಡೆಗೂ ಮಳೆಯಾಯಿತು. ಸಮೃದ್ಧವಾಗಿ ಬೆಳೆ ಬಂದಿತು. ಆ ಬ್ರಾಹ್ಮಣರೆಲ್ಲರೂ ತಮ್ಮ ದೇಶಕ್ಕೆ ಸುರಕ್ಷಿತವಾಗಿ ಬಂದು ತಲುಪಿದರು. ಅಷ್ಟರಲ್ಲಿ ಸಾರಸ್ವತನೂ ಅಲ್ಲಿಗೆ ಬಂದು ನೆಲಸಿದ್ದ.

'ಮೀನು ತಿನ್ನುವವ' ಎಂದು ಎಲ್ಲರೂ ಅವನನ್ನು ಉಪಹಾಸ ಮಾಡುತ್ತಿದ್ದರು. ಮತ್ತು ಅವನಿಗೆ ಸಾಮೂಹಿಕ ಬಹಿಷ್ಕಾರ ಹಾಕಿ ಕುಲದಿಂದ ಎತ್ತಿ ಇಟ್ಟರು. ಅವನ ಜೊತೆಗೆ ಊಟ ಮತ್ತು ಉಪಚಾರಗಳನ್ನು ಯಾರೂ ಮಾಡುತ್ತಿರಲಿಲ್ಲ.

ಸಾರಸ್ವತನೂ ಕೂಡ ಎಲ್ಲಿಯೂ ಹೋಗದೇ ತನ್ನ ಮನೆಯಲ್ಲಿಯೇ ಸ್ವಾಧ್ಯಾಯವನ್ನು ಮಾಡುತ್ತ ಇರುತ್ತಿದ್ದನು. ಅವನ ಮನೆಯಿಂದ ಯಾವಾಗಲೂ ವೇದ ಘೋಷವು ಕೇಳಿ ಬರುತ್ತಿತ್ತು.

ಇತ್ತ ಈ ಬ್ರಾಹ್ಮಣರಿಗೆ ಮಾತ್ರ ಎಲ್ಲ ವೇದ ವೇದಾಂತ ವಿದ್ಯೆಗಳು ಮರೆತು ಎಷ್ಟೋ ಕಾಲವಾಗಿ ಹೋಗಿತ್ತು. ಹನ್ನೆರಡು ವರ್ಷದ ಹೊಟ್ಟೆಯ ಹೋರಾಟದಲ್ಲಿ ಹಸಿವೆ ಕಸಿವಿಸಿಗೆ ಅವರ ಜ್ಞಾನವೆಲ್ಲವೂ ಕಮರಿಹೋಗಿತ್ತು. ಎಲ್ಲರೂ ಕೂಡಿ ನೆನಪು ಮಾಡಿಕೊಳ್ಳಬೇಕೆಂದರೂ ಅವರಿಗೆ ಆ ವಿದ್ಯೆಯ ನೆನಪು ಯಾರಿಗೂ ಸರಿಯಾಗಿ ಆಗಲೊಲ್ಲದು. ಅದನ್ನು ನೋಡಿ ಅವರೆಲ್ಲರೂ ಗಾಬರಿಯಾದರು.

ಜ್ಞಾನಶೂನ್ಯರಾದ ಅವರಿಗೆ ತಾವು ಬದುಕಿದರೂ ಸತ್ತಂತೆಯೇ ಎನಿಸಿತು. ವಿದ್ಯೆಯಿಲ್ಲದೆ ಇದ್ದರೆ ತಮಗೆ ಇಲ್ಲಿ ಉಪಜೀವನವಿಲ್ಲ. ಮುಂದೆ ಸದ್ಗತಿಯಿಲ್ಲ. ಇದರಿಂದ ಗಾಬರಿಯಾದ ಆ ಬ್ರಾಹ್ಮಣರೆಲ್ಲರೂ ತಾವು ಮರೆತ ವಿದ್ಯೆಯನ್ನು ಹೇಗೆ ಪಡೆಯಬೇಕು? ಎಂದು ಚಿಂತಿಸಹತ್ತಿದರು. ಅವರೆಲ್ಲರೂ ಕೂಡಿ 'ನೀಚಾದಪ್ಯುತ್ತಮಾಂ ವಿದ್ಯಾಂ' ಎಂಬಂತೆ ಹೇಗಾದರೂ ಮಾಡಿ ಯಾರಲ್ಲಿಯಾದರೂ ಹೋಗಿ ವಿದ್ಯೆಯನ್ನು ಓದಿಕೊಂಡೇ ಬರಬೇಕು ಎಂದು ನಿರ್ಧರಿಸಿದರು. ಆದರೆ ಬರಗಾಲದ ಬವಣೆಗೆ ಸಿಕ್ಕ ಎಲ್ಲರೂ ಜ್ಞಾನಶೂನ್ಯರೇ ಆಗಿದ್ದುದರಿಂದ ಅವರಿಗೆ ಪಾಠ ಹೇಳುವ ಪಂಡಿತರೇ ಇಲ್ಲವೆನಿಸಿತು. ಪಂಡಿತರ ಪೀಳಿಗೆಯೇ ನಾಶವಾಗಿದ್ದಿತು.

ಆಗ ಸಾರಸ್ವತನ ಗುಡಿಸಲಿನಿಂದ ಸುಸ್ವರವಾಗಿ ವೇದಘೋಷವು ಕೇಳಬರಹತ್ತಿತು. ವೇದಾಕ್ಷರಗಳ ಪದ, ಕ್ರಮ, ಜಟಾ, ಘನ ಮೊದಲಾದ ಪದ್ಧತಿಯನ್ನನುಸರಿಸಿ ಸಾರಸ್ವತ ಮುನಿಯು ಉಚ್ಚ ಕಂಠದಿಂದ ಉಚ್ಚಾರ ಮಾಡುವದನ್ನು ಕೇಳಿಯೆ ಅವರಿಗೆಲ್ಲರಿಗೂ ಹಳೆಯ ಸಂಸ್ಕಾರವು ಜಾಗೃತವಾಗಿ ಅತ್ಯಂತ ಆನಂದವಾಯಿತು. ಸಾರಸ್ವತನ ಹೊರತಾಗಿ ಈಗ ವೇದವಿದ್ಯೆಯನ್ನು ಕಾಯ್ದುಕೊಂಡು ಬಂದವರು ಯಾರೂ ಇಲ್ಲವೆಂದು ಅವರಿಗೆ ಖಾತ್ರಿಯಾಯಿತು.

ಆಗ ಅವರೆಲ್ಲರೂ ಸೇರಿ ವಿಚಾರ ಮಾಡಿ ಸಾರಸ್ವತನ ಬಳಿಗೆ ಬಂದು ತಮಗೆ ವೇದ ಪಾಠವನ್ನು ಹೇಳಿಕೊಡಬೇಕೆಂದು ಕೇಳಿಕೊಂಡರು. ಆಗ ಅವನು "ನಾನು ಬಹಿಷ್ಕೃತನಲ್ಲವೇ? ನಿಮ್ಮಂಥ ಕುಲೀನ ಬ್ರಾಹ್ಮಣರಿಗೆ ನಾನೆಂತು ಪಾಠ ಹೇಳಲಿ" ಎಂದು ಕೇಳಿದ. ಅದಕ್ಕೆ ಆ ಬ್ರಾಹ್ಮಣರೆಲ್ಲರೂ ಪಶ್ಚಾತ್ತಾಪಪಟ್ಟು "ಸಾರಸ್ವತ, ನಮ್ಮದು ತಪ್ಪಾಯಿತು. ನೀನು ಮೀನು ತಿಂದಾದರೂ ವೇದ ಉಳಿಸಿದೆ, ಉಳಿದ ಬ್ರಾಹ್ಮಣರೆಲ್ಲರೂ ತಾವು ಬದುಕಿ ವೇದವನ್ನು ಕೊಂದೆವು. ವಿದ್ಯೆಯಿಲ್ಲದಿದ್ದರೆ ನಾವೂ ಸತ್ತಂತೆಯೇ ಆಗುವದು. ಆದುದರಿಂದ ನೀನೀಗ ಗುರುವಾಗಿ ವೇದ ಹೇಳು. ನಾವೆಲ್ಲರೂ ನಿನ್ನ ಶಿಷ್ಯರಾಗುತ್ತೇವೆ."

ಗಡ್ಡ ಬೆಳ್ಳಗಾದ ಹಿರಿಯ ಬ್ರಾಹ್ಮಣರೂ ಕೂಡ ಅವನ ಎದುರು ಶಾಂತಿ ಪಾಠ ಹಾಕಿ ಓದಲಿಕ್ಕೆಂದು ಬಂದು ಕುಳಿತರು. ಆಗ ಸಾರಸ್ವತ ಮುನಿಯು ಪ್ರೇಮಪೂರ್ವಕವಾಗಿ ವೇದವೇದಾಂತ ಪಾಠ ಹೇಳಿ ಅವರೆಲ್ಲರನ್ನೂ ಪಂಡಿತರನ್ನಾಗಿ ಮಾಡಿದನು. ಹೀಗೆ ದೇಶದಲ್ಲಿ ದುಷ್ಕಾಲದಲ್ಲಿ ದಡ್ಡರಾದವರಿಗೆ ಮಾತ್ರವಲ್ಲದೇ ಹೊಸ ಹೊಸ ವಿದ್ಯಾರ್ಥಿಗಳಿಗೂ ವೇದ ಪಾಠ ಹೇಳಿ ಸಾರಸ್ವತನು ಒಬ್ಬ ದೊಡ್ಡ ಕುಲಗುರುವೆನಿಸಿದನು. ಒಟ್ಟು ಸಾರಸ್ವತ ಮುನಿಯ ಹತ್ತಿರ ಓದಿ ಪಂಡಿತರಾದ ಶಿಷ್ಯರ ಸಂಖ್ಯೆ ೬೦ ಸಾವಿರವಾಗಿದ್ದಿತು. ಇಷ್ಟು ಜನ ಶಿಷ್ಯರಾದರೂ ಅವನು ಯಾರಿಂದಲೂ ಗುರುದಕ್ಷಿಣೆಯನ್ನು ಕೊಳ್ಳುತ್ತಿದ್ದಿಲ್ಲ. ಅವರು ಓದಿ ಮರಳಿ ಮನೆಗೆ ಹೋಗುವಾಗ ಗುರುದಕ್ಷಿಣೆ ಸ್ವೀಕರಿಸಬೇಕೆಂದು ಹೇಳಿ ಬಲವಂತಪಡಿಸಿದರೆ ಅವರಿಗೆ ಅಸಮಾಧಾನ ಮಾಡಬಾರದೆಂದು ಒಂದು ಹಿಡಿ ದರ್ಭೆಯನ್ನು ಗುರುದಕ್ಷಿಣೆಯಾಗಿ ಕೊಡಬೇಕೆಂದು ಹೇಳಿ ಅವರಿಂದ ಒಂದು ಮುಷ್ಟಿ ದರ್ಭೆಯನ್ನು ಪಡೆದು ಅವರನ್ನು ಆನಂದದಿಂದ ಆಶೀರ್ವದಿಸಿ ಕಳಿಸುತ್ತಿದ್ದನಂತೆ. ಹೀಗೆ ಸರಸ್ವತಿಯ ಪುತ್ರನಾದ್ದರಿಂದ ಆ ಪಂಡಿತ ಬ್ರಾಹ್ಮಣನಿಗೆ ಸಾರಸ್ವತ ಎಂಬ ಹೆಸರು ಸಾರ್ಥಕವಾಗಿದ್ದಿತು. (—ಕಲ್ಯಾಣ)

ಮನೆ-ಮದ್ದು

ಗೃಹವೈದ್ಯ — ರೂ.2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1-50

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಕಲನ— ಬೆಲೆ ರೂ. 1-50

ಟಪ್ಪಾಲು ಖರ್ಚು ಪ್ರತ್ಯೇಕ

ರಖಂ ಪ್ರತಿಗಳಿಗೆ ರಿಯಾಯಿತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು

ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಳ್ಳವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಆಧುನಿಕ ಯಂತ್ರಗಳ ಸಹಾಯದಿಂದ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526
ಸಂಪುಟ ೪೯
ಸಂಚಿಕೆ ೩೭
VOL: 49
No. 37

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೧—೫—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಹಾರಂಗಿ ಆರಂಭ

ಯೋಜನಾ ಆಯೋಗದ ಅನುಮತಿ ದೊರೆಯದ ನೀರಾವರೀ ಯೋಜನೆಗಳಿಗೆ, ಕೇಂದ್ರ ನೀರಾವರಿ ಸಚಿವರ ತಡೆಯು ಆಚ್ಛೆ. ಇದು ಕಲಹ ಮಾತ್ರವೆಂದು ಮುಂದೆ ಮುಕ್ತವರಿಕೆ. ಆಯೋಗದ ಮಂಜೂರು ದೊರೆಯದ ನೀರಾವರಿ ಯೋಜನೆಗಳಿಗೆ ಕೇಂದ್ರ ನೆರವು ನೀಡದೆಂಬ ತಿರಸ್ಕಾರ. ರಾಜ್ಯದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಂದ ಆರಂಭವಾದ ಎಲ್ಲ ಯೋಜನೆಗಳಿಗೂ ಪುರಸ್ಕಾರ. ಕೇಂದ್ರದ ಸಹಾಯ ದೊರೆಯಲಿ, ದೊರೆಯದಿರಲಿ, ಹಾರಂಗಿ, ಕಬಿನಿ ಮೊದಲಾದ ಎಲ್ಲ ಯೋಜನೆಗಳನ್ನು ಮುಕ್ತಾಯಗೊಳಿಸುವ ಅವರ ಘೋಷಣೆ ವೀರೇಂದ್ರ ಪಾಟೀಲರ ರಾಜ್ಯಹಿತದೃಷ್ಟಿಗೆ ಜ್ವಲಂತ ನಿದರ್ಶನ. ವೀರೇಂದ್ರರ ವೀರವಾಣಿಯನ್ನು ಕೇಳಿದ ಕೇಂದ್ರ ನೀರಾವರಿ ಮಂತ್ರಿ ಶ್ರೀ ರಾಯರೂ ಮೌನ; ಅಂದೊಮ್ಮೆ ಶ್ರೀಮತಿ ಇಂದಿರಾ ಗಾಂಧಿ ಅವರ ಕೆಣಕಿಂದಿದರು; ಶ್ರೀ ರಾಯರು ಅಯ್ಯೋ ಎಂದು ಶ್ರೀ ಪಾಟೀಲರನ್ನು ಗದರಿಸಿದರು; ಶ್ರೀ ಪಾಟೀಲರು ಇದಕ್ಕೆ ಸಗ್ಗದ್ದರಿಂದ ಶ್ರೀಮತಿ ಗಾಂಧಿಯೂ ತೆಪ್ಪಗಾದರು.

ಕೊಡಗು ಜಿಲ್ಲೆಯಲ್ಲಿನ ಹಾರಂಗಿ ಯೋಜನೆಯ ಮಣ್ಣಿನ ಕೆಲಸವನ್ನು ಮುಖ್ಯಮಂತ್ರಿ ಪಾಟೀಲರು ಮೊನ್ನೆ ಉದ್ಘಾಟಿಸಿದರು. ಈ ವೇಳೆ ಅವರಾಡಿದ ಮಾತುಗಳು ರಾಜ್ಯ ಸರಕಾರದ ಜನಹಿತ ಕಾರ್ಯಸಾಧನೆಯ ಪ್ರತೀಕ. ಮೊದಲನೆಯದಾಗಿ ಹಾರಂಗಿ ಯೋಜನೆಗೆ ತಗಲುವ ವೆಚ್ಚದ ಅಂದಾಜು ಈಗ ಹದಿನಾರು ಕೋಟಿ ರೂಪಾಯಿಗಳಿಗೇರಿದ್ದು ರಾಜ್ಯದ ಹಿತದೃಷ್ಟಿಯಿಂದ ಇದನ್ನು ಸ್ವಸಂಪನ್ಮೂಲಗಳ ಬಲದಿಂದಲೇ ಪೂರೈಸುವ ದೃಢ ನಿರ್ಧಾರ ಅವರದ್ದು. ಸಾಮಾನ್ಯವಾಗಿ ಇಂತಹ ಯೋಜನೆಗಳಿಗೆ ಕೇಂದ್ರದ ಸಹಾಯ ನಿರೀಕ್ಷೆ ಸಹಜವಾದರೂ, ಅದರ ಅಭಾವದಿಂದ ಯೋಜನೆ ನಿಲ್ಲಬಾರದೆಂಬ ರಾಜ್ಯ ಸರಕಾರದ ಕಳಕಳಿ ನಿಜಕ್ಕೂ ಪ್ರಶಂಸನೀಯ. ರಾಜ್ಯದಲ್ಲಿನ ಲಭ್ಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಯಾದರೂ ನಿರ್ಧಾರಿತ ಅವಧಿಯಲ್ಲೇ ಈ ಯೋಜನೆಯನ್ನು ಮುಕ್ತಾಯಗೊಳಿಸುವ ವಿಶ್ವಾಸವುಳ್ಳ ಮುಖ್ಯಮಂತ್ರಿಯವರು ಆ ಯೋಜನೆ ಕೆಲಸವೇ ಆರಂಭವಾದುದಕ್ಕೆ ಬೇರೆ ಉದಾಹರಣೆ ಅನಗತ್ಯ.

ಹಾರಂಗಿ ಯೋಜನೆಯಿಂದಾಗಿ ೪೪೦೦೦ ಎಕ್ರೆ ಜಮೀನು ನೀರಾವರಿಗೆ ಒಳಗಾಗುವುದು. ಈ ಜಮೀನು ಕೊಡಗು ಜಿಲ್ಲೆಗೆ ಸೇರಿಲ್ಲ. ಈ ಯೋಜನೆಯಿಂದ ಕೊಡಗು ಜಿಲ್ಲೆಯ ಸುಮಾರು ೫೦ ಸಾವಿರ ಎಕ್ರೆಗಳಿಗೆ ಮಾತ್ರ ನೀರು ದೊರೆಯುವುದು. ಇದರ ಜತೆಗೆ ಅರಕಲಗೂಡು, ಕೆ. ಆರ್. ನಗರ, ಪಿರಿಯಾಪಟ್ಟಣ, ಹುಣಸೂರು ತಾಲೂಕುಗಳಿಗೆ ಭರ್ಜರಿಯಾಗಿ ನೀರೊದಗುವುದು. ಒಟ್ಟು ಎರಡು ಲಕ್ಷ ಎಕ್ರೆ ಜಮೀನಿಗೆ ನೀರುಣಿಸುವ ಇಂತಹ ಯೋಜನೆಗೆ ಕೊಡಗರು ಮಾಡಿದ ತ್ಯಾಗ ಸ್ತುತ್ಯಾರ್ಹ. ಇದೇ ದೃಢ ನಿಲುವಿನಿಂದ ರಾಜ್ಯದ ನೀರಾವರಿ ಯೋಜನೆಗಳನ್ನು ರಾಜ್ಯವು ಮುಗಿಸುತ್ತ ಬಂದಲ್ಲಿ, ಕೇಂದ್ರಾವಲಂಬನೆಯಲ್ಲಿ ಹ್ರಾಸವಾಗುವುದು; ಇದರಿಂದ ರಾಜ್ಯದ ಸ್ವಾಂತಂತ್ರ್ಯ ಸ್ಥಿತಿಯೂ ತುಂಬ ಸುಧಾರಿಸುತ್ತದೆ. ಕೇಂದ್ರ ಸರಕಾರದ ನೆರವು ಪಡೆಯುವುದು ಸುಲಭವೂ ಅಲ್ಲ; ಅದು ದೊರೆಯಬೇಕಾದರೆ, ಯೋಜನಾ ಆಯೋಗದ ಮಂಜೂರಾತಿ ಅಗತ್ಯ; ಆ ಮೇಲಾದರೂ ವಿಳಂಬವಿಲ್ಲದೆ ಅದು ದೊರೆಯುವಂತಿಲ್ಲ. ಏನಾದರೂ ತಕರಾರುಗಳನ್ನು ಎತ್ತಿಕಟ್ಟಿ ಅನಪೇಕ್ಷಿತ ವಿಳಂಬಕ್ಕೆ ನಾಂದಿಯಾಗುವುದು ದಾತಾರರ ಹುಟ್ಟುಗುಣ. ಕಾವೇರಿ ಜಲ ವಿವಾದವೇ ಇದಕ್ಕೆ ಉದಾಹರಣೆ.

ಕಾವೇರಿ ನೀರಿನ ಬಗ್ಗೆ ತಮಿಳುನಾಡು ಕೇರಳಗಳ ವಾದಗಳು ಪ್ರಜಾಸತ್ತೆಗೆ ಹೊಂದಿಕೊಳ್ಳುವುದಿಲ್ಲ. ಬಹಳಷ್ಟು ಹಿಂದೆ ಅಂದಿನ ಸಾರ್ವಭೌಮ ಬ್ರಿಟಿಷ್ ಸರಕಾರವು ತನ್ನ ಆಶ್ರಿತ ಮಹಾರಾಜರೊಡನೆ ಮಾಡಿಕೊಂಡ ಒಪ್ಪಂದದ ಅವಧಿ ಮುಗಿದದ್ದರಿಂದ, ಇಂದಿನ ಕಾಲ ಗುಣಕ್ಕನುಸಾರವಾಗಿ ಅದು ಬದಲಾಗಲೇ ಬೇಕು. ಕಾವೇರಿ ನದಿಗೆ ಜನ್ಮ ನೀಡಿ ಅದನ್ನು ಪೋಷಿಸುತ್ತ ಬರುತ್ತಿರುವ ಕರ್ನಾಟಕಕೆ ನ್ಯಾಯವಾದ ಪಾಲು ದೊರೆಯ ಬೇಕು. ಇದಕ್ಕೆ ಇತರೇ ರಾಜ್ಯಗಳು ಒಪ್ಪುವುದಿಲ್ಲ. ಇಂತಹ ವಿವಾದಗಳನ್ನು ಬಗೆಹರಿಸ ಬಲ್ಲ ಚೈತನ್ಯ ಕೇಂದ್ರ ಸರಕಾರಕ್ಕೂ ಇಲ್ಲ. ಆದುದರಿಂದಲೇ ಅದು ಪಟ್ಟುಮಾಡುವವರತ್ತ ತನ್ನೊಲವು ಹರಿಸುತ್ತಿದೆ. ತನ್ನ ಸರಕಾರದ ಉಳಿವಿಗಾಗಿ ಬೆಂಬಲ ನೀಡುತ್ತಿರುವ ಡಿ.ಎಂ.ಕೆಯನ್ನು ತೃಪ್ತಿ ಪಡಿಸಲು ಪ್ರಧಾನಿಯವರೂ ಅವರ ಸಂಪುಟದ ಸದಸ್ಯರೂ ತಮಿಳುನಾಡಿನ ಪರವಾಗಿಯೇ ಮಾತನಾಡುತ್ತಾರೆ; ಅಲ್ಲಿ ಶ್ರೀ ಕಾಮರಾಜರ ಪ್ರಭಾವವನ್ನು ಇಳಿಸುವುದ; ಕರ್ನಾಟಕಕ್ಕೆ ಸಿಂಡಿಕೇಟಿನವಲಂಬನೆಯ ಪಾಪ ದೋಷಗಳನ್ನು ಮಾಫಿ ವರಿಕೆ ಮಾಡಿಕೊಡುವುದು ಅದರ ಉದ್ದೇಶ. ಆದರೆ, ಈ ತಂತ್ರ ಅದೆಂದೋ ಬಯಲಾಗಿ ಹೋದುದರಿಂದ ಕೇಂದ್ರ ನಾಯಕರು ತಬ್ಬಿಬ್ಬಾದರು. ಅದಕ್ಕೆಂದೇ ಕಾವೇರೀ ನೀರಿನ ಬಗ್ಗೆ ಮಾತುಕತೆ ಸದ್ಯ ನಡೆಯಲಿದೆ. ಇದರಲ್ಲಿ ನ್ಯಾಯೋಚಿತವಾದ ಒಡಂಬಡಿಕೆ ಸಾಧ್ಯವಾಗ ಬಹುದೆಂಬ ಮುಖ್ಯಮಂತ್ರಿಯವರ ವಿಶ್ವಾಸ ರಾಜ್ಯದ ಶಾಂತಚಿತ್ತವೃತ್ತಿಗೊಂದು ಉದಾಹರಣೆ.

ರಾಜ್ಯದಲ್ಲಿ ನೀರಾವರಿ ಮತ್ತು ವಿದ್ಯುತ್ ಶಕ್ತಿಗಳಿಗೆ ಬೇಡಿಕೆಯೂ ಅವಕಾಶವೂ ಬಹಳವಿದೆ. ಇವೆಲ್ಲವುಗಳನ್ನೂ ತಾವೇ ಸಮರ್ಪಕವಾಗಿ ಸಿದ್ಧಿಸಿಕೊಂಡರೆ, ರಾಜ್ಯವು ಸ್ವಾಂತಂತ್ರ್ಯವಾಗಿ ಮೇಲೆ ಬರುವುದು ಸಾಧ್ಯ. ಈ ದಿಟ್ಟವಲ್ಲಿ ಶ್ರೀ ವೀರೇಂದ್ರ ಪಾಟೀಲರ ನಿಲುವನ್ನು ರಾಜ್ಯದ ಪ್ರಜೆ ಪ್ರಜೆಯೂ ಬೆಂಬಲಿಸುತ್ತದೆ.

ಯಾರು ಕಾರಣರು?

ವಿಶ್ವನಗರ ಬೊಂಬಾಯಿಯ ಬಳಿಯ ಭಿವಂಡಿಯಲ್ಲಿ ಇತ್ತೀಚೆಗೆ ಕೋಮುವಾರು ಗಲಭೆ ಲಜ್ಜನೀಯವಾದರೂ ನಡೆಯಿತು. ಕಳೆದ ವರ್ಷ ಅಹಮ್ಮದಾಬಾದದ ಬಳಿಯ ಜಾತೀಯ ಗಲಭೆಗಿಂತಲೂ ಇದು ಭೀಕರವೆನ್ನ ಬೇಕು. ದೇಶ ಸ್ವತಂತ್ರವಾದ ಕಾಲ್ಯದಲ್ಲಿ ಹೆಚ್ಚಾಗಿ ನಡೆಯುತಿದ್ದ ಇಂತಹ ಗಲಭೆಗಳು ನಡುವೆ ಕೆಲಕಾಲ ಕಡಿಮೆಯಾದುವು; ಆದರೆ, ಈಗ ಎರಡು—ಮೂರು ವರ್ಷಗಳಿಂದ ಮತ್ತೆ ಅವುಗಳ ಸಂಖ್ಯೆ ಪರಿಣಾಮ ಭೀಕರವಾಗುತ್ತ ಬರುತ್ತಿದೆ.

ಇವುಗಳಿಗೆಲ್ಲ ಕಾರಣರಾರು ಎಂಬ ಪ್ರಶ್ನೆ ಎಲ್ಲರೂ ಕೇಳುತ್ತಾರೆ; ಆದರೆ, ಕಾರಣರು ಇಂಥವರೇ ಎಂದು ಬೆರಳು ಮಾಡಿ ತೋರಿಸುವವರು ಎರಡು ರಾಜ್ಯಕೀಯ ಪಕ್ಷೀಯರು ಮಾತ್ರ. ಭಾರತೀಯ ಜನಸಂಘದ ಎ. ಬಿ. ವಾಜಪೇಯಿಯವರು ಏನಾದರೂ ಕಾರಣ ಹುಡುಕಿ ಮುಸಲ್ಮಾನರು ಕಾಲುಗೆದರಿ ಜಗಳ ತರೆಯುತ್ತಾರೆ ಎನ್ನುತ್ತಾರೆ. ಪ್ರಧಾನಿ ಇಂಡಿಕೇಟಿನ ಇಂದಿರಾಜಿಯವರು ಜನಸಂಘವು ತನ್ನ ಸ್ವಯಂ ಸೇವಕರ ಮೂಲಕ ಇಂತಹ ಗಲಭೆಗೆ ಕೈಬಾಂಬಿರಿಸಿ ಬೆಂಕಿಹಚ್ಚುತ್ತದೆನ್ನುತ್ತಾರೆ. ಜನಸಂಘದ 'ಭಾರತೀಕರಣ'ಕ್ಕೆ ಒಬ್ಬೊಬ್ಬರು ಒಂದೊಂದು ಅರ್ಥ ನೀಡುತ್ತಾರೆ.

ಭಾರತದಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರು ಎನ್ನುವದಕ್ಕಿಂತ ಮಧ್ಯಮ ಸಂಖ್ಯಾತರೆನ್ನ ಬಹುದು. ಏಕೆಂದರೆ, ಕ್ರೈಸ್ತರ ಸಂಖ್ಯೆ ಇವರಿಗೂ ಕಡಿಮೆ. ಜಾತೀಯ ಗಲಭೆಗಳಿಗೆ ಅಭದ್ರ ಮನೋಸ್ಥಿತಿಯೇ ಕಾರಣವೆಂದು ಕೆಲವರನ್ನುತ್ತಾರಾದರೆ, ಪಾಕ್ ನಿಷ್ಠೆಯೆನ್ನುತ್ತಾರೆ ಇನ್ನು ಕೆಲವರು. ಭಾರತೀಯ ಮುಸಲ್ಮಾನರಲ್ಲಿ ಎಲ್ಲೋ ಕೆಲವರು ಮುಸ್ಲಿಂ ಜನಸ್ಥಾನ ಕೈವಾರಿಗಳಿರ ಬಹುದು; ಜಾತೀಯ ವಾದಿಗಳೂ ಇರಬಹುದ; ಆದರೆ, ಅವರಲ್ಲಿ ಸ್ವದೇಶ ಭಕ್ತಿ ಇಲ್ಲವೆಂಬುದೂ ಸತ್ಯಕ್ಕೆ ಬಹಳ ದೂರ. ನೂರಾರು ಜಾತಿಗಳಿದ್ದರೂ ಸಾಮರಸ್ಯದಿಂದ ಬಾಳಿ ಬದುಕಿ ಬಂದ ಭಾರತದಲ್ಲಿಂದು ಜಾತೀಯ ಗಲಭೆಗಳು ನಡೆಯುತ್ತಿರುವುದು ಅಪಮಾನಕರ. ಅವರವರ ಮತ ತತ್ವಗಳನ್ನು ಅವರವರು ಅನುಸರಿಸಲು ಸ್ವತಂತ್ರರೆಂಬ ಸಿದ್ಧಾಂತವನ್ನು ಎಲ್ಲರೂ ಒಪ್ಪಿಕೊಳ್ಳಬೇಕು; ಅಲ್ಪಸಂಖ್ಯಾತರು —ಬಹುಸಂಖ್ಯಾತರು ಎಂಬುದಾಗಿ ತರೆದುಕೊಂಡು ಹೊಡೆದಾಡಲು ಅವಕಾಶ ಕೊಡುವುದು ಸಲ್ಲದು.

ಗಾಳಿ ಸೇವನೆಗೆ ಭಾರೀ ಸಿದ್ಧತೆ

ವಿಧಾನ ಸಭೆಯ ಮೂರೂ ಉಪಚುನಾವಣೆಗಳಲ್ಲಿ ನಾಪತ್ತೆ ಸೋತರೇನು, ವಿಧಾನ ಪರಿಷತ್ತಿನ ಏಳೂ ಸ್ಥಾನಗಳನ್ನು ಗೆದ್ದುಕೊಂಡೆವು; ಜನಪ್ರಿಯರು ಯಾರೆಂದು ಹೇಳಿ ಎಂದು ಕರ್ನಾಟಕದ ಸಿಂಡಿಕೇಟ್ ಇಂಡಿಕೇಟಿಗೆ ಉದ್ಧ ಸವಾಲೆಸೆದ್ದಿದೆ. 'ಜನಪ್ರಿಯತೆ ಯಾವ ಕಡೆಗಿದೆಯೆಂಬುದರ ಸೂಚನೆಯಿದು' ಎಂದ ಇಂಡಿಕೇಟಿಗರಿಗೆಲ್ಲಾ ಈಗ ತಲೆ ಬಿಸಿ. ಆದರೂ ಪರಿಷತ್ ಚುನಾವಣೆಗಳು ನೇರವುಳದಾದವಲ್ಲವೆಂಬ ಸಮಾಧಾನ; ಆದುದರಿಂದ ತನ್ನ ಬಡಾಯಿ ಉರುಳಿಸಲು ನಿರಾತಂಕ. ಸಧ್ಯದಲ್ಲೇ ಇನ್ನು ಕೆಲವು ಚುನಾವಣೆಗಳು ನಡೆಯಲಿದ್ದು ಅವುಗಳ ಪರಿಣಾಮ ಅನಿರ್ದೇಶ.

ಕರ್ನಾಟಕವು ಸಿಂಡಿಕೇಟಿನ ಗಂಡು ನೆಲವೆಂಬುದು ನಿಜ. ಆದರೆ, ಅದೇನೂ ಅಭೇದ್ಯವಲ್ಲವೆಂದು ಉಪಚುನಾವಣೆಗಳು ಸಾರುತ್ತಿವೆ. ಇನ್ನು ಇಂಡಿಕೇಟು ಗಳಿಸಿದ ಪಾಲು ಗಣನೀಯವಾಗಿದೆ ಮುಂದೆ ಶ್ರೀಮತಿ ಇಂದಿರಾಗಾಂಧಿ ತಳಪಳ ಕೊಡಲು ಬಂದರೆ ಆಶ್ಚರ್ಯ. ಚುನಾವಣೆಯ ಸೋಲು ಗೆಲವುಗಳನ್ನು ಸಾರ್ವ ಪ್ರಭಾಕ ಸ್ವಭಾವದಿಂದ ಹಾಗುವುದು ಮಾರ್ಮಿಕನ. ಅತ್ಮಸಾಕ್ಷಿ ಒಪ್ಪಿಸ್ಟಬ್ಬರಿಗೆ ಒಂದೊಂದು ಹೇಳುತ್ತದೆ; ಅದ್ದರಿಂದ ಭವಿಷ್ಯವನ್ನು ಒಪ್ಪ ಜ್ಯೋತಿಷಿಯೇನೆಂದು ಹೇಳಲಾರೆ. ಪೆಟ್ಟಿಗೆಯೊಡೆದ ಬಳಿಕವೇ ಚದುರಂಗಕ್ಕೆ ಎನಿಸಿದೆಯೆಂಬುದರ ಅನುಭವ. ಅದೃಷ್ಟ ಪ್ರೋತ್ಸಾಹದೊಳಗೆ ಒಲಿದಂತೆ ಒಲಿಯಲೂ ಬಹುದು; ಯಾವ ದಂಡ ತೆರೆದು ಕೊಂಡರೂ ಚುನಾವಣಾ ಪರಿಣಾಮ ಶಕ್ತಿಯಿಂದಿಗೂ ತೆಗೆದುಕೊಂಡಿಲ್ಲ.

ಮುಂದಿನ ಸಾರ್ವತ್ರಿಕ ಚುನಾವಣೆಗಳು ಹತ್ತಿರ ಹತ್ತಿರ ಬರುತ್ತಿವೆ. ಆದುದರಿಂದ ರಾಜಕೀಯ ಪಕ್ಷಗಳ ಕಾರ್ಯಶೀಲತೆ ಈಗ ಅವುಗಳ ಮೇಲೆ ಕೇಂದ್ರೀಕೃತವಾಗುವುದು ಅಗತ್ಯ. ಆಡಳಿತ ಸೂತ್ರಧಾರಿಗಳು ಈ ಅವಧಿಯಲ್ಲಿ ಬಿರುಸಿನಿಂದ ಜನಜಾಗೃತಿಗೆ ಕೆಲಸ ನಡೆಸುವುದು ಹಿಂದಿನಿಂದಲೂ ನಡೆದು ಬಂದ ಚಾಳಿ. ಈ ಬಾರಿ ಗಂಟೆಸಿಂದ ಒಂದಂಗುಲ ಕೆಳಗೆ ಸವರುವ ಸಂಭವ. ಸಮಾಜವಾದ ಸಮಾಜ ರಚನೆಯ ಸಿದ್ಧಾಂತಗಳು ಹಳೆಯದಾಗುತ್ತ ಬರುತ್ತಿರುವುದರಿಂದ ಅದಕ್ಕೆ ಹೊಸ ಪ್ರಾಣ ಪ್ರತಿಷ್ಠೆ ಅಗತ್ಯವಾಗುತ್ತಿದೆ.

ಂಂ ಂಂ ಂಂ

ಕಾಂಗ್ರೆಸ್ಸಿನ ಜೋಡುಮೇಳ ಎರಡನೆಯ ಬಾರಿಗೆ ಜೂನ್ ತಿಂಗಳಲ್ಲಿ ನಡೆಯಲಿದೆ. ಇಂಡಿಕೇಟ್ ಸಿಮ್ಲಾದ ತಂಪಿನ ಹವೆಯಲ್ಲಿ ಅಧಿವೇಶನ ಸೇರುತ್ತದೆ. ಸಿಂಡಿಕೇಟು ನವದೆಹಲಿಯ ಬಿಸಿಗಾಳಿಯಲ್ಲೇ ಸಾಯೆಂದು ಆರಿಸುತ್ತದೆ. ಸಿಂಡಿಕೇಟಿಗೆ ಈ ಅಧಿವೇಶನ ಅಷ್ಟೊಂದು ಮಹತ್ವದ್ದಲ್ಲ; ಆದರೆ, ಇಂಡಿಕೇಟ್ ಅಧಿವೇಶನ ತುಂಬ ಭಾರವಾಗಲಿದೆ; ಅದಕ್ಕೆಂದೇ ಬೆಟ್ಟದೂರಿನ ತಂಗಾಳಿ ಸೇವನೆ.

ಇಂಡಿಕೇಟಿನ ಮುಂಬಯಿ ಅಧಿವೇಶನಾನಂತರ ಅದೇನು ಸಾಧಿಸಿತು? ಯುವತುರುಕ್ಕರ ಮಾತಿನಲ್ಲೇ ಹೇಳುವುದಾದರೆ ಲೊಳಲೊಟ್ಟೆ. ಪಾಪ, ರಾಜಕೀಯದಲ್ಲಿ ಎಂತಹ ಬೇಳೆ ಮಾರ ಬೇಕೆಂದು ಈ ಹುಡುಗರಿಗೆಲ್ಲೇಗೆ ಗೊತ್ತಾಗ ಬೇಕು? ವ್ಯಾಪಾರಿ ಹೇಳಿದಂತೆ ನಡೆದರೆ, ಮೊದಲ ದೀಪಾವಳಿಯೊಳಗೇನೇ ದಿವಾಳಿಯಾದಾನು. ಅನುಭವ ಬೆಳೆದಂತೆ ವ್ಯಾಪಾರೀ ಕಲೆ ಕರತಲಾಮಲಕವಾಗುತ್ತದೆ; ಅಗಲೇ ಹೊಟ್ಟೆ ಬೆಳೆಯ ತ್ತ ಬರುತ್ತದೆ.

ಸರಕಾರದ ಕಾರ್ಯಕ್ರಮಗಳಲ್ಲಿ ತ್ವರಿತತೆಯಿಲ್ಲವೆಂಬ ಪ್ರಬಲ ಆರೋಪ ಈ ತುರುಕ್ಕರದ್ದು. ಜನ ಇಂಡಿಕೇಟಿನ ಕಾರ್ಯನೀತಿಯಿಂದ ಭಗ್ನ ಮನೋರಥರಾಗಿದ್ದಾರೆಂದು ಇನ್ನೊಂದು ಅನುಭವ. ಈ ಪಟ್ಟಿ ಹನುಮಂತನ ಬಾಲ. ಇಂಡಿಕೇಟಿನಲ್ಲೇ ಮತ್ತೊಂದು ಸಿಂಡಿಕೇಟ್ ಇದೆ ಎಂಬನ್ನೂ ಇದು ಮುಂದೆ, ಇದನ್ನು ಅಲ್ಲಗಳೆಯಲು ಸುಳ್ಳು ಹೇಳುವುದೊಂದೇ ಉಪಾಯ. ರಾಜಧನರದ್ದತಿ; ಐಸಿಎಸ್ ಅಧಿಕಾರಿಗಳ ವಿಶೇಷ ಸೌಕರ್ಯಾಪಹರಣ—ಇತ್ಯಾದಿಗಳಲ್ಲಿ ಈ ಭಿನ್ನಮತ ಬೆಳಕಿನಷ್ಟು ತಿಳಿಯಾಗಿದೆ. ಶ್ರೀಮತಿ ಗಾಂಧಿಯವರು ಹಚ್ಚಿದ ಆತ್ಮಸಾಕ್ಷಿಯ ಕಿಚ್ಚು ಅವರನ್ನೇ ನುಂಗಲು ಬರುವಂತಿದೆ.

ಂಂ ಂಂ ಂಂ

ಪ್ರಧಾನಿ ಶ್ರೀಮತಿ ಗಾಂಧಿಯವರು ರಾಜಕೀಯ ಬಿಸಿಗಳಿಯಿಂದ ಕರಟಿ ಹೋಗಿದ್ದಾರೆ. ಅವರ "ಆತ್ಮಸಾಕ್ಷಿ"ಉಚ್ಚನ್ಯಾಯಾಲಯದಲ್ಲಿ ವಿಜಯಿಯಾದುದು ಅವರ ಭಾಗ್ಯ. ಆದರೂ ಅದು ವಿಜಯಿಯಾಗ ಬೇಕಾದರೆ ಎಂತೆಂಥ ರೀತಿಯಲ್ಲಿ ಸಾಕ್ಷಿ ಸಂಗ್ರಹಿಸ ಬೇಕಾಯಿತೆಂಬುದು ಅವರಿಗೇ ಗೊತ್ತು. ಯಾವುದೋ ಒಂದು ರಾಜಕೀಯ ಉದ್ದೇಶಕ್ಕಾಗಿ ತಾವು ತಯಾರಿಸಿದ ಆತ್ಮಸಾಕ್ಷಿ ಅಸ್ತ್ರ ಈಗ ತನಗೇ ತಿರುಗಿ ಬೀಳುತ್ತಿರುವುದನ್ನು ಕಂಡು ಅಕೆ ಪರಿತಪಿಸುತ್ತಾರೆ. ಆಟಂಕ ಪರಮಶಕ್ತಿಯನ್ನು ಕಂಡು ಹಿಡಿದಾತ ಹಿರೋಶಿಮಾ-ನಾಗಸಾಕಿಗಳು ಭಸ್ಮೀಭೂತವಾಗುವುದನ್ನು ಕಣ್ಣಾರೆ ಕಂಡು ನೊಂದು ಕೊಂಡನಂತೆ. ಇಂದಿರಾ ಗಾಂಧಿಯವರದ್ದು ಇದಕ್ಕೂ ಮಿಗಿಲು; ಅನಲನ ಬೇಳ್ವೆಯು ಅನಲನನ್ನೇ ನುಂಗಿದಂತೆ.

ಸಿಮ್ಲಾದಲ್ಲಿ ಅಕೆ ಎರಡು ಮುಖ್ಯ ಪ್ರಶ್ನೆಗಳನ್ನು ಉತ್ತರಿಸ ಬೇಕಾಗುತ್ತದೆ. ಇಂಡಿಕೇಟಧ್ಯಕ್ಷ ಶ್ರೀ ಜಗಜ್ಜೀವನರಾಮರು ಆಹಾರ ಸಚಿವರೂ ಆಗುದರಿಂದ, ಯಾವುದಾದರೂ ಒಂದು ಸ್ಥಾನವನ್ನು ಮಾತ್ರ ಉಳಿಸಿಕೊಳ್ಳ ಬೇಕೆಂದು ಕರೆ ಬರುತ್ತದೆ. ಹಾಗೆಯೇ ತೀವ್ರ ಸಮಾಜವಾದಿ ಕಾರ್ಯಕ್ರಮಗಳಿಂದ ಹಿಂಜರಿಯುವವರನ್ನು ಯುವತುರುಕ್ಕರು ತರಾಟೆಗೆ ತೆಗೆದು ಕೊಳ್ಳುವುದು ಗಂಡಿತ. ಶ್ರೀಮತಿ ಗಾಂಧಿಗೆ ಮಾತ್ರವಲ್ಲ, ಶ್ರೀ ರಾಮರಿಗೂ ಇದು ತಲೆನೋವಿತ. ಇದರ ಪಡುವೆ ಯುವತುರುಕ್ಕರಿಗೆ ಬುದ್ಧಿ ಹೇಳ ಬೇಕೆಂದು ಹೇಳುವವರದ್ದೇ ಒಂದು ಪಂಗಡ ಬೆಳೆಯುತ್ತಿದೆ. ತಾನು ಯುವ ಜನಾಂಗದ ಪ್ರತಿನಿಧಿಯೆಂದು ಅವರ ಮುಂದೆ ಅಡಿ ಬೆಂಬಲಗಿಟ್ಟಿಸಿ ಹಳೆಯವರನ್ನು ಕೂಡಿಕೊಂಡೇ ತನ್ನ ಲೀಲೆ ತೋರಿಸುವ ಶ್ರೀಮತಿ ಇಂದಿರಾ ಗಾಂಧಿ ಇದೇ ರೀತಿ ಬಹುಕಾಲ ಆಡಲಾರರು.

ಂಂ ಂಂ ಂಂ

ಶ್ರೀಮತಿ ಇಂದಿರಾಗಾಂಧಿಯವರು ತನ್ನ ಸಂಪುಟವನ್ನು ಪುನಾರಚಿಸುವರೆಂಬ ವದಂತಿ ಇಂದು ನಿನ್ನೆಯದಲ್ಲ. ಇದೀಗ ಸಂಸತ್ತಿನ ಅಧಿವೇಶನವು ಮುಕ್ತಾಯವಾಗಹೊಂದಿರುವುದರಿಂದ ಇದಕ್ಕೆ ಮತ್ತೊಂದು ಬಾರಿ ಪ್ರಾಣ ಪ್ರತಿಷ್ಠೆಯಾಗ ಹತ್ತಿದೆ. ಕಳೆದ ಆಗಸ್ಟ—ಸಪ್ಟಂಬರದ ಬಿರುಗಾಳಿಯಲ್ಲಿ ಕೆಲವರು ಮಂತ್ರಿಗಳನ್ನು ಪ್ರಧಾನಿಯವರೇ ಕಡಿದು ಹಾಕಿದರು; ಇನ್ನು ಕೆಲವರು ತಾವಾಗಿಯೇ ಹೊರ ಬಂದರು. ಅನಂತರ ಸಂಪುಟ ಸೇರಿದವರು ಮೂವರು ಮಾತ್ರ—ಶ್ರೀಗಳಾದ ಗುಲ್ಜಾರಿಲಾಲನಂದಾ, ಖಾಡಿಲ್ಕರ್ ಮತ್ತು ಡಿ. ಸಂಜೀವಯ್ಯ. ಮೂವರೂ ಹೊಸ ಶ್ರೀಚು ಬ್ರಾಂಡ್ ಹಚ್ಚಿಕೊಂಡ ಹಳಬರಲ್ಲಿ ಹಳಬರು. ಈಗ ತೆರವಾದ ಸ್ಥಾನಗಳನ್ನು ತುಂಬುವುದು ಆಡಳಿತ ಸುಗಮತೆಗೂ ಮಂತ್ರಿಗಳ ತಲೆಭಾರವಿಳಿಸುವುದಕ್ಕೂ ಅಗತ್ಯ. ಅನಿಶ್ಚಿತತೆ ಹೆಚ್ಚಿದಷ್ಟು ಆಡಳಿತ ಸಡಿಲಾಗುವುದು ಅನುಭವವೇದ್ಯ.

ಶ್ರೀ ಸಿ. ಸು. ರವರು ಮತ್ತೆ ಚುನಾವಣೆಯಲ್ಲಿ ಸೋತದ್ದರಿಂದ ಅವರಿಗೆ ಮಂತ್ರಿಯಾಗುವ ಭಾಗ್ಯ ಅಲಭ್ಯವಾಯ್ತು. ಶ್ರೀಮತಿ ಗಾಂಧಿಯವರ ಹೆಬ್ಬಯಕೆಗೆ ನೀರು ಸುರಿಯಿತು. ಇನ್ನೀಗ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿರುವ ಶ್ರೀ ಕೆಂಗಲ್ ಹನುಮಂತಯ್ಯನವರ ಹೆಸರು ಮಂತ್ರಿ ಪದವಿಗೆ ಕೇಳಿ ಬರುತ್ತದೆ. ಆಯೋಗದ ಕಾರ್ಯ ನಿಕಟ ಭವಿಷ್ಯದಲ್ಲಿಯೇ ಮುಕ್ತಾಯಗೊಳ್ಳಲಿರುವುದರಿಂದ ಈ ಊಹೆಗೆ ಪುರಸ್ಕಾರವೂ ಇದೆ.

ಲೋಕಸಭೆಯ ಉಪಸಭಾಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನಾರಿಸುವ ವೇಳೆಯೂ ಅದಕ್ಕೆ ಶ್ರೀ ಕೆಂಗಲ್ಲರ ಹೆಸರು ಕೇಳಿಬಂದಿತ್ತು. ಯಾವುದೇ ಸ್ಥಾನಕ್ಕೆ ಶ್ರೀ ಕೆಂಗಲ್ಲರು ಹೇಳಿಸಿದ ವ್ಯಕ್ತಿ. ಆದರೆ, ಅವರ ನೇರವಾಕ್ಯಗಳು ಮಾತ್ರ ಕೆಲವರಿಗೆ ಅಪ್ರಿಯ. ಕಾಂಗ್ರೆಸ್‌ನ ಅಂತರ್ಯುದ್ಧಕ್ಕೆ ಬಹಳಷ್ಟು ಮೊದಲೇ ಕೆಂಗಲ್ಲರು ಕೇಂದ್ರದಲ್ಲಿ ಸಚಿವರಾಗುವರೆಂಬ ಕಿಂವದಂತಿ ಹರಡಿತ್ತು. ಆದರೆ, ಅಂದಿನ ಪ್ರಧಾನಿ ನೆಹರುರವರ ಬಿಳಿಪಟ್ಟಿಯಲ್ಲಿ ಅವರ ಹೆಸರಿಲ್ಲದುದರಿಂದ ಹಾಗಾಗಲಿಲ್ಲ. ಶ್ರೀಮತಿ ಗಾಂಧಿಯವರಿಗೂ ಶ್ರೀ ಕೆಂಗಲ್ಲರು ಎಚ್ಚರಿಕೆ ನೀಡಿದ್ದಾರೆ.— ಪ್ರಧಾನಿಯ ನೀತಿ ತಪ್ಪಗೆ ಸರಿಯೆಂದು ಕಂಡದ್ದರಿಂದ ಆಕೆಯನ್ನು ಸಮರ್ಥಿಸುತ್ತೇನೆ; ಸಮಾಜ ಸುಧಾರಣಾ ನೀತಿಯಲ್ಲಿ ಆಕೆ ಹಿಂದುಳಿದರೆ, ಆ ಸಮರ್ಥನೆಯನ್ನು ಹಿಂದೆಗೆದು ಕೊಳ್ಳುತ್ತೇನೆ. ಈ ಮನೋರಥದ ವ್ಯಕ್ತಿಯನ್ನು ಶ್ರೀಮತೀಜಿಯವರು ತನ್ನ ಸಂಪುಟಕ್ಕೆ ಸೇರಿಸುವುದು ಅಸಂಭವ. ಆದರೆ, ಕರ್ನಾಟಕಕ್ಕೆ ಕೇಂದ್ರದಲ್ಲಿ ಪ್ರಾತಿನಿಧ್ಯವಿಲ್ಲದ್ದರಿಂದ, ಹೆಚ್ಚಿನ ಎಂಪಿಗಳು ಸಿಂಡಿಕೇಟಿಗರಾದುದರಿಂದ ಶ್ರೀ ಕೆಂಗಲ್ ಮಂತ್ರಿಯಾದರೂ ಆಗ ಬಹುದು. ಆದರ ಮಧ್ಯೆ ಶ್ರೀಮತಿ ಮಹಿಷಿಯವರೇ ಕ್ಯಾಬಿನೆಟ್ ದರ್ಜೆಗೆ ಏರಿ ಕುರ್ಚಿ ತುಂಬಿದರೂ ತುಂಬ ಬಹುದು.

ಶ್ರೀ ಹನುಮಂತಯ್ಯನವರಂಥ ಆದರ್ಶ ವ್ಯಕ್ತಿ ಪ್ರಜಾಧಿಕಾರಿಯಾಗುವುದು ಜನತೆಯ ಹಿತದೃಷ್ಟಿಯಿಂದ ಉತ್ತಮ. ಇದು ರಾಜ—ಮಹಾರಾಜರ ಕಾಲವಲ್ಲ. ರಾಜಕೀಯ ಪಕ್ಷಗಳ ಯುಗಾಂತರ. ಆದುದರಿಂದ ರಾಜಕೀಯ ಸೀಮಾಪುರುಷರ ಸ್ವೀಕಾರಾರ್ಹ — ಮಂದಿಮಾಗಧರಿಗೆ ಮಾತ್ರ ಸರ್ವತ್ರ ಪುರಸ್ಕಾರ. ಹಾಗಾಗಿ ಶ್ರೀ ಕೆಂಗಲ್ಲರ ರಟ್ಟೆಗೆ ಇನ್ನೂ ಹುಕ್ಕು ಬಿದ್ದಿಲ್ಲ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಕೀಯುಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ & ADVERTISE IN NAVAYUGA WEEKLY

ದಿವ್ಯಂ ತ್ರಿಲಕ್ಷವರ್ಷಂ ರೇಮೇ ರಹಸಿ!

ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ಆಯುಷ್ಪ್ರಮಾಣವು ತುಂಬ ದಿಗ್ಭ್ರಮೆಗೊಳಿಸುತ್ತದೆ. ಅವನ್ನು ನಂಬದಂತೆ ಮಾಡುವಲ್ಲಿ ಇದೂ ಮಹತ್ತರ ಪಾತ್ರ ವಹಿಸುತ್ತದೆ. ಪುರಾಣಗಳ ವಂಶ ಹಾಗೂ ವಂಶಾನುಚರಿತೆಗಳಲ್ಲಿ ನಕ್ಷತ್ರ ಮಾನವರ ಚರಿತ್ರೆಗಳಲ್ಲಿ ವೈಚಿತ್ರ್ಯವನ್ನು ತರುವುದಕ್ಕಾಗಿ ಅವುಗಳನ್ನು ಪುರುಷರಂತೆ ವರ್ಣಿಸಿದ್ದಾರೆ. ಜಡ ಮತ್ತು ಚೇತನಗಳ ಆಯುಷ್ಪ್ರಮಾಣದಲ್ಲಿ ಆಕಾಶ—ಪಾತಾಳಗಳ ಅಂತರವಿದೆ. ಗ್ರಹ—ನಕ್ಷತ್ರಗಳಲ್ಲಿ ನಡೆಯುವ ಘಟನೆಗಳು, ಅವುಗಳಲ್ಲಾಗುವ ಪರಿವರ್ತನೆಗಳು, ಆಕಾಶದಲ್ಲಿ ಬಹಳ ನಿಧಾನವಾಗಿ, ಕೋಟಿ ಕೋಟಿ ವರ್ಷಗಳಲ್ಲಿ ಒಮ್ಮೊಮ್ಮೆ ಸಂಭವಿಸುತ್ತವೆ. ಈ ವರ್ಣನೆಗಳಲ್ಲಿ ಬಂದಿರುವ ಸಹಸ್ರ, ಲಕ್ಷ, ಕೋಟಿ ಶಬ್ದಗಳ ಅರ್ಥ ಕ್ರಮವಾಗಿ ಸಾವಿರ, ಲಕ್ಷ ಮತ್ತು ಕೋಟಿ ಸಂಖ್ಯೆಗಳೆಂದು ಹೇಳುವುದು ನಿಘಂಟುವಿನ ರೀತ್ಯಾ ಅತ್ಯಂತ ಸಮರ್ಪಕ. ಮಾನವನ ಆಯುಷ್ಯ ವೇದಕಾಲದಿಂದಲೂ ೧೦೦ ವರ್ಷವೆಂದು ತಿಳಿಯಲಾಗಿದೆ. (ಶತಾಯುರ್ವೈ ಪುರುಷಃ) ಅಂತಹ ಮಾನವನಿಗೆ ಸಂಬಂಧಿಸಿದಂತೆ ಸಹಸ್ರಾರು ವರ್ಷಗಳ ಆಯುರ್ಮಾನ ಬಂದಾಗ ದಿಗ್ಭ್ರಮೆಯಾಗುವುದು ಸಹಜ. ಕಾರ್ತವೀರ್ಯಾರ್ಜುನನು ಐವತ್ತು ಸಹಸ್ರ ವರ್ಷಕಾಲ ರಾಜಸುಖ ಭೋಗಾಸಕ್ತನಾಗಿದ್ದನು; ಋಷಭದೇವನು ಮೂರು ಲಕ್ಷ ದಿವ್ಯ ವರ್ಷಗಳ ವರೆಗೆ ಸಾಂಸಾರಿಕ ಸುಖಗಳನ್ನು ಭೋಗಿಸುತ್ತಿದ್ದನು (ಪಂಚಾಶೀತಿ ಸಹಸ್ರಾಣಿ ಹ್ಯವ್ಯಾಹತಬಲಃ ಸಮಾಃ ಭಾಗವತ ೯-೨೩-೨೬ ಮತ್ತು ದಿವ್ಯಂ ತ್ರಿಲಕ್ಷವರ್ಷಂಚ ರೇಮೇ ರಹಸಿ ಕಾಮುಕಃ— ಬ್ರಹ್ಮವೈವರ್ತ ೧-೧೨-೧೬) ಹಾಗೆಯೇ ಭರತನು ಒಂದು ಕೋಟಿ ವರ್ಷ ರಾಜ್ಯವನ್ನನುಭವಿಸಿ ಗೃಹಸ್ಥಾಶ್ರಮವನ್ನು ತ್ಯಜಿಸಿದನು. (ಏವಂ ವರ್ಷಾಯುತ ಸಹಸ್ರ ಪರ್ಯಂತಾವಸಿತ ಕರ್ಮನಿರ್ವಾಣಾವಸರಃ— ಭಾಗವತ ೫-೭-೮) ಈ ಸಂಗತಿಗಳನ್ನು ಓದುವಾಗ ಇದೇನು ಬಾಲಿಶತೆ ಎಂದೋ ಇದೇನು ಪೊಳ್ಳಿನ ಕಂತೆ ಎಂದೋ ಹೇಳಿಬಿಡುವುದು ಸಾಧ್ಯ. ಈ ಮೇಲಿನ ಮೂರು ಉಲ್ಲೇಖಗಳಲ್ಲಿ ಸಹಸ್ರ, ಲಕ್ಷ ಮತ್ತು ಕೋಟಿಗಳಿಗೆ ಶಬ್ದಾರ್ಥವನ್ನು ಮಾಡುವುದು ತೀರಾ ಆಭಾಸವಾಗುತ್ತದೆ.

ಸಹಸ್ರಾನುಸಹಸ್ರ ವರ್ಷಗಳ ಕಾಲ ಮಾನವನೊಬ್ಬ ಜೀವ ಹಿಡಿದಿರಬಲ್ಲನೆಂದು ಓದಿದಾಗ, ಅವನ ಸತ್ಯಾಸತ್ಯತೆಯನ್ನು ಬದಿಗಿಡದೆ, ಹುಸು ವಿಚಾರಕ್ಕೆ ತೊಡಗಿದರೆ, ಇದು ಸಂಪೂರ್ಣ ಅಸಂಭವವೆಂದು ಅತಿ ಸಹಜವಾಗಿಯೇ ತಿಳಿಯಬೇಕಾಗುತ್ತದೆ. ಹೀಗೆ ತಿಳಿಯುವವರನ್ನು ಭಾರತೀಯ ಪುರಾಣಗಳಲ್ಲಿ ಆಸ್ಥೆಯಿಲ್ಲದವರು, ಅವರು ಪಾಶ್ಚಾತ್ಯ ಪ್ರಭಾವದಲ್ಲಿ ಬಿದ್ದಿದ್ದಾರೆ ಎಂದು ತಿರಸ್ಕರಿಸುವುದು ಸಾಧುವಲ್ಲ. ಪಾಶ್ಚಾತ್ಯ ವಿದ್ಯೆ ಭಾರತದಲ್ಲಿ ಪಾದಾರ್ಪಣ ಮಾಡಿದ್ದು ಸುಮಾರು ಮೂರು—ನಾಲ್ಕು ಶತಮಾನಗಳೀಚೆಗೆ. ಆದರೆ, ಅದಕ್ಕೆ ಮೊದಲೂ ಭಾರತದಲ್ಲಿ ಬುದ್ಧಿಜೀವಿಗಳಿದ್ದರೆಂಬುದನ್ನು ಅಲ್ಲಗಳೆಯಲು ಅಶಕ್ಯ. ಆ ಕಾಲದ ಸಂಸ್ಕೃತಜ್ಞ ವಿದ್ವಾಂಸರ ಮನಸ್ಸಿನಲ್ಲಿಯೂ ಇದೇ ತರದ ಆಶಂಕೆಗಳು ಏಳುತ್ತಿದ್ದುವು.

ರಾಮರಾಜ್ಯದ ಕಾಲ. ಶ್ರೀರಾಮನು ರಾಜಸಭೆಯಲ್ಲಿ ಒಡ್ಡೋಲಗ ಕೊಟ್ಟಿದ್ದ. ಓರ್ವ ಬ್ರಾಹ್ಮಣನ ಆಗಮನವಾಯಿತು. ಆತನ ಭುಜದಲ್ಲಿ ಮೃತ ಬಾಲಕನೊಬ್ಬ ಮಲಗಿಸಿದ್ದ. ಆ ಭೂಸುರೋತ್ತಮನು ಮಹಾರಾಜನಲ್ಲಿ ಬಿನ್ನವಿಸಿದ- (ಅಪ್ರಾಪ್ತಯೌವನಂ ಬಾಲಂ ಪಂಚವರ್ಷ ಸಹಸ್ರಕಂ" ವಾಲ್ಮೀಕಿ ರಾಮಾಯಣ—ಉತ್ತರಕಾಂಡ, ೭೩-೫)"ರಾಜನೇ, ನಿನ್ನ ರಾಜ್ಯದಲ್ಲಿ ಈ ಐದು ಸಾವಿರ ವರ್ಷದ ಬಾಲಕನಿಗೆ ಅಕಾಲ ಮೃತ್ಯುವೆಲ್ಲಿಂದ ಎರಗಿತು? ಇದು ಯಾರ ದೋಷ?" ಇದನ್ನು ಕೇಳಿದ ಶ್ರೀರಾಮನು ವಿಚಾರ ತತ್ಪರನಾದ.

ವಾಲ್ಮೀಕಿ ರಾಮಾಯಣದ ಟೀಕೆಗಳಲ್ಲಿ ತಿಲಕ ಟೀಕೆ ಪ್ರಸಿದ್ಧವಾದುದು. ತಿಲಕ ಟೀಕಾಕಾರನೂ ತಲೆ ಕೆಡಿಸಿಕೊಂಡ. ಐದು ಸಾವಿರ ವರ್ಷ ಪ್ರಾಯದವನಾದರೂ ಈತನನ್ನು ಬಾಲಕನೆಂದೇಕೆ ಕರೆಯಲಾಯಿತು? ತಂದೆಯು ಪುತ್ರ ಮೋಹದಿಂದ ಹೇಳಿದನೆ? 'ಅಪ್ರಾಪ್ತ ಯೌವನಂ' ಎಂದು ಬೇರೆ ವಿಶೇಷಿಸಿದ್ದಾನೆ. ತಂದೆಗೆ ಮಗನೆನ್ನುವ ಬಾಲಕ. ಅಪ್ರಾಪ್ತ ವಯಸ್ಕನೆನ್ನುವ ಭ್ರಮೆ ಯಾರವುದು ಅಸ್ವಾಭಾವಿಕವಲ್ಲವಾದರೂ ಪಂಚ ವರ್ಷ ಸಹಸ್ರಕಂ ಎನ್ನುವಷ್ಟು ಬುದ್ಧಿ ಭ್ರಮೆಯೇ? ತಿಲಕ ಟೀಕಾಕಾರನು ಪೂರ್ವಮೀಮಾಂಸೆಯಲ್ಲಿ ಬಂದಿರುವ ಪುರುಷಾಯ ಸಂಬಂಧಿ ವ್ಯವಸ್ಥೆಯನ್ನು ನೆನಪಿಸಿಕೊಂಡನು. ವರ್ಷವೆಂದರೆ, ದಿನವೆಂದು ಅದು ಹೇಳುತ್ತದೆ. ಆದುದರಿಂದ ಐದು ಸಾವಿರ ವರ್ಷಗಳೆಂದರೆ ಐದು ಸಾವಿರ ದಿನಗಳೆಂದು ಲೆಕ್ಕಾಚಾರ ಮಾಡಿದ. ಅಂದರೆ, ಬ್ರಾಹ್ಮಣ ಪುತ್ರನು ಮೃತನಾಗುವಾಗ ಅವನ ಪ್ರಾಯ ೧೩ ವರ್ಷ, ೮ ಮಾಸ ಮತ್ತು ೧೨ ದಿನಗಳು. ಈ ಪ್ರಾಯ 'ಅಪ್ರಾಪ್ತ ಯೌವನ'ಕ್ಕೂ 'ಬಾಲ'ಕತ್ವಕ್ಕೂ ಸರಿಹೊಂದುತ್ತದೆ.

ವೇದವ್ಯಾಸರೂ ಪುರಾಣದಲ್ಲಿ ಇದೇ ತಾತ್ಪರ್ಯ ಹೇಳಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ ಬರುವ ಈ ಬ್ರಾಹ್ಮಣ ಪುತ್ರನ ಘಟನೆಯನ್ನು ಪದ್ಮ ಪುರಾಣದಲ್ಲಿ ಅವರು ಉಲ್ಲೇಖಿಸಿದ್ದಾರೆ. ಅದರಲ್ಲಿ ಬಾಲಕನ ಪ್ರಾಯವನ್ನು ಐದು ಸಾವಿರ ವರ್ಷವೆಂದು ಅವರು ಹೇಳಲಿಲ್ಲ. ಅವರನ್ನುವಂತೆ ಆತನ ಪ್ರಾಯ ಹದಿಮೂರು ವರ್ಷಗಳು. (ಅಪ್ರಾಪ್ತಯೌವನಂ ಬಾಲಂ ಪಂಚವರ್ಷ. ಗತಾಯುಷಂ—ಸೃಷ್ಟಿಕಾಂಡ ೩೭—೩೭) ಮಾನವರ ಆಯುಷ್ಯವನ್ನು ಗಣಿಸುವಾಗ, ಪುರಾಣಗಳು ಹೇಳುವ "ಸಹಸ್ರ" ಶಬ್ದವು ಸಂಖ್ಯಾವಾಚಕವೆಂದು ಪರಿಗಣಿಸದೆ ಅದನ್ನು ಪೂರ್ಣಾರ್ಥಕವೆಂದು ತಿಳಿಯುವುದು ಸಮಸ್ಯಾ ಪರಿಹಾರ ಮಾರ್ಗ.

ಗ್ರಹ, ನಕ್ಷತ್ರಗಳ ಆಯುವಿನ ಬಗೆ ಬಂದಿರುವ ಸಹಸ್ರ—ಲಕ್ಷ, ಕೋಟಿಗಳು ಸಂಖ್ಯಾವಾಚಕವಾಗಿಯೇ ಉಳಿಯುತ್ತವೆ. ಆದರೆ, ಮನುಷ್ಯರ ಬಗ್ಗೆ ಬಂದಾಗ ಮಾತ್ರ ಈ ಅರ್ಥವನ್ನೇ ಇಟ್ಟುಕೊಳ್ಳುವುದು ಅನವಶ್ಯ. "ಸಹಸ್ರ"ಕ್ಕೆ ಪೂರ್ಣ "ಲಕ್ಷ"ಕ್ಕೆ ಕೆಲವು ತಿಂಗಳು-ದಿನ ಕಡಿಮೆ ಮತ್ತು ಕೋಟಿಗೆ ಕೆಲವು ತಿಂಗಳು—ದಿನ ಹೆಚ್ಚು ಎಂದು ತಿಳಿಯುವುದು ಕ್ಷೇಮಕರ. ಹೀಗೆ ತಿಳಿಯುವುದರಿಂದ ಪುರಾಣಗಳಲ್ಲಿ ಉಲ್ಲೇಖಿತವಾಗಿರುವ ದೀರ್ಘಾಯುಗಳ ಸಮಸ್ಯೆ ತಾನಾಗಿಯೇ ಪರಿಹಾರಗೊಳ್ಳುವುದು. ಉದಾಹರಣೆಗಾಗಿ ವಾಲ್ಮೀಕಿ ರಾಮಾಯಣದ ಈ ಶ್ಲೋಕ ನೋಡೋಣ:

ಷಷ್ಟಿರ್ವರ್ಷ ಸಹಸ್ರಾಣಿ
ಜಾತಸ್ಯ ಮಮ ಕೌಶಿಕ
ದುಃಖೇನೋತ್ಪಾದಿತಶ್ಚಾಯಂ
ನ ರಾಮಂ ನೇತುಮರ್ಹಸಿ||
(ಬಾಲಕಾಂಡ-೨೦-೧)

ವಿಶ್ವಾಮಿತ್ರನು ರಾಕ್ಷಸರಿಂದ ತನ್ನ ಯಜ್ಞರಕ್ಷಣೆಗಾಗಿ ರಾಮ ಲಕ್ಷ್ಮಣರನ್ನು ಕರೆದೊಯ್ಯಲು ದಶರಥ ರಾಜನಲ್ಲಿಗೆ ಬಂದ ಸಂದರ್ಭ. ತನ್ನ ಅರುವತ್ತು ಸಾವಿರನೆಯ ವರ್ಷದಲ್ಲಿ ಬಹಳ ಪ್ರಯಾಸದಿಂದ ಹುಟ್ಟಿದ ರಾಮನನ್ನು ತಾನು ಕಳಿಸಿಕೊಡಲಾರೆನೆಂದ. ಆತನು ನಿರಾಕರಿಸುತ್ತಾನೆ.

ದಶರಥನು ಅರವತ್ತು ಸಾವಿರ ವರ್ಷಗಳಿಗೂ ಮೀರಿ ಬದುಕಿದ್ದನು; ಆತನಿಗೆ ಆ ಹಣ್ಣು ಹಣ್ಣು ಮುದಿಪ್ರಾಯದಲ್ಲಿ ಮಕ್ಕಳು ಜನಿಸಿದರು ಎಂದು ಹೇಳಿದರೆ ಅದೆಷ್ಟು ಅಸಂಗತ! ಸಹಸ್ರ ಶಬ್ದವನ್ನು ಪೂರ್ಣಾರ್ಥವಾಗಿಟ್ಟುಕೊಂಡು, ಅರವತ್ತನೆಯ ವಯಸ್ಸಿನಲ್ಲಿ ರಾಮನು ಹುಟ್ಟಿದನೆಂದರೆ, ಅದೆಷ್ಟು ಸಮಂಜಸ! ಅತ್ರಿಯು ಮೂರು ಸಾವಿರ ವರ್ಷ ತಪಸ್ಸು ಮಾಡಿದನೆಂಬುದಕ್ಕೂ ಇದೇ ರೀತಿಯಲ್ಲಿ ಅರ್ಥಮಾಡುವುದು ಅಸಂಭಾವ್ಯವನ್ನು ಸಂಭಾವ್ಯಗೊಳಿಸುತ್ತದೆ.

—ಗೋ.

ಪುತ್ತೂರು III ಏಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 721/69

K. R. ಅಚಾರ್ — ಅರ್ಜಿದಾರ

ಶಾಸ್ತಪ್ಪಗೌಡ ಕೂಡಾ — ಎದ್ರಿರು.

೩ನೇ ಎದ್ರಿ. ಬಾಲಕೃ, ಪಡಾರಡಿ ಕುಂಞ ಗೌಡರ ಪತ್ನಿ, ಬೆಳ್ತಂಗಡಿ ತಾಲ್ಲೂಕು ಕರಾಯ ಗ್ರಾಮದಲ್ಲಿರುವವಳು, ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:- ಮೇಲ್ಕಂಡ ವ್ಯವಹಾರದಲ್ಲಿ ಗೇಣಿ ಬಾಕಿ ಬಗ್ಗೆ ಸದ್ರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ತಾ. 25-6-1970ನೇ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟ ಮುಂದೆ ಹಾಜರಾಗಿ ಉಪಸಂಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

S. Soorappaya
Vakil for Petitioner

ತಾ. 22—4—1970

ವಿದೇಶ ಪ್ರಯಾಣ

ಡಾ. ಪಿ. ವಿ. ರೈ

ಬೆಂಗಳೂರಿನ ಡಾ. ಟಿ. ಎಸ್. ರೈಯವರ ಸಹೋದರ ಡಾ. ಪಿ. ವಿ. ರೈಯವರು ತಾ 14.6.1970ನೆ ಗುರುವಾರ ಬೆಂಗಳೂರಿನಿಂದ ಬೊಂಬಾಯಿ, ದಿಲ್ಲಿಗಾಗಿ ವೆಸ್ಟ್ ಜರ್ಮನಿಯ ಹೆನೋವರ್‌ನ ಮಾನಸಿಕ ಚಿಕಿತ್ಸಾಲಯದಲ್ಲಿ ವೈದ್ಯರಾಗಿ ಉದ್ಯೋಗ ನಿರ್ವಹಿಸಲು ತೆರಳುತ್ತಾರೆ.

ಪ್ರಾಯಶಃ ಇವರು ಮೂರು ವರ್ಷ ಕಾಲ ಅಲ್ಲಿದ್ದು ಅನಂತರ ಭಾರತಕ್ಕೆ ಹಿಂದಿರುಗಿ ಸುಸಜ್ಜಿತ ಮಾನಸಿಕ ಚಿಕಿತ್ಸಾಲಯವನ್ನು ತೆರೆಯುವ ಯೋಜನೆಯಲ್ಲಿರುವರು. ಇಲ್ಲಿ ತೆರೆಯಲಿರುವ ಚಿಕಿತ್ಸಾ ಸಂಸ್ಥೆಗೆ ಮಾಜಿ ದಂಡನಾಯಕ ಜನರಲ್ ಕೆ. ಎಸ್. ತಿಮ್ಮಯ್ಯನವರು ಅಧ್ಯಕ್ಷರಾಗಿರಲು ಒಪ್ಪಿರುತ್ತಾರೆಂದು ಗೊತ್ತಾಗಿದೆ.

ಮೂಡಬಿದರೆಯಲ್ಲಿ ವಿದ್ಯಾರ್ಥಿನಿ ಹಾಸ್ಟೆಲಿನ ಶಿಲಾನ್ಯಾಸ.

ಮೂಡಬಿದರೆ ಶ್ರೀ ಮಹಾವೀರ ಕಾಲೇಜಿನಲ್ಲಿ ಸುಮಾರು ಎರಡೂವರೆ ಲಕ್ಷ ರೂಪಾಯಿ ಖರ್ಚಿನಲ್ಲಿ ನಿರ್ಮಿಸಲಿರುವ ಬಾಲಕಿಯರ ಹಾಸ್ಟೆಲಿನ ಶಂಕು ಸ್ಥಾಪನೆಯನ್ನು ರಾಜ್ಯಪಾಲ ಶ್ರೀ ಧರ್ಮವೀರರು ತಾ. 18-6-70ರಂದು ನೆರವೇರಿಸಿದರು. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಹಾವೀರ ಕಾಲೇಜನ್ನು ಸ್ಥಾಪಿಸಿದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಸ್ವಾಗತಿಸಿ ಅಕಾಡೆಮಿಯ ಶೈಕ್ಷಣಿಕ ಸಾಧನೆಗಳನ್ನು ವಿವರಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕರು ಸಂಗ್ರಹಿಸಿದ ಪಪ್ಪದ ಪೂರ್ತಿ ನಿಧಿಯಿಂದ ರೂ. 25,000ವನ್ನು ಹಾಸ್ಟೆಲಿಗೆ ಕೊಡುಗೆಯಾಗಿತ್ತ. ಶ್ರೀ. ಎಸ್. ಎನ್. ಮೂಡಬಿದ್ರೆಯವರನ್ನು ಶ್ರೀ ಧರ್ಮವೀರರೂ, ಶ್ರೀ ವೀರೇಂದ್ರ ಹೆಗ್ಗಡೆಯವರೂ ಗಂಧದ ಹಾರ ಹಾಕಿ ಗೌರವಿಸಿದರು. ಅಂತ್ಯದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಯು. ಎಸ್. ಉಪಾಧ್ಯಾಯರು ವಂದನೆಗಳನ್ನರ್ಪಿಸಿದರು.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್, ಮದ್ರಾಸು-4

ಉಡುಪಿಯಲ್ಲಿ ರಾಷ್ಟ್ರಪತಿ

ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ತನ್ನ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸದಲ್ಲಿ ಉಡುಪಿ ಮತ್ತು ಮಣಿಪಾಲಗಳನ್ನು ಸಂದರ್ಶಿಸಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಶ್ರೀ ಕೃಷ್ಣ ಮಠಕ್ಕೆ ಆಗಮಿಸಿದ ರಾಷ್ಟ್ರಪತಿಗಳನ್ನು ಪೂರ್ಣಕುಂಭ ವೇದಘೋಷಾದಿಗಳಿಂದ ಸ್ವಾಗತಿಸಲಾಯಿತು. ಪರ್ಯಾಯ ಶ್ರೀ ಪಾದಂಗಳವರು ಸಭಾಂಗಣದಲ್ಲಿ ಸೇರಿದ ಚಿಕ್ಕ ಸಭೆಯಲ್ಲಿ ರಾಷ್ಟ್ರಪತಿಗಳಿಗೆ ಶ್ರೀಯಾಳ್ಸನ್ನು ಕೊಟ್ಟು ಅನುಗ್ರಹಿಸಿದರು.

ಅನಂತರ ಶ್ರೀ ಮತ್ತು ಶ್ರೀಮತಿ ಗಿರಿಯವರು ಮಣಿಪಾಲಕ್ಕೆ ತೆರಳಿದರು. ಅಲ್ಲಿ ಸಿಂಡಿಕೇಟ್ ಬ್ಯಾಂಕು ವ್ಯಾಲಿವ್ಯೂ ಇಂಟರ್ ನೇಶನಲ್ ಹೆಲ್ತ್ ಕ್ಲಬ್ಬಿನಲ್ಲಿ ತಮ್ಮ ಗೌರವಾರ್ಥ ಏರ್ಪಡಿಸಿದ ಔತಣಕೂಟದಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಭಾಷಣಮಾಡಿದ ಶ್ರೀ ಗಿರಿಯವರು ಪ್ರತ್ಯೇಕ ಸ್ವತಂತ್ರ ರಾಜ್ಯಗಳ ಬೇಡಿಕೆಗಳ ಹೆಚ್ಚಳವನ್ನು ಉಲ್ಲೇಖಿಸಿದರು. ಇದಕ್ಕಾಗಿ ತಮ್ಮ ಖೇದವನ್ನು ವ್ಯಕ್ತಪಡಿಸಿ ದೇಶದ ಪ್ರತಿಯೊಬ್ಬ ಪ್ರಜೆಯೂ ತಾನು ಮೊದಲಿಗೆ ಭಾರತೀಯನೆಂದು ತಿಳಿದುಕೊಂಡು ಅನಂತರ ರಾಜ್ಯ ಮತ್ತು ಸಮಾಜದ ಬಗ್ಗೆ ವಿಚಾರ ಮಾಡಬೇಕೆಂದು ವಿನಂತಿಸಿದರು.

ಮಣಿಪಾಲದ ಬಗ್ಗೆ ಮಾತನಾಡಿದ ರಾಷ್ಟ್ರಪತಿಯವರು ಡಾ| ಮಾಧವ ಪೈಯವರ ಅದ್ವಿತೀಯ ಕಾರ್ಯದಕ್ಷತೆಗೆ ಮೆಚ್ಚಿ ದೇಶ-ವಿದೇಶಗಳ ವಿದ್ಯಾರ್ಥಿಗಳಿರುವ ಮಣಿಪಾಲವು ಮಿನಿಭಾರತವೆಂದೂ ಇಲ್ಲಿ ಭಾವೈಕ್ಯವನ್ನು ಸಾಧಿಸುವಲ್ಲಿ ಡಾ| ಪೈ ಯಶಸ್ವಿಯಾಗಿದ್ದಾರೆಂದೂ ಹೇಳಿದರು.

ಆರಂಭದಲ್ಲಿ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ ಅವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ಕೆ. ಆರ್. ಪ್ರಸಾದರು ಧನ್ಯವಾದವಿತ್ತರು.

ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಹೊರರೋಗಿ ವಿಭಾಗದ ಹೊಸ ಕಟ್ಟಡದ ಉದ್ಘಾಟನೆಯನ್ನು ರಾಷ್ಟ್ರಪತಿಯವರು ನೆರವೇರಿಸಿದರು. ಡಾ| ಮಾಧವ ಪೈಯವರು ಸ್ವಾಗತಿಸುತ್ತ ಮಣಿಪಾಲದ ಸಂಸ್ಥೆಗಳು ಸ್ವಾವಲಂಬನೆಯ ತತ್ವವನ್ನೇ ನಂಬಿ ಆರಂಭವಾದುದರಿಂದ ಇದರ ಸಾಧನೆ ಸಾಧ್ಯವಾಯಿತೆಂದೂ ಇಂದು ಸುಮಾರು ಹತ್ತುಸಾವಿರ ಮಕ್ಕಳು ಈ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆಂದೂ ಹೇಳಿದರು.

ರಾಷ್ಟ್ರಪತಿ ಗಿರಿಯವರು, ಮೊದಲು ಅನ್ನ, ವಸನ ಮತ್ತು ವಸತಿಗಳು ಮಾತ್ರ ಮಾನವನ ಪ್ರಾಥಮಿಕ ಅವಶ್ಯಕತೆಗಳಾಗಿದ್ದರೂ ಇಂದು ಶಿಕ್ಷಣ ಮತ್ತು ಚಿಕಿತ್ಸೆಗಳೂ ಈ ಸಾಲಿನಲ್ಲಿ ಸೇರಿವೆಯೆಂದು ಹೇಳಿ, ಈ ಎರಡೂ ರಂಗಗಳಲ್ಲಿ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯ ಅಪ್ರತಿಮ ಪ್ರಶಂಸನೀಯ ಸೇವೆಯನ್ನು ಮುಕ್ತಕಂಠದಿಂದ ಕೊಂಡಾಡಿದರು. ಕೊನೆಯಲ್ಲಿ ಶ್ರೀ ಕೆ. ಶ್ರೀಪತಿ ಆಚಾರ್ಯರು ಧನ್ಯವಾದವರ್ಪಿಸಿದರು.

ಸಂಜೆ ರಾಷ್ಟ್ರಪತಿಗಳು ಉಡುಪಿ ನಗರ ಸಭೆಯ ನಿಯೋಜಿತ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿದರು.

ರಾಷ್ಟ್ರಪತಿಯವರ ಸಂಚಾರವೇಳೆ ರಾಜ್ಯದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಅವರೊಡನೆ ಇದ್ದರು.

ಶ್ರೀ ಗಿರಿಯವರು ರಾಷ್ಟ್ರಪತಿಯಾದ ಮೇಲೆ ನೀಡಿದ ಪ್ರಥಮ ಭೇಟಿ ಇದು. ಭಾರತದ ರಾಷ್ಟ್ರಪತಿಯವರ ಪ್ರಥಮ ಸಂದರ್ಶನವೂ ಇದೇ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

ಮಿಸ್. ಕೇಸ್ ನಂಬ್ರ 11/1970

ಎಸ್. ಗೋಪಾಲ ಹೊಳ್ಳ — ಅರ್ಜಿದಾರ
ಪುಟ್ಟಿ ಮೇಸ್ತ್ರಿ ಕೂಡಾ — ಎದುರು

ಕುಂದಾಪುರ ಕಸ್ಬೆಯಲ್ಲಿರುವ ಬಾಬಣ್ಣ ನಾಯ್ಕರ ಮಗ ಮೇಲಿನ ಮೊಕದ್ದಮೆಯ 2ನೇ ಎದ್ರಿ ಎ. ರಾಮಚಂದ್ರ ನಾಯ್ಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಭಾದ್ಯತೆ ಅರ್ಜಿಯು ತಾರೀಖು 30-6-1970ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದಾಗಿ ಆಗಲಿ ಇಲ್ಲವೆ ವಕೀಲರ ಮೂಲಕ ಆಗಲಿ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ನಿಮಗೆ ಏನಾದರೂ ಆಕ್ಷೇಪವಿದ್ದಲ್ಲಿ ಅದನ್ನು ಬರಹ ಮೂಲಕ ಹಾಜ್ರುಪಡಿಸತಕ್ಕದ್ದು. ನೀವು ಗೈರು ಹಾಜರಾದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ನಂಬ್ರದ ಮುಂದಿನ ಕೆಲಸ ಮಾಡಲಾದೀತು.

(By order)
M. Madhava Rao
Advocate for Applicant

Coondapoor, 12-5-1970

ಇಂದಿನ ಶಿಕ್ಷಣದಲ್ಲಿಯ ನ್ಯೂನತೆ

ಮಗನು ೧೬ ವರ್ಷದವನಾದನೆಂದರೆ ಅವನೊಡನೆ ಮಿತ್ರನಂತೆ ವರ್ತಿಸಬೇಕು ಎಂದು ಶಾಸ್ತ್ರದಲ್ಲಿ ಹೇಳಿದೆ. ಇದರ ಅರ್ಥ ಇಷ್ಟೇ—೧೫ ವರ್ಷ ಮುಗಿಯುವವರೆಗೆ ಮಗನಿಗೆ ಉತ್ತಮ ಶಿಕ್ಷಣ ಕೊಡಬೇಕು. ಮತ್ತು ಅವನ ಯಾವತ್ತೂ ಖರ್ಚನ್ನು ತಂದೆಯು ನಿರ್ವಹಿಸಬೇಕು. ಮತ್ತು ೧೬ನೇ ವರ್ಷ ಮುಗಿದೊಡನೆ ಅವನಲ್ಲಿ ಸ್ವಾವಲಂಬನದಿಂದ ಜೀವಿಸುವ ಯೋಗ್ಯತೆ ಬರುವಂತೆ ನೋಡಿಕೊಳ್ಳಬೇಕು. ಅನಂತರವೂ ಅವನಿಗೆ ಸಹಾಯ ಮಾಡಬಹುದು ಮಿತ್ರನಂತೆ. ಆದರೆ ಅವನ ಭರಣಪೋಷಣೆಯ ಭಾರವನ್ನು ಮಾತ್ರ ವಹಿಸಬಾರದು. ಆದರೆ ಇಂದಾದರೋ ೨೫ ವರ್ಷ ವಯಸ್ಸಾಗುವವರೆಗೂ ಮಗನು ಕಲಿಯುತ್ತಲೇ ಇರುತ್ತಾನೆ. ಮತ್ತು ಅವನ ಖರ್ಚನ್ನೆಲ್ಲ ತಂದೆಯು ನಿರ್ವಹಿಸುತ್ತ ಹೋಗುತ್ತಾನೆ.

ಹೀಗೆ ೨೫ ವರ್ಷ ಶಿಕ್ಷಣದಲ್ಲಿ ಕಳೆದು ಮಗನು ಅನಂತರ ಗಳಿಕೆ ಮಾಡಲಿಕ್ಕೆ ಹತ್ತುತ್ತಾನೆ. ಮತ್ತು ೪೦-೪೫ ವರ್ಷ ಆಗುವಷ್ಟರಲ್ಲಿ ದಣಿದು ಹೋಗುತ್ತಾನೆ. ೨೫ ವರ್ಷ ವಯಸ್ಸಾಗುವವರೆಗೆ ಅವನ ಪಾಲನೆ ಪೋಷಣೆ ತಂದೆ ತಾಯಿ ಮಾಡುತ್ತಾರೆ. ಮುಂದೆ ಸಾಕಷ್ಟು ಗಳಿಕೆ ಮಾಡಲಿಕ್ಕೆ ೧೦ ವರ್ಷ ಹೋಗುತ್ತವೆ ಮುಂದೆ ೧೦ ವರ್ಷದಲ್ಲಿ ಆತ ದಣಿದು ಹೋಗಿರುತ್ತಾನೆ. ಹೀಗಿದೆ ಇಂದಿನ ಸ್ಥಿತಿ. ಆದ್ದರಿಂದಲೇ ನಾನು ಪಾಲಕರಿಗೆ ಹೇಳಬಯಸುತ್ತೇನೆ ಮಕ್ಕಳಿಗೆ ಇಂಥ ಶಿಕ್ಷಣ ಕಲಿಸಬೇಡಿರಿ. ಯಾವುದೊಂದು ಧಂದೆಯನ್ನು ಕಲಿಸಿರಿ. ಮತ್ತು ಪರಾವಲಂಬಿಯಾಗಿ ಜೀವಿಸುವುದು ನಾಚಿಕೆಗೇಡು. ನಿಮಗೆ ೨೧ನೇ ವಯಸ್ಸಿಗೆ ಮತಾಧಿಕಾರ ಸಿಗುತ್ತದೆ. ಆದ್ದರಿಂದ ಅಷ್ಟರೊಳಗಾದರೂ ಪಾಲಕರ ಜವಾಬುದಾರಿಯೊಳಗಿಂದ ಮುಕ್ತರಾಗಿರಿ. ಇಲ್ಲವಾದರೆ ತಂದೆಯವರ ವಿರುದ್ಧ ಮತಾಧಿಕಾರ ನಡೆಸಲಿಕ್ಕೆ ನಿಮಗೆ ಕಷ್ಟವಾದೀತು ಎಂಬುದಾಗಿ ಅವರಿಗೆ ಹೇಳಿರಿ. (ವಿನೋಬಾ)

ಯಾವ ಜನ್ಮದ ನಂಟು?

ಹವಿಲ್ದಾರ್ ಬಿಲ್ಲೂ ಸಿಖ್ ರೆಜಿಮೆಂಟಿನ ಎರಡನೆಯ ಬಟಾಲಿಯನ್ನಿನ ಯೋಧ. ಇತ್ತೀಚೆಗೆ ಅವನು ಸೇನೆಯಿಂದ ನಿವೃತ್ತನಾದ. ಆಗ ಅತ್ಯಂತ ಹೃದಯಸ್ಪರ್ಶಿಯಾದ ರೀತಿಯಲ್ಲಿ ಅವನನ್ನು ಬೀಳ್ಕೊಡಲಾಯಿತು. ಸಾಮಾನ್ಯವಾಗಿ ಅವನ ದರ್ಜೆಯ ಯೋಧರಿಗೆ ಏರ್ಪಡುವ ವಿದಾಯ ಸಮಾರಂಭಕ್ಕಿಂತ ಇದು ಭಿನ್ನವಾಗಿತ್ತಲ್ಲದೇ ಅಪೂರ್ವವಾಗಿದ್ದಿತೆಂದು ಪೂರ್ವವಲಯದಿಂದ ಬಂದಿರುವ ವರದಿ ತಿಳಿಸುತ್ತದೆ.

ವಿದಾಯ ಹೃದಯಸ್ಪರ್ಶಿಯಾಗಿತ್ತು. ಹವಿಲ್ದಾರ್ ಬಿಲ್ಲೂನ ಸನ್ಮಾನಾರ್ಥವಾಗಿ ಅನೇಕ ಸತ್ಕಾರ ಸಮಾರಂಭಗಳು ನಡೆದವು. ಬಟಾಲಿಯನ್ನಿನ ಎಲ್ಲಾ ಅಧಿಕಾರಿಗಳು ಈ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಮನದಣಿಯುವ ಹೂಮಾಲೆಗಳನ್ನು ಹಾಕಿ ಗೌರವಿಸಲಾಯಿತು. ಭಾರಿ ಮಹತ್ವದ ವ್ಯಕ್ತಿಗೆ ಸಂದಬೇಕಾದ ಗೌರವ ಸಲ್ಲಿಸಲಾಯಿತು.

ಹೀಗೆ ವಿ. ಐ. ಪಿ. ಗೌರವ ಸಲ್ಲಿಸಲು ಕಾರಣವಿದೆ. ಬಿಲ್ಲೂ ಕಳೆದ 30 ವರ್ಷಗಳಿಂದಲೂ ಬಟಾಲಿಯನ್ನಿನಲ್ಲಿ ಸೇವೆಸಲ್ಲಿಸಿದ್ದಾನೆ. ಅವನಿಗೆ ಮೊದಲು ಅವನ ತಂದೆ ಹೀರಾಲಾಲ್‌ರೂ ಬಟಾಲಿಯನ್ನಿನಲ್ಲಿ ಮೂವತ್ತು ವರ್ಷದಿಂದ ಸೇವೆಸಲ್ಲಿಸಿದ್ದರು.

ಹಾಗೆ ಹೇಳುವುದಾದರೆ ಬಿಲ್ಲೂ ಜನನವಾದದ್ದು ಸೇನೆಯಲ್ಲೇ. ಸೇನೆಯ ಆಶ್ರಯದಲ್ಲೇ ಬೆಳೆದ ಶಿಕ್ಷಣ ಪಡೆದ. ಕೊನೆಗೆ ದೇಶಸೇವೆ ಗೈಯ್ಯಲು ಸೇನೆಯನ್ನೇ ಸೇರಿದ. ಬಟಾಲಿಯನ್ನಿನ ಕಮ್ಯಾಂಡಿಂಗ್ ಆಫೀಸರ್ ಬಿಲ್ಲೂ ಮದುವೆಯನ್ನು ಏರ್ಪಡಿಸಿದರು. ಮದುವೆ ಸಮಾರಂಭದ ಕಾಲಕ್ಕೆ ಅವನ ತಂದೆಯ ಸ್ಥಾನದಲ್ಲಿ ನಿಂತು ವಿವಾಹ ಮಹೋತ್ಸವ ವಿಧಿಗಳನ್ನು ನೆರವೇರಿಸಿದರು. ಬಿಲ್ಲೂ ಬಟಾಲಿಯನ್ನಿನ ಎಲ್ಲಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದನಲ್ಲದೇ ಪರಾಕ್ರಮಕ್ಕಾಗಿ 13 ಪದಕಗಳನ್ನು ಗಳಿಸಿದ್ದಾನೆ.

ತನ್ನ ಗೌರವಾರ್ಥ ಏರ್ಪಟ್ಟಿದ್ದ ವಿದಾಯ ಸಮಾರಂಭದಲ್ಲಿ ಬಿಲ್ಲೂ ಗದ್ಗದಿತ ಕಂಠದಿಂದ ನುಡಿದ:—

"ನನಗೆ ಒಂದೇ ಒಂದು ದುಃಖವಿದೆ. ಅದೇನೇಂದರೆ, ನನ್ನ ವಂಶದ ಸೇನೆಯಲ್ಲಿ ಸೇವೆಯನ್ನು ಮುಂದುವರಿಸಲು ನನಗೊಬ್ಬ ಮಗನಿರಬೇಕಿತ್ತು. ಅದೇ ನನ್ನ ದುಃಖ"

ಬಿಲ್ಲೂನ ಅಪೇಕ್ಷೆ ಈಡೇರಲಾರದು. ಏಕೆಂದರೆ ಅವನಿಗೆ ನಾಲ್ವರು ಹೆಣ್ಣು ಮಕ್ಕಳಿದ್ದಾರೆ. ಗಂಡು ಮಕ್ಕಳಿಲ್ಲ.



ಶ್ರೀ ಎಸ್. ಪದ್ಮ ಶೆಟ್ರು ನಿಧನ

ಕೆಲವು ಸಮಯದಿಂದ ಅಸೌಖ್ಯದಿಂದಿದ್ದ ಶ್ರೀ ಎಸ್. ಪದ್ಮ ಶೆಟ್ರು ತಾ. 14-5-70 ನೇ ಬೆಳಗ್ಗೆ ಕೆಮ್ಮಣ್ಣಿನ ಸ್ವಗೃಹದಲ್ಲಿ 59ನೇ ವರ್ಷದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಸಾಹಸಿಗರೂ ಸಾಧುಸರಳ ಸ್ವಭಾವದವರೂ ಆಗಿದ್ದು ಜನಪ್ರಿಯತೆಗಳಿಸಿದ್ದರು. ಮುಂಬಯಿಯಲ್ಲಿ ಜಯಶೀಲ ಹೋಟೆಲ್ ಉದ್ಯಮಿಗಳಾಗಿದ್ದ ಇವರು ಕೆಮ್ಮಣ್ಣಿನಲ್ಲಿ ಗೃಹನಿರ್ಮಾಣ ಮಾಡಿ, ಅಲ್ಲಿ ವಾಸಿಸುತ್ತಿದ್ದು ಆಧುನಿಕ ರೀತಿಯಲ್ಲಿ ಕೃಷಿವ್ಯವಸಾಯದಲ್ಲಿ ನಿರತರಾಗಿದ್ದರು. ದಿವಂಗತರು ತಮ್ಮ ಹಿಂದೆ ಪತ್ನಿ, ಮೂರು ಗಂಡು, ಒಂದು ಹೆಣ್ಣು ಮಕ್ಕಳನ್ನು ಅಗಲಿ ಹೋಗಿದ್ದಾರೆ.

ಸಿಂಡಿಕೇಟ್ ಬ್ಯಾಂಕು

29—5—1970ರಂದು
ಮೈಸೂರು ರಾಜ್ಯದ ಈ ಕೆಳಗಿನ ಸ್ಥಳಗಳಲ್ಲಿ
7 ಹೊಸ ಶಾಖೆಗಳನ್ನು
ತೆರೆಯುತ್ತದೆ.

ಕುಂದಗೋಳ (ಧಾರವಾಡ ಜಿಲ್ಲೆ)

ಹಳದಿಪುರ	(ಉತ್ತರ ಕನ್ನಡ)	ಕಡವಾಡ	(ಉತ್ತರ ಕನ್ನಡ)
ಮಂಚಿಕೇರಿ	(,,)	ಬಂಕಿಕೊಡ್ಲ	(,,)
ಹೆಗ್ಗಡೆ	(,,)	ಹುಲೇಕಾರ್	(,,)

ಮೇಲಿನ 7 ಶಾಖೆಗಳ ತೆರೆಯೋಣದಿಂದ ಸಿಂಡಿಕೇಟ್ ಬ್ಯಾಂಕು ಉತ್ತರ ಕನ್ನಡ ಜಿಲ್ಲೆಯಲ್ಲಿ 22 ಶಾಖೆಗಳನ್ನೂ, ಧಾರವಾಡ ಜಿಲ್ಲೆಯಲ್ಲಿ 10 ಶಾಖೆಗಳನ್ನೂ ಮತ್ತು ಮೈಸೂರು ರಾಜ್ಯದಲ್ಲಿ ಒಟ್ಟು 211 ಶಾಖೆಗಳನ್ನೂ ಹೊಂದುತ್ತವೆ.

ಈ ದಿನವೇ ಸಿಂಡಿಕೇಟು ತಮಿಳುನಾಡಿನಲ್ಲಿ 1, ಕೇರಳದಲ್ಲಿ 1 ಮತ್ತು ಆಂಧ್ರ ಪ್ರದೇಶದಲ್ಲಿ 3 ಹೀಗೆ ಮತ್ತು 5 ಶಾಖೆಗಳನ್ನು ತೆರೆಯುತ್ತದೆ.

ನಮಗೆ ಯಾವ ಸ್ಥಳವೂ ಸೇವೆ ಸಲ್ಲಿಸಲು ಚಿಕ್ಕದಲ್ಲ.

ಸಿಂಡಿಕೇಟ್ ಬ್ಯಾಂಕ್
ಪ್ರಧಾನ ಕಾರ್ಯಾಲಯ :
ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು : 403

ಕೆ. ಕೆ. ಪೈ
ಕಸ್ಟೋಡಿಯನ್

ಧರ್ಮಸ್ಥಳದಲ್ಲಿ

ಬಾಹುಬಲಿ ವಿಹಾರಕ್ಕೆ ಶಿಲಾನ್ಯಾಸ

ರಾಷ್ಟ್ರಪತಿ ವಿ. ವಿ. ಗಿರಿ ಮತ್ತವರ ಪರಿವಾರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸಿತು.

ತಾ. 11ನೇ ಬೆಳಿಗ್ಗೆ ಶ್ರೀ ಗಿರಿಯವರನ್ನು ಮಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರೂ ಮತ್ತಿತರರೂ ಹೃತ್ಪೂರ್ವಕ ಸ್ವಾಗತಿಸಿದರು.

ರಾಷ್ಟ್ರಪತಿಯವರು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಂದರ್ಶನ ನೀಡಿದರು. ಕ್ಷೇತ್ರದಲ್ಲಿ ಸದ್ಯವೇ ಸ್ಥಾಪಿತವಾಗಲಿರುವ ಗೋಮಟೇಶ್ವರ ಮೂರ್ತಿಗಾಗಿ "ಬಾಹುಬಲಿ ವಿಹಾರ"ದ ಗುದ್ದಲಿ ಪೂಜೆಯನ್ನು ಅವರು ತಾ. 11ರಂದು ನೆರವೇರಿಸಿದರು. ಆರಂಭದಲ್ಲಿ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ರಾಷ್ಟ್ರಪತಿಗಳಿಗೆ ಹಾರ್ದಿಕ ಸ್ವಾಗತವಿತ್ತು ಬಾಹುಬಲಿ ಮೂರ್ತಿಯ ಸ್ಥಾಪನೆಯ ಹಿನ್ನೆಲೆಯನ್ನು ವಿವರಿಸಿದರು. ತನ್ನ ತೀರ್ಥರೂಪರಾದ ದಿ। ರತ್ನವರ್ಮ ಹೆಗ್ಗಡೆಯವರು ಹಲವಾರು ಬಾಹುಬಲಿ ಮಸ್ತಕಾಭಿಷೇಕಗಳ ವೇಳೆ ಜನತೆಯಿಂದ ಶ್ರದ್ಧಾಭಕ್ತಿಗಳಿಂದ ಉತ್ತೇಜಿತರಾಗಿ ಈ ನಿರ್ಧಾರಕ್ಕೆ ಬಂದರೆಂದು ಹೇಳಿದ ಅವರು ಅವರ ಆಶಯವನ್ನು ಪೂರ್ಣಗೊಳಿಸುವುದೇ ತನ್ನ ಗುರಿಯೆಂದರು.

ರಾಷ್ಟ್ರಪತಿ ಗಿರಿಯವರು ಮಾತನಾಡುತ್ತ ಧರ್ಮಸ್ಥಳದ ಹಿರಿಮೆ—ಮಹಿಮೆಗಳನ್ನು ಪ್ರಶಂಸಿಸಿ, ಐದು ವರ್ಷಗಳಿಗೆ ಮೊದಲು ಕರ್ನಾಟಕದ ರಾಜ್ಯಪಾಲರಾಗಿದ್ದಾಗ, ತನ್ನ ಧರ್ಮಸ್ಥಳ ಭೇಟಿಯನ್ನು ನೆನಪಿಸಿದರು. ತಾನು ದೇಶದ ಸೇವೆಗಾಗಿ ಮಿಡುಕಲೆಂದು ಹೇಳಿ, ತಾನಾಗಿ ಯಾವುದೇ ಪದವಿಯನ್ನು ಬಯಸಿ ಮುಂದುವರಿಯಲಿಲ್ಲವೆಂದೂ ಜನತೆಯೇ ತನಗೆ ಬೇರೆಬೇರೆ ಪದ ನೀಡಿ ಗೌರವಿಸಿದೆಯೆಂದೂ ಈ ಪದಗಳು ಜನಸೇವೆಗೆ ಹೊಸ ಅವಕಾಶಕೆಂಬುದೇ ತನ್ನ ನಂಬಿಕೆಯೆಂದೂ ಅವರಂದರು.

ತಾನು ಸೇವೆ ಸಲ್ಲಿಸಲು ತನ್ನ ಶ್ರೀಮತಿ ತುಂಬ ತ್ಯಾಗ ಮಾಡಿದ್ದಾಳೆಯೆಂದ ಅವರು ಮಹಾತ್ಮಾ ಗಾಂಧಿಯವರಂತಹ ಮುತ್ಸದ್ದಿಗಳನ್ನೂ ಸತ್ಪುತ್ರರನ್ನೂ ರೂಪಿಸುವಲ್ಲಿ ಮಹಿಳೆಯರು ನಿಜವಾಗಿ ಆಸಕ್ತರಾಗಬೇಕೆಂದರು. ಇದಕ್ಕೆ ತಪ್ಪಿದರೆ, ದೇಶಕ್ಕೆ ವಿನಾಶ ಅನಿವಾರ್ಯವೆಂದು ಎಚ್ಚರಿಕೆಯನ್ನೂ ನೀಡಿದರು.

ಶ್ರೀ ಕ್ಷೇತ್ರದ ಪರವಾಗಿ ಶ್ರೀ ಭಾಸ್ಕರಂ ಶೇಷಾಚಾರ್ಯರು ಅರ್ಪಿಸಿದ ಮಾನಪತ್ರವನ್ನು ಶ್ರೀ ಗಿರಿಯವರು ಸ್ವೀಕರಿಸಿ, ಕೇಂದ್ರ ಪ್ರವಾಸೋದ್ಯಮ ಮಂತ್ರಿಗಳನ್ನು ಇಲ್ಲಿಗೆ ಕಳಿಸಿ ಇದನ್ನು ಪ್ರವಾಸ ಕೇಂದ್ರವನ್ನಾಗಿ ಪರಿವರ್ತಿಸುವ ಭರವಸೆ ನೀಡಿದರು.

ಶ್ರೀಮತಿ ಸರಸ್ವತಿ ಗಿರಿಯವರು ತಾನೇ ರಚಿಸಿದ, ಶ್ರೀಮತಿ ಕಮಲ ಹಂಪನಾರಿಂದ ಅನುವಾದಿತವಾದ 'ಬೀಜಾಕ್ಷರಮಾಲೆ'ಯೆಂಬ ಗ್ರಂಥವನ್ನು ಉದ್ಘಾಟಿಸಿದರು. ವೆಲ್ಲೂರಿನ ಆಸ್ಪತ್ರೆಯಲ್ಲೇ ತನಗೆ ಶ್ರೀ ಮಂಜುನಾಥನು ಚಿಕ್ಕ ಬಾಲಕನಾಗಿ ಕಾಣಿಸಿ ಧರ್ಮಸ್ಥಳಕ್ಕೆ ಕರೆದಂತಾಯಿತೆಂದೂ ಅದರಿಂದಲೇ ಬದ್ಧಾಗಿದ್ದ, ಕಾರ್ಯಕ್ರಮವನ್ನು ಕೈಕೊಳ್ಳಲಾಯಿತೆಂದೂ ಹೇಳಿದರು.

ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ವಂದನಾರ್ಪಣೆಗೈದರು.

ಮದ್ಯದ ಮಹಿಮೆ

ಸಿಂಹದ ಮುಂದೆ ಹೋಗಲಿಕ್ಕೆ ಹೆದರಬೇಡಿರಿ. ಅಲ್ಲಿ ನಿಮ್ಮ ಪರಾಕ್ರಮದ ಪರೀಕ್ಷೆ ಆಗಲಿದೆ.

ಕತ್ತಿಯ ಮುಂದೆ ಕುತ್ತಿಗೆ ಒಡ್ಡಲಿಕ್ಕೆ ಹಿಂಜರಿಯಬೇಡಿರಿ. ಅಲ್ಲಿ ನಿಮ್ಮ ಬಲಿದಾನದ ಪರೀಕ್ಷೆ ಆಗಲಿದೆ.

ಪರ್ವತ ಶಿಖರದಿಂದ ಪಾತಾಳಕ್ಕೆ ಜಿಗಿಯಲಿಕ್ಕೂ ಅಂಜಬೇಡಿರಿ. ಅದರಲ್ಲಿಯೇ ನಿಮ್ಮ ತಪಸ್ಸಿನ ಸಾಧನೆ ಇದೆ.

ಪ್ರಜ್ವಲಿಸುವ ಜ್ವಾಲೆಗೂ ಹಿಂದೆಗೆಯಬೇಡಿರಿ. ಅಲ್ಲಿ ನಿಮ್ಮ ಸ್ವರ್ಣ ಪರೀಕ್ಷೆ ಆಗಲಿದೆ.

ಆದರೆ ಮದ್ಯಪಾನಕ್ಕೆ ಮಾತ್ರ ಸದಾಕಾಲದಲ್ಲೂ ಅಂಜಿ ಕೊಂಡು ನಡೆಯಿರಿ. ಅದು ಪಾಪ ಹಾಗೂ ಅನಾಚಾರಗಳ ತಾಯಿಬೇರಾಗಿದೆ.

ಇಷ್ಟೊಂದು ಆತುರವೇಕೆ ?

(ವಿ ನೊ ೧ ಬಾ)

ನೀವು ಗ್ರಾಮದಾನಕ್ಕಾಗಿ ಇಷ್ಟೊಂದು ಆತುರ ಯಾಕೆ ಪಡುತ್ತೀರಿ? ಎಂದು ಜನ ಕೇಳುತ್ತಾರೆ! ಮೊದಲನೆಯದಾಗಿ ಭಾರತದ ಸ್ವಾತಂತ್ರ್ಯವು ಗಂಡಾಂತರದಲ್ಲಿದೆ ಎಂದು ನನಗೆ ಅನಿಸುತ್ತದೆ! ಇಂದು ದೇಶದಲ್ಲಿ ಎಲ್ಲಿ ನೋಡಿದಲ್ಲಿ ಒಡಕೇ ಕಾಣುತ್ತದೆ! ಪ್ರಾಂತ, ಜಾತಿ, ಭಾಷೆ, ಪಕ್ಷ ಹೆಸರಿನಲ್ಲಿ ಒಡಕೇ ಬೆಳೆಯುತ್ತಲಿದೆ. ಒಡೆಯ ಮತ್ತು ಕೂಲಿಕಾರರ ನಡುವೆಯೂ ಒಡಕಿದೆ. ಜನರು ಅಸಂತುಷ್ಟರಿದ್ದಾರೆ. ಆದ್ದರಿಂದಲೇ ಘಕ್ಸಲವಾದಿಗಳ ಪ್ರಯೋಗ ನಡೆಯುತ್ತದೆ. ಘೇರಾವ, ಬಂದ್, ಹರತಾಳ ನಡೆಯುತ್ತವೆ. ಇಂಥ ಪರಿಸ್ಥಿತಿಯಲ್ಲಿ ಹೊರಗಿನ ಆಕ್ರಮಣದ ಭಯ ಇದ್ದೇ ಇದೆ. ಮತ್ತು ಸ್ವಾತಂತ್ರ್ಯಕ್ಕೆ ಗಂಡಾಂತರವಿದೆ. ಸ್ವಾತಂತ್ರ್ಯ ಹೋದರೆ ಧರ್ಮಬಂಧವೂ ಹೋದೀತ, ಭೂತಬಂಧವೂ ಹೋದೀತು.

ಎರಡನೆಯದಾಗಿ ನನ್ನ ವ್ಯಕ್ತಿಗತ ಕಾರಣವೂ ಇದೆ! ನನ್ನ ವಯಸ್ಸು ೭೪ ಇಂದೇ ರಾತ್ರಿ ನಾನು ಸಾಯಲೂ ಬಹುದು. ಹಾಗೆ ಸಾಯಲಿಕ್ಕೆ ನನಗೆ ಹಕ್ಕು ಇದೆ. ಯಾಕೆಂದರೆ ನಾನೊಬ್ಬ ಮುದುಕ. ನಾನು ಸತ್ತರೆ ಜನರು ದುಃಖಪಟ್ಟಾರು. ವೃತ್ತಪತ್ರಿಕೆಗಳಲ್ಲಿ ಲೇಖ ಬರೆದಾರು-ವಿನೋಬಾ ತೀರಿಕೊಂಡರು. ದೇಶಕ್ಕೆ ಬಹಳ ಹಾನಿ ಆಯಿತು ಎಂದು. ಆದರೆ ವಿನೋಬಾರಿಗೆ ಅಪಮೃತ್ಯು ಬಂತು ಎಂದು ಯಾರೂ ಬರೆಯಲಿಕ್ಕಿಲ್ಲ. ಯಾಕಂದರೆ ೭೦ ವರ್ಷ ಮುಕ್ಕಿದವರಿಗೆ ಭಾರತೀಯರು ಪಾಸಪೋರ್ಟ ಕೊಟ್ಟೇಕೊಡುತ್ತಾರೆ. ನನಗೆ ಫ್ರಾನ್ಸ, ಜರ್ಮನಿ, ಅಮೇರಿಕೆಗೆ ಹೋಗುವ ಪಾಸಪೋರ್ಟ ಅಲ್ಲ! ಪರಲೋಕಕ್ಕೆ ಹೋಗುವ ಪಾಸಪೋರ್ಟ ಸಿಕ್ಕೇ ಇದೆ! ಅದನ್ನೂ ನಾನೇಕೆ ಪಡೆದಿದ್ದೇನೆ ಗೊತ್ತೇ? ಅಲ್ಲಿಂದ ವೀಸಾ ಬಂದಿಲ್ಲ. ವೀಸಾ ಮತ್ತು ಪಾಸ್‌ಪೋರ್ಟಗಾಗಿಯೆ ವಿಳಂಬವಾಗುತ್ತಲಿದೆ. ಪರಮೇಶ್ವರನು ನನಗೆ ಕೆಲಸ ಮಾಡೋಣ ಅನ್ನುತ್ತೇನೆ! ಆದರೆ ನನಗೆ ಹೆಚ್ಚು ವರ್ಷ ಅವಕಾಶವಿಲ್ಲ! ಆದ್ದರಿಂದ ವಸರ (ಆತುರ) ಮಾಡ ಬೇಕಾಗಿದೆ!

ಇಚ್ಛಾನುಸಾರ ಶಾಲೆ

ಕೊಲೋನ್: ಶಾಲೆಗಳಿಗೆ ಸಾಮಾನ್ಯವಾಗಿ ಮಕ್ಕಳನ್ನು ಕಳುಹಿಸುವುದು ಶಿಸ್ತನ್ನು ಕಲಿಯಲು. ಆದರೆ ಇದರ ಪ್ರತಿ ವಿರುದ್ಧ ನೀವು ಎಲ್ಲಿಯಾದರು ಕಂಡಿದ್ದೀರಾ? ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿಯ ಪಶ್ಚಿಮ ಭಾಗದ ಕೊಲೋನ್‌ನಲ್ಲಿ ಕೆಲವೊಂದು ಸ್ವೇಚ್ಛಾನುಸಾರಿ ಶಾಲೆಗಳನ್ನು ತೆರೆದಿರುವರು. ಶಾಲೆಗಳಲ್ಲಿ ಮಕ್ಕಳಿಗೆ ಕೊಡುತ್ತಿರುವ ಬಂಧನವನ್ನು ಸಂಪೂರ್ಣವಾಗಿ ತೊರೆಯುವುದೇ ಈ ಶಾಲೆಗಳ ವಿಶೇಷ ಲಕ್ಷಣ. ಬರ್ಲಿನ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ಇಂತಹ ೬೦ ಶಾಲೆಗಳನ್ನು ಭವಿಷ್ಯದಲ್ಲಿ ತೆರೆಯಲಿದ್ದಾರೆ. ಈ ಶಾಲೆಗಳ ಉದ್ಭವ ಪ್ರಗತಿಪರ ಮಾತಾಪಿತೃರ ಉತ್ತೇಜನದಿಂದಲೇ ಪ್ರಾರಂಭವಾಗಿದೆ. ಈ ನಗರ ಶಾಲೆಗಳಲ್ಲಿ ಮಕ್ಕಳನ್ನು ಯಾವ ರೀತಿಯ ನೀತಿ ನಿಯಮಗಳಿಗೆ ಬಂಧಿಸಿಲ್ಲ. ಬದಲು ಇಲ್ಲಿ ಮಕ್ಕಳಿಗೆ ಇಚ್ಛಾನುಸಾರವಾಗಿ ವರ್ತಿಸಲು ಬಿಟ್ಟು ಕೊಟ್ಟಿರುವರು. ಇಲ್ಲಿ ಮಕ್ಕಳು ಮಣ್ಣಿನಲ್ಲಿ ಆಡಿ ಸಂತೋಷಗೊಳ್ಳಬಹುದು. ಮಕ್ಕಳು ಶಾಲೆಯ ಗೋಡೆಗಳ ಮೇಲೆ ಬಣ್ಣದಿಂದಲೋ ಮಸಿಯಿಂದಲೋ ಗೀಚಿದರೆ ಅವರನ್ನು ಗದರಿಸುವವರು ಯಾರೂ ಇಲ್ಲ. ಬದಲು ಉತ್ತೇಜಿಸುವವರೇ ಹೆಚ್ಚು. ಈ ಶಾಲೆಗಳಲ್ಲಿ ಮಕ್ಕಳು ಅವಾಚ್ಯ ಶಬ್ದಗಳಿಂದ ಒಬ್ಬರನ್ನೊಬ್ಬರು ಬೈಯ್ಯಬಹುದು. ಸಾರಾಂಶವಾಗಿ ಹೇಳುವುದಾದರೆ ಈ ಶಾಲೆಗಳಲ್ಲಿ ಇದು ಮಾಡು ಅಥವಾ ಹಾಗೆ ಮಾಡಬೇಡ ಈ ವಾಕ್ಯಗಳನ್ನೆಲ್ಲಾ ನಿಷೇಧಿಸಲಾಗಿದೆ. ಸರ್ಕಾರಿ ಶಾಲೆಗಳ ಇವು. ಈ ಶಾಲೆಯ ಚಿಕ್ಕದೊಂದು ದೃಶ್ಯವನ್ನು ಜರ್ಮನಿಯಲ್ಲಿ ಟೆಲಿವಿಜನ್ ಪ್ರಸಾರ ಮಾಡಲಾಯಿತು. ಈ ದೃಶ್ಯವನ್ನು ಕಂಡು ಎಷ್ಟೋ ಜನರು ದಂಗು ಬಡಿದು ಹೋದರು. ಕೆಲವರು ಈ ಪ್ರಯೋಗದ ಪರವಾಗಿ ವಾದಿಸಿದರು. ಅಧಿಕ ಜನರು ಇದನ್ನು ವಿರೋಧಿಸಿರುವರು. ಎಲ್ಲರೂ ಈ ಪ್ರಯೋಗದ ಪರಿಣಾಮವನ್ನು ಕಾಯುತ್ತಿದ್ದಾರೆ. ಬಂಧನೆಯ ಬದಲು ಸ್ವೇಚ್ಛೆಯಿಂದ ಮಕ್ಕಳ ಜ್ಞಾನವನ್ನು ಹೆಚ್ಚಿಸಬಹುದೆಂಬುದೇ ಇವರ ತತ್ವ. ಎಲ್ಲೆಡೆಗಳಲ್ಲೂ ಇಂತಹ ಶಾಲೆಗಳನ್ನು ತೆರೆದಲ್ಲಿ ಮಾತಾಪಿತೃಗಳೇ ಮಕ್ಕಳನ್ನು ಹೊಂದಿಕೊಂಡು ಹೋಗ ಬೇಕಾಗುತ್ತದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ

"ಜೀವನ–ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

NAVAYUGA 21—5—1970
Registered with the Registrar
of News Papers for India
under No. R. N. 3546/'57

REGD. No: B. Gr 176
LICENCE No. 33;
Licensed to Post without Prepayment

ಕಟ್ಟಲಾರೆವೆ ಒಕ್ಕಟ್ಟಿನ ಮನೆಯನ್ನು?

(ಒಂದನೇ ಪುಟದಿಂದ)

ನ್ಯಾಯ ಮಾಡಬಾರದೇ?” ತಂಗಾಳಿ ಬೀಸಿತು. ಅವನು ದಿಗ್ಗನೆದ್ದು ಕುಳಿತನು. ಅದೇ ಚಂದ್ರ ದೂರದ ದಿಗಂತದಲ್ಲಿ ನಗಾಡುತ್ತಿದ್ದಾನೆ—ತನ್ನ ತಪ್ಪಿಗೆ, ತಾನು ಅನ್ಯಾಯ ಮಾಡುತ್ತಿದ್ದೇನೆ—ಅವನ ಒಳ ಮನಸ್ಸು ನುಡಿಯಿತು. ಹಾಗಾದರೇನು ಮಾಡಲಿ? ಅವನಿಗೆ ಸಲ್ಲಬೇಕಾಗಿರುವದನ್ನು ಕೊಟ್ಟು ಬಿಡು. ಅನ್ಯಾಯದ ಫಲ ಧಕ್ಕುವದಿಲ್ಲ. ಅವನೆದ್ದು ತನ್ನ ಹಣ್ಣುಗಳ ರಾಶಿಯತ್ತ ಹೋದನು. ಚಂದ್ರನ ಹಾಲ್ಬೆಳಕಿನಲ್ಲಿ ಹಣ್ಣುಗಳೂ ಅವನನ್ನು ಕಂಡೊಡನೆ ಹಾಸ್ಯಮಾಡಿದಂತೆ ಅವನಿಗೆ ಭಾಸವಾಯಿತು. ತನ್ನ ರಾಶಿಯಿಂದ ಮೂರು ಬುಟ್ಟಿ ಹಣ್ಣುಗಳನ್ನು ಅಣ್ಣನ ರಾಶಿಯಲ್ಲಿ ಹಾಕಿದಾಗ ಅವನ ಮನಸ್ಸಿಗೆ ಬಹಳ ನೆಮ್ಮದಿ ಆಯಿತು. ತನ್ನ ಕರ್ತವ್ಯ ತಾನು ಮಾಡಿದ ತೃಪ್ತಿ. ಹಾಗೆ ಬಂದು ಮಲಗಿದ, ನಿದ್ರಾದೇವಿ ಅವನ ಕಣ್ಣುಗಳನ್ನು ಮುಚ್ಚಿಬಿಟ್ಟಳು.

ಇತ್ತ ಆ ಕಡೆ ಅಣ್ಣನ ಕಣ್ಣುಗಳನ್ನು ತೆರೆದು ಬಿಟ್ಟಳು. ದಿಢೀರನೆ ಎಚ್ಚತ್ತ ಅಣ್ಣ ಆಕಾಶತ್ತ ನೋಡಿದ, ಬಹಳ ಎತ್ತರ ಬಾನಲ್ಲಿ ಹೊಳೆಯುತ್ತಿರುವ ಚಂದ್ರನು ತನ್ನ ಮಡದಿ ಮಕ್ಕಳತ್ತ ಬೆಳ್ಳಿಯ ಕಿರಣಗಳನ್ನು ಹಾಯಿಸಿದಂತೆ ಅವನಿಗೆ ಭಾಸವಾಯಿತು. ತನ್ನ ಹೆಂಡತಿ ಮಕ್ಕಳು ತನ್ನನ್ನು ಕಂಡು ಹಾಸ್ಯಮಾಡುವಂತೆ ಅವನಿಗೆ ಕಂಡಿತು: ‘ನೋಡು ನಾವಿಷ್ಟು ಮಂದಿ ಇದ್ದೇವೆ, ನಿನ್ನಷ್ಟೇ ಇಂದಿನ ಸುಖಕ್ಕಾಗಿ ಜೊತೆ ಇದ್ದಾಳೆ. ಮುಪ್ಪಿನಲ್ಲಿ ನೋಡಿಕೊಳ್ಳಲು ಮಕ್ಕಳಿದ್ದಾರೆ, ಆದರೆ ಅಲ್ಲಿ ಅನಾಥನಂತೆ ಬಿದ್ದುಕೊಂಡಿರುವ ನಿನ್ನ ತಮ್ಮನಿಗೆ ಯಾರಿದ್ದಾರೆ? ನಾಳೆ ಅದೇನಾದರೂ ಅಕಸ್ಮಾತ್ ಅಸಂಭವ ಘಟಿಸಿದಲ್ಲಿ ಅವನನ್ನು ನೋಡಿಕೊಳ್ಳುವವರ್ಯಾರು? ಅದಕ್ಕಾಗಿ ದುಡ್ಡಿರುವವನನ್ನು ದೊಡ್ಡಪ್ಪನೆಂದು ಕರೆಯುವ ಈ ಕಾಲದಲ್ಲಿ? ಅದರಿಂದ ಅರ್ಧ ಪಾಲು ನೀನು ತೆಗೆದುಕೊಳ್ಳುವದರಲ್ಲಿ ನ್ಯಾಯವೇನಿದೆ?” ಹಾಗೆಂದ. ಒಪ್ಪಿಕೊಂಡ ಅಣ್ಣನು ತಟ್ಟನೆದ್ದು ತನ್ನ ಹಣ್ಣಿನ ರಾಶಿಯತ್ತ ಬೇಗಬೇಗನೆ ಹೋದನು. ಹಣ್ಣುಗಳು ಹಾಗೆಯೇ ಮಲಗಿದ್ದುವು. ಅದರಿಂದ ಮೂರು ಬುಟ್ಟಿ ಹಣ್ಣುಗಳನ್ನು ತೆಗೆದು ತಮ್ಮನ ಹಣ್ಣಿನ ರಾಶಿಯಲ್ಲಿ ಹಾಕಿದಾಗ ಅವನಿಗೊಂದು ರೀತಿಯ [illegible] ಆನಂದವಾಯಿತು.

ಹೀಗೆಯೇ ಕೆಲ ದಿನಗಳು ಕಳೆದುವು. ಪ್ರತೀ ರಾತ್ರಿ ಹಣ್ಣುಗಳ ಅದಲು-ಬದಲು ಆಗುತ್ತಿದ್ದರೂ ಅದರ ಕಾರಣವೇನೆಂದು ಅವರಿಗೆ ಗೊತ್ತಾಗಲಿಲ್ಲ. ಎಲ್ಲದಕ್ಕೂ ನಿರಾಮಯಿಯಾಗಲು ದೇವರೊಬ್ಬರಿದ್ದಾರಲ್ಲವೇ? ಹಿಡಿ ತುಂಬ ಕೊಟ್ಟರೂ ದೇವರು ಕಮ್ಮಿ ಮಾಡುವದಿಲ್ಲ. ಅದೇ ತೃಪ್ತಿಗೆ ಕಾರಣ.

ಆ ಊರಿನಲ್ಲಿ ರಥೋತ್ಸವ. “ಅಣ್ಣ-ತಮ್ಮ” ಎಲ್ಲರೂ ಉತ್ಸವಕ್ಕೆ ಹೋಗಿ ಬಂದರು, ಅಣ್ಣನ ಮಡದಿ-ಮಕ್ಕಳಿಗೆ ಚೆನ್ನಾಗಿ ನಿದ್ದೆ ಬಂದಿತು. ಅಣ್ಣನೆದ್ದು ಹಣ್ಣು ಹಾಕಿ ಬರಲೆದ್ದನು; ಅದೇ ಸಮಯದಲ್ಲಿ ತಮ್ಮನೂ ಎದ್ದು ಅದೇ ಕೆಲಸಕ್ಕೆ ಬಂದನು. ನಡುವೆ ಅವರಿಬ್ಬರೂ ಸಂಧಿಸಿದರು. ಅವರಿಗಾದ ಆಶ್ಚರ್ಯಕ್ಕೆ ಅಳವಿಲ್ಲದಾಯಿತು, ಹಣ್ಣಿನ ಬುಟ್ಟಿಗಳನ್ನು ಅಲ್ಲೇ ಹಾಕಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಆನಂದದಿಂದ ಅವರಿಬ್ಬರ ಕಣ್ಣುಗಳಲ್ಲೂ ಹನಿಗೂಡಿದುವು.

ಅಂದಿನಿಂದ ಅವರು ಹಂಚಿಕೊಳ್ಳುವದನ್ನು ಬಿಟ್ಟುಬಿಟ್ಟರು. ಒಂದೇ ಮನೆಯಲ್ಲಿ ಒಟ್ಟಿಗಿರಲಾರಂಭಿಸಿದರು. ಅವರ ದುಡಿತಕ್ಕೆ ಭೂಮಿತಾಯಿಯೂ ಚೆನ್ನಾಗಿ ಫಲವನ್ನೀಯುತ್ತಿದ್ದಳು.

ಇದು “ಸಂಡೇ ಸ್ಟೆಂಡಾರ್ಡ್”ನಲ್ಲಿ ಮಕ್ಕಳಿಗಾಗಿ ಪ್ರಕಟವಾಗಿರುವ ಕಥೆ.

ಮಕ್ಕಳಿಗಿಂತಲೂ ಇದು ಇಂದಿನ ರಾಜಕೀಯ ಉದ್ಯಮಿಗಳಿಗೆ ಬೇಕಾಗಿರುವ ಕಥೆ. ಅವರ ಮನಸ್ಸಿನ ಮೇಲೆ ಇದು ಪರಿಣಾಮವನ್ನುಂಟು ಮಾಡೀತೇ? ಹಾಗಾದಲ್ಲಿ ಸಾರ್ಥಕ. ಅವರು ಪಕ್ಷ ಭೇದಗಳನ್ನು ತೊರೆದು ನಾವೆಲ್ಲರೂ ಭಾರತಮಾತೆಯ ಮಕ್ಕಳೆಂಬ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡಲ್ಲಿ ನಮ್ಮ ಪ್ರೀತಿಯ ಭಾರತಮಾತೆಯು ಪುನರ್ ವಿಶ್ವಗುರುವಾಗುವುದರಲ್ಲಿ ಸಂದೇಹವೇನು? ನಾವೂ ಸೋಮಾರಿಗಳಾಗದೆ, ಹೊಟ್ಟೆಕಿಚ್ಚು-ಹಗೆ-ಸ್ವಾರ್ಥಾದಿಗಳನ್ನು ತೊರೆದು ಪ್ರೀತಿಯ ಅಮೃತವನ್ನು ಕುಡಿದು ಜನತಾಜನಾರ್ದನನ ಸೇವೆಗೈದಲ್ಲಿ ನಮಗೂ ಮೋಕ್ಷ ಕಾದಿಟ್ಟದ್ದೇ. ಅನ್ಯರನ್ನು ಮೋಕ್ಷಕೊಯ್ಯಲು ಆಗ ಮಾತ್ರ ಸಾಧ್ಯವಾದೀತು.

ಇದು ಪಂಚಾಂಗವಿನೆ. ಪಂಚಾಂಗವನ್ನು ಹಾಕದೆ, ಅನ್ಯಾನ್ಯ ರಾಜಕೀಯ ಪಕ್ಷಗಳೆಂಬ ಗೋಡೆಗಳನ್ನು, ಜಾತಿ-ಮತಗಳೆಂಬ ಹಾಸನ್ನು ಹಾಸಿ ಒಕ್ಕಟ್ಟಿನ ಮನೆಯನ್ನು ಕಟ್ಟಲು ಸಾಧ್ಯವೇ?

—ಶಿವಶಂಕರ

ಕೂದಲು ಉದುರುವಿಕೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಚಿಕಿತ್ಸೆ

ಕೂದಲು ಉದುರುವಿಕೆಗೆ ಕಾರಣಗಳನ್ನು ಪರಿಹರಿಸಿ ಕೊಳ್ಳುವುದೇ ಅದಕ್ಕೆ ವಿಧಿಸುವ ಮೊದಲ ಹೆಜ್ಜೆಯಾಗಿದೆಯೆನ್ನಬಹುದು. ಅವುಗಳಲ್ಲಿ ಆನುವಂಶಿಕತೆ ಎಂಬ ಕಾರಣವನ್ನು ಸರಿಪಡಿಸುವುದು ನಮ್ಮ ವಶದಲ್ಲಿ ಇಲ್ಲದಿರಬಹುದು. ಆದರೂ ಕೂದಲಿನ ಅನಾರೋಗ್ಯದ ಕಾರಣಗಳನ್ನು ವರ್ಜಿಸುವುದೂ ಕೂದಲಿನ ಆರೋಗ್ಯಕ್ಕೆ ಪೋಷಕವಾದ ಸಾಧನಗಳನ್ನು ಕೈಕೊಳ್ಳುವುದೂ ನಮ್ಮ ವಶದಲ್ಲಿಯೇ ಇವೆಯಲ್ಲವೇ!

ಚಿಂತೆ:— ಯಾವುದೊಂದು ಎಡೆ ಕೊರಗಿಸುವ ಚಿಂತೆಗೆ ಇರುವ ಕಾರಣಗಳನ್ನು ಇಲ್ಲವಾಗಿಸುವುದು ನಮ್ಮ ಕೈಯಲ್ಲಿಲ್ಲದಿದ್ದರೂ ಮನಸ್ಸನ್ನು ಬಲಗೊಳಿಸಿ ಆ ಕಾರಣಗಳನ್ನು ಲೀಲೆಯಿಂದ ಎದುರಿಸುವ ಸಾಧನ ಮಾಡಬಹುದು.

ಚಟಗಳು:— ಚಹಾ, ಕಾಫಿ, ಬೀಡಿ ಮದ್ಯಾದಿಗಳ ವರ್ಜನದಿಂದ ರಕ್ತವನ್ನು ಶುದ್ಧೀಕರಿಸಿದರೆ ಕೂದಲು ಪುಷ್ಟವಾಗಬಹುದು.

ವ್ಯಾಯಾಮ:— ಕೂದಲುಗಳ ಬೇರುಗಳು ನಿರೋಗಿಯೂ ಬಲಿಷ್ಠವೂ ಆಗಬೇಕಾದರೆ ಸಮಗ್ರ ಶರೀರದ ವ್ಯಾಯಾಮದಿಂದ ರಕ್ತಸಂಚಲನವು ತೃಪ್ತಿಕರವಾಗುವಂತೆ ಮಾಡುವುದು ಅತ್ಯವಶ್ಯ.

ರೋಗಗಳು:— ಬಹುಕಾಲದಿಂದ ಶರೀರದಲ್ಲಿ ಅಡಗಿ ಧಾತುಗಳ ನಾಶ ಮಾಡುವ ರೋಗಗಳಿದ್ದರೆ ಅವನ್ನು ಕಳೆದುಕೊಳ್ಳದೆ ಕೂದಲಿನ ಉದುರುವಿಕೆಯನ್ನು ನಿಲ್ಲಿಸುವುದು ಅಶಕ್ಯ. ಮುಟ್ಟಿನ ಆರೋಗ್ಯ, ಗರ್ಭಾಶಯದ ಆರೋಗ್ಯಗಳಿಗೂ ಕೂದಲುಗಳ ಆರೋಗ್ಯಕ್ಕೂ ನಿಕಟ ಸಂಬಂಧವಿದೆ. ಆದ್ದರಿಂದ ಬರಿ ಕೇಶತೈಲಗಳಿಗೆ ದುಡ್ಡು ಸುರಿಯುವುದರ ಜೊತೆಗೆ ಮುಟ್ಟು, ಗರ್ಭಾಶಯ ರೋಗ ಪರಿಹಾರವನ್ನು ಲಕ್ಷಿಸಬೇಕು.

ಮಲಬದ್ಧತೆ, ಅಜೀರ್ಣ:— ಈ ಶಾರೀರಿಕ ಕುಂದುಗಳಿಗೂ ಕೂದಲು ಉದುರುವುದಕ್ಕೂ ಇರುವ ಸಂಬಂಧವನ್ನು ಹೆಂಗಸರು ಬೇಗ ಅರಿತಷ್ಟು ಒಳಿತು.

ದುರಾಹಾರ:— ಉಪ್ಪು, ಖಾರ, ಮಸಾಲೆ, ಕರಿದ ತಿಂಡಿಗಳ ಅತಿ ಸೇವನೆಯನ್ನು ವರ್ಜಿಸಿ ಸಾಧ್ಯವಾದಷ್ಟು ಸಪ್ಪನೆ ಆಹಾರವನ್ನೇ ಸೇವಿಸಬೇಕು.

ದುಷ್ಟ ಔಷಧಗಳು:— ಕಾಯಿಲೆ ದೊಡ್ಡದಿರಲಿ ಚಿಕ್ಕದಿರಲಿ ಅದರ ಮೂಲ ಕಾರಣಗಳನ್ನು ಮರೆತು ಹೊರ ಲಕ್ಷಣಗಳನ್ನಷ್ಟೇ ಮರೆಗೊಳಿಸುವ ವಿಷತುಲ್ಯ ಔಷಧಗಳನ್ನು ವರ್ಷಗಟ್ಟಲೆ ನುಂಗುತ್ತಿರುವ ದುರಭ್ಯಾಸವನ್ನು ಕೂಡಲೇ ವರ್ಜಿಸಿ ‘ಆಯುರ್ವೇದೀಯ ಪ್ರಕೃತಿ ಚಿಕಿತ್ಸೆ’ಯನ್ನನುಸರಿಸಬೇಕು

ಈಗ ಸಂಕ್ಷಿಪ್ತವಾಗಿ ಕೂದಲುಗಳಿಗೇ ಮಾಡಬಹುದಾದ ಕೆಲವು ಚಿಕಿತ್ಸೆಗಳನ್ನು ಇಲ್ಲಿ ಕೊಡಲಾಗಿದೆ. (೧) ದಿನಾಲು ಬೆಳಗ್ಗೆ ಮಲಮೂತ್ರ ವಿಸರ್ಜನಾನಂತರ ೧ರಿಂದ೫ ಮಿನಿಟುಗಳವರೆಗೆ ‘ಶೀರ್ಷಾಸನ’ವನ್ನು ಬಲ್ಲವರಿಂದ ಕಲಿತು ಹಾಕಬೇಕು. (೨) ಬಿಸಿ ನೀರಲ್ಲಿ ಅದ್ದಿದ ಬಟ್ಟೆಯನ್ನು ಸ್ವಲ್ಪ ಹಿಂಡಿ ತಲೆಯ ಮೇಲೆ ಹರಡಬೇಕು; ಅರ್ಧ ಮಿನಿಟಿನ ಬಳಿಕ ಅದನ್ನು ತೆಗೆದು ಕಾಲು ಮಿನಿಟಿನವರೆಗೆ ತಂಪೀರಲ್ಲಿ ಅದ್ದಿದ ಬಟ್ಟೆಯನ್ನು ಹರಡಬೇಕು. ಅನಂತರ ಪುನಃ ತಂಪೀರ ಬಟ್ಟೆ ಹೀಗೆ ಪರ್ಯಾಯವಾಗಿ ನಾಲ್ಕೈದು ಸಲ ಮಾಡಿ ಒರೆಸಿಕೊಂಡು ಒಂದೆರಡು ಮಿನಿಟು ತಲೆಯನ್ನು ಎಳೆಬಿಸಿಲಿಗೆ ಒಡ್ಡಬೇಕು. (೩) ಕೂದಲುಗಳ ಬೇರುಗಳಿಗೆ ಚೈತನ್ಯ ಬರುವಂತೆ ಬೆರಳುಗಳ ತುದಿಯಿಂದ ತಲೆಯನ್ನೆಲ್ಲ ಒಂದೆರಡು ಮಿನಿಟುಗಳವರೆಗೆ ದುಂಡಾಗಿ ತಿಕ್ಕಬೇಕು. ಅದಕ್ಕೆ ಸಹಾಯಕವಾಗಿ ಒಳ್ಳೆಯ ಎಳ್ಳೆಣ್ಣೆಯನ್ನು ಸ್ವಲ್ಪ ಸವರಿ ತಿಕ್ಕಬಹುದು. ಇಲ್ಲವೆ ಲಿಂಬೆರಸವನ್ನು ಸವರಬಹುದು. (೪) ತಲೆಯಲ್ಲಿ ಹೊಟ್ಟು ಬರುತ್ತಿದ್ದರೆ ಮೇಲಿನ ಚಿಕಿತ್ಸೆಗಳನ್ನು ಮಾಡುವ ಮುಂಚೆ ಕೂದಲ ಕುಂಚ (ಬ್ರಶ್)ದಿಂದ ತಲೆಯನ್ನು ಉಜ್ಜಿ ಹೊಟ್ಟನ್ನು ಉದುರಿಸಬೇಕು.

ಔಷಧಗಳು:— (೧) ಹೊಟ್ಟೆಯಲ್ಲಿ ಕರ್ಪೂರ ಶಿಲಾಜಿತ್ ಭಸ್ಮ ಮತ್ತು ಅಭ್ರಕ ಶತಪುಟಭಸ್ಮಗಳನ್ನು ವೈದ್ಯರ ಸಲಹೆಯಂತೆ ಒಂದೆರಡು ತಿಂಗಳು ಸೇವಿಸಬೇಕು. (೨) ‘ಮಂಜಿಷ್ಠಾದಿ ತೈಲ’ವನ್ನು ತಲೆಗೆ ಲೇಪಿಸಿ, ತುದಿ ಬೆರಳುಗಳಿಂದ ತಿಕ್ಕಲು ಉಪಯೋಗಿಸಬೇಕು. (೩) ದಿನಾಲು ಬೆಳಗ್ಗೆ ಬರಿ ಹೊಟ್ಟೆಯಲ್ಲಿ ಮತ್ತು ಸಂಜೆ ೬ ಗಂಟೆಗೆ ೧ ಚಮಚಾ ಎಳ್ಳೆಣ್ಣೆ ಮತ್ತು ಅರ್ಧ ಚಮಚಾ ಜೇನು ಸೇರಿಸಿ ನೆಕ್ಕಬೇಕು.

HOTEL SATKAR
Boarding, Lodging & Restaurant
Behind Corporation Office,
9 Mission Road — **Bangalore—27.**
Phone No.— 1 28337
2 29887
Grams: HOST SATKAR
Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 28—5—1970 ಸಂಪುಟ 49 ಸಂಚಿಕೆ 38

ಅಪಮಾನ - ನಾಚಿಕೆಗೇಡು

ಲೇಖಕರು :— ಶ್ರೀ ಶಿವಶಂಕರ

ಇದು ಅಪಮಾನ, ಆಘಾತ, ನಾಚಿಕೆಗೇಡು... ಭಾರತದ ಗೃಹಮಂತ್ರಿ ಶ್ರೀಮಾನ್ ವೈ. ಬಿ. ಚವಾನರು ಪ್ರತಿಸಾ ಪ್ರತಿನಿಧಿಗಳ ಬಳಿ, ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ.... ಹೀಗೆ... ಅಲ್ಲಲ್ಲಿ... ತನ್ನ ಮನದ ವರಕವನ್ನು ಪ್ರದರ್ಶಿಸುತ್ತ, ಗೋಳೋ ಎಂದು ಅತ್ತುಬಿಟ್ಟರು. ಅತ್ತದ್ದು ಮನೆಯೊಳಗಿರುವ ಗೃಹಚಾಮರಧಾರಿಣಿ ಗೃಹಮಂತ್ರಿಯಲ್ಲ. ಅವರಿಗಾಗಿ ತಲೆಯಲ್ಲೇ ಬಾವಿ, ಕಣ್ಣಿಂದರೆ ಕೃಷ್ಣರಾಜ ಸಾಗರ, ಮೊಗದ ಕಣ್ಣುಗಳು ಬತ್ತದ ಕಣ್ಣುಗಳು, ಕಾಲ—ಅಕಾಲ ಕಾಲುಂಜಿಗಳು ಇತ್ಯಾದಿ ಇತ್ಯಾದಿ ಪದಗಳ ಸೃಷ್ಟಿಯಾಗಿರುತ್ತದೆ. ಭಿವಂಡಿ, ಜಲಗಾಂವ್ ಅಥವಾ ರಾಣದಲ್ಲಾದಲೀ ಅಕೆ ಇರದಿದ್ದ ಕಾರಣ ಅಷ್ಟೇ ಅಲ್ಲ, ಅಂತಹ ಸಮಾಚಾರಗಳನ್ನು ಪತ್ರಿಕೆಗಳಲ್ಲಿ ಓದಲು ಅಕೆ ಆ ಹಳೆಸು, ಅಜ್ಜನ ಕಾಲದ ಅಕ್ಷರಗಳನ್ನು, ರಾಜಾಧಿರಾಜರನ್ನು ಸೃಷ್ಟಿ ಪಡಿಸಿ ತಾವೂ ಸುಖ ಜೀವನ ನಡೆಸಲು, ತಮ್ಮ ಭೋಗಕ್ಕಾಗಿ ಯಾರಿಗೋ ಯಾರೋ ಗೀಚಿರುವ ಕಲೆಗಳನ್ನು ಕಷ್ಟಪಟ್ಟು ಕಲಿತು ಸಮಯ ಹಾಳು ಮಾಡಲು ಸಿದ್ಧವಿಲ್ಲದ ಅಕೆ ಕಣ್ಣೀರಿಡುವ ಪ್ರಮೇಯವೇ ಇಲ್ಲ. ಅತ್ತದ್ದು ಕಾಂಗ್ರೆಸ್ಸಿನ ಪೀರಾಂಗನೆ, ತಪ್ಪ ಪಕ್ಷದ ಅಧ್ಯಕ್ಷನಿಗೆ ಅಸಹ-ಸಹಿತ ಅರ್ಧ ಚಂದ್ರ ಪ್ರಯೋಗ ಮಾಡಿರುವ ಶ್ರೀಮತಿ ಇಂದಿರಾದೇವಿಯವರ ಸಂಪುಟದಲ್ಲಿರುವ "ಬಲವಾನ್" "ಸಹ್ಯಾದ್ರಿ" ಅಂದುಕೊಳ್ಳುತ್ತಿರುವ ಗೃಹ ಸಚಿವ ಶ್ರೀಮಾನ್ ವೈ. ಬಿ. ಚವಾಣರು.

ಅಂದೊಮ್ಮೆ ಅರ್ಥಮಂತ್ರಿಯಾಗಿದ್ದ ಶ್ರೀಮಾನ್ ಮೊರಾರ್ಜಿ ದೇಸಾಯಿಯವರನ್ನು ಅರ್ಥವತ್ತಾಗಿ ಅತ್ತ ಕಳುಹಿಸಿದ ಶ್ರೀಮತಿ ಇಂದಿರಾಜೀಯವರು, ಅವರ ಗೋಟಿಯೆಂದೆನಿಸಿಕೊಂಡಿರುವ ಗುಜರಾಥಿನಿಂದಲೂ ಗುಡಿಸಿ ಬಿಡಬೇಕೆಂದು ಗುಡುಗಿಡುತ್ತಿದ್ದಾಗ ಅಹಮದಾಬಾದಿನಲ್ಲಿ ಕರ್ಫ್ಯೂ ಸಮೇತ ಅಗ್ನಿಸ್ಪರ್ಶ ಸಂಭವಿಸಿತು. ಗುಜರಾಥ 'ಸಿಂಡಿ'ಕೇಟ್‌ನವರ ಕೈಯಲ್ಲಿರುವುದರಿಂದ, ಈ ದುರ್ಘಟನೆಯ ದುರ್ಲಾಭವನ್ನು 'ಇಂಡಿ' ಪ್ರಯತ್ನಿಸಿತು. ಅಲ್ಲಿನ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕೆನ್ನುವ ಕೂಗು ಕೇಳಿ ಬಂತು. ಅಷ್ಟರಲ್ಲೇ ಬಿಹಾರ, ಬಂಗಾಲಗಳಲ್ಲಿ ಅಂತಹ ದುರ್ಘಟನೆಗಳಿಗೆ ಬರಗಾಲ ಬಂದಿಲ್ಲವೆಂಬ ಬೊಬ್ಬೆ ಕೇಳಿ ಬಂತು. ಗೋಮಟೇಶ್ವರನ ತವರೋ ಭೂಮಿಯಾಗಿರುವ ಮೈಸೂರಿನಲ್ಲಿ ಮತೀಯ ಮಾರಾಮಾರಿ ನಡೆಯಿತು. ಇದೀಗ ಆ ಅಗ್ನಿಚಕ್ರ ಗರಗರನೆ ಉರುಳುತ್ತ ಗೃಹ ಮಂತ್ರಿಯವರ ಗೃಹರಾಜ್ಯದೆದುರೇ ಗ್ರಹಚಾರದಂತೆ ಗಥಕ್ಕನೆ ತಂಗಿರುತ್ತದೆ. ಚವಾನರು ಚಂಗನೆ ಹಾರಿ ಬಂದರು, ತನ್ನೆಲ್ಲ ಪೂರ್ವಶಿಕ್ಷಿತ ಕಾರ್ಯಕಲಾಪಗಳಿಗೆ ಎಳ್ಳುನೀರು ಬಿಟ್ಟರು. ಆ ನೀರು ಈ ದ್ವೇಷಾಗ್ನಿಯ ನೊಂದಿಸಲಿಕ್ಕೆ ಸಾಕಾಗಲಿಲ್ಲ. ಅನಂತರ ಉಳಿದದ್ದು ಕಣ್ಣೀರು. ಅದನ್ನೂ ಪ್ರವಹಿಸಲು ಅವರು ಬಿಟ್ಟರು.

ಮಹಾರಾಷ್ಟ್ರವೆಂದರೆ ಮತೀಯ ದೃಷ್ಟಿಯಲ್ಲಿ ಮಹಾಶಾಂತ ರಾಜ್ಯವೆಂದು ಚವಾನರು ಹೇಳಿ, ಅಲ್ಲಿ ಈ ರೀತಿ ನಡೆದದ್ದು ಆಕಸ್ಮಿಕ ಆಘಾತ, ಅದು ಅಪಮಾನವೆಂದೆಲ್ಲಾ ಆಡಿರುವರು. ಶಾಂತ ಹೆಸರು ಮಹಾರಾಷ್ಟ್ರದಲ್ಲಿ ಎಲ್ಲೆಲ್ಲೂ ಕೇಳಿ ಬರುವ ಹೆಸರೆನ್ನುವದು ನಿಜ. ಆದರೆ ಬೊಂಬಾಯಿಗೆ ಶಾಂತ ಸಾಗರ ಬಹಳ ದೂರವೇ ಸರಿ. ಶ್ರೀ ಗಣೇಶ ಉತ್ಸವದ ಸಮಯ ಮಹಾರಾಷ್ಟ್ರದಲ್ಲಿ ಮತೀಯ ಮಾರಾಮಾರಿ ನಡೆಯದಿದ್ದ ವರ್ಷ ಯಾವದು? ಚವಾನರು ಬೊಂಬಾಯಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗಲೂ ಅದು ನಡೆಯುತ್ತಿತ್ತು. ಲೋಕಮಾನ್ಯ ಬಾಲ ಗಂಗಾಧರ ತಿಲಕ, ಪರಮ ಪೂಜನೀಯ ಶ್ರೀ ಕೇಶವ ಬಲಿರಾಂ ಹೆಡ್ಗೇವಾರ್, ಸ್ವಾತಂತ್ರ್ಯ ವೀರ ವಿನಾಯಕ ದಾಮೋದರ ಸಾವರ್ಕರ್ ಮೊದಲಾದವರಿಗೆ ಮುಖ್ಯವಾಗಿದ್ದ ಗಣೇಶ ಉತ್ಸವ ಕೇವಲ ಬರಿಯ ಸದ್ದನ್ನೆಬ್ಬಿಸುತ್ತಿರುವ ಕಾಂಗ್ರೆಸ್ಸ್ ಮುಖಂಡರುಗಳಿಗೆ ಹಿಡಿಸಲಿಲ್ಲ. ಅದನ್ನು ನೆಯಾವಾಗಿ, ನಾಚೂಕಾಗಿ ಪ್ರಕಟಿಸಲು ಅವರು ಪಠ್ಯಪುಸ್ತಕಗಳಲ್ಲಿದ್ದ ಗಣೇಶ ಶಬ್ದದ ಬದಲು "ಗದ್ದಾ" ಶಬ್ದ ಮಾಡಿದರು. ಮತ್ತು ಆ ಕತ್ತೆಗೆ ಉತ್ಸವವನ್ನೂ ಕೋಲಾಹಲದ ಹಬ್ಬವನ್ನೂ ಮಾಡಿದರು. ಹಾಗಿದ್ದರೂ ಆವರದನ್ನ ಚುನಾವಣಾ ಲಾಂಛನವನ್ನಾಗಿ ಮಾಡಿಕೊಳ್ಳಲಿಲ್ಲ. ಆದಕ್ಕೆ ಶ್ರೀಮತಿ ಇಂದಿರಮ್ಮನವರ ಹಿಂದರು ಕಾರಣ ಇರಬಹುದು. ಚುನಾವಣಾ ಲಾಂಛನದ ಮೇಲೆ ಮತದಾನಿಗಳು ಬಲವಾಗಿ ಮುದ್ರೆಯನ್ನೊತ್ತುತ್ತಾರೆ. ತಮ್ಮ ಪ್ರೀತಿಯ ಕತ್ತೆಗೆ ಪಂಚ್ ಏಟು ಕೊಟ್ಟಾರು ಗಳೇ? ಕತ್ತೆ ಇರುವದು ಬೇರೆಯವರಿಗೆ ಒತ್ತೆ ಕೊಡಲಿಕ್ಕಾಗಿ, ವಿನಃ ಬೇರೆಯವರಿಂದ ಗದ್ದು ತಿನ್ನಲಿಕ್ಕಾಗಿ ಅಲ್ಲ. ಅದನ್ನು ಅರಿತುಕೊಂಡಿರುವ 'ಅಪ್ಪಟ' ಕಾಂಗ್ರೆಸ್ಸಿಗರು ಜವಾಹರಲಾಲ ನೆಹರೂಜೀಯವರ ಘನ ನೆನಪಿಗಾಗಿ "ಗದ್ದಾ"ವನ್ನು [ಗದೆ ಅಲ್ಲ] ಸೆಕ್ಯೂಲರಿಸಮ್‌ನ ಜೀವಂತ ಸಂಕೇತವನ್ನಾಗಿ ಗೌರವಿಸಿದರು. ಅದು ತನ್ನ ಘನಸ್ಥಿತಿಯಿಂದ ದಣು ಪಾಲಿಸುತ್ತಿರುವ ಲತ್ತೆಗಳನ್ನು ಸ್ವೀಕರಿಸುತ್ತ, ಆ ಕಾಲಿಗೆ ಅವರು ವಂದನ ಮುತ್ತನ್ನೀಯುತ್ತಿದ್ದಾರೆ. 'ಮತಾಂಧರ' ವಿನಾಯಕನ ನಾಯಕತ್ವ ಹೋಗಿ ಮಿಸ್ಟರ್ ಗದ್ದಾಜೀಯವರು ಗದ್ದುಗೆಯನ್ನೇರಿದುದೇ ತಡ, ಗಣೇಶನೆಂದರೆ ಧಡ ಬಡಿಸುತ್ತಿದ್ದವರಿಗೆ ಕೊಂಬು ಮೂಡಿತು.

ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿಸೂಚಕ ಲಂಬೋದರ, ವೈಜ್ಞಾನಿಕ ಪ್ರಗತಿಶೀಲ ರಾಷ್ಟ್ರದಲ್ಲಿ ವಿಚಿತ್ರ ರೂಪದ ಮೂಷಕವಾಹನ ಆನೆಮುಖದ ಗಣಪತಿಯು ಇತಿಹಾಸದ ಅದ ಮೇಲೆ ಎಲ್ಲೆಲ್ಲೂ ಮತೀಯ ಸೌಹಾರ್ದತೆಯು ಸರೋವರವೇ ಉಂಟಾಗ ಬಹುದೆಂದು ಗದ್ದಾಪ್ರಿಯರು ಮೊಲಗಿದ್ದಲ್ಲಿಂದಲೇ ಎದುರು ನೋಡುತ್ತಿದ್ದರು. ತೋಳ-ಮೇಕೆಯ ಕಥೆ ಕೇಳಲು ಅವರೇನು ಚಿಕ್ಕ ಮಕ್ಕಳೇ, ಹೇಳಲು ಅಜ್ಜಿಯೇ? ಸೆಕ್ಯೂಲರಿಸ್ಟರು ಕತ್ತೆಯ ಮೇಲೆ ವಿಹರಿಸುತ್ತ, ಮತೀಯ ಪ್ರವೃತ್ತಿಯ ಹಗಲು-ಕನಸು ಕಾಣುತ್ತಿರುವಾಗ, ಅತ್ತ ಗಜಮುಖನ ಗಜಾಸ ಪ್ರಿಂಸಿಯಿಂದ ಮತೀಯ ಮಾರಾಮಾರಿಯ ಶ್ರೀ ಗಣೇಶ ಆರಂಭ ಆಯಿತು. ಅಲ್ಲಿಂದ ಹೋಳಿ, ರಾಮನವಮಿ, ದುರ್ಗಾಪೂಜೆ, ಸರಸ್ವತಿ ಉತ್ಸವ, ರಾಷ್ಟ್ರೀಯ ಸ್ವಯಂಸೇವಕ ಸಂಘದವರ ಪಥಸಂಚಲನ.... ಹೀಗೆ ಮುಂದರಿದ ಪೂಜಾಕೇಂದ್ರಗಳನ್ನ ತಮ್ಮದೆಂದು ಕೇಳುವದಕ್ಕೆ ಪ್ರಗತಿಹೊಂದಿರುತ್ತದೆ. ಇದಕ್ಕೆ ಪ್ರಗತಿಶೀಲರೆಂದು ತನ್ನನ್ನ ತಾವೇ ಪ್ರಶಂಸಿಸಿಕೊಳ್ಳುವವರೆಲ್ಲರ ಪ್ರೋತ್ಸಾಹ ಇದೆ.

ವಿಶ್ವೇಶ್ವರ ದಜೀಶನಿಗೆ ಪೆಂಡಲ ನಮಸ್ಕಾರ ಸಲ್ಲಿಸುವದನ್ನು ಜಾತ್ಯಾತೀತ ಪ್ರಗತಿಯ ಭ್ರಾಂತಿನಲ್ಲಿ ಬಿಟ್ಟುಬಿಟ್ಟು, ಗದ್ದುಗೆಯ ಮೇಲೆ ಕತ್ತೆಯನ್ನೇರಿಸಿ ಕಾಂಗ್ರೆಸ್ಸ್ ಕಾರ್ಯಕಲಾಪಗಳಿಗೆ ಕೈಹಾಕಿದುದೇ ತಡ. ಅಂದು ಕೆಲವರು ಒಬ್ಬನ ಹತ್ತಿರ ಕತ್ತೆಯನ್ನು ತೋರಿಸಿದ್ದರಂತೆ, ಅದೇ ಜಾತಿಯ ಕಮ್ಯೂನಿಸ್ಟರು ಅದಕ್ಕಾಗಿ ಕಾಂಗ್ರೆಸ್ಸನ್ನು ಉಪಯೋಗಿಸಿಕೊಂಡರು. ತನ್ನ ರಾಷ್ಟ್ರೀಯ ಗೌರವವೆಂಬ ತಾದೆಯನ್ನು ಕಡಿಸಿ, ತಷ್ಟೀಕರಣದ ಮೂಲಕ, ತನ್ನ ಮುಖದ ಮೇಲೆ ತಾನೇ ಉಗುಳಿಕೊಳ್ಳುವದರ ಮೂಲಕ ಮತೀಯ ಸೌಹಾರ್ದತೆಯೆಂಬ ಕತ್ತೆಯನ್ನು ಹೊತ್ತುಕೊಂಡು ಕಾಂಗ್ರೆಸ್ಸಿಗರು ಅಧಿಕಾರ ದಾಹದಿಂದ, ಯಾದವರಂತೆ ಹೊಡೆದಾಡಿಕೊಳ್ಳುತ್ತಿದ್ದಾರೆ. ರಾಮನವಮಿ, ದುರ್ಗಾಪೂಜೆ, ಸರಸ್ವತಿ ಪೂಜೆ, ಹೋಳಿ, ವಿಜಯದಶಮಿ, ಭಗವಾಧ್ವಜ.... ಇವೆಲ್ಲಾ ನಮ್ಮ ರಾಷ್ಟ್ರಗೌರವದ ಕೇಂದ್ರಗಳವೆ. ಗೋಪೂಜೆಯನ್ನು ಘೋರ ಅಂಧಶ್ರದ್ಧೆಯೆಂದು ಗೋವಧೆಗಾಗಿ ಅತ್ಯಾಧುನಿಕ ಭೀಕರ ಕೊಲೆಮನೆಗಳನ್ನು ಕಟ್ಟಿ ಹಾಳುವದು ಪ್ರಗತಿಯ ಚಿಹ್ನೆಗಳೇನು? ಇವೆಲ್ಲವುಗಳ ಮೇಲೆ ಆಕ್ರಮಣ ನಡೆಸಿದಾಗ ಕಾಂಗ್ರೆಸಿಗರು ತಮ್ಮ ಭೋಳೇ ಜನತೆಯ ಮೇಲೆ ಗುಂಡು ಹಾರಿಸಿದರು; ಸಾಲದುದಕ್ಕೆ ಶಿಕ್ಷಿಸಿದರು.

ಹಳೆಯದನ್ನು ಹೂತು ಹೊಸದನ್ನೇ ಹೊರ ತೆಗೆಯೋಣವೆಂದು ಕಾಂಗ್ರೆಸ್ಸ್ ಕರೆ ಕೊಟ್ಟಿತು. ಮುಸ್ಲಿಂ ಲೀಗ್ ಮುಗುಳ್ನಗೆ ನಕ್ಕಿತು. ಕಮ್ಯೂನಿಸ್ಟರು ಕರತಾಡನ ಮಾಡಿದರು. ಪ್ರಸೋಪಾ ಪರಾಕೆಂದಿತು. ಸಂಸೋಪಾ ಸರಿಯೆಂದಿತು. ಆ ಖಾಲಿಸಳ 'ಅಕ್ಷತಾ' ಅಂದಿತು. ದ್ರಾ. ಮು. ಕ. ಧೂಂ ಧೂಂ ಮಾಡಿತು. ರಷ್ಯಾದ, ಚೈನಾದ ಆಕಾಶವಾಣಿಗಳು ಆಕಾಶ ಬಿರಿಯುವಂತೆ ಅದನ್ನು ಬಿತ್ತರಿಸಿದುವು. ಭಾರತೀಯ ಜನಸಂಘ ಬಹಳ ಜೋರೆ ಎಂದಿತ. ಕಾವಿ ತ್ತ ಚರೆಯಂತೆ ಕಾಂಗ್ರೆಸ್ಸಿಗರು ದಂಡಧಾರಿ ಗಾಂಧೀಜಿ, ಚರಕ ಧಾರಿ ಗಾಂಧೀಜಿ, ಆಚೀಚೆ ಗಾಂಧೀಜೀಯ ಚಿತ್ರ... ಆ—ಇ ವಾಹನದಳ ಮೇಲಿರುವ ಆಸನಾಂಕಿತ, ಲೋಡಿನ ಮೇಲಿರುವ

(ಎಂಟನೇ ಪುಟ ನೋಡಿ)

ಪುರಾಣಗಳಲ್ಲಿ ವೈಜ್ಞಾನಿಕ ಕಥೆ

ಆರಂಭವತ್ತು ದೋಷವೆಂಬುದು ನಿಜ. ಆದರೂ ಅದು ದುರಾಚಾರ ಅಥವಾ ವ್ಯಭಿಚಾರಗಳನ್ನು ಭರ್ತ್ಸನಕವಲ್ಲ. ಪುರಾಣಗಳನ್ನು ಮಾನವೀಯೇತಿಹಾಸವೆಂದು ತಿಳಿದು ಓದುವವರಿಗೆ ಇಂದ್ರ-ಅಹಲ್ಯಾ, ಬ್ರಹ್ಮ-ಸರಸ್ವತಿಯರ ಕಥೆಗಳು ವ್ಯಭಿಚಾರದ ಪರಾಕಾಷ್ಠೆಯಾಗಿಯೇ ಭಾಸವಾಗುವುದು ನ್ಯಾಯ. ಪುರಾಣಗಳಲ್ಲಿ ಮಾನವರ ಕಥೆಗಳೂ ಇವೆ; ಅವುಗಳೊಂದಿಗೆ, ವಿವಿಧ ಗ್ರಹ ನಕ್ಷತ್ರಗಳ, ಅನೇಕ ಪ್ರಾಕೃತಿಕ ಘಟನೆಗಳ ವರ್ಣನೆಗಳೂ ಇವೆ; ಅನೇಕ ಮಾನವೀಯ ಭಾವನೆಗಳಿಗೆ ಮಾನವ ರೂಪ ನೀಡಿ, ಅವುಗಳ ವರ್ಣನೆ ಉಕ್ತವಾಗಿದೆ; ಈ ವರ್ಣನೆಗಳಲ್ಲಿ ಕೆಲವು ಅತ್ಯಂತ ಮಹತ್ವಪೂರ್ಣ ವೈಜ್ಞಾನಿಕ ಸಂಸ್ಕರಣಗಳೂ ಅಡಕವಾಗಿವೆ; ಅನೇಕ ಪಾಪ-ಪುಣ್ಯಗಳ ಹೇಯೋಪಾದೇಯಗಳನ್ನು ವಿವೇಕಕ್ಕಾಗಿ ವಿವರಿಸಲಾಗಿದೆ; ಈ ವಿಚಾರವನ್ನು ಅರಿತುಕೊಂಡು ಪುರಾಣ ಪಠಣ, ಶ್ರವಣ ಮಾಡಿದರೆ, ಆಗ ಪುರಾಣದಂತೆ ವರ್ಣಿಸಿದ ಅಚೇತನ ಪದಾರ್ಥಗಳು, ನೈಸರ್ಗಿಕ ಘಟನೆಗಳು, ಮತ್ತು ಭಾವನೆಗಳನ್ನು ಒಂದಕ್ಕೊಂದು ಸಂಬಂಧಿಸುವಲ್ಲಿ ವ್ಯಭಿಚಾರ ಅಥವಾ ಪಾಪ ಕಲೆಪಾಕುವುದಿಲ್ಲ. ಇದನ್ನು ಮನದಟ್ಟು ಮಾಡಿಕೊಂಡರೆ, ಚಂದ್ರ—ತಾರೆಯರ ಕಥೆಯಲ್ಲಿ ಸೃಷ್ಟಿಯ ಆದಿಯಲ್ಲಿ ಬುಧಗ್ರಹ ಉತ್ಪನ್ನವಾದ ವೈಜ್ಞಾನಿಕ ಸತ್ಯ ಕಂಡುಬರುವುದು. ಇಂದ್ರ—ಅಹಲ್ಯೆಯರ ಕಥೆಯಲ್ಲಿ ಅಹೋರಾತ್ರ ವಿಜ್ಞಾನವು ಪ್ರಾಪ್ತವಾಗುವುದು. ಬ್ರಹ್ಮ-ಸರಸ್ವತಿಯರ ಸಂಬಂಧವೂ ಒಂದು ರಾಜನೈತಿಕ ತತ್ವದ ಮೇಲೆ ಪ್ರಕಾಶ ಬೀರುವುದು.

ಇಂದ್ರ-ಅಹಲ್ಯೆಯರ ಕಥೆಯ ರಹಸ್ಯ ಭೇದಿಸಿದ ಕೀರ್ತಿ ಕುಮಾರಿಲ ಭಟ್ಟನಿಗೆ. ಭಟ್ಟನು ಪ್ರಕಾಂಡ ಪಂಡಿತ; ಪ್ರಸಿದ್ಧ ಮೀಮಾಂಸಕ. ಆತನ ಅಪೂರ್ವ ಗ್ರಂಥ ತಂತ್ರ ವಾರ್ತಿಕ.

'ಇಂದ್ರ' ಪದಕ್ಕೆ ಸೂರ್ಯನೆಂದೂ 'ಅಹಲ್ಯಾ' ಪದಕ್ಕೆ ರಾತ್ರಿ ಎಂದೂ ಅರ್ಥ. ಸೂರ್ಯನು ಹೋಗಿ ಹೋದ ಬಳಿಕ ರಾತ್ರಿ ಪ್ರಾರಂಭವಾಗುವುದು. ಅದು ದರಿಂದಲೇ ಸೂರ್ಯನನ್ನು ರಾತ್ರಿಯ ಜಾರನೆಂದು ವರ್ಣಿಸಿರುವುದು. 'ಇಂದ್ರನ ಮೈತುಂಬ ಕಣ್ಣು' ಎಂಬುದರ ಅರ್ಥವೇ ನ ಸ್ಪಷ್ಟ. ಸಹಸ್ರಕಿರಣಗಳಿಂದ ನೋಡುವ ಸೂರ್ಯನು ಸಹಸ್ರಾಕ್ಷನೂ ಹೌದು. ಕಿರಣಗಳನ್ನು ಕಣ್ಣುಗಳೆಂದರೆ, ಸೂರ್ಯನ ಮೈತುಂಬ ಕಣ್ಣುಗಳೇ. ಇದು ಪತಿವ್ರತಾ ಶಿರೋಮಣಿ ಅಹಲ್ಯೆಯ ಶಾಪವಲ್ಲ; ಶಾಪದ ಹೊದಿಕೆ ಹೊತ್ತ ಸಹಜತೆ. ಇದನ್ನು ತಿಳಿದ ಮೇಲೆ, ಇಂದ್ರ-ಅಹಲ್ಯೆಯರ ಮೇಲೆ ವ್ಯಭಿಚಾರದ ಆರೋಪ ಇಲ್ಲವು ದಿಲ್ಲ. ಹಗಲು ಇರುಳಾಗುವ ಪ್ರಕೃತಿ ವಿಜ್ಞಾನದ ಒಂದು ಸತ್ಯಕಥೆ ಇದು.

ಬ್ರಹ್ಮ- ಸರಸ್ವತಿಯರ ವಿಲಕ್ಷಣ ಕಥೆಯನ್ನು ತೆಗೆದುಕೊಳ್ಳೋಣ. ಋಗ್ವೇದದ ೧-೧೬೪-೩೩ರಲ್ಲಿಯೂ ಇದರ ಸಂಕೇತವಿದೆ. ಮೇಲ್ನೋಟಕ್ಕೆ ಈ ಕಥೆ ಅತ್ಯಂತ ಅಶ್ಲೀಲ. ಆದರೆ, ಇದನ್ನು ಅಶ್ಲೀಲವೆಂದು ಮೂಗುಮುರಿಯುವವರು ಈ ಕಥೆಯ ಅಂತರಾರ್ಥವನ್ನು ಅರಿತುಕೊಂಡಿಲ್ಲವೆಂದು ಹೇಳಬೇಕು. ಐತರೇಯ ಬ್ರಾಹ್ಮಣ (೩-೩೩-೩), ಶತಪಥ ಬ್ರಾಹ್ಮಣ (೧-೭-೪-೪), ನಿರುಕ್ತ (೪-೨೧) ಮತ್ತು ತಂತ್ರ ವಾರ್ತಿಕ (೧-೩-೩-೭)ವೆಂಬ ಮಹಾ ಗ್ರಂಥಗಳು ಬ್ರಹ್ಮ-ಸರಸ್ವತೀ ವಿವಾಹ ಪ್ರಸಂಗವನ್ನು ಚೆನ್ನಾಗಿ ವಿಮರ್ಶಿಸಿವೆ. ಅರ್ವಾಚೀನ ವಿದ್ವಾಂಸರು ಇವೆಲ್ಲವನ್ನು ಮಥಿಸಿ ಅದರ ಸಾಂಕೇತಿಕ ಅರ್ಥವನ್ನು ರಾಜ-ಪ್ರಜೆಗಳಿಗೆ ಅನ್ವಯಿಸಿದ್ದಾರೆ.

ಬ್ರಹ್ಮನಿಗೆ ಪ್ರಜಾಪತಿಯೆಂದೂ ಹೆಸರು. ಪ್ರಜಾಪತಿ ರಾಜನು ಜನಹಿತಾಸಕ್ತನಾಗದೆ, ಜನವಿರೋಧಿ ಕಾರ್ಯಕಲಾಪಗಳಲ್ಲಿ ತೊಡಗಿದಾಗ ಉಂಟಾದ ಪರಿಣಾಮವಾಗಿ ನಡೆದ ಮಹಾದ ಅಂತ ಈ ಕಥೆಯ ವಸ್ತು. ಪ್ರಜಾಪತಿ, ನೃಪತಿ, ನರಪತಿ, ಜನಪ—ಇವೆಲ್ಲವೂ ಸಮಾನಾರ್ಥವನ್ನು ಕೊಡುವುದು ಅಪರಾಧವಾಗುವುದಿಲ್ಲ. ಅಥರ್ವವೇದದಲ್ಲಿ ಈ ಪ್ರಜಾಪತಿಗೆ ಸಭಾ ಮತ್ತು "ಸಮಿತಿ" ಎಂಬಿಬ್ಬರು ಮಗಳಂದಿರು ಇದ್ದರೆಂದು ಹೇಳಿದೆ. (೭-೧೨-೧) ಪ್ರಜಾಪತಿಯು ಪ್ರಧಾನ ಶಾಸಕನಾದರೆ, ಸಭೆ ಮತ್ತು ಸಮಿತಿಗಳು ಇಂದಿನ ಕೆಳಮನೆ— ಮೇಲ್ಮನೆಗಳಿಗೆ ಸಂಹೊಂದುತ್ತವೆ. ಲೋಕಸಭೆಯು ನೇರವಾಗಿ ಪ್ರಜಾಪ್ರತಿನಿಧಿಗಳ ಸಭೆ. ಇದು ಪ್ರಜಾಜನರ ಏಳಿಗೆಗಾಗಿ ಕೈಕೊಳ್ಳುವ ಕಾರ್ಯಕ್ರಮಗಳನ್ನು ಪ್ರಜಾಪತಿ ಶಾಸಕನು ಸಾಮಾನ್ಯವಾಗಿ ಅಂಗೀಕರಿಸಬೇಕು. ಆದರೆ, ಅಂತಹ ನಿರ್ಬಂಧವೇನೂ ಇಲ್ಲ. ಶಾಸಕನು ಮದಾಂಧನಾಗಿಯೋ ಸರ್ವಾಧಿಕಾರ ಪ್ರಿಯನಾಗಿಯೋ ತನ್ನ ಅಧಿಕಾರ ದರ್ಪ ಪ್ರದರ್ಶನಾಕಾಂಕ್ಷಿಯಾಗಿಯೋ ಸ್ವಾರ್ಥಲೋಲುಪನಾಗಿಯೋ ಅಥವಾ ಇನ್ಯಾವುದೇ ಕಾರಣದಿಂದಲೋ ಅಂತಹ ಕಾರ್ಯಕ್ರಮಗಳನ್ನು ತಿರಸ್ಕರಿಸಬಹುದು. ಆಗ, ಸಭೆಯ ಮೇಲೆ ಅತ್ಯಾಚಾರ ನಡೆಸಿದಂತಾಯಿತು. ಈ ಅನಾಚಾರದಿಂದ ಪ್ರಜಾಹಿತಕ್ಕೆ ಧಕ್ಕೆ ಬಂದಂತಾಯ್ತು. ಇಂಥದೇ ಘಟನೆಯನ್ನು ತನ್ನ ಸಭಾ ಎಂಬ ಮಗಳ ಮೇಲೆ ಪ್ರಜಾಪತಿ ಬ್ರಹ್ಮನು ಬಲಾತ್ಕಾರ ಬಲಪ್ರಯೋಗ ಮಾಡಿದನೆಂದು ಪುರಾಣ ಹೇಳುತ್ತದೆ. ಈ ಘಟನೆಯಲ್ಲಿ ಅಂತಹ ಮದಾಂಧ ಶಾಸಕನ ಅತ್ಯಾಚಾರವು ವರ್ಣಿತವಾಗಿದೆಯು ಇಲ್ಲದೆ ಬ್ರಹ್ಮನು ತನ್ನ ಮಗಳ ಮೇಲೆಯೇ ಅನುರಕ್ತನಾದನೆಂಬ ಅಶ್ಲೀಲ ಕಥೆಯ ವಾಸನೆಯೂ ಇರುವುದಿಲ್ಲ.

ರಾಜನೀತಿಗೆ ಸಂಬಂಧಪಟ್ಟ ಈ ಕಥೆಯ ವಿಜ್ಞಾನಾರ್ಥವನ್ನು ಮನವರಿಕೆ ಮಾಡಿಕೊಳ್ಳದೆ ಅಪಾರ್ಥವನ್ನು ಕಲ್ಪಿಸುವುದು ನ್ಯಾಯವಲ್ಲ. ಪುರಾಣಗಳ ಸಂಕೇತಗಳನ್ನು ಅರ್ಥಮಾಡಿಕೊಳ್ಳದೆ ಹೋದರೆ, ಇಂಥದೇ ಅಪಾರ್ಥಗಳು ಹುಟ್ಟಿಕೊಳ್ಳುವುದು ಸಹಜ. ಪುರಾಣಕಾಲಾನಂತರ ಬಂದ ಭೋಗವಿಲಾಸಾಸಕ್ತರು ತಮ್ಮ ಸ್ವಾರ್ಥಲಾಭಕ್ಕಾಗಿ ಈ ಪುರಾಣೋಲ್ಲೇಖಿತ ಘಟನೆಗಳಿಗೆ ತಮ್ಮದೇ ಅರ್ಥವನ್ನು ಹಚ್ಚಿ ಪ್ರಚಾರ ಮಾಡತೊಡಗಿದರು. ಅಜ್ಞ ಜನರು "ಕರ್ಣಾಪ್ರಿಯ"ವಾದ ಈ ಕಥೆಯನ್ನು ಸತ್ಯವೆಂದೇ ನಂಬಿಬಂದರು.

ಪುರಾಣಗಳಿಗೆ ವೈಜ್ಞಾನಿಕವಾಗಿ ವ್ಯಾಖ್ಯಾನ ಬರೆದರೆ, ಇಂತಹ ಅಪಾರ್ಥಗಳಿಗೆ ಆಸ್ಪದವಿಲ್ಲ. ಸೃಷ್ಟಿ ವಿಜ್ಞಾನದ ಅಪೂರ್ವ ಸತ್ಯ ಘಟನೆಗಳು ಆಗ ಹೊರಬರುವುವು. —ಗೋ.

ಮಂತ್ರಿಗಳೂ ಗವರ್ನರರೂ ಹೇಗಿರಬೇಕು?

(ಗಾಂಧೀಜಿ)

ಭಾರತದೇಶದಲ್ಲಿಯ ಮಂತ್ರಿಗಳೂ ಗವರ್ನರರೂ ಸಾಧ್ಯವಾದ ಮಟ್ಟಿಗೆ ಭಾರತದಲ್ಲಿ ತಯಾರಾದ ವಸ್ತುಗಳನ್ನೇ ಉಪಯೋಗಿಸಬೇಕು. ಅವರು ಹಾಗೂ ಅವರ ಕುಟುಂಬದ ಜನರೆಲ್ಲ ಖಾದಿಯನ್ನೇ ಧರಿಸಬೇಕು ! ಇದರಿಂದ ಕೋಟ್ಯಂತರ ಬಡ ದೇಶಬಾಂಧವರಿಗೆ ಜೀವನದ ದಾರಿ ಮಾಡಿಕೊಟ್ಟಂತೆ ಆಗುತ್ತದೆ. ಅಹಿಂಸೆ ಮತ್ತು ಪ್ರೇಮದ ಪ್ರತೀಕವಾಗಿರುವ ರಾಟೆಯನ್ನು ಅವರು ನೂಲಬೇಕು. ಅವರ ವ್ಯಕ್ತಿಗತ ಜೀವನವು ಸಹ ಅತ್ಯಂತ ಸರಳವಾಗಿದ್ದು ಜನರಲ್ಲಿ ಗೌರವಭಾವನೆ ಹುಟ್ಟಿಸುವಂತಿರಬೇಕು. ಶ್ರಮದಾನ ಮಾಡಬೇಕು ಅದರಿಂದ ಸಾಮಾನ್ಯ ಜನರಿಗೂ ಮೈಮುರಿದು ದುಡಿಯಲು ಪ್ರೋತ್ಸಾಹ ದೊರೆಯುವಂತಾದೀತು. ಅವರು ಪ್ರತಿದಿನ ಒಂದು ಗಂಟೆ ಹೊಲಬೇಕು ಇಲ್ಲವೆ ತಮ್ಮ ಕೈತೋಟದಲ್ಲಿ ಕಾಯಿಪಲ್ಲೆ, ಹಣ್ಣುಹಂಪಲು ಬೆಳೆಸುವ ಉತ್ಪಾದನ ಕಾರ್ಯ ಮಾಡಬೇಕು. ಇದರಿಂದ ದೇಶದಲ್ಲಿಯ ಆಹಾರಸಮಸ್ಯೆ ಬಿಡಿಸಲಿಕ್ಕೆ ಸಹಾಯ ಮಾಡಿದಂತೆ ಆದೀತು. ಬಂಗ್ಲೆ, ಮೋಟರು ಕಾರು ಮೊದಲಾದ ಆಡಂಬರಗಳನ್ನು ಇರಿಸಲೇಬಾರದು. ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಮೋಟಾರ ಕಾರ್ ಉಪಯೋಗಿಸಬಹುದು. ಅವರು ಸಹೋದ್ಯೋಗಿಗಳೊಂದಿಗೆ ಒಂದೇ ವಸತಿಸ್ಥಳದಲ್ಲಿ ವಾಸಿಸಬೇಕು. ಅದರಿಂದ ಸಂಘಟನೆ ಮಾಡುವದು ಸುಲಭವಾದೀತು. ಅವರ ಕುಟುಂಬದ ಜನರಿಗೂ ಇತರ ಕುಟುಂಬದವರೊಡನೆ ಸಂಪರ್ಕ ಬೆಳೆಸಲು ಅನುಕೂಲವಾದೀತು. ಮಕ್ಕಳು ಮರಿಗಳಿಂದ ಹಿಡಿದು ಅವರ ಕುಟುಂಬದಲ್ಲಿಯ ಎಲ್ಲರೂ ತಮ್ಮ ಕೆಲಸಗಳನ್ನೆಲ್ಲ ತಾವೇ ಮಾಡಿಕೊಳ್ಳಬೇಕು. ಸಾಧ್ಯವಾದ ಮಟ್ಟಿಗೆ ನೌಕರರ ಉಪಯೋಗ ಕಡಿಮೆ ಮಾಡಬೇಕು ಅವರ ಹೋಲಿಯಲ್ಲಿ ಪಲ್ಲಂಗ, ಕಪಾಟು, ಕುರ್ಚಿ ಮೊದಲಾದ ಅತ್ಯಧಿಕ ಬೆಲೆಯ ವಿದೇಶೀ ಸಾಮಗ್ರಿಗಳಿಂದ ಅಲಂಕರಿಸಲೇಕೂಡದ, ಕೋಟ್ಯಂತರ ಭಾರತೀಯ ಕುಟುಂಬಗಳಲ್ಲಿ ಕೂಡ್ರಲಿಕ್ಕೆ ಒಂದು ಚಾಪೆ ಉಡಲಿಕ್ಕೆ ಮೈತುಂಬ ಬಟ್ಟೆ ಕೂಡ ಇಲ್ಲ ಎಂಬುದನ್ನು ನೆನಪಿಡಬೇಕು. ●

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526
ಸಂಪುಟ ೪೯
ಸಂಚಿಕೆ ೩೮
VOL. 49
No. 38

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೮—೫—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಮಾವೋ ಎಸೆದ ಗುಂಡು

ಕ್ರಾಂತಿಯ ಹೆಸರಲ್ಲಿ ಶಾಂತಿಗೆಡಿಸುವುದು, ಸುವ್ಯವಸ್ಥೆಗಳನ್ನು ಮುರಿಯುವುದು, ಅಶಾಂತಿಯನ್ನೂ ಅವ್ಯವಸ್ಥೆಗಳನ್ನೂ ಹರಡುವುದು; ತಮ್ಮನ್ನು ಪ್ರಗತಿವಾದಿಗಳೆಂದೂ ಇತರರನ್ನು ಪ್ರಗತಿ ವಿರೋಧಿಗಳೆಂದೂ ಹೇಳಿಕೊಳ್ಳುವುದು—ಇದು ಕಮ್ಯುನಿಸ್ಟರು ನಡೆದು ಬಂದ ದಾರಿ. ಕೆಂಪು ಚೀನಾದ ಅಧ್ಯಕ್ಷ ಮಾವೋರವರಿಗೆ ಈ ದಾರಿಯೂ ಈಗ ನಾಪಸಂದು. ಅವರಿಗೆ ಯುದ್ಧ ಬೇಕು; ಕೋಟ್ಯಾನು ಕೋಟಿ ಜನರ ರಕ್ತದೋಕುಳಿಯಾಡುವ ಹೆಬ್ಬಯಕೆ ಈ ಮುದುಕನಿಗೆ! ಅದಕ್ಕಾಗಿಯೇ ಅವರು ಕಾಂಬೋಡಿಯಾದ ಸಿಂಹನೂಕರನ್ನು ತನ್ನ ಸೆರಗಿನಲ್ಲಿಟ್ಟುಕೊಂಡು ಮೂರನೆಯ ಲೋಕ ಸಮರ ಆದೀತೆಂದು ಜಗತ್ತಿಗೆ ಕರೆನೀಡಿದ್ದಾರೆ; ಅಥವಾ ಬೆದರಿಕೆ ಹಾಕಿದ್ದಾರೆ.

ಕಾಂಬೋಡಿಯಾದೊಳಕ್ಕೆ ಅಧ್ಯಕ್ಷ ನಿಕ್ಸನ್ನರು ಅಮೇರಿಕನ್ ಸೇನೆಯನ್ನು ಕಳಿಸಿದ್ದರ ನ್ಯಾಯಾನ್ಯಾಯಗಳ ಮಾತು ಬೇರೆ; ಅವಶ್ಯಕತೆ ಮತ್ತು ಅನಿವಾರ್ಯತೆಗಳಿಗೆ ಪ್ರತಿಯೊಬ್ಬರ ನಿಘಂಟೂ ಬೇರೆ ಬೇರೆ ಅರ್ಥ ಹೇಳುತ್ತದೆ. ಇದೇ ಹಿನ್ನೆಲೆಯಲ್ಲಿ ಮುಂದೆ ಬಂದ ಮಾವೋ ಬೆದರಿಕೆ ಅವರ ಮನೀಷೆಯನ್ನು ಹೊರಗೆಡಹುತ್ತದೆಯೆಂದು ತಿಳಿದರೆ, ಆಶ್ಚರ್ಯವಿಲ್ಲ. ವಿಯಟ್ನಾಮು ಮತಭೇದದಿಂದ ಉತ್ತರ—ದಕ್ಷಿಣವೆಂದು ವಿಭಕ್ತವಾದಾಗ, ಮುಂದೆ ಮತಭೇದ ಆಕ್ರಮಣದ ಸ್ವರೂಪ ತಾಳಿದಾಗ ರಾಜಕೀಯ ನೆಲೆಯು ಕಮ್ಯುನಿಸ್ಟರು ಉತ್ತರಕ್ಕೂ ಅಮೇರಿಕನ್ನರು ದಕ್ಷಿಣಕ್ಕೂ ನೆರವಾದರು. ಉತ್ತರದಲ್ಲಿ ಕೆಂಪುಚೀನಾ ಮತ್ತು ರಶ್ಯದ ಮೇಲೆ ಗೌರವವಿರುವಂತೆಯೇ ದಕ್ಷಿಣದಲ್ಲಿ ಅಮೇರಿಕದ ಮೇಲೆ ಆದರ ಇರಲೇ ಬೇಕು. ಈ ಪರದೇಶಾವಲಂಬನೆ ಮತ್ತು ಗೌರವಾದರಗಳು ಯುದ್ಧದ ವಾತಾವರಣವನ್ನು ಹೆಚ್ಚಿಸಿದವೆಂಬುದು ನಿಜ. ಪ್ರಪಂಚ ಪ್ರವೇಶವಿಲ್ಲದೆ ಹೋಗಿದ್ದರೆ, ವಿಯಟ್ನಾಮ ಶಕ್ತಿಗಳು ತಮ್ಮ ತಮ್ಮಲ್ಲೇ ಹೋರಾಡಿ ಎಂದೋ ಒಂದು ಇತ್ಯರ್ಥಕ್ಕೆ ಬರುತಿದ್ದುವೆಂಬುದೂ ನಿಜ. ಇದೀಗ ಕಾಂಬೋಡಿಯಾದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಬಹುದು. ಪದಚ್ಯುತ ರಾಜಕುಮಾರ ಸಿಂಹನೂಕರ ಪರವಾಗಿ ಕೆಂಪು ಚೀನದ ಮಾವೋ ಎಂತಹ ತ್ಯಾಗಕ್ಕೂ ಸಿದ್ಧರೆಂದು ಹೇಳಿಕೊಂಡು, ಲೋಕಕ್ಕೆ ಮುಖ್ಯವಾಗಿ ಅಮೇರಿಕೆಗೆ ಗಂಭೀರ ಎಚ್ಚರಿಕೆ ನೀಡಿದ್ದಾರೆಂದರೆ, ಕೆಂಪು ಚೀನಾದ ಸೈನಿಕ ಶಕ್ತಿಸಾಮರ್ಥ್ಯಗಳನ್ನು ಜಗತ್ತು ಹೀರು ಮೊಳುವ ನಗಾರಿ ಬಾರಿಸಿದಂತೆ.

ಕೆಂಪು ಚೀನಾವು ಸೈನಿಕ ದೃಷ್ಟಿಯಿಂದ ಬಲಶಾಲಿ ದೇಶ. ತನ್ನ ಪ್ರಜೆಗಳ ಹೊಟ್ಟೆ ತುಂಬಿಸುವುದು ಮಾವೋನಿಗೆ ಅಸಾಧ್ಯವಾದರೂ ಸೈನಿಕರ ರೇಶನ್ನಿಗೆ ತೊಂದರೆ ಮಾಡಿರುವುದಿಲ್ಲ. ಅಣ್ವಸ್ತ್ರಗಳನ್ನೂ ಅವರು ತಯಾರಿಸುವಲ್ಲಿ ಯಶಗಳಿಸಿದ್ದಾರೆ. ಯುದ್ಧಕಲೆಯಲ್ಲಿ ಪಾಕಿಸ್ತಾನಕ್ಕೆ, ನಾಗಾ ಬಂಡುಕೋರರಿಗೆ ಸೂಕ್ತ ತರಬೇತಿಯನ್ನು ನೀಡುವಷ್ಟೂ ಅವರು ಮುನ್ನಡೆದಿದ್ದಾರೆ. ಹಾಗಿರುವಾಗ, ಕಡಿಮೆ ಯಾವುದರಲ್ಲಿ? ಅಮೇರಿಕ-ರಶ್ಯಗಳಿಗಿಂತಲೂ ತಾನೇ ಶಕ್ತಿಶಾಲಿ; ತನ್ನ ಕಮ್ಯುನಿಸಂ ಸರ್ವಜನಪ್ರಿಯ; ಬಂಡವಳಶಾಹಿಗಳು ಕ್ರಾಂತಿಪ್ರಿಯರ ಮೇಲೆ ಸವಾರಿ ಮಾಡುತ್ತಿದ್ದಾರೆ; ಅವರ ವಿಮೋಚನೆ ನಮಗೆ ಅತ್ಯಂತ ಪ್ರಿಯವೆಂದು ಸಾರುವ ಮಾವೋನ ಮನಸ್ಸು ಯುದ್ಧವನ್ನು ಬಯಸುತ್ತದೆಂಬ ಅರ್ಥ ಅವರ ಎಚ್ಚರಿಕೆಯಿಂದ ಬರುತ್ತದೆ. ಆದರೆ, ಮಾವೋನ ಶಕ್ತಿಸಾಮರ್ಥ್ಯಗಳು ಎಷ್ಟು ಎಂಬುದು ಎಲ್ಲರಿಗಿಂತ ಸ್ಪಷ್ಟವಾಗಿ ಅವರಿಗೇ ಗೊತ್ತು. ಇಂತಹ ಎಚ್ಚರಿಕೆ ಮಾವೋ ನೀಡುತ್ತಿರುವುದಿದು ಇದೇ ಮೊದಲಬಾರಿಯೂ ಅಲ್ಲ.

ಕ್ರಾಂತಿ—ಶಾಂತಿಗಳಲ್ಲಿ ಮೊದಲಿಗಾವುದು ಎಂಬುದು ಯಕ್ಷಪ್ರಶ್ನೆ. ಕ್ರಾಂತಿಯ ಬಳಿಕ ಶಾಂತಿಯೂ ಶಾಂತಿಯ ಬಳಿಕ ಕ್ರಾಂತಿಯೂ ಹಗಲಿರುಳುಗಳಂತೆ ಬರುತ್ತಿರುತ್ತವೆ. ಜನತೆ ಕ್ರಾಂತಿಯನ್ನು ಬಯಸುವುದಿಲ್ಲ; ಅದಕ್ಕೆ ಶಾಂತಿ ಬೇಕು. "ಸಹಅಸ್ತಿತ್ವ"ದ ತತ್ವವನ್ನು ಮನಗಾಣದ ಕ್ರಾಂತಿಪ್ರಿಯರು ಹೆಜ್ಜೆ ಹೆಜ್ಜೆಗೂ ಕ್ರಾಂತಿಯ ಕಿಡಿಗಳನ್ನು ಉದುರಿಸಿ ಶಾಂತಿಯನ್ನು ಸುಡುತ್ತಾರೆ. ಕಮ್ಯುನಿಸ್ಟರ ದೃಷ್ಟಿಯಲ್ಲಿ ಕಮ್ಯುನಿಸಂ ಮಾತ್ರ ಶಾಂತಿಕಾರಕ; ಇದಕ್ಕಾಗಿಯೇ ಕ್ರಾಂತಿ. ನಮ್ಮ ದೇಶದಲ್ಲಿಯೂ ಈ ಮನೋಭಾವ ಮೂಡಿ ಅರಾಜಕತೆಗೆಡೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಸರಕಾರವೆಂಬುದೊಂದಿದೆಯೆಂಬುದನ್ನೂ ನಂಬದಂತಹ ಪರಿಸ್ಥಿತಿ ಮಾಡಿದೆ. ಈ ಕಾರಣದಿಂದಲೇ ಕಮ್ಯುನಿಸಂ ವಿರೋಧ ಬೆಳೆಯುತ್ತಿದೆ. ತಮ್ಮ ವಿರೋಧಿಗಳನ್ನು ಕಮ್ಯುನಿಸ್ಟರು ಬಂಡವಾಳಶಾಹಿಗಳೆನ್ನಲಿ, ಸಾಮ್ರಾಜ್ಯವಾದಿಗಳೆನ್ನಲಿ, ಪ್ರಗತಿ ವಿರೋಧಿಗಳೆನ್ನಲಿ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲಿ, ವಿಶ್ವ ಕಮ್ಯುನಿಸಂನ ಧ್ಯೇಯ ಸಾಧನಾ ರೀತಿಯನ್ನು ಒಪ್ಪದ ಕೆಲವರಾದರೂ ಕಮ್ಯುನಿಸ್ಟರಿದ್ದಾರೆ. ಮಾವೋ ತನ್ನ ಶಕ್ತಿಯ ಬಲದಿಂದ ತೊಬ್ಬಿ ಮೂರನೆಯ ಲೋಕ ಸಮರವನ್ನು ಆಹ್ವಾನಿಸುವರಾದರೆ, ಆಗ ಲೋಕ ಮೂಕ ಪ್ರೇಕ್ಷಕನಂತೆ ಕುಳಿತುಕೊಳ್ಳುವುದಿಲ್ಲ; ಮಾವೋ ಲೋಕಸಮರದ ಕಿಡಿಯನ್ನು ಎಲ್ಲಿ ಉರಿಸುವರೆಂಬುದು ಅಸ್ಪಷ್ಟ, ಕಾಂಬೋಡಿಯಾವನ್ನೇ ಇದರ ರಂಗವನ್ನಾಗಿಸಲು ಆಶಿಸಿದ್ದಾರೆಯೇ? ಅಥವಾ ಈ ಎಚ್ಚರಿಕೆ ಹುಚ್ಚರ ಬಡಬಡಿಕೆ ಮಾತ್ರವೇ?

ಇದು ಅಂಧಾಭಿಮಾನವಲ್ಲ

ಕಾವೇರಿ ನೀರಿನ ಹಗರಣ ಕೇರಳ, ತಮಿಳುನಾಡು ಮತ್ತು ಕರ್ನಾಟಕಗಳ ನಡುವೆ. ಈ ಸಂಬಂಧದ ಮಾತುಕತೆಯೊಂದು ಮದ್ರಾಸದಲ್ಲಿ ನಡೆಯಿತು—ಕೇಂದ್ರ ನೀರಾವರಿ ಸಚಿವ ಡಾ| ಕೆ. ಎಲ್. ರಾಯರ ಸಮ್ಮುಖದಲ್ಲಿ. ಡಾ| ರಾಯರು ಆಂಧ್ರದವರು ಆದದರಿಂದ ದಕ್ಷಿಣ ವಲಯಾಧಿವೇಶನ ಕಾವೇರಿಗಾಗಿ ನಡೆದಂತಾಯಿತು. ಇದರ ಪರಿಣಾಮವೇನು? ಯಾರಿಗೂ ಏನೂ ಗೊತ್ತಿಲ್ಲ. ಸರಕಾರದ ಬೊಕ್ಕಸಕ್ಕೆ ಮಾತ್ರ ತೂತು ಬಿತ್ತು. ಮಾತುಕತೆಯ ಅನಂತರ ಒಬ್ಬೊಬ್ಬರದು ಒಂದೊಂದು ದಾರಿ. ಏನಾದರೂ ಒಡಂಬಡಿಕೆ ಸಾಧ್ಯವಾಗಬಹುದೆಂದೊಬ್ಬರು; ಈ ನಮ್ಮ ಯೋಜನೆಗಳಿಗೆ ಕೇಂದ್ರಾನುಮತಿ ದೊರೆತ ಬಳಿಕವೇ ಒಪ್ಪಂದಕ್ಕೆ ಸಹಿ ಎನ್ನುತ್ತಾರೆ ಇನ್ನೊಬ್ಬರು; ಒಪ್ಪಂದಕ್ಕೆ ಸಹಿಯಾದ ಬಳಿಕವೇ ಯೋಜನೆಗಳಿಗೆ ತಮ್ಮ ಸಮ್ಮತಿ ಎನ್ನುತ್ತಾರೆ [illegible] ಡಾ| ರಾಯರ ಮೌನ.

ನಿಜವಾದ ಪೈಪೋಟಿಯಿರುವುದು ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ. [illegible] ಮೇಲೆ ಪ್ರಧಾನಿ ಇಂದಿರಾಗಾಂಧಿಯವರ ಹಸ್ತವಿದೆ. ಡಿಯಂಕೆ [illegible] ಸಿಂಡಿಕೇಟಿನ ಹೊತ್ತು ಒಂದು ಪ್ರಬಲ ಸಿಂಡಿ[illegible]. ಹೊಸಪೇಟೆಗೆ ಉಕ್ಕಿನ ಕಾರಖಾನೆಯನ್ನೂ ಕರ್ನಾಟಕಕ್ಕೆ ಯೋಜನೇತರ ವೆಚ್ಚದಿಂದು ಹೆಚ್ಚಿಗೆ ಹಣವನ್ನೂ ಕೊಟ್ಟು ತಾನು ನಿಷ್ಪಕ್ಷಪಾತಿಯೆಂಬ ನಂಬಿಕೆ ಕನ್ನಡಿಗರಲ್ಲಿ ಮೂಡಿಸುವ ಪ್ರಯತ್ನ ಆಗಿದ್ದು. ಇದೆಲ್ಲ ಯಾಕೆ? ಬೆಳಗಾಂವಿಯನ್ನೂ ಕಾರವಾರವನ್ನೂ ಮಹಾರಾಷ್ಟ್ರಕ್ಕೆ ಸೇರಿಸುವುದಕ್ಕೆ, ಕಾವೇರೀ ನೀರನ್ನು ತಮಿಳರಿಗೆ ಕುಡಿಸುವುದಕ್ಕೆ! ಆಗ ಕನ್ನಡಿಗರು [illegible]

(ಆರನೇ ಪುಟ ನೋಡಿರಿ)

ತೆರಿಗೆಗಳು, ನಿಮ್ಮನ್ನು ಕಾಡುತ್ತಿವೆಯೋ?

ಆದಾಯ, ಬಹುಮಾನ ಮತ್ತು ಧನ ಇವುಗಳ ಮೇಲಿನ ತೆರಿಗೆಗಳೇ ನಿಮ್ಮನ್ನು ಕಕ್ಕಾಬಿಕ್ಕಿಗೊಳಿಸುತ್ತಿವೆಯೋ? ನಿರಾಶೆ ಪಡದಿರಿ! ಇಂಥಾ ಸಮಯದಲ್ಲಿ ನೀವು ಒಬ್ಬಂಟಿಗರಲ್ಲ!!! ಸಮಸ್ಯೆಯೊಂದನ್ನು ಪರಿಹರಿಸುವ ಒಂದು ರೀತಿಯು, ಅದನ್ನು ಇನ್ನೊಬ್ಬರಿಗೆ ವಹಿಸಿಕೊಡುವುದಾಗಿದೆ. ಆ ಇನ್ನೊಬ್ಬರು ನಿಮ್ಮ ಬ್ಯಾಂಕ್ ಆಗಿರಲಿ : ಸಿಂಡಿಕೇಟ್ ಬ್ಯಾಂಕ್. ನಿಮ್ಮ ತೆರಿಗೆಯ ಸಮಸ್ಯೆಗಳು ನಮ್ಮ ಚಿಂತೆಯಾಗಿರಲಿ.

ನಮ್ಮ 40'ಕ್ಕೂ ಮಿಕ್ಕಿದ ಶಾಖೆಗಳಲ್ಲಾವುದಾದರೂ ಒಂದರೊಡನೆ ದಯವಿಟ್ಟು ವಿಚಾರಿಸಿರಿ ಯಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :

ಟ್ಯಾಕ್ಸ್ ಸರ್ವಿಸ್ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ :
ಮಣಿಪಾಲ
(ಮೈಸೂರು ರಾಜ್ಯ)

ಕೆ. ಕೆ. ಪೈ
ಕಸ್ಟೋಡಿಯನ್

ಅನುಕೂಲಕ್ಕೊಂದು ಆತ್ಮಸಾಕ್ಷಿ

ಬಿರುಗಾಳಿಯೇಳುವಾಗ ಮನೆಯಿಂದ ಹೊರಬರದವರು, ದೂರದಲ್ಲಿಯೇ ಕೈ ಮುಗಿದು ಕೊಳ್ಳುವವರು ಶಾಂತವಾದ ಮೇಲೆ ಹೊರಬರುತ್ತಾರೆ; ಬಿರುಗಾಳಿಯನ್ನು ಶಪಿಸುತ್ತಾರೆ. ಮುರಿದ ಶಾಖೋಪಶಾಖೆಗಳಿಗಾಗಿ ಉದುರಿದ ಹಕ್ಕಿಗೂಡು ದರೆಗಳಿಗಾಗಿ ಉರುಳಿದ ಮರಗಿಡಬಳ್ಳಿಗಳಿಗಾಗಿ ಆಘಾತಕ್ಕೀಡಾದ ವಿಶ್ವ ಜೀವಿತಗಳಿಗಾಗಿ ಅನುತಾಪ ಪಡುತ್ತಾರೆ. ಬಿರುಗಾಳಿಯೇ ಬಗೆಬಗೆಯೆಂದು ಅಜ್ಞೆ ಮಾಡುತ್ತಾರೆ; ಅನಾಹುತಕ್ಕೆ ಕಾರಣವೆಂದು ಅದು-ಇದನ್ನು ಬೊಟ್ಟು ಮಾಡಿ ಹೋಗುತ್ತಾರೆ.

ಮುಂಬಯಿಯಲ್ಲಿ ನಡೆದ ಕೋಮು ಗಲಭೆಗಳು ಶಾಂತವಾದ ಮೇಲೆ ಪ್ರಧಾನಿ ಶ್ರೀಮತಿ ಗಾಂಧಿಯವರು ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು. ತಮ್ಮ ಸಂತಾಪ-ಅನುಕಂಪ-ಸಹಾನುಭೂತಿ—ಮತ್ತಿನ್ನೇನೇನೊ ಸಮರ್ಪಿಸಿದರು. ತನಗಿಂತ ವಯಸ್ಸಿನಲ್ಲಿ ಮುದುಕರಾದವರಿಂದ ಕಾಲು ಹಿಡಿಸಿಕೊಂಡರು. ದೇಶದ ಪ್ರಧಾನಿಯೊಂದಮೇಲೆ ಸರಕಾರಿ ವೆಚ್ಚದಲ್ಲಿ ಇಂತಹ ಸಂಚಾರ ಮಾಡುವುದು ಅಗತ್ಯವೇ. ಅಂದು ಅಹಮ್ಮದಾಬಾದದ ಗಲಭೆಯು ಶಾಂತವಾಯಿತೆಂದ ಮೇಲೆ ತನ್ನ ಕಾರ್ಯಕ್ರಮ ಬದಲಿಸಿ ಆಕೆ ಕಲಕತ್ತೆಯಿಂದ ಹಾರಿಬರಲಿಲ್ಲವೆ?

ಲೋಕಸಭೆಯಲ್ಲಿ ಆಕೆ ಭಾರತೀಯ ಜನಸಂಘವೇ ಜಾತೀಯ ಗಲಭೆಗಳಿಗೆ ಕಾರಣವೆಂದು ಹೇಳಿದಳು. ಜನಸಂಘವು ಜಾತೀಯ ಪಕ್ಷವೆಂದು ಇಡಿ ಕಾಂಗ್ರೆಸ್ಸಿನ ಪ್ರಧಾನಿ ಜವಾಹರಲಾಲರು ಹೇಳುತ್ತ ಬಂದಿರುವುದನ್ನೇ ಇಂದು ಅವರ ಮಗಳು ಕಡಿ ಕಾಂಗ್ರೆಸ್ಸಿನ ಇಂದಿರಾ ಗಾಂಧಿಯವರೂ ಹೇಳುತ್ತಾರೆ. ಅಪ್ಪಿತಪ್ಪಿಯಾದರೂ ಅವರು ಮುಸ್ಲಿಂಲೀಗಿನ ಹೆಸರೆತ್ತುವುದಿಲ್ಲ. ಅಲ್ಪಸಂಖ್ಯಾತರು ಅಧಿಕಸಂಖ್ಯಾತರನ್ನು ಧಿಕ್ಕರಿಸುವುದು, ಅಧಿಕಸಂಖ್ಯಾತರ, ಅಲ್ಪಸಂಖ್ಯಾತರನ್ನು ಕಡೆಗಣಿಸುವುದು—ಇದೇ ಜಾತೀಯ ಗಲಭೆಗಳಿಗೆ ಮೂಲ ಹೇತು. ಇದರಲ್ಲಿ ಒಂದೇ ಕೋಮಿನ ಅಪರಾಧ ಮಾತ್ರವೆಂದರೆ, ಏಕಪಕ್ಷೀಯವಾಗಬಹುದು. ಪರಸ್ಪರರ ಭಾವನೆಗಳನ್ನು ಅರ್ಥಮಾಡಿಕೊಂಡು ಅವನ್ನು ಗೌರವಿಸುವ ಉದಾರತೆ ಪ್ರತಿ ಕೋಮಿನಲ್ಲಿಯೂ ಮೂಡಬೇಕು. ಪ್ರಧಾನಿ ಇಂದಿರಾ ಗಾಂಧಿ ಭಾಷಣ ಬಿಗಿಯುವುದನ್ನು ಕಡಿಮೆ ಮಾಡಿ ಕೋಮು-ಕೋಮುಗಳಲ್ಲಿ ಸೌಹಾರ್ದತೆ-ಸದ್ಭಾವನೆ ಹೆಚ್ಚುವಂತೆ ರಚನಾತ್ಮಕ ಕಾರ್ಯಕ್ರಮ ಕೈಕೊಳ್ಳಬೇಕು. ಇಲ್ಲವಾದರೆ, ನಾವು ಈ ಶತಮಾನದ ಐದನೆಯ, ನಾಲ್ಕನೆಯ ದಶಕಕ್ಕೆ ಇಳಿಯುತ್ತೇವೆ; ಬಿಟ್ಟದಷ್ಟು ಭಾಷಣ ಬಿಗಿಯುವುದರಿಂದ ಏನೂ ಉಪಯೋಗವಿಲ್ಲ; ಉಪಯೋಗವಿರುವುದು ಎಳ್ಳಷ್ಟಾದರೂ ಕಾರ್ಯದಿಂದ.

o o o

ರಾಷ್ಟ್ರಪತಿ ಚುನಾವಣೆಯ ವೇಳೆ ಪಕ್ಷದ ಶಿಸ್ತು ಬಹಳ ಭಾರವಾಗಿ ಅನಿಸಿದ್ದ ಪ್ರಧಾನಿ ಇಂದಿರಾಗಾಂಧಿ ಆತ್ಮಸಾಕ್ಷಿಯ ಜ್ಯೋತಿಯನ್ನೆತ್ತಿ ಹಿಡಿದು ಇಂಡಿ ಕಾಂಗ್ರೆಸ್ಸಿಗೆ ಕವಲದಾರಿ ತೋರಿಸಿದರು; ಮೊನ್ನೆ ಮೊನ್ನೆ ಬೆರಳೆಣಿಕೆಯ ಐ. ಸಿ. ಎಸ್. ಅಧಿಕಾರಿಗಳ ವಿಶೇಷ ಸೌಲಭ್ಯಗಳನ್ನು ಕಿತ್ತುಕೊಳ್ಳಲು ಮಂಡಿಸಿದ ಮಸೂದೆಗೆ ಬೆಂಬಲ ನೀಡಬೇಕೆಂದ ಪಕ್ಷದ "ಶಿಸ್ತು ಬೇಡಿ" ಸದಸ್ಯರ ಕೈಗೆ ತೊಡಿಸಿದರು. ಆದರೆ, ಆತ್ಮಸಾಕ್ಷಿ ಪ್ರಿಯರು ಮತದಾನದಿಂದಲೇ ತಪ್ಪಿಸಿಕೊಂಡಿದ್ದರಿಂದ ಸದ್ಯಕ್ಕೆ ಆ ಅಧಿಕಾರಿಗಳು ಬದುಕಿ ಉಳಿದರು.

ರಾಜ-ಮಹಾರಾಜ-ನವಾಬ-ಬೇಗಂ ಮೊದಲಾದವರಿಗೆ ಸಲ್ಲುತ್ತಿದ್ದ ಪೊಗದಿ; ಅವರಿಗೆ ಸಂವಿಧಾನ ದತ್ತವಾದ ವಿಶೇಷ ಸೌಲಭ್ಯಗಳ ಅಪಹರಣದ ಪ್ರಶ್ನೆ ಬಹಳ ದಿನಗಳಿಂದಲೂ ಎದುರು ಬಂದದ್ದು. ಸದ್ಯ ಇದನ್ನು ಸಾಧಿಸಲು ಸಂವಿಧಾನಕ್ಕೆ ಇಪ್ಪತ್ತನಾಲ್ಕನೇ ತಿದ್ದುಪಡಿ ಮಂಡಿತವಾಯ್ತು. ತನ್ನ "ಪ್ರತಿಷ್ಠೆ"ಯ ಈ ಮಸೂದೆಗೆ ವಿರೋಧಿ ಪಕ್ಷೀಯರ ಬೆಂಬಲ ದೊರೆತರೂ, ಆಡಳಿತ ಪಕ್ಷೀಯರಲ್ಲೇ ತೀವ್ರ ಭಿನ್ನಮತ. ಈ ಪ್ರಶ್ನೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಸಲಹೆ ಕೇಳಿರೆಂಬ ಸುಮಾರು ೭೫ ಸದಸ್ಯರ ಮನವಿಯನ್ನು ಇಂಡಿಕೇಟ್ ತಿರಸ್ಕರಿಸಿತು, ಅದರ ಮೇಲೆ ಈ ಮಸೂದೆಯ ಮೇಲೆ ಮತದಾನ ನಡೆಯುವಾಗ ತನ್ನ ಪಕ್ಷದ ಸದಸ್ಯರೆಲ್ಲರೂ ಹಾಜರಿದ್ದು ಸರಕಾರದ ಪರ ಮತ ನೀಡಬೇಕೆಂದು 'ವಿಪ್' ಹೊರಡಿಸಿತು.

ಸದಸ್ಯರ ಮೇಲೆ ವಿಪ್‌ನ ಹೊರೆ ಹೊರಿಸಿ, ಅವರನ್ನು ಆತ್ಮಸಾಕ್ಷಿ ಪಥದಿಂದ ಹಿಂದೆಬರುವಂತೆ ಮಾಡುವುದು ಕೆಲವರಿಗೆ ಇಷ್ಟವಿಲ್ಲ. ಪಕ್ಷದಲ್ಲಿ ಶಿಸ್ತು ಬೇಕು ಎಂಬುದನ್ನು ಶ್ರೀಮತಿ ಗಾಂಧಿಯವರು ಶ್ರೀ ರಾಮ-ಫಕ್ರುದ್ದೀನಾಲಿಯವರೂ ಈಗಲಾದರೂ ಒಪ್ಪಿಕೊಂಡದ್ದು ಸಂತೋಷಕರ.

o o o

ರಾಜ್ಯಕೀಯ ಪಕ್ಷಗಳಲ್ಲಿ ಪಕ್ಷೀಯ ಶಿಸ್ತು ಬೇಕು ಎಂದು ಶ್ರೀ ಎಸ್ಸೆನ್ ಪ್ರಭೃತಿಗಳು ಅಂದಾಗ ಶ್ರೀ ಜಗಜ್ಜೀವನರಾಮರು ಅದನ್ನು ಧಿಕ್ಕರಿಸಿ ಶ್ರೀಮತಿ ಗಾಂಧಿಯವರ ಸೆರಗಿನೊಳಗೆ ಮುಖವಡಗಿಸಿ ತಂಪು ಮಾಡಿಕೊಂಡರು. ಶಿಸ್ತಿನ ಮಹತ್ವವೆಷ್ಟು ಎಂಬುದು ಅವರಿಗೆ ಇಂಡಿಕೇಟಿನ ಅಧ್ಯಕ್ಷ ಗದ್ದುಗೆಯ ಮೇಲೆ ಒಂದು ಕಾಲಿಟ್ಟ ಮೇಲೆ ತಿಳಿಯಿತು. ಒರಿಸ್ಸದ ಶ್ರೀ ಸಿಂಗದೇವರ ಸರಕಾರವುರುಳಿಸುವ ಅವರ ಪಿತೂರಿ ಭಂಗವಾದದ್ದು ಮಾತ್ರವಲ್ಲ, ತಮ್ಮ ಅಭ್ಯರ್ಥಿ ರಾಜ್ಯಸಭಾ ಚುನಾವಣೆಗಳಲ್ಲಿ ಸೋತು ಹೋದುದನ್ನು ಅವರು ಗಂಭೀರವಾಗಿ ಪರಿಗಣಿಸಿದರು.

ಮಾಜಿ ಮುಖ್ಯ ಮಂತ್ರಿ ಶ್ರೀ ಬಿಜು ಪಟ್ನಾಯಕರು ಇಂಡಿಸಿಂಡಿ ಕೋಳಿಕಾಳಗದಲ್ಲಿ ಇಂಡಿಕೇಟಿನ ಹಿಂದೆ ನಿಂತು ಗಾಳಿ ಹಾಕಿದರು. ಒರಿಸ್ಸ ಪ್ರಾದೇಶಿಕ ಕಾಂಗ್ರೆಸ್ಸಿನ ಮೇಲೆ ತನ್ನ ಹತೋಟಿಯಿರುವ ಬಿಜೂ ರಾಜ್ಯಕೀಯದ ಹಳೆಯ ಹುಲಿ. ಪ್ರಾದೇಶಿಕ ಕಾಂಗ್ರೆಸ್ಸು ಶಿಫಾರಸು ಮಾಡಿದ ಅಭ್ಯರ್ಥಿಯನ್ನು ಕೇಂದ್ರನಾಯಕರು ಒಪ್ಪದೆ ಬೇರೆಯವರನ್ನು ಆಯ್ಕೆ ಮಾಡಿದರು—ಪರಿಣಾಮ ಸೋಲು. ಬಿಜೂ ಪಟ್ನಾಯಕರು ಅಧಿಕೃತ ಅಭ್ಯರ್ಥಿಯನ್ನು ಬೆಂಬಲಿಸಲಿಲ್ಲ; ಅವರಿಗೆ ವಿರುದ್ಧವಾಗಿ ಪ್ರಚಾರ ಮಾಡಿದರು ಎಂಬ ಶಿಸ್ತು ಭಂಗದ ಆರೋಪದ ಮೇಲೆ ಅವರನ್ನು ಶ್ರೀ ರಾಮರು ಪಕ್ಷದಿಂದ ಹೊರ ತಳ್ಳಿದರು.

ಪ್ರಧಾನಿ ಶ್ರೀಮತಿ ಗಾಂಧಿಯವರು ಕಾಂಗ್ರೆಸ್ಸಿನ ಅಧಿಕೃತ ಅಭ್ಯರ್ಥಿಯನ್ನು ಬೆಂಬಲಿಸಲು ನಿರಾಕರಿಸಿ ಆತ್ಮಸಾಕ್ಷಿಯನ್ನು ಎತ್ತಿ ಹಿಡಿದದ್ದರಿಂದ ಆಕೆಯನ್ನು ಪಕ್ಷದಿಂದ ಶ್ರೀ ಎಸ್ಸೆನ್ ಹೊರ ಹಾಕಿದ್ದು ಅನ್ಯಾಯ-ಅಪರಾಧವೆನ್ನುವ ಶ್ರೀ ರಾಮ್ ಈಗ ತಾವೇನು ಮಾಡಿದರು? ಇದರ ಅರ್ಥವೇನು? ಪಕ್ಷದಲ್ಲಿ ಶಿಸ್ತು, ಸಂಹಿತೆ ಅಗತ್ಯ ಬೇಕು; ಆದರೆ, ತಮ್ಮ ರಾಜ್ಯಕೀಯ ಉದ್ದೇಶ ಸಾಧನೆಗಳಿಗಾಗಿ ಆತ್ಮಸಾಕ್ಷಿಯ ದೀಪವನ್ನು ಎತ್ತಿ ಹಿಡಿಯಬೇಕು—ಪ್ರಧಾನಿ ಗುಂಪಿನ ಈ ದ್ವಿಮುಖ ಮುಖವಾಡ ಈಗ ಬಯಲಾಯಿತು.

o o o

ಛಪ್ಪನ್ನ ದೇಶಗಳ ಭರತ ಖಂಡ ಬ್ರಿಟಿಷರ ಆಡಳಿತ ವೇಳೆ ಏಕ ಸೂತ್ರ ಬಂಧಿತ. ಆದರೆ, ಸ್ವಾತಂತ್ರ್ಯಾನಂತರ ಸೂತ್ರ ಶಿಥಿಲ-ಶಿಥಿಲತರ. ದೇಶವ್ಯಾಪಿಯಾಗಿ ಕೋಮು ಭಾವನೆ, ಪ್ರಾದೇಶಿಕ ಭಾವನೆ ಭಾಷಾಭಾವನೆ ಜಾಗೃತ. ಯಾವುದೂ ಅಪರಾಧವಲ್ಲ. ಅತಿ ಸರ್ವತ್ರ ವರ್ಜಯೇತ್ ಎಂಬುದು ಬುದ್ಧಿಜೀವಿಗಳ ಉಪದೇಶ. ಮದುವೆಯಾಗಿಯೂ ಬ್ರಹ್ಮಚಾರಿಯಾಗಿರಬೇಕೆಂಬ ಬುದ್ಧಿವಾದ. ಮಾನವನ ಮನಸ್ಸು ತಾನೆ?

ಒಂದು ಕಾಲದಲ್ಲಿ ಅಖಂಡ ಪಕ್ಷವಾಗಿದ್ದ ಕಾಂಗ್ರೆಸ್ ಕೂಡ ಕೆಲವು ರಾಜ್ಯಗಳಲ್ಲಿ ತಾಯಿಯ ಸಂಬಂಧದಿಂದ ಮುಕ್ತ. ಕೇರಳ ಕಾಂಗ್ರೆಸ್ಸು, ಬಂಗ್ಲಾ ಕಾಂಗ್ರೆಸ್ಸು, ಜನ ಕಾಂಗ್ರೆಸ್ಸು ಇ. ಇ. ಆ ಮೇಲೆ ಹಲವು ದಾಖಲೆ ಸ್ಥಾಪಿಸಿದ [illegible] ಇಂಡಿ ಸಿಂಡಿಕಾಂಗ್ರೆಸ್‌ಗಳ ಜನ್ಮಧಾರಣೆ ಈಗ ಒರಿಸ್ಸಾದ ಕಾಂಗ್ರೆಸ್ಸು ಎರಡಿದ್ದುದು ಮೂರು ಸಿಂಡಿ-ಇಂಡಿಗಳಲ್ಲದೆ ಬಿಜೂ ಪಟ್ನಾಯಕರ ಕಾಂಗ್ರೆಸ್ಸು. ಉತ್ಕಲ ಪ್ರಾದೇಶಿಕ ಕಾಂಗ್ರೆಸ್ಸು ಬಿಂಡಿ ಕಾಂಗ್ರೆಸ್ಸಾಯಿತು. ಇದೇ ಮಾದರಿಯನ್ನು ಉಳಿದ ರಾಜ್ಯಗಳೂ ಅನುಸರಿಸುವ ಸಂಭವವಿಲ್ಲದಿಲ್ಲ. ಗುಜರಾಥದ ಸ್ವತಂತ್ರ ಪಕ್ಷ ಮತ್ತು ಜನಸಂಘದೊಡನೆ ಸಿಂಡಿಕಾಂಗ್ರೆಸ್ಸು ಒಪ್ಪಂದ ಮಾಡಿಕೊಳ್ಳುವುದನ್ನು ಅಲ್ಲಿನ ಕಾಂಗ್ರೆಸ್ಸು ಖಂಡಿಸಿದೆ. ಈ ಖಂಡನೆಯನ್ನು ಅಲ್ಲಗಳೆದರೆ, ಅಲ್ಲಿ ಬಿಂಡಿ ಕಾಂಗ್ರೆಸ್ಸು ಹುಟ್ಟಿಕೊಳ್ಳಬಹುದು. ಹಾಗೆಯೇ ಮಹಾರಾಷ್ಟ್ರದಲ್ಲಿ ಚಿಂಡಿ, ತಮಿಳುನಾಡಿನಲ್ಲಿ ಕಿಂಡಿ, ಉತ್ತರ ಪ್ರದೇಶದಲ್ಲಿ ಗುಂಡಿ..... ...

ರಾಜ್ಯಕೀಯ ಪಕ್ಷಗಳ ಧಾಂಧಾಧುಂಧಿ ವ್ಯಾಪಾರ ನೀತಿ ಪ್ರಜೆಗಳಿಗೆ ನೆಮ್ಮದಿ ತರುವುದಿಲ್ಲ. ಅದಕ್ಕಾಗಿಯೇ, ನಿವೃತ್ತ ಮಹಾದಂಡನಾಯಕ ಕಾರಿಯಪ್ಪನವರು ಕೆಲವು ವರ್ಷ ರಾಷ್ಟ್ರಪತಿ ಆಳಿಕೆಯ ಸಲಹೆ ಮುಂದಿಟ್ಟು ಟೀಕೆಗೊಳಗಾದರು. ಈಗ ಕೆಲವು ರಾಜ್ಯಗಳಲ್ಲಿ ರಾಷ್ಟ್ರಪತಿ ಆಳಿಕೆ ಬೇಕೆಂಬ ಸಲಹೆ ಮಾಡಿ ಇನ್ನೊಮ್ಮೆ ಟೀಕೆಗೆ ಗುರಿಯಾಗುತ್ತಿದ್ದಾರೆ.

o o o

ಭಾರತದ ಶಿರಸ್ತ್ರಾಣ ಜಮ್ಮು-ಕಾಶ್ಮೀರದ ಪ್ರಾದೇಶಿಕ ಕಾಂಗ್ರೆಸ್ಸಿನಲ್ಲಿ ಪಕ್ಷ ಮತ್ತು ಸರಕಾರಿ ಪಕ್ಷಗಳ ನಡುವಣ ಪರಕ ಕಾಶ್ಮೀರದಷ್ಟೇ ಪ್ರಾಚೀನ. ಮೀರ್ ಕಾಸಿಂ-ಸಾದಿಕ್ ಅಲಿಗಳ ನಡುವಣ ಭಿನ್ನಮತ ಇಂಡಿಯಾ ರಬ್ಬರು. ಬೇಕಾದಾಗ ಸಂಕೋಚಗೊಳ್ಳುತ್ತದೆ. ಬೇಕಾದಾಗ ದೀರ್ಘವಾಗುತ್ತದೆ. ಇದನ್ನು ಹದಕ್ಕೆ ತರುವುದರಲ್ಲಿ ಪಂ. ಜವಾಹರಲಾಲರೇ ಸಂಪೂರ್ಣ ವಿಫಲರಾಗಿದ್ದರೆಂದ ಮೇಲೆ, ಕಾಮರಾಜ, ಎಸ್ಸೆನ್, ಶ್ರೀ ರಾಮರಿಂದೇನಾದೀತು? ಹಲವು ಬಾರಿ ಸಂಧಾನವಾಯ್ತು; ಬೆನ್ನ ಹಿಂದೆಯೇ ಭಿನ್ನಮತ ಅಭಿವ್ಯಕ್ತವಾಯ್ತು.

ಕಾಂಗ್ರೆಸ್ ಕಾಳಗದ ವೇಳೆ ಪ್ರಧಾನಿಯ ಬೆನ್ನ ಹಿಂದೆ ನಿಂತ ಕಾಶ್ಮೀರ ಕಾಂಗ್ರೆಸ್ಸು ಅದರಿಂದಲೇ ಸ್ವಾರ್ಥಸಿದ್ಧಿಯೆಂದು ನಂಬಿದೆ; ಅದರೂ ಅಂತರ್ಯುದ್ಧ ನಿಲ್ಲ

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ನಾನಕರ ಶಿಷ್ಯವರ್ಗ

ಲೇಖಕರು : ಶ್ರೀ ರಣಬೀರ್ ಸಿಂಗ್

ಬಾಲ್ಯದಿಂದಲೇ ಗುರುನಾನಕರಲ್ಲಿ ದೈವೀ ತೇಜಸ್ಸು ಇತ್ತು. ಗುರುನಾನಕರ ಅಕ್ಕನಿಗೆ ಈ ವಿಷಯ ಗೊತ್ತಿತ್ತು. ಆದರೆ ಅಳೆ ಈ ಸಂಗತಿಯನ್ನು ಯಾರೆದುರಿಗೂ ಹೇಳದೇ ಗೋಪ್ಯವಾಗಿಟ್ಟಿದ್ದಳು. ಗುರುನಾನಕರಿಗೆ ದೇವರಿಂದ ಕರೆಬಂದು, ಅವರು ದೇಶ ಸಂಚಾರಕ್ಕೆ ಹೊರಟು ನಿಂತರು. ಆಗ ಅವರ ಪ್ರಥಮ ಶಿಷ್ಯೆ ಅಕ್ಕ ಗುರುನಾನಕರನ್ನು ಈ ರೀತಿ ಕೇಳಿಕೊಂಡಳು:

"ಗುರುದೇವ, ನೀವು ನಮ್ಮಲ್ಲಿ ಭಕ್ತಿಯ ಬೀಜವನ್ನು ಬಿತ್ತಿದೆ. ಅದಕ್ಕೆ ನೀರೆರೆದು ಪೋಷಿಸಿದೆ. ಈ ಬೀಜ ಸಸಿಯಾಗಿ ಹೂಬಿಡುವುದನ್ನು ಕಂಡೆ. ಈಗ ನೀನಿಲ್ಲದೆ, ಅದು ಇರುವುದಾದರೂ ಎಂತು? ನೀವು ನಮ್ಮಿಂದ ಅಗಲುವುದನ್ನು ನಾವು ಹೇಗೆ ಸೈರಿಸಿಕೊಳ್ಳ ಬಲ್ಲೆವು?"

ಆಗ ಗುರುನಾನಕರು "ಅಕ್ಕ, ಇದು ಸ್ವರ್ಗದ ಕರೆ. ನಾನು ಈಗ ನನ್ನ ಕಾಲುಗಳು ಯಾವ ಕಡೆಗೆ ಕರೆದುಕೊಂಡು ಹೋಗುವವೊ, ಆ ಕಡೆ ಹೋಗಲೇ ಬೇಕು. ಎಲ್ಲಾ ಕಡೆಗೂ ಅಶಾಂತಿ ಇದೆ. ನೀನು ನಿನ್ನ ಭಾವನೆಗಳನು ಒಂದು ಕ್ಷಣ [illegible]ಹಿಸಿಕೊಂಡರೆ, ಅನೇಕರಿಗೆ ಶಾಂತಿ ದೊರಕುತ್ತದೆ. ಜೀವನದಲ್ಲಿ ಬೆಳಕ ಗೋಚರಿಸುತ್ತದೆ. ನೀನು ನನ್ನನ್ನು ನೆನಸಿಕೊಂಡಾಗಲೆಲ್ಲ ನಾನು ನಿನ್ನ ಬಳಿಯಲ್ಲೇ [illegible] ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ನಾನು ನಿನಗೆ ದರ್ಶನ ನೀಡುತ್ತೇನೆ" ಎಂದು ಹೇಳಿದರು.

ಗುರುನಾನಕರು ಮನೆಯನ್ನು ತ್ಯಜಿಸಿದರು. ವಿಶ್ವದಲ್ಲಿ ಪ್ರೇಮ ಅವರ ಕೈಹಿಡಿದು ನಡೆಸಿತು. ಅವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ—ಪ್ರವಾಸ ಮಾಡುತ್ತ ಭಕ್ತರಿಗೆ ದೇವರ ಸಂದೇಶವನ್ನು ತಲುಪಿಸಿದರು. ದೇವರ ಸಾಕ್ಷಾತ್ಕಾರದ ರಹಸ್ಯವನ್ನು ಹೇಳಿದರು. ಈ ಒಂದು ಯಾತ್ರೆಯಲ್ಲಿ ಅವರು ಅನೇಕ ಜಾತಿ—ಮತ ಧರ್ಮಗಳ ಜನರನ್ನು ಭೇಟಿಯಾದರು. ಅವರಿಗೆ ತಮ್ಮ ಪ್ರೇಮ ಸಂದೇಶವನ್ನು ಬೀರಿದರು.

ಬಾಯಿ ಭಾಲೋ—ಭಕ್ತನಾದ

ಗುರುನಾನಕರು ಪ್ರವಾಸ ಮಾಡುತ್ತ ಮೊದಲು ಎಮಿನಾಬಾದ್‌ನಲ್ಲಿ ತಂಗಿದರು. ಈಗ ಈ ಊರು ಪಾಕಿಸ್ತಾನದಲ್ಲಿದೆ. ಎಮಿನಾಬಾದ್‌ನಲ್ಲಿ ಅವರು ಒಬ್ಬ ಬಡವನಾದ ಬಡಿಗನ ಮನೆಯಲ್ಲಿದ್ದರು. ನಾನಕರು ಈ ಬಡಗಿಯ ಮನೆಗೆ ಮೊದಲು ಹೋದಾಗ, ಬಡಿಗ ಲಾಲೋ ಮನೆಯ ಅಂಗಳದಲ್ಲಿ—ಬಾಗಿಲ ಕಡೆಗೆ ಬೆನ್ನು ಮಾಡಿಕೊಂಡು ಕುಳಿತಿದ್ದ. ಕೆಲಸದಲ್ಲಿ ತಲ್ಲೀನನಾಗಿದ್ದ "ಲಾಲೋ, ಏನು ಮಾಡುತ್ತಿದ್ದೀ" ಎಂದು ಗುರುನಾನಕರು ಕೇಳಿದರು. ತನ್ನ ಪರಿಚಯದವರು ಯಾರೋ ಬಂದಿರಬೇಕು ಎಂದು ಲಾಲೋ ಭಾವಿಸಿದ. ತಲೆಯನ್ನು ಕೂಡ ಎತ್ತದೇ "ಚಟ್ಟಿಗೆಯ ಗೂಟಗಳ [illegible] ಮಾಡುತ್ತಿದ್ದೇನೆ" ಎಂದು ಹೇಳಿದ.

"ಚಟ್ಟಿಗೆ [illegible] ಗೂಟ [illegible] ದ [illegible] ಮಾಡುವುದೇ? ಜೀವನದಲ್ಲಿ [illegible] ಬೇರೆ ಯಾವ ಕೆಲಸ ಇಲ್ಲವೇ? ಬಾ [illegible] ಪರಿವರ್ತನೆ ಹೇಗೆ ಮಾಡಿಕೊಳ್ಳಬೇಕು [illegible] ಎಂಬುದನ್ನು ನಾನು ನಿನಗೆ ಕಲಿಸುತ್ತೇನೆ" ಗುರುನಾನಕರ ನುಡಿಗಳು ಲಾಲೋನ ಹೃದಯಕ್ಕೆ ಮುಟ್ಟಿದವು. ಲಾಲೋ ತಲೆ ಎತ್ತಿ ನೋಡಿದ. ಅತ್ಯಂತ ವಿನಯ ಹಾಗೂ ಭಕ್ತಿಯಿಂದ ಗುರುಗಳಿಗೆ ನಮಸ್ಕರಿಸಿದ. ಜೀವನದ ಬಹುಕಾಲ ಸಮಯವನ್ನು ವ್ಯರ್ಥವಾಗಿ ಕಳೆದದ್ದಕ್ಕಾಗಿ ಲಾಲೋಗೆ ಪಶ್ಚಾತ್ತಾಪವಾಯಿತು. ಲಾಲೋ ಈಗ ಸಂಪೂರ್ಣವಾಗಿ ಬದಲಾಯಿಸಿದ್ದ. ದೇವರನ್ನು ಸ್ತುತಿಸುವ ಪದ್ಯವೊಂದನ್ನು ಗುರುನಾನಕರು ಲಾಲೋನಿಗೆ ಹೇಳಿಕೊಟ್ಟರು; ಇದು ಗುರುನಾನಕರು ಲಾಲೋನಿಗೆ ನೀಡಿದ ಪ್ರಥಮ ಅಮೂಲ್ಯ ಕಾಣಿಕೆ.

ಸಂತರೊಬ್ಬರು ಬಡವನಾದ ಬಡಿಗ ಲಾಲೋನ ಮನೆಯಲ್ಲಿ ತಂಗಿರುವರೆಂಬ ಸುದ್ದಿ ಆ ಪಟ್ಟಣದ ಪ್ರಮುಖ ಮಲ್ಲಿಕ ಭಾಗೋನಿಗೆ ಮುಟ್ಟಿತು. ಮಲ್ಲಿಕ ಭಾಗೋ ದುಷ್ಟನಾಗಿದ್ದ. ದುರಾಚಾರಿಯಾಗಿದ್ದ. ಬಡವರನ್ನು ಹಿಂಸಿಸಿ ಅವರಿಂದ ಹಣ ಕಿತ್ತುಕೊಳ್ಳುತ್ತಿದ್ದ. ಹೀಗಿರೆ ವಾಸ ಒಮ್ಮೆ ಅವನು ಗುರುನಾನಕರನ್ನೂ ತನ್ನ ಮನೆಗೆ ಭೋಜನಕ್ಕೆ ಆಹ್ವಾನಿಸಿದ. ಮೃಷ್ಟಾನ್ನ ಭೋಜನ ನಮ್ಮ [illegible] ರೊಟ್ಟಿಗಳನ್ನು [illegible] ಪೂಜ್ಯರೇ, ಇಂಥ ಮೃಷ್ಟಾನ್ನ ಭೋಜನವನ್ನು ಬಿಟ್ಟು [illegible] ನ ಯಕಶ್ಚಿತ್ ಊಟ ಮಾಡುವುದು [illegible]" ಎಂದು ಕೇಳಿದ.

ಗುರುನಾನಕರು ಹೇಳಿದರು:

"ನನಗೆ ಜಾತಿ—ವಿಜಾತಿಯೆಂಬ ಭೇದವಿಲ್ಲ. ನೀನು ದುರ್ಮಾರ್ಗಗಳಿಂದ ಧನ ಸಂಚಯ ಮಾಡಿರುವೆ. ನಿನ್ನ ಈ ರೊಟ್ಟಿ ಬಡವರ ರಕ್ತವನ್ನು ಹೀರಿದೆ. ಆದ್ದರಿಂದ ನೀವು ನೀಡಿರುವ ಮೃಷ್ಟಾನ್ನವನ್ನು ನಾನು ಮುಟ್ಟಲಾರೆ".

ಗುರುನಾನಕರ ನುಡಿಗಳನ್ನು ಕೇಳಿ ಮಲ್ಲಿಕ ಭಾಗೋ ಕೋಪದಿಂದ ಸಿಡಿಮಿಡಿಗೊಂಡ. ತಾನು ದುರಾಚಾರಿ ಎಂಬುದನ್ನು ಸಿದ್ಧ ಮಾಡಿ ತೋರಿಸಬೇಕು ಎಂದು ಗುರುನಾನಕರನ್ನು ಕೇಳಿದ. ಗುರುನಾನಕರು ಲಾಲೋನ ಮನೆಯಿಂದ ರೊಟ್ಟಿಯ ತುಣುಕನ್ನು ತರುವಂತೆ ಹೇಳಿದರು. ಬಳಿಕ ಭಾಗೋನ ರೊಟ್ಟಿಯ ತುಣುಕನ್ನು ಒಂದು ಕೈಯಲ್ಲಿ ಹಾಗು ಲಾಲೋನ ರೊಟ್ಟಿಯ ತುಣುಕನ್ನು ಇನ್ನೊಂದು ಕೈಯಲ್ಲಿ ಹಿಡಿದುಕೊಂಡು; ಎರಡನ್ನೂ ತಮ್ಮ ಮುಷ್ಟಿಯಿಂದ ಹಿಸುಕಿದರು. ಆಗ ಏನಾಯಿತು ಗೊತ್ತೇ? ಭಾಗೋನ ರೊಟ್ಟಿಯ ತುಣುಕಿನಿಂದ ರಕ್ತ ಹೊರ ಚಿಮ್ಮಿತು. ಲಾಲೋನ ರೊಟ್ಟಿಯ ತುಣುಕಿನಿಂದ ಹಾಲು ಉಕ್ಕಿತು.

ಈ ದೃಶ್ಯವನ್ನು ಕಂಡು ಭಾಗೋನ ಭ್ರಾಂತಿ ದೂರವಾಯಿತು. "ಗಳಿಸಿದ ಸಂಪತ್ತನ್ನು ಬಡವರಿಗೆ ದಾನ ಮಾಡಿ, ಪ್ರಾಮಾಣಿಕ ಜೀವನ ಸಾಗಿಸು" ಎಂದು ಗುರು ಭಾಗೋನಿಗೆ ಉಪದೇಶ ಮಾಡಿದರು.

ಠಕ್ಕ ಸಜ್ಜನ—ಸಂತನಾದ

[illegible] ಪ್ರವಾಸ ಮಾಡುತ್ತ ಗುರುನಾನಕರಿಗೆ [illegible] ಮಾರ್ಗಮಧ್ಯೆ [illegible] ಶಿಸ [illegible] ದಾರ್ಗನು [illegible] ಗುರುನಾನಕರು ಸಜ್ಜನನ ಮನೆಗೆ ಬಂದರು. ಸಜ್ಜನ ಎಂದರೆ ಒಳ್ಳೆಯವ ಎಂದು ಅರ್ಥ. ಆದರೆ ಈ ಸಜ್ಜನ ಈ ಅರ್ಥಕ್ಕೆ ವಿರುದ್ಧವಾಗಿದ್ದ. ಯಾವಾಗಲೂ ಶುಭ್ರವಾದ ಉಡುಪು ಧರಿಸಿ, ಕೈಯಲ್ಲಿ ಗುಲಾಬಿ ಹೂ ಹಿಡಿದುಕೊಂಡು ಒಬ್ಬ ಬಹು ದೊಡ್ಡ ಧರ್ಮವಂತನಂತೆ ನಟಿಸುತ್ತಿದ್ದ. ಹೊಟೆಲ್ ಒಂದನ್ನು ನಡೆಸುತ್ತಿದ್ದ. ಹೊಟೆಲ್ಲಿನ ಮಹಾದ್ವಾರಕ್ಕೆ ಹೊಂದಿಕೊಂಡಂತೆ ಒಂದು ಕಡೆ ಹಿಂದೂದೇವಾಲಯವನ್ನು, ಇನ್ನೊಂದು ಕಡೆ ಮಸೀದಿಯನ್ನು ಕಟ್ಟಿಸಿದ್ದ. ದಾರಿಹೋಕರನ್ನು ಹೋಟಲಿಗೆ ಆಹ್ವಾನಿಸುತ್ತಿದ್ದ. ರಾತ್ರಿ ವಿಶ್ರಾಂತಿ ಪಡೆಯಬೇಕೆಂದು ಹೇಳುತ್ತಿದ್ದ. ಅತಿಥಿಗಳು ನಿದ್ರಾವಶರಾದರೆ ಸಾಕು. ಸಜ್ಜನ ಅವರ ಕಥೆ ಮುಗಿಸುತ್ತಿದ್ದ. ಹಾಗೂ ಅವರ ಸಾಮಾನು ಸರಕು ಎಲ್ಲವನ್ನೂ ದೋಚಿಕೊಳ್ಳುತ್ತಿದ್ದ. ಆ ದಿನವೂ ಸಜ್ಜನ ಗುರುವನ್ನು ತನ್ನ ಹೊಟೆಲಿಗೆ ಆಹ್ವಾನಿಸಿದ ಗುರು ಬಹಳ ದೊಡ್ಡ ಆಭರಣಗಳ ವ್ಯಾಪಾರಿ ಇರಬೇಕೆಂದು ಊಹಿಸಿದ. ಗುರುನಾನಕರಿಗೆ ಸ್ವಾದಿಷ್ಟವಾದ ಭೋಜನವನ್ನು ಉಣಬಡಿಸಿದ. ಬಳಿಕ ಗುರು ಶಿಷ್ಯರು ಮಲಗುವರೆಂದು ರಾತ್ರಿ ಬಹಳ ಹೊತ್ತಿನವರೆಗೂ ದಾರಿ [illegible] ಮಲಗುವುದನ್ನು [illegible] ಪೂಜ್ಯರೇ, [illegible] ಗೆ ಪ್ರಯಾಣದಿಂದ [illegible] ಆಗಿ [illegible] ಬರದೇ [illegible] ಎಂದ [illegible]. ಆಗ ಗುರುನಾನಕರು ಸಜ್ಜನನಿಗೆ "ನಮಗಿನ್ನೂ ನಿದ್ರೆಯ ಸಮಯ ಬಂದಿಲ್ಲ. ನಿನಗೆ ವಿಶ್ರಾಂತಿ ಬೇಕಿದ್ದರೆ ಹೋಗಿ ಮಲಗಿಕೋ. ದೇವರ ದೂತರು ದೇವರಿಂದ ಆಜ್ಞೆ ಬರುವವರೆಗೂ ವಿಶ್ರಾಂತಿ ಪಡೆಯುವುದಿಲ್ಲ." ಎಂದು ಹೇಳಿದರು. ಇದಾದ ಬಳಿಕ ಗುರುನಾನಕರು ಮರ್ದಾನನಿಗೆ ರಬಾಬ್ ನುಡಿಸುವಂತೆ ಹೇಳಿದರು. ತಾವು ಭಾವಪರವಶರಾಗಿ ಭಕ್ತಿ ಗೀತೆಯೊಂದನ್ನು ಹಾಡಿದರು. ಗುರುನಾನಕರ ಈ ಭಕ್ತಿಗೀತೆ ಠಕ್ಕನಾಗಿದ್ದ ಸಜ್ಜನನಿಗೆ ಹೊಸ ಮಾರ್ಗವನ್ನು ತೋರಿಸಿತು. ತನ್ನದು ಮಹಾಪರಾಧವಾಯಿತೆಂದೂ ತನ್ನನ್ನು ಕ್ಷಮಿಸಿ, ಉದ್ಧಾರ ಮಾಡಬೇಕೆಂದೂ ಗುರುಗಳ ಪಾದಗಳ ಮೇಲೆ ಬಿದ್ದು ಕೇಳಿಕೊಂಡ. ತಾನು ಇನ್ನೆಂದೂ ಪಾಪಕಾರ್ಯಗಳಲ್ಲಿ ತೊಡಗುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದ. ಗುರುಗಳು ಅವನಿಗೆ, ದುರ್ಮಾರ್ಗದಿಂದ ಗಳಿಸಿದ ಹಣವನ್ನೆಲ್ಲ ದಾನ ಮಾಡುವಂತೆ ಹೇಳಿದರು. ಬಳಿಕ ಅವನಿಗೆ ಮೋಕ್ಷದ ಮಾರ್ಗವನ್ನು ಉಪದೇಶಿಸಿದರು.

ಬ್ರಹ್ಮದಾಸ ಮತ್ತು ಕಮಲ

ಮೂರನೆಯ ಸಲ ಪ್ರವಾಸ ಕೈಗೊಂಡು ಗುರುನಾನಕರು ಸುಂದರವಾದ ಕಾಶ್ಮೀರ ಕಣಿವೆಗೆ ಭೇಟಿಕೊಟ್ಟರು. ಅಲ್ಲಿ ಬ್ರಹ್ಮದಾಸ ಹಾಗೂ ಕಮಲ ಗುರುಗಳ ಉಪದೇಶದಿಂದ ಪ್ರಭಾವಿತರಾದರು. ಗುರುಗಳು ಆಜ್ಞೆ [illegible] ಕಮಲ [illegible] ಣಿ [illegible] ಲ್ಲಿ [illegible] ಮಾಡಿ [illegible] ಲ್ಲಿ [illegible] ರ [illegible] ಬಾವಿಗೆ [illegible] ಬಟ್ಟೆಗೆ [illegible] ಜೊತೆ ಗ್ರಂಥ [illegible] ಸ್ನೇ ಹೊರಿಸಿಕೊಂಡು ಗುರುಗಳನ್ನು [illegible] ಬಂದ ಬ್ರಹ್ಮದಾಸನಿಗೆ ಗುರುಗಳ ಸಾನ್ನಿಧ್ಯದಿಂದ ಮನಶಾಂತಿ ದೊರೆಯಿತು.

ಭಾಯಿ ಬುದ್ಧನಿಗೆ ಜ್ಞಾನದೀಕ್ಷೆ

ಒಂದು ದಿನ ಗುರುನಾನಕರು ಮರದ ನೆರಳಿನಲ್ಲಿ ಕುಳಿತಿದ್ದರು. ಹಳ್ಳಿಯ ಜನರು, ಗುರುಗಳ ದರ್ಶನಕ್ಕಾಗಿ ಗುಂಪುಗೂಡಿದರು. ಪಕ್ಕದಲ್ಲಿಯೇ ಸಣ್ಣ ಹುಡುಗನೊಬ್ಬ ಕುರಿ ಮೇಯಿಸುತ್ತಿದ್ದ. ಗುರುಗಳ ದರ್ಶನಕ್ಕೆ ತನ್ನ ತಾಯಿಯನ್ನು ಕರೆದುಕೊಂಡು ಬರಲು ನಿರ್ಧರಿಸಿದ. ಮರುದಿನ ಅವನ ತಾಯಿ ಒಲೆ ಹೊತ್ತಿಸುತ್ತಿದ್ದಳು. ಕಟ್ಟಿಗೆಯ ತುಣುಕುಗಳಿಗೇ ಮೊದಲು ಬೆಂಕಿ ಹತ್ತಿಕೊಳ್ಳುವುದನ್ನು ಬಾಲಕನು ಗಮನಿಸಿದ. ಕಿರಿಯನಾದ ತಾನು ಮೊದಲು ಗುರುದರ್ಶನ ಪಡೆಯಬೇಕೆಂದು ನಿರ್ಧರಿಸಿದ. ಬಳಿಕ ಗುರುನಾನಕರ ಬಳಿಗೆ ಹೋಗಿ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿದ. ಹುಡುಗ ವಯಸ್ಸಿನಲ್ಲಿ ಚಿಕ್ಕವನಾದರೂ ತುಂಬ ಬುದ್ಧಿವಂತ ಎಂದು ಗುರುಗಳಿಗೆ ಹರ್ಷವಾಯಿತು, ಅವನಿಗೆ "ಭಾಯಿ ಬುದ್ಧ" ಎಂದು ನಾಮಕರಣ ಮಾಡಿದರು. ಭಾಯಿ ಬುದ್ಧ ತನ್ನ ಶೇಷ ಆಯುಷ್ಯವನ್ನೆಲ್ಲ ದೇವರ ಧ್ಯಾನದಲ್ಲೇ ಕಳೆದ.

ದುನಿಚಂದ ದಂಪತಿಗಳ

ಗುರು [illegible] ಒಮ್ಮೆ ಲಾಹೋರಿನ [illegible] ದ್ದ [illegible] ಧನಿ [illegible] ನ [illegible] ದ [illegible] ಸ [illegible] ದರ್ಶನ [illegible] ಬಂದ, [illegible] ಗೆ [illegible] ವನ [illegible] ಲ್ಲಿ ಸೂಜಿಯೊಂದನ್ನು ಕೊಟ್ಟು 'ದುನಿಚಂದ, ಇದನ್ನು ನಿನ್ನ ಹತ್ತಿರವೇ ಇಟ್ಟುಕೋ. ಪರಲೋಕದಲ್ಲಿ ನನಗೆ ಹಿಂತಿರುಗಿ ಕೊಡು" ಎಂದು ಹೇಳಿದರು. ಗುರುವೇ ನಾವು ಮರಣಹೊಂದಿದ ಬಳಿಕ ಈ ಸೂಜಿಯನ್ನು ಪರಲೋಕಕ್ಕೆ ಹೇಗೆ ತರಬಲ್ಲೆವು? ಎಂದು

ಲಿಲ್ಲ. ಈಗ ಎರಡು ಕಡೆಯವರೂ ಒಡಂಬಡಿಕೆಗೆ ಮತ್ತೆ ಬಂದಿದ್ದಾರೆ. ಪರಿಣಾಮ, ಶ್ರೀ ವಿೂರ್ ಕಾಸೀಂರು ತಮ್ಮ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಗದ್ದಿಯಿಂದ ಇಳಿದೇ ಬಿಟ್ಟರು. ಶ್ರೀ ಸಾದಿಕ್ ಅಲಿಯವರೇ ಮುಖ್ಯಮಂತ್ರಿಪದದೊಂದಿಗೆ ಈ ಅಧ್ಯಕ್ಷಪದವನ್ನೂ ಪಡೆದರು. ಕುಲದ ನಾಲಿಗೆಯ ಯುರುಹಿತೆಂಬುದು ಹಳೆಯ ಗಾದೆ. ಶ್ರೀ ರಾಮರು ತನ್ನಂತೆಯೇ ಎರಡು ದೋಣಿಗಳಲ್ಲಿ ಕಾಲಿಡುವಂತೆ ಶ್ರೀ ಸಾಧಕರಿಗೆ ಸಲಹೆ ಮಾಡಿದ್ದರೆ ಅದು ಸಹಜ. ಶ್ರೀ ಕೆಂಗಲ್ ಹನುಮಂತಯ್ಯನವರು ಕೆಲಕಾಲಕ್ಕೆ ಮೊದಲು ಒಂದು ಸಲಹೆ ನೀಡಿದ್ದರು. ಪ್ರಧಾನಿ, ಮತ್ತು (ರಾಷ್ಟ್ರೀಯ) ಪಕ್ಷದ ಅಧ್ಯಕ್ಷರು ಒಬ್ಬ ವ್ಯಕ್ತಿಯೇ ಆಗಬೇಕು; ಹಾಗೆಯೇ ರಾಜ್ಯದ ಮುಖ್ಯಮಂತ್ರಿಯೂ ಪ್ರಾದೇಶಿಕ ಪಕ್ಷದ ಅಧ್ಯಕ್ಷನೂ ಒಬ್ಬನೇ ಆಗಬೇಕು. ಅಧಿಕಾರ [illegible] ದಲ್ಲಿ ಅಸಕ್ತಿಯಿರುವವರು ಇದನ್ನು ಒಪ್ಪಲಿಲ್ಲ. ಆದರೆ, ಇಂದು ಶ್ರೀ ಜಗಜೀವನರಾಮರ ಅಗ್ರೇಸರಿಕೆಯಲ್ಲಿ ಇದೇ ವ್ಯವಸ್ಥೆ ರೂಢಿಗೆ ಬಂದರೂ ಬರಬಹುದು.

ಭಂಡಾರಿಗಳಿಬ್ಬರೂ ಗುರುಗಳನ್ನು ಕೇಳಿದ ರೇ, ಆಗ ಗುರು ಸ್ವಾಮಿಗಳು ನಾವು ನಿಧನ ಹೊಂದಿದಾಗ ನಮ್ಮೊಂದಿಗೆ ಯಾವ ಸಂಪತ್ತೂ ಪರಲೋಕಕ್ಕೇ ಬರುವುದಿಲ್ಲ. ದೇವರ ನಾಮ ಜಪಿಸು. ಪರಿಣಾಮವೊಂದೇ ನಿಷ್ಠೆ ಸಂಗಡ ಪರಲೋಕಕ್ಕೆ ಬರುತ್ತದು. ಗುರುವಿನ ಅನುಗ್ರಹದಿಂದ ಮಾತ್ರ ಈ ಭಕ್ತಿಸಂಪತ್ತನ್ನು ಪಡೆಯಬಹುದೆಂದೂ ಗುರುಗಳು ಆಶೀರ್ವದಿಸಿದರು. ಹೀಗೆ ಗುರು ಸ್ವಾಮಿಗಳು ಭಕ್ತರಿಗೆ ಜೀವನದ ಉದ್ದೇಶವನ್ನು ತೋರಿಸಿಕೊಟ್ಟು, ಅವರ ಜನ್ಮವನ್ನು ಪಾವನಗೊಳಿಸಿದರು.

(ಮೊದಲನೇ ಪುಟದಿಂದ)

ಗಳನ್ನು ಕಟ್ಟಿ ನೋಟಿನ ಕಟ್ಟುಗಳನ್ನು ಬಗೆಯುತ್ತಿರ ಬೇಕಾಗ ಬಹುದು. ಡಾ| ರಾಯರು ಇಂದಿರಾಗಾಂಧಿ ಹೇಳಿದಂತೆ ಕೇಳುವ ಮನಸ್ಸಾದ್ದರಿಂದಲೇ ಇನ್ನೂ ಮಂತ್ರಿಗಳಾಗಿ ಉಳಿದು ಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಶ್ರೀ ವೀರೇಂದ್ರ ಪಾಟೀಲರು ತಳೆದಿರುವ ನಿಲುವು ಇನ್ನೂ ದೃಢವಾಗ ಬೇಕು. ಕನ್ನಡಿಗರು ಅವರ ಈ ನಿಲುವನ್ನು ಹೃತ್ಪೂರ್ವಕ ಬೆಂಬಲಿಸಿದರೆ, ಅದು ಸಂಕುಚಿತ ಮನೋವೃತ್ತಿ ಆಗುವುದಿಲ್ಲ, ಅಂಥ ಭಾಷಾಭಿಮಾನ— ಪ್ರಾಂತಾಭಿಮಾನಗಳು ಅಗುವುದಿಲ್ಲ. ಅದು ಧರ್ಮ ನ್ಯಾಯಾಭಿಮಾನ ಮಾತ್ರ.

ಜಿಲ್ಲೆಯಲ್ಲಿ ಡಾ| ನಾಗಪ್ಪ ಆಳ್ವ

ಮೈಸೂರು ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ಡಾ| ನಾಗಪ್ಪ ಆಳ್ವರವರು ರಾಜ್ಯಸಭೆಗೆ ಆಯ್ಕೆಯಾದ ಬಳಿಕ ಮೊತ್ತ ಮೊದಲ ಬಾರಿಗೆ ದಕ್ಷಿಣ ಕನ್ನಡ ಜಿಲ್ಲಾ ಸಂಚಾರಕ್ಕೆ ಹೊರಟಿದರು. ಅವರ ವಿಜಯದ ಸಲುವಾಗಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಮಂಗಳೂರಲ್ಲಿ ಅವರನ್ನು ಸನ್ಮಾನಿಸಿದರು.

ಡಾ| ಆಳ್ವರವರು ಈ ಸಂದರ್ಭದಲ್ಲಿ ಮಾತಾಡುತ್ತ, ನಮ್ಮದು ಮಾತ್ರ ಕಾಂಗ್ರೆಸ್ ಪಕ್ಷವೆಂದು ಸಾರಿದರು, ಶ್ರೀಮತಿ ಗಾಂಧಿಯವರು ಪಕ್ಷಕ್ಕೆ ದ್ರೋಹ ಬಗೆದದ್ದರಿಂದ ಅವರನ್ನು ಪಕ್ಷದಿಂದ ಹೊರ ಹಾಕಲಾಯಿತೆಂದು ಸ್ಪಷ್ಟಪಡಿಸಿ ಈಗ ಅವರು ರಾಜ್ಯಾಂಗ ಧ್ವಂಸವನ್ನೇ ಗುರಿಯಾಗಿಟ್ಟು ಕೊಂಡಿರುವ ತಮ್ಮ ಹಿಂಬಾಲಕರಿಂದ ಅಧಿಕಾರದಲ್ಲಿ ಉಳಿದಿದ್ದಾರೆಂದರು. ಈ ದೇಶ ಎಲ್ಲರ ಸೊತ್ತು ಎಂದು ಹೇಳಿದ ಅವರು ಮಾನವ ಜೀವನಕ್ಕೆ ಆಗತ್ಯವಾದ ಶಿಸ್ತು ಮತ್ತು ಸಂಸ್ಥೆಗಳ ರಕ್ಷಣೆಗೆ, ಪ್ರಜಾ ಪ್ರಭುತ್ವದ ಭದ್ರತೆಗೆ ಶ್ರಮಿಸಲು ಕರೆ ಕೊಟ್ಟರು. ಕಾಂಗ್ರೆಸ್ಸು ಸಂಸತ್ತಿನಲ್ಲಿ ಅಧಿಕೃತ ಪ್ರತಿಪಕ್ಷವಾಗಿ ಕುಳಿತಿರುವುದರಿಂದ ಪ್ರಧಾನಿಯ ಸರ್ವಾಧಿಕಾರದ ಮೇಲೆ ಅಂಕುಶ ಹೇರುವುದು ಸಾಧ್ಯವಾಗಿದೆಯೆಂದರು.

ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ಗಂಗಾಧರ ರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಂ. ಸಿ. ಮಹಮ್ಮದ್, ಡಾ| ಬಾಳಪ್ಪ ಶೆಟ್ಟಿ, ಶ್ರೀ ಎ. ಜೆ. ಪ್ರಭು, ಶ್ರೀಗಳಾದ ಕೆ. ಪುರಂದರ ವಿಠಲದಾಸ್, ಅತ್ತಾವರ ಆನಂದ ಶೆಟ್ಟಿ, ಕೆ. ಪ್ರಭಾಕರ ರೈ, ಶಿವಾಜಿ ಶೆಟ್ಟಿ, ಶ್ರೀಮತಿ ಲೀಲಾವತಿ ರೈಯವರು ಡಾ| ಆಳ್ವರನ್ನು ಅಭಿನಂದಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಎಚ್. ಜಿ. ಹಂದೆಯವರು ಧನ್ಯವಾದವಿತ್ತರು.

ಡಾ| ಆಳ್ವರು ತಾ 31ರಂದು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

ಪ್ರಧಾನಿ ಇಂದಿರಾಗಾಂಧಿಯವರನ್ನು ಕಾಂಗ್ರೆಸ್‌ನಿಂದ ಹೊರ ಹಾಕಿದ ಬಳಿಕ, ಅವ ಕಾಂಗ್ರೆಸ್‌ನ ಮೇಲೆ ಯುದ್ಧ ಹೇರಿದ್ದಾರೆ. ಅವರಿಗೆ ಬೆಂಬಲಿಗರೂ ಇದ್ದಾರೆ. ಕಾಂಗ್ರೆಸ್ ಅವರ ಮತ್ತು ಅವರ ಸಂಗಡಿಗರ ಆಕ್ರಮಣವನ್ನು ಸಶಕ್ತವಾಗಿ ಎದುರಿಸ ಬೇಕು. ತಮ್ಮ ಸ್ವಾರ್ಥ ದೇಶದ್ರೋಹ ಮನೋವೃತ್ತಿ ಮತ್ತು ಅಂಥವರ ಬಲವನ್ನು ಪಡೆದೇ ಅಧಿಕಾರ ನಡೆಸುತ್ತಿರುವ ಶ್ರೀಮತಿ ಗಾಂಧಿಯವರಿಂದ ದೇಶಕ್ಕೆ ಅಪಾಯ. ಬುದ್ಧಿಯನ್ನೂ ಆತ್ಮವನ್ನೂ ಮಾರಿಕೊಂಡು ಶ್ರೀಮತಿ ಗಾಂಧಿ ಪಕ್ಷ ಕಟ್ಟ ಬಲ್ಲರಾದರೆ, ಕಾಂಗ್ರೆಸಿಗರಿಗೇಕೆ ಸಾತ್ವಿಕ ಸಂಘಟನೆ ಸಾಧ್ಯವಿಲ್ಲ? ಕಾಂಗ್ರೆಸ್ಸನ್ನು ಪ್ರಾಮಾಣಿಕ, ಶಿಸ್ತುಬದ್ಧ ಮತ್ತು ಜನಪ್ರಿಯ ಸಂಸ್ಥೆಯಾಗಿ ಕಟ್ಟಬೇಕು, ಅದು ಬೆಳೆಯ ಬೇಕೆಂದು ಹೇಳಿ ಇದಕ್ಕಾಗಿ ಕಾರ್ಯಕರ್ತರ ಮತ್ತು ಜನತೆಯ ಸಹಕಾರ ಕೋರಿದರು.

ಕುಂದಾಪುರ ಬಳಿ ಕಳ್ಳಬೆಳ್ಳಿ

ಕುಂದಾಪುರದಿಂದ ಸುಮಾರು ಐದು ಮೈಲು ದೂರದ ಕುಂಭಾಸಿ ಗ್ರಾಮದ ಕೊರವಡಿ ಸಮುದ್ರತೀರದಲ್ಲಿ ಮಳಲಿನಡಿ ಹೂತಿಟ್ಟ ಬೆಳ್ಳಿಯ ಗಟ್ಟಿಗಳು ಪತ್ತೆಯಾಗಿವೆ. ತಾ. 18 ರಂದು ಸಂಜೆ ತಿರುಗಾಟಕ್ಕೆ ಹೊರಟ ಶ್ರೀ ಕೆ. ಶ್ರೀನಿವಾಸ ಹಂದೆಯವರ ಊರ,ಗೋಲಿಗೆ ಬೆಳ್ಳಿಯ ಚೀಲ ತಾಗಿದ್ದರಿಂದ ಮುಂದಿನ ಶೋಧನೆ ನಡೆಯಿತೆಂದು ಗೊತ್ತಾಗಿದೆ. ಒಟ್ಟು ಸುಮಾರು ೨೦ ಲಕ್ಷ ರೂಪಾಯಿ ಮೌಲ್ಯದ ಬೆಳ್ಳಿಯನ್ನು ಕಸ್ಟಮ್ಸ್ ಅಧಿಕಾರಿಗಳು ಅವರ ಸಹಕಾರದಿಂದ ವಶಪಡಿಸಿಕೊಂಡಿದ್ದಾರೆ.

ಬೆಳ್ಳಿಯ ಗಟ್ಟಿಗಳು ಬೇರೆ ಬೇರೆ ಆಕಾರದವೆಂದೂ ಇವನ್ನು ಗುಜರಾತಿ ಮತ್ತು ಮರಾಠಿ ದಿನ ಪತ್ರಿಕೆಗಳ ಹಾಳೆಗಳಲ್ಲಿ ಸುತ್ತಿ ಚೀಲದಲ್ಲಿ ತುಂಬಲಾಗಿದೆಯೆಂದೂ ತಿಳಿದು ಬಂದಿದೆ. ಮಳಲಿನ ಮೇಲ್ಭಾಗದಲ್ಲೇ ಕೆಲವೇ ದಿನಗಳಿಗೆ ಮೊದಲು ಈ ಬೆಳ್ಳಿ ಹೂಳಲಾಯಿತೆಂದು ಹೇಳಲಾಗುತ್ತದೆ. ಇದರ ಒಡೆಯರಾರು ಎಂಬುದಿನ್ನೂ ತಿಳಿದು ಬಂದಿಲ್ಲ; ಬರುವ ಸಾಧ್ಯತೆಯೂ ಇಲ್ಲ.

"ಬೊಂಬಾಯಿ ಬದಿಯ ಕಳ್ಳ ವ್ಯಾಪಾರ ಜಾಲಕ್ಕೆ ಇದು ಸೇರಿದುದಾಗಿರ ಬಹುದು; ಈ ಜಿಲ್ಲೆಯ ಕರಾವಳಿಯನ್ನವರು ಉಪಯೋಗಿಸುವುದು ನಡೆದು ಬಂದ ಹಾದಿ. ದಕ್ಷಿಣ ವಿಭಾಗದಲ್ಲಿ ಕೆಲದಿನಗಳ ಹಿಂದೆ ಶೋಧನೆ ನಡೆದದ್ದರಿಂದ ಉತ್ತರ ವಿಭಾಗದಲ್ಲಿ ಅವರು ಉಳಿದಿದ್ದು ಸಹಜ. ಈ ಬೆಳ್ಳಿಯನ್ನು ಬಿನ್ನಕ್ಕೆ ವಿನಿಮಯ ಮಾಡಲು ಸಂಚಯಿಸಿದ್ದಿರಬೇಕು; ವಿನಿಮಯದ ದಿನ ಸಮೀಪದಲ್ಲಿಯೇ ಇರುವುದರಿಂದ ಬೆಳ್ಳಿಯನ್ನು ಬಹಳ ಆಳಭಾಗದಲ್ಲಿ ಹೂಳಿರಲಿಲ್ಲದಿರಬೇಕು."–ಇದು ಊಹೆ.

ಕುಂದಾಪುರ ಪೋಲೀಸ್ ಠಾಣೆಯಲ್ಲಿ ಕೂಡಿದ ರಜತ ರಾಶಿಯನ್ನು ಕಾಣಲು ಜನ ಕಿಕ್ಕಿರಿದು ಸೇರಿತ್ತು. ಈ ವಿಭಾಗದಲ್ಲಿ ಇಷ್ಟೊಂದು ಪ್ರಮಾಣದ ಕಳ್ಳ ಮಾಲು ದೊರೆತದ್ದು ಇದೇ ಪ್ರಪ್ರಥಮವೆಂದು ಹೇಳಲಾಗುತ್ತಿದೆ.

ಭಾರತ ಸಂದರ್ಶನಕ್ಕೆ ಜರ್ಮನರ ಉತ್ತೇಜನ.

ಬರ್ಲಿನ್: ಕಳೆದ ಕೆಲವು ವರುಷಗಳಿಂದ ಫೆಡರಲ್ ರಿಪಬ್ಲಿಕ್ ಓಫ್ ಜರ್ಮನಿಯಿಂದ ಭಾರತಕ್ಕೆ ಪ್ರವಾಸಕ್ಕಾಗಿ ಹೋಗುತ್ತಿರುವವರ ಸಂಖ್ಯೆ ತುಂಬಾ ಹೆಚ್ಚಾಗಿದೆ. ಜರ್ಮನಿಯಲ್ಲಿ ಏಕಾಂಗಿ ಪ್ರವಾಸಗಳಿಗಿಂತಲೂ ದೊಡ್ಡ ದೊಡ್ಡ ಪ್ರವಾಸಿ ಸಂಸ್ಥೆಗಳು ನಡೆಸುತ್ತಿರುವ ಪ್ರವಾಸಗಳಿಗೆ ಹೆಚ್ಚಿನ ಬೇಡಿಕೆಗಳಿವೆ. ಪ್ರವಾಸ ವಿನಿಮಯ ಸೌಲಭ್ಯಕ್ಕಾಗಿ ಜರ್ಮನಿಯಲ್ಲಿ ಹಲವು ರಾಷ್ಟ್ರಗಳ ಸಹಕಾರ ಸಹಭಾಗಿತ್ವದಿಂದ 'ನಾಲ್ಕನೇ ಅಂತರ್ ರಾಷ್ಟ್ರೀಯ ಪ್ರವಾಸ ವಿನಿಮಯ' ಉತ್ಸವ ಒಂದು ಬರ್ಲಿನ್‌ನಲ್ಲಿ ಇದೇ ಕಳೆದ ಮಾರ್ಚ್ 14ರಿಂದ 23ನೇ ತಾರೀಕಿನವರೆಗೆ ನಡೆಯಿತು. ಭಾರತದ ಪರವಾಗಿ ಭಾರತೀಯ ಪ್ರವಾಸಿ ಕಚೇರಿಯ ಶಾಖೆಯೊಂದು ಸರಕಾರದ ಅನುಜ್ಞೆಯ ಮೇರೆಗೆ ಈ ಉತ್ಸವದಲ್ಲಿ ಪಾಲುಗೊಂಡಿತು. ಇದರೊಂದಿಗೆ ಏರ್ ಇಂಡಿಯಾವು ಕೂಡಾ ಸೇರಿ ಕೊಂಡಿದೆ. ಇತ್ತ ಭಾರತದಿಂದಲೂ ಫೆಡರಲ್ ರಿಪಬ್ಲಿಕ್ ಓಫ್ ಜರ್ಮನಿಗೆ ಪ್ರವಾಸಕ್ಕಾಗಿ ಹೋಗುತ್ತಿರುವವರ ಸಂಖ್ಯೆ ತುಂಬಾ ಅಧಿಕವಾಗಿದೆ. ಅಂತರ್ ರಾಷ್ಟ್ರೀಯ ಪ್ರವಾಸಿ ವಿನಿಮಯ ಮೇಳದಂದು 33 ರಾಷ್ಟ್ರಗಳು ಪ್ರವಾಸದ ಪರವಾದ ತರ್ಕ ವಿಚಾರಕ ಪರಿಚಯಗಳಿಂದ ತಮ್ಮ ಜ್ಞಾನವನ್ನು ವಿನಿಮಯಿಸಿ ಕೊಂಡರು. ಇಂತಹ ಒಂದು ಸಮ್ಮೇಳನ ಬೇರೆಲ್ಲೂ ನಡೆಯುವುದಿಲ್ಲ. ಪ್ರವಾಸವನ್ನು ನಡೆಸುವುದರಲ್ಲಿ ಅಮೇರಿಕಾ ರಾಷ್ಟ್ರದ ಅನಂತರ ಫೆಡರಲ್ ರಿಪಬ್ಲಿಕ್ ಓಫ್ ಜರ್ಮನಿಯೇ ಮೇಲುಗೈ.

ವಿಜಯಾ ಬ್ಯಾಂಕಿನ

ದ್ವಿವಿಧ ಸೌಲಭ್ಯ ಯೋಜನೆ

ಅಸಲನ್ನು ಉಳಿಸಿ ಹಾಗೂ ಪ್ರತಿಫಲವನ್ನೂ ಪಡೆಯಿರಿ!

ಹೌದು! "ಅಸಲನ್ನು ಉಳಿಸಿ ಹಾಗೂ ಪ್ರತಿಫಲವನ್ನೂ ಪಡೆಯಿರಿ" ಎಂದು ನಾವು ಹೊಣೆಯರಿತೇ ಹೇಳುತ್ತಿದ್ದೇವೆ.

ನಮ್ಮ "ದ್ವಿವಿಧ ಸೌಲಭ್ಯ ಯೋಜನೆ"ಯಲ್ಲಿ ನಿಮ್ಮ ಠೇವಣಿ ಹಣ ಭದ್ರವಾಗಿರುತ್ತದೆ ಮಾತ್ರವಲ್ಲದೆ ನಿಮ್ಮ ಆಶ್ರಿತರು ಪ್ರತಿತಿಂಗಳೂ ತಪ್ಪದೆ ವರಮಾನ ಪಡೆಯುವರು.

ಈ ಯೋಜನೆಯ ಸ್ವರೂಪ ಹೀಗಿದೆ

8276/-ರೂಗಳು ಠೇವಣಿ ಇಡಿರಿ ನೀವು ನಾಮನಿರ್ದೇಶನ ಮಾಡುವ ವ್ಯಕ್ತಿಯು 84 ತಿಂಗಳ ಕಾಲ ಪ್ರತಿತಿಂಗಳೂ 50/ ರೂಗಳಂತೆ ರೂಪಾಯಿ 4,200/- ನಿರ್ದಿಷ್ಟ ವರಮಾನ ಪಡೆಯುವರು.

84 ತಿಂಗಳ ಕೊನೆಯಲ್ಲಿ ನಿಮ್ಮ ಠೇವಣಿ ಹಣ 8276/-ರೂಗಳನ್ನು ಪೂರ್ತಿಯಾಗಿ ನೀವು ವಾಪಸು ಪಡೆಯಬಹುದು. ಇದು ಕೇವಲ ಒಂದು ಉದಾಹರಣೆ ಎಲ್ಲರಿಗೂ ಆರ್ಥಿಕ ಮಟ್ಟಕ್ಕನುಗುಣವಾದ ಠೇವಣಿಗಳು ಹಾಗೂ ವರಮಾನಗಳಿವೆ

ಖಂಡಿತವಾಗಿಯೂ ನೀವು ಉಳಿಸಬೇಕು! ನಿಮ್ಮ ಆಶ್ರಿತರಿಗಾಗಿ ನೀವು ಉಳಿಸುವುದು ನಿಮ್ಮ ನೈತಿಕ ಹೊಣೆ. ಇದನ್ನು ಈಡೇರಿಸಲು ನಾವು ವಿಜಯಾ ಬ್ಯಾಂಕಿನಲ್ಲಿ ನೆರವಾಗುವೆವು.

ವಿವರಗಳಿಗೆ ದಯೆಯಿಟ್ಟು ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಮಂಗಳೂರು–3, ಆಡಳಿತ ಕಚೇರಿ: ಬೆಂಗಳೂರು–1.

ಎಂ. ಸುಂದರರಾಮ ಶೆಟ್ಟಿ,
ಚೇರ್ಮನ್.

Criterion-VB 2399 KA

ಕಾಶ್ಮೀರ ಕಳೆದ ಇಪ್ಪತ್ತೆರಡು ವಸಂತಗಳು

ಕಾಶ್ಮೀರದ ನಿಸರ್ಗ ಸೌಂದರ್ಯ ಲೋಕವಿಖ್ಯಾತ. ಸುಂದರವಾಗಿರುವ ಈ ನಾಡು ಭಾರತದಲ್ಲಿ ವಿಲಯನಗೊಂಡು ಇಪ್ಪತ್ತೆರಡು ವರ್ಷಗಳಾದವು. ಇಂದು ಕಾಶ್ಮೀರ ಹೊಸ-ಆಕಾಂಕ್ಷೆಗಳನ್ನು ಮೂಡಿಸಿದೆ. ಹೊಸ ಭರವಸೆಯನ್ನು ನೀಡಿದೆ. ಇಲ್ಲಿ ಕೊಂಚಮಟ್ಟಿಗೆ ಅಪಾಯವೂ ಉಂಟು. ನಮ್ಮ ಗಡಿಗಳ ಸಮಗ್ರತೆಯನ್ನು ಕಾಪಾಡಲು ನಾವು ಇಲ್ಲಿ ಸದಾ ಎಚ್ಚರದಿಂದಿರಬೇಕಾಗಿದೆ. ಕಾಶ್ಮೀರದ ಗಡಿಯಲ್ಲಿ ಆಗಾಗ್ಗೆ ಸಂಭವಿಸುವ ಕದನವಿರಾಮ ಉಲ್ಲಂಘನೆ ನಾವು ಕಡೆಗಣಿಸುವಂಥದಲ್ಲ. ಈ ಘಟನೆಗಳ ಉಪೇಕ್ಷೆಯೂ ಸಲ್ಲದು. ಮಂತ್ರಮುಗ್ಧಗೊಳಿಸುವ ಕಾಶ್ಮೀರದ ಪ್ರಕೃತಿಸೌಂದರ್ಯ ಒಂದು ಕಡೆ, ನಾಡಿನ ಗಡಿಗಳನ್ನು ಸುರಕ್ಷಿತವನ್ನಾಗಿ ಕಾಯುವ ಹೊಣೆ ಇನ್ನೊಂದು ಕಡೆ—ಇವೆರಡೂ ಕಾಶ್ಮೀರದ ವೈಶಿಷ್ಟ್ಯವನ್ನು ಹೆಚ್ಚಿಸಿವೆ.

ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳಿಗೆ, ಜಾತ್ಯತೀತ ಶಕ್ತಿಗಳಿಗೆ ಮಹತ್ತರವಾದ ಅವಕಾಶಗಳಿವೆ. ಒಳಜಗಳಗಳಿಂದ ಅನಾವಶ್ಯಕವಾದ ಹಾಗೂ ದುರದೃಷ್ಟಕರವಾದ ಭಿನ್ನಾಭಿಪ್ರಾಯಗಳಿಂದ ಈ ಅವಕಾಶಗಳು ನಿರರ್ಥಕವಾಗುವ ಭಯವೂ ಇದೆ.

ಗಾಂಧಿ—ನೆಹರೂರವರ ಮಾರ್ಗ ನಿಷ್ಪ್ರಯೋಜಕ ಎಂದು ಕಾಶ್ಮೀರದ ಎಲ್ಲಾ ವರ್ಗಗಳ ಜನರ ಅಭಿಪ್ರಾಯ. ಈ ಮಾರ್ಗವನ್ನು ಅವರು ಎಂದೋ ಕೈಬಿಟ್ಟಿದ್ದಾರೆ.

ಮೌಲ್ವಿ ಫರೂಖರಿಂದ ಮೊದಲುಗೊಂಡು ಮಿರ್ಜಾ ಅಫಜಲ್‌ಬೇಗ್‌ರವರಿಗೆ ಎಲ್ಲರೂ ತಾವು ಶಾಂತಿಯುತವಾದ ರೀತಿಯಲ್ಲಿ ಸಂವಿಧಾನದ ಸಮ್ಮತವಾದ ಮಾರ್ಗದಲ್ಲಿ ಮುನ್ನಡೆಯ ಬಯಸುತ್ತಾರೆ. ಇವರೆಲ್ಲರ ಹೃದಯ ಪರಿವರ್ತನೆ ಆಗಿದೆಯೋ ಅಥವಾ ಇಲ್ಲವೋ ಹೇಳಲಾಗದು. ಆದರೆ ಕಾಶ್ಮೀರದಲ್ಲಿ ಈಗ ಪರಿಸ್ಥಿತಿ ಬದಲಾಗಿದೆ. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಇವರೆಲ್ಲರೂ ಕಾತುರರಾಗಿದ್ದಾರೆ ಎನ್ನಬಹುದು.

ನಾಲ್ಕು ಮಹತ್ ಸಾಧನೆಗಳು

ಕಾಶ್ಮೀರದಲ್ಲಿ ನಾಲ್ಕು ಮುಖ್ಯ ಘಟನೆಗಳು ನಡೆದಿವೆ. ಇವುಗಳಲ್ಲಿ ಕೆಲವು ಸಹಜವಾಗಿಯೇ ಘಟಿಸಿದರೂ, ಇನ್ನೂ ಕೆಲವು ಯೋಜನೆ, ಬಂಡವಾಳ ಹಾಗೂ ದೂರ ದೃಷ್ಟಿಯ ಫಲ. ಪ್ರಥಮತಃ ಕಾಶ್ಮೀರ ಜನಾಭಿಪ್ರಾಯ ಪಾಕಿಸ್ತಾನದಿಂದ ಸಾಕಷ್ಟು ದೂರ ಸರಿದಿದೆ. ಈ ಬದಲಾವಣೆಯಿಂದ ಕಾಶ್ಮೀರದ ಜನತೆಯ ಭಾವನೆ ಭಾರತಕ್ಕೆ ಅನುಕೂಲಕರವೆಂದು ಹೇಳಲಿಕ್ಕೆ ಬರುವಂತಿಲ್ಲ. ಪಾಕಿಸ್ತಾನದ ಇತ್ತೀಚಿನ ಸ್ಥಿತಿ ಜನರ ಭ್ರಮೆಯನ್ನು ನಿವಾರಿಸಿದೆ. ಕಾಶ್ಮೀರದ ನಿವಾಸಿಗಳನ್ನು ಈಗ ಆತ್ಮನಿರೀಕ್ಷಣೆಯಲ್ಲಿ ತೊಡಗುವಂತೆ ಮಾಡಿದೆ.

ಪಾಕಿಸ್ತಾನದಲ್ಲಿನ ಕಳವಳದ ಸುದ್ದಿಯನ್ನು ಪಾಕಿಸ್ತಾನದ ರೇಡಿಯೋ ಪ್ರಸಾರ ಮಾಡಿದಾಗ ಕಾಶ್ಮೀರದಲ್ಲಿನ ಪಾಕ್ ಬೆಂಬಲಿಗರಾದವರು ಆಶ್ಚರ್ಯ ಚಕಿತರಾದರು. ದಿಗ್ಭ್ರಮೆಗೊಂಡರು. ವ್ಯಾಕುಲಗೊಂಡರು. ಅಲ್ಲಿಯವರೆಗೂ ಪಾಕಿಸ್ತಾನದ ಈ ಬೆಂಬಲಿಗರು ಪಾಕಿಸ್ತಾನಕ್ಕೆ ಅನುಕೂಲವಲ್ಲದ ಯಾವುದೇ ವರದಿಯನ್ನು ಪಾಕ್‌ವಿರೋಧಿ ಪ್ರಚಾರ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಪಾಕಿಸ್ತಾನದ ರೇಡಿಯೋ ಈ ಸುದ್ದಿಯನ್ನು ಬಿತ್ತರಿಸಿದಾಗ ಇವರ ಗತಿ ಏನಾಗಿರಬೇಕು!

ಪಾಕಿಸ್ತಾನದ ಪರಿಸ್ಥಿತಿ ತುಂಬಾ ಹದಗೆಟ್ಟಿದ್ದಿತು. ಭಾರತ ಈ ಬಗ್ಗೆ ವರದಿ ಮಾಡಿದಾಗ ಅದರಲ್ಲಿ ಉತ್ಪ್ರೇಕ್ಷೆ—ಎಳ್ಳಷ್ಟು ಇರಲಿಲ್ಲ; ಎಂದು ಇತ್ತೀಚೆಗೆ ಪಾಕಿಸ್ತಾನಕ್ಕೆ ಭೇಟಿನೀಡಿ ಬಂದ ಕಾಶ್ಮೀರ ವಿಧಾನ ಸಭೆಯ ಪಕ್ಷೇತರ ಸದಸ್ಯ ಶ... ಅಹ್ಮದ ... ಹೇಳಿದ್ದಾರೆ.

ನಿರ್ಧಾರದ ಎರಡು ಪ್ರಸಂಗಗಳು

1947ರಲ್ಲಿ ಒಂದು ಸಲ ಹಾಗೂ 1965ರಲ್ಲಿ ಒಂದು ಸಲ ಹೀಗೆ ಎರಡು ಬಾರಿ ಕಾಶ್ಮೀರದ ಜನತೆ ಸ್ಥಿರವಾದ ನಿರ್ಧಾರ ಕೈಗೊಳ್ಳುವ ಪ್ರಸಂಗ ಬಂದಿತು. ಆಗ ಕಾಶ್ಮೀರದ ಜನರು ಭಾರತದೊಂದಿಗೆ ಒಟ್ಟಾಗಿ ನಿಂತರು. ಸಮಯೋಚಿತ ನಿರ್ಧಾರದಿಂದ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು.

1965ರಲ್ಲಿ ಪಾಕಿಸ್ತಾನವು ಭಾರತದ ಮೇಲೆ ದಾಳಿ ಮಾಡಿದಾಗ, ಕಾಶ್ಮೀರದ ಈಗಿನ ನಾಯಕರು ಹಾಗೂ ಕೆಲವು ಜನ ಯುವಕರು, ಪಾಕಿಸ್ತಾನದ ದಾಳಿಯನ್ನು ಎದುರಿಸಲು ಜನರನ್ನು ಜಾಗೃತಗೊಳಿಸಿದರು.

ಪಾಕಿಸ್ತಾನ ... ವಾಗಿ ಮೋಸ ಮಾಡುವುದರಿಂದ ... ಜನವೂ ಇಲ್ಲಿ ... [illegible]

... ಸ್ವಾತಂತ್ರ್ಯವು ವಿರೋಧಿ ... ಸಿದೆ. ಪ್ಲೆಬಿಸೈಟ್ ... ರದ ಚುನಾವಣೆಗಳಲ್ಲಿ ಸ್ಪರ್ಧಿಸಿದುದು ಚುನಾವಣಾ ವ್ಯವಸ್ಥೆಯನ್ನು ಸಾರುತ್ತಿದೆ.

ಅವಿಭಾಜ್ಯ

ಶರೀರದ ಸ್ಥೂಲ ... ಕೈ, ಕಾಲು, ಕಣ್ಣು, ಮೊದಲಾದವುಗಳ ... ಯೋಗ ಹಾಗೂ ಶಿಕ್ಷಣ ... ರವೇ ಬುದ್ಧಿಯು ನಿಜವ ... ಬಲ್ಲದು ಎಂಬುದು ... ! ಅರ್ಥಾತ್ ... ಇಂದ್ರಿಯಗಳ ... ದೇ ಅವರ ಬುದ್ಧಿ ... ಸುವ ಸುಲಭ ಹಾಗೂ ... ಆದರೆ ... ವಿಶ್ವಾಸದೊಂದಿ ... ಅಷ್ಟೇ ... ಕೇವಲ ... [illegible]

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸ...

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧ...
ತಿಂಡಿ ತೀರ್ಥಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ...

Please Visit

HOTEL SHIVAPRAS...

High Class Boarding, Lodging & ...

COONDAPUR, S...